ಕನ್ನಡ ವೇದಭಾಷ್ಯ ಸಂಪುಟ - ೨

ಋಗ್ವೇದಾದಿ ಚತುರ್ವೇದ ಭಾಷ್ಯಭೂಮಿಕಾ

ಸ್ವಾಮೀ ದಯಾನಂದ ಸರಸ್ವತೀ

ವೇದಭಾಷ್ಯ ಪ್ರಕಾಶನ ಸಮಿತಿ
ಬೆಂಗಳೂರು

ಓ೩ಮ್

ऋग्वेदादिचतुर्वेदभाष्यभूमिका

ಋಗ್ವೇದಾದಿಚತುರ್ವೇದಭಾಷ್ಯಭೂಮಿಕಾ

ದ್ವಿತೀಯ ಭಾಗ

ಸ್ವಾಮೀ ದಯಾನಂದ ಸರಸ್ವತೀ

ಕನ್ನಡಾನುವಾದ: ಪಂ. ಉಪೇಂದ್ರ ಭೂಪಾಲ

ಪ್ರಧಾನ ಸಂಪಾದಕರು : ಪಂ. ಸುಧಾಕರ ಚತುರ್ವೇದೀ

ಪ್ರಕಾಶಕರು

ವೇದಭಾಷ್ಯ ಪ್ರಕಾಶನ ಸಮಿತಿ

ಸ್ವಾಮೀ ಶ್ರದ್ಧಾನಂದ ಭವನ
ವಿಶ್ವೇಶ್ವರಪುರಂ ಬೆಂಗಳೂರು 560 004
ದೂರವಾಣಿ : 652 63 80

ವೈವಸ್ವತ ಮನ್ವಂತರ ೨೮ನೆಯ ಚತುರ್ಯುಗ ಯುಗಾಬ್ದ ೫೧೦೧ ಪ್ರಮಾಥಿ ಸಂ|| ಕಾರ್ತೀಕ

ಪ್ರತಿಗಳು 3000 ಇಸವಿ : 1999 ಬೆಲೆ 600 ರೂ.

ऋग्वेदादिचतुर्वेदभाष्यभूमिका

ṚGVEDĀDI-CHATHURVEDA-BHĀSHYA-BHOOMIKĀ

Part II (Chapters 22 - 35) (Pages 639 - 1227) Sanskrit & Kannada

(An Exemplary Introduction to the Commentary of the Four Vedas)

Written in Sanskrit & Hindi by :	Swamy Dayananda Saraswathi
Edited & Translated by :	Upendra Bhoopala
First Edition :	1999 A. D.
Copies :	3,000
Pages :	(xx) + 589 + (೨೦) + 8
Price :	Rs. 600/-
DTP & Computer Lay-out by :	Shanthala, Shivaranjini, Usharani, Ganesh
Printed & Published by :	Veda Bhashya Prakashana Samithi Swamy Shraddhananda Bhavana Vishveshvarapuram, Bangalore Karnataka , India 560 004 Phone: 080 - 652 63 80

ವಿಜ್ಞಾಪನಪತ್ರಮ್

ಅಸ್ಯ ವೇದಭಾಷ್ಯಸ್ಯ ಅಪೂರ್ವತ್ವೇ ಚತ್ವಾರೋ ಹೇತವಃ

ಇದಂ ವೇದಭಾಷ್ಯಮಪೂರ್ವಂ ಭವತಿ । ಕುತಃ?

(೧) ಮಹಾವಿದುಷಾಮಾರ್ಯಾಣಾಂ ಪೂರ್ವಜಾನಾಂ ಯಥಾವದ್ ವೇದಾರ್ಥವಿದಾಮಾಪ್ತಾನಾಮಾಪ್ತಕಾಮಾನಾಂ ಧರ್ಮಾತ್ಮನಾಂ ಸರ್ವಲೋಕೋಪಕಾರಬುದ್ಧೀನಾಂ ಶ್ರೋತ್ರಿಯಾಣಾಂ ಬ್ರಹ್ಮನಿಷ್ಠಾನಾಂ ಪರಮಯೋಗಿನಾಂ ಬ್ರಹ್ಮಾದಿವ್ಯಾಸಪರ್ಯಂತಾನಾಂ ಮುನ್ಯೃಷೀಣಾಮೇಷಾಂ ಕೃತೀನಾಂ ಸನಾತನಾನಾಂ ವೇದಾಂಗಾನಾಮ್, ಐತರೇಯಶತಪಥಸಾಮಗೋಪಥಬ್ರಾಹ್ಮಣಪೂರ್ವಮೀಮಾಂಸಾದಿಶಾಸ್ತ್ರೋಪವೇದೋಪನಿಷಚ್ಛಾಖಾಂತರಮೂಲವೇದಾದಿಸತ್ಯಶಾಸ್ತ್ರಾಣಾಂ ವಚನಪ್ರಮಾಣಸಂಗ್ರಹಲೇಖಯೋಜನೇನ ಪ್ರತ್ಯಕ್ಷಾದಿಪ್ರಮಾಣಯುಕ್ತ್ಯಾ ಚ ಸಹೈವ ರಚ್ಯತೇ ಹ್ಯತಃ ।

(೨) ವೇದಾನಾಂ ಯಃ ಸತ್ಯಾರ್ಥಃ ಸೋಽನೇನ ಭಾಷ್ಯೇಣ ಸರ್ವೇಷಾಂ ಸಜ್ಜನಾನಾಂ ಮನುಷ್ಯಾಣಾಮಾತ್ಮಸು ಸಮ್ಯಕ್ ಪ್ರಕಾಶೀಭವಿಷ್ಯತಿ । ಪುನರನರ್ಥವ್ಯಾಖ್ಯಾನಾನಿ ಯಾನಿ ವೇದಾನಾಮುಪರಿ ವರ್ತಂತೇ ತನ್ನಿವೃತ್ತಿರನೇನ ಚ ತತ್ಪ್ರಯುಕ್ತಭ್ರಮಜಾಲೋಽಪಿ ಲಯಂ ಗಮಿಷ್ಯತ್ಯವಶ್ಯಮತಶ್ಚ ।

(೩) ತತೋಽಸತ್ಯವ್ಯವಹಾರತ್ಯಾಗಾತ್ ಸತ್ಯಾಚಾರಗ್ರಹಣಪ್ರವೃತ್ತಿಭ್ಯಾಂ ಮನುಷ್ಯಾಣಾಂ ಮಹಾನ್ ಸುಖಲಾಭೋ ನಿಶ್ಚಿತೋ ಭವಿಷ್ಯತಿ, ವೇದೇಶ್ವರಯೋಃ ಸತ್ಯಸಾಮ್ರಾಜ್ಯಪ್ರಕಾಶಶ್ಚಾತಃ ।

(೪) ಸತ್ಯಧರ್ಮಾರ್ಥಕಾಮಮೋಕ್ಷಾಣಾಂ ಯಥಾವತ್ ಸಿದ್ಧಿಶ್ಚೇತ್ಯಾದಯೋಽಸ್ಯ ಭಾಷ್ಯಸ್ಯಾಪೂರ್ವತ್ವೇ ಹೇತವೋ ವಿಜ್ಞೇಯಾಃ ।

ಏತದರ್ಥಂ ಸತ್ಯವಿದ್ಯಾಪ್ರಿಯೈರ್ವಿದ್ವದ್ಭಿಃ ಸತ್ಯಾರ್ಥಜಿಜ್ಞಾಸುಭಿರ್ಮನುಷ್ಯೋಪಕಾರಸತ್ಯವಿದ್ಯೋನ್ನತಿಚಿಕೀರ್ಷುಭೀ ರಾಜಾದಿನ್ರವರ್ಯೈರಸ್ಮಿನ್ ಮಹತಿ ಸರ್ವೋಪಕಾರಕೇ ಕಾರ್ಯೇ ಮಾಸಿಕ-ಪುಸ್ತಕ-ಗ್ರಹಣೇನ ಅನ್ಯಪ್ರಕಾರೇಣ ಚ ಸರ್ವೈರ್ಯಥಾಶಕ್ತ್ಯಾ ಸಹಾಯಃ ಕಾರ್ಯ ಇತಿ ವಿಜ್ಞಾಪ್ಯತೇ ।

ಸ್ವಾಮೀ ದಯಾನಂದ ಸರಸ್ವತೀ

(ಭಾಷ್ಯಕರ್ತ್ರಾ ಸ್ವಭಾಷ್ಯಸ್ಯ ವೈಶಿಷ್ಟ್ಯನಿರ್ದರ್ಶನಾಯ ೧೯೩೩ ತಮೇ ವೈಕ್ರಮಾಬ್ದೇ ಪ್ರಕಾಶಿತೇ ವಿಜ್ಞಾಪನೇಽಯಮಂಶೋ ವರ್ತ್ತತೇ)

ವಿಜ್ಞಾಪನೆ

ಈ ವೇದಭಾಷ್ಯದ ಅಪೂರ್ವತ್ವಕ್ಕೆ ನಾಲ್ಕು ಕಾರಣಗಳು!

ಈ ವೇದಭಾಷ್ಯವು ಅಪೂರ್ವವಾಗಿರುವುದು! ಏಕೆಂದರೆ _

(೧) ಆರ್ಯರ ಪೂರ್ವಜರಾದ ಮಹಾವಿದ್ವಾಂಸರೂ, ಯಥಾವತ್ತಾಗಿ ವೇದಗಳ ಅರ್ಥಗಳನ್ನು ತಿಳಿದವರೂ, ಆಪ್ತರೂ, ಆಪ್ತಕಾಮರೂ, ಧರ್ಮಾತ್ಮರೂ, ಎಲ್ಲ ಜನರ ಉಪಕಾರವನ್ನು ಮಾಡುವಂತಹ ಬುದ್ಧಿಯನ್ನುಳ್ಳವರೂ, ಶ್ರೋತ್ರಿಯರೂ, ಬ್ರಹ್ಮನಿಷ್ಠರೂ, ಪರಮಯೋಗಿಗಳೂ, ಬ್ರಹ್ಮನಿಂದ ಮೊದಲಾಗಿ ವ್ಯಾಸರ ತನಕ ಆಗಿ ಹೋದ ಋಷಿ-ಮುನಿಗಳ ಸನಾತನಕೃತಿಗಳಾದ ವೇದಾಂಗಗಳ, ಐತರೇಯ-ಶತಪಥ-ಸಾಮ-ಗೋಪಥಬ್ರಾಹ್ಮಣಗಳ, ಪೂರ್ವಮೀಮಾಂಸಾ ಮೊದಲಾದ ಶಾಸ್ತ್ರಗಳ, ಉಪವೇದಗಳ, ಉಪನಿಷತ್ತುಗಳ, ಶಾಖಾಂತರಗಳ, ಮತ್ತು ಮೂಲ ವೇದಗಳೇ ಮೊದಲಾದ ಸತ್ಯಶಾಸ್ತ್ರಗಳ ವಚನ-ಪ್ರಮಾಣಸಂಗ್ರಹಗಳ ಲೇಖನದ ಯೋಜನೆಯಿಂದ, ಹಾಗೂ ಪ್ರತ್ಯಕ್ಷ ಮೊದಲಾದ ಪ್ರಮಾಣಗಳಿಂದ ಕೂಡಿದುದೂ ಆಗಿಯೇ ಇದು ರಚಿಸಲ್ಪಡುವುದು!

(೨) ವೇದಗಳ ಯಾವ ಸತ್ಯವಾದ ಅರ್ಥವಿರುತ್ತದೋ, ಅದು ಈ ಭಾಷ್ಯದ ಮೂಲಕ ಸಜ್ಜನ ಮನುಷ್ಯರೆಲ್ಲರ ಆತ್ಮಗಳಲ್ಲಿ ಚೆನ್ನಾಗಿ ಪ್ರಕಾಶವನ್ನುಂಟುಮಾಡುವುದು! ಮತ್ತೆ, ವೇದಗಳ ಮೇಲೆ ಯಾವ ಅನರ್ಥ[ಕಾರಿ] ವ್ಯಾಖ್ಯಾನಗಳಿವೆಯೋ, ಅವುಗಳ ನಿವೃತ್ತಿಯೂ ಇದರಿಂದ ಆಗುವುದು! ಮತ್ತು ಅವುಗಳಿಂದ ಪ್ರಯುಕ್ತವಾದ ಭ್ರಮಜಾಲವೂ ಕೂಡ, ಅವಶ್ಯವಾಗಿ ಲಯವನ್ನು ಹೊಂದುವುದು!

(೩) ನಂತರ, ಅಸತ್ಯವ್ಯವಹಾರಗಳನ್ನು ತ್ಯಜಿಸುವುದರಿಂದ, ಸತ್ಯವ್ಯವಹಾರಗಳ ಗ್ರಹಣವೂ ಮತ್ತು ಅವುಗಳಲ್ಲಿ ಪ್ರವೃತ್ತಿಯೂ ಉಂಟಾಗುವುದರ ಮೂಲಕ ಮನುಷ್ಯರಿಗೆ ನಿಶ್ಚಯವಾಗಿ ಸುಖದ ಲಾಭವಾಗುವುದು! ಮತ್ತು ವೇದದ, ಹಾಗೂ ಈಶ್ವರನ ಸತ್ಯಸಾಮ್ರಾಜ್ಯದ ಪ್ರಕಾಶವೂ ಕೂಡ, ಆಗುವುದು!

(೪) ಮತ್ತು ಸತ್ಯಧರ್ಮ-ಅರ್ಥ-ಕಾಮ-ಮೋಕ್ಷಗಳ ಯಥಾವತ್ ಸಿದ್ಧಿಯೂ ಕೂಡ, ಆಗುವುದು!

ಈ ಮೊದಲಾದುವು ಈ ಭಾಷ್ಯದ ಅಪೂರ್ವತ್ವಕ್ಕೆ ಕಾರಣಗಳಾಗಿವೆ, ಎಂದು ತಿಳಿಯಬೇಕು!

ಈ ಕಾರಣದಿಂದ, ಸತ್ಯವಿದ್ಯೆಗಳಲ್ಲಿ ಪ್ರೀತಿಯನ್ನುಳ್ಳ ವಿದ್ವಾಂಸರುಗಳಿಂದಲೂ, ಸತ್ಯದ ಅರ್ಥವನ್ನು ತಿಳಿಯಲಿಚ್ಛಿಸುವವರಿಂದಲೂ, ಮನುಷ್ಯರ ಉಪಕಾರವನ್ನೂ, ಹಾಗೂ ಸತ್ಯದ ಉನ್ನತಿಯನ್ನೂ ಅಪೇಕ್ಷಿಸುವವರಿಂದಲೂ, ಮತ್ತು ರಾಜರೇ ಮೊದಲಾದ ನರಶ್ರೇಷ್ಠರಿಂದಲೂ ಎಲ್ಲರಿಗೂ ಉಪಕಾರವನ್ನು ಮಾಡುವಂತಹ ಈ ಮಹತ್ಕಾರ್ಯದಲ್ಲಿ ಮಾಸಿಕಪತ್ರಿಕೆಯ ಚಂದಾದಾರರಾಗುವ ಮೂಲಕ; ಹಾಗೂ ಅನ್ಯರೀತಿಗಳ ಮೂಲಕ ಎಲ್ಲರಿಂದಲೂ; ಸಹಾಯವು ಮಾಡಲ್ಪಡಬೇಕು, ಎಂಬುದಾಗಿ ವಿಜ್ಞಾಪನೆ ಮಾಡಲಾಗುತ್ತದೆ.

ಸ್ವಾಮೀ ದಯಾನಂದ ಸರಸ್ವತೀ

[ಇದು ಭಾಷ್ಯಕಾರರಿಂದ ತಮ್ಮ ಭಾಷ್ಯದ ವೈಶಿಷ್ಟ್ಯನಿದರ್ಶನಕ್ಕಾಗಿ ವಿಕ್ರಮಸಂವತ್ ೧೯೩೩ (ಇಸವಿ ೧೮೭೬) ರಲ್ಲಿ ಪ್ರಕಾಶಿಸಲ್ಪಟ್ಟ ವಿಜ್ಞಾಪನೆಯ ಅಂಶ.]

ಪ್ರಕಾಶಕರ ಎರಡು ಮಾತು

ಮಾನವೀಯತೆಯ ಮೇರು ಕೃತಿ ವೇದಗಳು. ಮಾನವ ಸಮಾಜ ಸುಖಶಾಂತಿಯಿಂದ ಬಾಳಲು ಪ್ರೇರಣೆ ನೀಡುವ ವೇದಗಳು ಯಾವುದೇ ನಿಟ್ಟಿನಿಂದ ನೋಡಲಿ, ಸಾರ್ವಭೌಮ ಹಾಗೂ ಸಾರ್ವಕಾಲಿಕವಾದವುಗಳಾಗಿವೆ. ವೇದಗಳು ಪ್ರತಿಪಾದಿಸುವ ರಾಷ್ಟ್ರೀಯತೆ, ಪ್ರಕೃತಿ ಸಂಪತ್ತಿನ ಮಾಲಿಕತ್ವ, ಎಲ್ಲರಿಗೂ ಜ್ಞಾನದ ಬೆಳಕನ್ನು ಹಂಚುವ ವಿಶಾಲತೆ, ಪ್ರಾಣಿ-ಪಕ್ಷಿ-ಕೀಟ- ಪತಂಗಗಳೂ ಸೇರಿದಂತೆ ಜಗತ್ತಿನ ಎಲ್ಲ ಸಹಜೀವಿಗಳೊಂದಿಗೆ ಸಹಬಾಳ್ವೆ, ಅವು ಪ್ರತಿಪಾದಿಸುವ ಮನನಶೀಲತೆ, ಅನುಕಂಪ, ಜ್ಞಾನ-ಕರ್ಮ- ಉಪಾಸನೆಗಳ ಸುಂದರ ಸಮನ್ವಯ- ಇವುಗಳ ಬಗೆಗೆ ಪರಿಶೀಲನಾತ್ಮಕ ನೋಟವನ್ನು ಹಾಯಿಸಿದಾಗ ವೇದಗಳ ಹಿರಿಮೆ-ಗರಿಮೆಗಳು ಸಹಜವಾಗಿಯೇ ಅರಿವಿಗೆ ಬರುತ್ತವೆ. ಮುಕ್ತ ಮನಸ್ಸಿನಿಂದ, ಪೂರ್ವಗ್ರಹ ಪೀಡಿತವಲ್ಲದ ದೃಷ್ಟಿಯಿಂದ ನೋಡುವವರಾಗಬೇಕು ನಾವು, ಅಷ್ಟೇ!

ಸುಖ-ಶಾಂತಿ-ನೆಮ್ಮದಿಯಿಂದ ಬಾಳಬೇಕೆಂಬುದು ಮಾನವರೆಲ್ಲರ ಸಹಜ ಕಾಮನೆ. ಅದನ್ನು ಹೊಂದುವ ಸಾಧನಗಳ ಬಗೆಗೆ ಅಭಿಪ್ರಾಯ ಭೇದವಿರಬಹುದಾದರೂ, ಈ ಗುರಿಯ ಬಗೆಗೆ ಎಲ್ಲರದೂ ಒಂದೇ ನೆಟ್ಟ ನೋಟ; ಸಮರ್ಪಿತವಾದ ಚಿತ್ತ . ಆದರೆ ಈ ಮಾನವ ಸಹಜ ಕಾಮನೆಯು ಕ್ರಿಯಾನ್ವಿತವಾಗದಿರಲು ಕಾರಣ, ಸಾಧನಗಳ ಕುರಿತ ಅಜ್ಞಾನ ಅಥವಾ ಅಲ್ಪಜ್ಞಾನ. ವೇದಗಳು ಈ ಬಗ್ಗೆ ಸಂದೇಹಕ್ಕೆಡೆಯಿಲ್ಲದ ಮಾತುಗಳಲ್ಲಿ ಮಾರ್ಗದರ್ಶನ ಮಾಡಬಲ್ಲುದಾದುದರಿಂದಲೇ ಅವು ನಮಗೆ ಸ್ವೀಕರಿಸಲು ಯೋಗ್ಯವಾಗಿವೆ.

ವೇದಗಳು ಪ್ರತಿಪಾದಿಸುವ ರಾಷ್ಟ್ರೀಯತೆಯ ಬಗೆಗೆ ಗಮನ ಹರಿಸಿದರೆ ಅವುಗಳ ಅನನ್ಯ ವಿಶಾಲ ಮನೋಭಾವವು ಗೋಚರವಾಗುತ್ತದೆ. ವೇದಗಳ ರಾಷ್ಟ್ರೀಯತೆಯು ಇಂದಿನ ಮಾನವ ನಿರ್ಮಿತ ರಾಷ್ಟ್ರೀಯತೆಗಿಂತಲೂ ಭಿನ್ನವಾದುದು. ಮಾನವ ನಿರ್ಮಿತ ರಾಷ್ಟ್ರಕ್ಕೂ ವೇದಗಳು ಹೇಳುವ ರಾಷ್ಟ್ರಕ್ಕೂ ಅಜಗಜಾಂತರ. ಮಾನವ ನಿರ್ಮಿತ ಗಡಿಗಳು ವೇದಗಳಿಗೆ ಒಪ್ಪಿತವಲ್ಲ. ವೇದಗಳ ಪ್ರಕಾರ ಇಡೀ ಪೃಥ್ವಿಯೇ ನಮ್ಮ ರಾಷ್ಟ್ರ. ಭೂಮಾತೆಯೇ ನಮ್ಮ ತಾಯಿ; ಭೂಮಿಯಲ್ಲಿ ವಾಸಿಸುವ ಜೀವಿಗಳೆಲ್ಲರೂ ಆಕೆಯ ಮಕ್ಕಳು. ಆದುದರಿಂದ ಭೂಮಿಯಲ್ಲಿ ವಾಸಿಸುವವರೆಲ್ಲರೂ ಒಂದೇ ಕುಟುಂಬದ ಅಣ್ಣ ತಮ್ಮಂದಿರು - ಅಕ್ಕ ತಂಗಿಯರು. ವೇದಗಳ ಈ ದೃಷ್ಟಿಕೋನ ನಮ್ಮದಾದಾಗ ಜಗತ್ತಿನಲ್ಲಿ ಕಲಹ, ಯುದ್ಧ, ಹಿಂಸಾಚಾರಗಳು ತಪ್ಪಿಹೋಗಿ ಶಾಂತಿ ನೆಮ್ಮದಿ ನೆಲೆಸುತ್ತವೆ. ಮಾನವನು ತನ್ನ ನಿಹಿತ ಸ್ವಾರ್ಥಕ್ಕಾಗಿ ರೂಪಿಸಿಕೊಂಡ ಗಡಿಗಳು ಕೃತಕ ಹಾಗೂ ಪರಿವರ್ತನ ಶೀಲ. ಪ್ರಕೃತಿ ಸಂಪತ್ತಿನ ಮೇಲೆ ಒಡೆತನ ಸ್ಥಾಪಿಸಲು ಮಾಡಿದ ತಂತ್ರ ಮಾತ್ರ. ಇವು ಇರುವವರೆಗೆ ಯುದ್ಧ ಭಯ, ಹಿಂಸೆಯ ಭಯ, ಅಸುರಕ್ಷತೆಯ ಭಯ ತಪ್ಪಿದ್ದಲ್ಲ. ಈ ಕೃತಕ ಗಡಿಗಳ ರಕ್ಷಣೆಗಾಗಿ ವಿನಿಯೋಗಿಸುವ ಶಕ್ತಿ, ಮಾನವ ಸಂಪತ್ತು, ಅಮೂಲ್ಯ ಸಮಯ, ಮಾಡುವ ರಾಜಕೀಯ ದೊಂಬರಾಟಗಳು ಅವೆಷ್ಟೋ?

ಗಡಿಗಳನ್ನು ಅತಿಕ್ರಮಿಸಿ ಮಾಡಲಾಗುವ ನೆಲ-ಜಲ-ಸಸ್ಯ ಸಂಪತ್ತು - ಜನಶಕ್ತಿಯ ಅಪವ್ಯಯದ ಹಿಂದೆಯಂತೂ ಮಾನವನ (?) ರಾಕ್ಷಸೀ ಪ್ರವೃತ್ತಿಯೇ ತಾಂಡವವಾಡುತ್ತಿದೆ. ಅಪಾರ ನೆಲ-ಜಲ-ವಾಯು ಸೈನ್ಯಕ್ಕಾಗಿ ವಿನಿಯೋಗಿಸುವ ಸಂಪತ್ತು, ಪರಮಾಣು ವಿಸ್ಫೋಟಕಗಳು, ಕ್ಷಿಪಣಿಗಳು ಮೊದಲಾದವುಗಳಿಂದ ಆಗುವ ಅನರ್ಥ ಪರಂಪರೆಗಳು ಇವೆಲ್ಲವೂ ಕೇವಲ ಮಾನವನಿರ್ಮಿತ ಗಡಿಗಳ ರಕ್ಷಣೆಯ ಅನಿವಾರ್ಯ ಪರಿಣಾಮಗಳೇ. ರಾಷ್ಟ್ರೀಯತೆಯ ಬಗ್ಗೆ ವೇದಗಳ ವಿಶಾಲದೃಷ್ಟಿ ನಮ್ಮದಾದಾಗ ಈ ಎಲ್ಲ ಅನರ್ಥಗಳಿಗೆ ಶಾಶ್ವತವಾದ ಮುಕ್ತಾಯವನ್ನು ಘೋಷಿಸಬಹುದು.

ವೇದಗಳು ಅತಿ ಸ್ಪಷ್ಟವಾದ ಮಾತುಗಳಲ್ಲಿ ಮಾನವರೆಲ್ಲರೂ ಪ್ರಕೃತಿ ಸಂಪತ್ತಿನ ಪಾಲಕರೇ ಹೊರತು ಮಾಲೀಕರಲ್ಲ - ಎಂದು ಘೋಷಿಸುತ್ತಿವೆ. ಆದರೆ ಮಾನವನು ಪ್ರಾಕೃತಿಕ ಸಂಪನ್ಮೂಲಗಳನ್ನು ತಾನೇ, ತಾನೊಬ್ಬನೇ ಅದರ ಮಾಲಿಕನೆಂಬಂತೆ ಶೋಷಿಸಲು ಪ್ರಾರಂಭಿಸಿದಾಗಿನಿಂದ ಜಗತ್ತಿನಲ್ಲಿ ಮಾನವ-ಮಾನವರ ನಡುವೆ ಅನಾರೋಗ್ಯಕರ, ಅನೈತಿಕ ಸ್ಪರ್ಧೆಗಳು ಉಂಟಾಗಿ, ಅದರ ಪರಿಣಾಮವಾಗಿ ದ್ವೇಷ, ವೈಷಮ್ಯಗಳು ಹತ್ತಿ ಉರಿಯಲಾರಂಭಿಸಿದವು. ಮಾನವನು, ಈ ಪ್ರಾಕೃತಿಕ ಸಂಪದವಿರುವುದು ತನಗೋರ್ವನಿಗಾಗಿ, ಈ ಪ್ರಾಣಿ- ಪಕ್ಷಿ- ಕೀಟ- ಪತಂಗಾದಿ ಸಕಲ ಜೀವಿಗಳೂ ಇರುವುದು ತನ್ನ ಉಪಭೋಗಕ್ಕಾಗಿ, ಎಂಬ ರಾಕ್ಷಸೀ ಭಾವನೆಯನ್ನು ಹೊಂದಿದಾಗಿನಿಂದ ಪ್ರಾಣಿಜಗತ್ತಿನಲ್ಲಿ ಸಹಜವಾಗಿ ಇರಬೇಕಾಗಿದ್ದ ಪ್ರಾಕೃತಿಕ ಸಮತೋಲನ ತಪ್ಪಿಹೋಗಿ ಹಲವಾರು ಭೀಕರ ಸಮಸ್ಯೆಗಳು ತಲೆದೋರಿವೆ. ಸಹಜೀವಿಗಳೊಂದಿಗೆ ಸಹಬಾಳ್ವೆ ಇಲ್ಲದುದರಿಂದ, ಒಂದು ಇನ್ನೊಂದರ ಬಲಿ ತೆಗೆದುಕೊಳ್ಳುವ ಪ್ರವೃತ್ತಿ ಬಲಿಯಿತು. ಪರಿಣಾಮವಾಗಿ ಮಾನವನು ಇತರ ಜೀವ ಜಗತ್ತಿನೊಂದಿಗಿರಲಿ, ತನ್ನ ಸಹಮಾನವರೊಂದಿಗೆ ಹೊಂದಿರಬೇಕಾಗಿದ್ದ ಮಾನವೀಯ ಅನುಕಂಪಕ್ಕೇ ಎರವಾದನು. ಮನನಶೀಲನಾದುದರಿಂದಲೇ ಅವನನ್ನು ಮಾನವನೆನ್ನಲಾಗುತ್ತದೆ. ಮನನಶೀಲತೆ ಪ್ರಕಟವಾಗುವುದು ಈ ಅನುಕಂಪದಲ್ಲಿ. ಆದರೆ ಮಾನವನು ಅಮಾನವೀಯತೆಯ ಮನೋರೋಗಕ್ಕೆ ಈಡಾಗಿರುವುದು ಇಂದಿನ ದುರಂತ. ಮನನಶೀಲನಾದವನು ಅಮಾನವೀಯನನ್ನು ಪರಿವರ್ತಿಸುವಂತಾದಾಗಲೇ ಮಾನವೀಯತೆಯ ವಿಜಯ. ವೇದಗಳು ಪ್ರತಿಪಾದಿಸುವ ತ್ಯಾಗ ಪೂರ್ವಕ ಭೋಗ ಬೇರೆಯಲ್ಲ; ಸಹಜೀವಿಗಳೊಂದಿಗಿನ ಮಾನವೀಯ ಅನುಕಂಪ ಬೇರೆಯಲ್ಲ; ಮನನಶೀಲತ್ವ

ಬೇರೆಯಲ್ಲ. ಇವು ಮುಪ್ಪುರಿಗೊಂಡಾಗಲೇ ಮನುಜಕುಲ ಸುಖ-ಶಾಂತಿ-ನೆಮ್ಮದಿಯ ಬಾಳನ್ನು ಬಾಳಬಲ್ಲದು. ಈ ಪರಮ ಸತ್ಯವನ್ನು ವೇದಗಳಿಗಿಂತ ನಿಖರವಾಗಿ ಪ್ರತಿಪಾದಿಸುವ ಶಾಸ್ತ್ರಗಳನ್ನು ಇನ್ನೆಲ್ಲಿ ನೋಡೋಣ!

ಜ್ಞಾನವಿಲ್ಲದ ಕರ್ಮ ಅನರ್ಥಕಾರಿ. ಅದೇ ರೀತಿ ಕ್ರಿಯಾಶೀಲತೆಗೆ ಅಳವಡದ ಜ್ಞಾನ ವ್ಯರ್ಥ, ಭಾರ. ಜ್ಞಾನ ಕರ್ಮಗಳು ಒಂದಕ್ಕೊಂದು ಪೂರಕ; ಪೋಷಕ. ಜಗತ್ತಿನಲ್ಲಿ ಕಂಡು ಬರುತ್ತಿರುವ ಅಶಾಂತಿ-ಗೊಂದಲಗಳ ಹಿಂದೆ ಒಂದೋ ಜ್ಞಾನವಿಲ್ಲದ ಕರ್ಮವಿರುತ್ತದೆ. ಇಲ್ಲವೇ ಕರ್ಮಕ್ಕಳವಡದ ಜ್ಞಾನವಿರುತ್ತದೆ. ನಿಷ್ಕ್ರಿಯ ಜ್ಞಾನವು ವ್ಯರ್ಥವಾಗುವಂತೆ, ಜ್ಞಾನರಹಿತ ಕರ್ಮವು ಅಪಾಯಕಾರಿಯಾಗುತ್ತದೆ. ಜ್ಞಾನವನ್ನು ಅವಲಂಬಿಸಿದ ಕರ್ಮವು ಸಫಲತೆಯತ್ತ ನಮ್ಮನ್ನೊಯ್ಯುತ್ತದೆ. ಇಂತಹ ಯಶಸ್ಸುಗಳ ಮೊತ್ತವು ಹೆಚ್ಚಾದಾಗ ಮಾನವನ ತಲೆತಿರುಗಿ, ಅಹಂಕಾರದಿಂದ ಬೀಗಿ ತನ್ನೆಲ್ಲ ಸದ್ಗುಣಗಳಿಗೂ ಎರವಾಗುವ ಸಂಭವ ಇದೆ. ಇದಕ್ಕಾಗಿ ತನ್ನ ಎಲ್ಲ ಸಫಲತೆಗಳನ್ನೂ ವಿಶ್ವಚೇತನ ಶಕ್ತಿಯೊಂದಕ್ಕೆ ಸಮರ್ಪಿಸಿ, ತನ್ನ ಅಣುಚೇತನತ್ವವನ್ನು ಮರೆಯದೆ ವಿನಮ್ರತೆಯನ್ನು ಸಾಧಿಸುವುದು ಆವಶ್ಯಕ. ಈ ಸಮರ್ಪಣೆ ಗುಲಾಮಗಿರಿಯಲ್ಲ; ಕೀಳರಿಮೆಯ ಪರಿಣಾಮವೂ ಅಲ್ಲ. ವಿಶ್ವಚೇತನ ಸತ್ತೆಯ ಅಸ್ತಿತ್ವವನ್ನು ಬುದ್ಧಿ ಪೂರ್ವಕವಾಗಿ ಸ್ವೀಕರಿಸಿ ತನ್ನ ಮಿತಿಗಳನ್ನೂ ಗುರುತಿಸಿಕೊಳ್ಳುತ್ತಾ, ಜೊತೆಗೆಯೇ ಮಿತಿಗಳನ್ನು ಮೀರಿ ಬೆಳೆಯುವ, ಸತ್ಯದ ಬಗೆಗೆ ಬದ್ಧತೆಯ ಪ್ರಕ್ರಿಯೆಯೇ ಉಪಾಸನೆ. ಹೀಗೆ ಜ್ಞಾನ-ಕರ್ಮ-ಉಪಾಸನೆಗಳ ಸುಂದರ ಸಮನ್ವಯದ ಹಾದಿಯನ್ನು ವೇದಗಳು ಅಚ್ಚುಕಟ್ಟಾಗಿ ತೋರಿಸುತ್ತವೆ. ಪ್ರತಿಯೊಬ್ಬ ಸತ್ಯಾನ್ವೇಷಕನ ಪ್ರಶ್ನೆಗೂ, ಸಂಶಯಕ್ಕೂ ಖಚಿತ ಉತ್ತರ ಈ ಜ್ಞಾನ ಭಂಡಾರದಲ್ಲಿ ಮಾನವೀಯತೆಯ ತಳಹದಿಯ ಮೇಲೆ ಸಿಕ್ಕೇ ಸಿಗುತ್ತದೆ. ಈ ಮಾತನ್ನು ಯಾರು ಬೇಕಾದರೂ ಪರೀಕ್ಷಿಸಿ ಸ್ವೀಕರಿಸಬಹುದು.

ವಿಶ್ವಮಾನವ ಸಮಾಜಕ್ಕೆ ಬುದ್ಧಿಜೀವಿಗಳು, ಶಕ್ತಿಜೀವಿಗಳು, ಉದ್ಯಮ ಜೀವಿಗಳು ಮತ್ತು ಶ್ರಮಜೀವಿಗಳು - ಈ ನಾಲ್ಕೂ ಬಗೆಯ ಜೀವಿಗಳ ಆವಶ್ಯಕತೆ ಇದ್ದೇ ಇದೆ. ಈ ಪಂಗಡಗಳಿಗೆ ಕೊಡುವ ಹೆಸರು ಯಾವುದೇ ಆದರೂ ಈ ಪಂಗಡಗಳ ಅಸ್ತಿತ್ವಕ್ಕೆ ಬಾಧಕವಿಲ್ಲ. ಹುಟ್ಟಿನಿಂದ ಮನುಷ್ಯ ಜಾತಿಗೆ ಸೇರಿದ ಯಾರೇ ಆದರೂ ತಮ್ಮ ಗುಣ-ಕರ್ಮ-ಸ್ವಭಾವಗಳಿಗನುಸಾರ ಮೇಲಿನ ಯಾವುದೇ ಪಂಗಡವನ್ನು ಆಯ್ಕೆ ಮಾಡಿಕೊಂಡು ಅದಕ್ಕೆ ಸೇರಿಕೊಳ್ಳಬಹುದು. ಬೇಕಾದಾಗ ಒಂದು ಪಂಗಡದಿಂದ ಇನ್ನೊಂದು ಪಂಗಡಕ್ಕೆ ಜಿಗಿಯಬಹುದು. ಏನೇ ಆದರೂ ಮಾನವ ಜಾತಿ ಹಾಗೇ ಇರುತ್ತದೆ. ವಿಶ್ವ ಶಾಂತಿಯ ಮೂಲ ಸುಭದ್ರ ಸಾಮಾಜಿಕ ವ್ಯವಸ್ಥೆಯಲ್ಲೂ, ಸುಭದ್ರ ಸಮಾಜದ ಬೇರು ಸುಭದ್ರ ಕುಟುಂಬ - ಪರಿವಾರಗಳಲ್ಲೂ ಇದೆ. ಕೌಟುಂಬಿಕ ಜೀವನ- ಗೃಹಸ್ಥಾಶ್ರಮ - ಸುವ್ಯವಸ್ಥಿತವಾಗಲು ಬೇಕಾದ ಸಾರ್ವಕಾಲಿಕ ಮಾರ್ಗದರ್ಶನಗಳ ಮಹಾಪೂರವೇ ವೇದಗಳಲ್ಲಿದೆ. ಇವುಗಳ ಪಾಲನೆ ಎಲ್ಲೂ, ಯಾರೂ ಮಾಡಬಹುದಾಗಿದೆ. ಇದೇ ವೇದೋಕ್ತ ಸಾಮಾಜಿಕ ವ್ಯವಸ್ಥೆ. ಸಮಾಜದ ಪ್ರತಿಯೊಬ್ಬ ಮಾನವ- ಮನನಶೀಲನಿಗೂ ಈ ವ್ಯವಸ್ಥೆಯ ಅರಿವು ಅನಿವಾರ್ಯ. ಈ ಅರಿವಿಗಾಗಿ ಪ್ರತಿಯೊಬ್ಬ ಮಾನವನನ್ನು ಅಧ್ಯಯನಕ್ಕಾಗಿ ವೇದಗಳು ಕೈಬೀಸಿ ಕರೆಯುತ್ತವೆ.

ಇತಿಹಾಸದಲ್ಲೊಂದು ಮೈಲಿಗಲ್ಲು

ಮೇಲೆ ಹೇಳಲಾದ ತಥ್ಯಗಳನ್ನು ನಮ್ಮ ಈ ವೇದಭಾಷ್ಯದಲ್ಲಿ ಸಂದೇಹಕ್ಕೆಡೆಯಿಲ್ಲದಂತೆ ಉದ್ಘಾಟನೆ ಮಾಡಲಾಗುತ್ತದೆ. ಆದುದರಿಂದ ಇದನ್ನು ವೈಜ್ಞಾನಿಕ - ಬುದ್ಧಿಸಂಗತ- ಸಾರ್ವಕಾಲಿಕ - ಸಾರ್ವದೇಶಿಕ ಭಾಷ್ಯ ಎನ್ನಲು ಯಾವುದೇ ಅಡ್ಡಿಯಿಲ್ಲ. ೧೪ ನೇ ಶತಮಾನದಲ್ಲಿ ವಿಜಯನಗರ ಸಾಮ್ರಾಜ್ಯದ ಆಶ್ರಯದಲ್ಲಿ ನಾಲ್ಕೂ ವೇದಗಳಿಗೆ ಸಂಸ್ಕೃತದಲ್ಲಿ ರಚಿಸಿದ ಸಾಯಣಭಾಷ್ಯವೇ ಇಂದು ನಮಗೆ ಉಪಲಬ್ಧವಿರುವ ವಿಸ್ತೃತ ವೇದಭಾಷ್ಯ. ಕ್ರಿ.ಶ ೧೯೪೬ ರಲ್ಲಿ ಮೈಸೂರು ಮಹಾರಾಜರು ಇದೇ ಸಾಯಣಭಾಷ್ಯದ ಆಧಾರದ ಮೇಲೆ ಕನ್ನಡದಲ್ಲಿ ವಿಸ್ತೃತವಾದ ಋಗ್ವೇದ ಭಾಷ್ಯವನ್ನು ಪ್ರಕಟಿಸುವ ಸಾಹಸ ಮಾಡಿದರು. ಇವೆರಡು ಪ್ರಯತ್ನಗಳ ನಂತರ ಸಮಗ್ರವಾಗಿ ನಾಲ್ಕೂ ವೇದಗಳ ಭಾಷ್ಯಗಳನ್ನು ಮೊಟ್ಟ ಮೊದಲ ಬಾರಿಗೆ ಕನ್ನಡದಲ್ಲಿ ರಚಿಸುವ ಐತಿಹಾಸಿಕ ಯೋಜನೆಯು ರೂಪುಗೊಂಡಿದೆ. ಮಾತ್ರವಲ್ಲದೆ ದಕ್ಷಿಣಭಾರತೀಯ ಭಾಷೆಗಳಲ್ಲಿಯೇ ಇಂತಹ ಪ್ರಯತ್ನ ಪ್ರಥಮಬಾರಿಗೆ ನಡೆಯುತ್ತಿದೆ. ಆದುದರಿಂದ ಈ ವೇದಭಾಷ್ಯಯೋಜನೆಯನ್ನು **ಇತಿಹಾಸದ ಮೈಲಿಗಲ್ಲು** ಎಂದು ಹೇಳಬಹುದು.

ವೇದಭಾಷ್ಯದ ಕಾರ್ಯ ಸಾಮಾನ್ಯ ಸಂಗತಿಯೇನಲ್ಲ. ಅದು ಹಿಮಾಲಯದಂತಹ ಮಹತ್ವದ ಕಾರ್ಯ. ವಿಜಯನಗರ ಸಾಮ್ರಾಜ್ಯದ ಆಶ್ರಯದಲ್ಲಿ, ಮೈಸೂರು ಮಹಾರಾಜರಂತಹವರ ರಾಜಾಶ್ರಯದಲ್ಲಿ ನಡೆಯಬಹುದಾದ ಈ ಕಾರ್ಯವನ್ನು ಯಾವುದೇ ಆರ್ಥಿಕತೆ ಅಥವಾ ಜನಪ್ರಿಯತೆಯ ವೈಭವದ ಹಿನ್ನೆಲೆಯಿಲ್ಲದ ಒಂದು ಸಂಸ್ಥೆ ಕೈಗೊಂಡಿರುವುದು ಸಾಮಾನ್ಯ ಸಂಗತಿಯೇನಲ್ಲ! ಆದರೆ, ವೇದಗಳ ಬಗೆಗೆ ನಮ್ಮ ಜನರಿಗೆ ಇರುವ ಅಚ್ಚಳಿಯದ ಗೌರವಾದರಗಳು ನಮ್ಮನ್ನು ಈ ಬೃಹದ್ಯೋಜನೆಯನ್ನು ಕೈಗೆತ್ತಿಕೊಳ್ಳುವಂತೆ ಮಾಡಿದವು. ಅಲ್ಪ ಸಾಧನ- ಸಂಪತ್ತುಗಳ ಹೊರತಾಗಿಯೂ ಈ ಕಾರ್ಯ ಸಂಪನ್ನವಾಗುತ್ತಿರುವುದಕ್ಕೆ ಕಾರಣ ನಮ್ಮ ಜನರಲ್ಲಿರುವ ವೇದಪ್ರೇಮ - ವೇದಭಕ್ತಿ-ವೇದನಿಷ್ಠೆಗಳೇ ಆಗಿವೆ. ಆ ವೇದಪ್ರೇಮೀ ಜನತಾ ಜನಾರ್ದನನಿಗೆ ನಮ್ಮ ಕೃತಜ್ಞತೆಯನ್ನು ಅರ್ಪಿಸುತ್ತೇವೆ.

ಕೃತಜ್ಞತೆಗಳು

ವೇದಭಾಷ್ಯದ ಪ್ರಥಮ ಸಂಪುಟ ಹಾಗೂ 'ಋಗ್ವೇದಾದಿ ಚತುರ್ವೇದ ಭಾಷ್ಯಭೂಮಿಕಾ' ದ ಪ್ರಥಮ ಭಾಗದ ಬಗೆಗೆ ವೇದಪ್ರೇಮೀ ಕನ್ನಡಿಗರು ಅಭೂತಪೂರ್ವ ಸ್ವಾಗತವನ್ನು ನೀಡಿದ್ದಾರೆ. ನಮ್ಮ ನಿರೀಕ್ಷೆಮೀರಿ ರಾಜ್ಯದ ಮೂಲೆ ಮೂಲೆಗಳಿಂದ ಹಾಗೂ ರಾಜ್ಯದ ಹೊರಗಿನಿಂದಲೂ ಇದಕ್ಕೆ ಸದಸ್ಯರಾಗಿದ್ದಾರೆ; ಆಗುತ್ತಿದ್ದಾರೆ. ಇದನ್ನು ಇನ್ನಿಲ್ಲದ ಪ್ರೀತಿ- ಆದರಗಳಿಂದ ಸ್ವೀಕರಿಸಿದ ಎಲ್ಲ ವೇದಪ್ರೇಮಿಗಳಿಗೂ ನಮ್ಮ ಹಾರ್ದಿಕವಾದ ಕೃತಜ್ಞತೆಗಳು ಸಲ್ಲುತ್ತವೆ.

ಕನ್ನಡ ಸಾಹಿತ್ಯದ ಇತಿಹಾಸದಲ್ಲಿಯೇ ಮೊದಲ ಬಾರಿಗೆ ಪ್ರಕಟವಾಗುತ್ತಿರುವ ಚತುರ್ವೇದಭಾಷ್ಯದ ಮೊದಲ ಸಂಪುಟವನ್ನು ಲೋಕಾರ್ಪಣೆ ಮಾಡಲು ಆಗಮಿಸಿ, ಹೃತ್ಪೂರ್ವಕವಾಗಿ ಹರಸಿದ ಬೆಂಗಳೂರಿನ ಕೈಲಾಸಾಶ್ರಮದ ಪೂಜ್ಯ ಶ್ರೀ ಶ್ರೀ ಶ್ರೀ ತಿರುಚ್ಚಿ ಮಹಾಸ್ವಾಮಿಗಳು, ಪೂಜ್ಯ ಶ್ರೀ ಶ್ರೀ ಶ್ರೀ ಜಯೇಂದ್ರ ಸರಸ್ವತಿ ಸ್ವಾಮಿಗಳು, ಪೂಜ್ಯ ಶ್ರೀ ಶ್ರೀ ಶ್ರೀ ರಂಗಪ್ರಿಯ ಮಹಾಸ್ವಾಮಿಗಳು, ಶುಭಾಶಂಸನೆ ಮಾಡಿದ ಕನ್ನಡ ಸಾಹಿತ್ಯಲೋಕದ ದಿಗ್ಗಜ ವಿದ್ವಾಂಸರಾದ ಪ್ರೊ. ಜಿ. ವೆಂಕಟಸುಬ್ಬಯ್ಯನವರು ಇವರೆಲ್ಲರಿಗೂ ಅಪಾರವಾದ ಕೃತಜ್ಞತಾಪೂರ್ವಕವಾದ ವಂದನೆಗಳನ್ನು ಸಲ್ಲಿಸುತ್ತೇವೆ.

ಎರಡನೆಯ ಸಂಪುಟವನ್ನು ಕನ್ನಡಿಗರ ಕೈಗಳಿಗಿಡುತ್ತಾ ನಮಗೆ ಅಪಾರವಾದ ಹರ್ಷವೆನಿಸುತ್ತಿದೆ. ಹಲವಾರು ಅಡೆತಡೆಗಳ ಹೊರತಾಗಿಯೂ ನಾವು ಕನ್ನಡ ವೇದಭಾಷ್ಯ ಯೋಜನೆಯ ಈ ಮಹತ್ತರವಾದ ಎರಡನೇ ಹೆಜ್ಜೆಯಿಡುವುದರಲ್ಲಿ ಸಫಲರಾಗಿದ್ದೇವೆ. ಇದಕ್ಕೆ ನಮ್ಮ ಜನರ ವೇದಪ್ರೇಮವೇ ಕಾರಣವೆಂಬುದರಲ್ಲಿ ಎರಡು ಅಭಿಪ್ರಾಯವಿರಲಾರದು. ಧಾರ್ಮಿಕ, ಸಾಂಸ್ಕೃತಿಕ ವಲಯಗಳಲ್ಲಿ ನಿರಾಶಾವಾದದ ದಟ್ಟ ಛಾಯೆ ಆಕ್ರಮಿಸುತ್ತಿರುವ ಈ ದುರ್ಭರ ಸಂದರ್ಭದಲ್ಲಿಯೂ ಆಶಾವಾದದ ಸೆಳೆಮಿಂಚು ಕಣ್ಣು ಕೋರೈಸುವಂತೆ ಗೋಚರವಾಗುತ್ತಿರುವುದು ಹರ್ಷದ, ಉಲ್ಲಾಸದ ಸಂಗತಿಯಿಲ್ಲದೆ ಇನ್ನೇನು?

ಈ ಎರಡನೆಯ ಸಂಪುಟದ ಲೋಕಾರ್ಪಣೆಯ ಸಂತಸದ ಕ್ಷಣಗಳಲ್ಲಿಯೂ ನಮ್ಮ ಮುಂದೆ ಹೃದಯ ಹಿಂಡುವ ವೇದನೆಯ ಸಂಗತಿಯೆಂದರೆ ವೇದಭಾಷ್ಯ ಪ್ರಕಾಶನ ಸಮಿತಿಯ ಸ್ಥಾಪಕ ಅಧ್ಯಕ್ಷರಾದ ಸ್ವ|| ಶ್ರೀ ವೈ.ವಿ. ತಿಮ್ಮಯ್ಯ (ಅಪ್ಪಾಜಿ)ನವರ ಅಗಲಿಕೆ, ಅನುಪಸ್ಥಿತಿ. ಅವರಿಗೆ ಈ ಕನ್ನಡ ವೇದಭಾಷ್ಯದ ಬಗೆಗೆ ಇದ್ದ ಅದಮ್ಯ ಕಾಳಜಿ ಹಾಗೂ ಮೇರೆಯರಿಯದ ಪ್ರೀತಿ ನಿಜಕ್ಕೂ ಅನುಪಮ. ಆ ಮಹಾಚೇತನಕ್ಕೆ ನಮ್ಮ ಶ್ರದ್ಧಾಸುಮನಗಳನ್ನು ಅರ್ಪಿಸುತ್ತೇವೆ. ಅವರ ಕುಟುಂಬ ವರ್ಗದವರು ದಿವಂಗತರ ಮನದ ಇಂಗಿತವನ್ನು ಚೆನ್ನಾಗಿ ಮನದಟ್ಟು ಮಾಡಿಕೊಂಡು ಅವರ ಅಭಿಲಾಷೆಯನ್ನು ನೆರವೇರಿಸಲು ನಮ್ಮೊಂದಿಗೆ ಸೊಂಟಕಟ್ಟಿ ನಿಂತಿದ್ದಾರೆ. ಈ ಉದಾರ, ಉದಾತ್ತ ಮನೋಭಾವದ ಅವರ ಸೋದರರಾದ ಶ್ರೀ ವೈ.ವಿ. ವೆಂಕಟರಂಗಪ್ಪ ಹಾಗೂ ಶ್ರೀ ವೈ.ವಿ.ವೆಂಕಟಪ್ಪನವರಿಗೂ, ಧರ್ಮದರ್ಶಿಮಂಡಳಿಗೂ, ಸ್ವ.ಶ್ರೀ ಅಪ್ಪಾಜಿಯವರ ಕುಟುಂಬಕ್ಕೂ ಸೇತುವೆಯಾಗಿರುವ ಶ್ರೀ ವೈ.ವಿ. ಪಾರ್ಥಸಾರಥಿಯವರಿಗೂ ನಮ್ಮ ಹೃದಯಾಂತರಾಳದ ಕೃತಜ್ಞತೆಗಳು.

ಎರಡನೆಯ ಸಂಪುಟದ ದ್ವಿತೀಯಭಾಗವನ್ನೂ ಬರೆದು, ಪುಟವಿನ್ಯಾಸವನ್ನು ರೂಪಿಸುವ ಮೂಲಕ ಅಂದಗೊಳಿಸಿ, ಇಡೀ ಗ್ರಂಥದ ಶುದ್ಧಿವಾಚನವನ್ನೂ ಮಾಡಿ, ತಮ್ಮ ಪ್ರತಿಭೆ, ಪರಿಶ್ರಮ ಹಾಗೂ ತಪಸ್ಸಿನ ಫಲವನ್ನು ಧಾರೆಯೆರೆದು ಕೊಟ್ಟಿರುವ ಅನುವಾದಕರಾದ ಪಂ. ಉಪೇಂದ್ರ ಭೂಪಾಲರಿಗೆ ಆದರಪೂರ್ವಕವಾದ ವಂದನೆಗಳನ್ನು ಅರ್ಪಿಸುತ್ತೇವೆ.

ವೇದಭಾಷ್ಯದ ಪ್ರಧಾನ ಸಂಪಾದಕರಾಗಿ ಬೃಹದ್ಯೋಜನೆಯ ಬೆನ್ನೆಲುಬಾಗಿ ಮಾರ್ಗದರ್ಶಕರಾಗಿರುವ, ನಮ್ಮೆಲ್ಲರ ಸ್ಫೂರ್ತಿಯ ಚಿಲುಮೆಯಾಗಿರುವ ೧೦೬ ವರ್ಷ ವಯಸ್ಸಿನ ವೇದಜ್ಞ ಪಂ. ಸುಧಾಕರ ಚತುರ್ವೇದಿಯವರು ಈ ಇಳಿವಯಸ್ಸಿ(ಏರು ವಯಸ್ಸು ಎನ್ನೋಣವೇ!)ನಲ್ಲಿಯೂ ಯುವಜನೋಚಿತವಾದ ಉತ್ಸಾಹದಿಂದ ಕಾರ್ಯನಿರತರಾಗಿರುವುದು ನಮ್ಮ ಅಹೋಭಾಗ್ಯವೆಂದೇ ತಿಳಿಯುತ್ತೇವೆ. ತಮ್ಮ ಅಪಾರವಾದ ಅನುಭವಪೂರ್ಣ ವಿದ್ವತ್ತಿನಿಂದ ನಮ್ಮನ್ನು ಪ್ರೇರಿಸುತ್ತಿರುವ ಪಂಡಿತ ಸುಧಾಕರ ಚತುರ್ವೇದಿಯವರಿಗೆ ಶ್ರದ್ಧಾಪುರಸ್ಸರವಾದ ಪ್ರಣಾಮಗಳು ಸಲ್ಲುತ್ತವೆ.

ವೇದಭಾಷ್ಯದ ಈ ಬೃಹದ್ಯೋಜನೆಯನ್ನು ವಿಸ್ತರಿಸಲು, ಮನೆ ಮನೆಗೆ, ಮನಮನಕ್ಕೆ ಮುಟ್ಟಿಸಲು ಹಗಲಿರುಳೆನ್ನದೆ ದುಡಿಯುತ್ತಿರುವ ಶ್ರೀ ಎಸ್. ನಂಜುಂಡಪ್ಪನವರಿಗೆ ಆತ್ಮೀಯ ವಂದನೆಗಳು. ಅಂತೆಯೇ ಸದಸ್ಯರನ್ನು ಮಾಡುವುದರ ಮೂಲಕ ವೇದಮಾತೆಯ ಸೇವೆಯಲ್ಲಿ ಶ್ರದ್ಧೆಯಿಂದ ನಿರತರಾಗಿರುವ ಬೆಮೆಲ್‌ನ ಶ್ರೀ ವಿ.ಯಸ್. ಶ್ಯಾಮಸುಂದರ್ ಹಾಗೂ ಅವರ ಮಿತ್ರರು, ಶ್ರೀ ವಿವೇಕಾನಂದ ಯೋಗ ತರಬೇತಿ ಕೇಂದ್ರದ ಶ್ರೀ ರವಿನಾಥ ರಾವ್ ಹಾಗೂ ಅವರ ಸಂಗಡಿಗರು, ಎಂ.ಎಸ್. ರಾಮಯ್ಯ ಇಂಜಿನಿಯರಿಂಗ್ ಕಾಲೇಜಿನ ಉಪನ್ಯಾಸಕ ಶ್ರೀ ಬಿ.ಪಿ. ಹರಿಚಂದ್ರ, ರಾಜಾಜಿನಗರ ನಿವೃತ್ತ ಅಧಿಕಾರಿ ಶ್ರೀ ಜಿ.ಎಸ್. ಹಾಲಸಿದ್ದಪ್ಪ, ಬಳ್ಳಾರಿ ರಾಜಯೋಗಾಶ್ರಮದ ಧರ್ಮಬಂಧುಗಳು, ವಿಶ್ವಕರ್ಮ ಸಮಾಜದ ವೇದಬಂಧುಗಳಾದ ಶ್ರೀ ನಿರಂಜನ ಆಚಾರ್ಯ, ಬಿ.ಎಚ್.ಇ.ಎಲ್. ಕಾರ್ಖಾನೆಯ ಸಹೃದಯ ಬಂಧುಗಳು, ಕೆ.ಜಿ.ಎಫ್.ನ ಬೆಮೆಲ್ ಕಾರ್ಖಾನೆಯ ವೇದಪ್ರೇಮೀ ಬಂಧುಗಳಾದ ಶ್ರೀ ಸಿದ್ಧಯ್ಯ ಮೂಪಡಿ, ಶ್ರೀ ಶಿವಸುಬ್ರಹ್ಮಣ್ಯ ಹಾಗೂ ಸಂಗಡಿಗರು ಹೀಗೆ ಅದೆಷ್ಟೋ ಮಂದಿ ವೇದಪ್ರೇಮಿಗಳು ಸದಸ್ಯತ್ವದ ಅಭಿಯಾನದಲ್ಲಿ ನಮ್ಮೊಂದಿಗೆ ಸೊಂಟಕಟ್ಟಿ ನಿಂತಿದ್ದಾರೆ. ಇವರೆಲ್ಲರ ಬಗೆಗೆ ಹೃದಯದ ಅಂತರತಮದಿಂದ ಧನ್ಯವಾದಗಳನ್ನು ಅರ್ಪಿಸುತ್ತೇವೆ.

ವೇದಭಾಷ್ಯ ಪ್ರಕಾಶನ ಒಂದು ಮಹಾಯಜ್ಞ. ಇದರಲ್ಲಿ ಅಸಂಖ್ಯ ಮಂದಿ ತಮ್ಮ ಹವಿಸ್ಸುಗಳನ್ನು ಅರ್ಪಿಸಿದ್ದಾರೆ; ಅರ್ಪಿಸುತ್ತಾ ಇದ್ದಾರೆ. ಇವರೆಲ್ಲರಿಗೂ ಅಕ್ಕರೆಯ ವಂದನೆ, ಕೃತಜ್ಞತೆಗಳನ್ನು ಅರ್ಪಿಸುತ್ತಾ ವೇದಭಾಷ್ಯ ಪ್ರಕಾಶನ ಸಮಿತಿಯ ಧರ್ಮದರ್ಶಿ ಮಂಡಳಿಯು ಕೃತಕೃತ್ಯತೆಯ ಭಾವವನ್ನು ಹೊಂದುತ್ತಿದೆ.

ಶ್ರುತಿಪ್ರಿಯ
ಕೋಶಾಧಿಕಾರಿ

ಕೈಪು ಶೇಷಾದ್ರಿ
ಕಾರ್ಯದರ್ಶಿ

ರಮಾನಂದ ಆರ್ಯ
ಅಧ್ಯಕ್ಷರು

ಅನುವಾದಭೂಮಿ

ಭಾಷ್ಯ

ಭಾಷ್ಯ, ಎಂದರೇನು?

ಮೂಲಗ್ರಂಥಕರ್ತರ ಅಭಿಪ್ರಾಯಕ್ಕನುಸಾರವಾಗಿ, ಅವರು ಮಾಡಿದ ವಿಷಯಪ್ರತಿಪಾದನೆಯನ್ನು ಪುಷ್ಟೀಕರಿಸಿ, ಜನರಿಗೆ, ಸ್ವಲ್ಪ ತಿಳಿದಿರುವುದಕ್ಕಿಂತ ಹೆಚ್ಚು ತಿಳಿವಳಿಕೆ ಕೊಡುವುದರ ಮೂಲಕ ಅವರ ಜ್ಞಾನವನ್ನು ವರ್ಧಿಸುವುದಕ್ಕಾಗಿ ಮಾಡುವ ಪ್ರಯತ್ನಕ್ಕೆ **ಭಾಷ್ಯ**, ಎಂದು ಹೆಸರು.

ಭಾಷ್ಯದ ಸ್ವರೂಪವು ಏನಾಗಿರಬೇಕು?

ಭಾಷ್ಯದ ಸ್ವರೂಪವು ಏನಾಗಿದ್ದರೂ, ಮತ್ತು ಅದಕ್ಕೆ **'ಭಾಷ್ಯ'**, ಎಂದಲ್ಲದೇ, ಅರ್ಥ, ಟೀಕೆ, ವೃತ್ತಿ, ವ್ಯಾಖ್ಯಾನ, ಆಲೋಚನೆ, ಎಂದು ಏನೆಲ್ಲಾ ಹೆಸರುಗಳಿದ್ದರೂ, ಮೇಲೆ ತಿಳಿಸಿದಂತೆ, ಯಥಾರ್ಥ ಜ್ಞಾನವರ್ಧನೆಯ ಅಭಿಪ್ರಾಯವು ಮಾತ್ರ ಒಂದೇ ಆಗಿರಬೇಕು!

ಉದಾಹರಣೆಗೆ_

ವೇದೋಪದೇಶರೂಪ ವೇದಭಾಷ್ಯದ ಕ್ರಮವಾದ ವಿಸ್ತಾರ

ಸೃಷ್ಟಿಯ ಆರಂಭದಲ್ಲಿ ಮಾನವರಿಗೆ ಪರಮಾತ್ಮನು ಅವರ ಅಂತಃಕರಣದಲ್ಲಿ ಮಂತ್ರಗಳನ್ನು ಪ್ರೇರೇಪಿಸುವುದರ ಜೊತೆಗೇ ಮಂತ್ರಗಳ ಅರ್ಥವನ್ನೂ ಪ್ರಕಾಶ ಪಡಿಸಿದನು.

ಈ ರೀತಿಯಲ್ಲಿ ಪ್ರೇರಣೆಯನ್ನು, ಜ್ಞಾನವನ್ನು, ಹಾಗೂ ಅದರ ಅರ್ಥವನ್ನು ಗ್ರಹಿಸಿದವರು ಇತರರಿಗೆ ಹಾಗೆಯೇ ಅದರ ಉಪದೇಶವನ್ನು ಮಾಡಿದರು.

ಈ ಉಪದೇಶವನ್ನು ಗ್ರಹಿಸಿದವರು ಮತ್ತೆ, ಬೇರೆಯವರಿಗೂ ಕೂಡ, ಇದೇ ರೀತಿಯಲ್ಲಿ ಉಪದೇಶ ಮಾಡಲಾರಂಭಿಸಿದರು.

ನಂತರ, ಕಾಲಕ್ರಮೇಣ, **'ಸಂಹಿತೆ'**ಯ ರೂಪದಲ್ಲಿದ್ದ ಮಂತ್ರಗಳನ್ನು ಪದಚ್ಛೇದಪೂರ್ವಕವಾಗಿ ಗುರುಗಳು ತೋರಿಸಿದಾಗ, ಶಿಷ್ಯರು ಮಂತ್ರದ ಅರ್ಥಗಳನ್ನು ತಿಳಿಯಲು ಶಕ್ತರಾದರು.

ಮತ್ತೆ, ಕಾಲಕ್ರಮೇಣ ಇತರ ಕಾರ್ಯಗಳ ವ್ಯಸ್ತತೆಯಿಂದ ಶಿಷ್ಯರಲ್ಲಿ ಗ್ರಹಣಶಕ್ತಿಯು ಕಡಿಮೆಯಾದಾಗ, ಗುರುಗಳು ವ್ಯಾಖ್ಯಾನರೂಪದಲ್ಲಿ ವೇದಮಂತ್ರದ ಯಾವುದಾದರೂ ಅಕ್ಷರವೊಂದನ್ನು ಮಾತ್ರ ಬದಲಿಸಿ, ಅರ್ಥದ ಸ್ಪಷ್ಟೀಕರಣೆ ಮಾಡತೊಡಗಿದರು. ಉದಾಹರಣೆಗೆ_

'ಭಸ್ಮಸಾತ್ ಕುರು' (ಸುಟ್ಟು ಬೂದಿ ಮಾಡು),

ಎಂಬ ವಾಕ್ಯದ ಸ್ಪಷ್ಟೀಕರಣೆಗಾಗಿ_

'ಮಸ್ಮಸಾತ್ ಕುರು' (ಉಜ್ಜಿ ಒರೆಸಿಹಾಕು),

ಎಂದು ಬೋಧಿಸಿದರು.

ಶಿಷ್ಯರಲ್ಲಿ ಗ್ರಹಣಶಕ್ತಿಯು ಇನ್ನೂ ಕಡಿಮೆಯಾದಾಗ, ಗುರುಗಳು ವೇದಮಂತ್ರದ ಯಾವುದಾದರೂ ಪದವೊಂದನ್ನು ಮಾತ್ರ ಬದಲಿಸಿ, ಅರ್ಥದ ಸ್ಪಷ್ಟೀಕರಣೆ ಮಾಡತೊಡಗಿದರು. ಉದಾಹರಣೆಗಾಗಿ_

'ಏಷ ವೋ ಅಮೀ ರಾಜಾ' (ಇವನು ಅಂತಹವರಾದ ನಿಮಗೆ ರಾಜನು),

ಎಂಬ ವಾಕ್ಯದ ಸ್ಪಷ್ಟೀಕರಣೆಗಾಗಿ_

'ಏಷ ವಃ ಕುರವೋ ರಾಜೈಷ ವಃ ಪಂಚಾಲಾ ರಾಜಾ' (ಇವನು ಕುರುವಂಶದವರಾದ ನಿಮಗೆ ರಾಜನು; ಇವನು ಪಂಚಾಲವಂಶದವರಾದ ನಿಮಗೆ ರಾಜನು),

ಎಂದು ಬೋಧಿಸಿದರು.

ಶಿಷ್ಯರಲ್ಲಿ ಗ್ರಹಣಶಕ್ತಿಯು ಮತ್ತಷ್ಟು ಕಡಿಮೆಯಾದಾಗ, ಗುರುಗಳು ವೇದಮಂತ್ರದ ಯಾವುದಾದರೂ ಪದಸಮೂಹವನ್ನು ಅಥವಾ ವಾಕ್ಯವನ್ನು ಬದಲಿಸಿ, ಅಥವಾ ಹೊಸ ವಾಕ್ಯವನ್ನು ರಚಿಸಿ, ಮಂತ್ರದಲ್ಲಿ ಸೇರಿಸಿ, ಅರ್ಥದ ಸ್ಪಷ್ಟೀಕರಣೆ ಮಾಡತೊಡಗಿದರು. ಈ ರೀತಿಯ ಉಪದೇಶಗಳು ವೇದದಿಂದ ಬೇರೆಯಾಗಿ **ವೇದಶಾಖೆಗಳು**, ಎಂಬ ಹೆಸರಿನಿಂದ, ಆಯಾ ಗುರುವಿನ ಹೆಸರಿನಲ್ಲಿ ಪ್ರಸಿದ್ಧವಾದುವು.

ಮೇಲಿನ ರೀತಿಯ ವ್ಯಾಖ್ಯಾನಗಳನ್ನು **'ವೇದಶಾಖೆ'**ಗಳಲ್ಲಿ ಹುಡುಕಬಹುದು! ಒಂದು ಉದಾಹರಣೆಯನ್ನು ಮಾತ್ರ ಕೆಳಗೆ ಕೊಡಲಾಗಿದೆ_

ಯಜುರ್ವೇದ(೪೦.೮)ದಲ್ಲಿ _

'ಹಿರಣ್ಮಯೇನ ಪಾತ್ರೇಣ ಸತ್ಯಸ್ಯಾಪಿಹಿತಂ ಮುಖಮ್' (ಹಿರಣ್ಮಯಪಾತ್ರನಿಂದ, ಸತ್ಯದ ಮುಖವು ಮುಚ್ಚಲಾಗಿದೆ), ಎಂಬ ವಾಕ್ಯಾಂಶವನ್ನು ಪೂರ್ತಿ ಮಾಡುವುದಕ್ಕಾಗಿ ಕಣ್ವಋಷಿಗಳು_

'ತತ್ ತ್ವಂ ಪೂಷನ್ ಅಪಾವೃಣು ಸತ್ಯಧರ್ಮಾಯ ದೃಷ್ಟಯೇ'*

(ಅದನ್ನು, 'ಹೇ ಪೂಷನ್! ನೀನು ಸತ್ಯಧರ್ಮವನ್ನು ಪ್ರದರ್ಶಿಸುವುದಕ್ಕಾಗಿ ತೆರೆದುಬಿಡು'),

ಎಂಬ ವಾಕ್ಯಾಂಶವನ್ನು ರಚಿಸಿ, ಮಂತ್ರದಲ್ಲಿ ಸೇರಿಸಿದರು.

ಹೀಗೆ, ಮೇಲಿನ ಎಲ್ಲಾ ಉದಾಹರಣೆಗಳನ್ನೊಳಗೊಂಡು ಯಜುರ್ವೇದದ ನಲವತ್ತನೆಯ ಅಧ್ಯಾಯದ ಭಾಷ್ಯವು **ಈಶಾವಾಸ್ಯೋಪನಿಷತ್ತಿನ** ರೂಪದಲ್ಲಿ ಬಂದಿತು.

ಕಾಲಕ್ರಮೇಣ, ವೇದೋಪದೇಶಕರಾದ ಗುರುಗಳೂ ಕೂಡ, ತಮ್ಮ ಮೇಧಾ-ಸಾಮರ್ಥ್ಯವನ್ನು ಕಳೆದುಕೊಂಡರು! ಆಗ ಹಲವರು ಬಹಳ ಶ್ರಮ ಪಟ್ಟು, ಧ್ಯಾನದಿಂದ, ವೇದಮಂತ್ರಗಳ ಅರ್ಥಗಳನ್ನು ಸಾಕ್ಷಾತ್ಕರಿಸಿಕೊಂಡು, ಜನರಿಗೆ ಉಪದೇಶ ಮಾಡತೊಡಗಿದರು. ಇಂತಹವರಿಗೆ **ಮಂತ್ರದ್ರಷ್ಟಾ ಋಷಿಗಳು**, ಎಂದು ಕರೆಯುತ್ತಾರೆ. ಇವರಲ್ಲಿ ಕೆಲವರ ಹೆಸರನ್ನು ಅವರ ಸ್ಮರಣಾರ್ಥ ವೇದಮಂತ್ರ-ಸೂಕ್ತದ ಮೇಲೆ ಬರೆದು, ಇತಿಹಾಸದ ರಕ್ಷಣೆ ಮಾಡಲಾಗಿದೆ.

ನಂತರ, ಮಂತ್ರದ್ರಷ್ಟಾ ಋಷಿ ಮತ್ತು ಅವರ ಶಿಷ್ಯಪರಂಪರೆಯು ಸಮಾಪ್ತವಾದ ಮೇಲೆ, ಹಲವರು **'ತರ್ಕ'**ದಿಂದ, ಸಂದರ್ಭಕ್ಕನುಸಾರವಾಗಿ ವೇದಮಂತ್ರದ ಅರ್ಥಗಳನ್ನು ಊಹಿಸಿಕೊಂಡು, ಉಪದೇಶ

---

* ಮಹರ್ಷಿ ದಯಾನಂದರು ಇದೇ ಸಂದರ್ಭದಲ್ಲಿ ತಮ್ಮ ಯಜುರ್ವೇದಭಾಷ್ಯದಲ್ಲಿ _

'ಯೇನ ಹಿರಣ್ಮಯೇನ ಪಾತ್ರೇಣ ಮಯಾ ಸತ್ಯಸ್ಯಾಪಿಹಿತಂ ಮುಖಂ ಏಕಾತ್ಮತೇ ಯೋಽಸಾವಾದಿತ್ಯೇ ಪುರುಷೋಽಸ್ತಿ ಸೋಽಸಾವಹಂ ಖಂ ಬ್ರಹ್ಮಾಸ್ಮ್ಯೋಃಮಿತಿ ವಿಜಾನೀತ.'

ಅರ್ಥ:_ " ಯಥಾರ್ಥ ಕಾರಣವನ್ನು ಮುಚ್ಚಿರುವ ಉತ್ತಮಾಂಗವು ಜ್ಯೋತಿರ್ಮಯನೂ, ರಕ್ಷಕನೂ ಆದ ಯಾವನಿಂದ ಪ್ರಕಾಶಿಸಲ್ಪಡುತ್ತದೋ, ಮತ್ತು ಯಾವನು ಪ್ರಾಣಮಂಡಲದಲ್ಲಿ ಪರಿಪೂರ್ಣನಾದ ಪರಮಾತ್ಮನಾಗಿದ್ದಾನೋ, ಅವನೇ ಆದ ನಾನು ಈ ಜಗತ್ತಿನ ರಕ್ಷಕನೂ, ವ್ಯಾಪಕನೂ, ಎಲ್ಲರಿಗಿಂತಲೂ ದೊಡ್ಡವನೂ ಆಗಿದ್ದೇನೆ, ಎಂದು ತಿಳಿಯಿರಿ", ಎಂದು ವ್ಯಾಖ್ಯಾನ ಮಾಡುತ್ತಾರೆ.

ಮಾಡತೊಡಗಿದರು. '**ನಿರುಕ್ತ**'ವು ಈ ರೀತಿಯಾಗಿ ಪ್ರಚಲನೆಗೆ ಬಂದಿತು. ಎಂದರೆ, ವ್ಯಾಕರಣವು ಅರ್ಥವನ್ನು ತಿಳಿಸಲು ಅಸಮರ್ಥವಾದೆಡೆ, ನಿರುಕ್ತವು ಸಹಾಯಕ್ಕೆ ಬಂದಿತು!

ಇಂತಹ ಸಂದರ್ಭದಲ್ಲಿ ವೇದದ ಒಂದು ಶಬ್ದಕ್ಕೇ ಅನೇಕ ವಿಶಿಷ್ಟ ಅರ್ಥಗಳು ಗೋಚರವಾದುವು. ಉದಾಹರಣೆಗಾಗಿ_

'ಜ್ಯೋತಿರ್ವೈ ಹಿರಣ್ಯಮ್' **'ಪ್ರಾಣೋ ವೈ ಕೂರ್ಮಃ'**

'ಜ್ಯೋತಿರಿಂದ್ರಾಗ್ನೀ' **'ಕಶ್ಯಪೋ ವೈ ಕೂರ್ಮಃ'**

'ಯಶೋ ವೈ ಹಿರಣ್ಯಮ್' **'ಶ್ರೀರ್ವೈ ಸೋಮಃ'**

'ಆಯುರ್ವಾ ಅಗ್ನಿಃ' **'ಶ್ರೀರ್ವೈ ರಾಷ್ಟ್ರಮ್'**

'ಅಗ್ನಿರ್ವೈ ರೇತೋಧಾಃ' **'ರಾಷ್ಟ್ರಂ ವಾ ಅಶ್ವಮೇಧಃ'** ಇತ್ಯಾದಿ.

ವೇದಭಾಷ್ಯದ ಕ್ರಮವಾದ ಅವನತಿ

ವೇದಗಳ ಹಲವು ಮಂತ್ರಗಳ ವ್ಯಾಖ್ಯಾನಕ್ಕಾಗಿ ಬ್ರಾಹ್ಮಣಗ್ರಂಥಗಳು ಈ ರೀತಿಯಲ್ಲಿ ರಚಿತವಾಗ ತೊಡಗಿದುವು. ಈ ಆಧಾರದ ಮೇಲೆ **ನಿಘಂಟು-ನಿರುಕ್ತ**ದ ಪದ್ಧತಿಯು ಜಾರಿಗೆ ಬಂದಿತು.

ಆದರೆ, ಯಾಜ್ಞಿಕಪರಂಪರೆಯೇ ಅತಿಪುಷ್ಟವಾಗಿ, ವೇದಗಳು ಯಜ್ಞದ ವಿನಿಯೋಗಕ್ಕಾಗಿ ಮಾತ್ರವೇ ಇವೆ, ಎಂಬ ಕುಪ್ರಚಲನೆಯು ಬಂದಾಗ, ಬ್ರಾಹ್ಮಣಗ್ರಂಥಗಳು ತಮ್ಮ ಯಥಾರ್ಥ ಉದ್ದೇಶ್ಯವನ್ನೂ, ಸ್ವರೂಪವನ್ನೂ ಕಳೆದುಕೊಂಡು, ಯಜ್ಞವ್ಯಾಖ್ಯಾನಗ್ರಂಥಗಳಾಗಿ ಮಾತ್ರ ಉಳಿದು ಬಿಟ್ಟವು!

ಪರಿಣಾಮಸ್ವರೂಪವಾಗಿ, ವೇದೋಪದೇಶದ ಪರಂಪರೆಯು ನಷ್ಟವಾಗಿ, ಯಾಜ್ಞಿಕಪರಂಪರೆಯು ಆರಂಭವಾಯಿತು. ಇದಕ್ಕಾಗಿ ಶ್ರೌತಸೂತ್ರಗಳೂ, ಕಲ್ಪಸೂತ್ರಗಳೂ ರಚಿಸಲ್ಪಟ್ಟುವು. ಯಾಜ್ಞಿಕಪರಂಪರೆಯ ಪುಷ್ಟಿಗಾಗಿ ವೇದಭಾಷ್ಯಗಳ ರಚನೆ ಆರಂಭವಾಯಿತು!

ಬ್ರಾಹ್ಮಣಗ್ರಂಥಗಳಲ್ಲಿ ಯಜ್ಞಗಳೊಡನೆ, ರಾಜರ ಇತಿಹಾಸವು ಸಮ್ಮಿಳಿತವಾಯಿತು. ಅದರೊಡನೆ ಶಂಕಾ-ಸಮಾಧಾನ, ದೃಷ್ಟಾಂತ, ಕಥಾನಕಗಳ ಸಾಮ್ರಾಜ್ಯದ ಆರಂಭವಾಯಿತು. ಜೊತೆಗೆ ಉಪನಿಷತ್ತುಗಳ ಮೂಲವು ಬೇರು ಬಿಟ್ಟು, ಬೆಳೆಯಲಾರಂಭಿಸಿತು.

ನಂತರ, ವಾಮಮಾರ್ಗಿಗಳ ಪ್ರವೇಶವು ಯಜ್ಞದಲ್ಲಾಗಿ, ಪಶುಹಿಂಸೆ, ಮದ್ಯಪಾನ, ಮೈಥುನಗಳು ಯಜ್ಞವನ್ನು ಭ್ರಷ್ಟ ಮಾಡಿದಾಗ, ಜನರ ತೀವ್ರ ವಿರೋಧಕ್ಕೊಳಪಟ್ಟ ಯಜ್ಞವು ಮೂರ್ತಿಪೂಜೆಗೆ ತನ್ನ ಸ್ಥಾನವನ್ನು ತೆರವು ಮಾಡಿಕೊಟ್ಟು, ಪರದೆಯ ಹಿಂದೆ ಅವಿತುಕೊಂಡಿತು!

ಮೂರ್ತಿಪೂಜೆಯು ಸಂಪ್ರದಾಯಗಳಿಗೆ ಜನನಿಯಾಯಿತು!

ಶಾಕ್ತ, ಶೈವ, ವೈಷ್ಣವಾದಿ ಸಂಪ್ರದಾಯಗಳು ಹುಟ್ಟಿಕೊಂಡು ಪ್ರಬಲವಾದ ಮೇಲೆ, ಪುರಾಣಗಳು ಅವುಗಳ ಸಮರ್ಥನೆಗಾಗಿ ರಚಿತವಾದುವು.

ಪುರಾಣಗಳ ಪರಸ್ಪರ ವಿರೋಧದಿಂದ, ವಿದ್ವಾಂಸರಲ್ಲಿ ಅವುಗಳ ಮನ್ನಣೆಯು ಕಡಿಮೆಯಾದಾಗ, ಸಂಪ್ರದಾಯಗಳ ಸಮರ್ಥನೆಗಾಗಿ, ಎಂದರೆ, ಪುರಾಣಗಳ ಸಮರ್ಥನೆಯ ಮೂಲಕ ಸಂಪ್ರದಾಯೀ ವಿದ್ವಾಂಸರು ವೇದಕ್ಕೆ ಕೈ ಹಾಕಿದರು! ಎಂದರೆ, ವೇದದ ಗೌರವವನ್ನು ಕಡಿಮೆ ಮಾಡಲು ಭಾಷ್ಯರಚನೆಗಾಗಿ ಕೈ ಪಳಗಿಸಿದರು!

ವೇದಗಳ ಅಪಭಾಷ್ಯಾರಂಭ!

ಇದರಿಂದ, ವೇದವು ಭ್ರಷ್ಟಾರ್ಥಕ್ಕೊಳಗಾಯಿತು! ಸಂಪ್ರದಾಯೀ ವಿದ್ವಾಂಸರು ವೇದಭಾಷ್ಯವನ್ನು ಮಾಡಲು ತೊಡಗಿದರೆಂದ ಮೇಲೆ, ವೇದಕ್ಕಾದ ಫಜೀತಿಯನ್ನು ಸಹಜವಾಗಿಯೇ ಊಹಿಸಿಕೊಳ್ಳಬಹುದು!

ಧಾತ್ವರ್ಥಕ್ಕನುಸಾರವಾಗಿ, ಯೌಗಿಕ, ಹಾಗೂ ಯೋಗರೂಢ ಅರ್ಥಗಳಿಂದ ತಿಳಿಯಬೇಕಾದ ವೇದ ಮಂತ್ರಗಳು ಪುರಾಣಗಳ ರೂಢ-ಅರ್ಥಗಳ ಬಲಾತ್ಕಾರಕ್ಕೆ ಒಳಪಟ್ಟು, ತಮ್ಮ ಸತ್ಯ-ಅಸ್ತಿತ್ವವನ್ನೇ ಕಳೆದುಕೊಂಡು, ಪುರಾಣಗಳ ಅಡಿಯಾಳಾದುವು!

ಇಂತಹ ಸಮಯದಲ್ಲಿ ವಿದೇಶೀ ಕ್ರೈಸ್ತರ ಧಾಳಿಯು ಭಾರತದ ಮೇಲೂ, ನಂತರ, ವೇದಗಳ ಮೇಲೂ ಆರಂಭವಾಯಿತು! ಅವರು ಸಂಪ್ರದಾಯಸ್ಥ ವಿದ್ವಾಂಸರ ಅಪಭಾಷ್ಯಗಳ ಭಾರದಿಂದ ನೀರಿನಲ್ಲಿ ಮುಳುಗುತ್ತಿದ್ದ ವೇದದ ಕೊರಳಿಗೆ ತಮ್ಮ ದುರುದ್ದೇಶಪೂರಿತವಾದ ಭಾಷ್ಯರೂಪಗಳ ಭಾರವಾದ ಕಲ್ಲುಬಂಡೆಯನ್ನೂ ಕಟ್ಟಿ, ವೇದವನ್ನು ಜಲಸಮಾಧಿಗೆ ಈಡು ಮಾಡಿದರು!

ವೇದಗೌರವ

ಮನುಸ್ಮೃತಿಯಲ್ಲಿ ಕೆಳಕಂಡಂತೆ ವೇದಗಳ ಯಾವ ಪ್ರಶಸ್ತಿಯನ್ನು ಮಾಡಲಾಗಿತ್ತೋ, ಅದು ಕೆಸರಿನಲ್ಲಿ ಮುಳುಗಿತು_

೧. **'ಸರ್ವಜ್ಞಾನಮಯೋ ಹಿ ಸಃ'** (ಮನುಸ್ಮೃತಿ: ೨.೭)

_ ವೇದವು ಎಲ್ಲಾ ಜ್ಞಾನಗಳಿಂದಲೂ ಕೂಡಿದೆ!

೨. **'ಪಿತೃದೇವಮನುಷ್ಯಾಣಾಂ ವೇದಶ್ಚಕ್ಷುಃ ಸನಾತನಮ್'** (ಮನುಸ್ಮೃತಿ: ೧೨.೯೪)

_ ಪಿತೃ, ದೇವ, ಮನುಷ್ಯರಿಗೆ ವೇದವು ಶಾಶ್ವತವಾದ ನೇತ್ರದಂತಿದೆ!

೩. **'ಭೂತಂ ಭವ್ಯಂ ಭವಿಷ್ಯಂ ಚ ಸರ್ವಂ ವೇದಾತ್ ಪ್ರಸಿಧ್ಯತಿ'** (ಮನುಸ್ಮೃತಿ: ೧೨.೯೭)

_ ಭೂತ, ವರ್ತಮಾನ ಮತ್ತು ಭವಿಷ್ಯತ್ತಿನ ವ್ಯವಸ್ಥೆಗಳೆಲ್ಲವೂ ವೇದದಿಂದಲೇ ಪ್ರಚಲಿತವಾಗುತ್ತವೆ!

೪. **'ಬಿಭರ್ತಿ ಸರ್ವಭೂತಾನಿ ವೇದಶಾಸ್ತ್ರಂ ಸನಾತನಮ್'** (ಮನುಸ್ಮೃತಿ: ೧೨.೯೯)

_ ಎಲ್ಲಾ ಪ್ರಾಣಿಗಳನ್ನೂ ಸನಾತನ ವೇದಶಾಸ್ತ್ರವು ಭರಣೆ-ಪೋಷಣೆ ಮಾಡುತ್ತದೆ!

೫. **'ಸರ್ವಲೋಕಾಧಿಪತ್ಯಂ ಚ ವೇದಶಾಸ್ತ್ರವಿದರ್ಹತಿ'** (ಮನುಸ್ಮೃತಿ: ೧೨.೧೦೦)

_ ವೇದಶಾಸ್ತ್ರವನ್ನು ತಿಳಿದವನು ಸಂಪೂರ್ಣಲೋಕಗಳ ಮೇಲಿನ ಆಧಿಕಾರಕ್ಕೆ ಅರ್ಹನಾಗುತ್ತಾನೆ!

ವೇದಭಾಷ್ಯಕ್ಕಾಗಿ ಮಹರ್ಷಿ ದಯಾನಂದರ ಪ್ರಯತ್ನ

ವೇದಕ್ಕೆ ಇಂತಹ ವಿಕಟ ಪರಿಸ್ಥಿತಿಯು ಜೈನ-ಬೌದ್ಧರ ರಾಜ್ಯಾಡಳಿತದ ಕಾಲದಲ್ಲಿ ಸ್ವಲ್ಪವಾಗಿ ಬಂದಿದ್ದಿರಬಹುದೇನೋ? ಏಕೆಂದರೆ, ಆಗ ಕ್ರೈಸ್ತ ವಿದ್ವಾಂಸರ, ಹಾಗೂ ಕ್ರೈಸ್ತ-ಮುಸಲ್ಮಾನ್ ವಿದೇಶೀ ಶಾಸಕರ ಧಾಳಿಯು ವೇದಗಳ ಮೇಲೆ ಆಗಿರಲಿಲ್ಲವಲ್ಲ!

ಇಂತಹ ನಿರಾಶಾಜನಕ ಸಮಯದಲ್ಲಿ ಆರ್ಯಸಮಾಜದ ಪ್ರವರ್ತಕರಾದ ಸ್ವಾಮಿ ದಯಾನಂದ ಸರಸ್ವತಿಗಳು (೧೮೨೪-೧೮೮೩) ದೇಶೀ-ವಿದೇಶೀ ವಿದ್ವಾಂಸರಿಂದ ಕೆಸರಿನಲ್ಲಿ ಹೂಳಲ್ಪಟ್ಟಿದ್ದ ವೇದವನ್ನು ಹೊರ ತೆಗೆದು, ಸ್ವಚ್ಛ ಮಾಡಿ, **ಮನುಸ್ಮೃತಿಯಲ್ಲಿ** ವರ್ಣಿತವಾದ ವೇದಗೌರವವನ್ನು ಪುನಃ ಪ್ರಸ್ಥಾಪಿಸುವುದಕ್ಕಾಗಿಯೂ, ವೇದಗಳನ್ನು ಎಲ್ಲಾ ಸತ್ಯವಿದ್ಯೆಗಳ ಪುಸ್ತಕ, ಎಂದು ಪ್ರತಿಪಾದಿಸುವುದಕ್ಕಾಗಿಯೂ, ವೇದದ ಅಪೌರುಷೇಯತ್ವದ ಸಿದ್ಧಾಂತವನ್ನು ಪುನಃ ಪ್ರಕಾಶ ಪಡಿಸುವುದಕ್ಕಾಗಿಯೂ, ಮತ್ತು

'ವೇದದ ಆಜ್ಞಾಪಾಲನೆಯೇ ಧರ್ಮ; ಇತರರ ಆಜ್ಞಾಪಾಲನೆಯು ಅಧರ್ಮ', ಎಂದು ತೋರಿಸುವುದಕ್ಕಾಗಿಯೂ; ಹಾಗೂ ವೇದಾಚರಣೆಯಿಂದ ಮನುಷ್ಯನು ಸರ್ವಾಂಗೀಣ ಉನ್ನತಿಯನ್ನು, ಎಂದರೆ ಅಭ್ಯುದಯವನ್ನೂ, ನಿಃಶ್ರೇಯಸ್ಸನ್ನೂ ಸಾಧಿಸಿಕೊಳ್ಳಬಲ್ಲನೆಂಬುದನ್ನು ತೋರಿಸುವುದಕ್ಕಾಗಿಯೂ ನಾಲ್ಕೂ ವೇದಗಳ ಭಾಷ್ಯವನ್ನು ಮಾಡುವುದಕ್ಕಾಗಿ ಸಂಕಲ್ಪಿಸಿದರು.

ಇದಕ್ಕಾಗಿ, **'ಚತುರ್ವೇದವಿಷಯಸೂಚೀ'**, ಎಂಬ ಪುಸ್ತಿಕೆಯನ್ನು ಮೊದಲು ತಯಾರಿಸಿದರು. ಇದರಲ್ಲಿ ನಾಲ್ಕೂ ವೇದಗಳ ಪ್ರತ್ಯೇಕ ಅಧ್ಯಾಯ, ವರ್ಗ, ಸೂಕ್ತ, ದಶತಿ ಮತ್ತು ಮಂತ್ರ ಮೊದಲಾದುವುಗಳಲ್ಲಿನ ಪ್ರತಿಪಾದ್ಯ-ವಿಷಯಗಳ ಉಲ್ಲೇಖವಿದೆ.

ನಂತರ, ಮಹರ್ಷಿ ದಯಾನಂದರು ಜನರ ಅವಗಾಹನೆಗಾಗಿ ತಾವು ಮಾಡಬೇಕೆಂದಿರುವ ವೇದಭಾಷ್ಯದ ನಮೂನೆಯಾಗಿ ಋಗ್ವೇದದ ಮೊದಲ ಹತ್ತು ಮಂತ್ರಗಳ ಭಾಷ್ಯವನ್ನು ವಿಕ್ರಮ ಸಂವತ್ ೧೯೩೧ (ಇಸವಿ ೧೮೭೪)ರಲ್ಲೂ ; ತದನಂತರ, ವಿಕ್ರಮ ಸಂವತ್ ೧೯೩೪ (ಇಸವಿ ೧೮೭೭) ರಲ್ಲೂ ಪ್ರಕಟಿಸಿದರು. ಈ ಭಾಷ್ಯವು ಸಂಸ್ಕೃತದಲ್ಲಿ ಮಾಡಲಾಗಿದ್ದು, ಹಿಂದೀಭಾಷೆಯ ಭಾಷಾರ್ಥದಿಂದಲೂ ಕೂಡಿತ್ತು. ಇದರ ಉಲ್ಲೇಖವು **'ಋಗ್ವೇದಾದಿಭಾಷ್ಯಭೂಮಿಕಾ'**ದ **'ವೇದವಿಷಯವಿಚಾರ'** ಪ್ರಕರಣದಲ್ಲಿ ಮಾಡಲಾಗಿದೆ.

ನಂತರ, ವೇದಭಾಷ್ಯಕ್ಕೆ ಭೂಮಿಕಾರೂಪದಲ್ಲಿ, ನಾಲ್ಕೂ ವೇದಗಳಲ್ಲಿರುವ ವಿಷಯಗಳ ಸಂಕ್ಷಿಪ್ತ ಪರಿಚಯವನ್ನು ತೋರಿಸುವ ಸಲುವಾಗಿ ಮತ್ತು ವೇದಗಳ ಬಗ್ಗೆ ಆವಶ್ಯಕ ತಿಳಿವಳಿಕೆಯನ್ನು ಕೊಡಲು, ಪ್ರಸ್ತುತ **'ಋಗ್ವೇದಾದಿಭಾಷ್ಯಭೂಮಿಕಾ'** ಗ್ರಂಥದ ಪ್ರಾರಂಭವನ್ನು ವಿ.ಸಂ. ೧೯೩೩* (ಇಸವಿ ೧೮೭೬)ರಲ್ಲಿ ಮಾಡಿ_

ನಂತರ, **ಋಗ್ವೇದಭಾಷ್ಯ**ವನ್ನು ವಿ.ಸಂ. ೧೯೩೪** (ಇಸವಿ ೧೮೭೭)ರಲ್ಲಿ ಪ್ರಾರಂಭಿಸಿದರು.

ಜೊತೆಗೇ **ಯಜುರ್ವೇದಭಾಷ್ಯ**ವನ್ನೂ ಕೂಡ, ವಿ.ಸಂ. ೧೯೩೪*** (ಇಸವಿ ೧೮೭೭)ರಲ್ಲಿ ಆರಂಭಿಸಿದರು.

ಎಂದರೆ, ಋಗ್ವೇದಭಾಷ್ಯದ ಆರಂಭವಾದ ಸುಮಾರು ಒಂದೂ ಕಾಲು ತಿಂಗಳಲ್ಲೇ ಯಜುರ್ವೇದಭಾಷ್ಯದ ಆರಂಭವನ್ನೂ ಮಾಡಿಬಿಟ್ಟಿದ್ದರು.

ಯಜುರ್ವೇದಭಾಷ್ಯವು ವಿ.ಸಂ. ೧೯೩೯$ (ಇಸವಿ ೧೮೮೨)ರಲ್ಲಿ ಪೂರ್ಣವಾಯಿತು.

ಆದರೆ, ಮಹರ್ಷಿ ದಯಾನಂದರು ವಿ.ಸಂ. ೧೯೪೦@ (ಇಸವಿ ೧೮೮೩)ರಲ್ಲಿ ಜೋಧಪುರದಲ್ಲಿ ವಿಷಪ್ರಯೋಗ ಮಾಡಲ್ಪಟ್ಟ ಕಾರಣದಿಂದ, ಪರಲೋಕವಾಸಿಗಳಾದಾಗ, ಋಗ್ವೇದಭಾಷ್ಯವು ಏಳನೆಯ ಮಂಡಲದ, ಅರವತ್ತೊಂದನೆಯ ಸೂಕ್ತದ ಎರಡು ಮಂತ್ರಗಳಷ್ಟು ಮಾತ್ರ ಆಗಿತ್ತು.

ಸಾಮವೇದದ, ಮತ್ತು ಅಥರ್ವವೇದದ ಭಾಷ್ಯಗಳ ಆರಂಭವೇ ಆಗಿರಲಿಲ್ಲ!

---

* ಭಾದ್ರಪದ, ಶುಕ್ಲಪಕ್ಷ, ಪ್ರತಿಪದಾ, ಭಾನುವಾರ (೨೦ನೇ ಆಗಸ್ಟ್ ೧೮೭೬)

** ಮಾರ್ಗಶೀರ್ಷ, ಶುಕ್ಲಪಕ್ಷ, ಷಷ್ಠೀ, ಮಂಗಳವಾರ

*** ಪುಷ್ಯ, ಶುಕ್ಲಪಕ್ಷ, ತ್ರಯೋದಶೀ, ಗುರುವಾರ

$ ಮಾರ್ಗಶೀರ್ಷ, ಕೃಷ್ಣಪಕ್ಷ, ಪ್ರತಿಪದಾ, ಶನಿವಾರ

@ ಕಾರ್ತಿಕ, ಅಮಾವಾಸ್ಯಾ ಸಾಯಂಕಾಲ ೬ ಗಂಟೆ; ದಿನಾಂಕ ೩೦ ಅಕ್ಟೋಬರ್ ೧೮೮೩

ದಯಾನಂದ-ಭಾಷ್ಯಪದ್ಧತಿ

ಮಹರ್ಷಿ ದಯಾನಂದರ ವೇದಭಾಷ್ಯದ ಕ್ರಮವು ಈ ಕೆಳಕಂಡಂತಿದೆ_

ಸಂಸ್ಕೃತದಲ್ಲಿ— ಋಷಿ, ದೇವತಾ, ಛಂದಸ್ಸು, ಸ್ವರ
ಮಂತ್ರದ ವಿಷಯ-ನಿರ್ದೇಶ

ಹಿಂದಿಯಲ್ಲಿ— ಮಂತ್ರದ ವಿಷಯ-ನಿರ್ದೇಶ

ಸಂಸ್ಕೃತದಲ್ಲಿ— ಮಂತ್ರ, ಸ್ವರಯುಕ್ತ.
ಪದಪಾತ, ಸ್ವರಯುಕ್ತ.
ಪದಾರ್ಥ , ವ್ಯಾಕರಣಪ್ರಕ್ರಿಯೆ, ನಿರುಕ್ತ, ಬ್ರಾಹ್ಮಣ, ವೇದಾದಿ ಪ್ರಮಾಣಗಳೊಡನೆ.
ಅನ್ವಯ
ಭಾವಾರ್ಥ

ಹಿಂದಿಯಲ್ಲಿ— ಪದಾರ್ಥಾನ್ವಯ
ಭಾವಾರ್ಥ

ಋಗ್ವೇದಭಾಷ್ಯದ, ಹಾಗೂ **ಯಜುರ್ವೇದಭಾಷ್ಯದ** ಮೊದಲನೆಯ ಮಂತ್ರದ ನಮೂನೆಯನ್ನು ನಾವು **ಪರಿಶಿಷ್ಟಮ್ ೧ (ಕ)** ಮತ್ತು ೧ (ಖ)ದಲ್ಲಿ ತೋರಿಸಿದ್ದೇವೆ.

ಏಕೆಂದರೆ, **'ಜಯಚಾಮರಾಜೇಂದ್ರ ಗ್ರಂಥಮಾಲಾ'** ಮೈಸೂರು, ಇವರಿಂದ ೧೯೪೮ರಲ್ಲಿ ಪ್ರಕಟಿಸಲ್ಪಟ್ಟ ಸಾಯಣಾಚಾರ್ಯರ ಋಗ್ವೇದಭಾಷ್ಯದ (ಕನ್ನಡ ಸಂಸ್ಕರಣ) ಪೂರ್ವಪೀಠಿಕೆಯ ವೇದಭಾಷ್ಯಕಾರ-ಪ್ರಕರಣದ ಅಂತದಲ್ಲಿ ಅನುವಾದಕರೂ, ಸಂಪಾದಕರೂ ಆದ ಆಸ್ಥಾನ ವಿದ್ವಾನ್ ಎಚ್.ಪಿ. ವೆಂಕಟರಾಯರು ಹೀಗೆ ಬರೆದಿದ್ದಾರೆ_

"**ಹಿಂದೀ ಮುಂತಾದ ದೇಶಭಾಷೆಗಳಲ್ಲಿ** ದಯಾನಂದ ಸರಸ್ವತೀ ಮೊದಲಾದ ಆಧುನಿಕ ವಿದ್ವಾಂಸರು ಬರೆದಿರುವ ವೇದಾರ್ಥಸ್ವರೂಪವಾದ ಗ್ರಂಥಗಳು ವೇದವೇತ್ತೃಗಳ ಮನ್ನಣೆಯನ್ನು ಪಡೆಯದಿರುವುದರಿಂದಲೂ, ಅವುಗಳ ಪ್ರಾಮುಖ್ಯತೆಯು ಅಷ್ಟಾಗಿ ಇಲ್ಲದ್ದರಿಂದಲೂ ಅವುಗಳನ್ನು ವಿವರಿಸುವ ಆವಶ್ಯಕತೆಯು ಕಂಡುಬರುವುದಿಲ್ಲ." (ಪುಟ ೨೬೦)

ಇಂತಹ ಮೇಲಿನ ಸತ್ಯಕ್ಕೆ ದೂರವಾದ, ಹಾಗೂ ಭ್ರಾಂತಿಯನ್ನು ಉಂಟುಮಾಡುವ ದುರುದ್ದೇಶ್ಯಪೂರಿತ ಉದ್ಗಾರದ ನಿವಾರಣೆಯನ್ನು ಈ ಪರಿಶಿಷ್ಟಗಳು ಮಾಡುತ್ತವೆ.

ಋಗ್ವೇದಾದಿಭಾಷ್ಯಭೂಮಿಕಾ

ಪ್ರಸ್ತುತ ಗ್ರಂಥವನ್ನು ಮಹರ್ಷಿ ದಯಾನಂದರು ವಿ.ಸಂ. ೧೯೩೩ (ಇಸವಿ ೧೮೭೬* ಅಥವಾ ಶಾ.ಶ. ೧೭೯೮)ರಲ್ಲಿ ಬರೆಯಲಾರಂಭಿಸಿದರು, ಎಂದು ಹಿಂದೆಯೇ ತಿಳಿಸಲಾಗಿದೆ. ಈ ಗ್ರಂಥದ ಪಾಂಡುಲಿಪಿಯು ಸುಮಾರು ಮೂರು ತಿಂಗಳಲ್ಲಿ ಸಿದ್ಧವಾಯಿತು. ನಂತರ, ಈ ಗ್ರಂಥದ ಮಹತ್ತ್ವವನ್ನು ದೃಷ್ಟಿಯಲ್ಲಿಟ್ಟುಕೊಂಡು, ಉತ್ತರೋತ್ತರ ಇದರ ಪರಿಷ್ಕರಣವನ್ನೂ, ಪರಿವರ್ಧನವನ್ನೂ ಮಾಡಲಾಯಿತು.

ಈ ಗ್ರಂಥವು ಮೊಟ್ಟ ಮೊದಲು ಕಾಶಿಯ ಲಾಜರಸ್ ಪ್ರೆಸ್‌ನಲ್ಲಿ ವಿ. ಸಂ. ೧೯೩೪ ಫಾಲ್ಗುಣ ಮಾಸ(ಇಸವಿ ೧೮೭೭)ದಲ್ಲಿ ಮುದ್ರಿತವಾಗಲಾರಂಭವಾಗಿ, ವಿ.ಸಂ ೧೯೩೫ (ಇಸವಿ ೧೮೭೮) ವೈಶಾಖಮಾಸದಲ್ಲಿ ೧೪ ಅಂಕಗಳಲ್ಲಿ ಪೂರ್ಣವಾಯಿತು. ಕೊನೆಯ ೧೫ ನೆಯ ಮತ್ತು ೧೬ ನೆಯ ಅಂಕಗಳು ಮುಂಬಯಿಯ ನಿರ್ಣಯಸಾಗರ ಪ್ರೆಸ್‌ನಲ್ಲಿ ಮುದ್ರಿತವಾದುವು.

* ದಿನಾಂಕ ೨೦ನೇ ಆಗಸ್ಟ್ ೧೮೭೬

ನಾಲ್ಕೂ ವೇದಗಳ ಕೈಪಿಡಿ!

ಸಾಮಾನ್ಯವಾಗಿ ಇಂತಹ ಗ್ರಂಥವು ವೇದಭಾಷ್ಯದ ಭೂಮಿಕೆ ಮಾತ್ರ ಆಗಿರುವುದರಿಂದ, ಇದರ ಸ್ವತಂತ್ರ ಅಸ್ತಿತ್ವಕ್ಕೆ ಅವಕಾಶವಿರುತ್ತಿರಲಿಲ್ಲ! ಆದರೆ, ಇದರಲ್ಲಿ ಪ್ರತಿಪಾದಿಸಲಾಗಿರುವ ವಿಷಯಬಾಹುಲ್ಯದಿಂದ, ಇದು ನಾಲ್ಕೂ ವೇದಗಳ '**ಕೈಪಿಡಿ**'ಯ ಮಹತ್ತ್ವವನ್ನು ಹೊಂದಿ, ತನ್ನದೇ ಆದ ಸ್ವತಂತ್ರ ಹಿರಿಮೆಯಿಂದ ರಾರಾಜಿಸುತ್ತಿದೆ. ಇದು ಅಪೂರ್ವ!

ಉದಾಹರಣೆಗಾಗಿ, ಈ ಗ್ರಂಥವಲ್ಲಿ ಅಳವಡಿಸಿರುವ ಮೂವತ್ತೈದು ಅಧ್ಯಾಯಗಳ ಸಂಕ್ಷಿಪ್ತ ನೋಟ ಹೇಗಿದೆ, ನೋಡಿ!

೧. **ಈಶ್ವರಪ್ರಾರ್ಥನೆ**_ ವೇದಗಳ ಸತ್ಯಾರ್ಥವನ್ನು ವಿಸ್ತರಿಸುತ್ತಾ, ವೇದಭಾಷ್ಯವನ್ನು ಸಂಪೂರ್ಣವಾಗಿ ಮುಗಿಸಲು, ಪರಮಾತ್ಮನಲ್ಲಿ ಯಜುರ್ವೇದದ ಮತ್ತು ಅಥರ್ವವೇದದ ಒಂಬತ್ತು ಮಂತ್ರಗಳ ಮೂಲಕ ಕೃಪೆಗಾಗಿ ಪ್ರಾರ್ಥನೆ.*

೨. **ವೇದೋತ್ಪತ್ತಿ**_ ಪರಮಾತ್ಮನಿಂದಲೇ ನಾಲ್ಕೂ ವೇದಗಳ ಉತ್ಪತ್ತಿ. ಯಜುರ್ವೇದ, ಅಥರ್ವವೇದ, ಶತಪಥಬ್ರಾಹ್ಮಣಗಳ ಪ್ರಮಾಣಗಳು. ಈ ಬಗ್ಗೆ ಅನೇಕ ಶಂಕೆಗಳಿಗೆ ಸಮಾಧಾನ. ಪುಸ್ತಕವು ವೇದವಲ್ಲ; ವೇದ, ಎಂದರೆ ಪರಮಾತ್ಮನ ಜ್ಞಾನ! ನಾಲ್ಕು ಋಷಿಗಳ ಅಂತಃಕರಣಗಳಲ್ಲಿ ವೇದಾವಿರ್ಭಾವ. ಸೃಷ್ಟ್ಯುತ್ಪತ್ತಿ-ವೇದೋತ್ಪತ್ತಿಯಾಗಿ ಕಳೆದ ಅವಧಿಯ ಗಣನೆ. ಈ ಬಗ್ಗೆ ಪಾಶ್ಚಾತ್ಯ ವಿದ್ವಾಂಸರ ಭ್ರಾಂತಮತನಿರಸನ.

೩. **ವೇದನಿತ್ಯತ್ವ**_ ನಿತ್ಯ ಪರಮಾತ್ಮನ ಜ್ಞಾನವೂ ನಿತ್ಯ; ವೇದವೂ ನಿತ್ಯ! ಶಬ್ದವೂ ನಿತ್ಯ! ಪತಂಜಲಿ, ಕಣಾದ, ಗೌತಮ, ವಾತ್ಸ್ಯಾಯನ, ಕಪಿಲ, ವ್ಯಾಸ, ಶಂಕರಾಚಾರ್ಯರ ಮತಗಳು. ಯುಕ್ತಿಯಿಂದಲೂ ಸಿದ್ಧ!

೪. **ವೇದವಿಷಯ**_ ವಿಜ್ಞಾನ-ಕರ್ಮ-ಉಪಾಸನಾ-ಜ್ಞಾನಕಾಂಡ. ತೃಣದಿಂದ ಹಿಡಿದು ಪರಮೇಶ್ವರನವರೆಗಿನ ಜ್ಞಾನ. ಈಶ್ವರಾನುಭವವು ಮುಖ್ಯ. ವೇದಗಳಲ್ಲಿನ ಎರಡು ವಿದ್ಯೆ_ ಅಪರಾ ಮತ್ತು ಪರಾ! ಪರಮಾತ್ಮನ ಷೋಡಶ ಕಲೆ. ಕರ್ಮಕಾಂಡದ ಅರ್ಥ. ಯಜ್ಞದ ಪ್ರಯೋಜನ. ವಾಯುಶುದ್ಧಿ. ಮಳೆ. ಪ್ರತ್ಯಕ್ಷಾದಿ ಎಂಟು ಪ್ರಮಾಣಗಳು. ಯಜ್ಞದಲ್ಲಿ ಮಂತ್ರೋಚ್ಚಾರಣೆಯ ಉದ್ದೇಶ. ದೇವತಾಪ್ರಕರಣ. ೩೩ ದೇವತೆಗಳು, ಜಡ ಮತ್ತು ಚೇತನ! ಪರಮಾತ್ಮನೇ ಉಪಾಸ್ಯ ; ಜಡದೇವತೆಗಳಲ್ಲ! **ಹಿರಣ್ಯಗರ್ಭ** ಶಬ್ದದ ಬಗ್ಗೆ ಮೋಕ್ಷಮೂಲರ್ ಅವರ ಮತಖಂಡನ.

೫. **ವೇದಸಂಜ್ಞಾವಿಚಾರ**_ ಕೇವಲ ಸಂಹಿತೆಗಳೇ ವೇದ; ಬ್ರಾಹ್ಮಣಗ್ರಂಥಗಳಲ್ಲ! ಬ್ರಾಹ್ಮಣಗ್ರಂಥಗಳಲ್ಲಿನ ವಾಕ್ಯವಿಭಾಗ. ಇತಿಹಾಸ, ಗಾಥಾ, ನಾರಾಶಂಸೀ ಇತ್ಯಾದಿ. ಪುರಾಣಗಳು '**ಪುರಾಣ**'ವಲ್ಲ!

೬. **ಬ್ರಹ್ಮವಿದ್ಯೆ**_ ವೇದಗಳಲ್ಲಿ ಬ್ರಹ್ಮನ ಯಥಾರ್ಥ ವರ್ಣನೆ.

೭. **ವೇದೋಕ್ತಧರ್ಮ**_ ಸಂಘಟನೆ, ಸತ್ಯಾಚರಣೆ, ಪುರುಷಾರ್ಥ, ಶ್ರಮ, ಓಜಸ್, ತೇಜಸ್, ಬಲ, ರಾಜ್ಯ, ಯಶಸ್, ಐಶ್ವರ್ಯ, ಆಯಸ್ಸು, ಕೀರ್ತಿ, ಅನ್ನ, ಇತ್ಯಾದಿ.

೮. **ಸೃಷ್ಟಿವಿದ್ಯೆ**_ ಋಗ್ವೇದದ **ನಾಸದೀಯಸೂಕ್ತ**. ಸೃಷ್ಟಿಗೆ ಆದಿಕಾರಣ. ಪರಮಾತ್ಮನ ಸಾಮರ್ಥ್ಯದಲ್ಲಿ ಕಾರಣದ ಲಯ. ಯಜುರ್ವೇದದ ಪುರುಷಾಧ್ಯಾಯ(೩೧ನೆಯ ಅಧ್ಯಾಯ)ದ ೨೨ ಮಂತ್ರಗಳಲ್ಲಿನ ಸೃಷ್ಟಿವಿದ್ಯೆ. ಬ್ರಹ್ಮಾಂಡದ ಏಳು ಪರಿಧಿಗಳು.

೯. **ಪೃಥಿವ್ಯಾದಿಲೋಕಭ್ರಮಣ** _ ಸೂರ್ಯನ ಸುತ್ತಲೂ ಪೃಥಿವಿಯ ಭ್ರಮಣ! ಪೃಥಿವಿಯ ಸುತ್ತ ಚಂದ್ರ!

---

* ಸಂಪ್ರದಾಯಸ್ಥ ಗ್ರಂಥಕರ್ತೃಗಳು ವೇದಮಂತ್ರಗಳ ಮೂಲಕ ಪರಮಾತ್ಮನ ಪ್ರಾರ್ಥನೆ ಮಾಡುವುದನ್ನು ವೇದಭಾಷ್ಯಗಳಲ್ಲೂ ತೋರಿಸಿಲ್ಲ! ಸಾಯಣ, ಮಹೀಧರಾದಿಗಳ ಪ್ರಾರ್ಥನಾ-ಶ್ಲೋಕಗಳನ್ನು ನೋಡಿ!

೧೦. **ಆಕರ್ಷಣೆ-ಅನುಕರ್ಷಣೆ-ಧಾರಣೆ**_ ಸೂರ್ಯನಿಂದ ಗ್ರಹಗಳ ಆಕರ್ಷಣೆ. ಗ್ರಹಗಳ ಪರಸ್ಪರ ಅನುಕರ್ಷಣೆ.

೧೧. **ಪ್ರಕಾಶ್ಯಪ್ರಕಾಶಕವಿಷಯ**_ ಸೂರ್ಯನು ಪ್ರಕಾಶಕ; ಪೃಥಿವಿಯು ಪ್ರಕಾಶ್ಯ.

೧೨. **ಗಣಿತವಿದ್ಯೆ**_ ವಿಷಮಾಂಕ-ಸಮಾಂಕಗಣಿತ. ಅಂಕ-ರೇಖಾ-ಬೀಜಗಣಿತವಿದ್ಯೆಗೆ ವೇದವೇ ಮೂಲ!

೧೩. **ಈಶ್ವರಸ್ತುತಿಪ್ರಾರ್ಥನೆ-ಯಾಚನೆ-ಸಮರ್ಪಣೆ**_ ಈಶ್ವರನಿಂದ ತೇಜಸ್ಸು, ಪರಾಕ್ರಮ, ಬಲ ಮೊದಲಾದುವುಗಳ ಪ್ರಾರ್ಥನೆ. ವಿವಿಧ ಪದಾರ್ಥಗಳ ಯಾಚನೆ. ಪುರುಷಾರ್ಥದಿಂದ ಸಂಪಾದನೆ ಮತ್ತು ಸಮರ್ಪಣೆ.

೧೪. **ಈಶ್ವರೋಪಾಸನೆ**_ ವೇದದಲ್ಲಿ ಯೋಗಾಭ್ಯಾಸದ ಬೀಜ. ಪಾತಂಜಲಯೋಗಶಾಸ್ತ್ರದ ೫೧ ಸೂತ್ರಗಳ ಭಾಷ್ಯ. ಕಠ, ಮುಂಡಕ, ಛಾಂದೋಗ್ಯೋಪನಿಷತ್ತುಗಳಲ್ಲಿ ಯೋಗ, ಯೋಗಿಗಳು, ಬ್ರಹ್ಮಪುರ.

೧೫. **ಮುಕ್ತಿವಿಷಯ**_ ಯೋಗ, ನ್ಯಾಯ, ವೇದಾಂತ ದರ್ಶನಗಳು ; ಕಠ, ಛಾಂದೋಗ್ಯ ಉಪನಿಷತ್ತುಗಳು; ಶತಪಥಬ್ರಾಹ್ಮಣ ಮತ್ತು ವೇದಗಳಲ್ಲಿ ಮುಕ್ತಿಯ ಉಲ್ಲೇಖ. ಮುಕ್ತಿಯ ಅವಸ್ಥೆಯ ಬಗ್ಗೆ ಆಚಾರ್ಯರುಗಳಲ್ಲಿ ಮತಭೇದ.

೧೬. **ನೌಕಾ-ವಿಮಾನವಿದ್ಯೆ**_ ನೌಕೆಯಿಂದ ದ್ವೀಪ-ದ್ವೀಪಾಂತರ ಗಮನ. ನೌಕಾನಿರ್ಮಾಣದ ಸಾಧನ-ಸಲಕರಣೆ. ಜಲ-ಸ್ಥಳ-ನಭಗಳ ಯಾನ. ಆಕಾಶಯಾನದಿಂದ ಮೂರು ದಿನಗಳಲ್ಲಿ ಪೃಥಿವೀಭ್ರಮಣ. ವಿಮಾನದ ಮುಖ್ಯಯಂತ್ರರಚನೆ.

೧೭. **ತಂತಿವಿದ್ಯೆ**_ ದೂರ-ಸಮೀಪ ವ್ಯವಹಾರ. ಯುದ್ಧದಲ್ಲಿ ಶೀಘ್ರಗಮನಾಗಮನ.

೧೮. **ವೈದ್ಯಕವಿದ್ಯೆ**_ ಜಲಾದಿ, ಓಷಧಿಚಿಕಿತ್ಸೆ.

೧೯. **ಪುನರ್ಜನ್ಮ**_ ವೇದಮಂತ್ರಗಳ ಪ್ರಮಾಣ. ನಿರುಕ್ತ, ಯೋಗದರ್ಶನ. ಪೂರ್ವಜನ್ಮದ ಜ್ಞಾನ ಯುಕ್ತಿಸಿದ್ಧ!

೨೦. **ವಿವಾಹ** _ ಪಾಣಿಗ್ರಹಣ, ಗೃಹಸ್ಥಾಶ್ರಮ.

೨೧. **ನಿಯೋಗ** _ ಋಗ್ವೇದ, ಅಥರ್ವವೇದಗಳ ಪ್ರಮಾಣ.

೨೨. **ರಾಜ-ಪ್ರಜಾಧರ್ಮ** _ ಮೂರು ಸಭೆಗಳು. ಉತ್ತಮ ಪುರುಷರ ನಿಯುಕ್ತಿ. ಸಾರ್ವಭೌಮರಾಜ್ಯ! ಪರಮಾತ್ಮನೇ ರಾಜಾ! ರಾಷ್ಟ್ರಪಾಲನೆಯೇ ಅಶ್ವಮೇಧ!

೨೩. **ವರ್ಣಾಶ್ರಮ** _ ವೃತ್ತಿ-ಪ್ರವೃತ್ತಿ-ಕರ್ಮದಿಂದಲೇ ವರ್ಣಸ್ಥಾಪನೆ. ನಾಲ್ಕು ಆಶ್ರಮಗಳು. ಬ್ರಹ್ಮಚರ್ಯ-ಗೃಹಸ್ಥಾಶ್ರಮಗಳಿಗೆ ವೇದಪ್ರಮಾಣ. ವಾನಪ್ರಸ್ಥ-ಸಂನ್ಯಾಸಾಶ್ರಮಗಳಿಗೆ ಉಪನಿಷತ್‌ಪ್ರಮಾಣ.

೨೪. **ಪಂಚಮಹಾಯಜ್ಞ** _ ಅಗ್ನಿಹೋತ್ರ, ಪಿತೃಯಜ್ಞ, ಬಲಿವೈಶ್ವದೇವ, ಅತಿಥಿಯಜ್ಞಗಳಿಗೆ ವೇದಪ್ರಮಾಣ.*

೨೫. **ಗ್ರಂಥಪ್ರಾಮಾಣ್ಯ-ಅಪ್ರಾಮಾಣ್ಯ** _ ವೇದಾದಿ ಸತ್ಯಶಾಸ್ತ್ರ ಪ್ರಮಾಣಗ್ರಂಥಗಳ ಉಲ್ಲೇಖ. ತಂತ್ರ-ಪುರಾಣಾದಿ ಮಿಥ್ಯಾಗ್ರಂಥಗಳು ತ್ಯಾಜ್ಯ! ತಂತ್ರಗಳ ವಾಮಾಚಾರದ ಖಂಡನೆ. ಪುರಾಣಗಳಲ್ಲಿನ_ ಬ್ರಹ್ಮನಿಂದ ಸ್ವಪುತ್ರಿಯೊಡನೆ ಸಮಾಗಮ, ಇಂದ್ರ-ಅಹಲ್ಯಾ ವ್ಯಭಿಚಾರ, ಇಂದ್ರ-ವೃತ್ರಾಸುರಯುದ್ಧ, ದೇವಾಸುರ-ಸಂಗ್ರಾಮ, ಕಶ್ಯಪಸೃಷ್ಟಿ, ಗಯಾತೀರ್ಥ, ಮೊದಲಾದ ಮಿಥ್ಯಾಕಥೆಗಳ ಖಂಡನೆ; ಮತ್ತು ಆಯಾ ಶಬ್ದಗಳ ಸತ್ಯಅರ್ಥದ ಪ್ರತಿಪಾದನೆ. ಮೂರ್ತಿಪೂಜೆ-ನಾಮಸ್ಮರಣೆ-ಗ್ರಹಪೂಜೆಗಳ ಮಿಥ್ಯಾತ್ವ.

೨೬. **ಅಧಿಕಾರ-ಅನಧಿಕಾರ**_ ಮನುಷ್ಯಮಾತ್ರರಿಗೆ ವೇದಾಧಿಕಾರ! ಗುಣ-ಕರ್ಮಾಚರಣೆಯಿಂದ ವರ್ಣಾಧಿಕಾರ.

---

* 'ಬ್ರಹ್ಮಯಜ್ಞ'ದ ಬಗ್ಗೆ ಮಹರ್ಷಿದಯಾನಂದರು ತಮ್ಮ '**ಪಂಚಮಹಾಯಜ್ಞವಿಧಿ**', ಎಂಬ ಕೃತಿಯ ಕಡೆ ಇಲ್ಲಿ ಸಂಕೇತವನ್ನು ಕೊಟ್ಟಿದ್ದಾರೆ.

೨೭. ಪಠನ-ಪಾಠನ_ ವರ್ಣೋಚ್ಚಾರಣೆ. ಅಪಠಿತನಿಗಿಂತ ಪಠಕನು ಉತ್ತಮ. ಪಠಕನಿಗಿಂತ ಅರ್ಥಜ್ಞಾನಿಯು ಶ್ರೇಷ್ಠ. ವೇದಮಂತ್ರಗಳ ಶಬ್ದಾರ್ಥಜ್ಞಾನವು ಅತ್ಯಾವಶ್ಯಕ.

೨೮. ಭಾಷ್ಯರಚನೆ; ಶಂಕಾ-ಸಮಾಧಾನ_ ಇದು ನವೀನ ಭಾಷ್ಯ ಅಲ್ಲ! ಋಷಿ-ಮುನಿಗಳ ಭಾಷ್ಯಗಳನ್ನನುಸರಿಸಿದೆ. ಸಾಯಣ-ಮಹೀಧರಾದಿಗಳ ಭಾಷ್ಯಗಳ ದೋಷನಿದರ್ಶನ. ಯಜುರ್ವೇದದ ೨೩ನೆಯ ಅಧ್ಯಾಯದಲ್ಲಿನ **'ಗಣಾನಾಂ ತ್ವಾ ಗಣಪತಿಂ ಹವಾಮಹೇ'** ಇತ್ಯಾದಿ ೧೩ ಮಂತ್ರಗಳ ಮಹೀಧರಕೃತ ಅಶ್ಲೀಲಭಾಷ್ಯದ ಉಲ್ಲೇಖ* ಮತ್ತು ಅದರ ಖಂಡನೆ. ಶತಪಥಬ್ರಾಹ್ಮಣಾನುಸಾರವಾಗಿ ಈ ಮಂತ್ರಗಳ ರಾಜ-ಪ್ರಜಾಧರ್ಮವಿಷಯಕ ಸತ್ಯಾರ್ಥದ ಪ್ರತಿಪಾದನೆ.

೨೯. ಪ್ರತಿಜ್ಞೆ _ ಈ ಭಾಷ್ಯದಲ್ಲಿ ಕರ್ಮಕಾಂಡದ ವಿಸ್ತೃತ ವರ್ಣನೆ ಇರುವುದಿಲ್ಲ! ವೇದಮಂತ್ರಗಳ ಅರ್ಥವು ಸಂಸ್ಕೃತದಲ್ಲೂ, ಮತ್ತು ಹಿಂದೀಭಾಷೆಯಲ್ಲೂ ಬರೆಯಲಾಗುತ್ತದೆ! ಶ್ಲೇಷಾಲಂಕಾರಾದಿಗಳಲ್ಲಿನ ಪಾರಮಾರ್ಥಿಕ-ವ್ಯಾವಹಾರಿಕ, ಎರಡೂ ಅರ್ಥಗಳನ್ನು ಬರೆಯಲಾಗುತ್ತದೆ!

೩೦. ಪ್ರಶ್ನೋತ್ತರ_ ವೇದಗಳ ನಾಲ್ಕು ಸಂಹಿತೆ ಏಕೆ? ವೇದಗಳ ವಿಭಾಗಕ್ರಮ ಏಕೆ? ಋಷಿ, ದೇವತಾ, ಛಂದಸ್ಸು, ಸ್ವರಗಳ ಪ್ರಯೋಜನವೇನು? ಅಗ್ನಿ-ವಾಯು-ಇಂದ್ರ ಮೊದಲಾದುವುಗಳ ಕ್ರಮವಾದ ವರ್ಣನೆ ಏಕೆ? ಅಗ್ನಿ, ವಾಯು ಮೊದಲಾದುವು ಕೇವಲ ಭೌತಿಕವೋ? ಇತ್ಯಾದಿ ಪ್ರಶ್ನೆಗಳಿಗೆ ಉತ್ತರ!

೩೧. ವೈದಿಕಪ್ರಯೋಗ_ ಪರೋಕ್ಷ-ಪ್ರತ್ಯಕ್ಷ-ಆಧ್ಯಾತ್ಮಿಕ, ಎಂಬ ಮೂರು ವಾಕ್ಯಪ್ರಯೋಗಗಳು.

೩೨. ಸ್ವರವ್ಯವಸ್ಥೆ_ ಉದಾತ್ತ-ಅನುದಾತ್ತ-ಸ್ವರಿತ, ಎಂಬ ಮೂರು; ಮತ್ತು ಷಡ್ಜಾದಿ ಏಳು ಗಾನಸ್ವರಗಳು.

೩೩. ವ್ಯಾಕರಣನಿಯಮ_ ವೈದಿಕವ್ಯಾಕರಣಸಂಬಂಧವಾದ ಅಷ್ಟಾಧ್ಯಾಯೀ ಸೂತ್ರಗಳು. ಲೌಕಿಕ ವ್ಯಾಕರಣಕ್ಕಿಂತ ಭಿನ್ನ ಪ್ರಯೋಗ ಎಲ್ಲೆಲ್ಲಿ?

೩೪. ಅಲಂಕಾರ_ ವೇದಮಂತ್ರಗಳಲ್ಲಿ ರೂಪಕ, ಉಪಮಾ, ಶ್ಲೇಷಾದಿ ಅಲಂಕಾರಗಳ ಉಲ್ಲೇಖ.

೩೫. ಗ್ರಂಥಸಂಕೇತ_ ಭಾಷ್ಯದಲ್ಲಿ ಉಲ್ಲಿಖಿತ ಗ್ರಂಥಗಳ, ಹಾಗೂ ಅವುಗಳಲ್ಲಿನ ವಿಭಾಗೀಯ ಕ್ರಮದ ಸಂಕೇತಗಳು.

ದಯಾನಂದಭಾಷ್ಯಕ್ಕೆ ಆರ್ಷಪ್ರಮಾಣ ಗ್ರಂಥಗಳು!

ಈ ಮೇಲಿನ ವಿಷಯಗಳ ಪ್ರತಿಪಾದನೆಗಾಗಿ ಮುಖ್ಯವಾಗಿ ನಾಲ್ಕೂ ವೇದಗಳ, ಮತ್ತು ಗೌಣವಾಗಿ ಋಷಿ-ಮುನಿಕೃತಗ್ರಂಥಗಳ ಪ್ರಮಾಣಗಳನ್ನು **ಮಾತ್ರ** ಮಹರ್ಷಿ ದಯಾನಂದರು ಈ **'ಭೂಮಿಕಾ'**ದಲ್ಲಿ ಉಪಯೋಗಿಸಿಕೊಂಡಿದ್ದಾರೆ.

ಪ್ರಮುಖ ಪ್ರಮಾಣಗ್ರಂಥಗಳ ಸೂಚಿಯನ್ನು, ಪ್ರಮಾಣಗಳ ಸಂಖ್ಯೆಯೊಡನೆ, ಕೆಳಗೆ ತೋರಿಸಲಾಗಿದೆ_

೧. ಋಗ್ವೇದ (೬೭)	೮. ತೈತ್ತಿರೀಯ ಆರಣ್ಯಕ (೧೨)
೨. ಯಜುರ್ವೇದ (೧೪೪)	೯. ಕಠೋಪನಿಷತ್ (೧೨)
೩. ಸಾಮವೇದ (೩)	೧೦. ಮುಂಡಕೋಪನಿಷತ್ (೮)
೪. ಅಥರ್ವವೇದ (೬೨)	೧೧. ಮಾಂಡೂಕ್ಯೋಪನಿಷತ್ (೨)
೫. ಐತರೇಯಬ್ರಾಹ್ಮಣ (೧೬)	೧೨. ಕೇನೋಪನಿಷತ್ (೧)
೬. ಶತಪಥಬ್ರಾಹ್ಮಣ (೧೧೫)	೧೩. ಪ್ರಶ್ನೋಪನಿಷತ್ (೧)
೭. ಐತರೇಯ ಆರಣ್ಯಕ (೧)	೧೪. ತೈತ್ತಿರೀಯೋಪನಿಷತ್ (೯)

* ಮಹೀಧರಭಾಷ್ಯದ ಮತ್ತು ಅಂತಹ ಅಶ್ಲೀಲಾಂಶಗಳನ್ನು ಸೂಕ್ಷ್ಮ ಅಕ್ಷರಗಳಲ್ಲಿ ಮುದ್ರಿಸಲಾಗಿದೆ.

೧೫. ಛಾಂದೋಗ್ಯೋಪನಿಷತ್ (೧೫)
೧೬. ಬೃಹದಾರಣ್ಯಕೋಪನಿಷತ್ (೨)
೧೭. ಶ್ವೇತಾಶ್ವತರೋಪನಿಷತ್ (೨)
೧೮. ಮೀಮಾಂಸಾದರ್ಶನ (೪)
೧೯. ವೈಶೇಷಿಕದರ್ಶನ (೩)
೨೦. ನ್ಯಾಯದರ್ಶನ (೧೭)
೨೧. ಸಾಂಖ್ಯದರ್ಶನ (೧)
೨೨. ಯೋಗದರ್ಶನ (೬೬)
೨೩. ವೇದಾಂತದರ್ಶನ (೬)
೨೪. ಧಾತುಪಾಠ (೨೨)
೨೫. ಅಷ್ಟಾಧ್ಯಾಯೀ (೭೧)
೨೬. ವ್ಯಾಕರಣಮಹಾಭಾಷ್ಯ (೪೩)
೨೭. ಉಣಾದಿಸೂತ್ರ (೩)
೨೮. ನಿಘಂಟು (೧೫)
೨೯. ನಿರುಕ್ತ (೬೦)
೩೦. ಪಾರಸ್ಕರಗೃಹ್ಯಸೂತ್ರ (೩)
೩೧. ಕಾತ್ಯಾಯನಶ್ರೌತಸೂತ್ರ (೧)
೩೨. ಆಪಸ್ತಂಬಧರ್ಮಸೂತ್ರ (೨)
೩೩. ಮನುಸ್ಮೃತಿ (೩೩)
೩೪. ಸೂರ್ಯಸಿದ್ಧಾಂತ (೨) ಇತ್ಯಾದಿ.

ಹೀಗೆ, ಸುಮಾರು ೮೮೦ ಪ್ರಮಾಣಗಳು ಈ **'ಭೂಮಿಕಾ'**ದಲ್ಲಿವೆ.

'ಭೂಮಿಕಾ'ದ ಅನುವಾದ

ಈ ವರೆಗೆ, ಈ ಗ್ರಂಥದ ಭಾಷಾಂತರವು ಅನೇಕ ಭಾಷೆಗಳಲ್ಲಾಗಿದೆ. ಇವುಗಳಲ್ಲಿ ಮೂರು ಭಾಷಾಂತರಗಳು ನಮಗೆ ದೊರಕಿವೆ_

೧) ಇಂಗ್ಲಿಷ್‌ನಲ್ಲಿ ಪಂ. ಘಾಸೀರಾಮ್ ಅವರಿಂದ!

_ ಈ ಭಾಷಾಂತರವನ್ನು **ಸಾರ್ವದೇಶಿಕ ಆರ್ಯ ಪ್ರತಿನಿಧಿ ಸಭಾ, ನವದೆಹಲಿಯಿಂದ** ಇಸವಿ ೧೯೨೫ ರಲ್ಲಿ ಪ್ರಕಟಿಸಲಾಯಿತು. ದ್ವಿತೀಯ ಸಂಸ್ಕರಣವು ೧೯೮೪ ರಲ್ಲಿ ಪ್ರಕಟಿತವಾಯಿತು. ಈ ಭಾಷಾಂತರದಲ್ಲಿ ಸಂಸ್ಕೃತಭಾಗದ ಭಾಷಾಂತರವನ್ನು ಮಾತ್ರ ಮಾಡಲಾಗಿದ್ದು, ಹಿಂದೀಭಾಗದ ಭಾಷಾಂತರವನ್ನು ಬಿಟ್ಟು ಬಿಡಲಾಗಿದೆ.

೨) ಕನ್ನಡದಲ್ಲಿ ಪಂ. ವಿಶ್ವಮಿತ್ರ ಅವರಿಂದ!

_ ಈ ಭಾಷಾಂತರದ ಪ್ರಕಾಶನವು ಸಮಗ್ರ ಗ್ರಂಥಕ್ಕಾಗದೇ, ಬಿಡಿ ಬಿಡಿಯಾಗಿ, ಎಂದರೆ ಅಧ್ಯಾಯ-ಅಧ್ಯಾಯವಾಗಿ **ವೈದಿಕ ಧರ್ಮಪ್ರಚಾರಸಂಘ, ಗೋಲಿಕಟ್ಟಾ ಬಜಾರ್, ಮಂಗಳೂರು** ಅವರಿಂದ ೧೯೪೦ ನೆಯ ಇಸವಿಯಲ್ಲಿ ಪ್ರಕಟಿಸಲ್ಪಟ್ಟಿತು.

ಸಂಪ್ರತಿ **ವೇದವಿಷಯವಿಚಾರ** ಮತ್ತು **ವೇದಸಂಜ್ಞಾವಿಚಾರ**. ಎಂಬ ಎರಡು ಭಾಗಗಳು ಮಾತ್ರ ದೊರೆತಿವೆ. ಇದರಲ್ಲಿ ಹಿಂದೀಭಾಗದ ಭಾಷಾಂತರವನ್ನು ಮಾಡಲಾಗಿ, ಸಂಸ್ಕೃತಭಾಗದ ಭಾಷಾಂತರವನ್ನು ಪ್ರಾಯಃ ಬಿಟ್ಟು ಬಿಡಲಾಗಿದೆ.

ಖ) **ತೆಲುಗಿನಲ್ಲಿ ಪಂ. ಗೋಪದೇವಶಾಸ್ತ್ರೀ ಅವರಿಂದ!**

_ ಈ ಭಾಷಾಂತರವನ್ನು **ಕೂಚಿಪೂಡಿ ಆರ್ಯಸಮಾಜದವರಿಂದ** ೧೯೮೫ ರಲ್ಲಿ ಪ್ರಕಟಿಸಲಾಗಿದೆ. ಈ ಭಾಷಾಂತರದಲ್ಲಿ ಮುಖ್ಯತಃ ಹಿಂದೀಭಾಗದ ಅವಲಂಬನೆ ಮಾಡಲಾಗಿದೆ. ಆದರೆ, ಅಲ್ಲಲ್ಲಿ ಸಂಸ್ಕೃತಭಾಗದ ಭಾಷಾಂತರವೂ ಸಮ್ಮಿಳಿತವಾಗಿದೆ. ಇದರಲ್ಲಿನ ಇನ್ನೊಂದು ಮಾತೇನೆಂದರೆ, ಭಾಷಾಂತರಕರ್ತರು ತಮ್ಮ ಸ್ಪಷ್ಟೀಕರಣೆಗಳನ್ನೂ, ವ್ಯಾಖ್ಯೆಗಳನ್ನೂ ಗ್ರಂಥದಲ್ಲೇ ಕಂಸಸಹಿತವಾಗಿಯೂ, ಕಂಸರಹಿತವಾಗಿಯೂ ಮತ್ತು ಪಾದಟಿಪ್ಪಣಿಗಳಲ್ಲೂ ಸೇರಿಸಿದ್ದಾರೆ. ಇದರಿಂದ, ಮೂಲಗ್ರಂಥದ ಭಾಗ ಯಾವುದು; ಯಾವುದು ಅಲ್ಲ, ಎಂದು ತಿಳಿಯಬರುವುದಿಲ್ಲ!

'ಭೂಮಿಕಾ'ದ ಅನುವಾದವು ಸುಲಭವಲ್ಲ!

ಈ ಗ್ರಂಥದ ಅನುವಾದವು ಸುಲಭಕಾರ್ಯವಲ್ಲ! ಏಕೆಂದರೆ, ಇದರ ರಚನೆಯು ಎರಡು ಭಾಷೆಗಳಲ್ಲಾಗಿದೆ_ ಸಂಸ್ಕೃತದಲ್ಲಿ ಮತ್ತು ಹಿಂದೀಭಾಷೆಯಲ್ಲಿ. ಜೊತೆಗೆ ಪ್ರಮಾಣಭಾಗವು ಇದ್ದೇ ಇದೆ!

ಹಿಂದೀಭಾಗವು ಸಂಸ್ಕೃತಭಾಗದ ಅನುವಾದವಾಗಿಲ್ಲ! ಇದೇ ಭಾಷಾಂತರಕರ್ತರ ಮಾರ್ಗದಲ್ಲಿರುವ ತೊಂದರೆ!

ಮಹರ್ಷಿ ದಯಾನಂದರು ಸಂಸ್ಕೃತಭಾಗವನ್ನು ಪ್ರಮಾಣಾಂತರಗಳೊಡನೆ ಬರೆದು, ವಿದ್ವಾಂಸರ ತೃಪ್ತಿ ಮಾಡಿ, ಜನಸಾಧಾರಣರಿಗಾಗಿ ಹಿಂದೀಭಾಗವನ್ನು ತಯಾರು ಮಾಡಿಸಿದರು. ಆದುದರಿಂದ, ಸಂಸ್ಕೃತಭಾಗದಲ್ಲಿನ ವೈದುಷ್ಯ ಪ್ರಮಾಣಗಳು ಮತ್ತು ವ್ಯಾಖ್ಯೆ ಹಿಂದೀ ಭಾಗದಲ್ಲಿಲ್ಲ. ಆದರೆ, ಸಂಸ್ಕೃತ ಭಾಗದಲ್ಲಿಲ್ಲದ ಅನೇಕ ವಿಶೇಷ ಸ್ಪಷ್ಟೀಕರಣೆಗಳೂ, ವ್ಯಾಖ್ಯಾನಗಳೂ, ದೃಷ್ಟಾಂತಗಳೂ ಹಿಂದೀಭಾಗದಲ್ಲಿವೆ. ೧೫ ನೆಯ ಅಧ್ಯಾಯವಾದ **ಮುಕ್ತಿವಿಷಯವಂತೂ** ಸಂಸ್ಕೃತ(ಭಾಷ್ಯ)ಭಾಗದಲ್ಲಿಲ್ಲವೇ ಇಲ್ಲ! ಅದು ಹಿಂದೀಭಾಗದಲ್ಲಿ ಮಾತ್ರ ಇದೆ.

ಹೀಗಿರುವುದರಿಂದ, ಭಾಷಾಂತರಕರ್ತರು ಸಂಸ್ಕೃತಭಾಗ ಮತ್ತು ಹಿಂದೀಭಾಗ, ಎರಡನ್ನೂ ದೃಷ್ಟಿಯಲ್ಲಿಟ್ಟುಕೊಂಡು ಕೆಲಸ ಮಾಡಬೇಕಾಗಿತ್ತು. ಆದರೆ, ಇದು ಬಹಳ ಕಷ್ಟಸಾಧ್ಯವಾದುದರಿಂದ, ಯಾರೂ ಈ ಪರಿಶ್ರಮವನ್ನು ಕೈಗೊಳ್ಳಲಿಲ್ಲ!

'ಭೂಮಿಕಾ'ದ ಪ್ರಸ್ತುತ ಕನ್ನಡ-ಅನುವಾದ

'ಭೂಮಿಕಾ'ದ ಕನ್ನಡ ಅನುವಾದವನ್ನು ಮಾಡುವ ಭಾರವನ್ನು ನಾವು ಸ್ವೀಕರಿಸಿದಾಗ, ನಮಗೆ ನಮ್ಮ ಮೇಲೆ ಹಾಕಿದ ವಿಶಿಷ್ಟ ಜವಾಬ್ದಾರಿಯ ಅರಿವಿತ್ತು. ಹಿಂದಿನ ವಿದ್ವಾನ್ ಭಾಷಾಂತರಕಾರರ ಅನುವಾದಗಳ ಅರಿವೂ ಇತ್ತು. ವಸ್ತುತಃ ಇಪ್ಪತ್ತೈದು ವರ್ಷಗಳ ಹಿಂದೆಯೇ ನಾವು **'ಭೂಮಿಕಾ'**ದ ಅಧ್ಯಯನ ಮಾಡಿದಾಗ, ಹೊಸದಾಗಿ ಅದರ ಸಂಸ್ಕೃತಭಾಗದ ಶುದ್ಧ ಹಿಂದೀ ಅನುವಾದವನ್ನೂ ; ಮತ್ತು ಅದರ 'ಹಿಂದೀಭಾಗ'ವನ್ನು ಪರಿಪೂರ್ಣವಾಗಿಯೂ, ಪರಿಷ್ಕೃತವಾಗಿಯೂ ತಯಾರಿಸುವ ಇಚ್ಛೆ ನಮ್ಮಲ್ಲಿತ್ತು.

ಹೀಗಾಗಿ, ನಾವು ವಿದ್ವಾಂಸರಲ್ಲದಿದ್ದರೂ, ಪರಿಶ್ರಮ ಮಾಡುವ ಉತ್ಕಟ ಇಚ್ಛೆಯುಳ್ಳವರಾದುದರಿಂದ, ಈ ಗ್ರಂಥದ ಅನುವಾದವನ್ನು ಪಾಂಡುಲಿಪಿಯಲ್ಲಿ ೨,೦೦೦ಕ್ಕೂ ಹೆಚ್ಚು ಪುಟಗಳಲ್ಲಿ ಪೂರೈಸಿದೆವು. ಪ್ರಥಮಭಾಗವನ್ನು ಮೊದಲ ೨೧ ಅಧ್ಯಾಯಗಳಿಂದ ಕೂಡಿರುವಂತೆಯೂ ಮತ್ತು ಉಳಿದ ೧೪ ಅಧ್ಯಾಯಗಳನ್ನು ದ್ವಿತೀಯಭಾಗದಲ್ಲಿರುವಂತೆಯೂ ರೂಪಿಸಿ, ಈ ಕನ್ನಡ ಸಂಸ್ಕರಣವನ್ನು ಸಿದ್ಧಗೊಳಿಸಿದ್ದೇವೆ.

ಪ್ರಥಮಭಾಗದಲ್ಲಿನ ಮೊದಲ ೨೧ ಅಧ್ಯಾಯಗಳಲ್ಲಿ. ೫೦೦ ಪ್ರಮಾಣಗಳಿವೆ. ಇವುಗಳ ಅಕಾರಾದಿ ಕ್ರಮ **ಸಂಕ್ಷೇಪಸೂಚಿಯನ್ನು ಪರಿಶಿಷ್ಟಮ್** ೨ ರಲ್ಲಿ ಕೊಟ್ಟಿದ್ದೇವೆ.

ಅನುವಾದದ ವಿಶೇಷಪರಿಚಯ

ಈ ಅನುವಾದ, ವಿನ್ಯಾಸ ಮತ್ತು ರಚನೆ ಅಪೂರ್ವ!

ಇದರ ವೈಶಿಷ್ಟ್ಯಗಳು ಕೆಳಕಂಡಂತಿವೆ_

೧. ಮಹರ್ಷಿ ದಯಾನಂದರ ಸಂಸ್ಕೃತಶೈಲಿಯು ಋಷಿಶೈಲಿಯಲ್ಲಿದೆ. ಮಹಾಭಾಷ್ಯಕಾರರಾದ ಪತಂಜಲಿಮುನಿಯ ನಂತರ, ಮಹರ್ಷಿ ದಯಾನಂದರದೇ, ಋಷಿಶೈಲಿಯಾಗಿ ನಮಗೆ ದೊರಕಿದೆ. ಸಂಸ್ಕೃತಭಾಷೆಯ ಸರಳ, ಹಾಗೂ ಪ್ರಾಂಜಲಪ್ರಯೋಗದಿಂದ, ಎಲ್ಲರಿಗೂ ಯಾವ ಶಬ್ದಕೋಶದ ಸಹಾಯವೂ ಇಲ್ಲದೇ ಅರ್ಥವಾಗಬೇಕು! ಇದು ಋಷಿ ಶೈಲಿ!* ಈ ಶೈಲಿಯ ಪರಿಚಯವು ಕರ್ನಾಟಕದ ವಿದ್ವಾಂಸರಿಗೂ, ಹಾಗೂ ಜನತೆಗೂ ಆಗಲೆಂಬ ಉದ್ದೇಶ್ಯದಿಂದ ಮಹರ್ಷಿ ದಯಾನಂದರ ಸಂಸ್ಕೃತಭಾಷ್ಯವನ್ನು ನಾವು ಸಂಪೂರ್ಣವಾಗಿ ಕನ್ನಡಲಿಪಿಯಲ್ಲಿ ಉದ್ಧರಿಸಿದ್ದೇವೆ. ಇದನ್ನು ಪ್ರತಿಯೊಂದು ಪುಟದ ಮೊದಲನೆಯ ಸ್ತಂಭದಲ್ಲಿ ನೋಡಬಹುದು!

೨. ಅನುವಾದವು ಮೂಲಗ್ರಂಥದ ಬಗ್ಗೆ ನಿಷ್ಠೆಯಿಂದ ಕೂಡಿರಬೇಕು. ಭಾವಾನುವಾದವು ಈ ನಿಷ್ಠೆಯಿಂದ ಕೂಡಿರುವುದಿಲ್ಲ!

ಮೂಲಗ್ರಂಥಕ್ಕಿಂತ ಅನುವಾದವು ಹೆಚ್ಚಾಗಿಯೂ ಇರಬಾರದು, ಕಡಿಮೆಯಾಗಿಯೂ ಇರಬಾರದು. ಯಾವುದಾದರೂ ಗ್ರಂಥದ ಅನುವಾದಕ್ಕೆ ಆ ಗ್ರಂಥದ ಪ್ರತ್ಯೇಕ ವಾಕ್ಯವು ಏಕಮಾನ(unit)ವಾಗಿರಬೇಕೇ ಹೊರತು, ಕಂಡಿಕೆಯೋ(para), ಅಭಿಪ್ರಾಯಸಮೂಹವೋ ಏಕಮಾನವಾಗಿರಬಾರದು!

ಈ ಉದ್ದೇಶ್ಯದಿಂದ, ಸಂಸ್ಕೃತಭಾಗವನ್ನು (ಪ್ರಮಾಣ ಮತ್ತು ಭಾಷ್ಯ) ನಾವು ವಾಕ್ಯಗಳಲ್ಲಿ ವಿಂಗಡಿಸಿ, ಪ್ರತಿಯೊಂದು ವಾಕ್ಯವನ್ನೂ ಪ್ರಾಯಃ ಬೇರೆ ಬೇರೆ ಕಂಡಿಕೆಯಲ್ಲಿ ತೋರಿಸಿ, ಅದರ ಎದುರಿಗೇನೇ ಪ್ರತಿಯೊಂದು ಪುಟದ ಬಲಭಾಗದ ಸ್ತಂಭದಲ್ಲಿ ವಾಕ್ಯದ ಪ್ರಾಮಾಣಿಕವಾದ ಕನ್ನಡ-ಅನುವಾದವನ್ನು ಮಾಡಿದ್ದೇವೆ. ಇದರಿಂದ, ಸಂಸ್ಕೃತದಿಂದ ಕನ್ನಡಕ್ಕೆ, ಮತ್ತು ಕನ್ನಡದಿಂದ ಸಂಸ್ಕೃತಕ್ಕೆ ಅನುವಾದ ಮಾಡುವ ಶೈಲಿಯ ಶಿಕ್ಷಣವು ಸಂಸ್ಕೃತಭಾಷೆಯನ್ನು ಕಲಿಯುವವರಿಗೆ ಸುಲಭವಾಗಿ ದೊರೆಯುವುದು.

೩. ಎಲ್ಲೆಲ್ಲಿ ಕನ್ನಡದ ಅನುವಾದವು ಸಂಸ್ಕೃತವನ್ನು ಅನುಸರಿಸುವುದರಲ್ಲಿ ಅಸಮರ್ಥವಾಗಿದೆಯೋ, ಅಲ್ಲಲ್ಲಿ ಒಂದೊಂದು ಪೂರಕ ಶಬ್ದವನ್ನು ಈ [ ] ಕಂಸದಲ್ಲಿ ಕನ್ನಡ-ಅನುವಾದದಲ್ಲಿ ತೋರಿಸಲಾಗಿದೆಯೇ ಹೊರತು, ಯಾವ ಪ್ರಕ್ಷೇಪವನ್ನೂ ಮಾಡಿಲ್ಲ; ಹಾಗೂ ಸಂಸ್ಕೃತಭಾಗದ ಯಾವ ಶಬ್ದವನ್ನೂ ಅನುವಾದಿಸದೇ ಬಿಟ್ಟಿಲ್ಲ!

ಹಿಂದೀಭಾಷಾರ್ಥದ ಯಾವ ಯಾವ ವಿಶಿಷ್ಟ ಶಬ್ದಗಳು ಆವಶ್ಯಕವೆಂದು ಕಂಡು ಬಂದವೋ, ಅವವನ್ನು ಈ ಅನುವಾದದಲ್ಲಿ ಅನುವಾದ ಮಾಡಿ, ಈ ( ) ಕಂಸದಲ್ಲಿ ತೋರಿಸಿ ಸೇರಿಸಿದ್ದೇವೆ.

೪. ಹಿಂದೀಭಾಷಾರ್ಥದಲ್ಲಿ, ಎಲ್ಲೆಲ್ಲಿ ವಿಶೇಷ ಸ್ಪಷ್ಟೀಕರಣಗಳು ಕಂಡು ಬರುತ್ತವೋ, ಅವೆಲ್ಲವನ್ನೂ ಅನುವಾದ ಮಾಡಿ, ಉಪಕಂಡಿಕೆಗಳ ರೂಪದಲ್ಲಿ ಅವನ್ನು ಮೂಲ-ಸಂಸ್ಕೃತ-ಕಂಡಿಕಾನುವಾದದ ಕೆಳಗೇ_ **'ಅಂದರೆ'**, ಎಂಬ ಸಂಕೇತದೊಡನೆ ತೋರಿಸಿದ್ದೇವೆ.

ಉಪಕಂಡಿಕೆಗಳ ಎದುರಿಗೆ ಪುಟದ ಎಡಭಾಗದ ಸ್ತಂಭದಲ್ಲಿ (ಸಂಸ್ಕೃತಭಾಗ) ಏನನ್ನೂ ಮುದ್ರಿಸದೇ, ಖಾಲಿ ಸ್ಥಾನವನ್ನು ಬಿಟ್ಟಿದ್ದೇವೆ. ಇದರಿಂದ, ಮೂಲ ಗ್ರಂಥದ ಹಿಂದೀಭಾಗವು ಎಷ್ಟು, ಯಾವುದು ಎಂಬುದು ಸುಗಮವಾಗಿ ತಿಳಿದುಬರುತ್ತದೆ.

ಅಲ್ಲದೇ, ಸ್ವತಂತ್ರವೂ, ವಿಶದವಾಗಿಯೂ ಇರುವ ಹಿಂದೀಭಾಗದ ಅನುವಾದವನ್ನು ಸಂಪೂರ್ಣಪುಟದ ಮೇಲೆ ಹರಡಿಯೂ ತೋರಿಸಿದ್ದೇವೆ.

---

* ಶಬ್ದಗಳ ಆಟಾಟೋಪ ಪ್ರಯೋಗ ಮಾಡಿ, ಅಭಿಪ್ರಾಯವು ಅರ್ಥವಾಗದಂತೆ ಜನರನ್ನು ಮುಗ್ಧರನ್ನಾಗಿಯೂ, ಸ್ತಂಭಿತರನ್ನಾಗಿಯೂ ಮಾಡುವುದು ಹಲವು 'ಪಂಡಿತ'ರ, ಹಾಗೂ, 'ಸಂಪ್ರದಾಯಸ್ಥ'ರ ಶೈಲಿ!

ಈ ಪದ್ಧತಿಯನ್ನು ಅನುಸರಿಸಿಯೂ ಕೂಡ, ಹಲವೆಡೆ, ವಾಕ್ಯಗಳ ಕ್ರಮಭಂಗ ಮಾಡಬೇಕಾಗಿ ಬಂದಾಗಲೂ ವಿಷಯದ ಕ್ರಮಭಂಗ ಮಾಡಿಲ್ಲ.

೫. ಈ ಅನುವಾದದಲ್ಲಿ ವಿಷಯ-ಸಂದರ್ಭಗಳನ್ನೇ ಅನುಸರಿಸಿಕೊಂಡು ಬಂದಿರುವುದರಿಂದ, ಮೂಲಗ್ರಂಥಸ್ಥ ಹಲವು ವಾಕ್ಯಗಳನ್ನು ಯೋಗ್ಯ ಸ್ಥಾನಗಳಲ್ಲಿಡುವ ಆವಶ್ಯಕತೆಯು ತೋರಿ ಬಂದಿತು. ವಿದ್ಯಾರ್ಥಿಗಳ ಪಾಠ್ಯಕ್ರಮಕ್ಕೆ ಈ ಗ್ರಂಥವು ಉಪಯುಕ್ತವಾಗಲಿ, ಎಂಬ ಉದ್ದೇಶ್ಯದಿಂದ, ಈ ಪರಿವರ್ತನೆಯನ್ನು ಮಾಡಿದ್ದೇವೆ.

೬. ಪುನರುಕ್ತಿದೋಷಕ್ಕೂ ಗ್ರಂಥವನ್ನು ಈಡು ಮಾಡಿಲ್ಲ! ಹಿಂದೀಭಾಗದ ಅನುವಾದವು ಅಲ್ಲಲ್ಲಿ ಪುನರುಕ್ತವೆಂದು ಕಂಡು ಬಂದರೂ ಕೂಡ, ಸ್ಪಷ್ಟೀಕರಣೆಗಾಗಿ ಅದು ಆವಶ್ಯಕವಾದುದರಿಂದ ದೋಷಾವಹವಲ್ಲ.

೭. ಪ್ರತಿಯೊಂದು ವೇದಮಂತ್ರದ ಋಷಿ, ದೇವತಾ, ಛಂದಸ್ಸು ಮತ್ತು ಸ್ವರವನ್ನು ಆಯಾ ಮಂತ್ರದ ಮೇಲೆ ಈ [ ] ಕಂಸದಲ್ಲಿ ತೋರಿಸಿದ್ದೇವೆ. ಈ ಸೂಚನೆಯು **'ಭೂಮಿಕಾ'**ದಲ್ಲಿಲ್ಲ. ಆದರೆ, ಮಹರ್ಷಿ ದಯಾನಂದರ ವೇದಭಾಷ್ಯದಲ್ಲಿದೆ. ಆದುದರಿಂದ, ನಾವು ಇವನ್ನು ತೋರಿಸಿದ್ದೇವೆ. ಏಕೆಂದರೆ, ಇದರಿಂದ, ಮಂತ್ರಭಾಷ್ಯದಲ್ಲಿ ಮಂತ್ರದ ದೇವತೆಯ ಉಪಯೋಗವು ಎಲ್ಲೆಲ್ಲಿ ಆಗಿದೆ; ಎಲ್ಲೆಲ್ಲಿ ಇಲ್ಲ, ಎಂಬುದನ್ನು ತಿಳಿಯುವುದು ಸುಗಮವಾಗುತ್ತದೆ.

೮. ಪ್ರತಿಯೊಂದು ವೇದಮಂತ್ರವನ್ನೂ, ಮೂಲ ಗ್ರಂಥದಲ್ಲಿದ್ದಂತೆಯೇ, ಸ್ವರಸಹಿತವಾಗಿ ಮುದ್ರಿಸಲಾಗಿದೆ. ಇತರ ಭಾಷಾಂತರಗಳಲ್ಲಿ ವೇದಮಂತ್ರಗಳು ಸ್ವರಸಹಿತವಾಗಿಲ್ಲ.

ವೇದಮಂತ್ರಗಳನ್ನು ಸಮಾನವಾಗಿ ದೊಡ್ಡ ಆಕಾರದಲ್ಲಿ, ಹಾಗೂ ದಪ್ಪ ಅಕ್ಷರಗಳಲ್ಲಿ ಮುದ್ರಿಸಿದ್ದೇವೆ.

೯. ಗ್ರಂಥದ ಸಮಸ್ತ ಪ್ರಮಾಣಗಳನ್ನು ಅವುಗಳ ಕನ್ನಡ ಅರ್ಥದೊಡನೆ, ಪುಟದ ಮಧ್ಯದಲ್ಲಿ ದಪ್ಪ ಅಕ್ಷರಗಳಲ್ಲಿ ಮುದ್ರಿಸಲಾಗಿದೆ.

೧೦. ಮೂಲಗ್ರಂಥದಲ್ಲಿ ಪ್ರಮಾಣಗಳ ಗ್ರಂಥ-ಸಂದರ್ಭವು ಲಿಪಿಸಂಕೇತಗಳಲ್ಲಿ ಮಾತ್ರ ತೋರಿಸಲಾಗಿದೆ. ಉದಾಹರಣೆಗೆ_ ಋಗ್ವೇದಕ್ಕೆ **'ಋ'**, ಯಜುರ್ವೇದಕ್ಕೆ **'ಯ'** ಇತ್ಯಾದಿ. ಮತ್ತು ಗ್ರಂಥದ ೩೫ ನೆಯ ಅಧ್ಯಾಯದಲ್ಲಿ ಗ್ರಂಥಸಂಕೇತದ ವಿವರಣೆಯನ್ನು ಕೊಡಲಾಗಿದೆ. ಆದರೆ, ಈ ಅನುವಾದದ ಪ್ರಥಮ ಭಾಗದಲ್ಲಿ ೩೫ ನೆಯ ಅಧ್ಯಾಯವು ಬರದಿರುವುದರಿಂದ, ನಾವು ಲಿಪಿ-ಸಂಕೇತವನ್ನು ತೋರಿಸದೇ, ಸರ್ವತ್ರ ಗ್ರಂಥಗಳ ಪೂರ್ಣ ಹೆಸರನ್ನೇ ತೋರಿಸಿದ್ದೇವೆ.

೧೧. ಪ್ರಮಾಣಭಾಗದ ಶಾಬ್ದಿಕ ಅನುವಾದವನ್ನೂ ನಾವು ಮಾಡಿದ್ದೇವೆ. ಇದು ಇತರ ಭಾಷಾಂತರ ಗ್ರಂಥಗಳಲ್ಲಿಲ್ಲ; ಮೂಲ ಗ್ರಂಥದಲ್ಲೂ ಇಲ್ಲ! ಈ ಶಾಬ್ದಿಕ ಅನುವಾದದಿಂದ, ಭಾಷ್ಯದ ವೈಶಿಷ್ಟ್ಯವು ಸುಲಭವಾಗಿ ತಿಳಿದು ಬರುತ್ತದೆ.

೧೨. ವಿಷಯಕ್ಕನುಸಾರವಾಗಿ ವಿಪುಲವಾಗಿ ಉಪಶೀರ್ಷಿಕೆಗಳನ್ನು ಕೊಡಲಾಗಿದೆ.

೧೩. ಓದುಗರ ಅತಿರಿಕ್ತ ತಿಳಿವಳಿಕೆಗಾಗಿ ಅನುವಾದಕನ ಶತಶಃ ಪಾದಟಿಪ್ಪಣಿಗಳನ್ನು '_ಅನು.', ಎಂಬ ಸಂಕೇತದೊಡನೆಯೂ, **ಪಂ. ಯುಧಿಷ್ಠಿರ ಮೀಮಾಂಸಕರ** ಟಿಪ್ಪಣಿಗಳನ್ನು '_ಯು. ಮೀ.', ಎಂಬ ಸಂಕೇತದೊಡನೆಯೂ, ಹಾಗೂ ಹಲವು ಟಿಪ್ಪಣಿಗಳನ್ನು **ಪಂ. ಉದಯವೀರ ಶಾಸ್ತ್ರೀ** ಅವರ ಹೆಸರಿನೊಡನೆಯೂ ತೋರಿಸಲಾಗಿದೆ. ಗ್ರಂಥಕರ್ತರಾದ **ಸ್ವಾಮೀ ದಯಾನಂದ ಸರಸ್ವತಿಯವರ** ಹಲವು ಪಾದಟಿಪ್ಪಣಿಗಳನ್ನು '_ದ. ಸ.', ಎಂಬ ಸಂಕೇತದೊಡನೆ ತೋರಿಸಲಾಗಿದೆ.

೧೪. ಯಾವ ವಿಸ್ತೃತ ಸ್ಪಷ್ಟೀಕರಣೆಯನ್ನೂ, ಕಂಸಸಹಿತವಾಗಿಯಾಗಲೀ ಅಥವಾ ಕಂಸರಹಿತವಾಗಿಯಾಗಲೀ, ಮೂಲಗ್ರಂಥದಲ್ಲಿ ಪ್ರಕ್ಷೇಪ ಮಾಡಿಲ್ಲ!

೧೫. ಆದರೆ, ಪ್ರಮಾಣಗಳ ಸಂಪೂರ್ಣ ಸಂದರ್ಭವನ್ನು ಮೂಲಗ್ರಂಥದಲ್ಲೇ ತೋರಿಸಲಾಗಿದೆ.

೧೬. ಈ ಅನುವಾದವಲ್ಲಿ ವೇದಮಂತ್ರಗಳ ಶಾಬ್ದಿಕ ಅರ್ಥವನ್ನು ನಾವು ಪ್ರತ್ಯೇಕ ಮಂತ್ರದ ಕೆಳಗೆ ಕನ್ನಡದಲ್ಲಿ ತೋರಿಸಿದ್ದೇವೆ. ಮೂಲಗ್ರಂಥದಲ್ಲಿ ಎಲ್ಲೂ ಈ ತರಹದ ಅರ್ಥ ಕೊಟ್ಟಿಲ್ಲ. ಆದರೆ, ಅಲ್ಲಿ ಸಂಸ್ಕೃತದಲ್ಲಿ ಭಾಷ್ಯ ಅಥವಾ ಹಿಂದಿಯಲ್ಲಿ ಭಾಷಾರ್ಥ ಇದೆ.

ನಾವು ಕೊಟ್ಟಿರುವ ಶಾಬ್ದಿಕ ಅರ್ಥವು ಗ್ರಂಥಕರ್ತರ ಭಾಷ್ಯಕ್ಕೆ ಹಲವು ಸ್ಥಾನಗಳಲ್ಲಿ ಸಂಗತವಾಗಿಲ್ಲ. ಹೀಗಿದ್ದೂ ಕೂಡ, ಈ ಅಸಂಗತಿಯನ್ನು ಉತ್ಪನ್ನ ಮಾಡಿರುವುದಕ್ಕೆ ಕಾರಣವೇನೆಂದರೆ_

ವೇದಮಂತ್ರವನ್ನು ನೋಡಿದ ತತ್‌ಕ್ಷಣ, ಸಾಧಾರಣ ವಿದ್ವಾಂಸನ ಮನಸ್ಸಿನಲ್ಲಿ ಯಾವ ಅರ್ಥದ ಪ್ರತೀತಿಯಾಗುತ್ತದೋ, ಅದನ್ನು ನಾವು ಶಾಬ್ದಿಕ ಅರ್ಥದ ಮೂಲಕ ಸೂಚಿಸಿದ್ದೇವೆ. ಇದು ಭಾವಾನುವಾದವಲ್ಲ; ಅನ್ವಯಾರ್ಥವಾಗಿದೆ.

ನಂತರ, ಗ್ರಂಥಕರ್ತರ ಭಾಷ್ಯವನ್ನು ಓದುವಾಗ, ಅವರು ಕ್ರಮವಾಗಿ ಮಾಡಿರುವ ಶಬ್ದಾರ್ಥಗಳ ಯಾವ ಉತ್‌ಕೃಷ್ಟವಾದ ಅಭಿಪ್ರಾಯವು ವ್ಯಕ್ತವಾಗುತ್ತದೋ, ಆಗ, ದಯಾನಂದಭಾಷ್ಯದ ವೈಶಿಷ್ಟ್ಯವು ಗಮನಕ್ಕೆ ಬರುತ್ತದೆ.* ಈ ತುಲನಾತ್ಮಕ ಪ್ರದರ್ಶನವೇ ನಮ್ಮ ಗುರಿ!

ಇದೇ ರೀತಿಯಾಗಿಯೇ, ಸರ್ವತ್ರ ಎಲ್ಲೆಲ್ಲಿ ಗ್ರಂಥಗಳ ಪ್ರಮಾಣಗಳ ಶಾಬ್ದಿಕ ಅರ್ಥವನ್ನು ನಾವು ಸೂಚಿಸಿದ್ದೇವೋ, ಅಲ್ಲಲ್ಲಿ ನಮ್ಮ ಇದೇ ಅಭಿಪ್ರಾಯವಿದೆ, ಎಂದು ತಿಳಿದುಕೊಳ್ಳಬೇಕು!

ಎಲ್ಲೆಲ್ಲಿ ಪ್ರಮಾಣಗಳ ಭಾಷ್ಯವನ್ನು ಗ್ರಂಥಕರ್ತರು ಮಾಡದೇ ಬಿಟ್ಟು ಬಿಟ್ಟಿದ್ದಾರೋ, ಅಲ್ಲಲ್ಲಿ ನಾವು ಕೊಟ್ಟಿರುವ ಶಾಬ್ದಿಕ ಅರ್ಥವು ಓದುಗರ ತಿಳಿವಳಿಕೆಗೆ ಬಹಳ ಸಹಾಯ ಮಾಡುತ್ತದೆ.

೧೭. ಗ್ರಂಥದ ಒಂದೆರೆಡು ಅಧ್ಯಾಯಗಳ ಶೀರ್ಷಿಕೆಗಳು ವಿಷಯಕ್ಕನುಸಾರವಾಗಿ ಸಮರ್ಪಕವಾಗಿರಲಿಲ್ಲ. ಉದಾಹರಣೆಗೆ_ ೧೦ ನೆಯ ಅಧ್ಯಾಯದ ಶೀರ್ಷಿಕೆಯಾಗಿ_ "**ಅಥಾಕರ್ಷಣಾನುಕರ್ಷಣವಿಷಯಃ**", ಎಂದು ತೋರಿಸಲಾಗಿದ್ದು, ಅಧ್ಯಾಯಾಂತದಲ್ಲಿ_ "**ಇತಿ ಧಾರಣಾಕರ್ಷಣವಿಷಯಃ**", ಎಂದು ಮುಗಿಸಲಾಗಿತ್ತು. ನಾವು ಇದನ್ನು ಸ್ವಲ್ಪ ಸುಧಾರಿಸಿ_ "**ಅಥಾಕರ್ಷಣಾನುಕರ್ಷಣಧಾರಣವಿಷಯಃ**", ಎಂದು ಪರಿವರ್ತಿಸಿದ್ದೇವೆ.

ಹೀಗೆಯೇ, ೧೪ ನೆಯ ಅಧ್ಯಾಯದ ಶೀರ್ಷಿಕೆಯಾಗಿ_ "**ಅಥೋಪಾಸನಾವಿಷಯಃ**", ಎಂದು ತೋರಿಸಲಾಗಿದ್ದು, ಅಧ್ಯಾಯಾಂತದಲ್ಲಿ_ "**ಇತಿ ಬ್ರಹ್ಮೋಪಾಸನಾವಿಧಾನಮ್**", ಎಂದು ಮುಗಿಸಲಾಗಿತ್ತು. ನಾವು ಗ್ರಂಥಕರ್ತರ ಶೈಲಿಗನುಸಾರವಾಗಿ, ಈ ಶೀರ್ಷಿಕೆಯನ್ನು ಸ್ವಲ್ಪ ಸುಧಾರಿಸಿ_ "**ಅಥೇಶ್ವರೋಪಾಸನಾವಿಷಯಃ**", ಎಂದು ಪರಿವರ್ತಿಸಿದ್ದೇವೆ.

೧೮. ಮಹರ್ಷಿ ದಯಾನಂದರು ತಮ್ಮ ಗ್ರಂಥಕ್ಕೆ, ಅದು ನಾಲ್ಕೂ ವೇದಗಳ ಭಾಷ್ಯಗಳ ಭೂಮಿಕೆಯಾದರೂ ಕೂಡ, ಸಂಕ್ಷೇಪವಾಗಿ_ '**ಋಗ್ವೇದಾದಿಭಾಷ್ಯಭೂಮಿಕಾ**', ಎಂದು ಹೆಸರನ್ನಿಟ್ಟಿದ್ದರು. ಇದರಿಂದ, ಈ ಗ್ರಂಥವು ಕೇವಲ ಋಗ್ವೇದಭಾಷ್ಯದ ಭೂಮಿಕೆಯಾಗಿರಬಹುದೇನೋ, ಎಂಬ ಭ್ರಾಂತಿಯು ಹುಟ್ಟಿರುವುದಾಗಿ ನಮಗೆ ಕಂಡು ಬಂದಿತು. ಆದರೆ, ಮಹರ್ಷಿ ದಯಾನಂದರು ಈ ಭೂಮಿಕೆಯ ಅಂತ್ಯದಲ್ಲಿ ಇದು ಚತುರ್ವೇದಭಾಷ್ಯಗಳ ಭೂಮಿಕೆ, ಎಂಬ ಮಾತನ್ನು ಸ್ಪಷ್ಟವಾಗಿ ಸೂಚಿಸಿದ್ದಾರೆ. ಆದುದರಿಂದ, ನಾವು ನಮ್ಮ ಈ ಕನ್ನಡ ಸಂಸ್ಕರಣಕ್ಕೆ '**ಋಗ್ವೇದಾದಿಚತುರ್ವೇದಭಾಷ್ಯಭೂಮಿಕಾ**', ಎಂಬ ಹೆಸರನ್ನಿಟ್ಟಿದ್ದೇವೆ.

* ಮಹರ್ಷಿ ದಯಾನಂದರು ಮಾಡಿರುವ ಆರ್ಷಪ್ರಮಾಣಗಳ ಭಾಷ್ಯವು ಅಪೂರ್ವವಾಗಿದೆ. ಇದನ್ನು ವಿದ್ವಾಂಸರು ಗಮನಿಸಬೇಕು.

ಮಹರ್ಷಿ ದಯಾನಂದರ ಆರ್ಷ-ಪದಪ್ರಯೋಗ

ಮಹರ್ಷಿ ದಯಾನಂದರು ವೇದಾದಿ ಪ್ರಾಚೀನ ಆರ್ಷಶಾಸ್ತ್ರಗಳ ನಿರಂತರ ಅಧ್ಯಯನ ಮಾಡುತ್ತಿದ್ದುದರಿಂದ, ಅವರ ಸಂಸ್ಕೃತಭಾಷೆಯಲ್ಲಿ ಕೂಡ, ಪಾಣಿನಿವ್ಯಾಕರಣಕ್ಕೆ ಪೂರ್ವವಾದ ಹಲವು ಸಂಸ್ಕೃತ ಪದಗಳ ಪ್ರಯೋಗವು ಅಲ್ಲಲ್ಲಿ ಕಂಡು ಬರುತ್ತದೆ. ಇಂತಹ ಆರ್ಷಪ್ರಯೋಗಗಳನ್ನು ಆಧುನಿಕ ವೈಯಾಕರಣಿಗಳು ಅಸಾಧು, ಎಂದು ತಿಳಿದಿರುತ್ತಾರೆ. ಆದರೆ, ಈ ಶಿಷ್ಟ ಪ್ರಯೋಗಗಳು ವಾಲ್ಮೀಕಿ ರಾಮಾಯಣ ಮತ್ತು ಮಹಾಭಾರತದಲ್ಲೂ ಹೇರಳವಾಗಿ ದೊರೆಯುತ್ತಿವೆ. ಆದುದರಿಂದ, ನಾವು ಈ ಪ್ರಯೋಗಗಳನ್ನು ಅಸಾಧು, ಎಂದು ಗಣಿಸುವುದಿಲ್ಲ. ಈ ಪ್ರಯೋಗಗಳ ಸಾಧುತ್ವ-ಸಿದ್ಧಿಗಾಗಿ ಪಂ.ಯುಧಿಷ್ಠಿರ ಮೀಮಾಂಸಕ ಅವರ **'ಋಷಿ ದಯಾನಂದ ಕೀ ಪದಪ್ರಯೋಗಶೈಲೀ'**, ಎಂಬ ಗ್ರಂಥವನ್ನು ನೋಡಬೇಕು!

'ಭೂಮಿಕಾ'ದಲ್ಲಿನ ಇಂತಹ ಸುಮಾರು ನಲವತ್ತು ಪದಗಳನ್ನು ಈ ❁ ಚಿಹ್ನೆಯಿಂದ ಈ ಅನುವಾದದಲ್ಲಿ ಸೂಚಿಸಲಾಗಿದೆ. ಮತ್ತು ಪಾದಟಿಪ್ಪಣಿಯಲ್ಲಿ ಆಧುನಿಕ ವೈಯಾಕರಿಣಿಗಳು ಸಾಧು, ಎಂದು ತಿಳಿದಿರುವ ಪದವನ್ನೂ **'_ಆ. ವೈ.'**, ಎಂಬ ಸಂಕೇತದೊಡನೆ ತೋರಿಸಲಾಗಿದೆ.

ಧನ್ಯವಾದ-ಕೃತಜ್ಞತೆ

ಈ ಗ್ರಂಥದ ಅನುವಾದಕ್ಕಾಗಿ ಮತ್ತು ನಾವು ಮೇಲೆ ಅಳವಡಿಸಿಕೊಂಡ ರೂಪರೇಖೆಗಳಿಗನುಸಾರವಾಗಿ ಮಾಡುವ ಕನ್ನಡ-ಅನುವಾದವನ್ನು ಒಪ್ಪಿಕೊಂಡು, ಹಾಗೂ ಅದರಂತೆಯೇ ಈ ಸಂಸ್ಕರಣವನ್ನು ತಯಾರಿಸಲು **ರಾಮಲಾಲ್ ಕಪೂರ್ ಟ್ರಸ್ಟ್**, ಪೋಸ್ಟ್ ಬಹಾಲ್‌ಗಢ್, ಸೋನೀಪತ್ ಜಿಲ್ಲೆ, ೧೩೧ ೦೨೧ (ಹರಯಾಣಾ) ಸಂಸ್ಥೆಯ ಅಧ್ಯಕ್ಷರಾಗಿದ್ದ* ಮಹಾಮಹೋಪಾಧ್ಯಾಯ **ಪಂ. ಯುಧಿಷ್ಠಿರ ಮೀಮಾಂಸಕ** ಅವರು ತಮ್ಮ ಸಂಸ್ಥೆಯ ಪ್ರಕಾಶನವಾದ **'ಋಗ್ವೇದಾದಿಭಾಷ್ಯಭೂಮಿಕಾ'**, ದ್ವಿತೀಯಾವೃತ್ತಿ(೧೯೮೪)ಯನ್ನು ಆಧಾರವನ್ನಾಗಿಟ್ಟು ಕೊಳ್ಳಲು ಸಮ್ಮತಿಸಿ, ಅನುಮತಿ ನೀಡಿ, ನಮ್ಮನ್ನು ಆಶೀರ್ವದಿಸಿದ್ದರು. ಈ ಕೃಪೆಗಾಗಿ ದಿವಂಗತ ಆತ್ಮರಿಗೆ ಮತ್ತು ಆ ಸಂಸ್ಥೆಗೆ ಧನ್ಯವಾದಗಳನ್ನು ಅರ್ಪಿಸುತ್ತೇವೆ.

'ಭೂಮಿಕಾ'ದಲ್ಲಿ ಸುಮಾರು ನಲವತ್ತು ಗ್ರಂಥಗಳ ಪ್ರಮಾಣಗಳನ್ನು ಮಹರ್ಷಿ ದಯಾನಂದರು ಉದ್ಧರಿಸಿದ್ದಾರೆ. ಇವುಗಳನ್ನು ಪಕ್ಕದಲ್ಲಿಟ್ಟುಕೊಂಡೇ ನಾವು ಅನುವಾದಕ್ಕೆ ಕೈ ಹಾಕಿದೆವು. ಈ ಗ್ರಂಥಗಳನ್ನು ಸಂದರ್ಭಕ್ಕಾಗಿ ನಮಗೆ ಉಪಲಬ್ಧ ಮಾಡಿಕೊಟ್ಟ ನಮ್ಮ ಭೋಪಾಲ್ ಮಿತ್ರರಾದ **ಪಂ. ಆದಿತ್ಯಪಾಲಸಿಂಹ ಆರ್ಯ** ಮತ್ತು **ಪಂ. ಗೋವಿಂದಾರ್ಯ** ಅವರಿಗೆ ಕೃತಜ್ಞತೆಗಳನ್ನು ಸಲ್ಲಿಸುತ್ತೇವೆ.

ಉಪೇಂದ್ರ ಭೂಪಾಲ

---

* ಈಗ ದಿವಂಗತ

ಅಧ್ಯಾಯಸೂಚೀ

ಪ್ರಥಮ ಭಾಗ

ದ್ವಿತೀಯ ಭಾಗ

ವಿಷಯಾನುಕ್ರಮಣಿಕಾ

ಪ್ರಥಮ ಭಾಗ

ದ್ವಿತೀಯ ಭಾಗ

ಋಗ್ವೇದಾದಿಚತುರ್ವೇದಭಾಷ್ಯಭೂಮಿಕಾ

ದ್ವಿತೀಯ ಭಾಗ

(೨೨) ರಾಜ-ಪ್ರಜಾಧರ್ಮ

ಅಥ ರಾಜಪ್ರಜಾಧರ್ಮವಿಷಯಃ ಸಂಕ್ಷೇಪತಃ

ಈಗ ರಾಜ-ಪ್ರಜಾಧರ್ಮದ ವಿಷಯವಾಗಿ ಸಂಕ್ಷೇಪವಾಗಿ ಬರೆಯುತ್ತೇವೆ.

ಮೂರು ಸಭೆಗಳು ರಾಜಧರ್ಮದ ಮೂಲ

[ಋಷಿಃ_ ಪ್ರಜಾಪತಿಃ ; ದೇವತಾ_ ಇಂದ್ರಃ ; ಛಂದಃ_ ತ್ರಿಷ್ಟುಪ್ ; ಸ್ವರಃ_ ಧೈವತಃ]

ತ್ರೀಣಿ ರಾಜಾನಾ ವಿದಥೇ ಪುರೂಣಿ
ಪರಿ ವಿಶ್ವಾನಿ ಭೂಷಥಃ ಸಂದಾಂಸಿ ।
ಅಪಶ್ಯಮತ್ರ ಮನಸಾ ಜಗನ್ವಾನ್
ವ್ರತೇ ಗಂಧರ್ವಾ ಅಪಿ ವಾಯುಕೇಶಾನ್ ॥ ೧ ॥

[ಋಗ್ವೇದೇ ಅ. ೩, ಅ. ೨, ವ. ೨೪, ಮಂ. ೧]

[ಅರ್ಥ:_ "(ಹೇ ರಾಜ-ಪ್ರಜಾಜನರೇ!) ನೀವಿಬ್ಬರೂ ಯುದ್ಧಕಾಲದಲ್ಲಿ ಸಮಸ್ತ (ಕಾರ್ಯಗಳನ್ನು) ಪೂರೈಸುವ ಮೂರು ಸಭೆಗಳನ್ನು ಅಲಂಕರಿಸಿರಿ! ಅಲ್ಲಿ ಜ್ಞಾನದಿಂದ ವ್ಯವಸ್ಥಿತನಾದ ನಾನು ಸತ್ಯವ್ಯವಹಾರದಲ್ಲಿರುವ ವಾಗ್‌ವೈದುಷ್ಯವುಳ್ಳವರೂ, ಹಾಗೂ ವಾಯುವಿನಂತೆ ಪ್ರಕಾಶಿತರೂ ಆದ (ವಿದ್ವಾಂಸ)ರನ್ನು ನೋಡಿದೆನು."

(ಋಗ್ವೇದಃ ೩. ೩೮. ೬)]

[ಋಷಿಃ_ ಪ್ರಜಾಪತಿಃ ; ದೇವತಾ_ ಸಭೇಶಃ ; ಛಂದಃ_ ದ್ವಿಪದಾ ವಿರಾಡ್ ಗಾಯತ್ರೀ ; ಸ್ವರಃ_ ಷಡ್ಜಃ]

ಕ್ಷತ್ರಸ್ಯ ಯೋನಿರಸಿ ಕ್ಷತ್ರಸ್ಯ ನಾಭಿರಸಿ ।
ಮಾ ತ್ವಾ ಹಿಂಗ್‌ಂಸೀನ್ಮಾ ಮಾ ಹಿಂಗ್‌ಂಸೀಃ ॥ ೨ ॥

[ಯಜುರ್ವೇದೇ ಅ. ೨೦, ಮಂ. ೧]

[ಅರ್ಥ:_ "ನೀನು ರಾಜ್ಯದ ಕಾರಣನಾಗಿರುವೆ! ನೀನೇ ರಾಜ್ಯದ ಕೇಂದ್ರ ಆಗಿರುವೆ! ನಿನ್ನನ್ನು ಯಾವನೂ ಪೀಡಿಸದಿರಲಿ! ನನ್ನನ್ನು ನೀನು ಪೀಡಿಸಬೇಡ!"

(ಯಜುರ್ವೇದ: ೨೦. ೧)]

[ಋಷಿಃ_ ಆಶ್ವತರಾಶ್ವಿಃ; ದೇವತಾ_ಅಗ್ನಿಃ; ಛಂದಃ_ಅನುಷ್ಟುಪ್; ಸ್ವರಃ_ಗಾಂಧಾರಃ]

ಯತ್ರ ಬ್ರಹ್ಮ ಚ ಕ್ಷತ್ರಂ ಚ ಸಮ್ಯಂಚೌ ಚರತಃ ಸಹ ।

ತಂ ಲೋಕಂ ಪುಣ್ಯಂ ಯಜ್ಞೇಷಂ* ಯತ್ರ ದೇವಾಃ ಸಹಾಗ್ನಿನಾ ॥ ೩ ॥

[ಯಜುರ್ವೇದೇ ಅ. ೨೦, ಮಂ. ೨೫]

[ಅರ್ಥ:_ "ಎಲ್ಲಿ ಬ್ರಾಹ್ಮಣತ್ವ ಮತ್ತು ಕ್ಷತ್ರಿಯತ್ವವು ಸರಿ ಸರಿಯಾಗಿ ಜೊತೆ ಜೊತೆಯಲ್ಲಿ ಗತಿ ಮಾಡುತ್ತವೋ, ಮತ್ತು ಎಲ್ಲಿ ವಿದ್ವಾಂಸರು ಅಗ್ರಣಿಯೊಂದಿಗೆ [ವರ್ತಿಸುತ್ತಾರೋ,] ಆ ದೇಶವನ್ನು ಪವಿತ್ರವೆಂದು ತಿಳಿಯುತ್ತೇನೆ."

(ಯಜುರ್ವೇದ: ೨೦. ೨೫)]

ಪರಮೇಶ್ವರನೇ ಜಗತ್ತಿನ ಮೊದಲ ರಾಜಾ

ಭಾಷ್ಯಮ್_ ಏಷಾಮಭಿಪ್ರಾಯಃ_

ಅತ್ರ ಮಂತ್ರೇಷು ರಾಜಧರ್ಮೋ ವಿಧೀಯತ ಇತಿ.

ಭಾಷ್ಯ_ ಈ ಮಂತ್ರಗಳ ಅಭಿಪ್ರಾಯವೇನೆಂದರೆ_

ಇಲ್ಲಿ ಮಂತ್ರಗಳಲ್ಲಿ ರಾಜಧರ್ಮದ ವಿಧಾನ ಮಾಡಲಾಗಿದೆ.

ಅಂದರೆ, ಸಮಸ್ತ ಜಗತ್ತಿನ ರಾಜನು ಪರಮೇಶ್ವರನೇ ಆಗಿದ್ದಾನೆ. ಮತ್ತು ಸಮಸ್ತ ಜಗತ್ತು ಅವನ ಪ್ರಜೆಯಾಗಿದೆ.

ಈ ಬಗ್ಗೆ ಯಜುರ್ವೇದದ ಹದಿನೆಂಟನೆಯ ಅಧ್ಯಾಯದ ೧೯ ನೆಯ ಮಂತ್ರದ ಪ್ರಮಾಣವೇನೆಂದರೆ_

"ವಯಂ ಪ್ರಜಾಪತೇಃ ಪ್ರಜಾ ಅಭೂಮ"

ಎಂದರೆ_ ನಾವೆಲ್ಲರೂ ಪರಮೇಶ್ವರನ ಪ್ರಜೆಗಳಾಗಿದ್ದೇವೆ; ಮತ್ತು ಅವನೊಬ್ಬನೇ ನಮ್ಮ ರಾಜನಾಗಿದ್ದಾನೆ', ಎಂದು ಸಮಸ್ತ ಮಾನವರೂ ನಿಶ್ಚಯಪೂರ್ವಕವಾಗಿ ತಿಳಿದುಕೊಳ್ಳಬೇಕು!

---

* ಯಜುರ್ವೇದಸಂಹಿತಾಯಾಂ 'ಪ್ರಜ್ಞೇಷಮ್' ಇತಿ ಪಾಠ ಉಪಲಭ್ಯತೇ. ಗ್ರಂಥಕರ್ತುರ್ಯಜುರ್ಭಾಷ್ಯೇಽಪಿ 'ಪ್ರಜ್ಞೇಷಮ್' ಇತ್ಯೇವ ಸಂಹಿತಾನುಸೃತಃ ಪಾಠೋ ವಿದ್ಯತೇ _ಅನು.

ಯಥಾ ಸೂರ್ಯ್ಯಚಂದ್ರೌ (ರಾಜಾನಾ) ಸರ್ವ-ಮೂರ್ತ್ತದ್ರವ್ಯಪ್ರಕಾಶಕೌ ಭವತಸ್ತಥಾ ಸೂರ್ಯ್ಯಚಂದ್ರ-ಗುಣಶೀಲೌ ಪ್ರಕಾಶನ್ಯಾಯಯುಕ್ತೌ ವ್ಯವಹಾರೌ ;

ಹೇಗೆ ಸೂರ್ಯ-ಚಂದ್ರರು (ರಾಜಾನಾ) ಎಲ್ಲಾ ಮೂರ್ತದ್ರವ್ಯಗಳ ಪ್ರಕಾಶಕರಾಗಿರುತ್ತಾರೋ, ಹಾಗೆಯೇ ಸೂರ್ಯ-ಚಂದ್ರರ ಗುಣಗಳಿಂದ ಯುಕ್ತರೂ ; ಪ್ರಕಾಶ ನ್ಯಾಯಗಳಿಂದ ಕೂಡಿದ ವ್ಯವಹಾರವನ್ನು ಆಚರಿಸು ವವರೂ [ಆದ ರಾಜ-ಪ್ರಜೆಗಳು] ;

(ತ್ರೀಣಿ ಸದಾಂಸಿ ಭೂಷಥಃ) ಭೂಷಯ-ತೋಽಲಂಕುರುತಃ .

(ತ್ರೀಣಿ ಸದಾಂಸಿ ಭೂಷಥಃ) ಮೂರು ಸಭೆಗಳನ್ನು ಅಲಂಕರಿಸುತ್ತಾರೆ.

ಅಂದರೆ, ಮೂರು ಪ್ರಕಾರದ ಸಭೆಯನ್ನೇ ರಾಜಾ, ಎಂದು ಅಂಗೀಕರಿಸಬೇಕು; ಒಬ್ಬ ಮನುಷ್ಯನನ್ನು ಎಂದಿಗೂ ಅಲ್ಲ!

(ವಿದಥೇ) ತಾಭಿಃ ಸಭಾಭಿರೇವ ಯುದ್ಧೇ ;

(ವಿದಥೇ) ಆ [ಮೂರು] ಸಭೆಗಳ ಮೂಲಕ ವಾಗಿಯೇ ಯುದ್ಧದಲ್ಲಿ;

(ಪುರೂಣಿ) ಬಹೂನಿ ವಿಜಯಾದೀನಿ ಸುಖಾನಿ ಮನುಷ್ಯಾಃ ಪ್ರಾಪ್ನುವಂತಿ.

(ಪುರೂಣಿ) ಬಹುವಿಧವಾದ ವಿಜಯ ಮೊದಲಾದ ಸುಖಗಳನ್ನು ಮನುಷ್ಯರು ಪಡೆಯುತ್ತಾರೆ.

ಅಂದರೆ, ಈ ಮೂರೂ ಸಭೆಗಳ ಮೂಲಕ **'ವಿದಥ'**, ಎಂದರೆ ಯುದ್ಧದಲ್ಲಿ ಶತ್ರುಗಳನ್ನೆಲ್ಲಾ ಜಯಿಸಿ, ನಾನಾ ರೀತಿಯ ಸುಖಗಳಿಂದ ಜಗತ್ತನ್ನು ತುಂಬಿಸಿಡ ಬೇಕು, ಎಂದರ್ಥ.

ತಥಾ (ಪರಿ ವಿಶ್ವಾನಿ) ರಾಜಧರ್ಮ್ಮಾದಿ-ಯುಕ್ತಾಭಿಸ್ಸಭಾಭಿರ್ವಿಶ್ವಸ್ಥಾನಿ ಸರ್ವಾಣಿ ವಸ್ತೂನಿ ಪ್ರಾಣಿಜಾತಾನಿ ಚ ಭೂಷಯಂತಿ ಸುಖಯಂತಿ.

ಮತ್ತು (ಪರಿ ವಿಶ್ವಾನಿ) ರಾಜಧರ್ಮ ಮೊದಲಾದುವುಗಳಿಂದ ಕೂಡಿದ ಸಭೆಗಳ ಮೂಲಕ ಜಗತ್ತಿನಲ್ಲಿರುವ ಸಮಸ್ತ ಪದಾರ್ಥಗಳೂ, ಹಾಗೂ ಪ್ರಾಣಿಗಳೂ 'ಭೂಷಿತರಾಗುತ್ತಾರೆ', ಎಂದರೆ ಸುಖ ಪಡುತ್ತಾರೆ.

ಮೂರು ಸಭೆಗಳ ಸದಸ್ಯತ್ವ ಮತ್ತು ಕಾರ್ಯನಿರ್ವಹಣೆ

ಇದಮತ್ರ ಬೋಧ್ಯಮ್_

ಈ ವಿಷಯದಲ್ಲಿ ತಿಳಿಯಬೇಕಾದುದೇನೆಂದರೆ_

ಅಂದರೆ, ಆ ಮೂರು [ಸಭೆಗಳು] ಯಾವು ವೆಂದರೆ_

ರಾಜಾರ್ಯ್ಯಸಭಾ_ ತತ್ರ ವಿಶೇಷತೋ ರಾಜಕಾರ್ಯ್ಯಾಣ್ಯೇವ ಭವೇಯುಃ .

(೧) 'ರಾಜಾರ್ಯಸಭಾ'_ ಇಲ್ಲಿ ವಿಶೇಷವಾಗಿ ರಾಜಕಾರ್ಯಗಳೇ ಆಗಬೇಕು!

ಅಂದರೆ, ಮೊದಲು ರಾಜ್ಯಪ್ರಬಂಧಕ್ಕಾಗಿ ಒಂದು 'ಆರ್ಯರಾಜಸಭಾ' ಇರಬೇಕು. ಇದರಿಂದ, ವಿಶೇಷ ವಾಗಿ ರಾಜಕಾರ್ಯಗಳೆಲ್ಲವೂ ನೆರವೇರಬೇಕು!

ದ್ವಿತೀಯಾऽऽರ್ಯ್ಯವಿದ್ಯಾಸಭಾ_ ತತ್ರ ವಿಶೇಷತೋ ವಿದ್ಯಾಪ್ರಚಾರೋನ್ನತೀ ಏವ ಕಾರ್ಯೇ ಭವತಃ.

(೨) ಎರಡನೆಯದಾದ **'ಆರ್ಯವಿದ್ಯಾಸಭಾ'_** ಇದರಲ್ಲಿ ವಿಶೇಷವಾಗಿ ವಿದ್ಯೆಯ, ಪ್ರಚಾರ, ಹಾಗೂ ಉನ್ನತಿ, ಎಂಬ ಎರಡು ಕಾರ್ಯಗಳೇ ಇರಬೇಕು!

ಅಂದರೆ, ಎರಡನೆಯ **'ಆರ್ಯವಿದ್ಯಾಸಭೆ'**ಯಿಂದ ಎಲ್ಲಾ ರೀತಿಯ ವಿದ್ಯೆಗಳ ಪ್ರಚಾರವಾಗುತ್ತಾ ಇರಬೇಕು!

ತೃತೀಯಾऽऽರ್ಯ್ಯಧರ್ಮ್ಮಸಭಾ_ ತತ್ರ ವಿಶೇಷತೋ ಧರ್ಮೋನ್ನತಿರಧರ್ಮಹಾನಿಶ್ಚೋಪದೇಶೇನ ಕರ್ತ್ತವ್ಯಾ.

(೩) ಮೂರನೆಯದಾದ **'ಆರ್ಯಧರ್ಮಸಭಾ'_** ಇದರಲ್ಲಿ ವಿಶೇಷವಾಗಿ ಉಪದೇಶಗಳ ಮೂಲಕ ಧರ್ಮದ ಉನ್ನತಿಯೂ, ಮತ್ತು ಅಧರ್ಮದ ಹಾನಿಯೂ ಮಾಡಲ್ಪಡಬೇಕು!

ಅಂದರೆ, ಮೂರನೆಯ **ಆರ್ಯ್ಯಧರ್ಮಸಭಾ_** ಇದರಿಂದ ಧರ್ಮದ ಪ್ರಚಾರವೂ ಮತ್ತು ಅಧರ್ಮದ ಹಾನಿಯೂ ಆಗುತ್ತಿರಬೇಕು!

ಪರಂತ್ವೇತಾಸ್ತಿಸ್ರಸ್ಸಭಾಃ ಸಾಮಾನ್ಯೇ ಕಾರ್ಯೇ ಮಿಲಿತ್ವೈವ ಸರ್ವಾನ್ ಉತ್ತಮಾನ್ ವ್ಯವಹಾರಾನ್ ಪ್ರಜಾಸು ಪ್ರಚಾರಯೇಯುರಿತಿ.

ಆದರೆ, ಈ ಮೂರು ಸಭೆಗಳೂ, ಸಾಮಾನ್ಯವಾದ ಕಾರ್ಯಗಳಲ್ಲಿ, ಒಂದಾಗಿ ಕೂಡಿಯೇ, ಎಲ್ಲಾ ಉತ್ತಮ ವ್ಯವಹಾರಗಳನ್ನು ಪ್ರಜೆಗಳಲ್ಲಿ ಪ್ರಚಾರ ಮಾಡಬೇಕು!

ಯತ್ರೈತಾಸು ಸಭಾಸು ಧರ್ಮಾತ್ಮಭಿರ್ವಿದ್ವದ್ಭಿಃ ಸಾರಾಸಾರವಿಚಾರೇಣ ಕರ್ತ್ತವ್ಯಾಕರ್ತ್ತವ್ಯಸ್ಯ ಪ್ರಚಾರೋ ನಿರೋಧಶ್ಚ ಕ್ರಿಯತೇ ;

ಈ ಸಭೆಗಳಲ್ಲಿ ಯಾವಾಗ ಧರ್ಮಾತ್ಮರಾದ ವಿದ್ವಾಂಸರಿಂದ ಸಾರ-ಅಸಾರದ ವಿಚಾರ ಮಾಡುವುದರ ಮೂಲಕ ಕರ್ತ್ತವ್ಯದ ಪ್ರಚಾರವೂ ಮತ್ತು ಅಕರ್ತ್ತವ್ಯದ ನಿಷೇಧವೂ ಮಾಡಲ್ಪಡುತ್ತದೋ ;

ತತ್ರ ಸರ್ವಾಃ ಪ್ರಜಾಃ ಸದೈವ ಸುಖಯುಕ್ತಾ ಭವಂತಿ.

ಆಗ ಪ್ರಜೆಗಳೆಲ್ಲರೂ ಯಾವಾಗಲೂ ಕೂಡ, ಸುಖದಿಂದ ಕೂಡಿರುತ್ತಾರೆ!

ಯತ್ರೈಕೋ ಮನುಷ್ಯೋ ರಾಜಾ ಭವತಿ, ತತ್ರ ಪೀಡಿತಾಶ್ಚೇತಿ ನಿಶ್ಚಯಃ.

ಎಲ್ಲಿ ಒಬ್ಬ ಮನುಷ್ಯನೇ ರಾಜನಾಗಿರುತ್ತಾನೋ, ಅಲ್ಲಿ [ಪ್ರಜೆಗಳು] ಪೀಡಿತರಾಗಿರುತ್ತಾರೆ, ಎಂಬುದು ನಿಶ್ಚಯವಾಗಿರುತ್ತದೆ!

(ಅಪಶ್ಯಮತ್ರ) ಇದಮತ್ರಾಹಮಪಶ್ಯಮ್.

(ಅಪಶ್ಯಮತ್ರ) ಇದನ್ನು ನಾನು ಇಲ್ಲಿ ನೋಡಿದ್ದೇನೆ.

ಈಶ್ವರೋಽಭಿವದತಿ_

ಈಶ್ವರನು ಉಪದೇಶ ಮಾಡುತ್ತಾನೇಂದರೆ_

ಯತ್ರ ಸಭಯಾ ರಾಜಪ್ರಬಂಧೋ ಭವತಿ, ತತ್ರೈವ ಸರ್ವಾಭ್ಯಃ ಪ್ರಜಾಭ್ಯೋ ಹಿತಂ ಜಾಯತ ಇತಿ.

"ಎಲ್ಲಿ ಸಭೆಯ ಮೂಲಕ ರಾಜ್ಯಪ್ರಬಂಧವು ಮಾಡಲ್ಪಡುತ್ತದೋ, ಅಲ್ಲಿಯೇ, ಸಮಸ್ತ ಪ್ರಜೆಗಳಿಗೆ ಹಿತ ಉಂಟಾಗುತ್ತದೆ.

(ವ್ರತೇ) ಯೋ ಮನುಷ್ಯಃ ಸತ್ಯಾಚರಣೇ (ಮನಸಾ) ವಿಜ್ಞಾನೇನ ಸತ್ಯಂ ನ್ಯಾಯಂ (ಜಗನ್ವಾನ್) ವಿಜ್ಞಾತವಾನ್ ಸ ರಾಜಸಭಾಮರ್ಹತಿ, ನೇತರಶ್ಚ.

" (ವ್ರತೇ) ಯಾವ ಮನುಷ್ಯನು ಸತ್ಯವನ್ನು ಆಚರಿಸುವುದರಲ್ಲಿ (ಮನಸಾ) ವಿಜ್ಞಾನದ ಮೂಲಕ ಸತ್ಯವಾದ ನ್ಯಾಯವನ್ನು (ಜಗನ್ವಾನ್) ವಿಶೇಷವಾಗಿ ತಿಳಿದಿರುತ್ತಾನೋ, ಅವನೇ ರಾಜಸಭೆಗೆ [ಸದಸ್ಯನಾಗಲು] ಅರ್ಹನಾಗಿರುತ್ತಾನೆ; ಬೇರೆಯವನಲ್ಲ!

(ಗಂಧರ್ವಾನ್) ಪೂರ್ವೋಕ್ತಾಸು ಸಭಾಸು ಗಂಧರ್ವಾನ್ ಪೃಥಿವೀರಾಜಪಾಲನಾದಿವ್ಯವಹಾರೇಷು ಕುಶಲಾನ್;

" (ಗಂಧರ್ವಾನ್) ಮೊದಲು ಹೇಳಿದ ಸಭೆಗಳಲ್ಲಿ 'ಗಂಧರ್ವ', ಎಂದರೆ ಪೃಥಿವಿಯ, ರಾಜ್ಯಪಾಲನೆಯ, ಮೊದಲಾದ ವ್ಯವಹಾರಗಳಲ್ಲಿ ಕುಶಲರಾದವರನ್ನೂ;

(ಅಪಿ ವಾಯುಕೇಶಾನ್) ವಾಯುವದ್ ದೂತ-ಪ್ರಚಾರೇಣ ವಿದಿತಸರ್ವವ್ಯವಹಾರಾನ್ ಸಭಾಸದಃ ಕುರ್ಯ್ಯಾತ್.

" (ಅಪಿ ವಾಯುಕೇಶಾನ್) ಮತ್ತು ವಾಯುವಿನಂತೆ ದೂತರನ್ನು ಪ್ರಸರಿಸುವುದರ ಮೂಲಕ ಸಮಸ್ತ ವ್ಯವಹಾರಗಳನ್ನು ತಿಳಿದವರನ್ನೂ ಸಭಾಸದರನ್ನಾಗಿ ಮಾಡಬೇಕು!

" ಕೇಶಾಸ್ಸೂರ್ಯ್ಯರಶ್ಮಯಃ " *

[ಅರ್ಥ:_ " 'ಕೇಶ', ಎಂದರೆ ಸೂರ್ಯನ ರಶ್ಮಿಗಳು."*]

ತದ್ವತ್ ಸತ್ಯನ್ಯಾಯಪ್ರಕಾಶಕಾನ್ ಸರ್ವಹಿತಂ ಚಿಕಿರ್ಷೂನ್ ಧರ್ಮಾತ್ಮನಃ ಸಭಾಸದಃ ಸ್ಥಾಪಯಿತು-ಮಹಮಾಜ್ಞಾಪಯಾಮಿ ; ನೇತರಾಂಶ್ಚ.

" ಅವುಗಳಂತೆ, ಸತ್ಯನ್ಯಾಯದ ಪ್ರಕಾಶ ಮಾಡುವವರೂ, ಎಲ್ಲರ ಹಿತವನ್ನು ಇಚ್ಛಿಸುವವರೂ ಆದ ಧರ್ಮಾತ್ಮರನ್ನು ಸಭಾಸದರನ್ನಾಗಿ ನಿಯಮಿಸುವುದಕ್ಕಾಗಿ ನಾನು ಆಜ್ಞೆ ಮಾಡುತ್ತಿದ್ದೇನೆ; ಬೇರೆಯವರನ್ನಲ್ಲ",

ಇತೀಶ್ವರೋಪದೇಶಃ ಸರ್ವೈರ್ಮಂತವ್ಯ ಇತಿ ॥೧॥

ಎಂಬುದಾಗಿ ಮಾಡಿರುವ ಈಶ್ವರನ ಉಪದೇಶವನ್ನು ಎಲ್ಲರೂ ಅಂಗೀಕರಿಸಬೇಕು! [೧]

ಪರಸ್ಪರ ಅನುಕೂಲ ವ್ಯವಹಾರ

(ಕ್ಷತ್ರಸ್ಯ ಯೋನಿರಸಿ) ಹೇ ಪರಮೇಶ್ವರ! ತ್ವಂ ಯಥಾ ಕ್ಷತ್ರಸ್ಯ ರಾಜವ್ಯವಹಾರಸ್ಯ ಯೋನಿ-ರ್ನಿಮಿತ್ತಮಸಿ, ತಥಾ ;

(ಕ್ಷತ್ರಸ್ಯ ಯೋನಿರಸಿ) (ರಾಜ್ಯವನ್ನು ಕೊಡುವ) ಓ ಪರಮೇಶ್ವರ! ನೀವು ಹೇಗೆ 'ಕ್ಷತ್ರ', ಎಂದರೆ ರಾಜ್ಯವ್ಯವಹಾರದ, 'ಯೋನಿ', ಎಂದರೆ ನಿಮಿತ್ತವಾಗಿದ್ದೀರೋ, ಹಾಗೆಯೇ ;

(ಕ್ಷತ್ರಸ್ಯ ನಾಭಿರಸಿ) ಏವಂ ರಾಜಧರ್ಮಸ್ಯ ತ್ವಂ ಪ್ರಬಂಧಕರ್ತಾಸಿ.

(ಕ್ಷತ್ರಸ್ಯ ನಾಭಿರಸಿ) ಇದೇ ರೀತಿಯಲ್ಲಿ, ನೀವು ರಾಜಧರ್ಮದ ಪ್ರಬಂಧಕರ್ತ್ತರೂ ಆಗಿದ್ದೀರಿ!

---

* ತುಲನಾ ಕಾರ್ಯ್ಯ_'ಕೇಶಾ ರಶ್ಮಯಃ' (ನಿರುಕ್ತೇ ೧೨. ೨) _ಯು. ಮೀ.

* ನಿರುಕ್ತ (೧೨. ೨) ವನ್ನು ನೋಡಿ _ಅನು.

ಅಂದರೆ, ರಾಜ್ಯಸುಖಕ್ಕೆ ನೀವೇ ಪರಮ ಕಾರಣರಾಗಿದ್ದೀರಿ! ನೀವೇ ರಾಜ್ಯದ ಜೀವನಹೇತುವೂ ಆಗಿದ್ದೀರಿ!

ಮತ್ತು, **ಕ್ಷತ್ರಿಯವರ್ಣದ ರಾಜ್ಯದ ಕಾರಣ ಮತ್ತು ಜೀವನವು ಸಭೆಯೇ ಆಗಿರುತ್ತದೆ!**

ತಥೈವ ನೋಽಸ್ಮಾನಪಿ ಕೃಪಯಾ ರಾಜ್ಯಪಾಲನ-ನಿಮಿತ್ತಾನ್ ಕ್ಷತ್ರಧರ್ಮಪ್ರಬಂಧಕರ್ತೄಂಶ್ಚ ಕುರು.

ಹಾಗೆಯೇ, ಕೃಪೆಯಿಟ್ಟು ನಮ್ಮನ್ನೂ ಕೂಡ, ರಾಜ್ಯಪಾಲನೆಗೆ ನಿಮಿತ್ತರನ್ನಾಗಿಯೂ ಮತ್ತು ಕ್ಷಾತ್ರ-ಧರ್ಮದ ಪ್ರಬಂಧಕರ್ತೃಗಳನ್ನಾಗಿಯೂ ಮಾಡಿ!

(ಮಾ ತ್ವಾ ಹಿಗ್ಂಸೀನ್ಮಾ ಮಾ ಹಿಗ್ಂಸೀಃ) ತಥಾಽಸ್ಮಾಕಂ ಮಧ್ಯಾತ್ ಕೋಽಪಿ ಜನಸ್ತ್ವಾಂ ಮಾ ಹಿಂಸೀದ್ ಅರ್ಥಾದ್ ಭವಂತಂ ತಿರಸ್ಕೃತ್ಯ ನಾಸ್ತಿಕೋ ಮಾ ಭವತು.[⊛]

(ಮಾ ತ್ವಾ ಹಿಗ್ಂಸೀತ್) ಮತ್ತು ನಮ್ಮ ಮಧ್ಯದಿಂದ ಯಾವ ಮನುಷ್ಯನೂ ಕೂಡ, ನಿಮ್ಮನ್ನು ಪೀಡಿಸದಿರಲಿ; ಎಂದರೆ, ನಿಮ್ಮನ್ನು ತಿರಸ್ಕರಿಸಿ, ನಾಸ್ತಿಕನಾಗದಿರಲಿ!

ತಥಾ ತ್ವಂ ಮಾಂ ಮಾ ಹಿಂಸೀರರ್ಥಾನ್ಮಮ ತಿರಸ್ಕಾರಂ ಕದಾಚಿನ್ಮಾ ಕುರ್ಯಾಃ ;

(ಮಾ ಮಾ ಹಿಗ್ಂಸೀಃ) ಮತ್ತು ನೀವು ನನ್ನನ್ನು ಪೀಡಿಸಬೇಡಿ; ಎಂದರೆ ನನ್ನ ತಿರಸ್ಕಾರವನ್ನು ಎಂದಿಗೂ ಮಾಡಬೇಡಿ!

ಅಂದರೆ, ಓ ಜಗದೀಶ್ವರ! ಪ್ರಜೆಗಳೆಲ್ಲರೂ ನಿಮ್ಮನ್ನು ಬಿಟ್ಟು, ಬೇರೆ ಯಾವನನ್ನೂ ತಮ್ಮ ರಾಜನನ್ನಾಗಿ ಎಂದಿಗೂ ಅಂಗೀಕರಿಸದಿರಲಿ! ಮತ್ತು ನೀವೂ ಕೂಡ, ನಮ್ಮನ್ನು ಎಂದಿಗೂ ಬಿಡಬೇಡಿ! ಅಂದರೆ, ನೀವೂ ಮತ್ತು ನಾವೆಲ್ಲರೂ ಪರಸ್ಪರ ಅನುಕೂಲರಾಗಿ ಯಾವಾಗಲೂ ವರ್ತಿಸೋಣ!

ಯತೋ ವಯಂ ಭವತ್ಸೃಷ್ಟೌ ರಾಜ್ಯಾಧಿ-ಕಾರಿಣಸ್ಸದಾ ಭವೇಮ ॥ ೨ ॥

ಇದರಿಂದ, ನಾವು ನಿಮ್ಮ ಸೃಷ್ಟಿಯಲ್ಲಿ ಯಾವಾಗಲೂ ರಾಜ್ಯಾಧಿಕಾರಿಗಳಾಗಿರೋಣ! [೨]

ಬ್ರಾಹ್ಮಣ-ಕ್ಷತ್ರಿಯರ ಒಡನಾಟದಿಂದ ಸುಖ!

(ಯತ್ರ ಬ್ರಹ್ಮ ಚ ಕ್ಷತ್ರಂ ಚ) ಯತ್ರ ದೇಶೇ ಬ್ರಹ್ಮ ಪರಮೇಶ್ವರೋ ವೇದೋ ವಾ ;

(ಯತ್ರ ಬ್ರಹ್ಮ ಚ ಕ್ಷತ್ರಂ ಚ) ಯಾವ ದೇಶದಲ್ಲಿ 'ಬ್ರಹ್ಮ', ಎಂದರೆ ಪರಮೇಶ್ವರ ಅಥವಾ ವೇದ ;

ಬ್ರಾಹ್ಮಣೋ ಬ್ರಹ್ಮವಿಚ್ಚೈತತ್ ಸರ್ವಂ ಬ್ರಹ್ಮ;

ಮತ್ತು **'ಬ್ರಾಹ್ಮಣ'**, ಎಂದರೆ ಬ್ರಹ್ಮನನ್ನು ತಿಳಿದವನು; ಇವೆಲ್ಲಕ್ಕೂ 'ಬ್ರಹ್ಮ', [ಎಂದು ಹೆಸರು;]

ತಥಾ ಕ್ಷತ್ರಂ ಶೌರ್ಯಧೈರ್ಯಾದಿಗುಣವಂತೋ ಮನುಷ್ಯಾಶ್ಚೈತೌ ದ್ವೌ ;

ಮತ್ತು **'ಕ್ಷತ್ರ'**, ಎಂದರೆ ಶೌರ್ಯ-ಧೈರ್ಯ ಮೊದಲಾದ ಗುಣಗಳನ್ನುಳ್ಳ ಮನುಷ್ಯರು_ ಈ **(ದ್ವೌ)** ಇಬ್ಬರೂ ;

⊛ 'ಭವೇತ್' _ಆ. ವೈ.

(ಸಮ್ಯಂಚೌ) ಯಥಾವದ್ ವಿಜ್ಞಾನಯುಕ್ತಾವ-ವಿರುದ್ಧೌ;

(ಸಮ್ಯಂಚೌ) ಯಥಾವತ್ತಾಗಿ ವಿಜ್ಞಾನದಿಂದ ಕೂಡಿದವರಾಗಿಯೂ, ಹಾಗೂ [ಪರಸ್ಪರ] ಅವಿರುದ್ಧವಾಗಿಯೂ;

(ಚರತಃ ಸಹ);

(ಚರತಃ ಸಹ) ಒಡನೊಡನೆ ವರ್ತಿಸುತ್ತಾರೋ;

(ತಂ ಲೋಕಮ್) ತಂ ದೇಶಂ;

(ತಂ ಲೋಕಮ್) ಆ ದೇಶವನ್ನು;

(ಪುಣ್ಯಂ) ಪುಣ್ಯಯುಕ್ತಂ;

(ಪುಣ್ಯಂ) ಪುಣ್ಯಯುಕ್ತವೆಂದೂ [ಮತ್ತು;]

(ಯಜ್ಞೇಷಮ್) ಯಜ್ಞಕರಣೇಚ್ಛಾವಿಶಿಷ್ಟಂ ವಿಜಾನೀಮಃ.

(ಯಜ್ಞೇಷಮ್) ಯಜ್ಞ* ಮಾಡುವ ಇಚ್ಛೆಯಿಂದ ವಿಶಿಷ್ಟವಾಗಿದೆ, ಎಂದೂ ನಾವು ತಿಳಿಯುತ್ತೇವೆ.

ಅಂದರೆ, ಯಾವ ದೇಶದಲ್ಲಿ ಉತ್ತಮ ವಿದ್ವಾಂಸರಾದ ಬ್ರಾಹ್ಮಣರಿಂದ ಕೂಡಿದ **ವಿದ್ಯಾಸಭೆ** ಮತ್ತು ವಿದ್ವಾಂಸರಾದ ಶೂ[illegible] ಕ್ಷತ್ರಿಯಜನರಿಂದ ಕೂಡಿದ **ರಾಜಸಭೆ**_ ಇವರೆಲ್ಲರೂ ಸೇರಿ, ರಾಜಕಾರ್ಯಗಳನ್ನು ನೆರವೇರಿಸುತ್ತಾರೋ, ಆ ದೇಶವೇ ಧರ್ಮ ಮತ್ತು ಶುಭಕ್ರಿಯೆಗಳಿಂದ ಸಂಯುಕ್ತವಾಗಿ ಸುಖವನ್ನು ಹೊಂದುತ್ತದೆ.

(ಯತ್ರ ದೇವಾಃ ಸಹಾಗ್ನಿನಾ) ಯಸ್ಮಿನ್ ದೇಶೇ ವಿದ್ವಾಂಸಃ ಪರಮೇಶ್ವರೇಣಾಗ್ನಿಹೋತ್ರಾದಿ-ಯಜ್ಞಾನುಷ್ಠಾನೇನ ಚ ಸಹ ವರ್ತ್ತಂತೇ;

(ಯತ್ರ ದೇವಾಃ ಸಹಾಗ್ನಿನಾ) ಯಾವ ದೇಶದಲ್ಲಿ ವಿದ್ವಾಂಸರು ಪರಮೇಶ್ವರೊಡನೆಯೂ, ಮತ್ತು ಅಗ್ನಿಹೋತ್ರ ಮೊದಲಾದ ಯಜ್ಞಾನುಷ್ಠಾನದೊಡನೆಯೂ ವರ್ತಿಸುತ್ತಾರೋ;

ತತ್ರೈವ ಪ್ರಜಾಃ ಸುಖಿನೋ ಭವಂತೀತಿ ವಿಜ್ಞೇಯಮ್ ॥ ೩ ॥

ಅಲ್ಲಿಯೇ ಪ್ರಜೆಗಳು ಸುಖಿಗಳಾಗಿರುತ್ತಾರೆ, ಎಂದು ತಿಳಿಯಬೇಕು!

ಅಂದರೆ, ಯಾವ ದೇಶದಲ್ಲಿ ಪರಮೇಶ್ವರನ ಆಜ್ಞಾಪಾಲನೆ ಮತ್ತು ಅಗ್ನಿಹೋತ್ರಾದಿ ಸತ್‌ಕ್ರಿಯೆಗಳನ್ನು ಆಚರಿಸುವ ವಿದ್ವಾಂಸರಿರುತ್ತಾರೋ, ಆ ದೇಶವೇ ಎಲ್ಲಾ ಉಪದ್ರವಗಳಿಂದಲೂ ರಹಿತವಾಗಿ, ಅಖಂಡ ರಾಜ್ಯವನ್ನು ನಿತ್ಯವೂ ಭೋಗಿಸುತ್ತದೆ.** [೩]

---

* ಸಂಗತಿಕರಣ-ದಾನ-ಸತ್ಕಾರ _ಅನು.

** ಎಂದರೆ, ಆ ದೇಶದಲ್ಲಿನ ಪ್ರಜೆಗಳು ಭೋಗಿಸುತ್ತಾರ, ಎಂದರ್ಥ _ಅನು.

ರಾಜನ (ಸಭಾಧ್ಯಕ್ಷನ) ಅಭಿಷೇಕ

[ಋಷಿ_ ಅಶ್ವಿನೌ ; ದೇವತಾ_ ಸಭೇಶಃ ; ಛಂದಃ_ ನಿಚೃದತಿಧೃತಿಃ ; ಸ್ವರಃ_ ಷಡ್ಜಃ]

ದೇವಸ್ಯ ತ್ವಾ ಸವಿತುಃ ಪ್ರಸವೇಽಶ್ವಿನೋರ್ಬಾಹುಭ್ಯಾಂ ಪೂಷ್ಣೋ ಹಸ್ತಾಭ್ಯಾಮ್ । ಅಶ್ವಿನೋರ್ಭೈಷಜ್ಯೇನ ತೇಜಸೇ ಬ್ರಹ್ಮವರ್ಚಸಾಯಾಭಿಷಿಂಚಾಮಿ ।* ಇಂದ್ರಸ್ಯೇಂದ್ರಿಯೇಣ ಬಲಾಯ ಶ್ರಿಯೈ ಯಶಸೇಽಭಿಷಿಂಚಾಮಿ ॥ ೪ ॥

[ಯಜುರ್ವೇದೇ ಅ. ೨೦, ಮಂ. ೩]

[ಅರ್ಥ:_ "ಜಗದುತ್ಪಾದಕ ದೇವನ ಪ್ರಜಾಪಾಲನೆಗಾಗಿ, ನಿನ್ನನ್ನು ಅಶ್ವಿಗಳ ಬಾಹುಗಳಿಂದಲೂ, ಪುಷ್ಟಿಕರ್ತನ ಹಸ್ತಗಳಿಂದಲೂ, ಅಶ್ವಿಗಳ ಔಷಧದಿಂದಲೂ, ಇಂದ್ರನ ಐಶ್ವರ್ಯದಿಂದಲೂ, ಬ್ರಹ್ಮವರ್ಚಸ್ಸಿಗಾಗಿಯೂ, ತೇಜಸ್ಸಿಗಾಗಿಯೂ ಅಭಿಷೇಕ ಮಾಡುತ್ತೇನೆ. ಬಲಕ್ಕಾಗಿಯೂ, ರಾಜ್ಯಕ್ಕಾಗಿಯೂ ಮತ್ತು ಯಶಸ್ಸಿಗಾಗಿಯೂ ಅಭಿಷೇಕ ಮಾಡುತ್ತೇನೆ."

(ಯಜುರ್ವೇದಃ ೨೦. ೩)]

ಯಾವನಾದರೂ ರಾಜನು+ ಸಭಾಧ್ಯಕ್ಷನಾಗಲು ಯೋಗ್ಯನಾದರೆ, ನಾವು ಅವನಿಗೆ ಅಭಿಷೇಕವನ್ನು ಮಾಡಬೇಕು; ಮತ್ತು ಅವನಿಗೆ ಹೇಳಬೇಕೇನೆಂದರೆ_

ಭಾಷ್ಯಮ್_

(ದೇವಸ್ಯ ತ್ವಾ ಸವಿತುಃ) ಹೇ ಸಭಾಧ್ಯಕ್ಷ! ಸ್ವಪ್ರಕಾಶಮಾನಸ್ಯ ಸರ್ವಸ್ಯ ಜಗತ ಉತ್ಪಾದಕಸ್ಯ ಪರಮೇಶ್ವರಸ್ಯ;

(ಪ್ರಸವೇ) ಅಸ್ಯಾಂ ಪ್ರಜಾಯಾಂ ;

(ಅಶ್ವಿನೋರ್ಬಾಹುಭ್ಯಾಮ್) ಸೂರ್ಯಾಚಂದ್ರಮಸೋರ್ಬಾಹುಭ್ಯಾಂ ಬಲವೀರ್ಯಾಭ್ಯಾಂ ;

(ಪೂಷ್ಣೋ ಹಸ್ತಾಭ್ಯಾಮ್) ಪುಷ್ಟಿಕರ್ತುಃ ಪ್ರಾಣಸ್ಯ ಗ್ರಹಣದಾನಾಭ್ಯಾಂ ;

ಭಾಷ್ಯ_

(ದೇವಸ್ಯ ತ್ವಾ ಸವಿತುಃ) ಎಲೈ ಸಭಾಧ್ಯಕ್ಷನೇ! ಸ್ವಪ್ರಕಾಶಮಾನನೂ, ಸಮಸ್ತ ಜಗತ್ತಿನ ಉತ್ಪಾದಕನೂ ಆದ ಪರಮೇಶ್ವರನ ;

(ಪ್ರಸವೇ) ಈ ಪ್ರಜೆಗಳಲ್ಲಿ_

(ಅಶ್ವಿನೋರ್ಬಾಹುಭ್ಯಾಮ್) 'ಅಶ್ವಿ', ಎಂದರೆ ಸೂರ್ಯ ಮತ್ತು ಚಂದ್ರರ 'ಬಾಹು', ಎಂದರೆ ಬಲವೀರ್ಯಗಳಿಂದಲೂ ;

(ಪೂಷ್ಣೋ ಹಸ್ತಾಭ್ಯಾಮ್) ಪುಷ್ಟಿಕರ್ತೃವಾದ ಪ್ರಾಣದ ಗ್ರಹಣ ಮತ್ತು ವಿಸರ್ಜನಗಳಿಂದಲೂ;

* ಅಗ್ರೇ_'ಸರಸ್ವತ್ಯೈ ಭೈಷಜ್ಯೇನ ವೀರ್ಯಾಯಾನ್ನಾದ್ಯಾಯಾಭಿಷಿಂಚಾಮಿ' ಇತಿ ಪಾಠೋ ಮಂತ್ರ ಉಪಲಭ್ಯತೇ _ಅನು.

+ ಎಂದರೆ, ರಾಜಪುರುಷನು _ಅನು.

(ಅಶ್ವಿನೋರ್ಭೈಷಜ್ಯೇನ) ಪೃಥಿವ್ಯಂತರಿಕ್ಷೌಷಧಿ-ಸಮೂಹೇನ ಸರ್ವರೋಗನಿವಾರಕೇಣ ಸಹ ವರ್ತ್ತಮಾನಂ ತ್ವಾಂ ;

(ಅಶ್ವಿನೋರ್ಭೈಷಜ್ಯೇನ) ಪೃಥಿವೀ, ಅಂತರಿಕ್ಷ, ಹಾಗೂ ಔಷಧಗಳ ಸಮೂಹದಿಂದ ಸರ್ವರೋಗಗಳ ನಿವಾರಣೆಯ ಜೊತೆಗೂ ಕೂಡಿರುವ ನಿನ್ನನ್ನು ;

(ತೇಜಸೇ) ನ್ಯಾಯಾದಿಸದ್ಗುಣಪ್ರಕಾಶಾಯ ;

(ತೇಜಸೇ) ನ್ಯಾಯ ಮೊದಲಾದ ಸದ್ಗುಣಗಳನ್ನು ಪ್ರಕಟ ಮಾಡುವುದಕ್ಕಾಗಿಯೂ ;

(ಬ್ರಹ್ಮವರ್ಚಸಾಯ) ಪೂರ್ಣವಿದ್ಯಾಪ್ರಚಾರಾಯ ;

(ಬ್ರಹ್ಮವರ್ಚಸಾಯ) ಪೂರ್ಣವಿದ್ಯೆಯ ಪ್ರಚಾರ ಮಾಡುವುದಕ್ಕಾಗಿಯೂ ;

(ಅಭಿ ಷಿಂಚಾಮಿ) ಸುಗಂಧ[⊛]ಜಲೈರ್ಮೂರ್ದ್ಧನಿ ಮಾರ್ಜಯಾಮಿ.

(ಅಭಿಷಿಂಚಾಮಿ) ಸುಗಂಧಜಲಗಳಿಂದ ತಲೆಯ ಮೇಲೆ ಪ್ರೋಕ್ಷಣೆ ಮಾಡುತ್ತೇನೆ.

ತಥಾ (ಇಂದ್ರಸ್ಯೇಂದ್ರಿಯೇಣ) ಪರಮೇಶ್ವರಸ್ಯ ಪರಮೈಶ್ವರ್ಯೇಣ ವಿಜ್ಞಾನೇನ ಚ ;

ಮತ್ತು (ಇಂದ್ರಸ್ಯೇಂದ್ರಿಯೇಣ) ಪರಮೇಶ್ವರನ ಪರಮೈಶ್ವರ್ಯ, ಹಾಗೂ ವಿಜ್ಞಾನದಿಂದ ;

(ಬಲಾಯ) ಉತ್ತಮಬಲಾರ್ಥಂ ;

(ಬಲಾಯ) ಉತ್ತಮಬಲಕ್ಕಾಗಿಯೂ ;

(ಶ್ರಿಯೈ) ಚಕ್ರವರ್ತಿರಾಜ್ಯಲಕ್ಷ್ಮೀಪ್ರಾಪ್ತ್ಯರ್ಥಂ ಚ ;

ಮತ್ತು (ಶ್ರಿಯೈ) ಚಕ್ರವರ್ತಿರಾಜ್ಯಲಕ್ಷ್ಮಿಯ ಪ್ರಾಪ್ತಿಗಾಗಿಯೂ ಕೂಡ ;

(ಅಭಿ ಷಿಂಚಾಮಿ) ರಾಜಧರ್ಮಪಾಲನಾರ್ಥಂ ಸ್ಥಾಪಯಾಮೀತೀಶ್ವರೋಪದೇಶಃ ॥ ೪ ॥

(ಅಭಿ ಷಿಂಚಾಮಿ) ರಾಜಧರ್ಮದ ಪಾಲನೆಗಾಗಿ [ನಿನ್ನನ್ನು] ಸ್ಥಾಪಿಸುತ್ತೇನೆ, ಎಂದು ಈಶ್ವರನ ಉಪದೇಶ ಇದೆ.

ಅಂದರೆ, ಹೇ ಸಭಾಧ್ಯಕ್ಷನೇ! ಸಮಸ್ತ ಜಗತ್ತನ್ನು ಪ್ರಕಾಶಿಸುವವನೂ, ಹಾಗೂ ಉತ್ಪನ್ನ ಮಾಡುವವನೂ ಆದ ಈಶ್ವರನ ಸೃಷ್ಟಿಯಲ್ಲಿ ಪುಷ್ಟಿಕರ್ತ್ಯವಾದ ಪ್ರಾಣದ ಗ್ರಹಣ ಮತ್ತು ದಾನದ ಶಕ್ತಿರೂಪ ಕೈಗಳಿಂದ ನಿನ್ನನ್ನು **'ಸಭಾಧ್ಯಕ್ಷ'**, ಎಂಬುದಾಗಿ ನಾವು ಸ್ವೀಕರಿಸುತ್ತೇವೆ.

[ಈಗ] ಪರಮೇಶ್ವರನು ಹೇಳುತ್ತಾನೇನೆಂದರೆ_

ಪೃಥಿವೀ, ಶುದ್ಧವಾಯು ಮತ್ತು ಈ ಔಷಧಗಳಿಂದ ಹಗಲು-ರಾತ್ರಿಗಳಲ್ಲಿ ಎಲ್ಲಾ ರೋಗಗಳಿಂದಲೂ ನಿನ್ನನ್ನು ನಿವಾರಿಸಿ, ಸತ್ಯನ್ಯಾಯದ ಪ್ರಕಾಶಕ್ಕಾಗಿಯೂ, ಬ್ರಹ್ಮನ ಜ್ಞಾನ ಮತ್ತು ವಿದ್ಯೆಯ ವೃದ್ಧಿಗಾಗಿಯೂ, ಮತ್ತು ಪರಮೇಶ್ವರನ ಪರಮೈಶ್ವರ್ಯ, ಹಾಗೂ ರಾಜ್ಯದ ವಿಜ್ಞಾನದಿಂದ ಉತ್ತಮ ಸೇನೆ, ಸರ್ವೋತ್ತಮ [ರಾಜ್ಯ]ಲಕ್ಷ್ಮೀ ಮತ್ತು ಸರ್ವೋತ್ತಮ ಕೀರ್ತಿಯ ಪ್ರಾಪ್ತಿಗಾಗಿಯೂ, ನಾನು ನಿಮ್ಮೆಲ್ಲರಿಗೂ ಸಭೆಯ ಆಯೋಜನೆ ಮಾಡುವುದಕ್ಕಾಗಿ ಆಜ್ಞೆ ಮಾಡುತ್ತೇನೆ.

ಈ ಆಜ್ಞೆಯು ರಾಜನ ಮತ್ತು ಪ್ರಜೆಗಳ ಪ್ರಬಂಧವನ್ನು ಮಾಡುವುದಕ್ಕಾಗಿ ಇದೆ. ಆದುದರಿಂದ, ಮನುಷ್ಯರೆಲ್ಲರೂ ಇದರ ಪ್ರಚಾರವನ್ನು ಸರಿ ಸರಿಯಾಗಿ ಮಾಡಲಿ! [೪]

⊛ **'ಸುಗಂಧಿ'** _ಆ. ವೈ.

ರಾಜನ ಆಶ್ರಯಯಾಚನೆ

[ಋಷಿಃ_ ಪ್ರಜಾಪತಿಃ ; ದೇವತಾ_ ಸಭಾಪತಿಃ ; ಛಂದಃ_ ನಿಚೃದಾರ್ಷೀ ಗಾಯತ್ರೀ ; ಸ್ವರಃ_ ಷಡ್ಜಃ]

ಕೋಽಸಿ ಕತಮೋಽಸಿ ಕಸ್ಮೈ ತ್ವಾ ಕಾಯ ತ್ವಾ ।
ಸುಶ್ಲೋಕ ಸುಮಂಗಲ ಸತ್ಯರಾಜನ್ ॥ ೫ ॥

[ಯಜುರ್ವೇದೇ ಅ. ೨೦, ಮಂ. ೪]

[ಅರ್ಥ:_ "ಓ ಸತ್ಯಕೀರ್ತಿ, ಸುಮಂಗಳಕಾರಕ, ಸತ್ಯಪ್ರಕಾಶಕನೇ! ನೀನು ಸುಖಸ್ವರೂಪನಾಗಿದ್ದೀಯೆ! ಅತ್ಯಂತ ಆನಂದಯುಕ್ತನಾಗಿದ್ದೀಯೆ! ನಿನ್ನನ್ನು ಸುಖಕ್ಕಾಗಿಯೂ, ಹಾಗೂ ಆನಂದಕ್ಕಾಗಿಯೂ [ನಾವು ಆಶ್ರಯಿಸುತ್ತೇವೆ.] "

(ಯಜುರ್ವೇದಃ ೨೦. ೪)]

ಭಾಷ್ಯಮ್_

(ಕೋಽಸಿ) ಹೇ ಪರಮಾತ್ಮನ್! ತ್ವಂ ಸುಖಸ್ವರೂಪೋಽಸಿ. ಭವಾನಸ್ಮಾನಪಿ ಸುರಾಜ್ಯೇನ ಸುಖಯುಕ್ತಾನ್ ಕರೋತು.

(ಕತಮೋಽಸಿ) ತ್ವಮತ್ಯಂತಾನಂದಯುಕ್ತೋಽಸಿ. ಅಸ್ಮಾನಪಿ ರಾಜಸಭಾಪ್ರಬಂಧೇನಾತ್ಯಂತಾನಂದಯುಕ್ತಾನ್ ಸಂಪಾದಯ.

(ಕಸ್ಮೈ ತ್ವಾ) ಅತೋ ನಿತ್ಯಸುಖಾಯ ತ್ವಾಮಾಶ್ರಯಾಮಃ.

ತಥಾ (ಕಾಯ ತ್ವಾ) ಸುಖರೂಪರಾಜ್ಯಪ್ರದಾಯ ತ್ವಾಮುಪಾಸ್ಮಹೇ.

ಭಾಷ್ಯ_

(ಕೋಽಸಿ) ಓ ಪರಮಾತ್ಮ! ನೀವು ಸುಖಸ್ವರೂಪರಾಗಿದ್ದೀರಿ! ನೀವು ನಮ್ಮನ್ನು ಕೂಡ, ಉತ್ತಮ ರಾಜ್ಯದಿಂದ ಸುಖಯುಕ್ತರನ್ನಾಗಿ ಮಾಡಿ!

(ಕತಮೋಽಸಿ) ನೀವು ಅತ್ಯಂತ ಆನಂದಯುಕ್ತರಾಗಿದ್ದೀರಿ! ನಮ್ಮನ್ನು ಕೂಡ, ರಾಜಸಭಾಪ್ರಬಂಧದ ಮೂಲಕ ಅತ್ಯಂತ ಆನಂದಯುಕ್ತರನ್ನಾಗಿ ಮಾಡಿ!

ಅಂದರೆ, ಓ ಮಹಾರಾಜೇಶ್ವರ! ನೀವು ಸುಖಸ್ವರೂಪರೂ ಮತ್ತು ಅತ್ಯಂತ ಆನಂದವನ್ನುಂಟು ಮಾಡುವವರೂ ಆಗಿದ್ದೀರಿ! ನಮ್ಮಗಳನ್ನೂ ಕೂಡ, ಎಲ್ಲ ಆನಂದಗಳಿಂದ ಯುಕ್ತರನ್ನಾಗಿ ಮಾಡಿ!

(ಕಸ್ಮೈ ತ್ವಾ) ಆದುದರಿಂದ, ನಿತ್ಯಸುಖಕ್ಕಾಗಿ ನಾವು ನಿಮ್ಮನ್ನು ಆಶ್ರಯಿಸುತ್ತೇವೆ.

ಮತ್ತು (ಕಾಯ ತ್ವಾ) ಸುಖರೂಪವಾದ ರಾಜ್ಯವನ್ನು [ನಮಗೆ] ಕೊಡುವುದಕ್ಕಾಗಿ ನಿಮ್ಮನ್ನು ನಾವು ಉಪಾಸಿಸುತ್ತೇವೆ.

ಅಂದರೆ, ಅತ್ಯಂತ ಸುಖ, ಶ್ರೇಷ್ಠವಿಚಾರ ಮತ್ತು ಆನಂದಕ್ಕಾಗಿ ನಾವೆಲ್ಲರೂ ನಿಮ್ಮ ಶರಣವನ್ನು ಪಡೆದಿದ್ದೇವೆ. ಏಕೆಂದರೆ, ಇದರಿಂದಲೇ ನಮಗೆ ಪೂರ್ಣ ರಾಜ್ಯವೂ, ಹಾಗೂ ಸುಖವೂ ನಿಸ್ಸಂದೇಹವಾಗಿ ಪ್ರಾಪ್ತವಾಗಬಲ್ಲದು!

(ಸುಶ್ಲೋಕ) ಹೇ ಸತ್ಯಕೀರ್ತ್ತೇ!

(ಸುಶ್ಲೋಕ) ಓ ಸರ್ವೋತ್ತಮ ಕೀರ್ತಿಯನ್ನು ಕೊಡುವವರೇ!

(ಸುಮಂಗಲ) ಹೇ ಸುಷ್ಠುಮಂಗಲಮಯ ಸುಮಂಗಲಕಾರಕ!

(ಸುಮಂಗಲ) ಓ ಶೋಭನಮಂಗಳರೂಪರೂ, ಉತ್ತಮ ಆನಂದದಾಯಕರೂ (ಆದ ಜಗದೀಶ್ವರ!)

(ಸತ್ಯರಾಜನ್) ಹೇ ಸತ್ಯಪ್ರಕಾಶಕ ಸತ್ಯರಾಜ್ಯ-ಪ್ರದೇಶ್ವರ!

(ಸತ್ಯರಾಜನ್) ಓ ಸತ್ಯಪ್ರಕಾಶಕರೂ, ಸತ್ಯರಾಜ್ಯವನ್ನು ಕೊಡುವವರೂ ಆದ ಪರಮೇಶ್ವರ!

ಅಂದರೆ, ಓ ಸತ್ಯಸ್ವರೂಪ! ಮತ್ತು ಸತ್ಯಪ್ರಕಾಶಕ!

ಅಸ್ಮದ್ರಾಜಸಭಾಯಾ ಭವಾನೇವ ಮಹಾ-ರಾಜಾಧಿರಾಜೋಽಸ್ತೀತಿ ವಯಂ ಮನ್ಯಾಮಹೇ ॥ ೫ ॥

ನಮ್ಮ ಈ ರಾಜಸಭೆಯ ಮಹಾರಾಜಾಧಿರಾಜರು ನೀವೇ ಆಗಿದ್ದೀರಿ, ಎಂಬುದಾಗಿ ನಾವು ತಿಳಿದಿರುತ್ತೇವೆ.

ಅಂದರೆ, ನಮ್ಮೆಲ್ಲರ ರಾಜರೂ, ಹಾಗೂ ಎಲ್ಲಾ ಸುಖಗಳನ್ನೂ ಕೊಡುವವರೂ ನೀವೇ ಆಗಿರುತ್ತೀರಿ! [೫]

ಅಲಂಕಾರದಿಂದ ರಾಜ್ಯಾಂಗಗಳ ವರ್ಣನೆ

[ಋಷಿಃ_ ಪ್ರಜಾಪತಿಃ ; ದೇವತಾ_ ಪ್ರಜಾಪತಿಃ ; ಛಂದಃ_ ಅನುಷ್ಟುಪ್ ; ಸ್ವರಃ_ ಗಾಂಧಾರಃ]

ಶಿರೋ ಮೇ ಶ್ರೀರ್ಯಶೋ ಮುಖಂ ತ್ವಿಷಿಃ ಕೇಶಾಶ್ಚ ಶ್ಮಶ್ರೂಣಿ ।
ರಾಜಾ ಮೇ ಪ್ರಾಣೋಽಅಮೃತಗ್ಂ ಸಮ್ರಾಟ್ ಚಕ್ಷುರ್ವಿರಾಟ್ ಶ್ರೋತ್ರಮ್ ॥ ೬ ॥

[ಯಜುರ್ವೇದೇ ಅ. ೨೦, ಮಂ. ೫]

[ಅರ್ಥ:_ "ಶ್ರೀ ನನ್ನ ಶಿರಸ್ಸಿನಂತೆಯೂ, ಯಶಸ್ಸು ನನ್ನ ಮುಖದಂತೆಯೂ, ಕಾಂತಿಯು ಕೂದಲು, ಹಾಗೂ ಗಡ್ಡ-ಮೀಸೆಗಳಂತೆಯೂ, ರಾಜನು ನನ್ನ ಪ್ರಾಣದಂತೆಯೂ, ಮೋಕ್ಷಸುಖವು ಚಕ್ರವರ್ತಿಯಂತೆಯೂ, ಮತ್ತು ವಿವಿಧಪ್ರಕಾಶಯುಕ್ತ ಶ್ರೋತ್ರವು ಚಕ್ಷುವಿನಂತೆಯೂ ಇದೆ."

(ಯಜುರ್ವೇದ: ೨೦. ೫)]

ಭಾಷ್ಯಮ್_

ಭಾಷ್ಯ_

ಸಭಾಧ್ಯಕ್ಷ ಏವಂ ಮನ್ಯೇತ_

ಸಭಾಧ್ಯಕ್ಷನು ಹೇಗೆ ತಿಳಿಯಬೇಕೆಂದರೆ_

ಅಂದರೆ, ಸಭಾಧ್ಯಕ್ಷನೂ, ಸಭಾಸದರೂ, ಮತ್ತು ಪ್ರಜೆಗಳೂ ಹೇಗೆ ನಿಶ್ಚಯವಾಗಿ ತಿಳಿಯಬೇಕೆಂದರೆ_

(ಶಿರೋ ಮೇ ಶ್ರೀಃ) ರಾಜ್ಯಶ್ರೀರ್ಮಮ ಶಿರೋವತ್ ;

(ಶಿರೋ ಮೇ ಶ್ರೀಃ) ರಾಜ್ಯಶ್ರೀಯು ನನ್ನ ಶಿರಸ್ಸಿನಂತೆಯೂ ;

ಅಂದರೆ, ಶ್ರೀ ನನ್ನ ಶಿರಸ್ಥಾನಿಯಾಗಿಯೂ ;

(ಯಶೋ ಮುಖಮ್) ಉತ್ತಮಕೀರ್ತಿರ್ಮುಖವತ್ ;

(ಯಶೋ ಮುಖಮ್) ಉತ್ತಮ ಕೀರ್ತಿಯು ಮುಖದಂತೆಯೂ ;

(ತ್ವಿಷಿಃ ಕೇಶಾಶ್ಚ ಶ್ಮಶ್ರೂಣಿ) ಸತ್ಯನ್ಯಾಯದೀಪ್ತಿಃ ಮಮ ಕೇಶಶ್ಮಶ್ರುವತ್ ;

(ತ್ವಿಷಿಃ ಕೇಶಾಶ್ಚ ಶ್ಮಶ್ರೂಣಿ) ಸತ್ಯನ್ಯಾಯದ ಕಾಂತಿಯು ನನ್ನ ಕೂದಲು, ಗಡ್ಡ-ಮೀಸೆಗಳಂತೆಯೂ ;

ಅಂದರೆ, ಸತ್ಯಗುಣಗಳ ಪ್ರಕಾಶವು ನನ್ನ ಕೂದಲು ಮತ್ತು ಗಡ್ಡ-ಮೀಸೆಗಳಂತೆಯೂ ;

(ರಾಜಾ ಮೇ ಪ್ರಾಣಃ) ಪರಮೇಶ್ವರಃ ರಾಜವತ್ ;

(ರಾಜಾ ಮೇ ಪ್ರಾಣಃ) ನನ್ನ ಪ್ರಾಣವು, ಎಂದರೆ ಪರಮೇಶ್ವರನು ರಾಜನಂತೆಯೂ ;

ಅಂದರೆ, ಎಲ್ಲದರ ಆಧಾರವೂ ಮತ್ತು ಜೀವನ ಹೇತುವೂ ಆದ ಈಶ್ವರನೇ ನನ್ನ ಪ್ರಾಣಪ್ರಿಯನಾದ ರಾಜನಂತೆ ಇರುತ್ತಾನೆ, (ಎಂದರ್ಥ) ;

[(ಅಮೃತಂ ಸಮ್ರಾಟ್) ಮರಣಧರ್ಮರಹಿತಂ ಬ್ರಹ್ಮ ಸಮ್ಯಕ್ ಪ್ರಕಾಶಮಾನಮ್] ;*

(ಅಮೃತಂ ಸಮ್ರಾಟ್) ಮರಣಧರ್ಮರಹಿತನಾದ ಬ್ರಹ್ಮನು ಉತ್ತಮ ಪ್ರಕಾಶವಂತನಾಗಿಯೂ ;

ಅಂದರೆ, ಅಮೃತಸ್ವರೂಪನಾದ ಬ್ರಹ್ಮ ಮತ್ತು ಮೋಕ್ಷಸುಖವೇ ನನ್ನ ಚಕ್ರವರ್ತಿರಾಜನಂತೆಯೂ ;

(ಚಕ್ಷುರ್ವಿರಾಟ್ ಶ್ರೋತ್ರಮ್) ಸತ್ಯವಿದ್ಯಾದಿಗುಣಾನಾಂ ವಿವಿಧಪ್ರಕಾಶಕರಣಂ ಶ್ರೋತ್ರಂ ಚಕ್ಷುರ್ವತ್ ;

(ಚಕ್ಷುರ್ವಿರಾಟ್ ಶ್ರೋತ್ರಮ್) ಸತ್ಯವಿದ್ಯೆ ಮೊದಲಾದ ಗುಣಗಳ ವಿವಿಧ ಪ್ರಕಾಶ ಮಾಡುವ ಶ್ರೋತ್ರವು ಚಕ್ಷುವಿನಂತೆಯೂ ಇರುತ್ತದೆ.

ಅಂದರೆ, ಯಾವುದು ಅನೇಕ ಸತ್ಯವಿದ್ಯೆಗಳ ಪ್ರಕಾಶದಿಂದ ಕೂಡಿದ ನನ್ನ ಶ್ರೋತ್ರವಿದೆಯೋ, ಅದೇ ನನ್ನ ಕಣ್ಣಾಗಿರುತ್ತದೆ.

ಏವಂ ಸಭಾಸದೋಽಪಿ ಮನ್ಯೇರನ್.

ಹೀಗೆಂದು ಸಭಾಸದರೂ ಕೂಡ, ತಿಳಿಯಬೇಕು!

ಏತಾನಿ ಸಭಾಧ್ಯಕ್ಷಸ್ಯ ಸಭಾಸದಾಂ ಚಾಂಗಾನಿ ಸಂತೀತಿ ಸರ್ವೈಃ ವಿಜಾನೀಯುಃ ॥ ೬ ॥

ಸಭಾಧ್ಯಕ್ಷನ, ಹಾಗೂ ಸಭಾಸದರ ಅಂಗಗಳೂ ಕೂಡ, ಇವೇ ಆಗಿರುತ್ತವೆ, ಎಂದು ಎಲ್ಲರೂ ತಿಳಿಯಬೇಕು! [೬]

* ಯಜುರ್ವೇದಭಾಷ್ಯಾದತಾನೀತೋಽಯಮಂಶಃ _ಅನು.

[ಋಷಿಃ_ ಪ್ರಜಾಪತಿಃ ; ದೇವತಾ_ ರಾಜಾ ; ಛಂದಃ_ ನಿಚೃದ್ ಗಾಯತ್ರೀ ; ಸ್ವರಃ_ ಷಡ್ಜಃ]

ಬಾಹೂ ಮೇ ಬಲಮಿಂದ್ರಿಯಗ್ಂ ಹಸ್ತೌ ಮೇ ಕರ್ಮ ವೀರ್ಯ್ಯಮ್ ।
ಆತ್ಮಾ ಕ್ಷತ್ರಮುರೋ ಮಮ ॥ ೭ ॥

[ಯಜುರ್ವೇದೇ ಅ. ೨೦, ಮಂ. ೭]

[ಅರ್ಥ:_ "ಬಲವು ನನ್ನ ಎರಡು ಬಾಹುಗಳಿದ್ದಂತೆಯೂ, ಇಂದ್ರಿಯವು ಎರಡು ಹಸ್ತಗಳಿದ್ದಂತೆಯೂ, ಪರಾಕ್ರಮವು ನನ್ನ ಕರ್ಮವಿದ್ದಂತೆಯೂ, ಕ್ಷತ್ರರೂಪ ಆತ್ಮವು ನನ್ನ ಎದೆಯಂತೆಯೂ ಇವೆ."

(ಯಜುರ್ವೇದಃ ೨೦. ೭)]

ಭಾಷ್ಯಮ್_

(ಬಾಹೂ ಮೇ ಬಲಮ್) ಯದುತ್ತಮಂ ಬಲಂ ತನ್ಮಮ ಬಾಹುವದಸ್ತಿ;

(ಇಂದ್ರಿಯಗ್ಂ ಹಸ್ತೌ ಮೇ) ಶುದ್ಧಂ ವಿದ್ಯಾಯುಕ್ತಂ ಮನಃ ಶ್ರೋತ್ರಾದಿಕಂ ಚ ಮಮ ಗ್ರಹಣಸಾಧನವತ್;

(ಕರ್ಮ ವೀರ್ಯ್ಯಮ್) ಯದುತ್ತಮಪರಾಕ್ರಮಧಾರಣಂ ತನ್ಮಮ ಕರ್ಮವತ್ ;

(ಆತ್ಮಾ ಕ್ಷತ್ರಮುರೋ ಮಮ) ಯನ್ಮಮ ಹೃದಯಂ ತತ್ ಕ್ಷತ್ರವತ್ ॥ ೭ ॥

ಭಾಷ್ಯ_

(ಬಾಹೂ ಮೇ ಬಲಮ್) ಯಾವುದು ಉತ್ತಮ ಬಲವಾಗಿದೆಯೋ, ಅದು ನನ್ನ ಬಾಹುವಿನಂತಿದೆ ;

ಅಂದರೆ, ಯಾವ ಪೂರ್ಣಬಲವಿದೆಯೋ, ಅದು ನನ್ನ ಭುಜದಂತಿದೆ ;

(ಇಂದ್ರಿಯಗ್ಂ ಹಸ್ತೌ ಮೇ) ಶುದ್ಧವೂ, ವಿದ್ಯಾಯುಕ್ತವೂ ಆದ ಮನಸ್ಸು, ಹಾಗೂ ಶ್ರೋತ್ರ ಮೊದಲಾದುವು ನನ್ನ ಗ್ರಹಣಸಾಧನವಾದ ಎರಡು ಹಸ್ತಗಳಂತೆ [ಇವೆ];

(ಕರ್ಮ ವೀರ್ಯಮ್) ಯಾವುದು ಉತ್ತಮ ಪರಾಕ್ರಮಧಾರಣವಾಗಿದೆಯೋ, ಅದು ನನ್ನ ಕರ್ಮದಂತೆ [ಇದೆ] ;

ಅಂದರೆ, ಯಾವ ಉತ್ತಮ ಕರ್ಮ, ಹಾಗೂ ಪರಾಕ್ರಮದಿಂದ ಕೂಡಿದ ಇಂದ್ರಿಯ ಮತ್ತು ಮನಸ್ಸು ಇವೆಯೋ, ಅವು ನನ್ನ ಕೈಗಳಂತಿವೆ ;

(ಆತ್ಮಾ ಕ್ಷತ್ರಮುರೋ ಮಮ) ಯಾವುದು ನನ್ನ ಆತ್ಮಾ ಮತ್ತು ಹೃದಯವೋ, ಅದು 'ಕ್ಷತ್ರ'ದಂತೆ ಇದೆ.

ಅಂದರೆ, ಯಾವ ರಾಜಧರ್ಮ, ಶೌರ್ಯ್ಯ, ಧೈರ್ಯ್ಯ ಮತ್ತು ಹೃದಯದ ಜ್ಞಾನ ಇವೆಯೋ, ಅವೆಲ್ಲವೂ ನನ್ನ ಆತ್ಮಕ್ಕೆ ಸಮಾನವಾಗಿವೆ. [೭]

[ಋಷಿಃ_ ಪ್ರಜಾಪತಿಃ ; ದೇವತಾ_ ಸಭಾಪತಿಃ ; ಛಂದಃ_ ನಿಚೃದ್ ಅನುಷ್ಟುಪ್ ; ಸ್ವರಃ_ ಗಾಂಧಾರಃ]

ಪೃಷ್ಠೀರ್ಮೇ ರಾಷ್ಟ್ರಮುದರಮಗ್ಂಸೌ ಗ್ರೀವಾಶ್ಚ ಶ್ರೋಣೀ ।
ಊರೂ ಅರತ್ನೀ ಜಾನುನೀ ವಿಶೋ ಮೇಽಂಗಾನಿ ಸರ್ವತಃ ॥ ೮ ॥

[ಯಜುರ್ವೇದೇ ಅ. ೨೦, ಮಂ. ೮]

[ಅರ್ಥ:_ "ರಾಷ್ಟ್ರವು ನನ್ನ ಬೆನ್ನಿನಂತೆ ಇದೆ. ಮತ್ತು ಪ್ರಜೆಗಳು ನನ್ನ ಉದರದಂತೆಯೂ, ಬಾಹುಮೂಲದಂತೆಯೂ*, ಕೊರಳಿನಂತೆಯೂ, ಸೊಂಟದಂತೆಯೂ, ತೊಡೆಗಳಂತೆಯೂ, ಮೊಳಕೈಯಂತೆಯೂ ಮತ್ತು ಮೊಣಕಾಲುಗಳಂತೆಯೂ, ಹೀಗೆ ನನ್ನ ಅಂಗಗಳು ಸರ್ವತ್ರ ಇವೆ."

(ಯಜುರ್ವೇದಃ ೨೦. ೩)]

ಭಾಷ್ಯಮ್_	ಭಾಷ್ಯ_
(ಪೃಷ್ಠೀರ್ಮೇ ರಾಷ್ಟ್ರಮ್) ಯದ್ ರಾಷ್ಟ್ರಂ ಮಮ ಪೃಷ್ಠಭಾಗವತ್ ;	(ಪೃಷ್ಠೀರ್ಮೇ ರಾಷ್ಟ್ರಮ್) ಯಾವುದು ರಾಷ್ಟ್ರವಾಗಿದೆಯೋ, ಅದು ನನ್ನ ಬೆನ್ನಿನ ಪ್ರದೇಶದಂತೆಯೂ; ಅಂದರೆ, ಉತ್ತಮ ರಾಜ್ಯವು ನನ್ನ ಬೆನ್ನಿಗೆ ಸಮಾನವಾಗಿಯೂ;
(ಉದರಮಗ್ಂಸೌ) ಯೌ ಸೇನಾಕೋಶೌ ಸ್ತಸ್ತತ್ ಕರ್ಮ ಮಮ ಹಸ್ತಮೂಲೋದರವತ್ ;	(ಉದರಮಗ್ಂಸೌ) ಯಾವುದು ಸೈನ್ಯ ಮತ್ತು ಕೋಶಗಳಾಗಿವೆಯೋ, ಅವು ನನ್ನ ಹಸ್ತಮೂಲ, ಹಾಗೂ ಉದರದಂತೆಯೂ ;
(ಗ್ರೀವಾಶ್ಚ ಶ್ರೋಣೀ) ಯತ್ ಪ್ರಜಾಯಾಃ ಸಖೇನ ಭೂಷಣಂ ಪುರುಷಾರ್ಥಿಕರಣಂ ಚ ತತ್ ಕರ್ಮ ಮಮ ನಿತಂಬಾಂಗವತ್ ;	(ಗ್ರೀವಾಶ್ಚ ಶ್ರೋಣೀ) ಪ್ರಜೆಗಳನ್ನು ಸುಖದಿಂದ ಅಲಂಕೃತರನ್ನಾಗಿಯೂ, ಹಾಗೂ ಪುರುಷಾರ್ಥಿಗಳನ್ನಾಗಿಯೂ ಮಾಡುವ ಯಾವ ಕೆಲಸವಿದೆಯೋ, ಅದು ನನ್ನ ನಿತಂಬ-ಅವಯವದಂತೆಯೂ; ಅಂದರೆ, ಯಾವುದು ಪ್ರಜೆಗಳನ್ನು ಭೂಷಿತರನ್ನಾಗಿಯೂ, ಹಾಗೂ ಪುರುಷಾರ್ಥಿಗಳನ್ನಾಗಿಯೂ ಮಾಡುವುದು ಇದೆಯೋ, ಅದು ನನ್ನ ಕಂಠ ಮತ್ತು ಶ್ರೋಣಿ, ಎಂದರೆ ನಾಭಿಯ ಕೆಳಭಾಗದ ಸ್ಥಾನಕ್ಕೆ+ ಸಮಾನವಾಗಿಯೂ;

* ಹೆಗಲು _ಅನು.

+ ನಿತಂಬ ಅಥವಾ ಸೊಂಟವು ನಾಭಿಗೆ ಕೆಳಭಾಗದಲ್ಲಿ ಇರುತ್ತದೆ, ಎಂದು ತಿಳಿಯಬೇಕು _ಅನು.

(ಊರೂ ಅರತ್ನೀ) ಯತ್ ಪ್ರಜಾಯಾ ವ್ಯಾಪಾರೇ ಗಣಿತವಿದ್ಯಾಯಾಂ ಚ ನಿಪುಣೀಕರಣಂ ತನ್ಮಮೋರ್ವರತ್ನ್ಯಂಗವದಸ್ತಿ.

(ಊರೂ ಅರತ್ನೀ) ಪ್ರಜೆಗಳನ್ನು ವ್ಯಾಪಾರದಲ್ಲಿಯೂ, ಹಾಗೂ ಗಣಿತವಿದ್ಯೆಯಲ್ಲಿಯೂ ಕೂಡ, ನಿಪುಣರನ್ನಾಗಿ ಮಾಡುವ ಯಾವ [ಕೆಲಸ]ವಿದೆಯೋ, ಅದು ನನ್ನ ಎರಡು ತೊಡೆಗಳಂತೆಯೂ, ಹಾಗೂ ಮೊಳಕೈಗಳಂತೆಯೂ ಇದೆ.

(ಜಾನುನೀ) ಯತ್ಪ್ರಜಾರಾಜಸಭಯೋಃ ಸರ್ವಥಾ ಮೇಲರಕ್ಷಣಂ ತನ್ಮಮ ಕರ್ಮ ಜಾನುವತ್*;

(ಜಾನುನೀ) ಪ್ರಜೆಗಳ, ಮತ್ತು ರಾಜಸಭೆಯ ನಡುವೆ ಸರ್ವಥಾ ಮಿಳನದ ರಕ್ಷಣೆಯನ್ನು ಮಾಡುವ ಯಾವ ಕೆಲಸವಿದೆಯೋ, ಅದು ನನ್ನ ಮೊಣಕಾಲಿನಂತೆ ಇದೆ.*

(ವಿಶೋ ಮೇಽಂಗಾನಿ ಸರ್ವತಃ) [ಪ್ರಜಾಃ ಮಮ ಸರ್ವತೋಽಂಗಾನಿವತ್ ಸಂತಿ.]

(ವಿಶೋ ಮೇಽಂಗಾನಿ ಸರ್ವತಃ) ಪ್ರಜೆಗಳು ನನ್ನ ಎಲ್ಲೆಡೆಯ ಅಂಗಗಳೂ ಇದ್ದಂತೆ ಇರುತ್ತಾರೆ.

ಅಂದರೆ, ಈ ರೀತಿಯಾಗಿ, ಪ್ರಜಾಪಾಲನೆಯಲ್ಲಿ ಯಾವ ಉತ್ತಮ ಕರ್ಮಗಳನ್ನು ಮಾಡುತ್ತೇವೋ, ಅವೆಲ್ಲವೂ ನನ್ನ ಅಂಗಗಳಿಗೆ ಸಮಾನವಾಗಿರುತ್ತವೆ.

ಏವಂ ಪೂರ್ವೋಕ್ತಾನಿ ಸರ್ವಾಣಿ ಕರ್ಮಾಣಿ ಮಮಾವಯವತ್ ಸಂತಿ.

ಈ ರೀತಿಯಾಗಿ ಮೊದಲು ಹೇಳಿದ ಕೆಲಸಗಳೆಲ್ಲವೂ ನನ್ನ ಅವಯವಗಳಂತೆ ಇರುತ್ತವೆ.

ಯಥಾ ಸ್ವಾಂಗೇಷು ಪ್ರೀತಿಸ್ತತ್ಪಾಲನೇ ಪುರುಷಸ್ಯ ಶ್ರದ್ಧಾ ಭವತಿ, ತಥಾ ಪ್ರಜಾಪಾಲನೇ ಚ ಸ್ವಕೀಯಾ ಬುದ್ಧಿಸ್ಸರ್ವೈಃ ಕಾರ್ಯೇತಿ ॥ ೮ ॥

ಹೇಗೆ, ತನ್ನದೇ ಆದ ಅಂಗಗಳಲ್ಲಿ ಮನುಷ್ಯನಿಗೆ ಪ್ರೀತಿಯೂ, ಮತ್ತು ಅವುಗಳ ಪಾಲನೆಯಲ್ಲಿ ಶ್ರದ್ಧೆಯೂ ಇರುತ್ತದೋ, ಹಾಗೆಯೇ ಪ್ರಜಾಪಾಲನೆಯಲ್ಲಿಯೂ ಕೂಡ, ಎಲ್ಲರೂ ಸ್ವಕೀಯಬುದ್ಧಿಯನ್ನು ಪ್ರಯೋಗಿಸಬೇಕು! [೮]

* ಇತೋಽಗ್ರೇ ಗ್ರಂಥಸ್ಯ ಹಸ್ತಲೇಖೇ ಯಜುರ್ವೇದಸ್ಯ ವಿಂಶಸ್ಯಾಧ್ಯಾಯಸ್ಯ ನವಮಮಂತ್ರಶ್ಚ ತಸ್ಯ ಭಾಷ್ಯಂ ಚ ವಿದ್ಯೇತೇ. ಅಯಂ ಮಂತ್ರಸ್ತದ್ ಭಾಷ್ಯಂ ಚ ಪ್ರೂಫ್(proof)ವಾಚನ-ಸಮಯೇ ಗ್ರಂಥಕರ್ತ್ರಾಽಪಾಕೃತಮಿತಿ ಪ್ರತೀಯತೇ. ಪಾಠಕಾನಾಂ ಜ್ಞಾನಲಾಭಾಯಾಯಂ ಮಂತ್ರಶ್ಚ ತದ್ಭಾಷ್ಯಂ ಚಾಧ ಉದ್ಧ್ರಿಯೇತೇ _ಅನು.

* ಇದರ ಮುಂದೆ, ಗ್ರಂಥದ ಹಸ್ತಲೇಖದಲ್ಲಿ ಯಜುರ್ವೇದದ ಇಪ್ಪತ್ತನೆಯ ಅಧ್ಯಾಯದ ಒಂಬತ್ತನೆಯ ಮಂತ್ರವೂ, ಹಾಗೂ ಅದರ ಸಂಸ್ಕೃತಭಾಷ್ಯವೂ ವಿದ್ಯಮಾನವಾಗಿದೆ. ಆದರೆ, ಈ ಮಂತ್ರವೂ, ಹಾಗೂ ಇದರ ಭಾಷ್ಯವೂ ಗ್ರಂಥಕರ್ತರಿಂದ 'ಪ್ರೂಫ್‌ವಾಚನ'ದ ಸಮಯದಲ್ಲಿ ತೆಗೆದುಹಾಕಲ್ಪಟ್ಟವು, ಎಂದು ಕಂಡು ಬರುತ್ತದೆ. ಪಾಠಕರ ಜ್ಞಾನಲಾಭಕ್ಕಾಗಿ ಈ ಮಂತ್ರವೂ, ಹಾಗೂ ಇದರ ಭಾಷ್ಯವೂ ಕೆಳಗೆ ಉದ್ಧರಿಸಲ್ಪಡುತ್ತವೆ _ಅನು.

[ಋಷಿಃ_ ಪ್ರಜಾಪತಿಃ ; ದೇವತಾ_ ಸಭೇಶಃ ; ಛಂದಃ_ ನಿಚೃಜ್ಜಗತೀ ; ಸ್ವರಃ_ ನಿಷಾದಃ]

ನಾಭಿರ್ಮೇ ಚಿತ್ತಂ ವಿಜ್ಞಾನಂ ಪಾಯುರ್ಮೇಽಪಚಿತಿರ್ಭಸತ್ ।
ಆನಂದನಂದಾವಾಂಡೌ ಮೇ ಭಗಃ ಸೌಭಾಗ್ಯಂ ಪಸಃ ।
ಜಂಘಾಭ್ಯಾಂ ಪದ್ಭ್ಯಾಂ ಧರ್ಮೋಽಸ್ಮಿ ವಿಶಿ ರಾಜಾ ಪ್ರತಿಷ್ಠಿತಃ ॥ ೯ ॥

[ಯಜುರ್ವೇದೇ ಅ. ೨೦, ಮಂ. ೯]

→

ಸರ್ವತ್ರ ರಾಜನ ಪ್ರತಿಷ್ಠೆ

[ಋಷಿಃ_ ಪ್ರಜಾಪತಿಃ ; ದೇವತಾ_ ಸಭೇಶಃ ; ಛಂದಃ_ ಸ್ವರಾಟ್ ಶಕ್ವರೀ ; ಸ್ವರಃ_ ಧೈವತಃ]

ಪ್ರತಿ ಕ್ಷತ್ರೇ ಪ್ರತಿ ತಿಷ್ಠಾಮಿ ರಾಷ್ಟ್ರೇ

ಪ್ರತ್ಯಶ್ವೇಷು ಪ್ರತಿ ತಿಷ್ಠಾಮಿ ಗೋಷು ।

ಪ್ರತ್ಯಂಗೇಷು ಪ್ರತಿ ತಿಷ್ಠಾಮ್ಯಾತ್ಮನ್

ಪ್ರತಿ ಪ್ರಾಣೇಷು ಪ್ರತಿ ತಿಷ್ಠಾಮಿ ಪುಷ್ಟೇ

ಪ್ರತಿ ದ್ಯಾವಾಪೃಥಿವ್ಯೋಃ ಪ್ರತಿ ತಿಷ್ಠಾಮಿ ಯಜ್ಞೇ ॥ ೯ ॥

[ಯಜುರ್ವೇದೇ ಅ. ೨೦, ಮಂ. ೧೦]

[ಅರ್ಥ:_ "ನಾನು ರಾಜ್ಯದಲ್ಲಿ ಪ್ರತಿಷ್ಠಿತನಾಗಿದ್ದೇನೆ; ರಾಷ್ಟ್ರದಲ್ಲಿ ಪ್ರತಿಷ್ಠಿತನಾಗಿದ್ದೇನೆ. ಅಶ್ವಗಳಲ್ಲಿ ಪ್ರತಿಷ್ಠಿತನಾಗಿದ್ದೇನೆ; ಗೋವುಗಳಲ್ಲಿ ಪ್ರತಿಷ್ಠಿತನಾಗಿದ್ದೇನೆ. ಅಂಗಗಳಲ್ಲಿ ಪ್ರತಿಷ್ಠಿತನಾಗಿದ್ದೇನೆ; ಆತ್ಮಗಳಲ್ಲಿ ಪ್ರತಿಷ್ಠಿತನಾಗಿದ್ದೇನೆ. ಪ್ರಾಣಗಳಲ್ಲಿ ಪ್ರತಿಷ್ಠಿತನಾಗಿದ್ದೇನೆ; ಪುಷ್ಟವಾದ ಪದಾರ್ಥಗಳಲ್ಲಿ ಪ್ರತಿಷ್ಠಿತನಾಗಿದ್ದೇನೆ; ದ್ಯುಲೋಕ-ಪೃಥಿವೀಲೋಕಗಳಲ್ಲಿ ಪ್ರತಿಷ್ಠಿತನಾಗಿದ್ದೇನೆ. ಯಜ್ಞದಲ್ಲಿ ಪ್ರತಿಷ್ಠಿತನಾಗಿದ್ದೇನೆ."

(ಯಜುರ್ವೇದಃ ೨೦. ೧೦)]

→ [ಅರ್ಥ:_ "ಚಿತ್ತವು ನನ್ನ ನಾಭಿಯಂತೆಯೂ, ವಿಜ್ಞಾನವು [ನನ್ನ] ಗುದದಂತೆಯೂ, ನನ್ನ ಸತ್ಕಾರವು ಯೋನಿಯಂತೆಯೂ, ಆನಂದ-ಹರ್ಷಗಳು [ನನ್ನ] ವೃಷಣಗಳಂತೆಯೂ, ನನ್ನ ಐಶ್ವರ್ಯ-ಸೌಭಾಗ್ಯವು ಲಿಂಗದಂತೆಯೂ, ಇವೆ. ನಾನು ತೊಡೆಗಳಿಂದಲೂ, ಕಾಲುಗಳಿಂದಲೂ ಧರ್ಮನಾಗಿದ್ದೇನೆ. ರಾಜನು ಪ್ರಜೆಗಳಲ್ಲಿ ಪ್ರತಿಷ್ಠಿತನಾಗಿರುತ್ತಾನೆ."

(ಯಜುರ್ವೇದಃ ೨೦. ೯)]

ಭಾಷ್ಯಮ್_

(ನಾಭಿರ್ಮೇ ಚಿತ್ತಮ್) ಯಚ್ಚಿತ್ತಂ ಸದಾ ಜ್ಞಾನರೂಪಮಸ್ತಿ ತನ್ಮಮ ನಾಭಿರಂಗವದ್ ಅಸ್ತಿ.

(ವಿಜ್ಞಾನಂ ಪಾಯುರ್ಮೇ.) ಯದ್ವಿಜ್ಞಾನಂ ತನ್ಮಮ ಪಾಯುರ್ಗುದೇಂದ್ರಿಯವದ್ ಅಸ್ತಿ.

(ಅಪಚಿತಿರ್ಭಸತ್) ಯಾಽಪಚಿತಿಃ ಪೂಜಾ ಸತ್ಕಾರೋಽಸ್ತಿ, ತತ್ ಸ್ತ್ರಿಯಾ ಪ್ರಜನನೇಂದ್ರಿಯವದ್ ಅಸ್ತಿ;

ಅರ್ಥಾತ್ ಪರಮೇಶ್ವರಪೂಜಾಽಽತ್ಮನ್ಯೇವ ಕಾರ್ಯಾ.

(ಆನಂದನಂದಾವಾಂಡೌ ಮೇ) ಯೇ ಆನಂದ-ಸಮೃದ್ಧೀ ತೇ ಮಮ ವೃಷಣಾಂಗವತ್ ಸ್ತಃ.

ಭಾಷ್ಯ_

(ನಾಭಿರ್ಮೇ ಚಿತ್ತಮ್) ಯಾವಾಗಲೂ ಜ್ಞಾನರೂಪವಾಗಿರುವ ಯಾವ ನನ್ನ ಚಿತ್ತವಿದೆಯೋ, ಅದು ನನ್ನ ನಾಭಿ, ಎಂಬ ಅಂಗದಂತೆ ಇದೆ.

(ವಿಜ್ಞಾನಂ ಪಾಯುರ್ಮೇ) ಯಾವ ವಿಜ್ಞಾನವಿದೆಯೋ, ಅದು ನನ್ನ 'ಪಾಯು', ಎಂದರೆ ಗುದೇಂದ್ರಿಯದಂತೆ ಇದೆ.

(ಅಪಚಿತಿರ್ಭಸತ್) ಯಾವ 'ಅಪಚಿತಿ', ಎಂದರೆ ಪೂಜೆ-ಸತ್ಕಾರವಿದೆಯೋ, ಅದು ಸ್ತ್ರೀಯ ಪ್ರಜನನ ಇಂದ್ರಿಯದಂತೆ ಇದೆ;

ಎಂದರೆ, ಪರಮೇಶ್ವರನ ಪೂಜೆಯು ಆತ್ಮದೊಳಗೇ ಮಾಡಲ್ಪಡಬೇಕು!

(ಆನಂದನಂದಾವಾಂಡೌ ಮೇ) ಯಾವ ಆನಂದ, ಹಾಗೂ ಸಮೃದ್ಧಿ ಇವೆಯೋ, ಅವು ನನ್ನ ವೃಷಣ, ಎಂಬ ಅಂಗದಂತೆ ಇವೆ.

→

ಭಾಷ್ಯಮ್_

(ಪ್ರತಿ ಕ್ಷತ್ರೇ ಪ್ರತಿ ತಿಷ್ಠಾಮಿ ರಾಷ್ಟ್ರೇ) ಅಹಂ ಪರಮೇಶ್ವರೋ ಧರ್ಮೇಣ ಪ್ರತೀತೇ ಕ್ಷತ್ರೇ ಪ್ರತಿಷ್ಠಿತೋ ಭವಾಮಿ; ವಿದ್ಯಾಧರ್ಮಪ್ರಚಾರಿತೇ ದೇಶೇ ಚ.

(ಪ್ರತ್ಯಶ್ವೇಷು.) ಪ್ರತ್ಯಶ್ವಂ ಪ್ರತಿಗಾಂ ಚ ತಿಷ್ಠಾಮಿ.

(ಪ್ರತ್ಯಂಗೇಷು.) ಸರ್ವಸ್ಯ ಜಗತೋಽಂಗಮಂಗಂ ಪ್ರತಿ ತಿಷ್ಠಾಮಿ ;

ತಥಾ ಚಾತ್ಮಾನಮಾತ್ಮಾನಂ ಪ್ರತಿ ತಿಷ್ಠಾಮಿ.

ಭಾಷ್ಯ_

(ಪ್ರತಿ ಕ್ಷತ್ರೇ ಪ್ರತಿ ತಿಷ್ಠಾಮಿ ರಾಷ್ಟ್ರೇ) ಪರಮೇಶ್ವರನಾದ ನಾನು ಧರ್ಮದಿಂದ ಪ್ರಸಿದ್ಧವಾದ ರಾಜ್ಯದಲ್ಲಿ ಪ್ರತಿಷ್ಠಿತನಾಗಿರುತ್ತೇನೆ; ಮತ್ತು ವಿದ್ಯೆ, ಹಾಗೂ ಧರ್ಮವು ಪ್ರಚಾರದಲ್ಲಿರುವ ದೇಶದಲ್ಲಿಯೂ ಕೂಡ.

ಅಂದರೆ, ಯಾವ ಮನುಷ್ಯರು ಮೇಲೆ ಹೇಳಿದ ರೀತಿಯಲ್ಲಿ ಉತ್ತಮ ಪುರುಷರ ಸಭೆಯ ಮೂಲಕ ನ್ಯಾಯಪೂರ್ವಕವಾಗಿ ರಾಜ್ಯವನ್ನಾಳುತ್ತಾರೋ, ಅವರಿಗಾಗಿ ಪರಮೇಶ್ವರನು ಪ್ರತಿಜ್ಞೆ ಮಾಡುತ್ತಾನೇನೆಂದರೆ_

ಎಲೈ ಮನುಷ್ಯರೇ! ನೀವೆಲ್ಲರೂ ಧರ್ಮಾತ್ಮರಾಗಿ, ನ್ಯಾಯದಿಂದ ರಾಜ್ಯವನ್ನಾಳಿರಿ! ಏಕೆಂದರೆ, ಯಾರು ಧರ್ಮಾತ್ಮರಾದ ಪುರುಷರಿರುತ್ತಾರೋ, ಅವರ ಕ್ಷತ್ರ-ಧರ್ಮ ಮತ್ತು ರಾಜ್ಯದಲ್ಲೆಲ್ಲಾ ನಾನು ಪ್ರಕಾಶಿತನಾಗಿರುತ್ತೇನೆ. ಮತ್ತು ಅವರು ಯಾವಾಗಲೂ ನನ್ನ ಸಮೀಪದಲ್ಲಿರುತ್ತಾರೆ.

(ಪ್ರತ್ಯಶ್ವೇಷು ಪ್ರತಿ ತಿಷ್ಠಾಮಿ ಗೋಷು) ಪ್ರತಿ ಅಶ್ವದಲ್ಲೂ ಮತ್ತು ಪ್ರತಿ ಗೋವಿನಲ್ಲೂ ನಾನು ಪ್ರತಿಷ್ಠಿತನಾಗಿದ್ದೇನೆ.

ಅಂದರೆ, ಅವರ ಸೇನೆಯ ಅಶ್ವ ಮತ್ತು ಗೋವು ಮೊದಲಾದ ಪಶುಗಳಲ್ಲಿಯೂ ಕೂಡ, ಸ್ವಸತ್ತೆಯಿಂದ ನಾನು ಪ್ರತಿಷ್ಠಿತನಾಗಿರುತ್ತೇನೆ.

(ಪ್ರತ್ಯಂಗೇಷು ಪ್ರತಿ ತಿಷ್ಠಾಮ್ಯಾತ್ಮನ್) ಸಮಸ್ತ ಜಗತ್ತಿನ ಅಂಗ-ಅಂಗದಲ್ಲೂ ನಾನು ಪ್ರತಿಷ್ಠಿತನಾಗಿದ್ದೇನೆ;

ಮತ್ತು ಆತ್ಮ-ಆತ್ಮದಲ್ಲೂ ಪ್ರತಿಷ್ಠಿತನಾಗಿದ್ದೇನೆ.

→

(ಭಗಃ ಸೌಭಾಗ್ಯಂ ಪಸಃ) ಯನ್ಮಮೈಶ್ವರ್ಯಂ ಸೌಭಾಗ್ಯ-ಮುತ್ತಮಂ ಸುಖಮಸ್ತಿ, ತನ್ಮಮ ಪಸೋ ಲಿಂಗೇಂದ್ರಿಯವದಸ್ತಿ.

(ಜಂಘಾಭ್ಯಾಂ ಪದ್‌ಭ್ಯಾಮ್) ಏವಮಹಂ ಜಂಘಾಭ್ಯಾಂ ಪದ್‌ಭ್ಯಾಂ ಯುಕ್ತೋ ಭೂತ್ವಾ ಧರ್ಮಾಽತ್ಮಾಸ್ಮಿ.

(ವಿಶಿ ರಾಜಾ ಪ್ರತಿ.) ಯೋ ವಿಶಿ ಪ್ರಜಾಯಾಂ ಸರ್ವಹಿತಕರಣಾದಿಗುಣೈಃ ಪ್ರತಿಷ್ಠಿತೋ ಭವತಿ ಸೋಽಸ್ಮಾಕಂ ರಾಜಾ ಸಭಾಧ್ಯಕ್ಷೋ ಭವಿತುಮರ್ಹತಿ ॥ ೯ ॥

(ಭಗಃ ಸೌಭಾಗ್ಯಂ ಪಸಃ) ಯಾವ ನನ್ನ ಐಶ್ವರ್ಯವೂ, ಮತ್ತು ಸೌಭಾಗ್ಯ, ಎಂದರೆ ಉತ್ತಮ ಸುಖವೂ ಇದೆಯೋ, ಅದು ನನ್ನ 'ಪಸ', ಎಂದರೆ ಲಿಂಗೇಂದ್ರಿಯದಂತೆ ಇದೆ.

(ಜಂಘಾಭ್ಯಾಂ ಪದ್‌ಭ್ಯಾಮ್) ಈ ರೀತಿಯಾಗಿ, ನಾನು ತೊಡೆಗಳಿಂದಲೂ, [ಹಾಗೂ] ಕಾಲುಗಳಿಂದಲೂ ಯುಕ್ತನಾಗಿದ್ದು, ಧರ್ಮಾತ್ಮನಾಗಿದ್ದೇನೆ.

(ವಿಶಿ ರಾಜಾ ಪ್ರತಿಷ್ಠಿತಃ) ಯಾವನು ಪ್ರಜೆಗಳಲ್ಲಿ ಎಲ್ಲರ ಹಿತವನ್ನು ಮಾಡುವುದು ಮೊದಲಾದ ಗುಣಗಳಿಂದ ಪ್ರತಿಷ್ಠಿತನಾಗಿರುತ್ತಾನೋ, ಅವನು ನಮ್ಮ ರಾಜಾ, ಎಂದರೆ ಸಭೆಯ ಅಧ್ಯಕ್ಷನಾಗಲು ಯೋಗ್ಯನಾಗುತ್ತಾನೆ. [೯]

ಅಂದರೆ, ಎಲ್ಲಾ ಸೈನ್ಯಗಳಲ್ಲೂ, ರಾಜನ ಅಂಗಗಳಲ್ಲೂ ಮತ್ತು ಅವುಗಳ ಆತ್ಮಗ್ರಳ ಒಳಗೂ ಯಾವಾಗಲೂ ಪ್ರತಿಷ್ಠಿತನಾಗಿರುತ್ತೇನೆ.

(ಪ್ರತಿ ಪ್ರಾಣೇಷು.) ಪ್ರಾಣಂ ಪ್ರಾಣಂ ಪ್ರತ್ಯೇವಂ ಪುಷ್ಟಂ ಪುಷ್ಟಂ ಪದಾರ್ಥಂ ಪ್ರತಿ ತಿಷ್ಠಾಮಿ.

(ಪ್ರತಿ ಪ್ರಾಣೇಷು ಪ್ರತಿ ತಿಷ್ಠಾಮಿ ಪುಷ್ಟೇ) ಪ್ರಾಣ-ಪ್ರಾಣದಲ್ಲೂ, ಹಾಗೂ ಪುಷ್ಟ-ಪುಷ್ಟವಾದ ಪದಾರ್ಥದಲ್ಲೂ ಕೂಡ, ನಾನು ಪ್ರತಿಷ್ಠಿತನಾಗಿದ್ದೇನೆ.

ಅಂದರೆ, ಅವರ ಪ್ರಾಣಗಳಲ್ಲೂ ಮತ್ತು ಪುಷ್ಟ ವ್ಯವಹಾರಗಳಲ್ಲಿಯೂ ಕೂಡ, ಯಾವಾಗಲೂ ವ್ಯಾಪಕನಾಗಿರುತ್ತೇನೆ.

(ಪ್ರತಿ ದ್ಯಾವಾಪೃಥಿವ್ಯೋಃ.) ದಿವಂ ದಿವಂ ಪ್ರತಿ ಪೃಥಿವೀಂ ಪೃಥಿವೀಂ ಪ್ರತಿ ಚ ತಿಷ್ಠಾಮಿ.

(ಪ್ರತಿ ದ್ಯಾವಾಪೃಥಿವ್ಯೋಃ ಪ್ರತಿ ತಿಷ್ಠಾಮಿ) ದ್ಯುಲೋಕ-ದ್ಯುಲೋಕಗಳಲ್ಲೂ ಮತ್ತು ಪೃಥಿವೀ-ಪೃಥಿವೀ ಲೋಕಗಳಲ್ಲೂ ನಾನು ಪ್ರತಿಷ್ಠಿತನಾಗಿದ್ದೇನೆ.

ಅಂದರೆ, ಎಷ್ಟು ಸೂರ್ಯ ಮೊದಲಾದ ಪ್ರಕಾಶರೂಪವಾದ, ಮತ್ತು ಪೃಥಿವೀ ಮೊದಲಾದ ಅಪ್ರಕಾಶರೂಪವಾದ ಜಗತ್ತುಗಳಿವೆಯೋ, ಅವುಗಳಲ್ಲೆಲ್ಲಾ ನಾನು ಪ್ರತಿಷ್ಠಿತನಾಗಿರುತ್ತೇನೆ.

(ಯಜ್ಞೇ.) ತಥಾ ಯಜ್ಞಂ ಯಜ್ಞಂ ಪ್ರತಿ ತಿಷ್ಠಾಮಿ.

(ಯಜ್ಞೇ.) ಮತ್ತು ಯಜ್ಞ-ಯಜ್ಞದಲ್ಲೂ ನಾನು ಪ್ರತಿಷ್ಠಿತನಾಗಿದ್ದೇನೆ.

ಅಂದರೆ, ಅಶ್ವಮೇಧಾದಿ ಯಜ್ಞಗಳಲ್ಲಿಯೂ ಕೂಡ, ನಾನು ಪ್ರತಿಷ್ಠಿತನಾಗಿರುತ್ತೇನೆ.

ಅಹಮೇವ ಸರ್ವತ್ರ ವ್ಯಾಪಕೋಽಸ್ಮೀತಿ.

ನಾನೇ ಸರ್ವತ್ರ ವ್ಯಾಪಕನಾಗಿದ್ದೇನೆ!

ಅಂದರೆ, ನಾನು ಸರ್ವದಾ ಎಲ್ಲದರಲ್ಲಿಯೂ ವ್ಯಾಪಕನಾಗಿರುವುದರಿಂದಲೇ ಪ್ರತಿಷ್ಠಿತನಾಗಿರುತ್ತೇನೆ. ಈ ರೀತಿಯಾಗಿ ನೀವೆಲ್ಲರೂ ನನ್ನನ್ನು ಎಲ್ಲಾ ಸ್ಥಾನಗಳಲ್ಲಿಯೂ ಪರಿಪೂರ್ಣನಾಗಿರುವಂತೆ ನೋಡಿರಿ!

ಮಾಮಿಷ್ಟದೇವಂ ಸಮಾಶ್ರಿತ್ಯ ಯೇ ರಾಜ-ಧರ್ಮಮನುಸರಂತಿ, ತೇಷಾಂ ಸದೈವ ವಿಜಯಾ-ಭ್ಯುದಯೌ ಭವತಃ.

ಇಷ್ಟದೇವನಾದ ನನ್ನನ್ನು ಸಮಾಶ್ರಯಿಸಿ, ಯಾರು ರಾಜಧರ್ಮವನ್ನು ಅನುಸರಿಸುತ್ತಾರೋ, ಅವರಿಗೆ ಗೆಲುವು ಮತ್ತು ಏಳಿಗೆ ಯಾವಾಗಲೂ ಆಗುತ್ತಲೇ ಇರುತ್ತವೆ!

ಅಂದರೆ, ಯಾವ ಜನರಿಗೆ ಇಂತಹ ನಿಷ್ಠೆ ಇದೆಯೋ, ಅವರ ರಾಜ್ಯವು ಯಾವಾಗಲೂ ವೃದ್ಧಿ ಹೊಂದುತ್ತಾ ಇರುತ್ತದೆ.

ಏವಂ ರಾಜಪುರುಷೈಶ್ಚಾಪಿ ಪ್ರಜಾಪಾಲನೇ ಸರ್ವತ್ರ ನ್ಯಾಯವಿಜ್ಞಾನಪ್ರಕಾಶೋ ರಕ್ಷಣೀಯಃ, ಯತೋಽನ್ಯಾಯಾವಿದ್ಯಾವಿನಾಶಃ ಸ್ಯಾದಿತಿ ॥೯॥

ಈ ರೀತಿಯಾಗಿ, ರಾಜಪುರುಷರೂ ಕೂಡ, ಅನ್ಯಾಯ ಮತ್ತು ಅವಿದ್ಯೆಯ ನಾಶವಾಗಲಿ, ಎಂದು ಪ್ರಜಾಪಾಲನೆಯಲ್ಲಿ ಎಲ್ಲೆಡೆಯೂ ನ್ಯಾಯ ಮತ್ತು ವಿಜ್ಞಾನದ ಪ್ರಕಾಶವನ್ನು ರಕ್ಷಿಸಿಕೊಂಡು ಬರಬೇಕು! [೯]

ರಾಜನಿಗೆ ಪರಮಾತ್ಮನ ಆಶ್ರಯ

[ಋಷಿಃ_ ಗರ್ಗಃ ; ದೇವತಾ_ ಇಂದ್ರಃ ; ಛಂದಃ_ ವಿರಾಟ್ ತ್ರಿಷ್ಟುಪ್ ; ಸ್ವರಃ_ ಧೈವತಃ]

ತ್ರಾತಾರಮಿಂದ್ರಮವಿತಾರಮಿಂದ್ರಗ್ಂ
ಹವೇ ಹವೇ ಸುಹವಗ್ಂ ಶೂರಮಿಂದ್ರಮ್ ।
ಹ್ವಯಾಮಿ ಶಕ್ರಂ ಪುರುಹೂತಮಿಂದ್ರಗ್ಂ
ಸ್ವಸ್ತಿ ನೋ ಮಘವಾ ಧಾತ್ವಿಂದ್ರಃ ॥೧೦॥

[ಯಜುರ್ವೇದೇ ಅ. ೨೦, ಮಂ. ೫೦]

[ಅರ್ಥ:_ "ನಾನು ರಕ್ಷಕನಾದ ಇಂದ್ರನನ್ನೂ, ಜ್ಞಾನದಾಯಕನಾದ ಇಂದ್ರನನ್ನೂ, ಯುದ್ಧ-ಯುದ್ಧದಲ್ಲಿ ಚೆನ್ನಾಗಿ ಯುದ್ಧ ಮಾಡುವ ಶೂರನಾದ ಇಂದ್ರನನ್ನೂ ಮತ್ತು ಶಕ್ತಿಶಾಲಿಯೂ ಬಹಳ ಶೂರರಿಂದ ಸೇವಿತನೂ ಆದ ಇಂದ್ರನನ್ನೂ ಆಹ್ವಾನಿಸುತ್ತೇನೆ. ಪರಮಧನದಾತೃವಾದ ಇಂದ್ರನು ನಮಗೆ ಸುಖವನ್ನು ದಯಪಾಲಿಸಲಿ!"

(ಯಜುರ್ವೇದ: ೨೦. ೫೦)]

ಭಾಷ್ಯಮ್_

ಭಾಷ್ಯ_

(ತ್ರಾತಾರಮಿಂದ್ರಮ್)ಯಂ ವಿಶ್ವಸ್ಯ ತ್ರಾತಾರಂ ರಕ್ಷಕಂ ಪರಮೈಶ್ವರ್ಯವಂತಂ ;

(ತ್ರಾತಾರಮಿಂದ್ರಮ್) ಯಾವ ಜಗತ್ತಿನ ರಕ್ಷಕನೂ, ಪರಮೈಶ್ವರ್ಯವಂತನೂ ;

ಅಂದರೆ, ಕೇವಲ ಪರಮೈಶ್ವರ್ಯವಂತನಾದ ಪರಮಾತ್ಮನೇ ನಮ್ಮ ರಕ್ಷಕ, ಎಂದು ಯಾರಿಗೆ ನಿಶ್ಚಯವಾಗಿದೆಯೋ ;

[(ಅವಿತಾರಮಿಂದ್ರಮ್) ಪ್ರೀಣಯಿತಾರಂ ಪರಮೈಶ್ವರ್ಯಪ್ರದಂ ;#]

(ಅವಿತಾರಮಿಂದ್ರಮ್) *ಪ್ರೀತಿಯನ್ನುಂಟು ಮಾಡುವವನೂ, ಪರಮೈಶ್ವರ್ಯವನ್ನು ಕೊಡುವವನೂ ;

ಅಂದರೆ, ಜ್ಞಾನ*, ಹಾಗೂ ಆನಂದ*ವನ್ನು ಕೊಡುವವನೂ;

ಅಂಶೋಽಯಮಸ್ಮಿನ್ ಭಾಷ್ಯೇ ನಾಸ್ತ್ಯತ ಏವ ಯಜುರ್ವೇದಭಾಷ್ಯಾದತ್ರಾನೀತಃ _ಅನು.

* 'ಅವ' ಧಾತುವಿಗೆ ಪ್ರೀತಿ, ಅವಗಮ, ತೃಪ್ತಿ, ಎಂಬ ಮೇಲೆ ಹೇಳಿದ ಮೂರು ಅರ್ಥಗಳೊಂದಿಗೆ ಒಟ್ಟು ಇಪ್ಪತ್ತು ಅರ್ಥಗಳಿವೆ _ಅನು.

(ಸುಹವಗ್ಂ ಶೂರಮಿಂದ್ರಮ್) ಸುಹವಂ ಶೋಭನಯುದ್ಧಕಾರಿಣಮತ್ಯಂತಶೂರಂ, ಜಗತೋ ರಾಜಾನಮನಂತಬಲವಂತಮ್ ;	(ಸುಹವಗ್ಂ ಶೂರಮಿಂದ್ರಮ್) 'ಸುಹವ', ಎಂದರೆ ಚೆನ್ನಾಗಿ ಯುದ್ಧ ಮಾಡುವವನೂ, ಅತ್ಯಂತ ಶೂರನೂ, ಜಗತ್ತಿಗೆ ರಾಜನೂ, ಅನಂತಬಲವಂತನೂ ; ಅಂದರೆ, [ಯಾವ] ಆ ಇಂದ್ರ ಪರಮಾತ್ಮನು ಉತ್ತಮವಾಗಿ ಯುದ್ಧ ಮಾಡಬಲ್ಲವನೂ, ಶೂರ-ವೀರನೂ, ಮತ್ತು ನಮ್ಮ ರಾಜನೂ ಆಗಿದ್ದಾನೋ ;
(ಶಕ್ರಮ್) ಶಕ್ತಿಮಂತಂ ಶಕ್ತಿಪ್ರದಂ ಚ ;	(ಶಕ್ರಮ್) ಶಕ್ತಿಶಾಲಿಯೂ ಮತ್ತು ಶಕ್ತಿಪ್ರದಾತೃವೂ ; ಅಂದರೆ, ಯಾವ ಅನಂತ ಪರಾಕ್ರಮಯುಕ್ತನಾದ ಈಶ್ವರನನ್ನು ವಿದ್ವಾಂಸರೆಲ್ಲರೂ ವೇದಾದಿ ಶಾಸ್ತ್ರಗಳ ಮೂಲಕ ಪ್ರತಿಪಾದನೆ ಮಾಡುತ್ತಾರೋ, ಹಾಗೂ ಇಚ್ಛಿಸುತ್ತಾರೋ, [ಮತ್ತು] ಅವನೇ ನಮಗೆ ಎಲ್ಲ ರೀತಿಯಿಂದಲೂ ರಾಜನಾಗಿರುತ್ತಾನೋ ;
(ಪುರುಹೂತಮ್) ಬಹುಭಿಃ ಶೂರೈಃ ಸುಸೇವಿತಂ ;	(ಪುರುಹೂತಮ್) ಬಹಳ ಶೂರರಿಂದ ಚೆನ್ನಾಗಿ ಸೇವಿಸಲ್ಪಡುವವನೂ ;
(ಇಂದ್ರಮ್) ನ್ಯಾಯೇನ ರಾಜ್ಯಪಾಲಕಂ ;	(ಇಂದ್ರಮ್) ನ್ಯಾಯದಿಂದ ರಾಜ್ಯಪಾಲನೆ ಮಾಡುವವನೂ ಆದ; [ಮತ್ತು ;]
(ಇಂದ್ರಗ್ಂ ಹವೇ ಹವೇ) ಯುದ್ಧೇ-ಯುದ್ಧೇ ಸ್ವವಿಜಯಾರ್ಥಮ್ ಇಂದ್ರಂ ಪರಮಾತ್ಮಾನಂ ;	(ಇಂದ್ರಗ್ಂ ಹವೇ ಹವೇ) ಯುದ್ಧ-ಯುದ್ಧದಲ್ಲಿಯೂ ನಮ್ಮ ವಿಜಯಕ್ಕಾಗಿ [ಬೇಕಾದ] 'ಇಂದ್ರ', ಎಂದರೆ ಆ ಪರಮಾತ್ಮನನ್ನು ;
(ಹ್ವಯಾಮಿ) ಆಹ್ವಯಾಮಿ ಆಶ್ರಯಾಮಿ.	(ಹ್ವಯಾಮಿ) ನಾನು ಆಹ್ವಾನಿಸುತ್ತೇನೆ, ಎಂದರೆ ಆಶ್ರಯಿಸುತ್ತೇನೆ.
(ಸ್ವಸ್ತಿ ನೋ ಮಘವಾ ಧಾತ್ವಿಂದ್ರಃ) ಸ ಪರಮ-ಧನಪ್ರದಾತೇಂದ್ರಃ ಸರ್ವಶಕ್ತಿಮಾನೀಶ್ವರಃ ;	(ಸ್ವಸ್ತಿ ನೋ ಮಘವಾ ಧಾತ್ವಿಂದ್ರಃ) ಪರಮಧನ ಪ್ರದಾತೃವಾದ ಆ 'ಇಂದ್ರ', ಎಂದರೆ, ಸರ್ವಶಕ್ತಿಮಂತನಾದ ಈಶ್ವರನು ;
ಸರ್ವೇಷು ರಾಜಕಾರ್ಯೇಷು ನೋಽಸ್ಮಭ್ಯಂ ಸ್ವಸ್ತಿ (ಧಾತು) ನಿರಂತರಂ ವಿಜಯಸುಖಂ ದಧಾತು ॥ ೧೦ ॥	ಎಲ್ಲಾ ರಾಜಕಾರ್ಯಗಳಲ್ಲಿಯೂ ನಮಗೆ **'ಸ್ವಸ್ತಿ'**, ಎಂದರೆ ನಿರಂತರವಾದ ವಿಜಯಸುಖವನ್ನು **'ಧಾತು'**, ಎಂದರೆ ದಯಪಾಲಿಸಲಿ!

ಅಂದರೆ, 'ಇಂದ್ರ', ಎಂದರೆ ಪರಮೇಶ್ವರ; 'ಮಘವಾ', ಎಂದರೆ ಪರಮವಿದ್ಯಾರೂಪನಾದ ಧನವಂತ; ಅವನು ನಮಗೆ ವಿಜಯ ಮೊದಲಾದ ಎಲ್ಲಾ ಸುಖಗಳನ್ನೂ ಕೊಡುವವನಾಗಿದ್ದಾನೆ. ಯಾವ ಮನುಷ್ಯರಿಗೆ ಈ ಬಗೆಯಾದ ನಿಶ್ಚಯವಿರುವುದೋ, ಅವರ ಪರಾಜಯವು ಎಂದಿಗೂ ಆಗದು! [೧೦]

ಜನತೆಯಿಂದ ಚುನಾಯಿಸಲ್ಪಟ್ಟವನೇ ರಾಜಾ!

[ಋಷಿಃ_ ದೇವವಾತಃ ; ದೇವತಾ_ ಯಜಮಾನಃ ; ಛಂದಃ_ ಸ್ವರಾಡ್ ಬ್ರಾಹ್ಮೀ ತ್ರಿಷ್ಟುಪ್ ; ಸ್ವರಃ_ ಧೈವತಃ]

ಇಮಂ ದೇವಾಽ ಅಸಪತ್ನಗ್ಂ ಸುವಧ್ವಂ ಮಹತೇ ಕ್ಷತ್ರಾಯ ಮಹತೇ
ಜ್ಯೈಷ್ಠ್ಯಾಯ ಮಹತೇ ಜಾನರಾಜ್ಯಾಯೇಂದ್ರಸ್ಯೇಂದ್ರಿಯಾಯ ।
ಇಮಮಮುಷ್ಯ ಪುತ್ರಮಮುಷ್ಯೈ ಪುತ್ರಮಸ್ಯೈ ವಿಶಽ ಏಷ
ವೋಽಮೀ ರಾಜಾ ಸೋಮೋಽಸ್ಮಾಕಂ ಬ್ರಾಹ್ಮಣಾನಾಗ್ಂ ರಾಜಾ
॥ ೧೧ ॥

[ಯಜುರ್ವೇದೇ ಅ. ೯, ಮಂ. ೪೦]

[ಅರ್ಥ:_ "ಹೇ ವಿದ್ವಾಂಸರೇ! ಉತ್ತಮ ರಾಜಧರ್ಮಕ್ಕಾಗಿಯೂ, ಅತ್ಯಂತ ವೃದ್ಧಿಗಾಗಿಯೂ, ಶ್ರೇಷ್ಠವಾದ ಜನತಾರಾಜ್ಯಕ್ಕಾಗಿಯೂ, ಐಶ್ವರ್ಯದ ಧನಕ್ಕಾಗಿಯೂ, ಈ, ಇಂತಹವನ ಪುತ್ರನಾದ, ಮತ್ತು ಇಂತಹವಳ ಪುತ್ರನಾದ, ಇವನನ್ನು ಶತ್ರುರಹಿತನನ್ನಾಗಿ ಮಾಡಿರಿ! ಇವನು ಈ ಪ್ರಜೆಗಳ ಮತ್ತು ನಿಮ್ಮ, ಪ್ರತ್ಯಕ್ಷ, ಹಾಗೂ ಪರೋಕ್ಷನಾದ ರಾಜನಾಗಲಿ! ವೇದವಿದರಾದ ನಮಗೆ ಸೋಮ್ಯಗುಣ ಸಂಪನ್ನನು ರಾಜನಾಗಲಿ!"

(ಯಜುರ್ವೇದಃ ೯. ೪೦)]

ಈಗ ಈಶ್ವರನು ಮನುಷ್ಯರೆಲ್ಲರಿಗೂ ರಾಜ್ಯ ವ್ಯವಸ್ಥೆಯ ವಿಷಯದಲ್ಲಿ ಆಜ್ಞಾಪಿಸುತ್ತಾನೇನೆಂದರೆ_

ಭಾಷ್ಯಮ್_	ಭಾಷ್ಯ_
(ದೇವಾಃ) ಹೇ ದೇವಾ ವಿದ್ವಾಂಸಃ ಸಭಾಸದಃ!	(ದೇವಾಃ) ಎಲೈ ವಿದ್ವಾಂಸರಾದ ಸಭಾಸದರೇ!
(ಮಹತೇ ಕ್ಷತ್ರಾಯ) ಅತುಲರಾಜಧರ್ಮಾಯ ;	(ಮಹತೇ ಕ್ಷತ್ರಾಯ) ಅತುಲ ರಾಜಧರ್ಮಕ್ಕಾಗಿಯೂ ;

ಅಂದರೆ, ಎಲೈ ಶೂರ-ವೀರರೇ! ನಿಮ್ಮ ಕ್ಷತ್ರಿಯ ಧರ್ಮಕ್ಕಾಗಿಯೂ;

(ಮಹತೇ ಜ್ಯೈಷ್ಠ್ಯಾಯ) ಅತ್ಯಂತಜ್ಞಾನವೃದ್ಧ-ವ್ಯವಹಾರಸ್ಥಾಪನಾಯ ;

(ಮಹತೇ ಜ್ಯೈಷ್ಠ್ಯಾಯ) ಅತ್ಯಂತ ಜ್ಞಾನದಿಂದ ಉನ್ನತಿಗೊಂಡ ವ್ಯವಹಾರಗಳ ಆಚರಣೆಗಾಗಿಯೂ ;

ಅಂದರೆ, ಚಕ್ರವರ್ತಿರಾಜ್ಯ, ಶ್ರೇಷ್ಠಕೀರ್ತಿ ಮತ್ತು ಸರ್ವೋತ್ತಮ ರಾಜ್ಯಪ್ರಬಂಧಕ್ಕಾಗಿಯೂ ;

(ಮಹತೇ ಜಾನರಾಜ್ಯಾಯ) ಜನಾನಾಂ ವಿದುಷಾಂ ಮಧ್ಯೇ ಪರಮರಾಜ್ಯಕರಣಾಯ ;

(ಮಹತೇ ಜಾನರಾಜ್ಯಾಯ) 'ಜನರ', ಎಂದರೆ ವಿದ್ವಾಂಸಜನರ ಮಧ್ಯೆ ಉತ್ತಮವಾಗಿ ರಾಜ್ಯವನ್ನಾಳುವುದಕ್ಕಾಗಿಯೂ ;

ಅಂದರೆ, ಪ್ರಜೆಗಳೆಲ್ಲರನ್ನೂ ವಿದ್ವಾಂಸರನ್ನಾಗಿ ಮಾಡಿ, ಸರಿ ಸರಿಯಾಗಿ ರಾಜ್ಯವ್ಯವಸ್ಥೆಯಲ್ಲಿ [ಅವರನ್ನು] ನಡೆಯಿಸುವುದಕ್ಕಾಗಿಯೂ ;

(ಇಂದ್ರಸ್ಯೇಂದ್ರಿಯಾಯ) ಸೂರ್ಯಸ್ಯ ಪ್ರಕಾಶ-ವನ್ನ್ಯಾಯವ್ಯವಹಾರಪ್ರಕಾಶನಾಯಾನ್ಯಾಯಾಂಧಕಾರ-ವಿನಾಶಾಯ ;

(ಇಂದ್ರಸ್ಯೇಂದ್ರಿಯಾಯ) ಸೂರ್ಯನ ಪ್ರಕಾಶದಂತೆ ನ್ಯಾಯವ್ಯವಹಾರದ ಪ್ರಕಟಣೆಗಾಗಿಯೂ, ಮತ್ತು ಅನ್ಯಾಯವೆಂಬ ಅಂಧಕಾರದ ವಿನಾಶಕ್ಕಾಗಿಯೂ;

ಅಂದರೆ, ದೊಡ್ಡ ಐಶ್ವರ್ಯ, ಸತ್ಯ, ನ್ಯಾಯದ ಪ್ರಕಾಶ ಮಾಡುವುದಕ್ಕಾಗಿಯೂ;

(ಅಸ್ಯೈ ವಿಶೇ) ವರ್ತಮಾನಾಯೈ ಪ್ರಜಾಯೈ ಯಥಾವತ್ ಸುಖಪ್ರದಾನಾಯ ;

(ಅಸ್ಯೈ ವಿಶೇ) ವರ್ತಮಾನ ಪ್ರಜೆಗಳಿಗೆ ಸರಿ ಸರಿಯಾಗಿ ಸುಖವನ್ನು ಕೊಡುವುದಕ್ಕಾಗಿಯೂ;

(ಇಮಮ್) (ಅಸಪತ್ನಗ್ಂ ಸುವಧ್ವಮ್) ಇಮಂ ಪ್ರತ್ಯಕ್ಷಂ ಶತ್ರೂದ್ಭವರಹಿತಂ ನಿಷ್ಕಂಟಕ-ಮುತ್ತಮರಾಜಧರ್ಮಂ ಸುವಧ್ವಮೀಶಿಧ್ವಮ್ ;*

(ಇಮಮ್ ಅಸಪತ್ನಗ್ಂ ಸುವಧ್ವಮ್) ಈ ಎದುರಿಗಿರುವ [ರಾಜ್ಯವನ್ನು] [ಇದಕ್ಕೆ] ಶತ್ರುಗಳು ಹುಟ್ಟದಂತೆಯೂ, ನಿಷ್ಕಂಟಕವಾಗಿರುವಂತೆಯೂ, ಉತ್ತಮ ರಾಜಧರ್ಮಯುಕ್ತವಾಗಿರುವಂತೆಯೂ ಆಳಿರಿ!

ಐಶ್ವರ್ಯಸಹಿತಂ ಕುರುತ.

[ಮತ್ತು] ಐಶ್ವರ್ಯದಿಂದ ಯುಕ್ತವಾಗಿರುವಂತೆ ಮಾಡಿರಿ!

ಅಂದರೆ, ಈ ರಾಜಧರ್ಮವನ್ನು ಯಥಾವತ್ತಾಗಿ ತಿಳಿದುಕೊಂಡು, ನಿಮ್ಮ ದೇಶದ ಮೇಲೆ ಯಾವ ಶತ್ರುವೂ ಆಕ್ರಮಣ ಮಾಡದಿರುವಂತೆ, ನಿಮ್ಮ ರಾಜ್ಯದ ಇಂತಹ ವ್ಯವಸ್ಥೆ ಮಾಡಿರಿ! ಮತ್ತು ಉತ್ತಮ-ಉತ್ತಮವಾದ ರಾಜ್ಯಸಂಬಂಧೀ ಪ್ರಬಂಧದಿಂದ ಮನುಷ್ಯರೆಲ್ಲರಿಗೂ ಉತ್ತಮಸುಖವು ವರ್ಧಿಸುವಂತೆ ಮಾಡಿರಿ!

---

* ಏತತ್ಪ್ರಯೋಗಸಾಧುತ್ವಜ್ಞಾನಾಯ 'ಕಾಶಿಕಾ' (೭. ೨. ೭೭) ದ್ರಷ್ಟವ್ಯಾ _ಯು. ಮೀ.

ಯೂಯಮಪ್ಯೇವಂ ಜಾನೀತ_

ನೀವುಗಳೂ ಕೂಡ, ಹೇಗೆ ತಿಳಿಯಬೇಕೆಂದರೆ_

(ಸೋಮೋಽಸ್ಮಾಕಂ ಬ್ರಾಹ್ಮಣಾನಾಗ್ಂ ರಾಜಾ) ವೇದವಿದಾಂ ಸಭಾಸದಾಂ ಮಧ್ಯೇ ಯೋ ಮನುಷ್ಯಃ ಸೋಮ್ಯಗುಣಸಂಪನ್ನಃ ಸಕಲವಿದ್ಯಾಯುಕ್ತೋಽಸ್ತಿ;

(ಸೋಮೋಽಸ್ಮಾಕಂ ಬ್ರಾಹ್ಮಣಾನಾಗ್ಂ ರಾಜಾ) ವೇದವೇತ್ತೃಗಳಾದ ಸಭಾಸದರ ಮಧ್ಯೆ, ಯಾವ ಮನುಷ್ಯನು ಸೋಮ್ಯಗುಣಸಂಪನ್ನನೂ, ಸಕಲವಿದ್ಯೆಗಳಿಂದ ಕೂಡಿದವನೂ ಆಗಿರುತ್ತಾನೋ ;

ಸ ಏವ ಸಭಾಧ್ಯಕ್ಷತ್ವೇನ ಸ್ವೀಕೃತಃ ಸನ್ ರಾಜಾಸ್ತು.

ಅವನೇ ಸಭೆಯ ಅಧ್ಯಕ್ಷನೆಂದು ಅಂಗೀಕೃತನಾಗಿದ್ದು, ರಾಜನಾಗಲಿ!

ಹೇ ಸಭಾಸದಃ! (ಅಮೀ) ಯೇ ಪ್ರಜಾಸ್ಥಾ ಮನುಷ್ಯಾಃ ಸಂತಿ, ತಾನ್ ಪ್ರತ್ಯಪ್ಯೇವಮಾಜ್ಞಾ ಶ್ರಾವ್ಯಾ_

ಎಲೈ ಸಭಾಸದರೇ! (ಅಮೀ) ಯಾರು ಪ್ರಜೆಗಳಲ್ಲಿರುವ ಮನುಷ್ಯರಿರುತ್ತಾರೋ, ಅವರ ಪ್ರತಿಯಾಗಿ ಕೂಡ, ಯಾವ ಆಜ್ಞೆಯನ್ನು ಶ್ರುತಪಡಿಸಬೇಕೆಂದರೆ_

(ಏಷ ವೋ ರಾಜಾ) ಅಸ್ಮಾಕಂ ವೋ ಯುಷ್ಮಾಕಂ ಚ ಸಸಭಾತ್ಕೋಽಯಂ* ರಾಜಸಭಾ-ವ್ಯವಹಾರ ಏವ ರಾಜಾಸ್ತೀತಿ ;

(ಏಷ ವೋ ರಾಜಾ) ನಮಗೆ ಮತ್ತು ನಿಮಗೆ ಸಭೆಯಿಂದ ಕೂಡಿದ ಈ ರಾಜಸಭಾವ್ಯವಹಾರವೇ ರಾಜನಾಗಿರುತ್ತದೆ.

ಏತದರ್ಥಂ ವಯಂ (ಇಮಮಮುಷ್ಯ ಪುತ್ರಮಮುಷ್ಯೈ ಪುತ್ರಮ್) ಪ್ರಖ್ಯಾತನಾಮ್ನಃ ಪುರುಷಸ್ಯ ಪ್ರಖ್ಯಾತನಾಮ್ನ್ಯಾಃ ಸ್ತ್ರೀಯಾಶ್ಚ ಸಂತಾನಮ-ಭಿಷಿಚ್ಯಾಧ್ಯಕ್ಷತ್ವೇ ಸ್ವೀಕುರ್ಮ್ಮ ಇತಿ ॥೧॥

ಈ ಉದ್ದೇಶ್ಯಕ್ಕಾಗಿ ನಾವು (ಇಮಮಮುಷ್ಯ ಪುತ್ರಮಮುಷ್ಯೈ ಪುತ್ರಮ್) ಪ್ರಖ್ಯಾತವಾದ ಹೆಸರಿನ ಪುರುಷನ ಪುತ್ರನೂ, ಹಾಗೂ ಪ್ರಖ್ಯಾತವಾದ ಹೆಸರಿನ ಸ್ತ್ರೀಯ ಪುತ್ರನೂ ಆದ ಈ ಸಂತಾನವನ್ನು ಅಧ್ಯಕ್ಷತ್ವದಲ್ಲಿ ಅಭಿಷೇಕ ಮಾಡಿ, ಅಂಗೀಕರಿಸುತ್ತೇವೆ. [೧೧]

ಸಭಾಧ್ಯಕ್ಷನಾದ ರಾಜನು ಜಯಿಸಲಿ!

[ಋಷಿಃ_ ಅಥರ್ವಾ ; ದೇವಾತಾ_ ಇಂದ್ರಃ ; ಛಂದಃ_ ತ್ರಿಷ್ಟುಪ್ ; ಸ್ವರಃ_ ಧೈವತಃ]

ಇಂದ್ರೋ ಜಯಾತಿ ನ ಪರಾ ಜಯಾತಾ
ಅಧಿರಾಜೋ ರಾಜಸು ರಾಜಯಾತೈ ।
ಚರ್ಕೃತ್ಯ ಈಡ್ಯೋ ವಂದ್ಯಶ್ಚೋಪಸದ್ಯೋ
ನಮಸ್ಯೋ ಭವೇಹ ॥೧೨॥

[ಅಥರ್ವವೇದೇ ಕಾಂ. ೬, ಅನು. ೧೦, ವ. ೯೮, ಮಂ. ೧]

* 'ಸಸಭಾತ್ಕಃ ಅಯಮ್' ಇತಿ ಪದಚ್ಛೇದಃ _ಅನು.

[ಅರ್ಥ:_ "ಇಂದ್ರನು ಜಯಿಸಲಿ! ಪರಾಜಯವನ್ನು ಹೊಂದದಿರಲಿ! ರಾಜರುಗಳಲ್ಲಿ ಮಹಾರಾಜನಾಗಿ ವಿರಾಜಿಸಲಿ! ಈ ರಾಜ್ಯದಲ್ಲಿ [ಅವನು] ಉಪಾಸನಾಯೋಗ್ಯನೂ, ಸ್ತುತಿಗರ್ಹನೂ, ಪೂಜ್ಯನೂ, ಆಶ್ರಯಕ್ಕೆ ಯೋಗ್ಯನೂ, ಮತ್ತು ನಮಸ್ಕಾರಕ್ಕೆ ಅರ್ಹನೂ ಆಗಲಿ!"

(ಅಥರ್ವವೇದ: ೬. ೯೮. ೧)]

ಭಾಷ್ಯಮ್_

(ಇಂದ್ರೋ ಜಯಾತಿ) ಸ ಏವೇಂದ್ರಃ ಪರಮೇಶ್ವರಃ ಸಭಾಪ್ರಬಂಧೋ ವಾ ಜಯಾತಿ ವಿಜಯೋತ್ಕರ್ಷಂ ಸದಾ ಪ್ರಾಪ್ನೋತು .

(ನ ಪರಾಜಯಾತೈ) ಸ ಮಾ ಕದಾಚಿತ್ ಪರಾಜಯಂ ಪ್ರಾಪ್ನೋತು.

(ಅಧಿರಾಜೋ ರಾಜಸು ರಾಜಯಾತೈ) ಸ ರಾಜಾಧಿರಾಜೋ ವಿಶ್ವಸ್ಯೇಶ್ವರಃ ಸರ್ವೇಷು ಚಕ್ರವರ್ತಿ-ರಾಜಸು ಮಾಂಡಲಿಕೇಷು ವಾ ;

ಸ್ವಕೀಯಸತ್ಯಪ್ರಕಾಶನ್ಯಾಯೇನ ಸಹಾಸ್ಮಾಕಂ ಮಧ್ಯೇ ಸದಾ ಪ್ರಸಿಧ್ಯತಾಮ್.

(ಚರ್ಕೃತ್ಯಃ) ಯೋ ಜಗದೀಶ್ವರಃ ಸರ್ವೈ-ರ್ಮನುಷ್ಯೈಃ ಪುನಃ ಪುನರುಪಾಸನಾಯೋಗ್ಯೋಽಸ್ತಿ;

ಭಾಷ್ಯ_

(ಇಂದ್ರೋ ಜಯಾತಿ) ಆ 'ಇಂದ್ರ', ಎಂದರೆ ಪರಮೇಶ್ವರನೇ, ಅಥವಾ ಸಭಾಪ್ರಬಂಧವೇ, ವಿಜಯೋತ್ಕರ್ಷವನ್ನು ಯಾವಾಗಲೂ ಪಡೆಯಲಿ!

ಅಂದರೆ, ಎಲೈ ಬಂಧುಜನರೇ! ಪರಮಾತ್ಮನು ನಮ್ಮೆಲ್ಲರ ವಿಜಯವನ್ನು ಸಾಧಿಸುವವನಾಗಿದ್ದಾನೆ.

(ನ ಪರಾಜಯಾತೈ) ಅವನು ಎಂದಿಗೂ ಪರಾಜಯವನ್ನು ಹೊಂದದಿರಲಿ!

ಅಂದರೆ, ಅವನು ನಮ್ಮನ್ನು ಎಂದಿಗೂ ಇತರರಿಂದ ಪರಾಜಯಗೊಳ್ಳಲು ಬಿಡುವುದಿಲ್ಲ!

(ಅಧಿರಾಜೋ ರಾಜಸು ರಾಜಯಾತೈ) ಆ ರಾಜಾಧಿರಾಜನಾದ ಜಗತ್ತಿನ ಈಶ್ವರನು ಎಲ್ಲಾ ಚಕ್ರವರ್ತಿರಾಜರುಗಳಲ್ಲಿ, ಅಥವಾ ಮಾಂಡಲಿಕರಲ್ಲಿ;

ತನ್ನ ಸತ್ಯಪ್ರಕಾಶವೆಂಬ ನ್ಯಾಯದೊಡನೆ ಕೂಡಿ, ನಮ್ಮ ಮಧ್ಯೆ ಯಾವಾಗಲೂ ಪ್ರಸಿದ್ಧನಾಗಿರಲಿ!

ಅಂದರೆ, ಆ ಮಹಾರಾಜಾಧಿರಾಜನು ಎಲ್ಲಾ ರಾಜರುಗಳ ಮಧ್ಯೆ ಪ್ರಕಾಶಮಾನನಾಗಿದ್ದು, ನಮ್ಮನ್ನೂ ಕೂಡ, ಈ ಭೂಗೋಳದಲ್ಲಿ ಪ್ರಕಾಶಮಾನರನ್ನಾಗಿ ಮಾಡುವವನಾಗಿದ್ದಾನೆ.

(ಚರ್ಕೃತ್ಯಃ) ಯಾವ ಜಗದೀಶ್ವರನು ಮನುಷ್ಯರೆಲ್ಲರಿಂದಲೂ ಮತ್ತೆ ಮತ್ತೆ ಉಪಾಸನೆಗೆ ಯೋಗ್ಯನಾಗಿದ್ದಾನೋ;

ಅಂದರೆ, ಯಾವ ಆನಂದಸ್ವರೂಪನಾದ ಪರಮಾತ್ಮನು ಜಗತ್ತೆಲ್ಲವನ್ನೂ ಸುಖಗಳಿಂದ ತುಂಬಿಬಿಡುವವನಾಗಿದ್ದಾನೋ ;

(ಈಡ್ಯಃ) ಅಸ್ಮಾಭಿಃ ಸ ಏವೈಕಃ ಸ್ತೋತುಂ ಯೋಗ್ಯಃ ;

(ಈಡ್ಯಃ) ಆ ಒಬ್ಬನೇ ನಮ್ಮಿಂದ ಸ್ತುತಿ ಮಾಡಲು ಯೋಗ್ಯನೂ ;

(ವಂದ್ಯಶ್ಚ) ಪೂಜನೀಯಃ ;

(ವಂದ್ಯಶ್ಚ) ಮತ್ತು ಪೂಜನೀಯನೂ ;

(ಉಪಸದ್ಯಃ) ಸಮಾಶ್ರಯಿತುಂ ಯೋಗ್ಯಃ ;

(ಉಪಸದ್ಯಃ) ಸಮಾಶ್ರಯಿಸಲು ಯೋಗ್ಯನೂ ;

(ನಮಸ್ಯಃ) ನಮಸ್ಕರ್ತುಂ ಯೋಗ್ಯೋऽಸ್ತಿ.

(ನಮಸ್ಯಃ) ಮತ್ತು ನಮಸ್ಕಾರ ಮಾಡಲು ಯೋಗ್ಯನೂ ಆಗಿದ್ದಾನೆ.

ಅಂದರೆ, ಮನುಷ್ಯರೆಲ್ಲರಿಂದಲೂ ಸ್ತುತಿ ಮತ್ತು ವಂದನೆ ಮಾಡಲು ಯೋಗ್ಯನೂ, ಎಲ್ಲರನ್ನೂ [ತನ್ನ] ಶರಣದಲ್ಲಿ ತೆಗೆದುಕೊಳ್ಳಲೂ, ಹಾಗೂ [ಎಲ್ಲರಿಂದ] ನಮಸ್ಕರಿಸಲೂ ಯೋಗ್ಯನೂ ಆಗಿದ್ದಾನೆ.

(ಭವೇಹ) ಹೇ ಮಹಾರಾಜೇಶ್ವರ! ತ್ವಮುತ್ತಮಪ್ರಕಾರೇಣಾಸ್ಮಿನ್ ರಾಜ್ಯೇ ಸತ್ಕೃತೋ ಭವ.

(ಭವೇಹ) ಹೇ ಮಹಾರಾಜೇಶ್ವರ! ನೀವು ಉತ್ತಮ ರೀತಿಯಿಂದ ಈ ರಾಜ್ಯದಲ್ಲಿ ಸತ್ಕರಿಸಲ್ಪಡಿರಿ!

ಭವತ್ಸತ್ಕಾರೇಣ ಸಹ ವರ್ತಮಾನಾ ವಯಮಪ್ಯಸ್ಮಿನ್ ಚಕ್ರವರ್ತಿರಾಜ್ಯೇ ಸದಾ ಸತ್ಕೃತಾ ಭವೇಮ ॥ ೧೨ ॥

ನಿಮ್ಮ ಸತ್ಕಾರವನ್ನು ಮಾಡುತ್ತಾ, ಜೊತೆಗೆ ಇರುವ ನಾವೂ ಕೂಡ, ಈ ಚಕ್ರವರ್ತಿರಾಜ್ಯದಲ್ಲಿ ಯಾವಾಗಲೂ ಸತ್ಕರಿಸಲ್ಪಟ್ಟವರಾಗೋಣ!

ಅಂದರೆ, ಈ ಜಗದೀಶ್ವರನೇ ನಮಗೆ ವಿಜಯವನ್ನುಂಟುಮಾಡುವವನೂ, ರಕ್ಷಕನೂ, ನ್ಯಾಯಾಧೀಶನೂ ಮತ್ತು ರಾಜನೂ ಆಗಿದ್ದಾನೆ. ಆದ ಕಾರಣ, ನಮ್ಮ ಪ್ರಾರ್ಥನೆಯೇನೆಂದರೆ_

ಹೇ ಪರಮೇಶ್ವರ! ನೀವು ಕೃಪೆಯಿಟ್ಟು ನಮ್ಮೆಲ್ಲರ ರಾಜಾ ಆಗಿರಿ! ಮತ್ತು ನಾವೆಲ್ಲರೂ ನಿಮ್ಮ ಪುತ್ರ ಮತ್ತು ಭೃತ್ಯರಿಗೆ ಸಮಾನವಾಗಿ ರಾಜ್ಯಾಧಿಕಾರಿಗಳಾಗಿ, ನಿಮ್ಮ ರಾಜ್ಯವನ್ನು ಸತ್ಯನ್ಯಾಯದಿಂದ ಸುಶೋಭಿತವನ್ನಾಗಿ ಮಾಡೋಣ! [೧೨]

ರಾಜನು ಪ್ರಜೆಗಳಿಗೆ ಐಶ್ವರ್ಯದಾತಾ!

[ಋಷಿಃ_ ಅಥರ್ವಾ ; ದೇವತಾ_ ಇಂದ್ರಃ ; ಛಂದಃ_ ಬೃಹತೀ ಗರ್ಭಾಸ್ತಾರಪಂಕ್ತಿಃ ; ಸ್ವರಃ_ ಪಂಚಮಃ]

ತ್ವಮಿಂದ್ರಾಧಿರಾಜಃ ಶ್ರವಸ್ಯುಸ್ತ್ವಂ ಭೂರಭಿಭೂತಿರ್ಜನಾನಾಮ್ ।
ತ್ವಂ ದೈವೀರ್ವಿಶ ಇಮಾ ವಿ ರಾಜಾಯುಷ್ಮತ್ ಕ್ಷತ್ರಮಜರಂ ತೇ ಅಸ್ತು
॥ ೧೩ ॥

[ಅಥರ್ವವೇದೇ ಕಾಂ. ೬, ಅನು. ೧೦, ವ. ೯೮, ಮಂ. ೨]

[ಅರ್ಥ:_ " ಹೇ ಇಂದ್ರ! ನೀನು ರಾಜರಿಗೂ ರಾಜನಾಗಿದ್ದೀಯೆ! ಎಲ್ಲರನ್ನೂ ಆಲಿಸುವವನಾಗಿದ್ದೀಯೆ! ನೀನು ಸತ್ತಾತ್ಮಕನಾಗಿದ್ದೀಯೆ! ನೀನು ಜನಗಳಿಗೆ ಐಶ್ವರ್ಯಪ್ರದಾತ್ರವಾಗಿದ್ದೀಯೆ! ಈ ದಿವ್ಯರಾದ ಮತ್ತು ವಿವಿಧ ರಾಜಪಾಲಿತರಾದ ಪ್ರಜೆಗಳಿದ್ದಾರೆ. ನಿನ್ನ ಈ ರಾಷ್ಟ್ರವು ನಾಶರಹಿತವಾಗಲಿ! "

(ಅಥರ್ವವೇದ: ೬. ೯೮. ೨)]

ಭಾಷ್ಯಮ್_

(ತ್ವಮಿಂದ್ರಾಧಿರಾಜಃ) ಹೇ ಇಂದ್ರ ಪರಮೇಶ್ವರ! ತ್ವಂ ಸರ್ವಸ್ಯ ಜಗತೋಽಧಿರಾಜೋಽಸಿ.

(ಶ್ರವಸ್ಯುಃ) ಶ್ರವ ಇವಾಚರತೀತಿ [ಶ್ರವಸ್ಯುಃ];

ಸರ್ವಸ್ಯ ಶ್ರೋತಾ ಚ .

ಸ್ವಕೃಪಯಾ ಮಾಮಪಿ ತಾದೃಶಂ ಕುರು.

(ತ್ವಂ ಭೂರಭಿಭೂತಿರ್ಜನಾನಾಮ್) ಹೇ ಭಗವನ್! ತ್ವಂ ಭೂಃ ಸದಾ ಭವಸಿ .

ಯಥಾ ಜನಾನಾಮಭಿಭೂತಿರಭೀಷ್ಟಸ್ಯೈಶ್ವರ್ಯಸ್ಯ ದಾತಾಸಿ, ತಥಾ ಮಾಮಪ್ಯನುಗ್ರಹೇಣ ಕರೋತು.

(ತ್ವಂ ದೈವೀರ್ವಿಶ ಇಮಾ ವಿರಾಜಾಃ) ಹೇ ಜಗದೀಶ್ವರ! ಯಥಾ ತ್ವಂ ದಿವ್ಯಗುಣಸಂಪನ್ನಾ ವಿವಿಧೋತ್ತಮರಾಜಪಾಲಿತಾಃ ಪ್ರತ್ಯಕ್ಷವಿಷಯಾಃ ಪ್ರಜಾಃ ಸತ್ಯನ್ಯಾಯೇನ ಪಾಲಯಸಿ, ತಥಾ ಮಾಮಪಿ ಕುರು.

ಭಾಷ್ಯ_

(ತ್ವಮಿಂದ್ರಾಧಿರಾಜಃ) ಹೇ 'ಇಂದ್ರ', ಎಂದರೆ ಪರಮೇಶ್ವರ! ನೀವು ಎಲ್ಲಾ ಜಗತ್ತಿನ ಅಧಿರಾಜ ಆಗಿದ್ದೀರಿ!

ಅಂದರೆ, ನೀವೇ ಪ್ರಪಂಚದ ಎಲ್ಲಾ ರಾಜರುಗಳಿಗೂ ರಾಜರೂ, ಮತ್ತು ಆಪ್ತರಂತೆ ಸತ್ಯನ್ಯಾಯದ ಉಪದೇಶಕರೂ ಆಗಿದ್ದೀರಿ!

(ಶ್ರವಸ್ಯುಃ) ಶ್ರವಣದಂತೆ ವರ್ತಿಸುವವನು 'ಶ್ರವಸ್ಯು';

ಮತ್ತು ಎಲ್ಲರ ಶ್ರೋತೃವೂ ಕೂಡ, ಆಗಿದ್ದೀರಿ!

ನಿಮ್ಮ ಕೃಪೆಯಿಂದ, ನನ್ನನ್ನೂ ಕೂಡ, ಆ ರೀತಿಯಾಗಿಯೇ ಮಾಡಿ!

(ತ್ವಂ ಭೂರಭಿಭೂತಿರ್ಜನಾನಾಮ್) ಓ ಭಗವಂತ! ನೀವು 'ಭೂಃ', ಎಂದರೆ ಯಾವಾಗಲೂ ವಿದ್ಯಮಾನರಾಗಿರುತ್ತೀರಿ!

ಅಂದರೆ, ನೀವೇ ನಿತ್ಯಸ್ವರೂಪರೂ ಆಗಿದ್ದೀರಿ!

ಹೇಗೆ, ನೀವು ಜನಗಳಿಗೆ 'ಅಭಿಭೂತಿ', ಎಂದರೆ ಅಭೀಷ್ಟವಾದ ಐಶ್ವರ್ಯವನ್ನು ಕೊಡುವವರಾಗಿದ್ದೀರೋ, ಹಾಗೆಯೇ ದಯವಿಟ್ಟು, ನನ್ನನ್ನೂ ಕೂಡ, ಮಾಡಿ!

ಅಂದರೆ, ನೀವೇ ಸಜ್ಜನಮನುಷ್ಯರಿಗೆ ರಾಜ್ಯವನ್ನೂ, ಐಶ್ವಯವನ್ನೂ ಕೊಡುವವರೂ ಆಗಿದ್ದೀರಿ!

(ತ್ವಂ ದೈವೀರ್ವಿಶ ಇಮಾ ವಿರಾಜಾಃ) ಓ ಜಗದೀಶ್ವರ! ಹೇಗೆ ನೀವು ದಿವ್ಯಗುಣಸಂಪನ್ನರೂ, ವಿವಿಧ ಉತ್ತಮ ರಾಜ್ಯಪ್ರಬಂಧದಿಂದ ಪಾಲಿತರೂ, ಹಾಗೂ ಪ್ರತ್ಯಕ್ಷವಾಗಿಯೇ ಇರುವ ಈ ಪ್ರಜೆಗಳನ್ನು ಸತ್ಯ ಮತ್ತು ನ್ಯಾಯದಿಂದ ಪಾಲಿಸುತ್ತೀರೋ, ಹಾಗೆಯೇ ನನ್ನನ್ನೂ ಕೂಡ, ಮಾಡಿ!

ಅಂದರೆ, ನೀವೇ ಈ ವಿವಿಧ ಪ್ರಜೆಗಳ ಸುಧಾರಕರೂ, ಮತ್ತು ಯುದ್ಧದಲ್ಲಿ ದುಷ್ಟರಾಜರುಗಳ ಪರಾಜಯವನ್ನು ಮಾಡಿಸುವವರೂ ಆಗಿದ್ದೀರಿ!

(ಯುಷ್ಮತ್ಕ್ಷತ್ರಮಜರಂ ತೇ ಅಸ್ತು) ಹೇ ಮಹಾರಾಜಾಧಿರಾಜೇಶ್ವರ! ತವ ಯದಿದಂ ಸನಾತನಂ ರಾಜಧರ್ಮಯುಕ್ತಂ ನಾಶರಹಿತಂ ವಿಶ್ವರೂಪಂ ರಾಷ್ಟ್ರಮಸ್ತಿ, ತದಿದಂ ಭವದ್ದತ್ತಮಸ್ಮಾಕಮಸ್ತು.

(ಯುಷ್ಮತ್ಕ್ಷತ್ರಮಜರಂ ತೇ ಅಸ್ತು) ಓ ಮಹಾರಾಜ! ಅಧಿರಾಜ! ಈಶ್ವರ! ನಿಮ್ಮ ಯಾವ ಸನಾತನವೂ ರಾಜಧರ್ಮಯುಕ್ತವೂ, ನಾಶರಹಿತವೂ ಜಗತ್ತಿನ ರೂಪದಲ್ಲಿರುವುದೂ ಆದ ಈ ರಾಷ್ಟ್ರ ವಿದೆಯೋ, ಅದು ನಿಮ್ಮಿಂದ ಕೊಡಲ್ಪಟ್ಟುದಾಗಿ, ನಮ್ಮದಾಗಲಿ!

ಅಂದರೆ, ಓ ಜಗದೀಶ್ವರ! ನಿಮ್ಮ ರಾಜ್ಯವು ಎಲ್ಲಾ ಜಗತ್ತಿಗೂ ವಿವಿಧ ಪ್ರಕಾರದ ಸುಖ ಸಿಗಲೆಂದು, ನಿತ್ಯವೂ ತರುಣವಾಗಿರಲಿ!

ಇತಿ ಯಾಚಿತಃ ಸನ್ನಾಶೀರ್ದದಾತೀದಂ ಭೂಗೋಲಾಖ್ಯಂ ಯುಷ್ಮದಧೀನಮಸ್ತು ॥ ೧೩ ॥

ಹೀಗೆಂದು ಪ್ರಾರ್ಥಿಸಲ್ಪಡುತ್ತಿರುವ (ಈಶ್ವರನು) ಆಶೀರ್ವಾದವನ್ನು ಕೊಡುತ್ತಾನೇನೆಂದರೆ_

'ಈ 'ಭೂಗೋಳ' ಎಂಬ ಹೆಸರಿನ [ರಾಜ್ಯವು] ನಿಮ್ಮ ಅಧೀನಕ್ಕೆ ಒಳಗಾಗಲಿ!'

ಅಂದರೆ, ಈ ರೀತಿಯಲ್ಲಿ ಯಾವ ಮನುಷ್ಯರು ತಮ್ಮ ಸತ್ಯ, ಪ್ರೇಮ, ಹಾಗೂ ಪುರುಷಾರ್ಥದಿಂದ ಈಶ್ವರನ ಭಕ್ತಿಯನ್ನೂ ಮತ್ತು ಅವನ ಆಜ್ಞಾಪಾಲನೆ ಯನ್ನೂ ಮಾಡುತ್ತಾರೋ, ಅವರಿಗೆ ಅವನು_

'ನನ್ನಿಂದ ರಚಿತವಾದ ಭೂಗೋಳದ ರಾಜ್ಯವು ನಿಮ್ಮ ಆಧೀನವಾಗಲಿ',

ಎಂದು ಆಶೀರ್ವಾದವನ್ನು ಕೊಡುತ್ತಾನೆ. [೧೩]

ಶತ್ರುನಾಶಕಾಗಿ ಸ್ಥಿರ-ದೃಢ ಆಯುಧಗಳು

[ಋಷಿಃ_ ಕಣ್ವೋ ಘೌರಃ ; ದೇವತಾ_ ಮರುತಃ ; ಛಂದಃ_ ವಿರಾಟ್ ಸತಃಪಂಕ್ತಿಃ ; ಸ್ವರಃ_ ಪಂಚಮಃ]

ಸ್ಥಿರಾ ವಃ ಸಂತ್ವಾಯುಧಾ ಪರಾಣುದೇ ವೀಳೂ ಉತ ಪ್ರತಿಷ್ಕಭೇ ।
ಯುಷ್ಮಾಕಮಸ್ತು ತವಿಷೀ ಪನೀಯಸೀ ಮಾ ಮರ್ತ್ಯಸ್ಯ ಮಾಯಿನಃ
॥ ೧೪ ॥

[ಋಗ್ವೇದೇ ಅ.೧, ಅ.೩, ವ.೧೮, ಮಂ.೨]

[ಅರ್ಥ:_ "ನಿಮ್ಮ ಆಯುಧಗಳು ಸ್ಥಿರವೂ, ದೃಢವೂ ಮತ್ತು ಶತ್ರುನಾಶಕ್ಕಾಗಿಯೂ, ಹಾಗೂ ಅವರ ಪರಾಜಯಕ್ಕಾಗಿಯೂ ಆಗಿರಲಿ! ನಿಮ್ಮ [ಸೇನೆಯು] ಅತ್ಯಂತ ಬಲಶಾಲಿಯೂ, ಅಖಂಡಿತವೂ ಆಗಿರಲಿ! [ಆದರೆ,] ಅನ್ಯಾಯಕಾರಿಯಾದ ಮನುಷ್ಯನ [ಆಯುಧಾದಿಗಳು] ಹೀಗಿರುವುದು ಬೇಡ!"

(ಋಗ್ವೇದ: ೧. ೩೯. ೨೦)]

ಭಾಷ್ಯಮ್_

(ಸ್ಥಿರಾ ವಃ.) ಅಸ್ಯಾರ್ಥಃ ಪ್ರಾರ್ಥನಾವಿಷಯ ಉಕ್ತಃ ॥೧೪॥*

ಭಾಷ್ಯ_

(ಸ್ಥಿರಾ ವಃ.) ಇದರ ಅರ್ಥವನ್ನು ಪ್ರಾರ್ಥನಾ ವಿಷಯದಲ್ಲಿ ಹೇಳಲಾಗಿದೆ.* [೧೪]

ರಾಜನನ್ನಾಶ್ರಯಿಸಿ ಯುದ್ಧ ಮಾಡಬೇಕು!

[ಋಷಿಃ_ ಅಥರ್ವಾ ; ದೇವತಾ_ ಅಧ್ಯಾತ್ಮಮ್, ವ್ರಾತ್ಯಃ ; ಛಂದಃ_ ಆರ್ಚೀ ಗಾಯತ್ರೀ ; ಸ್ವರಃ_ ಷಡ್ಜಃ]

ತಂ ಸಭಾ ಚ ಸಮಿತಿಶ್ಚ ಸೇನಾ ಚ+ ॥೧೫॥

[ಅಥರ್ವವೇದೇ ಕಾಂ. ೧೫, ಅನು. ೨, ವ. ೯, ಮಂ. ೨]

[ಅರ್ಥ:_ "ಅವನನ್ನು ಸಭೆಯೂ ಮತ್ತು ಸಮಿತಿಯೂ ಮತ್ತು ಸೇನೆಯೂ+"

(ಅಥರ್ವವೇದ: ೧೫. ೯. ೨)]

ಭಾಷ್ಯಮ್_

(ತಂ ಸಭಾ ಚ) ರಾಜಸಭಾ ಪ್ರಜಾ ಚ ತಂ ಪೂರ್ವೋಕ್ತಂ ಸರ್ವರಾಜಾಧಿರಾಜಂ ಪರಮೇಶ್ವರಂ ತಥಾ ಸಭಾಧ್ಯಕ್ಷಮಭಿಷಿಚ್ಯ ರಾಜಾನಂ ಮನ್ಯೇತ.

(ಸಮಿತಿಶ್ಚ) ತಮನುಶ್ರಿತ್ಯೈವ ಸಮಿತಿರ್ಯುದ್ಧಮ್ ಆಚರಣೀಯಮ್.

ಭಾಷ್ಯ_

(ತಂ ಸಭಾ ಚ) ರಾಜಸಭೆಯೂ ಮತ್ತು ಪ್ರಜೆಗಳೂ ಕೂಡ, ಮೇಲೆ ಹೇಳಿದ ಆ ಎಲ್ಲರ ರಾಜಾಧಿರಾಜನಾದ ಪರಮೇಶ್ವರನನ್ನೂ, ಹಾಗೂ ಸಭಾಧ್ಯಕ್ಷನನ್ನೂ ಅಭಿಷೇಕ ಮಾಡಿ, **'ರಾಜಾ'**, ಎಂದು ಅಂಗೀಕರಿಸಬೇಕು!

ಅಂದರೆ, ಪ್ರಜೆಗಳೂ, ಹಾಗೂ ಎಲ್ಲಾ ಸಭಾಸದರೂ ರಾಜರುಗಳ ರಾಜನಾದ ಪರಮೇಶ್ವರನನ್ನು ತಿಳಿದುಕೊಂಡು, ಎಲ್ಲಾ ಸಭೆಗಳಲ್ಲಿಯೂ ಸಭಾಧ್ಯಕ್ಷನ ಅಭಿಷೇಕವನ್ನು ಮಾಡಲಿ!

(ಸಮಿತಿಶ್ಚ) ಅವನನ್ನು ಆಶ್ರಯಿಸಿಯೇ **'ಸಮಿತಿ'**, ಎಂದರೆ ಯುದ್ಧವನ್ನು ಮಾಡಬೇಕು!

---

* ಪೂರ್ವತ್ರ '(೧೩) ಈಶ್ವರಸ್ತುತಿ-ಪ್ರಾರ್ಥನಾ-ಯಾಚನಾ-ಸಮರ್ಪಣವಿಷಯ'ನಾಮ್ನ್ಯಧ್ಯಾಯೇ ೪೨೫ತಮಂ ಪೃಷ್ಠಂ ದ್ರಷ್ಟವ್ಯಮ್ _ಅನು.

\+ ಇತೋಽಗ್ರೇ_ 'ಸುರಾ ಚಾನುವ್ಯಚಲನ್' ಇತಿ ಸಂಹಿತಾ-ಪಾಠೋ ವಿದ್ಯತೇ _ಅನು.

* ಹಿಂದಿನ '(೧೩) ಈಶ್ವರಸ್ತುತಿ-ಪ್ರಾರ್ಥನೆ-ಯಾಚನೆ-ಸಮರ್ಪಣೆ', ಎಂಬ ಅಧ್ಯಾಯದಲ್ಲಿ ೪೨೫ ನೆಯ ಪುಟವನ್ನು ನೋಡಿ _ಅನು.

\+ ಇದರ ಮುಂದೆ_ "ಮತ್ತು ಸುರರೂ ಕೂಡ, ಹಿಂಬಾಲಿಸಿ, ನಡೆದರು", ಎಂದು ಶೇಷವೇದಮಂತ್ರದ ಅರ್ಥವಿದೆ _ಅನು.

ಅಂದರೆ, ಮನುಷ್ಯರೆಲ್ಲರಿಗೂ ಉಚಿತವಾದುದೇನೆಂದರೆ_ ಪರಮೇಶ್ವರನ, ಮತ್ತು ಸರ್ವೋಪಕಾರಕವಾದ ಧರ್ಮದ ಆಶ್ರಯವನ್ನೇ ತೆಗೆದುಕೊಂಡು, ಯುದ್ಧ ಮಾಡಬೇಕು!

(ಸೇನಾ ಚ) ತಥಾ ವೀರಪುರುಷಾಣಾಂ ಯಾ ಸೇನಾ ಸಾಽಪಿ ಪರಮೇಶ್ವರಂ, ಸಸಭಾಧ್ಯಕ್ಷಾಂ ಸಭಾಂ ಸ್ವಸೇನಾನೀಂ ಚಾನುಶ್ರಿತ್ಯ ಯುದ್ಧಂ ಕುರ್ಯ್ಯಾತ್ ॥ ೧೫ ॥

(ಸೇನಾ ಚ) ಮತ್ತು ವೀರಪುರುಷರುಗಳ ಯಾವ ಸೇನೆ ಇದೆಯೋ, ಅದೂ ಕೂಡ, ಪರಮೇಶ್ವರನನ್ನೂ, ಸಭಾಧ್ಯಕ್ಷನಿಂದ ಕೂಡಿದ ಸಭೆಯನ್ನೂ ಮತ್ತು ತನ್ನ ಸೇನಾಪತಿಯನ್ನೂ ಆಶ್ರಯಿಸಿಕೊಂಡು, ಯುದ್ಧ ಮಾಡಬೇಕು!

ಅಂದರೆ, ಯಾವ ಸೇನೆ, ಸೇನಾಪತಿ ಮತ್ತು ಸಭಾಧ್ಯಕ್ಷ ಇದ್ದಾರೋ, ಅವರೆಲ್ಲರೂ ಸಭೆಯ ಆಶ್ರಯದಿಂದ ವಿಚಾರಪೂರ್ವಕವಾಗಿ ಉತ್ತಮ ಸೇನೆಯನ್ನು ಸಿದ್ಧಗೊಳಿಸಿ, ಪ್ರಜಾಪಾಲನೆಯನ್ನೂ, ಹಾಗೂ ಯುದ್ಧವನ್ನೂ ಮಾಡಬೇಕು! [೧೫]

ವೀರನನ್ನು ಪ್ರೋತ್ಸಾಹಿಸಿ ಯುದ್ಧ ಮಾಡಿರಿ!

[ಋಷಿಃ_ ಅಥರ್ವಾ ; ದೇವತಾ_ ದೇವಾಃ ; ಛಂದಃ_ ಭುರಿಕ್ ತ್ರಿಷ್ಟುಪ್ ; ಸ್ವರಃ_ ಧೈವತಃ]

ಇಮಂ ವೀರಮನು ಹರ್ಷಧ್ವಮುಗ್ರಮಿಂದ್ರಂ
ಸಖಾಯೋ ಅನು ಸಂ ರಭಧ್ವಮ್ ।
ಗ್ರಾಮಜಿತಂ ಗೋಜಿತಂ ವಜ್ರಬಾಹುಂ
ಜಯಂತಮಜ್ಮ ಪ್ರಮೃಣಂತಮೋಜಸಾ ॥ ೧೬ ॥

[ಅಥರ್ವವೇದೇ ಕಾಂ. ೬, ಅನು. ೧೦, ವ. ೯೭, ಮಂ. ೩]

[ಅರ್ಥ:_ "ಮಿತ್ರರೇ! ತೇಜಸ್ವಿಯೂ, ಐಶ್ವರ್ಯವಂತನೂ, ಗ್ರಾಮಗಳನ್ನು ಜಯಿಸಿದವನೂ, ಗೋವುಗಳನ್ನು ಜಯಿಸಿದವನೂ, ಕಠಿಣಬಾಹುಗಳನ್ನುಳ್ಳವನೂ, ಜಯಶೀಲನೂ, ಓಜಸ್ಸಿನಿಂದ [ಶತ್ರುಗಳನ್ನು] ಅರೆದುಹಾಕುವವನೂ ಆದ ಈ ವೀರನನ್ನು ಪ್ರೋತ್ಸಾಹಿಸಿರಿ! [ಇವನನ್ನು] ಅನುಸರಿಸಿ, ಚೆನ್ನಾಗಿ ಯುದ್ಧ ಮಾಡಿರಿ! ನಾವು ಗೆಲ್ಲೋಣ!"

(ಅಥರ್ವವೇದಃ ೬. ೯೭. ೩)]

ಭಾಷ್ಯಮ್_

ಈಶ್ವರಃ ಸರ್ವಾನ್ ಮನುಷ್ಯಾನ್ ಪ್ರತ್ಯುಪದಿಶತಿ_

ಭಾಷ್ಯ_

ಈಶ್ವರನು ಮನುಷ್ಯರೆಲ್ಲರಿಗೆ ಉಪದೇಶ ಮಾಡುತ್ತಾನೇನೆಂದರೆ_

(ಸಖಾಯಃ) ಹೇ ಸಖಾಯಃ! (ಇಮಂ ವೀರಮ್) ಶತ್ರೂಣಾಂ ಹಂತಾರಂ ; ಯುದ್ಧಕುಶಲಂ, ನಿರ್ಭಯಂ ;	(ಸಖಾಯಃ) ಎಲೈ ಮಿತ್ರರೇ! (ಇಮಂ ವೀರಮ್) ಶತ್ರುಗಳನ್ನು ಕೊಲ್ಲುವವನೂ, ಯುದ್ಧ-ಕುಶಲನೂ, ನಿರ್ಭಯನೂ;
(ಉಗ್ರಮ್) ತೇಜಸ್ವಿನಂ ಪ್ರತಿರಾಜಪುರುಷಂ ;	(ಉಗ್ರಮ್) ತೇಜಸ್ವಿಯೂ, ರಾಜಪುರುಷರಿಗೆ ಸ್ಪರ್ಧಿಯಾಗಿರುವವನೂ ಆದ ಇವನನ್ನು ;
(ಇಂದ್ರಮ್) ತಥೇಂದ್ರಂ ಪರಮೈಶ್ವರ್ಯ್ಯವಂತಂ ಪರಮೇಶ್ವರಂ ;	(ಇಂದ್ರಮ್) ಮತ್ತು 'ಇಂದ್ರ', ಎಂದರೆ ಪರಮೈಶ್ವರ್ಯವಂತನಾದ ಪರಮೇಶ್ವರನನ್ನು ;
(ಅನು ಹರ್ಷದ್ವಮ್) ಸರ್ವೇ ಯೂಯಮನು-ಮೋದಯದ್ವಮ್.	(ಅನು ಹರ್ಷದ್ವಮ್) ನೀವೆಲ್ಲರೂ ಅನುಮೋದಿಸಿರಿ!
	ಅಂದರೆ, ಓ ಬಂಧುಜನರೇ! ಶೂರ-ವೀರರೇ! ನ್ಯಾಯ ಮತ್ತು ದೃಢಭಕ್ತಿಯಿಂದ, ಅನಂತ ಬಲವಂತನಾದ ಪರಮೇಶ್ವರನನ್ನು **'ಇಷ್ಟದೇವ'**ನೆಂದು ಗ್ರಹಿಸಿ, ಶೂರ-ವೀರಜನರನ್ನು ಯಾವಾಗಲೂ ಆನಂದದಲ್ಲಿಡಿರಿ!
ಏವಂ ಕೃತ್ವೈವ ದುಷ್ಟಶತ್ರೂಣಾಂ ಪರಾ-ಜಯಾರ್ಥಂ (ಅನು ಸಂರಭದ್ವಮ್) ಯುದ್ಧಾರಂಭಂ ಕುರುತ.	ಹೀಗೆ ಮಾಡಿಯೇ, ದುಷ್ಟಶತ್ರುಗಳ ಪರಾಜಯಕ್ಕಾಗಿ (ಅನು ಸಂರಭದ್ವಮ್) ಯುದ್ಧದ ಆರಂಭವನ್ನು ಮಾಡಿರಿ!
	ಅಂದರೆ, ನೀವು ಅತ್ಯಂತ ಉಗ್ರ ಪರಮೇಶ್ವರನ ಸಹಾಯದಿಂದ, ಒಂದು ಸಮ್ಮತಿಯನ್ನುಳ್ಳವರಾಗಿ, ದುಷ್ಟರನ್ನು ಯುದ್ಧದಲ್ಲಿ ಗೆಲ್ಲುವ ಉಪಾಯವನ್ನು ಮಾಡಿರಿ!
ಕಥಂಭೂತಂ ತಮ್?	ಹೇಗಿರುವಂತಹ ಆ [ವೀರ]ನನ್ನು? ಎಂದರೆ_
(ಗ್ರಾಮಜಿತಮ್) ಯೇನ ಪೂರ್ವಂ ಶತ್ರೂಣಾಂ ಸಮೂಹಾ ಜಿತಾಃ ;	(ಗ್ರಾಮಜಿತಮ್) ಯಾವನಿಂದ ಮೊದಲೇ ಶತ್ರುಗಳ ಸಮೂಹಗಳು ಜಯಿಸಲ್ಪಟ್ಟಿವೆಯೋ ;
(ಗೋಜಿತಮ್) ಯೇನೇಂದ್ರಿಯಾಣಿ ಪೃಥಿವ್ಯಾದಿಕಂ ಚ ಜಿತಂ ;	(ಗೋಜಿತಮ್) ಯಾವನಿಂದ ಇಂದ್ರಿಯಗಳೂ, ಹಾಗೂ ಪೃಥಿವೀ ಮೊದಲಾದುವೂ ಗೆಲ್ಲಲ್ಪಟ್ಟಿವೆಯೋ;
	ಅಂದರೆ, ಯಾವನು ಭೂಗೋಳವೆಲ್ಲವನ್ನೂ ಮತ್ತು ಎಲ್ಲರ ಮನಸ್ಸು, ಹಾಗೂ ಇಂದ್ರಿಯಗಳನ್ನೂ ಗೆದ್ದಿದ್ದಾನೋ ;
(ವಜ್ರಬಾಹುಮ್) ವಜ್ರಃ ಪ್ರಾಣೋ ಬಲಂ ಬಾಹುರ್ಯಸ್ಯ ;	(ವಜ್ರಬಾಹುಮ್) 'ವಜ್ರ', ಎಂದರೆ ಪ್ರಾಣ; 'ಬಾಹು', ಎಂದರೆ [ಅದರ] ಬಲ; ಯಾವನದಾಗಿವೆಯೋ;

ಅಂದರೆ, ಪ್ರಾಣವೇ ಯಾವನಿಗೆ ಬಾಹು [ಸದೃಶ]ವಾಗಿದೆಯೋ;

(ಜಯಂತಮ್) ಜಯಂ ಪ್ರಾಪ್ನುವಂತಂ;

(ಜಯಂತಮ್) ಜಯವನ್ನು ಗಳಿಸುವವನಾಗಿದ್ದಾನೋ ;

ಅಂದರೆ, ಯಾವನು ನಮ್ಮೆಲ್ಲರನ್ನೂ ಗೆಲ್ಲಿಸುವವನಾಗಿದ್ದಾನೋ ;

(ಪ್ರಮೃಣಂತಮೋಜಸಾ) ಓಜಸಾ ಬಲೇನ ಶತ್ರೂನ್ ಪ್ರಕೃಷ್ಟತಯಾ ಹಿಂಸಂತಮ್; [ತಮ್];

(ಪ್ರಮೃಣಂತಮೋಜಸಾ) 'ಓಜಸಾ', ಎಂದರೆ ಬಲದಿಂದ ಶತ್ರುಗಳನ್ನು ಅತಿಶಯವಾಗಿ ಪೀಡಿಸುವವನೂ ಆದ ಅವನನ್ನು ;

ಅಂದರೆ, ಯಾವನು ತನ್ನ ಅನಂತ ಪರಾಕ್ರಮದಿಂದ, ದುಷ್ಟರ ಪರಾಜಯ ಮಾಡಿ, ನಮಗೆ ಸುಖವನ್ನು ಕೊಡುತ್ತಾನೋ, ಅವನನ್ನು ;

(ಅಜ್ಮ) ವಯಂ ಸಮಾಶ್ರಿತ್ಯ ಸದಾ ವಿಜಯಂ ಪ್ರಾಪ್ನುಮಃ ॥ ೧೬ ॥

(ಅಜ್ಮ) ನಾವು ಸಮಾಶ್ರಯಿಸಿಕೊಂಡು, ಯಾವಾಗಲೂ ವಿಜಯವನ್ನು ಗಳಿಸೋಣ!

ಸಭ್ಯನೇ! ಸಭೆಯನ್ನು ರಕ್ಷಿಸು!

[ಋಷಿಃ_ ಭೃಗುಃ ; ದೇವತಾ_ ಅಗ್ನಿಃ ; ಛಂದಃ_ ಭುರಿಗುಷ್ಣಿಕ್ ; ಸ್ವರಃ_ ಋಷಭಃ]

ಸಭ್ಯ ಸಭಾಂ ಮೇ ಪಾಹಿ ಯೇ ಚ ಸಭ್ಯಾಃ ಸಭಾಸದಃ ।

ತ್ವಯೇದ್ಗಾಃ ಪುರುಹೂತ ವಿಶ್ವಮಾಯುರ್ವ್ಯಶ್ನವಮ್ ॥ ೧೭ ॥ *

[ಅಥರ್ವವೇದೇ ಕಾಂ. ೧೯, ಅನು. ೭, ವ. ೫೫, ಮಂ. ೬]

[ಅರ್ಥ:_ "ಸಭ್ಯನೇ! ನನ್ನ ಸಭೆಯನ್ನು ರಕ್ಷಿಸು! ಯಾರು ಸಭ್ಯರೂ, ಸಭಾಸದರೂ ಆಗಿದ್ದಾರೋ, ಅವರು ನಿನ್ನ ಜೊತೆಗೆ [ಇದ್ದು,] (ರಾಜಧರ್ಮಜ್ಞಾನವನ್ನು) ಪ್ರಾಪ್ತಮಾಡಿಕೊಂಡಿದ್ದಾರೆ. ಬಹುಪೂಜಿತನೇ! ನಾನು ಸಂಪೂರ್ಣ ಆಯುಸ್ಸನ್ನು ಭೋಗಿಸಲಿ!"

(ಅಥರ್ವವೇದಃ ೧೯. ೫೫. ೬)]

---

* ಅಥರ್ವಸಂಹಿತಾಯಾಂ ಮಂತ್ರಸ್ಯಾಸ್ಯ ಪೂರ್ವಾರ್ಧಃ ಪಾಠಃ ಪಂಚಮಸ್ಯ ಮಂತ್ರಸ್ಯೋತ್ತರಾರ್ಧೇ ವರ್ತತೇ. ಅಸ್ಯೋತ್ತರಾರ್ಧಃ ಪಾಠಃ ಷಷ್ಠೇ ಮಂತ್ರೇ_ 'ತ್ವಮಿಂದ್ರಾ ಪುರುಹೂತ ವಿಶ್ವಮಾಯುರ್ವ್ಯಶ್ನವತ್' ಇತಿ ವರ್ತತೇ.

ಭಾಷ್ಯಮ್_

(ಸಭ್ಯ ಸಭಾಂ ಮೇ ಪಾಹಿ) ಹೇ ಸಭಾಯಾಂ ಸಾಧೋ ಪರಮೇಶ್ವರ! ಮೇ ಮಮ ಸಭಾಂ ಯಥಾವತ್ ಪಾಲಯ.

'ಮೇ' ಇತ್ಯಸ್ಮಚ್ಛಬ್ದನಿರ್ದೇಶಾತ್ ಸರ್ವಾನ್ ಮನುಷ್ಯಾನಿದಂ ವಾಕ್ಯಂ ಗೃಹ್ಣಾತೀತಿ.

(ಯೇ ಚ ಸಭ್ಯಾಃ ಸಭಾಸದಃ) ಯೇ ಸಭಾ-ಕರ್ಮಸು ಸಾಧವಶ್ಚತುರಾಃ, ಸಭಾಯಾಂ ಸೀದಂತಿ ;

ತೇಽಸ್ಮಾಕಂ ಪೂರ್ವೋಕ್ತಾಂ ತ್ರಿವಿಧಾಂ ಸಭಾಂ ಪಾಂತು ಯಥಾವದ್ ರಕ್ಷಂತು.

(ತ್ವಯೇದ್ಗಾಃ ಪುರುಹೂತ) ಹೇ ಬಹುಭಿಃ ಪೂಜಿತ ಪರಮಾತ್ಮನ್! ತ್ವಯಾ ಸಹ ಯೇ ಸಭಾಧ್ಯಕ್ಷಾಃ ಸಬಾಸದ ಇದ್ಗಾ ಇತಂ ರಾಜಧರ್ಮ-ಜ್ಞಾನಂ ಗಚ್ಛಂತಿ, ತ ಏವ ಸುಖಂ ಪ್ರಾಪ್ನುವಂತಿ.

(ವಿಶ್ವಮಾಯುರ್ವ್ಯಶ್ನವಮ್) ಏವಂ ಸಭಾ-ಪಾಲಿತೋಽಹಂ ಸರ್ವೋ ಜನಃ ಶತವಾರ್ಷಿಕಂ ಸುಖಯುಕ್ತಮಾಯುಃ ಪ್ರಾಪ್ನುಯಾಮ್ ॥ ೧೭ ॥

ಭಾಷ್ಯ_

(ಸಭ್ಯ ಸಭಾಂ ಮೇ ಪಾಹಿ) ಸಭೆಯಲ್ಲಿ ಸಾಧುವಾಗಿರುವವನಾದ ಓ ಪರಮೇಶ್ವರ! ನನ್ನ ಸಭೆಯನ್ನು ಯಥಾವತ್ತಾಗಿ ಪಾಲಿಸಿ!

ಅಂದರೆ, ಸಭೆಗೆ ಯೋಗ್ಯನಾದ ಹೇ ಪರಮೇಶ್ವರ! ನೀವು ನಮ್ಮ ರಾಜಸಭೆಯನ್ನು ರಕ್ಷಿಸಿ!

'ಮೇ', ಎಂದು 'ಅಸ್ಮತ್' ಶಬ್ದದ ನಿರ್ದೇಶವಿರುವುದರಿಂದ, ಎಲ್ಲಾ ಮನುಷ್ಯರನ್ನೂ ಈ ವಾಕ್ಯವು ಗ್ರಹಣ ಮಾಡುತ್ತದೆ, [ಎಂದು ತಿಳಿಯಬೇಕು!]

(ಯೇ ಚ ಸಭ್ಯಾಃ ಸಭಾಸದಃ) **'ಸಭ್ಯಾಃ'**, ಎಂದರೆ ಯಾರು ಸಭಾಕಾರ್ಯಗಳಲ್ಲಿ ಯೋಗ್ಯರೂ, ಚತುರರೂ [ಆಗಿರುತ್ತಾರೋ, ಮತ್ತು] **'ಸಭಾಸದಃ'**, ಎಂದರೆ ಯಾರು ಸಭೆಯಲ್ಲಿ ಕುಳಿತಿರುತ್ತಾರೋ ;

ಅವರು ಮೇಲೆ ಹೇಳಿದ ನಮ್ಮ ಮೂರು ವಿಧದ ಸಭೆಯನ್ನು ಯಥಾವತ್ತಾಗಿ ಪಾಲಿಸಲಿ; ಎಂದರೆ ರಕ್ಷಿಸಲಿ!

ಅಂದರೆ, ಸಭೆಯ ಸಭಾಸದರಾದ ನಾವೆಲ್ಲರೂ ನಿಮ್ಮ ಕೃಪೆಯಿಂದ ಸಭ್ಯತೆಯಿಂದ ಕೂಡಿದ್ದು, ಉತ್ತಮ ರೀತಿಯಿಂದ ಸತ್ಯನ್ಯಾಯದ ರಕ್ಷಣೆ ಮಾಡೋಣ!

(ತ್ವಯೇದ್ಗಾಃ ಪುರುಹೂತ) ಬಹಳ ಜನರಿಂದ ಪೂಜಿತನಾದ ಓ ಪರಮಾತ್ಮಾ! ನಿಮ್ಮ ಜೊತೆಗಿದ್ದು, ಯಾವ ಸಭಾಧ್ಯಕ್ಷರೂ, ಸಭಾಸದರೂ ರಾಜಧರ್ಮದ ಜ್ಞಾನವನ್ನು ಹೊಂದುತ್ತಾರೋ, ಅವರೇ ಸುಖವನ್ನು ಪಡೆಯುತ್ತಾರೆ.

(ವಿಶ್ವಮಾಯುರ್ವ್ಯಶ್ನವಮ್) ಹೀಗೆ, ಸಭೆಯಿಂದ ಪಾಲಿತನಾದ ನಾನು [ಮತ್ತು] ಜನರೆಲ್ಲರೂ ನೂರು ವರ್ಷ ಕಾಲದ ಸುಖದಿಂದ ಕೂಡಿದ ಆಯಸ್ಸನ್ನು ಪಡೆಯೋಣ!

ಅಂದರೆ, ಓ ಎಲ್ಲರ ಉಪಾಸ್ಯದೇವ! ನಾವೆಲ್ಲರೂ ನಿಮ್ಮ ಸಹಾಯದಿಂದಲೇ ನಿಮ್ಮ ಆಜ್ಞೆಯನ್ನು ಪಾಲಿಸುತ್ತಿರೋಣ! ಮತ್ತು ಇದರಿಂದ, ಸಂಪೂರ್ಣ ಆಯುಸ್ಸನ್ನು ಸುಖದಿಂದ ಭೋಗಿಸೋಣ! [೧೭]

ಇಯಂ ರಾಜಧರ್ಮವ್ಯಾಖ್ಯಾ ವೇದರೀತ್ಯಾ ಸಂಕ್ಷೇಪೇಣ ಲಿಖಿತಾ.

ಈ ರಾಜಧರ್ಮದ ವ್ಯಾಖ್ಯೆಯು ವೇದದ ರೀತಿಯಿಂದ ಸಂಕ್ಷೇಪವಾಗಿ ಬರೆಯಲ್ಪಟ್ಟಿತು.

ಅಂದರೆ, ಈ ಪ್ರಕಾರವಾಗಿ **ರಾಜಾ** ಮತ್ತು ಪ್ರಜೆಗಳ ಧರ್ಮವನ್ನು ವೇದದ ರೀತಿಯಿಂದ ಸಂಕ್ಷೇಪವಾಗಿ ಹೇಳಿದೆವು.

ಅತೋಽಗ್ರ ಐತರೇಯಶತಪಥಬ್ರಾಹ್ಮಣಾದಿ-ಗ್ರಂಥರೀತ್ಯಾ ಸಂಕ್ಷೇಪತೋ ಲಿಖ್ಯತೇ.

ಈಗ ಮುಂದೆ, **ಐತರೇಯ-ಶತಪಥಬ್ರಾಹ್ಮಣ** ಮೊದಲಾದ ಗ್ರಂಥಗಳ ರೀತಿಯಿಂದ ಸಂಕ್ಷೇಪವಾಗಿ ಬರೆಯಲ್ಪಡುತ್ತದೆ.

ಅಂದರೆ, ಯಾವ **ಐತರೇಯ** ಮತ್ತು **ಶತಪಥ ಬ್ರಾಹ್ಮಣ** ಮೊದಲಾದ ಗ್ರಂಥಗಳು ವೇದಗಳ ಸನಾತನ ವ್ಯಾಖ್ಯೆಗಳಾಗಿವೆಯೋ, ಅವುಗಳ ಸಾಕ್ಷ್ಯವನ್ನೂ ಇಲ್ಲಿ ಬರೆಯುತ್ತೇವೆ.

ತದ್ಯಥಾ_

ಅದು ಹೇಗೆಂದರೆ_

ಉಗ್ರತ್ವ ಮತ್ತು ಸಹನಶೀಲತ್ವ ಕ್ಷಾತ್ರಧರ್ಮದ ಸ್ವರೂಪ

"ಜನಿಷ್ಠಾ ಉಗ್ರಃ ಸಹಸೇ ತುರಾಯೇತಿ ಸೂಕ್ತಮುಗ್ರವತ್ಸಹಸ್ವತ್ತತ್ ಕ್ಷತ್ರಸ್ಯ ರೂಪಂ; ಮಂದ್ರ ಓಜಿಷ್ಠ ಇತ್ಯೋಜಸ್ವತ್ ತತ್ ಕ್ಷತ್ರಸ್ಯ ರೂಪಮ್ ॥೧॥"

[ಐತರೇಯಬ್ರಾಹ್ಮಣೇ ಪಂ. ೮, ಅ. ೧, ಕಂ. ೨]

[ಅರ್ಥ:_"ಜನರ ಬಗ್ಗೆ ಉಗ್ರತ್ವ ಮತ್ತು ಆತುರತೆಯಿಂದ ಸಹನಶೀಲತ್ವವು ಇರಬೇಕೆಂದು ಹೇಳಲಾಗಿದೆ. ಉಗ್ರವಾಗಿರುವುದು ಮತ್ತು ಸಹನಶೀಲತೆಯಿಂದಿರುವುದು ಕ್ಷಾತ್ರಧರ್ಮದ ಸ್ವರೂಪ! ಆನಂದದ ಅತ್ಯಂತ ಓಜಸ್ಸು; ಹೀಗೆ ಓಜಸ್ಸಿನಿಂದಿರುವುದು! ಇದು ರಾಜನ ರೂಪವಾಗಿದೆ."

(ಐತರೇಯಬ್ರಾಹ್ಮಣ: ೮. ೧. ೨)]

ಭಾಷ್ಯಮ್_

ಭಾಷ್ಯ_

(ಜನಿಷ್ಠಾ ಉಗ್ರಃ) ರಾಜಸಭಾಯಾಂ ಜನಿಷ್ಠಾ ಅತಿಶಯೇನ ಜನಾ ವಿದ್ವಾಂಸೋ ಧರ್ಮಾತ್ಮಾನಃ;

(ಜನಿಷ್ಠಾ ಉಗ್ರಃ) ರಾಜಸಭೆಯಲ್ಲಿ ಉತ್ತಮ ಮನುಷ್ಯರು, ಎಂದರೆ ವಿದ್ವಾಂಸರೂ, ಧರ್ಮಾತ್ಮರೂ;

ಶ್ರೇಷ್ಠಪ್ರಕೃತೀನ್ ಮನುಷ್ಯಾನ್ ಪ್ರತಿ ಸದಾ ಸುಖದಾಸ್ಸೋಮ್ಯಾ ಭವೇಯುಃ;

ಶ್ರೇಷ್ಠಸ್ವಭಾವವುಳ್ಳವರಾದ ಮನುಷ್ಯರ ಬಗ್ಗೆ ಯಾವಾಗಲೂ ಸುಖದಾತೃಗಳಾಗಿಯೂ, ಸೌಮ್ಯರಾಗಿಯೂ ಇರಬೇಕು!

ತಥಾ ದುಷ್ಟಾನ್ ಪ್ರತ್ಯುಗ್ರೋ ವ್ಯವಹಾರೋ ಧಾರ್ಯ್ಯ ಇತಿ.

ಮತ್ತು ದುಷ್ಟರ ಬಗ್ಗೆ ಉಗ್ರವಾದ ವ್ಯವಹಾರವನ್ನಿಡಬೇಕು!

ಅಂದರೆ, ರಾಜನ ಸೇನೆಯಲ್ಲಿ ಮತ್ತು ಸಭೆಗಳಲ್ಲಿ ಯಾವ ಪುರುಷರಿರುತ್ತಾರೋ, ಅವರು ದುಷ್ಟರ ಮೇಲೆ ತೇಜಸ್ಸನ್ನೂ ಮತ್ತು ಶ್ರೇಷ್ಠರ ಮೇಲೆ ಶಾಂತರೂಪವನ್ನೂ ಬೀರುತ್ತಾ, ಸುಖ-ದುಃಖಗಳನ್ನು ಸಹಿಸುವವರಾಗಿದ್ದು ಕೊಂಡು, ಧನಕ್ಕಾಗಿ ಅತ್ಯಂತ ಪುರುಷಾರ್ಥಿಗಳಾಗಿರ ಬೇಕು!

ಕುತೋ , ಯದ್ರಾಜಕರ್ಮ್ಮಾಸ್ತಿ, ತದ್ ದ್ವಿವಿಧಂ ಭವತಿ_

ಏಕೆಂದರೆ, ಯಾವುದು ರಾಜಕರ್ಮ, ಎನಿಸುತ್ತದೋ, ಅದು ಎರಡು ವಿಧದವಾಗಿರುತ್ತದೆ_

ಏಕಂ ಸಹಸ್ವದ್; ದ್ವಿತೀಯಮುಗ್ರವದ್;

ಒಂದು, 'ಸಹನೆ'ಯುಳ್ಳದ್ದು; ಮತ್ತು ಎರಡನೆ ಯದು, 'ಉಗ್ರ'ವಾಗಿರುವುದು;

ಅರ್ಥಾತ್ ಕ್ವಚಿದ್ದೇಶಕಾಲವಸ್ತ್ವನುಸಾರೇಣ ಸಹನಂ ಕರ್ತವ್ಯಮ್;

ಎಂದರೆ, ಕೆಲವು ವೇಳೆ, ದೇಶ-ಕಾಲ-ವಸ್ತು ಗಳಿಗನುಸಾರವಾಗಿ ಸಹನೆಯನ್ನು ಆಚರಿಸಬೇಕಾಗಿರುತ್ತದೆ;

ಕ್ವಚಿತ್ತದ್‌ವಿಪರ್ಯ್ಯಯೇ ರಾಜಪುರುಷೈ-ರ್ದುಷ್ಟೇಷೂಗ್ರೋ ದಂಡೋ ನಿಪಾತನೀಯಶ್ಚೈತತ್ ಕ್ಷತ್ರಸ್ಯ ಧರ್ಮಸ್ಯ ಸ್ವರೂಪಂ ಭವತಿ.

ಕೆಲವು ವೇಳೆ, ಇದಕ್ಕೆ ವಿಪರೀತವಾಗಿ, ರಾಜ-ಪುರುಷರಿಂದ ದುಷ್ಟರ ಮೇಲೆ ಉಗ್ರವಾದ ದಂಡದ ಪ್ರಯೋಗ ಮಾಡಲ್ಪಡಬೇಕಾಗಿರುತ್ತದೆ. ಇದು ಕ್ಷಾತ್ರ-ಧರ್ಮದ ಸ್ವರೂಪವಾಗಿರುತ್ತದೆ.

ಅಂದರೆ, ದುಷ್ಟರ ಮೇಲೆ ಕ್ರೂರಸ್ವಭಾವವನ್ನು [ತೋರಿಸುವುದು] ಮತ್ತು ಶ್ರೇಷ್ಠರ ಬಗ್ಗೆ ಸಹನಶೀಲ-ನಾಗಿರುವುದು_ಇದೇ ರಾಜನ ಸ್ವರೂಪವಾಗಿರುತ್ತದೆ.

ತಥಾ (ಮಂದ್ರ ಓಜಿಷ್ಠಃ) ಉತ್ತಮಕರ್ಮ-ಕಾರಿಭ್ಯ ಆನಂದಕರೋ ದುಷ್ಟೇಭ್ಯೋ ದುಃಖ-ಪ್ರದಶ್ಚಾಸ್ತಿ.

ಮತ್ತು (ಮಂದ್ರ ಓಜಿಷ್ಠಃ) [ಈ ಸ್ವರೂಪವು] ಉತ್ತಮ ಕರ್ಮವನ್ನು ಮಾಡುವವರಿಗೆ ಆನಂದಕರವೂ ಮತ್ತು ದುಷ್ಟರಿಗೆ ದುಃಖಪ್ರದವೂ ಆಗಿರುತ್ತದೆ.

ಅಂದರೆ, ಆನಂದಿತನಾಗಿರುವುದು ಮತ್ತು ಪರಾಕ್ರಮಯುಕ್ತನಾಗಿರುವುದು_ ಇದೇ ರಾಜನ ಸ್ವರೂಪ ವಾಗಿರುತ್ತದೆ!

ಉತ್ತಮವೀರಪುರುಷಸೇನಾದಿಪದಾರ್ಥ-ಸಾಮಗ್ರ್ಯಾ ಸಹಿತೋ ಯೋ ರಾಜಧರ್ಮೋಽಸ್ತಿ, ಸ ಚ ಕ್ಷತ್ರಸ್ಯ ಸ್ವರೂಪಮಸ್ತಿ ॥೧॥

ಉತ್ತಮ ವೀರಪುರುಷರ ಸೇನೆ ಮೊದಲಾದ ಪದಾರ್ಥ, ಸಾಮಗ್ರಿಗಳಿಂದ ಸಹಿತವಾಗಿರುವ ಯಾವ ರಾಜಧರ್ಮವಿದೆಯೋ, ಅದೂ ಕೂಡ, ರಾಜನ ಸ್ವರೂಪವಾಗಿರುತ್ತದೆ. [೧]

ಕ್ಷತ್ರದಿಂದ ನಿರಂತರ ಸುಖಪ್ರಾಪ್ತಿ

"ಬೃಹತ್ ಪೃಷ್ಠಂ ಭವತಿ । ಕ್ಷತ್ರಂ ವೈ ಬೃಹತ್ । ಕ್ಷತ್ರೇಣೈವ ತತ್ಕ್ಷತ್ರಂ ಸಮರ್ದ್ಧಯತಿ । ಅಥೋ ಕ್ಷತ್ರಂ ವೈ ಬೃಹದಾತ್ಮಾ। ಯಜಮಾನಸ್ಯ ನಿಷ್ಕೇವಲ್ಯಂ ತದ್ಯದ್ ಬೃಹತ್ಪೃಷ್ಠಂ ಭವತಿ ॥ ೨ ॥"

[ಐತರೇಯಬ್ರಾಹ್ಮಣೇ ಪಂ. ೮, ಅ. ೧, ಕಂ. ೨]

[ಅರ್ಥ:_ [ಕ್ಷಾತ್ರಧರ್ಮವು] ದೊಡ್ಡ ರಕ್ಷಕವಾಗಿರುತ್ತದೆ. ಕ್ಷತ್ರವೇ ಮಹತ್ತಾಗಿರುತ್ತದೆ. ಕ್ಷತ್ರದಿಂದಲೇ ಕ್ಷತ್ರವು ವರ್ಧಿಸುತ್ತದೆ. ಆದುದರಿಂದ, ಕ್ಷತ್ರವೇ ಮಹದಾತ್ಮವಾಗಿರುತ್ತದೆ. ಯಾವುದು ಪ್ರಜಾಜನರ ದೊಡ್ಡ ರಕ್ಷಕವೋ, ಅದೇ ನಿರಂತರ ಸುಖಕಾರಕವಾಗಿರುತ್ತದೆ."

(ಐತರೇಯಬ್ರಾಹ್ಮಣ: ೮. ೧. ೨)]

ಭಾಷ್ಯಮ್_

(ಬೃಹತ್ ಪೃಷ್ಠಮ್.) ಯತ್ ಕ್ಷತ್ರಂ ಕರ್ಮ ತತ್ ಸರ್ವೇಭ್ಯಃ ಕೃತ್ಯೇಭ್ಯೋ ಬೃಹನ್ಮಹದಸ್ತಿ.

ತಥಾ ಪೃಷ್ಠಮರ್ಥಾನ್ನಿರ್ಬಲಾನಾಂ ರಕ್ಷಕಂ ಸತ್ ಪುನರುತ್ತಮಸುಖಕಾರಕಂ ಭವತಿ.

ಏತೇನೋಕ್ತೇನ ಚ ಕ್ಷತ್ರರಾಜಕರ್ಮಣಾ ಮನುಷ್ಯೋ ರಾಜಕರ್ಮ ವರ್ದ್ಧಯತಿ.

ನಾತೋಽನ್ಯಥಾ ಕ್ಷತ್ರಧರ್ಮಸ್ಯ ವೃದ್ಧಿರ್ಭವಿತುಮರ್ಹತಿ.

ತಸ್ಮಾತ್ ಕ್ಷತ್ರಂ ಸರ್ವಸ್ಮಾತ್ ಕರ್ಮಣೋ ಬೃಹತ್;

ಯಜಮಾನಸ್ಯ ಪ್ರಜಾಸ್ಥಸ್ಯ ಜನಸ್ಯ ರಾಜಪುರುಷಸ್ಯ ವಾತ್ಮಾಽತ್ಮವದಾನಂದಪ್ರದಂ ಭವತಿ.

ತಥಾ ಸರ್ವಸ್ಯ ಸಂಸಾರಸ್ಯ ನಿಷ್ಕೇವಲ್ಯಂ ನಿರಂತರಂ ಕೇವಲಂ ಸುಖಂ ಸಂಪಾದಯಿತುಂ ಯತಃ ಸಮರ್ಥಂ ಭವತಿ, ತಸ್ಮಾತ್ ತತ್ ಕ್ಷತ್ರಕರ್ಮ ಸರ್ವೇಭ್ಯೋ ಮಹತ್ತರಂ ಭವತೀತಿ ॥ ೨ ॥

ಭಾಷ್ಯ_

(ಬೃಹತ್ ಪೃಷ್ಠಮ್.) ಯಾವುದು ಕ್ಷತ್ರಕರ್ಮವಾಗಿದೆಯೋ, ಅದು ಎಲ್ಲಾ ಕಾರ್ಯಗಳಿಗಿಂತಲೂ ಹಿರಿಯದಾಗಿರುತ್ತದೆ.

ಮತ್ತು 'ಪೃಷ್ಠ', ಎಂದರೆ ನಿರ್ಬಲರ ರಕ್ಷಕವಾಗಿದ್ದು, ಮತ್ತೆ ಉತ್ತಮ ಸುಖವನ್ನುಂಟು ಮಾಡುವುದಾಗಿರುತ್ತದೆ.

ಮತ್ತು ಈ ಮೇಲೆ ಹೇಳಿದುದರ ಜೊತೆಗೆ ಕ್ಷತ್ರರಾಜಕರ್ಮದಿಂದ ಮನುಷ್ಯರು ರಾಜ್ಯಕಾರ್ಯಗಳನ್ನು ವರ್ಧಿಸುತ್ತಾರೆ.

ಹೀಗಿಲ್ಲದೇ, ಬೇರೆಯ ರೀತಿಯಿಂದ ಕ್ಷತ್ರಧರ್ಮದ ವೃದ್ಧಿಯಾಗುವುದು ಸಂಭವವಲ್ಲ!

ಆದುದರಿಂದ, ಕ್ಷತ್ರವು ಎಲ್ಲಾ ಕಾರ್ಯಗಳಿಗಿಂತಲೂ ಹಿರಿಯದಾಗಿರುತ್ತದೆ;

[ಇದು] 'ಯಜಮಾನ'ನ, ಎಂದರೆ ಪ್ರಜೆಗಳಲ್ಲಿನ ಮನುಷ್ಯನ, ಅಥವಾ ರಾಜಪುರುಷನ 'ಆತ್ಮಾ!', ಎಂದರೆ ಆತ್ಮದಂತೆ ಆನಂದಪ್ರದವಾಗಿರುತ್ತದೆ.

ಮತ್ತು ಈ ಕ್ಷತ್ರಕರ್ಮವು ಸಮಸ್ತ ಜಗತ್ತಿಗೆ 'ನಿಷ್ಕೇವಲ್ಯ', ಎಂದರೆ ನಿರಂತರವಾಗಿ ಸುಖವನ್ನು ಸಂಪಾದನೆ ಮಾಡಲು ಸಮರ್ಥವಾಗಿರುವುದರಿಂದ, ಎಲ್ಲಕ್ಕಿಂತಲೂ ಮಹತ್ತರವಾಗಿರುತ್ತದೆ.

ಅಂದರೆ, ರಾಜ್ಯವ್ಯವಹಾರವು ಎಲ್ಲಕ್ಕಿಂತ ಹಿರಿಯದಾಗಿರುತ್ತದೆ. ಇದರಲ್ಲಿ ಶೂರ-ವೀರತ್ವ ಮೊದಲಾದ ಗುಣಗಳಿಂದ ಕೂಡಿದ ಸಭೆಯನ್ನೂ ಮತ್ತು ಸೇನೆಯನ್ನೂ ಇಟ್ಟುಕೊಂಡು, ಉತ್ತಮ ರೀತಿಯಿಂದ ರಾಜ್ಯವನ್ನು ವರ್ಧಿಸಬೇಕು! [೨]

ಬ್ರಹ್ಮದಲ್ಲಿ ಕ್ಷತ್ರ ಮತ್ತು ಕ್ಷತ್ರದಲ್ಲಿ ಬ್ರಹ್ಮ!

"ಬ್ರಹ್ಮ ವೈ ರಥಂತರಂ ಕ್ಷತ್ರಂ ಬೃಹದ್; ಬ್ರಹ್ಮಣಿ ಖಲು
ವೈ ಕ್ಷತ್ರಂ ಪ್ರತಿಷ್ಠಿತಂ; ಕ್ಷತ್ರೇ ಬ್ರಹ್ಮ ॥ ೩ ॥"

[ಐತರೇಯಬ್ರಾಹ್ಮಣೇ ಪಂ. ೮, ಅ. ೧, ಕಂ. ೩]

[ಅರ್ಥ:_ "ಬ್ರಹ್ಮವೇ ರಥಂತರ; ಕ್ಷತ್ರವು ಹಿರಿಯದು; ನಿಶ್ಚಯವಾಗಿ ಬ್ರಹ್ಮದಲ್ಲೇ ಕ್ಷತ್ರವು ಪ್ರತಿಷ್ಠಿತವಾಗಿದೆ; ಮತ್ತು ಕ್ಷತ್ರದಲ್ಲಿ ಬ್ರಹ್ಮ!"

(ಐತರೇಯಬ್ರಾಹ್ಮಣ: ೮. ೧. ೩)]

ಭಾಷ್ಯಮ್_

(ಬ್ರಹ್ಮ ವೈ ರಥಂತರಂ.) ಬ್ರಹ್ಮಶಬ್ದೇನ ಸರ್ವ-ವಿದ್ಯಾಯುಕ್ತೋ ಬ್ರಾಹ್ಮಣವರ್ಣೋ ಗೃಹ್ಯತೇ.

ತಸ್ಮಿನ್ ಖಲು ಕ್ಷತ್ರಧರ್ಮಃ ಪ್ರತಿಷ್ಠಿತೋ ಭವತಿ.

ನೈವ ಕದಾಚಿತ್ ಸತ್ಯವಿದ್ಯಯಾ ವಿನಾ ಕ್ಷತ್ರ-ಧರ್ಮಸ್ಯ ವೃದ್ಧಿರಕ್ಷಣೇ ಭವತಃ. ತಥಾ_

(ಕ್ಷತ್ರೇ ಬ್ರಹ್ಮ) ರಾಜನ್ಯೇ ಬ್ರಹ್ಮಾರ್ಥಾತ್ ಸತ್ಯವಿದ್ಯಾ ಪ್ರತಿಷ್ಠಿತಾ ಭವತಿ.

ನೈವಾಸ್ಮಾದ್ ವಿನಾ ಕದಾಚಿದ್ ವಿದ್ಯಾಯಾ ವೃದ್ಧಿರಕ್ಷಣೇ ಸಂಭವತಃ.

ತಸ್ಮಾದ್ ವಿದ್ಯಾರಾಜವ್ಯವಹಾರೌ ಮಿಲಿತ್ವೈವ ರಾಷ್ಟ್ರಸುಖೋನ್ನತಿಂ ಕರ್ತುಂ ಶಕ್ನುತ ಇತಿ ॥ ೩ ॥

ಭಾಷ್ಯ_

(ಬ್ರಹ್ಮ ವೈ ರಥಂತರಂ.) 'ಬ್ರಹ್ಮ', ಎಂಬ ಶಬ್ದದಿಂದ ಸರ್ವವಿದ್ಯಾಯುಕ್ತವಾದ ಬ್ರಾಹ್ಮಣವರ್ಣವು ಗ್ರಹಿಸಲ್ಪಡುತ್ತದೆ.

ಅದರಲ್ಲಿ ನಿಶ್ಚಯವಾಗಿ ಕ್ಷತ್ರಧರ್ಮವು ಪ್ರತಿಷ್ಠಿತವಾಗಿರುತ್ತದೆ.

ಸತ್ಯವಿದ್ಯೆಯಿಲ್ಲದೇ ಕ್ಷತ್ರಧರ್ಮದ ವೃದ್ಧಿ ಮತ್ತು ರಕ್ಷಣೆಯು ಎಂದಿಗೂ ಆಗುವುದಿಲ್ಲ! ಮತ್ತು_

(ಕ್ಷತ್ರೇ ಬ್ರಹ್ಮ) ಕ್ಷತ್ರಿಯನಲ್ಲಿ 'ಬ್ರಹ್ಮ', ಎಂದರೆ ಸತ್ಯವಿದ್ಯೆಯು ಪ್ರತಿಷ್ಠಿತವಾಗಿರುತ್ತದೆ.

ಇದರ* ಹೊರತಾಗಿ, ವಿದ್ಯೆಯ ವೃದ್ಧಿ ಮತ್ತು ರಕ್ಷಣೆಯು ಎಂದಿಗೂ ಸಂಭವವಾಗುವುದಿಲ್ಲ!

ಆದುದರಿಂದ, ವಿದ್ಯೆಯು, ಮತ್ತು ರಾಜನ ವ್ಯವಹಾರಗಳು ಒಟ್ಟುಗೂಡಿಯೇ ರಾಷ್ಟ್ರದ ಸುಖೋನ್ನತಿಯನ್ನು ಸಾಧಿಸಲು ಸಮರ್ಥವಾಗುತ್ತವೆ.

* ಎಂದರೆ, ಕ್ಷತ್ರಿಯನ _ ಅನು.

ಅಂದರೆ, 'ಬ್ರಹ್ಮ', ಎಂದರೆ ಪರಮೇಶ್ವರ ಮತ್ತು ವೇದವಿದ್ಯೆಯಿಂದ ಕೂಡಿದ ಪೂರ್ಣ ವಿದ್ವಾಂಸನಾದ ಯಾವ ಬ್ರಾಹ್ಮಣನಿದ್ದಾನೋ, ಅವನೇ ರಾಜ್ಯಪ್ರಬಂಧಗಳಲ್ಲಿ ಸುಖಪ್ರಾಪ್ತಿಯ ಹೇತುವಾಗುತ್ತಾನೆ. ಆದುದರಿಂದ, ಒಳ್ಳೆಯ ರಾಜ್ಯವಿರುವುದ ರಿಂದಲೇ ಸತ್ಯವಿದ್ಯೆಯು ಪ್ರಕಾಶಕ್ಕೆ ಬರುತ್ತದೆ. [೩]

ಓಜಸ್ಸೇ ಕ್ಷತ್ರ ಮತ್ತು ವೀರ್ಯವೇ ಕ್ಷತ್ರಿಯ!

" ಓಜೋ ವಾ ಇಂದ್ರಿಯಂ ; ವೀರ್ಯ್ಯಂ ಪಂಚದಶ ; ಓಜಃ ಕ್ಷತ್ರಂ ವೀರ್ಯ್ಯಂ ರಾಜನ್ಯಸ್ತದೇನಮೋಜಸಾ ಕ್ಷತ್ರೇಣ ವೀರ್ಯ್ಯೇಣ ಸಮರ್ದ್ಧಯತಿ ।

" ತದ್ಭಾರದ್ವಾಜಂ ಭವತಿ ; ಭಾರದ್ವಾಜಂ ವೈ ಬೃಹತ್ ॥ ೪ ॥ "

[ಐತರೇಯಬ್ರಾಹ್ಮಣೇ ಪಂ. ೮, ಅ. ೧, ಕಂ. ೩]

[ಅರ್ಥ:_ " ಓಜಸ್, ಎಂದರೆ ಇಂದ್ರಿಯ; ಹದಿನೈದನೆಯದು, ವೀರ್ಯ; ಓಜಸ್ಸು ಕ್ಷತ್ರ, ವೀರ್ಯವು ಕ್ಷತ್ರಿಯ; ಆದುದರಿಂದ, ಇವನನ್ನು ಓಜಸ್ಸಿನಿಂದಲೂ, ಕ್ಷತ್ರದಿಂದಲೂ, ವೀರ್ಯದಿಂದಲೂ ಸಂವರ್ಧಿಸುತ್ತದೆ.

" ಅದು ಭಾರದ್ವಾಜ ಆಗುತ್ತದೆ; ಭಾರದ್ವಾಜವೇ ಹಿರಿಯದು."

(ಐತರೇಯಬ್ರಾಹ್ಮಣಃ ೮. ೧. ೩)]

ಭಾಷ್ಯಮ್_

(ಓಜೋ ವಾ ಇಂದ್ರಿಯಂ.) ರಾಜಪುರುಷೈರ್ಬಲಪರಾಕ್ರಮವಂತೀಂದ್ರಿಯಾಣಿ ಸದೈವ ರಕ್ಷಣೀಯಾನಿ;

ಅರ್ಥಾಜ್ಜಿತೇಂದ್ರಿಯತಯೈವ ಸದೈವ ವರ್ತ್ತಿತವ್ಯಮ್.

ಕುತಃ?

'ಓಜ ಏವ ಕ್ಷತ್ರಂ, ವೀರ್ಯ್ಯಮೇವ ರಾಜನ್ಯಃ' ಇತ್ಯುಕ್ತತ್ವಾತ್.

ತತ್ತಸ್ಮಾದೋಜಸಾ ಕ್ಷತ್ರೇಣ ವೀರ್ಯ್ಯೇಣ ರಾಜನ್ಯೇನೈನಂ ರಾಜಧರ್ಮಂ ಮನುಷ್ಯಃ ಸಮರ್ದ್ಧಯತಿ; ಸರ್ವಸುಖೈರೇಧಮಾನಂ ಕರೋತಿ.

ಭಾಷ್ಯ_

(ಓಜೋ ವಾ ಇಂದ್ರಿಯಂ.) ರಾಜಪುರುಷರುಗಳಿಂದ ಬಲ ಮತ್ತು ಪರಾಕ್ರಮದಿಂದ ಕೂಡಿದ ಇಂದ್ರಿಯಗಳು ಯಾವಾಗಲೂ ಕೂಡ, ರಕ್ಷಿಸಲ್ಪಡಬೇಕು!

ಎಂದರೆ, ಜಿತೇಂದ್ರಿಯತ್ವದಿಂದ ಯಾವಾಗಲೂ ಕೂಡ, ಆಚರಣೆ ಮಾಡಬೇಕು!

ಏಕೆಂದರೆ_

" ಓಜಸ್ಸೇ ಕ್ಷತ್ರ ; ಮತ್ತು ವೀರ್ಯವೇ ಕ್ಷತ್ರಿಯ", ಎಂದು ಹೇಳಲಾಗಿದೆ.

ಆದುದರಿಂದ, ಓಜಸ್ಸಿನಿಂದ, ಎಂದರೆ ಕ್ಷತ್ರದಿಂದ, ವೀರ್ಯದಿಂದ, ಎಂದರೆ ಕ್ಷತ್ರಿಯನಿಂದ, ಈ ರಾಜಧರ್ಮವನ್ನು ಮನುಷ್ಯನು ಬೆಳೆಸುತ್ತಾನೆ. ಎಂದರೆ, ಸರ್ವಸುಖಗಳಿಂದ ಉನ್ನತಿಗೊಳಿಸುತ್ತಾನೆ.

ಅಂದರೆ, ಉತ್ತಮವಿದ್ಯೆ ಮತ್ತು ನ್ಯಾಯಯುಕ್ತ ರಾಜ್ಯದ ಹೆಸರು **'ಓಜಸ್'**, ಎಂದಾಗಿರುತ್ತದೆ. ದಂಡದ ಭಯವಿರುವುದರಿಂದ ಯಾವನೂ ಇದನ್ನು ಉಲ್ಲಂಘಿಸ ಲಾರನು! ಅಥವಾ ವಿರೋಧಿಸಲಾರನು!

ಏಕೆಂದರೆ, **'ಓಜಸ್'**, ಎಂದರೆ ಬಲದ ಹೆಸರು **'ಕ್ಷತ್ರ'** ಎಂದೂ, ಮತ್ತು **'ಪರಾಕ್ರಮ'**ದ ಹೆಸರು **'ಕ್ಷತ್ರಿಯ'**, ಎಂದೂ ಇರುತ್ತದೆ. ಈ ಎರಡೂ ಯಾವಾಗ ಪರಸ್ಪರ ಸೇರುತ್ತವೋ, ಆಗಲೇ ಜಗತ್ತಿನ ಉನ್ನತಿ ಯಾಗುತ್ತದೆ.

ಇದಮೇವ ಭಾರದ್ವಾಜಂ ಭರಣೀಯಂ; ಬೃಹದ್ ಅರ್ಥಾನ್ಮಹತ್ ಕರ್ಮಾಸ್ತೀತಿ ॥ ೪ ॥

ಇದೇ **'ಭಾರದ್ವಾಜ'**, ಎಂದರೆ ಭರಣೆ- [ಪೋಷಣೆ]ಗೆ ಯೋಗ್ಯವಾದ **'ಹಿರಿಯ'**, ಎಂದರೆ ದೊಡ್ಡ ಕರ್ಮವಾಗಿರುತ್ತದೆ. [೪]

ಅನೇಕ ವಿಧ ರಾಜ್ಯಾಧಿಕಾರಗಳು

"ತಾನಹಮನು ರಾಜ್ಯಾಯ ಸಾಮ್ರಾಜ್ಯಾಯ ಭೌಜ್ಯಾಯ
ಸ್ವಾರಾಜ್ಯಾಯ ವೈರಾಜ್ಯಾಯ ಪಾರಮೇಷ್ಠ್ಯಾಯ ರಾಜ್ಯಾಯ
ಮಾಹಾರಾಜ್ಯಾಯಾಧಿಪತ್ಯಾಯ ಸ್ವಾವಶ್ಯಾಯಾತಿಷ್ಠಾಯಾಂ
ರೋಹಾಮೀತಿ ॥ ೫ ॥ "

[ಐತರೇಯಬ್ರಾಹ್ಮಣೇ ಪಂ. ೮, ಅ. ೨, ಕಂ. ೬]

[ಅರ್ಥ:_ "ನಾನು ಅನುರಾಜ್ಯಕ್ಕಾಗಿಯೂ, ಸಾಮ್ರಾಜ್ಯಕ್ಕಾಗಿಯೂ, ಭೌಜ್ಯಕ್ಕಾಗಿಯೂ, ಸ್ವಾರಾಜ್ಯಕ್ಕಾಗಿಯೂ, ವೈರಾಜ್ಯಕ್ಕಾಗಿಯೂ, ಪಾರಮೇಷ್ಠ್ಯರಾಜ್ಯಕ್ಕಾಗಿಯೂ, ಮಾಹಾರಾಜ್ಯಕ್ಕಾಗಿಯೂ, ಅಧಿಪತಿತ್ವಕ್ಕಾಗಿಯೂ, ಸ್ವಾವಶ್ಯಕ್ಕಾಗಿಯೂ, ಸಭೆಯಲ್ಲಿ ಅವನ್ನು ವರ್ಧಿಸುತ್ತೇನೆ."

(ಐತರೇಯಬ್ರಾಹ್ಮಣ: ೮. ೨. ೬)]

ಭಾಷ್ಯಮ್_

ಸರ್ವೇ ಮನುಷ್ಯಾ ಏವಮಿಚ್ಛಾಂ ಕೃತ್ವಾ ಪುರುಷಾರ್ಥಂ ಕುರ್ಯ್ಯುಃ_

(ತಾನಹಮನುರಾಜ್ಯಾಯ) ಪರಮೇಶ್ವರಾನು- ಗ್ರಹೇಣಾಹಮನುರಾಜ್ಯಾಯ ಸಭಾಧ್ಯಕ್ಷತ್ವಪ್ರಾಪ್ತಯೇ ;

ತಥಾ ಮಾಂಡಲಿಕಾನಾಂ ರಾಜ್ಞಾಮುಪ- ರಾಜಸತ್ತಾಪ್ರಾಪ್ತಯೇ;

ಭಾಷ್ಯ_

ಮನುಷ್ಯರೆಲ್ಲರೂ ಯಾವ ಇಚ್ಛೆಯನ್ನು ಇಟ್ಟು ಕೊಂಡು, ಪುರುಷಾರ್ಥ ಮಾಡಬೇಕೆಂದರೆ_

(ತಾನಹಮನುರಾಜ್ಯಾಯ) ಪರಮೇಶ್ವರನ ಅನುಗ್ರಹದಿಂದ ನಾನು **'ಅನುರಾಜ್ಯ'**, ಎಂದರೆ ಸಭಾಧ್ಯಕ್ಷತ್ವದ ಪ್ರಾಪ್ತಿಗಾಗಿಯೂ;

ಮತ್ತು ಮಾಂಡಲಿಕ ರಾಜರ ಮೇಲೆ ರಾಜಸತ್ತಾ- ಪ್ರಾಪ್ತಿಗಾಗಿಯೂ;

(ಸಾಮ್ರಾಜ್ಯಾಯ) ಸಾರ್ವಭೌಮರಾಜ್ಯ-ಕರಣಾಯ ;

(ಸಾಮ್ರಾಜ್ಯಾಯ) ಸಾರ್ವಭೌಮರಾಜ್ಯವನ್ನು ಆಳುವುದಕ್ಕಾಗಿಯೂ;

(ಭೌಜ್ಯಾಯ) ಧರ್ಮನ್ಯಾಯೇನ ರಾಜ್ಯಪಾಲನಾ-ಯೋತ್ತಮಭೋಗಾಯ ಚ ;

(ಭೌಜ್ಯಾಯ) ಧರ್ಮ-ನ್ಯಾಯದಿಂದ ರಾಜ್ಯ ಪಾಲನೆಗಾಗಿಯೂ, ಹಾಗೂ ಉತ್ತಮ ಭೋಗಕ್ಕಾಗಿಯೂ;

(ಸ್ವಾರಾಜ್ಯಾಯ) ಸ್ವಸ್ಮೈ ರಾಜ್ಯಪ್ರಾಪ್ತಯೇ ;

(ಸ್ವಾರಾಜ್ಯಾಯ) ತನಗೆ ರಾಜ್ಯಪ್ರಾಪ್ತಿಗಾಗಿಯೂ;

(ವೈರಾಜ್ಯಾಯ) ವಿವಿಧಾನಾಂ ರಾಜ್ಞಾಂ ಮಧ್ಯೇ ಮಹತ್ತ್ವೇನ ಪ್ರಕಾಶಾಯ ;

(ವೈರಾಜ್ಯಾಯ) ವಿವಿಧ ರಾಜರುಗಳ ಮಧ್ಯೆ ಮಹಾನತೆಯಿಂದ ಪ್ರಕಾಶಿಸುವುದಕ್ಕಾಗಿಯೂ ;

(ಪಾರಮೇಷ್ಠ್ಯಾಯ) ಪರಮರಾಜ್ಯಸ್ಥಿತಯೇ;

(ಪಾರಮೇಷ್ಠ್ಯಾಯ) ಶ್ರೇಷ್ಠರಾಜ್ಯದ ಸ್ಥಿತಿಗಾಗಿಯೂ ;

(ಮಾಹಾರಾಜ್ಯಾಯ) ಮಹಾರಾಜ್ಯಸುಖ-ಭೋಗಾಯ ; ತಥಾ_

(ಮಾಹಾರಾಜ್ಯಾಯ) ಮಹಾರಾಜ್ಯದ ಸುಖಭೋಗಕ್ಕಾಗಿಯೂ ; ಮತ್ತು _

(ಆಧಿಪತ್ಯಾಯ) ಅಧಿಪತಿತ್ವಕರಣಾಯ ;

(ಆಧಿಪತ್ಯಾಯ) ಅಧಿಪತಿತ್ವವನ್ನು ಮಾಡುವುದಕ್ಕಾಗಿಯೂ ;

(ಸ್ವಾವಶ್ಯಾಯ) ಸ್ವಾರ್ಥಪ್ರಜಾವಶತ್ವಕರಣಾಯ ಚ ;

(ಸ್ವಾವಶ್ಯಾಯ) ಮತ್ತು ಸ್ವಾರ್ಥರಾದ ಪ್ರಜೆಗಳನ್ನು ವಶದಲ್ಲಿಟ್ಟುಕೊಳ್ಳುವುದಕ್ಕಾಗಿಯೂ ;

(ಅತಿಷ್ಠಾಯಾಮ್) 'ಅತ್ಯುತ್ತಮಾ ವಿದ್ವಾಂಸ-ಸ್ತಿಷ್ಠಂತಿ ಯಸ್ಯಾಂ ಸಾ ಅತಿಷ್ಠಾ' ಸಭಾ ;

(ಅತಿಷ್ಠಾಯಾಮ್) 'ಅತ್ಯುತ್ತಮವಾದ ವಿದ್ವಾಂಸರು ಯಾವುದರಲ್ಲಿ ಕೂಡುತ್ತಾರೋ, ಅದು **ಅತಿಷ್ಠಾ**!', ಎಂದರೆ **ಸಭಾ** ;

ತಸ್ಯಾಂ ಸರ್ವೈರ್ಗುಣೈಃ ಸುಖೈಶ್ಚ (ರೋಹಾಮಿ) ವರ್ದ್ಧಮಾನೋ ಭವಾಮೀತಿ ॥ ೫ ॥

ಅದರಲ್ಲಿ ಎಲ್ಲಾ ಗುಣಗಳಿಂದಲೂ, ಹಾಗೂ ಸುಖಗಳಿಂದಲೂ (ರೋಹಾಮಿ) ವರ್ಧಿಸುತ್ತಿರುತ್ತೇನೆ.

ಅಂದರೆ, ಇದು* ಉಂಟಾಗುವುದರಿಂದ, ಮತ್ತು ಪರಮೇಶ್ವರನ ಕೃಪೆಯಿಂದ, ಮನುಷ್ಯರ ರಾಜಕರ್ಮ, ಚಕ್ರವರ್ತಿರಾಜ್ಯ, ಭೋಗದ ರಾಜ್ಯ, ತನ್ನ ರಾಜ್ಯ, ವಿವಿಧ ರಾಜ್ಯ, ಪರಮೇಷ್ಠಿರಾಜ್ಯ, ಪ್ರಕಾಶರೂಪರಾಜ್ಯ, ಮಹಾರಾಜ್ಯ, ರಾಜರುಗಳ ಮೇಲೆ ಅಧಿಪತಿರೂಪದ ರಾಜ್ಯ ಮತ್ತು ತನ್ನ ವಶದಲ್ಲಿದ್ದವರ [ಮೇಲೆ] ರಾಜ್ಯ ಮೊದಲಾದ ಉತ್ತಮೋತ್ತಮ ಸುಖಗಳು ಹೆಚ್ಚುತ್ತವೆ. [೫]

* ಎಂದರೆ, ರಾಜ್ಯವು _ ಅನು.

'ಬ್ರಹ್ಮ'ನ ವಶದಲ್ಲಿನ ರಾಷ್ಟ್ರವು ಸಮೃದ್ಧವಾಗುತ್ತದೆ

"ನಮೋ ಬ್ರಹ್ಮಣೇ ನಮೋ ಬ್ರಹ್ಮಣೇ ನಮೋ ಬ್ರಹ್ಮಣ ಇತಿ ತ್ರಿಷ್ಕೃತ್ವೋ ಬ್ರಹ್ಮಣೇ ನಮಸ್ಕರೋತಿ ।

"ಬ್ರಹ್ಮಣ ಏವ ತತ್ ಕ್ಷತ್ರಂ ವಶಮೇತಿ; ತದ್ಯತ್ರ ವೈ ಬ್ರಹ್ಮಣಃ ಕ್ಷತ್ರಂ ವಶಮೇತಿ, ತದ್ರಾಷ್ಟ್ರಂ ಸಮೃದ್ಧಂ; ತದ್ವೀರವದಾಹಾಸ್ಮಿನ್ ವೀರೋ ಜಾಯತೇ ॥ ೬ ॥"

[ಐತರೇಯಬ್ರಾಹ್ಮಣೇ ಪಂ. ೮, ಅ. ೨, ಕಂ. ೯]

[ಅರ್ಥ:_ "'ಬ್ರಹ್ಮನಿಗೆ ನಮಸ್ಕಾರ! ಬ್ರಹ್ಮನಿಗೆ ನಮಸ್ಕಾರ; ಬ್ರಹ್ಮನಿಗೆ ನಮಸ್ಕಾರ', ಎಂದು ಮೂರು ಸಲ ಬ್ರಹ್ಮನಿಗೆ ನಮಸ್ಕಾರ ಮಾಡುತ್ತಾನೆ.

"ಬ್ರಹ್ಮನ ವಶಕ್ಕೇನೇ ಆ ಕ್ಷತ್ರವು ಬರುತ್ತದೆ. ಆದುದರಿಂದ, ಎಲ್ಲಿ ಬ್ರಹ್ಮನ ವಶಕ್ಕೆ ಕ್ಷತ್ರವು ನಿಶ್ಚಯವಾಗಿ ಬರುತ್ತದೋ, ಆ ರಾಷ್ಟ್ರವು ಸಮೃದ್ಧವಾಗುತ್ತದೆ; ಅದು ವೀರರಿಂದ ಯುಕ್ತವಾಗುತ್ತದೆ, ಎಂದು ಹೇಳಲಾಗಿದೆ. ಅದರಲ್ಲಿ ವೀರನು ಉತ್ಪನ್ನನಾಗುತ್ತಾನೆ."

(ಐತರೇಯಬ್ರಾಹ್ಮಣಃ ೮. ೨. ೯)]

ಭಾಷ್ಯಮ್_

(ನಮೋ ಬ್ರಹ್ಮಣೇ.) ಪರಮೇಶ್ವರಾಯ[⊛] ತ್ರಿವಾರಂ ಚತುರ್ವಾರಂ ವಾ ನಮಸ್ಕೃತ್ಯ ರಾಜಕಾರ್ಯಾರಂಭಂ ಕುರ್ಯ್ಯಾತ್.

ಯತ್ ಕ್ಷತ್ರಂ ಬ್ರಹ್ಮಣಃ ವಶಮೇತಿ, ತದ್ರಾಷ್ಟ್ರಂ ಸಮೃದ್ಧಂ ಸಮ್ಯಕ್ ಋದ್ಧಿಯುಕ್ತಂ ವೀರವದ್ ಭವತಿ.

ತಸ್ಮಿನ್ನೇವ ರಾಷ್ಟ್ರೇ ವೀರಪುರುಷೋ ಜಾಯತೇ ; ನಾನ್ಯತ್ರೇತ್ಯಾಹ ಪರಮೇಶ್ವರಃ ॥ ೬ ॥

[⊛] 'ಪರಮೇಶ್ವರಮ್' _ ಆ. ವೈ.

ಭಾಷ್ಯ_

(ನಮೋ ಬ್ರಹ್ಮಣೇ.) ಪರಮೇಶ್ವರನಿಗೆ ಮೂರು ಬಾರಿ, ಅಥವಾ ನಾಲ್ಕು ಬಾರಿ ನಮಸ್ಕಾರ ಮಾಡಿ, ರಾಜಕೃತ್ಯದ ಆರಂಭವನ್ನು ಮಾಡಬೇಕು!

ಅಂದರೆ, ಯಾವನ ಅನುಗ್ರಹದಿಂದ ನಾವುಗಳು ಈ ರಾಜ್ಯಗಳಿಗೆ ಅಧಿಕಾರಿಗಳಾಗುತ್ತೇವೋ, ಆ ಪರಮಾತ್ಮನಿಗೆ ಮತ್ತೆ ಮತ್ತೆ ನನ್ನ ನಮಸ್ಕಾರವಿರಲಿ!

ಯಾವ ಕ್ಷತ್ರ[ಧರ್ಮ]ವು ಬ್ರಹ್ಮ[ಧರ್ಮ]ದ ವಶಕ್ಕೆ ಬರುತ್ತದೋ, ಆ ರಾಷ್ಟ್ರವು 'ಸಮೃದ್ಧ', ಎಂದರೆ ಒಳ್ಳೆಯ ಅಭಿವೃದ್ಧಿಯಿಂದ ಕೂಡಿದ್ದು, ಪರಾಕ್ರಮಶಾಲಿಯಾಗುತ್ತದೆ.

ಆ ರಾಷ್ಟ್ರದಲ್ಲಿಯೇ ವೀರಪುರುಷನು ಉತ್ಪನ್ನನಾಗುತ್ತಾನೆ ; ಬೇರೆಯ ಸ್ಥಾನದಲ್ಲಲ್ಲ, ಎಂದು ಪರಮೇಶ್ವರನು ಹೇಳುತ್ತಾನೆ.

ಅಂದರೆ, ಹೀಗೆ ಯಾವ 'ಕ್ಷತ್ರ', ಎಂದರೆ ರಾಜ್ಯವು ಪರಮೇಶ್ವರನಿಗೆ ಅಧೀನವಾಗಿ ಮತ್ತು ವಿದ್ವಾಂಸರ ಪ್ರಬಂಧದಲ್ಲಿರುತ್ತದೋ, ಅದು ಎಲ್ಲಾ ಸುಖಕಾರಕಪದಾರ್ಥಗಳಿಂದಲೂ ಮತ್ತು ವೀರಪುರುಷ ರಿಂದಲೂ ಅತ್ಯಂತ ಪ್ರಕಾಶಿತವಾಗಿರುತ್ತದೆ. [೬]

ಅತ್ಯಂತ ಶ್ರೇಷ್ಠನಾದವನಿಗೆ 'ರಾಜ'ನ ಅಭಿಷೇಕ

"ಸಪ್ರಜಾಪತಿಕಾ ಅಯಂ ವೈ ದೇವಾನಾಮೋಜಿಷ್ಠೋ ಬಲಿಷ್ಠಃ
ಸಹಿಷ್ಠಃ ಸತ್ತಮಃ ಪಾರಯಿಷ್ಣುತಮ ಇಮಮೇವಾಭಿಷಿಂಚಾಮಹಾ
ಇತಿ; ತಥೇತಿ ತದ್ವೈತದಿಂದ್ರಮೇವ ॥ ೭ ॥"

[ಐತರೇಯಬ್ರಾಹ್ಮಣೇ ಪಂ. ೮, ಅ. ૩, ಕಂ. ೧೨]

[ಅರ್ಥ:_"ಪ್ರಜೆಗಳ ಪ್ರತಿನಿಧಿಗಳು_'ಇವನು ನಿಶ್ಚಯವಾಗಿ ವಿದ್ವಾಂಸರುಗಳಲ್ಲಿ ಅತ್ಯಂತ ಪರಾಕ್ರಮಿಯೂ, ಅತ್ಯಂತ ಬಲವಂತನೂ, ಅತಿಶಯ ಸಹನಶೀಲನೂ, ಅತ್ಯಂತ ಶ್ರೇಷ್ಠನೂ, [ದುಃಖದಿಂದ] ಪಾರುಗಾಣಿಸುವವರಲ್ಲಿ ಉತ್ತಮನೂ ಆಗಿದ್ದಾನೆ. ನಾವು ಇವನಿಗೇ ಅಭಿಷೇಕ ಮಾಡೋಣ; [ಎಂದು ನಿಶ್ಚಯಿಸಬೇಕು! ಇತರರೂ ಕೂಡ_]'ಹಾಗೆಯೇ ಆಗಲಿ! ಈ ಇಂದ್ರನಿಗೇ [ಅಭಿಷೇಕವಾಗಲಿ', ಎಂದು ಹೇಳಬೇಕು.]"

(ಐತರೇಯಬ್ರಾಹ್ಮಣಃ ೮. ૩. ೧೨)]

ಭಾಷ್ಯಮ್_

(ಸಪ್ರಜಾಪತಿಕಾ.) ಸರ್ವೇ ಸಭಾಸದಃ ಪ್ರಜಾಸ್ಥ-ಮನುಷ್ಯಾಃ ಸ್ವಾಮಿನೇಷ್ಟೇನ ಪೂಜ್ಯತಮೇನ ಪರಮೇಶ್ವರೇಣೈವ ಸಹ ವರ್ತ್ತಮಾನಾ ಭವೇಯುಃ .

ಭಾಷ್ಯ_

(ಸಪ್ರಜಾಪತಿಕಾ.) ಪ್ರಜೆಗಳ ಮನುಷ್ಯರಾದ* ಸಭಾಸದರೆಲ್ಲರೂ ಇಷ್ಟಸ್ವಾಮಿಯ, ಎಂದರೆ ಅತ್ಯಂತ ಪೂಜ್ಯ ಪರಮೇಶ್ವರನ ಜೊತೆಯಲ್ಲಿಯೇ ಇರಬೇಕು!

ಏಕೆಂದರೆ, ಆ ವಿದ್ವಾಂಸರು ಒಬ್ಬ ಅದ್ವಿತೀಯ ನಾದ ಪರಮೇಶ್ವರನ ಉಪಾಸಕರೇ ಆಗಿರುತ್ತಾರೆ. ಅವನು ಎಲ್ಲಾ ವಿದ್ವಾಂಸರ ನಡುವೆ ಅನಂತವಿದ್ಯಾ ಯುಕ್ತನೂ ಮತ್ತು ಅಪಾರ ಬಲವಂತನೂ ಆಗಿದ್ದಾನೆ. ಹಾಗೂ ಅತ್ಯಂತ ಸಹನಸ್ವಭಾವವುಳ್ಳವನೂ ಮತ್ತು ಎಲ್ಲರಿಗಿಂತ ಉತ್ತಮನೂ ಆಗಿದ್ದಾನೆ. ಅವನೇ ನಮ್ಮೆಲ್ಲರನ್ನೂ ದುಃಖಗಳಿಂದ ಪಾರು ಮಾಡಿಸಿ, ಎಲ್ಲಾ ಸುಖಗಳನ್ನೂ ಪ್ರಾಪ್ತ ಮಾಡಿಕೊಡುತ್ತಾನೆ.

* ಎಂದರೆ, ಪ್ರತಿನಿಧಿಗಳಾದ _ ಅನು.

ಆ ಪರಮಾತ್ಮನನ್ನೇ ನಾವು ನಮ್ಮ ರಾಜ್ಯ ಮತ್ತು ಸಭೆಯಲ್ಲಿ ಅಭಿಷೇಕ ಮಾಡಿ, ನಮ್ಮ ನ್ಯಾಯಕಾರಿಯಾದ ರಾಜಾ, ಎಂದು ಯಾವಾಗಲೂ ಅಂಗೀಕರಿಸುತ್ತೇವೆ. ಮತ್ತು ಅವನ ಹೆಸರೇ 'ಇಂದ್ರ', ಎಂದರೆ ಪರಮೈಶ್ವರ್ಯ-ಯುಕ್ತ, ಎಂದಾಗಿದೆ. [ಆದುದರಿಂದ_]

ಸರ್ವೇ ಮಿಲಿತ್ವೈವಂ ವಿಚಾರಂ ಕುರ್ಯುರ್ಯತೋ ನ ಕದಾಚಿತ್ ಸುಖಹಾನಿಪರಾಜಯೌ ಸ್ಯಾತಾಮ್.

ಎಲ್ಲರೂ ಸೇರಿ ವಿಚಾರಮಾಡಬೇಕೇನೆಂದರೆ_ ನಮಗೆ ಎಂದಿಗೂ ಸುಖದ ಹಾನಿಯೂ ಮತ್ತು ಪರಾಜಯವೂ ಆಗದಿರಲಿ, ಎಂಬ ಕಾರಣದಿಂದ_

ಯೋ ದೇವಾನಾಂ ವಿದುಷಾಂ ಮಧ್ಯೇ (ಓಜಿಷ್ಠಃ) ಪರಾಕ್ರಮವತ್ತಮಃ ;

ಯಾವನು ವಿದ್ವಾಂಸರ ನಡುವೆ (ಓಜಿಷ್ಠಃ) ಅತ್ಯಂತ ಪರಾಕ್ರಮಿಯೂ ;

(ಬಲಿಷ್ಠಃ) ಸರ್ವೋತ್ಕೃಷ್ಟಬಲಸಹಿತಃ ;

(ಬಲಿಷ್ಠಃ) ಸರ್ವೋತ್ಕೃಷ್ಟವಾದ ಬಲದಿಂದ ಕೂಡಿದವನೂ ;

(ಸಹಿಷ್ಠಃ) ಅತಿಶಯೇನ ಸಹನಶೀಲಃ ;

(ಸಹಿಷ್ಠಃ) ಅತಿಶಯವಾಗಿ ಸಹನಶೀಲನೂ ;

(ಸತ್ತಮಃ) ಸರ್ವೈರ್ಗುಣೈರತ್ಯಂತಶ್ರೇಷ್ಠಃ ;

(ಸತ್ತಮಃ) ಎಲ್ಲಾ ಗುಣಗಳಿಂದಲೂ ಅತ್ಯಂತ ಶ್ರೇಷ್ಠನೂ ;

(ಪಾರಯಿಷ್ಣುತಮಃ) ಸರ್ವೇಭ್ಯೋ ಯುದ್ಧಾದಿ-ದುಃಖೇಭ್ಯೋಽತಿಶಯೇನ ಸರ್ವಾಂಸ್ತಾರಯಿತೃತಮೋ ;

(ಪಾರಯಿಷ್ಣುತಮಃ) ಯುದ್ಧವೇ ಮೊದಲಾದ ಎಲ್ಲಾ ದುಃಖಗಳಿಂದಲೂ ಎಲ್ಲರನ್ನೂ ಅತಿಶಯವಾಗಿ ಅತ್ಯಂತ ಪಾರು ಮಾಡುವವನೂ, ಎಂದರೆ ;

ವಿಜಯಕಾರಕತಮೋಽಸ್ಮಾಕಂ ಮಧ್ಯೇ ಶ್ರೇಷ್ಠತಮೋಽಸ್ತೀತಿ ವಯಂ ನಿಶ್ಚಿತ್ಯ ;

ಅತ್ಯಂತ ವಿಜಯವನ್ನುಂಟು ಮಾಡುವವನೂ ಆಗಿದ್ದು, ನಮ್ಮ ನಡುವೆ ಅತ್ಯಂತ ಶ್ರೇಷ್ಠನೂ ಆಗಿದ್ದಾನೆ, ಎಂದು ನಾವು ನಿಶ್ಚಯಿಸಿ ;

ತಮೇವ ಪುರುಷಮಭಿಷಿಂಚಾಮ ಇತೀಚ್ಛೇಯುಃ .

'ಆ ಪುರುಷನಿಗೇ ಅಭಿಷೇಕ ಮಾಡೋಣ', ಎಂದು ಇಚ್ಛೆ ಮಾಡಬೇಕು!

ತಥೈವ ಖಲ್ವಸ್ತ್ವಿತಿ ಸರ್ವೇ ಪ್ರತಿಜಾನೀಯುಃ .

'ನಿಶ್ಚಯವಾಗಿ ಹಾಗೆಯೇ ಆಗಲಿ', ಎಂದು ಎಲ್ಲರೂ ಒಪ್ಪಿಗೆಯನ್ನು ಕೊಡಬೇಕು!

ಏವಂ ಭೂತಸ್ಯೋತ್ತಮಪುರುಷಸ್ಯಾಭಿಷೇಕ-ಕರಣಂ ಸರ್ವೈಶ್ವರ್ಯಪ್ರಾಪಕತ್ವಾದಿಂದ್ರಮಿತ್ಯಾಹುಃ ॥ ೭ ॥

ಹೀಗಿರುವ ಉತ್ತಮ ಪುರುಷನ ಅಭಿಷೇಕ ಮಾಡುವಿಕೆಯು ಎಲ್ಲಾ ಐಶ್ವರ್ಯಗಳ ಪ್ರಾಪ್ತಿಗೆ ಹೇತುವಾದುದರಿಂದ, [ಅವನನ್ನು] 'ಇಂದ್ರ', ಎಂದು ಕರೆಯುತ್ತಾರೆ. [೭]

ರಾಜ್ಯೋತ್ಪತ್ತಿ

"ಸಮ್ರಾಜಂ ಸಾಮ್ರಾಜ್ಯಂ ಭೋಜಂ ಭೋಜಪಿತರಂ ಸ್ವರಾಜಂ ಸ್ವಾರಾಜ್ಯಂ ವಿರಾಜಂ ವೈರಾಜ್ಯಂ ರಾಜಾನಂ ರಾಜಪಿತರಂ ಪರಮೇಷ್ಠಿನಂ ಪಾರಮೇಷ್ಠ್ಯಂ ಕ್ಷತ್ರಮಜನಿ ಕ್ಷತ್ರಿಯೋಽಜನಿ ವಿಶ್ವಸ್ಯ ಭೂತಸ್ಯಾಧಿಪತಿರಜನಿ ವಿಶಾಮತ್ತಾಜನಿ ಪುರಾಂ ಭೇತ್ತಾಜನ್ಯ-ಸುರಾಣಾಂ ಹಂತಾಜನಿ ಬ್ರಹ್ಮಣೋ ಗೋಪ್ತಾಜನಿ ಧರ್ಮಸ್ಯ-ಗೋಪ್ತಾಜನೀತಿ ॥ ೧೨ ॥

"ಸ ಪರಮೇಷ್ಠೀ ಪ್ರಾಜಾಪತ್ಯೋಽಭವತ್ ॥ ೧೪ ॥ ॥ ೮ ॥"

[ಐತರೇಯಬ್ರಾಹ್ಮಣೇ ಪಂ. ೮, ಅ. ೩, ಕಂ. ೧೨, ೧೪]

[ಅರ್ಥ:_ "ಸಾರ್ವಭೌಮರಾಜನನ್ನೂ, ಸಾಮ್ರಾಜ್ಯವನ್ನೂ, ಭೋಜನನ್ನೂ, ಭೋಜ-ರಕ್ಷಕನನ್ನೂ, ಸ್ವರಾಜನನ್ನೂ, ಸ್ವಾರಾಜ್ಯವನ್ನೂ, ವಿರಾಜನನ್ನೂ, ವೈರಾಜ್ಯವನ್ನೂ, ರಾಜನನ್ನೂ, ರಾಜನ ರಕ್ಷಕನನ್ನೂ, ಪರಮೇಷ್ಠಿಯನ್ನೂ, [ಮತ್ತು] ಪರಮೇಷ್ಠಿಸಂಪಾದಿತವಾದ ರಾಜ್ಯವನ್ನೂ ಉತ್ಪನ್ನ ಮಾಡಿತು! ಕ್ಷತ್ರಿಯನು ಉತ್ಪನ್ನನಾದನು! ಸಮಸ್ತ ಪ್ರಾಣಿಗಳ ಅಧಿಪತಿಯು ಉತ್ಪನ್ನನಾದನು! ಪ್ರಜೆಗಳನ್ನು ತಿನ್ನುವವನು ಉತ್ಪನ್ನನಾದನು! ನಗರಗಳನ್ನು ಒಡೆಯುವವನು ಉತ್ಪನ್ನನಾದನು! ಅಸುರರ ಹಂತಕನು ಉತ್ಪನ್ನನಾದನು! ವೇದದ ರಕ್ಷಕನು ಉತ್ಪನ್ನನಾದನು! ಧರ್ಮದ ರಕ್ಷಕನು ಉತ್ಪನ್ನನಾದನು!

"ಆ ಪರಮೇಷ್ಠಿ[ರಾಜ್ಯವು] ಪ್ರಜಾಪತಿಗೆ ಸಂಬಂಧಿಸಿದುದಾಯಿತು!"

(ಐತರೇಯಬ್ರಾಹ್ಮಣ: ೮. ೩. ೧೨, ೧೪)]

ಭಾಷ್ಯಮ್_

(ಸಮ್ರಾಜಮ್) ಏವಂಭೂತಂ ಸಾರ್ವಭೌಮ-ರಾಜಾನಂ ;

(ಸಾಮ್ರಾಜ್ಯಮ್) ಸಾರ್ವಭೌಮರಾಜ್ಯಂ ;

(ಭೋಜಮ್) ಉತ್ತಮಭೋಗಸಾಧಕಂ ;

(ಭೋಜಪಿತರಮ್) ಉತ್ತಮಭೋಗಾನಾಂ ರಕ್ಷಕಂ ;

(ಸ್ವರಾಜಮ್) ರಾಜಕರ್ಮಸು ಪ್ರಕಾಶಮಾನಂ, ಸದ್ವಿದ್ಯಾದಿಗುಣೈಸ್ಸ್ವಹೃದಯೇ ದೇದೀಪ್ಯಮಾನಂ ;

ಭಾಷ್ಯ_

(ಸಮ್ರಾಜಮ್) ಹೀಗಿರುವಂತಹ ಸಾರ್ವಭೌಮ ರಾಜನೂ ;

(ಸಾಮ್ರಾಜ್ಯಮ್) ಸಾರ್ವಭೌಮರಾಜ್ಯವನ್ನುಳ್ಳವನೂ ;

(ಭೋಜಮ್) ಉತ್ತಮ ಭೋಗವನ್ನು ಸಾಧಿಸುವವನೂ;

(ಭೋಜಪಿತರಮ್) ಉತ್ತಮ ಭೋಗಗಳ ರಕ್ಷಕನೂ ;

(ಸ್ವರಾಜಮ್) ರಾಜಕರ್ಮಗಳಲ್ಲಿ ಪ್ರಕಾಶಮಾನನಾಗಿರುವವನೂ; [ಮತ್ತು] ಹೃದಯದಲ್ಲಿ ಸದ್ವಿದ್ಯೆ ಮೊದಲಾದ ಗುಣಗಳಿಂದ ದೇದೀಪ್ಯಮಾನನಾಗಿರುವವನೂ ;

(ಸ್ವಾರಾಜ್ಯಮ್) ಸ್ವಕೀಯರಾಜ್ಯಪಾಲನಂ ;

(ಸ್ವಾರಾಜ್ಯಮ್) ತನ್ನ ರಾಜ್ಯದ ಪಾಲನೆ [ಮಾಡುವವನೂ;]

(ವಿರಾಜಮ್) ವಿವಿಧಾನಾಂ ರಾಜ್ಞಾಂ ಪ್ರಕಾಶಕಂ ;

(ವಿರಾಜಮ್) ವಿವಿಧ ರಾಜರುಗಳ ಪ್ರಕಾಶಕನೂ;

(ವೈರಾಜ್ಯಮ್) ವಿವಿಧರಾಜ್ಯಪ್ರಾಪ್ತಿಕರಂ ;

(ವೈರಾಜ್ಯಮ್) ವಿವಿಧ ರಾಜ್ಯಗಳನ್ನು ಪ್ರಾಪ್ತ ಮಾಡುವವನೂ ;

(ರಾಜಾನಮ್) ಶ್ರೇಷ್ಠೈಶ್ವರ್ಯೇಣ ಪ್ರಕಾಶಮಾನಂ ;

(ರಾಜಾನಮ್) ಶ್ರೇಷ್ಠವಾದ ಐಶ್ವರ್ಯದಿಂದ ಪ್ರಕಾಶಮಾನನಾಗಿರುವವನೂ;

(ರಾಜಪಿತರಮ್) ರಾಜ್ಞಾಂ ರಕ್ಷಕಂ ;

(ರಾಜಪಿತರಮ್) ರಾಜರುಗಳ ರಕ್ಷಕನೂ ;

(ಪರಮೇಷ್ಠಿನಮ್) ಪರಮೋತ್ಕೃಷ್ಟೇ ರಾಜ್ಯೇ ಸ್ಥಾಪಯಿತುಂ ಯೋಗ್ಯಂ ;

(ಪರಮೇಷ್ಠಿನಮ್) ಪರಮೋತ್ಕೃಷ್ಟವಾದ ರಾಜ್ಯದಲ್ಲಿ ಸ್ಥಾಪಿಸಲ್ಪಡಲು ಯೋಗ್ಯನಾದವನೂ; [ಮತ್ತು _]

(ಪಾರಮೇಷ್ಠ್ಯಮ್) ಪರಮೇಷ್ಠಿಸಂಪಾದಿತಂ ಸರ್ವೋತ್ಕೃಷ್ಟಂ ಪುರುಷಂ ವಯಮಭಿಷಿಂಚಾಮಹೇ.

(ಪಾರಮೇಷ್ಠ್ಯಮ್) ಪರಮೇಷ್ಠಿಯಿಂದ ಸಂಪಾದಿತನೂ ಆದ ಸರ್ವೋತ್ಕೃಷ್ಟ ಪುರುಷನನ್ನು ನಾವು ಅಭಿಷೇಕಿಸುತ್ತೇವೆ.

ಏವಮಭಿಷಿಕ್ತಸ್ಯ ಪುರುಷಸ್ಯ ಸುಖಯುಕ್ತಂ (ಕ್ಷತ್ರಮಜನಿ) ಪ್ರಾದುರ್ಭವತೀತಿ.

ಹೀಗೆ ಅಭಿಷಿಕ್ತನಾದ ಪುರುಷನ ಸುಖಯುಕ್ತವಾದ (ಕ್ಷತ್ರಮಜನಿ) ರಾಜ್ಯವು ಉತ್ಪನ್ನವಾಗುತ್ತದೆ.

ಅಜನೀತಿ_

[ಇಲ್ಲಿ] 'ಅಜನಿ', [ಎಂಬ ಪ್ರಯೋಗದ] ಬಗ್ಗೆ_

"ಛಂದಸಿ ಲುಙ್ ಲಙ್ ಲಿಟಃ ॥"

[ಅಷ್ಟಾಧ್ಯಾಯ್ಯಾಮ್ ೩. ೪. ೬]

[ಅರ್ಥ:_ "ವೇದವಿಷಯದಲ್ಲಿ ಧಾತುವಿನ ಸಂಬಂಧವಾಗಿ ಸಾಮಾನ್ಯಕಾಲದಲ್ಲಿ ವಿಕಲ್ಪದಿಂದ ಲುಙ್, ಲಙ್, ಮತ್ತು ಲಿಟ್ ಪ್ರತ್ಯಯಗಳು ಉಂಟಾಗುತ್ತವೆ."

(ಅಷ್ಟಾಧ್ಯಾಯೀ: ೩. ೪. ೬)]

ಇತಿ ವರ್ತಮಾನಕಾಲೇ ಲುಙ್.

ಎಂಬ ಸೂತ್ರದಂತೆ ವರ್ತಮಾನಕಾಲದ ಸ್ಥಾನದಲ್ಲಿ 'ಲುಙ್' * [ಪ್ರತ್ಯಯವು ಪ್ರಯುಕ್ತವಾಗಿದೆ.]

(ಕ್ಷತ್ರಿಯೋಽಜನಿ) ತಥಾ ಕ್ಷತ್ರಿಯೋ ವೀರಪುರುಷಃ ;

(ಕ್ಷತ್ರಿಯೋಽಜನಿ) ಮತ್ತು 'ಕ್ಷತ್ರಿಯ', ಎಂದರೆ ವೀರಪುರುಷನು [ಉತ್ಪನ್ನನಾಗುತ್ತಾನೆ ;]

(ವಿಶ್ವ.) ಸರ್ವಸ್ಯ ಪ್ರಾಣಿಮಾತ್ರಸ್ಯಾಧಿಪತಿಃ ಸಭಾಧ್ಯಕ್ಷಃ ;

(ವಿಶ್ವಸ್ಯ ಭೂತಸ್ಯಾಧಿಪತಿರಜನಿ) ಸಮಸ್ತ ಪ್ರಾಣಿಮಾತ್ರಗಳ ಅಧಿಪತಿ, ಎಂದರೆ, ಸಭಾಧ್ಯಕ್ಷನು [ಉತ್ಪನ್ನನಾಗುತ್ತಾನೆ ;]

* 'ಲುಙ್', ಎಂದರೆ ಸಾಮಾನ್ಯಭೂತಕಾಲ. ಸಾಮಾನ್ಯಕಾಲ, ಎಂದರೆ ವರ್ತಮಾನಕಾಲ _ಅನು.

(ವಿಶಾಮತ್ತಾ.) ದುಷ್ಟಪ್ರಜಾನಾಮತ್ತಾ ವಿನಾಶಕಃ ;

(ವಿಶಾಮತ್ತಾಜನಿ) ದುಷ್ಟಪ್ರಜೆಗಳನ್ನು ತಿನ್ನುವವನು, ಎಂದರೆ ವಿನಾಶಕನು [ಉತ್ಪನ್ನನಾಗುತ್ತಾನೆ ;]

(ಪುರಾಂ ಭೇ.) ಶುತ್ರನಗರಾಣಾಂ ವಿನಾಶಕಃ ;

(ಪುರಾಂ ಭೇತ್ತಾಜನಿ) ಶತ್ರುನಗರಗಳನ್ನು ಒಡೆಯುವವನು, ಎಂದರೆ ವಿನಾಶಕನು [ಉತ್ಪನ್ನನಾಗುತ್ತಾನೆ ;]

(ಅಸುರಾಣಾಂ ಹಂತಾ.) ದುಷ್ಟಾನಾಂ ಹಂತಾ ಹನನಕರ್ತ್ತಾ ;

(ಅಸುರಾಣಾಂ ಹಂತಾಜನಿ) ದುಷ್ಟರ ವಧ-ಕರ್ತೃವು [ಉತ್ಪನ್ನನಾಗುತ್ತಾನೆ ;]

(ಬ್ರಹ್ಮಣೋ.) ವೇದಸ್ಯ ರಕ್ಷಕಃ ;

(ಬ್ರಹ್ಮಣೋ ಗೋಪ್ತಾಜನಿ) ವೇದದ ರಕ್ಷಕನು [ಉತ್ಪನ್ನನಾಗುತ್ತಾನೆ ;]

(ಧರ್ಮಸ್ಯ ಗೋ.) ಧರ್ಮಸ್ಯ ರಕ್ಷಕೋಽಜನಿ ಪ್ರಾದುರ್ಭವತೀತಿ.

(ಧರ್ಮಸ್ಯ ಗೋಪ್ತಾಜನೀತಿ) ಧರ್ಮದ ರಕ್ಷಕನು ಉತ್ಪನ್ನನಾಗುತ್ತಾನೆ, ಎಂದು ತಿಳಿಯಲ್ಪಡಬೇಕು!

(ಸ ಪರಮೇಷ್ಠೀ) ಸ ರಾಜಧರ್ಮಃ ಸಭಾಧ್ಯಕ್ಷಾದಿ-ಮನುಷ್ಯೈಃ ;

(ಸ ಪರಮೇಷ್ಠೀ) ಆ ರಾಜಧರ್ಮವು ಸಭಾಧ್ಯಕ್ಷನೇ ಮೊದಲಾದ ಮನುಷ್ಯರಿಂದ ;

(ಪ್ರಾಜಾಪತ್ಯಃ.) ಅರ್ಥಾತ್ ಪರಮೇಶ್ವರ [ಏವ] ಇಷ್ಟಃ ಕರಣೀಯಃ .

(ಪ್ರಾಜಾಪತ್ಯೋಽಭವತ್) 'ಪ್ರಾಜಾಪತ್ಯ', ಎಂದರೆ ಪರಮೇಶ್ವರನಿಗೇ ಇಷ್ಟವಾದುದಾಗಿ ಮಾಡಲ್ಪಡಬೇಕು!

ನ ತದ್ಭಿನ್ನೋಽರ್ಥಃ ಕೇನಚಿತ್ ಮನುಷ್ಯೇಣೇಷ್ಟಃ ಕರ್ತುಂ ಯೋಗ್ಯೋಽಸ್ತ್ಯತಃ ಸರ್ವೇ ಮನುಷ್ಯಾಃ ಪರಮೇಶ್ವರಪೂಜಕಾ ಭವೇಯುಃ ॥ ೮ ॥

ಇದಕ್ಕಿಂತ ಬೇರೆಯಾದ ಇಷ್ಟದ ಪ್ರಯೋಜನವು ಯಾವ ಮನುಷ್ಯನಿಂದಲೂ ಮಾಡುವುದು ಯೋಗ್ಯವಲ್ಲ! ಆದುದರಿಂದ, ಸಮಸ್ತ ಮಾನವರು ಪರಮೇಶ್ವರನನ್ನು ಪೂಜಿಸುವವರಾಗಬೇಕು!

ಅಂದರೆ, ಆ [ಪರಮೇಶ್ವರನೇ] ನಮ್ಮ **'ಸಮ್ರಾಟ್'**, ಎಂದರೆ ಚಕ್ರವರ್ತಿರಾಜನಾಗಿದ್ದಾನೆ! ಮತ್ತು ಅವನೇ ನಮಗೂ ಚಕ್ರವರ್ತಿರಾಜ್ಯವನ್ನು ಕೊಡುವವನಾಗಿದ್ದಾನೆ!

ತಂದೆಯಂತೆ ಎಲ್ಲ ರೀತಿಯಿಂದಲೂ ನಮ್ಮ ಪಾಲನೆ ಮಾಡುವವನೂ, **'ಸ್ವರಾಟ್'**, ಎಂದರೆ ಸ್ವಯಂ ಪ್ರಕಾಶಸ್ವರೂಪನೂ ಆಗಿದ್ದಾನೆ. ಮತ್ತು ಪ್ರಕಾಶರೂಪವಾದ ರಾಜ್ಯವನ್ನು ಕೊಡುವವನಾಗಿದ್ದಾನೆ.

ಮತ್ತು **'ವಿರಾಟ್'**, ಎಂದರೆ ಎಲ್ಲರ ಪ್ರಕಾಶಕನಾಗಿದ್ದಾನೆ ; ಅಂದರೆ, ವಿವಿಧ ರಾಜ್ಯಗಳನ್ನು ಕೊಡುವವನಾಗಿದ್ದಾನೆ.

ಅವನನ್ನೇ ನಾವು ನಮ್ಮ **ರಾಜಾ**, ಎಂದೂ, ಮತ್ತು ಎಲ್ಲಾ ರಾಜರುಗಳ **ತಂದೆ**, ಎಂದೂ ಅಂಗೀಕರಿಸುತ್ತೇವೆ.

ಏಕೆಂದರೆ, ಅವನೇ **'ಪರಮೇಷ್ಠೀ'**, ಎಂದರೆ ಸರ್ವೋತ್ತಮ ರಾಜ್ಯವನ್ನೂ ಕೊಡುವವನಾಗಿದ್ದಾನೆ.

"ಅವನ ಕೃಪೆಯಿಂದಲೇ ನಾನು ರಾಜ್ಯವನ್ನು ಸಂಪಾದಿಸಿದೆನು! ಎಂದರೆ ನಾನು ಕ್ಷತ್ರಿಯನಾದೆನು ಮತ್ತು ಎಲ್ಲಾ ಜನರ ಅಧಿಪತಿಯಾದೆನು! ಮತ್ತು ನಾನು ಪ್ರಜೆಗಳ ಸಂಗ್ರಹ ಮಾಡುವವನೂ, ದುಷ್ಟರ ನಗರಗಳನ್ನು ಒಡೆಯುವವನೂ ; **'ಅಸುರ'**, ಎಂದರೆ ಕಳ್ಳರನ್ನು, ದರೋಡೆಕೋರರನ್ನು ತಾಡನ ಮಾಡುವವನೂ, **'ಬ್ರಹ್ಮ'**, ಎಂದರೆ ವೇದವಿದ್ಯೆಯ ಪಾಲನೆ ಮಾಡುವವನೂ ಮತ್ತು ಧರ್ಮದ ರಕ್ಷಣೆ ಮಾಡುವವನೂ ಆಗಿದ್ದೇನೆ!" [೮]

ರಾಜನ ಸಾರ್ವಭೌಮತ್ವ!

"ಸ ಏತೇನೈಂದ್ರೇಣ ಮಹಾಭಿಷೇಕೇಣಾಭಿಷಿಕ್ತಃ ಕ್ಷತ್ರಿಯಃ ಸರ್ವಾ ಜಿತೀರ್ಜಯತಿ; ಸರ್ವಾನ್ ಲೋಕಾನ್ ವಿಂದತಿ; ಸರ್ವೇಷಾಂ ರಾಜ್ಞಾಂ ಶ್ರೈಷ್ಠ್ಯಮತಿಷ್ಠಾಂ ಪರಮತಾಂ ಗಚ್ಛತಿ;

"ಸಾಮ್ರಾಜ್ಯಂ ಭೌಜ್ಯಂ ಸ್ವಾರಾಜ್ಯಂ ವೈರಾಜ್ಯಂ ಪಾರಮೇಷ್ಠ್ಯಂ ರಾಜ್ಯಂ ಮಾಹಾರಾಜ್ಯಮಾಧಿಪತ್ಯಂ ಜಿತ್ವಾಸ್ಮಿಁಲ್ಲೋಕೇ ; ಸ್ವಯಂಭೂಃ ಸ್ವರಾಡಮೃತೋಽಮುಷ್ಮಿನ್ಸ್ವರ್ಗೇ ಲೋಕೇ .... ಸರ್ವಾನ್ ಕಾಮಾನಾಪ್ತ್ವಾಮೃತಃ ಸಂಭವತಿ;

"ಯಮೇತೇನೈಂದ್ರೇಣ ಮಹಾಭಿಷೇಕೇಣ ಕ್ಷತ್ರಿಯಂ ಶಾಪಯಿತ್ವಾಽಭಿಷಿಂಚತಿ ॥ ೯ ॥"

[ಐತರೇಯಬ್ರಾಹ್ಮಣೇ ಪಂ. ೮, ಅ. ೪, ಕಂ. ೧೯]

[ಅರ್ಥ:_ "ಈ ರೀತಿಯಾದ ಮಹದೈಶ್ವರ್ಯಯುಕ್ತವಾದ ಮಹಾಭಿಷೇಕದಿಂದ ಅಭಿಷಿಕ್ತನಾದ ಆ ಕ್ಷತ್ರಿಯನು ಎಲ್ಲಾ ಯುದ್ಧಗಳನ್ನೂ ಗೆಲ್ಲುತ್ತಾನೆ ; ಎಲ್ಲಾ ಲೋಕಗಳನ್ನೂ ಗಳಿಸುತ್ತಾನೆ ; ಎಲ್ಲಾ ರಾಜರುಗಳ ಮೇಲೆ ಶ್ರೇಷ್ಠತ್ವವನ್ನೂ, ಅತಿದೃಢತೆಯನ್ನೂ, ಸರ್ವೋತ್ತಮತ್ವವನ್ನೂ ಹೊಂದುತ್ತಾನೆ ;

"ಈ ಲೋಕದಲ್ಲಿ ಸಾಮ್ರಾಜ್ಯವನ್ನೂ, ಭೌಜ್ಯವನ್ನೂ, ಸ್ವಾರಾಜ್ಯವನ್ನೂ, ವೈರಾಜ್ಯವನ್ನೂ, ಪಾರಮೇಷ್ಠ್ಯರಾಜ್ಯವನ್ನೂ, ಮಹಾರಾಜ್ಯದ ಆಧಿಪತ್ಯವನ್ನೂ ಜಯಿಸಿ ; [ನಂತರ,] ಸ್ವರ್ಗಲೋಕದಲ್ಲಿ ಸ್ವಾಧೀನನೂ, ಸ್ವಪ್ರಕಾಶನೂ, ಮರಣರಹಿತನೂ, ಎಲ್ಲಾ ಕಾಮನೆಗಳನ್ನೂ ಪಡೆಯುವವನೂ ಆಗಿ, ಮೋಕ್ಷಸುಖಪ್ರಾಪ್ತನಾಗಿ ಬಿಡುತ್ತಾನೆ!

"ಯಾವ ಕ್ಷತ್ರಿಯನನ್ನು ಈ ರೀತಿಯಾದ ಮಹದೈಶ್ವರ್ಯಯುಕ್ತವಾದ ಮಹಾಭಿಷೇಕದಿಂದ ಪ್ರತಿಜ್ಞೆ ಮಾಡಿಸಿ, ಅಭಿಷೇಕಿಸುತ್ತಾರೋ, ಅವನಿಗೆ [ಮೇಲೆ ವಿವರಿಸಿದ ಭೋಗಗಳು ಸಿಗುತ್ತವೆ!"]

(ಐತರೇಯಬ್ರಾಹ್ಮಣ: ೮. ೪. ೧೯)]

ಭಾಷ್ಯಮ್_	ಭಾಷ್ಯ_
ಯೋ ಮನುಷ್ಯೋ ರಾಜ್ಯಂ ಕರ್ತುಮಿಚ್ಛೇತ್ ;	ಯಾವನಾದರೂ ಮನುಷ್ಯನು ರಾಜ್ಯವನ್ನು ಕಟ್ಟಲು ಇಚ್ಛಿಸುತ್ತಾನಾದರೆ;
ಸ (ಏತೇನೈಂದ್ರೇಣ) ಪೂರ್ವೋಕ್ತೇನ ಸರ್ವೈಶ್ವರ್ಯಪ್ರಾಪ್ತಿನಿಮಿತ್ತೇನ ;	[(ಸಃ)] ಅವನು (ಏತೇನೈಂದ್ರೇಣ) ಮೊದಲು ಹೇಳಿದ ಸರ್ವೈಶ್ವರ್ಯಪ್ರಾಪ್ತಿಗೆ ನಿಮಿತ್ತವಾದ;

(ಮಹಾಭಿಷೇಕೇಣಾ.) ಅಭಿಷಿಕ್ತಃ ಸ್ವೀಕೃತಃ ;

(ಮಹಾಭಿಷೇಕೇಣ) ಹಿರಿಯ ಅಭಿಷೇಕದಿಂದ (ಅಭಿಷಿಕ್ತಃ) 'ಅಭಿಷಿಕ್ತ', ಎಂದರೆ ಸ್ವೀಕೃತನಾಗಿಯೂ ;

(ಕ್ಷತ್ರಿಯಃ) ಕ್ಷತ್ರಧರ್ಮವಾನ್ ;

(ಕ್ಷತ್ರಿಯಃ) ಕ್ಷತ್ರಧರ್ಮದಿಂದ ಯುಕ್ತನಾಗಿಯೂ ;

(ಸರ್ವಾ.) ಸರ್ವೇಷು ಯುದ್ಧೇಷು ಜಯತಿ .

(ಸರ್ವಾ ಜಿತೀಃ) ಎಲ್ಲಾ ಯುದ್ಧಗಳಲ್ಲಿಯೂ (ಜಯತಿ) ಜಯವನ್ನು ಗಳಿಸುತ್ತಾನೆ!

ಅಂದರೆ, ಯಾವ ಕ್ಷತ್ರಿಯನು ಈ ಪ್ರಕಾರದ ಗುಣ, ಹಾಗೂ ಸತ್ಯಕರ್ಮಗಳಿಂದ 'ಅಭಿಷಿಕ್ತ', ಎಂದರೆ ಯುಕ್ತನಾಗುತ್ತಾನೋ, ಅವನು ಎಲ್ಲಾ ಯುದ್ಧಗಳನ್ನೂ ಗೆದ್ದು ಬಿಡುತ್ತಾನೆ!

ಸರ್ವತ್ರ ವಿಜಯಂ ತಥಾ ಸರ್ವಾನುತ್ತಮಾ-ಲ್ಲೋಕಾಂಶ್ಚ ವಿಂದತಿ ಪ್ರಾಪ್ನೋತಿ.

ಸರ್ವತ್ರ ವಿಜಯವನ್ನೂ, ಹಾಗೂ (ಸರ್ವಾನ್ ಲೋಕಾನ್ ವಿಂದತಿ) ಎಲ್ಲಾ ಉತ್ತಮಲೋಕಗಳನ್ನೂ ಕೂಡ, ಪ್ರಾಪ್ತಮಾಡಿಕೊಳ್ಳುತ್ತಾನೆ!

(ಸರ್ವೇಷಾಂ ರಾಜ್ಞಾಂ.) ಮಧ್ಯೇ ಶ್ರೈಷ್ಠ್ಯಂ ಸರ್ವೋತ್ತಮತ್ವಂ, ಪೂರ್ವೋಕ್ತಾಮತಿಷ್ಠಾಂ, [(ಪರಮತಾಂ)]_

(ಸರ್ವೇಷಾಂ ರಾಜ್ಞಾಂ) ಎಲ್ಲಾ ರಾಜರುಗಳ ಮಧ್ಯದಲ್ಲಿ (ಶ್ರೈಷ್ಠ್ಯಂ) ಸರ್ವೋತ್ತಮತ್ವವನ್ನೂ, (ಅತಿಷ್ಠಾಂ) ಮೇಲೆ ಹೇಳಿದ ಅತಿಯಾದ ದೃಢತೆಯನ್ನೂ, (ಪರಮತಾಂ) _ [ಎಂದರೆ ;]

ಯಾ ಪರೇಷು ಶತ್ರುಷು ವಿಜಯೇನ ಹರ್ಷ-ನಿಮಿತ್ತಾ ತಥಾ ಪರೇಷಾಂ ಶತ್ರೂಣಾಂ ದೀನತ್ವ-ನಿಮಿತ್ತಾ ಸಾ ಪರಮತಾ = ಸಭಾ ;

ಯಾವುದು ಬೇರೆಯ ಶತ್ರುಗಳ ಮೇಲೆ ವಿಜಯದ ಕಾರಣದಿಂದ, ಹರ್ಷಕ್ಕೆ ನಿಮಿತ್ತವೂ, ಮತ್ತು ಇತರ ಶತ್ರುಗಳ ದೀನತೆಗೆ ನಿಮಿತ್ತವೂ ಆಗಿದೆಯೋ, ಅದು ಪರಮತ್ವ = ಸಭೆ ;

ತಾಂ ವಾ ಗಚ್ಛತಿ ಪ್ರಾಪ್ನೋತಿ.

ಅದನ್ನು ಅವಶ್ಯವಾಗಿ ಹೊಂದುತ್ತಾನೆ!

ಅಂದರೆ, ಎಲ್ಲಾ ಉತ್ತಮ ಸುಖಗಳ, ಮತ್ತು ಲೋಕಗಳ ಅಧಿಕಾರಿಯಾಗಿ, ಎಲ್ಲಾ ರಾಜರುಗಳ ಮಧ್ಯೆ ಅತ್ಯಂತ ಉತ್ತಮತ್ವವನ್ನು ಪಡೆಯುತ್ತಾನೆ.

[(ಸಾಮ್ರಾಜ್ಯಂ.)] ತಯಾ ಸಭಯಾ ಪೂರ್ವೋಕ್ತಂ ಸಾಮ್ರಾಜ್ಯಂ ಭೌಜ್ಯಂ ಸ್ವಾರಾಜ್ಯಂ ವೈರಾಜ್ಯಂ ಪಾರಮೇಷ್ಠ್ಯಂ ಮಾಹಾರಾಜ್ಯಮಾಧಿಪತ್ಯಂ ರಾಜ್ಯಂ ಚ ಜಿತ್ವಾ ;

(ಸಾಮ್ರಾಜ್ಯಂ.) ಆ ಸಭೆಯ ಮೂಲಕ ಮೊದಲು ಹೇಳಿದ ಸಾಮ್ರಾಜ್ಯವನ್ನೂ, ಭೌಜ್ಯವನ್ನೂ, ಸ್ವಾರಾಜ್ಯ ವನ್ನೂ, ವೈರಾಜ್ಯವನ್ನೂ, ಪಾರಮೇಷ್ಠ್ಯ[ರಾಜ್ಯವನ್ನೂ] ಮತ್ತು ಮಹಾರಾಜ್ಯದ ಮೇಲಿನ ಆಧಿಪತ್ಯದ ರಾಜ್ಯ ವನ್ನೂ ಕೂಡ, ಜಯಿಸಿ ;

ಅಸ್ಮಿನ್ ಲೋಕೇ ಚಕ್ರವರ್ತಿಸಾರ್ವಭೌಮೋ ಮಹಾರಾಜಾಧಿರಾಜೋ ಭವತಿ.

ಈ ಲೋಕದಲ್ಲಿ ಚಕ್ರವರ್ತಿಸಾರ್ವಭೌಮನಾದ ಮಹಾರಾಜಾಧಿರಾಜನಾಗುತ್ತಾನೆ!

ತಥಾ ಶರೀರಂ ತ್ಯಕ್ತ್ವಾಽಮುಷ್ಮಿನ್ ಸ್ವರ್ಗೇ ಸುಖಸ್ವರೂಪೇ ಲೋಕೇ ಪರಬ್ರಹ್ಮಣಿ ;	ಮತ್ತು ಶರೀರವನ್ನು ತ್ಯಜಿಸಿ, ಆ 'ಸ್ವರ್ಗ', ಎಂದರೆ ಸುಖಸ್ವರೂಪಲೋಕವಾದ ಪರಬ್ರಹ್ಮನಲ್ಲಿ;
(ಸ್ವಯಂಭೂಃ) ಸ್ವಾಧೀನಃ ;	(ಸ್ವಯಂಭೂಃ) ಸ್ವಾಧೀನನೂ ;
(ಸ್ವರಾಟ್) ಸ್ವಪ್ರಕಾಶಃ ;	(ಸ್ವರಾಟ್) ಸ್ವಪ್ರಕಾಶವನ್ನುಳ್ಳವನೂ ;
(ಅಮೃತಃ) ಪ್ರಾಪ್ತಮೋಕ್ಷಸುಖಃ ಸನ್ ;	(ಅಮೃತಃ) ಮೋಕ್ಷಸುಖವನ್ನು ಗಳಿಸಿದವನೂ ಆಗಿದ್ದು ;
ಸರ್ವಾನ್ ಕಾಮಾನಾಪ್ನೋತಿ.	ಎಲ್ಲಾ ಕಾಮನೆಗಳನ್ನೂ ಪಡೆಯುತ್ತಾನೆ!
(ಆಪ್ತ್ವಾಮೃತಃ.) ಪೂರ್ಣಕಾಮೋಽಜರಾಮರಃ ಸಂಭವತಿ.	ಎಂದರೆ, (ಆಪ್ತ್ವಾಮೃತಃ) ಪೂರ್ಣಕಾಮನೂ, ಅಜರನೂ, ಅಮರನೂ ಆಗಿಬಿಡುತ್ತಾನೆ!
	ಅಂದರೆ, ಇದರಿಂದ ಈ ಲೋಕದಲ್ಲಿ **ಚಕ್ರವರ್ತಿ** ರಾಜ್ಯವನ್ನೂ ಮತ್ತು ಐಶ್ವರ್ಯವನ್ನೂ ಭೋಗಿಸಿ ; ಸತ್ತ ಮೇಲೆ, ಪರಮೇಶ್ವರನ ಸಮೀಪದಲ್ಲಿ ಎಲ್ಲಾ ಸುಖಗಳನ್ನೂ ಭೋಗಿಸುತ್ತಾನೆ!
(ಯಮೇತೇನೈಂದ್ರೇಣ.) ಏತೇನೋಕ್ತೇನ ಸರ್ವೈಶ್ವರ್ಯೇಣ ;	(ಯಮೇತೇನೈಂದ್ರೇಣ.) ಈ ರೀತಿಯಾಗಿ ಹೇಳಿರುವ ಸರ್ವೈಶ್ವರ್ಯದಿಂದ ;
(ಶಾಪಯಿತ್ವಾ) ಪ್ರತಿಜ್ಞಾಂ ಕಾರಯಿತ್ವಾ ;	(ಶಾಪಯಿತ್ವಾ) ಪ್ರತಿಜ್ಞೆಯನ್ನು ಮಾಡಿಸಿ ;
ಯಂ ಸಕಲಗುಣೋತ್ಕೃಷ್ಟಂ ಕ್ಷತ್ರಿಯಂ ಮಹಾಭಿಷೇಕೇಣಾಭಿಷಿಂಚಂತಿ ಸಭಾಸದಃ ಸಭಾಯಾಂ ಸ್ವೀಕುರ್ವಂತಿ ;	ಯಾವ ಸಕಲಗುಣೋತ್ಕೃಷ್ಟನಾದ ಕ್ಷತ್ರಿಯನನ್ನು ಸಭಾಸದರು ಮಹಾಭಿಷೇಕದಿಂದ ಅಭಿಷೇಕಿಸುತ್ತಾರೋ, ಎಂದರೆ ಸಭೆಯಲ್ಲಿ ಅಂಗೀಕರಿಸುತ್ತಾರೋ ;
ತಸ್ಯ ರಾಷ್ಟ್ರೇ ಕದಾಚಿದನಿಷ್ಟಂ ನ ಪ್ರಸಜ್ಯತ ಇತಿ ವಿಜ್ಞೇಯಮ್ ॥ ೯ ॥	ಅವನ ರಾಷ್ಟ್ರದಲ್ಲಿ ಎಂದಿಗೂ ಅನಿಷ್ಟವು ಸಂಭವಿಸುವುದಿಲ್ಲ, ಎಂದು ತಿಳಿಯಬೇಕು!
	ಏಕೆಂದರೆ, **'ಐಂದ್ರ'**, ಎಂದರೆ ಮಹಾ ಐಶ್ವರ್ಯ ಯುಕ್ತವಾದ ಅಭಿಷೇಕದಿಂದ ಕ್ಷತ್ರಿಯನಿಗೆ ಪ್ರತಿಜ್ಞಾ ಪೂರ್ವಕವಾದ ರಾಜ್ಯಾಧಿಕಾರವು ದೊರಕುತ್ತದೆ.
	ಆದುದರಿಂದ, ಯಾವ ದೇಶದಲ್ಲಿ ಈ ರೀತಿಯ ರಾಜ್ಯಪ್ರಬಂಧವು ಮಾಡಲ್ಪಡುವುದೋ, ಆ ದೇಶವು ಅತ್ಯಂತ ಸುಖವನ್ನು ಪಡೆಯುತ್ತದೆ, ಎಂದರ್ಥ! [೯]

ಕ್ಷತ್ರವೇ ಇಷ್ಟಸುಖ-ಸಾಂತ್ವನೆ-ಸಾಮ್ರಾಜ್ಯ!

"ಕ್ಷತ್ರಂ ವೈ ಸ್ವಿಷ್ಟಕೃತ್ ॥"

"ಕ್ಷತ್ರಂ ವೈ ಸಾಮ । ಸಾಮ್ರಾಜ್ಯಂ ವೈ ಸಾಮ ॥ ೧೦ ॥"

[ಶತಪಥಬ್ರಾಹ್ಮಣೇ ಕಾಂ. ೧೨, ಅ. ೮, ಬ್ರಾ. ೩, ಕಂ. ೧೯, ೨೩]

[ಅರ್ಥ:_ "ಕ್ಷತ್ರವೇ ಸ್ವಿಷ್ಟಕೃತ್ ಆಗಿರುತ್ತದೆ."

"ಕ್ಷತ್ರವೇ ಸಾಮ ಆಗಿರುತ್ತದೆ. ಮತ್ತು ಸಾಮವೇ ಸಾಮ್ರಾಜ್ಯವಾಗಿರುತ್ತದೆ."

(ಶತಪಥಬ್ರಾಹ್ಮಣ: ೧೨. ೮. ೩. ೧೯, ೨೩)]

ಭಾಷ್ಯಮ್_

(ಕ್ಷತ್ರಂ ವೈ [ಸ್ವಿಷ್ಟಕೃತ್]) ಕ್ಷತ್ರಮರ್ಥಾದ್ ರಾಜ್ಯ-ಸಭಾಪ್ರಬಂಧೇನ ಯದ್ಯಥಾವತ್ ಪ್ರಜಾಪಾಲನಂ ಕ್ರಿಯತೇ, ತದೇವ ಸ್ವಿಷ್ಟಕೃದರ್ಥಾದಿಷ್ಟಸುಖಕಾರಿ ;

(ಕ್ಷತ್ರಂ ವೈ ಸಾಮ) ಯದ್ವೈ ದುಷ್ಟಕರ್ಮಣಾ-ಮಂತಕಾರಿ ತಥಾ ಸರ್ವಸ್ಯಾಃ ಪ್ರಜಾಯಾಃ ಸಾಂತ್ವ-ಪ್ರಯೋಗಕರ್ತೃ ಚ ಭವತಿ ;

(ಸಾಮ್ರಾಜ್ಯಂ ವೈ ಸಾಮ) ತದೇವ ಶ್ರೇಷ್ಠಂ ರಾಜ್ಯಂ [ಇತ್ಯೇವ] ವರ್ಣಯಂತಿ ॥ ೧೦ ॥

ಭಾಷ್ಯ_

(ಕ್ಷತ್ರಂ ವೈ ಸ್ವಿಷ್ಟಕೃತ್) 'ಕ್ಷತ್ರ', ಎಂದರೆ ರಾಜ್ಯಸಭಾಪ್ರಬಂಧದಿಂದ ಯಥಾವತ್ತಾಗಿ ಯಾವ ಪ್ರಜಾಪಾಲನೆಯನ್ನು ಮಾಡಲಾಗುತ್ತದೋ, ಅದೇ 'ಸ್ವಿಷ್ಟಕೃತ್', ಎಂದರೆ ಇಷ್ಟಸುಖವನ್ನು ಉಂಟು ಮಾಡುವುದಾಗಿರುತ್ತದೆ ;

ಅಂದರೆ, ಚೆನ್ನಾದ ರೀತಿಯಲ್ಲಿ ಇಚ್ಛಿತ ಸುಖದ ಕಾರಕವಾಗುತ್ತದೆ ;

(ಕ್ಷತ್ರಂ ವೈ ಸಾಮ) ಮತ್ತು ಯಾವುದು ದುಷ್ಟಕರ್ಮಗಳ ಅಂತ್ಯಕಾರಿಯೂ, ಹಾಗೂ ಎಲ್ಲಾ ಪ್ರಜೆಗಳಿಗೂ ಸಾಂತ್ವನೆಯನ್ನು ಪ್ರದಾನ ಮಾಡುವುದೂ ಆಗಿರುತ್ತದೋ ;

ಅಂದರೆ, ಯಾವ ರಾಜಕರ್ಮವು ದುಷ್ಟರ ನಾಶವನ್ನೂ ಮತ್ತು ಪ್ರಜೆಗಳ ಪಾಲನೆಯನ್ನೂ ಮಾಡುವುದಾಗಿರುತ್ತದೋ;

(ಸಾಮ್ರಾಜ್ಯಂ ವೈ ಸಾಮ) ಅದೇ ಶ್ರೇಷ್ಠವಾದ ರಾಜ್ಯ, ಎಂಬುದಾಗಿಯೇ ವರ್ಣಿಸುತ್ತಾರೆ.

ಅಂದರೆ, ಅದೇ 'ಸಾಮ್ರಾಜ್ಯ', ಎಂದರೆ ಸುಖ ಕಾರಕವಾದ ರಾಜ್ಯವಾಗುತ್ತದೆ. [೧೦]

ಬ್ರಹ್ಮ ಮತ್ತು ಕ್ಷತ್ರಗಳಿಂದ ರಾಜ್ಯಲಕ್ಷ್ಮಿಪ್ರಾಪ್ತಿ

"ಬ್ರಹ್ಮ ವೈ ಬ್ರಾಹ್ಮಣಃ ಕ್ಷತ್ರಗ್ಂ ರಾಜನ್ಯಸ್ತದಸ್ಯ ಬ್ರಹ್ಮಣಾ ಚ
ಕ್ಷತ್ರೇಣ ಚೋಭಯತಃ ಶ್ರೀಃ ಪರಿಗೃಹೀತಾ ಭವತಿ ॥"

"ಯುದ್ಧಂ ವೈ ರಾಜನ್ಯಸ್ಯ ವೀರ್ಯ್ಯಮ್ ॥ ೧೧ ॥"

[ಶತಪಥಬ್ರಾಹ್ಮಣೇ ಕಾಂ. ೧೩, ಅ. ೧, ಬ್ರಾ. ೫, ಕಂ. ೩, ೬]

[ಅರ್ಥ:_ "ಬ್ರಹ್ಮವನ್ನು [ತಿಳಿದವನೇ] ಬ್ರಾಹ್ಮಣನು! ಕ್ಷತ್ರವನ್ನು [ಅಂಗೀಕರಿಸುವವನೇ] ಕ್ಷತ್ರಿಯನು! ಆದುದರಿಂದ, ಬ್ರಹ್ಮ ಮತ್ತು ಕ್ಷತ್ರ_ ಎರಡರಿಂದಲೂ ರಾಜ್ಯಲಕ್ಷ್ಮಿಯು ಸ್ವೀಕರಿಸಲ್ಪಡುತ್ತಾಳೆ."

"ಯುದ್ಧವೇ ಕ್ಷತ್ರಿಯನ ಬಲವಾಗಿರುತ್ತದೆ."

(ಶತಪಥಬ್ರಾಹ್ಮಣಃ ೧೩. ೧. ೫. ೩, ೬)]

ಭಾಷ್ಯಮ್_

(ಬ್ರಹ್ಮ ವೈ.) ಯೋ ಬ್ರಹ್ಮಾರ್ಥಾದ್ ವೇದಂ ಪರಮೇಶ್ವರಂ ಚ ವೇತ್ತಿ, ಸ ಏವ ಬ್ರಾಹ್ಮಣೋ ಭವಿತುಮರ್ಹತಿ.

(ಕ್ಷತ್ರಗ್ಂ.) ಯೋ ಜಿತೇಂದ್ರಿಯೋ ವಿದ್ವಾನ್, ಶೌರ್ಯ್ಯಾದಿಗುಣಯುಕ್ತೋ ಮಹಾವೀರಪುರುಷಃ ಕ್ಷತ್ರಧರ್ಮಂ ಸ್ವೀಕರೋತಿ, ಸ ರಾಜನ್ಯೋ ಭವಿತುಮರ್ಹತಿ.

(ತದಸ್ಯ ಬ್ರಹ್ಮಣಾ.) ತಾದೃಶೈರ್ಬ್ರಾಹ್ಮಣೈಃ ರಾಜನ್ಯೈಶ್ಚ ಸಹಾಸ್ಯ ರಾಷ್ಟ್ರಸ್ಯ ಸಕಾಶಾದುಭಯತಃ ಶ್ರೀ ರಾಜ್ಯಲಕ್ಷ್ಮೀಃ ಪರಿತಃ ಸರ್ವತೋ ಗೃಹೀತಾ ಭವತಿ.

ನೈವಂ ರಾಜಧರ್ಮಾನುಷ್ಠಾನೇನಾಸ್ಯ ಶ್ರಿಯಃ ಕದಾಚಿದ್‌ಧ್ರಾಸಾನ್ಯಥಾತ್ವೇ ಭವತಃ.

ಭಾಷ್ಯ_

(ಬ್ರಹ್ಮ ವೈ ಬ್ರಾಹ್ಮಣಃ) ಯಾವನು 'ಬ್ರಹ್ಮ', ಎಂದರೆ ವೇದವನ್ನು ಮತ್ತು ಪರಮೇಶ್ವರನನ್ನು ತಿಳಿದಿರುತ್ತಾನೋ, ಅವನೇ ಬ್ರಾಹ್ಮಣನಾಗಲು ಅರ್ಹನಾಗಿರುತ್ತಾನೆ.

(ಕ್ಷತ್ರಂ ವೈ ರಾಜನ್ಯಃ) ಯಾವ ಜಿತೇಂದ್ರಿಯನೂ, ವಿದ್ವಾಂಸನೂ, ಶೌರ್ಯವೇ ಮೊದಲಾದ ಗುಣಗಳಿಂದ ಕೂಡಿದವನೂ ಆದ ಮಹಾವೀರಪುರುಷನು ಕ್ಷತ್ರ-ಧರ್ಮವನ್ನು ಸ್ವೀಕರಿಸುತ್ತಾನೋ, ಅವನು ಕ್ಷತ್ರಿಯನಾಗಲು ಅರ್ಹನಾಗಿರುತ್ತಾನೆ.

(ತದಸ್ಯ ಬ್ರಹ್ಮಣಾ.) ಅಂತಹ ಬ್ರಾಹ್ಮಣರು ಮತ್ತು ಕ್ಷತ್ರಿಯರು_ ಇಬ್ಬರಿಂದಲೂ ಕೂಡಿದ ಈ ರಾಷ್ಟ್ರದ ಬಳಿಯಿಂದ 'ಶ್ರೀ', ಎಂದರೆ ರಾಜ್ಯಲಕ್ಷ್ಮಿಯು ಎಲ್ಲ ಕಡೆಯಿಂದಲೂ ಗ್ರಹಿಸಲ್ಪಡುತ್ತಾಳೆ.

ಅಂದರೆ, ಅಂತಹ ಬ್ರಾಹ್ಮಣ ಮತ್ತು ಕ್ಷತ್ರಿಯರಿಂದ ಕೂಡಿದ ನ್ಯಾಯಪಾಲಕನಾದ ರಾಜನಿಗೆ ಅನೇಕ ರೀತಿಯಲ್ಲಿ ಲಕ್ಷ್ಮಿಯು ಪ್ರಾಪ್ತಳಾಗುತ್ತಾಳೆ.

ಹೀಗೆ, ರಾಜಧರ್ಮದ ಅನುಷ್ಠಾನದಿಂದ, ಅವನ ಐಶ್ವರ್ಯದ ಹ್ರಾಸ ಮತ್ತು ಅನ್ಯಥಾ [ದುರುಪಯೋಗವು] ಎಂದಿಗೂ ಉಂಟಾಗುವುದೇ ಇಲ್ಲ!

ಅಂದರೆ, ಅವನ ಖಜಾನೆಯ ಹಾನಿಯು ಎಂದಿಗೂ ಆಗುವುದಿಲ್ಲ!

(ಯುದ್ಧಂ ವೈ.) ಅತ್ರೇದಂ ಬೋಧ್ಯಮ್_

(ಯುದ್ಧಂ ವೈ.) ಇಲ್ಲಿ ತಿಳಿಯಬೇಕಾದುದೇನೆಂದರೆ_

ಯುದ್ಧಕರಣಮೇವ ರಾಜನ್ಯಸ್ಯ ವೀರ್ಯ್ಯಂ ಬಲಂ ಭವತಿ.

ಯುದ್ಧ ಮಾಡುವುದೇ ಕ್ಷತ್ರಿಯನ 'ವೀರ್ಯ', ಎಂದರೆ ಬಲ ಆಗಿರುತ್ತದೆ.

ನಾನೇನ ವಿನಾ ಮಹಾಧನಸುಖಯೋಃ ಕದಾಚಿತ್ ಪ್ರಾಪ್ತಿರ್ಭವತಿ.

ಇದರ ಹೊರತು, ಮಹದೈಶ್ವರ್ಯ, ಹಾಗೂ ಸುಖಗಳ ಪ್ರಾಪ್ತಿಯು ಎಂದಿಗೂ ಆಗುವುದಿಲ್ಲ!

ಕುತಃ?

ಏಕೆಂದರೆ_

ನಿಘಂಟೌ (ಅ. ೨, ಖಂ. ೧೭) ಸಂಗ್ರಾಮಸ್ಯೈವ ಮಹಾಧನಸಂಜ್ಞತ್ವಾತ್.*

'ನಿಘಂಟು'ವಿನಲ್ಲಿ (ಅ.೨, ಖಂ.೧೭) ಸಂಗ್ರಾಮಕ್ಕೇನೇ 'ಮಹಾಧನ', ಎಂಬ ಹೆಸರಿದೆ.

'ಮಹಾಂತಿ ಧನಾನಿ ಪ್ರಾಪ್ತಾನಿ ಭವಂತಿ ಯಸ್ಮಿನ್ ಸ ಮಹಾಧನಃ ಸಂಗ್ರಾಮಃ.'

'ಯಾವುದರಲ್ಲಿ ದೊಡ್ಡ ದೊಡ್ಡ ಧನಗಳು ಪ್ರಾಪ್ತವಾಗುತ್ತವೋ, ಅದು 'ಮಹಾಧನ', ಎಂದರೆ ಸಂಗ್ರಾಮ!'

ಅಂದರೆ, ಇದನ್ನು 'ಮಹಾಧನ', ಎಂದು ಏತಕ್ಕೆ ಹೇಳುತ್ತಾರೆಂದರೆ, ಇದರಿಂದ ದೊಡ್ಡ ದೊಡ್ಡ ಉತ್ತಮ ಪದಾರ್ಥಗಳು ಪ್ರಾಪ್ತವಾಗುತ್ತವೆ.

ನಾಸ್ಮಾದ್ ವಿನಾ ಕದಾಚಿತ್ ಮಹತೀ ಪ್ರತಿಷ್ಠಾ ಮಹಾಧನಂ ಚ ಪ್ರಾಪ್ನುತಃ ॥೧೧॥

ಇದಿಲ್ಲದೇ** ದೊಡ್ಡ ಪ್ರತಿಷ್ಠೆಯೂ ಮತ್ತು ದೊಡ್ಡ ಐಶ್ವರ್ಯವೂ ಎಂದಿಗೂ ಪ್ರಾಪ್ತವಾಗುವುದಿಲ್ಲ! [೧೧]

ರಾಷ್ಟ್ರಪಾಲನೆಗೆ 'ಅಶ್ವಮೇಧ' ಎಂದು ಹೆಸರು

"ರಾಷ್ಟ್ರಂ ವಾ ಅಶ್ವಮೇಧಃ ॥೧೨॥"

[ಶತಪಥಬ್ರಾಹ್ಮಣೇ ಕಾಂ. ೧೩, ಅ. ೧, ಬ್ರಾ. ೬, ಕಂ. ೩]

[ಅರ್ಥ:_ "ರಾಷ್ಟ್ರ, ಎಂಬುದೇ ಅಶ್ವಮೇಧ[ಯಜ್ಞ]ವಾಗಿರುತ್ತದೆ."

(ಶತಪಥಬ್ರಾಹ್ಮಣ: ೧೩. ೧. ೬. ೩)]

* 'ಮಹಾಧನ ಇತಿ ಸಂಗ್ರಾಮನಾಮ' _ಅನು.

** ಎಂದರೆ, ಯುದ್ಧ ಮಾಡದೇ _ಅನು.

ಭಾಷ್ಯಮ್_

(ರಾಷ್ಟ್ರಂ ವಾ ಅಶ್ವಮೇಧಃ) ರಾಷ್ಟ್ರಪಾಲನಮೇವ ಕ್ಷತ್ರಿಯಾಣಾಮಶ್ವಮೇಧಾಖ್ಯೋ ಯಜ್ಞೋ ಭವತಿ ;

ನಾಶ್ವಂ ಹತ್ವಾ ತದಂಗಾನಾಂ ಹೋಮಕರಣಂ ಚೇತಿ.

ಭಾಷ್ಯ_

(ರಾಷ್ಟ್ರಂ ವಾ ಅಶ್ವಮೇಧಃ) ನ್ಯಾಯದಿಂದ ರಾಷ್ಟ್ರದ ಪಾಲನೆ ಮಾಡುವುದೇ ಕ್ಷತ್ರಿಯರಿಗೆ 'ಅಶ್ವಮೇಧ', ಎಂಬ ಹೆಸರಿನ ಯಜ್ಞವಾಗಿರುತ್ತದೆ.

(ಆದರೆ,) ಕುದುರೆಯನ್ನು ಕೊಂದು, ಅದರ ಅಂಗಗಳ ಹೋಮ ಮಾಡುವುದು [ಅಶ್ವಮೇಧ]ವಲ್ಲ! [೧೨]

ಕ್ಷತ್ರಿಯ, ಎಂದರೆ ಶೂರ!

"ರಾಜನ್ಯ ಏವ ಶೌರ್ಯಂ ಮಹಿಮಾನಂ ದಧಾತಿ; ತಸ್ಮಾತ್
ಪುರಾ *ರಾಜನ್ಯಃ ಶೂರ ಇಷವ್ಯೋಽತಿವ್ಯಾಧೀ ಮಹಾರಥೋ
ಜಜ್ಞೇ* ॥ ೧೩ ॥"

[ಶತಪಥಬ್ರಾಹ್ಮಣೇ ಕಾಂ. ೧೩, ಅ. ೧, ಬ್ರಾ. ೯, ಕಂ. ೨]

[ಅರ್ಥ:_ "ಕ್ಷತ್ರಿಯನೇ ಶೌರ್ಯವನ್ನೂ, ಮಹಿಮೆಯನ್ನೂ ಧಾರಣ ಮಾಡಿರುತ್ತಾನೆ; ಆದುದರಿಂದ, ಮೊದಲು ಕ್ಷತ್ರಿಯನು ಶೂರನೂ, ಅಸ್ತ್ರಪ್ರಯೋಕ್ತೃವೂ, ಅತ್ಯಂತಪೀಡಕನೂ, [ಮತ್ತು] ಮಹಾರಥಿಯೂ ಆಗಿ ಹುಟ್ಟಿದನು!"

(ಶತಪಥಬ್ರಾಹ್ಮಣ: ೧೩. ೧. ೯. ೨)]

ಭಾಷ್ಯಮ್_

(ರಾಜನ್ಯ ಏವ.) ಪುರಾ ಪೂರ್ವೋಕ್ತೈರ್ಗುಣೈರ್ಯುಕ್ತೋ ರಾಜನ್ಯೋ ಯದಾ ಶೌರ್ಯಂ ಮಹಿಮಾನಂ ದಧಾತಿ ;

ತದಾ ಸಾರ್ವಭೌಮಂ ರಾಜ್ಯಂ ಕರ್ತುಂ ಸಮರ್ಥೋ ಭವತಿ.

ಭಾಷ್ಯ_

(ರಾಜನ್ಯ ಏವ) 'ಪುರಾ', ಎಂದರೆ ಮೊದಲು ಹೇಳಿದ ಗುಣಗಳಿಂದ ಕೂಡಿದ ಕ್ಷತ್ರಿಯನು ಯಾವಾಗ ಶೌರ್ಯವನ್ನೂ, ಹಾಗೂ ಮಹಿಮೆಯನ್ನೂ ಧಾರಣ ಮಾಡುತ್ತಾನೋ ;

ಆಗ [ಅವನು] ಸಾರ್ವಭೌಮರಾಜ್ಯವನ್ನು ಕಟ್ಟಲು ಸಮರ್ಥನಾಗುತ್ತಾನೆ.

ಅಂದರೆ, ಮೊದಲು ಹೇಳಿದ ರಾಜನು ಯಾವಾಗ ಶೂರತ್ವರೂಪ ಕೀರ್ತಿಯನ್ನೂ ಧಾರಣ ಮಾಡುತ್ತಾನೋ, ಆಗಲೇ ಸಂಪೂರ್ಣ ಪೃಥಿವಿಯ ರಾಜ್ಯವನ್ನು ಆಳಲು ಸಮರ್ಥನಾಗುತ್ತಾನೆ!

* ಯಜುರ್ವೇದೇನ (೨೨. ೨೨) ಸಹ ತುಲನಾ ಕಾರ್ಯಾ _ಅನು.

ತಸ್ಮಾತ್ ಕಾರಣಾತ್ ರಾಜನ್ಯಃ ಶೂರೋ ಯುದ್ಧೋತ್ಸುಕೋ, ನಿರ್ಭಯಃ ;

ಆ ಕಾರಣದಿಂದಲೇ, ಕ್ಷತ್ರಿಯನು ಶೂರನೂ, ಯುದ್ಧ ಮಾಡಲು ಉತ್ಸಾಹಶಾಲಿಯೂ, ನಿರ್ಭಯನೂ;

(ಇಷವ್ಯಃ) ಶಸ್ತ್ರಾಸ್ತ್ರಪ್ರಕ್ಷೇಪಣೇ ಕುಶಲಃ ;

(ಇಷವ್ಯಃ) ಶಸ್ತ್ರಾಸ್ತ್ರಗಳನ್ನು ಪ್ರಯೋಗಿಸುವುದರಲ್ಲಿ ಕುಶಲನೂ ;

(ಅತಿವ್ಯಾಧೀ) ಅತ್ಯಂತಾ ವ್ಯಾಧಾಃ ಶತ್ರೂಣಾಂ ಹಿಂಸಕಾ ಯೋದ್ಧಾರೋ ಯಸ್ಯ ;

(ಅತಿವ್ಯಾಧೀ) ಯಾವನ ಯೋದ್ಧೃಗಳು ಶತ್ರುಗಳನ್ನು ಅತ್ಯಂತ ಪೀಡಿಸುವವರಾಗಿರುತ್ತಾರೋ, [ಅಂತಹವನೂ ;]

(ಮಹಾರಥಃ) ಮಹಾಂತೋ ಭೂಜಲಾಂತರಿಕ್ಷ-ಗಮನಾಯ ರಥಾ ಯಸ್ಯೇತಿ ;

(ಮಹಾರಥಃ) ಭೂಮಿ-ಜಲ-ಅಂತರಿಕ್ಷಗಳಲ್ಲಿ ಹೋಗುವುದಕ್ಕಾಗಿ ದೊಡ್ಡ ಯಾನಗಳು ಯಾವನದಾಗಿವೆಯೋ, [ಅಂತಹವನೂ ಆಗಿರಬೇಕು!]

ಯಸ್ಮಿನ್ ರಾಷ್ಟ್ರೇ ಈದೃಶೋ ರಾಜನ್ಯೋ (ಜಜ್ಞೇ) ಜಾತೋಽಸ್ತಿ ;

ಯಾವ ರಾಷ್ಟ್ರದಲ್ಲಿ ಇಂತಹ ಕ್ಷತ್ರಿಯನು (ಜಜ್ಞೇ) ಉತ್ಪನ್ನನಾಗುತ್ತಾನೋ ;

ನೈವ ಕದಾಚಿತ್ ತಸ್ಮಿನ್ ಭಯದುಃಖೇ ಸಂಭವತಃ ॥ ೧೩ ॥

ಅದರಲ್ಲಿ ಭಯ ಮತ್ತು ದುಃಖಗಳು ಎಂದಿಗೂ ಉಂಟಾಗುವುದೇ ಇಲ್ಲ!

ಅಂದರೆ, ಯಾವ ದೇಶದಲ್ಲಿ ಯುದ್ಧವನ್ನು ಅತ್ಯಂತ ಇಚ್ಛಿಸುವವನೂ, ನಿರ್ಭಯನೂ, ಶಸ್ತ್ರಾಸ್ತ್ರಗಳನ್ನು ಪ್ರಯೋಗಿಸುವುದರಲ್ಲಿ ಅತಿಚತುರನೂ, ಮತ್ತು ಯಾವನ ರಥವು ಪೃಥಿವೀ, ಸಮುದ್ರ ಮತ್ತು ಅಂತರಿಕ್ಷದಲ್ಲಿ ಹೋಗಿ-ಬರುವಂತಹುದೋ, ಅಂತಹ ರಾಜನಿರುತ್ತಾನೋ, ಅಲ್ಲಿ ಭಯವೂ ಮತ್ತು ದುಃಖವೂ ಉಂಟಾಗುವುದಿಲ್ಲ! [೧೩]

'ಶ್ರೀ' ಎಂಬುದೇ ಸಮಗ್ರ ರಾಷ್ಟ್ರ!

"ಶ್ರೀರ್ವೈ ರಾಷ್ಟ್ರಮ್ ॥ ೨ ॥"

[ಶತಪಥಬ್ರಾಹ್ಮಣೇ ಕಾಂ. ೧೩, ಅ. ೨, ಬ್ರಾ. ೯, ಕಂ. ೨]

[ಅರ್ಥ:_ "ಶ್ರೀ , ಎಂಬುದೇ ರಾಷ್ಟ್ರ!"

(ಶತಪಥಬ್ರಾಹ್ಮಣ: ೧೩. ೨. ೯. ೨)]

"ಶ್ರೀರ್ವೈ ರಾಷ್ಟ್ರಸ್ಯ ಭಾರಃ ॥ ೩ ॥"

[ಶತಪಥಬ್ರಾಹ್ಮಣೇ ಕಾಂ. ೧೩, ಅ. ೨, ಬ್ರಾ. ೯, ಕಂ. ೩]

[ಅರ್ಥ:_ "ಶ್ರೀ, ಎಂಬುದೇ ರಾಷ್ಟ್ರದ ಸಾಮಗ್ರಿ!"

(ಶತಪಥಬ್ರಾಹ್ಮಣ: ೧೩. ೨. ೯. ೩)]

"ಶ್ರೀರ್ವೈ ರಾಷ್ಟ್ರಸ್ಯ ಮಧ್ಯಮ್ ॥ ೪ ॥"

[ಶತಪಥಬ್ರಾಹ್ಮಣೇ ಕಾಂ. ೧೩, ಅ. ೨, ಬ್ರಾ. ೯, ಕಂ. ೪]

[ಅರ್ಥ:_ "ಶ್ರೀ, ಎಂಬುದೇ ರಾಷ್ಟ್ರದ ಮಧ್ಯಭಾಗ!"

(ಶತಪಥಬ್ರಾಹ್ಮಣ: ೧೩. ೨. ೯. ೪)]

"ಕ್ಷೇಮೋ ವೈ ರಾಷ್ಟ್ರಸ್ಯ ಶೀತಮ್ ॥ ೫ ॥"

[ಶತಪಥಬ್ರಾಹ್ಮಣೇ ಕಾಂ. ೧೩, ಅ. ೨, ಬ್ರಾ. ೯, ಕಂ. ೫]

[ಅರ್ಥ:_ "ಕ್ಷೇಮ, ಎಂಬುದೇ ರಾಷ್ಟ್ರದ ಸುಖ!"

(ಶತಪಥಬ್ರಾಹ್ಮಣ: ೧೩. ೨. ೯. ೫)]

"ವಿಡ್ ವೈ ಗಭೋ ರಾಷ್ಟ್ರಂ ಪಸೋ ರಾಷ್ಟ್ರಮೇವ ವಿಶ್ಯಾಹಂತಿ
ತಸ್ಮಾದ್ರಾಷ್ಟ್ರೀ ವಿಶಂ ಘಾತುಕಃ ॥ ೬ ॥"

[ಶತಪಥಬ್ರಾಹ್ಮಣೇ ಕಾಂ. ೧೩, ಅ. ೨, ಬ್ರಾ. ೯, ಕಂ. ೬]

[ಅರ್ಥ:_ "ಪ್ರಜೆಗಳೇ ಪ್ರಕಾಶ! ರಾಷ್ಟ್ರವು ಪ್ರತಾಡಕ! ರಾಷ್ಟ್ರವೇ ಪ್ರಜೆಗಳಲ್ಲಿ ಪ್ರವೇಶಿಸಿ ಪೀಡಿಸುತ್ತದೆ! ಆದುದರಿಂದ, ರಾಜನು ಪ್ರಜೆಗಳ ಘಾತುಕನಾಗಿರುತ್ತಾನೆ!"

(ಶತಪಥಬ್ರಾಹ್ಮಣ: ೧೩. ೨. ೯. ೬)]

"ವಿಶಮೇವ ರಾಷ್ಟ್ರಾಯಾದ್ಯಂ ಕರೋತಿ ತಸ್ಮಾದ್ ರಾಷ್ಟ್ರೀ ವಿಶಮತ್ತಿ
ನ ಪುಷ್ಟಂ ಪಶು ಮನ್ಯತ ಇತಿ ॥ ೮ ॥ ॥ ೧೪ ॥"

[ಶತಪಥಬ್ರಾಹ್ಮಣೇ ಕಾಂ. ೧೩, ಅ. ೨, ಬ್ರಾ. ೯, ಕಂ. ೮]

[ಅರ್ಥ:_ "ಪ್ರಜೆಗಳನ್ನೇ ರಾಷ್ಟ್ರಕ್ಕಾಗಿ ಭಕ್ಷಣ ಮಾಡುತ್ತಾನೆ. ಆದುದರಿಂದ, ರಾಜನು ಪ್ರಜೆಗಳನ್ನು ತಿನ್ನುತ್ತಾನೆ. ಪುಷ್ಟವಾದ ಪಶುವನ್ನು [ಅವನು] ಸಹಿಸುವುದಿಲ್ಲ!"

(ಶತಪಥಬ್ರಾಹ್ಮಣ: ೧೩. ೨. ೯. ೮)]

ಭಾಷ್ಯಮ್_

(ಶ್ರೀರ್ವೈ ರಾಷ್ಟಮ್) ಯಾ ವಿದ್ಯಾದ್ಯುತ್ತಮಗುಣರೂಪಾ ನೀತಿಃ ಸೈವ ರಾಷ್ಟ್ರಂ ಭವತಿ.

ಭಾಷ್ಯ_

(ಶ್ರೀರ್ವೈ ರಾಷ್ಟ್ರಮ್) ಯಾವುದು ವಿದ್ಯೆ ಮೊದಲಾದ ಉತ್ತಮ ಗುಣರೂಪವಾದ ನೀತಿಯಾಗಿರುತ್ತದೋ, ಅದೇ 'ರಾಷ್ಟ್ರ' ಆಗಿರುತ್ತದೆ.

ಅಂದರೆ, 'ಶ್ರೀ', ಎಂದರೆ 'ಲಕ್ಷ್ಮೀ!' ಅದೇ ರಾಜ್ಯದ ಸ್ವರೂಪವಾಗಿರುತ್ತದೆ!

(ಶ್ರೀರ್ವೈ ರಾಷ್ಟ್ರಸ್ಯ ಭಾರಃ) ಸೈವ ರಾಜ್ಯಶ್ರೀ ರಾಷ್ಟ್ರಸ್ಯ ಸಂಭಾರೋ ಭವತಿ.

(ಶ್ರೀರ್ವೈ ರಾಷ್ಟ್ರಸ್ಯ ಭಾರಃ) ಆ ರಾಜ್ಯಶ್ರೀಯೇ ರಾಷ್ಟ್ರದ ಸಾಮಗ್ರಿಯಾಗಿರುತ್ತದೆ!

(ಶ್ರೀರ್ವೈ ರಾಷ್ಟ್ರಸ್ಯ ಮಧ್ಯಮ್) ರಾಷ್ಟ್ರಸ್ಯ ಮಧ್ಯಭಾಗೋಽಪಿ ಶ್ರೀರೇವಾಸ್ತಿ.

(ಶ್ರೀರ್ವೈ ರಾಷ್ಟ್ರಸ್ಯ ಮಧ್ಯಮ್) ರಾಷ್ಟ್ರದ ಮಧ್ಯಭಾಗವೂ ಕೂಡ, 'ಶ್ರೀ'ಯೇ ಆಗಿರುತ್ತದೆ!

(ಕ್ಷೇಮೋ ವೈ ರಾ.) ಕ್ಷೇಮೋ ಯದ್ರಕ್ಷಣಂ ತದೇವ ರಾಷ್ಟ್ರಸ್ಯ [ಶೀತಂ] ಶಯನವನ್ನಿರುಪದ್ರವಂ ಸುಖಂ ಭವತಿ.

(ಕ್ಷೇಮೋ ವೈ ರಾಷ್ಟ್ರಸ್ಯ ಶೀತಮ್) 'ಕ್ಷೇಮ', ಎಂದರೆ, ಯಾವುದು ರಕ್ಷಣವಾಗಿದೆಯೋ, ಅದೇ ರಾಷ್ಟ್ರದ 'ಶೀತ', ಎಂದರೆ, ಶಯನದಂತೆ ನಿರುಪದ್ರವವಾದ ಸುಖ ಆಗಿರುತ್ತದೆ!

ಅಂದರೆ, ರಾಜ್ಯದ ರಕ್ಷಣೆ ಮಾಡುವುದೇ 'ಶೋಭೆ', ಎಂದರೆ ಶ್ರೇಷ್ಠವಾದ ಭಾಗ ಎನಿಸುತ್ತದೆ.

(ವಿಡ್ ವೈ ಗರ್ಭಃ) ವಿಡ್ ಯಾ ಪ್ರಜಾ ಸಾ ಗರ್ಭಾಖ್ಯಾಸ್ತಿ.

(ವಿಡ್ ವೈ ಗರ್ಭಃ) 'ವಿಟ್', ಎಂದರೆ ಯಾವ 'ಪ್ರಜೆ' ಇದ್ದಾರೋ, ಅವರೇ 'ಗರ್ಭ',* ಎಂದು ಕರೆಯಲ್ಪಡುತ್ತಾರೆ.

ಒಬ್ಬ ಪುರುಷನನ್ನು ರಾಜನನ್ನಾಗಿ ಮಾಡಬಾರದು!

(ರಾಷ್ಟ್ರಂ ಪಸೋ.) ಯದ್ರಾಷ್ಟ್ರಂ ತತ್ ಪಸಾಖ್ಯಂ ಭವತಿ.

(ರಾಷ್ಟ್ರಂ ಪಸಃ) ಯಾವುದು ರಾಷ್ಟ್ರವಾಗಿದೆಯೋ, ಅದು 'ಪಸ',+ ಎನಿಸುತ್ತದೆ.

ತಸ್ಮಾದ್ ಯದ್ರಾಷ್ಟ್ರಸಂಬಂಧಿಕರ್ಮ ತದ್ವಿಶಿ ಪ್ರಜಾಯಾಮಾವಿಶ್ಯ ತಾಮಾಹಂತಿ ;

(ರಾಷ್ಟ್ರಮೇವ ವಿಶ್ಯಾಹಂತಿ) ಆದುದರಿಂದ, ಯಾವುದು ರಾಷ್ಟ್ರಸಂಬಂಧದ ಕರ್ಮವಾಗಿದೆಯೋ, ಅದು ಪ್ರಜೆಗಳನ್ನು ಪ್ರವೇಶಿಸಿ, ಅವರನ್ನು ತಾಡನ ಮಾಡುತ್ತದೆ ;

ಆ ಸಮಂತಾತ್ ಕರಗ್ರಹಣೇನ ಪ್ರಜಾಯಾ ಉತ್ತಮಪದಾರ್ಥನಾಂ ಹರಣಂ ಕರೋತಿ.

(ಎಂದರೆ,) ಎಲ್ಲ ರೀತಿಯಿಂದಲೂ ತೆರಿಗೆ ವಸೂಲು ಮಾಡುವುದರ ಮೂಲಕ ಪ್ರಜೆಗಳ ಉತ್ತಮ ಪದಾರ್ಥಗಳನ್ನು ಕಸಿದುಕೊಳ್ಳುತ್ತದೆ!

(ತಸ್ಮಾದ್ರಾಷ್ಟ್ರೀ ವಿ.) ಯಸ್ಮಾತ್ ಸಭಯಾ ವಿನೈಕಾಕೀ ಪುರುಷೋ [ರಾಜಾ] ಭವತಿ, ತತ್ರ ಪ್ರಜಾ ಸದಾ ಪೀಡಿತಾ ಭವತಿ.

(ತಸ್ಮಾದ್ರಾಷ್ಟ್ರೀ ವಿಶಂ ಘಾತುಕಃ) ಏಕೆಂದರೆ, [ಎಲ್ಲಿ] ಸಭೆಯ ಹೊರತಾಗಿ ಒಬ್ಬನೇ ಒಬ್ಬ ಪುರುಷನು ರಾಜನಾಗಿರುತ್ತಾನೋ, ಅಲ್ಲಿ ಪ್ರಜೆಗಳು ಯಾವಾಗಲೂ ಪೀಡಿಸಲ್ಪಡುತ್ತಾರೆ!

---

* ಎಂದರೆ, ಪ್ರಕಾಶ _ಅನು.

+ ಎಂದರೆ, ಪ್ರತಾಡಕ! ಪುರುಷನ ಲಿಂಗೇಂದ್ರಿಯಕ್ಕೂ 'ಪಸ', ಎಂಬ ಹೆಸರಿದೆ. ಅಲಂಕಾರರೂಪದಲ್ಲಿ ಅದರ ಕೆಲಸವನ್ನೇ ಮುಂದೆ ಸೂಚಿಸಲಾಗಿದೆ. _ಅನು.

ತಸ್ಮಾದೇಕಃ ಪುರುಷೋ ರಾಜಾ ನೈವ ಕರ್ತ್ತವ್ಯಃ ;

ಆದುದರಿಂದ, ಒಬ್ಬ ಪುರುಷನನ್ನು ರಾಜನನ್ನಾಗಿ ಮಾಡಲೇಬಾರದು!

ನೈಕಸ್ಯ ಪುರುಷಸ್ಯ ರಾಜಧರ್ಮಾನುಷ್ಠಾನೇ ಯಥಾವತ್ ಸಾಮರ್ಥ್ಯಂ ಭವತಿ.

[ಏಕೆಂದರೆ,] ರಾಜಧರ್ಮದ ಅನುಷ್ಠಾನದಲ್ಲಿ ಒಬ್ಬ ಪುರುಷನಿಗೆ ಸರಿಯಾಗಿ ಬೇಕಾದ ಸಾಮರ್ಥ್ಯವು ಇರುವುದಿಲ್ಲ!

ಅಂದರೆ, ರಾಜ್ಯಕ್ಕಾಗಿ ಒಬ್ಬನನ್ನು ರಾಜಾ, ಎಂದು ಎಂದಿಗೂ ಅಂಗೀಕರಿಸಬಾರದು! ಏಕೆಂದರೆ, ಎಲ್ಲಿ ಒಬ್ಬನನ್ನು ರಾಜಾ, ಎಂದು ಅಂಗೀಕರಿಸುತ್ತಾರೋ, ಅಲ್ಲಿ ಪ್ರಜೆಗಳೆಲ್ಲರೂ ದುಃಖಿಗಳಾಗುತ್ತಾರೆ! ಮತ್ತು ಅವರ ಉತ್ತಮ ಪದಾರ್ಥಗಳ ಅಭಾವವಾಗಿ ಬಿಡುತ್ತದೆ! ಇದರಿಂದ, ಯಾವನ ಉನ್ನತಿಯೂ ಆಗುವುದಿಲ್ಲ!

ತಸ್ಮಾತ್ ಸಭಯೈವ ರಾಜ್ಯಪ್ರಬಂಧಃ ಕರ್ತುಂ ಶಕ್ಯೋಽಸ್ತಿ.

ಆದುದರಿಂದ, ಸಭೆಯ ಮೂಲಕವಾಗಿಯೇ ರಾಜ್ಯದ ಪ್ರಬಂಧ ಮಾಡುವುದು ಶಕ್ಯವಾಗಿರುತ್ತದೆ.

(ವಿಶಮೇವ ರಾಷ್ಟ್ರಾಯಾ.) ಯತ್ರೈಕೋ ರಾಜಾಸ್ತಿ, ತತ್ರ ರಾಷ್ಟ್ರಾಯ ವಿಶಂ ಪ್ರಜಾಮಾದ್ಯಾಂ ಭಕ್ಷಣೀಯಾಂ ಭೋಜ್ಯವತ್ತಾಡಿತಾಂ ಕರೋತಿ.

(ವಿಶಮೇವ ರಾಷ್ಟ್ರಾಯಾದ್ಯಂ ಕರೋತಿ) ಎಲ್ಲಿ ಒಬ್ಬ ರಾಜನು ಇರುತ್ತಾನೋ, ಅಲ್ಲಿ ರಾಷ್ಟ್ರಕ್ಕಾಗಿ [ಅವನು] ಪ್ರಜೆಗಳನ್ನು 'ಆದ್ಯಾ', ಎಂದರೆ ಭಕ್ಷಣೀಯವಾದ ಭೋಜ್ಯದಂತೆ ಪೀಡಿಸುತ್ತಾನೆ!

ಯಸ್ಮಾತ್ ಸ್ವಸುಖಾರ್ಥಂ ಪ್ರಜಾಯಾ ಉತ್ತಮಾನ್ ಪದಾರ್ಥಾನ್ ಗೃಹ್ಣನ್ ಸನ್ ಪ್ರಜಾಯೈ ಪೀಡಾಂ ದದಾತಿ; ತಸ್ಮಾದೇಕೋ ರಾಷ್ಟ್ರೀ ವಿಶಮತ್ತಿ.

(ತಸ್ಮಾದ್ರಾಷ್ಟ್ರೀ ವಿಶಮತ್ತಿ) ಹೇಗೆಂದರೆ, ತನ್ನ ಸುಖಕ್ಕಾಗಿ ಪ್ರಜೆಗಳಿಂದ ಉತ್ತಮ ಪದಾರ್ಥಗಳನ್ನು ತೆಗೆದುಕೊಳ್ಳುತ್ತಾ, ಪ್ರಜೆಗಳಿಗೆ ಪೀಡೆಯನ್ನು ಕೊಡುತ್ತಾನೆಯಾದುದರಿಂದ, 'ಒಬ್ಬನೇ ಆಗಿರುವ ರಾಜನು ಪ್ರಜೆಗಳನ್ನು ಭಕ್ಷಿಸುತ್ತಾನೆ,' ಎಂದು ತಿಳಿಯಬೇಕು!

(ನ ಪುಷ್ಟಂ ಪಶು ಮ.) ಯಥಾ ಮಾಂಸಾಹಾರೀ ಪುಷ್ಟಂ ಪಶುಂ ದೃಷ್ಟ್ವಾ ಹಂತುಮಿಚ್ಛತಿ ;

(ನ ಪುಷ್ಟಂ ಪಶು ಮನ್ಯತ ಇತಿ) ಹೇಗೆ ಮಾಂಸಾಹಾರಿಯಾದವನು ಪುಷ್ಟವಾದ ಪಶುವನ್ನು ನೋಡಿ, [ಅದನ್ನು] ಕೊಲ್ಲಲು ಇಚ್ಛಿಸುತ್ತಾನೋ ;

ತಥೈಕೋ ರಾಜಾ_'ನ ಮತ್ತಃ ಕಶ್ಚಿದಧಿಕೋ ಭವೇದಿತೀ'ರ್ಷ್ಯಯಾ ನೈವ ಪ್ರಜಾಸ್ಥಸ್ಯ ಕಸ್ಯಚಿನ್ಮನುಷ್ಯಸ್ಯೋತ್ಕರ್ಷಂ ಸಹತೇ.

ಹಾಗೆಯೇ, ಒಬ್ಬನೇ ಆದ ರಾಜನು_'ಯಾವನೂ ನನಗಿಂತ ದೊಡ್ಡವನಾಗಬಾರದು', ಎಂಬ ಈರ್ಷ್ಯೆಯಿಂದ, ಪ್ರಜೆಗಳಲ್ಲಿನ ಯಾವ ಮನುಷ್ಯನ ಉತ್ಕರ್ಷವನ್ನೂ ಸಹಿಸುವುದೇ ಇಲ್ಲ!

ತಸ್ಮಾತ್ ಸಭಾಪ್ರಬಂಧಯುಕ್ತೇನ ರಾಜ್ಯವ್ಯವಹಾರೇಣೈವ ಭದ್ರಮ್ ಇತಿ.

ಆದುದರಿಂದ, ಸಭೆಯ ಪ್ರಬಂಧದಿಂದ ಕೂಡಿದ ರಾಜ್ಯದ ಆಡಳಿತದಿಂದಲೇ ಸುಖವಾಗುತ್ತದೆ, [ಎಂಬುದಾಗಿ ನಿಶ್ಚಯವಾಗುತ್ತದೆ!]

ಆರ್ಯಾವರ್ತದ ರಾಜರ ನ್ಯಾಯವ್ಯವಸ್ಥೆ

ಇದೇ ರೀತಿಯಲ್ಲಿ ಸಭೆಯನ್ನು ರಚಿಸಿ, ಮಾಡಿದ ರಾಜ್ಯದ ಪ್ರಬಂಧವು **ಶ್ರೀಮನ್ಮಹಾರಾಜ ಯುಧಿಷ್ಠಿರನ** ತನಕ ಸರಿಯಾಗಿ ಆರ್ಯರಲ್ಲಿ ನಡೆದು ಬಂದಿತು. ಇದರ ಸಾಕ್ಷಿಯಾಗಿ **ಮಹಾಭಾರತದ** ರಾಜಧರ್ಮ ಮೊದಲಾದ ಗ್ರಂಥಗಳಲ್ಲೂ ಮತ್ತು **ಮನುಸ್ಮೃತಿ** ಮೊದಲಾದ ಧರ್ಮಶಾಸ್ತ್ರಗಳಲ್ಲೂ ಯಥಾವತ್ತಾಗಿ ಬರೆಯಲಾಗಿದೆ.

ಇವುಗಳಲ್ಲಿ ಯಾವ ಯಾವುದು ಪ್ರಕ್ಷಿಪ್ತ ಮಾಡಲಾಗಿದೆಯೋ, ಅದನ್ನು ಬಿಟ್ಟು, ಉಳಿದವೆಲ್ಲಾ ಸರಿಯಾಗಿವೆ. ಏಕೆಂದರೆ, ಅವು ವೇದಗಳಿಗೆ ಅನುಕೂಲವಾಗಿವೆ.

ಮತ್ತು ಆರ್ಯರ ಒಂದು ದೊಡ್ಡ ಉತ್ತಮವಾದ ಮಾತು ಏನಾಗಿತ್ತೆಂದರೆ, ಯಾವ ಸಭೆಯ ಅಥವಾ ನ್ಯಾಯಾಧೀಶನ ಮುಂದೆ ಅನ್ಯಾಯವಾಗಿದ್ದರೆ,* ಅದನ್ನು ಪ್ರಜೆಯ ದೋಷ, ಎಂದು ಅಂಗೀಕರಿಸುತ್ತಿರಲಿಲ್ಲ;

ಅಂದರೆ, ಆ ದೋಷವು **ಸಭಾಧ್ಯಕ್ಷನದಾಗಿಯೂ, ಸಭಾಸದಸದಾಗಿಯೂ** ಮತ್ತು **ನ್ಯಾಯಾಧೀಶನದಾಗಿಯೂ** ಎಣಿಸಲಾಗುತ್ತಿತ್ತು !

ಆದುದರಿಂದ, ಆ ಜನರು ಸತ್ಯನ್ಯಾಯವನ್ನು ಮಾಡುವುದರಲ್ಲಿ ಅತ್ಯಂತ ಪುರುಷಾರ್ಥವನ್ನು ಮಾಡುತ್ತಿದ್ದರು.+ ಇದರಿಂದ, **ಆರ್ಯಾವರ್ತದ ನ್ಯಾಯಾಲಯಗಳಲ್ಲಿ ಎಂದಿಗೂ ಅನ್ಯಾಯವಾಗುತ್ತಿರಲಿಲ್ಲ!** ಮತ್ತು ಎಲ್ಲಿ [ಅನ್ಯಾಯ] ಆಗುತ್ತಿತ್ತೋ, ಅಲ್ಲಿ ಅದರ ದೋಷವನ್ನು ಆ ನ್ಯಾಯಾಧೀಶರಿಗೇ ಕೊಡುತ್ತಿದ್ದರು!

ಇದೆಲ್ಲವೂ ಆರ್ಯರ ಸಿದ್ಧಾಂತವಾಗಿತ್ತು ! ಎಂದರೆ, **ಈ ವೇದಾದಿ ಶಾಸ್ತ್ರಗಳ ರೀತಿಯಿಂದಲೇ ಆರ್ಯರು ಭೂಗೋಳದಲ್ಲಿ ಕೋಟ್ಯಂತರ ವರ್ಷಗಳ ಕಾಲ ರಾಜ್ಯವನ್ನು ಆಳಿದರು!** ಇದರಲ್ಲಿ ಯಾವ ಸಂದೇಹವೂ ಇಲ್ಲ!

ಏವಂ ರಾಜಧರ್ಮವ್ಯವಹಾರಪ್ರತಿಪಾದಕಾ ಮಂತ್ರಾ ಬಹವಃ ಸಂತೀತಿ ॥ ೧೪ ॥

ಹೀಗೆ, ರಾಜಧರ್ಮವ್ಯವಹಾರದ ಪ್ರತಿಪಾದನೆಯನ್ನು ಮಾಡುವಂತಹ ಮಂತ್ರಗಳು ಬಹಳವಾಗಿವೆ. [೧೪]

ಇತಿ ಸಂಕ್ಷೇಪತೋ ರಾಜಪ್ರಜಾಧರ್ಮವಿಷಯಃ ॥

ಇಲ್ಲಿಗೆ ಸಂಕ್ಷೇಪವಾಗಿ ರಾಜ-ಪ್ರಜಾ ಧರ್ಮದ ವಿಷಯವು ಮುಗಿಯಿತು. [೨೨]

---

* ಎಂದರೆ, ಅನ್ಯಾಯದ ಘಟನೆಯ ದೂರು ಬಂದಿದ್ದರೆ, ಅಥವಾ ಅನ್ಯಾಯದ ತೀರ್ಪನ್ನು ಕೊಟ್ಟಿದ್ದರೆ _ಅನು.

+ ಕೇವಲ ಸಾಕ್ಷಿಗಳ ಹೇಳಿಕೆಯ ಆಧಾರದ ಮೇಲೆ ನ್ಯಾಯ(?)ವನ್ನು ದಯಪಾಲಿಸುವ(?) ಬ್ರಿಟಿಷ್ ಪದ್ಧತಿಯ ಅಂಧನ್ಯಾಯಾಲಯಗಳನ್ನು ತ್ಯಜಿಸಿ, ಭಾರತವು ಈ ಪ್ರಾಚೀನ ಪದ್ಧತಿಯನ್ನು ಈಗ ಏಕೆ ಮುಂದುವರೆಸುತ್ತಿಲ್ಲ? _ಅನು.

(೨೩) ವರ್ಣಾಶ್ರಮ

ಅಥ ವರ್ಣಾಶ್ರಮವಿಷಯಃ ಸಂಕ್ಷೇಪತಃ

ಈಗ ವರ್ಣಾಶ್ರಮಗಳ ವಿಷಯವನ್ನು ಸಂಕ್ಷೇಪವಾಗಿ ಬರೆಯುತ್ತೇವೆ.

ಇದರಲ್ಲಿ ವಿಶೇಷವಾಗಿ ತಿಳಿಯಬೇಕಾದುದೇನೆಂದರೆ, ಮೊದಲು ಮನುಷ್ಯಜಾತಿ[ಯಂತೂ] ಎಲ್ಲರದೂ ಒಂದೇ ಆಗಿದೆ! [ಮತ್ತು] ಇದು ಕೂಡ, ವೇದಗಳಿಂದಲೇ ಸಿದ್ಧವಾಗಿದೆ. ಈ ವಿಷಯದ ಪ್ರಮಾಣವನ್ನು **'ಸೃಷ್ಟಿವಿಷಯ'** ಪ್ರಕರಣದಲ್ಲಿ ಬರೆಯಲಾಗಿದೆ.* [ಹೇಗೆಂದರೆ_]

ನಾಲ್ಕು ವರ್ಣಗಳು

ತತ್ರ ವರ್ಣವಿಷಯೋ ಮಂತ್ರೋ_

ಅದರಲ್ಲಿ ವರ್ಣವಿಷಯಕವಾದ ಮಂತ್ರವು_

" ಬ್ರಾಹ್ಮಣೋಽಸ್ಯ ಮುಖಮಾಸೀತ್ "

[ಯಜುರ್ವೇದೇ ೩೧. ೧೧]

[ಅರ್ಥ:_ " ಬ್ರಾಹ್ಮಣನು ಇವನ ಮುಖವಾಗಿದ್ದನು."

(ಯಜುರ್ವೇದ: ೩೧. ೧೧)]

ಇತ್ಯುಕ್ತಸ್ತದರ್ಥಶ್ಚ.**

ಎಂಬುದಾಗಿ ಹೇಳಲ್ಪಟ್ಟಿದೆ. ಮತ್ತು ಇದರ ಅರ್ಥವೂ ಕೂಡ, [ಬರೆಯಲ್ಪಟ್ಟಿದೆ.]+

ತಸ್ಯಾಯಂ ಶೇಷಃ_

ಅದರ ಉಳಿದ ಭಾಗವು ಹೀಗಿದೆ_

ಅಂದರೆ, ವರ್ಣದ ಪ್ರತಿಪಾದನೆಯನ್ನು ಮಾಡುವ ವೇದಮಂತ್ರಗಳ ಯಾವ ವ್ಯಾಖ್ಯೆಯು **ಬ್ರಾಹ್ಮಣ** ಮತ್ತು **ನಿರುಕ್ತ** ಮೊದಲಾದ ಗ್ರಂಥಗಳಲ್ಲಿ ಬರೆಯಲ್ಪಟ್ಟಿದೆಯೋ, ಅದನ್ನು ಸ್ವಲ್ಪ ಇಲ್ಲೂ ಕೂಡ, ಬರೆಯುತ್ತೇವೆ_

** ೩೪೭ ತಮಂ ಪೃಷ್ಠಂ ದೃಷ್ಟವ್ಯಮ್_ಅನು.

* '(೮) ಸೃಷ್ಟಿವಿದ್ಯೆ', ಎಂಬ ಅಧ್ಯಾಯದಲ್ಲಿ ೩೧೬-೩೭೮ ಪುಟಗಳನ್ನು ನೋಡಿ _ಅನು.

+ ೩೪೭ ನೆಯ ಪುಟವನ್ನು ನೋಡಿ _ಅನು.

ಮನುಷ್ಯಜಾತಿಯಲ್ಲಿ ಬ್ರಾಹ್ಮಣ, ಕ್ಷತ್ರಿಯ, ವೈಶ್ಯ ಮತ್ತು ಶೂದ್ರ_ ಇವು 'ವರ್ಣ', ಎಂದು ಕರೆಯಲ್ಪಡುತ್ತವೆ.

ವರ್ಣದ ಎರಡು ಭೇದ_ 'ಆರ್ಯ' ಮತ್ತು 'ದಸ್ಯು'

ವೇದದ ರೀತಿಯಲ್ಲಿ ಇವುಗಳ ಎರಡು ಭೇದಗಳೇನೆಂದರೆ_

ಒಂದು, 'ಆರ್ಯ'; ಮತ್ತು ಎರಡನೆಯದು, 'ದಸ್ಯು!'

ಈ ವಿಷಯದಲ್ಲಿ ಪ್ರಮಾಣವೇನೆಂದರೆ_

" ವಿಜಾನೀಹ್ಯಾರ್ಯ್ಯಾನ್ ಯೇ ಚ ದಸ್ಯವೋ." *

[ಅರ್ಥ:_ "ಯಾರು ಆರ್ಯರೋ, ಮತ್ತು ಯಾರು ದಸ್ಯುಗಳೋ, ಅವರನ್ನು ಬೇರೆ ಬೇರೆಯಾಗಿದ್ದಾರೆ, ಎಂದು ತಿಳಿಯಿರಿ!"]

(ಋಗ್ವೇದ: ೧. ೫೧. ೮)]

ಅಂದರೆ, ಈ ಮಂತ್ರದ ಮೂಲಕ ಪರಮೇಶ್ವರನು ಉಪದೇಶ ಮಾಡುತ್ತಾನೇನೆಂದರೆ_

'ಎಲೈ ಜೀವ! ನೀನು, 'ಆರ್ಯ', ಎಂದರೆ ಶ್ರೇಷ್ಠನಾದವನು ; ಮತ್ತು 'ದಸ್ಯು', ಎಂದರೆ ದುಷ್ಟಸ್ವಭಾವಯುಕ್ತನು, ದರೋಡೆಕೋರನು ಮೊದಲಾದ ಹೆಸರುಗಳಿಂದ ಪ್ರಕಟವಾಗುವ ಮನುಷ್ಯನ, ಈ ಎರಡೂ ಭೇದಗಳನ್ನು ತಿಳಿದುಕೊಂಡು ಬಿಡು! ಮತ್ತು_

ವರ್ಣದ ಇನ್ನೆರಡು ಭೇದ_ 'ಆರ್ಯ' ಮತ್ತು 'ಶೂದ್ರ'

" ಉತ ಶೂದ್ರ ಉತಾರ್ಯ್ಯೇ. " **

[ಅರ್ಥ:_ "ಮತ್ತೆ ಶೂದ್ರನಲ್ಲಿ ಮತ್ತೆ ಆರ್ಯನಲ್ಲಿ."]

ಈ ಮಂತ್ರದಿಂದಲೂ ಕೂಡ, 'ಆರ್ಯ್ಯ', ಎಂದರೆ ಬ್ರಾಹ್ಮಣ, ಕ್ಷತ್ರಿಯ, [ಹಾಗೂ] ವೈಶ್ಯ; ಮತ್ತು 'ಅನಾರ್ಯ್ಯ', ಎಂದರೆ ಶೂದ್ರ, ಎಂದು ಕರೆಯಲ್ಪಡುವ ಮೂರ್ಖ+_ ಈ ಎರಡು ಭೇದಗಳು ಗೊತ್ತು ಮಾಡಲ್ಪಟ್ಟಿವೆ. ಮತ್ತು_

---

* ಋಗ್ವೇದೇ (೧. ೫೧. ೮) _ಅನು.

** ತುಲನಾ ಕಾರ್ಯ್ಯಾ ಅಥರ್ವವೇದೇ (೧೯. ೬೨. ೧)_ಅನು.

** ತುಲನೆ ಮಾಡಿ, ಅಥರ್ವವೇದ (೧೯. ೬೨. ೧)_ಅನು.

+ ಅನೇಕ ವಿದ್ವಾಂಸರು ಶೂದ್ರನನ್ನು ಆರ್ಯಕೋಟಿಯಲ್ಲಿ ಎಣಿಸಿ, ಮೇಲೆ ಬರೆದ ವಿಚಾರದ ವಿರೋಧ ಮಾಡುತ್ತಾರೆ. ಇದರಿಂದ ಅವರು 'ಆರ್ಯ' ಶಬ್ದದ ಅರ್ಥವನ್ನು ಪೂರ್ಣವಾಗಿ ತಿಳಿಯದೆ, 'ಆರ್ಯ', ಎಂದರೆ ಆರ್ಯಾವರ್ತದ ನಿವಾಸಿ ಅಥವಾ ಒಂದು ಜನಾಂಗದವ, ಎಂದು ಮಾತ್ರ ಪರಿಗಣಿಸಿದಂತೆ ತೋರುತ್ತದೆ. 'ಆರ್ಯ', ಎಂದರೆ ಶ್ರೇಷ್ಠಪುರುಷ, ಎಂಬ ಅರ್ಥವನ್ನೂ ಪರಿಗಣಿಸಿದಾಗ, ಮೂರ್ಖನಾದ ಶೂದ್ರನು 'ಅನಾರ್ಯ', ಎಂದು ಸ್ವತಃಸಿದ್ಧವಾಗುತ್ತದೆ. ಇದೇ ಅಭಿಪ್ರಾಯದಲ್ಲಿ ಗ್ರಂಥಕರ್ತರು ಈ ಮಾತನ್ನು ಹೇಳಿದ್ದಾರೆ. ಈ ಬಗ್ಗೆ 'ಸತ್ಯಾರ್ಥ ಪ್ರಕಾಶ'ದಲ್ಲೂ ಹೀಗೆಯೇ ಬರೆಯಲಾಗಿದೆ. (ಪುಟ ೪೨೯, ೪೩೧) _ಅನು.

"ಅಸುರ್ಯಾ ನಾಮ ತೇ ಲೋಕಾ." *

[ಅರ್ಥ:_ "ಆ ಲೋಕಗಳು 'ಅಸುರ್ಯ', ಎಂಬ ಹೆಸರಿನವಾಗಿರುತ್ತವೆ."]

ಈ ಮಂತ್ರದಿಂದಲೂ ಕೂಡ, 'ದೇವ' ಮತ್ತು 'ಅಸುರ', ಎಂದರೆ ವಿದ್ವಾಂಸ ಮತ್ತು ಮೂರ್ಖ_ ಈ ಎರಡು ಭೇದಗಳೇ ತಿಳಿಯಲ್ಪಡುತ್ತವೆ. ಮತ್ತು ಈ ಇಬ್ಬರ ವಿರೋಧಕ್ಕೇ **'ದೇವಾಸುರಸಂಗ್ರಾಮ'**, ಎಂದು ಹೇಳುತ್ತಾರೆ.

ಬ್ರಾಹ್ಮಣ, ಕ್ಷತ್ರಿಯ, ವೈಶ್ಯ ಮತ್ತು ಶೂದ್ರ_ ಈ ನಾಲ್ಕು ಭೇದಗಳು ಗುಣ-ಕರ್ಮಗಳಿಂದ ಮಾಡಲ್ಪಟ್ಟಿವೆ.

'ವರ್ಣ' ಎಂದರೇನು?

"ವರ್ಣೋ ವೃಣೋತೇಃ ॥೧॥"

[ನಿರುಕ್ತೇ ಅ. ೨, ಖಂ. ೩]

[ಅರ್ಥ:_"ವರಣ ಮಾಡುವುದರಿಂದ 'ವರ್ಣ', ಎನಿಸುತ್ತದೆ."

(ನಿರುಕ್ತ : ೨. ೩)]

ಭಾಷ್ಯಮ್_

'ವರ್ಣೋ ವೃಣೋತೇ'ರಿತಿ ನಿರುಕ್ತ-ಪ್ರಾಮಾಣ್ಯಾದ್ ವರಣೀಯಾ, ವರೀತುಮರ್ಹಾ, ಗುಣಕರ್ಮಾಣಿ ಚ ದೃಷ್ಟ್ವಾ ಯಥಾಯೋಗ್ಯಂ ವ್ರಿಯಂತೇ ಯೇ ತೇ ವರ್ಣಾಃ ॥೧॥

ಭಾಷ್ಯ_

'ವರ್ಣೋ ವೃಣೋತೇಃ', ಎಂಬ ನಿರುಕ್ತದ ಪ್ರಮಾಣದಂತೆ, ಯಾವುವು ವರಣೀಯವೋ, ವರಿಸಲು ಯೋಗ್ಯವೋ, ಮತ್ತು ಗುಣ-ಕರ್ಮಗಳನ್ನು ನೋಡಿ, ಯಾವುವು ಯಥಾಯೋಗ್ಯವಾಗಿ ವರಿಸಲ್ಪಡುತ್ತವೋ, ಅವು **'ವರ್ಣಗಳು'**, [ಎನಿಸುತ್ತವೆ.]

ಅಂದರೆ, ಯಾವನ ಗುಣ-ಕರ್ಮಗಳು ಹೇಗಿವೆಯೋ, ಅವನಿಗೆ ಹಾಗೆಯೇ ಅಧಿಕಾರವನ್ನು ಕೊಡಬೇಕು! ಇದಕ್ಕೇ **'ವರ್ಣ'**, ಎಂದು ಹೆಸರು. [೧]

---

* **ಯಜುರ್ವೇದ (೪೦.೩).** ಈ ಮಂತ್ರಭಾಷ್ಯದ ಭಾವಾರ್ಥದಲ್ಲಿ ಮಹರ್ಷಿ ದಯಾನಂದರು ಬರೆದಿರುವುದರ ಕನ್ನಡಾನುವಾದವು ಹೀಗಿದೆ_

"ಯಾರು ಆತ್ಮನಲ್ಲಿ ಒಂದು, ವಾಣಿಯಲ್ಲಿ ಇನ್ನೊಂದು; ಮತ್ತು ಕರ್ಮದಲ್ಲಿ ಬೇರೊಂದನ್ನು ಆಚರಿಸುತ್ತಾರೋ, ಅವರೇ ಅಸುರರು, ದೈತ್ಯರು, ರಾಕ್ಷಸರು, ಪಿಶಾಚಗಳು, ದುಷ್ಟಮನುಷ್ಯರು, [ಎಂದು ಕರೆಯಲ್ಪಡುತ್ತಾರೆ.] ಆದರೆ, ಯಾರು ಯಾವುದು ಆತ್ಮನಲ್ಲಿದೆಯೋ, ಅದನ್ನೇ ಮನಸ್ಸಿನಿಂದಲೂ, ಯಾವುದು ಮನಸ್ಸಿನಿಂದಲೋ, ಅದನ್ನೇ ವಾಣಿಯಿಂದಲೂ, ಮತ್ತು ಯಾವುದು ವಾಣಿಯಿಂದಲೋ, ಅದನ್ನೇ ಕರ್ಮದಿಂದಲೂ ಆಚರಣೆಗೆ ತರುತ್ತಾರೋ, ಅವರೇ **'ದೇವರು'**, **'ಆರ್ಯರು'**, **'ಸೌಭಾಗ್ಯವಂತರು'**, [ಎಂದು ಕರೆಯಲ್ಪಡುತ್ತಾರೆ.] ಅವರು ಅಖಿಲಜಗತ್ತನ್ನು ಪವಿತ್ರ ಮಾಡುತ್ತಾರೆ. ಮತ್ತು ಇಹಲೋಕದಲ್ಲೂ, ಹಾಗೂ ಪರಲೋಕದಲ್ಲೂ ಅತುಲ ಸುಖವನ್ನು ಭೋಗಿಸುತ್ತಾರೆ _ಅನು.

ಬ್ರಾಹ್ಮಣ-ಕ್ಷತ್ರಿಯರ ಲಕ್ಷಣಗಳು

"ಬ್ರಹ್ಮ ಹಿ ಬ್ರಾಹ್ಮಣಃ । ಕ್ಷತ್ರಗ್ಂ ಹೀಂದ್ರಃ ಕ್ಷತ್ರಗ್ಂ ರಾಜನ್ಯಃ ॥ ೨ ॥"

[ಶತಪಥಬ್ರಾಹ್ಮಣೇ ಕಾಂ. ೫, ಅ. ೧, ಬ್ರಾ. ೧, ಕಂ. ೧೧]

[ಅರ್ಥ:_ "ಬ್ರಹ್ಮವೇ ಬ್ರಾಹ್ಮಣ! ಕ್ಷತ್ರವೇ ಇಂದ್ರ! ಕ್ಷತ್ರವು ಕ್ಷತ್ರಿಯ!"

(ಶತಪಥಬ್ರಾಹ್ಮಣಃ ೫. ೧. ೧. ೧೧)]

ಭಾಷ್ಯಮ್_

(ಬ್ರಹ್ಮ ಹಿ ಬ್ರಾಹ್ಮಣಃ) ಬ್ರಹ್ಮಣಾ ವೇದೇನ ಪರಮೇಶ್ವರಸ್ಯೋಪಾಸನೇನ ಚ ಸಹ ವರ್ತ್ತಮಾನೋ ;

ವಿದ್ಯಾದ್ಯುತ್ತಮಗುಣಯುಕ್ತಃ ಪುರುಷೋ ಬ್ರಾಹ್ಮಣೋ ಭವಿತುಮರ್ಹತಿ.

ತಥೈವ (ಕ್ಷತ್ರಗ್ಂ ಹೀಂದ್ರಃ) ಕ್ಷತ್ರಂ ಕ್ಷತ್ರಿಯ-ಕುಲಮ್ ;

ಯಃ ಪುರುಷಃ ಇಂದ್ರಃ ಪರಮೈಶ್ವರ್ಯವಾನ್ ಶತ್ರೂಣಾಂ ಕ್ಷಯಕರಣಾದ್ ಯುದ್ಧೋತ್ಸುಕತ್ವಾಚ್ಚ;

ಪ್ರಜಾಪಾಲನತತ್ಪರಃ ;

[ಸ] (ರಾಜನ್ಯಃ) ಕ್ಷತ್ರಿಯೋ ಭವಿತುಮರ್ಹತಿ ॥ ೨ ॥

ಭಾಷ್ಯ_

(ಬ್ರಹ್ಮ ಹಿ ಬ್ರಾಹ್ಮಣಃ) 'ಬ್ರಹ್ಮ', ಎಂದರೆ ವೇದದೊಡನೆ ಮತ್ತು ಪರಮೇಶ್ವರನ ಉಪಾಸನೆಯೊಡನೆ ವರ್ತಿಸುತ್ತಿರುವವನೂ ;

ವಿದ್ಯೆ ಮೊದಲಾದ ಉತ್ತಮ ಗುಣಗಳಿಂದ ಕೂಡಿದವನೂ ಆದ ಪುರುಷನು ಬ್ರಾಹ್ಮಣನಾಗಲು ಯೋಗ್ಯನಾಗಿರುತ್ತಾನೆ!

ಅಂದರೆ, 'ಬ್ರಹ್ಮ', ಎಂದರೆ ಉತ್ತಮ ಕರ್ಮವನ್ನು ಮಾಡುವುದರಿಂದ, ಉತ್ತಮ ವಿದ್ವಾಂಸನು ಬ್ರಾಹ್ಮಣ ವರ್ಣದವನಾಗುತ್ತಾನೆ.

ಹಾಗೆಯೇ, (ಕ್ಷತ್ರಗ್ಂ ಹೀಂದ್ರಃ) 'ಕ್ಷತ್ರ', ಎಂದರೆ ಕ್ಷತ್ರಿಯಕುಲ ;

ಯಾವ ಪುರುಷನು 'ಇಂದ್ರ', ಎಂದರೆ ಪರಮೈಶ್ವರ್ಯವಂತನೂ, ಮತ್ತು ಶತ್ರುಗಳ ನಾಶ ಮಾಡುವುದಕ್ಕಾಗಿ ಯುದ್ಧದಲ್ಲಿ ಉತ್ಸಾಹವನ್ನುಳ್ಳವನೂ ಆದುದರಿಂದ ;

ಪ್ರಜಾಪಾಲನೆಯಲ್ಲಿ ತತ್ಪರನೂ ಆಗಿರುತ್ತಾನೋ;

ಅವನು (ರಾಜನ್ಯಃ) ಕ್ಷತ್ರಿಯನಾಗಲು ಅರ್ಹನಾಗಿರುತ್ತಾನೆ. [೨]

"ಬಾಹೂ ವೈ ಮಿತ್ರಾವರುಣೌ ಪುರುಷೋ ಗರ್ತಃ ।"

"ವೀರ್ಯ್ಯಂ ವಾ ಏತದ್ರಾಜನ್ಯಸ್ಯ ಯದ್ಬಾಹೂ ;
ವೀರ್ಯಂ ವಾ ಏತದಪಾಗ್ಂ ರಸಃ ॥ ೩ ॥"

[ಶತಪಥಬ್ರಾಹ್ಮಣೇ ಕಾಂ. ೫, ಅ. ೪, ಬ್ರಾ. ೧, ಕಂ. ೧೫, ೧೭]

[ಅರ್ಥ:_ "ಎರಡು ಬಾಹುಗಳೇ ಮಿತ್ರ ಮತ್ತು ವರುಣ! ಪುರುಷನೇ ಗೃಹ!"

"ಅಥವಾ ವೀರ್ಯವೇ ಕ್ಷತ್ರಿಯನ ಎರಡು ಬಾಹುಗಳು ; ಅಥವಾ ಈ ವೀರ್ಯವೇ ಪ್ರಾಣಗಳ ರಸ!"

(ಶತಪಥಬ್ರಾಹ್ಮಣ: ೫. ೪. ೧. ೧೫, ೧೭)]

ಭಾಷ್ಯಮ್_

(ಮಿತ್ರಃ) ಸರ್ವೇಭ್ಯಃ ಸುಖದಾತಾ ;

(ವರುಣಃ) ಉತ್ತಮಗುಣಕರ್ಮಧಾರಣೇನ ಶ್ರೇಷ್ಠಃ ;

ಇಮಾವೇವ ಕ್ಷತ್ರಿಯಸ್ಯ ದ್ವೌ ಬಾಹುವದ್ ಭವೇತಾಮ್.

(ವಾ) ಅಥವಾ (ವೀರ್ಯಮ್) ಪರಾಕ್ರಮೋ ಬಲಂ ಚೈತದುಭಯಂ (ರಾಜನ್ಯಸ್ಯ) ಕ್ಷತ್ರಿಯಸ್ಯ ಬಾಹೂ ಭವತಃ .

(ಅಪಾಮ್) ಪ್ರಾಣಾನಾಂ ಯೋ (ರಸಃ) ಆನಂದಸ್ತಂ ಪ್ರಜಾಭ್ಯಃ ಪ್ರಯಚ್ಛತಃ ಕ್ಷತ್ರಿಯಸ್ಯ ವೀರ್ಯ್ಯಂ ವರ್ಧತೇ ॥ ೩ ॥

ಭಾಷ್ಯ_

(ಮಿತ್ರಃ) ಎಲ್ಲರಿಗೂ ಸುಖವನ್ನು ಕೊಡುವುದು ;

(ವರುಣಃ) ಉತ್ತಮ ಗುಣ-ಕರ್ಮಗಳನ್ನು ಧಾರಣ ಮಾಡುವುದರಿಂದ, ಶ್ರೇಷ್ಠನಾಗಿರುವುದು ;

ಈ ಎರಡೂ ಕ್ಷತ್ರಿಯನ ಎರಡು ಬಾಹುಗಳಂತೆ ಇರಲಿ!

(ವಾ) ಅಥವಾ (ವೀರ್ಯಮ್) ಪರಾಕ್ರಮ ಮತ್ತು ಬಲ_ ಇವೆರಡೂ (ರಾಜನ್ಯಸ್ಯ) ಕ್ಷತ್ರಿಯನ (ಬಾಹೂ) ಎರಡು ಬಾಹುಗಳಾಗಿರುತ್ತವೆ.

(ಅಪಾಮ್) ಪ್ರಾಣಗಳ ಯಾವ (ರಸಃ) ಆನಂದ [ಇರುತ್ತದೋ,] ಅದನ್ನು ಪ್ರಜೆಗಳಿಗೆ ಕೊಡುತ್ತಿರುವ ಕ್ಷತ್ರಿಯನ ವೀರ್ಯವು ವರ್ಧಿಸುತ್ತದೆ. [೩]

"ಇಷವೋ ವೈ ದಿದ್ಯವಃ ॥ ೪ ॥"

[ಶತಪಥಬ್ರಾಹ್ಮಣೇ ಕಾಂ. ೫, ಅ. ೪, ಬ್ರಾ. ೨, ಕಂ. ೨]

[ಅರ್ಥ:_ "ಬಾಣಗಳೇ ಪ್ರಕಾಶ ಮಾಡುವಂತಹವು ಆಗಿರುತ್ತವೆ."

(ಶತಪಥಬ್ರಾಹ್ಮಣ: ೫. ೪. ೨. ೨)]

ಭಾಷ್ಯಮ್_

ತಸ್ಯ (ಇಷವಃ) ಬಾಣಾಃ ;

ಶಸ್ತ್ರಾಸ್ತ್ರಾಣಾಮುಪಲಕ್ಷಣಮೇತತ್ ;

(ದಿದ್ಯವಃ) ಪ್ರಕಾಶಕಾಃ ಸದಾ ಭವೇಯುಃ ॥ ೪ ॥

ಭಾಷ್ಯ_

ಅವನ (ಇಷವಃ) ಬಾಣಗಳು ;

ಇದು ಶಸ್ತ್ರಾಸ್ತ್ರಗಳ ಉಪಲಕ್ಷಣ*ವಾಗಿದೆ;

(ದಿದ್ಯವಃ) ಪ್ರಕಾಶ ಮಾಡುವಂತಹವಾಗಿ ಯಾವಾಗಲೂ ಇರಲಿ!

ಅಂದರೆ, ಐಶ್ವರ್ಯ ಮತ್ತು ಬಲ-ವೀರ್ಯಗಳನ್ನುಳ್ಳ ಮನುಷ್ಯನು ಕ್ಷತ್ರಿಯವರ್ಣದವನಾಗುತ್ತಾನೆ. [೪]

ಹೀಗೆ, ರಾಜಧರ್ಮವಿಷಯದಲ್ಲೂ ಬರೆದಿದ್ದೇವೆ.+

* ಸೂಚಕ _ಅನು.

+ ೬೭೫, ೬೭೯, ೬೯೦ ಪುಟವನ್ನು ನೋಡಿ _ಅನು.

ನಾಲ್ಕು ಆಶ್ರಮಗಳ ಪ್ರಯೋಜನ

ಈಗ ಮುಂದೆ ನಾಲ್ಕು ಆಶ್ರಮಗಳ ವರ್ಣನೆ ಮಾಡಲ್ಪಡುತ್ತದೆ_

ಆಶ್ರಮಾ ಅಪಿ ಚತ್ವಾರಃ ಸಂತಿ_

ಆಶ್ರಮಗಳೂ ಕೂಡ, ನಾಲ್ಕು ಇವೆ_

ಬ್ರಹ್ಮಚರ್ಯ್ಯಗೃಹಸ್ಥವಾನಪ್ರಸ್ಥಸಂನ್ಯಾಸ-ಭೇದಾತ್.

(೧) ಬ್ರಹ್ಮಚರ್ಯ (೨) ಗೃಹಸ್ಥ (೩) ವಾನಪ್ರಸ್ಥ [ಮತ್ತು] (೪) ಸಂನ್ಯಾಸ, ಎಂಬ ಭೇದದಿಂದ!

ಅಂದರೆ, ಬ್ರಹ್ಮಚರ್ಯ, ಗೃಹಸ್ಥ, ವಾನಪ್ರಸ್ಥ ಮತ್ತು ಸಂನ್ಯಾಸ_ ಈ ನಾಲ್ಕು, ಆಶ್ರಮಗಳು ಎನಿಸುತ್ತವೆ.

ಬ್ರಹ್ಮಚರ್ಯ್ಯೇಣ ಸದ್ವಿದ್ಯಾ ಶಿಕ್ಷಾ ಚ ಗ್ರಾಹ್ಯಾ.

ಬ್ರಹ್ಮಚರ್ಯ [ಆಶ್ರಮ]ದಿಂದ, ಸದ್ವಿದ್ಯೆಯನ್ನೂ ಮತ್ತು ಶಿಕ್ಷಣವನ್ನೂ ಗ್ರಹಿಸಬೇಕು!

ಅಂದರೆ, ಐದು ಅಥವಾ ಎಂಟನೆಯ ವರ್ಷ ವಯಸ್ಸಿನಿಂದ ಹಿಡಿದು, ನಲವತ್ತೆಂಟನೆಯ ವರ್ಷದ ತನಕ ಮೊದಲನೆಯ ಬ್ರಹ್ಮಚರ್ಯಾಶ್ರಮದ ಸಮಯ ವಾಗಿರುತ್ತದೆ. ಇದರ ವಿಭಾಗವನ್ನು [ಮುಂದೆ] **ಪಿತೃ ಯಜ್ಞ**ದಲ್ಲಿ ಹೇಳುತ್ತೇವೆ. ಈ [ಆಶ್ರಮವು] ಸುಶಿಕ್ಷಣ ಮತ್ತು ಸತ್ಯವಿದ್ಯೆ ಮೊದಲಾದ ಗುಣಗಳನ್ನು ಗ್ರಹಣ ಮಾಡುವುದಕ್ಕಾಗಿದೆ.

ಗೃಹಾಶ್ರಮೇಣೋತ್ತಮಾಚರಣಾನಾಂ ಶ್ರೇಷ್ಠಾನಾಂ ಪದಾರ್ಥಾನಾಂ ಚೋನ್ನತಿಃ ಕಾರ್ಯ್ಯಾ.

ಗೃಹಾಶ್ರಮದಿಂದ, ಉತ್ತಮ ಆಚರಣೆಗಳ ಮತ್ತು ಶ್ರೇಷ್ಠ ಪದಾರ್ಥಗಳ ಉನ್ನತಿಯನ್ನು ಸಾಧಿಸಬೇಕು!

ಅಂದರೆ, ಎರಡನೆಯ **ಗೃಹಾಶ್ರಮವು** ಉತ್ತಮ ಗುಣಗಳ ಪ್ರಚಾರ ಮತ್ತು ಶ್ರೇಷ್ಠ ಪದಾರ್ಥಗಳ ಉನ್ನತಿಯಿಂದ, ಸಂತಾನಗಳ ಉತ್ಪತ್ತಿ, ಹಾಗೂ ಅವರನ್ನು ಸುಶಿಕ್ಷಿತರನ್ನಾಗಿ ಮಾಡುವುದಕ್ಕಾಗಿ ಇರುತ್ತದೆ.

ವಾನಪ್ರಸ್ಥೇನೈಕಾಂತಸೇವನಂ ಬ್ರಹ್ಮೋಪಾಸನಂ ವಿದ್ಯಾಫಲವಿಚಾರಣಾದಿ ಚ ಕಾರ್ಯ್ಯಮ್.

ವಾನಪ್ರಸ್ಥ [ಆಶ್ರಮ]ದಿಂದ, ಏಕಾಂತವಾಸ, ಬ್ರಹ್ಮೋಪಾಸನೆ ಮತ್ತು ವಿದ್ಯೆಯ ಫಲಗಳ ವಿಚಾರ ಮೊದಲಾದುವನ್ನು ಮಾಡಬೇಕು!

ಅಂದರೆ, ಮೂರನೆಯದಾದ **ವಾನಪ್ರಸ್ಥಾಶ್ರಮ,** ದಲ್ಲಿ ಬ್ರಹ್ಮವಿದ್ಯೆ ಮೊದಲಾದುವುಗಳನ್ನು ಸಾಕ್ಷಾತ್ಕರಿಸಿ ಕೊಳ್ಳುವುದಕ್ಕಾಗಿ, ಏಕಾಂತದಲ್ಲಿ ಪರಮೇಶ್ವರನ ಸೇವನೆ ಮಾಡಲಾಗುತ್ತದೆ.

ಸಂನ್ಯಾಸೇನ ಪರಬ್ರಹ್ಮಮೋಕ್ಷಪರಮಾನಂದ-ಪ್ರಾಪಣಂ ಕ್ರಿಯತೇ ;

ಸಂನ್ಯಾಸ [ಆಶ್ರಮ]ದಿಂದ, ಪರಬ್ರಹ್ಮನ, ಹಾಗೂ ಮೋಕ್ಷದ ಪರಮಾನಂದದ ಸಂಪಾದನೆಯನ್ನು ಮಾಡಲಾಗುತ್ತದೆ.

ಸದುಪದೇಶೇನ ಸರ್ವಸ್ಮಾ ಆನಂದದಾನಂ ಚ.

ಮತ್ತು ಸದುಪದೇಶದಿಂದ, ಎಲ್ಲರಿಗೂ ಆನಂದವನ್ನೂ ಕೊಡಲಾಗುತ್ತದೆ.

ಅಂದರೆ, ನಾಲ್ಕನೆಯದಾದ ಸಂನ್ಯಾಸಾಶ್ರಮವು ಪರಮೇಶ್ವರನ, ಎಂದರೆ ಮೋಕ್ಷಸುಖದ ಪ್ರಾಪ್ತಿಗಾಗಿಯೂ ಮತ್ತು ಸತ್ಯೋಪದೇಶದಿಂದ, ಜಗತ್ತಿಗೆಲ್ಲಾ ಉಪಕಾರವನ್ನು ಮಾಡುವುದಕ್ಕಾಗಿಯೂ ಇರುತ್ತದೆ.

ಇತ್ಯಾದಿಚತುರ್ಭಿರಾಶ್ರಮೈರ್ಧರ್ಮಾರ್ಥ-ಕಾಮಮೋಕ್ಷಾಣಾಂ ಸಮ್ಯಕ್ ಸಿದ್ಧಿಃ ಸಂಪಾದನೀಯಾ.

ಈ ಮೊದಲಾಗಿ ನಾಲ್ಕೂ ಆಶ್ರಮಗಳಿಂದ, ಧರ್ಮ-ಅರ್ಥ-ಕಾಮ-ಮೋಕ್ಷಗಳ ಉತ್ತಮ ಸಿದ್ಧಿಯನ್ನು ಗಳಿಸಬೇಕು!

ಅಂದರೆ, **ಧರ್ಮ**, **ಅರ್ಥ**, **ಕಾಮ** ಮತ್ತು **ಮೋಕ್ಷ**_ ಈ ನಾಲ್ಕು ಪದಾರ್ಥಗಳ ಪ್ರಾಪ್ತಿಗಾಗಿ, ಈ ನಾಲ್ಕು ಆಶ್ರಮಗಳ ಸೇವನೆ ಮಾಡುವುದು ಎಲ್ಲಾ ಮನುಷ್ಯರಿಗೂ ಉಚಿತವಾಗಿರುತ್ತದೆ!

ಅಥ ಬ್ರಹ್ಮಚರ್ಯಾಶ್ರಮವಿಷಯಃ

ಈಗ ಬ್ರಹ್ಮಚರ್ಯಾಶ್ರಮದ ವಿಷಯವನ್ನು ಹೇಳುತ್ತೇವೆ.

ಬ್ರಹ್ಮಚರ್ಯಾಶ್ರಮದ ವೈದಿಕವರ್ಣನೆ

ಏತೇಷಾಂ ಮುಖ್ಯತಯಾ ಬ್ರಹ್ಮರ್ಯ್ಯೇಣ ಸದ್ವಿದ್ಯಾಸುಶಿಕ್ಷಾದಯಃ ಶುಭಗುಣಾಃ ಸಮ್ಯಗ್ ಗ್ರಾಹ್ಯಾಃ .

ಇವುಗಳಲ್ಲಿ ಮುಖ್ಯವಾಗಿ ಬ್ರಹ್ಮಚರ್ಯ [ಆಶ್ರಮ] ದಿಂದ, ಸದ್ವಿದ್ಯೆ, ಸುಶಿಕ್ಷಣ ಮೊದಲಾದ ಶುಭಗುಣಗಳು ಉತ್ತಮವಾಗಿ ಗ್ರಹಿಸಲ್ಪಡಬೇಕು!

ಅಂದರೆ, ಇವುಗಳಲ್ಲಿ ಮೊದಲನೆಯದೂ, ಹಾಗೂ ಎಲ್ಲಾ ಆಶ್ರಮಗಳ ಮೂಲವೂ ಆದ ಬ್ರಹ್ಮಚರ್ಯಾಶ್ರಮವು, ಸರಿ ಸರಿಯಾಗಿ ಸುಧಾರಣೆ ಆಗುವುದರಿಂದ, ಎಲ್ಲಾ ಆಶ್ರಮಗಳೂ ಸುಗಮವಾಗುತ್ತವೆ. ಮತ್ತು ಕೆಡುವುದರಿಂದ, [ಎಲ್ಲಾ ಆಶ್ರಮಗಳೂ] ನಾಶವಾಗಿ ಹೋಗುತ್ತವೆ!

ಅತ್ರ ಬ್ರಹ್ಮಚರ್ಯ್ಯಾಶ್ರಮೇ ಪ್ರಮಾಣಮ್_

ಈಗ ಬ್ರಹ್ಮಚರ್ಯಾಶ್ರಮದ [ವಿಷಯ]ದಲ್ಲಿ ಪ್ರಮಾಣವೇನೆಂದರೆ_

ಅಂದರೆ, ಈ ಆಶ್ರಮದ ವಿಷಯದಲ್ಲಿ ವೇದಗಳಲ್ಲಿ ಅನೇಕ ಪ್ರಮಾಣಗಳಿವೆ. ಅವುಗಳಲ್ಲಿನಿಂದ ಕೆಲವನ್ನು ಇಲ್ಲಿಯೂ ಬರೆಯುತ್ತೇವೆ_

ಬ್ರಹ್ಮಚಾರಿಯು ಆಚಾರ್ಯನ ಗರ್ಭದಲ್ಲಿ

[ಋಷಿಃ_ ಬ್ರಹ್ಮಾ; ದೇವತಾ_ ಬ್ರಹ್ಮಚಾರೀ; ಛಂದಃ_ ಉರೋ ಬೃಹತೀ; ಸ್ವರಃ_ ಮಧ್ಯಮಃ]

ಆಚಾರ್ಯ॒ ಉಪ॒ನಯ॑ಮಾನೋ
ಬ್ರಹ್ಮ॒ಚಾರಿ॑ಣಂ ಕೃಣುತೇ॒ ಗರ್ಭ॑ಮ॒ಂತಃ ।
ತಂ ರಾತ್ರೀ॑ಸ್ತಿ॒ಸ್ರ ಉ॒ದರೇ॑ ಬಿಭರ್ತಿ॒
ತಂ ಜಾ॒ತಂ ದ್ರಷ್ಟು॑ಮಭಿ॒ಸಂಯ॑ಂತಿ ದೇವಾಃ ॥೧॥

[ಅಥರ್ವವೇದೇ ಕಾಂ. ೧೧, ಅನು. ೩, ವ. ೫, ಮಂ. ೩]

[ಅರ್ಥ:_ "ಉಪನಯನವನ್ನು ಮಾಡುತ್ತಿರುವ ಆಚಾರ್ಯನು ಬ್ರಹ್ಮಚಾರಿಯನ್ನು ಗರ್ಭದೊಳಗೆ ಇಟ್ಟುಕೊಳ್ಳುತ್ತಾನೆ! ಅವನನ್ನು ಉದರದಲ್ಲಿ ಮೂರು ರಾತ್ರಿಗಳ ಕಾಲ ಭರಿಸಿ-ಪೋಷಿಸುತ್ತಾನೆ. [ನಂತರ], ಜನ್ಮಿಸಿದ ಅವನನ್ನು ನೋಡಲು ವಿದ್ವಾಂಸರು ಒಟ್ಟಿಗೆ ಹೋಗುತ್ತಾರೆ."

(ಅಥರ್ವವೇದಃ ೧೧. ೫. ೩)]

ಭಾಷ್ಯಮ್_

(ಆಚಾರ್ಯ ಉ.) ಆಚಾರ್ಯೋ ವಿದ್ಯಾಧ್ಯಾಪಕೋ ಬ್ರಹ್ಮಚಾರಿಣಮುಪನಯಮಾನೋ;

ವಿದ್ಯಾಪಠನಾರ್ಥಮುಪವೀತಂ ದೃಢವ್ರತಮುಪದಿಶನ್ನಂತರ್ಗರ್ಭಮಿವ ಕೃಣುತೇ ಕರೋತಿ.

ಭಾಷ್ಯ_

(ಆಚಾರ್ಯ ಉ.) ಆಚಾರ್ಯ, ಎಂದರೆ ವಿದ್ಯೆಯ ಅಧ್ಯಾಪಕನು ಬ್ರಹ್ಮಚಾರಿಯನ್ನು 'ಉಪನಯ' ಮಾಡುತ್ತಾ;

ಎಂದರೆ, ವಿದ್ಯೆಯನ್ನು ಓದಿಸುವುದಕ್ಕಾಗಿ, 'ಉಪವೀತ', ಎಂದರೆ ದೃಢವ್ರತನಾದವನಿಗೆ ಉಪದೇಶವನ್ನು ಮಾಡುತ್ತಾ, ಗರ್ಭದೊಳಗೆ ಇಟ್ಟುಕೊಳ್ಳುವಂತೆ ಮಾಡುತ್ತಾನೆ.

ಅಂದರೆ, ತಂದೆ ಮತ್ತು ತಾಯಿಯ ಸಂಬಂಧದಿಂದ ಗರ್ಭದಲ್ಲಿದ್ದು, [ನಂತರ,] ಮನುಷ್ಯನ ಯಾವ ಜನ್ಮವಾಗುವುದಿದೆಯೋ, ಅದು ಪ್ರಥಮಜನ್ಮ, ಎಂದು ಕರೆಯಲ್ಪಡುತ್ತದೆ.

ಮತ್ತು ಯಾವುದರಲ್ಲಿ ಆಚಾರ್ಯನು ತಂದೆಯೂ, ಹಾಗೂ, ವಿದ್ಯೆಯು ತಾಯಿಯೂ ಆಗುತ್ತಾರೋ, ಅದು ಎರಡನೆಯ ಜನ್ಮ, ಎನಿಸುತ್ತದೆ. ಈ ಎರಡನೆಯ ಜನ್ಮವು ಸಿಗದಿದ್ದರೆ, ಮನುಷ್ಯನಿಗೆ ಮನುಷ್ಯತ್ವವು ಪ್ರಾಪ್ತವಾಗುವುದಿಲ್ಲ! ಆದುದರಿಂದ, ಅದನ್ನು ಮನುಷ್ಯರು ಅವಶ್ಯವಾಗಿ ಸಂಪಾದಿಸಬೇಕು!

ಯಾವಾಗ [ಹುಡುಗರು-ಹುಡುಗಿಯರು] ಎಂಟನೆಯ ವರ್ಷ [ವಯಸ್ಸಿನಲ್ಲಿ] ಪಾಠಶಾಲೆಗೆ ಹೋಗಿ, **ಆಚಾರ್ಯ**, ಎಂದರೆ ವಿದ್ಯೆಯನ್ನು ಓದಿಸುವವನ ಬಳಿ ಇರುತ್ತಾರೋ, ಆಗಿನಿಂದಲೇ ಅವರ ಹೆಸರು **ಬ್ರಹ್ಮಚಾರಿ** ಅಥವಾ ಬ್ರಹ್ಮಚಾರಿಣಿ, ಎಂದಾಗಿ ಬಿಡುತ್ತದೆ! ಏಕೆಂದರೆ, ಅವರು **ಬ್ರಹ್ಮ**, ಎಂದರೆ ವೇದದ ಮತ್ತು ಪರಮೇಶ್ವರನ ವಿಚಾರದಲ್ಲಿ ತತ್ಪರರಾಗಿರುತ್ತಾರೆ.

ತಂ ತಿಸ್ರೋ ರಾತ್ರೀಸ್ತ್ರಿದಿನಪರ್ಯ್ಯಂತಮುದರೇ ಬಿಭರ್ತಿ ;

ಅವನನ್ನು [ಆಚಾರ್ಯನು] ಮೂರು ರಾತ್ರಿ*-ಮೂರು ಹಗಲುಗಳ ತನಕ ಉದರದಲ್ಲಿ ಭರಣ-ಪೋಷಣ ಮಾಡುತ್ತಾನೆ ;

ಅರ್ಥಾತ್ ಸರ್ವಾಂ ಶಿಕ್ಷಾಂ ಕರೋತಿ ;

ಎಂದರೆ, ಎಲ್ಲಾ ಶಿಕ್ಷಣವನ್ನೂ ಕೊಡುತ್ತಾನೆ.

ಪಠನಸ್ಯ ಚ ರೀತಿಮುಪದಿಶತಿ.

ಹಾಗೂ ಓದುವ ರೀತಿಯನ್ನು ಕೂಡ, ಉಪ ದೇಶಿಸುತ್ತಾನೆ.

ಅವನನ್ನು ಆಚಾರ್ಯನು ಮೂರು ರಾತ್ರಿಗಳ ಪರ್ಯಂತ ಗರ್ಭದಲ್ಲಿ ಇಟ್ಟುಕೊಳ್ಳುತ್ತಾನೆ ; ಎಂದರೆ ಈಶ್ವರನ ಉಪಾಸನೆ, ಧರ್ಮ, ಪರಸ್ಪರ ವಿದ್ಯೆಯನ್ನು ಓದುವ ಮತ್ತು ವಿಚಾರ ಮಾಡುವ ಯುಕ್ತಿ ಮೊದಲಾದ ಮುಖ್ಯ-ಮುಖ್ಯ ವಿಷಯಗಳೆಲ್ಲವೂ ಮೂರು ದಿನಗಳಲ್ಲಿ ಅವನಿಗೆ ಕಲಿಸಲಾಗುತ್ತದೆ, ಎಂದರ್ಥ!

ಮೂರು ದಿನಗಳ ನಂತರ, ಅವನನ್ನು ನೋಡಲು ಅಧ್ಯಾಪಕರು, ಎಂದರೆ ವಿದ್ವಾಂಸರು ಬರುತ್ತಾರೆ. ಅಂದರೆ ;

ಯದಾ ವಿದ್ಯಾಯುಕ್ತೋ ವಿದ್ವಾನ್ ಜಾಯತೇ ;

ಯಾವಾಗ [ಅವನು] ವಿದ್ಯೆಯಿಂದ ಕೂಡಿದ ವಿದ್ವಾಂಸನಾಗಿ ಬಿಡುತ್ತಾನೋ ;

ತದಾ ತಂ ವಿದ್ಯಾಸು ಜಾತಂ ಪ್ರಾದುರ್ಭೂತಂ ದೇವಾ ವಿದ್ವಾಂಸೋ ದ್ರಷ್ಟುಮಭಿಸಂಯಂತಿ ;

ಆಗ ವಿದ್ಯೆಗಳಲ್ಲಿನಿಂದ ಪ್ರಾದುರ್ಭೂತನಾದ ಅವನನ್ನು ನೋಡಲು ವಿದ್ವಾಂಸರು ಒಟ್ಟಿಗೆ ಬರುತ್ತಾರೆ ;

ಪ್ರಸನ್ನತಯಾ ತಸ್ಯ ಮಾನ್ಯಂ⊛ ಕುರ್ವಂತಿ_

[ಮತ್ತು] ಪ್ರಸನ್ನತೆಯಿಂದ ಅವನ ಮನ್ನಣೆಯನ್ನು ಮಾಡುತ್ತಾರೆ. [ಹೇಗೆಂದರೆ_]

ಅಸ್ಮಾಕಂ ಮಧ್ಯೇ ಮಹಾಭಾಗ್ಯೋದಯೇ-ನೇಶ್ವರಾನುಗ್ರಹೇಣ ಚ ಸರ್ವಮನುಷ್ಯೋಪಕಾರಾರ್ಥಂ ತ್ವಂ ವಿದ್ವಾನ್ ಜಾತ ಇತಿ ಪ್ರಶಂಸಂತಿ ॥೧॥

"ನಮ್ಮ ಮಧ್ಯೆ ಮಹಾಭಾಗ್ಯೋದಯದಿಂದಲೂ, ಮತ್ತು ಈಶ್ವರನ ಅನುಗ್ರಹದಿಂದಲೂ ಮನುಷ್ಯರೆಲ್ಲರ ಉಪಕಾರವನ್ನು ಮಾಡುವುದಕ್ಕಾಗಿ ನೀನು ವಿದ್ವಾಂಸನಾಗಿ ಹುಟ್ಟಿದೆ", ಎಂದು ಪ್ರಶಂಸಿಸುತ್ತಾರೆ! [೧]

⊛ 'ಮಾನಂ' _ಆ. ವೈ.

* ಇಲ್ಲಿ ಮೂರು ರಾತ್ರಿ-ದಿನಗಳು, ಎಂದರೆ ಪೂರ್ಣಶಿಕ್ಷಣಕ್ಕೆ ಬೇಕಾಗುವ ಸಮಯ, ಎಂದರ್ಥ. _ಅನು.

ಬ್ರಹ್ಮಚಾರಿಯು ಶ್ರಮದಿಂದ ವಿದ್ಯೆ ಗಳಿಸುತ್ತಾನೆ

[ಋಷಿಃ_ ಬ್ರಹ್ಮಾ; ದೇವತಾ_ ಬ್ರಹ್ಮಚಾರೀ ; ಛಂದಃ_ ತ್ರಿಷ್ಟುಪ್ ; ಸ್ವರಃ_ ಧೈವತಃ]

ಇಯಂ ಸಮಿತ್ ಪೃಥಿವೀ ದ್ಯೌರ್ದ್ವಿತೀಯೋ-
ತಾಂತರಿಕ್ಷಂ ಸಮಿಧಾ ಪೃಣಾತಿ ।
ಬ್ರಹ್ಮಚಾರೀ ಸಮಿಧಾ ಮೇಖಲಯಾ
ಶ್ರಮೇಣ ಲೋಕಾಂಸ್ತಪಸಾ ಪಿಪರ್ತಿ ॥ ೨ ॥

[ಅಥರ್ವವೇದೇ ಕಾಂ. ೧೧, ಅನು. ೩, ವ. ೫, ಮಂ. ೪]

[ಅರ್ಥ:_ "ಬ್ರಹ್ಮಚಾರಿಯು ಈ 'ಸಮಿತ್', ಎಂದರೆ ಪೃಥಿವಿಯನ್ನೂ, ಹಾಗೂ ಎರಡನೆಯದಾದ ದ್ಯುಲೋಕವನ್ನೂ, ಮತ್ತು ಅಂತರಿಕ್ಷವನ್ನೂ ವಿದ್ಯೆಯಿಂದ ಪೂರ್ಣ ಮಾಡುತ್ತಾನೆ. ಸಮಿತ್ತಿನಿಂದಲೂ, ಮೇಖಲೆಯಿಂದಲೂ, ಶ್ರಮದಿಂದಲೂ, ಹಾಗೂ ತಪಸ್ಸಿನಿಂದಲೂ ಜನರನ್ನು ಪಾಲಿಸುತ್ತಾನೆ."

(ಅಥರ್ವವೇದ: ೧೧. ೫. ೪)]

ಭಾಷ್ಯಮ್_

(ಇಯಂ ಸಮಿತ್.) ಇಯಂ ಪೃಥಿವೀ ದ್ಯೌಃ ಪ್ರಕಾಶೋಽಂತರಿಕ್ಷಂ ಚಾನಯಾ ಸಮಿಧಾ ಸ ಬ್ರಹ್ಮಚಾರೀ ಪೃಣಾತಿ ;

ತತ್ರಸ್ಥಾನ್ ಸರ್ವಾನ್ ಪ್ರಾಣಿನೋ ವಿದ್ಯಯಾ ಹೋಮೇನ ಚ ಪ್ರಸನ್ನಾನ್ ಕರೋತಿ.

(ಸಮಿಧಾ) ಅಗ್ನಿಹೋತ್ರಾದಿನಾ ;

(ಮೇಖಲಯಾ) ಬ್ರಹ್ಮಚರ್ಯ್ಯಚಿಹ್ನಧಾರಣೇನ ಚ ;

ಭಾಷ್ಯ_

(ಇಯಂ ಸಮಿತ್.) ಈ ಪೃಥಿವೀ, ದ್ಯೌ, ಎಂದರೆ ಪ್ರಕಾಶ ಮತ್ತು ಅಂತರಿಕ್ಷ_ [ಇವನ್ನು] ಈ ಸಮಿತ್ತಿನಿಂದ ಈ ಬ್ರಹ್ಮಚಾರಿಯು 'ಪೃಣಾತಿ';

ಎಂದರೆ, ಅವುಗಳಲ್ಲಿನ ಎಲ್ಲಾ ಪ್ರಾಣಿಗಳನ್ನೂ ವಿದ್ಯೆಯಿಂದಲೂ ಮತ್ತು ಹೋಮದಿಂದಲೂ ಪ್ರಸನ್ನವನ್ನಾಗಿ ಮಾಡುತ್ತಾನೆ.

(ಸಮಿಧಾ) ಅಗ್ನಿಹೋತ್ರ ಮೊದಲಾದುದರಿಂದಲೂ ;

(ಮೇಖಲಯಾ) ಮತ್ತು ['ಮೇಖಲೆ',* ಎಂದರೆ] ಬ್ರಹ್ಮಚರ್ಯಚಿಹ್ನೆಯ ಧಾರಣೆಯಿಂದಲೂ ;

* ಸೊಂಟದಲ್ಲಿ ಕಟ್ಟುವ ಉಡಿದಾರಕ್ಕೆ 'ಮೇಖಲೆ', ಎಂದು ಹೆಸರು. ಇದನ್ನು ಧರಿಸುವವನಿಗೆ 'ಮೇಖಲೀ' = ಬ್ರಹ್ಮಚಾರಿ, ಎನ್ನುತ್ತಾರೆ. ಈ ಮೇಖಲೆಯೇ ತನ್ನ ಎರಡನೆಯ ರೂಪದಲ್ಲಿ ನಂತರ, ಹೆಗಲಿನ ಮೇಲಿನ ಯಜ್ಞೋಪವೀತವಾಗುತ್ತದೆ. ಈ ಮೇಖಲೆಯು (= ಉಡಿದಾರ) ಕೌಪೀನದ ಧಾರಣಕ್ಕಾಗಿ ಇರುತ್ತದೆ. ಇದರಿಂದ ಇಂದ್ರಿಯಸಂಯಮವಾಗುತ್ತದೆ, ಎಂದು ಬೇರೆ ಹೇಳಬೇಕಾಗಿಲ್ಲ! ಬ್ರಹ್ಮಚಾರಿಣಿಯರಿಗೂ ಕೂಡ, ಈ ಮೇಖಲೆಯ ಧಾರಣದಿಂದ ಅನೇಕ ಲಾಭಗಳಾಗುತ್ತವೆ. ಡಾಬು ಅಥವಾ 'ಬೆಲ್ಟ್' ಮೊದಲಾದುವು ಈ ಮೇಖಲೆಯ ವಿವಿಧ ರೂಪಗಳಾಗಿವೆ. _ಅನು.

(ಶ್ರಮೇಣ) ಪರಿಶ್ರಮೇಣ ;

(ತಪಸಾ) ಧರ್ಮಾನುಷ್ಠಾನೇನಾಧ್ಯಾಪನೇನೋಪ-ದೇಶೇನ ಚ ;

(ಲೋಕಾನ್) ಸರ್ವಾನ್ ಪ್ರಾಣಿನಃ ;

(ಪಿಪರ್ತಿ) ಪುಷ್ಟಾನ್ ಪ್ರಸನ್ನಾನ್ ಕರೋತಿ ॥ ೨ ॥

(ಶ್ರಮೇಣ) ಪರಿಶ್ರಮದಿಂದಲೂ ;

(ತಪಸಾ) ಧರ್ಮದ ಅನುಷ್ಠಾನದಿಂದಲೂ, ಅಧ್ಯಾಪನದಿಂದಲೂ, ಹಾಗೂ ಉಪದೇಶದಿಂದಲೂ ;

(ಲೋಕಾನ್) ಎಲ್ಲಾ ಪ್ರಾಣಿಗಳನ್ನೂ ;

(ಪಿಪರ್ತಿ) ಪುಷ್ಟರನ್ನಾಗಿಯೂ, ಮತ್ತು ಪ್ರಸನ್ನರನ್ನಾಗಿಯೂ ಮಾಡುತ್ತಾನೆ.

ಅಂದರೆ, [ವಿದ್ವಾಂಸರು] ಆ ದಿವಸ ಹೋಮವನ್ನು ಮಾಡಿ, ಪ್ರತಿಜ್ಞೆ ಮಾಡುತ್ತಾರೇನೆಂದರೆ_

"ಯಾವ ಬ್ರಹ್ಮಚಾರಿಯು ಪೃಥಿವೀ, ಸೂರ್ಯ ಮತ್ತು ಅಂತರಿಕ್ಷ_ ಈ ಮೂರೂ ರೀತಿಯ ವಿದ್ಯೆಗಳನ್ನು ಹೊಂದುತ್ತಾನೋ, ಮತ್ತು ಪೂರ್ಣ ಮಾಡಲು ಇಚ್ಛಿಸುತ್ತಾನೋ, ಅವನು ಈ ಸಮಿತ್ತುಗಳಿಂದ ಪುರುಷಾರ್ಥ ಮಾಡಿ, ಜನಗಳೆಲ್ಲರನ್ನೂ [ತನ್ನ] ಧರ್ಮಾನುಷ್ಠಾನದ ಮೂಲಕ ಪೂರ್ಣವಾಗಿ ಆನಂದಿತರನ್ನಾಗಿ ಮಾಡಿಬಿಡುತ್ತಾನೆ! [೨]

ಬ್ರಹ್ಮವನ್ನು ತಿಳಿದ ಬ್ರಹ್ಮಚಾರಿಗೆ ಗೌರವ!

[ಋಷಿಃ_ ಬ್ರಹ್ಮಾ ; ದೇವತಾ_ ಬ್ರಹ್ಮಚಾರೀ ; ಛಂದಃ_ ತ್ರಿಷ್ಟುಪ್ ; ಸ್ವರಃ_ ಧೈವತಃ]

ಪೂರ್ವೋ ಜಾತೋ ಬ್ರಹ್ಮಣೋ ಬ್ರಹ್ಮಚಾರೀ
ಘರ್ಮಂ ವಸಾನಸ್ತಪಸೋದತಿಷ್ಠತ್ ।
ತಸ್ಮಾಜ್ಜಾತಂ ಬ್ರಾಹ್ಮಣಂ ಬ್ರಹ್ಮ ಜ್ಯೇಷ್ಠಂ
ದೇವಾಶ್ಚ ಸರ್ವೇ ಅಮೃತೇನ ಸಾಕಮ್ ॥ ೩ ॥

[ಅಥರ್ವವೇದೇ ಕಾಂ. ೧೧, ಅನು. ೩, ವ. ೫, ಮಂ. ೫]

[ಅರ್ಥ:_ "ಬ್ರಹ್ಮವನ್ನು ತಿಳಿದಿರುವ ಬ್ರಹ್ಮಚಾರಿಯು ಪ್ರಥಮ [ಆಶ್ರಮ]ದಲ್ಲಿ ಪ್ರಸಿದ್ಧನಾಗಿ, ತಪಸ್ಸನ್ನು ಮಾಡುತ್ತಾ, ತಪಸ್ಸಿನಿಂದ ಉತ್ಕೃಷ್ಟನಾದನು! ಆಗ, ಈ ಕಾರಣದಿಂದ ಪ್ರಸಿದ್ಧನಾದ ಬ್ರಹ್ಮಜ್ಯೇಷ್ಠನೂ, ಅಮೃತದೊಡನೆ ಇರುವವನೂ ಆದ [ಈ] 'ಬ್ರಾಹ್ಮಣ'ನನ್ನು ವಿದ್ವಾಂಸರೆಲ್ಲರೂ [ಪ್ರಶಂಸಿಸುತ್ತಾರೆ.] "

(ಅಥರ್ವವೇದ: ೧೧. ೫. ೫)]

ಭಾಷ್ಯಮ್_

(ಪೂರ್ವೋ ಜಾತೋ ಬ್ರಹ್ಮ.) 'ಬ್ರಹ್ಮಣಿ ವೇದೇ ಚರಿತುಂ ಶೀಲಂ ಯಸ್ಯ ಸ ಬ್ರಹ್ಮಚಾರೀ';

(ಘರ್ಮಂ ವಸಾನಃ) ಅತ್ಯಂತಂ ತಪಶ್ಚರನ್ ;

ಬ್ರಹ್ಮಣೋಽರ್ಥಾದ್ವೇದಂ ಪರಮೇಶ್ವರಂ ಚ ವಿದನ್ ;

ಪೂರ್ವಃ ಸರ್ವೇಷಾಮಾಶ್ರಮಾಣಾಮಾದಿಮಃ ಸರ್ವಾಶ್ರಮಭೂಷಕಃ ;

(ತಪಸಾ) ಧರ್ಮಾನುಷ್ಠಾನೇನ ;

(ಉದತಿಷ್ಠತ್) ಊರ್ಧ್ವೇ ಉತ್ಕೃಷ್ಟಬೋಧೇ ವ್ಯವಹಾರೇ ಚ ತಿಷ್ಠತಿ.

ತಸ್ಮಾತ್ ಕಾರಣಾತ್ (ಬ್ರಹ್ಮಜ್ಯೇಷ್ಠಮ್*) 'ಬ್ರಹ್ಮೈವ ಪರಮೇಶ್ವರೋ ವಿದ್ಯಾ ವಾ ಜ್ಯೇಷ್ಠಾ ಸರ್ವೋತ್ಕೃಷ್ಟಾ ಯಸ್ಯ ತಂ ಬ್ರಹ್ಮಜ್ಯೇಷ್ಠಮ್' ;

(ಅಮೃತೇನ) ಪರಮೇಶ್ವರಮೋಕ್ಷಬೋಧೇನ ಪರಮಾನಂದೇನ ಸಾಕಂ ಸಹ ವರ್ತ್ತಮಾನಂ ;

(ಬ್ರಾಹ್ಮಣಮ್) ಬ್ರಹ್ಮವಿದಂ (ಜಾತಮ್) ಪ್ರಸಿದ್ಧಂ ;

(ದೇವಾಃ) ಸರ್ವೇ ವಿದ್ವಾಂಸಃ ಪ್ರಶಂಸಂತಿ ॥ ೩ ॥

ಭಾಷ್ಯ _

(ಪೂರ್ವೋ ಜಾತೋ ಬ್ರಹ್ಮ.) 'ಬ್ರಹ್ಮ, ಎಂದರೆ ವೇದದಲ್ಲಿ ವರ್ತಿಸುವ ಸ್ವಭಾವವು ಯಾವನದಾಗಿದೆಯೋ,. ಅವನು ಬ್ರಹ್ಮಚಾರಿ'; [ಅವನು_]

(ಘರ್ಮಂ ವಸಾನಃ) ಅತ್ಯಂತ ತಪಸ್ಸನ್ನು ಮಾಡುತ್ತಾ ;

(ಬ್ರಹ್ಮಣಃ) 'ಬ್ರಹ್ಮ', ಎಂದರೆ ವೇದ ಮತ್ತು ಪರಮೇಶ್ವರನನ್ನೂ ಕೂಡ, ತಿಳಿದುಕೊಳ್ಳುತ್ತಾ ;

(ಪೂರ್ವಃ) ಎಲ್ಲಾ ಆಶ್ರಮಗಳಿಗೂ ಮೊದಲನೆಯದಾದವನು, ಎಂದರೆ ಸರ್ವಾಶ್ರಮಭೂಷಣನಾಗಿ ;

(ತಪಸಾ) ಧರ್ಮಾನುಷ್ಠಾನದಿಂದ ;

(ಉದತಿಷ್ಠತ್) 'ಊರ್ಧ್ವ', ಎಂದರೆ ಉತ್ಕೃಷ್ಟವಾದ ತಿಳಿವಳಿಕೆಯಲ್ಲೂ, ಹಾಗೂ ವ್ಯವಹಾರದಲ್ಲೂ ಕೂಡ, ಸ್ಥಿತನಾಗಿರುತ್ತಾನೆ!

ಅಂದರೆ, ಯಾವ ಬ್ರಹ್ಮಚಾರಿಯು ಮೊದಲೇ ಓದಿ, 'ಬ್ರಾಹ್ಮಣ'ನಾಗುತ್ತಾನೋ, ಅವನು ಧರ್ಮಾನುಷ್ಠಾನದಿಂದ ಅತ್ಯಂತ ಪುರುಷಾರ್ಥಿಯಾಗಿ, ಎಲ್ಲಾ ಮನುಷ್ಯರ ಕಲ್ಯಾಣ ಮಾಡುತ್ತಾನೆ!

ಆ ಕಾರಣದಿಂದ, (ಬ್ರಹ್ಮಜ್ಯೇಷ್ಠಮ್) 'ಬ್ರಹ್ಮವೇ, ಎಂದರೆ ಪರಮೇಶ್ವರನೇ, ಅಥವಾ ವಿದ್ಯೆಯೇ ಜ್ಯೇಷ್ಠ, ಎಂದರೆ ಸರ್ವೋತ್ಕೃಷ್ಟವಾಗಿ ಯಾವನಾದಗಿರುತ್ತದೋ, ಆ ಬ್ರಹ್ಮಜ್ಯೇಷ್ಠನೂ' ;

(ಅಮೃತೇನ) ಪರಮೇಶ್ವರನ, ಹಾಗೂ ಮೋಕ್ಷದ ತಿಳಿವಳಿಕೆಯೊಡನೆ, ಎಂದರೆ ಪರಮಾನಂದದ ಜೊತೆಗೆ ವರ್ತಿಸುತ್ತಿರುವವನೂ; [ಹಾಗೂ_]

(ಬ್ರಾಹ್ಮಣಮ್) ಬ್ರಹ್ಮನನ್ನು ತಿಳಿದವನು, ಎಂದೂ (ಜಾತಮ್) ಪ್ರಸಿದ್ಧನಾದ ಅವನನ್ನು ;

(ದೇವಾಃ) ಎಲ್ಲಾ ವಿದ್ವಾಂಸರೂ ಪ್ರಶಂಸಿಸುತ್ತಾರೆ!

* ಮಂತ್ರಪಾಠೇ ಸ್ವರಾನುಸಾರಂ 'ಬ್ರಹ್ಮ ಜ್ಯೇಷ್ಠಂ' ಇತಿ ದ್ವೇ ಪದೇ _ ಯು. ಮೀ.

ಅಂದರೆ, 'ಅಮೃತ', ಎಂದರೆ ಪರಮೇಶ್ವರನ ಪೂರ್ಣಭಕ್ತಿ ಮತ್ತು ಧರ್ಮಾನುಷ್ಠಾನದಿಂದ ಯುಕ್ತನಾಗಿರುವ ಆ ಪೂರ್ಣ ವಿದ್ವಾಂಸನಾದ 'ಬ್ರಾಹ್ಮಣ'ನನ್ನು* ವಿದ್ವಾಂಸರೆಲ್ಲರೂ ಪ್ರಶಂಸಿಸುತ್ತಾರೆ. [೩]

ಬ್ರಹ್ಮಚಾರಿಯು ವಿಲಾಸಿಯಲ್ಲ!

[ಋಷಿಃ_ ಬ್ರಹ್ಮಾ; ದೇವತಾ_ ಬ್ರಹ್ಮಚಾರೀ ; ಛಂದಃ_ ಶಾಕ್ವರಗರ್ಭಾ ಚತುಷ್ಪದಾ ಜಗತೀ ; ಸ್ವರಃ_ ನಿಷಾದಃ]

ಬ್ರಹ್ಮಚಾರ್ಯೇತಿ ಸಮಿಧಾ ಸಮಿದ್ಧಃ
ಕಾರ್ಷ್ಣಂ ವಸಾನೋ ದೀಕ್ಷಿತೋ ದೀರ್ಘಶ್ಮಶ್ರುಃ ।
ಸ ಸದ್ಯ ಏತಿ ಪೂರ್ವಸ್ಮಾದುತ್ತರಂ ಸಮುದ್ರಂ
ಲೋಕಾನ್ತ್ಸಂಗೃಭ್ಯ ಮುಹುರಾಚರಿಕ್ರತ್ ॥ ೪ ॥

[ಅಥರ್ವವೇದೇ ಕಾಂ. ೧೧, ಅನು. ೩, ವ. ೫, ಮಂ. ೬]

[ಅರ್ಥ:_ "ಬ್ರಹ್ಮಚಾರಿಯು ಸಮಿತ್ತಿನಿಂದ ಪ್ರಕಾಶಿತನಾಗಿಯೂ, ಕಪ್ಪು ಉಡುಪನ್ನು ತೊಟ್ಟುಕೊಂಡೂ,** ಉದ್ದದ ಕೂದಲು-ಗಡ್ಡಗಳನ್ನುಳ್ಳವನಾಗಿಯೂ ದೀಕ್ಷಿತನಾಗಿ ಬರುತ್ತಾನೆ. ಅವನು 'ಪೂರ್ವಸಮುದ್ರ'ದಿಂದ 'ಉತ್ತರಸಮುದ್ರ'ಕ್ಕೆ ಕೂಡಲೇ ಬರುತ್ತಾನೆ. [ಮತ್ತು] ಲೋಕಗಳನ್ನು ಸಂಗ್ರಹಿಸಿಕೊಂಡು, ಮತ್ತೆ ಮತ್ತೆ ಆಚರಣೆಯಲ್ಲಿ ವರ್ತಿಸುತ್ತಾನೆ."

(ಅಥರ್ವವೇದಃ ೧೧. ೫. ೬)]

ಭಾಷ್ಯಮ್_

(ಬ್ರಹ್ಮಚಾರ್ಯೇತಿ.) ಸ ಬ್ರಹ್ಮಚಾರೀ ಪೂರ್ವೋಕ್ತಯಾ (ಸಮಿಧಾ) ವಿದ್ಯಯಾ (ಸಮಿದ್ಧಃ) ಪ್ರಕಾಶಿತಃ ;

ಭಾಷ್ಯ_

(ಬ್ರಹ್ಮಚಾರ್ಯೇತಿ.) ಆ ಬ್ರಹ್ಮಚಾರಿಯು ಮೊದಲು ಹೇಳಿದ (ಸಮಿಧಾ) ವಿದ್ಯೆಯಿಂದ (ಸಮಿದ್ಧಃ) ಪ್ರಕಾಶಿತನಾಗಿ ;

* ಇದರ ಮುಂದೆ_ 'ನೋಡುವುದಕ್ಕಾಗಿ ವಿದ್ವಾಂಸರೆಲ್ಲರೂ ಬರುತ್ತಾರೆ', ಎಂಬ ಪಾಠವು ಮೂಲಗ್ರಂಥದಲ್ಲಿದೆ. ಇದು ಮೊದಲ ಮಂತ್ರದ_ 'ದ್ರಷ್ಟುಮಭಿಸಂಯಂತಿ', ಎಂಬ ಕ್ರಿಯಾಪದವನ್ನು ಇಲ್ಲಿ ಅಧ್ಯಾಹೃತವನ್ನಾಗಿ ಮಾಡಿ, ಹೇಳಲಾಗಿದೆ. _ಅನು.

** ಅಯ್ಯಪ್ಪನ್‌ಭಕ್ತರು ಕಪ್ಪು ಬಟ್ಟೆಯನ್ನು ಧರಿಸಿಕೊಂಡು, ಬ್ರಹ್ಮಚರ್ಯಪಾಲನೆ ಮಾಡುತ್ತಾ, ಜಾತ್ರೆಗೆ ಹೋಗುವ ದೃಶ್ಯವನ್ನು ನೆನೆಸಿಕೊಳ್ಳಿ! _ಅನು.

(ಕಾರ್ಷ್ಣಮ್) ಮೃಗಚರ್ಮಾದಿಕಂ **(ವಸಾನಃ)** ಆಚ್ಛಾದಯನ್ ;

(ಕಾರ್ಷ್ಣಮ್) ಮೃಗಚರ್ಮ ಮೊದಲಾದುವನ್ನು **(ವಸಾನಃ)** ಹೊದೆದುಕೊಂಡು ;

(ದೀರ್ಘಶ್ಮಶ್ರುಃ) 'ದೀರ್ಘಕಾಲಪರ್ಯಂತಂ ಕೇಶಶ್ಮಶ್ರೂಣಿ ಧಾರಿತಾನಿ ಯೇನ', ಸ ;

(ದೀರ್ಘಶ್ಮಶ್ರುಃ) 'ದೀರ್ಘಕಾಲದ ತನಕ ಕೂದಲು-ಗಡ್ಡಗಳು ಯಾವನಿಂದ ಧರಿಸಲ್ಪಟ್ಟಿವೆಯೋ,' ಅವನು ;

(ದೀಕ್ಷಿತಃ) ಪ್ರಾಪ್ತದೀಕ್ಷಃ ;

(ದೀಕ್ಷಿತಃ) ದೀಕ್ಷೆಯನ್ನು ಹೊಂದಿದವನಾಗಿ ;

(ಏತಿ) ಪರಮಾನಂದಂ ಪ್ರಾಪ್ನೋತಿ.

(ಏತಿ) ಪರಮಾನಂದವನ್ನು ಪಡೆಯುತ್ತಾನೆ!

ಅಂದರೆ, ಯಾವನು ಬ್ರಹ್ಮಚಾರಿಯಾಗುತ್ತಾನೋ, ಅವನೇ ಜ್ಞಾನದಿಂದ ಪ್ರಕಾಶಿತವಾದ ತಪಸ್ಸಿನಿಂದಲೂ, ಮತ್ತು ದೊಡ್ಡ ದೊಡ್ಡ ಕೂದಲು-ಗಡ್ಡಗಳಿಂದಲೂ ಯುಕ್ತನಾಗಿ, ದೀಕ್ಷೆಯನ್ನು ಪಡೆದುಕೊಂಡು, ವಿದ್ಯೆಯನ್ನು ಗಳಿಸುತ್ತಾನೆ!

ತಥಾ **(ಪೂರ್ವಸ್ಮಾತ್)** ಬ್ರಹ್ಮಚರ್ಯಾನುಷ್ಠಾನ-ಭೂತಾತ್ ಸಮುದ್ರಾತ್ ;

ಮತ್ತು **(ಪೂರ್ವಸ್ಮಾತ್)** ಬ್ರಹ್ಮಚರ್ಯದ ಅನುಷ್ಠಾನವಾಗಿರುವ ಸಮುದ್ರದಿಂದ ;

(ಉತ್ತರಮ್) ಗೃಹಾಶ್ರಮಂ ಸಮುದ್ರಂ ;

(ಉತ್ತರಮ್) ಗೃಹಾಶ್ರಮ[ದ ಅನುಷ್ಠಾನ, ಎಂಬ] ಸಮುದ್ರವನ್ನು ;

(ಸದ್ಯ ಏತಿ) ಶೀಘ್ರಂ ಪ್ರಾಪ್ನೋತಿ.

(ಸದ್ಯ ಏತಿ) ಶೀಘ್ರವಾಗಿ ಪಡೆಯುತ್ತಾನೆ!

ಅಂದರೆ, ಶೀಘ್ರವಾಗಿಯೇ ವಿದ್ಯೆಯನ್ನು ಗಳಿಸಿ, ಬ್ರಹ್ಮಚರ್ಯದ ಅನುಷ್ಠಾನ, ಎಂಬ **ಪೂರ್ವಸಮುದ್ರ**ವನ್ನು ದಾಟಿ, **ಉತ್ತರಸಮುದ್ರ**ಸ್ವರೂಪವಾದ ಗೃಹಾಶ್ರಮವನ್ನು ಹೊಂದುತ್ತಾನೆ.

ಏವಂ ನಿವಾಸಯೋಗ್ಯಾನ್ ಸರ್ವಾನ್ **(ಲೋಕಾನ್ ಸಂ.)** ಸಂಗೃಹ್ಯ ;

ಹೀಗೆ, ನಿವಾಸಕ್ಕೆ ಯೋಗ್ಯವಾದ ಎಲ್ಲಾ **(ಲೋಕಾನ್ ಸಂಗೃಭ್ಯ)** ಲೋಕಗಳನ್ನೂ ಸಂಗ್ರಹಿಸಿಕೊಂಡು ;

ಮುಹುರ್ವಾರಂವಾರಂ **(ಆಚರಿಕ್ರತ್)** ಧರ್ಮೋಪದೇಶಮೇವ ಕರೋತಿ ॥ ೪ ॥

(ಮುಹುಃ) ಮತ್ತೆ ಮತ್ತೆ **(ಆಚರಿಕ್ರತ್)** ಧರ್ಮದ ಉಪದೇಶವನ್ನೇ ಮಾಡುತ್ತಾನೆ.

ಅಂದರೆ, ಉತ್ತಮ ರೀತಿಯಿಂದ ವಿದ್ಯಾಸಂಗ್ರಹವನ್ನು ಮಾಡಿ, ವಿಚಾರಪೂರ್ವಕವಾಗಿ ತನ್ನ ಉಪದೇಶದ ಸೌಭಾಗ್ಯವನ್ನು ಹೆಚ್ಚಿಸಿಕೊಳ್ಳುತ್ತಾನೆ! [೪]

ಬ್ರಹ್ಮಚಾರಿಯು ಅವಿದ್ಯಾಂಧಕಾರವನ್ನು ತಿರಸ್ಕರಿಸುತ್ತಾನೆ!

[ಋಷಿಃ_ ಬ್ರಹ್ಮಾ; ದೇವತಾ_ ಬ್ರಹ್ಮಚಾರೀ ; ಛಂದಃ_ ವಿರಾಡ್ಗರ್ಭಾ ತ್ರಿಷ್ಟುಪ್ ; ಸ್ವರಃ_ ಧೈವತಃ]

ಬ್ರಹ್ಮಚಾರೀ ಜನಯನ್ ಬ್ರಹ್ಮಾಪೋ ಲೋಕಂ
ಪ್ರಜಾಪತಿಂ ಪರಮೇಷ್ಠಿನಂ ವಿರಾಜಮ್ ।
ಗರ್ಭೋ ಭೂತ್ವಾಮೃತಸ್ಯ ಯೋನಾ-
ವಿಂದ್ರೋ ಹ ಭೂತ್ವಾಸುರಾಂಸ್ತತರ್ಹ ॥ ೫ ॥

[ಅಥರ್ವವೇದೇ ಕಾಂ. ೧೧, ಅನು. ೩, ವ. ೫, ಮಂ. ೭]

[ಅರ್ಥ:_ "ಬ್ರಹ್ಮಚಾರಿಯು ವೇದವಿದ್ಯೆ, ಪ್ರಾಣಗಳು, ಲೋಕ, ಹಾಗೂ ವಿವಿಧ ಪ್ರಕಾಶಕನಾದ ಪರಮೇಷ್ಠೀ ಪ್ರಜಾಪತಿ_ ಇವನ್ನು ಪ್ರಕಟ ಮಾಡುತ್ತಾ, ಮೋಕ್ಷವಿದ್ಯೆಯಲ್ಲಿ ಗರ್ಭಭೂತನಾಗಿ, ಇಂದ್ರನಂತೆ ಅಸುರರನ್ನು ತಿರಸ್ಕರಿಸುತ್ತಾನೆ! "

(ಅಥರ್ವವೇದಃ ೧೧. ೫. ೭)]

ಭಾಷ್ಯಮ್_	ಭಾಷ್ಯ_
(ಬ್ರಹ್ಮಚಾರೀ) ಸ ಬ್ರಹ್ಮಚಾರೀ (ಬ್ರಹ್ಮ) ವೇದವಿದ್ಯಾಂ ಪಠನ್ ;	(ಬ್ರಹ್ಮಚಾರೀ) ಆ ಬ್ರಹ್ಮಚಾರಿಯು (ಬ್ರಹ್ಮ) ವೇದವಿದ್ಯೆಯನ್ನು ಓದುತ್ತಾ;
(ಅಪಃ) ಪ್ರಾಣಾನ್ ;	(ಅಪಃ) ಪ್ರಾಣಗಳನ್ನೂ ;
(ಲೋಕಮ್) ದರ್ಶನಂ ;	(ಲೋಕಮ್) ದರ್ಶನವನ್ನೂ ;
(ಪರಮೇಷ್ಠಿನಮ್) ಪ್ರಜಾಪತಿಂ ;	(ಪರಮೇಷ್ಠಿನಂ ಪ್ರಜಾಪತಿಮ್) ಪರಮೇಷ್ಠೀ ಪ್ರಜಾಪತಿಯನ್ನೂ, [ಎಂದರೆ_]
(ವಿರಾಜಮ್) ವಿವಿಧಪ್ರಕಾಶಕಂ ಪರಮೇಶ್ವರಂ ;	(ವಿರಾಜಮ್) ವಿವಿಧ ಪ್ರಕಾಶಕನಾದ ಪರಮೇಶ್ವರನನ್ನೂ ;
(ಜನಯನ್) ಪ್ರಕಟಯನ್ ;	(ಜನಯನ್) ಪ್ರಸಿದ್ಧ ಮಾಡುತ್ತಾ;
(ಅಮೃತಸ್ಯ) ಮೋಕ್ಷಸ್ಯ (ಯೋನೌ) ವಿದ್ಯಾಯಾಂ ;	(ಅಮೃತಸ್ಯ) ಮೋಕ್ಷದ (ಯೋನೌ) ವಿದ್ಯೆಯ [ವಿಷಯದ]ಲ್ಲಿ;
(ಗರ್ಭೋ ಭೂತ್ವಾ) ಗರ್ಭವನ್ನಿಯಮೇನ ಸ್ಥಿತ್ವಾ, ಯಥಾವದ್ ವಿದ್ಯಾಂ ಗೃಹೀತ್ವಾ ;	(ಗರ್ಭೋ ಭೂತ್ವಾ) ಗರ್ಭದಂತೆ ನಿಯಮದಿಂದ ಇದ್ದವನಾಗಿ, [ಎಂದರೆ] ಯಥಾವತ್ತಾಗಿ ವಿದ್ಯೆಯನ್ನು ಕಲಿತು ;

(ಇಂದ್ರೋ ಹ ಭೂತ್ವಾ) ಸೂರ್ಯ್ಯವತ್ ಪ್ರಕಾಶಕಃ ಸನ್ ;

(ಇಂದ್ರೋ ಹ ಭೂತ್ವಾ) ಸೂರ್ಯನಂತೆ ಪ್ರಕಾಶಕನಾಗಿ ;

(ಅಸುರಾನ್) ದುಷ್ಟಕರ್ಮಕಾರಿಣೋ ಮೂರ್ಖಾನ್ ಪಾಷಂಡಿನೋ ಜನಾನ್ ದೈತ್ಯರಕ್ಷಃ-ಸ್ವಭಾವಾನ್ ;

(ಅಸುರಾನ್) ದುಷ್ಟಕರ್ಮಗಳನ್ನು ಮಾಡುವವರನ್ನೂ, ಮೂರ್ಖರನ್ನೂ, ಪಾಖಂಡೀಜನರನ್ನೂ, [ಮತ್ತು] ದೈತ್ಯ-ರಾಕ್ಷಸಸ್ವಭಾವದವರನ್ನೂ ;

(ತತರ್ಹ) ತಿರಸ್ಕರೋತಿ, ಸರ್ವಾನ್ನಿವಾರಯತಿ.

(ತತರ್ಹ) ತಿರಸ್ಕರಿಸುತ್ತಾನೆ, [ಎಂದರೆ], ಎಲ್ಲರನ್ನೂ ನಿವಾರಿಸುತ್ತಾನೆ!

ಅಂದರೆ, ಆ ಬ್ರಹ್ಮಚಾರಿಯು ವೇದವಿದ್ಯೆಯನ್ನು ಯಥಾರ್ಥರೂಪದಲ್ಲಿ ತಿಳಿದುಕೊಂಡು, ಪ್ರಾಣವಿದ್ಯೆ, ಲೋಕವಿದ್ಯೆ ; ಮತ್ತು ಎಲ್ಲರಿಗಿಂತ ದೊಡ್ಡವನೂ, ಹಾಗೂ ಎಲ್ಲದರ ಪ್ರಕಾಶಕನೂ ಆದ ಪ್ರಜಾಪತಿ ಪರಮೇಶ್ವರನನ್ನು ತಿಳಿಯುವುದು_ ಈ [ಎಲ್ಲಾ] ವಿದ್ಯೆಗಳಲ್ಲಿ ಗರ್ಭರೂಪನಾಗಿಯೂ, ಮತ್ತು 'ಇಂದ್ರ', ಎಂದರೆ ಐಶ್ವರ್ಯ್ಯಯುಕ್ತನಾಗಿಯೂ ಇರುತ್ತಾ, '**ಅಸುರ**', ಎಂದರೆ ಮೂರ್ಖರ ಅವಿದ್ಯೆಯ ಛೇದನವನ್ನು ಮಾಡಿ ಬಿಡುತ್ತಾನೆ !

ಯಥೇಂದ್ರಃ ಸೂರ್ಯೋಽಸುರಾನ್ ಮೇಘಾನ್ ರಾತ್ರಿಂ ಚ ನಿವಾರಯತಿ ;

ಹೇಗೆ 'ಇಂದ್ರ', ಎಂದರೆ ಸೂರ್ಯನು '**ಅಸುರ**', ಎಂದರೆ ಮೇಘಗಳನ್ನೂ ಮತ್ತು ರಾತ್ರಿಯನ್ನೂ ಕೂಡ, ನಿವಾರಿಸುತ್ತಾನೋ ;

ತಥೈವ ಬ್ರಹ್ಮಚಾರೀ ಸರ್ವಶುಭಗುಣ-ಪ್ರಕಾಶಕೋಽಶುಭಗುಣನಾಶಕಶ್ಚ ಭವತೀತಿ ॥ ೫ ॥

ಹಾಗೆಯೇ, ಬ್ರಹ್ಮಚಾರಿಯು ಎಲ್ಲಾ ಶುಭಗುಣಗಳ ಪ್ರಕಾಶಕನೂ, ಹಾಗೂ ಅಶುಭಗುಣಗಳ ನಾಶಕನೂ ಆಗುತ್ತಾನೆ! [೫]

ಬ್ರಹ್ಮಚರ್ಯದ ಮೂಲಕ ರಾಜನಿಂದ ರಾಷ್ಟ್ರಪಾಲನೆ

[ಋಷಿಃ_ ಬ್ರಹ್ಮಾ ; ದೇವತಾ_ ಬ್ರಹ್ಮಚಾರೀ ; ಛಂದಃ_ ಅನುಷ್ಟುಪ್ ; ಸ್ವರಃ_ ಗಾಂಧಾರಃ]

ಬ್ರಹ್ಮಚರ್ಯ್ಯೇಣ ತಪಸಾ ರಾಜಾ ರಾಷ್ಟ್ರಂ ವಿ ರಕ್ಷತಿ ।

ಆಚಾರ್ಯೋ ಬ್ರಹ್ಮಚರ್ಯ್ಯೇಣ ಬ್ರಹ್ಮಚಾರಿಣಮಿಚ್ಛತೇ ॥ ೬ ॥

[ಅಥರ್ವವೇದೇ ಕಾಂ. ೧೧, ಅನು. ೩, ವ. ೫, ಮಂ. ೧೭]

[ಅರ್ಥ:_ "ಬ್ರಹ್ಮಚರ್ಯ, ಎಂಬ ತಪಸ್ಸಿನಿಂದ ರಾಜನು ರಾಷ್ಟ್ರವನ್ನು ವಿವಿಧ ರೀತಿಯಿಂದ ರಕ್ಷಿಸುತ್ತಾನೆ. ಆಚಾರ್ಯನು ಬ್ರಹ್ಮಚರ್ಯದಿಂದ ಬ್ರಹ್ಮಚಾರಿಯನ್ನು ಇಚ್ಛಿಸುತ್ತಾನೆ."

(ಅಥರ್ವವೇದಃ ೧೧. ೫. ೧೭]

ಭಾಷ್ಯಮ್_

(ಬ್ರಹ್ಮಚರ್ಯೇಣ ತ.) ತಪಸಾ ಬ್ರಹ್ಮಚರ್ಯೇಣ ಕೃತೇನ ರಾಜಾ ರಾಷ್ಟ್ರಂ ವಿರಕ್ಷತಿ ;

ವಿಶಿಷ್ಟತಯಾ ಪ್ರಜಾ ರಕ್ಷಿತುಂ ಯೋಗ್ಯೋ ಭವತಿ.

ಆಚಾರ್ಯೋऽಪಿ ಕೃತೇನ ಬ್ರಹ್ಮಚರ್ಯೇಣೈವ ವಿದ್ಯಾಂ ಪ್ರಾಪ್ಯ ಬ್ರಹ್ಮಚಾರಿಣಮಿಚ್ಛತೇ ; ಸ್ವೀಕುರ್ಯಾನ್ನಾನ್ಯಥೇತಿ ॥ ೬ ॥

ಭಾಷ್ಯ_

(ಬ್ರಹ್ಮಚರ್ಯೇಣ ತಪಸಾ.) ಬ್ರಹ್ಮಚರ್ಯ, ಎಂಬ ತಪಸ್ಸನ್ನು ಮಾಡುವುದರ ಮೂಲಕ ರಾಜನು ರಾಷ್ಟ್ರವನ್ನು ವಿವಿಧವಾಗಿ ರಕ್ಷಿಸುತ್ತಾನೆ ;

[ಎಂದರೆ_] ವಿಶಿಷ್ಟರೀತಿಯಿಂದ ಪ್ರಜೆಗಳನ್ನು ರಕ್ಷಿಸಲು ಯೋಗ್ಯನಾಗುತ್ತಾನೆ.

ಆಚಾರ್ಯನೂ ಕೂಡ, ಬ್ರಹ್ಮಚರ್ಯದ [ಆಚರಣೆ]ಯಿಂದಲೇ ವಿದ್ಯೆಯನ್ನು ಪಡೆದುಕೊಂಡು, ಬ್ರಹ್ಮಚಾರಿಯನ್ನು ಇಚ್ಛಿಸುತ್ತಾನೆ ; [ಎಂದರೆ] ಸ್ವೀಕರಿಸಬೇಕು; ಬೇರೆಯ ರೀತಿಯಿಂದಲ್ಲ, ಎಂದರ್ಥ!

ಅಂದರೆ, ಪೂರ್ಣ ಬ್ರಹ್ಮಚರ್ಯದಿಂದ ವಿದ್ಯೆಯನ್ನು ಓದಿ, ಮತ್ತು ಸತ್ಯಧರ್ಮದ ಅನುಷ್ಠಾನದಿಂದ, ರಾಜನು ರಾಜ್ಯವನ್ನು ಆಳುವುದಕ್ಕೂ; ಮತ್ತು ಆಚಾರ್ಯನು ವಿದ್ಯೆಯನ್ನು ಓದಿಸುವುದಕ್ಕೂ ಸಮರ್ಥರಾಗುತ್ತಾರೆ!

ಅತ್ರ ಪ್ರಮಾಣಮ್_

ಈ ವಿಷಯದಲ್ಲಿ ಪ್ರಮಾಣವೇನೆಂದರೆ_

"ಆಚಾರ್ಯಃ ಕಸ್ಮಾದಾಚಾರಂ ಗ್ರಾಹಯತ್ಯಾಚಿನೋ-
ತ್ಯರ್ಥಾನಾಚಿನೋತಿ ಬುದ್ಧಿಮಿತಿ ವಾ ॥"

[ನಿರುಕ್ತೇ ಅ. ೧, ಖಂ. ೪]

[ಅರ್ಥ:_ "ಆಚಾರ್ಯನು ಹೇಗೆ, ಎಂದರೆ_ [ಅವನು] ಆಚಾರವನ್ನು ಹೇಳಿಕೊಡುತ್ತಾನೆ. ಮತ್ತು ಅರ್ಥಗಳನ್ನು ಅಥವಾ ಬುದ್ಧಿಯನ್ನು ಸಂಪಾದಿಸಿಕೊಡುತ್ತಾನೆ."

(ನಿರುಕ್ತ : ೧. ೪)]

ಅಂದರೆ, ಯಾವನು ಅಸತ್ಯಾಚಾರವನ್ನು ಬಿಡಿಸಿ, ಸತ್ಯಾಚಾರದ ; ಮತ್ತು ಅನರ್ಥಗಳನ್ನು ಬಿಡಿಸಿ, ಅರ್ಥಗಳ, ಗ್ರಹಣ ಮಾಡಿಸಿ, ಜ್ಞಾನವನ್ನು ವರ್ಧಿಸಿಬಿಡುತ್ತಾನೋ, ಅವನನ್ನು 'ಆಚಾರ್ಯ', ಎಂದು ಕರೆಯುತ್ತಾರೆ. [೬]

ಬ್ರಹ್ಮಚರ್ಯದಿಂದ, ಕನ್ಯೆಯು ಪತಿಯನ್ನು ವರಿಸುತ್ತಾಳೆ!

[ಋಷಿಃ_ ಬ್ರಹ್ಮಾ; ದೇವತಾ_ ಬ್ರಹ್ಮಚಾರೀ ; ಛಂದಃ_ ಅನುಷ್ಟುಪ್ ; ಸ್ವರಃ_ ಗಾಂಧಾರಃ]

ಬ್ರಹ್ಮಚರ್ಯೇಣ ಕನ್ಯಾ೩ ಯುವಾನಂ ವಿಂದತೇ ಪತಿಮ್ ।
ಅನಡ್ವಾನ್ ಬ್ರಹ್ಮಚರ್ಯೇಣಾಶ್ವೋ ಘಾಸಂ ಜಿಗೀಷತಿ* ॥ ೭ ॥

[ಅಥರ್ವವೇದೇ ಕಾಂ. ೧೧, ಅನು. ೩, ವ. ೫, ಮಂ. ೧೮]

[ಅರ್ಥ:_ "ಬ್ರಹ್ಮಚರ್ಯದಿಂದ ಕನ್ಯೆಯು ಯುವಕನಾದ ಪತಿಯನ್ನು ಹೊಂದುತ್ತಾಳೆ. ಬ್ರಹ್ಮಚರ್ಯದಿಂದ ಗೂಳಿಯು, ಅಥವಾ ಅಶ್ವವು ಹುಲ್ಲನ್ನು ಗೆಲ್ಲಲು ಇಚ್ಛಿಸುತ್ತದೆ.*"

(ಅಥರ್ವವೇದ: ೧೧. ೫. ೧೮)]

ಭಾಷ್ಯಮ್_

(ಬ್ರಹ್ಮಚರ್ಯೇಣ ಕ.) ಏವಮೇವ ಕೃತೇನ ಬ್ರಹ್ಮಚರ್ಯೇಣೈವ ಕನ್ಯಾ ಯುವತಿಃ ಸತೀ ;

ಯುವಾನಂ ಸ್ವಸದೃಶಂ ಪತಿಂ ವಿಂದತೇ ;

ನಾನ್ಯಥಾ, ನ ಚಾತಃ ಪೂರ್ವಮಸದೃಶಂ ವಾ.

ಭಾಷ್ಯ_

(ಬ್ರಹ್ಮಚರ್ಯೇಣ ಕನ್ಯಾ.) ಹೀಗೆಯೇ, [ಎಂದರೆ] ಬ್ರಹ್ಮಚರ್ಯವನ್ನು ಆಚರಿಸುವುದರ ಮೂಲಕವಾಗಿಯೇ, ಕನ್ಯೆಯು ಯುವತಿಯಾಗಿಯೇ ಇದ್ದು ;

ತನ್ನಂತಿರುವ ಯುವಕನಾದ ಪತಿಯನ್ನು ಪಡೆಯುತ್ತಾಳೆ ;

ಬೇರೆ ರೀತಿಯಲ್ಲಲ್ಲ! ಮತ್ತು, ತನಗಿಂತ ಚಿಕ್ಕವಯಸ್ಸಿನವನನ್ನಲ್ಲ! ಅಥವಾ ಅಸಮಾನನಾಗಿರುವವನನ್ನೂ ಅಲ್ಲ!

ಅಂದರೆ, ಯಾವಾಗ ಕನ್ಯೆಯು ಬ್ರಹ್ಮಚರ್ಯಾಶ್ರಮದಲ್ಲಿ ಪೂರ್ಣವಿದ್ಯೆಯನ್ನು ಕಲಿತು, ಪೂರೈಸುತ್ತಾಳೋ, ಆಗ ತನ್ನಂತೆ ಯುವಾವಸ್ಥೆಯಲ್ಲಿ ಪೂರ್ಣಯುವಕನಾದ ಪುರುಷನನ್ನು ತನ್ನ ಪತಿಯನ್ನಾಗಿ ಮಾಡಿಕೊಳ್ಳಬೇಕು!

ಇದೇ ರೀತಿ, ಪುರುಷನೂ ಕೂಡ, ಸುಶೀಲಳೂ, ಧರ್ಮಾತ್ಮಳೂ ಆದ ಯುವತಿಯೊಡನೆ ಪ್ರಸನ್ನತೆಯಿಂದ ವಿವಾಹವನ್ನು ಮಾಡಿಕೊಳ್ಳಬೇಕು! ಮತ್ತು ಇಬ್ಬರೂ ಸುಖ-ದುಃಖಗಳಲ್ಲಿ ಪರಸ್ಪರ ಸಹಾಯಕಾರಿಗಳಾಗಿರಬೇಕು!

* 'ಜಿಗೀರ್ಷತಿ' ಇತಿ ಸ್ವಾಧ್ಯಾಯಮಂಡಲಸ್ಯ ಸಾತವಲೇಕರ-ಸಂಸ್ಕರಣೇ ಪಾಠಾಂತರಮ್ _ಅನು.

* 'ಜಿಗೀರ್ಷತಿ', ಎಂಬ ಪಾಠಾಂತರವು ಸ್ವಾಧ್ಯಾಯಮಂಡಲದ ಸಾತವಲೇಕರ-ಸಂಸ್ಕರಣವಾದ ಅಥರ್ವವೇದಸಂಹಿತೆಯಲ್ಲಿದೆ. ಆದರರ್ಥವು 'ಜೀರ್ಣಿಸಿಕೊಳ್ಳುತ್ತದೆ', ಎಂದು _ಅನು.

ಅನಡ್ವಾನಿತ್ಯುಪಲಕ್ಷಣಂ ವೇಗವತಾಂ ಪಶೂನಾಮ್.

'ಅನಡ್ವಾನ್', ಎಂಬುದು ವೇಗವನ್ನುಳ್ಳ ಪಶುಗಳ ಉಪಲಕ್ಷಣವಾಗಿದೆ.

ತೇ ಪಶವೋऽಶ್ವಶ್ಚ ಘಾಸಂ ಯಥಾ ;

ಆ ಪಶುಗಳೂ, ಹಾಗೂ ಅಶ್ವವೂ ಕೂಡ, ಹುಲ್ಲನ್ನು ಹೇಗೆ [ಜೀರ್ಣಿಸಿಕೊಳ್ಳುತ್ತವೋ ;]

ತಥಾ ಕೃತೇನ ಬ್ರಹ್ಮಚರ್ಯ್ಯೇಣ ಸ್ವವಿರೋಧಿನಃ ಪಶೂನ್ ಜಿಗೀಷಂತಿ, ಯುದ್ಧೇನ ಜೇತುಮಿಚ್ಛಂತಿ.

ಹಾಗೆಯೇ, ಬ್ರಹ್ಮಚರ್ಯದ ಆಚರಣೆಯಿಂದ ತಮ್ಮ ವಿರೋಧಿಗಳಾದ ಪ್ರಾಣಿಗಳನ್ನು ಯುದ್ಧದ ಮೂಲಕ ಗೆಲ್ಲಲು ಇಚ್ಛಿಸುತ್ತವೆ!

ಅಂದರೆ, ಪೂರ್ಣಯೌವನದ ತನಕ ಬ್ರಹ್ಮಚರ್ಯದಲ್ಲಿ, ಎಂದರೆ ಸುನಿಯಮಗಳಲ್ಲಿ, ವೇಗವಂತವಾದ ಪಶುವನ್ನೂ ಕೂಡ, ಇಟ್ಟರೆ, ಅದು ಅತ್ಯಂತ ಬಲಶಾಲಿಯಾಗಿ, ನಿರ್ಬಲ ಪ್ರಾಣಿಗಳನ್ನು ಗೆದ್ದುಬಿಡುತ್ತದೆ!

ಅತೋ ಮನುಷ್ಯೈಸ್ತ್ವವಶ್ಯಂ ಬ್ರಹ್ಮಚರ್ಯ್ಯಂ ಕರ್ತ್ತವ್ಯಮಿತ್ಯಭಿಪ್ರಾಯಃ ॥ ೭ ॥

ಆದುದರಿಂದ, ಮನುಷ್ಯರಂತೂ ಅವಶ್ಯವಾಗಿ ಬ್ರಹ್ಮಚರ್ಯವನ್ನು ಆಚರಿಸಬೇಕು, ಎಂಬುದಾಗಿ ಅಭಿಪ್ರಾಯವಾಗುತ್ತದೆ! [೭]

ಬ್ರಹ್ಮಚರ್ಯದಿಂದ ಮೃತ್ಯುವನ್ನು ಕೊಲ್ಲುತ್ತಾರೆ!

[ಋಷಿಃ_ ಬ್ರಹ್ಮಾ; ದೇವತಾ_ ಬ್ರಹ್ಮಚಾರೀ ; ಛಂದಃ_ ಅನುಷ್ಟುಪ್ ; ಸ್ವರಃ_ ಗಾಂಧಾರಃ]

ಬ್ರಹ್ಮಚರ್ಯ್ಯೇಣ ತಪಸಾ ದೇವಾ ಮೃತ್ಯುಮುಪಾಘ್ನತ* ।
ಇಂದ್ರೋ ಹ ಬ್ರಹ್ಮಚರ್ಯ್ಯೇಣ ದೇವೇಭ್ಯಃ ಸ್ವರಾಭರತ್ ॥ ೮ ॥

[ಅಥರ್ವವೇದೇ ಕಾಂ. ೧೧, ಅನು. ೩, ವ. ೫, ಮಂ. ೧೯]

[ಅರ್ಥ:_ "ಬ್ರಹ್ಮಚರ್ಯ, ಎಂಬ ತಪಸ್ಸಿನಿಂದ, ವಿದ್ವಾಂಸರು ಮೃತ್ಯುವನ್ನು ಕೊಂದರು! ಇಂದ್ರನೂ ಕೂಡ, ಬ್ರಹ್ಮಚರ್ಯ್ಯದಿಂದಲೇ ವಿದ್ವಾಂಸರಿಗೆ ಸುಖವನ್ನು ತುಂಬಿಕೊಟ್ಟನು."

(ಅಥರ್ವವೇದಃ ೧೧. ೫. ೧೯)]

ಭಾಷ್ಯಮ್_

ಭಾಷ್ಯ_

(ಬ್ರಹ್ಮಚರ್ಯ್ಯೇಣ ತಪಸಾ ದೇವಾ.) ದೇವಾ ವಿದ್ವಾಂಸೋ ಬ್ರಹ್ಮಚರ್ಯ್ಯೇಣ ವೇದಾಧ್ಯಯನೇನ, ಬ್ರಹ್ಮವಿಜ್ಞಾನೇನ ;

(ಬ್ರಹ್ಮಚರ್ಯೇಣ ತಪಸಾ ದೇವಾ.) 'ದೇವ', ಎಂದರೆ ವಿದ್ವಾಂಸರು 'ಬ್ರಹ್ಮಚರ್ಯದಿಂದ', ಎಂದರೆ ವೇದಾಧ್ಯಯನದಿಂದಲೂ, ಬ್ರಹ್ಮವಿಜ್ಞಾನದಿಂದಲೂ ;

* ಅಥರ್ವಸಂಹಿತಾಯಾಮ್ 'ಮೃತ್ಯುಮುಪಾಘ್ನತ' ಇತಿ ಪಾಠೋ ವರ್ತತೇ _ ಯು. ಮೀ.

* ಅಥರ್ವವೇದಸಂಹಿತೆಯಲ್ಲಿ_ 'ಮೃತ್ಯುಮುಪಾಘ್ನತ, ಎಂಬ ಕ್ರಿಯಾಪದವಿದೆ _ ಯು. ಮೀ.

ತಪಸಾ ಧರ್ಮಾನುಷ್ಠಾನೇನ ಚ ;

ಮತ್ತು 'ತಪಸ್ಸಿನಿಂದ', ಎಂದರೆ ಧರ್ಮಾನುಷ್ಠಾನ ದಿಂದಲೂ ;

ಮೃತ್ಯುಂ ಜನ್ಮಮೃತ್ಯುಪ್ರಭವದುಃಖ-ಮುಪಾಘ್ನತ ನಿತ್ಯಂ ಘ್ನಂತಿ, ನಾನ್ಯಥಾ.

'ಮೃತ್ಯು', ಎಂದರೆ ಜನ್ಮ-ಮರಣಗಳಿಂದ ಉಂಟಾಗುವ ದುಃಖವನ್ನು 'ಉಪಾಘ್ನತ',* ಎಂದರೆ, ನಿತ್ಯವೂ ಕೊಲ್ಲುತ್ತಾರೆ ; ಬೇರೆಯ ರೀತಿಯಲ್ಲಲ್ಲ!

ಅಂದರೆ, ಬ್ರಹ್ಮಚರ್ಯದ, ಹಾಗೂ ಧರ್ಮದ ಅನುಷ್ಠಾನದಿಂದಲೇ, ವಿದ್ವಾಂಸಜನರು ಜನ್ಮ-ಮರಣ ಗಳನ್ನು ಗೆದ್ದು, ಮೋಕ್ಷಸುಖವನ್ನು ಪಡೆದು ಕೊಂಡು ಬಿಡುತ್ತಾರೆ!

ಬ್ರಹ್ಮಚರ್ಯೇಣ ಸುನಿಯಮೇನ_

ಬ್ರಹ್ಮಚರ್ಯ, ಎಂಬ ಸುನಿಯಮದಿಂದ_

'ಹೇತಿ ಕಿಲಾರ್ಥೇ';

'ಇಲ್ಲಿ 'ಹ', ಎಂಬ [ಅವ್ಯಯವು] 'ನಿಜ ವಾಗಿಯೂ', ಎಂಬ ಅರ್ಥದಲ್ಲಿದೆ' ;

ಯಥಾ ಇಂದ್ರಃ ಸೂರ್ಯೋ ದೇವೇಭ್ಯ ಇಂದ್ರಿಯೇಭ್ಯಃ ಸ್ವಃ ಸುಖಂ ಪ್ರಕಾಶಂ ಚಾಭರದ್, ಧಾರಯತಿ ;

ಹೇಗೆ 'ಇಂದ್ರ', ಎಂದರೆ ಸೂರ್ಯನು 'ದೇವತೆಗಳಿಗಾಗಿ', ಎಂದರೆ ಇಂದ್ರಿಯಗಳಿಗಾಗಿ, 'ಸ್ವಃ', ಎಂದರೆ ಸುಖವನ್ನೂ, ಮತ್ತು ಪ್ರಕಾಶವನ್ನೂ ಧಾರಣ ಮಾಡಿಕೊಂಡಿದ್ದಾನೋ ;

ತಥಾ ವಿನಾ ಬ್ರಹ್ಮಚರ್ಯೇಣ ಕಸ್ಯಾಪಿ ನೈವ ವಿದ್ಯಾ ಸುಖಂ ಚ ಯಥಾವದ್ ಭವತಿ.

ಹಾಗೆಯೇ, ಬ್ರಹ್ಮಚರ್ಯವಿಲ್ಲದೇ, ಯಾವನಿಗೂ ಯಥಾವತ್ತಾಗಿ ವಿದ್ಯೆಯೂ ಮತ್ತು ಸುಖವೂ ಉಂಟಾಗು ವುದೇ ಇಲ್ಲ!

ಅಂದರೆ, ಹೇಗೆ ಇಂದ್ರ, ಎಂದರೆ ಸೂರ್ಯನು ಪರಮೇಶ್ವರನ ನಿಯಮದಲ್ಲಿ ಸ್ಥಿತನಾಗಿದ್ದು, ಎಲ್ಲಾ ಲೋಕಗಳನ್ನೂ ಪ್ರಕಾಶಿಸುವವನಾಗಿದ್ದಾನೋ, ಹಾಗೆಯೇ ಮನುಷ್ಯನ ಆತ್ಮವೂ ಕೂಡ, ಬ್ರಹ್ಮಚರ್ಯದಿಂದ ಪ್ರಕಾಶಿತವಾಗಿ, ಎಲ್ಲರನ್ನೂ ಪ್ರಕಾಶಿಸಿಬಿಡುತ್ತದೆ.

ಅತೋ ಬ್ರಹ್ಮಚರ್ಯಾನುಷ್ಠಾನಪೂರ್ವಕಾ ಏವ ಗೃಹಾಶ್ರಮಾದಯಸ್ತ್ರಯ ಆಶ್ರಮಾಃ ಸುಖಮೇಧಂತೇ.

ಆದುದರಿಂದ, ಮೊದಲು ಮಾಡುವ ಬ್ರಹ್ಮಚರ್ಯ [ಆಶ್ರಮ]ದ ಅನುಷ್ಠಾನದಿಂದಲೇ, [ಮುಂದೆ ಬಂದಿರುವ] ಗೃಹಾಶ್ರಮ ಮೊದಲಾದ ಮೂರು ಆಶ್ರಮಗಳು ಸುಖವನ್ನು ಹೊಂದುತ್ತವೆ.

ಅನ್ಯಥಾ ಮೂಲಾಭಾವೇ ಕುತಃ ಶಾಖಾಃ?

ಹಾಗಿಲ್ಲದಿದ್ದರೆ, ಬೇರಿಲ್ಲದೇ [ವೃಕ್ಷದ] ಶಾಖೆಗಳು ಹೇಗೆ ಉಂಟಾಗಬಲ್ಲವು?

* ಅಥರ್ವವೇದಸಂಹಿತೆಯಲ್ಲಿ_ 'ಅಪಾಘ್ನತ', ಎಂಬ ಕ್ರಿಯಾ ಪದವಿದೆ. ಅದರರ್ಥವು 'ದೂರ ಹೊಡೆದೋಡಿಸುತ್ತಾರೆ', ಎಂದು. _ಅನು.

ಕಿಂತು, ಮೂಲೇ ದೃಢೇ ಶಾಖಾಪುಷ್ಪಫಲ-ಚ್ಛಾಯಾದಯಃ ಸಿದ್ಧಾ ಭವಂತ್ಯೇವೇತಿ ॥ ೮ ॥

ಆದುದರಿಂದ, ಬೇರು ದೃಢವಾಗಿದ್ದರೇನೇ, ಶಾಖೆಗಳು, ಪುಷ್ಪಗಳು, ಫಲಗಳು ಮತ್ತು ನೆರಳು ಮೊದಲಾದುವು ಹೊರ ಬಂದೇ ಬರುತ್ತವೆ!

ಅಂದರೆ, ಇದರಿಂದ, ಬ್ರಹ್ಮಚರ್ಯಾಶ್ರಮವೇ ಎಲ್ಲಾ ಆಶ್ರಮಗಳಲ್ಲೂ ಮುಖ್ಯ*, ಎಂದಾಯಿತು. [೮]

ಇತಿ ಬ್ರಹ್ಮಚರ್ಯ್ಯಾಶ್ರಮವಿಷಯಃ ಸಂಕ್ಷೇಪತಃ ॥

ಇಲ್ಲಿಗೆ ಬ್ರಹ್ಮಚರ್ಯಾಶ್ರಮದ ವಿಷಯವು ಸಂಕ್ಷೇಪವಾಗಿ ಮುಗಿಯಿತು!

ಅಥ ಗೃಹಾಶ್ರಮವಿಷಯಃ

ಈಗ ಗೃಹಾಶ್ರಮದ ವಿಷಯವನ್ನು ಹೇಳುತ್ತೇವೆ.

ಗೃಹಸ್ಥಾಶ್ರಮದ ವೈದಿಕವರ್ಣನೆ

[ಋಷಿಃ_ ಪ್ರಜಾಪತಿಃ ; ದೇವತಾ_ ಮರುತಃ ; ಛಂದಃ_ ಸ್ವರಾಡನುಷ್ಟುಪ್ ; ಸ್ವರಃ_ ಗಾಂಧಾರಃ]

ಯದ್ ಗ್ರಾಮೇ ಯದರಣ್ಯೇ ಯತ್ ಸಭಾಯಾಂ ಯದಿಂದ್ರಿಯೇ ।
ಯದೇನಶ್ಚಕೃಮಾ ವಯಮಿದಂ ತದವಯಜಾಮಹೇ ಸ್ವಾಹಾ ॥ ೯ ॥

[ಯಜುರ್ವೇದೇ ಅ. ೩, ಮಂ. ೪೫]

[ಅರ್ಥ:_ "ಯಾವುದನ್ನು ಗ್ರಾಮದಲ್ಲಿ, ಯಾವುದನ್ನು ಅರಣ್ಯದಲ್ಲಿ, ಯಾವುದನ್ನು ಸಭೆಯಲ್ಲಿ ಮತ್ತು ಯಾವುದನ್ನು ಇಂದ್ರಿಯ[ವ್ಯವಹಾರ]ದಲ್ಲಿ ನಾವು ಯಾವ ಪಾಪವನ್ನು ಮಾಡಿದ್ದೇವೋ, ಆ ಇದೆಲ್ಲವನ್ನೂ ದೂರ ಮಾಡಿಬಿಡುತ್ತೇವೆ! ಇದನ್ನು ಸತ್ಯವಾಗಿ ಹೇಳುತ್ತಿದ್ದೇವೆ!"

(ಯಜುರ್ವೇದಃ ೩. ೪೫)]

[ಋಷಿಃ_ ಔರ್ಣವಾಭಃ ; ದೇವತಾ_ ಇಂದ್ರಃ ; ಛಂದಃ_ ಭುರಿಗನುಷ್ಟುಪ್ ; ಸ್ವರಃ_ ಗಾಂಧಾರಃ]

ದೇಹಿ ಮೇ ದದಾಮಿ ತೇ ನಿ ಮೇ ಧೇಹಿ ನಿ ತೇ ದಧೇ ।
ನಿಹಾರಂ ಚ ಹರಾಸಿ ಮೇ ನಿಹಾರಂ ನಿಹರಾಣಿ ತೇ ಸ್ವಾಹಾ ॥ ೧೦ ॥

[ಯಜುರ್ವೇದೇ ಅ. ೩, ಮಂ. ೫೦]

* 'ತಸ್ಮಾಜ್ಜ್ಯೇಷ್ಠಾಶ್ರಮೋ ಗೃಹೀ', ಎಂದು ಮನುಸ್ಮೃತಿ (೩. ೭೮)ಯಲ್ಲಿ ಹೇಳಲಾಗಿದೆ. ಆದರೆ, ಗೃಹಾಶ್ರಮಕ್ಕೂ ಮೂಲವಾದುದು ಬ್ರಹ್ಮಚರ್ಯಾಶ್ರಮವಾದುದರಿಂದ, ಇಲ್ಲಿ ಇದನ್ನು ಮುಖ್ಯ, ಎಂದು ಹೇಳಲಾಗಿದೆ. _ಅನು.

[ಅರ್ಥ:_ "ನನಗೆ ಕೊಡು! ನಿನಗೆ ಕೊಡುತ್ತೇನೆ! ನನಗೆ ಪೂರ್ಣವಾಗಿ ಅರ್ಪಿಸು! ನಿನಗೆ ಪೂರ್ಣವಾಗಿ ಅರ್ಪಿಸುತ್ತೇನೆ! ನನಗೆ ಯೋಗ್ಯಮೂಲ್ಯವನ್ನು ಕೊಡು! ನಿನಗೆ ಯೋಗ್ಯಮೂಲ್ಯವನ್ನು ಕೊಟ್ಟಿದ್ದೇನೆ! ಇದು ಸರಿಯಾಗಿದೆ!"

(ಯಜುರ್ವೇದ: ೩. ೫೦)]

[ಋಷಿಃ_ ಆಸುರಿಃ ; ದೇವತಾ_ ವಾಸ್ತುಪತಿರಗ್ನಿಃ ; ಛಂದಃ_ ಆರ್ಷೀ ಪಂಕ್ತಿಃ ; ಸ್ವರಃ_ ಪಂಚಮಃ]

ಗೃಹಾ ಮಾ ಬಿಭೀತ ಮಾ ವೇಪಧ್ವ-

ಮೂರ್ಜಂ ಬಿಭ್ರತಽ ಏಮಸಿ ।

ಊರ್ಜಂ ಬಿಭ್ರದ್ವಃ ಸುಮನಾಃ ಸುಮೇಧಾ

ಗೃಹಾನೈಮಿ ಮನಸಾ ಮೋದಮಾನಃ ॥ ೧೧ ॥

[ಯಜುರ್ವೇದೇ ಅ. ೩, ಮಂ. ೪೧]

[ಅರ್ಥ:_ "ಗೃಹಾಶ್ರಮಿಗಳೇ! ಹೆದರಬೇಡಿರಿ! ಕಂಪಿಸಬೇಡಿರಿ! ಬಲವನ್ನು ಧಾರಣ ಮಾಡಿಕೊಳ್ಳುವ [ಪದಾರ್ಥಗಳನ್ನು] ಪ್ರಾಪ್ತಮಾಡಿಕೊಳ್ಳಿರಿ! ನಿಮ್ಮ [ಮಧ್ಯೆ] ಬಲವನ್ನು ಧಾರಣ ಮಾಡಿಕೊಳ್ಳುತ್ತಾ, ಶುದ್ಧ ಮನಸ್ಸಿನವನಾಗಿಯೂ, ಉತ್ತಮ ಬುದ್ಧಿಯನ್ನುಳ್ಳವನಾಗಿಯೂ, ಮನಸ್ಸಿನಿಂದ ಹರ್ಷಿತನಾಗಿಯೂ ನಾನು ಗೃಹಾಶ್ರಮವನ್ನು ಹೊಂದುತ್ತೇನೆ!"

(ಯಜುರ್ವೇದ : ೩. ೪೧)]

[ಋಷಿಃ_ ಶಂಯುಃ ; ದೇವತಾ_ ವಾಸ್ತುಪತಿರಗ್ನಿಃ ; ಛಂದಃ_ ಅನುಷ್ಟುಪ್ ; ಸ್ವರಃ_ ಗಾಂಧಾರಃ]

ಯೇಷಾಮಧ್ಯೇತಿ ಪ್ರವಸನ್ ಯೇಷು ಸೌಮನಸೋ ಬಹುಃ ।

ಗೃಹಾನುಪ ಹ್ವಯಾಮಹೇ ತೇ ನೋ ಜಾನಂತು ಜಾನತಃ ॥ ೧೨ ॥

[ಯಜುರ್ವೇದೇ ಅ. ೩, ಮಂ. ೪೨]

[ಅರ್ಥ:_ "ಯಾವುದರಲ್ಲಿ ವಾಸ ಮಾಡುತ್ತಾ, ಹಾಗೂ ಯಾವುದರಲ್ಲಿ ಬಹಳವಾಗಿ ಪ್ರಸನ್ನತೆಯಿಂದಿರುತ್ತಾ, [ಮನುಷ್ಯನು] ಸ್ಮರಿಸುತ್ತಾನೋ, [ಆ] ಗೃಹಾಶ್ರಮಿಗಳನ್ನು ನಾವು ಕರೆಯುತ್ತೇವೆ. ಅವರು ನಮ್ಮ ಪರಿಚಯಸ್ಥರನ್ನು ತಿಳಿದುಕೊಳ್ಳಲಿ!"

(ಯಜುರ್ವೇದ: ೩. ೪೨)]

[ಋಷಿಃ_ ಶಂಯುರ್ಬಾರ್ಹಸ್ಪತ್ಯಃ ; ದೇವತಾ_ ವಾಸ್ತುಪತಿಃ ; ಛಂದಃ_ ಭುರಿಗ್ ಜಗತೀ ; ಸ್ವರಃ_ ನಿಷಾದಃ]

ಉಪಹೂತಾಽ ಇಹ ಗಾವಽ ಉಪಹೂತಾಽ ಅಜಾವಯಃ ।
ಅಥೋ ಅನ್ನಸ್ಯ ಕೀಲಾಲಽ ಉಪಹೂತೋ ಗೃಹೇಷು ನಃ ।
ಕ್ಷೇಮಾಯ ವಃ ಶಾಂತ್ಯೈ ಪ್ರಪದ್ಯೇ ಶಿವಗ್ಂ ಶಗ್ಮಗ್ಂ
ಶಂಯೋಃ ಶಂಯೋಃ ॥ ೧೩ ॥

[ಯಜುರ್ವೇದೇ ಅ. ೩, ಮಂ. ೪೩]

[ಅರ್ಥ:_ "ಈ ಗೃಹಾಶ್ರಮದಲ್ಲಿ ಗೋವುಗಳು ಪ್ರಾಪ್ತವಾಗಲಿ! ಮೇಕೆ-ಆಡುಗಳು ಪ್ರಾಪ್ತವಾಗಲಿ! ನಂತರ, ನಮ್ಮ ಮನೆಗಳಲ್ಲಿ ಭೋಜ್ಯಪದಾರ್ಥಗಳ ಉತ್ತಮ ರಸವು ಪ್ರಾಪ್ತವಾಗಲಿ! ನಾನು [ಅವನ್ನು] ಕ್ಷೇಮಕ್ಕಾಗಿಯೂ, ಶಾಂತಿಗಾಗಿಯೂ, ಕಲ್ಯಾಣಕ್ಕಾಗಿಯೂ, ಸುಖಕ್ಕಾಗಿಯೂ, ಸುಖ-ಸುಖದ ಸಮೃದ್ಧಿಗಾಗಿಯೂ ಪ್ರಾಪ್ತಮಾಡಿಕೊಳ್ಳುತ್ತೇನೆ!"

(ಯಜುರ್ವೇದ: ೩. ೪೩)]

ಭಾಷ್ಯಮ್_

ಏಷಾಮಭಿಪ್ರಾಯಃ_

ಏತೇಷು ಗೃಹಾಶ್ರಮವಿಧಾನಂ ಕ್ರಿಯತ ಇತಿ.

ಭಾಷ್ಯ_

ಈ ಮಂತ್ರಗಳ ಅಭಿಪ್ರಾಯವೇನೆಂದರೆ_

ಇವುಗಳಲ್ಲಿ ಗೃಹಾಶ್ರಮದ ವಿಧಾನವನ್ನು ಮಾಡಲಾಗುತ್ತದೆ, ಎಂದು.

ಗೃಹಸ್ಥಾಶ್ರಮದ ಮೂಲಕ ಉತ್ತಮ ಕರ್ಮಸಾಧನೆ

(ಯದ್ ಗ್ರಾಮೇ.) ಯದ್ ಗ್ರಾಮೇ ಗೃಹಾಶ್ರಮೇ ವಸಂತೋ ವಯಂ ;

ಪುಣ್ಯಂ ವಿದ್ಯಾಪ್ರಚಾರಂ ;

ಸಂತಾನೋತ್ಪತ್ತಿಮ್ ;

ಅತ್ಯುತ್ತಮಸಾಮಾಜಿಕನಿಯಮಮಂ ಸರ್ವೋಪಕಾರಕಂ ;

(ಯದ್ ಗ್ರಾಮೇ.) 'ಗ್ರಾಮ', ಎಂದರೆ ಗೃಹಾಶ್ರಮದಲ್ಲಿ ವಾಸಮಾಡುತ್ತಾ, ಇರುವ ನಾವು ;

ಯಾವ ಪುನೀತವಾದ ವಿದ್ಯಾಪ್ರಚಾರವನ್ನೂ ;

ಸಂತಾನೋತ್ಪತ್ತಿಯನ್ನೂ :

(ಹಾಗೂ) ಸರ್ವೋಪಕಾರಕವಾದ ಅತ್ಯುತ್ತಮ ಸಾಮಾಜಿಕ ನಿಯಮದ [ಪಾಲನೆಯನ್ನೂ ;]

ಅಂದರೆ, ಗೃಹಾಶ್ರಮವನ್ನು [ಇಚ್ಛಿಸುವವನು ಮಾಡಬೇಕಾದುದೇನೆಂದರೆ_

ಯಾವಾಗ ಅವನು ಪೂರ್ಣವಿದ್ಯೆ ಕಲಿಯುವುದನ್ನು ಮುಗಿಸುತ್ತಾನೋ, ಆಗ ತನಗೆ ಸದೃಶಳಾದ ಸ್ತ್ರೀಯೊಡನೆ **ಸ್ವಯಂವರ** ಮಾಡಿಕೊಳ್ಳಬೇಕು!

ಮತ್ತು ಅವರಿಬ್ಬರೂ ಹಿಂದೆ **ವಿವಾಹ**ದ ಮತ್ತು **ನಿಯೋಗ**ದ ಪ್ರಕರಣಗಳಲ್ಲಿ ನಾವು ಬರೆದಿರುವಂತೆ,* ಆ ವಿವಾಹದ ನಿಯಮಗಳಿಗನುಸಾರವಾಗಿ, ಸರಿ ಸರಿಯಾಗಿ ನಡೆದುಕೊಳ್ಳಬೇಕು!

ಈ ಬಗ್ಗೆ ಅವರಿಗೆ ವಿಶೇಷವಾಗಿ ಏನನ್ನು ಹೇಳಬೇಕೋ, ಅದನ್ನು ಬರೆಯುತ್ತೇವೆ. ಏನೆಂದರೆ_

ಗೃಹಸ್ಥ ಸ್ತ್ರೀ-ಪುರುಷರು ಧರ್ಮದ, ಉನ್ನತಿಯ, ಮತ್ತು ಗ್ರಾಮವಾಸಿಗಳ ಹಿತಕ್ಕಾಗಿ ಯಾವ ಯಾವ ಕೆಲಸ ಮಾಡಬೇಕೋ ;

ತಥೈವಾರಣ್ಯೇ ವಾನಪ್ರಸ್ಥಾಶ್ರಮೇ ಬ್ರಹ್ಮವಿಚಾರಂ ವಿದ್ಯಾಧ್ಯಯನಂ ತಪಶ್ಚರಣಂ ;

ಮತ್ತು ಹಾಗೆಯೇ **ಅರಣ್ಯ**, ಎಂದರೆ ವಾನಪ್ರಸ್ಥಾಶ್ರಮದಲ್ಲಿ ಬ್ರಹ್ಮದ ವಿಚಾರ, ವಿದ್ಯಾಧ್ಯಯನ, ಹಾಗೂ ತಪಶ್ಚರಣ, [ಎಂಬ ಕರ್ಮವನ್ನೂ;]

ಅಂದರೆ, ವನವಾಸಿಗಳ ಹಿತಕ್ಕಾಗಿ [ಯಾವ ಕರ್ಮ ಮಾಡಬೇಕೋ, ಅದನ್ನೂ;]

ಸಭಾಸಂಬಂಧೇ ಯಚ್ಛ್ರೇಷ್ಠಂ ;

ಸಭೆಯ ವಿಷಯದಲ್ಲಿ ಯಾವುದು ಶ್ರೇಷ್ಠವೋ, [ಆ ಕರ್ಮವನ್ನೂ;]

ಅಂದರೆ, ಸಭೆಯ ಮಧ್ಯೆ ಸತ್ಯವಿಚಾರವನ್ನು ಮಾಡುವುದಕ್ಕಾಗಿಯೂ, ಹಾಗೂ ತಮ್ಮ ಸಾಮರ್ಥ್ಯದಿಂದ ಜಗತ್ತಿಗೆ ಸುಖವನ್ನು ಕೊಡುವುದಕ್ಕಾಗಿಯೂ ;

ಇಂದ್ರಿಯೇ ಮಾನಸವ್ಯವಹಾರೇ ಚ ;

ಮತ್ತು **ಇಂದ್ರಿಯ**, ಎಂದರೆ ಮಾನಸಿಕ ವ್ಯವಹಾರದಲ್ಲಿಯೂ ಕೂಡ ;

ಅಂದರೆ, ಜಿತೇಂದ್ರಿಯತ್ವದಿಂದ [ಹೇಗೆ] ಜ್ಞಾನದ ವೃದ್ಧಿಯನ್ನು ಮಾಡಿಕೊಳ್ಳಬೇಕೋ, ಹಾಗೂ ;

ಯದುತ್ತಮಂ ಕರ್ಮ ಚ ಕುರ್ಮಸ್ತತ್ ಸರ್ವಮೀಶ್ವರಮೋಕ್ಷಪ್ರಾಪ್ತ್ಯರ್ಥಮಸ್ತು.

ಮತ್ತು ಯಾವ ಉತ್ತಮವಾದ ಕರ್ಮವನ್ನು ನಾವು ಮಾಡುತ್ತೇವೋ, ಅವೆಲ್ಲವೂ ಈಶ್ವರನ, ಹಾಗೂ ಮೋಕ್ಷದ ಪ್ರಾಪ್ತಿಯ ಸಲುವಾಗಿ ಆಗಲಿ!

---

* '(೨೦) ವಿವಾಹ' ಪುಟ ೬೧೫ - ೬೨೧
'(೨೧) ನಿಯೋಗ' ಪುಟ ೬೨೨ - ೬೩೮ _ಅನು.

ಅಂದರೆ, ಅಂತಹ ಅಂತಹ ಎಲ್ಲಾ ಕೆಲಸಗಳನ್ನೂ ತಮ್ಮ ಪೂರ್ಣ ಪುರುಷಾರ್ಥದೊಡನೆ ಯಥಾವತ್ತಾಗಿ ಮಾಡಬೇಕು!

ಯಚ್ಚ ಭ್ರಮೇಣೈನಃ ಪಾಪಂ ಕೃತಂ ;

ಮತ್ತು ಭ್ರಾಂತಿಯಿಂದ ಯಾವ ಪಾಪವು ಮಾಡಲ್ಪಟ್ಟಿದೆಯೋ ;

ತತ್ ಸರ್ವಮಿದಂ ಪಾಪಮವಯಜಾಮಹ ಆಶ್ರಮಾನುಷ್ಠಾನೇನ ನಾಶಯಾಮಃ ॥ ೯ ॥

ಅದು-ಇದು, ಎಲ್ಲ ಪಾಪವನ್ನೂ ದೂರ ಮಾಡಿ ಬಿಡೋಣ! ಎಂದರೆ ಆಶ್ರಮಗಳ ಅನುಷ್ಠಾನದಿಂದ ನಾಶ ಮಾಡುತ್ತೇವೆ!

ಅಂದರೆ, ಪಾಪ ಮಾಡುವ ಬುದ್ಧಿಯನ್ನು ನಾವು ಮನಸ್ಸು, ವಚನ, ಮತ್ತು ಕರ್ಮದಿಂದ ತ್ಯಜಿಸಿ, ಸರ್ವಥಾ ಎಲ್ಲರ ಹಿತಕಾರಿಗಳಾಗೋಣ! [೯]

ಗೃಹಸ್ಥಾಶ್ರಮದಿಂದ ಸತ್ಯವ್ಯವಹಾರದ ಪ್ರತಿಪಾದನೆ

(ದೇಹಿ ಮೇ.) ಪರಮೇಶ್ವರ ಆಜ್ಞಾಪಯತಿ_

(ದೇಹಿ ಮೇ ದದಾನಿ ತೇ) ಪರಮೇಶ್ವರನು ಉಪದೇಶ ಮಾಡುತ್ತಾನೇನೆಂದರೆ_

ಅಂದರೆ, ಸಾಮಾಜಿಕನಿಯಮಗಳ ವ್ಯವಸ್ಥೆಗೆ ಅನುಸಾರವಾಗಿ, ಯಾವ ಯಥಾವತ್ತಾದ ನಡವಳಿಕೆಯು ಇದೆಯೋ, ಅದೇ ಗೃಹಸ್ಥನ ಪರಮ ಉನ್ನತಿಯ ಕಾರಣವಾಗಿರುತ್ತದೆ.

ಹೇ ಜೀವ!

ಎಲೈ ಜೀವಾತ್ಮನೇ!

ತ್ವಮೇವಂ ವದ_

ನೀನು ಹೀಗೆ ಹೇಳು_

ಮೇ ಮಹ್ಯಂ ದೇಹಿ ; ಮತ್ಸುಖಾರ್ಥಂ ವಿದ್ಯಾಂ ದ್ರವ್ಯಾದಿಕಂ ಚ ತ್ವಂ ದೇಹಿ.

'ನನಗೆ ಕೊಡಿ ; ಎಂದರೆ, ನನ್ನ ಸುಖಕ್ಕಾಗಿ ವಿದ್ಯೆಯನ್ನೂ ಮತ್ತು ಪದಾರ್ಥಗಳನ್ನೂ ನೀವು ನನಗೆ ಕೊಡಿ!

ಅಹಮಪಿ ತೇ ತುಭ್ಯಂ ದದಾಮಿ.

'ನಾನೂ ಕೂಡ, ನಿಮಗೆ ಕೊಡುತ್ತೇನೆ!'

ಅಂದರೆ, ಯಾವ ವಸ್ತುವನ್ನಾದರೂ ಯಾರಿಂದ ಲಾದರೂ ತೆಗೆದುಕೊಂಡರೂ, ಅಥವಾ [ಯಾರಿಗಾ ದರೂ] ಕೊಟ್ಟರೂ ಕೂಡ, ಅದನ್ನು ಸತ್ಯವ್ಯವಹಾರದ ಮೂಲಕವಾಗಿಯೇ ಮಾಡಬೇಕು!

ಮೇ ಮಹ್ಯಂ ಮದರ್ಥಂ ತ್ವಮುತ್ತಮಸ್ವಭಾವ-ದಾನಮುದಾರತಾಂ ಸುಶೀಲತಾಂ ಚ ಧೇಹಿ ಧಾರಯ.

'(ನಿ ಮೇ ಧೇಹಿ ನಿ ತೇ ದಧೇ) ನನ್ನ ಪ್ರಯೋಜನಕ್ಕಾಗಿ ನೀವು ಉತ್ತಮ ಸ್ವಭಾವದ ದಾನವನ್ನೂ, ಎಂದರೆ ಉದಾರತೆಯನ್ನೂ, ಹಾಗೂ ಸುಶೀಲತ್ವವನ್ನೂ ನನಗೆ ಧಾರಣೆ ಮಾಡಿಸಿ!

ತೇ ತುಭ್ಯಂ ತ್ವದರ್ಥಮಹಮಪ್ಯೇವಂ ಚ ದಧೇ.

'ನಾನು ನಿಮ್ಮ ಪ್ರಯೋಜನಕ್ಕಾಗಿಯೂ ಕೂಡ, ಹೀಗೆಯೇ ಧಾರಣೆ ಮಾಡಿಸುತ್ತೇನೆ!'

'ಅಂದರೆ, ನಾನು ನಿಮ್ಮೊಡನೆ ಈ ಕಾರ್ಯವನ್ನು ಮಾಡುವೆನು. ಮತ್ತು ನೀವೂ ಕೂಡ, ನನ್ನೊಡನೆ ಹಾಗೆಯೇ ಮಾಡಬೇಕು, ಎಂಬಂತಹ ವ್ಯವಹಾರವನ್ನೂ ಕೂಡ, ಸತ್ಯತ್ವದಿಂದ ಮಾಡಬೇಕು!

ತಥೈವ ಧರ್ಮವ್ಯವಹಾರಂ ಕ್ರಯದಾನಾ-ದಾನಾಖ್ಯಂ ಚ ಹರಾಸಿ ಪ್ರಯಚ್ಛ.

'(ನಿಹಾರಂ ಚ ಹರಾಸಿ ಮೇ ನಿ.) ಹಾಗೆಯೇ, ಧರ್ಮದ ವ್ಯವಹಾರವನ್ನೂ, ಎಂದರೆ ಕೊಳ್ಳುವುದು ಮತ್ತು ಕೊಡುವುದು, ಹಾಗೂ ತೆಗೆದುಕೊಳ್ಳುವುದನ್ನೂ ಕೂಡ, ಕೊಡಿ!

ತಥೈವಾಹಮಪಿ ತೇ ತುಭ್ಯಂ ತ್ವದರ್ಥಂ ನಿಹರಾಣಿ ನಿತ್ಯಂ ಪ್ರಯಚ್ಛಾನಿ ದದಾನಿ.

'ಹಾಗೆಯೇ ನಾನೂ ಕೂಡ, ನಿಮ್ಮ ಪ್ರಯೋಜನಕ್ಕಾಗಿ ನಿತ್ಯವೂ ಕೊಡಲಿ!

'ಅಂದರೆ, ಈ ವಸ್ತುವನ್ನು ನನಗಾಗಿ ನೀವು ಕೊಡಿ, ಅಥವಾ ನಿಮಗೆ ನಾನು ಕೊಡುವೆನು, ಎಂಬಂತಹ [ವ್ಯವಹಾರ]ವನ್ನೂ ಕೂಡ, ಸರಿ ಸರಿಯಾಗಿ ಪೂರೈಸಬೇಕು! ಎಂದರೆ, **ಯಾವ ರೀತಿಯ ಮಿಥ್ಯಾವ್ಯವಹಾರವನ್ನೂ ಯಾರೊಡನೆಯೂ ಮಾಡಕೂಡದು!**'

ಸ್ವಾಹೇತಿ_

'ಸ್ವಾಹಾ', ಎಂದರೆ_

ಸತ್ಯಭಾಷಣಂ ;

ಸತ್ಯದ ಮಾತನ್ನಾಡುವುದು ;

ಸತ್ಯಮಾನಂ ;

ಸತ್ಯವನ್ನು ಮನ್ನಿಸುವುದು ;

ಸತ್ಯಾಚರಣಂ ;

ಸತ್ಯದ ಆಚರಣೆ ;

ಸತ್ಯವಚನಶ್ರವಣಂ ಚ ;

ಮತ್ತು ಸತ್ಯದ ಮಾತನ್ನು ಆಲಿಸುವುದು_

ಸರ್ವೇ ವಯಂ ಮಿಲಿತ್ವಾ ಕುರ್ಯಾಮೇತಿ ;

ಇವೆಲ್ಲವನ್ನೂ ನಾವೆಲ್ಲರೂ ಕೂಡಿಯೇ ಆಚರಿಸುತ್ತೇವೆ, ಎಂದರ್ಥ!

ಸತ್ಯೇನೈವ ಸರ್ವಂ ವ್ಯವಹಾರಂ ಕುರ್ಯ್ಯುಃ ॥ ೧೦ ॥

[ಆದುದರಿಂದ,] ಸತ್ಯದಿಂದಲೇ ಎಲ್ಲಾ ವ್ಯವಹಾರವನ್ನೂ ಎಲ್ಲರೂ ಮಾಡಬೇಕು!

ಅಂದರೆ, ಮೇಲಿನ ರೀತಿಯಿಂದ, ಗೃಹಸ್ಥಜನರ ವ್ಯವಹಾರಗಳೆಲ್ಲವೂ ಸಿದ್ಧವಾಗುತ್ತವೆ. ಏಕೆಂದರೆ, ಯಾವ ಗೃಹಸ್ಥರು ವಿಚಾರಪೂರ್ವಕವಾಗಿ ಎಲ್ಲರ ಹಿತಕಾರಿಯಾದ ಕಾರ್ಯಗಳನ್ನು ಮಾಡುತ್ತಾರೋ, ಅವರ ಉನ್ನತಿಯು ಯಾವಾಗಲೂ ಆಗುತ್ತದೆ! [೧೦]

ಗೃಹಸ್ಥಾಶ್ರಮಕ್ಕೆ ಹೆದರಬಾರದು!

(ಗೃಹಾ.) ಹೇ ಗೃಹಾಶ್ರಮಮಿಚ್ಛಂತೋ ಮನುಷ್ಯಾಃ!

ಸ್ವಯಂವರಂ ವಿವಾಹಂ ಕೃತ್ವಾ ಯೂಯಂ ಗೃಹಾಣಿ ಪ್ರಾಪ್ನುತ.

ಗೃಹಾಶ್ರಮಾನುಷ್ಠಾನೇ (ಮಾ ಬಿಭೀತ) ಭಯಂ ಮಾ ಪ್ರಾಪ್ನುತ.

ತಥಾ (ಮಾ ವೇಪಧ್ವಮ್) ಮಾ ಕಂಪಧ್ವಮ್.

(ಊರ್ಜಂ ಬಿಭ್ರತ ಏಮಸಿ) ಊರ್ಜಂ ಬಲಂ ಪರಾಕ್ರಮಂ ಚ ಬಿಭ್ರತಃ ಪದಾರ್ಥಾನೇಮಸಿ ವಯಂ ಪ್ರಾಪ್ನುಮ ಇತೀಚ್ಛತ.

(ಊರ್ಜಂ ಬಿಭ್ರದ್ವಃ) ವೋ ಯುಷ್ಮಾಕಂ ಮಧ್ಯೇಽಹಮೂರ್ಜಂ ಬಿಭ್ರನ್ ಸನ್;

(ಸುಮನಾಃ) ಶುದ್ಧಮನಾಃ;

(ಸುಮೇಧಾಃ) ಉತ್ತಮಬುದ್ಧಿಯುಕ್ತಃ;

(ಮನಸಾ ಮೋದಮಾನಃ) ಪ್ರಾಪ್ತಾನಂದಃ;

(ಗೃಹಾನೈಮಿ) ಗೃಹಾಣಿ ಪ್ರಾಪ್ನೋಮಿ ॥ ೧೧ ॥

(ಗೃಹಾ.) ಎಲೈ ಗೃಹಾಶ್ರಮವನ್ನು ಇಚ್ಛಿಸುತ್ತಿರುವ ಮನುಷ್ಯರೇ!

ಸ್ವಯಂವರ, (ಎಂದರೆ, ನಿಮ್ಮ ಇಚ್ಛೆಗೆ ಅನುಕೂಲ ವಾಗಿ) ವಿವಾಹವನ್ನು ಮಾಡಿಕೊಂಡು, ನೀವುಗಳು ಗೃಹಾಶ್ರಮವನ್ನು ಹೊಂದಿರಿ!

ಗೃಹಾಶ್ರಮಾನುಷ್ಠಾನದಲ್ಲಿ [ಅದಕ್ಕೆ] (ಮಾ ಬಿಭೀತ) ಭಯ ಪಡಬೇಡಿರಿ!

ಮತ್ತು (ಮಾ ವೇಪಧ್ವಮ್) ಕಂಪಿಸಬೇಡಿರಿ!

(ಊರ್ಜಂ ಬಿಭ್ರತ ಏಮಸಿ) ಊರ್ಜ, ಎಂದರೆ ಬಲವನ್ನೂ ಮತ್ತು ಪರಾಕ್ರಮವನ್ನೂ ಧಾರಣೆ ಮಾಡಿ ಕೊಂಡಿರುವ ಪದಾರ್ಥಗಳನ್ನು ನಾವು ಪಡೆಯಲಿ, ಎಂದು ಇಚ್ಛೆ ಮಾಡಿರಿ!

ಅಂದರೆ, ಅದರಿಂದ ಬಲ-ಪರಾಕ್ರಮಕಾರಕವಾದ ಪದಾರ್ಥಗಳನ್ನು ಹೊಂದುವ ಇಚ್ಛೆ ಮಾಡಿರಿ!

ಮತ್ತು ಗೃಹಾಶ್ರಮದಲ್ಲಿರುವ ಸ್ತ್ರೀ-ಪುರುಷರಿಗೆ ಹೇಳಬೇಕೇನೆಂದರೆ_

(ಊರ್ಜಂ ಬಿಭ್ರದ್ವಃ) ನಿಮ್ಮ ಮಧ್ಯೆ ನಾನು ಬಲವನ್ನು ಧಾರಣೆ ಮಾಡಿಕೊಂಡಿರುತ್ತಾ ಇದ್ದು;

(ಸುಮನಾಃ) ಶುದ್ಧ ಮನಸ್ಸಿನವನೂ;

(ಸುಮೇಧಾಃ) ಉತ್ತಮಬುದ್ಧಿಯಿಂದ ಕೂಡಿದವನೂ;

(ಮನಸಾ ಮೋದಮಾನಃ) ಮನಸ್ಸಿನಿಂದ ಆನಂದವನ್ನು ಪ್ರಾಪ್ತ ಮಾಡಿಕೊಂಡಿರುವವನೂ ಆಗಿ;

(ಗೃಹಾನೈಮಿ) ಗೃಹಾಶ್ರಮವನ್ನು ಹೊಂದುತ್ತೇನೆ!

ಅಂದರೆ, 'ಪರಮಾತ್ಮನ ಕೃಪೆಯಿಂದ ಪರಾಕ್ರಮ, ಶುದ್ಧ ಮನಸ್ಸು, ಉತ್ತಮ ಬುದ್ಧಿ ಮತ್ತು ಆನಂದವನ್ನು ಪ್ರಾಪ್ತಮಾಡಿಕೊಂಡು, ನಾನು ನಿಮ್ಮ ಮಧ್ಯೆ ಗೃಹಾಶ್ರಮ ವನ್ನು ಆಚರಿಸುವೆನು', ಎಂದು ಗೃಹಸ್ಥಾಶ್ರಮಿಜನರಿಗೆ ಹೇಳಬೇಕು! [೧೧]

ಗೃಹಸ್ಥಾಶ್ರಮಿಗಳಿಂದಲೇ ಬಂಧು-ಮಿತ್ರಾದಿಗಳ ಸತ್ಕಾರ

(ಯೇಷಾಮಧ್ಯೇತಿ ಪ್ರ.) ಯೇಷು ಗೃಹೇಷು ಪ್ರವಸತೋ ಮನುಷ್ಯಸ್ಯ ;

(ಯೇಷಾಮಧ್ಯೇತಿ ಪ್ರ.) ಯಾವ ಗೃಹಾಶ್ರಮದಲ್ಲಿ ವಾಸ ಮಾಡುತ್ತಿರುವ ಮನುಷ್ಯನಿಗೆ ;

(ಬಹುಃ) ಅಧಿಕಃ (ಸೌಮನಸಃ) ಆನಂದೋ ಭವತಿ ;

(ಬಹುಃ) ಬಹಳವಾಗಿ (ಸೌಮನಸಃ) ಆನಂದ ಉಂಟಾಗುತ್ತದೋ;

ತತ್ರ ಪ್ರವಸನ್ ಯೇಷಾಂ ಯಾನ್ ಪದಾರ್ಥಾನ್ ಸುಖಕಾರಕಾನ್ ಸ (ಅಧ್ಯೇತಿ) ಸ್ಮರತಿ ;

ಮತ್ತು ಅದರಲ್ಲಿ ವಾಸ ಮಾಡುತ್ತಾ, ಯಾವ ಸುಖಕಾರಕ ಪದಾರ್ಥಗಳನ್ನು ಅವನು (ಅಧ್ಯೇತಿ) ಸ್ಮರಿಸುತ್ತಾನೋ ;

(ಗೃಹಾನುಪಹ್ವಯಾಮಹೇ) ವಯಂ ಗೃಹೇಷು ವಿವಾಹಾದಿಷು ಸತ್ಕಾರಾರ್ಥಂ ;

(ಗೃಹಾನುಪಹ್ವಯಾಮಹೇ) ನಾವು ಆ ಗೃಹಾಶ್ರಮದಲ್ಲಿ, ವಿವಾಹವೇ ಮೊದಲಾದುವುಗಳಲ್ಲಿ ಸತ್ಕಾರ ಮಾಡುವುದಕ್ಕಾಗಿ ;

ತಾನ್ ಗೃಹಸಂಬಂಧಿನಃ ಸಖಿಬಂಧ್ವಾ-ಚಾರ್ಯ್ಯಾದೀನ್ ನಿಮಂತ್ರಯಾಮಹೇ.

ಆ ಗೃಹಸಂಬಂಧಿಗಳಿಗೂ, ಎಂದರೆ ಮಿತ್ರರಿಗೂ, ಬಂಧುಗಳಿಗೂ, ಆಚಾರ್ಯ ಮೊದಲಾದವರಿಗೂ ನಿಮಂತ್ರಣವನ್ನು ಕೊಡುತ್ತೇವೆ!

(ತೇ ನಃ) ವಿವಾಹನಿಯಮೇಷು ಕೃತಪ್ರತಿಜ್ಞಾನ್ ಅಸ್ಮಾನ್ ;

(ತೇ ನಃ) ವಿವಾಹನಿಯಮಗಳಲ್ಲಿ ಪ್ರತಿಜ್ಞೆ ಮಾಡಿರುವ ನಮ್ಮನ್ನು ;

(ಜಾನತಃ) ಪ್ರೌಢಜ್ಞಾನಾನ್, ಯುವಾವಸ್ಥಾಸ್ಥಾನ್ ಸ್ವೇಚ್ಛಯಾ ಕೃತವಿವಾಹಾನ್ ;

(ಜಾನತಃ) ಪ್ರೌಢಬುದ್ಧಿಯುನ್ನುಳ್ಳವರೆಂದೂ, ಯುವಾವಸ್ಥೆಯಲ್ಲಿರುವವರೆಂದೂ, ಸ್ವಯಂವರದ ಮೂಲಕ ವಿವಾಹವನ್ನು ಮಾಡಿಕೊಂಡಿರುವವರೆಂದೂ;

ತೇ (ಜಾನಂತು) ಅಸ್ಮಾಕಂ ಸಾಕ್ಷಿಣಃ ಸಂತ್ವಿತಿ ॥೧೨॥

ಅವರು (ಜಾನಂತು) ತಿಳಿಯಲಿ, ಎಂದರೆ ನಮ್ಮ ಸಾಕ್ಷಿಗಳಾಗಲಿ!

ಅಂದರೆ, ಯಾವ ಮನೆಗಳಲ್ಲಿ ವಾಸಮಾಡು ತ್ತಿರುವ ಜನರಿಗೆ ಬಹಳ ಆನಂದ ಉಂಟಾಗುತ್ತದೋ, ಅವುಗಳಲ್ಲಿ ಆ ಜನರು ತಮ್ಮ ಸಂಬಂಧಿಗಳ, ಮಿತ್ರರ, ಬಂಧುಗಳ ಮತ್ತು ಆಚಾರ್ಯರೇ ಮೊದಲಾದವರ ಸ್ಮರಣೆ ಮಾಡುತ್ತಾರೆ.

ಮತ್ತು ಆ ಜನರನ್ನೇ ವಿವಾಹವೇ ಮೊದಲಾದ ಶುಭಕಾರ್ಯಗಳಲ್ಲಿ ಸತ್ಕಾರಪೂರ್ವಕವಾಗಿ ಕರೆದು, ಅವರಿಂದ ಅಪೇಕ್ಷಿಸುತ್ತಾರೇನೆಂದರೆ_

ಇವರೆಲ್ಲರೂ ನಮ್ಮೆಲ್ಲರನ್ನೂ ಯುವಾವಸ್ಥೆಯಿಂದ ಕೂಡಿರುವವರೆಂದೂ, ಮತ್ತು ವಿವಾಹವೇ ಮೊದಲಾದ ನಿಯಮಗಳಲ್ಲಿಯೂ ಕೂಡ, ಸರಿ-ಸರಿಯಾಗಿ ಪ್ರತಿಜ್ಞೆ ಮಾಡಿರುವವರೆಂದೂ ತಿಳಿಯಲಿ, ಎಂದರೆ ನಮ್ಮ ಸಾಕ್ಷಿಗಳಾಗಿರಲಿ! [೧೨]

ಗೃಹಸ್ಥಾಶ್ರಮದಿಂದಲೇ ಅನೇಕ ಭೋಗಗಳ ಪ್ರಾಪ್ತಿ!

(ಉಪಹೂತಾ ಇಹ.) ಹೇ ಪರಮೇಶ್ವರ! ಭವತ್ಕೃಪಯಾ ಇಹಾಸ್ಮಿನ್ ಗೃಹಾಶ್ರಮೇ ;

ಗಾವಃ ಪಶುಪೃಥಿವೀಂದ್ರಿಯವಿದ್ಯಾಪ್ರಕಾಶಾಹ್ಲಾದಾದಯ ಉಪಹೂತಾ ಅರ್ಥಾತ್ ಸಮ್ಯಕ್ ಪ್ರಾಪ್ತಾ ಭವಂತು.

ತಥಾ (ಅಜಾವಯಃ) ಉಪಹೂತಾ ಅಸ್ಮದನುಕೂಲಾ ಭವಂತು.

(ಅಥೋ ಅನ್ನಸ್ಯ ಕೀ.) ಅಥೋ ಇತಿ ಪೂರ್ವೋಕ್ತಪದಾರ್ಥಪ್ರಾಪ್ತ್ಯನಂತರಂ ;

ನೋಽಸ್ಮಾಕಂ ಗೃಹೇಷ್ವನ್ನಸ್ಯ ಭೋಕ್ತವ್ಯಪದಾರ್ಥಸಮೂಹಸ್ಯ ಕೀಲಾಲೋ ವಿಶೇಷೇಣೋತ್ತಮರಸ ;

ಉಪಹೂತಃ ಸಮ್ಯಕ್ ಪ್ರಾಪ್ತೋ ಭವತು.

(ಉಪಹೂತಾ ಇಹ.) ಓ ಪರಮೇಶ್ವರ! ನಿಮ್ಮ ಕೃಪೆಯಿಂದ, 'ಇಹ', ಎಂದರೆ, ಈ ಗೃಹಾಶ್ರಮದಲ್ಲಿ;

'ಗಾವಃ', ಎಂದರೆ, ಪಶು, ಪೃಥಿವೀ, ಇಂದ್ರಿಯ, ವಿದ್ಯೆ, ಪ್ರಕಾಶ, ಆಹ್ಲಾದ ಮೊದಲಾದುವು 'ಉಪ- ಹೂತಾಃ', ಎಂದರೆ ಚೆನ್ನಾಗಿ ಪ್ರಾಪ್ತವಾಗಲಿ!

ಮತ್ತು (ಅಜಾವಯಃ) ಮೇಕೆಗಳು, ಕುರಿಗಳು ನಮಗೆ ಅನುಕೂಲವಾಗಿರಲಿ!

ಅಂದರೆ, ನಮಗೆ ಗೃಹಾಶ್ರಮದಲ್ಲಿ **ಪಶು, ಭೂಮಿ, ಇಂದ್ರಿಯ, ವಿದ್ಯೆ, ಪ್ರಕಾಶ, ಆನಂದ, ಮೇಕೆಗಳು ಮತ್ತು ಕುರಿಗಳು** ಮೊದಲಾದ ಪದಾರ್ಥಗಳು ಉತ್ತಮ ರೀತಿಯಲ್ಲಿ ಸಿಕ್ಕಲಿ!

(ಅಥೋ ಅನ್ನಸ್ಯ ಕೀ.) 'ಅಥೋ', ಎಂದರೆ ಮೇಲೆ ಹೇಳಿದ ಪದಾರ್ಥಗಳ ಪ್ರಾಪ್ತಿಯಾದ ನಂತರ ;

(ನಃ) ನಮ್ಮ (ಗೃಹೇಷು) ಮನೆಗಳಲ್ಲಿ (ಅನ್ನಸ್ಯ) ಭೋಗಿಸಲು ಯೋಗ್ಯವಾದ ಪದಾರ್ಥಸಮೂಹದ (ಕೀಲಾಲಃ) ವಿಶೇಷವೂ, ಉತ್ತಮವೂ ಆದ ರಸವು ;

(ಉಪಹೂತಃ) ಒಳ್ಳೆಯ ರೀತಿಯಲ್ಲಿ ಪ್ರಾಪ್ತವಾಗಲಿ!

ಅಂದರೆ, ನಮ್ಮ ಮನೆಗಳಲ್ಲಿ ಉತ್ತಮ ರಸದಿಂದ ಕೂಡಿದ ತಿನ್ನಲು-ಕುಡಿಯಲು ಯೋಗ್ಯವಾದ ಪದಾರ್ಥಗಳು ಯಾವಾಗಲೂ ಇರಲಿ!

(ಕ್ಷೇಮಾಯ ವಃ ಶಾಂತ್ಯೈ.) ವೋ ಯುಷ್ಮಾನ್;

(ಕ್ಷೇಮಾಯ ವಃ ಶಾಂತ್ಯೈ.) **'ವಃ'**, ಎಂದರೆ, ನಿಮಗಾಗಿ ;

ಅತ್ರ ಪುರುಷವ್ಯತ್ಯಯೋಽಸ್ತಿ _ ತಾನ್;

ಇಲ್ಲಿ ಪುರುಷವ್ಯತ್ಯಯವು ಇರುವುದರಿಂದ, **'ತಾನ್'**, ಎಂದರೆ **'ಆ'**, [ಎಂದು ಅರ್ಥ ಮಾಡಬೇಕು.]

ಪೂರ್ವೋಕ್ತಾನ್ ಪ್ರತ್ಯಕ್ಷಾನ್ ಪದಾರ್ಥಾನ್ ;

ಮೊದಲು ಹೇಳಿದ ಪ್ರತ್ಯಕ್ಷಸಿದ್ಧವಾದ ಪದಾರ್ಥಗಳನ್ನು ;

ಕ್ಷೇಮಾಯ ರಕ್ಷಣಾಯ ;

(ಕ್ಷೇಮಾಯ) ರಕ್ಷಣೆಗಾಗಿಯೂ ;

ಶಾಂತ್ಯೈ ಸುಖಾಯ ;

(ಶಾಂತ್ಯೈ) ಸುಖಕ್ಕಾಗಿಯೂ ;

ಪ್ರಪದ್ಯೇ ಪ್ರಾಪ್ನೋಮಿ.

(ಪ್ರಪದ್ಯೇ) ಪಡೆದುಕೊಳ್ಳುತ್ತೇನೆ!

ಅಂದರೆ, ನಾವು ಆ ಪದಾರ್ಥಗಳನ್ನು ಅವುಗಳ ರಕ್ಷಣೆಗಾಗಿಯೂ ಮತ್ತು ನಮ್ಮ ಸುಖಕ್ಕಾಗಿಯೂ ಪ್ರಾಪ್ತ ಮಾಡಿಕೊಳ್ಳಬೇಕು!

ತತ್ಪ್ರಾಪ್ತ್ಯಾ (ಶಿವಮ್) ನಿಶ್ಶ್ರೇಯಸಂ ಕಲ್ಯಾಣಂ ಪಾರಮಾರ್ಥಿಕಂ ಸುಖಂ ;

ಅದರ ಪ್ರಾಪ್ತಿಯಿಂದ **(ಶಿವಮ್)** **'ನಿಃಶ್ರೇಯಸ'**, ಎಂದರೆ ಕಲ್ಯಾಣರೂಪವಾದ ಪಾರಮಾರ್ಥಿಕ ಸುಖವನ್ನೂ ;

(ಶಗ್ಮಮ್) ಸಾಂಸಾರಿಕಮಾಭ್ಯುದಯಿಕಂ ಸುಖಂ ಚ ಪ್ರಾಪ್ನುಯಾಮ್.

(ಶಗ್ಮಮ್) ಮತ್ತು [**ಭೌತಿಕ**]ಅಭಿವೃದ್ಧಿಯಿಂದ ಕೂಡಿದ ಜಗತ್ತಿನ ಸುಖವನ್ನೂ ಕೂಡ, ನಾನು ಪಡೆದುಕೊಳ್ಳಲಿ!

ಅಂದರೆ, [ಮೇಲೆ ಹೇಳಿದ] ಆ ಪದಾರ್ಥಗಳ ಪ್ರಾಪ್ತಿಯಿಂದ, ನಮಗೆ ಪರಮಾರ್ಥದ, ಹಾಗೂ ಜಗತ್ತಿನ ಸುಖವು ದೊರಕಲಿ!

(ಶಂಯೋಃ.) 'ಶಮಿತಿ ನಿಘಂಟೌ ಪದನಾಮಾಸ್ತಿ.' *

(ಶಂಯೋಃ ಶಂಯೋಃ) **'ಶಮ್'**, ಎಂಬುದು 'ನಿಘಂಟು'ವಿನಲ್ಲಿ ಪದದ ಹೆಸರಾಗಿದೆ.*

ಅಂದರೆ, **'ಶಮ್'**, ಎಂಬುದು ನಿಘಂಟುವಿನಲ್ಲಿ **'ಪ್ರತಿಷ್ಠೆ'**, ಎಂದರೆ ಸಾಂಸಾರಿಕಸುಖದ ಹೆಸರಾಗಿದೆ.

---

* ನಿಘಂಟೌ (೪. ೧) 'ಶಂಯೋಃ' ಪದನಾಮಸು ಪಠಿತಮ್. ತಚ್ಚ 'ಶಂಯುಃ ಸುಖಂಯುಃ' ಇತ್ಯೇವಂ ಯಾಸ್ಕೇನ (ನಿಘಂಟೌ ೪. ೨೯) ವ್ಯಾಖ್ಯಾತಮ್. ತೇನ 'ಶಂಯು'ಪದಾಂತರ್ಗತಮಪಿ 'ಶಮ್'ಪದಂ ಸುಖಾರ್ಥಸ್ಯೈವ ವಾಚಕಮ್. ದ್ವಿರಾವೃತ್ತ್ಯಾ ಚ ದ್ವಿವಿಧಂ ಸಾಂಸಾರಿಕಂ ಪಾರಮಾರ್ಥಿಕಂ ಚ ಸುಖಂ ಬ್ರವೀತಿ ಇತಿ ಗ್ರಂಥಕಾರಸ್ಯಾಶಯಃ _ ಯು. ಮೀ.

* ನಿಘಂಟುವಿನಲ್ಲಿ (೪. ೧) 'ಶಂಯೋಃ', ಎಂಬುದನ್ನು ಪದದ ಹೆಸರುಗಳಲ್ಲಿ ಹೇಳಲಾಗಿದೆ. ಅದನ್ನು 'ಶಂಯುಃ ಸುಖಂಯುಃ', ಎಂದೇ ಯಾಸ್ಕರು (ನಿಘಂಟು ೪. ೨೯) ವ್ಯಾಖ್ಯಾನ ಮಾಡಿದ್ದಾರೆ. ಹೀಗೆ, 'ಶಂಯು' ಪದವಾಗಿದ್ದರೂ ಕೂಡ, 'ಶಮ್' ಸುಖ, ಎಂಬ ಅರ್ಥವನ್ನು ಕೊಡುತ್ತದೆ. ಅದನ್ನು ಎರಡು ಸಲ ಹೇಳಿರುವುದರಿಂದ, ಸಾಂಸಾರಿಕ ಮತ್ತು ಪಾರಮಾರ್ಥಿಕ, ಎಂಬ ಎರಡೂ ಸುಖಗಳನ್ನು ಅದು ತೋರಿಸುತ್ತದೆ, ಎಂಬುದು ಗ್ರಂಥಕರ್ತರ ಅಭಿಪ್ರಾಯ.
_ ಯು. ಮೀ.

ಪರೋಪಕಾರಾಯ ಗೃಹಾಶ್ರಮೇ ಸ್ಥಿತ್ವಾ ಪೂರ್ವೋಕ್ತಸ್ಯ ದ್ವಿವಿಧಸ್ಯ ಸುಖಸ್ಯೋನ್ನತಿಂ ಕುರ್ಮಃ ॥ ೧೩ ॥

ನಾವು ಪರೋಪಕಾರಕ್ಕಾಗಿ, ಗೃಹಾಶ್ರಮದಲ್ಲಿ ಇದ್ದುಕೊಂಡು, ಮೊದಲು ಹೇಳಿದ ದ್ವಿವಿಧಸುಖದ ಉನ್ನತಿಯನ್ನು ಮಾಡುತ್ತೇವೆ! [೧೩]

ಇತಿ ಗೃಹಾಶ್ರಮವಿಷಯಃ ಸಂಕ್ಷೇಪತಃ ॥

ಇಲ್ಲಿಗೆ ಗೃಹಾಶ್ರಮದ ವಿಷಯವು ಸಂಕ್ಷೇಪವಾಗಿ ಮುಗಿಯಿತು!

ಅಥ ವಾನಪ್ರಸ್ಥವಿಷಯಃ ಸಂಕ್ಷೇಪತಃ

ಈಗ ವಾನಪ್ರಸ್ಥದ ವಿಷಯವನ್ನು ಸಂಕ್ಷೇಪವಾಗಿ ಹೇಳುತ್ತೇವೆ

ವಾನಪ್ರಸ್ಥಾಶ್ರಮದ ಔಪನಿಷದಿಕವರ್ಣನೆ

ಧರ್ಮದ ಮೂರು-ಮೂರು ಅಂಗಗಳು!

"ತ್ರಯೋ ಧರ್ಮಸ್ಕಂಧಾ ಯಜ್ಞೋಽಧ್ಯಯನಂ ದಾನಮಿತಿ ;
ಪ್ರಥಮಸ್ತಪ ಏವ; ದ್ವಿತೀಯೋ ಬ್ರಹ್ಮಚಾರ್ಯ್ಯಾಚಾರ್ಯ್ಯ-
ಕುಲವಾಸೀ; ತೃತೀಯೋಽತ್ಯಂತಮಾತ್ಮಾನಮಾಚಾರ್ಯ್ಯಕುಲೇಽ-
ವಸಾದಯನ್; ಸರ್ವ ಏತೇ ಪುಣ್ಯ ಲೋಕಾ ಭವಂತಿ ॥"

[ಛಾಂದೋಗ್ಯೋಪನಿಷದಿ ಪ್ರಪಾ. ೨, ಖಂ. ೨೩]

[ಅರ್ಥ:_ "ಧರ್ಮದ ಅವಯವಗಳು ಮೂರು_ಯಜ್ಞ, ಅಧ್ಯಯನ ಮತ್ತು ದಾನ! ಮೊದಲನೆಯದು, ತಪಸ್ಸು, ಎಂಬುದೇ! ಎರಡನೆಯದು, ಬ್ರಹ್ಮಚಾರಿಯಾಗಿ ಆಚಾರ್ಯನ [ಗುರು]ಕುಲದ ವಾಸಿಯಾಗಿರುವುದು! ಮೂರನೆಯದು, ಆಚಾರ್ಯನ ಕುಲದಲ್ಲಿ ತನ್ನನ್ನು ಅತ್ಯಂತವಾಗಿ ತೊಡಗಿಸಿಕೊಳ್ಳುವುದು! ಈ ಎಲ್ಲವೂ ಪುಣ್ಯಸ್ಥಾನಗಳಾಗಿರುತ್ತವೆ."

[ಛಾಂದೋಗ್ಯೋಪನಿಷತ್: ೨. ೨೩. ೧]

ಭಾಷ್ಯಮ್_

(ತ್ರಯೋ ಧರ್ಮ.) ಅತ್ರ ಸರ್ವೇಷ್ವಾಶ್ರಮೇಷು ಧರ್ಮಸ್ಯ ಸ್ಕಂಧಾ ಅವಯವಾಸ್ತ್ರಯಃ ಸಂತಿ_

ಅಧ್ಯಯನಂ, ಯಜ್ಞಃ ಕ್ರಿಯಾಕಾಂಡಂ, ದಾನಂ ಚ.

ಭಾಷ್ಯ_

(ತ್ರಯೋ ಧರ್ಮ.) ಈ ವಿಷಯದಲ್ಲಿ ಎಲ್ಲಾ ಆಶ್ರಮಗಳಲ್ಲೂ ಧರ್ಮದ ಅವಯವಗಳು ಮೂರು ಇರುತ್ತವೆ, [ಎಂದು ತಿಳಿಯಬೇಕು]_

(೧) ಅಧ್ಯಯನ, (೨) ಯಜ್ಞ, ಎಂದರೆ ಕ್ರಿಯಾಕಾಂಡ ಮತ್ತು (೩) ದಾನ!

ಅಂದರೆ, ಧರ್ಮದ ಮೂರು ಅಂಗಗಳಿವೆ_

ಒಂದು, **ವಿದ್ಯೆಯ ಅಧ್ಯಯನ**; ಎರಡನೆಯದು, **'ಯಜ್ಞ'**, ಎಂದರೆ ಉತ್ತಮ ಕ್ರಿಯೆಗಳನ್ನು ಮಾಡುವುದು; ಮತ್ತು ಮೂರನೆಯದಾದ **'ದಾನ'**, ಎಂದರೆ ವಿದ್ಯೆ ಮೊದಲಾದ ಉತ್ತಮ ಗುಣಗಳನ್ನು ಕೊಡುವುದು!

ತತ್ರ ಪ್ರಥಮೋ ಬ್ರಹ್ಮಚಾರೀ_

[೧] ಅವುಗಳಲ್ಲಿ ಮೊದಲನೆಯವನಾದ ಬ್ರಹ್ಮಚಾರಿಯು_

ತಪಃಸುಶಿಕ್ಷಾಧರ್ಮಾನುಷ್ಠಾನೇನಾಚಾರ್ಯ್ಯ-ಕುಲೇ ವಸತಿ.

ತಪಸ್ಸು, ಎಂದರೆ ಉತ್ತಮಶಿಕ್ಷಣ, ಧರ್ಮಾನು-ಷ್ಠಾನದಿಂದ, ಆಚಾರ್ಯಕುಲದಲ್ಲಿ ವಾಸ ಮಾಡುತ್ತಾನೆ.

ಅಂದರೆ, ಮೊದಲು **'ತಪಸ್ಸು'**, ಎಂದರೆ, ವೇದೋಕ್ತಧರ್ಮವನ್ನು ಅನುಷ್ಠಾನಪೂರ್ವಕವಾಗಿ ಓದುವುದು; ಎಂದರೆ, ಆಚಾರ್ಯಕುಲದಲ್ಲಿ ವಾಸ ಮಾಡುತ್ತಾ, ವಿದ್ಯೆಯನ್ನು ಕಲಿಯುವುದು;

ಎರಡನೆಯದಾಗಿ, ಅನುಷ್ಠಾನಪೂರ್ವಕವಾಗಿ ವೇದೋಕ್ತಧರ್ಮವನ್ನು ಹೇಳಿ ಕೊಡುವುದು;

ಮತ್ತು ಮೂರನೆಯದಾಗಿ, ಪರಮೇಶ್ವರನ ಯಥಾರ್ಥವಿಚಾರವನ್ನು ಮಾಡಿ, ಎಲ್ಲಾ ವಿದ್ಯೆಗಳನ್ನೂ ತಿಳಿದುಕೊಂಡು ಬಿಡುವುದು!

ಈ ವಿಷಯಗಳಿಂದ, ಎಲ್ಲಾ ರೀತಿಯ ಉನ್ನತಿಯನ್ನು ಹೊಂದುವುದು ಮನುಷ್ಯರ ಧರ್ಮವಾಗಿರುತ್ತದೆ!

ದ್ವಿತೀಯೋ ಗೃಹಾಶ್ರಮೀ!

[೨] ಎರಡನೆಯವನು **ಗೃಹಸ್ಥಾಶ್ರಮಿ**! *

ತೃತೀಯೋಽತ್ಯಂತಮಾತ್ಮಾನಮವಸಾದಯನ್ ;

[೩] ಮೂರನೆಯವನು, ಆತ್ಮನನ್ನು ಅತ್ಯಂತ ವಿಶ್ರಾಂತಗೊಳಿಸಿ;

ಹೃದಯೇ ವಿಚಾರಯನ್ನೇಕಾಂತದೇಶಂ ಪ್ರಾಪ್ಯ ಸತ್ಯಾಸತ್ಯೇ ನಿಶ್ಚಿನುಯಾತ್ ;

ಎಂದರೆ, ಹೃದಯದಲ್ಲಿ** ವಿಚಾರ ಮಾಡುತ್ತಾ, ಏಕಾಂತಸ್ಥಾನವನ್ನು ಸೇರಿ, ಸತ್ಯ ಮತ್ತು ಅಸತ್ಯದ ನಿಶ್ಚಯ ಮಾಡಬೇಕು!

ಸ ವಾನಪ್ರಸ್ಥಾಶ್ರಮೀ.

ಅವನು **'ವಾನಪ್ರಸ್ಥಾಶ್ರಮಿ'** [ಎನಿಸುತ್ತಾನೆ.]

---

* ಗೃಹಸ್ಥಾಶ್ರಮದ ಬಗ್ಗೆ ಹಿಂದೆ ಪರ್ಯಾಪ್ತ ವೈದಿಕಪ್ರಮಾಣಗಳನ್ನು ಕೊಡಲಾಗಿದೆ. _ಅನು.

** ಎಂದರೆ ಮನಸ್ಸಿನಲ್ಲಿ! ಮನಸ್ಸು **'ಹೃತ್‌ಪ್ರತಿಷ್ಠಮ್'** ಆಗಿರುತ್ತದೆ, ಎಂದು **ಯಜುರ್ವೇದ**ದಲ್ಲಿ (೩೪. ೬) ಹೇಳಲಾಗಿದೆ. _ಅನು.

ಏತೇ ಸರ್ವೇ ಬ್ರಹ್ಮಚರ್ಯ್ಯಾದಯಸ್ತ್ರಯ ಆಶ್ರಮಾಃ ಪುಣ್ಯಲೋಕಾಃ ಸುಖನಿವಾಸಾಃ ಸುಖ-ಯುಕ್ತಾ ಭವಂತಿ.

ಈ, ಬ್ರಹ್ಮಚರ್ಯ ಮೊದಲಾದ ಮೂರೂ ಆಶ್ರಮಗಳೆಲ್ಲವೂ ಪುಣ್ಯಲೋಕಗಳು, ಎಂದರೆ ಸುಖ ನಿವಾಸಗಳೂ, ಸುಖದಿಂದ ಕೂಡಿರುವಂತಹವೂ ಆಗಿರುತ್ತವೆ.*

ಪುಣ್ಯಾನುಷ್ಠಾನಾದೇವಾಶ್ರಮಸಂಜ್ಞಾ ಜಾಯತೇ ; ನಾನ್ಯಥೇತಿ.

ಪುಣ್ಯದ ಅನುಷ್ಠಾನವನ್ನು ಮಾಡುವುದರಿಂದಲೇ, 'ಆಶ್ರಮ', ಎಂಬ ಹೆಸರು ಬರುತ್ತದೆ; ಬೇರೆ ರೀತಿಯಲ್ಲಲ್ಲ !

ಇತಿ ವಾನಪ್ರಸ್ಥವಿಷಯಃ ಸಂಕ್ಷೇಪತಃ ॥

ಇಲ್ಲಿಗೆ ವಾನಪ್ರಸ್ಥದ ವಿಷಯವು ಸಂಕ್ಷೇಪವಾಗಿ ಮುಗಿಯಿತು !

ಅಥ ಸಂನ್ಯಾಸಾಶ್ರಮವಿಷಯಃ ಸಂಕ್ಷೇಪತಃ

ಈಗ ಸಂನ್ಯಾಸಾಶ್ರಮದ ವಿಷಯವನ್ನು ಸಂಕ್ಷೇಪವಾಗಿ ಹೇಳುತ್ತೇವೆ.

ಸಂನ್ಯಾಸಾಶ್ರಮದ ಮೂರು ಪಕ್ಷಗಳು

ಬ್ರಹ್ಮಚರ್ಯ್ಯಾಶ್ರಮೇಣ ಗೃಹೀತವಿದ್ಯೋ ಧರ್ಮೇಶ್ವರಾದಿ ಸಮ್ಯಗ್ ನಿಶ್ಚಿತ್ಯ;

ಬ್ರಹ್ಮಚರ್ಯಾಶ್ರಮದ ಮೂಲಕ ವಿದ್ಯೆಯನ್ನು ಗ್ರಹಿಸಿದವನಾಗಿ, ಧರ್ಮ ಮತ್ತು ಈಶ್ವರ ಮೊದಲಾದು ವನ್ನು ಚೆನ್ನಾಗಿ ನಿಶ್ಚಯಿಸಿಕೊಂಡು ;

ಗೃಹಾಶ್ರಮೇಣ ತದನುಷ್ಠಾನಂ ತದ್ವಿಜ್ಞಾನವೃದ್ಧಿಂ ಚ ಕೃತ್ವಾ ;

ಗೃಹಾಶ್ರಮದ ಮೂಲಕ ಅವುಗಳ ಅನುಷ್ಠಾನ ವನ್ನೂ ಮತ್ತು ಅವುಗಳಿಂದ ವಿಜ್ಞಾನದ ವೃದ್ಧಿಯನ್ನೂ ಮಾಡಿಕೊಂಡು ;

ತತೋ ವನಮೇಕಾಂತಂ ಗತ್ವಾ, ಸಮ್ಯಕ್ ಸತ್ಯಾಸತ್ಯವಸ್ತುವ್ಯವಹಾರಾನ್ ನಿಶ್ಚಿತ್ಯ;

ತದನಂತರ, ಏಕಾಂತವನಕ್ಕೆ ಹೋಗಿ, [ಅಲ್ಲಿ] ಚೆನ್ನಾಗಿ ಸತ್ಯ, ಹಾಗೂ ಅಸತ್ಯ ಪದಾರ್ಥಗಳ ವ್ಯವಹಾರಗಳನ್ನು ನಿಶ್ಚಯಿಸಿ[ದ ಮೇಲೆ] ;

---

* ಈ ಭಾಷ್ಯದಿಂದ ತಿಳಿದು ಬರುವುದೇನೆಂದರೆ, ಧರ್ಮದ ಅಂಗಗಳು ಮೂರು_

(೧) ಯಜ್ಞ (೨) ಅಧ್ಯಯನ (೩) ದಾನ

ಅಥವಾ (೧) ತಪಸ್ವಿ (೨) ಬ್ರಹ್ಮಚಾರಿ (೩) ವಾನಪ್ರಸ್ಥ

ಅಥವಾ (೧) ಬ್ರಹ್ಮಚಾರಿ (೨) ಗೃಹಸ್ಥ (೩) ವಾನಪ್ರಸ್ಥ

ಅಥವಾ (೧) ಆಚಾರ್ಯ ಕುಲದಲ್ಲಿ ವೇದವಿದ್ಯೆಯನ್ನು ಓದುವುದು (೨) ವೇದವಿದ್ಯೆಯನ್ನು ಹೇಳಿಕೊಡುವುದು (೩) ಪರಮೇಶ್ವರನ ವಿಚಾರದಿಂದ ವಿದ್ಯೆಗಳೆಲ್ಲವನ್ನೂ ತಿಳಿಯುವುದು.

ದಯಾನಂದಭಾಷ್ಯದ ವೈಶಿಷ್ಟ್ಯಗಳಿಗೆ ಇದೊಂದು ಉದಾಹರಣೆ!

_ಅನು.

ವಾನಪ್ರಸ್ಥಾಶ್ರಮಂ ಸಮಾಪ್ಯ ಸಂನ್ಯಾಸೀ ಭವೇತ್.

[ಹಾಗೆ] ವಾನಪ್ರಸ್ಥಾಶ್ರಮವನ್ನು ಮುಗಿಸಿ, ಸಂನ್ಯಾಸಿಯಾಗಬೇಕು!

ಅರ್ಥಾತ್_

ಎಂದರೆ_

"ಬ್ರಹ್ಮಚರ್ಯಾಶ್ರಮಂ ಸಮಾಪ್ಯ ಗೃಹೀ ಭವೇತ್; ಗೃಹೀ ಭೂತ್ವಾ ವನೀ ಭವೇದ್ವನೀ ಭೂತ್ವಾ ಪ್ರವಜೇತ್ ॥೧॥" *

[ಅರ್ಥ:_ "ಬ್ರಹ್ಮಚರ್ಯಾಶ್ರಮವನ್ನು ಮುಗಿಸಿ, ಗೃಹಸ್ಥನಾಗಬೇಕು ! ಗೃಹಸ್ಥನಾದ ಮೇಲೆ ವಾನಪ್ರಸ್ಥನಾಗಬೇಕು! ವಾನಪ್ರಸ್ಥನಾದ ಮೇಲೆ ಸಂನ್ಯಾಸಿಯಾಗಬೇಕು!"

ಇತ್ಯೇಕಃ ಪಕ್ಷಃ ॥೧॥

ಇದೊಂದು ಪಕ್ಷವಾಗಿದೆ. [೧]

"ಯದಹರೇವ ವಿರಜೇತ್ ತದಹರೇವ ಪ್ರವ್ರಜೇದ್ವನಾದ್ವಾ ಗೃಹಾದ್ವಾ ॥೨॥" *

[ಅರ್ಥ:_ "ಯಾವ ದಿನ ವೈರಾಗ್ಯವುಂಟಾಗುತ್ತದೋ, ಆ ದಿನವೇ ಪರಿವ್ರಾಜಕನಾಗಬೇಕು; ವಾನಪ್ರಸ್ಥದಿಂದಾಗಲೀ, ಅಥವಾ ಗೃಹಸ್ಥಾಶ್ರಮದಿಂದಾಗಲೀ!"

ಅಸ್ಮಿನ್ ಪಕ್ಷೇ ವಾನಪ್ರಸ್ಥಾಶ್ರಮಮಕೃತ್ವಾ ಗೃಹಾಶ್ರಮಾನಂತರಂ ಸಂನ್ಯಾಸಂ ಗೃಹ್ಣೀಯಾತ್.

ಈ ಪಕ್ಷದಲ್ಲಿ ವಾನಪ್ರಸ್ಥಾಶ್ರಮವನ್ನು ಮಾಡದೇನೇ, [ಅಂದರೆ] ಗೃಹಾಶ್ರಮದ ನಂತರ, ಸಂನ್ಯಾಸವನ್ನು ಸ್ವೀಕರಿಸಬಹುದು !

ಇತಿ ದ್ವಿತೀಯಃ ಪಕ್ಷಃ ॥೨॥

ಇದು ಎರಡನೆಯ ಪಕ್ಷವಾಗಿದೆ. [೨]

---

* ತುಲನಾ ಕಾರ್ಯಾ_ ಜಾಬಾಲೋಪನಿಷತ್; ಖಂಡೇ ೪. _ಅನು.

* ಜಾಬಾಲೋಪನಿಷತ್ತನ್ನು ನೋಡಿ (ಖಂ. ೪)

ಗ್ರಂಥಕರ್ತರು ವಾನಪ್ರಸ್ಥ ಮತ್ತು ಸಂನ್ಯಾಸಾಶ್ರಮಗಳಿಗೆ ವೇದದ ಪ್ರಮಾಣಗಳನ್ನು ಕೊಡದೇ, ಬ್ರಾಹ್ಮಣ-ಉಪನಿಷತ್ತುಗಳ ಪ್ರಮಾಣಗಳನ್ನು ಏಕೆ ಕೊಟ್ಟಿದ್ದಾರೆಂದರೆ, ವೇದಗಳಲ್ಲಿ ಬ್ರಹ್ಮಚರ್ಯ, ಹಾಗೂ ಗೃಹಾಶ್ರಮಗಳ ವಿಸ್ತೃತ ವರ್ಣನೆ ಇರುವಂತೆ, ಈ ಅಂತಿಮ ಎರಡು ಆಶ್ರಮಗಳ ವಿಸ್ತೃತ ವರ್ಣನೆ ಇಲ್ಲ! ಮತ್ತು ಜಗತ್ತಿನಲ್ಲಿ ಪ್ರಮುಖವಾಗಿಯೂ, ಅನಿವಾರ್ಯವಾಗಿಯೂ ಕಾರ್ಯಗತವಾಗಿರಲೇ ಬೇಕಾದುದು ಮೊದಲ ಎರಡು ಆಶ್ರಮಗಳೇ! _ಅನು.

"ಬ್ರಹ್ಮಚರ್ಯಾದೇವ ಪ್ರವ್ರಜೇತ್ ॥ ೩ ॥" *

[ಅರ್ಥ:_ "ಬ್ರಹ್ಮಚರ್ಯಾಶ್ರಮದಿಂದಲೇ ಪರಿವ್ರಾಜಕನಾಗಬಹುದು!"

ಸಮ್ಯಗ್ ಬ್ರಹ್ಮಚರ್ಯ್ಯಾಶ್ರಮಮಂ ಕೃತ್ವಾ ಗೃಹಸ್ಥ-ವಾನಪ್ರಸ್ಥಾಶ್ರಮಾವಕೃತ್ವಾ+ ಸಂನ್ಯಾಸಾಶ್ರಮಂ ಗೃಹ್ಣೀಯಾತ್ ;

ಚೆನ್ನಾಗಿ ಬ್ರಹ್ಮಚರ್ಯಾಶ್ರಮವನ್ನು ಆಚರಿಸಿ[ದ ಮೇಲೆ,] ಗೃಹಸ್ಥ-ವಾನಪ್ರಸ್ಥಾಶ್ರಮಗಳನ್ನು ಮಾಡದೇನೇ, ಸಂನ್ಯಾಸಾಶ್ರಮವನ್ನು ಸ್ವೀಕರಿಸಬಹುದು!

ಇತಿ ತೃತೀಯಃ ಪಕ್ಷಃ ॥ ೩ ॥

ಇದು ಮೂರನೆಯ ಪಕ್ಷವಾಗಿದೆ. [೩]

ಅಂದರೆ, ಸಂನ್ಯಾಸಾಶ್ರಮದ ಬಗ್ಗೆ ಮೂರು ಪಕ್ಷಗಳಿವೆ_

ಅವುಗಳಲ್ಲಿ **ಮೊದಲನೆಯದು** ಯಾವುದೆಂದರೆ_

ಯಾವನು ವಿಷಯಭೋಗವನ್ನು ಮಾಡಲಿಚ್ಛಿಸುತ್ತಾನೋ, ಅವನು **ಬ್ರಹ್ಮಚರ್ಯ**, **ಗೃಹಸ್ಥ** ಮತ್ತು **ವಾನಪ್ರಸ್ಥ**, ಈ ಆಶ್ರಮಗಳನ್ನು ಮಾಡಿಕೊಂಡು, [ಆದ ಮೇಲೆ] **ಸಂನ್ಯಾಸವನ್ನು** ಅಂಗೀಕರಿಸಲಿ!

ಎರಡನೆಯದು_

'ಯದಹರೇವ ವಿರಜೇತ್', ಎಂಬಂತೆ ಯಾವ ಸಮಯ 'ವೈರಾಗ್ಯ', ಎಂದರೆ ಕೆಟ್ಟ ಕೆಲಸಗಳಿಂದ ಚಿತ್ತವು ದೂರವಾಗಿ, ಸತ್ಯಮಾರ್ಗದಲ್ಲಿ ಸರಿ ಸರಿಯಾಗಿ ಅದು ನಿಶ್ಚಿತವಾಗಿ ಹೋದ ಮೇಲೆ, ಆಗ ಗೃಹಾಶ್ರಮದಿಂದಲೂ ಕೂಡ, ಸಂನ್ಯಾಸವು ಆಗಬಲ್ಲುದು!**

ಮತ್ತು ಮೂರನೆಯ [ಪಕ್ಷದಲ್ಲಿ] _

ಯಾವನು ಪೂರ್ಣವಿದ್ವಾಂಸನಾಗಿ, ಎಲ್ಲಾ ಪ್ರಾಣಿಗಳ ಶೀಘ್ರ ಉಪಕಾರವನ್ನು ಮಾಡಲಿಚ್ಛಿಸಿದರೆ, ಅವನು ಬ್ರಹ್ಮಚರ್ಯಾಶ್ರಮದಿಂದಲೇ ಸಂನ್ಯಾಸವನ್ನು ಸ್ವೀಕರಿಸಬಹುದು !

ಸರ್ವತ್ರಾನ್ಯಾಶ್ರಮವಿಕಲ್ಪ ಉಕ್ತಃ ;

ಎಲ್ಲೆಡೆಯೂ ಬೇರೆಯ ಆಶ್ರಮದ ವಿಕಲ್ಪವನ್ನು ಹೇಳಲಾಗಿದೆ.

ಪರಂತು ಬ್ರಹ್ಮಚರ್ಯಾಶ್ರಮಾನುಷ್ಠಾನಂ ನಿತ್ಯಮೇವ ಕರ್ತ್ತವ್ಯಮಿತ್ಯಾಯಾತಿ.

ಆದರೆ, ಬ್ರಹ್ಮಚರ್ಯಾಶ್ರಮದ ಅನುಷ್ಠಾನ [ವನ್ನಂತೂ] ಯಾವಾಗಲೂ ಮಾಡಲೇಬೇಕು, ಎಂದು ತಿಳಿದುಬರುತ್ತದೆ!

ಕುತಃ? ಬ್ರಹ್ಮಚರ್ಯಾಶ್ರಮೇಣ ವಿನಾಽ-ನ್ಯಾಶ್ರಮಾನುತ್ಪತ್ತೇಃ .

ಏಕೆಂದರೆ, ಬ್ರಹ್ಮಚರ್ಯಾಶ್ರಮದ ಹೊರತಾಗಿ ಬೇರೆ ಯಾವ ಆಶ್ರಮವೂ ಸಂಭವಿಸುವುದಿಲ್ಲವಲ್ಲ!

---

* ತುಲನಾ ಕಾರ್ಯಾ_ ಜಾಬಾಲೋಪನಿಷತ್; ಖಂಡೇ ೪. _ಅನು.

+ 'ಗೃಹಸ್ಥವಾನಪ್ರಸ್ಥಾಶ್ರಮೌ ಅಕೃತ್ವಾ' ಇತಿ ಪದಚ್ಛೇದಃ _ಅನು.

* ಜಾಬಾಲೋಪನಿಷತ್ತನ್ನು ನೋಡಿ (ಖಂ. ೪) _ಅನು.

** ವೈರಾಗ್ಯದ ಈ ಪರಿಭಾಷೆಯನ್ನು ಎಲ್ಲರೂ ಅರಿತು, ಪಾರಂಪರಿಕವಾಗಿ, ಪುರಾಣಗಳಿಂದ ಅಥವಾ ಜೈನ-ಬೌದ್ಧ ಮತಗಳಿಂದ ಪ್ರಚಾರಿತವಾದ ಪರಿಭಾಷೆಯನ್ನು ತ್ಯಜಿಸಬೇಕು! _ಅನು.

ಸಂನ್ಯಾಸಾಶ್ರಮದ ಔಪನಿಷದಿಕವರ್ಣನೆ

ಛಾಂದೋಗ್ಯೋಪನಿಷತ್ತಿನಲ್ಲಿ !

" ಬ್ರಹ್ಮಸಗ್ಂಸ್ಥೋಽಮೃತತ್ವಮೇತಿ ॥ ೧ ॥ "

[ಛಾಂದೋಗ್ಯೋಪನಿಷದಿ ಪ್ರಪಾ. ೨, ಖಂ. ೨೩]

[ಅರ್ಥ:_" ಬ್ರಹ್ಮಸಂಸ್ಥನು ಮೋಕ್ಷವನ್ನು ಪಡೆಯುತ್ತಾನೆ! "

(ಛಾಂದೋಗ್ಯೋಪನಿಷತ್: ೨. ೨೩. ೧)]

ಭಾಷ್ಯಮ್_

(ಬ್ರಹ್ಮಸಗ್ಂಸ್ಥಃ) ಚತುರ್ಥೋ ಬ್ರಹ್ಮಸಂಸ್ಥಃ ಸಂನ್ಯಾಸೀ (ಅಮೃತತ್ವಮ್) (ಏತಿ) ಪ್ರಾಪ್ನೋತಿ ॥ ೧ ॥

ಭಾಷ್ಯ_

(ಬ್ರಹ್ಮಸಗ್ಂಸ್ಥಃ.) ನಾಲ್ಕನೆಯ, ಬ್ರಹ್ಮಸಂಸ್ಥನಾದ ಸಂನ್ಯಾಸಿಯು (ಅಮೃತತ್ವಮ್) ಮೋಕ್ಷವನ್ನು (ಏತಿ) ಪಡೆಯುತ್ತಾನೆ!

ಅಂದರೆ, ಸಂನ್ಯಾಸೀಜನರು ಮೋಕ್ಷಮಾರ್ಗವನ್ನು ಹೊಂದುತ್ತಾರೆ! [೧]

ಶತಪಥಬ್ರಾಹ್ಮಣದ ಬೃಹದಾರಣ್ಯಕೋಪನಿಷತ್ತಿನಲ್ಲಿ !

" ತಮೇತಂ ವೇದಾನುವಚನೇನ ವಿವಿದಿಷಂತಿ ।
" ಬ್ರಹ್ಮಚರ್ಯೇಣ ತಪಸಾ ಶ್ರದ್ಧಯಾ ಯಜ್ಞೇನಾನಾಶಕೇನ
ಚೈತಮೇವ ವಿದಿತ್ವಾ ಮುನಿರ್ಭವತ್ಯೇತಮೇವ ಪ್ರವ್ರಾಜಿನೋ
ಲೋಕಮೀಪ್ಸಂತಃ ಪ್ರವ್ರಜಂತಿ ॥ ೨ ॥ "

[ಶತಪಥಬ್ರಾಹ್ಮಣೇ ಕಾಂ. ೧೪, ಅ. ೭, ಬ್ರಾ. ೨, ಕಂ. ೨೬]

[ಅರ್ಥ:_" ಆ [ಪರಮೇಶ್ವರನನ್ನು] ವೇದದ ವಚನಗಳಿಗನುಸಾರವಾಗಿ ತಿಳಿಯಲಿಚ್ಛಿಸುತ್ತಾರೆ.
" ಬ್ರಹ್ಮಚರ್ಯದಿಂದಲೂ, ತಪಸ್ಸಿನಿಂದಲೂ, ಶ್ರದ್ಧೆಯಿಂದಲೂ ಮತ್ತು ನಾಶರಹಿತವಾದ ಯಜ್ಞದಿಂದಲೂ 'ಬ್ರಹ್ಮನನ್ನೇ' ತಿಳಿದುಕೊಂಡು, 'ಮುನಿ'ಯಾಗುತ್ತಾನೆ. ನಂತರ, 'ಬ್ರಹ್ಮನನ್ನೇ' ನೋಡುವ ಅತ್ಯಂತ ಅಪೇಕ್ಷೆಯುಳ್ಳವರಾಗಿ, ಸಂನ್ಯಾಸಿಗಳಾಗಿ ಹೊರಟುಬಿಡುತ್ತಾರೆ! "

(ಶತಪಥಬ್ರಾಹ್ಮಣ: ೧೪. ೭. ೨. ೨೬)]

"ಏತದ್ಧ ಸ್ಮ ವೈ ತತ್ ಪೂರ್ವೇ ಬ್ರಾಹ್ಮಣಾ ಅನೂಚಾನಾ
ವಿದ್ವಾಂಸಃ ಪ್ರಜಾಂ ನ ಕಾಮಯಂತೇ_
"ಕಿಂ ಪ್ರಜಯಾ ಕರಿಷ್ಯಾಮೋ ಯೇಷಾಂ ನೋಽಯಮಾತ್ಮಾಯಂ
ಲೋಕ ಇತಿ ।
"ತೇ ಹ ಸ್ಮ ಪುತ್ರೈಷಣಾಯಾಶ್ಚ ವಿತ್ತೈಷಣಾಯಾಶ್ಚ
ಲೋಕೈಷಣಾಯಾಶ್ಚ ವ್ಯುತ್ಥಾಯ ಭಿಕ್ಷಾಚರ್ಯ್ಯಂ ಚರಂತಿ ।
"ಯಾ ಹ್ಯೇವ ಪುತ್ರೈಷಣಾ ಸಾ ವಿತ್ತೈಷಣಾ; ಯಾ ವಿತ್ತೈಷಣಾ
ಸಾ ಲೋಕೈಷಣೋಭೇ ಹ್ಯೇತೇ ಏಷಣೇ ಏವ ಭವತಃ ॥ ೩ ॥"

[ಶತಪಥಬ್ರಾಹ್ಮಣೇ ಕಾಂ. ೧೪, ಅ. ೭, ಬ್ರಾ. ೨, ಕಂ. ೨೬]

[ಅರ್ಥ:_ "ಆದುದರಿಂದ, ನಿಶ್ಚಯವಾಗಿ, ಪೂರ್ವಕಾಲದಲ್ಲಿ ಬ್ರಹ್ಮವಿದರೂ, ಪೂರ್ಣ-ಜ್ಞಾನಿಗಳೂ ಆದ ವಿದ್ವಾಂಸರು ಸಂತಾನದ ಇಚ್ಛೆಯನ್ನು ಮಾಡುತ್ತಿರಲಿಲ್ಲ_

"ಸಂತಾನದಿಂದ ನಾವೇನು ಮಾಡೋಣ! ನಮಗಂತೂ ಈ ಪರಮಾತ್ಮನೇ ದರ್ಶನೀಯನಾಗಬೇಕಾಗಿದೆ", ಎಂದು [ಅವರು ಹೇಳುತ್ತಿದ್ದರು.]

"ಅವರು ನಿಶ್ಚಯವಾಗಿ, ಪುತ್ರನ ಬಯಕೆಯಿಂದಲೂ, ಮತ್ತು ಧನದ ಬಯಕೆಯಿಂದಲೂ, ಹಾಗೂ ಪ್ರಸಿದ್ಧಿಯ ಬಯಕೆಯಿಂದಲೂ ಮೇಲೆದ್ದು, ಭಿಕ್ಷಾಟನವನ್ನು ಆಚರಿಸುತ್ತಿದ್ದರು!"

"ಯಾವುದು ಪುತ್ರನ ಬಯಕೆಯೋ, ಅದೇ ನಿಶ್ಚಯವಾಗಿ ಧನದ ಬಯಕೆಯಾಗುತ್ತದೆ; ಯಾವುದು ಧನದ ಬಯಕೆಯೋ, ಅದು ಪ್ರಸಿದ್ಧಿಯ ಬಯಕೆಯಾಗುತ್ತದೆ. ಇವೆರಡೂ ನಿಶ್ಚಯವಾಗಿ ಬಯಕೆಗಳೇ ಆಗಿರುತ್ತವೆ!"

(ಶತಪಥಬ್ರಾಹ್ಮಣಃ ೧೪. ೭. ೨. ೨೬]

ಭಾಷ್ಯಮ್_

(ತಮೇತಂ ವೇದಾ.) ಸರ್ವ ಆಶ್ರಮಿಣೋ ವಿಶೇಷತಃ ಸಂನ್ಯಾಸಿನಸ್ತಮೇತಂ* ಪರಮೇಶ್ವರಂ ಸರ್ವಭೂತಾದಿಪತಿಂ;

ಭಾಷ್ಯ_

(ತಮೇತಂ ವೇದಾ.) ಎಲ್ಲಾ ಆಶ್ರಮಿಗಳೂ, ವಿಶೇಷವಾಗಿ ಸಂನ್ಯಾಸಿಗಳು, ಸರ್ವ ಪ್ರಾಣಿಗಳಿಗೂ ಅಧಿಪತಿಯಾದ ಆ ಪರಮೇಶ್ವರನನ್ನು;

* 'ಸಂನ್ಯಾಸಿಮತಮೇತಮ್' ಇತಿ ಗ್ರಂಥಸ್ಥಮುದ್ರಿತಪಾಠಃ.
_ಯು. ಮೀ.

ವೇದಾನುವಚನೇನ ತದಧ್ಯಯನೇನ, ತಚ್ಛ್ರವಣೇನ ತದುಕ್ತಾನುಷ್ಠಾನೇನ ಚ ವೇತ್ತುಮ್[*] ಇಚ್ಛಂತಿ.

'ವೇದಾನುವಚನದಿಂದ', ಎಂದರೆ ಅದರ ಅಧ್ಯಯನದಿಂದಲೂ, ಅದರ ಶ್ರವಣದಿಂದಲೂ, ಮತ್ತು ಅದರಲ್ಲಿ ಹೇಳಿರುವ ಅನುಷ್ಠಾನವನ್ನು ಮಾಡುವುದರಿಂದಲೂ ತಿಳಿದುಕೊಳ್ಳಲು ಇಚ್ಛಿಸುತ್ತಾರೆ!

ಅಂದರೆ, ವೇದವನ್ನು ಓದಿ, ಪರಮೇಶ್ವರನನ್ನು ತಿಳಿಯುವ ಇಚ್ಛೆ ಮಾಡುತ್ತಾರೆ!

(ಬ್ರಹ್ಮಚರ್ಯೇಣ.) ಬ್ರಹ್ಮಚರ್ಯೇಣ, ತಪಸಾ ಧರ್ಮಾನುಷ್ಠಾನೇನ ;

(ಬ್ರಹ್ಮಚರ್ಯೇಣ.) ಬ್ರಹ್ಮಚರ್ಯದಿಂದಲೂ, ತಪಸ್ಸಿನಿಂದಲೂ, ಧರ್ಮಾನುಷ್ಠಾನದಿಂದಲೂ ;

ಶ್ರದ್ಧಯಾऽತ್ಯಂತಪ್ರೇಮ್ಣಾ;

'ಶ್ರದ್ಧೆ', ಎಂದರೆ ಅತ್ಯಂತ ಪ್ರೇಮದಿಂದಲೂ ;

ಯಜ್ಞೇನ ನಾಶರಹಿತೇನ ವಿಜ್ಞಾನೇನ ಧರ್ಮ-ಕ್ರಿಯಾಕಾಂಡೇನ ;

ಮತ್ತು ನಾಶರಹಿತವಾದ 'ಯಜ್ಞ', ಎಂದರೆ ಧಾರ್ಮಿಕ ಕ್ರಿಯಾಕಾಂಡದ ವಿಜ್ಞಾನದಿಂದಲೂ ;

ಚೈತಂ ಪರಮೇಶ್ವರಂ ವಿದಿತ್ವೈವ ಮುನಿ-ರ್ಭವತಿ.

ಈ ಪರಮೇಶ್ವರನನ್ನು ತಿಳಿದುಕೊಂಡೇನೇ 'ಮುನಿ' ಆಗುತ್ತಾನೆ !

ಪ್ರವ್ರಾಜಿನಃ ಸಂನ್ಯಾಸಿನ ಏತಂ ಯಥೋಕ್ತಂ ಲೋಕಂ ದ್ರಷ್ಟವ್ಯಂ ಪರಮೇಶ್ವರಮೇವೇಪ್ಸಂತಃ ಪ್ರವ್ರಜಂತಿ ಸಂನ್ಯಾಸಾಶ್ರಮಂ ಗೃಹ್ಣಂತಿ ॥ ೨ ॥

ಪರಿವ್ರಾಜಕರಾದ ಸಂನ್ಯಾಸಿಗಳು [ವೇದದಲ್ಲಿ] ಹೇಗೆ ಹೇಳಿದೆಯೋ, ಅಂತಹವನೂ, ದರ್ಶನ ಯೋಗ್ಯನೂ ಆದ ಪರಮೇಶ್ವರನನ್ನೇ ಅತ್ಯಂತವಾಗಿ ಅಪೇಕ್ಷಿಸುತ್ತಾ , ಹೊರಟು ಬಿಡುತ್ತಾರೆ! ಎಂದರೆ ಸಂನ್ಯಾಸಾಶ್ರಮವನ್ನು ಅಂಗೀಕರಿಸುತ್ತಾರೆ!

ಅಂದರೆ, ಯಾವ ಸತ್ಪುರುಷರು ಬ್ರಹ್ಮಚರ್ಯ, ಧರ್ಮಾನುಷ್ಠಾನ, ಶ್ರದ್ಧೆ, ಯಜ್ಞ ಮತ್ತು ಜ್ಞಾನದಿಂದ ಪರಮೇಶ್ವರನನ್ನು ತಿಳಿದುಕೊಂಡು, 'ಮುನಿ', ಎಂದರೆ ವಿಚಾರಶೀಲರಾಗುತ್ತಾರೋ, ಅವರೇ 'ಬ್ರಹ್ಮಲೋಕ', ಎಂದರೆ ಸಂನ್ಯಾಸಿಗಳಿಗೆ ಪ್ರಾಪ್ತಿಸ್ಥಾನವಾದುದನ್ನು ಪಡೆಯಲು ಸಂನ್ಯಾಸವನ್ನು ಸ್ವೀಕರಿಸುತ್ತಾರೆ! [೨]

(ಏತತ್.) ಯ ಏತದಿಚ್ಛಂತಃ ಸಂತಃ ಪೂರ್ವೇ ;

(ಏತತ್.) ಯಾರು ಪೂರ್ವಕಾಲದಲ್ಲಿ ಈ (ಪರಮೇಶ್ವರನನ್ನು) ಇಚ್ಛಿಸುವವರಂತಹವರಾಗಿಯೂ ಇದ್ದು ;

ಅತ್ಯುತ್ತಮಾ ಬ್ರಾಹ್ಮಣಾ ಬ್ರಹ್ಮವಿದೋऽ-ನೂಚಾನಾ ನಿಶ್ಶಂಕಾಃ ಪೂರ್ಣಜ್ಞಾನಿನೋऽನ್ಯೇಷಾಂ ಶಂಕಾನಿವಾರಕಾ ವಿದ್ವಾಂಸಃ ;

ಅತ್ಯುತ್ತಮ 'ಬ್ರಾಹ್ಮಣರು', ಎಂದರೆ ಬ್ರಹ್ಮವನ್ನು ತಿಳಿದವರಾಗಿಯೂ, 'ಅನೂಚಾನರು', ಎಂದರೆ ನಿಶ್ಶಂಕರೂ, ಎಂದರೆ ಪೂರ್ಣಜ್ಞಾನಿಗಳಾಗಿ ಇತರರ ಶಂಕೆಗಳನ್ನು ನಿವಾರಣೆ ಮಾಡುವವರೂ ಆದ ವಿದ್ವಾಂಸರಾಗಿ ;

---

* 'ವೇದಿತುಮ್' _ಆ. ವೈ.

ಪ್ರಜಾಂ ಗೃಹಾಶ್ರಮಂ ನ ಕಾಮಯಂತೇ ನೇಚ್ಛಂತಿ ;

'ಪ್ರಜೆ', ಎಂದರೆ ಗೃಹಾಶ್ರಮವನ್ನು ಇಚ್ಛಿಸುತ್ತಿರಲಿಲ್ಲವೋ ;

ಅಂದರೆ, ಯಾರು ಉತ್ತಮವಾದ ಪೂರ್ಣ ವಿದ್ವಾಂಸರಾಗಿರುತ್ತಾರೋ, ಅವರು ಗೃಹಾಶ್ರಮ ಮತ್ತು ವಾನಪ್ರಸ್ಥವಿಲ್ಲದೆಯೇ, ಬ್ರಹ್ಮಚರ್ಯಾಶ್ರಮದಿಂದಲೇ ಸಂನ್ಯಾಸಿಗಳಾಗಿ ಬಿಡುತ್ತಾರೋ ;

(ಹ ಸ್ಮ.) ಹೇತಿ ಸ್ಫುಟೇ, ಸ್ಮೇತಿ ಸ್ಮಯೇ ;

(ಹ ಸ್ಮ.) 'ಹ', ಎಂದರೆ **ಸ್ಪಷ್ಟ ಅರ್ಥ**ದಲ್ಲಿ; [ಮತ್ತು] 'ಸ್ಮ', ಎಂದರೆ **ಆಶ್ಚರ್ಯದ ಅರ್ಥ**ದಲ್ಲಿ;

ತೇ ಪ್ರೋತ್ಫುಲ್ಲಾಃ ಪ್ರಕಾಶಮಾನಾ ವದಂತಿ_

ಅವರು ಪ್ರಫುಲ್ಲಿತರಾಗಿಯೂ, ಪ್ರಸಿದ್ಧವಾಗಿಯೂ ಹೇಳುತ್ತಾರೇನೆಂದರೆ_

'ವಯಂ ಪ್ರಜಯಾ ಕಿಂ ಕರಿಷ್ಯಾಮಃ?'

"ನಾವು ಸಂತಾನದಿಂದ ಏನು ಮಾಡೋಣ?"

ಕಿಮಪಿ ನೇತ್ಯರ್ಥಃ!

ಏನೂ [ಪ್ರಯೋಜನ] ಇಲ್ಲ, ಎಂದರ್ಥ!

ಯೇಷಾಂ ;

ಅವರ [ಇಚ್ಛೆ ಏನಿರುತ್ತದೆಂದರೆ_]

ನೋಽಸ್ಮಾಕಮಯಮಾತ್ಮಾ ಪರಮೇಶ್ವರಃ ಪ್ರಾಪ್ಯೋ ಲೋಕೋ ದರ್ಶನೀಯಶ್ಚಾಸ್ತಿ.

"ನಮಗಂತೂ ಈ **'ಆತ್ಮಾ'**, ಎಂದರೆ ಪರಮೇಶ್ವರನೇ ಪ್ರಾಪ್ಯನೂ, ಹಾಗೂ **'ಲೋಕ'**, ಎಂದರೆ ದರ್ಶನೀಯನೂ ಆಗಿರುತ್ತಾನೆ!"

ಮೂರು ಏಷಣಾತ್ಯಾಗ!

[(ತೇ ಹ ಸ್ಮ.)] ಏವಂ ತೇ_

(ತೇ ಹ ಸ್ಮ.) ಈ ರೀತಿಯಾಗಿ, ಅವರು_

(ಪುತ್ರೈಷಣಾಯಾಶ್ಚ) ಪುತ್ರೋತ್ಪಾದನೇಚ್ಛಾಯಾಃ ;

(ಪುತ್ರೈಷಣಾಯಾಶ್ಚ) ಪುತ್ರನನ್ನು ಉತ್ಪನ್ನ ಮಾಡುವ ಬಯಕೆಯಿಂದಲೂ ;

(ವಿತ್ತೈಷಣಾಯಾಶ್ಚ) ಜಡಧನಪ್ರಾಪ್ತ್ಯನುಷ್ಠಾನೇಚ್ಛಾಯಾಃ ;

ಮತ್ತು (ವಿತ್ತೈಷಣಾಯಾಶ್ಚ) ಜಡಧನಪ್ರಾಪ್ತಿಗಾಗಿ ಮಾಡುವ ಪ್ರಯತ್ನದಿಂದಲೂ ;

(ಲೋಕೈಷಣಾಯಾಶ್ಚ) ಲೋಕೇ ಸ್ವಸ್ಯ ಪ್ರತಿಷ್ಠಾಸ್ತುತಿನಿಂದೇಚ್ಛಾಯಾಶ್ಚ ;

ಮತ್ತು (ಲೋಕೈಷಣಾಯಾಶ್ಚ) ಜಗತ್ತಿನಲ್ಲಿ ತಮ್ಮ ಪ್ರತಿಷ್ಠೆ, ಸ್ತುತಿ-ನಿಂದೆಗಳ ಬಯಕೆಯಿಂದಲೂ ;

(ವ್ಯುತ್ಥಾಯ) ವಿರಜ್ಯ ;

(ವ್ಯುತ್ಥಾಯ) ವಿರಕ್ತರಾಗಿ ;

(ಭಿಕ್ಷಾಚರ್ಯ್ಯಂ ಚರಂತಿ) ಸಂನ್ಯಾಸಾಶ್ರಮಾನುಷ್ಠಾನಂ ಕುರ್ವಂತಿ.

(ಭಿಕ್ಷಾಚರ್ಯ್ಯಂ ಚರಂತಿ) ಸಂನ್ಯಾಸಾಶ್ರಮದ ಅನುಷ್ಠಾನವನ್ನು ಮಾಡುತ್ತಾರೆ!

ಅಂದರೆ, ಅವರು, ತಮ್ಮ ಉಪದೇಶದಿಂದ ಯಾರು ಪುತ್ರರಂತೆ ಆಗುತ್ತಾರೋ, ಅವರನ್ನೇ ಎಲ್ಲರಿಗಿಂತ ಉತ್ತಮರೆಂದು ಅಂಗೀಕರಿಸಿ_

'ಪುತ್ರೈಷಣಾ', ಎಂದರೆ ಸಂತಾನೋತ್ಪಾದನೆಯ ಇಚ್ಛೆ;

'ವಿತ್ತೈಷಣಾ', ಎಂದರೆ ಧನದ ಲೋಭ;

ಮತ್ತು **'ಲೋಕೈಷಣಾ'**, ಎಂದರೆ ಜಗತ್ತಿನಲ್ಲಿ ಪ್ರತಿಷ್ಠೆಯ ಇಚ್ಛೆ ಮಾಡುವುದು_ ಈ ಮೂರೂ ಪ್ರಕಾರದ ಇಚ್ಛೆಯನ್ನು ತ್ಯಜಿಸಿ, ಭಿಕ್ಷಾಚರಣ ಮಾಡುತ್ತಾರೆ!

ಎಂದರೆ, ಎಲ್ಲರ ಗುರುಗಳಾಗಿಯೂ, ಎಲ್ಲರ ಅತಿಥಿಗಳಾಗಿಯೂ, ವಿಚರಿಸುತ್ತಾ, ಜಗತ್ತನ್ನು ಅಜ್ಞಾನರೂಪ ಅಂಧಕಾರದಿಂದ ಬಿಡಿಸಿ, ಸತ್ಯವಿದ್ಯೆಯ ಉಪದೇಶರೂಪ ಪ್ರಕಾಶದಿಂದ ಪ್ರಕಾಶಗೊಳಿಸಿ ಬಿಡುತ್ತಾರೆ!

ಯಸ್ಯ ಪುತ್ರೈಷಣಾ ಪುತ್ರಪ್ರಾಪ್ತ್ಯೇಷಣೇಚ್ಛಾ ಭವತಿ, ತಸ್ಯಾವಶ್ಯಂ ವಿತ್ತೈಷಣಾಪಿ ಭವತಿ;

ಯಾವನಿಗೆ **'ಪುತ್ರೈಷಣಾ'**, ಎಂದರೆ ಪುತ್ರ-ಪ್ರಾಪ್ತಿಯ ಬಯಕೆ ಉಂಟಾಗುತ್ತದೋ, ಅವನಿಗೆ ಧನದ ಬಯಕೆಯೂ ಕೂಡ, ಅವಶ್ಯವಾಗಿ ಉಂಟಾಗುತ್ತದೆ!

ಯಸ್ಯ ವಿತ್ತೈಷಣಾ ತಸ್ಯ ನಿಶ್ಚಯೇನ ಲೋಕೈಷಣಾ ಭವತೀತಿ ವಿಜ್ಞಾಯತೇ.

ಯಾವನಿಗೆ ಧನದ ಬಯಕೆಯಿದೆಯೋ, ಅವನಿಗೆ ನಿಶ್ಚಯವಾಗಿ ಪ್ರತಿಷ್ಠೆಯ ಬಯಕೆಯೂ ಉಂಟಾಗುತ್ತದೆ, ಎಂದು ತಿಳಿದುಬರುತ್ತದೆ!

ತಥಾ ಯಸ್ಯೈಕಾ ಲೋಕೈಷಣಾ ಭವತಿ, ತಸ್ಯೋಭೇ ಪೂರ್ವೇ ಪುತ್ರೈಷಣಾವಿತ್ತೈಷಣೇ ಭವತಃ.

ಹಾಗೆಯೇ, ಯಾವನಿಗೆ ಪ್ರತಿಷ್ಠೆಯ ಒಂದು ಬಯಕೆ ಉಂಟಾದರೂ [ಕೂಡ,] ಅವನಿಗೆ ಮೊದಲ ಎರಡಾದ ಪುತ್ರನ ಬಯಕೆ, ಹಾಗೂ ಧನದ ಬಯಕೆ [ಕೂಡ,] ಉಂಟಾಗುತ್ತವೆ!

ಯಸ್ಯ ಚ ಪರಮೇಶ್ವರಮೋಕ್ಷ-ಪ್ರಾಪ್ತ್ಯೇಷಣೇಚ್ಛಾಸ್ತಿ, ತಸ್ಯೈತಾಸ್ತಿಸ್ರೋ ನಿವರ್ತಂತೇ.

ಮತ್ತು ಯಾವನಿಗೆ ಪರಮೇಶ್ವರನ, ಹಾಗೂ ಮೋಕ್ಷದ ಬಯಕೆ ಇರುತ್ತದೋ, ಅವನಿಗೆ ಈ ಮೂರೂ [ಬಯಕೆಗಳೂ] ನಿವೃತ್ತವಾಗುತ್ತವೆ!

ನೈವ ಬ್ರಹ್ಮಾನಂದವಿತ್ತೇನ ತುಲ್ಯಂ ಲೋಕವಿತ್ತಂ ಕದಾಚಿದ್ ಭವಿತುಮರ್ಹತಿ.

ಬ್ರಹ್ಮಾನಂದರೂಪ ಧನಕ್ಕೆ ಸಮಾನವಾಗಿ ಜಗತ್ತಿನ ಧನವು ಎಂದಿಗೂ ಇರಲು ಯೋಗ್ಯವಲ್ಲ!

ಯಸ್ಯ ಪರಮೇಶ್ವರೇ ಪ್ರತಿಷ್ಠಾಸ್ತಿ, ತಸ್ಯಾನ್ಯಾಃ ಸರ್ವಾ ಪ್ರತಿಷ್ಠಾ ನೈವ ರುಚಿತಾ ಭವಂತಿ.

ಯಾವನಿಗೆ ಪರಮೇಶ್ವರನಲ್ಲಿ ಪ್ರತಿಷ್ಠೆಯಿದೆಯೋ, ಅವನಿಗೆ ಬೇರೆಯ ಪ್ರತಿಷ್ಠೆಗಳೆಲ್ಲವೂ ರುಚಿಕರವಾಗುವುದೇ ಇಲ್ಲ!

[ಯಃ] ಸರ್ವಾನ್ ಮನುಷ್ಯಾನನುಗೃಹ್ಣನ್ ಸರ್ವದಾ ಸತ್ಯೋಪದೇಶೇನ ಸುಖಯತಿ;

ಯಾವನು ಮನುಷ್ಯರೆಲ್ಲರ ಮೇಲೂ ಅನುಗ್ರಹ ಮಾಡಿ, ಯಾವಾಗಲೂ ಸತ್ಯೋಪದೇಶದಿಂದ [ಅವರಿಗೆ] ಸುಖವನ್ನು ಉಂಟುಮಾಡುತ್ತಾನೋ;

ತಸ್ಯ ಕೇವಲಂ ಪರೋಪಕಾರಮಾತ್ರಂ ಸತ್ಯ-ಪ್ರವರ್ತನಂ ಪ್ರಯೋಜನಂ ಭವತೀತಿ ॥ ೩ ॥

ಅವನಿಗೆ ಕೇವಲ ಪರೋಪಕಾರವನ್ನು ಮಾಡುವಷ್ಟು ಮಾತ್ರ, ಹಾಗೂ ಸತ್ಯದ ಪ್ರಚಾರವು [ಮಾತ್ರ] ಪ್ರಯೋಜನವಾಗಿರುತ್ತದೆ. [೩]

ಶತಪಥಬ್ರಾಹ್ಮಣದಲ್ಲಿ!

"ಪ್ರಾಜಾಪತ್ಯಾಮಿಷ್ಟಿಂ ನಿರೂಪ್ಯ ತಸ್ಯಾಂ ಸರ್ವವೇದಸಂ ಹುತ್ವಾ
ಬ್ರಾಹ್ಮಣಃ ಪ್ರವ್ರಜೇತ್ ॥೪॥"

[ಅರ್ಥ:_ "ಪ್ರಾಜಾಪತ್ಯಯಜ್ಞವನ್ನು ನಿರ್ವಹಿಸಿ, ಅದರಲ್ಲಿ ಸರ್ವಧನವನ್ನೂ ದಾನ ಮಾಡಿ, ಬ್ರಾಹ್ಮಣನು ಸಂನ್ಯಾಸಿಯಾಗಲಿ!"]

ಇತಿ ಶತಪಥೇ ಶ್ರುತ್ಯಕ್ಷರಾಣಿ.*

ಹೀಗೆಂದು ಶತಪಥಬ್ರಾಹ್ಮಣದಲ್ಲಿ ಶ್ರುತಿವಚನವಿದೆ.*

ಭಾಷ್ಯಮ್_

ಭಾಷ್ಯ_

(ಪ್ರಾಜಾಪತ್ಯಾ.) ಸ ಚ ಸಂನ್ಯಾಸೀ ಪ್ರಾಜಾಪತ್ಯಾಂ ಪರಮೇಶ್ವರದೇವತಾಕಾಮಿಷ್ಟಿಂ ಕೃತ್ವಾ;

(ಪ್ರಾಜಾಪತ್ಯಾ.) ಮತ್ತು ಆ ಸಂನ್ಯಾಸಿಯು 'ಪ್ರಾಜಾಪತ್ಯ', ಎಂದರೆ ಪರಮೇಶ್ವರದೇವತೆಗೆ ಸಂಬಂಧಿಸಿದ ಯಜ್ಞವನ್ನು ಮಾಡಿ;

ಹೃದಯೇ ಸರ್ವಮೇತನ್ನಿಶ್ಚಿತ್ಯ;

ಹೃದಯದಲ್ಲಿ ಅವೆಲ್ಲವನ್ನು ನಿಶ್ಚಯ ಮಾಡಿಕೊಂಡು;

ತಸ್ಯಾಂ (ಸರ್ವವೇದಸಂ.) ಶಿಖಾಸೂತ್ರಾದಿಕಂ ಹುತ್ವಾ;

ಅದರಲ್ಲಿ (ಸರ್ವವೇದಸಂ.) ಶಿಖಾ-ಸೂತ್ರ ಮೊದಲಾದುವನ್ನು ತ್ಯಜಿಸಿ;

ಮುನಿರ್ಮನನಶೀಲಃ ಸನ್ ಪ್ರವ್ರಜತಿ ಸಂನಾಸ್ಯಂ ಗೃಹ್ಣಾತಿ.

'ಮುನಿ', ಎಂದರೆ ಮನನಶೀಲನಾಗಿದ್ದುಕೊಂಡು, ಹೊರಹೊರಡುತ್ತಾನೆ, ಎಂದರೆ ಸಂನ್ಯಾಸವನ್ನು ಅಂಗೀಕರಿಸುತ್ತಾನೆ!

ಅಂದರೆ, ಈ ಯಜ್ಞದಲ್ಲಿ [ಗೃಹಸ್ಥನು] ಶಿಖಾ-ಸೂತ್ರ ಮೊದಲಾದುದರ ಹೋಮ ಮಾಡಿ, ಗೃಹಸ್ಥಾ-ಶ್ರಮವನ್ನು ತ್ಯಜಿಸಿ, ವಿರಕ್ತನಾಗಿ, ಸಂನ್ಯಾಸವನ್ನು ಅಂಗೀಕರಿಸಬೇಕು!

ಪರಂತ್ವಯಂ ಪೂರ್ಣವಿದ್ಯಾವತಾಂ ರಾಗದ್ವೇಷ-ರಹಿತಾನಾಂ;

ಆದರೆ, ಪೂರ್ಣವಿದ್ಯಾವಂತರೂ, ರಾಗ-ದ್ವೇಷದಿಂದ ರಹಿತರೂ;

ಸರ್ವಮನುಷ್ಯೋಪಕಾರಬುದ್ಧೀನಾಂ ಸಂನ್ಯಾಸ-ಗ್ರಹಣಾಧಿಕಾರೋ ಭವತಿ;

[ಮತ್ತು] ಮನುಷ್ಯರೆಲ್ಲರಿಗೂ ಉಪಕಾರವನ್ನು ಮಾಡುವ ಬುದ್ಧಿಯನ್ನುಳ್ಳವರೂ ಆದವರಿಗೇನೇ ಈ ಸಂನ್ಯಾಸವನ್ನು ಸ್ವೀಕರಿಸುವ ಅಧಿಕಾರವಿರುತ್ತದೆ;

ನಾಲ್ಪವಿದ್ಯಾನಾಮಿತಿ.

ಅಲ್ಪವಿದ್ಯಾವಂತರಿಗಲ್ಲ!

* ಮಾಧ್ಯಂದಿನ-ಕಾಣ್ವಶತಪಥಯೋರಯಂ ಪಾಠೋ ನೋಪಲಭ್ಯತೇ _ಯು. ಮೀ.

* ಈ ವಚನವು ಮಾಧ್ಯಂದಿನ-ಕಾಣ್ವಶತಪಥಬ್ರಾಹ್ಮಣಗಳಲ್ಲಿ ಸಿಕ್ಕಿಲ್ಲ _ಯು. ಮೀ.

ಸಂನ್ಯಾಸಿಯ ವಿಶಿಷ್ಟ ಪಂಚಮಹಾಯಜ್ಞ!

ತೇಷಾಂ ಸಂನ್ಯಾಸಿನಾಂ ಪ್ರಾಣಾಪಾನ-ಹೋಮೋ ;

ಆ ಸಂನ್ಯಾಸಿಗಳಿಗೆ ಪ್ರಾಣಾಪಾನವೇ **'ಹೋಮ'**ವೂ ;

ದೋಷೇಭ್ಯ ಇಂದ್ರಿಯಾಣಾಂ ಮನಸಶ್ಚ ಸದಾ ನಿವರ್ತನಂ, ಸತ್ಯಧರ್ಮಾನುಷ್ಠಾನಂ ಚೈವಾಗ್ನಿ-ಹೋತ್ರಮ್.

ದೋಷಗಳಿಂದ ಇಂದ್ರಿಯಗಳನ್ನೂ, ಹಾಗೂ ಮನಸ್ಸನ್ನೂ ಯಾವಾಗಲೂ ದೂರ ಇಡುವುದು ; ಮತ್ತು ಸತ್ಯಧರ್ಮದ ಆಚರಣೆಯೇ **'ಅಗ್ನಿಹೋತ್ರ'**ವೂ ಆಗಿರುತ್ತದೆ.

ಕಿಂತು ಪೂರ್ವೇಷಾಂ ತ್ರಯಾಣಾಮೇವಾ-ಶ್ರಮಿಣಾಮನುಷ್ಠಾತುಂ ಯೋಗ್ಯಂ ಯದ್ ಬಾಹ್ಯ-ಕ್ರಿಯಾಮಯಮಸ್ತಿ, ಸಂನ್ಯಾಸಿನಾಂ ತನ್ನ.

ಆದರೆ, ಮೊದಲ ಮೂರೂ ಆಶ್ರಮಿಗಳಿಗೆ ಆಚರಿಸಲು ಯೋಗ್ಯವಾದ ಯಾವ ಬಾಹ್ಯಕ್ರಿಯೆಗಳಿಂದ ಕೂಡಿದ [ಕರ್ಮ] ಇದೆಯೋ, ಅದು ಸಂನ್ಯಾಸಿಗಳಿಗೆ ಇಲ್ಲ!

ಸತ್ಯೋಪದೇಶ ಏವ ಸಂನ್ಯಾಸಿನಾಂ ಬ್ರಹ್ಮಯಜ್ಞಃ ;

ಸತ್ಯದ ಉಪದೇಶವನ್ನು [ಮಾಡುವುದೇ] ಸಂನ್ಯಾಸಿಗಳ **'ಬ್ರಹ್ಮಯಜ್ಞ'**ವಾಗಿರುತ್ತದೆ!

ದೇವಯಜ್ಞೋ ಬ್ರಹ್ಮೋಪಾಸನಂ ;

ಬ್ರಹ್ಮನ ಉಪಾಸನೆಯೇ **'ದೇವಯಜ್ಞ'** ವಾಗಿರುತ್ತದೆ!

ವಿಜ್ಞಾನಿನಾಂ ಪ್ರತಿಷ್ಠಾಕರಣಂ ಪಿತೃಯಜ್ಞೋ ;

ವಿಜ್ಞಾನಿಗಳ ಪ್ರತಿಷ್ಠೆ ಮಾಡುವುದು **'ಪಿತೃಯಜ್ಞ'** ವಾಗಿರುತ್ತದೆ!

ಹ್ಯಜ್ಞೇಭ್ಯೋ ಜ್ಞಾನದಾನಂ, ಸರ್ವೇಷಾಂ ಭೂತಾನಾಮುಪರ್ಯ್ಯನುಗ್ರಹೋऽಪೀಡನಂ ಚ ಭೂತಯಜ್ಞಃ ;

ಅಜ್ಞರಿಗೆ ಜ್ಞಾನದಾನ ಮಾಡುವುದು ; ಮತ್ತು ಎಲ್ಲಾ ಪ್ರಾಣಿಗಳ ಮೇಲೆ ದಯೆ ಇಟ್ಟು, [ಅವನ್ನು] ಹಿಂಸಿಸದಿರುವುದೇ ಅವಶ್ಯವಾಗಿ **'ಭೂತಯಜ್ಞ'** ವಾಗಿರುತ್ತದೆ!

ಸರ್ವಮನುಷ್ಯೋಪಕಾರಾರ್ಥಂ ಭ್ರಮಣ-ಮಭಿಮಾನಶೂನ್ಯತಾ, ಸತ್ಯೋಪದೇಶಕರಣೇನ ಸರ್ವಮನುಷ್ಯಾಣಾಂ ಸತ್ಕಾರಾನುಷ್ಠಾನಂ ಚಾತಿಥಿಯಜ್ಞಃ.

ಮತ್ತು ಮನುಷ್ಯರೆಲ್ಲರಿಗೂ ಉಪಕಾರವನ್ನು ಮಾಡುವುದಕ್ಕಾಗಿ, ಭ್ರಮಣ ಮಾಡುವುದು ; ಅಭಿಮಾನಶೂನ್ಯತ್ವ, ಹಾಗೂ ಸತ್ಯದ ಉಪದೇಶವನ್ನು ಮಾಡುವುದರ ಮೂಲಕ ಮನುಷ್ಯರೆಲ್ಲರ ಸತ್ಕಾರ, ಎಂಬ ಆಚರಣೆ_ ಇವು **'ಅತಿಥಿಯಜ್ಞ'**ವಾಗಿರುತ್ತದೆ!

ಏವಂಲಕ್ಷಣಾಃ ಪಂಚಮಹಾಯಜ್ಞಾ ವಿಜ್ಞಾನ-ಧರ್ಮಾನುಷ್ಠಾನಮಯಾ ಭವಂತೀತಿ ವಿಜ್ಞೇಯಮ್.

ಈ ರೀತಿಯ ಲಕ್ಷಣಗಳನ್ನುಳ್ಳ **ಪಂಚಮಹಾಯಜ್ಞ**ಗಳೇ ವಿಜ್ಞಾನಧರ್ಮದ ಅನುಷ್ಠಾನದಿಂದ ಕೂಡಿರುವುವಾಗಿರುತ್ತವೆ, ಎಂದು ತಿಳಿಯಬೇಕು!

ಪರಂತ್ವೇಕಸ್ಯಾದ್ವಿತೀಯಸ್ಯ ಸರ್ವಶಕ್ತಿಮದಾದಿ-ವಿಶೇಷಣಯುಕ್ತಸ್ಯ ಪರಬ್ರಹ್ಮಣ ಉಪಾಸನಾ ;

ಆದರೆ, ಏಕಮಾತ್ರ, ಅದ್ವಿತೀಯನೂ, ಸರ್ವಶಕ್ತಿಮತ್ವ ಮೊದಲಾದ ವಿಶೇಷಣಗಳಿಂದ ಕೂಡಿದವನೂ ಆದ ಪರಬ್ರಹ್ಮನ ಉಪಾಸನೆ ;

ಸತ್ಯಧರ್ಮಾನುಷ್ಠಾನಂ ಚ ;

ಸರ್ವೇಷಾಮಾಶ್ರಮಿಣಾಮೇಕಮೇವ ಭವತೀ-ತ್ಯಯಂ ವಿಶೇಷಃ ॥ ೪ ॥

ಹಾಗೂ ಸತ್ಯಧರ್ಮದ ಅನುಷ್ಠಾನ_

ಇದು ಎಲ್ಲಾ ಆಶ್ರಮಿಗಳಿಗೂ ಒಂದೇ [ಸಮನಾಗಿ] ಇರುತ್ತದೆ, ಎಂಬುದೇ ಇದರ ವಿಶೇಷ! [೪]

ಮುಂಡಕೋಪನಿಷತ್ತಿನಲ್ಲಿ!

ಸಂನ್ಯಾಸಿಯು ಸತ್ಕಾರಕ್ಕೆ ಯೋಗ್ಯನು!

"ಯಂ ಯಂ ಲೋಕಂ ಮನಸಾ ಸಂವಿಭಾತಿ
ವಿಶುದ್ಧಸತ್ತ್ವಃ ಕಾಮಯತೇ ಯಾಂಶ್ಚ ಕಾಮಾನ್ ।
ತಂ ತಂ ಲೋಕಂ ಜಯತೇ ತಾಂಶ್ಚ ಕಾಮಾಂಸ್ತ-
ಸ್ಮಾದಾತ್ಮಜ್ಞಂ ಹ್ಯರ್ಚಯೇದ್ ಭೂತಿಕಾಮಃ ॥ ೫ ॥"

[ಮುಂಡಕೋಪನಿಷದಿ ಮುಂಡಕೇ ೩, ಖಂ. ೧, ಮಂ. ೧೦]

[ಅರ್ಥ:_"ಶುದ್ಧವಾದ ಮನಸ್ಸನ್ನುಳ್ಳವನು ಯಾವ ಯಾವ ಲೋಕವನ್ನು ಮನಸ್ಸಿನಿಂದ ಪ್ರಕಟಿಸುತ್ತಾನೋ, ಆ ಆ ಲೋಕವನ್ನು ಗೆಲ್ಲುತ್ತಾನೆ! ಮತ್ತು ಯಾವ ಕಾಮನೆಗಳನ್ನು ಇಚ್ಛಿಸುತ್ತಾನೋ, ಆ ಕಾಮನೆಗಳನ್ನೂ [ಪಡೆಯುತ್ತಾನೆ!] ಆದುದರಿಂದ, ಐಶ್ವರ್ಯದ ಕಾಮನೆಯನ್ನುಳ್ಳವನು ಆತ್ಮಜ್ಞನನ್ನು ಅವಶ್ಯವಾಗಿ ಸತ್ಕರಿಸಬೇಕು!"

(ಮುಂಡಕೋಪನಿಷತ್: ೩. ೧. ೧೦)]

ಭಾಷ್ಯಮ್_

(ವಿಶುದ್ಧಸತ್ತ್ವಃ) ಶುದ್ಧಾಂತಃಕರಣೋ ಮನುಷ್ಯಃ ;

(ಯಂ ಯಂ ಲೋಕಂ ಮನಸಾ) ಧ್ಯಾನೇನ ಸಂವಿಭಾತಿ ಇಚ್ಛತಿ ;

(ಕಾಮಯತೇ ಯಾಂಶ್ಚ ಕಾಮಾನ್) ಯಾಂಶ್ಚ ಮನೋರಥಾನಿಚ್ಛತಿ ;

(ತಂ ತಂ ಲೋಕಂ ತಾಂಶ್ಚ ಕಾಮಾನ್) ಜಯತೇ ಪ್ರಾಪ್ನೋತಿ.

ಭಾಷ್ಯ_

(ವಿಶುದ್ಧಸತ್ತ್ವಃ) ಶುದ್ಧಾಂತಃಕರಣವನ್ನುಳ್ಳ ಮನುಷ್ಯನು ;

(ಯಂ ಯಂ ಲೋಕಂ ಮನಸಾ) ಯಾವ ಯಾವ ಲೋಕವನ್ನು* ಧ್ಯಾನದಿಂದ (ಸಂವಿಭಾತಿ) ಇಚ್ಛಿಸುತ್ತಾನೋ ;

(ಕಾಮಯತೇ ಯಾಂಶ್ಚ ಕಾಮಾನ್) ಮತ್ತು ಯಾವ ಮನೋರಥಗಳನ್ನೂ** ಇಚ್ಛಿಸುತ್ತಾನೋ ;

(ತಂ ತಂ ಲೋಕಂ ತಾಂಶ್ಚ ಕಾಮಾನ್) ಆ ಆ ಲೋಕವನ್ನೂ, ಹಾಗೂ ಆ ಕಾಮನೆಗಳನ್ನೂ (ಜಯತೇ) ಪಡೆಯುತ್ತಾನೆ!

---

* 'ಲೋಕ,' ಎಂದರೆ ದರ್ಶನೀಯ ಪದಾರ್ಥ _ಅನು.

** 'ಮನೋರಥ', ಎಂದರೆ ಮನಸ್ಸು ಯಾವುದರಲ್ಲಿ ರಮಿಸುವುದೋ, ಅದು _ಅನು.

ಅಂದರೆ, ಅವನು ಶುದ್ಧಮನಸ್ಸಿನಿಂದ ಯಾವ ಯಾವ ಲೋಕಗಳ ಮತ್ತು ಕಾಮನೆಗಳ ಇಚ್ಛೆ ಮಾಡುತ್ತಾನೋ, ಅವನ ಅವೆಲ್ಲವೂ ಸಿದ್ಧವಾಗಿ ಬಿಡುತ್ತವೆ!

ತಸ್ಮಾತ್ ಕಾರಣಾತ್ (ಭೂತಿಕಾಮಃ) ಐಶ್ವರ್ಯ-ಕಾಮೋ ಮನುಷ್ಯಃ ;

ಆ ಕಾರಣದಿಂದ, **(ಭೂತಿಕಾಮಃ)** ಐಶ್ವರ್ಯವನ್ನು ಇಚ್ಛಿಸುವ ಮನುಷ್ಯನು ;

(ಆತ್ಮಜ್ಞಂ.) 'ಆತ್ಮಾನಂ ಪರಮೇಶ್ವರಂ ಜಾನಾತಿ ಯ'ಸ್ತಂ ಸಂನ್ಯಾಸಿನಮೇವ ಸರ್ವದಾರ್ಚಯೇತ್ ಸತ್ಕುರ್ಯ್ಯಾತ್.

(ಆತ್ಮಜ್ಞಮ್.) 'ಆತ್ಮಾ, ಎಂದರೆ ಪರಮೇಶ್ವರನನ್ನು ಯಾವನು ತಿಳಿದಿರುತ್ತಾನೋ ; ಆ ಸಂನ್ಯಾಸಿಯನ್ನೇ ಯಾವಾಗಲೂ **(ಹ್ಯರ್ಚಯೇತ್)** ಅವಶ್ಯವಾಗಿ ಸತ್ಕರಿಸಬೇಕು!

ಅಂದರೆ, ಯಾವನಿಗೆ ಐಶ್ವರ್ಯದ ಇಚ್ಛೆ ಇದೆಯೋ, ಅವನು **'ಆತ್ಮಜ್ಞ'**, ಎಂದರೆ ಬ್ರಹ್ಮವೇತ್ತೃವಾದ ಸಂನ್ಯಾಸಿಯ ಸೇವೆಯನ್ನು ಮಾಡಬೇಕು!

ತಸ್ಯೈವ ಸಂಗೇನ ಸತ್ಕಾರೇಣ ಚ ಮನುಷ್ಯಾಣಾಂ ಸುಖಪ್ರದಾ ಲೋಕಾಃ ಕಾಮಾಶ್ಚ ಸಿದ್ಧಾ ಭವಂತೀತಿ.

ಅವನ ಸಂಗದಿಂದಲೇ, ಹಾಗೂ [ಅವನ] ಸತ್ಕಾರವನ್ನು ಮಾಡುವುದರಿಂದಲೇ, ಮನುಷ್ಯರಿಗೆ ಸುಖದಾಯಕವಾದ ಪದಾರ್ಥಗಳೂ, ಮತ್ತು [ಅವರ] ಕಾಮನೆಗಳೂ ಸಿದ್ಧವಾಗುತ್ತವೆ!

ತದ್ಭಿನ್ನಾನ್ ಮಿಥ್ಯೋಪದೇಶಕಾನ್ ಸ್ವಾರ್ಥ-ಸಾಧನತತ್ಪರಾನ್ ಪಾಷಂಡಿನಃ ಕೋಽಪಿ ನೈವಾರ್ಚಯೇತ್.

ಅವನಿಗಿಂತ* ಬೇರೆಯಾಗಿ ಮಿಥ್ಯೆಯನ್ನು ಉಪದೇಶ ಮಾಡುವವರೂ, ಸ್ವಾರ್ಥಸಾಧನೆಯಲ್ಲಿ ತತ್ಪರರೂ ಆದ ಪಾಖಂಡಿಗಳನ್ನು ಯಾವನೂ [ಎಂದಿಗೂ] ಸತ್ಕರಿಸಲೇಬಾರದು!

ಕುತಃ?

ಏಕೆಂದರೆ_

ತೇಷಾಂ ಸತ್ಕಾರಸ್ಯ ನಿಷ್ಫಲತ್ವಾದ್ ದುಃಖ-ಫಲತ್ವಾಚ್ಚೇತಿ ॥ ೫ ॥

ಅವರ ಸತ್ಕಾರವು ನಿಷ್ಫಲವಾಗುವುದೇ ಅಲ್ಲದೇ, ದುಃಖವನ್ನೂ ಕೂಡ, ಕೊಡುವಂತಹುದಾಗಿರುತ್ತದೆ! [೫]

ಇತಿ ಸಂನ್ಯಾಸಾಶ್ರಮವಿಷಯಃ ಸಂಕ್ಷೇಪತಃ ॥

ಇಲ್ಲಿಗೆ ಸಂನ್ಯಾಸಾಶ್ರಮದ ವಿಷಯವು ಸಂಕ್ಷೇಪವಾಗಿ ಮುಗಿಯಿತು!

---

* ಆತ್ಮಜ್ಞನಿಗಿಂತ _ಅನು.

ಉಪಸಂಹಾರ

ಈ ನಾಲ್ಕೂ ಆಶ್ರಮಗಳು ವೇದಗಳಿಂದಲೂ* ಮತ್ತು ಯುಕ್ತಿಗಳಿಂದಲೂ ಸಿದ್ಧವಾಗಿವೆ.

ಆದುದರಿಂದ, ಮನುಷ್ಯರೆಲ್ಲರೂ ತಮ್ಮ ಆಯಸ್ಸಿನ ಪ್ರಥಮಭಾಗವನ್ನು ವಿದ್ಯೆ ಓದುವುದರಲ್ಲಿ ಕಳೆಯಬೇಕು!

ಮತ್ತು ಪೂರ್ಣವಿದ್ಯೆಯನ್ನು ಓದಿಕೊಂಡು, [ನಂತರ,] ಅದರಿಂದ ಜಗತ್ತಿನ ಉನ್ನತಿಯನ್ನು ಮಾಡುವುದಕ್ಕಾಗಿ, ಗೃಹಾಶ್ರಮವನ್ನೂ ಅವಶ್ಯವಾಗಿ ಮಾಡಬೇಕು!

[ನಂತರ,] ವಿದ್ಯೆ ಮತ್ತು ಜಗತ್ತಿನ ಉಪಕಾರವನ್ನು ಮಾಡುವುದಕ್ಕಾಗಿ, ಏಕಾಂತದಲ್ಲಿ ಕುಳಿತು, ಜಗತ್ತಿನ ಅಧಿಷ್ಠಾತೃವಾದ ಯಾವ ಈಶ್ವರನಿದ್ದಾನೋ, ಅವನ ಜ್ಞಾನವನ್ನು ಚೆನ್ನಾಗಿ ಪಡೆದುಕೊಳ್ಳಬೇಕು! ಮತ್ತು ಮನುಷ್ಯರಿಗೆ ಎಲ್ಲಾ ವ್ಯವಹಾರಗಳ ಉಪದೇಶವನ್ನೂ ಕೂಡ, ಮಾಡಬೇಕು!

ಮತ್ತೆ, ಅವರ ಎಲ್ಲಾ ಸಂದೇಹಗಳ ಭೇದನ, ಹಾಗೂ ಸತ್ಯ ಮಾತುಗಳ ನಿಶ್ಚಯ ಮಾಡುವುದಕ್ಕಾಗಿ, ಸಂನ್ಯಾಸಾಶ್ರಮವನ್ನೂ ಕೂಡ, ಅವಶ್ಯವಾಗಿ ಅಂಗೀಕರಿಸಬೇಕು! ಏಕೆಂದರೆ, ಇದಿಲ್ಲದೇ, ಸಂಪೂರ್ಣ ಪಕ್ಷಪಾತವನ್ನು ಬಿಡುವುದು ಬಹಳ ಕಠಿಣವಾಗಿರುತ್ತದೆ!

ಇತಿ ವರ್ಣಾಶ್ರಮವಿಷಯಃ ಸಂಕ್ಷೇಪತಃ ॥	**ಇಲ್ಲಿಗೆ ವರ್ಣಾಶ್ರಮಗಳ ವಿಷಯವು ಸಂಕ್ಷೇಪವಾಗಿ ಮುಗಿಯಿತು. [೨೩]**

---

* ವಾನಪ್ರಸ್ಥ, ಹಾಗೂ ಸಂನ್ಯಾಸಾಶ್ರಮಗಳಿಗೆ ಈ ಗ್ರಂಥದಲ್ಲಿ ವೇದದ ಪ್ರಮಾಣಗಳನ್ನು ಕೊಟ್ಟಿಲ್ಲ. ಆದರೆ, ಬ್ರಾಹ್ಮಣ-ಉಪನಿಷತ್ತುಗಳ ಪ್ರಮಾಣಗಳನ್ನು ಕೊಡಲಾಗಿದೆ _ಅನು.

(೨೪) ಪಂಚಮಹಾಯಜ್ಞ

ಅಥ ಪಂಚಮಹಾಯಜ್ಞವಿಷಯಃ ಸಂಕ್ಷೇಪತಃ

ಈಗ ಪಂಚಮಹಾಯಜ್ಞಗಳ ವಿಷಯವನ್ನು ಸಂಕ್ಷೇಪವಾಗಿ ಹೇಳುತ್ತೇವೆ.

ಯೇ ಪಂಚಮಹಾಯಜ್ಞಾ ಮನುಷ್ಯೈರ್ನಿತ್ಯಂ ಕರ್ತ್ತವ್ಯಾಃ ಸಂತಿ, ತೇಷಾಂ ವಿಧಾನಂ ಸಂಕ್ಷೇಪತೋಽತ್ರ ಲಿಖಾಮಃ.

ಯಾವ **ಪಂಚಮಹಾಯಜ್ಞ**ಗಳು ಮನುಷ್ಯರಿಂದ ನಿತ್ಯವೂ ಮಾಡಲ್ಪಡಬೇಕಾಗಿವೆಯೋ, ಅವುಗಳ ವಿಧಾನವನ್ನು ಸಂಕ್ಷೇಪವಾಗಿ ಇಲ್ಲಿ ಬರೆಯುತ್ತೇವೆ.

ಅಥ ಬ್ರಹ್ಮಯಜ್ಞಃ

ಈಗ ಬ್ರಹ್ಮಯಜ್ಞದ ವಿಷಯವನ್ನು ಹೇಳುತ್ತೇವೆ.

ಅಂದರೆ, ಅವುಗಳಲ್ಲಿ ಮೊದಲನೆಯದು **'ಬ್ರಹ್ಮಯಜ್ಞ'**, ಎನಿಸುತ್ತದೆ.

ತತ್ರ ಬ್ರಹ್ಮಯಜ್ಞಸ್ಯಾಯಂ ಪ್ರಕಾರಃ_

ಅದರಲ್ಲಿ **ಬ್ರಹ್ಮಯಜ್ಞ**ದ ಪ್ರಕಾರವು ಏನೆಂದರೆ_

ಸಾಂಗಾನಾಂ ವೇದಾದಿಶಾಸ್ತ್ರಾಣಾಂ ಸಮ್ಯಗ-ಧ್ಯಯನಮಧ್ಯಾಪನಂ ಸಂಧ್ಯೋಪಾಸನಂ ಚ ಸರ್ವೈಃ ಕರ್ತ್ತವ್ಯಮ್.

ಅಂಗಗಳ* ಜೊತೆಗೆ ವೇದಗಳೇ ಮೊದಲಾದ ಶಾಸ್ತ್ರಗಳ ಉತ್ತಮವಾದ ಅಧ್ಯಯನ-ಅಧ್ಯಾಪನ ಮತ್ತು ಸಂಧ್ಯೋಪಾಸನೆಯು ಎಲ್ಲರಿಂದಲೂ ಮಾಡಲ್ಪಡಬೇಕು!

ಅಂದರೆ, ಅಂಗಗಳ ಸಹಿತವಾಗಿ ವೇದಾದಿ ಶಾಸ್ತ್ರಗಳನ್ನು ಓದುವುದು-ಓದಿಸುವುದು ; ಹಾಗೂ **ಸಂಧ್ಯೋಪಾಸನೆ,** ಎಂದರೆ ಪ್ರಾತಃಕಾಲ ಮತ್ತು ಸಾಯಂಕಾಲ ಈಶ್ವರನ ಸ್ತುತಿ, ಪ್ರಾರ್ಥನೆ ಮತ್ತು ಉಪಾಸನೆಗಳನ್ನು ಮನುಷ್ಯರೆಲ್ಲರೂ ಮಾಡಬೇಕು!

* ಶಿಕ್ಷಾ, ವ್ಯಾಕರಣ, ನಿರುಕ್ತ, ಛಂದ, ಕಲ್ಪ ಮತ್ತು ಜ್ಯೋತಿಷ. _ಅನು.

ತತ್ರಾಧ್ಯಯನಾಧ್ಯಾಪನಕ್ರಮೋ ಯಾದೃಶಃ ಪಠನಪಾಠನವಿಷಯ* ಉಕ್ತಸ್ತಾದೃಶೋ ಗ್ರಾಹ್ಯಃ.

ಅದರಲ್ಲಿ **ಅಧ್ಯಯನ-ಅಧ್ಯಾಪನದ** ಕ್ರಮವನ್ನು ಯಾವ ರೀತಿಯಲ್ಲಿ '**ಪಠನ-ಪಾಠನವಿಷಯ**'ದಲ್ಲಿ ಹೇಳಲಾಗಿದೆಯೋ,* ಆ ರೀತಿಯನ್ನೇ ಅಂಗೀಕರಿಸಬೇಕು!

ಅಂದರೆ, '**ಪಠನ-ಪಾಠನವಿಷಯ**'ದಲ್ಲಿ ಪಠನ-ಪಾಠನದ ಯಾವ ವ್ಯವಸ್ಥೆಯನ್ನು ವಿಸ್ತಾರವಾಗಿ ಹೇಳಿದ್ದೇವೋ, ಅಲ್ಲಿ ನೋಡಿಕೊಳ್ಳಿರಿ!

ಸಂಧ್ಯೋಪಾಸನವಿಧಿಶ್ಚ 'ಪಂಚಮಹಾಯಜ್ಞ'-ವಿಧಾನೇ** ಯಾದೃಶ ಉಕ್ತಸ್ತಾದೃಶಃ ಕರ್ತ್ತವ್ಯಃ.

ಮತ್ತು '**ಸಂಧ್ಯೋಪಾಸನೆ**'ಯ ವಿಧಿಯು ಯಾವ ರೀತಿಯಲ್ಲಿ '**ಪಂಚಮಹಾಯಜ್ಞವಿಧಿ**'** ಯಲ್ಲಿ ಹೇಳಲಾಗಿದೆಯೋ, ಆ ರೀತಿಯಲ್ಲಿ ಮಾಡಲ್ಪಡಬೇಕು!

ಅಥ ದೇವಯಜ್ಞಃ

ಈಗ ದೇವಯಜ್ಞದ ವಿಷಯವನ್ನು ಹೇಳುತ್ತೇವೆ.

ತಥಾ ಅಗ್ನಿಹೋತ್ರವಿಧಿಶ್ಚ ಯಾದೃಶಸ್ತತ್ರೋಕ್ತ-ಸ್ತಾದೃಶ ಏವ ಕರ್ತ್ತವ್ಯಃ.[§]

ಮತ್ತು '**ಅಗ್ನಿಹೋತ್ರವಿಧಿ**'ಯೂ ಕೂಡ, ಯಾವ ರೀತಿಯಲ್ಲಿ ಆ ಗ್ರಂಥದಲ್ಲಿ ಹೇಳಲಾಗಿದೆಯೋ,[§] ಆ ರೀತಿಯಲ್ಲೇ ಮಾಡಲ್ಪಡಬೇಕು!

---

* ಸತ್ಯಾರ್ಥಪ್ರಕಾಶೇ ಕನ್ನಡಸಂಸ್ಕರಣೇ ತೃತೀಯೇ ಸಮುಲ್ಲಾಸೇ ೧೦೯ - ೧೨೧ ತಮಾನಿ ಪೃಷ್ಠಾನಿ ದ್ರಷ್ಟವ್ಯಾನಿ.

ಅಸ್ಮಿನ್ ಗ್ರಂಥೇಽಪ್ಯಗ್ರೇ '(೨೭) ಪಠನ-ಪಾಠನವಿಷಯ'-ನಾಮ್ನಾಽಧ್ಯಾಯ ಆಗಮಿಷ್ಯತಿ.

ತಥಾ ಚ ಗ್ರಂಥಕೃತಃ 'ಸಂಸ್ಕಾರವಿಧಿ'ನಾಮ್ನಿ ಗ್ರಂಥೇಽಪ್ಯೇಷ ವಿಷಯೋ ವೇದಾರಂಭಸಂಸ್ಕಾರಪ್ರಕರಣ ಉಕ್ತಃ. ಅಸ್ಯ ಗ್ರಂಥಸ್ಯ ಕನ್ನಡಸಂಸ್ಕರಣೇ ೧೪೯ - ೧೫೨ ತಮಾನಿ ಪೃಷ್ಠಾನಿ ದ್ರಷ್ಟವ್ಯಾನಿ. _ಅನು.

** 'ಪಂಚಮಹಾಯಜ್ಞವಿಧಿಃ' ಇತಿ ನಾಮ್ನಾ ಲಘುಗ್ರಂಥೋ ಗ್ರಂಥಕೃತಃ ಸಂಸ್ಕೃತ-ಹಿಂದೀಭಾಷಯೋರುಪಲಭ್ಯತೇ.

ಸಂಧ್ಯೋಪಾಸನವಿಧಿಸ್ತು ಗ್ರಂಥಕೃತಃ 'ಸತ್ಯಾರ್ಥಪ್ರಕಾಶೇ' ಕನ್ನಡಸಂಸ್ಕರಣೇ ಸಂಕ್ಷೇಪೇಣ ೬೫ - ೬೬ ತಮಯೋಃ ಪೃಷ್ಠಯೋಃ ತಥಾ ಚ 'ಸಂಸ್ಕಾರವಿಧಿ'ನಾಮ್ನಿ ಗ್ರಂಥೇ ಕನ್ನಡಸಂಸ್ಕರಣೇ ಗೃಹಾಶ್ರಮಪ್ರಕರಣೇ ೨೫೮ - ೨೬೫ ಪೃಷ್ಠೇಷೂಪಲಭ್ಯತೇ. _ಅನು.

[§] ಅಯಂ ವಿಧಿರಪಿ ಸಂಕ್ಷೇಪೇಣ 'ಸತ್ಯಾರ್ಥಪ್ರಕಾಶೇ' ಕನ್ನಡಸಂಸ್ಕರಣೇ ತೃತೀಯೇ ಸಮುಲ್ಲಾಸೇ ೬೭ - ೬೯ ತಮೇಷು ಪೃಷ್ಠೇಷು ತಥಾ ಚ 'ಸಂಸ್ಕಾರವಿಧಿ'ನಾಮ್ನಿ ಗ್ರಂಥೇ ಕನ್ನಡಸಂಸ್ಕರಣೇ ಗೃಹಾಶ್ರಮಪ್ರಕರಣೇ ೨೬೫ - ೨೬೮ ತಮೇಷು ಪೃಷ್ಠೇಷು ದ್ರಷ್ಟವ್ಯಃ _ಅನು.

* 'ಸತ್ಯಾರ್ಥಪ್ರಕಾಶ' ತೃತೀಯ ಸಮುಲ್ಲಾಸ ಪುಟ ೧೦೯- ೧೨೧ ನ್ನು ನೋಡಿ.

ಈ ಗ್ರಂಥದಲ್ಲೂ ಕೂಡ, ಮುಂದೆ '(೨೭) **ಪಠನ-ಪಾಠನ-ವಿಷಯ**', ಎಂಬ ಅಧ್ಯಾಯವು ಬರಲಿದೆ.

ಮತ್ತು ಗ್ರಂಥಕರ್ತರ '**ಸಂಸ್ಕಾರವಿಧಿ**', ಎಂಬ ಗ್ರಂಥದಲ್ಲಿಯೂ ಕೂಡ, ಈ ವಿಷಯವು ವೇದಾರಂಭಸಂಸ್ಕಾರ, ಎಂಬ ಪ್ರಕರಣದಲ್ಲಿ ಹೇಳಲ್ಪಟ್ಟಿದೆ. ಈ ಗ್ರಂಥದ ೧೪೯-೧೫೨ ನೆಯ ಪುಟಗಳನ್ನು ನೋಡಿ. **_ಅನು.**

** ಈ ಗ್ರಂಥವು ಇನ್ನೂ ಕನ್ನಡದಲ್ಲಿ ಪ್ರಕಾಶಿತವಾಗಿಲ್ಲ.

'**ಸಂಧ್ಯೋಪಾಸನವಿಧಿ**'ಯಂತೂ ಗ್ರಂಥಕರ್ತರ '**ಸತ್ಯಾರ್ಥ ಪ್ರಕಾಶ**'ದಲ್ಲಿ ಸಂಕ್ಷೇಪವಾಗಿ, ೬೫ - ೬೬ ನೆಯ ಪುಟಗಳಲ್ಲಿಯೂ; ಮತ್ತು '**ಸಂಸ್ಕಾರವಿಧಿ**', ಎಂಬ ಗ್ರಂಥದ ಗೃಹಾಶ್ರಮಪ್ರಕರಣದಲ್ಲಿ ೨೫೮ - ೨೬೫ ನೆಯ ಪುಟಗಳಲ್ಲಿಯೂ ಹೇಳಲ್ಪಟ್ಟಿದೆ. **_ಅನು.**

[§] ಈ ವಿಧಿಯೂ ಕೂಡ, ಸಂಕ್ಷೇಪವಾಗಿ '**ಸತ್ಯಾರ್ಥಪ್ರಕಾಶ**' ತೃತೀಯ ಸಮುಲ್ಲಾಸದ ೬೭ - ೬೯ ನೆಯ ಪುಟಗಳಲ್ಲಿಯೂ ಮತ್ತು 'ಸಂಸ್ಕಾರವಿಧಿ', ಎಂಬ ಗ್ರಂಥದ ಗೃಹಾಶ್ರಮಪ್ರಕರಣದಲ್ಲಿ ೨೬೫ - ೨೬೮ ನೆಯ ಪುಟಗಳಲ್ಲಿಯೂ ಬರೆಯಲ್ಪಟ್ಟಿದೆ. **_ಅನು.**

ಅಂದರೆ, ಸಂಧ್ಯೋಪಾಸನೆ ಮತ್ತು ಅಗ್ನಿಹೋತ್ರದ ವಿಧಾನಗಳನ್ನು ಹೇಗೆ **'ಪಂಚಮಹಾಯಜ್ಞವಿಧಿ'** ಪುಸ್ತಕದಲ್ಲಿ ಬರೆದು ಬಿಟ್ಟಿದ್ದೇವೋ, ಹಾಗೆ ತಿಳಿದುಕೊಳ್ಳಿರಿ!

ಬ್ರಹ್ಮಯಜ್ಞ-ಅಗ್ನಿಹೋತ್ರಗಳ ಪ್ರಮಾಣಗಳು

ಅತ್ರ ಬ್ರಹ್ಮಯಜ್ಞಾಗ್ನಿಹೋತ್ರಪ್ರಮಾಣಂ ಲಿಖ್ಯತೇ-

ಈಗ ಬ್ರಹ್ಮಯಜ್ಞ*ದ ಮತ್ತು ಅಗ್ನಿಹೋತ್ರದ ಪ್ರಮಾಣಗಳನ್ನು ಬರೆಯುತ್ತೇವೆ_

ಅಗ್ನಿಹೋತ್ರ ಎಂದರೇನು?

[ಋಷಿಃ_ ವಿರೂಪ ಆಂಗಿರಸಃ ; ದೇವತಾ_ ಅಗ್ನಿಃ ; ಛಂದಃ_ ಗಾಯತ್ರೀ ; ಸ್ವರಃ_ ಷಡ್ಜಃ]

ಸಮಿಧಾಗ್ನಿಂ ದುವಸ್ಯತ ಘೃತೈರ್ಬೋಧಯತಾತಿಥಿಮ್ ।
ಆಸ್ಮಿನ್ ಹವ್ಯಾ ಜುಹೋತನ ॥೧॥

[ಯಜುರ್ವೇದೇ ಅ. ೩, ಮಂ. ೧]

[ಅರ್ಥ:_ "ಅತಿಥಿರೂಪ ಅಗ್ನಿಯನ್ನು ಪರಿಚರಿಸಿರಿ! ತುಪ್ಪಗಳಿಂದ, ಹಾಗೂ ಸಮಿತ್ತಿನಿಂದ ಪ್ರದೀಪ್ತಮಾಡಿ! ಇದರಲ್ಲಿ ಹವ್ಯದ್ರವ್ಯಗಳಿಂದ ಚೆನ್ನಾಗಿ ಹೋಮವನ್ನು ಮಾಡಿ!"

(ಯಜುರ್ವೇದ: ೩. ೧)]

ಭಾಷ್ಯಮ್_

(ಸಮಿಧಾಗ್ನಿಂ.) ಹೇ ಮನುಷ್ಯಾ! ವಾಯ್ವೋಷಧಿ-ವೃಷ್ಟಿಜಲಶುದ್ಧ್ಯೈ ಪರೋಪಕಾರಾಯ ;

(ಘೃತೈಃ) ಘೃತಾದಿಭಿಶ್ಶೋಧಿತೈರ್ದ್ರವ್ಯೈಃ ;

ಸಮಿಧಾ ಚಾತಿಥಿಮಗ್ನಿಂ ಯೂಯಂ ಬೋಧಯತ ನಿತ್ಯಂ ಪ್ರದೀಪಯತ.

ಭಾಷ್ಯ_

(ಸಮಿಧಾಗ್ನಿಂ.) ಎಲೈ ಮನುಷ್ಯರೇ! ಪರೋಪಕಾರಕ್ಕಾಗಿ ವಾಯು, ಓಷಧಿ, ಮತ್ತು ವೃಷ್ಟಿಜಲದ ಶುದ್ಧಿಯನ್ನು ಮಾಡುವುದಕ್ಕೋಸ್ಕರ ;

(ಘೃತೈಃ) ತುಪ್ಪ ಮೊದಲಾದುವುಗಳಿಂದ ಶೋಧಿಸಲ್ಪಟ್ಟ ದ್ರವ್ಯಗಳಿಂದಲೂ ;

ಹಾಗೂ ಸಮಿತ್ತಿನಿಂದಲೂ ಅತಿಥಿರೂಪನಾದ ಅಗ್ನಿಯನ್ನು ನೀವು (ಬೋಧಯತ) ನಿತ್ಯವೂ ಹೊತ್ತಿಸಿರಿ!

* ಇಲ್ಲಿ ಪ್ರಮಾಣರೂಪದಲ್ಲಿ ಅಗ್ನಿಹೋತ್ರದಂತೆ ತೋರುವ ಮಂತ್ರಗಳಿಗೆ ಪರಮೇಶ್ವರಪರಕವಾದ, ಹಾಗೂ ಭೌತಿಕಅಗ್ನಿ-ಪರಕವಾದ ಎರಡೂ ರೀತಿಯ ಭಾಷ್ಯವನ್ನು ಗ್ರಂಥಕರ್ತರು ಮುಂದೆ ಬರೆದಿರುವುದರಿಂದ, ಇದು ಬ್ರಹ್ಮಯಜ್ಞಕ್ಕೂ ಅನ್ವಯಿಸುತ್ತದೆ. _ಅನು.

ಅಂದರೆ, ವಾಯು, ಔಷಧ ಮತ್ತು ಮಳೆಯ ನೀರನ್ನು ಶುದ್ಧ ಮಾಡುವುದರ ಮೂಲಕ ಎಲ್ಲರ ಉಪಕಾರವನ್ನು ಮಾಡುವುದಕ್ಕಾಗಿ, ತುಪ್ಪವೇ ಮೊದಲಾದ ಪದಾರ್ಥಗಳಿಂದಲೂ, ಹಾಗೂ **ಸಮಿಧಾ**, ಎಂದರೆ ಮಾವು ಮತ್ತು ಮುತ್ತುಗ ಮೊದಲಾದ ಕಾಷ್ಠಗಳಿಂದಲೂ ಅತಿಥಿರೂಪನಾದ ಅಗ್ನಿಯನ್ನು ನೀವು ನಿತ್ಯವೂ ಬೆಳಗಿಸಿರಿ!

(ಅಸ್ಮಿನ್) ಅಗ್ನೌ ;

(ಅಸ್ಮಿನ್) ಈ ಅಗ್ನಿಯಲ್ಲಿ ;

(ಹವ್ಯಾ) ಹೋತುಮರ್ಹಾಣಿ ಪುಷ್ಟಿಮಧುರ-ಸುಗಂಧರೋಗನಾಶಕರೈರ್ಗುಣೈರ್ಯುಕ್ತಾನಿ ಸಮ್ಯಕ್ ಶೋಧಿತಾನಿ ದ್ರವ್ಯಾಣಿ ;

(ಹವ್ಯಾ) ಹೋಮ ಮಾಡಲು ಯೋಗ್ಯವಾದ ಪುಷ್ಟಿ-ಮಧುರ-ಸುಗಂಧಿತ-ರೋಗನಾಶಕರವಾದ ಗುಣಗಳಿಂದ ಕೂಡಿದ, ಹಾಗೂ ಚೆನ್ನಾಗಿ ಶುದ್ಧಮಾಡಲ್ಪಟ್ಟ ದ್ರವ್ಯಗಳನ್ನು ;

(ಆ ಜುಹೋತನ) ಆ ಸಮಂತಾಜ್ಜುಹುತ.

(ಆ ಜಹೋತನ) ಉತ್ತಮ ರೀತಿಯಲ್ಲಿ ಹೋಮ ಮಾಡಿರಿ!

ಅಂದರೆ, ಮತ್ತೆ ಆ ಅಗ್ನಿಯಲ್ಲಿ ಹೋಮಿಸಲು ಯೋಗ್ಯವಾದ ಪುಷ್ಟ, ಮಧುರ, ಸುಗಂಧಿತ, ಎಂದರೆ ಹಾಲು, ತುಪ್ಪ, ಸಕ್ಕರೆ, ಬೆಲ್ಲ, ಕೇಸರಿ, ಕಸ್ತೂರಿ ಮೊದಲಾದ, ಮತ್ತು ಎಲ್ಲ ರೀತಿಯಿಂದಲೂ ಶುದ್ಧವಾದ, ಹಾಗೂ ರೋಗನಾಶಕರವಾದ ಸೋಮಲತೆ ಮೊದಲಾದ ಪದಾರ್ಥಗಳನ್ನು ಉತ್ತಮ ರೀತಿಯಲ್ಲಿ ಹೋಮ ಮಾಡಿರಿ!

ಏವಮಗ್ನಿಹೋತ್ರಂ ನಿತ್ಯಂ (ದುವಸ್ಯತ) ಪರಿಚರತ.

ಹೀಗೆ, ಅಗ್ನಿಹೋತ್ರವನ್ನು ಪ್ರತಿನಿತ್ಯವೂ (ದುವಸ್ಯತ) ಸೇವಿಸಿರಿ!

ಅನೇನ ಕರ್ಮಣಾ ಸರ್ವೋಪಕಾರಂ ಕುರುತ ॥ ೧ ॥

[ಮತ್ತು] ಈ ಕರ್ಮದಿಂದ ಎಲ್ಲರ ಉಪಕಾರವನ್ನು ಮಾಡಿರಿ! [೧]

ಅಗ್ನಿಹೋತ್ರವನ್ನು ಮಾಡುವವನ ಸಂಕಲ್ಪ!

[ಋಷಿಃ_ ವಿಶ್ವರೂಪಃ ; ದೇವತಾ_ ಅಗ್ನಿಃ ; ಛಂದಃ_ ಗಾಯತ್ರೀ ; ಸ್ವರಃ_ ಷಡ್ಜಃ]

ಅಗ್ನಿಂ ದೂತಂ ಪುರೋ ದಧೇ ಹವ್ಯವಾಹಮುಪ ಬ್ರುವೇ ।
ದೇವಾ೨ಽ ಆ ಸಾದಯಾದಿಹ ॥ ೨ ॥

[ಯಜುರ್ವೇದೇ ಅ. ೨೨, ಮಂ. ೧೭]

[ಅರ್ಥ:_ " ದೂತರೂಪ ಅಗ್ನಿಯನ್ನು ಎದುರಿಗೆ ಸ್ಥಾಪಿಸುತ್ತೇನೆ! ಹವ್ಯವನ್ನು ಕೊಂಡೊಯ್ಯು ವವನಿಗೆ ಉಪದೇಶಿಸುತ್ತೇನೇನೆಂದರೆ_ ಈ ಜಗತ್ತಿನಲ್ಲಿ ದಿವ್ಯಗುಣಗಳನ್ನು ಎಲ್ಲೆಡೆಯಿಂದ ತಂದುಕೊಡು ! "

(ಯಜುರ್ವೇದಃ· ೨೨. ೧೭)]

ಭಾಷ್ಯಮ್_

(ಅಗ್ನಿಂ ದೂತಂ) ಅಗ್ನಿಹೋತ್ರಕರ್ತ್ತೈವಮಿಚ್ಛೇದ್ ;

ಅಹಂ ವಾಯೌ ಮೇಘಮಂಡಲೇ ಚ ಭೂತದ್ರವ್ಯಸ್ಯ ಪ್ರಾಪಣಾರ್ಥಮಗ್ನಿಂ ದೂತಂ ಭೃತ್ಯವತ್ ;

(ಪುರೋ ದಧೇ) ಸಮ್ಮುಖತಃ ಸ್ಥಾಪಯೇ.

ಕಥಂಭೂತಮಗ್ನಿಮ್?

(ಹವ್ಯವಾಹಮ್) 'ಹವ್ಯಂ ದ್ರವ್ಯಂ ದೇಶಾಂತರಂ ವಹತಿ ಪ್ರಾಪಯತೀತಿ ಹವ್ಯವಾಟ್' ;

ತಂ (ಉಪಬ್ರುವೇ) ಅನ್ಯಾನ್ ಜಿಜ್ಞಾಸೂನ್ ಪ್ರತ್ಯುಪದಿಶಾನಿ_

(ದೇವಾನ್೨.) ಸೋಽಗ್ನಿರೇತದಗ್ನಿಹೋತ್ರಕರ್ಮಣಾ ದೇವಾನ್ ದಿವ್ಯಗುಣಾನ್ ;

ಭಾಷ್ಯ_

(ಅಗ್ನಿಂ ದೂತಂ) ಅಗ್ನಿಹೋತ್ರವನ್ನು ಮಾಡುವವನು ಹೇಗೆ ಇಚ್ಛೆ ಮಾಡಬೇಕೆಂದರೆ_

ನಾನು ವಾಯುವಿನಲ್ಲೂ ಮತ್ತು ಮೇಘಮಂಡಲದಲ್ಲೂ ಭೌತಿಕದ್ರವ್ಯವನ್ನು ತಲುಪಿಸುವುದಕ್ಕಾಗಿ, ಅಗ್ನಿಯನ್ನು **'ದೂತ'**, ಎಂದರೆ ಭೃತ್ಯನಂತೆ ;

(ಪುರೋ ದಧೇ) ಎದುರಿಗೆ ಸ್ಥಾಪಿಸುತ್ತೇನೆ!

ಅಂದರೆ, ನಾನು ಪ್ರಾಣಿಗಳಿಗೆ ಉಪಕಾರವನ್ನು ಮಾಡುವಂತಹ ಪದಾರ್ಥಗಳನ್ನು ಗಾಳಿ ಮತ್ತು ಮೇಘ ಮಂಡಲದಲ್ಲಿ ತಲುಪಿಸುವುದಕ್ಕಾಗಿ, ಅಗ್ನಿಯನ್ನು ಸೇವಕನಂತೆ ನನ್ನ ಎದುರಿಗೆ ಸ್ಥಾಪನೆ ಮಾಡುತ್ತೇನೆ!

ಯಾವ ತರಹದ ಅಗ್ನಿಯನ್ನು? ಎಂದರೆ_

(ಹವ್ಯವಾಹಮ್) 'ಹವ್ಯದ್ರವ್ಯವನ್ನು ಸ್ಥಾನದಿಂದ ಸ್ಥಾನಕ್ಕೆ ವಹನ ಮಾಡುವುದು, ಎಂದರೆ ತಲುಪಿಸುವುದು ಯಾವುದೋ, ಅದು **ಹವ್ಯವಾಟ್'** ;

ಅಂದರೆ, **'ಹವ್ಯ'**, ಎಂದರೆ ಹೋಮ ಮಾಡಲು ಯೋಗ್ಯವಾದ ವಸ್ತುವನ್ನು ಬೇರೆ ಸ್ಥಾನಕ್ಕೆ ತಲುಪಿಸುವುದರಿಂದ, ಆ ಅಗ್ನಿಗೆ **'ಹವ್ಯವಾಟ್'**, ಎಂದು ಹೆಸರು!

ಅದಕ್ಕೆ (ಉಪಬ್ರುವೇ) ಇತರ ಜಿಜ್ಞಾಸುಗಳ ಪ್ರತಿಯಾಗಿ ಉಪದೇಶ ಮಾಡುತ್ತೇನೆ. ಏನೆಂದರೆ_

ಅಂದರೆ, ಯಾರು ಅಗ್ನಿಹೋತ್ರದ ಬಗ್ಗೆ ತಿಳಿಯಲು ಇಚ್ಛಿಸುತ್ತಾರೋ, ಅವರಿಗೆ ನಾನು ಉಪದೇಶವನ್ನು ಮಾಡುವುದೇನೆಂದರೆ_

(ದೇವಾನ್೨.) ಆ ಅಗ್ನಿಯು ಈ ಅಗ್ನಿಹೋತ್ರ ಕರ್ಮದ ಮೂಲಕವಾಗಿ, **'ದೇವಾನ್'**, ಎಂದರೆ ದಿವ್ಯ ಗುಣಗಳನ್ನು ;

ವಾಯುವೃಷ್ಟಿಜಲಶುದ್ಧಿದ್ವಾರೇಹಾಸ್ಮಿನ್ ಸಂಸಾರ ಆಸಾದಯಾದ್ ಆ ಸಮಂತಾತ್ ಪ್ರಾಪಯತಿ.

ವಾಯು, ಹಾಗೂ ವೃಷ್ಟಿಜಲದ ಮೂಲಕ ಈ ಜಗತ್ತಿನಲ್ಲಿ **(ಆಸಾದಯಾತ್)** ಎಲ್ಲ ಕಡೆಯಿಂದಲೂ ತಲುಪಿಸುತ್ತಾನೆ!

ಅಂದರೆ, ಆ ಅಗ್ನಿಯು ಈ ಅಗ್ನಿಹೋತ್ರಕರ್ಮದ ಮೂಲಕ ವಾಯು ಮತ್ತು ವೃಷ್ಟಿಜಲದ ಶುದ್ಧಿಯನ್ನು ಮಾಡುವುದರಿಂದ, ಈ ಜಗತ್ತಿನಲ್ಲಿ ಶ್ರೇಷ್ಠಗುಣಗಳನ್ನು ತಲುಪಿಸುತ್ತದೆ!

ಯದ್ವಾ _

ಅಥವಾ **(ಎರಡನೆಯ) ಅರ್ಥವೇನೆಂದರೆ_**

ಹೇ ಪರಮೇಶ್ವರ! **(ದೂತಮ್) ಸರ್ವೇಭ್ಯಃ ಸತ್ಯೋಪದೇಶಕಂ ;**

ಓ ಪರಮೇಶ್ವರ! **(ದೂತಮ್)** ಎಲ್ಲರಿಗೂ ಸತ್ಯವನ್ನು ಉಪದೇಶಿಸುವವನೂ ;

(ಅಗ್ನಿಮ್) ಅಗ್ನಿಸಂಜ್ಞಕಂ ತ್ವಾಂ ;

[ಹಾಗೂ] **(ಅಗ್ನಿಮ್)** ಅಗ್ನಿಸಂಜ್ಞಕನೂ ಆದ ನಿಮ್ಮನ್ನು ;

(ಪುರೋ ದಧೇ) ಇಷ್ಟತ್ವೇನೋಪಾಸ್ಯಂ ಮನ್ಯೇ.

(ಪುರೋ ದಧೇ) ಇಷ್ಟದೇವನಾದುದರಿಂದ, ಉಪಾಸನೆಗೆ ಯೋಗ್ಯ, ಎಂದು ಅಂಗೀಕರಿಸುತ್ತೇನೆ.

ಅಂದರೆ, ಎಲ್ಲಾ ಪ್ರಾಣಿಗಳಿಗೂ ಸತ್ಯದ ಉಪದೇಶವನ್ನು ಮಾಡುವ ಓ ಪರಮೇಶ್ವರ! ನೀವು **'ಅಗ್ನಿ'**, ಎಂಬ ಹೆಸರಿನಿಂದ ಪ್ರಸಿದ್ಧರಾಗಿದ್ದೀರಿ! ನಾನು ಇಚ್ಛಾಪೂರ್ವಕವಾಗಿ ನಿಮ್ಮನ್ನು ಉಪಾಸನೆಗೆ ಯೋಗ್ಯರೆಂದು ತಿಳಿಯುತ್ತೇನೆ.

ತಥಾ (ಹವ್ಯವಾಹಮ್) 'ಗ್ರಹೀತುಂ ಯೋಗ್ಯಂ ಶುಭಗುಣಮಯಂ ವಿಜ್ಞಾನಂ ಹವ್ಯಂ' ;

ಮತ್ತು **(ಹವ್ಯವಾಹಮ್)** 'ಗ್ರಹಿಸಲು ಯೋಗ್ಯವಾದ ಶುಭಗುಣಗಳಿಂದ ಕೂಡಿದ ವಿಜ್ಞಾನವೇ **ಹವ್ಯ**';

'ತದ್ ವಹತಿ ಪ್ರಾಪಯತೀತಿ ತಂ' ;

'ಅದನ್ನು ಯಾವನು ತಲುಪಿಸುತ್ತಾನೋ, **ಅವನಿಗೆ'** ;

ತ್ವಾ (ಉಪಬ್ರುವೇ) ಉಪದಿಶಾನಿ_

ಎಂದರೆ, ನಿನ್ನ **(ಉಪಬ್ರುವೇ)** ಬಳಿ ಹೇಳುತ್ತೇನೆ. ಏನೆಂದರೆ_

ಸ ಭವಾನ್ ಕೃಪಯಾ (ಇಹ) ಅಸ್ಮಿನ್ ಸಂಸಾರೇ ;

ಆ ನೀವು ಕೃಪೆಯಿಂದ **(ಇಹ)** ಈ ಜಗತ್ತಿನಲ್ಲಿ;

(ದೇವಾನ್) ದಿವ್ಯಗುಣಾನ್ (ಆಸಾದಯಾತ್) ಆ ಸಮಂತಾತ್ ಪ್ರಾಪಯತು ॥ ೨ ॥

(ದೇವಾನ್) ದಿವ್ಯಗುಣಗಳನ್ನು ; **(ಆಸಾದಯಾತ್)** ಎಲ್ಲೆಡೆಯಿಂದಲೂ ತಲುಪಿಸಿ!

ಅಂದರೆ, ನಿಮ್ಮನ್ನು ತಿಳಿಯಲು ಇಚ್ಛಿಸುವವರಿಗೂ ಕೂಡ, ನಾನು ನಿಮ್ಮ ಶುಭಗುಣಯುಕ್ತವೂ, ವಿಶೇಷ ಜ್ಞಾನದಾಯಕವೂ ಆದ ಉಪದೇಶವನ್ನು ಮಾಡಲಿ, ಎಂಬಂತೆ ನನ್ನ ಮೇಲೆ ಕೃಪೆಯಿಡಿ! ಮತ್ತು ನೀವೂ ಕೂಡ, ಕೃಪೆ ಮಾಡಿ, ಈ ಜಗತ್ತಿನಲ್ಲಿ ಶ್ರೇಷ್ಠ ಗುಣಗಳನ್ನು ತಲುಪುವಂತೆ ಮಾಡಿ! [೨]

ಅಗ್ನಿಹೋತ್ರದಿಂದ ಆನಂದ-ಧನ-ಶರೀರಪುಷ್ಟಿ!

[ಋಷಿಃ_ ಭೃಗುಃ ; ದೇವತಾ_ ಅಗ್ನಿಃ ; ಛಂದಃ_ ತ್ರಿಷ್ಟುಪ್ ; ಸ್ವರಃ_ ಧೈವತಃ]

ಸಾಯಂಸಾಯಂ ಗೃಹಪತಿರ್ನೋ ಅಗ್ನಿಃ
ಪ್ರಾತಃಪ್ರಾತಃ ಸೌಮನಸಸ್ಯ ದಾತಾ ।
ವಸೋರ್ವಸೋರ್ವಸುದಾನ ಏಧಿ
ವಯಂ ತ್ವೇಂಧಾನಾಸ್ತನ್ವಂ ಪುಷೇಮ ॥ ೩ ॥

[ಅಥರ್ವವೇದೇ ಕಾಂ. ೧೯, ಅನು. ೭, ಮಂ. ೩]

[ಅರ್ಥಃ_ "ನಮ್ಮ ಗೃಹಪತಿಯಾದ ಅಗ್ನಿಯು ಪ್ರತಿಸಾಯಂಕಾಲವೂ, ಹಾಗೂ ಪ್ರತಿಪ್ರಾತಃಕಾಲವೂ ನಮಗೆ ಪ್ರಸನ್ನತೆಯನ್ನು ಕೊಡುವವನಾಗಿದ್ದಾನೆ. ಉತ್ತಮೋತ್ತಮ ಪದಾರ್ಥಗಳ ದಾತೃವೇ! ವರ್ಧಿಸು! ನಿನ್ನನ್ನು ಪ್ರಜ್ವಲಗೊಳಿಸುತ್ತಿರುವ ನಾವು ಶರೀರವನ್ನು ಪುಷ್ಟ ಮಾಡಿಕೊಳ್ಳೋಣ!"

(ಅಥರ್ವವೇದಃ ೧೯. ೫೫. ೩)]

ಭಾಷ್ಯಮ್_

(ನಃ) ಅಸ್ಮಾಕಮಯಂ (ಅಗ್ನಿಃ) ಭೌತಿಕಃ ಪರಮೇಶ್ವರಶ್ಚ;

(ಗೃಹಪತಿಃ) ಗೃಹಾತ್ಮಪಾಲಕಃ ಪ್ರಾತಃಸಾಯಂ ಪರಿಚರಿತಃ ಸೂಪಾಸಿತಶ್ಚ;

(ಸೌಮನಸಸ್ಯ ದಾತಾ) ಆರೋಗ್ಯಸ್ಯಾನಂದಸ್ಯ ಚ ದಾತಾಸ್ತಿ.

ಭಾಷ್ಯ_

(ನಃ) ನಮ್ಮ ಈ (ಅಗ್ನಿಃ) ಭೌತಿಕಅಗ್ನಿಯು ಮತ್ತು ಪರಮೇಶ್ವರನು ;

(ಗೃಹಪತಿಃ) ಗೃಹದ, ಮತ್ತು ಆತ್ಮನ ಪಾಲಕನಾಗಿ, ಪ್ರಾತಃಕಾಲ ಮತ್ತು ಸಾಯಂಕಾಲ [ನಮ್ಮಿಂದ] ಸೇವಿಸಲ್ಪಡುತ್ತಾ, ಹಾಗೂ ಉತ್ತಮವಾಗಿ ಉಪಾಸಿಸಲ್ಪಡುತ್ತಾ ;

(ಸೌಮನಸಸ್ಯ ದಾತಾ) ಆರೋಗ್ಯದ, ಹಾಗೂ ಆನಂದದ ದಾತೃವಾಗಿದ್ದಾನೆ.

ತಥಾ (ವಸೋರ್ವ.) ಉತ್ತಮೋತ್ತಮಪದಾರ್ಥಸ್ಯ ಚ ದಾತಾಸ್ತಿ.

ಮತ್ತು (**ವಸೋರ್ವಸೋಃ.**) ಉತ್ತಮೋತ್ತಮ ಪದಾರ್ಥದ ದಾತೃವೂ ಕೂಡ, ಆಗಿದ್ದಾನೆ!

ಅಂದರೆ, ಪ್ರತಿದಿನವೂ ಪ್ರಾತಃಕಾಲ-ಸಾಯಂಕಾಲ ಗಳಲ್ಲಿ (ನಮ್ಮಿಂದ) ಶ್ರೇಷ್ಠ ಉಪಾಸನೆಯನ್ನು ಪಡೆದ ಈ **'ಗೃಹಪತಿ'**, ಎಂದರೆ ಮನೆಯ ಮತ್ತು ಆತ್ಮನ ರಕ್ಷಕನಾದ **ಭೌತಿಕಅಗ್ನಿಯು** ಮತ್ತು ಪರಮೇಶ್ವರನು ಆರೋಗ್ಯ, ಆನಂದ ಮತ್ತು **'ವಸು'**, ಎಂದರೆ ಧನವನ್ನು ಕೊಡುವವರಾಗಿದ್ದಾರೆ!

ಅತ ಏವ ಪರಮೇಶ್ವರಃ 'ವಸುದಾನಃ' ಇತಿ ನಾಮ್ನಾಽಽಖ್ಯಾಯತೇ.

ಆದುದರಿಂದ, ಪರಮೇಶ್ವರನು **'ವಸುದಾನ'**, ಎಂಬ ಹೆಸರಿನಿಂದ ಕರೆಯಲ್ಪಡುತ್ತಾನೆ.

ಅಂದರೆ, ಇದರಿಂದ ಪರಮೇಶ್ವರನು **'ಧನದಾತಾ'**, ಎಂದು ಪ್ರಸಿದ್ಧನಾಗಿದ್ದಾನೆ!

ಹೇ ಪರಮೇಶ್ವರೈವಂಭೂತಸ್ತ್ವಮಸ್ಮಾಕಂ ರಾಜ್ಯಾದಿವ್ಯವಹಾರೇ ಹೃದಯೇ ಚ ;

ಓ ಪರಮೇಶ್ವರ! ಹೀಗಿರುವಂತಹ ನೀವು ನಮ್ಮ ರಾಜ್ಯವೇ ಮೊದಲಾದ ವ್ಯವಹಾರದಲ್ಲೂ, ಹಾಗೂ ಹೃದಯದಲ್ಲೂ ಕೂಡ ;

(ಏಧಿ) ಪ್ರಾಪ್ತೋ ಭವ.

(ಏಧಿ) ಪ್ರಾಪ್ತರಾಗಿ!

ಅಂದರೆ, **ನನ್ನ ರಾಜ್ಯ ಮೊದಲಾದ ವ್ಯವಹಾರಗಳಲ್ಲಿ**, ಹಾಗೂ ಚಿತ್ತದಲ್ಲಿ ಯಾವಾಗಲೂ ಪ್ರಕಾಶಿತರಾಗಿ!

ತಥಾ ಭೌತಿಕೋಽಪ್ಯಗ್ನಿರತ್ರ ಗ್ರಾಹ್ಯಃ .

ಈ ರೀತಿಯಾಗಿಯೇ, ಇಲ್ಲಿ ಭೌತಿಕಅಗ್ನಿಯೂ ಕೂಡ, ಗ್ರಹಣ ಮಾಡಲು ಯೋಗ್ಯವಾಗಿರುತ್ತದೆ.

(ವಯಂ ತ್ವೇ.) ಹೇ ಪರಮೇಶ್ವರ! ಏವಂ ತ್ವಾ ತ್ವಾಮಿಂಧಾನಾಃ ಪ್ರಕಾಶಮಾನಾ ವಯಂ ;

(ವಯಂ ತ್ವೇ.) ಓ ಪರಮೇಶ್ವರ! ಹೀಗೆ **(ತ್ವಾ)** ನಿಮ್ಮನ್ನು **(ಇಂಧಾನಾಃ)** ಪ್ರಸಿದ್ಧಗೊಳಿಸುತ್ತಿರುವ ನಾವು ;

(ತನ್ವಮ್) ಶರೀರಂ (ಪುಷೇಮ) ಪುಷ್ಟಂ ಕುರ್ಯಾಮ.

(ತನ್ವಮ್) ಶರೀರವನ್ನು **(ಪುಷೇಮ)** ಪುಷ್ಟಮಾಡಿಕೊಳ್ಳೋಣ!

ತಥಾಗ್ನಿಹೋತ್ರಾದಿಕರ್ಮಣಾ ಭೌತಿಕಮಗ್ನಿಮಿಂಧಾನಾಃ ಪ್ರದೀಪಯಿತಾರಃ ಸಂತಃ ಸರ್ವೇ ವಯಂ ಪುಷ್ಯಾಮಃ ॥ ೩ ॥

ಮತ್ತು ಅಗ್ನಿಹೋತ್ರವೇ ಮೊದಲಾದ ಕರ್ಮದ ಮೂಲಕ ಭೌತಿಕಅಗ್ನಿಯನ್ನೂ ಪ್ರಜ್ವಲಗೊಳಿಸುತ್ತಾ ಇದ್ದು, ನಾವೆಲ್ಲರೂ ಪುಷ್ಟರಾಗಿರುತ್ತೇವೆ!

ಅಂದರೆ, ಹೇ ಪರಮೇಶ್ವರ! ಹೇಗೆ ಮೇಲೆ ಹೇಳಿದ ರೀತಿಯಿಂದ ನಾವು ನಿಮ್ಮನ್ನು ಅಂಗೀಕರಿಸುತ್ತಾ, ನಮ್ಮ ಶರೀರದಿಂದ ಪುಷ್ಟರಾಗುತ್ತೇವೋ, ಹಾಗೆಯೇ ಭೌತಿಕಅಗ್ನಿಯನ್ನೂ ಕೂಡ, ಪ್ರಜ್ವಲಗೊಳಿಸುತ್ತಾ ಪುಷ್ಟರಾಗೋಣ! [೩]

ಅಗ್ನಿಹೋತ್ರ-ಈಶ್ವರೋಪಾಸನೆಯಿಂದ ನೂರು ವರ್ಷ ಆಯಸ್ಸು!

[ಋಷಿಃ_ ಭೃಗುಃ ; ದೇವತಾ_ ಅಗ್ನಿಃ ; ಛಂದಃ_ ತ್ರಿಷ್ಟುಪ್ ; ಸ್ವರಃ_ ಧೈವತಃ]

ಪ್ರಾತಃಪ್ರಾತರ್ಗೃಹಪತಿರ್ನೋ ಅಗ್ನಿಃ
ಸಾಯಂಸಾಯಂ ಸೌಮನಸಸ್ಯ ದಾತಾ ।
ವಸೋರ್ವಸೋರ್ವಸುದಾನ ಏಧೀಂ-
ಧಾನಾಸ್ತ್ವಾ ಶತಹಿಮಾ ಋಧೇಮ ॥ ೪ ॥

[ಅಥರ್ವವೇದೇ ಕಾಂ. ೧೯, ಅನು. ೭, ಮಂ. ೪]

[ಅರ್ಥ:_ "ನಮ್ಮ ಗೃಹಪತಿಯಾದ ಅಗ್ನಿಯು ಪ್ರತಿಪ್ರಾತಃಕಾಲವೂ, ಹಾಗೂ ಪ್ರತಿ ಸಾಯಂಕಾಲವೂ ನಮಗೆ ಪ್ರಸನ್ನತೆಯನ್ನು ಕೊಡುವವನಾಗಿದ್ದಾನೆ! ಉತ್ತಮೋತ್ತಮ ಪದಾರ್ಥಗಳ ದಾತೃವೇ! ವರ್ಧಿಸು! ನಿನ್ನನ್ನು ಪ್ರಕಾಶ ಪಡಿಸುತ್ತಿರುವ ನಾವು ನೂರು ವರ್ಷಕಾಲ ವರ್ಧಿಸೋಣ!"

(ಅಥರ್ವವೇದ: ೧೯. ೫೫. ೪)]

ಭಾಷ್ಯಮ್_

(ಪ್ರಾತಃಪ್ರಾತರ್ಗೃಹಪತಿರ್ನೋ.) ಅಸ್ಯಾರ್ಥಃ ಪೂರ್ವವದ್ ವಿಜ್ಞೇಯಃ.

ಅತ್ರ ವಿಶೇಷಸ್ತ್ವಯಮ್_

ಭಾಷ್ಯ_

(ಪ್ರಾತಃಪ್ರಾತರ್ಗೃಹಪತಿರ್ನೋ.) ಈ ಮಂತ್ರದ ಅರ್ಥವನ್ನು ಮೊದಲು ಹೇಳಿದಂತೆಯೇ ತಿಳಿಯಬೇಕು!

ಅಂದರೆ, ಈ ಮಂತ್ರದ ಅರ್ಥವನ್ನು ಹಿಂದಿನ ಮಂತ್ರದಂತೆಯೇ ತಿಳಿಯಿರಿ!

ಇದರಲ್ಲಿ ವಿಶೇಷವಂತೂ ಏನೆಂದರೆ_

ಅಂದರೆ, ಇದರಲ್ಲಿ ಇಷ್ಟು ವಿಶೇಷವೂ ಏನಿದೆಯೆಂದರೆ_

ಏವಮಗ್ನಿಹೋತ್ರಮೀಶ್ವರೋಪಾಸನಂ ಚ ಕುರ್ವಂತಃ ಸಂತಃ ;	ಹೀಗೆ ಅಗ್ನಿಹೋತ್ರವನ್ನೂ ಮತ್ತು ಈಶ್ವರೋ-ಪಾಸನೆಯನ್ನೂ ಮಾಡುತ್ತಾ ಇರುತ್ತಾ, ನಾವು ;
(ಶತಹಿಮಾಃ) 'ಶತಂ ಹಿಮಾ ಹೇಮಂತರ್ತವೋ ಗಚ್ಛಂತಿ ಯೇಷು ಸಂವತ್ಸರೇಷು ತೇ ಶತಹಿಮಾ' ;	**(ಶತಹಿಮಾಃ)** **'ಶತ'**, ಎಂದರೆ ನೂರು ; **'ಹಿಮ'**, ಎಂದರೆ ಹೇಮಂತಋತುಗಳು ಯಾವ ಸಂವತ್ಸರಗಳಲ್ಲಿ ವ್ಯತೀತವಾಗುತ್ತವೋ, ಅವು **'ಶತಹಿಮಾ'**;
ಯಾವತ್ ಸ್ಯುಸ್ತಾವತ್ (ಋಧೇಮ) ವರ್ಧೇಮಹಿ.	ಅವು ಎಲ್ಲಿಯ ತನಕ ಆಗುತ್ತವೋ, ಅಲ್ಲಿಯ ತನಕ **(ಋಧೇಮ)** ವರ್ಧಿಸೋಣ! ಅಂದರೆ, ಅಗ್ನಿಹೋತ್ರದ ಮತ್ತು ಈಶ್ವರನ ಉಪಾಸನೆಯನ್ನು ಮಾಡುತ್ತಿರುವ ನಾವುಗಳು ನೂರು ಹೇಮಂತಋತುಗಳು ವ್ಯತೀತವಾಗುವ ತನಕ, ಎಂದರೆ ನೂರು ವರ್ಷಗಳ ತನಕ ಧನವೇ ಮೊದಲಾದ ಪದಾರ್ಥಗಳಿಂದ ಸಮೃದ್ಧಿಯನ್ನು ಹೊಂದೋಣ!
ಏವಂ ಕೃತೇನ ಕರ್ಮಣಾ ನೋऽಸ್ಮಾಕಂ ಕದಾಚಿದ್ಧಾನಿರ್ನ ಭವೇದಿತೀಚ್ಛಾಮಃ ॥ ೪ ॥	ಹೀಗೆ, ಕರ್ಮವನ್ನು ಮಾಡುವುದರಿಂದ, ನಮಗೆ ಎಂದಿಗೂ ಹಾನಿಯಾಗದಿರಲಿ, ಎಂದು ಇಚ್ಛಿಸೋಣ! [೪]

ಅಗ್ನಿಹೋತ್ರಕ್ಕಾಗಿ ಪೂರ್ವಸಿದ್ಧತೆ

ಅಗ್ನಿಹೋತ್ರಕರಣಾರ್ಥಂ_	ಅಗ್ನಿಹೋತ್ರವನ್ನು ಮಾಡುವುದಕ್ಕಾಗಿ_
ತಾಮ್ರಸ್ಯ ಮೃತ್ತಿಕಾಯಾ ವೈಕಾಂ ವೇದಿಂ ಸಂಪಾದ್ಯ ;	ತಾಮ್ರದ, ಅಥವಾ ಮಣ್ಣಿನ ಒಂದು ವೇದಿಯನ್ನು ರಚಿಸಿ ;
ಕಾಷ್ಠಸ್ಯ ರಜತಸುವರ್ಣಯೋರ್ವಾ ಚಮಸ-ಮಾಜ್ಯಸ್ಥಾಲೀಂ ಚ ಸಂಗೃಹ್ಯ ;	ಮರದ, ಅಥವಾ ಬೆಳ್ಳಿಯ, ಅಥವಾ ಚಿನ್ನದ ಚಮಚವನ್ನೂ,* ಹಾಗೂ ತುಪ್ಪದ ಬಟ್ಟಲನ್ನೂ** ತಂದಿರಿಸಿಕೊಂಡು ;
ತತ್ರ ವೇದ್ಯಾಂ ಪಲಾಶಾಮ್ರಾದಿಸಮಿಧಃ ಸಂಸ್ಥಾಪ್ಯ ;	ನಂತರ, ಆ ವೇದಿಯಲ್ಲಿ ಮುತ್ತುಗ, ಮಾವು ಮೊದಲಾದ ಸಮಿತ್ತುಗಳನ್ನು ಜೋಡಿಸಿಟ್ಟು ;
ಅಗ್ನಿಂ ಪ್ರಜ್ವಾಲ್ಯ ;	ಅಗ್ನಿಯನ್ನು ಚೆನ್ನಾಗಿ ಹೊತ್ತಿಸಿದ ಮೇಲೆ ;

---

* ಅಗ್ನಿಯಲ್ಲಿ ತುಪ್ಪ ಮೊದಲಾದ ಪದಾರ್ಥಗಳನ್ನು ಹಾಕಲು ಉಪಯೋಗಿಸುವ ಪಾತ್ರೆಗೆ **'ಚಮಸಾ'**, ಎಂದು ಹೆಸರು _ಅನು.

** ತುಪ್ಪ ಮೊದಲಾದ ಪದಾರ್ಥಗಳನ್ನಿಡುವ ಪಾತ್ರೆಗೆ 'ಆಜ್ಯಸ್ಥಾಲೀ', ಎಂದು ಹೆಸರು _ಅನು.

ತತ್ರ ಪೂರ್ವೋಕ್ತದ್ರವ್ಯಸ್ಯ ಪ್ರಾತಃಸಾಯಂ-ಕಾಲಯೋಃ ;

ಅದರಲ್ಲಿ ಮೊದಲು ತಿಳಿಸಿದ ಪದಾರ್ಥಗಳ ಹೋಮವನ್ನು, ಪ್ರಾತಃಕಾಲ ಮತ್ತು ಸಾಯಂಕಾಲಗಳಲ್ಲಿ;

ಪ್ರಾತರೇವ ವೋಕ್ತಮಂತ್ರೈರ್ನಿತ್ಯಂ ಹೋಮಂ ಕುರ್ಯಾತ್.

ಅಥವಾ ಕೇವಲ ಪ್ರಾತಃಕಾಲದಲ್ಲೇ, (ಕೆಳಗೆ) ಹೇಳಿರುವ ಮಂತ್ರಗಳ ಮೂಲಕ ಪ್ರತಿನಿತ್ಯವೂ ಮಾಡಬೇಕು!

ಅಥಾಗ್ನಿಹೋತ್ರವಿಧಿಃ

ಈಗ ಅಗ್ನಿಹೋತ್ರದ ವಿಧಿಯನ್ನು ಹೇಳುತ್ತೇವೆ.

ಪ್ರಾತಃಕಾಲೀನ ಅಗ್ನಿಹೋತ್ರದ ಮಂತ್ರಗಳು

ಅಥಾಗ್ನಿಹೋತ್ರೇ ಹೋಮಕರಣಮಂತ್ರಾಃ_

ಈಗ, ಅಗ್ನಿಹೋತ್ರದಲ್ಲಿ ಹೋಮ ಮಾಡುವ ಮಂತ್ರಗಳು ಹೀಗಿವೆ_

[ಋಷಿಃ_ ಪ್ರಜಾಪತಿಃ ; ದೇವತಾ_ ಸೂರ್ಯಃ ; ಛಂದಃ_ ಪಂಕ್ತಿಃ ; ಸ್ವರಃ_ ಪಂಚಮಃ]

*ಸೂರ್ಯೋ ಜ್ಯೋತಿರ್ಜ್ಯೋತಿಃ ಸೂರ್ಯಃ ಸ್ವಾಹಾ ॥೧॥

ಸೂರ್ಯೋ ವರ್ಚೋ ಜ್ಯೋತಿರ್ವರ್ಚಃ ಸ್ವಾಹಾ ॥೨॥

ಜ್ಯೋತಿಃ ಸೂರ್ಯಃ ಸೂರ್ಯೋ ಜ್ಯೋತಿಃ ಸ್ವಾಹಾ ॥೩॥**

[ಋಷಿಃ_ ಪ್ರಜಾಪತಿಃ ; ದೇವತಾ_ ಸೂರ್ಯಃ ; ಛಂದಃ_ ಭುರಿಗ್ ಗಾಯತ್ರೀ ; ಸ್ವರಃ_ ಷಡ್ಜಃ]

ಸಜೂರ್ದೇವೇನ ಸವಿತ್ರಾ ಸಜೂರುಷಸೇಂದ್ರವತ್ಯಾ ।

ಜುಷಾಣಃ ಸೂರ್ಯೋ ವೇತು ಸ್ವಾಹಾ ॥೪॥+

ಇತಿ ಪ್ರಾತಃಕಾಲಮಂತ್ರಾಃ ॥

ಹೀಗೆ, ಪ್ರಾತಃಕಾಲದ ಮಂತ್ರಗಳಾದುವು!

---

* ಆಹುತ್ಯೈ ಪ್ರಯುಕ್ತಸ್ಯ ಪ್ರತ್ಯೇಕಸ್ಯ ಮಂತ್ರಸ್ಯಾದೌ 'ಓ೩ಮ್' ಇತ್ಯುಚ್ಚಾರಃ ಕರ್ತವ್ಯಃ _ಅನು.

** ಇಮೇ ಮಂತ್ರಾ ಯುಜುರ್ವೇದೇ (೩.೯) ಕ್ರಮ-ಭಿನ್ನತ್ವೇನೋಪಲಭ್ಯಂತೇ. _ಅನು.

+ ಅಯಂ ಮಂತ್ರೋ ಯಜುರ್ವೇದೇ (೩.೧೦) ಕ್ರಮ-ಭಿನ್ನತ್ವೇನೋಪಲಭ್ಯತೇ. _ಅನು.

* ಆಹುತಿಗೆ ಪ್ರಯುಕ್ತವಾಗುವ ಪ್ರತಿಯೊಂದು ಮಂತ್ರದ ಆರಂಭದಲ್ಲಿ 'ಓ೩ಮ್', ಎಂದು ಉಚ್ಚರಿಸಬೇಕು. _ಅನು.

** ಈ ಮಂತ್ರಗಳು ಯಜುರ್ವೇದದಲ್ಲಿ (೩.೯) ಭಿನ್ನಕ್ರಮದಿಂದ ದೊರಕುತ್ತವೆ. _ಅನು.

+ ಈ ಮಂತ್ರವು ಯಜುರ್ವೇದದಲ್ಲಿ (೩.೧೦) ಭಿನ್ನಕ್ರಮದಿಂದ ದೊರಕುತ್ತದೆ. _ಅನು.

ಮಂತ್ರಾರ್ಥ

[ಅರ್ಥ:_ " ಸೂರ್ಯನು ಜ್ಯೋತಿಯಾಗಿದ್ದಾನೆ! ಜ್ಯೋತಿಯು ಸೂರ್ಯ ಆಗಿದೆ! ಇದು ಆಹುತಿ! ॥೧॥"

" ಸೂರ್ಯನು ತೇಜಸ್ಸಾಗಿದ್ದಾನೆ! ಜ್ಯೋತಿಯು ತೇಜಸ್ಸಾಗಿದೆ! ಇದು ಆಹುತಿ! ॥೨॥"

" ಜ್ಯೋತಿಯು ಸೂರ್ಯ ಆಗಿದೆ! ಸೂರ್ಯನು ಜ್ಯೋತಿ ಆಗಿದ್ದಾನೆ! ಇದು ಆಹುತಿ! ॥೩॥"]

[ಅರ್ಥ:_ " ಸವಿತೃದೇವನ ಜೊತೆಗೆ, ಹಾಗೂ ಸೂರ್ಯಪ್ರಕಾಶದಿಂದ ಕೂಡಿದ ಉಷೆಯ ಜೊತೆಗೆ, ಪ್ರೀತಿಯಿಂದ ವರ್ತಿಸುತ್ತಾ, ಸೂರ್ಯನು ಬೆಳಗಲಿ! ಇದು ಆಹುತಿ! ॥೪॥"]

ಭಾಷ್ಯಮ್_

(ಸೂರ್ಯೋ ಜ್ಯೋ.) ಯಶ್ಚರಾಚರಾತ್ಮಾ;

ಜ್ಯೋತಿಷಾಂ ಪ್ರಕಾಶಕಾನಾಂ ಜ್ಯೋತಿಃ ಪ್ರಕಾಶಕಃ ;

ಸೂರ್ಯ್ಯಃ ಸರ್ವಪ್ರಾಣಃ ಪರಮೇಶ್ವರೋಽಸ್ತಿ;

ತಸ್ಮೈ ಸ್ವಾಹಾರ್ಥಾತ್ ತದಾಜ್ಞಾಪಾಲನೇನ ಸರ್ವಜಗದುಪಕಾರಾಯೈಕಾಹುತಿಂ ದದ್ಮಃ ॥೧॥

(ಸೂರ್ಯ್ಯೋ ವ.) ಯೋ ವರ್ಚ್ಚಃ ಸರ್ವವಿದಾಂ ;

ಜ್ಯೋತಿಷಾಂ ಜ್ಞಾನವತಾಂ ಜೀವಾನಾಂ ;

ಭಾಷ್ಯ_

(ಸೂರ್ಯೋ ಜ್ಯೋತಿಃ.) ಯಾವನು ಚರ ಮತ್ತು ಅಚರ ಜಗತ್ತಿಗೆ ಆತ್ಮನೂ ;

'ಜ್ಯೋತಿ', ಎಂದರೆ ಪ್ರಕಾಶ ಕೊಡುವುವಕ್ಕೂ ಪ್ರಕಾಶಕನೂ ;

'ಸೂರ್ಯ', ಎಂದರೆ ಎಲ್ಲರಿಗೂ ಪ್ರಾಣ ಸ್ವರೂಪನೂ ಆದ ಪರಮೇಶ್ವರನಾಗಿದ್ದಾನೋ ;

ಅವನಿಗೆ 'ಸ್ವಾಹಾ', ಎಂದರೆ, ಅವನ ಆಜ್ಞೆಯ ಪಾಲನೆ ಮಾಡುವುದರ ಮೂಲಕ ಎಲ್ಲಾ ಜಗತ್ತಿನ ಉಪಕಾರಕ್ಕಾಗಿ, ಒಂದು ಆಹುತಿಯನ್ನು ಕೊಡುತ್ತೇವೆ!

ಅಂದರೆ, ಯಾವನು ಚರಾಚರಗಳ ಆತ್ಮನೂ, ಪ್ರಕಾಶಸ್ವರೂಪನೂ, ಮತ್ತು ಸೂರ್ಯನೇ ಮೊದಲಾದ ಪ್ರಕಾಶಕಲೋಕಗಳನ್ನೂ ಕೂಡ, ಪ್ರಕಾಶ ಮಾಡುವವನೂ ಆಗಿದ್ದಾನೋ, ಅವನ ಪ್ರಸನ್ನತೆಗಾಗಿ ನಾವೆಲ್ಲರೂ ಹೋಮ ಮಾಡುತ್ತೇವೆ! [೧]

(ಸೂರ್ಯ್ಯೋ ವರ್ಚ್ಚೋ.) ಯಾವನು 'ವರ್ಚ್ಚಃ', ಎಂದರೆ ಎಲ್ಲವನ್ನೂ ತಿಳಿದಿರುವ ;

'ಜ್ಯೋತಿ', ಎಂದರೆ ಜ್ಞಾನಿಗಳಾದ ಜೀವಾತ್ಮರ ;

ವರ್ಚೋಽಂತರ್ಯಾಮಿತಯಾ ಸತ್ಯೋಪದೇಷ್ಟಾ ;

'ವರ್ಚಃ', ಎಂದರೆ ಅಂತರ್ಯಾಮಿಯಾಗಿರುವುದರಿಂದ ಸತ್ಯೋಪದೇಶಕನೂ ;

ಸರ್ವಾತ್ಮಾ ಸೂರ್ಯ್ಯಃ ಪರಮೇಶ್ವರೋಽಸ್ತಿ ;

ಸರ್ವಾತ್ಮನೂ ಆದ 'ಸೂರ್ಯ', ಎಂದರೆ ಪರಮೇಶ್ವರನಾಗಿದ್ದಾನೋ ;

ತಸ್ಮೈ (ಸ್ವಾಹಾರ್ಥಾತ್ ತದಾಜ್ಞಾಪಾಲನೇನ ಸರ್ವಜಗದುಪಕಾರಾಯೈಕಾಹುತಿಂ ದದ್ಮಃ) ॥ ೨ ॥

ಅವನಿಗೆ 'ಸ್ವಾಹಾ', ಎಂದರೆ ಅವನ ಆಜ್ಞೆಯ ಪಾಲನೆ ಮಾಡುವುದರ ಮೂಲಕ ಎಲ್ಲಾ ಜಗತ್ತಿನ ಉಪಕಾರಕ್ಕಾಗಿ, ಒಂದು ಆಹುತಿಯನ್ನು ಕೊಡುತ್ತೇವೆ!

ಅಂದರೆ, ಸೂರ್ಯ, ಎಂದರೆ ಯಾವ ಪರಮೇಶ್ವರನಿದ್ದಾನೋ, ಅವನು ನಮ್ಮೆಲ್ಲರಿಗೂ ವಿದ್ಯೆಗಳನ್ನು ಕೊಡುವವನೂ, ಮತ್ತು ನಮ್ಮಿಂದ ಅವುಗಳ ಪ್ರಚಾರವನ್ನು ಮಾಡಿಸುವವನೂ ಆಗಿದ್ದಾನೆ. ಅವನ ಅನುಗ್ರಹದಿಂದಲೇ ನಾವೆಲ್ಲರೂ ಅಗ್ನಿಹೋತ್ರವನ್ನು ಮಾಡುತ್ತೇವೆ! [೨]

(ಜ್ಯೋತಿಃ ಸೂ.) ಯಃ ಸ್ವಯಂಪ್ರಕಾಶಃ ಸರ್ವಜಗತ್‌ಪ್ರಕಾಶಕಃ ಸೂರ್ಯ್ಯೋ ಜಗದೀಶ್ವರೋಽಸ್ತಿ ;

(ಜ್ಯೋತಿಃ ಸೂರ್ಯ್ಯಃ.) ಯಾವನು ಸ್ವಯಂ ಪ್ರಕಾಶನೂ, ಹಾಗೂ ಎಲ್ಲಾ ಜಗತ್ತಿನ ಪ್ರಕಾಶಕನೂ ಆದ 'ಸೂರ್ಯ', ಎಂದರೆ ಜಗದೀಶ್ವರನಾಗಿದ್ದಾನೋ ;

ತಸ್ಮೈ (ಸ್ವಾಹಾರ್ಥಾತ್ ತದಾಜ್ಞಾಪಾಲನೇನ ಸರ್ವಜಗದುಪಕಾರಾಯೈಕಾಹುತಿಂ ದದ್ಮಃ) ॥ ೩ ॥

ಅವನಿಗೆ 'ಸ್ವಾಹಾ', ಎಂದರೆ ಅವನ ಆಜ್ಞೆಯ ಪಾಲನೆ ಮಾಡುವುದರ ಮೂಲಕ, ಎಲ್ಲಾ ಜಗತ್ತಿನ ಉಪಕಾರಕ್ಕಾಗಿ, ಒಂದು ಆಹುತಿಯನ್ನು ಕೊಡುತ್ತೇವೆ!

ಅಂದರೆ, ಯಾವನು ತಾನೇ ಪ್ರಕಾಶಮಾನನೂ, ಹಾಗೂ ಜಗತ್ತನ್ನು ಪ್ರಕಾಶಗೊಳಿಸುವ 'ಸೂರ್ಯ', ಎಂದರೆ ಜಗತ್ತಿನ ಈಶ್ವರನೂ ಆಗಿದ್ದಾನೋ, ಅವನ ಪ್ರಸನ್ನತೆಗಾಗಿ ನಾವೆಲ್ಲರೂ ಹೋಮ ಮಾಡುತ್ತೇವೆ! [೩]

(ಸಜೂರ್ದೇ.) ಯೋ ದೇವೇನ ದ್ಯೋತಕೇನ ಸವಿತ್ರಾ ಸೂರ್ಯ್ಯಲೋಕೇನ ಜೀವೇನ ಚ ಸಹ ;

(ಸಜೂರ್ದೇವೇನ.) ಯಾವನು ಪ್ರಕಾಶಮಾನವಾದ ಸೂರ್ಯಲೋಕದ, ಹಾಗೂ ಜೀವಾತ್ಮನ ಜೊತೆಗೆ ;

ತಥಾ_

ಮತ್ತು_

(ಸಜೂರುಷಸೇಂದ್ರವತ್ಯಾ) ಸೂರ್ಯ್ಯಪ್ರಕಾಶವತ್ಯೋಷಸಾಽಥವಾ ;

(ಸಜೂರುಷಸೇಂದ್ರವತ್ಯಾ) ಸೂರ್ಯನ ಪ್ರಕಾಶದಿಂದ ಕೂಡಿದ ಉಷಃಕಾಲದ ಜೊತೆಗೆ, ಅಥವಾ ;

ಜೀವವತ್ಯಾ ಮಾನಸವೃತ್ತ್ಯಾ (ಸಜೂಃ) ಸಹ ವರ್ತ್ತಮಾನಃ ಪರಮೇಶ್ವರೋಽಸ್ತಿ ;

ಮನಸ್ಸಿನ ವೃತ್ತಿಯಿಂದ ಕೂಡಿರುವ ಚೇತನನ ಸಂಗದ (ಸಜೂಃ) ಜೊತೆಗೆ ವರ್ತಮಾನನಾಗಿರುವ ಪರಮೇಶ್ವರನಾಗಿದ್ದಾನೋ ;

ಸಃ (ಜುಷಾಣಃ) ಸಂಪ್ರೀತ್ಯಾ ವರ್ತ್ತಮಾನಃ ಸನ್ ;

ಅವನು (ಜುಷಾಣಃ) ಅತ್ಯಂತ ಪ್ರೀತಿಯಿಂದ ವರ್ತಮಾನನಾಗಿರುತ್ತಾ ಇದ್ದು ;

(ಸೂರ್ಯ್ಯಃ) ಸರ್ವಾತ್ಮಾ ಕೃಪಾಕಟಾಕ್ಷೇಣಾಸ್ಮಾನ್ ;

(ಸೂರ್ಯಃ) ಸರ್ವಾತ್ಮನಾಗಿ (ತನ್ನ) ಕೃಪಾ ಕಟಾಕ್ಷದಿಂದ, ನಮ್ಮನ್ನು ;

(ವೇತು) ವಿದ್ಯಾದಿಸದ್ಗುಣೇಷು ಜಾತವಿಜ್ಞಾನಾನ್ ಕರೋತು ;

(ವೇತು) ವಿದ್ಯೆ ಮೊದಲಾದ ಸದ್ಗುಣಗಳಲ್ಲಿ ಪ್ರಸಿದ್ಧ ರಾದ ವಿದ್ಯಾವಂತರನ್ನಾಗಿ ಮಾಡಲಿ!

ತಸ್ಮೈ (ಸ್ವಾಹಾರ್ಥಾತ್ ತದಾಜ್ಞಾಪಾಲನೇನ ಸರ್ವಜಗದುಪಕಾರಾಯೈಕಾಹುತಿಂ ದದ್ಮಃ) ॥ ೪ ॥

ಅವನಿಗೆ 'ಸ್ವಾಹಾ', ಎಂದರೆ ಅವನ ಆಜ್ಞೆಯ ಪಾಲನೆ ಮಾಡುವುದರ ಮೂಲಕ ಎಲ್ಲಾ ಜಗತ್ತಿನ ಉಪಕಾರಕ್ಕಾಗಿ, ಒಂದು ಆಹುತಿಯನ್ನು ಕೊಡುತ್ತೇವೆ!

ಅಂದರೆ, ಯಾವ [ಸೂರ್ಯ]ಪರಮೇಶ್ವರನು ಸೂರ್ಯ ಮೊದಲಾದ ಲೋಕಗಳಲ್ಲಿ ವ್ಯಾಪ್ತನಾಗಿ, ವಾಯುವಿನ, ಹಾಗೂ ಹಗಲಿನ ಜೊತೆ ಜಗತ್ತಿಗೆ ಪರಮ ಹಿತಕಾರಕನಾಗಿದ್ದಾನೋ, ಅವನು ನಮ್ಮೆಲ್ಲರ ತಿಳುವಳಿಕೆಗೆ ಬಂದು, ನಾವು ಮಾಡಿದ ಹೋಮವನ್ನು ಸ್ವೀಕರಿಸಲಿ! [೪]

ಇಮಾಶ್ಚತಸ್ರ ಆಹುತೀಃ ಪ್ರಾತರಗ್ನಿಹೋತ್ರೇ ಕುರ್ವಂತಿ.

ಈ ನಾಲ್ಕು ಆಹುತಿಗಳನ್ನು ಪ್ರಾತಃಕಾಲದ ಅಗ್ನಿ ಹೋತ್ರದಲ್ಲಿ [ಜನರು] ಕೊಡುತ್ತಾರೆ.

ಅಂದರೆ, ಅಗ್ನಿಹೋತ್ರಿಗಳು ಈ ನಾಲ್ಕು ಆಹುತಿ ಗಳಿಂದ ಪ್ರಾತಃಕಾಲದಲ್ಲಿ ಹೋಮ ಮಾಡುತ್ತಾರೆ.

ಸಾಯಂಕಾಲೀನ ಅಗ್ನಿಹೋತ್ರದ ಮಂತ್ರಗಳು

ಈಗ ಸಾಯಂಕಾಲದ ಆಹುತಿಯ ಮಂತ್ರಗಳನ್ನು ಹೇಳುತ್ತೇವೆ_

[ಋಷಿಃ_ ಪ್ರಜಾಪತಿಃ ; ದೇವತಾ_ ಅಗ್ನಿಃ ; ಛಂದಃ_ ಗಾಯತ್ರೀ ; ಸ್ವರಃ_ ಷಡ್ಜಃ]

ಅಗ್ನಿರ್ಜ್ಯೋತಿರ್ಜ್ಯೋತಿರಗ್ನಿಃ ಸ್ವಾಹಾ ॥ ೧ ॥

ಅಗ್ನಿರ್ವರ್ಚೋ ಜ್ಯೋತಿರ್ವರ್ಚಃ ಸ್ವಾಹಾ ॥ ೨ ॥ *

'ಅಗ್ನಿರ್ಜ್ಯೋತಿ'ರಿತಿ ಮಂತ್ರಂ ಮನಸೋಚ್ಚಾರ್ಯ್ಯ ತೃತೀಯಾಹುತಿರ್ದೇಯಾ (॥ ೩ ॥)

* ಇಮೌ ಮಂತ್ರೌ ಯುಜುರ್ವೇದೇ (೩. ೯) ಕ್ರಮ-ಭಿನ್ನತ್ವೇನೋಪಲಭ್ಯೇತೇ. _ಅನು.

* ಈ ಎರಡು ಮಂತ್ರಗಳು ಯಜುರ್ವೇದದಲ್ಲಿ (೩. ೯) ಭಿನ್ನಕ್ರಮದಿಂದ ದೊರಕುತ್ತವೆ. _ಅನು.

[ಋಷಿಃ_ ಪ್ರಜಾಪತಿಃ ; ದೇವತಾ_ ಅಗ್ನಿಃ ; ಛಂದಃ_ ಗಾಯತ್ರೀ ; ಸ್ವರಃ_ ಷಡ್ಜಃ]

ಸಜೂರ್ದೇವೇನ ಸವಿತ್ರಾ ಸಜೂರಾತ್ರ್ಯೇಂದ್ರವತ್ಯಾ ।

ಜುಷಾಣೋ ಅಗ್ನಿರ್ವೇತು ಸ್ವಾಹಾ ॥ ೪ ॥ *

ಇತಿ ಸಾಯಂಕಾಲಮಂತ್ರಾಃ ॥

ಹೀಗೆ, ಸಾಯಂಕಾಲದ ಮಂತ್ರಗಳಾದುವು!

ಮಂತ್ರಾರ್ಥ

[ಅರ್ಥ:_ " ಅಗ್ನಿಯು ಜ್ಯೋತಿಯಾಗಿದ್ದಾನೆ! ಜ್ಯೋತಿಯು ಅಗ್ನಿಯಾಗಿದೆ! ಇದು ಆಹುತಿ! ॥ ೧ ॥"

" ಅಗ್ನಿಯು ತೇಜಸ್ಸಾಗಿದ್ದಾನೆ! ಜ್ಯೋತಿಯು ತೇಜಸ್ಸಾಗಿದೆ! ಇದು ಆಹುತಿ! ॥ ೨ ॥

" 'ಅಗ್ನಿರ್ಜ್ಯೋತಿ.' ಎಂಬ ಮಂತ್ರವನ್ನು ಮನಸ್ಸಿನಿಂದ ಉಚ್ಚರಿಸಿ, ಮೂರನೆಯ ಆಹುತಿಯನ್ನು ಕೊಡಬೇಕು! ॥ ೩ ॥"]

[ಅರ್ಥ:_ " ಸವಿತೃದೇವನ ಜೊತೆಗೆ, (ಚಂದ್ರ)ಪ್ರಕಾಶದಿಂದ ಕೂಡಿದ ರಾತ್ರಿಯ ಜೊತೆಗೆ ಪ್ರೀತಿಯಿಂದ ವರ್ತಿಸುತ್ತಾ ಅಗ್ನಿಯು ಬೆಳಗಲಿ! ಇದು ಆಹುತಿ! ॥ ೪ ॥"]

ಭಾಷ್ಯಮ್_

(ಅಗ್ನಿರ್ಜ್ಯೋತಿಃ.) ಯೋ ಜ್ಞಾನಸ್ವರೂಪೋ ಜ್ಯೋತಿಷಾಂ ಜ್ಯೋತಿರಗ್ನಿಃ ಪರಮೇಶ್ವರೋಽಸ್ತಿ;

ತಸ್ಮೈ (ಸ್ವಾಹಾಽರ್ಥಾತ್ ತದಾಜ್ಞಾಪಾಲನೇನ ಸರ್ವಜಗದುಪಕಾರಾಯೈಕಾಹುತಿಂ ದದ್ಮಃ) ॥ ೧ ॥

ಭಾಷ್ಯ_

(ಅಗ್ನಿರ್ಜ್ಯೋತಿಃ.) ಯಾವನು ಜ್ಞಾನಸ್ವರೂಪನೂ, [ಹಾಗೂ] ಜ್ಯೋತಿಗಳಿಗೂ ಜ್ಯೋತಿಯಾದ 'ಅಗ್ನಿ', ಎಂದರೆ ಪರಮೇಶ್ವರನಾಗಿದ್ದಾನೋ ;

ಅವನಿಗೆ 'ಸ್ವಾಹಾ', ಎಂದರೆ ಅವನ ಆಜ್ಞೆಯ ಪಾಲನೆ ಮಾಡುವುದರ ಮೂಲಕ ಎಲ್ಲಾ ಜಗತ್ತಿನ ಉಪಕಾರಕ್ಕಾಗಿ, ಒಂದು ಆಹುತಿಯನ್ನು ಕೊಡುತ್ತೇವೆ!

ಅಂದರೆ, 'ಅಗ್ನಿ', ಎಂದರೆ ಯಾವನು ಜ್ಯೋತಿಃ ಸ್ವರೂಪನಾದ ಪರಮೇಶ್ವರನಾಗಿದ್ದಾನೋ, ಅವನ ಆಜ್ಞೆಯಂತೆ, ನಾವು ಪರೋಪಕಾರಕ್ಕಾಗಿ ಹೋಮ ಮಾಡುತ್ತೇವೆ!

* ಅಯಂ ಮಂತ್ರೋ ಯಜುರ್ವೇದೇ (೩. ೧೦) ಕ್ರಮ-ಭಿನ್ನತ್ವೇನೋಪಲಭ್ಯತೇ. _ಅನು.

* ಈ ಮಂತ್ರವು ಯಜುರ್ವೇದದಲ್ಲಿ (೩. ೧೦) ಭಿನ್ನಕ್ರಮದಿಂದ ದೊರಕುತ್ತದೆ. _ಅನು.

ಮತ್ತು ಅವನಿಂದ ರಚಿತವಾದ ಈ ಭೌತಿಕ ಅಗ್ನಿಯು ಏಕಿದೆಯೆಂದರೆ_

ಅದು ಆ [ಹುತ]ದ್ರವ್ಯಗಳನ್ನು ಪರಮಾಣು ರೂಪದಲ್ಲಿ [ವಿಭಜನೆ] ಮಾಡಿ, ವಾಯು ಮತ್ತು ಮಳೆಯ ನೀರಿನೊಡನೆ ಬೆರೆಸಿ, ಶುದ್ಧ ಮಾಡುತ್ತದೆ. ಇದರಿಂದ ಜಗತ್ತಿಗೆಲ್ಲಾ ಸುಖದ, ಮತ್ತು ಆರೋಗ್ಯದ ವೃದ್ಧಿಯಾಗುತ್ತದೆ. [೧]

(ಅಗ್ನಿರ್ವರ್ಚೋ.) ಯಃ ಪೂರ್ವೋಕ್ತೋಽಗ್ನಿಃ ಪರಮೇಶ್ವರೋಽಸ್ತಿ;

ತಸ್ಮೈ (ಸ್ವಾಹಾಽರ್ಥಾತ್ ತದಾಜ್ಞಾಪಾಲನೇನ ಸರ್ವಜಗದುಪಕಾರಾಯೈಕಾಹುತಿಂ ದದ್ಮಃ) ॥ ೨ ॥

(ಅಗ್ನಿರ್ವರ್ಚೋ.) ಯಾವನು ಮೊದಲು ಹೇಳಿದಂತಹ ಅಗ್ನಿಸಂಜ್ಞಕನಾದ ಪರಮೇಶ್ವರನಾಗಿದ್ದಾನೋ ;

ಅವನಿಗೆ **'ಸ್ವಾಹಾ'**, ಎಂದರೆ, ಅವನ ಆಜ್ಞೆಯ ಪಾಲನೆ ಮಾಡುವುದರ ಮೂಲಕ ಎಲ್ಲಾ ಜಗತ್ತಿನ ಉಪಕಾರಕ್ಕಾಗಿ, ಒಂದು ಆಹುತಿಯನ್ನು ಕೊಡುತ್ತೇವೆ!

ಅಂದರೆ, **ಅಗ್ನಿ**, ಎಂದರೆ, ಪರಮೇಶ್ವರನು **'ವರ್ಚ'**, ಎಂದರೆ ಎಲ್ಲಾ ವಿದ್ಯೆಗಳನ್ನೂ ಕೊಡುವವನೂ ಆಗಿದ್ದಾನೆ!

ಮತ್ತು ಭೌತಿಕಅಗ್ನಿಯು ಆರೋಗ್ಯತ್ವ, ಹಾಗೂ ಬುದ್ಧಿಯನ್ನು ವರ್ಧಿಸುವುದೂ ಆಗಿದೆ.

ಆದುದರಿಂದ, ನಾವು ಹೋಮದಿಂದ ಪರಮೇಶ್ವರನ ಪ್ರಾರ್ಥನೆಯನ್ನು ಮಾಡುತ್ತೇವೆ. ಇದು ಎರಡನೆಯ ಆಹುತಿಯಾಗಿದೆ! [೨]

'ಅಗ್ನಿರ್ಜ್ಯೋತಿರ್' ಇತ್ಯನೇನೈವ ತೃತೀಯಾ-ಹುತಿರ್ದೇಯಾ.

'ಅಗ್ನಿರ್ಜ್ಯೋತಿಃ', ಎಂಬ [ಮೊದಲನೆಯ] ಮಂತ್ರದಿಂದಲೇ ಮೂರನೆಯ ಆಹುತಿಯು ಕೊಡಲ್ಪಡಬೇಕು!

ಅಂದರೆ, ಮೂರನೆಯ ಆಹುತಿಯನ್ನು ಮೌನವಾಗಿ* ಮೊದಲನೆಯ ಮಂತ್ರದಿಂದ ಕೊಡಬೇಕು!

ತದರ್ಥಶ್ಚ ಪೂರ್ವವತ್ ॥ ೩ ॥

ಮತ್ತು ಇದರ ಅರ್ಥವು ಮೇಲೆ ಹೇಳಿದಂತೆಯೇ ಇದೆ. [೩]

(ಸಜೂರ್ದೇ.) ಯಃ ಪೂರ್ವೋಕ್ತೇನ ದೇವೇನ ಸವಿತ್ರಾ ಸಹ ಪರಮೇಶ್ವರಃ ಸಜೂರಸ್ತಿ;

(ಸಜೂರ್ದೇವೇನ.) ಮೊದಲು ಹೇಳಿದ ಸವಿತಾ ದೇವನೊಡನೆ ಯಾವ ಪರಮೇಶ್ವರನು ಕೂಡಿದ್ದಾನೋ;

* ಎಂದರೆ, ಮನಸ್ಸಿನಲ್ಲಿ ಉಚ್ಚರಿಸಿ _ಅನು.

(ಸಜೂರಾತ್ರ್ಯೇಂದ್ರವತ್ಯಾ) ಯಶ್ಚೇಂದ್ರವತ್ಯಾ ವಾಯುಚಂದ್ರವತ್ಯಾ ರಾತ್ರ್ಯಾ ಸಹ ವರ್ತ್ತತೇ ;

ಮತ್ತು ಯಾವನು (ಇಂದ್ರವತ್ಯಾ) ವಾಯು, ಹಾಗೂ ಚಂದ್ರನೊಡನೆ ಇರುವ (ರಾತ್ರ್ಯಾ ಸಜೂಃ) ರಾತ್ರಿಯೊಡನೆ ವರ್ತಮಾನನಾಗಿದ್ದಾನೋ ;

ಸೋಽಗ್ನಿಃ ;

ಆ 'ಅಗ್ನಿ'ಸಂಜ್ಞಕನು ;

(ಜುಷಾಣಃ) ಸಂಪ್ರೀತೋಽಸ್ಮಾನ್ ;

(ಜುಷಾಣಃ) ಅತ್ಯಂತ ಪ್ರೀತಿಯನ್ನುಳ್ಳವನಾಗಿ ನಮ್ಮನ್ನು ;

(ವೇತು) ನಿತ್ಯಾನಂದಮೋಕ್ಷಸುಖಾಯ ಸ್ವಕೃಪಯಾ ಕಾಮಯತು ;

(ವೇತು) ನಿತ್ಯಾನಂದವೆಂಬ ಮೋಕ್ಷಸುಖಕ್ಕಾಗಿ ತನ್ನ ಕೃಪೆಯಿಂದ, ಇಚ್ಛಿಸಲಿ!

ತಸ್ಮೈ ಜಗದೀಶ್ವರಾಯ ಸ್ವಾಹೇತಿ ಪೂರ್ವವತ್ ॥ ೪ ॥

ಆ ಜಗದೀಶ್ವರನಿಗೆ 'ಸ್ವಾಹಾ', ಎಂಬುದಾಗಿ ಮೊದಲು ಹೇಳಿದಂತೆ [ಅಭಿಪ್ರಾಯವಿರುತ್ತದೆ.]

ಅಂದರೆ, 'ಅಗ್ನಿ', ಎಂದರೆ ಪರಮೇಶ್ವರನು ಸೂರ್ಯ ಮೊದಲಾದ ಲೋಕಗಳಲ್ಲಿ ವ್ಯಾಪ್ತನಾಗಿ, ವಾಯುವಿನ, ಹಾಗೂ ರಾತ್ರಿಯ ಜೊತೆ ಜಗತ್ತಿಗೆ ಪರಮಹಿತಕಾರಕನಾಗಿದ್ದಾನೋ, ಅವನು ನಮ್ಮೆಲ್ಲರ ತಿಳುವಳಿಕೆಗೆ ಬಂದು, ನಾವು ಮಾಡಿದ ಹೋಮವನ್ನು ಸ್ವೀಕರಿಸಲಿ! [೪]

ಏತಾಭಿಃ [ಆಹುತಿಭಿಃ] ಸಾಯಂಕಾಲೇಽಗ್ನಿ-ಹೋತ್ರಿಣೋ ಜುಹ್ವತಿ.

ಈ [ಮೇಲಿನ] ಆಹುತಿಗಳಿಂದ ಸಾಯಂಕಾಲದಲ್ಲಿ ಅಗ್ನಿಹೋತ್ರಿಗಳು ಹೋಮ ಮಾಡುತ್ತಾರೆ!

ಏಕಸ್ಮಿನ್ ಕಾಲೇ ಸರ್ವಾಭಿರ್ವಾ.

ಅಥವಾ ಒಂದೇ ಕಾಲದಲ್ಲಿಯೇ, ಎಲ್ಲಾ [ಎಂಟು ಆಹುತಿಗಳ ಮೂಲಕ ಹೋಮ ಮಾಡುತ್ತಾರೆ.]

ಪ್ರಾತಃ-ಸಾಯಂಕಾಲೀನ ಸಮಾನಾಹುತಿ ಮಂತ್ರಗಳು

ಅಥೋಭಯೋಃ ಕಾಲಯೋರಗ್ನಿಹೋತ್ರೇ ಹೋಮಕರಣಾರ್ಥಾಃ ಸಮಾನಮಂತ್ರಾಃ_

ಈಗ, ಎರಡು ಸಮಯಗಳಲ್ಲೂ [ಮಾಡುವ] ಅಗ್ನಿಹೋತ್ರದಲ್ಲಿ ಹೋಮ ಮಾಡುವುದಕ್ಕಾಗಿ ಸಮಾನ ರೂಪವಾದ ಮಂತ್ರಗಳು ಹೀಗಿವೆ_

ಓಂ ಭೂರಗ್ನಯೇ ಪ್ರಾಣಾಯ ಸ್ವಾಹಾ ॥ ೧ ॥
ಓಂ ಭುವರ್ವಾಯವೇಽಪಾನಾಯ ಸ್ವಾಹಾ ॥ ೨ ॥
ಓಂ ಸ್ವರಾದಿತ್ಯಾಯ ವ್ಯಾನಾಯ ಸ್ವಾಹಾ ॥ ೩ ॥
ಓಂ ಭೂರ್ಭುವಃ ಸ್ವರಗ್ನಿವಾಯ್ವಾದಿತ್ಯೇಭ್ಯಃ ಪ್ರಾಣಾಪಾನವ್ಯಾನೇಭ್ಯಃ ಸ್ವಾಹಾ ॥ ೪ ॥

[ತೈತ್ತಿರೀಯಾರಣ್ಯಕೇ ೧೦. ೨]

ಓಮಾಪೋ ಜ್ಯೋತೀ ರಸೋಽಮೃತಂ ಬ್ರಹ್ಮ ಭೂರ್ಭುವಃ
ಸ್ವರೋಽಂ ಸ್ವಾಹಾ ॥೫॥

[ತೈತ್ತಿರೀಯಾರಣ್ಯಕೇ ೧೦. ೧೫]

ಓಂ ಸರ್ವಂ ವೈ ಪೂರ್ಣಗ್ಂ ಸ್ವಾಹಾ ॥೬॥

[ಶತಪಥಬ್ರಾಹ್ಮಣೇ ೪. ೨. ೨. ೨]

ಮಂತ್ರಾರ್ಥ

[ಅರ್ಥಃ_ "ರಕ್ಷಕನಾದ 'ಭೂಃ', ಎಂದರೆ ಪ್ರಾಣಸ್ವರೂಪನಾದ 'ಅಗ್ನಿ'[ಸಂಜ್ಞಕ ಪರಮಾತ್ಮನಿ]ಗೆ ಇದು ಆಹುತಿ! ॥೧॥"

"ರಕ್ಷಕನಾದ 'ಭುವಃ' ಎಂದರೆ ಅಪಾನಸ್ವರೂಪನಾದ, ಎಂದರೆ ದುಃಖನಾಶಕ ವಾಯು[ಸಂಜ್ಞಕ ಪರಮಾತ್ಮನಿ]ಗೆ ಇದು ಆಹುತಿ! ॥೨॥"

"ರಕ್ಷಕನಾದ 'ಸ್ವಃ', ಎಂದರೆ ವ್ಯಾನಸ್ವರೂಪನಾದ, ಎಂದರೆ ಜಗತ್ತಿನಲ್ಲಿ ವ್ಯಾಪಕನಾಗಿ, ನಿಯಾಮಕನಾದ, ಹಾಗೂ ಸುಖಸ್ವರೂಪನಾದ 'ಆದಿತ್ಯ'[ಸಂಜ್ಞಕ ಪರಮಾತ್ಮ]ನಿಗೆ ಇದು ಆಹುತಿ! ॥೩॥"

"ರಕ್ಷಕನಾದ 'ಭೂಃ ಭುವಃ ಸ್ವಃ', ಎಂದರೆ ಪ್ರಾಣ, ಅಪಾನ, ವ್ಯಾನಸ್ವರೂಪನಾದ ಅಗ್ನಿ-ವಾಯು-ಆದಿತ್ಯ[ಸಂಜ್ಞಕ ಪರಮಾತ್ಮ]ನಿಗೆ ಇದು ಆಹುತಿ! ॥೪॥"

(ತೈತ್ತಿರೀಯ ಆರಣ್ಯಕಃ ೧೦. ೨)]

[ಅರ್ಥಃ_ "ರಕ್ಷಕನೂ ವ್ಯಾಪಕನೂ, ಜ್ಯೋತಿಸ್ವರೂಪನೂ, ರಸನೂ, ಅಮೃತನೂ ಜ್ಯೇಷ್ಠನೂ, ಪ್ರಾಣಸ್ವರೂಪನೂ, ದುಃಖನಾಶಕನೂ, ಸುಖಸ್ವರೂಪನೂ, ವ್ಯಾಪಕನೂ ಆದ ಪರಮಾತ್ಮನಿಗೆ ಇದು ಆಹುತಿ! ॥೫॥"

(ತೈತ್ತಿರೀಯ ಆರಣ್ಯಕಃ ೧೦. ೧೫)]

[ಅರ್ಥಃ_ "ರಕ್ಷಕನೇ! ಎಲ್ಲದರಲ್ಲಿಯೂ ನಿಶ್ಚಯವಾಗಿ ಪರಿಪೂರ್ಣನಾದ [ಪರಮಾತ್ಮ!] ನಿನಗೆ ಇದು ಆಹುತಿ! ॥೬॥"

(ಶತಪಥಬ್ರಾಹ್ಮಣಃ ೪. ೨. ೨. ೨)]

ಈ ರೀತಿಯಾಗಿ, ಪ್ರಾತಃಕಾಲ ಮತ್ತು ಸಾಯಂಕಾಲಗಳಲ್ಲಿ ಸಂಧ್ಯೋಪಾಸನೆಯನ್ನು ಮಾಡಿದ ಮೇಲೆ, ಮೇಲೆ ಹೇಳಿದ ಮಂತ್ರಗಳಿಂದ ಹೋಮ ಮಾಡಿರಿ!

ಒಂದು ವೇಳೆ, ಹೆಚ್ಚು ಹೋಮ ಮಾಡುವ ಇಚ್ಛೆಯಿದ್ದರೆ_ 'ಸ್ವಾಹಾ' ಶಬ್ದವನ್ನು ಅಂತ್ಯದಲ್ಲಿ ಹೇಳುತ್ತಾ, ಗಾಯತ್ರೀಮಂತ್ರದಿಂದ ಹೋಮ ಮಾಡಬೇಕು!

ಇತಿ ಸರ್ವೇ ಮಂತ್ರಾಸ್ತೈತ್ತಿರೀಯೋಪನಿಷದಾಶಯೇನೈಕೀಕೃತಾಃ .*

ಹೀಗೆ, ಈ ಎಲ್ಲಾ [ಆರೂ] ಮಂತ್ರಗಳೂ ತೈತ್ತಿರೀಯೋಪನಿಷತ್ತಿನ ಅಭಿಪ್ರಾಯದಂತೆ ಇಲ್ಲಿ ಸಂಗ್ರಹಿಸಲ್ಪಟ್ಟಿವೆ.*

ತಥೈತರೇಯಬ್ರಾಹ್ಮಣೇ ಪಂಚಮಪಂಜಿಕಾಯಾಮೇಕತ್ರಿಂಶತ್ತಮಕಂಡಿಕಾಯಾಂ ಚ ;

ಹಾಗೆಯೇ, ಐತರೇಯಬ್ರಾಹ್ಮಣದಲ್ಲೂ ಕೂಡ, ಐದನೆಯ ಪಂಜಿಕೆಯ ಮೂವತ್ತೊಂದನೆಯ ಕಂಡಿಕೆಯಲ್ಲಿ;

ಸಾಯಂಪ್ರಾತರಗ್ನಿಹೋತ್ರಮಂತ್ರಾ ;

ಸಾಯಂಕಾಲ-ಪ್ರಾತಃಕಾಲದ ಅಗ್ನಿಹೋತ್ರ ಮಂತ್ರಗಳೂ ;

'ಭೂರ್ಭುವಃ ಸ್ವರೋಮ್' ಇತ್ಯಾದಯೋ ದರ್ಶಿತಾಃ.

[ಹಾಗೂ] 'ಭೂರ್ಭುವಃ ಸ್ವರೋಮ್', ಎಂದು ಮೊದಲಾದ ಮಂತ್ರಗಳೂ ತೋರಿಸಲ್ಪಟ್ಟಿವೆ.

ಭಾಷ್ಯಮ್_

ಭಾಷ್ಯ_

ಏಷು ಮಂತ್ರೇಷು 'ಭೂರಿ'ತ್ಯಾದೀನಿ ಸರ್ವಾಣೀಶ್ವರಸ್ಯ ನಾಮಾನ್ಯೇವ ವೇದ್ಯಾನಿ.

ಈ ಮಂತ್ರಗಳಲ್ಲಿ "ಭೂ" ಮೊದಲಾದ ಎಲ್ಲಾ [ಶಬ್ದಗಳೂ] ಈಶ್ವರನ ಹೆಸರುಗಳೆಂದೇ ತಿಳಿಯಬೇಕು!

ಏಷಾಮರ್ಥಾ ಗಾಯತ್ರ್ಯರ್ಥೇ ದ್ರಷ್ಟವ್ಯಾಃ .**

ಇವುಗಳ ಅರ್ಥಗಳನ್ನು 'ಗಾಯತ್ರೀಮಂತ್ರ'ದ ಅರ್ಥದಲ್ಲಿ ನೋಡಿಕೊಳ್ಳಬೇಕು!**

ಅಂದರೆ, ಗಾಯತ್ರೀಮಂತ್ರದ ಅರ್ಥದಲ್ಲಿ ಇವುಗಳ ಅರ್ಥಗಳನ್ನು ಹೇಳಿಬಿಟ್ಟಿದ್ದೇವೆ!

(ಸರ್ವಂ ವೈ.) ಹೇ ಜಗದೀಶ್ವರ! ಯದಿದಮಸ್ಮಾಭಿಃ ಪರೋಪಕಾರಾರ್ಥಂ ಕರ್ಮ ಕ್ರಿಯತೇ ;

(ಸರ್ವಂ ವೈ.) ಓ ಜಗದೀಶ್ವರ! ಪರೋಪಕಾರಕ್ಕಾಗಿ ಯಾವ ಈ ಕರ್ಮವು ನಮ್ಮಿಂದ ಮಾಡಲ್ಪಟ್ಟಿದೆಯೋ ;

ತದ್‌ಭವತ್‌ಕೃಪಯಾಽಲಂ ಭವತ್ವಿತಿ ಹೇತೋರೇತತ್ ಕರ್ಮ ತುಭ್ಯಂ ಸಮರ್ಪ್ಯತೇ ॥ ೬ ॥

ಅದು ತಮ್ಮ ಅನುಗ್ರಹದಿಂದ ಪೂರ್ಣವಾಗಲಿ, ಎಂಬ ಉದ್ದೇಶ್ಯದಿಂದ, ಈ ಕರ್ಮವು ತಮಗೆ ಸಮರ್ಪಿತವಾಗಿದೆ! [೬]

---

* ಶಿಕ್ಷಾವಲ್ಲ್ಯಾಂ ಪಂಚಮೇಽನುವಾಕೇ _ಅನು.

** 'ಪಂಚಮಹಾಯಜ್ಞವಿಧಿ'ನಾಮ್ನಿ ಲಘುಗ್ರಂಥೇ ಸಂಧ್ಯೋಪಾಸನಪ್ರಕರಣ ಏವಂ ;

'ಸತ್ಯಾರ್ಥಪ್ರಕಾಶೇ' ಕನ್ನಡಸಂಸ್ಕರಣೇ ತೃತೀಯೇ ಸಮುಲ್ಲಾಸೇ ೬೦ – ೬೩ ತಮೇಷು ಪೃಷ್ಠೇಷು ;

ತಥಾ ಚ ಗ್ರಂಥಕೃತಃ 'ಸಂಸ್ಕಾರವಿಧಿ'ನಾಮ್ನಿ ಗ್ರಂಥೇ ಕನ್ನಡಸಂಸ್ಕರಣೇ ವೇದಾರಂಭಸಂಸ್ಕಾರಪ್ರಕರಣೇ ೧೨೫ ತಮೇ ಪೃಷ್ಠೇ ಚ ದ್ರಷ್ಟವ್ಯಾಃ _ಅನು.

* ಶಿಕ್ಷಾವಲ್ಲಿಯಲ್ಲಿ ೫ನೆಯ ಅನುವಾಕವನ್ನು ನೋಡಿ._ಅನು.

** 'ಪಂಚಮಹಾಯಜ್ಞವಿಧಿ'ಯ ಸಂಧ್ಯೋಪಾಸನ ಪ್ರಕರಣದಲ್ಲಿ, ಹಾಗೂ_

'ಸತ್ಯಾರ್ಥಪ್ರಕಾಶ' ತೃತೀಯ ಸಮುಲ್ಲಾಸ ಪುಟ ೬೦-೬೩ ರಲ್ಲಿಯೂ ಮತ್ತು_

ಗ್ರಂಥಕರ್ತರ 'ಸಂಸ್ಕಾರವಿಧಿ', ಎಂಬ ಗ್ರಂಥದಲ್ಲಿ ಕೂಡ, ವೇದಾರಂಭಸಂಸ್ಕಾರ, ಎಂಬ ಪ್ರಕರಣದಲ್ಲಿ ೧೨೫ ನೆಯ ಪುಟದಲ್ಲಿಯೂ ಈ ಅರ್ಥಗಳು ಹೇಳಲ್ಪಟ್ಟಿವೆ _ಅನು.

ಅಗ್ನಿಹೋತ್ರದ ಅರ್ಥ

ಅಗ್ನಯೇ ಪರಮೇಶ್ವರಾಯ ಜಲವಾಯು-ಶುದ್ಧಿಕರಣಾಯ ಚ ;

'ಅಗ್ನಿ'ಗೆ, ಎಂದರೆ ಪರಮೇಶ್ವರನಿಗಾಗಿ, ಮತ್ತು ಜಲದ, ಹಾಗೂ ವಾಯುವಿನ ಶುದ್ಧಿ ಮಾಡುವುದಕ್ಕಾಗಿ ;

ಹೋತ್ರಂ ಹವನಂ ದಾನಂ ಯಸ್ಮಿನ್ ಕರ್ಮಣಿ ಕ್ರಿಯತೇ ತದಗ್ನಿಹೋತ್ರಮ್ ;

'ಹೋತ್ರ', ಎಂದರೆ ಹವನ, ಅಂದರೆ, ದಾನವು ಯಾವ ಕರ್ಮದಲ್ಲಿ ಮಾಡಲ್ಪಡುತ್ತದೋ, ಅದು 'ಅಗ್ನಿಹೋತ್ರ', [ಎನಿಸುತ್ತದೆ ;]

ಈಶ್ವರಾಜ್ಞಾಪಾಲನಾರ್ಥಂ ವಾ.

ಅಥವಾ [ಅದು] ಈಶ್ವರನ ಆಜ್ಞೆಯ ಪಾಲನೆ ಮಾಡುವುದಕ್ಕಾಗಿಯೂ [ಇರುತ್ತದೆ.]

ಅಂದರೆ, ಯಾವ ಕರ್ಮದಲ್ಲಿ ಜಲ ಮತ್ತು ವಾಯುವಿನ ಶುದ್ಧಿಯನ್ನು ಮಾಡುವ ಪ್ರಯೋಜನದಿಂದ, **ಅಗ್ನಿಗೆ**; ಹಾಗೂ ಈಶ್ವರನ ಆಜ್ಞಾಪಾಲನೆಯ ಉದ್ದೇಶ್ಯದಿಂದ **ಪರಮೇಶ್ವರನಿಗೆ**; **'ಹೋತ್ರ'**, ಎಂದರೆ ಹವನ, ಅಂದರೆ ದಾನ ಮಾಡುತ್ತೇವೋ, ಅದಕ್ಕೆ **'ಅಗ್ನಿಹೋತ್ರ'**, ಎನ್ನುತ್ತಾರೆ.

ಅಗ್ನಿಹೋತ್ರದ ಪ್ರಯೋಜನಗಳು

ಸುಗಂಧಿ* -ಪುಷ್ಟಿ-ಮಿಷ್ಟ-ಬುದ್ಧಿವೃದ್ಧಿ-ಶೌರ್ಯ-ಧೈರ್ಯ-ಬಲ-ರೋಗನಾಶಕರೈರ್ಗುಣೈ-ರ್ಯುಕ್ತಾನಾಂ ದ್ರವ್ಯಾಣಾಂ ಹೋಮಕರಣೇನ ;

ಸುಗಂಧ-ಪುಷ್ಟಿಕಾರಕ-ಸಿಹಿಯುಕ್ತ-ಬುದ್ಧಿವೃದ್ಧಿಕಾರಕ-ಶೌರ್ಯ-ಧೈರ್ಯ-ಬಲಕಾರಕ, ಹಾಗೂ **ರೋಗನಾಶಕರ** ವಾದ ಗುಣಗಳಿಂದ ಕೂಡಿದ ದ್ರವ್ಯಗಳ ಹೋಮವನ್ನು ಮಾಡುವುದರಿಂದ ;

ವಾಯುವೃಷ್ಟಿಜಲಯೋಃ ಶುದ್ಧ್ಯಾ ;

ವಾಯುವಿನ ಮತ್ತು ಮಳೆಯ ನೀರಿನ ಶುದ್ಧಿ-ಯಾಗುತ್ತದೆಯಾದುದರಿಂದ ;

ಪೃಥಿವೀಸ್ಥಪದಾರ್ಥಾನಾಂ ಸರ್ವೇಷಾಂ ಶುದ್ಧ-ವಾಯುಜಲಯೋಗಾತ್ ;

ಪೃಥಿವಿಯಲ್ಲಿರುವ ಎಲ್ಲಾ ಪದಾರ್ಥಗಳಿಗೂ ಶುದ್ಧವಾದ ವಾಯುವಿನ, ಹಾಗೂ ಶುದ್ಧವಾದ ಜಲದ ಸಂಪರ್ಕವಾಗುವುದರಿಂದ ;

ಸರ್ವೇಷಾಂ ಜೀವಾನಾಂ ಪರಮಸುಖಂ ಭವತ್ಯೇವ.

ಎಲ್ಲಾ ಜೀವರಿಗೂ ಅತ್ಯಂತ ಸುಖವು ಆಗೇ ಆಗುತ್ತದೆ!

* 'ಸುಗಂಧ' _ಆ. ವೈ.

ಅಂದರೆ, ಯಾವ ಯಾವ ಕೇಸರಿ, ಕಸ್ತೂರಿ ಮೊದಲಾದ ಸುಗಂಧಿಯುಕ್ತವೂ ;

ತುಪ್ಪ, ಹಾಲೂ ಮೊದಲಾದ ಪುಷ್ಟಿಕಾರಕವೂ ;

ಬೆಲ್ಲ, ಸಕ್ಕರೆ ಮೊದಲಾದ ಸಿಹಿಯುಕ್ತವೂ ;

ಬುದ್ಧಿ, ಬಲ, ಶೌರ್ಯ, ಹಾಗೂ ಧೈರ್ಯವರ್ಧಕವೂ ;

ಮತ್ತು ರೋಗನಾಶಕವೂ ಆದ ಸೋಮವಲ್ಲೀ ಮೊದಲಾದ ಪದಾರ್ಥಗಳಿವೆಯೋ ;

ಅವುಗಳ ಹೋಮ ಮಾಡುವುದರಿಂದ, ವಾಯುವಿನ ಮತ್ತು ವೃಷ್ಟಿಜಲದ ಶುದ್ಧಿಯಾಗುತ್ತದೆ. ಆದುದರಿಂದ, ಪೃಥಿವಿಯ ಎಲ್ಲಾ ಪದಾರ್ಥಗಳಿಗೂ ಅತ್ಯಂತ ಉತ್ತಮತ್ವವು ಉಂಟಾಗುತ್ತದೆ. ಇದರಿಂದಲೇ ಎಲ್ಲಾ ಪ್ರಾಣಿಗಳಿಗೂ ಪರಮ ಸುಖವುಂಟಾಗುತ್ತದೆ!

ಅತಸ್ತತ್ ಕರ್ಮಕರ್ತ್ಽಣಾಂ ಜನಾನಾಂ ತದುಪಕಾರೇಣಾತ್ಯಂತಸುಖಮೀಶ್ವರಾನುಗ್ರಹಶ್ಚ ಭವತ್ಯೇತದಾದ್ಯರ್ಥಮಗ್ನಿಹೋತ್ರಕರಣಮ್.

ಆದುದರಿಂದ, ಈ ಕರ್ಮವನ್ನು ಮಾಡುವ ಜನರ ಈ ಉಪಕಾರದಿಂದ, ಅತ್ಯಂತ ಸುಖವೂ, ಹಾಗೂ ಈಶ್ವರನ ಅನುಗ್ರಹವೂ ಕೂಡ, ಆಗುತ್ತದೆ. ಈ ಮೊದಲಾದ ಪ್ರಯೋಜನಕ್ಕಾಗಿ ಅಗ್ನಿಹೋತ್ರವನ್ನು ಮಾಡಬೇಕು!

ಅಂದರೆ, ಈ ಕಾರಣದಿಂದ, ಅಗ್ನಿಹೋತ್ರವನ್ನು ಮಾಡುವ ಮನುಷ್ಯರಿಗೆ, ಆ ಉಪಕಾರ[ಕೃತ್ಯ]ದಿಂದ ಅತ್ಯಂತ ಸುಖದ ಲಾಭವಾಗುತ್ತದೆ.

ಮತ್ತು ಈಶ್ವರನು ಅವರ ಮೇಲೆ ಅನುಗ್ರಹ ಮಾಡುತ್ತಾನೆ.

ಇಂತಿಂತಹ ಲಾಭಗಳ ಪ್ರಯೋಜನಕ್ಕಾಗಿ, ಅಗ್ನಿಹೋತ್ರವನ್ನು ಮಾಡುವುದು ಅವಶ್ಯವಾಗಿ ಉಚಿತವಾಗಿದೆ!

ಇತ್ಯಗ್ನಿಹೋತ್ರವಿಧಿಃ ಸಮಾಪ್ತಃ ॥

ಇಲ್ಲಿಗೆ ಅಗ್ನಿಹೋತ್ರದ ವಿಧಿಯು ಮುಗಿಯಿತು!

ಅಥ ತೃತೀಯಃ ಪಿತೃಯಜ್ಞಃ

ಈಗ ಮೂರನೆಯದಾದ ಪಿತೃಯಜ್ಞದ ಬಗ್ಗೆ ಹೇಳುತ್ತೇವೆ.

ಪಿತೃಯಜ್ಞದ ಪರಿಭಾಷೆ

ತಸ್ಯ ದ್ವೌ ಭೇಧೌ ಸ್ತಃ_

ಇದರಲ್ಲಿ ಎರಡು ಭೇದಗಳಿವೆ_

ಏಕಸ್ತರ್ಪಣಾಖ್ಯೋ ;

ಒಂದು, **'ತರ್ಪಣ'**, ಎಂಬ ಹೆಸರಿನದು ; ಮತ್ತು_

ದ್ವಿತೀಯಃ ಶ್ರಾದ್ಧಾಖ್ಯಶ್ಚ.

ಎರಡನೆಯದು, **'ಶ್ರಾದ್ಧ'**, ಎಂಬ ಹೆಸರಿನದು.

ತತ್ರ ಯೇನ ಕರ್ಮಣಾ ವಿದುಷೋ ದೇವಾನ್ ಋಷೀನ್ ಪಿತೄಂಶ್ಚ ತರ್ಪಯಂತಿ ಸುಖಯಂತಿ, ತತ್ ತರ್ಪಣಮ್.

ಇವುಗಳಲ್ಲಿ, ಯಾವ ಕರ್ಮದಿಂದ ವಿದ್ವಾಂಸರಾದ, ದೇವಜನರನ್ನು, ಋಷಿಗಳನ್ನು ಮತ್ತು ಹಿರಿಯರನ್ನು ತೃಪ್ತ ಮಾಡುತ್ತಾರೋ, ಎಂದರೆ, ಸುಖಿಗಳನ್ನಾಗಿ ಮಾಡುತ್ತಾರೋ, ಅದು 'ತರ್ಪಣ', ಎನಿಸುತ್ತದೆ.

ಅಂದರೆ, ಯಾವ ಕರ್ಮವನ್ನು ಮಾಡಿ, ವಿದ್ವಾಂಸರೂಪರಾದ ದೇವರನ್ನು, ಋಷಿಗಳನ್ನು ಮತ್ತು ಹಿರಿಯರನ್ನು ಸುಖಯುಕ್ತರನ್ನಾಗಿ ಮಾಡುತ್ತೇವೋ, ಅದು 'ತರ್ಪಣ', ಎನಿಸುತ್ತದೆ.

ತಥಾ ಯತ್ತೇಂಷಾಂ ಶ್ರದ್ಧಯಾ ಸೇವನಂ ಕ್ರಿಯತೇ, ತಚ್ಛ್ರಾದ್ಧಂ ವೇದಿತವ್ಯಮ್.

ಮತ್ತು ಯಾವ ಶ್ರದ್ಧೆಯಿಂದ ಅವರ ಸೇವೆಯನ್ನು ಮಾಡಲಾಗುತ್ತದೋ, ಅದು 'ಶ್ರಾದ್ಧ', ಎಂದು ತಿಳಿಯಲ್ಪಡಬೇಕು!

ಅಂದರೆ, ಆ ಜನರನ್ನು ಶ್ರದ್ಧಾಪೂರ್ವಕವಾಗಿ ಸೇವೆ ಮಾಡುವುದು ಯಾವುದಿದೆಯೋ, ಅದನ್ನೇ 'ಶ್ರಾದ್ಧ', ಎಂದು ತಿಳಿಯಬೇಕು!

ಪಿತೃಯಜ್ಞ ಬದುಕಿರುವವರಿಗಾಗಿ ; ಸತ್ತವರಿಗಾಗಲ್ಲ!

ತತ್ರ ವಿದ್ವತ್ಸು ವಿದ್ಯಮಾನೇಷ್ವೇತತ್ ಕರ್ಮ ಸಂಘಟ್ಯತೇ ; ನೈವ ಮೃತಕೇಷು.

ಈ ವಿಷಯದಲ್ಲಿ, ವಿದ್ಯಮಾನರಾಗಿರುವ ವಿದ್ವಾಂಸರಲ್ಲಿಯೇ ಈ ಕರ್ಮವು ಕೂಡುತ್ತದೆ; ಸತ್ತವರಲ್ಲಲ್ಲ!

ಅಂದರೆ, ಈ ತರ್ಪಣವೇ ಮೊದಲಾದ ಕರ್ಮಗಳು 'ವಿದ್ಯಮಾನ', ಎಂದರೆ ಜೀವಿಸುತ್ತಾ, ಯಾರು ಪ್ರತ್ಯಕ್ಷರಾಗಿರುತ್ತಾರೋ, ಅವರಲ್ಲಿಯೇ ಅನ್ವಯವಾಗುತ್ತದೆ ; ಸತ್ತವರಲ್ಲಲ್ಲ!

ಕುತಃ?

ಏಕೆಂದರೆ_

ತೇಷಾಂ ಪ್ರಾಪ್ತ್ಯಭಾವೇನ ಸೇವನಾಶಕ್ಯತ್ವಾತ್.

ಅವರ ಉಪಸ್ಥಿತಿಯು ಇಲ್ಲದಿದ್ದರೆ, ಅವರ ಸೇವೆಯೂ ಸಂಭವವಾಗುವುದಿಲ್ಲವಲ್ಲ !

ಅಂದರೆ, ಸತ್ತವರು ಪ್ರತ್ಯಕ್ಷರಾಗುವುದು ಅಸಂಭವವಾಗಿರುತ್ತದೆ; ಆದುದರಿಂದ, ಅವರ ಸೇವೆಯನ್ನು ಮಾಡುವುದು ಸಾಧ್ಯವಲ್ಲ!

ತದರ್ಥಕೃತಕರ್ಮಣಃ ಪ್ರಾಪ್ತ್ಯಭಾವ ಇತಿ ವ್ಯರ್ಥತಾಪತ್ತೇಶ್ಚ.

ಮತ್ತು [ಸತ್ತುಹೋದ] ಅವರಿಗಾಗಿ, ಮಾಡಿದ ಕರ್ಮವು ಅವರಿಗೆ ಸೇರುವುದಿಲ್ಲವಾದುದರಿಂದ, ಅದು ವ್ಯರ್ಥವೂ ಕೂಡ, ಆಗುತ್ತದೆ!

ಅಂದರೆ, ಯಾವನಾದರೂ ಅವರಿಗೆ ಯಾವುದಾದರೂ ವಸ್ತುವನ್ನು ಕೊಡ ಬಯಸಿದರೆ, ಅದೂ ಕೂಡ, ಅವರಿಗೆ ಸಿಗುವುದೇ ಇಲ್ಲ!

ತಸ್ಮಾದ್ ವಿದ್ಯಮಾನಾಭಿಪ್ರಾಯೇಣೈತತ್ ಕರ್ಮೋಪದಿಶ್ಯತೇ.

ಆದುದರಿಂದ, ವಿದ್ಯಮಾನರಾಗಿರುವವರ ಅಭಿಪ್ರಾಯದಿಂದಲೇ, ಈ ಕರ್ಮವು ಉಪದೇಶಿಸಲ್ಪಟ್ಟದೆ!

ಅಂದರೆ, ಕೇವಲ ಜೀವಿಸಿರುವವರ ಸೇವೆಯನ್ನೇ ಶ್ರದ್ಧಾಪೂರ್ವಕವಾಗಿ ಮಾಡುವುದರ ಹೆಸರು 'ತರ್ಪಣ'; ಮತ್ತು 'ಶ್ರಾದ್ಧ', ಎಂದು ವೇದಗಳಲ್ಲಿ ಹೇಳಲಾಗಿದೆ!

ಏಕೆಂದರೆ_

ಸೇವ್ಯಸೇವಕಸನ್ನಿಕರ್ಷಾತ್ ಸರ್ವಮೇತತ್ ಕರ್ತುಂ ಶಕ್ಯತ ಇತಿ.

ಸೇವ್ಯನ, ಮತ್ತು ಸೇವಕನ ಅತ್ಯಂತ ಸಮೀಪತೆಯಿಂದಲೇ, ಈ ಎಲ್ಲ [ಕರ್ಮವೂ] ಮಾಡಲು ಶಕ್ಯವಾಗುತ್ತದೆ!

ಅಂದರೆ, ಸೇವೆಯನ್ನು ಮಾಡಿಸಿಕೊಳ್ಳಲು ಯೋಗ್ಯರಾದವರು ಮತ್ತು ಸೇವೆಯನ್ನು ಮಾಡುವವರು_ ಈ ಇಬ್ಬರೂ ಪ್ರತ್ಯಕ್ಷವಾಗಿರುವುದರಿಂದಲೇ, ಈ ಎಲ್ಲಾ ಕೆಲಸವು ಸಂಭವವಾಗುತ್ತದೆ ; ಬೇರೆ ರೀತಿಯಲ್ಲಲ್ಲ!

ಸತ್ಕಾರಕ್ಕೆ ಅರ್ಹರಾದವರು ಮೂರು ವಿಧದ ಜನರು

ತತ್ರ ಸತ್ಕರ್ತ್ತವ್ಯಾಸ್ತ್ರಯಃ ಸಂತಿ_

[ಈಗ] ಈ ವಿಷಯದಲ್ಲಿ ಸತ್ಕಾರಕ್ಕೆ ಅರ್ಹರಾದವರು ಮೂರು [ವಿಧದವರು] ಇರುತ್ತಾರೆ_

ದೇವಾಃ , ಋಷಯಃ , ಪಿತರಶ್ಚ.

(೧) ದೇವಜನರು* (೨) ಋಷಿಗಳು** ಮತ್ತು (೩) ಪಿತೃಗಳು.+

ಅಂದರೆ, ತರ್ಪಣ ಮೊದಲಾದ ಕರ್ಮಗಳಿಂದ ಸತ್ಕಾರ ಮಾಡಲು ಯೋಗ್ಯರಾದ ಮೂವರು_ ದೇವ, ಋಷಿ ಮತ್ತು ಪಿತೃ ಆಗಿರುತ್ತಾರೆ!

---

* ಎಂದರೆ, ವಿದ್ವಾಂಸರು _ಅನು.

** ಎಂದರೆ, ಸರ್ವವಿದ್ಯಾವಂತರಾದ ಅಧ್ಯಾಪಕರು _ಅನು.

\+ ಎಂದರೆ, ಹಿರಿಯರು _ಅನು.

'ದೇವಜನರ' ಸತ್ಕಾರಕ್ಕೆ ಪ್ರಮಾಣಗಳು

ತತ್ರ ದೇವೇಷು ಪ್ರಮಾಣಮ್_

ಈ ವಿಷಯದಲ್ಲಿ 'ದೇವಜನರ' ಬಗ್ಗೆ ಪ್ರಮಾಣಗಳು ಏನೆಂದರೆ_

[ಋಷಿಃ_ ವೈಖಾನಸಃ ; ದೇವತಾ_ ವಿದ್ವಾಂಸಃ ; ಛಂದಃ_ ಅನುಷ್ಟುಪ್ ; ಸ್ವರಃ_ ಗಾಂಧಾರಃ]

ಪುನಂತು ಮಾ ದೇವಜನಾಃ ಪುನಂತು ಮನಸಾ ಧಿಯಃ ।
ಪುನಂತು ವಿಶ್ವಾ ಭೂತಾನಿ ಜಾತವೇದಃ ಪುನೀಹಿ ಮಾ ॥ ೧ ॥

[ಯಜುರ್ವೇದೇ ಅ. ೧೯, ಮಂ. ೩೯]

[ಅರ್ಥ:_ "ನನ್ನನ್ನು ದೇವಜನರು ಪವಿತ್ರ ಮಾಡಲಿ! ಮನಸ್ಸಿನಿಂದ ಬುದ್ಧಿಗಳನ್ನು ಪವಿತ್ರ ಮಾಡಲಿ! ಸಮಸ್ತ ಪ್ರಾಣಿಗಳೂ ಪವಿತ್ರ ಮಾಡಲಿ! ವಿದ್ಯೆಯನ್ನು ಪ್ರಸಿದ್ಧ ಮಾಡಿದವನೇ! ನನ್ನನ್ನು ಪವಿತ್ರನನ್ನಾಗಿ ಮಾಡು!"

(ಯಜುರ್ವೇದಃ ೧೯. ೩೯)]

ಭಾಷ್ಯಮ್_

(ಜಾತವೇದಃ) ಹೇ ಪರಮೇಶ್ವರ! (ಮಾ) ಮಾಂ (ಪುನೀಹಿ) ಸರ್ವಥಾ ಪವಿತ್ರಂ ಕುರು.

ಭವನ್ನಿಷ್ಠಾ ಭವದಾಜ್ಞಾಪಾಲಿನೋ (ದೇವಜನಾಃ) ವಿದ್ವಾಂಸಃ ಶ್ರೇಷ್ಠಾ ಜ್ಞಾನಿನೋ ;

ವಿದ್ಯಾದಾನೇನ (ಮಾ) ಮಾಂ (ಪುನಂತು) ಪವಿತ್ರಂ ಕುರ್ವಂತು.

ಭಾಷ್ಯ_

(ಜಾತವೇದಃ) ಓ ಪರಮೇಶ್ವರ! (ಮಾ) ನನ್ನನ್ನು (ಪುನೀಹಿ) ಸರ್ವಥಾ ಪವಿತ್ರನನ್ನಾಗಿ ಮಾಡಿ!

ಅಂದರೆ, ಹೇ ಜಾತವೇದ ಪರಮೇಶ್ವರ! ನೀವು ಎಲ್ಲಾ ರೀತಿಯಿಂದಲೂ ನನ್ನನ್ನು ಪವಿತ್ರನನ್ನಾಗಿ ಮಾಡಿ!

ನಿಮ್ಮಲ್ಲಿ ನಿಷ್ಠೆಯನ್ನಿಟ್ಟುರುವವರೂ, ನಿಮ್ಮ ಆಜ್ಞೆಯ ಪಾಲನೆ ಮಾಡುವವರೂ ಆದ (ದೇವಜನಾಃ) ವಿದ್ವಾಂಸರೂ, ಶ್ರೇಷ್ಠರೂ, ಹಾಗೂ ಜ್ಞಾನಿಗಳೂ ;

ವಿದ್ಯೆಯ ದಾನಮಾಡುವುದರ ಮೂಲಕ (ಮಾ) ನನ್ನನ್ನು (ಪುನಂತು) ಪವಿತ್ರನನ್ನಾಗಿ ಮಾಡಲಿ!

ಅಂದರೆ, ಯಾರು ನಿಮ್ಮ ಉಪಾಸಕರಾಗಿ ನಿಮ್ಮ ಆಜ್ಞೆಯನ್ನು ಪಾಲಿಸುತ್ತಾರೋ, ಅಥವಾ ಯಾರು ವಿದ್ವಾಂಸರೂ, ಜ್ಞಾನೀಪುರುಷರೂ, ಎಂದು ಕರೆಯಲ್ಪಡುತ್ತಾರೋ, ಅವರು ನನ್ನನ್ನು ವಿದ್ಯಾದಾನದಿಂದ ಪವಿತ್ರನನ್ನಾಗಿ ಮಾಡಲಿ!

ತಥಾ (ಪುನಂತು ಮನ.) ಭವದ್ದತ್ತವಿಜ್ಞಾನೇನ ಭವದ್ವಿಷಯಕಧ್ಯಾನೇನ ವಾಽಸ್ಮಾಕಂ ಬುದ್ಧಯಃ ಪುನಂತು ಪವಿತ್ರಾ ಭವಂತು.

ಮತ್ತು (ಪುನಂತು ಮನಸಾ) ನೀವು ಕೊಟ್ಟಿರುವ ವಿಶೇಷಜ್ಞಾನದಿಂದ, ಅಥವಾ ನಿಮ್ಮ ವಿಷಯಕವಾದ ಧ್ಯಾನದಿಂದ, ನಮ್ಮ (ಧಿಯಃ) ಬುದ್ಧಿಗಳು (ಪುನಂತು) ಪವಿತ್ರವಾಗಲಿ!

ತಥಾ (ಪುನಂತು ವಿಶ್ವಾ ಭೂತಾನಿ) ವಿಶ್ವಾನಿ ಸರ್ವಾಣಿ ಸಂಸಾರಸ್ಥಾನಿ ಭೂತಾನಿ ಪುನಂತು ಭವತ್-ಕೃಪಯಾ ಸುಖಾನಂದಯುಕ್ತಾನಿ ಪವಿತ್ರಾಣಿ ಭವಂತು ॥೧॥

ಮತ್ತು (ಪುನಂತು ವಿಶ್ವಾ ಭೂತಾನಿ) ಸಮಸ್ತ ಜಗತ್ತಿನಲ್ಲಿ ವಾಸಿಸುವ ಪ್ರಾಣಿಗಳೆಲ್ಲವೂ ತಮ್ಮ ಕೃಪೆಯಿಂದ ಸುಖ, ಹಾಗೂ ಆನಂದದಿಂದ ಯುಕ್ತರೂ, ಪವಿತ್ರರೂ ಆಗಲಿ!

ಅಂದರೆ, ಜಗತ್ತಿನ ಜೀವರೆಲ್ಲರೂ ತಮ್ಮ ಕೃಪೆಯಿಂದ ಪವಿತ್ರರಾಗಿ ಆನಂದದಲ್ಲಿರಲಿ! [೧]

'ದೇವಜನರು' ಎಂದರೆ ಯಾರು?

"ದ್ವಯಂ ವಾ ಇದಂ ನ ತೃತೀಯಮಸ್ತಿ । ಸತ್ಯಂ ಚೈವಾನೃತಂ ಚ ; ಸತ್ಯಮೇವ ದೇವಾ ಅನೃತಂ ಮನುಷ್ಯಾಃ ; 'ಇದಮಹಮನೃತಾತ್ ಸತ್ಯಮುಪೈಮೀ'ತಿ,* ತನ್ಮನುಷ್ಯೇಭ್ಯೋ ದೇವಾನುಪೈತಿ ॥"

[ಶತಪಥಬ್ರಾಹ್ಮಣೇ ಕಾಂ. ೧, ಅ. ೧, ಬ್ರಾ. ೧, [ಕಂ. ೪,]

"ಸ ವೈ ಸತ್ಯಮೇವ ವದೇತ್ । ಏತದ್ಧ ವೈ ದೇವಾ ವ್ರತಂ ಚರಂತಿ ಯತ್ಸತ್ಯಮ್ । ತಸ್ಮಾತ್ ತೇ ಯಶೋ ಯಶೋ ಹ ಭವತಿ, ಯ ಏವಂ ವಿದ್ವಾನ್ ಸತ್ಯಂ ವದತಿ ॥೨॥"

[ಶತಪಥಬ್ರಾಹ್ಮಣೇ ಕಾಂ. ೧, ಅ. ೧, ಬ್ರಾ. ೧, [ಕಂ. ೫]

[ಅರ್ಥ:_" ಇದು ಎರಡೇ ವಿಧದವಾಗಿರುತ್ತದೆ, ಮೂರನೆಯದಿಲ್ಲ! 'ಸತ್ಯ ಮತ್ತು ಅನೃತ', ಎಂದು [ಎರಡು ವಿಧ!] ಸತ್ಯವೇ ದೇವಜನರು; ಅನೃತವೇ ಮನುಷ್ಯರು! 'ಇಗೋ; ನಾನು ಅನೃತದಿಂದ [ದೂರವಾಗಿ] ಸತ್ಯವನ್ನು ಹೊಂದುತ್ತೇನೆ.'* ಇದು ಮನುಷ್ಯರಿಂದ [ದೂರಮಾಡಿ,] ದೇವಜನರನ್ನು ಪ್ರಾಪ್ತಮಾಡುತ್ತದೆ." **

(ಶತಪಥಬ್ರಾಹ್ಮಣಃ ೧. ೧. ೧. ೪)]

[ಅರ್ಥ:_"ಆದುದರಿಂದ, ಅವನು ನಿಶ್ಚಯವಾಗಿ ಸತ್ಯವನ್ನೇ ಹೇಳಬೇಕು! ಏಕೆಂದರೆ, ದೇವಜನರು ಯಾವ ವ್ರತವನ್ನಾಚರಿಸುತ್ತಾರೋ, ಅದು ಸತ್ಯದ ಆಚರಣೆಯೇ ಆಗಿರುತ್ತದೆ! ಆದುದರಿಂದ, ಅವರು ಯಶಸ್ವಿಗಳು ಯಶಸ್ವಿಗಳೇ ಆಗಿರುತ್ತಾರೆ! ಯಾವನು ಹೀಗೆ ಅರಿತುಕೊಂಡು, ಸತ್ಯವನ್ನು ಹೇಳುತ್ತಾನೋ, [ಅವನು ಯಶಸ್ವಿಯಾಗುತ್ತಾನೆ."]

(ಶತಪಥಬ್ರಾಹ್ಮಣಃ ೧. ೧. ೧. ೫)]

* ಯಜುರ್ವೇದ (೧. ೫) _ಅನು.

** ಮನುಷ್ಯತ್ವದಿಂದ ದೇವತ್ವವನ್ನು ಪ್ರಾಪ್ತಗೊಳಿಸುತ್ತದೆ, ಎಂದರ್ಥ _ಅನು.

'ದೇವಜನರ' ಮತ್ತು 'ಮನುಷ್ಯರ' ಲಕ್ಷಣ!

ಭಾಷ್ಯಮ್_

(ದ್ವಯಂ ವಾ.) ಮನುಷ್ಯಾಣಾಂ ದ್ವಾಭ್ಯಾಂ ಲಕ್ಷಣಾಭ್ಯಾಂ ದ್ವೇ ಏವ ಸಂಜ್ಞೇ ಭವತಃ_

ದೇವೋ ಮನುಷ್ಯಶ್ಚೇತಿ.

ತತ್ರ ಸತ್ಯಂ ಚೈವಾನೃತಂ ಚ ಕಾರಣೇ ಸ್ತಃ.

(ಸತ್ಯಮೇವ.) ಯತ್‌ಸತ್ಯವಚನಂ ಸತ್ಯಮಾನಂ ಸತ್ಯಕರ್ಮ ತದೇವ ದೇವಾ ಆಶ್ರಯಂತಿ.

ತಥೈವಾನೃತವಚನಮನೃತಮಾನಮನೃತಂ ಕರ್ಮ ಚೇತಿ ಮನುಷ್ಯಾಶ್ಚೇತಿ.

ಅತ ಏವ ಯೋಽನೃತಂ ತ್ಯಕ್ತ್ವಾ ಸತ್ಯಮುಪೈತಿ, ಸ ದೇವಃ ಪರಿಗಣ್ಯತೇ.

ಭಾಷ್ಯ_

(ದ್ವಯಂ ವಾ.) ಮನುಷ್ಯರ ಎರಡು ಲಕ್ಷಣಗಳ ಆಧಾರದ ಮೇಲೆ ಎರಡೇ ಸಂಜ್ಞೆಗಳಿರುತ್ತವೆ_

'ದೇವ' ಮತ್ತು **'ಮನುಷ್ಯ'**, ಎಂದು!

ಅಂದರೆ, ಎರಡು ಲಕ್ಷಣಗಳು ಕಾಣ ಬರುವುದ ರಿಂದ, ಮನುಷ್ಯರದು ಎರಡು ಹೆಸರುಗಳಿರುತ್ತವೆ_ ಎಂದರೆ, ಒಂದು, **'ದೇವ'**, ಮತ್ತು ಎರಡನೆಯದು, **'ಮನುಷ್ಯ!'**

ಇದಕ್ಕೆ **ಸತ್ಯ** ಮತ್ತು **ಅನೃತ**, ಎಂಬ ಎರಡೇ ಕಾರಣಗಳಿರುತ್ತವೆ.

ಅಂದರೆ, ಇವರಲ್ಲಿ ಭೇದವಿರುವುದಕ್ಕೆ **'ನಿಜ'** ಮತ್ತು **'ಸುಳ್ಳು'**, ಎಂಬ ಎರಡು ಕಾರಣಗಳಿರುತ್ತವೆ!

(ಸತ್ಯಮೇವ.) ಯಾವುದು ಸತ್ಯವಚನವೋ, ಸತ್ಯದ ಅಂಗೀಕಾರವೋ, [ಹಾಗೂ] ಸತ್ಯಕರ್ಮವೋ, ಅದನ್ನೇ **ದೇವಜನರು** ಆಶ್ರಯಿಸುತ್ತಾರೆ.

ಅಂದರೆ, ಯಾರಾದರೂ ಸತ್ಯಭಾಷಣವನ್ನೂ, ಸತ್ಯದ ಸ್ವೀಕಾರವನ್ನೂ ಮತ್ತು ಸತ್ಯಕರ್ಮವನ್ನೂ ಮಾಡುತ್ತಾರೋ, ಅವರು **'ದೇವಜನರು'**, ಎನಿಸುತ್ತಾರೆ!

ಹಾಗೆಯೇ, ಅನೃತವಚನ, ಅನೃತದ ಅಂಗೀಕಾರ ಮತ್ತು ಅನೃತದ ಕರ್ಮ_ [ಇವನ್ನು] ಮನುಷ್ಯರು [ಆಶ್ರಯಿಸುತ್ತಾರೆ.]

ಅಂದರೆ, ಯಾರು ಸುಳ್ಳನ್ನು ಹೇಳುತ್ತಾರೋ, ಸುಳ್ಳನ್ನು ಅಂಗೀಕರಿಸುತ್ತಾರೋ, ಮತ್ತು ಸುಳ್ಳು ಕರ್ಮ ವನ್ನು ಮಾಡುತ್ತಾರೋ, ಅವರು **'ಮನುಷ್ಯರು'**, ಎನಿಸುತ್ತಾರೆ.

ಆದುದರಿಂದ, ಸುಳ್ಳನ್ನು ತ್ಯಜಿಸಿ, ಸತ್ಯವನ್ನು ಹೊಂದುವುದು ಎಲ್ಲರಿಗೂ ಯೋಗ್ಯವಾಗಿರುತ್ತದೆ!

ಆದುದರಿಂದಲೇ, ಯಾವನು ಅನೃತವನ್ನು ತ್ಯಜಿಸಿ, ಸತ್ಯವನ್ನು ಸೇರುತ್ತಾನೋ, ಅವನು **'ದೇವ'**, ಎಂದು ಪರಿಗಣಿಸಲ್ಪಡುತ್ತಾನೆ.

ಯಶ್ಚ ಸತ್ಯಂ ತ್ಯಕ್ತ್ವಾಽನೃತಮುಪೈತಿ, ಸ ಮನುಷ್ಯಶ್ಚ.

ಮತ್ತು ಯಾವನು ಸತ್ಯವನ್ನು ತ್ಯಜಿಸಿ, ಅನೃತವನ್ನು ಸೇರುತ್ತಾನೋ, ಅವನು **'ಮನುಷ್ಯ'**, [ಎಂದು ಪರಿಗಣಿಸಲ್ಪಡುತ್ತಾನೆ.]

ಅತಃ ಸತ್ಯಮೇವ ಸರ್ವದಾ ವದೇನ್ಮನ್ಯೇತ ಕುರ್ಯಾಚ್ಚ.

ಆದುದರಿಂದ, ಸತ್ಯವನ್ನೇ ಯಾವಾಗಲೂ ಹೇಳಬೇಕು! ಅಂಗೀಕರಿಸಬೇಕು! ಮತ್ತು ಆಚರಿಸಬೇಕು!

ಅಂದರೆ, ಈ ಕಾರಣದಿಂದ, ಬುದ್ಧಿವಂತ ಜನರೆಲ್ಲರೂ ನಿರಂತರವಾಗಿ ಸತ್ಯವನ್ನೇ ಹೇಳಬೇಕು, ಅಂಗೀಕರಿಸಬೇಕು ಮತ್ತು ಮಾಡಬೇಕು! ಏಕೆಂದರೆ_

ಯಃ ಸತ್ಯವ್ರತೋ ದೇವೋಽಸ್ತಿ, ಸ ಏವ ಯಶಸ್ವಿನಾಂ ಮಧ್ಯೇ ಯಶಸ್ವೀ ಭವತಿ ;

ಯಾವನು ಸತ್ಯವ್ರತನಾದ **'ದೇವ'**ನಾಗಿರುತ್ತಾನೋ, ಅವನೇ ಯಶಸ್ವಿಗಳ ಮಧ್ಯೆ ಯಶಸ್ವಿಯಾಗುತ್ತಾನೆ!

ತದ್ವಿಪರೀತೋ ಮನುಷ್ಯಶ್ಚ ॥ ೨ ॥

ಮತ್ತು ಇದಕ್ಕೆ ವಿರುದ್ಧನಾದವನು **ಮನುಷ್ಯ**ನಾಗುತ್ತಾನೆ!

ಅಂದರೆ, ಯಾರು ಸತ್ಯವ್ರತದ ಆಚರಣೆ ಮಾಡುವ 'ದೇವಜನ'ರಿರುತ್ತಾರೋ, ಅವರಂತೂ **ಕೀರ್ತಿವಂತರಲ್ಲೂ ಕೀರ್ತಿವಂತರಾಗಿ**, ಯಾವಾಗಲೂ ಆನಂದದಲ್ಲಿರುತ್ತಾರೆ!

ಆದರೆ, ಅವರಿಗೆ ವಿಪರೀತವಾಗಿ ನಡೆಯುವ **ಮನುಷ್ಯರು** ದುಃಖವನ್ನು ಪಡೆದುಕೊಂಡು, ಪ್ರತಿದಿನವೂ ಪೀಡಿತರಾಗಿಯೇ ಇರುತ್ತಾರೆ! [೨]

"ವಿದ್ವಾಗ್ಂಸೋ ಹಿ ದೇವಾಃ ॥ ೩ ॥"

[ಶತಪಥಬ್ರಾಹ್ಮಣೇ ಕಾಂ. ೩, ಅ. ೭, ಬ್ರಾ. ೬, [ಕಂ. ೧೦]

[**ಅರ್ಥ:_** "ಏಕೆಂದರೆ, ವಿದ್ವಾಂಸರೇ **'ದೇವಜನರು'**, [ಎನಿಸುತ್ತಾರೆ.] "

(ಶತಪಥಬ್ರಾಹ್ಮಣ: ೩. ೭. ೬. ೧೦)]

ಭಾಷ್ಯಮ್_

(ವಿದ್ವಾ.) **ತಸ್ಮಾದತ್ರ ವಿದ್ವಾಂಸ ಏವ ದೇವಾಃ ಸಂತಿ ॥ ೩ ॥**

ಭಾಷ್ಯ_

(ವಿದ್ವಾ.) ಆದುದರಿಂದ, ಈ ವಿಷಯದಲ್ಲಿ ವಿದ್ವಾಂಸರೇ **'ದೇವಜನರು'** ಆಗಿರುತ್ತಾರೆ.

ಅಂದರೆ, ಇದರಿಂದ ಸತ್ಯಧಾರಣೆ ಮಾಡುವ ವಿದ್ವಾಂಸರೇ **'ದೇವರು'**, ಎಂದು ಕರೆಯಲ್ಪಡುತ್ತಾರೆ! [೩]

ಋಷಿಗಳ ಸತ್ಕಾರಕ್ಕೆ ಪ್ರಮಾಣಗಳು

ಅಥರ್ಷಿಪ್ರಮಾಣಮ್_

ಈಗ 'ಋಷಿ'ಯ ಸಂಬಂಧವಾದ ಪ್ರಮಾಣಗಳು ಏನೆಂದರೆ_

[ಋಷಿಃ_ ನಾರಾಯಣಃ ; ದೇವತಾ_ ಪುರುಷಃ ; ಛಂದಃ_ ನಿಚೃದನುಷ್ಟುಪ್ ; ಸ್ವರಃ_ ಗಾಂಧಾರಃ]

ತಂ ಯಜ್ಞಂ ಬರ್ಹಿಷಿ ಪ್ರೌಕ್ಷನ್ ಪುರುಷಂ ಜಾತಮಗ್ರತಃ ।
ತೇನ ದೇವಾಽ ಅಯಜಂತ ಸಾಧ್ಯಾಽ ಋಷಯಶ್ಚ ಯೇ ॥ ೧ ॥

[ಯಜುರ್ವೇದೇ ೩೧. ೯]

[ಅರ್ಥ:_ " ಮೊಟ್ಟ ಮೊದಲು ಪ್ರಾದುರ್ಭೂತನಾದ ಆ ಸರ್ವಪೂಜ್ಯ ಪುರುಷನನ್ನು ತಮ್ಮ ಹೃದಯಾಂತರಿಕ್ಷದಲ್ಲಿ ಅಭಿಷೇಕ ಮಾಡುತ್ತಾ, ಅವನಿಂದ ಯಾರು ವಿದ್ವಾಂಸರೂ, ಸಾಧ್ಯರೂ ಮತ್ತು ಋಷಿಗಳೂ ಆಗಿದ್ದಾರೋ, ಅವರು [ಅವನನ್ನು] ಪೂಜಿಸಿದರು! "

(ಯಜುರ್ವೇದಃ ೩೧. ೯)]

ಭಾಷ್ಯಮ್_

(ತಂ ಯಜ್ಞಮ್.) ಇತಿ 'ಸೃಷ್ಟಿವಿದ್ಯಾವಿಷಯೇ' ವ್ಯಾಖ್ಯಾತಃ* ॥ ೧ ॥

ಭಾಷ್ಯ_

(ತಂ ಯಜ್ಞಮ್.) ಈ ಮಂತ್ರದ ವ್ಯಾಖ್ಯಾನವು '(ಅ) ಸೃಷ್ಟಿವಿದ್ಯಾವಿಷಯ'ದಲ್ಲಿ ಮಾಡಲ್ಪಟ್ಟಿದೆ.* [೧]

" ಅಥ ಯದೇವಾನು ಬ್ರುವೀತ । ತೇನರ್ಷಿಭ್ಯ ಋಣಂ ಜಾಯತೇ, ತದ್ಧೇಭ್ಯ ಏತತ್ ಕರೋತ್ಯೃಷೀಣಾಂ ನಿಧಿಗೋಪ ಇತಿ ಹ್ಯನೂಚಾನ-ಮಾಹುಃ ॥ ೨ ॥ "

[ಶತಪಥಬ್ರಾಹ್ಮಣೇ ಕಾಂ. ೧, ಅ. ೭, ಬ್ರಾ. ೫]

[ಅರ್ಥ:_ " ನಂತರ, [ವೇದವನ್ನು] ಓದಿಸಬೇಕು! ಏಕೆಂದರೆ, ಅದರಿಂದ+ ಋಷಿಗಳ ಬಗ್ಗೆ ಋಣವು ಉಂಟಾಗುತ್ತದೆ. ಆದುದರಿಂದ, ಅವರಿಗಾಗಿ ಹೀಗೆ ಮಾಡುತ್ತಾನೆ. ಸರ್ವವಿದ್ಯಾವಿಶಾರದನನ್ನು ಋಷಿಗಳ 'ಕೋಷರಕ್ಷಕ', ಎಂದು ಕರೆಯುತ್ತಾರೆ. "

(ಶತಪಥಬ್ರಾಹ್ಮಣಃ ೧. ೭. ೨. ೩)]

* ೩೪೩ ತಮೇ ಪೃಷ್ಠೇ ದ್ರಷ್ಟವ್ಯಮ್ _ಅನು.

* ೩೪೩ ನೆಯ ಪುಟವನ್ನು ನೋಡಿ. _ಅನು.

+ ಓದಿರುವುದರಿಂದ. _ಅನು.

ಭಾಷ್ಯಮ್_

(ಅಥ ಯದೇವಾನು.) ಅಥೇತ್ಯನಂತರಂ ಸರ್ವ-ವಿದ್ಯಾಂ ಪಠಿತ್ವಾ ಯದನುವಚನಮಧ್ಯಾಪನಂ ಕರ್ಮಾನುಷ್ಠಾನಮಸ್ತಿ, ತದೃಷಿಕೃತ್ಯಂ ವಿಜ್ಞಾಯತೇ.

ಭಾಷ್ಯ_

(ಅಥ ಯದೇವಾನು.) **'ಅಥ'**, ಎಂದರೆ, ಅನಂತರ, ಸರ್ವವಿದ್ಯೆಯನ್ನೂ ಓದಿ, ಯಾವ **'ಅನುವಚನ'**, ಎಂದರೆ ಅಧ್ಯಾಪನವೆಂಬ ಕರ್ಮಾನುಷ್ಠಾನ ವಿದೆಯೋ, ಅದು **'ಋಷಿಕೃತ್ಯ'**, ಎಂದು ತಿಳಿಯಲ್ಪಡುತ್ತದೆ!

ಅಂದರೆ, ಎಲ್ಲಾ ವಿದ್ಯೆಗಳನ್ನೂ ಓದಿ, ಇತರರನ್ನೂ ಓದಿಸುವುದು ಯಾವುದಿದೆಯೋ, ಅದು **'ಋಷಿಕರ್ಮ'**, ಎಂದು ಕರೆಯಲ್ಪಡುತ್ತದೆ!

ತೇನಾಧ್ಯಯನಾಧ್ಯಾಪನಕರ್ಮಣೈವರ್ಷಯಃ ಸೇವನೀಯಾ ಜಾಯಂತೇ.

ಆದುದರಿಂದ, ಅಧ್ಯಯನ ಮತ್ತು ಅಧ್ಯಾಪನ ಕರ್ಮಗಳಿಂದಲೇ ಋಷಿಗಳು ಸೇವಿಸಲ್ಪಡುವವರಾಗಿರುತ್ತಾರೆ.

ಅಂದರೆ, ಮನುಷ್ಯರ ಮೇಲೆ ಋಷಿಗಳ ಎಷ್ಟು ಋಣವಿದೆಯೋ, ಅದೆಲ್ಲದರ ನಿವೃತ್ತಿಯು ಅವರ ಸೇವೆಯನ್ನು ಮಾಡುವುದರಿಂದ ಆಗುತ್ತದೆ!

ಯತ್ ತೇಷಾಂ ಪ್ರಿಯಮಾಚರಂತಿ, ತದೇತತ್ ತೇಭ್ಯಃ ಸೇವಾಕರ್ತೃಭ್ಯ ಏವ ಸುಖಕಾರೀ ಭವತಿ.

ಯಾರು ಅವರ ಪ್ರಿಯವನ್ನು ಆಚರಿಸುತ್ತಾರೋ, ಆ ಕರ್ಮವು ಆ ಸೇವಾಕರ್ತೃಗಳಿಗೇ ಸುಖಕಾರಿಯಾಗುತ್ತದೆ.

ಅಂದರೆ, ಯಾವುದು ಪ್ರತಿದಿನವೂ ವಿದ್ಯೆಯ ದಾನ, [ವಿದ್ಯೆಯ] ಗ್ರಹಣ, ಮತ್ತು ಸೇವೆ ಮಾಡುವುದು ಆಗಿರುತ್ತದೋ, ಅದೇ ಪರಸ್ಪರ ಆನಂದದಾಯಕವಾಗಿರುತ್ತದೆ.

ಮತ್ತು ಇದೇ ವ್ಯವಹಾರವೇ 'ನಿಧಿಗೋಪ', ಎಂದರೆ ವಿದ್ಯಾಕೋಷದ ರಕ್ಷಕವಾಗಿರುತ್ತದೆ.

ಯಃ ಸರ್ವವಿದ್ಯಾವಿದ್ ಭೂತ್ವಾಧ್ಯಾಪಯತಿ, ತಮೇವಾನೂಚಾನಮೃಷಿಮಾಹುಃ ॥ ೨ ॥

ಯಾವನು ಸಮಸ್ತ ವಿದ್ಯೆಗಳನ್ನೂ ತಿಳಿದುಕೊಂಡು, ಅಧ್ಯಾಪನ ಮಾಡುತ್ತಾನೋ, ಆ 'ಅನೂಚಾನ'ನನ್ನೇ **'ಋಷಿ'**, ಎಂದು ಕರೆಯುತ್ತಾರೆ. [೨]

" ಅಥಾರ್ಷೇಯಂ ಪ್ರವೃಣೀತೇ । ಋಷಿಭ್ಯಶ್ಚೈವೈನಮೇತದ್ದೇವೇಭ್ಯಶ್ಚ
ನಿವೇದಯತ್ಯಯಂ ಮಹಾವೀರ್ಯೋ ಯೋ ಯಜ್ಞಂ ಪ್ರಾಪದಿತಿ
ತಸ್ಮಾದಾರ್ಷೇಯಂ ಪ್ರವೃಣೀತೇ ॥ ೩ ॥"

[ಶತಪಥಬ್ರಾಹ್ಮಣೇ ಕಾಂ. ೧, ಅ. ೪, ಬ್ರಾ. ೨]

[ಅರ್ಥ:_ " ನಂತರ, ಋಷಿಸಂಬಂಧಿಕರ್ಮವನ್ನು ವರಿಸುತ್ತಾನೆ. ಇದನ್ನು ಋಷಿಗಳಿಗೂ, ಹಾಗೂ ದೇವಜನರಿಗೂ ನಿವೇದನ ಮಾಡುತ್ತಾನೆ. ಯಾವನು ಯಜ್ಞವನ್ನು ಹೊಂದುತ್ತಾನೋ; ಅವನು ಮಹಾಪರಾಕ್ರಮಿಯಾಗುತ್ತಾನೆ. ಆದುದರಿಂದ, [ಅವನು] ಋಷಿಸಂಬಂಧವಾದ ಕರ್ಮವನ್ನು ವರಿಸುತ್ತಾನೆ! "

(ಶತಪಥಬ್ರಾಹ್ಮಣ: ೧. ೪. ೨. ೩)]

ಭಾಷ್ಯಮ್_

(ಅಥಾರ್ಷೇಯಂ ಪ್ರವೃ.) ಯೋ ಮನುಷ್ಯಃ ಪಾಠನಂ ಕರ್ಮ ಪ್ರವೃಣೀತೇ, ತದಾರ್ಷೇಯಂ ಕರ್ಮ ಕಥ್ಯತೇ.

ಯ ಋಷಿಭ್ಯೋ ದೇವೇಭ್ಯೋ ವಿದ್ಯಾರ್ಥಿಭ್ಯಶ್ಚ ಪ್ರಿಯಂ ವಸ್ತು ನಿವೇದಯಿತ್ವಾ ;⊛

ನಿತ್ಯಂ ವಿದ್ಯಾಮಧೀತೇ ;

ಸ ವಿದ್ವಾನ್ ಮಹಾವೀರ್ಯೋ ಭೂತ್ವಾ ಯಜ್ಞಂ ವಿಜ್ಞಾನಾಖ್ಯಂ (ಪ್ರಾಪತ್) ಪ್ರಾಪ್ನೋತಿ.

ತಸ್ಮಾದಿದಮಾರ್ಷೇಯಂ ಕರ್ಮ ಸರ್ವೈ-ರ್ಮನುಷ್ಯೈಃ ಸ್ವೀಕಾರ್ಯ್ಯಮ್ ॥ ೩ ॥

ಭಾಷ್ಯ_

(ಅಥಾರ್ಷೇಯಂ ಪ್ರವೃ.) ಯಾವ ಮನುಷ್ಯನು ಓದಿಸುವ ಕೆಲಸವನ್ನು ಆರಿಸಿಕೊಳ್ಳುತ್ತಾನೋ, ಅದು 'ಆರ್ಷೇಯಕರ್ಮ'*, ಎಂದು ಕರೆಯಲ್ಪಡುತ್ತದೆ.

ಯಾವನು ಋಷಿಗಳಿಗೂ, ದೇವಜನರಿಗೂ ಮತ್ತು ವಿದ್ಯಾರ್ಥಿಗಳಿಗೂ ಪ್ರಿಯವಾದ ಪದಾರ್ಥವನ್ನು ನಿವೇದಿಸಿ,

ಪ್ರತಿನಿತ್ಯವೂ ವಿದ್ಯೆಯನ್ನು ಕಲಿಯುತ್ತಾನೋ ;

ಆ ವಿದ್ವಾಂಸನು 'ಮಹಾವೀರ್ಯ'ನಾಗಿ, 'ವಿಜ್ಞಾನ', ಎಂಬ ಹೆಸರಿನ ಯಜ್ಞವನ್ನು (ಪ್ರಾಪತ್) ಪಡೆದು ಕೊಳ್ಳುತ್ತಾನೆ.

ಅಂದರೆ, ವಿದ್ಯೆಯನ್ನು ಓದಿಕೊಂಡು, ಎಲ್ಲರಿಗೂ ಓದಿಸುವ ಋಷಿಗಳ, ಹಾಗೂ ದೇವಜನರ ಸೇವೆಯನ್ನು, ಅವರಿಗೆ ಪ್ರಿಯವಸ್ತುಗಳ [ದಾನದ] ಮೂಲಕ, ಮಾಡುವ ವಿದ್ವಾಂಸನು ಬಹುಪರಾಕ್ರಮಯುಕ್ತನಾಗಿ ವಿಶೇಷ ಜ್ಞಾನ ವನ್ನು ಹೊಂದುತ್ತಾನೆ!

ಆದುದರಿಂದ, ಈ 'ಆರ್ಷೇಯ', ಎಂಬ ಕರ್ಮ ವನ್ನು ಮನುಷ್ಯರೆಲ್ಲರೂ ಅಂಗೀಕರಿಸಬೇಕು!

ಅಂದರೆ, 'ಆರ್ಷೇಯ', ಎಂದರೆ ಋಷಿಕರ್ಮ, ಎಂಬುದನ್ನು ಎಲ್ಲಾ ಮನುಷ್ಯರೂ ಸ್ವೀಕರಿಸಬೇಕು! [೩]

⊛ 'ನಿವೇದ್ಯ' _ ಆ. ವೈ.

* ಎಂದರೆ, ಋಷಿಗಳಿಗೆ ಸಂಬಂಧಪಟ್ಟ ಕರ್ಮ _ಅನು.

ಪಿತೃಗಳ ಸತ್ಕಾರಕ್ಕೆ ಪ್ರಮಾಣಗಳು

ಅತ್ರ ಪಿತೃಷು ಪ್ರಮಾಣಮ್_

ಈಗ ಪಿತೃಗಳ ವಿಷಯದಲ್ಲಿ ಪ್ರಮಾಣಗಳು ಏನೆಂದರೆ_

[ಋಷಿಃ_ ವಾಮದೇವಃ ; ದೇವತಾ_ ಆಪಃ ; ಛಂದಃ_ ಭುರಿಗುಷ್ಣಿಕ್ ; ಸ್ವರಃ_ ಋಷಭಃ]

ಊರ್ಜಂ ವಹಂತೀರಮೃತಂ ಘೃತಂ
ಪಯಃ ಕೀಲಾಲಂ ಪರಿಸ್ರುತಮ್ ।
ಸ್ವಧಾ ಸ್ಥ ತರ್ಪಯತ ಮೇ ಪಿತೄನ್ ॥೧॥

[ಯಜುರ್ವೇದೇ ಅ. ೨, ಮಂ. ೩೪]

[ಅರ್ಥ:_ "ಬಲವನ್ನು ಧರಿಸುವ ಅಮೃತರಸವನ್ನೂ, ತುಪ್ಪವನ್ನೂ, ಹಾಲನ್ನೂ, ಪಕ್ವಮಾಡಿದ ಭೋಜ್ಯಸಾಮಗ್ರಿಗಳನ್ನೂ, ರಸವನ್ನು ತೆಗೆಯುವಂತಹ ಪದಾರ್ಥಗಳನ್ನೂ ತಮ್ಮ ಬಳಿಯಲ್ಲಿ ಇಟ್ಟು ಕೊಂಡಿರಿ! [ಮತ್ತು] ನನ್ನ ಹಿರಿಯರನ್ನು [ಇವುಗಳಿಂದ] ತೃಪ್ತಿ ಪಡಿಸಿರಿ!"

(ಯಜುರ್ವೇದಃ ೨. ೩೪)]

ಭಾಷ್ಯಮ್_

(ಊರ್ಜಂ ವಹಂತೀ.)

ಸರ್ವೇ ಮನುಷ್ಯಾಃ ಸರ್ವಾನ್ ಪ್ರತ್ಯೇವಂ ಜಾನೀಯುಶ್ಚಾಜ್ಞಾಪಯೇಯುಃ_

(ಮೇ ಪಿತೄನ್) ಮಮ ಪಿತೃಪಿತಾಮಹಾದೀನಾಚಾರ್ಯ್ಯಾದೀಂಶ್ಚ ಸರ್ವೇ ಯೂಯಂ (ತರ್ಪಯತ) ಸೇವಯಾ ಪ್ರಸನ್ನಾನ್ ಕುರುತೇತಿ.

ಭಾಷ್ಯ_

(ಊರ್ಜಂ ವಹಂತೀ.)

ಮನುಷ್ಯರೆಲ್ಲರೂ ಎಲ್ಲರ ಪ್ರತಿಯಾಗಿ ತಿಳಿಯಬೇಕೇನೆಂದರೆ, ಮತ್ತು ಆಜ್ಞಾಪಿಸಬೇಕೇನೆಂದರೆ_

ಅಂದರೆ, ತಂದೆ, ಅಥವಾ ಸ್ವಾಮಿಯು, ತಮ್ಮ ಪುತ್ರರು, ಪೌತ್ರರು, ಸ್ತ್ರೀಯರು, ಮತ್ತು ನೌಕರರಿಗೆ ಯಾವ ರೀತಿ ಆಜ್ಞೆ ಕೊಡಬೇಕೇನೆಂದರೆ_

(ಮೇ ಪಿತೄನ್) ನನ್ನ ತಂದೆ, ತಾತ ಮೊದಲಾದವರನ್ನೂ, ಮತ್ತು ಆಚಾರ್ಯರೇ ಮೊದಲಾದವರನ್ನೂ ನೀವೆಲ್ಲರೂ (ತರ್ಪಯತ) ಸೇವೆಯಿಂದ ಪ್ರಸನ್ನರನ್ನಾಗಿ ಮಾಡಿರಿ!

ಅಂದರೆ, ಯಾರು ಯಾರು ನಮಗೆ ಮಾನ್ಯರಾದ ತಂದೆ, ತಾತ ಮೊದಲಾದವರೂ ; ತಾಯಿ, ಅಜ್ಜ ಮೊದಲಾದವರೂ ; ಮತ್ತು ಆಚಾರ್ಯರು, ಹಾಗೂ ವಯಸ್ಸು ಅಥವಾ ಜ್ಞಾನದಿಂದ ಹಿರಿಯರಾದ, ಮತ್ತು ಮಾನ್ಯಕ್ಕೆ ಯೋಗ್ಯರಾದ ಇತರ ವಿದ್ವಾಂಸಜನರೂ ಇರುತ್ತಾರೋ, ಇವರೆಲ್ಲರನ್ನೂ ಸೇವಿಸಿರಿ!

ತಥಾ (ಸ್ವಧಾ ಸ್ಥ) ಸತ್ಯವಿದ್ಯಾಭಕ್ತಿಸ್ವಪದಾರ್ಥ-ಧಾರಿಣೋ ಭವತ.

ಮತ್ತು (ಸ್ವಧಾ ಸ್ಥ) ಸತ್ಯ-ವಿದ್ಯೆ, ಭಕ್ತಿ, [ಹಾಗೂ] ತಮ್ಮ ಪದಾರ್ಥಗಳನ್ನು ಹೊಂದಿರುವವರಾಗಿರಿ!

ಹಿರಿಯರಿಗೆ ಯಾವ ಪದಾರ್ಥಗಳನ್ನು ಅರ್ಪಿಸಬೇಕು?

ಕೇನ ಕೇನ ಪದಾರ್ಥೇನ ತೇ ಸೇವನೀಯಾ-ಸ್ತಾನಾಹ_

ಯಾವ ಯಾವ ಪದಾರ್ಥದಿಂದ ಅವರು ಸೇವಿಸಲ್ಪಡಬೇಕು? ಎಂದರೆ, ಅವುಗಳನ್ನು ಹೇಳುತ್ತೇವೆ_

(ಊರ್ಜಂ) ಪರಾಕ್ರಮಂ ಪ್ರಾಪಿಕಾಃ ಸುಗಂಧಿತಾಃ ಪ್ರಿಯಾ ಹೃದ್ಯಾ ಅಪಃ ;

(ಊರ್ಜಂ.) ಪರಾಕ್ರಮವನ್ನುಂಟುಮಾಡುವ ಸುಗಂಧಿತವೂ, ಪ್ರಿಯವೂ, ಹೃದಯಾನಂದಕರವೂ ಆದ ನೀರನ್ನೂ ;

(ಅಮೃತಮ್) ಅಮೃತಾತ್ಮಕಮನೇಕವಿಧಂ ರಸಮ್ ;

(ಅಮೃತಮ್) ರೋಗನಾಶಕವಾದ ಅನೇಕ ವಿಧವಾದ ರಸಗಳನ್ನೂ ;

(ಘೃತಮ್) ಆಜ್ಯಮ್ ;

(ಘೃತಮ್) ತುಪ್ಪವನ್ನೂ ;

(ಪಯಃ) ದುಗ್ಧಮ್ ;

(ಪಯಃ) ಹಾಲನ್ನೂ ;

(ಕೀಲಾಲಮ್) ಸಂಸ್ಕಾರೈಃ ಸಂಪಾದಿತಮನೇಕ-ವಿಧಮನ್ನಮ್ ;

(ಕಿಲಾಲಮ್) ಚೆನ್ನಾಗಿ ಅಡಿಗೆ ಮಾಡಿದ ಅನೇಕ ವಿಧವಾದ ಭೋಜ್ಯಪದಾರ್ಥಗಳನ್ನೂ ;

(ಪರಿಸೃತಮ್) ಮಾಕ್ಷಿಕಂ ಮಧು ಕಾಲಪಕ್ವಂ ಫಲಾದಿಕಂ ಚ ;

(ಪರಿಸ್ರುತಮ್) ಜೇನುತುಪ್ಪ ಮತ್ತು ಸಮಯದಲ್ಲಿ ಪಕ್ವವಾದ ಹಣ್ಣು ಮೊದಲಾದುವನ್ನೂ ;

ನಿವೇದ್ಯ ಪಿತ್ಋೂನ್ ಪ್ರಸನ್ನಾನ್ ಕುರ್ಯ್ಯಾತ ॥೧॥

ಸಮರ್ಪಿಸಿ, ಹಿರಿಯರನ್ನು ಪ್ರಸನ್ನರನ್ನಾಗಿ ಮಾಡಿರಿ!

ಅಂದರೆ, ಉತ್ತಮ ಉತ್ತಮವಾದ ನೀರು, ಉತ್ತಮ ಅನ್ನ, ಎಲ್ಲಾ ಪ್ರಕಾರದ ಉತ್ತಮ ಹಣ್ಣುಗಳ ರಸ ಮೊದಲಾದ ಪದಾರ್ಥಗಳಿಂದ ನಿತ್ಯವೂ ಸೇವೆ ಮಾಡುತ್ತಿರಿ! ಇದರಿಂದ, ಅವರು ಪ್ರಸನ್ನರಾಗಿ ನಿಮ್ಮೆಲ್ಲರಿಗೂ ಯಾವಾಗಲೂ ವಿದ್ಯೆಯನ್ನು ಹೇಳಿ ಕೊಡುತ್ತಿರಲಿ! ಏಕೆಂದರೆ, ಹೀಗೆ ಮಾಡುವುದರಿಂದ, ನೀವೆಲ್ಲರೂ ಕೂಡ, ಸದಾ ಪ್ರಸನ್ನರಾಗಿರಬಲ್ಲಿರಿ!

ಹಿರಿಯರ ಮುಂದೆ ವಿನಯಪ್ರದರ್ಶನ

ಮತ್ತು ಯಾವಾಗಲೂ ಅವರನ್ನು ಪ್ರಾರ್ಥಿಸುತ್ತಿರಬೇಕೇನೆಂದರೆ_

'ಓ ಹಿರಿಯರೇ! ತಾವು ನಮ್ಮ [ಈ] ಅಮೃತರೂಪ ಪದಾರ್ಥಗಳ ಸೇವನೆಯಿಂದ ತೃಪ್ತರಾಗಿರಿ! ಮತ್ತು ಯಾವ ಯಾವ ಪದಾರ್ಥವನ್ನು ತಮ್ಮ ಇಚ್ಛೆಗೆ ಅನುಸಾರವಾಗಿ ನಾವು ತಮಗೆ ಸಮರ್ಪಿಸಬಲ್ಲೆವೋ, ಅವಕ್ಕಾಗಿ ಆಜ್ಞೆಯನ್ನು ದಯಪಾಲಿಸುತ್ತಿರಿ!

'ನಾವು ಮನಸ್ಸು-ವಚನ-ಕರ್ಮಗಳಿಂದ ತಮ್ಮನ್ನು ಸುಖಿಗಳನ್ನಾಗಿ ಮಾಡುವುದಕ್ಕಾಗಿ ತಯಾರಾಗಿದ್ದೇವೆ. ತಾವು ಯಾವ ರೀತಿಯ ದುಃಖವನ್ನೂ ಹೊಂದಬೇಡಿರಿ!

'ಏಕೆಂದರೆ, ಹೇಗೆ ತಾವೆಲ್ಲರೂ [ನಮ್ಮ] ಬಾಲ್ಯಾವಸ್ಥೆ ಮತ್ತು ಬ್ರಹ್ಮಚರ್ಯಾಶ್ರಮದಲ್ಲಿ ನಮಗೆ ಸುಖವನ್ನು ಕೊಟ್ಟಿದ್ದೀರೋ, ಹಾಗೆಯೇ, ನಮಗೆ ಕೃತಘ್ನತೆಯ ದೋಷವು ಬಾರದಿರಲೆಂದು, ನಾವೂ ಕೂಡ, ತಮ್ಮೆಲ್ಲರ ಪ್ರತ್ಯುಪಕಾರವನ್ನು ಅವಶ್ಯವಾಗಿ ಮಾಡಬೇಕಾಗಿದೆ!' [೧]

'ಪಿತೃ'ಗಳ ಲಕ್ಷಣಗಳು ಮತ್ತು ಅವರ ಸತ್ಕಾರ

[ಋಷಿಃ_ ಶಂಖಃ ; ದೇವತಾ_ ಪಿತರಃ ; ಛಂದಃ_ ವಿರಾಟ್ ಪಂಕ್ತಿಃ ; ಸ್ವರಃ_ ಪಂಚಮಃ]

ಆ ಯಂತು ನಃ ಪಿತರಃ ಸೋಮ್ಯಾಸೋಽ-
ಗ್ನಿಷ್ವಾತ್ತಾಃ ಪಥಿಭಿರ್ದೇವಯಾನೈಃ ।
ಅಸ್ಮಿನ್ ಯಜ್ಞೇ ಸ್ವಧಯಾ ಮದಂತೋಽ-
ಧಿ ಬ್ರುವಂತು ತೇಽವಂತ್ವಸ್ಮಾನ್ ॥ ೨ ॥

[ಯಜುರ್ವೇದೇ ಅ. ೧೯, ಮಂ. ೫೮]

[ಅರ್ಥ:_ "ಸೌಮ್ಯಗುಣವುಳ್ಳವರೂ, ಅಗ್ನಿವಿದ್ಯೆಯನ್ನು ತಿಳಿದವರೂ ಆದ ನಮ್ಮ ಹಿರಿಯರು ವಿದ್ವಾಂಸರ ಮಾರ್ಗಗಳಿಂದ [ನಮ್ಮ ಬಳಿಗೆ] ಬರಲಿ! ಈ ಸತ್ಕಾರಸಮಾರಂಭದಲ್ಲಿ ಅವರು ನಮ್ಮ ಸೇವೆಯಿಂದ ಆನಂದಿತರಾಗಿ, ನಮಗೆ ಉಪದೇಶಿಸಲಿ! [ಮತ್ತು] ನಮ್ಮನ್ನು ರಕ್ಷಿಸಲಿ!"

(ಯಜುರ್ವೇದ: ೧೯. ೫೮)]

ಭಾಷ್ಯಮ್_ (ಆಯಂತು ನಃ.)

ಭಾಷ್ಯ_ (ಆಯಂತು ನಃ.)

ಅಂದರೆ, ಮನುಷ್ಯರು ಯಾವಾಗಲೂ ಪ್ರಾರ್ಥನೆ ಮಾಡಬೇಕೇನೆಂದರೆ_

ಯೇ (ಸೋಮ್ಯಾಸಃ) ಸೋಮಗುಣಾಃ ಶಾಂತಾಃ ಸೋಮವಲ್ಲ್ಯಾದಿರಸನಿಷ್ಪಾದನೇ ಚತುರಾಃ ;

ಯಾರು (ಸೋಮ್ಯಾಸಃ) ಸೌಮ್ಯಗುಣವುಳ್ಳವರೂ, ಶಾಂತರೂ, ಸೋಮವಲ್ಲೀ ಮೊದಲಾದುದರಿಂದ ರಸವನ್ನು ತೆಗೆಯುವುದರಲ್ಲಿ ಚತುರರೂ ;

ಅಂದರೆ, ಓ ಪರಮೇಶ್ವರ! ತಮ್ಮ ಅನುಗ್ರಹ ದಿಂದ ಯಾರು ಶಾಂತಸ್ವಭಾವವನ್ನುಳ್ಳವರೂ, ಹಾಗೂ ಎಲ್ಲರಿಗೂ ಸುಖವನ್ನು ಕೊಡುವವರೂ ಆದ ವಿದ್ವಾಂಸರು ಆಗಿರುತ್ತಾರೋ ;

(ಅಗ್ನಿಷ್ವಾತ್ತಾಃ.) ಅಗ್ನಿಃ ಪರಮೇಶ್ವರೋಽಭ್ಯುದಯಾಯ ಸುಷ್ಠುತಯಾಽತ್ತೋ ಗೃಹೀತೋ ಯೈಸ್ತೇಽಗ್ನಿಷ್ವಾತ್ತಾಃ ;

(ಅಗ್ನಿಷ್ವಾತ್ತಾಃ) 'ಯಾರಿಂದ 'ಅಗ್ನಿ', ಎಂದರೆ ಪರಮೇಶ್ವರನು [ತಮ್ಮ] ಅಭ್ಯುದಯಕ್ಕಾಗಿ ಉತ್ತಮ ರೀತಿಯಲ್ಲಿ ಅಂಗೀಕರಿಸಲ್ಪಟ್ಟಿದ್ದಾನೋ, ಅವರು **'ಅಗ್ನಿಷ್ವಾತ್ತರು'**, [ಎನಿಸುತ್ತಾರೆ.] ಅವರೂ ;

ತಥಾ ಹೋಮಕರಣಾರ್ಥಂ ಶಿಲ್ಪವಿದ್ಯಾಸಿದ್ಧಯೇ ಚ ಭೌತಿಕೋಽಗ್ನಿರಾತ್ತೋ ಗೃಹೀತೋ ಯೈಸ್ತೇ ;

ಮತ್ತು 'ಹೋಮವನ್ನು ಮಾಡುವುದಕ್ಕಾಗಿ, ಹಾಗೂ ಶಿಲ್ಪವಿದ್ಯೆಯ ಸಿದ್ಧಿಗಾಗಿ, ಯಾರಿಂದ ಭೌತಿಕ ಅಗ್ನಿಯು ಸ್ವೀಕರಿಸಲ್ಪಟ್ಟಿದೆಯೋ, ಅವರೂ ಕೂಡ', [**'ಅಗ್ನಿಷ್ವಾತ್ತರು'**, ಎನಿಸುತ್ತಾರೆ. ಅವರೂ;]

ಅಂದರೆ, ಯಾರು ಪರಮೇಶ್ವರನ, ಮತ್ತು ರೂಪಗುಣವುಳ್ಳ ಭೌತಿಕಅಗ್ನಿಯನ್ನು ಬೇರೆ ಬೇರೆ ಮಾಡುವ ವಿದ್ಯುತ್‌ರೂಪದ ವಿದ್ಯೆಯನ್ನು ಯಥಾವತ್ತಾಗಿ ತಿಳಿದಿರುತ್ತಾರೋ ;

(ಪಿತರಃ) ವಿಜ್ಞಾನವಂತಃ ಪಾಲಕಾಃ ಸಂತಿ ;

(ಪಿತರಃ) [ಯಾರು] ವಿಜ್ಞಾನವಂತರೂ, ಪಾಲಕರೂ ಆಗಿರುತ್ತಾರೋ ;

(ಆಯಂತು ನಃ) ತೇ ಅಸ್ಮತ್ಸಮೀಪಮಾಗಚ್ಛಂತು;

(ಆಯಂತು ನಃ) ಅವರು ನಮ್ಮ ಬಳಿಗೆ ಬರಲಿ!

ವಯಂ ಚ ತತ್ಸಾಮೀಪ್ಯಂ ನಿತ್ಯಂ ಗಚ್ಛೇಮ.

ಮತ್ತು ನಾವೂ ಕೂಡ, ಅವರ ಬಳಿಗೆ ಪ್ರತಿ ನಿತ್ಯವೂ ಹೋಗೋಣ!

ಅಂದರೆ, 'ಪಿತೃ' ಶಬ್ದದಿಂದ ಎಲ್ಲರ ರಕ್ಷಕರೂ, ಶ್ರೇಷ್ಠಸ್ವಭಾವವನ್ನುಳ್ಳವರೂ ಆದ ಜ್ಞಾನಿಗಳ ಗ್ರಹಣ ವಾಗುತ್ತದೆ. ಏಕೆಂದರೆ, ಮನುಷ್ಯರ ರಕ್ಷಣೆಯು ಹೇಗೆ ಸುಶಿಕ್ಷಣ, ಹಾಗೂ ವಿದ್ಯೆಯಿಂದ ಆಗಬಲ್ಲುದೋ, ಹಾಗೆ ಬೇರಾವ ರೀತಿಯಿಂದಲೂ ಆಗಲಾರದು!

ಆದುದರಿಂದ, ಯಾವ ವಿದ್ವಾಂಸರು ಮನುಷ್ಯರಿಗೆ ಜ್ಞಾನಚಕ್ಷುವನ್ನು ಕೊಟ್ಟು, ಅವರ ಅವಿದ್ಯಾರೂಪ ಅಂಧಕಾರದ ನಾಶವನ್ನು ಮಾಡುವವರಾಗಿರುತ್ತಾರೋ, ಅವರನ್ನು **'ಪಿತರರು'**, ಎಂದು ಕರೆಯುತ್ತಾರೆ.

ಅವರ ಸತ್ಕಾರಕ್ಕಾಗಿ ಮನುಷ್ಯಮಾತ್ರರಿಗೆ ಈಶ್ವರನ ಆಜ್ಞೆಯೇನಿದೆಯೆಂದರೆ_

(ಪಥಿಭಿರ್ದೇ.) ತಾನ್ ವಿದ್ವನ್ಮಾರ್ಗೈರ್ದೃಷ್ಟ್ವಾ-ಪಥಮಾಗತಾನ್ ದೃಷ್ಟ್ವಾಽಭ್ಯುತ್ಥಾಯ_

(ಪಥಿಭಿರ್ದೇ.) [ಅವರು] ಆ ವಿದ್ವಾಂಸರ ಮಾರ್ಗದಿಂದ ಬರುತ್ತಿರುವುದು ಕಂಡುಬರುವುದನ್ನು ನೋಡಿ, ಎದ್ದು ನಿಂತುಕೊಂಡು_

ಅಂದರೆ, ವಿದ್ವಾಂಸರ ಮಾರ್ಗದ ಎರಡು ಭೇದವಿರುತ್ತದೆ_ ಒಂದು, **'ದೇವಯಾನ'**, ಮತ್ತು ಎರಡನೆಯದು, **'ಪಿತೃಯಾನ'**.

ಎಂದರೆ, ಯಾವುದು ವಿದ್ಯೆಯ ಮಾರ್ಗವೋ, ಅದು **'ದೇವಯಾನ'**; ಮತ್ತು ಯಾವುದು ಕರ್ಮೋ-ಪಾಸನೆಯ ಮಾರ್ಗವೋ, ಅದು **'ಪಿತೃಯಾನ'**, ಎನಿಸಲ್ಪಡುತ್ತವೆ. ಎಲ್ಲರೂ ಈ ಎರಡು ರೀತಿಯ ಪುರುಷಾರ್ಥಗಳನ್ನು ಯಾವಾಗಲೂ ಮಾಡುತ್ತಿರಬೇಕು!

'ಅಭ್ಯುತ್ಥಾನ', ಎಂದರೆ ಎದ್ದು ನಿಂತುಕೊಂಡು, ಪ್ರೀತಿಪೂರ್ವಕವಾಗಿ ಹೇಳಬೇಕೇನೆಂದರೆ_

'ಹೇ ಪಿತರೋ! ಭವಂತ ಆಯಂತು' ಇತ್ಯುಕ್ತ್ವಾ ಪ್ರೀತ್ಯಾಽಽಸನಾದಿಕಂ ನಿವೇದ್ಯ ನಿತ್ಯಂ ಸತ್ಕುರ್ಯ್ಯಾಮ.

"ಓ ಹಿರಿಯರೇ! ತಾವುಗಳು ದಯಮಾಡಿಸಬೇಕು!", ಎಂದು ಹೇಳಿ, ಪ್ರೀತಿಯಿಂದ ಆಸನ ಮೊದಲಾದುವನ್ನು [ಅವರಿಗೆ] ಸಮರ್ಪಿಸಿ, ನಿತ್ಯವೂ ನಾವು [ಅವರನ್ನು] ಸತ್ಕರಿಸೋಣ!

ಅಂದರೆ_

"ಬನ್ನಿರಿ! ಕುಳಿತುಕೊಳ್ಳಿರಿ! ಸ್ವಲ್ಪ ಅಲ್ಪಾಹಾರ-ಪಾನೀಯಗಳನ್ನು ಸೇವಿಸಿರಿ! ಇನ್ನೂ ಭಕ್ಷ್ಯ-ಪಾನಗಳಿಗಾಗಿ ಆಜ್ಞೆ ಮಾಡಿರಿ! ನಂತರ, ಉಪದೇಶ ಮಾಡಲು ಯೋಗ್ಯವಾದ ಯಾವ ಯಾವ ವಿಷಯಗಳಿವೆಯೋ, ಅವವುಗಳನ್ನು ಪ್ರೀತಿಪೂರ್ವಕವಾಗಿ ತಿಳಿಸಿರಿ!

"ಇದರಿಂದ ನಾವುಗಳೂ ಕೂಡ, ಸತ್ಯವಿದ್ಯೆಯಿಂದ ಯುಕ್ತರಾಗಿ, ಎಲ್ಲ ಮನುಷ್ಯರಿಂದಲೂ, **'ಹಿರಿಯರು'**, ಎಂದು ಕರೆಸಿಕೊಳ್ಳಲ್ಪಡಲು ಸಾಧ್ಯವಾಗುತ್ತದೆ," ಎಂದು ಹೇಳಬೇಕು!

ಮತ್ತು ವಿದ್ಯಾರ್ಥಿಗಳಿಗೂ, ಹಾಗೂ ಸೇವಕರಿಗೂ ಕೂಡ, ಈಶ್ವರನ ಆಜ್ಞೆ ಏನಿದೆಯೆಂದರೆ_

ಯಾವಾಗ ಯಾವಾಗ ಪಿತರರು ಬರುತ್ತಾರೋ, ಆಗಾಗ ಎದ್ದು ನಿಂತುಕೊಂಡು, ನಮಸ್ಕಾರ ಮತ್ತು ಪ್ರಿಯವಚನ ಮೊದಲಾದುವುಗಳಿಂದ ಅವರನ್ನು ಸಂತುಷ್ಟರನ್ನಾಗಿ ಮಾಡಬೇಕು!

ಮತ್ತು, ಪುನಃ ಇವರೂ ಕೂಡ, ತಮ್ಮ ಸತ್ಯಭಾಷಣದಿಂದ, ಹಾಗೂ ನಿರ್ವೈರತ್ವ ಮತ್ತು ಅನುಗ್ರಹ ಮೊದಲಾದ ಸದ್ಗುಣಗಳಿಂದ ಕೂಡಿದವರಾಗಿ, ಇತರ ಮನುಷ್ಯರನ್ನು [ಕೂಡ,] ಅದೇ ಮಾರ್ಗದಲ್ಲಿ ನಡೆಯಿಸಬೇಕು! ಮತ್ತು ತಾವೂ ಕೂಡ, ದೃಢತೆಯಿಂದ ಅದರಲ್ಲೇ ನಡೆಯಬೇಕು!

ಈ ರೀತಿಯಾಗಿ ಎಲ್ಲರೂ ಛಲ ಮತ್ತು ಲೋಭ ಮೊದಲಾದುವುಗಳಿಂದ ರಹಿತರಾಗಿ, ಪರೋಪಕಾರದ ಉದ್ದೇಶ್ಯಕ್ಕಾಗಿ ತಮ್ಮ ಸತ್ಯವ್ಯವಹಾರಗಳನ್ನಿಟ್ಟಿರಬೇಕು!

(ಅಸ್ಮಿನ್.) ಹೇ ಪಿತರೋऽಸ್ಮಿನ್ ಸತ್ಕಾರ-ರೂಪೇ ಯಜ್ಞೇ ; — (ಅಸ್ಮಿನ್.) ಹೇ ಪಿತೃಗಳೇ! ಈ ಸತ್ಕಾರರೂಪ ಯಜ್ಞದಲ್ಲಿ;

ಅಂದರೆ, ಈ ವಿದ್ಯೆಯ, ಹಾಗೂ ಸೇವಾ ಯಜ್ಞದಲ್ಲಿ;

(ಸ್ವಧಯಾ) ಅಮೃತರೂಪಯಾ ಸೇವಯಾ ; — (ಸ್ವಧಯಾ) ಅಮೃತರೂಪವಾದ ಸೇವೆಯಿಂದ ;

ಅಂದರೆ, ತಮ್ಮ ಶಿಕ್ಷಣ, ವಿದ್ಯೆಯ ದಾನ, ಹಾಗೂ ಪ್ರಕಾಶನದಿಂದ;

(ಮದಂತೋ.) ಹರ್ಷಂತೋऽಸ್ಮಾನ್ ರಕ್ಷಿತಾರಃ[⊛] ಸಂತಃ ; — (ಮದಂತೋ.) ಅತ್ಯಂತ ಹರ್ಷಿತರಾಗಿಯೂ, ನಮ್ಮನ್ನು ಸದಾ ರಕ್ಷಿಸುವವರಾಗಿಯೂ ಇದ್ದು ;

ಸತ್ಯವಿದ್ಯಾಮಧಿಬ್ರುವಂತೂಪದಿಶಂತು ॥ ೨ ॥ — ಸತ್ಯವಿದ್ಯೆಯನ್ನು ನಮಗೆ ಉಪದೇಶಿಸಿರಿ! [೨]

ಪಿತೃಸೇವೆಯಿಂದ ಆನಂದ!

[ಋಷಿಃ_ ವಾಮದೇವಃ ; ದೇವತಾ_ ಪಿತರಃ ; ಛಂದಃ_ ಬೃಹತೀ ; ಸ್ವರಃ_ ಮಧ್ಯಮಃ]

ಅತ್ರ ಪಿತರೋ ಮಾದಯಧ್ವಂ
ಯಥಾಭಾಗಮಾವೃಷಾಯಧ್ವಮ್ ।
ಅಮೀಮದಂತ ಪಿತರೋ
ಯಥಾಭಾಗಮಾವೃಷಾಯಿಷತ ॥ ೩ ॥

[ಯಜುರ್ವೇದೇ ಅ. ೨, ಮಂ. ೩೧]

[ಅರ್ಥ:_ "ಹೇ ಪಿತೃಗಳೇ! ಇಲ್ಲಿ ಆನಂದಿತರಾಗಿರಿ! ಯಥಾಭೋಗದಿಂದ ವೃಷಭದಂತಾಗಿರಿ! ಓ ಪಿತೃಗಳೇ! ಆನಂದದಿಂದ ಕೂಡಿರಿ! ಯಥಾಭೋಗದಿಂದ ವೃಷಭದಂತೆ ಮಾಡಿರಿ!"

(ಯಜುರ್ವೇದ: ೨. ೩೧)]

⊛ 'ಅಸ್ಮಾಕಂ ರಕ್ಷಿತಾರಃ' _ಆ. ವೈ.

ಭಾಷ್ಯಮ್_

(ಅತ್ರ ಪಿತರೋ.) ಹೇ ಪಿತರೋಽತ್ರಾಸ್ಯಾಂ ಸಭಾಯಾಂ ಪಾಠಶಾಲಾಯಾಂ ವಾಽಸ್ಮಾನ್ ವಿದ್ಯಾ-ವಿಜ್ಞಾನದಾನೇನಾನಂದಯುಕ್ತಾನ್ ಕುರುತ.

(ಯಥಾಭಾಗಮ್) ಭಜನೀಯಂ ಸ್ವಂ ಸ್ವಂ ವಿದ್ಯಾರೂಪಂ ಭಾಗಮ್ ;

(ಆವೃಷಾಯಧ್ವಮ್) ವಿದ್ವದ್ವತ್ ಸ್ವೀಕೃತ್ಯ ;

(ಅಮೀಮದಂತ) ಅಸ್ಮಿನ್ ಸತ್ಯೋಪದೇಶೇ ವಿದ್ಯಾದಾನಕರ್ಮಣಿ ಹರ್ಷೇಣ ಸದೋತ್ಸಾಹವಂತೋ ಭವತ.

(ಯಥಾಭಾಗಮಾ.) ತಥಾ ಯಥಾಯೋಗ್ಯಂ ಸತ್ಕಾರಂ ಪ್ರಾಪ್ಯ ಶ್ರೇಷ್ಠಾಚಾರೇಣ ಪ್ರಸನ್ನಾಃ ಸಂತೋ ವಿಚರತ ॥ ೩ ॥

ಭಾಷ್ಯ_

(ಅತ್ರ ಪಿತರೋ.) ಓ ಪಿತೃಗಳೇ! ಇಲ್ಲಿ, ಎಂದರೆ ಈ ಸಭೆಯಲ್ಲಿ, ಅಥವಾ ಪಾಠಶಾಲೆಯಲ್ಲಿ ನಮ್ಮನ್ನು ವಿದ್ಯೆಯ, ವಿಶೇಷಜ್ಞಾನದ ದಾನದಿಂದ ಆನಂದಯುಕ್ತರನ್ನಾಗಿ ಮಾಡಿರಿ!

ಅಂದರೆ, [ತಾವೂ ಕೂಡ,] ನಮ್ಮ ಈ ಸ್ಥಾನದಲ್ಲಿ ಆನಂದವಾಗಿರಿ!

(ಯಥಾಭಾಗಮ್) ಸೇವನೀಯವಾದ ತಮ್ಮ ತಮ್ಮ ವಿದ್ಯಾರೂಪ ಭಾಗವನ್ನು ;

(ಆವೃಷಾಯಧ್ವಮ್) ವಿದ್ವಾಂಸರಂತೆ ಸ್ವೀಕರಿಸಿ ;

ಅಂದರೆ, ತಮ್ಮ ಇಚ್ಛೆಗೆ ಅನುಕೂಲವಾಗಿ ಭೋಜನವಸ್ತ್ರ ಮೊದಲಾದುವುಗಳ ಭೋಗದಿಂದ ಆನಂದಿತರಾಗಿ[ರಿ ;]

(ಪಿತರಃ) ಓ ಪಿತೃಗಳೇ! **(ಅಮೀಮದಂತ)** ಸತ್ಯೋಪದೇಶವೂ, ವಿದ್ಯೆಯ ದಾನವೂ ಆದ ಈ ಕರ್ಮದಲ್ಲಿ ಹರ್ಷದಿಂದ [ಕೂಡಿದ್ದು,] ಯಾವಾಗಲೂ ಉತ್ಸಾಹವಂತರಾಗಿರಿ!

ಅಂದರೆ, ತಾವು ಇಲ್ಲಿ ವಿದ್ಯೆಯ ಪ್ರಚಾರದ ಮೂಲಕ ಎಲ್ಲರನ್ನೂ ಆನಂದಯುಕ್ತರನ್ನಾಗಿ ಮಾಡಿರಿ!

(ಯಥಾಭಾಗಮಾ.) ಮತ್ತು ಯಥಾಯೋಗ್ಯವಾಗಿ ಸತ್ಕಾರವನ್ನು ಹೊಂದಿ, ಉತ್ತಮಾಚರಣೆಯಿಂದ ಪ್ರಸನ್ನ ರಾಗಿರುತ್ತಾ ವಿಚರಿಸಿರಿ!

ಅಂದರೆ, ನಮ್ಮಗಳಿಂದ ಯಥಾಯೋಗ್ಯ ಸತ್ಕಾರ ವನ್ನು ಪಡೆದುಕೊಂಡು, ತಮ್ಮ ಪ್ರಸನ್ನತೆಯ ಪ್ರಕಾಶದಿಂದ ನಮ್ಮನ್ನೂ ಕೂಡ, ಆನಂದಿತರನ್ನಾಗಿ ಮಾಡಿರಿ! [೩]

ಅನೇಕ ವಿದ್ಯಾಪ್ರಾಪ್ತಿಗಾಗಿ ಹಿರಿಯರಿಗೆ ನಮಸ್ಕಾರ!

[ಋಷಿಃ_ ವಾಮದೇವಃ; ದೇವತಾ_ ಪಿತರಃ; ಛಂದಃ_ ಕ- ಬ್ರಾಹ್ಮೀ ಬೃಹತೀ, ರ- ನಿಚೃದ್ ಬೃಹತೀ; ಸ್ವರಃ_ ಮಧ್ಯಮಃ]

ಕನಮೋ ವಃ ಪಿತರೋ ರಸಾಯ ನಮೋ ವಃ
ಪಿತರಃ ಶೋಷಾಯ ನಮೋ ವಃ ಪಿತರೋ
ಜೀವಾಯ ನಮೋ ವಃ ಪಿತರಃ ಸ್ವಧಾಯೈ
ನಮೋ ವಃ ಪಿತರೋ ಘೋರಾಯ ರನಮೋ
ವಃ ಪಿತರೋ ಮನ್ಯವೇ ನಮೋ ವಃ
ಪಿತರಃ ಪಿತರೋ ನಮೋ ವೋ ಗೃಹಾನ್ನಃ
ಪಿತರೋ ದತ್ತ ಸತೋ ವಃ ಪಿತರೋ
ದೇಷ್ಮೈ ತದ್ವಃ ಪಿತರೋ ವಾಸಃ ॥ ೪ ॥

[ಯಜುರ್ವೇದೇ ಅ. ೨, ಮಂ. ೩೨]

[ಅರ್ಥ:_ " ಓ ಪಿತೃಗಳೇ! ರಸಕ್ಕಾಗಿ ನಿಮಗೆ ನಮಸ್ಕಾರ! ಪಿತೃಗಳೇ! ಶೋಷಕ್ಕಾಗಿ ನಿಮಗೆ ನಮಸ್ಕಾರ! ಪಿತೃಗಳೇ! ಜೀವನಕ್ಕಾಗಿ ನಿಮಗೆ ನಮಸ್ಕಾರ! ಓ ಹಿರಿಯರೇ! ಮೋಕ್ಷವಿದ್ಯೆಗಾಗಿ ನಿಮಗೆ ನಮಸ್ಕಾರ! ಪಿತೃಗಳೇ! ಆಪತ್ಕಾಲನಿವಾರಣೆಗಾಗಿ ನಿಮಗೆ ನಮಸ್ಕಾರ! ಪಿತೃಗಳೇ! ಕ್ರೋಧಕ್ಕಾಗಿ ನಿಮಗೆ ನಮಸ್ಕಾರ! ಪಿತೃಗಳೇ! ನಿಮಗೆ ನಮಸ್ಕಾರ! ಓ ಪಿತೃಗಳೇ! ನಿಮಗೆ ನಮಸ್ಕಾರ! ಪಿತೃಗಳೇ! ನಿಮ್ಮ ಗೃಹ[ವ್ಯವಹಾರ]ಗಳನ್ನು ನಮಗೆ ಕೊಡಿರಿ! ಪಿತೃಗಳೇ! ನಿಮಗೆ, ಇರುವ [ಪದಾರ್ಥಗಳನ್ನು] ನಾವು ಕೊಡುವೆವು! ಓ ಪಿತೃಗಳೇ! ಈ ಬಟ್ಟೆಗಳನ್ನು [ನಿಮಗೆ ಕೊಡುವೆವು.]"

(ಯಜುರ್ವೇದ: ೨. ೩೨)]

ಭಾಷ್ಯಮ್_

(ನಮೋ ವಃ ಪಿತರೋ ರಸಾಯ) ಹೇ ಪಿತರಃ! ರಸಾಯ ಸೋಮಲತಾದಿರಸವಿಜ್ಞಾನಾನಂದ-ಗ್ರಹಣಾಯ ;

ಭಾಷ್ಯ_

(ನಮೋ ವಃ ಪಿತರೋ ರಸಾಯ) ಓ ಪಿತೃಗಳೇ! 'ರಸ', ಎಂದರೆ ಸೋಮಲತಾ ಮೊದಲಾದ ರಸವಿಜ್ಞಾನದ ಆನಂದವನ್ನು ಗ್ರಹಿಸುವುದಕ್ಕಾಗಿಯೂ ;

ಅಂದರೆ, ಓ ಪಿತೃಜನರೇ! ನಾವು ನಿಮಗೆ ನಮಸ್ಕಾರ ಮಾಡುತ್ತೇವೆ! ಏಕೆಂದರೆ, ತಮ್ಮ ಮೂಲಕ ನಮಗೆ **'ರಸ'**, ಎಂದರೆ ವಿದ್ಯೆಯ ಆನಂದ, ಓಷಧಿಯ ಮತ್ತು ಜಲವಿದ್ಯೆಯ ಜ್ಞಾನವು ಯಥಾವತ್ತಾಗಿ ಆಗಲಿ ;

(ನಮೋ ವಃ ಪಿತರಃ ಶೋಷಾಯ) ಶೋಷಾಯಾಗ್ನಿವಾಯುವಿದ್ಯಾಪ್ರಾಪ್ತಯೇ ;

(ನಮೋ ವಃ ಪಿತರಃ ಶೋಷಾಯ) 'ಶೋಷ', ಎಂದರೆ ಅಗ್ನಿ, ಹಾಗೂ ವಾಯುವಿನ ವಿದ್ಯೆಯ ಪ್ರಾಪ್ತಿಗಾಗಿಯೂ ;

ಅಂದರೆ, ಓ ಪಿತೃಗಳೇ! ಯಾವುದರಿಂದ ಓಷಧಿ ಮತ್ತು ಜಲವು ಒಣಗಿ ಹೋಗುತ್ತವೋ, ಆ ಅಗ್ನಿಯ ಮತ್ತು ವಾಯುವಿನ ವಿದ್ಯೆಯ ಜ್ಞಾನಕ್ಕಾಗಿಯೂ ಕೂಡ, ನಾವು ನಿಮಗೆ ನಮಸ್ಕಾರ ಮಾಡುತ್ತೇವೆ!

(ನಮೋ ವಃ ಪಿತರೋ ಜೀವಾಯ) ಜೀವನಾರ್ಥಂ ವಿದ್ಯಾಜೀವಿಕಾಪ್ರಾಪ್ತಯೇ ;

(ನಮೋ ವಃ ಪಿತರೋ ಜೀವಾಯ) ಜೀವಿಸುವುದಕ್ಕಾಗಿ ವಿದ್ಯೆ ಮತ್ತು ವೃತ್ತಿಯನ್ನು ಪಡೆಯುವುದಕ್ಕಾಗಿಯೂ ;

ಅಂದರೆ, ಹೇ ಪಿತೃಜನರೇ! ತಮ್ಮ ಸತ್ಯಶಿಕ್ಷಣದಿಂದ ನಾವೆಲ್ಲರೂ ಪ್ರಮಾದರಹಿತರೂ, ಹಾಗೂ ಜಿತೇಂದ್ರಿಯರೂ ಆಗಿ, ಪೂರ್ಣಾಯುಸ್ಸನ್ನು ಭೋಗಿಸೋಣ! ಇದಕ್ಕಾಗಿ ನಾವು ತಮಗೆ ನಮಸ್ಕಾರ ಮಾಡುತ್ತೇವೆ !

(ನಮೋ ವಃ ಪಿತರಃ ಸ್ವಧಾಯೈ) ಮೋಕ್ಷ-ವಿದ್ಯಾಪ್ರಾಪ್ತಯೇ ;

(ನಮೋ ವಃ ಪಿತರಃ ಸ್ವಧಾಯೈ) ಮೋಕ್ಷವಿದ್ಯೆಯ ಪ್ರಾಪ್ತಿಗಾಗಿಯೂ ;

ಅಂದರೆ, ಓ ವಿದ್ವಜ್ಜನರೇ! ಅಮೃತರೂಪವಾದ ಮೋಕ್ಷವಿದ್ಯೆಯ ಪ್ರಾಪ್ತಿಗಾಗಿ, ನಾವು ತಮಗೆ ನಮಸ್ಕಾರ ಮಾಡುತ್ತೇವೆ!

(ನಮೋ ವಃ ಪಿತರೋ ಘೋರಾಯ) ಆಪತ್ಕಾಲನಿವಾರಣಾಯ ;

(ನಮೋ ವಃ ಪಿತರೋ ಘೋರಾಯ) ಆಪತ್ಕಾಲದ ನಿವಾರಣೆಗಾಗಿಯೂ ;

ಅಂದರೆ, ಹೇ ಪಿತೃಗಳೇ! ಘೋರ ವಿಪತ್ತು, ಎಂದರೆ ಆಪತ್ಕಾಲದಲ್ಲಿ ನಿರ್ವಾಹ ಮಾಡುವ ವಿದ್ಯೆಗಳನ್ನು ತಿಳಿಯುವ ಇಚ್ಛೆಯಿಂದ, ದುಃಖಗಳನ್ನು ದಾಟುವುದಕ್ಕಾಗಿ, ನಾವುಗಳು ತಮ್ಮ ಸೇವೆ ಮಾಡುತ್ತೇವೆ ;

(ನಮೋ ವಃ ಪಿತರೋ ಮನ್ಯವೇ) ದುಷ್ಟಾನಾಮುಪರಿ ಕ್ರೋಧಧಾರಣಾಯ ಕ್ರೋಧಸ್ಯ ನಿವಾರಣಾಯ ಚ ;

(ನಮೋ ವಃ ಪಿತರೋ ಮನ್ಯವೇ) ದುಷ್ಟರ ಮೇಲೆ ಕೋಪವನ್ನು ಧರಿಸುವುದಕ್ಕಾಗಿಯೂ, ಹಾಗೂ ಕೋಪದ ನಿವಾರಣೆಗಾಗಿಯೂ ;

ಅಂದರೆ, ಓ ಪಿತೃಗಳೇ! ದುಷ್ಟಜೀವರ ಮತ್ತು ದುಷ್ಟಕರ್ಮಗಳ ಮೇಲೆ ನಿತ್ಯವೂ ಅಪ್ರೀತಿಯನ್ನು ಇಡುವ ವಿದ್ಯೆಯನ್ನು ಕಲಿಯುವುದಕ್ಕಾಗಿ ನಾವು ತಮಗೆ ನಮಸ್ಕಾರ ಮಾಡುತ್ತೇವೆ !

(ನಮೋ ವಃ ಪಿತರಃ ಪಿತರೋ ನಮೋ ವಃ) ಸರ್ವವಿದ್ಯಾಪ್ರಾಪ್ತಯೇ ಚ ಯುಷ್ಮಭ್ಯಂ ವಾರಂ ವಾರಂ ನಮೋಽಸ್ತು.

(ನಮೋ ವಃ ಪಿತರಃ ಪಿತರೋ ನಮೋ ವಃ) ಮತ್ತು ಎಲ್ಲಾ ವಿದ್ಯೆಗಳ ಪ್ರಾಪ್ತಿಗಾಗಿಯೂ ಕೂಡ, ನಿಮಗೆ ಮತ್ತೆ ಮತ್ತೆ [ನಮ್ಮಿಂದ] ನಮಸ್ಕಾರವು ಸಲ್ಲಲಿ!

ಅಂದರೆ, ನಾವು ತಮಗೆಲ್ಲರಿಗೂ ಮತ್ತೆ ಮತ್ತೆ ನಮಸ್ಕಾರವನ್ನು ಏಕೆ ಮಾಡುತ್ತೇವೆಂದರೆ_

(ಗೃಹಾನ್ನಃ.) ಹೇ ಪಿತರಃ! ಗೃಹಾನ್ ಗೃಹಸಂಬಂಧಿವ್ಯವಹಾರಬೋಧಾನ್ ನೋಽಸ್ಮಭ್ಯಂ ಯೂಯಂ ದತ್ತ.

(ಗೃಹಾನ್ನಃ ಪಿತರೋ ದತ್ತ) ಓ ಪಿತೃಗಳೇ! **'ಗೃಹ'**, ಎಂದರೆ ಗಾರ್ಹಸ್ಥ್ಯ ವ್ಯವಹಾರಗಳ ತಿಳಿವಳಿಕೆಗಳನ್ನು ನಮಗೆ ನೀವು ಕೊಡಿರಿ!

ಅಂದರೆ, ಗೃಹಾಶ್ರಮ ಮೊದಲಾದುವನ್ನು ನಿರ್ವಹಿಸುವುದಕ್ಕಾಗಿ, ಯಾವ ಯಾವ ವಿದ್ಯೆಗಳು ಅವಶ್ಯವಾಗಿವೆಯೋ, ಆಯಾಯಾ ಎಲ್ಲ ವಿದ್ಯೆಗಳನ್ನೂ ತಾವೆಲ್ಲರೂ ನಮಗೆ ಕೊಡಿರಿ!

ಮತ್ತು ಓ ಪಿತೃಜನರೇ! ತಾವು ಎಲ್ಲಾ ಗುಣಗಳನ್ನೂ, ಹಾಗೂ ಎಲ್ಲಾ ಸಂಸಾರೀಸುಖಗಳನ್ನೂ [ನಮಗೆ] ಕೊಡುವವರಾಗಿದ್ದೀರಿ!

(ಸತೋ ವಃ ಪಿತರಃ) ಹೇ ಪಿತರಃ! ಯೇಽಸ್ಮಾಕಮಧಿಕಾರೇ ವಿದ್ಯಮಾನಾಃ ಪದಾರ್ಥಾಃ ಸಂತಿ ;

(ಸತೋ ವಃ ಪಿತರಃ) ಓ ಪಿತೃಗಳೇ! ನಮ್ಮ ಅಧಿಕಾರದಲ್ಲಿ ಯಾವ ಪದಾರ್ಥಗಳು ವಿದ್ಯಮಾನವಾಗಿಯೋ ;

ತಾನ್ ವಯಂ ವೋ ಯುಷ್ಮಭ್ಯಂ **(ದೇಷ್ಮ)** ದದ್ಮೋ ;

ಅವನ್ನು ನಾವು ನಿಮಗೆ **(ದೇಷ್ಮ)** ಕೊಡುತ್ತೇವೆ;

ಯತೋ ವಯಂ ಕದಾಚಿದ್ ಭವದ್ಭ್ಯೋ ವಿದ್ಯಾಂ ಪ್ರಾಪ್ಯ ಕ್ಷೀಣಾ ನ ಭವೇಮ.

ಏಕೆಂದರೆ, ನಾವು ತಮ್ಮಿಂದ ವಿದ್ಯೆಯನ್ನು ಪಡೆದು, ಎಂದಿಗೂ ಕ್ಷೀಣರಾಗದಿರಲಿ, ಎಂದು.

ಅಂದರೆ, ನಾವುಗಳು ತಮಗೆ ಉತ್ತಮೋತ್ತಮ ಪದಾರ್ಥಗಳನ್ನು ಕೊಡುತ್ತೇವೆ.

(ಏತದ್ವಃ ಪಿತರೋ ವಾಸಃ) ಹೇ ಪಿತರೋಽಸ್ಮಾಭಿರ್ಯದ್ವಾಸೋ ವಸ್ತ್ರಾದಿಕಂ ವಸ್ತು ಯುಷ್ಮಭ್ಯಂ ದೀಯತೇ, ಏತದ್ಯೂಯಂ ಪ್ರೀತ್ಯಾ ಗೃಹ್ಣೀತ ॥ ೪ ॥

(ಏತದ್ವಃ ಪಿತರೋ ವಾಸಃ) ಹೇ ಪಿತೃಗಳೇ! ನಮ್ಮಿಂದ ಯಾವ 'ವಾಸ', ಎಂದರೆ ವಸ್ತ್ರ ಮೊದಲಾದ ವಸ್ತು ನಿಮಗೆ ಕೊಡಲ್ಪಡುತ್ತದೋ, ಅದನ್ನು ನೀವುಗಳು ಪ್ರೀತಿಯಿಂದ ಅಂಗೀಕರಿಸಿರಿ!

ಅಂದರೆ, ನಾವು ತಮ್ಮ ಪ್ರತಿಷ್ಠೆಗಾಗಿ ಉತ್ತಮ-ಉತ್ತಮವಾದ ವಸ್ತ್ರಗಳನ್ನೂ ಕೂಡ, ಕೊಡುತ್ತೇವೆ. ಇವುಗಳನ್ನು ತಾವು ಪ್ರೀತಿಯಿಂದ ಸ್ವೀಕರಿಸಿರಿ! ಇವನ್ನು ತಾವು ಉಟ್ಟುಕೊಳ್ಳಿರಿ! ಮತ್ತು ಪ್ರಸನ್ನರಾಗಿ ಎಲ್ಲರ ಸುಖಕ್ಕಾಗಿ ಜಗತ್ತಿನಲ್ಲಿ ಸತ್ಯವಿದ್ಯೆಯ ಪ್ರಚಾರವನ್ನು ಮಾಡಿರಿ! [೪]

ಹಿರಿಯರಿಂದಲೇ ಮಕ್ಕಳಿಗೆ 'ಪುರುಷತ್ವ'ಪ್ರಾಪ್ತಿ!

[ಋಷಿಃ_ ವಾಮದೇವಃ ; ದೇವತಾ_ ಪಿತರಃ ; ಛಂದಃ_ ನಿಚೃದ್ ಗಾಯತ್ರೀ ; ಸ್ವರಃ_ ಷಡ್ಜಃ]

ಆಧತ್ತ ಪಿತರೋ ಗರ್ಭಂ ಕುಮಾರಂ ಪುಷ್ಕರಸ್ರಜಮ್ ।
ಯಥೇಹ ಪುರುಷೋಽಸತ್ ॥ ೫ ॥

[ಯಜುರ್ವೇದೇ ಅ. ೨, ಮಂ. ೩೩]

[ಅರ್ಥ:_ " ಓ ಪಿತೃಗಳೇ! ಹೂಮಾಲೆಯನ್ನು ಧರಿಸಿರುವ ಈ ಕುಮಾರರೂಪ ಗರ್ಭವನ್ನು ಧಾರಣಮಾಡಿರಿ! ಏಕೆಂದರೆ, [ಇವನು] ಈ ಜಗತ್ತಿನಲ್ಲಿ 'ಪುರುಷ'ನಂತಾಗಲಿ! "

(ಯಜುರ್ವೇದಃ ೨. ೩೩)]

ಭಾಷ್ಯಮ್_

(ಆಧತ್ತ ಪಿತರೋ.) ಹೇ ಪಿತರಃ! ಯೂಯಂ ಮನುಷ್ಯೇಷು ವಿದ್ಯಾಗರ್ಭಮಾಧತ್ತ ಧಾರಯತ.

ತಥಾ ವಿದ್ಯಾದಾನಾರ್ಥಂ (ಪುಷ್ಕರಸ್ರಜಮ್) ಪುಷ್ಪಮಾಲಾಧಾರಿಣಂ (ಕುಮಾರಮ್) ಬ್ರಹ್ಮಚಾರಿಣಂ ಯೂಯಂ ಧಾರಯತ.

ಭಾಷ್ಯ_

(ಆಧತ್ತ ಪಿತರೋ.) ಹೇ ಪಿತೃಗಳೇ! ನೀವು ಮನುಷ್ಯರಲ್ಲಿ ವಿದ್ಯಾಗರ್ಭವನ್ನು ಧಾರಣ ಮಾಡಿರಿ!

ಮತ್ತು ವಿದ್ಯೆಯನ್ನು ಕೊಡುವುದಕ್ಕಾಗಿ, (ಪುಷ್ಕರಸ್ರಜಮ್) ಪುಷ್ಪಮಾಲೆಯನ್ನು ಧರಿಸಿರುವ (ಕುಮಾರಮ್) ಬ್ರಹ್ಮಚಾರಿಯನ್ನು ನೀವು ಧಾರಣ ಮಾಡಿರಿ!

ಅಂದರೆ, ವಿದ್ಯಾದಾನವನ್ನು ಮಾಡುವ ಓ ಪಿತೃಗಳೇ! ಈ ಕುಮಾರ ಬ್ರಹ್ಮಚಾರಿಯನ್ನು, ಗರ್ಭಕ್ಕೆ ಸಮಾನವಾಗಿ, ರಕ್ಷಣೆ ಮಾಡಿ, ಇವನಿಗೆ ತಾವು ಉತ್ತಮ ವಿದ್ಯೆಯನ್ನು ಕೊಡಿರಿ!

ಇದರಿಂದ, ಇವನು ವಿದ್ಯಾವಂತನಾಗಿ, ಹೇಗೆ ಹೂವಿನ ಮಾಲೆಯನ್ನು ಧರಿಸಿರುವ ಮನುಷ್ಯನು ಶೋಭೆಗೆ ಪ್ರಾಪ್ತನಾಗುತ್ತಾನೋ, ಹಾಗೆಯೇ, ಇವನೂ ಕೂಡ, ವಿದ್ಯೆಯನ್ನು ಪಡೆದು, ಸೌಂದರ್ಯದಿಂದ ಕೂಡಿರಲಿ!

(ಯಥೇಹ.) ಯೇನ ಪ್ರಕಾರೇಣೇಹಾಸ್ಮಿನ್ ಸಂಸಾರೇ ವಿದ್ಯಾಸುಶಿಕ್ಷಾಯುಕ್ತಃ ಪುರುಷೋಽಸತ್ ಸ್ಯಾತ್ ;

(ಯಥೇಹ.) ಈ ಪ್ರಕಾರದಿಂದ ಈ ಜಗತ್ತಿನಲ್ಲಿ [ಇವನು] ವಿದ್ಯೆಯ ಉತ್ತಮ ಶಿಕ್ಷಣದಿಂದ ಯುಕ್ತನಾಗಿ **'ಪುರುಷ'**ನಾಗಲಿ!

ಯೇನ ಚ ಮನುಷ್ಯೇಷೂತ್ತಮವಿದ್ಯೋನ್ನತಿ-ರ್ಭವೇತ್, ತಥೈವ ಪ್ರಯತಧ್ವಮ್ ॥ ೫ ॥

ಮತ್ತು ಯಾವುದರಿಂದ, ಮನುಷ್ಯರಲ್ಲಿ ಉತ್ತಮವಾದ ವಿದ್ಯೆಯ ಉನ್ನತಿಯಾಗಬೇಕೋ, ಅದರಂತೆಯೇ ಪ್ರಯತ್ನವನ್ನೂ ಮಾಡಿರಿ!

ಅಂದರೆ, ಯಾವ ರೀತಿಯಿಂದ ಈ ಜಗತ್ತಿನಲ್ಲಿ ಮನುಷ್ಯರಿಗೆ ವಿದ್ಯೆ ಮೊದಲಾದ ಸದ್ಗುಣಗಳಿಂದ ಉತ್ತಮ ಕೀರ್ತಿಯೂ ; ಮತ್ತು ಮನುಷ್ಯರೆಲ್ಲರಿಗೂ ಸುಖವೂ ಉಂಟಾಗಬಹುದೋ, ಅಂತಹ ಪ್ರಯತ್ನವನ್ನೇ ಯಾವಾಗಲೂ ನೀವೆಲ್ಲರೂ ಮಾಡಿರಿ!

ಈಶ್ವರನ ಈ ಆಜ್ಞೆಯು ವಿದ್ವಾಂಸರಿಗಾಗಿದೆ! ಆದುದರಿಂದ, ಮನುಷ್ಯರೆಲ್ಲರಿಗೂ ಯೋಗ್ಯವಾದುದೇನೆಂದರೆ, ಅವರು ಯಾವಾಗಲೂ ಇದರ ಪಾಲನೆಯನ್ನು ಮಾಡುತ್ತಿರಬೇಕು! [೫]

ವಿದ್ವಾಂಸರ ರಾಜ್ಯಲಕ್ಷ್ಮಿಯು ನನ್ನಲ್ಲಿ ಸ್ಥಿರವಾಗಿರಲಿ!

[ಋಷಿಃ_ ವೈಖಾನಸಃ ; ದೇವತಾ_ ಶ್ರೀಃ ; ಛಂದಃ_ ಅನುಷ್ಟುಪ್ ; ಸ್ವರಃ_ ಗಾಂಧಾರಃ]

ಯೇ ಸಮಾನಾಃ ಸಮನಸೋ ಜೀವಾ ಜೀವೇಷು ಮಾಮಕಾಃ ।
ತೇಷಾಗ್ಂ ಶ್ರೀರ್ಮಯಿ ಕಲ್ಪತಾಮಸ್ಮಿಲ್ಲೋಕೇ ಶತಗ್ಂ ಸಮಾಃ ॥ ೬ ॥

[ಯಜುರ್ವೇದೇ ಅ. ೧೯, ಮಂ. ೪೬]

[ಅರ್ಥ:_" ಯಾರು ಜೀವಿಸುವವರಲ್ಲಿ ನನ್ನವರೂ, ಸಮಾನರೂ, ನನ್ನ ಮನಸ್ಸಿನಂತಹವರೂ ಆದ ಜೀವಿಗಳಿರುತ್ತಾರೋ, ಅವರ ಶೋಭೆಯು ಈ ಲೋಕದಲ್ಲಿ ನೂರು ವರ್ಷಗಳ ಕಾಲ ನನ್ನಲ್ಲಿ ಸ್ಥಿರವಾಗಿರಲಿ! "

(ಯಜುರ್ವೇದ: ೧೯.೪೬)]

ಭಾಷ್ಯಮ್_

(ಯೇ ಸಮಾನಾಃ.) ಯೇ (ಮಾಮಕಾಃ) ಮದೀಯಾ ಆಚಾರ್ಯ್ಯಾದಯಃ ;

(ಜೀವಾಃ) ವಿದ್ಯಮಾನಜೀವನಾಃ ;

(ಸಮಾನಾಃ) ಧರ್ಮೇಶ್ವರಸತ್ಯವಿದ್ಯಾದಿಶುಭ-ಗುಣೇಷು ಸಮಾನತ್ವೇನ ವರ್ತ್ತಮಾನಾಃ ;

(ಸಮನಸಃ) ಧರ್ಮೇಶ್ವರಸರ್ವಮನುಷ್ಯ-ಹಿತಕರಣೈಕನಿಷ್ಠಾಃ ;

(ಜೀವೇಷು) ಉಪದೇಶ್ಯೇಷು ಶಿಷ್ಯೇಷು ಸತ್ಯವಿದ್ಯಾದಾನಾಯ ಛಲಾದಿದೋಷರಾಹಿತ್ಯೇನ ವರ್ತಮಾನಾ ವಿದ್ವಾಂಸಃ ಸಂತಿ ;

(ತೇಷಾಂ.) ವಿದುಷಾಂ ಯಾ ಶ್ರೀಃ ಸತ್ಯವಿದ್ಯಾದಿ-ಗುಣಾಢ್ಯಾ ಯಾ ಶೋಭಾಸ್ತಿ;

[ಸಾ] ಸಾಮಯಿಕೀ ಲಕ್ಷ್ಮೀಃ ;

(ಅಸ್ಮಿಁಲ್ಲೋಕೇ ಶತ.) ಶತವರ್ಷಪರ್ಯಂತಂ (ಕಲ್ಪತಾಮ್) ಸ್ಥಿರಾ ಭವತು ;

ಯತೋ ವಯಂ ನಿತ್ಯಂ ಸುಖಿನಃ ಸ್ಯಾಮ ॥೬॥

ಭಾಷ್ಯ_

(ಯೇ ಸಮಾನಾಃ.) ಯಾರು (ಮಾಮಕಾಃ) ನನ್ನವರಾದ ಆಚಾರ್ಯ ಮೊದಲಾದವರೂ ;

(ಜೀವಾಃ) ಜೀವಿಸುತ್ತಿರುವವರೂ ;

(ಸಮಾನಾಃ) ಧರ್ಮ, ಈಶ್ವರ, ಸತ್ಯವಿದ್ಯೆ ಮೊದಲಾದ ಶುಭಗುಣಗಳಲ್ಲಿ ಸಮಾನತೆಯಿಂದ ವರ್ತಿಸುವವರೂ, [ಮತ್ತು_]

(ಸಮನಸಃ) ಧರ್ಮ, ಈಶ್ವರ, ಹಾಗೂ ಮನುಷ್ಯರೆಲ್ಲರ ಹಿತವನ್ನು ಮಾಡುವುದರಲ್ಲಿ ಏಕಮಾತ್ರ ನಿಷ್ಠೆಯನ್ನುಳ್ಳವರೂ ;

(ಜೀವೇಷು) ಉಪದೇಶಕ್ಕೆ ಯೋಗ್ಯರಾದ ಶಿಷ್ಯರಲ್ಲಿ ಸತ್ಯವಿದ್ಯೆಯ ದಾನಕ್ಕಾಗಿ, ಛಲವೇ ಮೊದಲಾದ ದೋಷಗಳಿಂದ ರಹಿತರಾಗಿ, ಪ್ರೀತಿಯಿಂದ ವರ್ತಿಸುವ ವಿದ್ವಾಂಸರೂ ಆಗಿರುತ್ತಾರೋ ;

(ತೇಷಾಂ.) ಆ ವಿದ್ವಾಂಸರ ಯಾವ 'ಶ್ರೀ', ಎಂದರೆ ಸತ್ಯವಿದ್ಯೆ ಮೊದಲಾದ ಗುಣಗಳಿಂದ ಸಮೃದ್ಧವಾದ ಶೋಭೆಯಿದೆಯೋ ;

ಎಂದರೆ, ಆ ರಾಜ್ಯಲಕ್ಷ್ಮಿಯು ;

(ಅಸ್ಮಿಁಲ್ಲೋಕೇ ಶತ.) ಈ ಲೋಕದಲ್ಲಿ ನೂರು ವರ್ಷಗಳ ಕಾಲ (ಮಯಿ) ನನ್ನಲ್ಲಿ ಸ್ಥಿರವಾಗಿರಲಿ!

ಇದರಿಂದ, ನಾವು ನಿತ್ಯವೂ ಸುಖಿಗಳಾಗಿರೋಣ!

ಅಂದರೆ, ನಾವು ನಿತ್ಯವೂ ಸುಖಸಂಯುಕ್ತರಾಗಿ ಪುರುಷಾರ್ಥ ಮಾಡುತ್ತಿರೋಣ! [೬]

ವಿಭಿನ್ನ ಸ್ತರದ ಪಿತೃಗಳಿಂದ ರಕ್ಷಣೆ!

[ಋಷಿಃ_ ಶಂಖಃ ; ದೇವತಾ_ ಪಿತರಃ ; ಛಂದಃ_ ವಿರಾಟ್ ತ್ರಿಷ್ಟುಪ್ ; ಸ್ವರಃ_ ಧೈವತಃ]

ಉದೀರತಾಮವರಽ ಉತ್ಪರಾಸಽ
ಉನ್ಮಧ್ಯಮಾಃ ಪಿತರಃ ಸೋಮ್ಯಾಸಃ ।
ಅಸುಂ ಯ ಈಯುರವೃಕಾಽ ಋತಜ್ಞಾ-
ಸ್ತೇ ನೋಽವಂತು ಪಿತರೋ ಹವೇಷು ॥ ೭ ॥

[ಯಜುರ್ವೇದೇ ಅ. ೧೯, ಮಂ. ೪೯]

[ಅರ್ಥ:_ "ಯಾವ ಪಿತೃಗಳು ಕನಿಷ್ಠರೂ, ಉತ್ಕೃಷ್ಟರೂ, ಮತ್ತು ಮಧ್ಯಮರೂ; ಸೌಮ್ಯವಂತರೂ, ಪ್ರಾಣವಂತರೂ, ಅಹಿಂಸಕರೂ, ಹಾಗೂ ಸತ್ಯವಿದರೂ ಆಗಿರುತ್ತಾರೋ, ಅವರು ನಮಗೆ ವ್ಯವಹಾರಗಳಲ್ಲಿ ಪ್ರೇರಣೆಯನ್ನು ಕೊಡಲಿ! ಆ ಪಿತೃಗಳು ನಮ್ಮನ್ನು ರಕ್ಷಿಸಲಿ! "

(ಯಜುರ್ವೇದಃ ೧೯. ೪೯)]

ಭಾಷ್ಯಮ್_

(ಉದೀರತಾಮವರೇ.) ಯೇ ಪಿತರೋಽವಕೃಷ್ಟ-ಗುಣಾಃ ;

(ಉತ್ಪರಾಸಃ) ಉತ್ಕೃಷ್ಟಗುಣಾಃ ;

(ಉನ್ಮಧ್ಯಮಾಃ) ಮಧ್ಯಸ್ಥಗುಣಾಃ ;

(ಸೋಮ್ಯಾಸಃ) ಸೋಮ್ಯಗುಣಾಃ ;

(ಅವೃಕಾಃ) ಅಜಾತಶತ್ರವಃ ;

ಭಾಷ್ಯ_

(ಉದೀರತಾಮವರೇ.) ಯಾವ ಪಿತೃಗಳು (ಅವರೇ) ಕನಿಷ್ಠಗುಣವನ್ನುಳ್ಳವರೂ ;

(ಉತ್‌ಪರಾಸಃ) ಉತ್ಕೃಷ್ಟವಾದ ಗುಣವನ್ನು ಉಳ್ಳವರೂ ;

(ಉನ್ಮಧ್ಯಮಾಃ) ಮಧ್ಯಸ್ಥಗುಣವನ್ನುಳ್ಳವರೂ;

(ಸೋಮ್ಯಾಸಃ) ಸೌಮ್ಯಗುಣವನ್ನುಳ್ಳವರೂ ;

ಅಂದರೆ, ಚಂದ್ರನಂತೆ ಪ್ರಜೆಗಳೆಲ್ಲರಿಗೂ ಆನಂದವನ್ನು ಉಂಟುಮಾಡುವವರೂ ;

(ಅವೃಕಾಃ) ಶತ್ರುವೇ ಹುಟ್ಟಿಲ್ಲದವರೂ ;

ಅಂದರೆ, ಎಲ್ಲರಿಗೂ ಪ್ರಿಯರಾಗಿ, ಪಕ್ಷಪಾತವನ್ನು ತ್ಯಜಿಸಿ, ಸತ್ಯಮಾರ್ಗದಲ್ಲಿ ನಡೆಯುವವರೂ;

(ಋತಜ್ಞಾಃ) ಬ್ರಹ್ಮವಿದೋ ವೇದವಿದಶ್ಚ;

ಮತ್ತು (ಋತಜ್ಞಾಃ) ಬ್ರಹ್ಮನನ್ನು ತಿಳಿದವರೂ, ಹಾಗೂ ವೇದವೇತ್ತೃಗಳೂ ;

ಅಂದರೆ, 'ಋತ', ಎಂದರೆ ಬ್ರಹ್ಮ; ಯಥಾರ್ಥ ಧರ್ಮ, ಹಾಗೂ ಸತ್ಯವಿದ್ಯೆ, ಇವನ್ನು ತಿಳಿದವರೂ ಆದ;

ತೇ ಜ್ಞಾನಿನಃ ಪಿತರೋ ;

ಆ ಜ್ಞಾನಿಗಳಾದ ಪಿತೃಗಳು ;

(ಹವೇಷು) ದೇಯಗ್ರಾಹ್ಯವ್ಯವಹಾರೇಷು ವಿಜ್ಞಾನ-ದಾನೇನ ;

(ಹವೇಷು) ಕೊಡುವ-ತೆಗೆದುಕೊಳ್ಳುವ ವ್ಯವಹಾರಗಳಲ್ಲಿ ವಿಶೇಷಜ್ಞಾನವನ್ನು ಕೊಡುವುದರ ಮೂಲಕ ;

[(ಉದೀರತಾಮ್) ಪ್ರೇರತಾಮ್ ;]

(ಉದೀರತಾಮ್) ಪ್ರೇರಿಸಲಿ!

ಅಸ್ಮಾನ್ ಸದಾ ರಕ್ಷಂತು.

[ಹಾಗೂ] ನಮ್ಮನ್ನು ಯಾವಾಗಲೂ ರಕ್ಷಿಸಲಿ!

ಅಂದರೆ, ಆ ಪಿತೃಗಳು ಯುದ್ಧ ಮೊದಲಾದ ವ್ಯವಹಾರಗಳಲ್ಲಿ* ನಮ್ಮೊಂದಿಗೆ ಇದ್ದು, ಅಥವಾ [ನಮಗೆ] ಅವುಗಳ ವಿದ್ಯೆಯನ್ನು ಕೊಟ್ಟು, ನಮ್ಮನ್ನು ರಕ್ಷಿಸಲಿ!

ತಥಾ (ಅಸುಂ ಯ ಈಯುಃ) ಯೇऽಸುಂ ಪ್ರಾಣಮೀಯುಃ ಪ್ರಾಪ್ನುಯುರರ್ಥಾದ್ ;

ಮತ್ತು (ಅಸುಂ ಯ ಈಯುಃ) ಯಾರು 'ಅಸು', ಎಂದರೆ, ಪ್ರಾಣವನ್ನು 'ಈಯುಃ', ಎಂದರೆ, ಹೊಂದಿರುತ್ತಾರೋ, ಎಂದರೆ_

ದ್ವಾಭ್ಯಾಂ ಜನ್ಮಭ್ಯಾಂ ವಿದ್ವಾಂಸೋ ಭೂತ್ವಾ ವಿದ್ಯಮಾನಜೀವನಾಸ್ಸ್ಯುಸ್ತ ಏವ ;

ಎರಡೂ ಜನ್ಮಗಳಲ್ಲೂ** ವಿದ್ವಾಂಸರಾಗಿದ್ದು, [ಈಗ] ಜೀವನದಿಂದ ವರ್ತಮಾನರಾಗಿರುತ್ತಾರೋ, ಅವರೇ ;

ಸರ್ವೈಃ ಸೇವನೀಯಾಃ ;

ಎಲ್ಲರಿಂದಲೂ ಸೇವಿಸಲ್ಪಡಬೇಕು ;

ನೈವ ಮೃತಾಶ್ಚೇತಿ!

ಮತ್ತು ಸತ್ತವರು ಖಂಡಿತವಾಗಿಯೂ ಅಲ್ಲ!

ಕುತಃ?

ಏಕೆಂದರೆ_

ತೇಷಾಂ ದೇಶಾಂತರಪ್ರಾಪ್ತ್ಯಾ+ ಸನ್ನಿಕರ್ಷಾ-ಭಾವಾತ್ ;

ಆ [ಸತ್ತವರು] ದೇಶಾಂತರವನ್ನು ಹೊಂದಿರುವುದರಿಂದ,+ ಅವರು [ಈಗ] ಹತ್ತಿರ ಇರುವುದಿಲ್ಲ!

[ತೇ] ಸೇವಾಗ್ರಹಣೇऽಸಮರ್ಥಾಃ, ಸೇವಿತು-ಮಶಕ್ಯಾಶ್ಚ ॥ ೭ ॥

ಮತ್ತು [ಅವರು ಈಗ] ಸೇವೆಯನ್ನು ಸ್ವೀಕರಿಸಲು ಅಸಮರ್ಥರೂ, ಹಾಗೂ ಸೇವೆಯನ್ನು ಮಾಡಿಸಿಕೊಳ್ಳಲು ಅಶಕ್ಯರೂ ಆಗಿರುತ್ತಾರೆ! [೭]

+ 'ದೇಹಾಂತರಪ್ರಾಪ್ತ್ಯಾ' ಇತ್ಯಪಿ ಪಾಠ ಊಹನೀಯಃ _ಅನು.

* ಎಂದರೆ, ಆದಾನ-ಪ್ರದಾನಗಳಲ್ಲಿ _ಅನು.

** ಎಂದರೆ, ಪೂರ್ವಜನ್ಮ ಮತ್ತು ವರ್ತಮಾನಜನ್ಮ _ಅನು.

+ ಇಲ್ಲಿ 'ದೇಹಾಂತರವನ್ನು ಹೊಂದಿರುವುದರಿಂದ', ಎಂಬ ಪಾಠವನ್ನೂ ಕೂಡ, ಊಹಿಸಿಕೊಳ್ಳಬಹುದು _ಅನು.

ನಾವು ವಿದ್ವಾಂಸರಾದ ಪಿತೃಗಳ ಸುಮತಿಯಲ್ಲಿರೋಣ!

[ಋಷಿಃ_ ಶಂಖಃ ; ದೇವತಾ_ ಪಿತರಃ ; ಛಂದಃ_ ವಿರಾಟ್ ತ್ರಿಷ್ಟುಪ್ ; ಸ್ವರಃ_ ಧೈವತಃ]

ಅಂಗಿರಸೋ ನಃ ಪಿತರೋ ನವಗ್ವಾಽ
ಅಥರ್ವಾಣೋ ಭೃಗವಃ ಸೋಮ್ಯಾಸಃ ।
ತೇಷಾಂ ವಯಗ್ಂ ಸುಮತೌ ಯಜ್ಞಿಯಾ-
ನಾಮಪಿ ಭದ್ರೇ ಸೌಮನಸೇ ಸ್ಯಾಮ ॥ ೮ ॥

[ಯಜುರ್ವೇದೇ ಅ. ೧೯, ಮಂ. ೫೦]

[ಅರ್ಥ:_ "ಯಾವ ನಮ್ಮ ಪಿತೃಗಳು ಅಂಗಿರಸರೂ, ನವಗತಿಶೀಲರೂ, ಅಕಂಪರೂ, ಪರಿಪಕ್ವಜ್ಞಾನಿಗಳೂ, ಶಾಂತರೂ ಆಗಿರುತ್ತಾರೋ, ಆ ಸತ್ಕರ್ಮಿಗಳ ಸುಮತಿಯಲ್ಲಿಯೂ, ಕಲ್ಯಾಣಕರವ್ಯವಹಾರದಲ್ಲಿಯೂ, ಮತ್ತು ಆನಂದಯುಕ್ತ ಮನಸ್ಸಿನಲ್ಲಿಯೂ ನಾವು ಇರೋಣ!"

(ಯಜುರ್ವೇದ: ೧೯. ೫೦)]

ಭಾಷ್ಯಮ್ _

(ಅಂಗಿರಸೋ ನ.) ಯೇಽಂಗೇಷು ರಸಭೂತಸ್ಯ ಪ್ರಾಣಾಖ್ಯಸ್ಯ ಪರಮೇಶ್ವರಸ್ಯ ಜ್ಞಾತಾರಃ ;

(ನವಗ್ವಾಃ) ಸರ್ವಾಸು ವಿದ್ಯಾಸೂತ್ತಮಕರ್ಮಸು ಚ ನವೀನಾ ಗತಯೋ ಯೇಷಾಂ ತೇ ;

ಭಾಷ್ಯ _

(ಅಂಗಿರಸೋ ನಃ.) ಯಾರು 'ಅಂಗಗಳಲ್ಲಿ ರಸವನ್ನು ಉಂಟು ಮಾಡುವ **'ಪ್ರಾಣ'**, ಎಂಬ ಹೆಸರಿನ ಪರಮೇಶ್ವರನನ್ನು ತಿಳಿದವರಾಗಿರುತ್ತಾರೋ ;

ಅಂದರೆ, ಯಾರು ಬ್ರಹ್ಮಾಂಡದ ತುಂಬ ಇರುವ ಪೃಥಿವೀ ಮೊದಲಾದ ಅಂಗಗಳ ಮರ್ಮವಿದ್ಯೆಯನ್ನು ತಿಳಿದವರಾಗಿರುತ್ತಾರೋ ;

(ನವಗ್ವಾಃ) 'ಎಲ್ಲಾ ವಿದ್ಯೆಗಳಲ್ಲೂ, ಹಾಗೂ ಉತ್ತಮ ಕರ್ಮಗಳಲ್ಲೂ, ನವೀನ ಗತಿಗಳು ಯಾರದಾಗಿ ಇರುತ್ತವೋ, ಅವರೂ ;'

ಅಂದರೆ, ಹೊಸ ಹೊಸ ವಿದ್ಯೆಗಳನ್ನು ಗ್ರಹಿಸುವವರೂ, ಹಾಗೂ ಹೇಳಿಕೊಡುವವರೂ ;

ಅತ್ರಾಹ ನಿರುಕ್ತಕಾರಃ_

ಈ ವಿಷಯದಲ್ಲಿ ನಿರುಕ್ತಕಾರರು ಹೇಳುತ್ತಾರೇನೆಂದರೆ_

"ಅಂಗಿರಸೋ ನಃ ಪಿತರೋ ನವಗತಯೋ
ನವನೀತಗತಯೋ ವಾ ॥"

[ನಿರುಕ್ತೇ ೧೧. ೧೯]

[ಅರ್ಥ:_ "ನಮ್ಮ ಪಿತೃಗಳಾದ ಅಂಗಿರಸರು ಹೊಸಗತಿಯನ್ನುಳ್ಳವರೂ ಅಥವಾ ಹೊಸದಾಗಿ ಕರೆದೊಯ್ಯುವ ಗತಿಯನ್ನುಳ್ಳವರೂ ಆಗಿರುತ್ತಾರೆ."

(ನಿರುಕ್ತ: ೧೧. ೧೯)]

(ಅಥರ್ವಾಣಃ) ಅಥರ್ವವೇದವಿದೋ ಧನುರ್ವೇದವಿದಶ್ಚ;

(ಅಥರ್ವಾಣಃ) ಅಥರ್ವವೇದವನ್ನು ತಿಳಿದವರೂ ಮತ್ತು ಧನುರ್ವೇದವನ್ನು ತಿಳಿದವರೂ ;

ಅಂದರೆ, ಅಥರ್ವವೇದ, ಹಾಗೂ ಧನುರ್ವೇದ-ವಿದ್ಯೆಯಲ್ಲಿ ಚತುರರೂ, ಮತ್ತು ದುಷ್ಟ ಶತ್ರುಗಳನ್ನೂ, ಹಾಗೂ ದೋಷಗಳನ್ನೂ ನಿವಾರಿಸುವುದರಲ್ಲಿ ಪ್ರವೀಣರೂ ;

(ಭೃಗವಃ) ಪರಿಪಕ್ವಜ್ಞಾನಾಃ ಶುದ್ಧಾಃ ;

(ಭೃಗವಃ) ಪರಿಪಕ್ವವಾದ ಜ್ಞಾನವನ್ನುಳ್ಳವರೂ, ಶುದ್ಧರೂ;

ಅಂದರೆ, ಪರಿಪಕ್ವಜ್ಞಾನಿಗಳೂ, ತೇಜಸ್ವಿಗಳೂ ;

(ಸೋಮ್ಯಾಸಃ) ಶಾಂತಾಃ ಸಂತಿ ;

(ಸೋಮ್ಯಾಸಃ) ಶಾಂತರೂ ಆಗಿರುತ್ತಾರೋ ;

ಅಂದರೆ, ಪರಮೇಶ್ವರನ ಉಪಾಸನೆಯಲ್ಲೂ, ಮತ್ತು ತಮ್ಮ ವಿದ್ಯೆಯ ಗುಣಗಳಲ್ಲೂ ಶಾಂತಿ-ಸ್ವರೂಪರೂ ಆಗಿರುತ್ತಾರೋ ;

(ತೇಷಾಂ ವಯಗ್ಂ ಸುಮತೌ.) ವಯಂ ತೇಷಾಂ ಯಜ್ಞಿಯಾನಾಂ ಯಜ್ಞಾದಿಸತ್ಕರ್ಮಸು ಕುಶಲಾನಾಮ್ ;

(ತೇಷಾಂ ವಯಗ್ಂ ಸುಮತೌ) ನಾವು ಆ 'ಯಜ್ಞಿಯರು', ಎಂದರೆ ಯಜ್ಞವೇ ಮೊದಲಾದ ಸತ್ಕರ್ಮಗಳಲ್ಲಿ ಕುಶಲರೂ ಆದವರ ;

ಅಂದರೆ, ಯಜ್ಞವನ್ನು ತಿಳಿದ, ಮತ್ತು ಮಾಡಿಸುವ ಪಿತೃಗಳ ;

ಅಪೀತಿ ನಿಶ್ಚಯೇನ ;

ಇಲ್ಲಿ 'ಅಪಿ', ಎಂದರೆ ನಿಶ್ಚಯವಾಗಿಯೂ, ಎಂದರ್ಥ;

(ಸುಮತೌ) ವಿದ್ಯಾದಿಶುಭಗುಣಗ್ರಹಣೇ ;

(ಸುಮತೌ) ವಿದ್ಯೆ ಮೊದಲಾದ ಶುಭಗುಣಗಳ ಗ್ರಹಣೆಯಲ್ಲೂ ;

(ಭದ್ರೇ) ಕಲ್ಯಾಣಕರೇ ವ್ಯವಹಾರೇ ;

(ಸೌಮನಸೇ) ಯತ್ರ ವಿದ್ಯಾನಂದಯುಕ್ತಂ ಮನೋ ಭವತಿ, ತಸ್ಮಿನ್ ;

(ಸ್ಯಾಮ) ಅರ್ಥಾದ್ [ಹೇ ಪಿತರಃ!] ಭವತಾಂ ಸಕಾಶಾದುಪದೇಶಂ ಗೃಹೀತ್ವಾ ಧರ್ಮಾರ್ಥಕಾಮ-ಮೋಕ್ಷಪ್ರಾಪ್ತಾ ಭವೇಮ ॥ ೮ ॥

(ಭದ್ರೇ) ಕಲ್ಯಾಣಕರವಾದ ವ್ಯವಹಾರದಲ್ಲೂ;

(ಸೌಮನಸೇ) 'ಎಲ್ಲಿ ವಿದ್ಯೆಯ ಆನಂದದಿಂದ ಕೂಡಿರುವ ಮನಸ್ಸಿರುತ್ತದೋ, ಅದರಲ್ಲಿಯೂ';

ಅಂದರೆ, ಯಾವ ಕಲ್ಯಾಣಕಾರಕ ವಿದ್ಯೆಯಿಂದ ಅವರ ಸುಮತಿಯು ಕಲ್ಯಾಣಕರವೂ, ಹಾಗೂ ಮನಸ್ಸಿನ ಶುದ್ಧಿಯೂ ಆಗುತ್ತದೋ, ಅದರಲ್ಲೂ;

(ಸ್ಯಾಮ) ಇರೋಣ! ಎಂದರೆ, ಓ ಪಿತೃಗಳೇ! ತಮ್ಮ ಬಳಿಯಿಂದ ಉಪದೇಶವನ್ನು ಗ್ರಹಿಸಿ, ನಾವು **ಧರ್ಮ-ಅರ್ಥ-ಕಾಮ-ಮೋಕ್ಷ**ಗಳನ್ನು ಪಡೆದಂತಹವರಾಗಿ ಇರೋಣ!

ಅಂದರೆ, ನಾವುಗಳು [ಮೇಲಿನ ಗುಣಗಳಲ್ಲಿ] ಸ್ಥಿರರಾಗಿರುವುದರಿಂದ, ಅದರ ತಿಳಿವಳಿಕೆಯಿಂದ ವ್ಯವಹಾರದ, ಹಾಗೂ ಪರಮಾರ್ಥದ ಸುಖಗಳನ್ನು ಪಡೆದುಕೊಂಡು, ಯಾವಾಗಲೂ ಆನಂದದಲ್ಲಿರೋಣ! [೮]

ನ್ಯಾಯಾಧೀಶರಾದ ಪಿತೃಗಳಿಗೆ ನಮಸ್ಕಾರ!

[ಋಷಿಃ_ ವೈಖಾನಸಃ ; ದೇವತಾ_ ಪಿತರಃ ; ಛಂದಃ_ ನಿಚೃದನುಷ್ಟುಪ್ ; ಸ್ವರಃ_ ಗಾಂಧಾರಃ]

ಯೇ ಸಮಾನಾಃ ಸಮನಸಃ ಪಿತರೋ ಯಮರಾಜ್ಯೇ ।
ತೇಷಾಂ ಲೋಕಃ ಸ್ವಧಾ ನಮೋ ಯಜ್ಞೋ ದೇವೇಷು ಕಲ್ಪತಾಮ್ ॥ ೯ ॥

[ಯಜುರ್ವೇದೇ ಅ. ೧೯, ಮಂ. ೪೫]

[ಅರ್ಥ:_ "ಯಾವ ಪಿತೃಗಳು ಯಮರಾಜ್ಯದಲ್ಲಿ ಸಮಾನತ್ವದಿಂದಲೂ, ಸಮನಸ್ಕರಾಗಿಯೂ ಇರುತ್ತಾರೋ, [ಅವರಿಗೆ] ನಮಸ್ಕಾರ! ಅವರ ದರ್ಶನವೂ, ಸ್ವಧಾರಣೆಯೂ, ಯಜ್ಞವೂ ವಿದ್ವಾಂಸರಲ್ಲಿ ಸಮರ್ಥಿತವಾಗಲಿ! "

(ಯಜುರ್ವೇದಃ ೧೯. ೪೫)]

ಭಾಷ್ಯಮ್_

(ಯೇ ಸಮಾನಾಃ) (ಸಮನಸಃ) ಅನಯೋರರ್ಥ ಉಕ್ತಃ.*

* ಅಸ್ಮಿನ್ನೇವ ಪ್ರಕರಣೇ ೭೮೩ ತಮಂ ಪೃಷ್ಠಂ ದ್ರಷ್ಟವ್ಯಮ್. _ಅನು.

ಭಾಷ್ಯ_

(ಯೇ ಸಮಾನಾಃ.) (ಸಮನಸಃ) ಈ ಎರಡು ಶಬ್ದಗಳ ಅರ್ಥವನ್ನು [ಹಿಂದೆಯೇ] ಹೇಳಲಾಗಿದೆ.*

* ಈ ಪ್ರಕರಣದಲ್ಲಿಯೇ ೭೮೩ ನೆಯ ಪುಟವನ್ನು ನೋಡಿ. _ಅನು.

ಯೇ (ಯಮರಾಜ್ಯೇ) ರಾಜಸಭಾಯಾಂ ನ್ಯಾಯಾಧೀಶತ್ವೇನಾಧಿಕೃತಾಃ (ಪಿತರಃ) ವಿದ್ವಾಂಸಃ ಸಂತಿ;

ಯಾರು (ಯಮರಾಜ್ಯೇ) ರಾಜಸಭೆಯಲ್ಲಿ ನ್ಯಾಯಾಧೀಶತ್ವದಿಂದ ಅಧಿಕೃತರಾದ (ಪಿತರಃ) ವಿದ್ವಾಂಸರಾಗಿರುತ್ತಾರೋ ;

ಅಂದರೆ, ಯಾವ **'ಪಿತೃಗಳು'**, ಎಂದರೆ ವಿದ್ವಾಂಸರು **'ಯಮರಾಜ್ಯ'**, ಎಂದರೆ, ಪರಮೇಶ್ವರನ ಈ ರಾಜ್ಯದಲ್ಲಿ **'ಸಭಾಸದ'**ರೂ, ಎಂದರೆ ನ್ಯಾಯವನ್ನು ಮಾಡುವ ನ್ಯಾಯಾಧೀಶರೂ ಆಗಿರುತ್ತಾರೋ, ಮತ್ತು ಎಲ್ಲಾ ಪ್ರಾಣಿಗಳ ಹಿತವನ್ನು ಮಾಡುವುದರಲ್ಲಿ ಸಮಾನ ಬುದ್ಧಿಯನ್ನುಳ್ಳವರೂ ಆಗಿರುತ್ತಾರೋ ;

(ತೇಷಾಂ ಲೋಕಃ.) ಯೋ ನ್ಯಾಯದರ್ಶನಂ ಸ್ವಧಾ ಅಮೃತಾತ್ಮಕೋ ಲೋಕೋ ಭವತೀತಿ ;

(ತೇಷಾಂ ಲೋಕಃ.) ಅವರ ನ್ಯಾಯವನ್ನು ತೋರಿಸುವಂತಹುದೂ, ಹಾಗೂ (ಸ್ವಧಾ) ಸುಖದಿಂದ ಕೂಡಿರುವಂತಹುದೂ ಆದ ಯಾವ ಪ್ರಸಿದ್ಧಿ ಇದೆಯೋ ;

ಅಂದರೆ, ಯಾರ **'ಲೋಕ'**, ಎಂದರೆ ಸ್ಥಾನದಲ್ಲಿ ಸತ್ಯನ್ಯಾಯವನ್ನು ಪಡೆದು, ಸುಖಿಗಳಾಗಿರಬಹುದೋ ;

(ಯಜ್ಞೋ.) ಯಶ್ಚ ಪ್ರಜಾಪಾಲನಾಖ್ಯೋ ರಾಜಧರ್ಮವ್ಯವಹಾರೋ ದೇವೇಷು ವಿದ್ವತ್ಸು ಪ್ರಸಿದ್ಧೋಽಸ್ತಿ ;

(ಯಜ್ಞೋ.) ಮತ್ತು ಪ್ರಜಾಪಾಲನೆಯೆಂಬ ಹೆಸರಿನ ಯಾವ ರಾಜಧರ್ಮದ ವ್ಯವಹಾರವು ವಿದ್ವಾಂಸರಲ್ಲಿ ಪ್ರಸಿದ್ಧವಾಗಿದೆಯೋ ;

ಸೋಽಸ್ಮಾಕಂ ಮಧ್ಯೇ (ಕಲ್ಪತಾಮ್) ಸಮರ್ಥತಾಂ ಪ್ರಸಿದ್ಧೋ ಭವತು.

ಅದು ನಮ್ಮ ಮಧ್ಯೆ (ಕಲ್ಪತಾಮ್) ಸಮರ್ಥವೂ, ಎಂದರೆ, ಪ್ರಸಿದ್ಧವೂ ಆಗಲಿ!

ಅಂದರೆ, ಸತ್ಯಧರ್ಮಸಂಬಂಧವಾದ, ಹಾಗೂ ಪ್ರಜಾಪಾಲನರೂಪವಾದ ಈ **'ಅಶ್ವಮೇಧಯಜ್ಞ'**ವು ಪರಮಾತ್ಮನ ಕೃಪೆಯಿಂದ ಸತ್ಯವ್ಯವಸ್ಥೆಯ ಉನ್ನತಿಗಾಗಿ, ವಿದ್ವಾಂಸರ ಮಧ್ಯೆ ಯಾವಾಗಲೂ **'ಸಮರ್ಥ'**, ಎಂದರೆ ಪ್ರಕಾಶಮಾನವಾಗಿರಲಿ!

ಯ ಏವಂ ಸತ್ಯನ್ಯಾಯಕಾರಿಣಃ ಸಂತಿ, ತೇಭ್ಯೋ (ನಮಃ) ನಮೋಽಸ್ತು.

ಯಾರು ಈ ರೀತಿಯಲ್ಲಿ ಸತ್ಯನ್ಯಾಯವನ್ನು ಮಾಡುವವರಾಗಿರುತ್ತಾರೋ, ಅವರಿಗೆ (ನಮಃ) ನಮಸ್ಕಾರವಿರಲಿ!

ಅಂದರೆ, ಅವರಿಗೆ ನಾವು ನಮಸ್ಕಾರ ಮಾಡುತ್ತೇವೆ. ಏಕೆಂದರೆ, ಅವರು ಪಕ್ಷಪಾತರಹಿತರಾಗಿ, ಸತ್ಯವ್ಯವಸ್ಥೆಯಲ್ಲಿ ನಡೆದು, ತಮ್ಮ ಉದಾಹರಣೆಯಿಂದ ಬೇರೆಯವರನ್ನೂ ಕೂಡ, ಅದೇ ಮಾರ್ಗದಲ್ಲಿ ನಡೆಸುವವರಾಗಿರುತ್ತಾರೆ!

ಅರ್ಥಾದ್ ಯೇ ಸತ್ಯನ್ಯಾಯಾಧೀಶಾಸ್ತೇ ಸದೈವಾಸ್ಮಾಕಂ ಮಧ್ಯೇ ತಿಷ್ಠಂತು ॥೯॥

ಎಂದರೆ, ಯಾರು ಸತ್ಯದ ನ್ಯಾಯಾಧೀಶರಾಗಿರುತ್ತಾರೋ, ಅವರು ಯಾವಾಗಲೂ ನಮ್ಮ ಮಧ್ಯೆ ಇರಲಿ! [೯]

ಸೋಮವಿದ್ಯಾವಿಶಾರದರಾದ ಪಿತೃಗಳಿಂದ ವಿದ್ಯಾಪ್ರಾಪ್ತಿ

[ಋಷಿಃ_ ಶಂಖಃ ; ದೇವತಾ_ಪಿತರಃ ; ಛಂದಃ_ ಭುರಿಕ್ ಪಂಕ್ತಿಃ ; ಸ್ವರಃ_ ಪಂಚಮಃ]

ಯೇ ನಃ ಪೂರ್ವೇ ಪಿತರಃ ಸೋಮ್ಯಾಸೋಽ-
ನೂಹಿರೇ ಸೋಮಪೀಥಂ ವಸಿಷ್ಠಾಃ ।
ತೇಭಿರ್ಯಮಃ ಸಂರರಾಣೋ ಹವೀಂಷ್ಯು-
ಶನ್ನುಶದ್ಭಿಃ ಪ್ರತಿಕಾಮಮತ್ತು ॥೧೦॥

[ಯಜುರ್ವೇದೇ ಅ. ೧೯, ಮಂ. ೫೧]

[ಅರ್ಥ:_ "ಯಾವ ನಮ್ಮ ಪೂರ್ವಜನರಾದ ಪಿತೃಗಳು ಸೋಮವಿದ್ಯೆಯನ್ನರಿತಿರುವವರೂ, ವಸ್ತುನಿಷ್ಠರೂ, ಸೋಮವಿದ್ಯೆಯ ರಕ್ಷಣೆಯನ್ನು ಹೇಳಿಕೊಡುವವರೂ ಆಗಿರುತ್ತಾರೋ, ಆ ಕಾಮನೆ ಮಾಡುವವರ ಮೂಲಕ ಉತ್ತಮದಾನಿಯಾದ ನಿಯಂತ್ರಕನು ದಾನ ಕೊಡುವುದನ್ನು ಇಚ್ಛಿಸುತ್ತಾ, ಪ್ರತಿಕಾಮನೆಯನ್ನು ಭೋಗಿಸಲಿ!"

(ಯಜುರ್ವೇದಃ ೧೯. ೫೧)]

ಭಾಷ್ಯಮ್_

(ಯೇ ಸೋಮ್ಯಾಸಃ) ಸೋಮವಿದ್ಯಾಸಂಪಾದಿನಃ ;

(ವಸಿಷ್ಠಾಃ) ಸರ್ವವಿದ್ಯಾದ್ಯುತ್ತಮ ಗುಣೇಷ್ವತಿಶಯೇನ ರಮಮಾಣಾಃ ;

(ಸೋಮಪೀಥಮ್) ಸೋಮವಿದ್ಯಾರಕ್ಷಣಮ್ ;

(ಅನೂಹಿರೇ) ಪೂರ್ವಂ ಸರ್ವಾ ವಿದ್ಯಾಃ ಪಠಿತ್ವಾಽಧ್ಯಾಪ್ಯ ತಾಂಸ್ತಾ ಅನುಪ್ರಾಪಯಂತಿ, ತೇ ;

ಭಾಷ್ಯ_

(ಯೇ ಸೋಮ್ಯಾಸಃ) ಯಾರು ಸೋಮವಿದ್ಯೆಯನ್ನು ಪ್ರಾಪ್ತಮಾಡಿಕೊಂಡಿರುವವರೂ ;

ಅಂದರೆ, ಶಾಂತಾತ್ಮರೂ ;

(ವಸಿಷ್ಠಾಃ) ಸರ್ವವಿದ್ಯೆಗಳ [ಸಂಪಾದನೆ] ಮೊದಲಾದ ಉತ್ತಮಗುಣಗಳಲ್ಲಿ ಅತ್ಯಂತವಾಗಿ ರಮಿಸುತ್ತಿರುವವರೂ;

(ಸೋಮಪೀಥಮ್) ಸೋಮವಿದ್ಯೆಯ ರಕ್ಷಣೆಯನ್ನು, ಎಂದರೆ_

(ಅನೂಹಿರೇ) ಮೊದಲು ಎಲ್ಲಾ ವಿದ್ಯೆಗಳನ್ನು ಓದಿ, [ನಂತರ,] ಇತರರಿಗೆ ಓದಿಸಿ, ಅವನ್ನು ಹೇಳಿಕೊಡುವವರೂ ಆದ ಅವರು ;

(ನಃ ಪೂರ್ವೇ ಪಿತರಃ) ಯೇಽಸ್ಮಾಕಂ ಪೂರ್ವೇ ಪಿತರಃ ಸಂತಿ ;

(ನಃ ಪೂರ್ವೇ ಪಿತರಃ) ನಮ್ಮ ಪೂರ್ವಜರಾದ ಪಿತೃಗಳಾಗಿರುತ್ತಾರೋ ;

ಅಂದರೆ, ನಮ್ಮ ಪೂರ್ವಜರಾದ ಪಿತೃಗಳು, ಎಂದರೆ ತಂದೆ, ತಾತ ಮತ್ತು ಅಧ್ಯಾಪಕಜನರು ;

(ತೇಭಿಃ) ತೈಃ **(ಉಶದ್ಭಿಃ)** ಪರಮೇಶ್ವರಂ ಧರ್ಮಂ ಚ ಕಾಮಯಮಾನೈಃ ಪಿತೃಭಿಃ ಸಹ ಸಮಾಗಮೇನೈವ ;

(ತೇಭಿಃ) ಆ **(ಉಶದ್ಭಿಃ)** ಪರಮೇಶ್ವರನನ್ನೂ, ಹಾಗೂ ಧರ್ಮವನ್ನೂ ಇಚ್ಛಿಸುತ್ತಿರುವ ಪಿತೃಗಳೊಡನೆ ಸಮಾಗಮ ಮಾಡುವುದರ ಮೂಲಕವಾಗಿಯೇ ;

ಅಂದರೆ, ಅಂತಹ ಮಹಾತ್ಮರ ಸಂಗವನ್ನು ಮಾಡುವುದರಿಂದಲೇ ;

(ಸಗ್ಂರರಾಣಃ) ಸತ್ಯವಿದ್ಯಾಯಾಃ ಸಮ್ಯಗ್ದಾನ-ಕರ್ತಾ ;

(ಸಗ್ಂರರಾಣಃ) ಸತ್ಯವಿದ್ಯೆಯ ಉತ್ತಮದಾನ ಕರ್ತೃವಾದ ;

(ಯಮಃ) ಸತ್ಯವಿದ್ಯಾವ್ಯವಸ್ಥಾಪಕಃ ಪರಮೇಶ್ವರೋ ವಿದಿತೋ ಭವತಿ.

(ಯಮಃ) ಸತ್ಯವಿದ್ಯೆಯ ವ್ಯವಸ್ಥಾಪಕನಾದ ಪರಮೇಶ್ವರನು ತಿಳಿಯಲ್ಪಡುತ್ತಾನೆ !

ಅಂದರೆ, '**ಯಮ**', ಎಂದರೆ, ನ್ಯಾಯಕಾರಿಯೂ, ಅಂತರ್ಯಾಮಿಯೂ ಆದ ಪರಮೇಶ್ವರನು ನಿಸ್ಸಂದೇಹವಾಗಿ ತಿಳಿಯಲ್ಪಡುತ್ತಾನೆ!

ಕಿಂ ಕುರ್ವನ್?

ಏನು ಮಾಡುತ್ತಾ? ಎಂದರೆ_

(ಹವೀಗ್ಂಷಿ.) ವಿಜ್ಞಾನಾದೀನ್ಯುಶನ್ ಸರ್ವೇಭ್ಯೋ ದಾತುಂ ಕಾಮಯನ್ ಸನ್ !

(ಹವೀಗ್ಂಷಿ) ವಿಜ್ಞಾನವೇ ಮೊದಲಾದುವನ್ನು **(ಉಶನ್)** ಎಲ್ಲರಿಗೂ ಕೊಡುವ ಇಚ್ಛೆಯನ್ನು ಮಾಡುತ್ತಾ !

ಅಂದರೆ, '**ಹವಿ**', ಎಂದರೆ ಸತ್ಯಭಕ್ತಿ ಮೊದಲಾದ ಪದಾರ್ಥಗಳು ; [ಅವುಗಳ] ಕಾಮನೆ ಮಾಡುತ್ತಾ!

ಅತಃ ಸರ್ವೋ ಜನ ಏವಮಾಚರನ್ ಸನ್ ;

ಆದುದರಿಂದ, ಜನರೆಲ್ಲರೂ ಈ ರೀತಿಯಾಗಿ ಆಚರಿಸುತ್ತಾ ಇದ್ದು ;

(ಪ್ರತಿಕಾಮಮತ್ತು) ಸರ್ವಾನ್ ಕಾಮಾನ್ ಪ್ರಾಪ್ನೋತು ॥೧೦॥

(ಪ್ರತಿಕಾಮಮತ್ತು) ಎಲ್ಲಾ ಕಾಮನೆಗಳನ್ನೂ ಪ್ರಾಪ್ತ ಮಾಡಿಕೊಳ್ಳಲಿ!

ಅಂದರೆ, ಹೇ ಮನುಷ್ಯಜನರೇ! ಎಲ್ಲಾ ಕಾರ್ಯಗಳ ಮಧ್ಯೆ ಸತ್ಯದ ಸೇವನೆ ಮಾಡುವವರೂ, ಮತ್ತು ಯಾರಿಗೆ ಪರಮೇಶ್ವರನು ಆಧಾರಭೂತನಾಗಿದ್ದಾನೋ, ಅಂತಹ ಧರ್ಮಾತ್ಮಾ ಮಹಾಪುರುಷರ ಸತ್ಸಂಗದಿಂದ ನೀವೂ ಕೂಡ, ಆ ಪರಮಾತ್ಮನ ಆನಂದದಿಂದಲೇ ತೃಪ್ತರಾಗಿರಿ! [೧೦]

ಬ್ರಹ್ಮವಿದ್ಯಾನಿಷ್ಣಾತರಾದ ಪಿತೃಗಳೇ! ಬನ್ನಿರಿ!

[ಋಷಿಃ_ ಶಂಖಃ ; ದೇವತಾ_ ಪಿತರಃ ; ಛಂದಃ_ ಭುರಿಕ್ ಪಂಕ್ತಿ ; ಸ್ವರಃ_ ಪಂಚಮಃ]

ಬರ್ಹಿಷದಃ ಪಿತರ ಊತ್ಯರ್ವಾಗಿಮಾ
ವೋ ಹವ್ಯಾ ಚಕೃಮಾ ಜುಷಧ್ವಮ್ ।
ತಽ ಆ ಗತಾವಸಾ ಶಂತಮೇನಾಥಾ
ನಃ ಶಂಯೋರರಪೋ ದಧಾತ ॥ ೧೧ ॥

[ಯಜುರ್ವೇದೇ ಅ. ೧೯, ಮಂ. ೫೫]

[ಅರ್ಥ:_ " ಬ್ರಹ್ಮಸ್ಥರಾದ ಪಿತೃಗಳೇ! ಅತ್ಯಂತ ಕಲ್ಯಾಣಕರವಾದ ರಕ್ಷಣೆಯೊಡನೆ ತಾವು ಬನ್ನಿರಿ! ನಿಮಗಾಗಿ ದೇಯಪದಾರ್ಥಗಳನ್ನು ತಯಾರಿಸಿದ್ದೇವೆ. ಇವನ್ನು ಸೇವಿಸಿರಿ! ನಂತರ, ನಮಗೆ ರಕ್ಷಣೆಯೊಡನೆ ಸುಖದ, ಹಾಗೂ ನಿಷ್ಪಾಪತ್ವದ ಧಾರಣೆಯನ್ನು ಮಾಡಿಸಿರಿ! "

(ಯಜುರ್ವೇದ: ೧೯. ೫೫)]

ಭಾಷ್ಯಮ್_

(ಬರ್ಹಿಷದಃ) ಯೇ ಬರ್ಹಿಷಿ ಸರ್ವೋತ್ತಮೇ ಬ್ರಹ್ಮಣಿ ವಿದ್ಯಾಯಾಂ ಚ ನಿಷಣ್ಣಾಸ್ತೇ (ಪಿತರಃ) ವಿದ್ವಾಂಸಃ ;

(ಅವಸಾ ಶಂತಮೇನ) ಅತಿಶಯೇನ ಕಲ್ಯಾಣ-ರೂಪೇಣ ರಕ್ಷಣೇನ ಸಹ ವರ್ತಮಾನಾಃ ;

(ಆಗತ) ಅಸ್ಮಾಕಂ ಸಮೀಪಮಾಗಚ್ಛಂತು.

ಆಗತಾನ್ ತಾನ್ ಪ್ರತ್ಯೇವಂ ವಯಂ ಬ್ರೂಮಹೇ_

ಹೇ ವಿದ್ವಾಂಸಃ! ಯೂಯಮಾಗತ್ಯ ;

(ಅರ್ವಾಕ್) ಪಶ್ಚಾತ್ (ಇಮಾ.) ಇಮಾನಿ ಹವ್ಯಾನಿ ಗ್ರಾಹ್ಯದೇಯಾನಿ ವಸ್ತೂನಿ ;

(ಜುಷಧ್ವಮ್) ಸಂಪ್ರೀತ್ಯಾ ಸೇವಧ್ವಮ್.

ಭಾಷ್ಯ_

(ಬರ್ಹಿಷದಃ) ಯಾರು 'ಬರ್ಹಿಷಿ', ಎಂದರೆ ಸರ್ವೋತ್ತಮನಾದ ಬ್ರಹ್ಮನಲ್ಲೂ, ಹಾಗೂ ವಿದ್ಯೆಯಲ್ಲೂ ಅವಸ್ಥಿತರಾಗಿರುತ್ತಾರೋ, ಆ (ಪಿತರಃ) ವಿದ್ವಾಂಸರು ;

(ಅವಸಾ ಶಂತಮೇನ) ಅತ್ಯಂತ ಕಲ್ಯಾಣರೂಪ ರಕ್ಷಣೆಯೊಡನೆ ವಿದ್ಯಮಾನರಾಗಿದ್ದುಕೊಂಡು ;

(ಆಗತ) ನಮ್ಮ ಬಳಿಗೆ ಬರಲಿ!

ಅಂದರೆ, ಯಾರು ಬ್ರಹ್ಮನಲ್ಲಿ, ಮತ್ತು ಸತ್ಯವಿದ್ಯೆಯಲ್ಲಿ ಸ್ಥಿತರಾದ ಪಿತೃಜನರಾಗಿರುತ್ತಾರೋ, ಅವರು ನಮ್ಮ ರಕ್ಷಣೆಗಾಗಿ ಯಾವಾಗಲೂ ತತ್ಪರರಾಗಿರಲಿ!

ಆಗಮಿಸಿರುವ ಅವರಿಗೆ ನಾವು ಹೇಳುತ್ತೇವೇನೆಂದರೆ_

ಹೇ ವಿದ್ವಾಂಸರೇ! ನೀವುಗಳು ಬಂದು ;

(ಅರ್ವಾಕ್) ನಂತರ, (ಇಮಾಃ) ಈ (ಹವ್ಯಾಃ) ತೆಗೆದುಕೊಳ್ಳಲು-ಕೊಡಲು ಯೋಗ್ಯವಾದ ವಸ್ತುಗಳನ್ನು ;

(ಜುಷಧ್ವಮ್) ಒಳ್ಳೆಯ ಪ್ರೀತಿಯಿಂದ ಸೇವಿಸಿರಿ!

ಅಂದರೆ, ಯಾವ ರೀತಿಯಲ್ಲಿ ನಾವು ಅವರ ಸೇವೆಯನ್ನು ಮಾಡಬೇಕೆಂದರೆ, ಅವರು ಪ್ರೀತಿಪೂರ್ವಕ ವಾಗಿ, ವಿದ್ಯಾದಾನದಿಂದ ನಮ್ಮನ್ನು ಸಂತುಷ್ಟರನ್ನಾಗಿ ಮಾಡಿಬಿಡಬೇಕು!

ಹೇ ಪಿತರಃ! ವಯಂ (ಊತ್ಯಾ) ಭವದ್ರಕ್ಷಣೇನ (ವಃ) ಯುಷ್ಮಾಕಂ ಸೇವಾಂ (ಚಕೃಮ) ನಿತ್ಯಂ ಕುರ್ಯ್ಯಾಮ.

ಓ ಪಿತೃಗಳೇ! ನಾವು **(ಊತ್ಯಾ)** ತಮ್ಮ ರಕ್ಷಣೆ ಯೊಡನೆ **(ವಃ)** ನಿಮ್ಮ ಸೇವೆಯನ್ನು **(ಚಕೃಮ)** ನಿತ್ಯವೂ ಮಾಡೋಣ!

ಅಂದರೆ, ಓ ಪಿತೃಗಳೇ! ನಾವು ಆಕಾಂಕ್ಷೆ ಮಾಡುತ್ತೇವೇನೆಂದರೆ_

ಯಾವಾಗ ಯಾವಾಗ ತಾವು ನಮ್ಮ ಬಳಿಗೆ, ಅಥವಾ ನಾವು ತಮ್ಮ ಬಳಿಗೆ, ಬರುತ್ತೇವೋ, ಹೋಗುತ್ತೇವೋ, ಆಗಾಗ ನಾವು ಉತ್ತಮೋತ್ತಮ ಪದಾರ್ಥಗಳಿಂದ ತಮ್ಮೆಲ್ಲರ ಸೇವೆ ಮಾಡೋಣ! ಮತ್ತು ತಾವೆಲ್ಲರೂ ಕೂಡ, ಅವುಗಳನ್ನು ಪ್ರೀತಿಪೂರ್ವಕವಾಗಿ ಸ್ವೀಕರಿಸಿರಿ!

(ಅಥಾ ನಃ ಶಂ.) ಅಥೇತಿ ಸೇವಾಪ್ರಾಪ್ತೇರ-ನಂತರಂ ;

(ಅಥಾ) **'ಅಥ'**, ಎಂದರೆ ಸೇವೆಯನ್ನು ಪಡೆದ ನಂತರ ;

ಯೂಯಂ ನೋಽಸ್ಮಾಕಂ ಶಂಯೋರ್ವಿಜ್ಞಾನ-ರೂಪಂ ಸುಖಂ ದಧಾತ ;

ನೀವು **(ನಃ)** ನಮಗೆ **(ಶಂಯೋಃ)** ವಿಜ್ಞಾನರೂಪ ಸುಖವನ್ನು **(ದಧಾತ)** ಧಾರಣೆ ಮಾಡಿಸಿರಿ!

ಕಿಂತ್ವವಿದ್ಯಾರೂಪಂ ಪಾಪಂ ದೂರೀಕೃತ್ವಾ (ಅರಪಃ) ನಿಷ್ಪಾಪತಾಂ ದಧಾತ ;

ಮತ್ತು ಅವಿದ್ಯಾರೂಪ ಪಾಪವನ್ನು ದೂರಮಾಡಿ, **(ಅರಪಃ)** ನಿಷ್ಪಾಪತ್ವವನ್ನು ಧಾರಣೆ ಮಾಡಿಸಿರಿ!

ಯೇನ ವಯಂ ನಿಷ್ಪಾಪಾ ಭವೇಮೇತಿ ॥೧೧॥

ಇದರಿಂದ, ನಾವು ನಿಷ್ಪಾಪರಾಗೋಣ!

ಅಂದರೆ, ನಾವಂತೂ ಅನ್ನವೇ ಮೊದಲಾದ ಪದಾರ್ಥಗಳಿಂದ [ತಮ್ಮ ಸೇವೆ ಮಾಡಿದರೆ,] ತಾವು ನಮಗೆ ಕಲ್ಯಾಣಕಾರಿಯಾಗುವ ಗುಣಗಳ ಉಪದೇಶ ದಿಂದಲೂ ; ನಂತರ, ನಮ್ಮ ಕಲ್ಯಾಣವಾಗುವ ವಿಧಾನ ದಿಂದಲೂ ; ಎಂದರೆ ನಾವು ಪಾಪ[ವನ್ನೇ] ಮಾಡ ಬಾರದು, ಎಂಬಂತಹ ಗುಣಗಳನ್ನು [ನಮ್ಮಲ್ಲಿ] ಧಾರಣ ಮಾಡಿಸಿರಿ! [೧೧]

ನಾನು ಶುಭದಾನಕರ್ತೃಗಳಾದ ಪಿತೃಗಳನ್ನು ತಿಳಿದಿದ್ದೇನೆ!

[ಋಷಿಃ_ ಶಂಖಃ ; ದೇವತಾ_ ಪಿತರಃ ; ಛಂದಃ_ ತ್ರಿಷ್ಟುಪ್ ; ಸ್ವರಃ_ ಧೈವತಃ]

ಆಹಂ ಪಿತೄನ್ತ್ಸುವಿದತ್ರಾ೨ऽ ಅವಿತ್ಸಿ
ನಪಾತಂ ಚ ವಿಕ್ರಮಣಂ ಚ ವಿಷ್ಣೋಃ ।
ಬರ್ಹಿಷದೋ ಯೇ ಸ್ವಧಯಾ ಸುತಸ್ಯ
ಭಜಂತ ಪಿತ್ವಸ್ತऽ ಇಹಾ ಗಮಿಷ್ಠಾಃ ॥೧೨॥

[ಯಜುರ್ವೇದೇ ಅ. ೧೯, ಮಂ. ೫೬]

[ಅರ್ಥ:_ "ಯಾರು ಬ್ರಹ್ಮನಲ್ಲಿ ಸ್ಥಿತರೂ, ಅನ್ನದಿಂದ, ಹಾಗೂ ಸೋಮವಲ್ಲೀ ಮೊದಲಾದುವುಗಳಿಂದ ತೆಗೆದ ರಸದ ಪ್ರಾಶನವನ್ನು ಮಾಡಿದವರೂ, ಹಾಗೂ ಅದರ ಪಾನ ಮಾಡಿದವರೂ ಆಗಿರುತ್ತಾರೋ, ಆ[ಪಿತೃಗಳು] ಇಲ್ಲಿಗೆ ಬರಲಿ! ನಾನು ಶುಭದಾನಕರ್ತೃಗಳಾದ ಪಿತೃಗಳನ್ನು ಚೆನ್ನಾಗಿ ತಿಳಿದಿದ್ದೇನೆ! ಮತ್ತು ವಿಷ್ಣುವಿನ ವಿವಿಧ ರಚನೆಯನ್ನೂ, ಹಾಗೂ ಮೋಕ್ಷಪದವನ್ನೂ ಕೂಡ, [ತಿಳಿದಿದ್ದೇನೆ!]"

(ಯಜುರ್ವೇದಃ ೧೯. ೫೬)]

ಭಾಷ್ಯಮ್_

(ಆಹಂ ಪಿತೄನ್ ಸುವಿದತ್ರಾ.) ಯೇ ಬರ್ಹಿಷದಃ ;

(ಸ್ವಧಯಾ) ಅನ್ನೇನ ;

(ಸುತಸ್ಯ) ಸೋಮವಲ್ಲ್ಯಾದಿಭ್ಯೋ ನಿಷ್ಪಾದಿತಸ್ಯ ರಸಸ್ಯ ಪ್ರಾಶನಂ (ಭಜಂತೇ)* ಸೇವಂತೇ ;

(ಪಿತ್ವಃ) ತತ್ಪಾನಂ ಕೃತ್ವಾ ;

(ತ ಇಹಾಗ.) ಅಸ್ಮಿನ್ನಸ್ಮತ್ ಸನ್ನಿಹಿತದೇಶೇ ತೇ ಪಿತರ ಆಗಚ್ಛಂತು.

* ಮಂತ್ರೇ 'ಭಜಂತ', ಇತ್ಯೇವ ಪಾಠಃ. 'ಅಭಜಂತ' ಇತಿ ಲಜಾತ್ಮನೇಪದಮಪಿ ಸ್ಯಾತ್ _ಅನು.

ಭಾಷ್ಯ_

(ಆಹಂ ಪಿತೄನ್ ಸುವಿದತ್ರಾ.) ಯಾರು ಬ್ರಹ್ಮನಲ್ಲಿ ಸ್ಥಿತರಾಗಿ ;

(ಸ್ವಧಯಾ) ಅನ್ನದಿಂದ, ಹಾಗೂ ;

(ಸುತಸ್ಯ) ಸೋಮವಲ್ಲೀ ಮೊದಲಾದುವುಗಳಿಂದ ತೆಗೆದ ರಸದ ಪ್ರಾಶನವನ್ನು (ಭಜಂತೇ) ಸೇವಿಸುತ್ತಾರೋ,

[ಮತ್ತು] (ಪಿತ್ವಃ) ಅದರ ಪಾನವನ್ನು ಮಾಡಿದವರೂ ಆಗಿರುತ್ತಾರೋ ;

(ತ ಇಹಾಗಮಿಷ್ಠಾಃ) ಆ ಪಿತೃಗಳು ನಮ್ಮ ಸಮೀಪದ ಈ ಸ್ಥಾನಕ್ಕೆ ಬರಲಿ!

ಅಂದರೆ, ಯಾವ ವಿದ್ವಾಂಸರು ತಮ್ಮ ಅಮೃತ ರೂಪ ಉಪದೇಶದಿಂದ ಪುತ್ರರ ಭಾವನೆಯೊಡನೆ [ಶಿಷ್ಯರಿಗೆ] ವಿದ್ಯಾದಾನ ಮಾಡುತ್ತಾರೋ, ಮತ್ತು ಅದರಲ್ಲಿ ತಾವೂ ಕೂಡ, ಆನಂದಿತರಾಗಿ, ಜಗತ್ತಿನಲ್ಲಿ ಎಲ್ಲ ಸುಖಗಳನ್ನೂ ಕೊಡುವವರಾಗಿರುತ್ತಾರೋ, ಆ ಸರ್ವಹಿತಕಾರೀ ಪುರುಷರು, ನಮ್ಮೆಲ್ಲರಲ್ಲಿ ನಿತ್ಯಜ್ಞಾನದ ಉನ್ನತಿಯನ್ನು ಮಾಡಲೆಂದು, ನಮ್ಮ ಬಳಿಗೂ ಕೂಡ, ಯಾವಾಗಲೂ ಬರುತ್ತಿರಲಿ!

[(ಪಿತ್ೠನ್)] ಯ ಈದೃಶಾಃ ಪಿತರಃ ಸಂತಿ;

(ಪಿತ್ೠನ್) ಯಾರು ಈ ತರಹದ ಪಿತೃಗಳಾಗಿ ರುತ್ತಾರೋ ;

ತಾನ್ [(ಸುವಿದತ್ರಾನ್)] ವಿದ್ಯಾದಿಶುಭಗುಣಾನಾಂ ದಾನಕರ್ತ್ೠನಹಂ ;

ಆ (ಸುವಿದತ್ರಾನ್) ವಿದ್ಯೆಯೇ ಮೊದಲಾದ ಶುಭಗುಣಗಳ ದಾನದಾತೃಗಳನ್ನು ನಾನು ;

(ಆ ಅವಿತ್ಸಿ) ಆ ಸಮಂತಾದ್ವೇದ್ಮಿ.

(ಆ ಅವಿತ್ಸಿ) ಚೆನ್ನಾಗಿ ತಿಳಿದಿದ್ದೇನೆ!

ಅಂದರೆ, ಪಿತೃಜನರು ತಮ್ಮ ಉತ್ತಮ ವಿದ್ಯೆಯಿಂದ ಮತ್ತು ತಮ್ಮ ಉಪದೇಶದಿಂದ ಸುಖವನ್ನು ಕೊಡುವವರಾಗಿರುತ್ತಾರೆ, ಎಂಬುದನ್ನು ನಾನು ತಿಳಿದಿದ್ದೇನೆ!

ಅತ್ರ ವ್ಯತ್ಯಯೇನಾತ್ಮನೇಪದಮಿಡಭಾವಶ್ಚ.*

ಇಲ್ಲಿ ವ್ಯತ್ಯಯದಿಂದ ಆತ್ಮನೇಪದವಾಗಿದೆ, ಹಾಗೂ 'ಇಟ್' ಪ್ರತ್ಯಯವು ಇಲ್ಲವಾಗಿದೆ.*

ತಾನ್ ವಿದಿತ್ವಾ ಸಂಗತ್ಯ ಚ ;

ಅವರನ್ನು ತಿಳಿದುಕೊಂಡು, ಮತ್ತು [ಅವರೊಡನೆ] ಭೇಟಿಮಾಡಿ ;

(ವಿಷ್ಣೋಃ) ಸರ್ವತ್ರವ್ಯಾಪಕಸ್ಯ ಪರಮೇಶ್ವರಸ್ಯ ;

(ವಿಷ್ಣೋಃ) ಸರ್ವತ್ರ ವ್ಯಾಪಕನಾದ ಪರಮೇಶ್ವರನ ;

(ವಿಕ್ರಮಣಂ ಚ) ವಿವಿಧಕ್ರಮೇಣ ಜಗದ್ರಚನಂ ;

(ವಿಕ್ರಮಣಂ ಚ) ವಿವಿಧ ಕ್ರಮದಿಂದಾದ ಜಗದ್ರಚನೆಯನ್ನೂ ;

ತಥಾ ;

ಹಾಗೂ ;

(ನಪಾತಂ ಚ) 'ನ ವಿದ್ಯತೇ ಪಾತೋ ವಿನಾಶೋ ಯಸ್ಯ' ;

(ನಪಾತಂ ಚ) 'ಪಾತ, ಎಂದರೆ, ವಿನಾಶ ಯಾವನಿಗಿಲ್ಲವೋ';

* ಮಂತ್ರೇ 'ವಿದ್ಲೃ ಲಾಭೇ' ಇತಿ ತುದಾದಿಗಣಸ್ಥಧಾತೋರ್ಲುಙ್‌ಪ್ರಯೋಗ (ಅನಿಟ್) ಆತ್ಮನೇಪದೇ 'ಅವಿತ್ಸಿ' ಇತಿ ವರ್ತತೇ. ಭಾಷ್ಯೇ ತು 'ವಿದ ಜ್ಞಾನೇ' ಇತ್ಯದಾದಿಗಣಸ್ಥಧಾತೋರ್ಲಟ್ ಪ್ರಯೋಗಃ (ಸೇಟ್) ಪರಸ್ಮೈಪದೇ 'ವೇದ್ಮಿ' ಇತಿ ಕೃತಃ. _ಅನು.

* ಮಂತ್ರದಲ್ಲಿ 'ವಿದ್ಲೃ ಲಾಭೇ', ಎಂಬ ತುದಾದಿಗಣಸ್ಥ ಧಾತುವಿನ 'ಲುಙ್' (ಸಾಮಾನ್ಯ ಭೂತಕಾಲ) ಪ್ರಯೋಗವು (ಅನಿಟ್) ಆತ್ಮನೇಪದದಲ್ಲಿ ಉತ್ತಮಪುರುಷ ಏಕವಚನದಲ್ಲಿ 'ಅವಿತ್ಸಿ', ಎಂದಾಗಿದೆ. ಭಾಷ್ಯದಲ್ಲಿ _ 'ವಿದ ಜ್ಞಾನೇ', ಎಂಬ ಅದಾದಿಗಣಸ್ಥ ಧಾತುವಿನ ಲಟ್ (ವರ್ತಮಾನಕಾಲ) ಪ್ರಯೋಗವು (ಸೇಟ್) ಪರಸ್ಮೈಪದದಲ್ಲಿ ಉತ್ತಮಪುರುಷ ಏಕವಚನದಲ್ಲಿ 'ವೇದ್ಮಿ', ಎಂದು ಮಾಡಲಾಗಿದೆ. _ಅನು.

ತನ್ಮೋಕ್ಷಾಖ್ಯಂ ಪದಂ ಚ ವೇದ್ಮಿ.

ಆ 'ಮೋಕ್ಷ', ಎಂಬ ಹೆಸರಿನ ಪದವಿಯನ್ನೂ ಕೂಡ, ನಾನು (ಸರಿ ಸರಿಯಾಗಿ) ಬಲ್ಲೆ!

ಯತ್ಪ್ರಾಪ್ಯ ಮುಕ್ತಾನಾಂ ಸದ್ಯಃ ಪಾತೋ ನ ವಿದ್ಯತೇ, ತದೇತಚ್ಚ ವಿದುಷಾಂ ಸಂಗೇನೈವ ಪ್ರಾಪ್ತಂ ಭವತಿ.

ಮತ್ತು ಯಾವುದನ್ನು ಪಡೆದುಕೊಂಡರೆ, ಮುಕ್ತ [ಜೀವ]ರ **'ಸದ್ಯಃಪತನ'** ಇರುವುದಿಲ್ಲವೋ, ಆ [ಮೋಕ್ಷ-ಪದವೂ] ಕೂಡ, ವಿದ್ವಾಂಸರ ಸಂಗದಿಂದಲೇ ಪ್ರಾಪ್ತವಾಗುತ್ತದೆ.

ಅಂದರೆ, ಯಾವುದರ ಪ್ರಾಪ್ತಿಯಿಂದ ಜೀವಾತ್ಮನು ಪುನಃ ದುಃಖದಲ್ಲಿ ಎಂದಿಗೂ ಬೀಳುವುದಿಲ್ಲವೋ, ಮತ್ತು ಯಾವುದರಲ್ಲಿ ಪೂರ್ಣಸುಖವಿದೆಯೋ, ಮತ್ತು ಯಾವುದಕ್ಕೆ **'ದೇವಯಾನ'** ಮತ್ತು **'ಪಿತೃಯಾನ'**, ಎಂದು ಹೇಳುತ್ತಾರೋ, ಈ ಎರಡೂ ಮಾರ್ಗಗಳನ್ನೂ ಕೂಡ, ನಾನು ವಿದ್ವಾಂಸರ ಸಂಗದಿಂದಲೇ ತಿಳಿದಿದ್ದೇನೆ!

ಅಂದರೆ, ಈ ಜ್ಞಾನವು ನನಗೆ ಆ ಪಿತೃಜನರ ಕೃಪೆಯಿಂದಲೇ ಉಂಟಾಗಿದೆ.

ತಸ್ಮಾತ್ ಸರ್ವೈರ್ವಿದುಷಾಂ ಸಮಾಗಮಃ ಸದಾ ಕರ್ತ್ತವ್ಯ ಇತಿ ॥ ೧೨ ॥

ಆದುದರಿಂದ, ಎಲ್ಲರೂ ವಿದ್ವಾಂಸರ ಸತ್ಸಂಗವನ್ನು ಯಾವಾಗಲೂ ಮಾಡುತ್ತಿರಬೇಕು! [೧೨]

ಪಿತೃಗಳು ಉತ್ತಮಾಸನಗಳಲ್ಲಿ ಕುಳಿತು ಉಪದೇಶಿಸಲಿ!

[ಋಷಿಃ_ ಶಂಖಃ; ದೇವತಾ_ ಪಿತರಃ; ಛಂದಃ_ನಿಚೃತ್ ಪಂಕ್ತಿಃ; ಸ್ವರಃ_ಪಂಚಮಃ]

ಉಪಹೂತಾಃ ಪಿತರಃ ಸೋಮ್ಯಾಸೋ
ಬರ್ಹಿಷ್ಯೇಷು ನಿಧಿಷು ಪ್ರಿಯೇಷು ।
ತಽ ಆ ಗಮಂತು ತಽ ಇಹ ಶ್ರುವಂ-
ತ್ವಧಿ ಬ್ರುವಂತು ತೇಽವಂತ್ವಸ್ಮಾನ್ ॥ ೧೩ ॥

[ಯಜುರ್ವೇದೇ ಅ. ೧೯, ಮಂ. ೫೭]

[ಅರ್ಥ:_"ಪ್ರಿಯವೂ, ಇಡಲು ಯೋಗ್ಯವೂ ಆದ ಆಸನಗಳಲ್ಲಿ ಸೌಮ್ಯಗುಣವನ್ನುಳ್ಳ ಪಿತೃಗಳು ನಿಮಂತ್ರಿತರಾಗಿದ್ದಾರೆ! ಅವರು ಇಲ್ಲಿಗೆ ಬರಲಿ! ಅವರು ಆಲಿಸಲಿ! ಉಪದೇಶಿಸಲಿ! ಅವರು ನಮ್ಮನ್ನು ರಕ್ಷಿಸಲಿ!"

(ಯಜುರ್ವೇದಃ ೧೯. ೫೭)]

ಭಾಷ್ಯಮ್_

(ಸೋಮ್ಯಾಸಃ) ಯೇ ಪ್ರತಿಷ್ಠಾರ್ಹಾಃ ಪಿತರಸ್ತೇ ;

(ಬರ್ಹಿಷ್ಯೇಷು) ಪ್ರಕೃಷ್ಟೇಷು ;

(ನಿಧಿಷು) ಉತ್ತಮವಸ್ತುಸ್ಥಾಪನಾರ್ಹೇಷು ;

(ಪ್ರಿಯೇಷು) ಪ್ರೀತ್ಯುತ್ಪಾದಕೇಷು ಆಸನೇಷು ;

(ಉಪಹೂತಾಃ) ನಿಮಂತ್ರಿತಾಃ ಸಂತಃ ಸೀದಂತು ;

(ಆಗಮಂತು) ಸತ್ಕಾರಂ ಪ್ರಾಪ್ಯಾಸ್ಮತ್ ಸಮೀಪಂ ವಾರಂವಾರಮಾಗಚ್ಛಂತು.

(ತ ಇಹ) ತ ಇಹಾಗತ್ಯಾಸ್ಮತ್‌ಪ್ರಶ್ನಾನ್ (ಶ್ರುವಂತು) ಶೃಣ್ವಂತು.

ಶ್ರುತ್ವಾ ತದುತ್ತರಾಣಿ (ಅಧಿಬ್ರುವಂತು) ಕಥಯಂತು.

ಭಾಷ್ಯ_

(ಸೋಮ್ಯಾಸಃ) ಯಾರು ಪ್ರತಿಷ್ಠೆಗೆ ಯೋಗ್ಯವಾದ ಹಿರಿಯರಾಗಿರುತ್ತಾರೋ, ಅವರು ;

(ಬರ್ಹಿಷ್ಯೇಷು) ಉತ್ಕೃಷ್ಟವೂ ;

(ನಿಧಿಷು) ಉತ್ತಮ ವಸ್ತುಗಳನ್ನಿಡಲು ಅರ್ಹವೂ ;

(ಪ್ರಿಯೇಷು) ಪ್ರೀತಿಯನ್ನು ಉತ್ಪನ್ನ ಮಾಡುವಂತಹವೂ ಆದ ಆಸನಗಳಲ್ಲಿ;

(ಉಪಹೂತಾಃ) ನಿಮಂತ್ರಿತರಾಗಿದ್ದು, ಕುಳಿತುಕೊಳ್ಳಲಿ!

ಅಂದರೆ, ಯಾವ ಹಿರಿಯರನ್ನು ನಾವು ಆಹ್ವಾನಿಸುತ್ತೇವೋ, ಅವರು ನಮ್ಮ ಸಮೀಪಕ್ಕೆ ಬಂದು, ಬಹುಮೂಲ್ಯವೂ, ಮತ್ತು ನೋಡುವುದಕ್ಕೆ ಪ್ರಿಯವೂ ಆದ ಉತ್ತಮಾಸಗಳಲ್ಲಿ ಕುಳಿತುಕೊಂಡು, ನಮಗೆ ಉಪದೇಶವನ್ನು ಮಾಡಲಿ!

(ಆಗಮಂತು) ಸತ್ಕಾರವನ್ನು ಪಡೆದುಕೊಂಡು, ನಮ್ಮ ಬಳಿಗೆ ಮತ್ತೆ ಮತ್ತೆ ಬರಲಿ!

ಅಂದರೆ, ಯಾವಾಗ ಆ ಹಿರಿಯರು ಬರುತ್ತಾರೋ, ಆಗ ಜನರೆಲ್ಲರೂ ಅವರ ಸತ್ಕಾರವನ್ನು ಹೇಗೆ ಮಾಡಬೇಕೆಂದರೆ_

ತಾವು ದಯಮಾಡಿರಿ! ಉತ್ತಮವಾದ ಆಸನದ ಮೇಲೆ ಕೂಡಿರಿ!

(ತ ಇಹ) ಅವರು ಇಲ್ಲಿಗೆ ಬಂದು, ನಮ್ಮ ಪ್ರಶ್ನೆಗಳನ್ನು (ಶ್ರುವಂತು) ಆಲಿಸಲಿ!

ಅಂದರೆ, ಇಲ್ಲಿ ನಮ್ಮ ವಿದ್ಯೆಯ ಮಾತುಗಳನ್ನೂ, ಹಾಗೂ ಪ್ರಶ್ನೆಗಳನ್ನೂ [ತಾವು] ಆಲಿಸಿರಿ!

ಆಲಿಸಿ, ಅವುಗಳ ಉತ್ತರಗಳನ್ನು (ಅಧಿಬ್ರುವಂತು) ಹೇಳಲಿ!

ಅಂದರೆ, ಈ ಪ್ರಶ್ನೆಗಳಿಗೆ ಉತ್ತರಗಳನ್ನು ಕೊಡಿರಿ!

ಏವಂ ವಿದ್ಯಾದಾನೇನ ವ್ಯವಹಾರೋಪದೇಶೇನ ಚ (ತೇऽವಂತ್ವಸ್ಮಾನ್) ಸದಾऽಸ್ಮಾನ್ ರಕ್ಷಂತು ॥ ೧೩ ॥

ಹೀಗೆ, ವಿದ್ಯೆಯ ದಾನದ ಮೂಲಕವಾಗಿಯೂ ಮತ್ತು ವ್ಯವಹಾರದ ಉಪದೇಶದ ಮೂಲಕವಾಗಿಯೂ, (ತೇऽವಂತ್ವಸ್ಮಾನ್) ಅವರು ಯಾವಾಗಲೂ ನಮ್ಮನ್ನು ರಕ್ಷಿಸಲಿ!

ಅಂದರೆ, ಮನುಷ್ಯರಿಗೆ ಜ್ಞಾನವನ್ನು ಕೊಟ್ಟು, ಅವರ ರಕ್ಷಣೆ ಮಾಡಿರಿ! [೧೩]

ಪಿತೃಗಳೇ! ಇಲ್ಲಿ ಉತ್ತಮಭೋಜನ ಮಾಡಿರಿ!

[ಋಷಿಃ_ ಶಂಖಃ ; ದೇವತಾ_ ಪಿತರಃ ; ಛಂದಃ_ ನಿಚೃಜ್ಜಗತೀ ; ಸ್ವರಃ_ ನಿಷಾದಃ]

ಅಗ್ನಿಷ್ವಾತ್ತಾಃ ಪಿತರऽ ಏಹ ಗಚ್ಛತ
ಸದಃಸದಃ ಸದತ ಸುಪ್ರಣೀತಯಃ ।
ಅತ್ತಾ ಹವೀಗ್ಂಷಿ ಪ್ರಯತಾನಿ ಬರ್ಹಿಷ್ಯಥಾ
ರಯಿಗ್ಂ ಸರ್ವವೀರಂ ದಧಾತನ ॥ ೧೪ ॥

[ಯಜುರ್ವೇದೇ ಅ. ೧೯, ಮಂ. ೫೯]

[ಅರ್ಥ:_ "ಅಗ್ನಿವಿದ್ಯೆಯನ್ನು ತಿಳಿದ ಹಿರಿಯರೇ! ಇಲ್ಲಿ ಬನ್ನಿ! ಶೋಭನನೀತಿಯನ್ನುಳ್ಳವರೇ! ಮನೆ-ಮನೆಗೂ ಆಗಮಿಸಿ! ಪ್ರಯತ್ನಪೂರ್ವಕವಾಗಿ ಮಾಡಿದ ಹವಿಸ್ಸುಗಳನ್ನು ಆಸನಗಳಲ್ಲಿ ಕುಳಿತು ತಿನ್ನಿರಿ! ನಂತರ, ಎಲ್ಲಾ ಪೌರುಷಯುಕ್ತವಾದ ಧನವನ್ನು ಧಾರಣ ಮಾಡಿಸಿರಿ!"

(ಯಜುರ್ವೇದಃ ೧೯. ೫೯)]

ಭಾಷ್ಯಮ್_

(ಅಗ್ನಿಷ್ವಾತ್ತಾಃ ಪಿತರ ಏಹ ಗಚ್ಛತ) ಹೇ ಪೂರ್ವೋಕ್ತಾ* ಅಗ್ನಿಷ್ವಾತ್ತಾಃ+ ಪಿತರಃ! ಅಸ್ಮತ್ಸನ್ನಿಧೌ ಪ್ರೀತ್ಯಾ ಆಗಚ್ಛತ.

ಆಗತ್ಯ_

ಭಾಷ್ಯ_

(ಅಗ್ನಿಷ್ವಾತ್ತಾಃ ಪಿತರಃ ಆ ಇಹ ಗಚ್ಛತ)] ಮೊದಲು ಹೇಳಿದ* ಅಗ್ನಿವಿದ್ಯೆಯನ್ನು ತಿಳಿದ+ ಓ ಹಿರಿಯರೇ! ನಮ್ಮ ಬಳಿಗೆ ಪ್ರೀತಿಯಿಂದ ಬನ್ನಿರಿ!

ಬಂದು_

ಅಂದರೆ, ತಾವು ಉಪದೇಶಕರಾಗಿ, ನಮ್ಮ ಮನೆಗಳಿಗೆ ಬಂದು, ಉಪದೇಶ ಮಾಡಿರಿ, ಹಾಗೂ ನಿವಾಸಮಾಡಿರಿ!

* ಅಸ್ಮಿನ್ ಮಂತ್ರ ಇತ್ಯರ್ಥಃ _ಅನು.

+ ಸತ್ಯಾರ್ಥಪ್ರಕಾಶೇ ಕನ್ನಡಸಂಸ್ಕರಣೇ ಚತುರ್ಥೇ ಸಮುಲ್ಲಾಸೇ ೧೭೪ ತಮಂ ಪೃಷ್ಠಂ ದ್ರಷ್ಟವ್ಯಮ್ _ಅನು.

* ಈ ಮಂತ್ರದಲ್ಲಿ, ಎಂದರ್ಥ _ಅನು.

+ 'ಸತ್ಯಾರ್ಥಪ್ರಕಾಶ', ಚತುರ್ಥಸಮುಲ್ಲಾಸದಲ್ಲೂ ಪುಟ ೧೭೪ ನ್ನು ನೋಡಿ _ಅನು.

ಮತ್ತು ಆ ಹಿರಿಯರು ಹೇಗಿರಬೇಕೇನೆಂದರೆ_

(ಸುಪ್ರಣೀತಯಃ) ಶೋಭನಾ ಪ್ರಕೃಷ್ಟಾ ನೀತಿರ್ಯೇಷಾಂ ತ ಏವಂಭೂತಾ ಭವಂತಃ ಪೂಜ್ಯಾಃ ಸಂತಃ ;

(ಸುಪ್ರಣೀತಯಃ) ಶೋಭನವಾದ, ಎಂದರೆ ಉತ್ಕೃಷ್ಟವಾದ ನೀತಿಯು ಯಾರದಾಗಿರುತ್ತದೋ, ಅಂತಹವರಾಗಿದ್ದು, ಎಂದರೆ ಪೂಜ್ಯರಾಗಿದ್ದು;

ಅಂದರೆ, ಉತ್ತಮೋತ್ತಮ ಗುಣಗಳನ್ನುಳ್ಳವರಾಗಿದ್ದು;

(ಸದಃಸದಃ ಸದತ) ಪ್ರತಿಗೃಹಂ ಪ್ರತಿಸಭಾಂ ಚೋಪದೇಶಾರ್ಥಂ ಸ್ಥಿತಿಂ ಭ್ರಮಣಂ ಚ ಕುರುತ.

(ಸದಃಸದಃ ಸದತ) ಮನೆ-ಮನೆಗೂ, ಮತ್ತು ಸಭೆ-ಸಭೆಗೂ ಉಪದೇಶವನ್ನು ಮಾಡುವುದಕ್ಕಾಗಿ, ವಾಸವನ್ನೂ, ಹಾಗೂ ಭ್ರಮಣವನ್ನೂ ಮಾಡಿರಿ!

ಅಂದರೆ, ಇಂತಹ ವಿದ್ವಾಂಸರ ಪ್ರತಿ ಈಶ್ವರನ ಉಪದೇಶವೇನಿದೆಯೆಂದರೆ_

ಅವರು ದೇಶ-ದೇಶಕ್ಕೂ, ಹಾಗೂ ಮನೆ-ಮನೆಗೂ ಹೋಗಿ, ಮನುಷ್ಯರೆಲ್ಲರಿಗೂ ಸತ್ಯವಿದ್ಯೆಯ ಉಪದೇಶ ಮಾಡಲಿ, ಎಂದು!

(ಅತ್ತಾ ಹವೀಗ್ಂಷಿ) ಪ್ರಯತ್ನಯುಕ್ತಾನಿ ಕರ್ಮಾಣಿ ದೇಯಯೋಗ್ಯಾನ್ಯುತ್ತಮಾನ್ನಾನಿ ವಾ ಯೂಯಂ ಸ್ವೀಕುರುತ.

(ಅತ್ತಾ ಹವೀಗ್ಂಷಿ ಪ್ರಯತಾನಿ) ಪ್ರಯತ್ನ ಯುಕ್ತವಾದ ಕರ್ಮಗಳನ್ನು ಅಥವಾ ಕೊಡಲು ಯೋಗ್ಯವಾದ ಉತ್ತಮ ಭೋಜನಗಳನ್ನು ನೀವು ಸ್ವೀಕರಿಸಿರಿ!

ಅಂದರೆ, ಕೊಡಲು, ಹಾಗೂ ತೆಗೆದುಕೊಳ್ಳಲು ಯೋಗ್ಯವಾದ ವಿದ್ಯೆ ಮೊದಲಾದ ಗುಣಗಳ ದಾನವನ್ನೂ ಮತ್ತು ಗ್ರಹಣವನ್ನೂ ಮಾಡುವಂತಹವರಾಗಿರಿ!

(ಬರ್ಹಿಷ್ಯಥಾ) ಅಥೇತ್ಯನಂತರಂ, ಬರ್ಹಿಷಿ ಸದಸಿ ಗೃಹೇ ವಾ ಸ್ಥಿತ್ವಾ_

(ಬರ್ಹಿಷಿ ಅಥಾ) 'ಅಥ', ಎಂದರೆ, ಅನಂತರ, 'ಬರ್ಹಿಷಿ', ಎಂದರೆ ಸಭೆಯಲ್ಲಿ ಅಥವಾ ಮನೆಯಲ್ಲಿ ಸ್ಥಿತರಾಗಿ_

ಅಂದರೆ, ಸಭೆಯ ಮಧ್ಯೆ ಸತ್ಯ-ಸತ್ಯವಾದ ನ್ಯಾಯವನ್ನು ಮಾಡುವವರಾಗಿರಿ ;

(ರಯಿಗ್ಂ ಸರ್ವವೀರಂ.) ಸರ್ವೈರ್ವೀರೈರ್ಯುಕ್ತಂ ವಿದ್ಯಾದಿಧನಂ ಯೂಯಂ ದಧಾತನ ;

(ರಯಿಗ್ಂ ಸರ್ವವೀರಂ ದಧಾತನ) ಎಲ್ಲಾ ಪೌರುಷಗಳಿಂದಲೂ ಯುಕ್ತವಾದ ವಿದ್ಯೆ ಮೊದಲಾದ ಧನವನ್ನು ನೀವು ಧಾರಣ ಮಾಡಿಸಿರಿ!

ಯತೋಽಸ್ಮಾಸು ಬುದ್ಧಿಶರೀರಬಲಯುಕ್ತಾ ವೀರಾ ಭವೇಯುಃ ; ಸತ್ಯವಿದ್ಯಾಕೋಶಶ್ಚ ॥ ೪ ॥

ಇದರಿಂದ, ನಮ್ಮಗಳಲ್ಲಿ ಬುದ್ಧಿಯ, [ಹಾಗೂ] ಶರೀರದ ಬಲದಿಂದ ಯುಕ್ತರಾದ ವೀರರು ಉತ್ಪನ್ನರಾಗಲಿ! ಮತ್ತು ಸತ್ಯವಿದ್ಯೆಯ ಕೋಶವೂ ಕೂಡ!

ಅಂದರೆ, ಯಾವುದರಿಂದ ವೀರಪುರುಷರಿಂದ ಕೂಡಿದ ಸೇನೆಯ ಪ್ರಾಪ್ತಿಯಾಗುತ್ತದೋ, ಅಂತಹ ವಿದ್ಯೆ ಮೊದಲಾದ ಉತ್ತಮ ಧನದ ಉಪದೇಶದಿಂದ ನಮ್ಮನ್ನು ಪುಷ್ಟರನ್ನಾಗಿ ಮಾಡಿರಿ! [೧೪]

ವಿಜ್ಞಾನಿಗಳಾದ ಹಿರಿಯರು ಆನಂದಿತರಾಗಿರುತ್ತಾರೆ!

[ಋಷಿಃ_ ಶಂಖಃ ; ದೇವತಾ_ ಪಿತರಃ ; ಛಂದಃ_ ಸ್ವರಾಟ್ ತ್ರಿಷ್ಟುಪ್ ; ಸ್ವರಃ_ ಧೈವತಃ]

ಯೇಽ ಅಗ್ನಿಷ್ವಾತ್ತಾ ಯೇಽ ಅನಗ್ನಿಷ್ವಾತ್ತಾ
ಮಧ್ಯೇ ದಿವಃ ಸ್ವಧಯಾ ಮಾದಯಂತೇ ।
ತೇಭ್ಯಃ ಸ್ವರಾಡಸುನೀತಿಮೇತಾಂ
ಯಥಾವಶಂ ತನ್ವಂ ಕಲ್ಪಯಾತಿ ॥ ೧೫ ॥

[ಯಜುರ್ವೇದೇ ಅ. ೧೯, ಮಂ. ೬೦]

[ಅರ್ಥ:_"ಅಗ್ನಿವಿದ್ಯೆಯನ್ನು ತಿಳಿದವರೂ, ಹಾಗೂ ಅನಗ್ನಿವಿದ್ಯೆಯನ್ನು ತಿಳಿದವರೂ ಆದ ಯಾವ [ಹಿರಿಯರು] ಪ್ರಕಾಶದ ಮಧ್ಯೆ ಸುಖದಿಂದ ಆನಂದಿತರಾಗಿರುತ್ತಾರೋ, ಅವರಿಗೆ ಸ್ವಪ್ರಕಾಶರೂಪನು ಅವರ ವಶದಲ್ಲಿ ಬರುವಂತೆ, ಈ ಪ್ರಾಣನೀತಿಯನ್ನು ಅವರ ಶರೀರದಲ್ಲಿ ಸ್ಥಾಪಿಸಲಿ!"

(ಯಜುರ್ವೇದಃ ೧೯. ೬೦)]

ಭಾಷ್ಯಮ್_

ಭಾಷ್ಯ_

(ಯೇ ಅಗ್ನಿಷ್ವಾತ್ತಾಃ) ಯೇ ಅಗ್ನಿವಿದ್ಯಾಯುಕ್ತಾಃ ;

(ಯೇ ಅಗ್ನಿಷ್ವಾತ್ತಾಃ) ಯಾರು ಅಗ್ನಿವಿದ್ಯೆಯಿಂದ ಕೂಡಿರುತ್ತಾರೋ ;

ಅಂದರೆ, ಅಗ್ನಿವಿದ್ಯೆಯನ್ನು ತಿಳಿದವರಾಗಿರುತ್ತಾರೋ ;

(ಯೇ ಅನಗ್ನಿಷ್ವಾತ್ತಾಃ) ಯೇ ವಾಯುಜಲಭೂಗರ್ಭಾದಿವಿದ್ಯಾನಿಷ್ಠಾಃ ;

(ಯೇ ಅನಗ್ನಿಷ್ವಾತ್ತಾಃ) ಯಾರು ವಾಯು-ಜಲ-ಭೂಗರ್ಭ ಮೊದಲಾದ ವಿದ್ಯೆಗಳಲ್ಲಿ ನಿರತರಾಗಿರುತ್ತಾರೋ ;

ಅಂದರೆ, ಸೋಮವಿದ್ಯೆಯನ್ನು ತಿಳಿದವರಾಗಿರುತ್ತಾರೋ ;

(ಮಧ್ಯೇ ದಿವಃ) ದ್ಯೋತನಾತ್ಮಕಸ್ಯ ಪರಮೇಶ್ವರಸ್ಯ ಸದ್ವಿದ್ಯಾಪ್ರಕಾಶಕಸ್ಯ ಚ ಮಧ್ಯೇ ;

(ಮಧ್ಯೇ ದಿವಃ) ಪ್ರಕಾಶಸ್ವರೂಪನೂ, ಹಾಗೂ ಸದ್ವಿದ್ಯೆಯನ್ನು ಪ್ರಕಟಿಸುವವನೂ ಆದ ಪರಮೇಶ್ವರನಲ್ಲಿ;

ಅಂದರೆ, 'ದಿವಃ', ಎಂದರೆ ವಿಜ್ಞಾನರೂಪ ಪ್ರಕಾಶದ ಮಧ್ಯೆ ;

(ಸ್ವಧಯಾ) ಅನ್ನವಿದ್ಯಯಾ ಶರೀರಬುದ್ಧಿಬಲ-ಧಾರಣೇನ ಚ ;

(ಸ್ವಧಯಾ) ಅನ್ನವಿದ್ಯೆಯಿಂದ, ಮತ್ತು ಶರೀರದ, ಹಾಗೂ ಬುದ್ಧಿಯ ಬಲದ ಧಾರಣದಿಂದ ;

ಅಂದರೆ, ಸುಖಭೋಗದಿಂದ ;

(ಮಾದಯಂತೇ) ಆನಂದಿತಾ ಭೂತ್ವಾ ಅಸ್ಮಾನ್ ಸರ್ವಾನ್ ಜನಾನ್ ಆನಂದಯಂತಿ ;

(ಮಾದಯಂತೇ) ಆನಂದಿತರಾಗಿದ್ದು, ನಮ್ಮನ್ನೂ ಹಾಗೂ ಜನರೆಲ್ಲರನ್ನೂ ಆನಂದಿತರನ್ನಾಗಿ ಮಾಡುತ್ತಾರೋ ;

(ತೇಭ್ಯಃ) ತೇಭ್ಯೋ ವಿದ್ವದ್‌ಭ್ಯೋ ವಯಂ ನಿತ್ಯಂ ಸದ್ವಿದ್ಯಾಂ ;

(ತೇಭ್ಯಃ) ಆ ವಿದ್ವಾಂಸರ ಕಡೆಯಿಂದ ನಾವು ನಿತ್ಯವೂ ಸದ್ವಿದ್ಯೆಯನ್ನೂ ;

ತಥಾ_

ಮತ್ತು_

(ಅಸುನೀತಿಮೇತಾಮ್) ಸತ್ಯನ್ಯಾಯಯುಕ್ತಾ-ಮೇತಾಂ ಪ್ರಾಣನೀತಿಂ ಚ ಗೃಹ್ಣೀಯಾಮ.

(ಅಸುನೀತಿಮೇತಾಮ್) ಸತ್ಯ-ನ್ಯಾಯದಿಂದ ಕೂಡಿದ ಈ ಪ್ರಾಣನೀತಿಯನ್ನೂ ಕೂಡ, ಗ್ರಹಿಸೋಣ!

ಅಂದರೆ, ಆ ವಿದ್ವಾಂಸರ ಹಿತಕ್ಕಾಗಿ 'ಸ್ವರಾಟ್', ಎಂದರೆ ಸ್ವಪ್ರಕಾಶಸ್ವರೂಪನಾದ ಪರಮೇಶ್ವರನು ಪ್ರಾಣವಿದ್ಯೆಯ ಪ್ರಕಾಶವನ್ನು ಮಾಡಿ ಬಿಡುತ್ತಾನೆ!

(ಯಥಾವಶಮ್) ತೇ ವಿದ್ವಾಂಸೋ ವಯಂ ಚ ವಿದ್ಯಾವಿಜ್ಞಾನಪ್ರಾಪ್ತ್ಯಾ ;

ಸರ್ವೋಪಕಾರೇಷು ನಿಯಮೇಷು ಪರತಂತ್ರಾಃ ಪ್ರತ್ಯೇಕಪ್ರಿಯೇಷು ಚ ಸ್ವತಂತ್ರಾ ಭವಂತು.[⊛]*

(ಯಥಾವಶಮ್) ಆ ವಿದ್ವಾಂಸರೂ, ಮತ್ತು ನಾವೂ ಕೂಡ, ವಿಜ್ಞಾನವಿದ್ಯೆಯ ಪ್ರಾಪ್ತಿಯ ಮೂಲಕ ;

ಸರ್ವರಿಗೂ ಉಪಕಾರವನ್ನು ಮಾಡುವ ನಿಯಮಗಳಲ್ಲಿ ಪರತಂತ್ರರೂ; ಹಾಗೂ ಪ್ರತಿಯೊಬ್ಬನ ಪ್ರಿಯಕಾರ್ಯಗಳಲ್ಲಿ ಸ್ವತಂತ್ರರೂ ಆಗಿರೋಣ! *

ಯತಃ_

ಇದರಿಂದ_

(ಸ್ವರಾಟ್) ಸ್ವಯಂ ರಾಜತೇ ಪ್ರಕಾಶತೇ ಸ್ವಾನ್ ರಾಜಯತಿ ಪ್ರಕಾಶಯತಿ ವಾ ಸ ಸ್ವರಾಟ್ ಪರಮೇಶ್ವರಃ ;

(ಸ್ವರಾಟ್) [ಯಾವನು] ಸ್ವಯಂಪ್ರಕಾಶಿಸುತ್ತಾನೋ, ಅಥವಾ ತನ್ನವರನ್ನು ಪ್ರಕಾಶಗೊಳಿಸುತ್ತಾನೋ, ಅವನು 'ಸ್ವರಾಟ್', ಎಂದರೆ ಪರಮೇಶ್ವರನು ;

⊛ 'ಭವಾಮ' _ಆ. ವೈ.

* ಆರ್ಯಸಮಾಜಸ್ಯ ದಶಮನಿಯಮೋಽಯಮೇವ ವರ್ತತೇ ಯಸ್ಯ ಮೂಲಹಿಂದೀಪಾಠ ಏವಮಸ್ತಿ _ _ಅನು.

१०. सब मनुष्यों को सामाजिक सर्वहितकारी नियम पालने में परतन्त्र रहना चाहिए और प्रत्येक हितकारी नियम में सब स्वतन्त्र रहें।

* ಆರ್ಯಸಮಾಜದ ಹತ್ತನೆಯ ನಿಯಮವೇ ಇದಾಗಿದೆ_

(೧೦) ಮನುಷ್ಯರೆಲ್ಲರೂ ಸಾಮಾಜಿಕವೂ, ಸರ್ವಹಿತಕಾರಿಯೂ ಆದ ನಿಯಮಗಳನ್ನು ಪಾಲಿಸುವುದರಲ್ಲಿ ಪರತಂತ್ರರಾಗಿರಬೇಕು; ಮತ್ತು, ಪ್ರತಿಯೊಬ್ಬನ ಹಿತಕಾರಕ ನಿಯಮಪಾಲನೆಯಲ್ಲಿ ಎಲ್ಲರೂ ಸ್ವತಂತ್ರರಾಗಿರಬೇಕು! _ಅನು.

(ತನ್ವಂ ಕಲ್ಪಯಾತಿ) ತನುಂ ವಿದ್ವಚ್ಛರೀರಮಸ್ಮದರ್ಥಂ ಕೃಪಯಾ ಕಲ್ಪಯಾತಿ ಕಲ್ಪಯತು ನಿಷ್ಪಾದಯತು ;

(ತನ್ವಂ ಕಲ್ಪಯಾತಿ) 'ತನು', ಎಂದರೆ ವಿದ್ವಾಂಸರ ಶರೀರವನ್ನು ನಮಗಾಗಿ ಕೃಪೆಯಿಟ್ಟು ದಯಪಾಲಿಸಲಿ!

ಅಂದರೆ, ನಾವು ಪ್ರಾರ್ಥನೆ ಮಾಡುತ್ತೇವೇನೆಂದರೆ_

ಹೇ ಪರಮೇಶ್ವರ! ನೀವು ನಿಮ್ಮ ಕೃಪೆಯಿಂದ ಆ [ವಿದ್ವಾಂಸರ] ಶರೀರಗಳನ್ನು ಯಾವಾಗಲೂ ಸುಖಯುಕ್ತವನ್ನಾಗಿಯೂ, ತೇಜಸ್ವಿಗಳನ್ನಾಗಿಯೂ ಮತ್ತು ರೋಗರಹಿತವನ್ನಾಗಿಯೂ ಇಡಿ ; [ಮತ್ತು] ಇದರಿಂದ ನಮಗೆ ಅವರ ಕಡೆಯಿಂದ ಜ್ಞಾನವು ದೊರಕುತ್ತಾ ಇರಲಿ!

ಯತೋಽಸ್ಮಾಕಂ ಮಧ್ಯೇ ಬಹವೋ ವಿದ್ವಾಂಸೋ ಭವೇಯುಃ ॥ ೧೫ ॥

ಏಕೆಂದರೆ, ನಮ್ಮಗಳ ಮಧ್ಯೆ ಬಹುಮಂದಿ ವಿದ್ವಾಂಸರು ಉತ್ಪನ್ನರಾಗಬೇಕಾಗಿದೆ! [೧೫]

ವಿಜ್ಞಾನಿಗಳಾದ ಹಿರಿಯರ ಉಪದೇಶದಿಂದ ರಾಜ್ಯವನ್ನು ಪಾಲಿಸೋಣ!

[ಋಷಿಃ_ ಶಂಖಃ ; ದೇವತಾ_ ಪಿತರಃ ; ಛಂದಃ_ ನಿಚೃತ್ ತ್ರಿಷ್ಟುಪ್; ಸ್ವರಃ_ ಧೈವತಃ]

ಅಗ್ನಿಷ್ವಾತ್ತಾನೃತುಮತೋ ಹವಾಮಹೇ
ನರಾಶಗ್‍ಂಸೇ ಸೋಮಪೀಥಂ ಯಽ ಆಶುಃ ।
ತೇ ನೋ ವಿಪ್ರಾಸಃ ಸುಹವಾ ಭವಂತು
ವಯಗ್‍ಂ ಸ್ಯಾಮ ಪತಯೋ ರಯೀಣಾಮ್ ॥ ೧೬ ॥

[ಯಜುರ್ವೇದೇ ಅ. ೧೯, ಮಂ. ೬೧]

[ಅರ್ಥ:_ "ಋತುವಿದ್ಯೆಯನ್ನೂ, ಹಾಗೂ ಅಗ್ನಿವಿದ್ಯೆಯನ್ನೂ ತಿಳಿದ [ಹಿರಿಯರನ್ನು] ಆಹ್ವಾನಿಸುತ್ತೇವೆ. ಯಾರು ಮನುಷ್ಯರ ಶ್ರೇಷ್ಠತ್ವಕ್ಕಾಗಿ ಓಷಧಿಯ ರಕ್ಷಣೆ ಮಾಡುತ್ತಾರೋ, ಆ ಮೇಧಾವಿಗಳು ನಮ್ಮ ಆಹ್ವಾನವನ್ನು ಅಂಗೀಕರಿಸುವವರಾಗಲಿ! ನಾವು ರಾಜ್ಯಶ್ರೀಯ ಪಾಲಕರಾಗೋಣ!"

(ಯಜುರ್ವೇದಃ ೧೯. ೬೧)]

ಭಾಷ್ಯಮ್_

(ಅಗ್ನಿಷ್ವಾತ್ತಾ) ಹೇ ಮನುಷ್ಯಾಃ! ಯಥಾ ವಯಂ ಋತುವಿದ್ಯಾವತೋಽರ್ಥಾದ್ ಯಥಾಸಮಯಮುದ್ಯೋಗಕಾರಿಣೋಽಗ್ನಿಷ್ವಾತ್ತಾಃ ಪಿತರಃ ಸಂತಿ, ತಾನ್ ;

ಭಾಷ್ಯ_

(ಅಗ್ನಿಷ್ವಾತ್ತಾನ್ ಋತುಮತಃ) ಎಲೈ ಮನುಷ್ಯರೇ! ಹೇಗೆ ನಾವು [ಯಾರು] ಋತುವಿದ್ಯಾವಂತರಾದ, ಎಂದರೆ ಸಮಯಕ್ಕನುಸಾರವಾಗಿ ಉದ್ಯೋಗ ಮಾಡುವಂತಹವರಾದ, ಹಾಗೂ ಅಗ್ನಿವಿದ್ಯೆಯನ್ನು ತಿಳಿದ ಹಿರಿಯರಾಗಿರುತ್ತಾರೋ, ಅವರನ್ನು ;

(ಹವಾಮಹೇ) ಆಹ್ವಯಾಮಹೇ ;

(ಹವಾಮಹೇ) ಆಹ್ವಾನಿಸುತ್ತೇವೋ ;

ತಥೈವ ಯುಷ್ಮಾಭಿರಪಿ ತತ್ಸೇವನಾಯಾಽಹ್ವಾನಂ ನಿತ್ಯಂ ಕಾರ್ಯಮ್.

ಹಾಗೆಯೇ, ನಿಮ್ಮಿಂದಲೂ ಕೂಡ, ಅವರ ಸೇವೆ ಮಾಡುವುದಕ್ಕಾಗಿ, [ಅವರ] ಆಹ್ವಾನವು ನಿತ್ಯವೂ ಮಾಡಲ್ಪಡಬೇಕು!

ಅಂದರೆ, ಯಾವ ರೀತಿ ನಾವು **ಅಗ್ನಿವಿದ್ಯೆ**ಯನ್ನೂ, ಹಾಗೂ **ಸಮಯವಿದ್ಯೆ**ಯನ್ನೂ ತಿಳಿದ ಪಿತೃಗಳನ್ನು ಸತ್ಕಾರಪೂರ್ವಕವಾಗಿ ಆಹ್ವಾನಿಸುತ್ತೇವೋ, ಆ ರೀತಿಯಲ್ಲಿಯೇ ನೀವೂ ಕೂಡ, ಅವರ ಬಳಿಗೆ ಹೋಗುತ್ತಿರಿ! ಮತ್ತು ಅವರನ್ನು ನಿಮ್ಮ ಬಳಿಗೆ ಯಾವಾಗಲೂ ಕರೆಯುತ್ತಿರಿ! ಇದರಿಂದ, ನಿಮ್ಮ ವಿದ್ಯೆಯು ಪ್ರತಿದಿನವೂ ವರ್ಧಿಸುತ್ತಾ ಹೋಗುವುದು!

(ಸೋಮಪೀಥಂ ಯ ಆಶುಃ) ಯೇ ಸೋಮ-ಪಾನಮಶ್ನಂತಿ ;

(ಸೋಮಪೀಥಂ ಯ ಆಶುಃ) ಯಾರು ಸೋಮಪಾನವನ್ನು ಭುಂಜಿಸುತ್ತಾರೋ ;

ಅಂದರೆ, ಯಾರು ಸೋಮಲತೆ ಮೊದಲಾದ ಓಷಧಿಗಳ ರಸಪಾನ, ಹಾಗೂ ರಕ್ಷಣೆ ಮಾಡುತ್ತಾರೋ;

ಯೇ ಚ (ನರಾಶಗ್‌ಂಸೇ) ನರೈಃ ಪ್ರಶಸ್ಯೇಽನುಷ್ಠಾತವ್ಯೇ ಕರ್ಮಣಿ ಕುಶಲಾಃ ಸಂತಿ ;

ಮತ್ತು ಯಾರು **(ನರಾಶಗ್‌ಂಸೇ)** ಮನುಷ್ಯರಿಂದ ಪ್ರಶಂಸನೀಯವಾದ, ಎಂದರೆ ಮಾಡಲ್ಪಡಬೇಕಾದ ಕರ್ಮದಲ್ಲಿ ಕುಶಲರಾಗಿರುತ್ತಾರೋ ;

ಅಂದರೆ, ಮನುಷ್ಯರನ್ನು ಶ್ರೇಷ್ಠರನ್ನಾಗಿ ಮಾಡುತ್ತಾರೋ ;

(ತೇ ನೋ ವಿಪ್ರಾಸಃ) ತೇ ವಿಪ್ರಾ ಮೇಧಾವಿನೋ ನೋಽಸ್ಮಾನ್[⊛] (ಸುಹವಾ.) ಸುಷ್ಠುತಯಾ ಗೃಹೀತಾರೋ ಭವಂತು.

(ತೇ ನೋ ವಿಪ್ರಾಸಃ) ಆ 'ವಿಪ್ರರು', ಎಂದರೆ ಮೇಧಾವಿಗಳು ನಮ್ಮನ್ನು **(ಸುಹವಾಃ)** ಉತ್ತಮ ರೀತಿಯಲ್ಲಿ ಸ್ವೀಕರಿಸುವವರಾಗಿ **(ಭವಂತು)** ಆಗಲಿ!

ಅಂದರೆ, ಆ ವಿದ್ವಾಂಸರು ನಮಗೆ ಸತ್ಯವಿದ್ಯೆಯ ಗ್ರಹಣವನ್ನು ಪ್ರೀತಿಪೂರ್ವಕವಾಗಿ ಯಾವಾಗಲೂ ಮಾಡಿಸುತ್ತಿರಲಿ! ಮತ್ತು ನಾವು ಅವರಿಂದ ಸತ್ಯ ಶಿಕ್ಷಣವನ್ನು ಗ್ರಹಿಸಿ, ಆನಂದಿತರಾಗೋಣ!

(ಸೋಮಪೀಥಂ.) ಯೇ ಸೋಮವಿದ್ಯಾದಾನ-ಗ್ರಹಣಾಭ್ಯಾಂ ತೃಪ್ತಾಃ ;

(ಸೋಮಪೀಥಂ.) ಯಾರು ಸೋಮವಿದ್ಯೆಯನ್ನು ಹೇಳಿ ಕೊಡುವುದರಿಂದ ಮತ್ತು ಗ್ರಹಿಸುವುದರಿಂದ, ತೃಪ್ತರಾಗಿರುತ್ತಾರೋ ;

[⊛] 'ಅಸ್ಮಾಕಮ್' _ಆ. ವೈ.

ಯೇಷಾಂ* ಸಂಗೇನ (ವಯಗ್ಂ ಸ್ಯಾಮ ಪತಯೋ.) ಸತ್ಯವಿದ್ಯಾಚಕ್ರವರ್ತಿರಾಜ್ಯಶ್ರೀಣಾಂ ಪತಯಃ ಪಾಲಕಾಃ ಸ್ವಾಮಿನೋ ಭವೇಮ ॥ ೬ ॥

ಅವರ ಜೊತೆಯಲ್ಲಿ (ವಯಗ್ಂ ಸ್ಯಾಮ ಪತಯೋ ರಯೀಣಾಮ್) ನಾವು ಸತ್ಯವಿದ್ಯೆ, ಹಾಗೂ ಚಕ್ರವರ್ತಿರಾಜ್ಯೈಶ್ವರ್ಯದ ಪಾಲಕರು, ಎಂದರೆ ಸ್ವಾಮಿಗಳು ಆಗೋಣ!

ಅಂದರೆ, ನಾವು ಸುವಿದ್ಯೆಯಿಂದ ಚಕ್ರವರ್ತಿ-ರಾಜ್ಯದ 'ಶ್ರೀ' ಮೊದಲಾದ ಉತ್ತಮ ಪದಾರ್ಥಗಳನ್ನು ಪ್ರಾಪ್ತಮಾಡಿಕೊಳ್ಳೋಣ! ಮತ್ತು ಅವುಗಳ ರಕ್ಷಣೆಯನ್ನೂ, ಹಾಗೂ ಉನ್ನತಿಯನ್ನು ಮಾಡುವುದರಲ್ಲಿ ಕೂಡ, ಸಮರ್ಥರಾಗೋಣ! [೧೬]

ಪರಿಚಿತ-ಅಪರಿಚಿತ ಪಿತೃಗಳನ್ನು ಪರಿಚಯಿಸಿಕೊಳ್ಳಿ!

[ಋಷಿಃ_ ಶಂಖಃ; ದೇವತಾ_ ಪಿತರಃ; ಛಂದಃ_ ಸ್ವರಾಟ್ ಪಂಕ್ತಿಃ; ಸ್ವರಃ_ ಪಂಚಮಃ]

ಯೇ ಚೇಹ ಪಿತರೋ ಯೇ ಚ ನೇಹ
ಯಾಂಶ್ಚ ವಿದ್ಮ ಯಾ೨॥ಽ ಉ ಚ ನ ಪ್ರವಿದ್ಮ ।
ತ್ವಂ ವೇತ್ಥ ಯತಿ ತೇ ಜಾತವೇದಃ
ಸ್ವಧಾಭಿರ್ಯಜ್ಞಗ್ಂ ಸುಕೃತಂ ಜುಷಸ್ವ ॥ ೭ ॥

[ಯಜುರ್ವೇದೇ ಅ. ೧೯, ಮಂ. ೬೭]

[ಅರ್ಥ:_ "ವೇದಗಳನ್ನು ಪ್ರಸಿದ್ಧಪಡಿಸಿದವನೇ! ಯಾವ ಪಿತೃಗಳು ಇಲ್ಲಿ ಇದ್ದಾರೋ, ಮತ್ತು ಯಾರು ಇಲ್ಲಿ ಇಲ್ಲವೋ, ಮತ್ತು ಯಾರನ್ನು ನಾವು ತಿಳಿದಿದ್ದೇವೋ, ಹಾಗೂ ಯಾರನ್ನು ನಾವು ಚೆನ್ನಾಗಿ ತಿಳಿದಿಲ್ಲವೋ, ಅವರೆಷ್ಟಿದ್ದಾರೋ, [ಅದನ್ನು] ನೀನು ತಿಳಿದಿದ್ದೀಯೆ! ಸಾಮಗ್ರಿಗಳಿಂದ ಚೆನ್ನಾಗಿ ಮಾಡಲ್ಪಟ್ಟ ಯಜ್ಞವನ್ನು ನೀನು ಸೇವಿಸು!"

(ಯಜುರ್ವೇದಃ ೧೯. ೬೭)]

ಭಾಷ್ಯಮ್_

(ಯೇ ಚೇಹ ಪಿತರೋ.) ಯೇ ಪಿತರೋ ವಿದ್ವಾಂಸ ಇಹಾಸ್ಮತ್ ಸನ್ನಿಧೌ ವರ್ತಂತೇ;

ಯೇ ಚೇಹಾಸ್ಮತ್ ಸಮಕ್ಷೇ ನ ಸಂತಿ; ಅರ್ಥಾದ್ ದೇಶಾಂತರೇ ತಿಷ್ಠಂತಿ;

ಭಾಷ್ಯ_

(ಯೇ ಚೇಹ ಪಿತರಃ) ಯಾವ 'ಪಿತೃ', ಎಂದರೆ ವಿದ್ವಾಂಸರು ನಮ್ಮ ಸಮೀಪದಲ್ಲಿ ಇದ್ದಾರೋ;

(ಯೇ ಚ ನ ಇಹ) ಮತ್ತು ಯಾರು ನಮ್ಮ ಎದುರಿಗೆ ಇಲ್ಲವೋ; ಎಂದರೆ ದೂರ ಸ್ಥಾನದಲ್ಲಿ ಇದ್ದಾರೋ;

* 'ತೇಷಾಮ್' ಇತಿ ಯುಕ್ತಃ ಸ್ಯಾತ್ _ಅನು.

(ಯಾಂಶ್ಚ ವಿದ್ಮ) ಯಾನ್ ವಯಂ ಜಾನೀಮಃ ;

(ಯಾನ್ ಚ ವಿದ್ಮ) ಮತ್ತು ಯಾರನ್ನು ನಾವು ತಿಳಿದಿದ್ದೇವೋ ;

ಅಂದರೆ, ಸಮೀಪದಲ್ಲಿರುವುದರಿಂದ, ಯಾರನ್ನು ನಾವು ತಿಳಿದಿರುತ್ತೇವೋ ;

(ಯಾಁ ಉ ಚ ನ ಪ್ರವಿದ್ಮ) ದೂರದೇಶಸ್ಥಿತ್ಯಾ ಯಾಂಶ್ಚ ವಯಂ ನ ಜಾನೀಮಸ್ತಾನ್ ಸರ್ವಾನ್ ;

(ಯಾನ್ ಉ ಚ ನ ಪ್ರವಿದ್ಮ) ಮತ್ತು ದೂರದೇಶದಲ್ಲಿ ಇರುವುದರಿಂದ, ಯಾರನ್ನು ನಾವು ತಿಳಿದಿರಲಾರೆವೋ, ಅವರೆಲ್ಲರನ್ನೂ ;

ಹೇ (ಜಾತವೇದಃ) ಪರಮೇಶ್ವರ!

ಹೇ (ಜಾತವೇದಃ) ವೇದಗಳನ್ನು ಪ್ರಸಿದ್ಧ ಪಡಿಸಿದವನಾದ ಪರಮೇಶ್ವರ!

(ತ್ವಂ ವೇತ್ಥ) ತ್ವಂ ಯಥಾವಜ್ಜಾನಾಸ್ಯತೋ ಭವಾನ್ ತೇಷಾಮಸ್ಮಾಕಂ ಚ ಸಂಗಂ ನಿಷ್ಪಾದಯ[ತು];

(ತ್ವಂ ವೇತ್ಥ) ನೀವು ಯಥಾವತ್ತಾಗಿ ತಿಳಿದಿದ್ದೀರಿ! ಆದುದರಿಂದ, ತಾವು ಅವರ, ಮತ್ತು ನಮ್ಮ, ಸಂಗವನ್ನು ಆಗುವಂತೆ ಮಾಡಿಸಿ!

ಅಂದರೆ, ಕೃಪೆಯಿಟ್ಟು, ಅವರ ಮತ್ತು ನಮ್ಮ ಪರಸ್ಪರ ಸಂಬಂಧವನ್ನು ಶಾಶ್ವತವಾಗಿ ಮಾಡಿ!

(ಸ್ವಧಾ.) ಯೋಽಸ್ಮಾಭಿಸ್ಸುಕೃತಃ ಸಮ್ಯಗನುಷ್ಠಿತೋ ಯಜ್ಞೋಽಸ್ತಿ ;

(ಸ್ವಧಾಭಿಃ ಯಜ್ಞಗ್ಂ ಸುಕೃತಂ) ನಮ್ಮಿಂದ ಉತ್ತಮ ರೀತಿಯಿಂದ ಮಾಡಲ್ಪಟ್ಟ ಯಾವ ಯಜ್ಞ ಇದೆಯೋ ;

ತ್ವಂ ಸ್ವಧಾಭಿರನ್ನಾದ್ಯಾಭಿಃ ಸಾಮಗ್ರೀಭಿಃ ಸಂಪಾದಿತಂ ಯಜ್ಞಂ ಸದಾ ಜುಷಸ್ವ ಸೇವಸ್ವ ;

[ಅದನ್ನು] ನೀವು (ಸ್ವಧಾಭಿಃ) ಖಾದ್ಯಾನ್ನವೇ ಮೊದಲಾದ ಸಾಮಗ್ರಿಗಳಿಂದ ನಿಷ್ಪನ್ನವಾದ ಯಜ್ಞವನ್ನಾಗಿ ಯಾವಾಗಲೂ (ಜುಷಸ್ವ) ಸೇವಿಸಿ!

ಅಂದರೆ, ನೀವು ನಿಮ್ಮ ಧಾರಣವೇ ಮೊದಲಾದ ಶಕ್ತಿಗಳಿಂದ ವ್ಯವಹಾರವನ್ನೂ, ಹಾಗೂ ಪರಮಾರ್ಥ ರೂಪ ಶ್ರೇಷ್ಠಯಜ್ಞಗಳನ್ನೂ ಪ್ರೀತಿಪೂರ್ವಕವಾಗಿ ಸೇವಿಸಿ!

ಯೇನಾಸ್ಮಾಕಮಭ್ಯುದಯನಿಃಶ್ರೇಯಸ್ಕರಂ ಕ್ರಿಯಾಕಾಂಡಂ ಸಮ್ಯಕ್ ಸಿಧ್ಯೇತ್.

ಇದರಿಂದ, ನಮ್ಮ ಅಭ್ಯುದಯ-ನಿಃಶ್ರೇಯಸ್ಕರವಾದ ಕ್ರಿಯಾಕಾಂಡವು ಉತ್ತಮವಾಗಿ ಸಿದ್ಧಿಸಲಿ!

ಅಂದರೆ, ಇದರಿಂದ ನಮಗೆ ಎಲ್ಲಾ ಸುಖಗಳೂ ದೊರಕುತ್ತಿರಲಿ!

(ಯತಿ ತೇ) ಯೇ ಯಾವಂತಃ ಪರೋಕ್ಷಾ ವಿದ್ಯಮಾನಾ ವಿದ್ವಾಂಸಃ ಸಂತಿ ;

(ಯತಿ ತೇ) ಯಾರು, ಎಷ್ಟು ಪರೋಕ್ಷದಲ್ಲಿರುವ ವಿದ್ವಾಂಸರಾಗಿರುತ್ತಾರೋ ;

ಅಂದರೆ, ಯಾರು ಈ ಜಗತ್ತಿನಲ್ಲಿ ವಿದ್ಯಮಾನ ರಾಗಿರುವ [ವಿದ್ವಾಂಸ]ರಾಗಿರುತ್ತಾರೋ ;

ತಾನಸ್ಮಾನ್ ಪ್ರಾಪಯ ॥ ೧೭ ॥

ಅವರನ್ನು ನಮ್ಮ ಬಳಿಗೆ ಕರೆತನ್ನಿ! [೧೭]

ಹಿಂದಿನ-ಮುಂದಿನ ವಿಜ್ಞಾನಿಪಿತೃಗಳಿಗೆ ನಮಸ್ಕಾರ!

[ಋಷಿಃ_ ಶಂಖಃ ; ದೇವತಾ_ ಪಿತರಃ ; ಛಂದಃ_ ಸ್ವರಾಟ್ ಪಂಕ್ತಿಃ ; ಸ್ವರಃ_ ಪಂಚಮಃ]

ಇದಂ ಪಿತೃಭ್ಯೋ ನಮೋಽ ಅಸ್ತ್ವದ್ಯ
ಯೇ ಪೂರ್ವಾಸೋ ಯಽ ಉಪರಾಸ ಈಯುಃ ।
ಯೇ ಪಾರ್ಥಿವೇ ರಜಸ್ಯಾ ನಿಷತ್ತಾ
ಯೇ ವಾ ನೂನಗ್ಂ ಸುವೃಜನಾಸು ವಿಕ್ಷು ॥ ೧೮ ॥

[ಯಜುರ್ವೇದೇ ಅ. ೧೯, ಮಂ. ೬೮]

[ಅರ್ಥ:_ "ಯಾವ [ಪಿತೃಗಳು] ಹಿಂದಿನವರಾಗಿದ್ದಾರೋ, ಯಾರು ಮುಂದಿನವರಾಗಿದ್ದಾರೋ, ಯಾರು ಭೂಗರ್ಭವಿದ್ಯೆ, ಹಾಗೂ ದ್ಯುಲೋಕವಿದ್ಯೆಗಳಲ್ಲಿ ನಿಷ್ಣಾತರಾಗಿದ್ದಾರೋ, ಅಥವಾ ಯಾರು ನಿಶ್ಚಯವಾಗಿ ಉತ್ತಮ ಬಲಶಾಲಿಗಳಾದ ಪ್ರಜೆಗಳಲ್ಲಿ [ಅಧ್ಯಕ್ಷರಾಗಿ] ಇದ್ದಾರೋ, ಆ ಪಿತೃಗಳಿಗೆ ಇಂದು ಈ ನಮಸ್ಕಾರ ಸಲ್ಲಲಿ! "

(ಯಜುರ್ವೇದ: ೧೯. ೬೮)]

ಭಾಷ್ಯಮ್_

(ಇದಂ ಪಿತೃಭ್ಯಃ) ಯೇ ಪಿತರೋಽದ್ಯೇದಾನೀ-ಮಸ್ಮತ್ಸಮೀಪೇಽಧ್ಯಯನಾಧ್ಯಾಪನೇ ಕರ್ಮಣಿ ವರ್ತ್ತಂತೇ ;

(ಪೂರ್ವಾಸಃ) ಪೂರ್ವಮಧೀತ್ಯ ವಿದ್ವಾಂಸಃ ಸಂತಿ ;

(ಯೇ ಪಾರ್ಥಿವೇ ರಜಸಿ) ಯೇ ಚ ಪೃಥಿವೀ ಸಂಬಂಧಿಭೂಗರ್ಭವಿದ್ಯಾಯಾಂ ;

ಭಾಷ್ಯ_

(ಇದಂ ಪಿತೃಭ್ಯಃ) (ಯೇ) ಯಾವ ಪಿತೃಗಳು (ಅದ್ಯ) ಇಂದು ನಮ್ಮ ಸಮೀಪದಲ್ಲಿ ಅಧ್ಯಯನ-ಅಧ್ಯಾಪನ ಕರ್ಮದಲ್ಲಿ ನಿರತರಾಗಿದ್ದಾರೋ ;

(ಪೂರ್ವಾಸಃ) ಮೊದಲೂ ಅಧ್ಯಯನ ಮಾಡಿ, ವಿದ್ವಾಂಸರಾಗಿದ್ದಾರೋ ;

ಅಂದರೆ, ಮೊದಲೂ ತಾವು ವಿದ್ವಾಂಸರಾಗಿರುತ್ತಾರೋ;

(ಯೇ ಉಪರಾಸಃ) ಯಾರು ನಂತರ, ನಮಗೂ ಕೂಡ, ವಿದ್ಯೆಯನ್ನು ಹೇಳಿಕೊಡುವವರಾಗಿರುತ್ತಾರೋ ;

ಅಥವಾ ಯಾರು ವಿರಕ್ತರೂ, ಹಾಗೂ ಸಂನ್ಯಾಸಿಗಳೂ ಆಗಿ, ಸರ್ವತ್ರ ವಿಚರಿಸುತ್ತಾ, ಉಪದೇಶ ಮಾಡುತ್ತಾರೋ ;

(ಯೇ ಪಾರ್ಥಿವೇ) ಯಾರು 'ಪಾರ್ಥಿವ', ಎಂದರೆ ಪೃಥಿವಿಗೆ ಸಂಬಂಧಿಸಿದ ಭೂಗರ್ಭವಿದ್ಯೆಯಲ್ಲಿ, ಹಾಗೂ (ರಜಸಿ) ಸೂರ್ಯಾದಿ ಲೋಕಗಳ ವಿದ್ಯೆಯಲ್ಲಿ;

(ಆ ನಿಷತ್ತಾಃ) ಆ ಸಮಂತಾನ್ನಿಷಣ್ಣಾಃ ಸಂತಿ ; (ಆ ನಿಷತ್ತಾಃ) ಸಂಪೂರ್ಣ ನಿಷ್ಣಾತರಾಗಿದ್ದಾರೋ ;

(ಯೇ ವಾ ನೂನಗ್ಂ ಸು[ವೃಜನಾಸು ವಿಕ್ಷು]) ಯೇ ಚ ಸುಷ್ಠುಬಲಯುಕ್ತಾಸು ಪ್ರಜಾ[ಸು]; (ಯೇ ವಾ ನೂನಗ್ಂ ಸುವೃಜನಾಸು ವಿಕ್ಷು) ಮತ್ತು ಯಾರು ನಿಶ್ಚಯವಾಗಿ ಉತ್ತಮ ಬಲಯುಕ್ತರಾದ ಪ್ರಜೆಗಳಲ್ಲಿ ;

ಸಭಾಧ್ಯಕ್ಷಾಃ ಸಭಾಸದೋ ಭೂತ್ವಾ ; ಸಭಾಧ್ಯಕ್ಷರೂ, [ಹಾಗೂ] ಸಭಾಸದರೂ ಆಗಿ ;

ನ್ಯಾಯಾಧೀಶತ್ವಾದಿಕರ್ಮಣೇಽಧಿಕೃತಾಃ ಸಂತಿ ; ನ್ಯಾಯಾಧೀಶತ್ವ ಮೊದಲಾದ ಕರ್ಮಗಳಲ್ಲಿ ಅಧಿಕಾರಿಗಳಾಗಿ ಮಾಡಲ್ಪಟ್ಟಿದ್ದಾರೋ ;

ಅಂದರೆ, ಯಾರು ನಿಶ್ಚಯಪೂರ್ವಕವಾಗಿ, ಪ್ರಜೆಗಳ ಹಿತದಲ್ಲಿ ಉದ್ಯತರಾಗಿತ್ತಾರೋ, ಮತ್ತು ಉತ್ತಮ ಸೇನೆಗಳ ಮಧ್ಯೆ ಮಹಾಚತುರರಾಗಿರುತ್ತಾರೋ ;

ತೇ ಚಾಸ್ಮಾನ್ (ಈಯುಃ) ಪ್ರಾಪ್ನುಯುಃ . ಅವರು ನಮ್ಮನ್ನು (ಈಯುಃ) ಸ್ವೀಕರಿಸಲಿ!

ಇತ್ಥಂಭೂತೇಭ್ಯಃ ಪಿತೃಭ್ಯೋಽಸ್ಮಾಕಮಿದಂ ಸತತಂ (ನಮೋಽಸ್ತು) ॥ ೧೮ ॥ ಈ ರೀತಿಯಲ್ಲಿರುವ (ಪಿತೃಭ್ಯಃ) ಪಿತೃಗಳಿಗೆ ನಮ್ಮ (ಇದಮ್) ಈ ನಿರಂತರವಾದ (ನಮಃ ಅಸ್ತು) ನಮಸ್ಕಾರವು ಸಲ್ಲಲಿ!

ಅಂದರೆ, ನಾವು ಆ ಎಲ್ಲಾ ಪಿತೃಗಳಿಗೆ ನಮಸ್ಕಾರವನ್ನು ಏಕೆ ಮಾಡುತ್ತೇವೆಂದರೆ, ಅವರು ಯಾವಾಗಲೂ ನಮ್ಮ ಉನ್ನತಿಯನ್ನು ಮಾಡುತ್ತಿರಲಿ! [೧೮]

ಇಚ್ಛಿಸುತ್ತಿರುವ ಪಿತೃಗಳನ್ನು ಇಚ್ಛಿಸೋಣ!

[ಋಷಿಃ_ ಶಂಖಃ ; ದೇವತಾ_ ಪಿತರಃ ; ಛಂದಃ_ ನಿಚೃತ್ ತ್ರಿಷ್ಟುಪ್ ; ಸ್ವರಃ_ ಧೈವತಃ]

ಉಶಂತಸ್ತ್ವಾ ನಿ ಧೀಮಹ್ಯುಶಂತಃ ಸಮಿಧೀಮಹಿ ।

ಉಶನ್ನುಶತಽ ಆ ವಹ ಪಿತ್ಞೂನ್ ಹವಿಷೇಽಅತ್ತವೇ ॥ ೧೯ ॥

[ಯಜುರ್ವೇದೇ ಅ. ೧೯, ಮಂ. ೭೦]

[ಅರ್ಥಃ_" ಇಚ್ಛಿಸುತ್ತಾ ನಾವು ನಿನ್ನನ್ನು ಸ್ಥಾಪಿಸುತ್ತೇವೆ! ಇಚ್ಛಿಸುತ್ತಾ ನಾವು [ನಿನ್ನನ್ನು] ಪ್ರಕಾಶಿಸುತ್ತೇವೆ! ಆದಾನ-ಪ್ರದಾನಗಳ ಭೋಗಕ್ಕಾಗಿ, ಇಚ್ಛಿಸುತ್ತಿರುವ ಪಿತೃಗಳನ್ನು ಇಚ್ಛಿಸುತ್ತಾ ಎಲ್ಲ ಕಡೆಯಿಂದ ಬರಮಾಡು!"

(ಯಜುರ್ವೇದಃ ೧೯. ೭೦)]

ಭಾಷ್ಯಮ್_

(ಉಶಂತಸ್ತ್ವಾ ನಿಧೀಮಹಿ) ಹೇ ಪರಮೇಶ್ವರ! ವಯಂ ತ್ವಾಂ ಕಾಮಯಾಮಾನಾ ಇಷ್ಟತ್ವೇನ ಹೃದಯಾಕಾಶೇ, ನ್ಯಾಯಾಧೀಶತ್ವೇನ ರಾಷ್ಟ್ರೇ ಸದಾ ಸ್ಥಾಪಯಾಮಃ.

(ಉಶಂತಃ ಸಮಿಧೀಮಹಿ) ಹೇ ಜಗದೀಶ್ವರ! ತ್ವಾಂ ಶೃಣ್ವಂತಃ, ಶ್ರಾವಯಂತಃ ಸಮ್ಯಕ್ ಪ್ರಕಾಶಯೇಮಹಿ.

ಕಸ್ಮೈ ಪ್ರಯೋಜನಾಯೇತ್ಯತ್ರಾಹ_

(ಹವಿಷೇ ಅತ್ತವೇ) ಸದ್ವಿದ್ಯಾಗ್ರಹಣಾಯ ತೇಭ್ಯೋ ಧನಾದ್ಯುತ್ತಮಪದಾರ್ಥದಾನಾಯಾನಂದ-ಭೋಗಾಯ ಚ;

(ಉಶನ್ನುಶತ ಆವಹ ಪಿತ್ಕೂನ್) ಸತ್ಯೋ-ಪದೇಶವಿದ್ಯಾಕಾಮಯಮಾನಾನ್ (ಪಿತ್ಕೂನ್) ಕಾಮಯಮಾನಸ್ಸಂಸ್ತ್ವಮಸ್ಮಾನ್ ಆವಹಾಽಮಂತಾತ್ ಪ್ರಾಪಯ ॥ ೧೯ ॥

ಭಾಷ್ಯ_

(ಉಶಂತಃ ತ್ವಾ ನಿಧೀಮಹಿ) ಹೇ ಪರಮೇಶ್ವರ! ಇಚ್ಛಾಪೂರ್ವಕವಾಗಿರುವ ನಾವು ನಿಮ್ಮನ್ನು ಇಷ್ಟತ್ವದಿಂದ ಹೃದಯಾಕಾಶದಲ್ಲಿಯೂ, [ಹಾಗೂ] ನ್ಯಾಯಾಧೀಶತ್ವ ದಿಂದ ರಾಷ್ಟ್ರದಲ್ಲಿಯೂ ಯಾವಾಗಲೂ ಸ್ಥಾಪಿಸುತ್ತೇವೆ.

ಅಂದರೆ, ನಾವು ನಿಮ್ಮ ಪ್ರಾಪ್ತಿಯ ಇಚ್ಛೆಯನ್ನು ಮಾಡಿ, ನಿಮ್ಮನ್ನು ನಮ್ಮ ಹೃದಯದಲ್ಲಿ **'ನಿಹಿತ'**, ಎಂದರೆ ಸ್ಥಾಪಿಸುತ್ತೇವೆ!

(ಉಶಂತಃ ಸಮಿಧೀಮಹಿ) ಹೇ ಜಗದೀಶ್ವರ! ನಿಮ್ಮನ್ನು ಆಲಿಸುತ್ತಾ, ಆಲಿಸಿಸುತ್ತಾ ನಾವು ಉತ್ತಮ ರೀತಿಯಲ್ಲಿ ಪ್ರಕಾಶ ಪಡಿಸೋಣ!

ಅಂದರೆ, ನಾವು ನಿಮ್ಮನ್ನೇ ಸರ್ವತ್ರ ಪ್ರಕಾಶ ಪಡಿಸುತ್ತಿರೋಣ!

ಯಾವ ಪ್ರಯೋಜನಕ್ಕಾಗಿ? ಎಂದರೆ, ಇದಕ್ಕೆ ಉತ್ತರ ಹೇಳಲಾಗುತ್ತದೇನೆಂದರೆ_

(ಹವಿಷೇ ಅತ್ತವೇ) ಅವರಿಂದ ಸದ್ವಿದ್ಯೆಯ ಗ್ರಹಣಕ್ಕಾಗಿಯೂ, ಮತ್ತು ಅವರಿಗೆ ಧನವೇ ಮೊದಲಾದ ಉತ್ತಮ ಪದಾರ್ಥಗಳನ್ನು ಕೊಡುವುದಕ್ಕಾಗಿಯೂ, ಹಾಗೂ ಆನಂದವನ್ನು ಭೋಗಿಸುವುದಕ್ಕಾಗಿಯೂ;

ಅಂದರೆ, ನಾವು ವಿದ್ಯಾಗ್ರಹಣಕ್ಕಾಗಿ ಅವರ ಸೇವೆಯಲ್ಲಿ ಸ್ಥಿರರಾಗಿರಲೆಂದೂ;

(ಉಶತಃ) ಸತ್ಯದ ಉಪದೇಶವನ್ನೂ, ಹಾಗೂ ವಿದ್ಯೆಯನ್ನೂ ಇಚ್ಛಿಸುತ್ತಿರುವ ನಮ್ಮ ಬಳಿಗೆ, (ಉಶನ್) ಇಚ್ಛಿಸುತ್ತಾ ಇರುವ ನೀವು (ಪಿತ್ಕೂನ್) ಪಿತೃಗಳನ್ನು (ಆವಹ) ಎಲ್ಲ ಕಡೆಯಿಂದ ಬರಮಾಡಿ!

ಅಂದರೆ, ನಮ್ಮ ಕಲ್ಯಾಣದ ಪ್ರಯೋಜನಕ್ಕಾಗಿ, ಮೊದಲು ಹೇಳಿದ ಪಿತೃಗಳನ್ನು ನಿತ್ಯವೂ ಭೇಟಿಮಾಡಿಸಿ!

[೧೯]

ಯೋಗ್ಯವಾದ ಹಿರಿಯರಿಗೇ ಸತ್ಕಾರ!

[ಋಷಿಃ_ ಪ್ರಜಾಪತಿಃ ; ದೇವತಾ_ ಪಿತರಃ ; ಛಂದಃ_ ನಿಚೃದಷ್ಟಿತ್ರಿಷ್ಟುಪ್ ; ಸ್ವರಃ_ ಮಧ್ಯಮಃ]

ಪಿತೃಭ್ಯಃ ಸ್ವಧಾಯಿಭ್ಯಃ ಸ್ವಧಾ ನಮಃ ಪಿತಾಮಹೇಭ್ಯಃ
ಸ್ವಧಾಯಿಭ್ಯಃ ಸ್ವಧಾ ನಮಃ ಪ್ರಪಿತಾಮಹೇಭ್ಯಃ
ಸ್ವಧಾಯಿಭ್ಯಃ ಸ್ವಧಾ ನಮಃ । ಅಕ್ಷನ್ ಪಿತರೋಽ-
ಮೀಮದಂತ ಪಿತರೋಽತೀತೃಪಂತ ಪಿತರಃ ಪಿತರಃ
ಶುಂಧಧ್ವಮ್ ॥ ೨೦ ॥

[ಯಜುರ್ವೇದೇ ಅ. ೧೯, ಮಂ. ೩೬]

[ಅರ್ಥ:_ "ಅನ್ನವನ್ನು ಗ್ರಹಣ ಮಾಡಲು ಯೋಗ್ಯರಾದ ಪಿತೃಗಳಿಗೆ ಅನ್ನವನ್ನು ಕೊಡುತ್ತೇವೆ! ತಮ್ಮ ಧಾರಣ ಮಾಡಿಕೊಳ್ಳಲು ಸಮರ್ಥರಾದ ಪಿತಾಮಹರಿಗೆ ಧಾರಣಪೂರ್ವಕವಾಗಿ ಸತ್ಕರಿಸುತ್ತೇವೆ! ತಮ್ಮ ಸೇವೆಯನ್ನು ಮಾಡಿಕೊಳ್ಳಬಲ್ಲ ಪ್ರಪಿತಾಮಹರಿಗೆ ಸೇವೆ ಸಲ್ಲಿಸುತ್ತೇವೆ! ಹೇ ಪಿತೃಗಳೇ ಭುಂಜಿಸಿರಿ! ಹೇ ಪಿತೃಗಳೇ! ಆನಂದಿಸಿರಿ! ಹೇ ಹಿರಿಯರೇ! ತೃಪ್ತರಾಗಿರಿ! ಹೇ ರಕ್ಷಕರೇ! ಪವಿತ್ರಮಾಡಿರಿ!"

(ಯಜುರ್ವೇದಃ ೧೯. ೩೬)]

ಭಾಷ್ಯಮ್_

(ಪಿತೃಭ್ಯಃ.) ಸ್ವಾಂ ಸ್ವಕೀಯಾಮಮೃತಾಖ್ಯಾಂ ಮೋಕ್ಷವಿದ್ಯಾಂ ಕರ್ತುಂ ಶೀಲಂ ಯೇಷಾಂ ;

ತೇಭ್ಯೋ ವಸುಸಂಜ್ಞಕೇಭ್ಯೋ ವಿದ್ಯಾ-ಪ್ರದಾತೃಭ್ಯೋ ಜನಕೇಭ್ಯಶ್ಚ;

(ಸ್ವಧಾ.) ಅನ್ನಾದ್ಯುತ್ತಮವಸ್ತು ದದ್ಮಃ.

ಭಾಷ್ಯ_

(ಸ್ವಧಾಯಿಭ್ಯಃ) ತಮ್ಮ 'ಅಮೃತ', ಎಂಬ ಹೆಸರಿನ ಮೋಕ್ಷವಿದ್ಯೆಯನ್ನು ಸಾಧಿಸಿಕೊಳ್ಳುವ ಸ್ವಭಾವವು ಯಾರದಾಗಿದೆಯೋ ;

ಆ 'ವಸು', ಎಂಬ ಹೆಸರಿನವರಿಗೂ, ಹಾಗೂ (ಪಿತೃಭ್ಯಃ) ವಿದ್ಯಾಪ್ರದಾತೃಗಳಾದ ಜನಕರಿಗೂ;

(ಸ್ವಧಾ) ಅನ್ನ ಮೊದಲಾದ ಉತ್ತಮ ಪದಾರ್ಥವನ್ನು (ನಮಃ) ಕೊಡುತ್ತೇವೆ!

ಪಿತೃ-ಪಿತಾಮಹ-ಪ್ರಪಿತಾಮಹರ ಯೋಗ್ಯತೆ

ಯೇ ಚ ಚತುರ್ವಿಂಶತಿವರ್ಷಪರ್ಯಂತೇನ ಬ್ರಹ್ಮಚರ್ಯೇಣ ವಿದ್ಯಾಮಧೀತ್ಯಾಧ್ಯಾಪಯಂತಿ ತೇ 'ವಸು'ಸಂಜ್ಞಕಾಃ.*

ಯಾರು ಇಪ್ಪತ್ತನಾಲ್ಕು ವರ್ಷ [ವಯಸ್ಸಿನ] ತನಕ ಬ್ರಹ್ಮಚರ್ಯದಿಂದ ವಿದ್ಯೆಯನ್ನು ಅಧ್ಯಯನ ಮಾಡಿ, ಅಧ್ಯಾಪನ ಮಾಡುತ್ತಾರೋ, ಅವರು 'ವಸು', ಎಂಬ ಹೆಸರಿನ ['ಪಿತೃ'] ಎನಿಸುತ್ತಾರೆ.

* 'ಪಿತರಃ' ಇತ್ಯಧ್ಯಾಹಾರಃ ಕರ್ತವ್ಯಃ _ಅನು.

ಅಂದರೆ, ಇಪ್ಪತ್ತನಾಲ್ಕು ವರ್ಷಕಾಲ ಬ್ರಹ್ಮಚರ್ಯಾಶ್ರಮದಿಂದ ವಿದ್ಯೆಯನ್ನು ಓದಿ, ಎಲ್ಲರಿಗೂ ಓದಿಸುತ್ತಾರೋ, ಆ ಪಿತೃಗಳಿಗೆ ನಮ್ಮ ನಮಸ್ಕಾರ!

(ಪಿತಾಮಹೇಭ್ಯಃ) ಯೇ ಚತುಶ್ಚತ್ವಾರಿಂಶದ್ವರ್ಷ-ಪರ್ಯಂತೇನ ಬ್ರಹ್ಮಚರ್ಯೇಣ ವಿದ್ಯಾಂ ಪಠಿತ್ವಾ ಪಾಠಯಂತಿ ತೇ* ಪಿತಾಮಹಾಃ.

(ಪಿತಾಮಹೇಭ್ಯಃ) ಯಾರು ನಲವತ್ತನಾಲ್ಕು ವರ್ಷ (ವಯಸ್ಸಿನ) ತನಕ ಬ್ರಹ್ಮಚರ್ಯದಿಂದ ವಿದ್ಯೆಯನ್ನು ಓದಿ, [ಇತರರಿಗೆ] ಓದಿಸುತ್ತಾರೋ, ಅವರು **'ಪಿತಾಮಹರು'**, ಎನಿಸುತ್ತಾರೆ.

ಅಂದರೆ, ಯಾರು ನಲವತ್ತನಾಲ್ಕು ವರ್ಷದ ತನಕ ಬ್ರಹ್ಮಚರ್ಯಾಶ್ರಮದಿಂದ, ವೇದಾದಿ ವಿದ್ಯೆಗಳನ್ನು ಓದಿ, ಎಲ್ಲರ ಉಪಕಾರಿಗಳಾಗಿರುತ್ತಾರೋ, ಹಾಗೂ ಅಮೃತ ರೂಪ ಜ್ಞಾನವನ್ನು ಕೊಡುವವರಾಗಿರುತ್ತಾರೋ, [ಆ **'ಪಿತಾಮಹ'**ರಿಗೆ ನಮ್ಮ ನಮಸ್ಕಾರವಿರಲಿ!]

(ಪ್ರಪಿತಾಮಹೇಭ್ಯಃ) ಯೇಽಷ್ಟಾಚತ್ವಾರಿಂಶದ್ವರ್ಷ-ಪ್ರಮಿತೇನ ಬ್ರಹ್ಮಚರ್ಯೇಣ ವಿದ್ಯಾಪಾರಾವಾರಂ ಪ್ರಾಪ್ಯಾಧ್ಯಾಪಯಂತಿ ತ 'ಆದಿತ್ಯಾ'ಖ್ಯಾ ;

(ಪ್ರಪಿತಾಮಹೇಭ್ಯಃ) ಯಾರು ನಲವತ್ತೆಂಟು ವರ್ಷದ ಅವಧಿಯ ಬ್ರಹ್ಮಚರ್ಯದ ಮೂಲಕ ವಿದ್ಯೆಯ ಪಾರಾವಾರವನ್ನು ಹೊಂದಿ, ಅಧ್ಯಾಪನೆ ಮಾಡುತ್ತಾರೋ, ಅವರು **'ಆದಿತ್ಯ'**, ಎಂಬ ಹೆಸರಿನವರಾಗಿರುತ್ತಾರೆ.

ಅರ್ಥಾತ್ ಸತ್ಯವಿದ್ಯಾದ್ಯೋತಕಾಃ ;

ಎಂದರೆ, ಸತ್ಯವಿದ್ಯೆಯನ್ನು ಪ್ರಕಾಶಪಡಿಸುವ [**'ಪ್ರಪಿತಾಮಹರು'**,] ಎನಿಸುತ್ತಾರೆ.

ಅಂದರೆ, ಯಾರು ನಲವತ್ತೆಂಟು ವರ್ಷಗಳ ತನಕ ಜಿತೇಂದ್ರಿಯತ್ವದೊಡನೆ ಸಂಪೂರ್ಣವಿದ್ಯೆಗಳನ್ನು ಕಲಿತು, ಹಸ್ತಕ್ರಿಯೆಗಳ ಮೂಲಕವಾಗಿಯೂ ಕೂಡ,** ಎಲ್ಲಾ ವಿದ್ಯೆಗಳ ದೃಷ್ಟಾಂತಗಳನ್ನೂ ಸಾಕ್ಷಾತ್ತಾಗಿ ನೋಡಿ , ತೋರಿಸುತ್ತಾರೋ ; ಮತ್ತು ಎಲ್ಲರನ್ನೂ ಸುಖಿಗಳನ್ನಾಗಿಸುವುದಕ್ಕಾಗಿ ಯಾವಾಗಲೂ ಪ್ರಯತ್ನ ಮಾಡುತ್ತಿರುತ್ತಾರೋ, ಅವರು [**'ಪ್ರಪಿತಾಮಹರು'**, ಎನಿಸುತ್ತಾರೆ.]

(ನಮಃ) ತೇಭ್ಯೋಽಸ್ಮಾಕಂ ಸತತಂ ನಮೋಽಸ್ತು.

(ನಮಃ) ಅವರುಗಳಿಗೆ ನಮ್ಮ ನಿರಂತರವಾದ ನಮಸ್ಕಾರವಿರಲಿ! +

ಅಂದರೆ, ಅವರಿಗೆ ಗೌರವವನ್ನೂ ಕೂಡ, ಸಲ್ಲಿಸುವುದು ಎಲ್ಲರಿಗೂ ಉಚಿತವಾಗಿರುತ್ತದೆ!

* 'ರುದ್ರಸಂಜ್ಞಕಾಃ' ಇತ್ಯಧ್ಯಾಹಾರಃ ಕರ್ತವ್ಯಃ _ಅನು.

** ಎಂದರೆ, ಪ್ರಯೋಗಾತ್ಮಕವಾಗಿ (practically) , ಅಥವಾ ಹಸ್ತಕೌಶಲಶಿಲ್ಪವಿದ್ಯೆಗಳೊಡನೆ _ಅನು.

+ ಭಾಷ್ಯದಲ್ಲಿ ಪಿತೃಗಳಿಗೆ ಬರೆದಂತೆ, **ಪಿತಾಮಹ-ಪ್ರಪಿತಾಮಹ**ರಿಗೂಕೂಡ, ಮಂತ್ರಾರ್ಥವನ್ನು ಊಹಿಸಿಕೊಳ್ಳಬೇಕು _ಅನು.

ವಸು-ರುದ್ರ-ಆದಿತ್ಯ ಎಂಬ ಪಿತೃಗಳ ಯೋಗ್ಯತೆ

ಅತ್ರ_

ಈ ವಿಷಯದಲ್ಲಿ_

"ಪುರುಷೋ ವಾವ ಯಜ್ಞಃ ॥"

[ಛಾಂದೋಗ್ಯೋಪನಿಷದಿ ೩. ೧೬]

[ಅರ್ಥಃ_ "ಪುರುಷನೇ ನಿಶ್ಚಯವಾಗಿ 'ಯಜ್ಞ', ಎನಿಸುತ್ತಾನೆ."

(ಛಾಂದೋಗ್ಯೋಪನಿಷತ್ ೩. ೧೬)]

ಇತ್ಯಾಕಾರೇಣ ಛಾಂದೋಗ್ಯೋಪನಿಷತ್-ಪ್ರಮಾಣೇನ ವಿದುಷಾಂ 'ವಸುರುದ್ರಾದಿತ್ಯ'ಸಂಜ್ಞಾ ವೇದಿತವ್ಯಾಃ .

ಎಂಬ ಪಾಠದಂತೆ, **ಛಾಂದೋಗ್ಯೋಪನಿಷತ್ತಿನ** ಪ್ರಮಾಣದಿಂದ, ವಿದ್ವಾಂಸರಿಗೆ **'ವಸು-ರುದ್ರ-ಆದಿತ್ಯ'**, ಎಂಬ ಹೆಸರುಗಳಿರುತ್ತವೆ, ಎಂದು ತಿಳಿದುಕೊಳ್ಳಬೇಕು!

ಅಂದರೆ, ಅಲ್ಲಿ ಇವನ್ನು ನೋಡಿಕೊಳ್ಳಿರಿ!

[ಹೇಗೆಂದರೆ_]

ಪಿತೃಗಳಿಗೆ **'ವಸು'**, ಎಂಬ ಹೆಸರಿರುತ್ತದೆ. ಏಕೆಂದರೆ, ಅವರು ಎಲ್ಲಾ ವಿದ್ಯೆಗಳಲ್ಲೂ ವಾಸ ಮಾಡುವುದಕ್ಕಾಗಿ ಯೋಗ್ಯರಾಗಿರುತ್ತಾರೆ!

ಹಾಗೆಯೇ, ಪಿತಾಮಹರ ಹೆಸರು **'ರುದ್ರ'**, ಎಂದಿರುತ್ತದೆ. ಏಕೆಂದರೆ, ಅವರು **'ವಸು'**, ಎಂಬ ಹೆಸರಿನ ಪಿತೃಗಳಿಗಿಂತ ಎರಡರಷ್ಟು, ಅಥವಾ ನೂರರಷ್ಟು ವಿದ್ಯೆಯನ್ನೂ, ಹಾಗೂ ಬಲವನ್ನೂ ಉಳ್ಳವರಾಗಿರುತ್ತಾರೆ!

ಮತ್ತು ಪ್ರಪಿತಾಮಹರಿಗೆ **'ಆದಿತ್ಯ'**, ಎಂಬ ಹೆಸರಿರುತ್ತದೆ. ಏಕೆಂದರೆ, ಅವರು ಎಲ್ಲಾ ವಿದ್ಯೆಗಳಲ್ಲೂ ಮತ್ತು ಎಲ್ಲಾ ಗುಣಗಳಲ್ಲೂ **ಸೂರ್ಯನಿಗೆ** ಸಮಾನವಾಗಿ ಪ್ರಕಾಶಮಾನರಾಗಿ, ಎಲ್ಲಾ ವಿದ್ಯೆಗಳನ್ನೂ, ಹಾಗೂ ಎಲ್ಲಾ ಜನರನ್ನೂ ಪ್ರಕಾಶಮಾನ ಮಾಡುತ್ತಾರೆ!

ಈ ಮೂವರ ಹೆಸರು 'ವಸು', 'ರುದ್ರ' ಮತ್ತು 'ಆದಿತ್ಯ', ಎಂದು ಏಕಿದೆಯೆಂದರೆ, ಅವರು ಮನುಷ್ಯರಲ್ಲಿ ಯಾವ ಪ್ರಕಾರದ ದುಷ್ಟತೆಯನ್ನೂ ಇರಗೊಡುವುದೇ ಇಲ್ಲ!

ಪಿತೃಸತ್ಕಾರದ ಪ್ರಯೋಜನಗಳು

(ಅಕ್ಷನ್ ಪಿತರಃ.) ಹೇ ಪಿತರಃ! ಭವಂತೋಽಕ್ಷನ್ನತ್ರೈವ ಭೋಜನಾಚ್ಛಾದಿಕಂ ಕುರ್ವೀರನ್.

(ಅಕ್ಷನ್ ಪಿತರಃ) ಓ ಪಿತೃಜನರೇ! ತಾವು ಇಲ್ಲೇ ಭೋಜನ-ನಿವಾಸ ಮೊದಲಾದುವನ್ನು ಮಾಡಿರಿ!

ಅಂದರೆ, ನೀವು ವಿದ್ಯಾರೂಪ ಯಜ್ಞವನ್ನು ವಿಸ್ತರಿಸಿ, ಸುಖವನ್ನು ಭೋಗಿಸಿರಿ!

'ಅಮೀಮದಂತ ಪಿತರಃ' ಇತಿ ಪೂರ್ವಂ ವ್ಯಾಖ್ಯಾತಮ್.*

'ಅಮೀಮದಂತ ಪಿತರಃ', ಎಂಬುದನ್ನು ಈ ಮೊದಲೇ ವ್ಯಾಖ್ಯಾನ ಮಾಡಲಾಗಿದೆ.*

ಅಂದರೆ, ನಮ್ಮ ಸೇವೆಯಿಂದ ಅತ್ಯಂತ ಪ್ರಸನ್ನರಾಗಿರಿ!

(ಅತೀತೃಪಂತ ಪಿತರಃ.) ಹೇ ಪಿತರೋಽಸ್ಮತ್-ಸೇವಯಾಽಽನಂದಿತಾ ಭೂತ್ವಾ ತೃಪ್ತಾ ಭವತ.

(ಅತೀತೃಪಂತ ಪಿತರಃ.) ಹೇ ಪಿತೃಜನರೇ! ನಮ್ಮ ಸೇವೆಯಿಂದ ಆನಂದಿತರಾಗಿದ್ದು, ತೃಪ್ತರಾಗಿರಿ!

ಅಂದರೆ, ನಮ್ಮ ಸೇವೆಯಿಂದ ತೃಪ್ತರಾಗಿ, ನಮ್ಮನ್ನೂ ಕೂಡ, ಆನಂದಿತರನ್ನಾಗಿಯೂ, ಮತ್ತು ತೃಪ್ತರನ್ನಾಗಿಯೂ ಮಾಡಿರಿ! ಮತ್ತು ಯಾವ ಪದಾರ್ಥವನ್ನು ನೀವು ಇಚ್ಛಿಸುತ್ತೀರೋ, ಅದಕ್ಕೆ ಅಪ್ಪಣೆ ಕೊಡಿ! ಅಥವಾ ನಾವು ನಿಮ್ಮ ಸೇವೆಯಲ್ಲಿ ತಪ್ಪು ಮಾಡಿದರೆ, ನೀವು ನಮಗೆ ಅದನ್ನು ತಿಳಿಸಿರಿ!

(ಪಿತರಃ ಶುಂಧಧ್ವಮ್) ಹೇ ಪಿತರಃ! ಯೂಯಮುಪದೇಶೇನಾವಿದ್ಯಾದಿದೋಷವಿನಾಶಾದಸ್ಮಾನ್ ಶುಂಧಧ್ವಂ ಪವಿತ್ರಾನ್ ಕುರುತ ॥ ೨೦ ॥

(ಪಿತರಃ ಶುಂಧಧ್ವಮ್) ಓ ಪಿತೃಜನರೇ! ನೀವು ಉಪದೇಶದಿಂದ ಅವಿದ್ಯೆ ಮೊದಲಾದ ದೋಷಗಳ ವಿನಾಶ ಮಾಡುವುದರ ಮೂಲಕ ನಮ್ಮನ್ನು ಪವಿತ್ರರನ್ನಾಗಿ ಮಾಡಿರಿ!

ಅಂದರೆ, ನಾವು ನಿಮ್ಮ ಜೊತೆ ಸೇರಿಕೊಂಡು, ಸನಾತನ ಪರಮಾತ್ಮನ ಭಕ್ತಿಯನ್ನು ನಮ್ಮ ಶುದ್ಧಿಗಾಗಿ ಪ್ರೇಮದಿಂದ ಮಾಡಲಿ, ಎಂದು ನೀವು ನಮ್ಮನ್ನು ಧರ್ಮೋಪದೇಶದಿಂದಲೂ, ಹಾಗೂ ಸತ್ಯವಿದ್ಯೆಗಳಿಂದಲೂ ಶುದ್ಧರನ್ನಾಗಿ ಮಾಡಿರಿ! [೨೦]

ಪಿತೃಸೇವೆಯಿಂದ ನೂರು ವರ್ಷ ಆಯಸ್ಸು!

[ಋಷಿಃ_ಪ್ರಜಾಪತಿಃ; ದೇವತಾ_ಸರಸ್ವತೀ; ಛಂದಃ_ಭುರಿಗಷ್ಟಿಃ; ಸ್ವರಃ_ಮಧ್ಯಮಃ]

ಪುನಂತು ಮಾ ಪಿತರಃ ಸೋಮ್ಯಾಸಃ ಪುನಂತು ಮಾ ಪಿತಾಮಹಾಃ ಪುನಂತು ಪ್ರಪಿತಾಮಹಾಃ ಪವಿತ್ರೇಣ ಶತಾಯುಷಾ । ಪುನಂತು ಮಾ ಪಿತಾಮಹಾಃ ಪುನಂತು ಪ್ರಪಿತಾಮಹಾಃ ಪವಿತ್ರೇಣ ಶತಾಯುಷಾ ವಿಶ್ವಮಾಯು-ರ್ವ್ಯಶ್ನವೈ ॥ ೨೧ ॥

[ಯಜುರ್ವೇದೇ ಅ.೧೯, ಮಂ.೩೭]

* ಅಸ್ಮಿನ್ನೇವಾಧ್ಯಾಯೇ ೭೭೭ ತಮಂ ಪೃಷ್ಠಂ ದ್ರಷ್ಟವ್ಯಮ್ _ಅನು.

* ಈ ಅಧ್ಯಾಯದಲ್ಲಿಯೇ ಪುಟ ೭೭೭ ನ್ನು ನೋಡಿ. _ಅನು.

[ಅರ್ಥ:_ " ಓ ಶಾಂತಾತ್ಮಾ ಪಿತೃಗಳೇ! ನನ್ನನ್ನು ಪವಿತ್ರ ಮಾಡಿರಿ! ಓ ಪಿತಾಮಹರೇ! ನನ್ನನ್ನು ಪವಿತ್ರ ಮಾಡಿರಿ! ಓ ಪ್ರಪಿತಾಮಹರೇ! ನನ್ನನ್ನು ಪವಿತ್ರವಾದ ನೂರು ವರ್ಷಗಳ ಆಯುಷ್ಯದಿಂದ ಪವಿತ್ರ ಮಾಡಿರಿ! ಓ ಪಿತಾಮಹರೇ! ನನ್ನನ್ನು ಪವಿತ್ರ ಮಾಡಿರಿ! ಓ ಪ್ರಪಿತಾಮಹರೇ! ನನ್ನನ್ನು ಪವಿತ್ರವಾದ ನೂರು ವರ್ಷಗಳ ಆಯುಷ್ಯದಿಂದ ಪವಿತ್ರ ಮಾಡಿರಿ! ನಾನು ಪೂರ್ಣಾಯುಷ್ಯವನ್ನು ಭೋಗಿಸಲಿ!"

(ಯಜುರ್ವೇದ: ೧೯. ೩೭)]

ಭಾಷ್ಯಮ್_

(ಪುನಂತು ಮಾ ಪಿತರಃ) ಭೋ ಪಿತರಃ ಪಿತಾಮಹಾಃ ಪ್ರಪಿತಾಮಹಾಶ್ಚ!

ಭವಂತೋ ಮಾಂ ಮನಃಕರ್ಮವಚನದ್ವಾರಾ ವಾರಂವಾರಂ ಪುನಂತು ;

ಪವಿತ್ರವ್ಯವಹಾರಕಾರಿಣಂ ಕುರ್ವಂತು.

ಕೇನ ಪುನಂತ್ವಿತ್ಯಾಹ_

(ಪವಿತ್ರೇಣ) ಪವಿತ್ರಕರ್ಮಾನುಷ್ಠಾನಕರಣೋಪದೇಶೇನ ;

(ಶತಾಯುಷಾ) ಶತವರ್ಷಪರ್ಯಂತಜೀವನನಿಮಿತ್ತೇನ ಬ್ರಹ್ಮಚರ್ಯೇಣ ಮಾಂ ಪುನಂತು.

ಭಾಷ್ಯ_

(ಪುನಂತು ಮಾ ಪಿತರಃ.) ಓ ಪಿತೃಗಳೇ! ಪಿತಾಮಹರೇ! ಮತ್ತು ಪ್ರಪಿತಾಮಹರೇ!

ಸ್ವಾಮಿ! ತಾವು ನನ್ನನ್ನು ಮನಸ್ಸು-ಕರ್ಮ-ವಚನಗಳ ಮೂಲಕ ಮತ್ತೆ ಮತ್ತೆ, ಪವಿತ್ರ ಮಾಡಿರಿ!

(ಎಂದರೆ,) ಪವಿತ್ರವಾದ ವ್ಯವಹಾರವನ್ನು ಮಾಡುವವನನ್ನಾಗಿ ಮಾಡಿರಿ!

ಅಂದರೆ, (ಸೋಮ್ಯಾಸಃ ಪಿತರಃ) ಯಾರು ಶಾಂತಾತ್ಮರೂ, ಹಾಗೂ ದಯಾಳುಗಳೂ ಆದ ಪಿತೃಜನರಿದ್ದಾರೋ, ಅವರು ನನ್ನನ್ನು ವಿದ್ಯಾದಾನದಿಂದ ಪವಿತ್ರ ಮಾಡಲಿ!

(ಪುನಂತು ಮಾ ಪಿತಾಮಹಾಃ ಪುನಂತು ಪ್ರಪಿತಾಮಹಾಃ) ಇದೇ ರೀತಿಯಲ್ಲಿ, ಪಿತಾಮಹರೂ ಮತ್ತು ಪ್ರಪಿತಾಮಹರೂ ಕೂಡ, [ನನಗೆ] ತಮ್ಮ ಉತ್ತಮ ವಿದ್ಯೆಯನ್ನು ಕಲಿಸಿ, ನನ್ನನ್ನು ಪವಿತ್ರ ಮಾಡಲಿ!

ಯಾವುದರಿಂದ ಪವಿತ್ರ ಮಾಡಬೇಕು? ಎಂಬುದಕ್ಕೆ ಉತ್ತರವನ್ನು ಹೇಳಲಾಗುತ್ತದೇನೆಂದರೆ_

(ಪವಿತ್ರೇಣ) ಪವಿತ್ರವಾದ ಕರ್ಮಗಳ ಆಚರಣೆ ಮಾಡಬೇಕು, ಎಂಬ ಉಪದೇಶದಿಂದ ;

(ಶತಾಯುಷಾ) ನೂರು ವರ್ಷದ ತನಕ* ಜೀವನವನ್ನು [ನಡೆಸಬೇಕು], ಎಂಬ ನಿಮಿತ್ತಪೂರ್ವಕ ವಾದ ಬ್ರಹ್ಮಚರ್ಯದಿಂದ ನನ್ನನ್ನು ಪವಿತ್ರಮಾಡಲಿ!

---

* ಅಭಿವಾದನಶೀಲಸ್ಯ ನಿತ್ಯಂ ವೃದ್ಧೋಪಸೇವಿನಃ ।
ಚತ್ವಾರಿ ತಸ್ಯ ವರ್ಧಂತ ಆಯುರ್ವಿದ್ಯಾ ಯಶೋ ಬಲಮ್ ॥
[ಮನುಸ್ಮೃತಿ: ೨. ೧೨೧]

ಅಂದರೆ, ಅವರ ಶಿಕ್ಷಣವನ್ನು ಆಲಿಸಿ, ಬ್ರಹ್ಮಚರ್ಯವನ್ನು ಧಾರಣ ಮಾಡುವುದರಿಂದ, ನೂರು ವರ್ಷದ ತನಕ ಆನಂದಯುಕ್ತವಾದ ಆಯಸ್ಸು [ನನಗೆ] ಆಗಲಿ!

ಅಗ್ರೇ ಪುನಂತ್ವಿತಿ ಕ್ರಿಯಾತ್ರಯಂ ಯೋಜನೀಯಮ್ ;

ಮುಂದೆ_ 'ಪವಿತ್ರ ಮಾಡಿರಿ', ಎಂದು ಮೂರು ಸಲ ಕ್ರಿಯಾಪದಗಳ ಯೋಜನೆ ಮಾಡಿಕೊಳ್ಳಬೇಕು!*

ಯೇನಾಹಂ (ವಿಶ್ವಮಾಯುರ್ವ್ಯಶ್ನವೈ) ಸಂಪೂರ್ಣಮಾಯುಃ ಪ್ರಾಪ್ನುಯಾಮ್ ॥ ೨೧ ॥

ಇದರಿಂದ, ನಾನು (ವಿಶ್ವಮಾಯುರ್ವ್ಯಶ್ನವೈ) ಸಂಪೂರ್ಣ ಆಯಸ್ಸನ್ನು ಪಡೆದುಕೊಳ್ಳಬಲ್ಲೆನು!

ಈ ಮಂತ್ರದಲ್ಲಿ ಎರಡು ಸಲ ಮಾಡಿರುವ ಪಾಠವು ಕೇವಲ ಆದರಕ್ಕಾಗಿದೆ! [೨೧]

ಈ ಮೊದಲಾದ ಇತರ ಮಂತ್ರಗಳೂ ಕೂಡ, ಇವೇ ವಿಷಯಗಳ ಪುಷ್ಟೀಕರಣೆಗಾಗಿವೆ. ಅವುಗಳೆಲ್ಲದರ ಅರ್ಥವನ್ನೂ ಇದೇ ರೀತಿಯಲ್ಲಿ ಸರ್ವತ್ರ ತಿಳಿದುಕೊಳ್ಳಬೇಕು!

ಮತ್ತು ಎಲ್ಲೆಲ್ಲಿ **ಅಮಾವಾಸ್ಯೆಯಲ್ಲಿ** ಪಿತೃಯಜ್ಞ ಮಾಡುವುದನ್ನು ಬರೆಯಲಾಗಿದೆಯೋ, ಅಲ್ಲಿಯೂ ಕೂಡ, ಇದೇ ಅಭಿಪ್ರಾಯದಿಂದ ; ಎಂದರೆ, ಒಂದು ವೇಳೆ, ನಿತ್ಯವೂ ಅವರ ಸೇವೆಯನ್ನು ಮಾಡಲಾಗದಿದ್ದರೆ, ತಿಂಗಳು-ತಿಂಗಳಲ್ಲಿ, ಎಂದರೆ, ಅಮಾವಾಸ್ಯೆಯಲ್ಲಿ ಮಾಸೇಷ್ಟಿಯಾದಾಗ, ಅದರಲ್ಲಿ ಆ ಜನರನ್ನು ಕರೆದು, ಸತ್ಕಾರವನ್ನು ಅವಶ್ಯವಾಗಿ ಮಾಡಬೇಕು!

ಇತಿ ಪಿತೃಯಜ್ಞಃ ಸಮಾಪ್ತಃ ॥**

ಇಲ್ಲಿಗೆ ಪಿತೃಯಜ್ಞವು ಮುಗಿಯಿತು! **

** ಪಿತೃಯಜ್ಞಸ್ಯ ಕರ್ಮಕಾಂಡಸ್ಯಾರ್ಥಾದೃಪಿತರ್ಪಣಸ್ಯ ಪಿತೃತರ್ಪಣಸ್ಯ ಚ ಮಂತ್ರಾಃ ಸಾರ್ಥಾಃ 'ಸತ್ಯಾರ್ಥಪ್ರಕಾಶೇ' ಕನ್ನಡ-ಸಂಸ್ಕರಣೇ ಚತುರ್ಥೇ ಸಮುಲ್ಲಾಸೇ ೧೭೩ - ೧೭೬ ತಮೇಷು ಪೃಷ್ಠೇಷು ದೃಷ್ಟವ್ಯಾಃ _ಅನು.

* ಪಿತೃಗಳ ಸಂಬಂಧದಲ್ಲಿ_ 'ಪವಿತ್ರ ಮಾಡಿರಿ!', ಎಂದು ಹೇಗೆ ಹೇಳಲಾಗಿದೆಯೋ, ಹಾಗೆಯೇ ಪಿತಾಮಹರ, ಹಾಗೂ ಪ್ರಪಿತಾಮಹರ ಸಂಬಂಧದಲ್ಲಿಯೂ, 'ಪವಿತ್ರ ಮಾಡಿರಿ', ಎಂದು ಮೇಲಿನಂತೆ ಅರ್ಥೈಸಬೇಕು **_ಅನು.**

** ಪಿತೃಯಜ್ಞದ ಕರ್ಮಕಾಂಡ, ಎಂದರೆ **ಋಷಿತರ್ಪಣದ**, ಹಾಗೂ ಪಿತೃತರ್ಪಣದ ಮಂತ್ರಗಳು, ಅವುಗಳ ಅರ್ಥದೊಡನೆ, 'ಸತ್ಯಾರ್ಥಪ್ರಕಾಶ'ದ ಚತುರ್ಥಸಮುಲ್ಲಾಸ ಪುಟ ೧೭೩-೧೭೬ ಗಳಲ್ಲಿ ಕೊಡಲ್ಪಟ್ಟಿವೆ. _ಅನು.

ಅಥ ಚತುರ್ಥೋ ಬಲಿವೈಶ್ಯದೇವಯಜ್ಞಃ

ಈಗ ನಾಲ್ಕನೆಯದಾದ ಬಲಿವೈಶ್ಯದೇವಯಜ್ಞದ ವಿಷಯವನ್ನು ಹೇಳುತ್ತೇವೆ.

ಅಥ ಬಲಿವೈಶ್ವದೇವವಿಧಿರ್ಲಿಖ್ಯತೇ_ — ಈಗ 'ಬಲಿವೈಶ್ವದೇವ',* ಎಂಬ ವಿಧಿಯು ಬರೆಯಲ್ಪಡುತ್ತದೆ_

ಯದನ್ನಂ ಪಕ್ವಮಕ್ಷಾರಲವಣಂ ಭವೇತ್ತೇನೈವ ಬಲಿವೈಶ್ವದೇವಕರ್ಮ ಕಾರ್ಯ್ಯಮ್_ — ಯಾವ ಅನ್ನವು ಪಕ್ವವೂ, ಕ್ಷಾರ-ಲವಣರಹಿತವೂ ಆಗಿರುತ್ತದೋ, ಅದರಿಂದಲೇ ಬಲಿವೈಶ್ವದೇವಕರ್ಮವು ಮಾಡಲ್ಪಡಬೇಕು_

"ವೈಶ್ವದೇವಸ್ಯ ಸಿದ್ಧಸ್ಯ ಗೃಹ್ಯೇऽಗ್ನೌ ವಿಧಿಪೂರ್ವಕಮ್ ।
ಆಭ್ಯಃ ಕುರ್ಯ್ಯಾದ್ ದೇವತಾಭ್ಯೋ ಬ್ರಾಹ್ಮಣೋ ಹೋಮಮನ್ವಹಮ್ ॥೧॥"

[ಮನುಸ್ಮೃತೌ: ಅ. ೩, ಶ್ಲೋ. ೮೪]

[ಅರ್ಥ:_ "ಬ್ರಾಹ್ಮಣನು ಪ್ರತಿದಿನವೂ ಪಾಕಶಾಲೆಯ ಅಗ್ನಿಯಲ್ಲಿ ವೈಶ್ವದೇವಕ್ಕಾಗಿ ಸಿದ್ಧವಾದ [ಅನ್ನದ] ಹೋಮವನ್ನು ಈ ದೇವತೆಗಳಿಗಾಗಿ** ಮಾಡಬೇಕು!"

(ಮನುಸ್ಮೃತಿ: ೩. ೮೪)]

'ಬಲಿವೈಶ್ವದೇವ'ದ ಬಗ್ಗೆ ವೈದಿಕಪ್ರಮಾಣ

ಅತ್ರ ಬಲಿವೈಶ್ವದೇವಕರ್ಮಣಿ ಪ್ರಮಾಣಮ್_ — ಈ ವಿಷಯದಲ್ಲಿ ಬಲಿವೈಶ್ವದೇವಕರ್ಮದ ಬಗ್ಗೆ ಪ್ರಮಾಣವೇನೆಂದರೆ_

[ಋಷಿಃ_ ಭೃಗುಃ ; ದೇವತಾ_ ಅಗ್ನಿಃ ; ಛಂದಃ_ ತ್ರಿಷ್ಟುಪ್ ; ಸ್ವರಃ_ ಧೈವತಃ]

ಅಹರಹರ್ಬಲಿಮಿತ್ತೇ ಹರಂತೋऽ-
ಶ್ವಾಯೇವ ತಿಷ್ಠತೇ ಘಾಸಮಗ್ನೇ ।
ರಾಯಸ್ಪೋಷೇಣ ಸಮಿಷಾ ಮದಂತೋ
ಮಾ ತೇ ಅಗ್ನೇ ಪ್ರತಿವೇಶಾ ರಿಷಾಮ ॥೧॥

[ಅಥರ್ವವೇದೇ ಕಾಂ. ೧೯. ಅನು. ೭, ಮಂ. ೭]

* 'ಬಲಿ', ಎಂದರೆ ಅನ್ನ! 'ವಿಶ್ವದೇವ', ಎಂದರೆ ನಮಗೆ ನಿತ್ಯವೂ ಉಪಕಾರಿಗಳಾಗಿರುವವರು! 'ಬಲಿವೈಶ್ವದೇವ', ಎಂದರೆ, ನಮಗೆ ನಿತ್ಯವೂ ಉಪಕಾರಿಗಳಾದವರಿಗೆ ಸಲ್ಲಬೇಕಾದ ಅನ್ನ! _ಅನು.

** ನಮಗೆ ನಿತ್ಯವೂ ಯಾರಿಂದ ಉಪಕಾರ ಆಗುತ್ತದೋ, ಅವರಿಗೆ 'ದೇವತೆಗಳು', ಎಂದು ಹೆಸರು. _ಅನು.

[ಅರ್ಥ:_ "ಹೇ ಅಗ್ರಣಿಯೇ! ಕುದುರೆಗಾಗಿ ಹುಲ್ಲನ್ನು ಇಡುವಂತೆ, ಪ್ರತಿದಿನವೂ ಶ್ರದ್ಧೆಯಿಂದ ನಿನಗಾಗಿಯೇ ಅನ್ನವನ್ನು ಕೊಡುತ್ತಾ, ನಾವು ಪುಷ್ಟಿಕಾರಕ ಧನದಿಂದ ಆನಂದಿತರಾಗಿ[ರೋಣ!] ಓ ಅಗ್ರಣಿಯೇ! ನಾವು ನಿನಗೆ ಪ್ರತಿಕೂಲರಾಗಿ ಹಿಂಸೆ ಮಾಡದಿರೋಣ!"

(ಅಥರ್ವವೇದ: ೧೯. ೫೫. ೭)]

ನಾವು ಜಗತ್ತಿನ ಪ್ರಾಣಿಗಳನ್ನು ಹಿಂಸಿಸದಿರೋಣ!

ಭಾಷ್ಯಮ್_

(ಅಗ್ನೇ) ಹೇ ಪರಮೇಶ್ವರ! (ತೇ) ತುಭ್ಯಂ ತ್ವದಾಜ್ಞಾಪಾಲನಾರ್ಥಂ (ಇತ್) ಏವ ;

(ತಿಷ್ಠತೇಽಶ್ವಾಯ ಘಾಸಮ್) ಯಥಾಽಶ್ವಸ್ಯಾಗ್ರೇ ಪುಷ್ಕಲಃ ಪದಾರ್ಥಃ ಸ್ಥಾಪ್ಯತೇ ;

(ಇವ) ತಥೈವ ;

(ಅಹರಹಃ) ನಿತ್ಯಂ ಪ್ರತಿ (ಬಲಿಂ ಹರಂತಃ) ಭೌತಿಕಮಗ್ನಿಮತಿಥೀಂಶ್ಚ ಬಲೀನ್ ಪ್ರಾಪಯಂತಃ ;

(ಸಮಿಷಾ) ಸಮ್ಯಗಿಷ್ಯತೇ ಯಾ ಸಾ ಸಮಿಟ್, ತಯಾ ಶ್ರದ್ಧಯಾ ;

(ರಾಯಸ್ಪೋಷೇಣ) ಚಕ್ರವರ್ತ್ತಿರಾಜ್ಯಲಕ್ಷ್ಮ್ಯಾ (ಮದಂತಃ) ಹರ್ಷಂತೋ ವಯಂ ;

ಭಾಷ್ಯ_

(ಅಗ್ನೇ) ಹೇ ಪರಮೇಶ್ವರ! (ತೇ) (ಇತ್) ನಿಮಗಾಗಿಯೇ, ಎಂದರೆ ನಿಮ್ಮ ಆಜ್ಞೆಯ ಪಾಲನೆ ಮಾಡುವ ಪ್ರಯೋಜನಕ್ಕಾಗಿಯೇ ;

(ಅಶ್ವಾಯ ಘಾಸಂ ತಿಷ್ಠತೇ) ಹೇಗೆ ಕುದುರೆಯ ಎದುರಿಗೆ ಪುಷ್ಕಳ ವಸ್ತುವನ್ನು ಇಡಲಾಗುತ್ತದೋ ;

ಅಂದರೆ, ಕುದುರೆಯ ಎದುರಿಗೆ ತಿನ್ನಲು ಯೋಗ್ಯವಾದ ಹುಲ್ಲು, [ಹುರುಳಿ ಮೊದಲಾದ] ಪುಷ್ಕಳ ಪದಾರ್ಥಗಳನ್ನು ಇಡುತ್ತೇವೋ ;

(ಇವ) ಹಾಗೆಯೇ ;

(ಅಹರಹಃ) ಪ್ರತಿನಿತ್ಯವೂ (ಬಲಿಂ ಹರಂತಃ) ಭೌತಿಕಅಗ್ನಿಗೆ, ಹಾಗೂ ಅತಿಥಿಗಳಿಗೆ ಅನ್ನವನ್ನು ಕೊಡುತ್ತಾ ;

ಅಂದರೆ, ಪ್ರತಿದಿನವೂ ಭೌತಿಕಅಗ್ನಿಯಲ್ಲಿ ಹೋಮ ಮಾಡುತ್ತಾ, ಮತ್ತು ಅತಿಥಿಗಳಿಗೆ ಭೋಜನವನ್ನು ಮಾಡಿಸುತ್ತಾ ;

(ಸಮಿಷಾ) ಯಾವುದು ಚೆನ್ನಾಗಿ ಇಚ್ಛಿಸಲ್ಪಡುತ್ತದೋ, ಅದು 'ಸಮಿಟ್', ಆ ಶ್ರದ್ಧೆಯಿಂದ ;

ಅಂದರೆ, ಒಳ್ಳೆಯ ರೀತಿಯಿಂದ ವಾಂಛಿಸಲ್ಪಟ್ಟ ;

(ರಾಯಸ್ಪೋಷೇಣ) ಚಕ್ರವರ್ತಿರಾಜ್ಯಲಕ್ಷ್ಮಿಯಿಂದ, (ಮದಂತಃ) ಆನಂದಿತರಾಗುತ್ತಿರುವ ನಾವು ;

(ಅಗ್ನೇ) ಹೇ ಪರಮಾತ್ಮನ್! (ತೇ) ತವ (ಪ್ರತಿವೇಶಾಃ) ಪ್ರತಿಕೂಲಾ ಭೂತ್ವಾ ;

(ಅಗ್ನೇ) ಓ ಪರಮಾತ್ಮ! (ತೇ) ನಿಮಗೆ (ಪ್ರತಿ-ವೇಶಾಃ) ಪ್ರತಿಕೂಲರಾಗಿ ;

ಸೃಷ್ಟಿಸ್ಥಾನ್ ಪ್ರಾಣಿನಃ (ಮಾ ರಿಷಾಮ) ಮಾ ಪೀಡಯೇಮ.

ನಾವು ಜಗತ್ತಿನಲ್ಲಿರುವ ಪ್ರಾಣಿಗಳನ್ನು (ಮಾ ರಿಷಾಮ) ಪೀಡಿಸದಿರೋಣ!

ಅಂದರೆ, ನಿಮ್ಮ ಆಜ್ಞೆಗೆ ವಿರುದ್ಧವಾಗಿ, ನಾವು ನಿಮ್ಮಿಂದ ಉತ್ಪನ್ನವಾದ ಪ್ರಾಣಿಗಳಿಗೆ ಅನ್ಯಾಯದಿಂದ ಎಂದಿಗೂ ದುಃಖವನ್ನು ಕೊಡದಿರೋಣ!

ಕಿಂತು ಭವತ್ಕೃಪಯಾ ಸರ್ವೇ ಜೀವಾ ಅಸ್ಮಾಕಂ ಮಿತ್ರಾಣಿ ಸಂತು.

ಮತ್ತು ನಿಮ್ಮ ಕೃಪೆಯಿಂದ ಸಮಸ್ತ ಪ್ರಾಣಿಗಳೂ ನಮ್ಮ ಮಿತ್ರರಾಗಿರಲಿ!

ಸರ್ವೇಷಾಂ ಚ ವಯಂ ಸಖಾಯಃ ಸ್ಮ ಇತಿ ಜ್ಞಾತ್ವಾ ಪರಸ್ಪರಂ ನಿತ್ಯಮುಪಕಾರಂ ಕುರ್ಯಾಮ ॥೧॥

ಮತ್ತು ನಾವು ಎಲ್ಲರಿಗೂ ಸ್ನೇಹಿತರಾಗಿರೋಣ! ಹೀಗೆಂದು ತಿಳಿದುಕೊಂಡು, ನಿತ್ಯವೂ ಪರಸ್ಪರವಾಗಿ ಉಪಕಾರ ಮಾಡೋಣ!

ಅಂದರೆ, ತಮ್ಮ ಕೃಪೆಯಿಂದ ಎಲ್ಲಾ ಜೀವರೂ ನಮ್ಮ ಮಿತ್ರರಾಗಿರಲಿ ! ಮತ್ತು ನಾವೂ ಕೂಡ, ಎಲ್ಲಾ ಜೀವರಿಗೂ ಮಿತ್ರರಾಗಿರೋಣ! ಹೀಗೆ ತಿಳಿದು, ಯಾವಾಗಲೂ ಪರಸ್ಪರ ಉಪಕಾರ ಮಾಡುತ್ತಿರೋಣ! [೧]

ಸಮಸ್ತಪ್ರಾಣಿಗಳು ಪವಿತ್ರ ಮಾಡಲಿ!

[ಋಷಿಃ_ ವೈಖಾನಸಃ ; ದೇವತಾ_ ವಿದ್ವಾಂಸಃ ; ಛಂದಃ_ ಅನುಷ್ಟುಪ್ ; ಸ್ವರಃ_ ಗಾಂಧಾರಃ]

ಪುನಂತು ಮಾ ದೇವಜನಾಃ ಪುನಂತು ಮನಸಾ ಧಿಯಃ ।
ಪುನಂತು ವಿಶ್ವಾ ಭೂತಾನಿ ಜಾತವೇದಃ ಪುನೀಹಿ ಮಾ ॥೨॥

[ಯಜುರ್ವೇದೇ ಅ.೧೯, ಮಂ.೩೯]

[ಅರ್ಥ:_ "ನನ್ನನ್ನು ದೇವಜನರು ಪವಿತ್ರ ಮಾಡಲಿ! ಮನಸ್ಸಿನಿಂದ ಬುದ್ಧಿಗಳನ್ನು ಪವಿತ್ರ ಮಾಡಲಿ! ಸಮಸ್ತಪ್ರಾಣಿಗಳೂ ಪವಿತ್ರ ಮಾಡಲಿ! ವೇದವನ್ನು ಪ್ರಸಿದ್ಧ ಮಾಡಿದವನೇ! ನನ್ನನ್ನು ಪವಿತ್ರ ಮಾಡು!"

(ಯಜುರ್ವೇದಃ ೧೯. ೩೯)]

ಭಾಷ್ಯಮ್_

(ಪುನಂತು ಮಾ.) ಅಸ್ಯ ಮಂತ್ರಸ್ಯಾರ್ಥಸ್ತರ್ಪಣ-ವಿಷಯ ಉಕ್ತಃ* ॥ ೨ ॥

ಭಾಷ್ಯ_

(ಪುನಂತು ಮಾ.) ಈ ಮಂತ್ರದ ಅರ್ಥವು [ಪಿತೃ]ತರ್ಪಣದ ವಿಷಯದಲ್ಲಿ ಹೇಳಲಾಗಿದೆ.*

'ಬಲಿವೈಶ್ವದೇವ'ಹೋಮದ ಮಂತ್ರಗಳು**

ಏಭಿರ್ಮಂತ್ರೈರ್ಹೋಮಂ ಕೃತ್ವಾ_

ಈ (ಕೆಳಗಿನ) ಮಂತ್ರಗಳಿಂದ ಹೋಮವನ್ನು ಮಾಡಿ_

"ಓಮಗ್ನಯೇ ಸ್ವಾಹಾ ॥ ೧ ॥

"ಓಂ ಸೋಮಾಯ ಸ್ವಾಹಾ ॥ ೨ ॥

"ಓಮಗ್ನೀಷೋಮಾಭ್ಯಾಂ ಸ್ವಾಹಾ ॥ ೩ ॥

"ಓಂ ವಿಶ್ವೇಭ್ಯೋ ದೇವೇಭ್ಯಃ ಸ್ವಾಹಾ ॥ ೪ ॥

"ಓಂ ಧನ್ವಂತರಯೇ ಸ್ವಾಹಾ ॥ ೫ ॥

"ಓಂ ಕುಹ್ವೈ ಸ್ವಾಹಾ ॥ ೬ ॥

"ಓಮನುಮತ್ಯೈ ಸ್ವಾಹಾ ॥ ೭ ॥

"ಓಂ ಪ್ರಜಾಪತಯೇ ಸ್ವಾಹಾ ॥ ೮ ॥

"ಓಂ ಸಹ ದ್ಯಾವಾಪೃಥಿವೀಭ್ಯಾಂ ಸ್ವಾಹಾ ॥ ೯ ॥

"ಓಂ ಸ್ವಿಷ್ಟಕೃತೇ ಸ್ವಾಹಾ ॥ ೧೦ ॥"+

---

* ಅಸ್ಮಿನ್ನಧ್ಯಾಯೇ ೭೬೪ ತಮಂ ಪೃಷ್ಠಂ ದ್ರಷ್ಟವ್ಯಮ್ _ಅನು.

** 'ಸತ್ಯಾರ್ಥಪ್ರಕಾಶೇ' ಕನ್ನಡಸಂಸ್ಕರಣೇ ಚತುರ್ಥೇ ಸಮುಲ್ಲಾಸೇ ೧೭೬ - ೧೭೭ ತಮಯೋಃ ಪೃಷ್ಠಯೋಃ ; ತಥಾ ಚ 'ಸಂಸ್ಕಾರವಿಧಿ'-ಗ್ರಂಥೇ ಕನ್ನಡಸಂಸ್ಕರಣೇ ಗೃಹಾಶ್ರಮಪ್ರಕರಣೇ ೨೬೮ ತಮೇ ಪೃಷ್ಠೇಽಪಿ ಮಂತ್ರಾ ದ್ರಷ್ಟವ್ಯಾಃ _ಅನು.

\+ ಮನುಸ್ಮೃತೌ ೩. ೮೫, ೮೬ ತಮಯೋಃ ಶ್ಲೋಕಯೋರಾ-ಧಾರೇಣೋಹಿತಾ ಇಮೇ ಮಂತ್ರಾ ಇತಿ ಜ್ಞೇಯಾಃ _ಯು. ಮೀ.

* ಈ ಅಧ್ಯಾಯದಲ್ಲಿ ೭೬೪ ನೆಯ ಪುಟವನ್ನು ನೋಡಿ _ಅನು.

** 'ಸತ್ಯಾರ್ಥಪ್ರಕಾಶ' ಚತುರ್ಥಸಮುಲ್ಲಾಸದಲ್ಲಿ ೧೭೬ - ೧೭೭ ನೆಯ ಪುಟಗಳಲ್ಲಿಯೂ ಮತ್ತು 'ಸಂಸ್ಕಾರವಿಧಿ'ಯ ಗೃಹಾಶ್ರಮ ಪ್ರಕರಣದ ೨೬೮ ನೆಯ ಪುಟದಲ್ಲಿಯೂ ಮಂತ್ರಗಳು ಕೊಡಲ್ಪಟ್ಟಿವೆ. _ಅನು.

\+ ಮನುಸ್ಮೃತಿಯ (೩. ೮೫, ೮೬) ಈ ಎರಡು ಶ್ಲೋಕಗಳ ಆಧಾರದ ಮೇಲೆ ಊಹಿಸಲ್ಪಟ್ಟ ಮಂತ್ರಗಳು ಇವು, ಎಂದು ತಿಳಿಯಬೇಕು. _ಯು. ಮೀ.

ಬಲಿವೈಶ್ವದೇವಹೋಮದ ಮಂತ್ರಗಳ ವಿಶಿಷ್ಟಾರ್ಥ

ಭಾಷ್ಯಮ್_

(ಓಮಗ್ನಯೇ.) ಅಗ್ನ್ಯರ್ಥ ಉಕ್ತಃ* ॥ ೧ ॥

(ಓಂ ಸೋಮಾಯ.) ಸರ್ವಾನಂದಪ್ರದೋ ಯಃ ಸರ್ವಜಗದುತ್ಪಾದಕ ಈಶ್ವರಃ ಸೋಽತ್ರಗ್ರಾಹ್ಯಃ ॥ ೨ ॥

(ಓಮಗ್ನೀ.) ಪ್ರಾಣಾಪಾನಾಭ್ಯಾಮ್. ಅನಯೋರರ್ಥೋ ಗಾಯತ್ರೀಮಂತ್ರಾರ್ಥ ಉಕ್ತಃ** ॥ ೩ ॥

ಭಾಷ್ಯ_

(ಓಮಗ್ನಯೇ.) 'ಅಗ್ನಿ'ಯ ಅರ್ಥವು ಹೇಳಲಾಗಿದೆ.

ಅಂದರೆ, 'ಅಗ್ನಿ' ಶಬ್ದದ ಅರ್ಥವನ್ನು ಈ ಮೊದಲೇ ಹೇಳಿದ್ದೇವೆ.* [೧]

(ಓಂ ಸೋಮಾಯ.) ಎಲ್ಲರಿಗೂ ಆನಂದವನ್ನು ಕೊಡುವವನೂ, [ಹಾಗೂ] ಎಲ್ಲ ಜಗತ್ತನ್ನೂ ಉತ್ಪನ್ನ ಮಾಡುವವನೂ ಆದ ಯಾವ ಈಶ್ವರನಿದ್ದಾನೋ, ಅವನು ಇಲ್ಲಿ ಗ್ರಹಿಸಲ್ಪಡಬೇಕು!

ಅಂದರೆ, ಎಲ್ಲಾ ಪದಾರ್ಥಗಳನ್ನೂ ಉತ್ಪನ್ನ ಮಾಡುವವನೂ, ಪೋಷಿಸುವವನೂ ಮತ್ತು ಸುಖ ಕೊಡುವವನೂ ಆದವನಿಗೆ ಈ ಆಹುತಿ, ಎಂದರ್ಥ! [೨]

(ಓಮಗ್ನೀ.) ಪ್ರಾಣ ಮತ್ತು ಅಪಾನಗಳಿಗಾಗಿ! ಈ ಎರಡರ ಅರ್ಥವು ಗಾಯತ್ರೀಮಂತ್ರದ ಅರ್ಥದಲ್ಲಿ ಹೇಳಲಾಗಿದೆ.**

---

* ಗ್ರಂಥಕರ್ತ್ರಾ ರಚಿತೇ 'ಪಂಚಮಹಾಯಜ್ಞವಿಧಿ'ನಾಮ್ನಿ ಗ್ರಂಥೇ ಸಂಧ್ಯೋಪಾಸನಪ್ರಕರಣೇ 'ಅಗ್ನಿರರ್ಥಾಜ್ ಜ್ಞಾನಸ್ವರೂಪಃ ಪರಮೇಶ್ವರಃ' ಇತಿ ; ತಥಾ 'ಅಗ್ನಿಹೋತ್ರದೇವಯಜ್ಞವಿಧೌ'- 'ಅಗ್ನಿರ್ಜ್ಞಾನಸ್ವರೂಪೋ ಜ್ಞಾನಪ್ರದಶ್ಚ' ಇತ್ಯುಕ್ತಃ _ಅನು.

** ಗ್ರಂಥಕರ್ತ್ರಾ ರಚಿತೇ 'ಪಂಚಮಹಾಯಜ್ಞವಿಧಿ'ನಾಮ್ನಿ ಗ್ರಂಥೇ ಸಂಧ್ಯೋಪಾಸನಪ್ರಕರಣೇ_

"(ಭೂಃ) ಪ್ರಾಣಯತಿ ಜೀವಯತಿ ಸರ್ವಾನ್ ಪ್ರಾಣಿನಃ ಸಃ ಪ್ರಾಣಃ, ಪ್ರಾಣಾದಪಿ ಪ್ರಿಯಸ್ವರೂಪೋ ವಾ, ಸ ಚೇಶ್ವರ ಏವ. ಅಯಮರ್ಥೋ 'ಭೂ'ಶಬ್ದಸ್ಯ ಜ್ಞೇಯಃ. (ಭುವಃ) ಯೋ ಮುಮುಕ್ಷೂಣಾಂ ಮುಕ್ತಾನಾಂ ಸ್ವಸೇವಕಾನಾಂ ಧರ್ಮಾತ್ಮನಾಂ ಸರ್ವಂ ದುಃಖಮಪಾನಯತಿ ದೂರೀಕರೋತಿ ಸೋಽಪಾನೋ ದಯಾಲುರೀಶ್ವರೋಽಸ್ತಿ. ಅಯಂ 'ಭುವಃ' ಶಬ್ದಾರ್ಥೋಽಸ್ತೀತಿ ಬೋಧ್ಯಮ್" ಇತ್ಯುಕ್ತಃ.

ಸಂಪ್ರತಿ ಪ್ರಸ್ತುತಗ್ರಂಥಸ್ಯ ೭೫೫ ತಮಸ್ಥಾ ಪೃಷ್ಠಸ್ಥಾ ಟಿಪ್ಪಣ್ಯಪಿ ದ್ರಷ್ಟವ್ಯಾ _ಅನು.

* ಗ್ರಂಥಕರ್ತರು ರಚಿಸಿದ 'ಪಂಚಮಹಾಯಜ್ಞವಿಧಿ'ಯ ಸಂಧ್ಯೋಪಾಸನೆಯ ಪ್ರಕರಣದಲ್ಲಿ 'ಅಗ್ನಿ', ಎಂದರೆ 'ಜ್ಞಾನಸ್ವರೂಪನಾದ ಪರಮೇಶ್ವರ!' ಎಂದೂ; ಮತ್ತು ಅಗ್ನಿಹೋತ್ರ-ದೇವಯಜ್ಞವಿಧಿಯಲ್ಲಿ 'ಅಗ್ನಿ', ಎಂದರೆ ಜ್ಞಾನಸ್ವರೂಪನೂ, ಹಾಗೂ ಜ್ಞಾನಪ್ರದನೂ, ಎಂದೂ ಹೇಳಲಾಗಿದೆ._ಅನು.

** ಗ್ರಂಥಕರ್ತರು ರಚಿಸಿದ 'ಪಂಚಮಹಾಯಜ್ಞವಿಧಿ'ಯ ಸಂಧ್ಯೋಪಾಸನೆಯ ಪ್ರಕರಣದಲ್ಲಿ_

"'ಭೂ', ಎಂದರೆ ಯಾವನು ಎಲ್ಲಾ ಪ್ರಾಣಿಗಳಿಗೂ ಪ್ರಾಣ ಕೊಡುತ್ತಾನೋ, ಎಂದರೆ ಜೀವ ಕೊಡುತ್ತಾನೋ, ಅವನು ಪ್ರಾಣ! ಅಥವಾ ಪ್ರಾಣಕ್ಕಿಂತಲೂ ಪ್ರಿಯಸ್ವರೂಪನು ಯಾವನೋ, ಅವನು, ಎಂದರೆ ಈಶ್ವರನೇ! ಈ ಅರ್ಥವು 'ಭೂ'ಶಬ್ದದಿಂದ ತಿಳಿಯಲ್ಪಡಬೇಕು!

"(ಭುವಃ) ಯಾವನು ಮೋಕ್ಷಾಭಿಲಾಷಿಗಳ, ಮುಕ್ತರ, ಮತ್ತು ಧರ್ಮಾತ್ಮರಾದ ತನ್ನ ಸೇವಕರ ಎಲ್ಲಾ ದುಃಖಗಳನ್ನೂ ದೂರ ಮಾಡುತ್ತಾನೋ, ಅವನು ಅಪಾನ! ಅಂದರೆ, ದಯಾಳುವಾದ ಈಶ್ವರನಾಗಿದ್ದಾನೆ. ಇದು 'ಭುವಃ' ಶಬ್ದದ ಅರ್ಥವಾಗಿದೆ, ಎಂದು ತಿಳಿಯಬೇಕು", ಎಂದು ಹೇಳಲಾಗಿದೆ.

ಈ ಗ್ರಂಥದ ೭೫೫ನೇ ಪುಟದ ಟಿಪ್ಪಣಿಯನ್ನೂ ನೋಡಿ _ಅನು.

ಅಂದರೆ, ಎಲ್ಲಾ ಪ್ರಾಣಿಗಳ ಜೀವನದ ಹೇತುವಾದ 'ಪ್ರಾಣ'; ಮತ್ತು ದುಃಖನಾಶದ ಹೇತುವಾದ 'ಅಪಾನ!' ಈ ಎರಡಕ್ಕೆ ಈ ಆಹುತಿ, ಎಂದರ್ಥ! [೩]

(ಓಂ ವಿಶ್ವೇಭ್ಯೋ.) ವಿಶ್ವೇ ದೇವಾ ವಿಶ್ವಪ್ರಕಾಶಕಾ ಈಶ್ವರಗುಣಾಃ ಸರ್ವೇ ವಿದ್ವಾಂಸೋ ವಾ ॥ ೪ ॥

(ಓಂ ವಿಶ್ವೇಭ್ಯೋ.) 'ವಿಶ್ವೇ ದೇವಾಃ', ಎಂದರೆ ವಿಶ್ವವನ್ನು ಪ್ರಕಾಶ ಪಡಿಸುವ ಈಶ್ವರನ ಗುಣಗಳು; ಅಥವಾ ಸಮಸ್ತ ವಿದ್ವಾಂಸರು!

ಅಂದರೆ, ಇವುಗಳಿಗೆ ಈ ಆಹುತಿ, ಎಂದರ್ಥ! [೪]

(ಓಂ ಧನ್ವಂತ.) ಸರ್ವರೋಗನಾಶಕ ಈಶ್ವರೋತ್ರ ಗೃಹ್ಯತೇ ॥ ೫ ॥

(ಓಂ ಧನ್ವಂತರಯೇ.) ಸರ್ವರೋಗಗಳನ್ನೂ ನಾಶ ಮಾಡುವ ಈಶ್ವರನು ಇಲ್ಲಿ ಗ್ರಹಿಸಲ್ಪಡುತ್ತಾನೆ!

ಅಂದರೆ, ಜನ್ಮ-ಮರಣಾದಿ ರೋಗಗಳ ನಾಶ ಮಾಡುವವನಾದ ಪರಮಾತ್ಮಾ! ಇವನಿಗೆ ಈ ಆಹುತಿ, ಎಂದರ್ಥ! [೫]

(ಓಂ ಕುಹ್ವೈ.) ದರ್ಶೇಷ್ಟ್ಯರ್ಥೋಽಯಮಾರಂಭಃ ;

(ಓಂ ಕುಹ್ವೈ.) 'ದರ್ಶೇಷ್ಟಿ'ಯ ಪ್ರಯೋಜನಕ್ಕಾಗಿ ಇದು ಆರಂಭವಾಗಿರುತ್ತದೆ ; (ಎಂದರೆ_)

ಅಮಾವಾಸ್ಯೇಷ್ಟಿಪ್ರತಿಪಾದಿತಾಯೈ ;

'ಅಮಾವಾಸ್ಯೇಷ್ಟಿ'ಯ ಪ್ರತಿಪಾದನೆಗಾಗಿರುತ್ತದೆ ;

ಅಂದರೆ, 'ಅಮಾವಾಸ್ಯೇಷ್ಟಿ'ಯನ್ನು ಮಾಡುವುದು;

ಚಿತಿಶಕ್ತಯೇ ವಾ ॥ ೬ ॥

ಅಥವಾ 'ಚಿತಿಶಕ್ತಿ'ಗಾಗಿ!

ಅಂದರೆ, ಇವಕ್ಕೆ ಈ ಆಹುತಿ, ಎಂದರ್ಥ! [೬]

(ಓಮನು.) ಪೌರ್ಣಮಾಸ್ಯೇಷ್ಟ್ಯರ್ಥೋಽಯ-ಮಾರಂಭಃ ;

(ಓಮನುಮತ್ಯೈ.) ಪೂರ್ಣಿಮೆಯ ಇಷ್ಟಿಯ ಪ್ರಯೋಜನಕ್ಕಾಗಿ ಇದು ಆರಂಭವಾಗಿರುತ್ತದೆ ;

ವಿದ್ಯಾಪಠನಾನಂತರಂ ಮತಿರ್ಮನನಂ ಜ್ಞಾನಂ ಯಸ್ಯಾಶ್ಚಿತಿಶಕ್ತೇಃ ಸಾನುಮತಿರ್ವಾ ತಸ್ಯೈ ॥ ೭ ॥

ಅಥವಾ ವಿದ್ಯೆಯನ್ನು ಓದಿದ ನಂತರ, (ದೊರಕುವ) 'ಮತಿ', ಎಂದರೆ ಮನನ, ಎಂದರೆ ಜ್ಞಾನವು ಯಾವ ಚಿತಿಶಕ್ತಿಯದಾಗಿರುತ್ತದೋ, ಆ 'ಅನುಮತಿ!' ಅದಕ್ಕಾಗಿ [ಈ ಆಹುತಿ!]

ಅಂದರೆ, 'ಪೌರ್ಣಮಾಸೇಷ್ಟಿ' ಅಥವಾ ಸರ್ವ-ಶಾಸ್ತ್ರಪ್ರತಿಪಾದಿತನಾದ ಪರಮೇಶ್ವರನ ಚಿತಿಶಕ್ತಿ! ಅವನಿಗೆ ಈ ಆಹುತಿ, ಎಂದರ್ಥ! [೭]

(ಓಂ ಪ್ರಜಾ.) ಸರ್ವಜಗತಃ ಸ್ವಾಮೀ ರಕ್ಷಕ ಈಶ್ವರಃ ॥ ೮ ॥

(ಓಂ ಪ್ರಜಾ.) ಸಮಸ್ತ ಜಗತ್ತಿನ ಸ್ವಾಮಿ, ಎಂದರೆ ರಕ್ಷಕನಾದ ಜಗದೀಶ್ವರ!

ಅಂದರೆ, ಅವನಿಗೆ ಈ ಆಹುತಿ, ಎಂದರ್ಥ! [೮]

(ಓಂ ಸಹ ದ್ಯಾವಾ.) ಈಶ್ವರೇಣ ಪ್ರಕೃಷ್ಟಗುಣೈಃ ಸಹೋತ್ಪಾದಿತಾಭ್ಯಾಮಗ್ನಿಭೂಮಿಭ್ಯಾಂ ಸರ್ವೋಪ-ಕಾರಾ ಗಾಹ್ಯಾಃ ;

ಏತದರ್ಥೋಽಯಮಾರಂಭಃ ॥ ೯ ॥

(ಓಂ ಸಹ ದ್ಯಾವಾ.) ಈಶ್ವರನಿಂದ ಉತ್ಕೃಷ್ಟ ಗುಣಗಳೊಡನೆ ಉತ್ಪಾದಿತವಾದ ಅಗ್ನಿ ಮತ್ತು ಭೂಮಿಯಿಂದ ಎಲ್ಲಾ ಉಪಕಾರಗಳೂ ಗ್ರಹಿಸಲ್ಪಡಬೇಕು!

ಈ ಪ್ರಯೋಜನಕ್ಕಾಗಿ ಇದು ಆರಂಭ ವಾಗಿರುತ್ತದೆ.

ಅಂದರೆ, **ಸತ್ಯವಿದ್ಯೆಯ ಪ್ರಕಾಶನಕ್ಕಾಗಿ ಪೃಥಿವಿಯ ರಾಜ್ಯದ, ಮತ್ತು ಅಗ್ನಿಯಿಂದ, ಹಾಗೂ ಭೂಮಿಯಿಂದ ಅನೇಕ ಉಪಕಾರಗಳ ಗ್ರಹಣ!** ಇದಕ್ಕಾಗಿ ಈ ಆಹುತಿ, ಎಂದರ್ಥ! [೯]

(ಓಂ ಸ್ವಿಷ್ಟ.) ಯಃ ಸುಷ್ಠು ಶೋಭನಮಿಷ್ಟಂ ಸುಖಂ ಕರೋತಿ ಸ ಚೇಶ್ವರಃ ॥ ೧೦ ॥

(ಓಂ ಸ್ವಿಷ್ಟಕೃತೇ.) ಯಾವನು ಸುಂದರವಾದ 'ಇಷ್ಟ', ಎಂದರೆ ಸುಖವನ್ನು ಉಂಟು ಮಾಡುತ್ತಾನೋ, ಅವನು ; ಮತ್ತು ಈಶ್ವರ!

ಅಂದರೆ, ಇಷ್ಟವಾದ ಸುಖವನ್ನುಂಟು ಮಾಡುವ ಪರಮೇಶ್ವರ ! ಅವನಿಗೆ ಈ ಆಹುತಿ, ಎಂದರ್ಥ! [೧೦]

ಈ ಹತ್ತು ಮಂತ್ರಗಳ ಅರ್ಥಗಳಿಂದ ಈ (ಮೇಲಿನ) ಹತ್ತು ಪ್ರಯೋಜನಗಳನ್ನು ತಿಳಿದುಕೊಳ್ಳಬೇಕು!

'ಸ್ವಾಹಾ' ಶಬ್ದದ ಅರ್ಥವನ್ನು ಹಿಂದೆಯೇ ತಿಳಿಸಲಾಗಿದೆ.*

ಬಲಿ, ಎಂದರೆ ಅನ್ನ ಕೊಡುವ ವಿನಿಯೋಗಮಂತ್ರಗಳು**

ಅಥ ಬಲಿಪ್ರದಾನಂ ಕುರ್ಯ್ಯಾತ್_

ನಂತರ, ಬಲಿಪ್ರದಾನವನ್ನು ಮಾಡಬೇಕು_

ಅಂದರೆ, ಈಗ, [ಇದರ] ಮುಂದೆ, ಬಲಿ-ಪ್ರದಾನದ ಮಂತ್ರಗಳನ್ನು ಬರೆಯುತ್ತೇವೆ_

** 'ಸತ್ಯಾರ್ಥಪ್ರಕಾಶೇ' ಕನ್ನಡಸಂಸ್ಕರಣೇ ಚತುರ್ಥೇ ಸಮುಲ್ಲಾಸೇ ೧೭೭ ತಮೇ ಪೃಷ್ಠೇ ; ತಥಾ ಚ 'ಸಂಸ್ಕಾರವಿಧಿ'-ಗ್ರಂಥೇ ಕನ್ನಡಸಂಸ್ಕರಣೇ ಗೃಹಾಶ್ರಮಪ್ರಕರಣೇ ೨೭೮ - ೨೭೯ ತಮಯೋಃ ಪೃಷ್ಠಯೋರಪಿ ಮಂತ್ರಾ ದೃಷ್ಟವ್ಯಾಃ _ಅನು.

* '(೧೩) ಈಶ್ವರಸ್ತುತಿ-ಪ್ರಾರ್ಥನೆ-ಯಾಚನೆ-ಸಮರ್ಪಣೆ', ಎಂಬ ಅಧ್ಯಾಯದ ೪೨೩ - ೪೨೫ ನೆಯ ಪುಟಗಳನ್ನು ನೋಡಿ. _ಅನು.

** 'ಸತ್ಯಾರ್ಥಪ್ರಕಾಶ' ಚತುರ್ಥಸಮುಲ್ಲಾಸದಲ್ಲಿ ೧೭೭ ನೆಯ ಪುಟದಲ್ಲಿಯೂ ಮತ್ತು 'ಸಂಸ್ಕಾರವಿಧಿ'ಯ ಗೃಹಾಶ್ರಮಪ್ರಕರಣದ ೨೭೮ - ೨೭೯ ನೆಯ ಪುಟಗಳಲ್ಲಿಯೂ ಕೂಡ ಮಂತ್ರಗಳು ಕೊಡಲ್ಪಟ್ಟಿವೆ. _ಅನು.

"ಓಂ ಸಾನುಗಾಯೇಂದ್ರಾಯ ನಮಃ ॥ ೧ ॥

"ಓಂ ಸಾನುಗಾಯ ಯಮಾಯ ನಮಃ ॥ ೨ ॥

"ಓಂ ಸಾನುಗಾಯ ವರುಣಾಯ ನಮಃ ॥ ೩ ॥

"ಓಂ ಸಾನುಗಾಯ ಸೋಮಾಯ ನಮಃ ॥ ೪ ॥

"ಓಂ ಮರುದ್ಭ್ಯೋ ನಮಃ ॥ ೫ ॥

"ಓಮದ್ಭ್ಯೋ ನಮಃ ॥ ೬ ॥

"ಓಂ ವನಸ್ಪತಿಭ್ಯೋ ನಮಃ ॥ ೭ ॥

"ಓಂ ಶ್ರಿಯೈ ನಮಃ ॥ ೮ ॥

"ಓಂ ಭದ್ರಕಾಲ್ಯೈ ನಮಃ ॥ ೯ ॥

"ಓಂ ಬ್ರಹ್ಮಪತಯೇ ನಮಃ ॥ ೧೦ ॥

"ಓಂ ವಾಸ್ತುಪತಯೇ ನಮಃ ॥ ೧೧ ॥

"ಓಂ ವಿಶ್ವೇಭ್ಯೋ ದೇವೇಭ್ಯೋ ನಮಃ ॥ ೧೨ ॥

"ಓಂ ದಿವಾಚರೇಭ್ಯೋ ಭೂತೇಭ್ಯೋ ನಮಃ ॥ ೧೩ ॥

"ಓಂ ನಕ್ತಂಚಾರಿಭ್ಯೋ [ಭೂತೇಭ್ಯೋ] ನಮಃ ॥ ೧೪ ॥

"ಓಂ ಸರ್ವಾತ್ಮಭೂತಯೇ ನಮಃ ॥ ೧೫ ॥

"ಓಂ ಪಿತೃಭ್ಯಃ ಸ್ವಧಾಯಿಭ್ಯಃ ಸ್ವಧಾ ನಮಃ ॥ ೧೬ ॥ *

ಇತಿ ನಿತ್ಯಶ್ರಾದ್ಧಮ್ ॥

ಹೀಗೆ, ನಿತ್ಯಶ್ರಾದ್ಧವಾಯಿತು!

ಅನ್ನ ಕೊಡುವ ವಿನಿಯೋಗಮಂತ್ರಗಳ ವಿಶಿಷ್ಟಾರ್ಥ

ಭಾಷ್ಯಮ್_

(ಓಂ ಸಾನುಗಾಯೇಂದ್ರಾಯ.) ನಿತ್ಯೈರ್ಗುಣೈಃ ಸಹ ವರ್ತ್ತಮಾನಃ ಪರಮೈಶ್ವರ್ಯವಾನೀಶ್ವರೋಽತ್ರ ಗೃಹ್ಯತೇ.

ಭಾಷ್ಯ_

(ಓಂ ಸಾನುಗಾಯ)** ನಿತ್ಯವಾದ ಗುಣಗಳಿಂದ ಕೂಡಿ, ವರ್ತಮಾನನಾಗಿದ್ದು, (ಇಂದ್ರಾಯ) ಪರಮೈಶ್ವರ್ಯವಂತನಾದ ಈಶ್ವರನು, ಎಂದು ಇಲ್ಲಿ ಗ್ರಹಿಸಲ್ಪಡುತ್ತದೆ!

---

* ಇಮೇ ಮಂತ್ರಾ ಮನುಸ್ಮೃತೇಃ (೩.೮೭ - ೯೧) ಶ್ಲೋಕಾನಾಮಾಧಾರೇಣೋಹಿತಾಃ _ಯು. ಮೀ.

* ಈ ಮಂತ್ರಗಳು ಮನುಸ್ಮೃತಿಯ ೩.೮೭ - ೯೧ ನೆಯ ಶ್ಲೋಕಗಳ ಆಧಾರದ ಮೇಲೆ ಊಹಿಸಲ್ಪಟ್ಟಿವೆ _ಯು. ಮೀ.

** ಸಾನುಗಾಯ = ಸ+ಅನುಗಾಯ! ಸಾಧಾರಣ ವಿದ್ವಾಂಸರು ಇದಕ್ಕೆ ಗಣಗಳಿಂದ ಕೂಡಿದ, ಎಂದು ಪೌರಾಣಿಕ ಅರ್ಥ ಮಾಡುತ್ತಾರೆ. ಮಹರ್ಷಿ ದಯಾನಂದರ ಅರ್ಥವು ಎಷ್ಟು ಉತ್ಕೃಷ್ಟವಾಗಿದೆ, ನೋಡಿ _ಅನು.

ಅಂದರೆ, ಸರ್ವೈಶ್ವರ್ಯಯುಕ್ತನಾದ ಪರಮೇಶ್ವರ ಮತ್ತು ಅವನ ಗುಣಗಳು ;

(ನಮಃ) ಅವಕ್ಕೆ ನಮಃ, ಎಂದರ್ಥ! *

"ಣಮ ಪ್ರಹ್ವತ್ವೇ ಶಬ್ದೇ ।"

[ಕ್ಷೀರತರಂಗಿಣ್ಯಾಮ್ ೧. ೭೦೯]

[ಅರ್ಥ:_ 'ಣಮ', (ಧಾತುವು) ಬಗ್ಗಿ ಶಬ್ದಮಾಡುವುದರ ಅರ್ಥದಲ್ಲಿ ಪ್ರಯುಕ್ತವಾಗುತ್ತದೆ."

(ಕ್ಷೀರತರಂಗಿಣೀ: ೧. ೭೦೯)]

ಇತ್ಯನೇನ ಸತ್ಕ್ರಿಯಾಪುರಸ್ಸರವಿಚಾರೇಣ ಮನುಷ್ಯಾಣಾಂ ಯಥಾರ್ಥಂ ವಿಜ್ಞಾನಂ ಭವತೀತಿ ವೇದ್ಯಮ್ ॥ ೧ ॥

ಇದರಿಂದ, ಎಂದರೆ, ಸತ್ಕ್ರಿಯೆಯನ್ನು ಮುಂದಿಟ್ಟು ಕೊಂಡು ವಿಚಾರ ಮಾಡುವುದರಿಂದ, ಮನುಷ್ಯರಿಗೆ ಯಥಾರ್ಥ ವಿಜ್ಞಾನ ಉಂಟಾಗುತ್ತದೆ, ಎಂದು ತಿಳಿಯ ಬೇಕು! [೧]

(ಓಂ ಸಾನುಗಾಯ ಯಮಾಯ.) ಪಕ್ಷಪಾತ-ರಹಿತೋ ನ್ಯಾಯಕಾರಿತ್ವಾದಿಗುಣಯುಕ್ತಃ ಪರಮಾತ್ಮಾತ್ರ ವೇದ್ಯಃ ॥ ೨ ॥

(ಓಂ ಸಾನುಗಾಯ) ಪಕ್ಷಪಾತರಹಿತನೂ, [ಹಾಗೂ] ನ್ಯಾಯಕಾರಿತ್ವ ಮೊದಲಾದ ಗುಣಗಳಿಂದ ಯುಕ್ತನೂ ಆದ (ಯಮಾಯ) ಪರಮಾತ್ಮನು, ಎಂದು ಇಲ್ಲಿ ತಿಳಿಯಬೇಕು!

ಅಂದರೆ, ಸತ್ಯನ್ಯಾಯವನ್ನು ಮಾಡುವ [ಪರಮಾತ್ಮಾ] ಮತ್ತು ಅವನ ಸೃಷ್ಟಿಯಲ್ಲಿ ಸತ್ಯನ್ಯಾಯ ವನ್ನು ಮಾಡುವ ಸಭಾಸದರು! ಅವರಿಗೆ ನಮಃ! [೨]

(ಓಂ ಸಾನುಗಾಯ ವರುಣಾಯ.) ವಿದ್ಯಾ-ದ್ಯುತ್ತಮಗುಣವಿಶಿಷ್ಟಃ ಸರ್ವೋತ್ತಮಃ ಪರಮೇಶ್ವರೋಽತ್ರ ಗೃಹೀತವ್ಯಃ ॥ ೩ ॥

(ಓಂ ಸಾನುಗಾಯ ವರುಣಾಯ.) ವಿದ್ಯೆ ಮೊದಲಾದ ಉತ್ತಮಗುಣಗಳಲ್ಲಿ ವಿಶಿಷ್ಟನೂ, ಸರ್ವೋತ್ತಮನೂ ಆದ ಪರಮೇಶ್ವರನು ಇಲ್ಲಿ ಗ್ರಹಿಸಲ್ಪಡಬೇಕು!

ಅಂದರೆ, ಎಲ್ಲರಿಗಿಂತ ಉತ್ತಮನಾದ ಪರಮಾತ್ಮಾ ಮತ್ತು ಅವನ ಧಾರ್ಮಿಕ ಭಕ್ತಜನರು! ಅವರಿಗೆ ನಮಃ! [೩]

(ಓಂ ಸಾನುಗಾಯ ಸೋಮಾಯ.) ಅಸ್ಯಾರ್ಥ ಉಕ್ತಃ ॥ ೪ ॥**

(ಓಂ ಸಾನುಗಾಯ ಸೋಮಾಯ.) ಇದರ ಅರ್ಥವು [ಮೊದಲೇ] ಹೇಳಲಾಗಿದೆ.**

** 'ಸೋಮ'ಶಬ್ದಸ್ಯಾರ್ಥಾಯಾಸ್ಮಿನ್ನಧ್ಯಾಯೇ ೮೧೯ ತಮಂ ಪೃಷ್ಠಂ ದ್ರಷ್ಟವ್ಯಮ್ _ಅನು.

* 'ನಮಃ', ಎಂಬ ಪದದ ಅರ್ಥವು ಮುಂದೆ ಹೇಳಲ್ಪಟ್ಟಿದೆ. _ಅನು.

** 'ಸೋಮ' ಶಬ್ದದ ಅರ್ಥಕ್ಕಾಗಿ ಈ ಅಧ್ಯಾಯದ ೮೧೯ ನೆಯ ಪುಟವನ್ನು ನೋಡಿ _ಅನು.

ಅಂದರೆ, ಪುಣ್ಯಾತ್ಮರನ್ನು ಆನಂದಪಡಿಸುವ ಪರಮಾತ್ಮಾ ಮತ್ತು ಆ ಜನರು! ಅವರಿಗೆ **ನಮಃ**! [೪]

(ಓಂ ಮರುದ್‌ಭ್ಯೋ) ಯ ಈಶ್ವರಾಧಾರೇಣ ಸಕಲಂ ವಿಶ್ವಂ ಧಾರಯಂತಿ ಚೇಷ್ಟಯಂತಿ ಚ ತೇ ಮರುತಃ ॥ ೫ ॥

(ಓಂ ಮರುದ್‌ಭ್ಯೋ) ಯಾರು ಈಶ್ವರನ ಆಧಾರದಿಂದ ಸಮಸ್ತ ಜಗತ್ತನ್ನೂ ಧಾರಣ ಮಾಡಿಕೊಳ್ಳುತ್ತಾರೋ, ಹಾಗೂ ಕ್ರಿಯಾಶೀಲವನ್ನಾಗಿಡುತ್ತಾರೋ, ಅವರು **ಮರುತ್ತು**ಗಳು!

ಅಂದರೆ, ಯಾವುವು ಇರುವುದರಿಂದ, **ಜೀವನ**; ಹಾಗೂ ಹೊರಟು ಹೋಗುವುದರಿಂದ, **ಮರಣ** ಉಂಟಾಗುತ್ತದೋ, ಆ **'ಪ್ರಾಣಗಳು'**; ಅವಕ್ಕೆ **ನಮಃ**! ಎಂದರೆ, ಅವುಗಳ ರಕ್ಷಣೆ ಮಾಡುವುದು. [೫]

(ಓಮದ್‌ಭ್ಯೋ.) ಅಸ್ಯಾರ್ಥಃ_ 'ಶನ್ನೋ ದೇವೀ'ರಿತ್ಯತ್ರೋಕ್ತಃ ॥ ೬ ॥ *

(ಓಮದ್‌ಭ್ಯೋ.) ಇದರ ಅರ್ಥವು_ 'ಶನ್ನೋ ದೇವೀಃ.', ಎಂಬ [ಮಂತ್ರದ ಸಂದರ್ಭದ]ಲ್ಲಿ ಹೇಳಲಾಗಿದೆ.* ಇವನಿಗೆ **ನಮಃ**! [೬]

---

* ಗ್ರಂಥಕರ್ತ್ರಾ ರಚಿತೇ 'ಪಂಚಮಹಾಯಜ್ಞವಿಧಿ'ನಾಮ್ನಿ ಗ್ರಂಥೇ ಸಂಧ್ಯೋಪಾಸನಪ್ರಕರಣೇ_

" 'ಆಪ್ಲೃ ವ್ಯಾಪ್ತೌ' ಅಸ್ಮಾದ್ಧಾತೋರಪ್‌ಶಬ್ದಃ ಸಿಧ್ಯತಿ...(ಶನ್ನೋ ದೇ.) ದೇವ್ಯ ಆಪಃ ಸರ್ವಪ್ರಕಾಶಕಸ್ಸರ್ವಾನಂದಪ್ರದಸ್ಸರ್ವವ್ಯಾಪಕ ಈಶ್ವರಃ....

ಅಪ್-ಶಬ್ದೇನೇಶ್ವರಸ್ಯ ಗ್ರಹಣಮ್. ಅತ್ರ ಪ್ರಮಾಣಮ್_

* ಗ್ರಂಥಕರ್ತರಿಂದ ರಚಿತವಾದ **'ಪಂಚಮಹಾಯಜ್ಞವಿಧಿ'**ಯ ಸಂಧ್ಯೋಪಾಸನಾಪ್ರಕರಣದಲ್ಲಿ ಹೀಗೆ ಅರ್ಥ ಹೇಳಲಾಗಿದೆ_

" **'ಆಪ್ಲೃ ವ್ಯಾಪ್ತೌ'**. [ಎಂದರೆ ವ್ಯಾಪ್ತಿಯ ಅರ್ಥದಲ್ಲಿನ **ಆಪ್ಲೃ**], ಎಂಬ ಧಾತುವಿನಿಂದ **'ಅಪ್'** ಶಬ್ದವು ಸಿದ್ಧವಾಗುತ್ತದೆ .....(ಶನ್ನೋ ದೇವೀ.) ದೇವಿಯಾದ **ಆಪಃ**, ಎಂದರೆ ಸರ್ವಪ್ರಕಾಶಕನೂ, ಸರ್ವಾನಂದಪ್ರದನೂ, ಸರ್ವವ್ಯಾಪಕನೂ ಆದ ಈಶ್ವರ!.....

'ಅಪ್' ಶಬ್ದದಿಂದ ಈಶ್ವರನ ಗ್ರಹಣೆ ಮಾಡಬೇಕು. ಈ ವಿಷಯದಲ್ಲಿ ಪ್ರಮಾಣವೇನೆಂದರೆ_

ಯತ್ರ ಲೋಕಾಂಶ್ಚ ಕೋಶಾಂಶ್ಚಾಪೋ ಬ್ರಹ್ಮ ಜನಾ ವಿದುಃ ।
ಅಸಚ್ಚ ಯತ್ರ ಸಚ್ಚಾಂತಃ ಸ್ಕಂಭಂ ತಂ ಬ್ರೂಹಿ ಕತಮಃ ಸ್ವಿದೇವ ಸಃ ॥

[ಅಥರ್ವವೇದೇ ಕಾಂ. ೧೦, ಸೂ. ೭, ಮಂ. ೧೦]

ಅರ್ಥಃ_ (ಯತ್ರ ಲೋಕಾಂಶ್ಚ.) ಯಾವುದರಲ್ಲಿ ಎಲ್ಲಾ ಲೋಕ-ಲೋಕಾಂತರಗಳೂ ಕೋಶ, ಎಂದರೆ, ಎಲ್ಲಾ ಜಗತ್ತಿನ ಕಾರಣರೂಪವಾದ ಖಜಾನೆ; ಮತ್ತು ಯಾವುದರಲ್ಲಿ 'ಅಸತ್', ಎಂದರೆ, ಅದೃಶ್ಯರೂಪವಾದ ಆಕಾಶವೇ ಮೊದಲಾದ, ಹಾಗೂ 'ಸತ್', ಎಂದರೆ ಪ್ರಕೃತ್ಯಾದಿ ಸ್ಥೂಲಪದಾರ್ಥಗಳೆಲ್ಲವೂ ಸ್ಥಿತವಾಗಿವೆಯೋ, ಅದರ ಹೆಸರೇ 'ಅಪ್', ಎಂದಾಗಿರುತ್ತದೆ.

ಮತ್ತು ಅದು ಬ್ರಹ್ಮದ ಹೆಸರೂ ಆಗಿದೆ. ಮತ್ತು ಅದನ್ನೇ 'ಸ್ಕಂಭ', ಎಂದೂ ಕರೆಯುತ್ತಾರೆ. ಅವನು ಎಂತಹ ದೇವನು? ಮತ್ತು ಎಲ್ಲಿರುತ್ತಾನೆ? ಇದರ ಉತ್ತರವೇನೆಂದರೆ_

ಯಾವನು (ಅಂತಃ) ಎಲ್ಲರ ಒಳಗೆ ವ್ಯಾಪಕನಾಗಿ ಪರಿಪೂರ್ಣನಾಗಿದ್ದಾನೋ, ಅವನನ್ನೇ ನೀವು ಉಪಾಸ್ಯನೂ, ಪೂಜ್ಯನೂ, ಮತ್ತು ಇಷ್ಟದೇವನೂ, ಎಂದು ತಿಳಿಯಿರಿ!

ಅನೇನ ವೇದಮಂತ್ರಪ್ರಮಾಣೇನಾಪ್‌ಶಬ್ದೇನ ಪರಮಾತ್ಮನೋಽತ್ರ ಗ್ರಹಣಂ ಕ್ರಿಯತೇ ॥" ಇತ್ಯರ್ಥ ಉಕ್ತಃ _ಅನು.

ಈ ವೇದಮಂತ್ರದ ಪ್ರಮಾಣದಿಂದ, **'ಅಪ್'**ಶಬ್ದದಿಂದ ಪರಮಾತ್ಮನ, ಎಂದರೆ ಬ್ರಹ್ಮನ ಗ್ರಹಣ ಮಾಡಲಾಗುತ್ತದೆ." _ಅನು.

(ಓಂ ವನಸ್ಪತಿಭ್ಯೋ.) ವನಾನಾಂ ಲೋಕಾನಾಂ ಪತಯ ಈಶ್ವರೋತ್ಪಾದಿತಾ ವಾಯು-ಮೇಘಾದಯಃ ಪದಾರ್ಥಾ ಅತ್ರ ಗ್ರಾಹ್ಯಾಃ.

(ಓಂ ವನಸ್ಪತಿಭ್ಯೋ.) 'ವನ', ಎಂದರೆ ದರ್ಶನೀಯವಾದವುಗಳ 'ಪತಿ', ಎಂದರೆ ಈಶ್ವರ! ಅವನಿಂದ ಉತ್ಪನ್ನವಾದ ವಾಯು, ಮೇಘ ಮೊದಲಾದ ಪದಾರ್ಥಗಳು ಇಲ್ಲಿ ಗ್ರಹಿಸಲ್ಪಡಬೇಕು!

ಯದ್ವೋತ್ತಮಗುಣಯೋಗೇನೇಶ್ವರೇಣೋ-ತ್ಪಾದಿತೇಭ್ಯೋ ಮಹಾವೃಕ್ಷೇಭ್ಯಶ್ಚೋಪಕಾರಗ್ರಹಣಂ ಸದಾ ಕಾರ್ಯಮಿತಿ ಬೋಧ್ಯಮ್ ॥ ೭ ॥

ಅಥವಾ ಉತ್ತಮಗುಣಗಳ ಯೋಗದಿಂದ, ಈಶ್ವರನಿಂದ ಉತ್ಪನ್ನವಾದ ಮಹಾವೃಕ್ಷಗಳ ಕಡೆಯಿಂದ, ಉಪಕಾರ ಗ್ರಹಣವನ್ನು ಯಾವಾಗಲೂ ಮಾಡಬೇಕು, ಎಂದು ತಿಳಿಯಬೇಕು!

ಅಂದರೆ, ಈಶ್ವರನಿಂದ ಉತ್ಪನ್ನವಾದ ವಾಯು ಮತ್ತು ಮೇಘ ಮೊದಲಾದ ಎಲ್ಲಾ ಪದಾರ್ಥಗಳು;

ಹಾಗೂ ಯಾವವುಗಳಿಂದ ಅಧಿಕ ಮಳೆಯಾಗುತ್ತದೋ, ಮತ್ತು ಯಾವವುಗಳ ಹಣ್ಣುಗಳಿಂದ ಜಗತ್ತಿನ ಉಪಕಾರವಾಗುತ್ತದೋ, ಅವುಗಳಿಗೆ **ನಮಃ**! ಎಂದರೆ, ಆ [ದೊಡ್ಡ ವೃಕ್ಷ]ಗಳ ರಕ್ಷಣೆಯನ್ನು ಮಾಡಬೇಕು! [೭]

(ಓಂ ಶ್ರಿಯೈ.) ಶ್ರೀಯತೇ ಸೇವ್ಯತೇ ಸರ್ವೈ-ರ್ಜನೈಸ್ಸಾ ಶ್ರೀರೀಶ್ವರಃ ಸರ್ವಸುಖಶೋಭಾವತ್ವಾತ್.

(ಓಂ ಶ್ರಿಯೈ.) ಸಮಸ್ತ ಜನರಿಂದಲೂ ಯಾವಳು ಸೇವಿಸಲ್ಪಡುತ್ತಾಳೋ, ಅವಳು 'ಶ್ರೀ'; ಎಂದರೆ, ಸಮಸ್ತ ಸುಖಗಳನ್ನೂ, ಶೋಭೆಯನ್ನೂ ಉಳ್ಳವನಾದುದರಿಂದ, ಈಶ್ವರ!

ಯದ್ವೇಶ್ವರೇಣೋತ್ಪಾದಿತಾ ವಿಶ್ವಶೋಭಾ ಚ ॥ ೮ ॥

ಅಥವಾ, ಈಶ್ವರನಿಂದ ಉತ್ಪನ್ನ ಮಾಡಲ್ಪಟ್ಟ ಜಗತ್ತಿನ ಶೋಭೆ!

ಅಂದರೆ, ಸೇವೆಗೆ ಯೋಗ್ಯನಾದ ಪರಮಾತ್ಮಾ, ಮತ್ತು ಪುರುಷಾರ್ಥದಿಂದ '**ರಾಜ್ಯಶ್ರೀ**'ಯ ಪ್ರಾಪ್ತಿಗಾಗಿ ಇವರಿಗೆ **ನಮಃ**! ಎಂದರೆ, ಯಾವಾಗಲೂ ಉದ್ಯೋಗ ಮಾಡುವುದು! [೮]

(ಓಂ ಭದ್ರಕಾಲ್ಯೈ.) ಯಾ ಭದ್ರಂ ಕಲ್ಯಾಣಂ ಸುಖಂ ಕಲಯತಿ ಸಾ ಭದ್ರಕಾಲೀಶ್ವರಶಕ್ತಿಃ ॥ ೯ ॥

(ಓಂ ಭದ್ರಕಾಲ್ಯೈ.) ಯಾವುದು 'ಭದ್ರ', ಎಂದರೆ ಕಲ್ಯಾಣವನ್ನೂ, ಸುಖವನ್ನೂ, ಎಸಗುತ್ತದೋ, ಅದು '**ಭದ್ರಕಾಲೀ**'; ಎಂದರೆ ಈಶ್ವರನ ಶಕ್ತಿ!

ಅಂದರೆ, ಯಾವುದು ಕಲ್ಯಾಣವನ್ನುಂಟುಮಾಡುವ ಪರಮಾತ್ಮನ ಶಕ್ತಿ, ಎಂದರೆ ಸಾಮರ್ಥ್ಯವಾಗಿದೆಯೋ, ಅದಕ್ಕೆ **ನಮಃ**! ಎಂದರೆ, ಅದರ ಆಶ್ರಯವನ್ನು ಯಾವಾಗಲೂ ಮಾಡುವುದು! [೯]

(ಓಂ ಬ್ರಹ್ಮಪತಯೇ.) ಬ್ರಹ್ಮಣಃ ಸರ್ವಶಾಸ್ತ್ರ-ವಿದ್ಯಾಯುಕ್ತಸ್ಯ ವೇದಸ್ಯ ಬ್ರಹ್ಮಾಂಡಸ್ಯ ವಾ ಪತಿರೀಶ್ವರಃ ॥೧೦॥

(ಓಂ ಬ್ರಹ್ಮಪತಯೇ.) 'ಬ್ರಹ್ಮ', ಎಂದರೆ ಸಮಸ್ತ ಶಾಸ್ತ್ರಗಳ ವಿದ್ಯೆಯಿಂದ ಕೂಡಿದುದರ, ಅಥವಾ ವೇದದ, ಅಥವಾ ಬ್ರಹ್ಮಾಂಡದ, **ಪತಿ;** ಎಂದರೆ **ಈಶ್ವರ!**

ಅಂದರೆ, ವೇದಶಾಸ್ತ್ರದ ರಕ್ಷಕನಾದ ಜಗದೀಶ್ವರ ; ಇವನಿಗೆ **ನಮಃ!** ಎಂದರೆ, ವೇದಗಳ ಸ್ವಾಮಿಯಾದ ಈಶ್ವರನ ಪ್ರಾರ್ಥನೆಯನ್ನು ವಿದ್ಯಾ[ಪ್ರಾಪ್ತಿ]ಗಾಗಿ ಮಾಡುವುದು! [೧೦]

(ಓಂ ವಾಸ್ತುಪತಯೇ.) ವಸಂತಿ ಸರ್ವಾಣಿ ಭೂತಾನಿ ಯಸ್ಮಿಂಸ್ತದ್ ವಾಸ್ತ್ವಾಕಾಶಮ್[⊛], ತತ್ಪತಿರೀಶ್ವರಃ ॥೧೧॥

(ಓಂ **ವಾಸ್ತುಪತಯೇ.**) ಯಾವುದರಲ್ಲಿ ಸಮಸ್ತ ಪ್ರಾಣಿಗಳೂ ವಾಸಮಾಡುತ್ತವೋ, ಅದು **'ವಾಸ್ತು'**, ಎಂದರೆ, ಆಕಾಶ! ಅದರ ಪತಿಯಾದ ಈಶ್ವರ!

ಅಂದರೆ, **'ವಾಸ್ತುಪತಿ'**, ಎಂದರೆ, ಯಾವನು ಗೃಹಸಂಬಂಧದ ಪದಾರ್ಥಗಳ ಪಾಲನೆ ಮಾಡುತ್ತಾನೋ, ಆ ಈಶ್ವರ! ಅವನಿಗೆ **ನಮಃ!** [೧೧]

(ಓಂ ವಿಶ್ವೇಭ್ಯೋ.) ಅಸ್ಯಾರ್ಥ ಉಕ್ತಃ* ॥೧೨॥

(ಓಂ ವಿಶ್ವೇಭ್ಯೋ.) ಇದರ ಅರ್ಥವು [ಮೊದಲೇ] ಹೇಳಲ್ಪಟ್ಟಿದೆ.*

ಅಂದರೆ, ಅವರಿಗೆ **ನಮಃ!** [೧೨]

(ಓಂ ದಿವಾಚರೇಭ್ಯೋ.); (ಓಂ ನಕ್ತಂಚಾರಿಭ್ಯೋ.) ಈಶ್ವರಕೃಪಯೈವಂ ಭವೇನ್ನಃ ;

(ಓಂ ದಿವಾಚರೇಭ್ಯೋ.); (ಓಂ ನಕ್ತಂ-ಚಾರಿಭ್ಯೋ.) ಈಶ್ವರನ ಕೃಪೆಯಿಂದ ನಮಗೆ ಹೇಗಾಗ ಬೇಕೆಂದರೆ_

ದಿವಸೇ ಯಾನಿ ಭೂತಾನಿ ವಿಚರಂತಿ, ರಾತ್ರೌ ಚ, ತಾನಿ ವಿಘ್ನಂ ಮಾ ಕುರ್ವಂತು ;

ಹಗಲಿನಲ್ಲಿ ಯಾವ ಪ್ರಾಣಿಗಳು ವಿಚರಿಸುತ್ತವೋ, ಮತ್ತು ರಾತ್ರಿಯಲ್ಲಿ [ಯಾವ ಪ್ರಾಣಿಗಳು ವಿಚರಿಸು ತ್ತವೋ,] ಅವುಗಳು ನಮಗೆ ವಿಘ್ನ ಮಾಡದಿರಲಿ!

ತೈಃ ಸಹಾವಿರೋಧೋಽಸ್ತು ನಃ ;

ಅವುಗಳೊಡನೆ ನಮ್ಮ ವಿರೋಧವುಂಟಾಗದಿರಲಿ!

ಏತದರ್ಥೋಽಯಮಾರಂಭಃ ॥೧೩, ೧೪॥

ಈ ಪ್ರಯೋಜನಕ್ಕಾಗಿ ಇದು ಪ್ರಯತ್ನವಾಗಿದೆ.**

ಅಂದರೆ, ಯಾವುವು ಹಗಲಿನಲ್ಲಿ ಮತ್ತು ರಾತ್ರಿಯಲ್ಲಿ ವಿಚರಿಸುವ ಪ್ರಾಣಿಗಳಾಗಿರುತ್ತವೋ, ಅವುಗಳಿಗೆ **ನಮಃ!** ಎಂದರೆ, ಅವುಗಳಿಂದ ಉಪಕಾರ ವನ್ನು ತೆಗೆದುಕೊಳ್ಳುವುದು, ಮತ್ತು ಅವುಗಳಿಗೆ ಸುಖವನ್ನು ಕೊಡುವುದು! [೧೩, ೧೪]

⊛ 'ಆಕಾಶಃ' _ಆ. ವೈ.

* ಅಸ್ಮಿನ್ನಧ್ಯಾಯೇ ೮೨೦ ತಮಂ ಪೃಷ್ಠಂ ದ್ರಷ್ಟವ್ಯಮ್ _ಅನು.

* ಈ ಅಧ್ಯಾಯದಲ್ಲಿ ೮೨೦ ನೆಯ ಪುಟವನ್ನು ನೋಡಿ _ಅನು.

** ಆರಂಭ, ಎಂದರೆ ಪ್ರಯತ್ನ _ಅನು.

(ಓಂ ಸರ್ವಾತ್ಮಭೂತಯೇ.) ಸರ್ವೇಷಾಂ ಜೀವಾತ್ಮನಾಂ ಭೂತಿರ್ಭವನಂ ಸತ್ತೇಶ್ವರೋಽತ್ರ ಗ್ರಾಹ್ಯಃ ॥ ೧೫ ॥

(ಓಂ ಸರ್ವಾತ್ಮಭೂತಯೇ.) ಸಮಸ್ತ ಜೀವಾತ್ಮರ ಇರುವಿಕೆ, ಎಂದರೆ ಅಸ್ತಿತ್ವ[ಕ್ಕೆ ಕಾರಣನಾದ] ಈಶ್ವರನು ಇಲ್ಲಿ ಗ್ರಹಿಸಲ್ಪಡಬೇಕು!

ಅಂದರೆ, ಅವನಿಗೆ **ನಮಃ**! ಎಂದರೆ, ಎಲ್ಲರಲ್ಲೂ ವ್ಯಾಪ್ತನಾದ ಪರಮೇಶ್ವರನ ಅಸ್ತಿತ್ವವನ್ನು ಯಾವಾಗಲೂ ಧ್ಯಾನದಲ್ಲಿಟ್ಟುಕೊಳ್ಳುವುದು! [೧೫]

(ಓಂ ಪಿತೃಭ್ಯಃ) ಅಸ್ಯಾರ್ಥ ಉಕ್ತಃ ಪಿತೃತರ್ಪಣೇ* ॥ ೧೬ ॥

(ಓಂ ಪಿತೃಭ್ಯಃ.) ಪಿತೃತರ್ಪಣದಲ್ಲಿ ಇದರ ಅರ್ಥವು ಹೇಳಲ್ಪಟ್ಟಿದೆ.*

ಅಂದರೆ, ಇವರಿಗೆ **ನಮಃ**! ಎಂದರೆ, ತಾಯಿ, ತಂದೆ ಮತ್ತು ಆಚಾರ್ಯ ಮೊದಲಾದವರಿಗೆ ಮೊದಲು ಭೋಜನ ಮೊದಲಾದುವುಗಳಿಂದ ಸೇವೆ ಮಾಡಿ, ನಂತರ, ತಾನು ಭೋಜನ ಮೊದಲಾದುವನ್ನು ಮಾಡುವುದು! [೧೬]

'ನಮಃ' ಶಬ್ದದ ವಿಶಿಷ್ಟಾರ್ಥ

(ನಮಃ) ನಮ ಇತ್ಯಸ್ಯ ನಿರಭಿಮಾನ-ದ್ಯೋತನಾರ್ಥಃ ಪರಸ್ಯೋತ್ಕೃಷ್ಟತಾಮಾನ್ಯಾ-ಜ್ಞಾಪನಾರ್ಥಶ್ಚಾರಂಭಃ ॥ ೧ - ೧೬ ॥

(ನಮಃ) 'ನಮಃ', ಎಂದರೆ ತನ್ನ ನಿರಭಿಮಾನತ್ವವನ್ನು ಪ್ರಕಾಶಿಸುವುದಕ್ಕಾಗಿಯೂ, ಹಾಗೂ ಇತರರ ಉತ್ಕೃಷ್ಟತೆಯ ಅಂಗೀಕಾರವನ್ನು ತಿಳಿಸುವುದರ ಸಲುವಾಗಿಯೂ [ಇದು] ಪ್ರಯತ್ನ, ಎಂದರ್ಥ!

ಅಂದರೆ, ತಾನು ಅಭಿಮಾನರಹಿತನಾಗಿರುವುದು, ಹಾಗೂ ಇತರರಿಗೆ ಗೌರವವನ್ನು ಕೊಡುವುದು! [೧ - ೧೬]

ಅನ್ನವನ್ನು ಕೊಡುವ ವಿಧಿ

ಇದರ ನಂತರ, ಈ [ಕೆಳಗೆ ಬರೆದಂತೆ] ಆರು ಭಾಗಗಳನ್ನು ಇಡಬೇಕು.

"ಶುನಾಂ ಚ ಪತಿತಾನಾಂ ಚ ಶ್ವಪಚಾಂ ಪಾಪರೋಗಿಣಾಮ್ ।
ವಾಯಸಾನಾಂ ಕೃಮೀಣಾಂ ಚ ಶನಕೈರ್ನಿರ್ವಪೇದ್ ಭುವಿ ॥"

[ಮನುಸ್ಮೃತೌ ಅ. ೩, ಶ್ಲೋ. ೯೨]

* ಅಸ್ಮಿನ್ನಧ್ಯಾಯೇ ೮೧೯ ತಮಂ ಪೃಷ್ಠಂ ದ್ರಷ್ಟವ್ಯಮ್ _ಅನು.

* ಈ ಅಧ್ಯಾಯದಲ್ಲಿ ೮೧೯ ನೆಯ ಪುಟವನ್ನು ನೋಡಿ _ಅನು.

[ಅರ್ಥ:_ "ನಾಯಿಗಳಿಗೂ, ಪತಿತರಿಗೂ, ಚಾಂಡಾಲರಿಗೂ, ಪಾಪರೋಗಿಗಳಿಗೂ, ಮತ್ತು ಕಾಗೆಗಳಿಗೂ, ಹಾಗೂ ಕೃಮಿಗಳಿಗೂ ಕೂಡ, ಭೂಮಿಯ ಮೇಲೆ * ನಿಧಾನವಾಗಿ [ಅನ್ನವನ್ನು] ಇಡಬೇಕು!"

(ಮನುಸ್ಮೃತಿ: ೩. ೯೨)]

ಅನೇನ ಷಡ್ ಭಾಗಾನ್ ಭೂಮೌ ದದ್ಯಾತ್.

ಈ [ಪ್ರಮಾಣ]ದಿಂದ, [ಅನ್ನದ] ಆರು ಭಾಗಗಳನ್ನು ಭೂಮಿಯ ಮೇಲೆ ಕೊಡಬೇಕು!

ಅಂದರೆ, ನಾಯಿಗಳಿಗೆ, ಬರಪೀಡಿತರಿಗೆ, ಕುಷ್ಠ ಮೊದಲಾದ ರೋಗಿಗಳಿಗೆ, ಕಾಗೆ ಮೊದಲಾದ ಪಕ್ಷಿಗಳಿಗೆ ಮತ್ತು ಇರುವೆ ಮೊದಲಾದ ಕೃಮಿಗಳಿಗೂ ಕೂಡ, ಆರು ಭಾಗಗಳನ್ನು ಬೇರೆ ಬೇರೆಯಾಗಿ ಹಂಚಿ, ಕೊಟ್ಟು ಬಿಡಬೇಕು!

ಏವಂ ಸರ್ವಪ್ರಾಣಿಭ್ಯೋ ಭಾಗಾನ್ ವಿಭಜ್ಯ ದತ್ವಾ ಚ ತೇಷಾಂ ಪ್ರಸನ್ನತಾಂ ಸಂಪಾದಯೇತ್.

ಹೀಗೆ, ಎಲ್ಲಾ ಪ್ರಾಣಿಗಳಿಗೂ ಭಾಗಗಳನ್ನು ಹಂಚಿ, ಹಾಗೂ ಕೊಟ್ಟು, ಅವುಗಳ ಪ್ರಸನ್ನತೆಯನ್ನು ಸಂಪಾದಿಸಬೇಕು!

ಅಂದರೆ, ಸಮಸ್ತ ಪ್ರಾಣಿಗಳಿಗೂ ಮನುಷ್ಯರಿಂದ ಸುಖವು ಉಂಟಾಗಬೇಕು! ಆದುದರಿಂದ, ಅವುಗಳನ್ನು ಪ್ರಸನ್ನವಾಗಿಡಬೇಕು!

ಇತಿ ಬಲಿವೈಶ್ವದೇವಯಜ್ಞಃ ॥

ಇಲ್ಲಿಗೆ (ವೇದದ ಮತ್ತು ಮನುಸ್ಮೃತಿಯ ರೀತಿಯಂತೆ) 'ಬಲಿವೈಶ್ವದೇವ'ಯಜ್ಞವು ಮುಗಿಯಿತು!

ಅಥ ಪಂಚಮೋऽತಿಥಿಯಜ್ಞಃ ಪ್ರೋಚ್ಯತೇ

ಈಗ, ಐದನೆಯದಾದ ಅತಿಥಿಯಜ್ಞವು ಉಪದೇಶಿಸಲ್ಪಡುತ್ತದೆ.

ಅಂದರೆ, ಐದನೆಯದಾದ **'ಅತಿಥಿಯಜ್ಞ'**, ಎಂದರೆ, ಯಾವುದರಲ್ಲಿ ಅತಿಥಿಗಳ ಯಥಾವತ್ ಸೇವೆ ಮಾಡಬೇಕಾಗುತ್ತದೋ, ಅದನ್ನು ಬರೆಯುತ್ತೇವೆ_

ಯತ್ರಾತಿಥೀನಾಂ ಸೇವನಂ ಯಥಾವತ್ ಕ್ರಿಯತೇ ತತ್ರ ಸರ್ವಾಣಿ ಸುಖಾನಿ ಭವಂತೀತಿ.

ಯಾವ [ಕರ್ಮ]ದಲ್ಲಿ ಅತಿಥಿಗಳ ಸೇವನವು ಯಥಾವತ್ತಾಗಿ ಮಾಡಲಾಗುತ್ತದೋ, ಅಲ್ಲಿ ಸಮಸ್ತ ಸುಖಗಳೂ ಉಂಟಾಗುತ್ತವೆ!

* ಎಂದರೆ, ಕೆಳಗೆ ಎಲೆಯ ಮೇಲೆ, ಎಂದರ್ಥ. ಧೂಳಿನಲ್ಲಿ, ಎಂದರ್ಥವಲ್ಲ _ಅನು.

'ಅತಿಥಿ' ಎಂದರೆ ಯಾರು?

ಅಥ ಕೇ ಅತಿಥಯಃ?

ಯೇ ಪೂರ್ಣವಿದ್ಯಾವಂತಃ ಪರೋಪಕಾರಿಣೋ ಜಿತೇಂದ್ರಿಯಾ ಧಾರ್ಮಿಕಾಃ ಸತ್ಯವಾದಿಛಲಾದಿ-ದೋಷರಹಿತಾ ನಿತ್ಯಭ್ರಮಣಕಾರಿಣೋ ಮನುಷ್ಯಾ-ಸ್ತಾನ್ ಅತಿಥಯ ಇತಿ ಕಥಯಂತಿ.

ಹಾಗಾದರೆ, **ಅತಿಥಿಗಳು**, ಎಂದರೆ ಯಾರು?

ಯಾರು ಪೂರ್ಣವಿದ್ಯಾವಂತರೂ, ಪರೋಪಕಾರಿಗಳೂ, ಜಿತೇಂದ್ರಿಯರೂ, ಧಾರ್ಮಿಕರೂ, ಸತ್ಯವಾದಿಗಳೂ, ಛಲವೇ ಮೊದಲಾದ ದೋಷಗಳಿಂದ ರಹಿತರೂ, ನಿತ್ಯವೂ ಭ್ರಮಣ ಮಾಡುವವರೂ ಆದ ಮನುಷ್ಯರಾಗಿರುತ್ತಾರೋ, ಅವರನ್ನು **'ಅತಿಥಿಗಳು'**, ಎಂದು ಕರೆಯುತ್ತಾರೆ.

ಅಂದರೆ, ಯಾವ ಮನುಷ್ಯರು ಪೂರ್ಣವಿದ್ವಾಂಸರೂ, ಪರೋಪಕಾರಿಗಳೂ, ಜಿತೇಂದ್ರಿಯರೂ, ಧರ್ಮಾತ್ಮರೂ, ಸತ್ಯವಾದಿಗಳೂ, ಛಲ-ಕಪಟರಹಿತರೂ, ಮತ್ತು ನಿತ್ಯವೂ ಭ್ರಮಣ ಮಾಡಿ, ವಿದ್ಯೆಯ, ಧರ್ಮದ ಪ್ರಚಾರವನ್ನೂ; ಹಾಗೂ ಅವಿದ್ಯೆಯ, ಅಧರ್ಮದ ನಿವಾರಣೆಯನ್ನೂ ಯಾವಾಗಲೂ ಮಾಡುತ್ತಿರುತ್ತಾರೋ, ಅವರನ್ನು **'ಅತಿಥಿ'**, ಎನ್ನುತ್ತಾರೆ.

ಅತಿಥಿಸತ್ಕಾರಕ್ಕೆ ವೈದಿಕಪ್ರಮಾಣಗಳು

ಅತ್ರಾನೇಕೇ ಪ್ರಮಾಣಭೂತಾ ವೇದಮಂತ್ರಾಃ ಸಂತಿ.

ಈ ವಿಷಯದಲ್ಲಿ ಪ್ರಮಾಣರೂಪವಾದ ವೇದಮಂತ್ರಗಳು ಅನೇಕವಿವೆ.

ಪರಂತ್ವತ್ರ ಸಂಕ್ಷೇಪತೋ ದ್ವಾವೇವ ಲಿಖಾಮಃ_

ಆದರೆ, ಇಲ್ಲಿ ಸಂಕ್ಷೇಪವಾಗಿ ಎರಡು ಮಂತ್ರಗಳನ್ನು ಮಾತ್ರ ಬರೆಯುತ್ತೇವೆ_

[ಋಷಿಃ_ ಅಥರ್ವಾ ; ದೇವತಾ_ ಅಧ್ಯಾತ್ಮಮ್, ವ್ರಾತ್ಯಃ ; ಛಂದಃ_ ದ್ವಿಪದಾ ಸಾಮ್ನೀ ಬೃಹತೀ ; ಸ್ವರಃ_ ಮಧ್ಯಮಃ]

ತದ್ಯಸ್ಯೈವಂ ವಿದ್ವಾನ್ ವ್ರಾತ್ಯೋऽತಿಥಿರ್ಗೃಹಾನಾಗಚ್ಛೇತ್ ॥೧॥

[ಅಥರ್ವವೇದೇ ಕಾಂ. ೧೫, ಅನು. ೨, ವ. ೧೧, ಮಂ. ೧]

[ಅರ್ಥ:_ "ಒಂದು ವೇಳೆ, ಈ ರೀತಿಯ ವಿಶಿಷ್ಟಗುಣವನ್ನುಳ್ಳ ವಿದ್ವಾಂಸನಾದ ಅತಿಥಿಯು ಯಾವನದಾದರೂ ಮನೆಗೆ ಬಂದರೆ,"

(ಅಥರ್ವವೇದ: ೧೫. ೧೧. ೧)]

ಭಾಷ್ಯಮ್_

(ತದ್ಯ) ಯಃ ಪೂರ್ವೋಕ್ತವಿಶೇಷಣಯುಕ್ತೋ* ವಿದ್ವಾನ್ ;

(ವ್ರಾತ್ಯಃ) ಮಹೋತ್ತಮಗುಣವಿಶಿಷ್ಟಃ ಸೇವನೀಯೋಽತಿಥಿಃ ;

ಅರ್ಥಾದ್ಯಸ್ಯ ಗಮನಾಗಮನಯೋರನಿಯತಾ ತಿಥಿಃ ;

ಕಿಂತು ಸ್ವೇಚ್ಛಯಾಽಕಸ್ಮಾದಾಗಚ್ಛೇದ್ ಗಚ್ಛೇಚ್ಚ ॥೧॥

ಭಾಷ್ಯ_

(ತದ್ಯಸ್ಯ ಏವಂ ವಿದ್ವಾನ್) ಯಾವನು ಮೊದಲು ಹೇಳಿದ ವಿಶೇಷಣಗಳಿಂದ ಕೂಡಿದ* ವಿದ್ವಾಂಸನಾದ ;

(ವ್ರಾತ್ಯೋಽತಿಥಿಃ) ['ವ್ರಾತ್ಯ', ಎಂದರೆ] ಮಹಾ ಉತ್ತಮ ಗುಣಗಳಿಂದ ವಿಶಿಷ್ಟನೂ, ಸೇವನೀಯನೂ ಆದ 'ಅತಿಥಿ'ಯು ;

ಅಂದರೆ, ಯಾವನ ಮನೆಗೆ ಮೊದಲು ಹೇಳಿದ ವಿಶೇಷಣ-ಗುಣಗಳಿಂದ ಕೂಡಿದವನೂ, ಉತ್ತಮಗುಣ ಸಹಿತನೂ, ಸೇವೆಗೆ ಯೋಗ್ಯನೂ ಆದ ವಿದ್ವಾಂಸನು ಬಂದರೆ _

ಎಂದರೆ ಯಾವನ ಹೋಗುವಿಕೆ-ಬರುವಿಕೆಗಳ ನಿರ್ದಿಷ್ಟವಾದ ದಿನ ಇಲ್ಲವೋ ;

ಆದರೆ, ತನ್ನಿಷ್ಟದಂತೆ ಅಕಸ್ಮಾತ್ತಾಗಿ ಬರುತ್ತಾನೋ, ಮತ್ತು ಹೋಗುತ್ತಾನೋ ;

ಅಂದರೆ, ಯಾವನ ಬರುವಿಕೆಯ-ಹೋಗುವಿಕೆಯ ಯಾವ 'ತಿಥಿ', ಎಂದರೆ ದಿನವೂ ನಿಶ್ಚಿತವಾಗಿಲ್ಲವೋ, ಅವನು 'ಅತಿಥಿ' ಎಂದು ಕರೆಯಲ್ಪಡುತ್ತಾನೆ.

ಅವನ ಸೇವೆಯನ್ನು ಯಥಾವತ್ತಾಗಿ ಮಾಡಬೇಕು! [೧]

ಅತಿಥಿಸತ್ಕಾರದ ವಿಧಿ

[ಋಷಿಃ_ಅಥರ್ವಾ ; ದೇವತಾ_ಅಧ್ಯಾತ್ಮಮ್, ವ್ರಾತ್ಯಃ ; ಛಂದಃ_ದ್ವಿಪದಾ ಪೂರ್ವಾ ತ್ರಿಷ್ಟುಬತಿಶಕ್ವರೀ ; ಸ್ವರಃ_ಧೈವತಃ]

ಸ್ವಯಮೇನಮಭ್ಯುದೇತ್ಯ ಬ್ರೂಯಾದ್ ವ್ರಾತ್ಯ ಕ್ವಾವಾತ್ಸೀ-
ರ್ವ್ರಾತ್ಯೋದಕಂ ವ್ರಾತ್ಯ ತರ್ಪಯಂತು ವ್ರಾತ್ಯ ಯಥಾ
ತೇ ಪ್ರಿಯಂ ತಥಾಸ್ತು ವ್ರಾತ್ಯ ಯಥಾ ತೇ ವಶಸ್ತಥಾಸ್ತು
ವ್ರಾತ್ಯ ಯಥಾ ತೇ ನಿಕಾಮಸ್ತಥಾಸ್ತ್ವಿತಿ ॥೨॥

[ಅಥರ್ವವೇದೇ ಕಾಂ. ೧೫, ಅನು. ೨, ವ. ೧೧, ಮಂ. ೨]

* ಅಥರ್ವವೇದೇ ಪಂಚದಶೇ ಕಾಂಡೇ ದಶಮತಃ ತ್ರಯೋದಶಂ ಸೂಕ್ತಂ ಯಾವದ್ ವ್ರಾತ್ಯಸ್ಯಾತಿಥೇಃ ಕರ್ಮಣಾಮುಲ್ಲೇಖೋಽಸ್ತಿ _ಅನು.

* ಅಥರ್ವವೇದದ ೧೫ನೆಯ ಕಾಂಡದ ೧೦ ರಿಂದ ೧೩ ನೆಯ ಸೂಕ್ತಗಳ ತನಕ ವ್ರಾತ್ಯಅತಿಥಿಯ ಕರ್ಮಗಳ ಉಲ್ಲೇಖವಿದೆ._ಅನು.

[ಅರ್ಥ:_ " [ಗೃಹಸ್ವಾಮಿಯು] ತಾನೇ ಇವನ ಎದುರಿಗೆ ಎದ್ದು ಬಂದು, ಕೇಳಬೇಕೇನೆಂದರೆ_ 'ವ್ರಾತ್ಯ![$] ನೀವು ಎಲ್ಲಿ ವಾಸ ಮಾಡುವವರಾಗಿದ್ದೀರಿ? ವ್ರಾತ್ಯ! ನೀರನ್ನು [ತೆಗೆದುಕೊಳ್ಳಿ!] ವ್ರಾತ್ಯ! [ಇವು ನಿಮ್ಮನ್ನು] ತೃಪ್ತಿ ಮಾಡಲಿ! ವ್ರಾತ್ಯ ! ಹೇಗೆ ನಿಮಗೆ ಪ್ರಿಯವೋ, ಹಾಗೇ ಆಗಲಿ! ವ್ರಾತ್ಯ! ಹೇಗೆ ನಿಮಗೆ ಅನುಕೂಲವೋ, ಹಾಗೇ ಆಗಲಿ! ವ್ರಾತ್ಯ! ಹೇಗೆ ನಿಮ್ಮ ಅಭಿಲಾಷೆ ಇದೆಯೋ, ಹಾಗೇ ಆಗಲಿ!' "

(ಅಥರ್ವವೇದ: ೧೫. ೧೧. ೨)]

ಭಾಷ್ಯಮ್_

ಯ ಯದಾ ಯದಾ ಗೃಹಸ್ಥಾನಾಂ ಗೃಹೇಷು ಪ್ರಾಪ್ನುಯಾತ್ ;

(ಸ್ವಯಮೇನಮ.) ತದಾ ಗೃಹಸ್ಥೋऽತ್ಯಂತ-ಪ್ರೇಮ್ಣೋತ್ಥಾಯ ನಮಸ್ಕೃತ್ಯ ಚ ತಂ ಮಹೋ-ತ್ತಮಾಸನೇ ನಿಷಾದಯೇತ್.

ತತೋ ಯಥಾಯೋಗ್ಯಂ* ಸೇವಾಂ ಕೃತ್ವಾ ತದನಂತರಂ ತಂ ಪೃಚ್ಛೇತ್_

ಭಾಷ್ಯ_

ಯಾವ [ಅತಿಥಿಯು] ಯಾವಾಗ ಯಾವಾಗ ಗೃಹಸ್ಥರ ಮನೆಗಳಿಗೆ ಬರುತ್ತಾನೋ ;

(ಸ್ವಯಮೇನಮಭ್ಯುದೇತ್ಯ) ಆಗ ಗೃಹಸ್ಥನು ಅತ್ಯಂತ ಪ್ರೇಮದಿಂದ ಎದ್ದು, ಹಾಗೂ ನಮಸ್ಕರಿಸಿ, ಅವನನ್ನು ಬಹಳ ಉತ್ತಮವಾದ ಆಸನದಲ್ಲಿ ಕೂಡಿಸಬೇಕು!

ಅಂದರೆ, ಗೃಹಸ್ಥಜನರು ಅಂತಹ ಪುರುಷನು ಬರುತ್ತಿರುವುದನ್ನು ನೋಡಿ, ಬಹಳ ಪ್ರೇಮದಿಂದ ಎದ್ದು, ನಮಸ್ಕಾರ ಮಾಡಿ, ಉತ್ತಮ ಆಸನದ ಮೇಲೆ (ಅವನನ್ನು) ಕೂಡಿಸಬೇಕು!

ಅದಾದ ಮೇಲೆ, ಯಥಾಯೋಗ್ಯವಾಗಿ* ಸೇವೆಯನ್ನು ಮಾಡಿ, ಅದರ ನಂತರ, ಅವನನ್ನು ಕೇಳಬೇಕೇನೆಂದರೆ_

ಆರ್ಯಸಮಾಜಸ್ಯ ಸಪ್ತಮೋ ನಿಯಮ ಏಷ ಯಸ್ಯ ಮೂಲ-ಹಿಂದೀಪಾಠ ಏವಮಸ್ತಿ_

७. सबसे प्रीतिपूर्वक धर्मानुसार यथायोग्य वर्तना चाहिए ।

* ಯಾರು ಎಷ್ಟು ಯೋಗ್ಯರೋ, ಅವರಿಗೆ ಅಷ್ಟೇ ಸತ್ಕಾರವನ್ನು ಮಾಡುವುದು, ಅಥವಾ ಅವರೊಡನೆ ಅವರಂತೆಯೇ ವರ್ತಿಸುವುದು; ಹೆಚ್ಚೂ ಅಲ್ಲ ; ಕಡಿಮೆಯೂ ಅಲ್ಲ ; '**ಯಥಾಯೋಗ್ಯ**', ಎನಿಸುತ್ತದೆ. ಈ ವೈಶಿಷ್ಟ್ಯವು ಮಹರ್ಷಿ ದಯಾನಂದರ ಕೊಡುಗೆ! ಆರ್ಯಸಮಾಜದ ಏಳನೆಯ ನಿಯಮವು ಇದೇ ಆಗಿದೆ_

" ೭. ಎಲ್ಲರೊಡನೆ ಪ್ರೀತಿಪೂರ್ವಕವಾಗಿಯೂ, ಧರ್ಮಾನುಸಾರವಾಗಿಯೂ, ಹಾಗೂ ಯಥಾಯೋಗ್ಯವಾಗಿಯೂ ವರ್ತಿಸಬೇಕು!"

_ಅನು.

$ '**ವ್ರಾತ್ಯ**', ಎಂದರೆ ವ್ರತಧಾರಿ! ತನ್ನದೇ ಆದ ನಿಯಮ-ಅನುಶಾಸನಗಳಿಗನುಸಾರವಾಗಿ, ಆಚರಣೆಯನ್ನು ಇಟ್ಟುಕೊಂಡಿರುವವನು. ಪರಮಾತ್ಮನಿಗೂ '**ವ್ರಾತ್ಯ**', ಎಂಬ ಹೆಸರಿದೆ. ಮಧ್ಯಕಾಲದಲ್ಲಿ ಈ ವೈದಿಕ ಅರ್ಥವು ಕೆಟ್ಟುಹೋಗಿ, ಸಂಸ್ಕಾರರಹಿತ, ಪತಿತ, ನೀಚ, ವರ್ಣಸಂಕರ, ಎಂದರೆ, ಶೂದ್ರಾ-ಕ್ಷತ್ರಿಯಸಂಗಮದಿಂದ ಉತ್ಪನ್ನನಾದವನು ಮೊದಲಾದ ಅರ್ಥಗಳು ಬಳಕೆಗೆ ಬಂದುವು. '**ವ್ರಾತ್ಯಸ್ತೋಮ**', ಎಂಬ ಯಜ್ಞವೂ ಪತಿತರನ್ನು ಆರ್ಯಧರ್ಮಕ್ಕೆ ವಾಪಸು ಕರೆತರಲು ಮಾಡಲಾಗುತ್ತಿತ್ತು _ಅನು.

ಅಂದರೆ_ 'ನಿಮಗೆ ನೀರು ಅಥವಾ ಯಾವುದಾದರೂ ಬೇರೆ ವಸ್ತುವಿನ ಇಚ್ಛೆ ಇದ್ದರೆ, ಹೇಳಿರಿ', ಎಂದು ಕೇಳಬೇಕು! ನಂತರ, ಅವನು ಸ್ವಸ್ಥಚಿತ್ತನಾದ ಮೇಲೆ ಕೇಳಬೇಕೇನೆಂದರೆ_

(ವ್ರಾತ್ಯ ಕ್ವಾವಾತ್ಸೀಃ) ಹೇ ಪುರುಷೋತ್ತಮ! ತ್ವಂ ಕುತ್ರ ನಿವಾಸಂ ಕೃತವಾನ್?

(ವ್ರಾತ್ಯ ಕ್ವ ಅವಾತ್ಸೀಃ) ಓ ಪುರುಷೋತ್ತಮರೇ! ನೀವು ಎಲ್ಲಿ ನಿವಾಸ ಮಾಡುವವರಾಗಿದ್ದೀರಿ?

ಅಂದರೆ, ಹೇ **ವ್ರಾತ್ಯ**!, ಎಂದರೆ ಓ ಉತ್ತಮ ಪುರುಷರೇ! ನೀವು ನಿನ್ನೆಯ ದಿನ ಎಲ್ಲಿ ವಾಸ ಮಾಡಿದ್ದಿರಿ?

(ವ್ರಾತ್ಯೋದಕಮ್) ಹೇ ಅತಿಥೇ! ಜಲಮೇತದ್ ಗೃಹಾಣ.

(ವ್ರಾತ್ಯ ಉದಕಮ್) ಹೇ ಅತಿಥಿಗಳೇ! ಈ ನೀರನ್ನು ತೆಗೆದುಕೊಳ್ಳಿ!

(ವ್ರಾತ್ಯ ತರ್ಪಯಂತು) ಯಥಾ ಭವಂತಃ ಸ್ವಕೀಯಸತ್ಯೋಪದೇಶೇನಾಸ್ಮಾನಾಸ್ಮಾಕಂ ಮಿತ್ರಾದೀಂಶ್ಚ ತರ್ಪಯಂತಿ ;

(ವ್ರಾತ್ಯ ತರ್ಪಯಂತು) ಹೇ ಅತಿಥಿಗಳೇ! ಹೇಗೆ ತಾವು ತಮ್ಮ ಸತ್ಯೋಪದೇಶದಿಂದ, ನಮ್ಮನ್ನೂ, ಹಾಗೂ ನಮ್ಮ ಮಿತ್ರರೇ ಮೊದಲಾದವರನ್ನೂ ಕೂಡ, ತೃಪ್ತರನ್ನಾಗಿ ಮಾಡುತ್ತೀರೋ ;

ತಥಾಽಸ್ಮದೀಯಾ ಭವಂತಂ ಚ [ತರ್ಪಯಂತು.]

ಹಾಗೆಯೇ, ನಮ್ಮವರೂ ಕೂಡ, ತಮ್ಮನ್ನು [ತೃಪ್ತಗೊಳಿಸಲಿ!]

ಅಂದರೆ, ತಮ್ಮ ಸತ್ಯ ಉಪದೇಶದಿಂದ ನಮ್ಮನ್ನು ತೃಪ್ತ ಮಾಡಿರಿ! ಇದರಿಂದ, ನಮ್ಮ ಇಷ್ಟ-ಮಿತ್ರ ಜನರೆಲ್ಲರೂ ಪ್ರಸನ್ನರಾಗಿ, ತಮ್ಮನ್ನೂ ಕೂಡ, ಸೇವೆಯ ಮೂಲಕ ಸಂತುಷ್ಟರನ್ನಾಗಿ ಇಡಲಿ!

(ವ್ರಾತ್ಯ ಯಥಾ ತೇ ಪ್ರಿಯಮ್.) ಹೇ ವಿದ್ವನ್! ಯಥಾ ಭವತಃ ಪ್ರಸನ್ನತಾ ಸ್ಯಾತ್ತಥಾ ವಯಂ ಕುರ್ಯ್ಯಾಮ.

(ವ್ರಾತ್ಯ ಯಥಾ ತೇ ಪ್ರಿಯಮ್.) ಓ ವಿದ್ವಾಂಸರೇ! ಹೇಗೆ ತಮಗೆ ಪ್ರಸನ್ನತೆ ಉಂಟಾಗುತ್ತದೋ, **(ತಥಾಸ್ತು)** ಹಾಗೆ ನಾವು ಮಾಡೋಣ!

ಯದ್ವಸ್ತು ಭವತ್ಪ್ರಿಯಮಸ್ತಿ, ತಸ್ಯಾಜ್ಞಾಂ ಕುರು.

ಯಾವ ವಸ್ತುವು ತಮಗೆ ಪ್ರಿಯವಾಗಿದೆಯೋ, ಅದಕ್ಕಾಗಿ ಅಪ್ಪಣೆ ಮಾಡಿ!

(ವ್ರಾತ್ಯ ಯಥಾ ತೇ ವಶಃ.) ಹೇ ಅತಿಥೇ! ಭವಾನ್ ಯಥೇಚ್ಛತಿ ತಥೈವ ವಯಂ ತದನುಕೂಲತಯಾ ಭವತ್ಸೇವಾಕರಣೇ ನಿಶ್ಚಿನುಯಾಮ.

(ವ್ರಾತ್ಯ ಯಥಾ ತೇ ವಶಃ.) ಹೇ ಅತಿಥಿ! ತಾವು ಹೇಗೆ ಇಚ್ಛಿಸುತ್ತೀರೋ, ಹಾಗೆಯೇ ನಾವು ಅದಕ್ಕೆ ಅನುಕೂಲವಾಗಿ, ತಮ್ಮ ಸೇವೆಯನ್ನು ಮಾಡುವುದರಲ್ಲಿ ಸಂದೇಹರಹಿತರಾಗಿರೋಣ!

(ವ್ರಾತ್ಯ ಯಥಾ ತೇ ನಿಕಾಮಃ.) ಯಥಾ ಭವದಿಚ್ಛಾಪೂರ್ತಿಃ ಸ್ಯಾತ್ತಥಾ ಸೇವಾಂ ವಯಂ ಕುರ್ಯ್ಯಾಮ ;

(ವ್ರಾತ್ಯ ಯಥಾ ತೇ ನಿಕಾಮಃ) ಹೇಗೆ ತಮ್ಮ ಇಚ್ಛೆಯ ಪೂರ್ತಿಯಾಗಬಹುದೋ, ಹಾಗೆ ನಾವು ಸೇವೆಯನ್ನು ಮಾಡೋಣ!

ಅಂದರೆ, ಹೇಗೆ ತಮ್ಮ ಕಾಮನೆಯು ಪೂರ್ಣವಾಗಬಹುದೋ, ಹಾಗೆ ಸೇವೆಯು ನೆರವೇರಲಿ!

ಯತೋ ಭವಾನ್ ವಯಂ ಚ ಪರಸ್ಪರಂ ಸೇವಾಸತ್ಸಂಗಪೂರ್ವಿಕಯಾ ವಿದ್ಯಾವೃದ್ಧ್ಯಾ ಸದಾ ಸುಖೇ ತಿಷ್ಠೇಮ ॥ ೨ ॥

ಇದರಿಂದ, ತಾವು ಮತ್ತು ನಾವೂ ಕೂಡ, ಪರಸ್ಪರ ಸೇವೆ-ಸತ್ಸಂಗಪೂರ್ವಕವಾದ ವಿದ್ಯೆಯ ವೃದ್ಧಿಯಿಂದ ಯಾವಾಗಲೂ ಸುಖದಲ್ಲಿರೋಣ!

ಅಂದರೆ, ಇದರಿಂದ, ತಾವು ಮತ್ತು ನಾವೆಲ್ಲರೂ ಪರಸ್ಪರ ಪ್ರೀತಿಯಿಂದ, ಹಾಗೂ ಸತ್ಸಂಗಪೂರ್ವಕವಾಗಿ ವಿದ್ಯೆಯ ವೃದ್ಧಿಯನ್ನು ಮಾಡಿಕೊಂಡು, ಯಾವಾಗಲೂ ಆನಂದದಲ್ಲಿರೋಣ! [೨]

ಇತ್ಯತಿಥಿಯಜ್ಞಃ ಸಮಾಪ್ತಃ ॥

ಇಲ್ಲಿಗೆ, ಅತಿಥಿಯಜ್ಞವು ಮುಗಿಯಿತು!

ಇತಿ ಸಂಕ್ಷೇಪತಃ ಪಂಚಮಹಾಯಜ್ಞ-ವಿಷಯಃ ॥

ಇಲ್ಲಿಗೆ ಸಂಕ್ಷೇಪವಾಗಿ ಪಂಚಮಹಾಯಜ್ಞಗಳ ವಿಷಯವು ಮುಗಿಯಿತು. [೨೪]

(೨೫) ಗ್ರಂಥಗಳ ಪ್ರಮಾಣತ್ವ-ಅಪ್ರಮಾಣತ್ವ

ಅಥ ಗ್ರಂಥಪ್ರಾಮಾಣ್ಯಾಪ್ರಾಮಾಣ್ಯವಿಷಯಃ

ಈಗ, ಗ್ರಂಥಗಳ ಪ್ರಮಾಣತ್ವ, ಹಾಗೂ ಅಪ್ರಮಾಣತ್ವದ ವಿಷಯವಾಗಿ ಬರೆಯುತ್ತೇವೆ.

ಸ್ವತಃಪ್ರಮಾಣ-ಪರತಃಪ್ರಮಾಣಗ್ರಂಥಗಳ ಪರಿಭಾಷೆ

ಸೃಷ್ಟಿಮಾರಭ್ಯಾದ್ಯಪರ್ಯ್ಯಂತಂ ;

ಸೃಷ್ಟಿಯಿಂದಾರಂಭಿಸಿ, ಇಂದಿನ ತನಕ ;

ಯೇಷಾಂ ಯೇಷಾಂ ಸ್ವತಃಪರತಃಪ್ರಮಾಣ-ಸಿದ್ಧಾನಾಂ ಗ್ರಂಥಾನಾಂ ;

ಯಾವ ಯಾವ ಗ್ರಂಥಗಳು ಸ್ವತಃಪ್ರಮಾಣವೆಂದೂ, [ಯಾವುವು] ಪರತಃಪ್ರಮಾಣವೆಂದೂ ;

ಪಕ್ಷಪಾತರಹಿತೈ ;

ಪಕ್ಷಪಾತರಹಿತರೂ ;

ರಾಗದ್ವೇಷಶೂನ್ಯೈಃ ;

ರಾಗ-ದ್ವೇಷಗಳಿಂದ ಶೂನ್ಯರೂ ;

ಸತ್ಯಧರ್ಮಪ್ರಿಯಾಚರಣೈಃ ;

ಸತ್ಯಧರ್ಮ, ಹಾಗೂ ಪ್ರಿಯವಾದ ಆಚರಣೆಯನ್ನುಳ್ಳವರೂ ;

ಸರ್ವೋಪಕಾರಕೈರಾರ್ಯ್ಯೈರ್ವಿದ್ವದ್‌ಭಿರ್ಯಥಾಂ-ಗೀಕಾರಃ ಕೃತಸ್ತಥಾಽತ್ರೋಚ್ಯತೇ_

ಎಲ್ಲರಿಗೂ ಉಪಕಾರವನ್ನು ಮಾಡುವವರೂ ಆದ ಆರ್ಯವಿದ್ವಾಂಸರುಗಳಿಂದ, ಯಾವ ರೀತಿ ಸಿದ್ಧ ಮಾಡಿ, ಅಂಗೀಕಾರ ಮಾಡಲ್ಪಟ್ಟಿವೆಯೋ, ಹಾಗೆ ಇಲ್ಲಿ ಹೇಳಲಾಗುತ್ತದೆ_

ಅಂದರೆ, ಯಾವ ಯಾವ ಗ್ರಂಥಗಳನ್ನು, ಸೃಷ್ಟಿಯ ಆದಿಯಿಂದ ಹಿಡಿದು, ಇಂದಿನ ತನಕ, ಪಕ್ಷಪಾತ, ಹಾಗೂ ರಾಗ-ದ್ವೇಷಗಳಿಂದ ರಹಿತರೂ, ಸತ್ಯಧರ್ಮಯುಕ್ತರೂ, ಎಲ್ಲಾ ಜನರಿಗೂ ಪ್ರಿಯರೂ, ಪ್ರಾಚೀನ ವಿದ್ವಾಂಸರೂ ಆದ ಆರ್ಯಜನರು 'ಸ್ವತಃಪ್ರಮಾಣ', ಎಂದರೆ ತನಗೆ ತಾನಾಗಿಯೇ ಪ್ರಮಾಣಗಳೂ,* ಮತ್ತು

* ಎಂದರೆ ನಾಲ್ಕು ವೇದಗಳು _ಅನು.

'ಪರತಃಪ್ರಮಾಣ', ಎಂದರೆ ವೇದ, ಹಾಗೂ ಪ್ರತ್ಯಕ್ಷ, ಅನುಮಾನ ಮೊದಲಾದುವುಗಳಿಂದ ಪ್ರಮಾಣೀಕರಿಸಲ್ಪಡು ವಂತಹವೂ ಆಗಿವೆ, ಎಂದು ಯಾವ ರೀತಿಯಿಂದ [ಮತ್ತು] ಹೇಗೆ, ಅಂಗೀಕರಿಸಿದ್ದಾರೋ, ಅವನ್ನು ಮುಂದೆ ಹೇಳುತ್ತೇವೆ_

ಯ ಈಶ್ವರೋಕ್ತಾ ಗ್ರಂಥಾಸ್ತೇ ಸ್ವತಃಪ್ರಮಾಣಂ ಕರ್ತುಂ ಯೋಗ್ಯಾಃ ಸಂತಿ.

ಯಾವುವು ಈಶ್ವರೋಕ್ತವಾದ ಗ್ರಂಥಗಳಿವೆಯೋ, ಅವು ಸ್ವತಃಪ್ರಮಾಣವನ್ನು ಮಾಡಲು ಯೋಗ್ಯವಾಗಿವೆ.

ಅಂದರೆ, ಈ ವಿಷಯದಲ್ಲಿ ಆ ಜನರ ಸಿದ್ಧಾಂತ ವೇನೆಂದರೆ_

ಈಶ್ವರನಿಂದ ಹೇಳಲ್ಪಟ್ಟ ಯಾವ ನಾಲ್ಕೂ [ವೇದ]ಮಂತ್ರಸಂಹಿತೆಗಳಿವೆಯೋ, ಅವೇ **'ಸ್ವಯಂ ಪ್ರಮಾಣ'**ಗಳಾಗಲು ಯೋಗ್ಯವಾಗಿವೆ ; ಬೇರೆಯವಲ್ಲ!

ಯೇ ಜೀವೋಕ್ತಾಸ್ತೇ ಪರತಃಪ್ರಮಾಣಾರ್ಹಾಶ್ಚ.*

ಮತ್ತು ಯಾವುವು ಜೀವರಿಂದ* ಹೇಳಲ್ಪಟ್ಟಿವೆಯೋ, ಅವು **'ಪರತಃಪ್ರಮಾಣ'**ಗಳಾಗಲು ಯೋಗ್ಯವಾಗಿವೆ.

ಅಂದರೆ, [ಸ್ವತಃಪ್ರಮಾಣ]ಗಳಿಂದ ಬೇರೆಯಾಗಿ, ಜೀವರಿಂದ ರಚಿಸಲ್ಪಟ್ಟ ಯಾವ ಯಾವ ಗ್ರಂಥ ಗಳಿವೆಯೋ, ಅವುಗಳೂ ಕೂಡ, ವೇದಗಳಿಗೆ ಅನುಕೂಲವಾದಾಗ, **ಪರತಃಪ್ರಮಾಣಕ್ಕೆ** ಯೋಗ್ಯ ವಾಗುತ್ತವೆ.**

ಈಶ್ವರೋಕ್ತತ್ವಾಚ್ಚತ್ವಾರೋ ವೇದಾಃ ಸ್ವತಃ-ಪ್ರಮಾಣಮ್.

ಈಶ್ವರೋಕ್ತವಾದುದರಿಂದ, ನಾಲ್ಕು ವೇದಗಳು ಸ್ವತಃಪ್ರಮಾಣಗಳಾಗಿವೆ!

ಕುತಃ?

ಏಕೆಂದರೆ_

ತದುಕ್ತೌ ಭ್ರಮಾದಿದೋಷಾಭಾವಾತ್ ;

ಅವನ ಹೇಳಿಕೆಯಲ್ಲಿ ಭ್ರಮೆಯೇ ಮೊದಲಾದ ದೋಷಗಳ ಅಭಾವವೂ ;

ತಸ್ಯ ಸರ್ವಜ್ಞತ್ವಾತ್ ;

ಅವನ ಸರ್ವಜ್ಞತ್ವವೂ ;

---

* ಅಯಮಭಿಪ್ರಾಯೋ ಮೀಮಾಂಸಾಶಾಸ್ತ್ರಸ್ಯ ಪ್ರಥಮಾ-ಧ್ಯಾಯಸ್ಯ ಪ್ರಥಮಪಾದೇ ತೃತೀಯಪಾದೇ ಚ ವಿಸ್ತರೇಣ ಪ್ರತಿಪಾದಿತಃ _ಯು. ಮೀ.

* ಎಂದರೆ, ಮನುಷ್ಯರಿಂದ _ಅನು.

** ಈ ಅಭಿಪ್ರಾಯವು ಮೀಮಾಂಸಾದರ್ಶನದ ಪ್ರಥಮಾ-ಧ್ಯಾಯದ ಪ್ರಥಮಪಾದ ಹಾಗೂ ತೃತೀಯಪಾದಗಳಲ್ಲಿ ವಿಸ್ತಾರವಾಗಿ ಪ್ರತಿಪಾದಿತವಾಗಿದೆ _ಯು. ಮೀ.

ಸರ್ವವಿದ್ಯಾವತ್ತ್ವಾತ್ ;

ಸರ್ವವಿದ್ಯಾವತ್ತ್ವವೂ ;

ಸರ್ವಶಕ್ತಿಮತ್ತ್ವಾಚ್ಚ

ಹಾಗೂ ಸರ್ವಶಕ್ತಿಮತ್ತ್ವವೂ ಕಾರಣವಾಗಿರುತ್ತವೆ.

ಅಂದರೆ, ವೇದಗಳು ಈಶ್ವರನಿಂದ ರಚಿತವಾಗಿವೆ! ಮತ್ತು ಈಶ್ವರನು ಸರ್ವಜ್ಞನೂ, ಸರ್ವವಿದ್ಯಾಯುಕ್ತನೂ ಮತ್ತು ಸರ್ವಶಕ್ತಿಯನ್ನುಳ್ಳವನೂ ಆಗಿದ್ದಾನೆ. ಈ ಕಾರಣದಿಂದ ಅವನ ಕಥನವೇ ನಿರ್ಭ್ರಮವೂ, ಹಾಗೂ ಪ್ರಮಾಣಕ್ಕೆ ಯೋಗ್ಯವೂ ಆಗಿರುತ್ತದೆ.

ಮತ್ತು **ಜೀವಾತ್ಮರಿಂದ ರಚಿತವಾದ ಗ್ರಂಥಗಳು ಸ್ವತಃಪ್ರಮಾಣಕ್ಕೆ ಯೋಗ್ಯವಾಗಿರುವುದಿಲ್ಲ!** ಏಕೆಂದರೆ, ಜೀವಾತ್ಮರು ಸರ್ವಜ್ಞರೂ, ಸರ್ವವಿದ್ಯಾಯುಕ್ತರೂ, ಮತ್ತು ಸರ್ವಶಕ್ತಿವಂತರೂ ಆಗಿರುವುದಿಲ್ಲ! ಆದುದರಿಂದ, ಅವರ ಹೇಳಿಕೆಯು ಸ್ವತಃಪ್ರಮಾಣಕ್ಕೆ ಯೋಗ್ಯವಾಗಿರಲಾರದು!

ವೇದಗಳ ಪ್ರಮಾಣಗಳನ್ನು ಏಕೆ ಅಂಗೀಕರಿಸಬೇಕು?

ತತ್ರ ವೇದೇಷು ವೇದಾನಾಮೇವ ಪ್ರಾಮಾಣ್ಯಂ-ಸ್ವೀಕಾರ್ಯ್ಯಂ, ಸೂರ್ಯ-ಪ್ರದೀಪವತ್.

ಈ ವಿಷಯದಲ್ಲಿ ವೇದಗಳ ಬಗ್ಗೆ ವೇದಗಳದೇ ಪ್ರಾಮಾಣ್ಯವನ್ನು ಅಂಗೀಕರಿಸಬೇಕು ; ಸೂರ್ಯ ಮತ್ತು ದೀಪದಂತೆ!

ಅಂದರೆ, ಮೇಲಿನ ಕಥನದಿಂದ ಸಿದ್ಧವಾಗುವ ಮಾತೇನೆಂದರೆ_ ವೇದಗಳ ವಿಷಯದಲ್ಲಿ ಎಲ್ಲಾದರೂ ಪ್ರಮಾಣದ ಆವಶ್ಯಕತೆಯು ಉಂಟಾದರೆ, ಅಲ್ಲಿ ಸೂರ್ಯ ಮತ್ತು ದೀಪಕ್ಕೆ ಸಮಾನವಾಗಿ,* ವೇದಗಳ ಪ್ರಮಾಣವನ್ನೇ ಸ್ವೀಕರಿಸುವುದು ಉಚಿತವಾಗಿರುತ್ತದೆ!

ಯಥಾ ಸೂರ್ಯಃ ಪ್ರದೀಪಶ್ಚ ಸ್ವಪ್ರಕಾಶೇನೈವ ಪ್ರಕಾಶಿತೌ ಸಂತೌ ಸರ್ವಮೂರ್ತ್ತದ್ರವ್ಯಪ್ರಕಾಶಕೌ ಭವತಃ ;

ಹೇಗೆ ಸೂರ್ಯನು ಮತ್ತು ದೀಪವು ತಮ್ಮ ಪ್ರಕಾಶದಿಂದಲೇ ಪ್ರಕಾಶಿಸುತ್ತಾ ಇದ್ದು, ಎಲ್ಲಾ ಮೂರ್ತಿಮಂತ ಪದಾರ್ಥಗಳನ್ನೂ ಪ್ರಕಾಶಿಸುತ್ತವೋ ;

ತಥೈವ ವೇದಾಃ ಸ್ವಪ್ರಕಾಶೇನೈವ ಪ್ರಕಾಶಿತಾಃ ಸಂತಃ ಸರ್ವಾನನ್ಯವಿದ್ಯಾಗ್ರಂಥಾನ್ ಪ್ರಕಾಶಯಂತಿ.

ಹಾಗೆಯೇ, ವೇದಗಳು ತಮ್ಮ ಪ್ರಕಾಶದಿಂದಲೇ ಪ್ರಕಾಶಿಸುತ್ತಾ ಇದ್ದು, ಇತರ ಎಲ್ಲಾ ವಿದ್ಯಾಗ್ರಂಥಗಳನ್ನೂ ಪ್ರಕಾಶಿಸುತ್ತಿವೆ.

ಇದರಿಂದ, ಸಿದ್ಧವಾಯಿತೇನೆಂದರೆ_

* ಎಂದರೆ, ಸೂರ್ಯನ ಬಗ್ಗೆ ಪ್ರಮಾಣವು ಬೇಕಾದರೆ, ಸೂರ್ಯನೇ ಪ್ರಮಾಣವಾಗಬಲ್ಲನು ; ದೀಪವಲ್ಲ, ಎಂದರ್ಥ. _ಅನು

ಯೇ ಗ್ರಂಥಾ ವೇದವಿರೋಧಿನೋ ವರ್ತ್ತಂತೇ, ನೈವ ತೇಷಾಂ ಪ್ರಾಮಾಣ್ಯಂ ಸ್ವೀಕರ್ತುಂ ಯೋಗ್ಯಮಸ್ತಿ.

ಯಾವ ಗ್ರಂಥಗಳು ವೇದಕ್ಕೆ ವಿರೋಧಿಗಳಾಗಿವೆಯೋ, ಅವುಗಳ ಪ್ರಾಮಾಣ್ಯವು ಅಂಗೀಕರಿಸಲ್ಪಡಲು ಯೋಗ್ಯವೇ ಅಲ್ಲ!

ಅಂದರೆ, ಯಾವ ಯಾವ ಗ್ರಂಥಗಳು ವೇದಗಳಿಗೆ ವಿರುದ್ಧವಾಗಿವೆಯೋ, ಅವು ಎಂದಿಗೂ ಪ್ರಮಾಣರೂಪವಾಗಿ, ಅಥವಾ ಸ್ವೀಕಾರ ಮಾಡಲು ಯೋಗ್ಯವಾಗಿರುವುದಿಲ್ಲ !

ವೇದಾನಾಂ ತು ಖಲು ಅನ್ಯೇಭ್ಯೋ ವಿರೋಧಾದಪ್ಯಪ್ರಾಮಾಣ್ಯಂ ನ ಭವತಿ ;

ವೇದಗಳದಂತೂ, ಇತರ ಗ್ರಂಥಗಳೊಡನೆ ವಿರೋಧವಾದರೂ ಕೂಡ, ಅಪ್ರಾಮಾಣ್ಯವಾಗುವುದೇ ಇಲ್ಲ!

ತೇಷಾಂ ಸ್ವತಃಪ್ರಾಮಾಣ್ಯಾತ್ ;

ಏಕೆಂದರೆ, ಅವು* ಸ್ವತಃಪ್ರಮಾಣರೂಪದಲ್ಲಿ ಇರುವುವು ;

ತದ್ಭಿನ್ನಾನಾಂ ಗ್ರಂಥಾನಾಂ ವೇದಾಧೀನ-ಪ್ರಾಮಾಣ್ಯಾಚ್ಚ.

ಮತ್ತು ಅವುಗಳಿಂದ ಬೇರೆಯಾದ ಗ್ರಂಥಗಳ ಪ್ರಾಮಾಣ್ಯವು ವೇದಗಳಿಗೆ ಆಧೀನವಾಗಿರುತ್ತದೆ.

ಅಂದರೆ, ಅನ್ಯಗ್ರಂಥಗಳೊಡನೆ ವೇದಗಳ ವಿರೋಧವಾದರೆ, ಆಗಲೂ ಕೂಡ, [ಅವು]* ಅಪ್ರಮಾಣಕ್ಕೆ ಯೋಗ್ಯವೆಂದು ನಿರ್ಧರಿಸಲಾಗುವುದಿಲ್ಲ! ಏಕೆಂದರೆ, ಅವಂತೂ ತಮ್ಮ ಪ್ರಮಾಣದಿಂದಲೇ ಪ್ರಮಾಣಯುಕ್ತವಾಗಿವೆ.

ಪರತಃಪ್ರಮಾಣ ಗ್ರಂಥಗಳು

(೧) ಬ್ರಾಹ್ಮಣಗ್ರಂಥಗಳು

ಯೇ ಸ್ವತಃಪ್ರಮಾಣಭೂತಾ ಮಂತ್ರಭಾಗ-ಸಂಹಿತಾಖ್ಯಾಶ್ಚತ್ವಾರೋ ವೇದಾ ಉಕ್ತಾಃ ;

ಯಾವವು ಸ್ವತಃಪ್ರಮಾಣರೂಪವಾಗಿರುವುವಲ್ಲದೇ, ಮಂತ್ರಭಾಗ, ಸಂಹಿತೆ, ಎಂಬ ಹೆಸರಿನಲ್ಲಿ ನಾಲ್ಕು ವೇದಗಳು, ಎಂದು ಕರೆಯಲ್ಪಡುತ್ತವೋ ;

ತದ್ಭಿನ್ನಾಸ್ತದ್ವ್ಯಾಖ್ಯಾನಭೂತಾ ಬ್ರಾಹ್ಮಣಗ್ರಂಥಾ ವೇದಾನುಕೂಲತಯಾ ಪ್ರಮಾಣಮರ್ಹಂತಿ.

ಅವುಗಳಿಗಿಂತ ಬೇರೆಯಾಗಿದ್ದು, ಅವುಗಳ ವ್ಯಾಖ್ಯಾನರೂಪದಲ್ಲಿರುವ ಬ್ರಾಹ್ಮಣಗ್ರಂಥಗಳು ವೇದಗಳಿಗೆ ಅನುಕೂಲವಾಗಿರುವಾಗ [ಮಾತ್ರ] ಪ್ರಮಾಣಕ್ಕೆ ಯೋಗ್ಯ, ಎನಿಸುತ್ತವೆ.

---

*ಎಂದರೆ, ವೇದಗಳು _ಅನು.

ಅಂದರೆ_

'ವೇದ', ಎಂಬ ಹೆಸರಿನ ಮಂತ್ರಭಾಗರೂಪದ ನಾಲ್ಕು ಸಂಹಿತೆಗಳು ಯಾವುವೋ, ಅವೆಲ್ಲವೂ, **ಸ್ವತಃ ಪ್ರಮಾಣ**', ಎಂದು ಕರೆಯಲ್ಪಡುತ್ತವೆ.

ಮತ್ತು ಅವುಗಳಿಂದ ಭಿನ್ನವಾದ [ಯಾವ] **ಐತರೇಯ, ಶತಪಥ** ಮೊದಲಾದ ಪ್ರಾಚೀನ ಸತ್ಯಗ್ರಂಥಗಳಿವೆಯೋ, ಅವು **ಪರತಃಪ್ರಮಾಣಕ್ಕೆ** ಯೋಗ್ಯವಾಗಿವೆ.

ಏಕೆಂದರೆ, ವೇದಗಳ ಅರ್ಥದಿಂದ, ಹಾಗೂ ಇತಿಹಾಸ ಮೊದಲಾದುವುಗಳಿಂದ ಕೂಡಿರುವಂತೆ, ನಿರ್ಮಿಸಿರುವ ಯಾವ **ಐತರೇಯ, ಶತಪಥಬ್ರಾಹ್ಮಣ** ಮೊದಲಾದ ಗ್ರಂಥಗಳಿವೆಯೋ, ಅವು **ಪರತಃಪ್ರಮಾಣ**, ಎಂದರೆ **ವೇದಗಳಿಗೆ ಅನುಕೂಲವಾಗಿದ್ದರೇನೇ 'ಪ್ರಮಾಣ'**, ಎಂದೂ, ಮತ್ತು **ವಿರುದ್ಧವಾದರೆ, 'ಅಪ್ರಮಾಣ'**, ಎಂದೂ [ಕರೆಯಲ್ಪಡಬಲ್ಲವು!]

(೨) ವೇದಶಾಖೆಗಳು

ತಥೈಕಾದಶಶತಾನಿ ಸಪ್ತವಿಂಶತಿಶ್ಚ ವೇದಶಾಖಾ ವೇದಾರ್ಥವ್ಯಾಖ್ಯಾನಾ ಅಪಿ ವೇದಾನುಕೂಲತಯೈವ ಪ್ರಮಾಣಮರ್ಹಂತಿ.

ಈ ಪ್ರಕಾರವಾಗಿಯೇ, **ವೇದಾರ್ಥದ ವ್ಯಾಖ್ಯಾನ ಮಾಡುವ** ಒಂದು ಸಾವಿರದ ಒಂದು ನೂರ ಇಪ್ಪತ್ತೇಳು ವೇದಶಾಖೆಗಳೂ* ಕೂಡ, **ವೇದಗಳಿಗೆ ಅನುಕೂಲ ವಾಗಿದ್ದರೇನೇ, ಪ್ರಮಾಣಕ್ಕೆ ಯೋಗ್ಯ**, ಎನಿಸುತ್ತವೆ.

ಅಂದರೆ, ನಾಲ್ಕು ವೇದಗಳ ೧೧೨೭ ಶಾಖೆಗಳೂ ಕೂಡ, ವೇದಗಳ ವ್ಯಾಖ್ಯಾನವಾದುದರಿಂದ ಪರತಃಪ್ರಮಾಣ, ಎನಿಸುತ್ತವೆ.

(೩) ಆರು ವೇದಾಂಗಗಳು

ಏವಮೇವ ಯಾನಿ ಶಿಕ್ಷಾ ಕಲ್ಪೋಽಥ ವ್ಯಾಕರಣಂ, ನಿರುಕ್ತಂ ಛಂದೋ ಜ್ಯೋತಿಷಮಿತಿ ಷಡಂಗಾನಿ ;

ಈ ಪ್ರಕಾರವಾಗಿಯೇ, ಯಾವ (೧) **ಶಿಕ್ಷಾ** (೨) **ಕಲ್ಪ**, ನಂತರ, (೩) **ವ್ಯಾಕರಣ**, (೪) **ನಿರುಕ್ತ** (೫) **ಛಂದಸ್ಸು** ಮತ್ತು (೬) **ಜ್ಯೋತಿಷ**, ಎಂಬ [ವೇದದ] ಆರು ಅಂಗಗಳೂ ; **

(೪) ನಾಲ್ಕು ಉಪವೇದಗಳು

ತಥಾಽಽಯುರ್ವೇದೋ ವೈದ್ಯಕಶಾಸ್ತ್ರಮ್ ;

ಮತ್ತು ವೈದ್ಯಕಶಾಸ್ತ್ರವಾದ **ಆಯುರ್ವೇದ ;**

ಧನುರ್ವೇದಃ ಶಸ್ತ್ರಾಸ್ತ್ರರಾಜವಿದ್ಯಾ ;

ಶಸ್ತ್ರಾಸ್ತ್ರಗಳ, ಹಾಗೂ **ರಾಜ[ಧರ್ಮ]**ದ ವಿದ್ಯೆಯಾದ **ಧನುರ್ವೇದ ;**

---

* **'ಸತ್ಯಾರ್ಥಪ್ರಕಾಶ'** ಸಪ್ತಮ ಸಮುಲ್ಲಾಸ, ಪುಟ ೩೮೭ ಮತ್ತು **'ದಯಾನಂದಪ್ರವಚನಮಾಲಾ'**ದ ಪುಟ ೩೫, ೧೬೫-೧೬೬ರ ಪಾದಟಿಪ್ಪಣಿಗಳನ್ನು ನೋಡಿ _ಅನು.

** ಇವುಗಳ ಅರ್ಥ ಮತ್ತು ವಿವರಣೆ ಮುಂದೆ ಬರಲಿವೆ. _ಅನು.

ಗಾಂಧರ್ವವೇದೋ ಗಾನವಿದ್ಯಾ ;

ಗಾನವಿದ್ಯೆಯಾದ **ಗಾಂಧರ್ವವೇದ** ;

ಅರ್ಥವೇದಶ್ಚ ಶಿಲ್ಪಶಾಸ್ತ್ರಮ್ ;

ಹಾಗೂ ಶಿಲ್ಪಶಾಸ್ತ್ರವಾದ **ಅರ್ಥವೇದ** ;

ಚತ್ವಾರ **ಉಪವೇದಾ** ಅಪಿ [ಪರತಃಪ್ರಮಾಣ-ಮರ್ಹಂತಿ.]

ಈ ನಾಲ್ಕು **ಉಪವೇದ**ಗಳೂ ಕೂಡ, [ಪರತಃ ಪ್ರಮಾಣ,] ಎನಿಸುತ್ತವೆ.

ನಾಲ್ಕು ಉಪವೇದಗಳ ವಿವರಣೆ

ಆಯುರ್ವೇದ

ತತ್ರ **ಚರಕಸುಶ್ರುತನಿಘಂಟ್ವಾದಯ ಆಯುರ್ವೇದೇ** ಗ್ರಾಹ್ಯಾಃ .

ಇವುಗಳಲ್ಲಿ **ಚರಕ, ಸುಶ್ರುತ, ನಿಘಂಟು** ಮೊದಲಾದುವು ಆಯುರ್ವೇದದಲ್ಲಿ ಗ್ರಹಿಸಲ್ಪಡಬೇಕು!

ಅಂದರೆ, **ಆಯುರ್ವೇದ,** ಎಂದರೆ ವೈದ್ಯಕ ಶಾಸ್ತ್ರವಾದ **ಚರಕ, ಸುಶ್ರುತ** ಮತ್ತು **ಧನ್ವಂತರಿಕೃತ ನಿಘಂಟು** ಮೊದಲಾದುವು . ಇವೆಲ್ಲವೂ ಸೇರಿ, ಋಗ್ವೇದದ ಉಪವೇದ, ಎನಿಸುತ್ತವೆ.

ಧನುರ್ವೇದ

ಅಂಗಿರಃಪ್ರಭೃತಿನಿರ್ಮಿತಾ **ಧನುರ್ವೇದಗ್ರಂಥಾ** ಬಹವ ಆಸನ್ನಿತಿ.

ಅಂಗಿರಾ ಅಂತಹವರಿಂದ ರಚಿತವಾದ ಧನು-ರ್ವೇದದ ಗ್ರಂಥಗಳು [ಮೊದಲು] ಬಹಳ ಇದ್ದುವು!

ಅಂದರೆ, ಶಸ್ತ್ರಾಸ್ತ್ರವಿದ್ಯೆಯ ವಿಧಾನಯುಕ್ತವೂ, ರಾಜವಿದ್ಯೆ ಸಿದ್ಧವಾಗುವಂತಹವೂ ಆದ **ಅಂಗಿರಾ** ಮೊದಲಾದ ಋಷಿಗಳಿಂದ ನಿರ್ಮಿಸಲ್ಪಟ್ಟ **ಅಂಗಿರಾ-ಸಂಹಿತಾ, ಭರದ್ವಾಜಸಂಹಿತಾ** ಮೊದಲಾದುವು ಧನು-ರ್ವೇದದ ಗ್ರಂಥಗಳಾಗಿದ್ದುವು.

ಧನುರ್ವೇದಸ್ಯ ಗ್ರಂಥಾಃ ಪ್ರಾಯೇಣ ಲುಪ್ತಾಃ ಸಂತಿ.

[ಆದರೆ,] ಧನುರ್ವೇದದ ಗ್ರಂಥಗಳು, [ಈಗ] ಪ್ರಾಯಃ ಲುಪ್ತವಾಗಿವೆ.

ಪರಂತು ತಸ್ಯ ಸರ್ವವಿದ್ಯಾಕ್ರಿಯಾವಯವೈಃ ಸಿದ್ಧತ್ವಾದಿದಾನೀಮಪಿ ಸಾಧಯಿತುಮರ್ಹಾಃ ಸಂತಿ.

ಆದರೆ, ಅವುಗಳಲ್ಲಿನ ಸಮಸ್ತವಿದ್ಯೆ, ಕ್ರಿಯೆ, ಹಾಗೂ ಅಂಗಗಳನ್ನು ಸಿದ್ಧಮಾಡಿಕೊಳ್ಳುವುದು [ಶಕ್ಯ] ವಾದುದರಿಂದ, ಈಗಲೂ ಕೂಡ, ಅವು ಸಾಧಿಸಿ ಕೊಳ್ಳಲು ಯೋಗ್ಯವಾಗಿವೆ!

ಅಂದರೆ, ಯಾರಾದರೂ ಪುರುಷಾರ್ಥದಿಂದ ಇದನ್ನು ಸಿದ್ಧಿಸಿಕೊಳ್ಳಲು ಇಚ್ಛಿಸಿದರೆ, ವೇದವೇ ಮೊದಲಾದ ವಿದ್ಯಾಪುಸ್ತಕಗಳಿಂದ ಸಾಕ್ಷಾತ್ಕಾರವನ್ನು ಮಾಡಿಕೊಳ್ಳಬಲ್ಲರು!

ಗಾಂಧರ್ವವೇದ

ಗಾಂಧರ್ವವೇದಶ್ಚ ಸಾಮಗಾನವಿದ್ಯಾದಿಸಿದ್ಧಿಃ.

ಸಾಮಗಾನವಿದ್ಯೆ ಮೊದಲಾದುದರ ಸಿದ್ಧಿಯೇ **ಗಾಂಧರ್ವವೇದ!**

ಅಂದರೆ, ಯಾವುವು ಸಾಮಗಾನ ಮತ್ತು **ನಾರದ ಸಂಹಿತಾ** ಮೊದಲಾದ ಗಾನವಿದ್ಯೆಯ ಗ್ರಂಥಗಳಿವೆಯೋ, ಅವು **ಗಾಂಧರ್ವವೇದ!**

ಅರ್ಥವೇದ

ಅರ್ಥವೇದಶ್ಚ ವಿಶ್ವಕರ್ಮತ್ವಷ್ಟೃ[ದೇವಜ್ಞ]-ಮಯಕೃತಶ್ಚತಸ್ರಸಂಹಿತಾಖ್ಯೋ **ಗ್ರಾಹ್ಯಃ**.

ಅರ್ಥವೇದ, ಎಂದರೆ **ವಿಶ್ವಕರ್ಮಾ, ತ್ವಷ್ಟಾ, ದೇವಜ್ಞ**, ಹಾಗೂ **ಮಯ** ಇವರಿಂದ ರಚಿತವಾಗಿ, ಇವರ ಹೆಸರಿನಲ್ಲಿ ಕರೆಯಲ್ಪಡುವ ನಾಲ್ಕು ಸಂಹಿತೆಗಳು ಗ್ರಹಿಸಲ್ಪಡಬೇಕು!

ಅಂದರೆ, ಶಿಲ್ಪಶಾಸ್ತ್ರದ ಪ್ರತಿಪಾದನೆಯಲ್ಲಿ **ವಿಶ್ವಕರ್ಮಾ, ತ್ವಷ್ಟಾ, ದೇವಜ್ಞ** ಮತ್ತು **ಮಯ** ಇವರಿಂದ ಸಂಹಿತೆಗಳು ರಚಿಸಲ್ಪಟ್ಟಿವೆ. ಇವು **ಅರ್ಥವೇದ!**

ಈ ನಾಲ್ಕೂ 'ಉಪವೇದ', ಎನಿಸುತ್ತವೆ!

ಆರು ವೇದಾಂಗಗಳ ವಿವರಣೆ

ಶಿಕ್ಷಾ ಪಾಣಿನ್ಯಾದಿಮುನಿಕೃತಾ.

(೧) 'ಶಿಕ್ಷಾ', ಎಂದರೆ ಪಾಣಿನಿ ಮೊದಲಾದ ಮುನಿಗಳಿಂದ ರಚಿತವಾದುವು.

ಕಲ್ಪೋ ಮಾನವಕಲ್ಪಸೂತ್ರಾದಿಃ.

(೨) 'ಕಲ್ಪ', ಎಂದರೆ **ಮಾನವಕಲ್ಪಸೂತ್ರ** ಮೊದಲಾದುವು.

ಅಂದರೆ, **ಮನು** ಮೊದಲಾದವರಿಂದ ರಚಿತವಾದ 'ಮಾನವಕಲ್ಪಸೂತ್ರ'; **ಆಶ್ವಲಾಯನ** ಮೊದಲಾದವರಿಂದ ರಚಿತವಾದ **ಶ್ರೌತಸೂತ್ರ** ಮೊದಲಾದುವು.

ವ್ಯಾಕರಣಮಷ್ಟಾಧ್ಯಾಯೀ-ಮಹಾಭಾಷ್ಯ-ಧಾತು-ಪಾಠೋಣಾದಿಗಣ-ಪ್ರಾತಿಪದಿಕಗಣಪಾಠಾಖ್ಯಮ್.

(೩) 'ವ್ಯಾಕರಣ', ಎಂಬರೆ ೧. **ಅಷ್ಟಾಧ್ಯಾಯೀ** ೨. **ಮಹಾಭಾಷ್ಯ** ೩. **ಧಾತುಪಾಠ** ೪. **ಉಣಾದಿಗಣ** ೫. **ಪ್ರಾತಿಪದಿಕ*ಗಣಪಾಠ**, ಎಂಬ ಹೆಸರಿನವು.

---

* **ಪ್ರಾತಿಪದಿಕ**, ಎಂದರೆ ಸಂಜ್ಞಾಶಬ್ದಗಳು, ನಾಮ ಪದಗಳು _ಅನು.

ಅಂದರೆ, **ಪಾಣಿನಿಮುನಿಗಳಿಂದ** ರಚಿತವಾದ **ಅಷ್ಟಾಧ್ಯಾಯೀ, ಧಾತುಪಾಠ, ಉಣಾದಿಪಾಠ, ಗಣ-ಪಾಠ*; ಮತ್ತು ಪತಂಜಲಿಮುನಿಯವರಿಂದ** ರಚಿತವಾದ **ಮಹಾಭಾಷ್ಯದವರೆಗಿನ** ವ್ಯಾಕರಣ!

ನಿರುಕ್ತಂ ಯಾಸ್ಕಮುನಿಕೃತಂ ನಿಘಂಟುಸಹಿತಂ ಚತುರ್ಥಂ ವೇದಾಂಗಂ ಮಂತವ್ಯಮ್.

(೪) 'ನಿರುಕ್ತ', ಎಂದರೆ **ಯಾಸ್ಕಮುನಿಗಳಿಂದ** ರಚಿತವಾದುದು ; ಹಾಗೂ 'ನಿಘಂಟು'ಸಹಿತವಾದುದು . [ಇದು] ನಾಲ್ಕನೆಯ ವೇದಾಂಗ, ಎಂದು ತಿಳಿಯಲ್ಪಡಬೇಕು!

ಛಂದಃ ಪಿಂಗಲಾಚಾರ್ಯಕೃತಸೂತ್ರಭಾಷ್ಯಮ್.

(೫) **'ಛಂದ'**, ಎಂದರೆ **ಪಿಂಗಲಾಚಾರ್ಯರಿಂದ** ರಚಿತವಾದ ಸೂತ್ರಗಳು, ಹಾಗೂ ಅವುಗಳ ಭಾಷ್ಯ.

ಜ್ಯೋತಿಷಂ ವಸಿಷ್ಠಾದ್ಯುಕ್ತಂ ರೇಖಾಬೀಜಗಣಿತ-ಮಯಂ ಚ.

(೬) **'ಜ್ಯೋತಿಷ'**, ಎಂದರೆ **ವಸಿಷ್ಠ** ಮೊದಲಾದ ಋಷಿಗಳಿಂದ ಹೇಳಲ್ಪಟ್ಟುದು ; ಹಾಗೂ **ರೇಖಾಗಣಿತ-ಬೀಜಗಣಿತದಿಂದ** ಯುಕ್ತವಾದುದು.

ಅಂದರೆ, **ವಸಿಷ್ಠಮುನಿ** ಮೊದಲಾದವರಿಂದ ರಚಿಸಲ್ಪಟ್ಟ **'ಜ್ಯೋತಿಷ'**[ಗ್ರಂಥ]ವಾದ **ಸೂರ್ಯ ಸಿದ್ಧಾಂತ**** ಮೊದಲಾದುವು.

ಇತಿ ವೇದಾನಾಂ ಷಡಂಗಾನಿ ಸಂತಿ.

ಹೀಗೆ, ವೇದಗಳ ಆರು ಅಂಗಗಳಿವೆ.

ವೇದಗಳ ಈ ಆರು ಅಂಗಗಳೂ ಕೂಡ, ಪರತಃ-ಪ್ರಮಾಣಕ್ಕೆ ಯೋಗ್ಯವಾಗಿವೆ.

ಆರು ಉಪಾಂಗಗಳ ವಿವರಣೆ

ತಥಾ ಷಡ್ ಉಪಾಂಗಾನಿ_

ಇದೇ ರೀತಿಯಾಗಿಯೇ, ಆರು ಉಪಾಂಗಗಳಿವೆ.

ಅಂದರೆ, **'ಷಟ್‌ಶಾಸ್ತ್ರ'**, ಎಂಬ ಹೆಸರಿನಲ್ಲಿ ವೇದಗಳ ಆರು ಉಪಾಂಗಗಳಿವೆ. [ಅವು ಯಾವುವೆಂದರೆ_]

* ಇವುಗಳಲ್ಲಿ ಪಾಣಿನಿಕೃತ **'ಲಿಂಗಾನುಶಾಸನ'**ವೂ ಸೇರಿದೆ, ಎಂದು ತಿಳಿಯಬೇಕು _ಯು. ಮೀ.

** ಸಂಪ್ರತಿ ವಸಿಷ್ಠಮುನಿಕೃತ **'ಸೂರ್ಯಸಿದ್ಧಾಂತ'**ವು ಉಪಲಬ್ಧವಾಗಿಲ್ಲ. ಮಯಕೃತಗ್ರಂಥವು ಮಾತ್ರ ಉಪಲಬ್ಧವಾಗಿದೆ. _ಅನು.

[೧] ಪೂರ್ವಮೀಮಾಂಸಾ

ತತ್ರಾದ್ಯಂ ಕರ್ಮಕಾಂಡವಿಧಾಯಕಂ ಧರ್ಮ-ಧರ್ಮಿವ್ಯಾಖ್ಯಾಮಯಂ ವ್ಯಾಸಮುನ್ಯಾದಿಕೃತ-ಭಾಷ್ಯಸಹಿತಂ ಜೈಮಿನಿಮುನಿಕೃತಸೂತ್ರಂ ಪೂರ್ವ-ಮೀಮಾಂಸಾಶಾಸ್ತ್ರಾಖ್ಯಂ ಗ್ರಾಹ್ಯಮ್.

ಇವುಗಳಲ್ಲಿ ಮೊದಲನೆಯದನ್ನಾಗಿ, ಕರ್ಮಕಾಂಡದ ವಿಧಾನ ಮಾಡುವಂತಹುದೂ, ಧರ್ಮ-ಧರ್ಮಿಗಳ ವ್ಯಾಖ್ಯೆಯಿಂದ ಕೂಡಿದುದೂ, **ವ್ಯಾಸಮುನಿ** ಮೊದಲಾದವರಿಂದ ರಚಿತವಾದ ಭಾಷ್ಯಗಳಿಂದ ಯುಕ್ತವಾದುದೂ ಆಗಿದ್ದು, **ಜೈಮಿನಿಮುನಿ**ಗಳಿಂದ ರಚಿತವಾದ ಸೂತ್ರ [ಗ್ರಂಥ]ವಾದ **'ಪೂರ್ವಮೀಮಾಂಸಾಶಾಸ್ತ್ರ'**, ಎಂಬ ಹೆಸರಿನದು ಗ್ರಹಿಸಲ್ಪಡಬೇಕು!

ಅಂದರೆ, **ವ್ಯಾಸಮುನಿ** ಮೊದಲಾದವರಿಂದ ಮಾಡಲ್ಪಟ್ಟ ಭಾಷ್ಯದಿಂದ ಕೂಡಿದ **ಜೈಮಿನಿಮುನಿ**ರಚಿತ **'ಪೂರ್ವಮೀಮಾಂಸಾ!'**

ಇದರಲ್ಲಿ ಕರ್ಮಕಾಂಡದ ವಿಧಾನವೂ, ಮತ್ತು ಧರ್ಮ-ಧರ್ಮೀ_ ಈ ಎರಡು ಪದಾರ್ಥಗಳಿಂದ ಎಲ್ಲಾ ಪದಾರ್ಥಗಳ ವ್ಯಾಖ್ಯಾನವೂ ಮಾಡಲಾಗಿದೆ.

[೨] ವೈಶೇಷಿಕ

ದ್ವಿತೀಯಂ ವಿಶೇಷತಯಾ ಧರ್ಮಧರ್ಮಿ-ವಿಧಾಯಕಂ ಪ್ರಶಸ್ತಪಾದಕೃತಭಾಷ್ಯಸಹಿತಂ ಕಣಾದ-ಮುನಿಕೃತಂ ವೈಶೇಷಿಕಶಾಸ್ತ್ರಮ್.

ಎರಡನೆಯದು, ವಿಶೇಷವಾಗಿ ಧರ್ಮ-ಧರ್ಮಿ ವಿಧಾಯಕವೂ, **ಪ್ರಶಸ್ತಪಾದ**ರಿಂದ ಮಾಡಲ್ಪಟ್ಟ ಭಾಷ್ಯ ದಿಂದ ಯುಕ್ತವೂ ಆದ **ಕಣಾದಮುನಿ**ರಚಿತ **'ವೈಶೇಷಿಕ-ಶಾಸ್ತ್ರ!'**

ಅಂದರೆ, **ಗೋತಮಮುನಿ**ಕೃತ **ಭಾಷ್ಯ**, ಹಾಗೂ **ಪ್ರಶಸ್ತಪಾದ**ರಚಿತವ್ಯಾಖ್ಯೆ ಮೊದಲಾದುವುಗಳಿಂದ ಕೂಡಿದ **ಕಣಾದಮುನಿ**ಕೃತ ಸೂತ್ರರೂಪವಾದ **'ವೈಶೇಷಿಕಶಾಸ್ತ್ರ!'**

[೩] ನ್ಯಾಯ

ತೃತೀಯಂ ಪದಾರ್ಥವಿದ್ಯಾವಿಧಾಯಕಂ ವಾತ್ಸ್ಯಾಯನಭಾಷ್ಯಸಹಿತಂ ಗೋತಮಮುನಿಕೃತಂ ನ್ಯಾಯಶಾಸ್ತ್ರಮ್.

ಮೂರನೆಯದು, ಪದಾರ್ಥವಿದ್ಯಾವಿಧಾಯಕವೂ, **ವಾತ್ಸ್ಯಾಯನ**ಭಾಷ್ಯಸಹಿತವೂ ಆದ **ಗೋತಮಮುನಿ**ರಚಿತ **'ನ್ಯಾಯಶಾಸ್ತ್ರ!'**

ಅಂದರೆ, **ಗೋತಮಮುನಿ**ಪ್ರಣೀತ ಸೂತ್ರ, ಹಾಗೂ **ವಾತ್ಸ್ಯಾಯನಮುನಿ**ರಚಿತ ಭಾಷ್ಯಸಹಿತವಾದ **'ನ್ಯಾಯಶಾಸ್ತ್ರ!'**

[೪] ಯೋಗ

ಚತುರ್ಥಂ ಯತ್ರಿಭಿರ್ಮೀಮಾಂಸಾ-ವೈಶೇಷಿಕ-ನ್ಯಾಯಶಾಸ್ತ್ರೈಃ ಸರ್ವಪದಾರ್ಥಾನಾಂ ಶ್ರವಣ-ಮನನೇ-ನಾನುಮಾನಿಕಜ್ಞಾನತಯಾ ನಿಶ್ಚಯೋ ಭವತಿ ;

ನಾಲ್ಕನೆಯದಾಗಿ, ಮೀಮಾಂಸಾ-ವೈಶೇಷಿಕ-ನ್ಯಾಯಶಾಸ್ತ್ರಗಳೆಂಬ ಮೂರರ ಮೂಲಕ, ಶ್ರವಣ-ಮನನದಿಂದ ಆಗುವ ಆನುಮಾನಿಕಜ್ಞಾನದಿಂದ ಎಲ್ಲಾ ಪದಾರ್ಥಗಳ ಯಾವ ನಿಶ್ಚಯವು ಆಗುತ್ತದೋ ;

ತೇಷಾಂ ಸಾಕ್ಷಾಜ್‌ಜ್ಞಾನಸಾಧನಮುಪಾಸನಾ-ವಿಧಾಯಕಂ ವ್ಯಾಸಮುನಿಕೃತಭಾಷ್ಯಸಹಿತಂ ಪತಂಜಲಿ-ಮುನಿಕೃತಂ ಯೋಗಶಾಸ್ತ್ರಮ್.

ಅವುಗಳ* ಸಾಕ್ಷಾತ್ ಜ್ಞಾನಕ್ಕೆ ಸಾಧನವೂ, ಉಪಾಸನೆಯ ವಿಧಾಯಕವೂ, ವ್ಯಾಸಮುನಿರಚಿತ ಭಾಷ್ಯದಿಂದ ಕೂಡಿದುದೂ ಆದ ಪತಂಜಲಿಮುನಿಕೃತ 'ಯೋಗಶಾಸ್ತ್ರ!'

ಅಂದರೆ, ಪತಂಜಲಿಮುನಿಕೃತ ಸೂತ್ರ, ಹಾಗೂ ವ್ಯಾಸಮುನಿಕೃತ ಭಾಷ್ಯಸಹಿತವಾದ 'ಯೋಗಶಾಸ್ತ್ರ!'

[೫] ಸಾಂಖ್ಯ

ತಥಾ ಪಂಚಮಂ ತತ್ತ್ವಪರಿಗಣನವಿವೇಕಾರ್ಥಂ ಭಾಗುರಿಮುನಿಕೃತಭಾಷ್ಯಸಹಿತಂ ಕಪಿಲಮುನಿಕೃತಂ ಸಾಂಖ್ಯಶಾಸ್ತ್ರಮ್.

ಮತ್ತು ಐದನೆಯದಾಗಿ, ತತ್ತ್ವಗಳ ಎಣಿಕೆಯ ವಿವೇಕಕ್ಕೆ ಉಪಯುಕ್ತವಾದುದೂ, ಭಾಗುರಿಮುನಿಕೃತ ಭಾಷ್ಯದಿಂದ ಕೂಡಿದುದೂ ಆದ ಕಪಿಲಮುನಿರಚಿತ 'ಸಾಂಖ್ಯಶಾಸ್ತ್ರ!'

ಅಂದರೆ, ಕಪಿಲಮುನಿಕೃತ ಸೂತ್ರ, ಹಾಗೂ ಭಾಗುರಿಮುನಿಕೃತ ಭಾಷ್ಯಸಹಿತವಾದ 'ಸಾಂಖ್ಯಶಾಸ್ತ್ರ!'

[೬] ವೇದಾಂತ

ಷಷ್ಠಂ ಬೌಧಾಯನವೃತ್ತ್ಯಾದಿವ್ಯಾಖ್ಯಾನಸಹಿತಂ ವ್ಯಾಸಮುನಿಕೃತಂ ವೇದಾಂತಶಾಸ್ತ್ರಮ್.

ಆರನೆಯದಾಗಿ, ಬೌಧಾಯನವೃತ್ತಿ ಮೊದಲಾದ ವ್ಯಾಖ್ಯಾನದಿಂದ ಕೂಡಿದ ವ್ಯಾಸಮುನಿರಚಿತ 'ವೇದಾಂತ ಶಾಸ್ತ್ರ!'

ಹತ್ತು ಉಪನಿಷತ್ತುಗಳು!

ತತ್ರೈವ ಈಶ-ಕೇನ-ಕಠ-ಪ್ರಶ್ನ-ಮುಂಡಕ-ಮಾಂಡೂಕ್ಯ-ತೈತ್ತಿರೀಯೈತರೇಯ-ಛಾಂದೋಗ್ಯ-ಬೃಹದಾರಣ್ಯಕಾ ದಶೋಪನಿಷದಶ್ಚೋಪಾಂಗಾನಿ ಚ ಗ್ರಾಹ್ಯಾಣಿ.

ಹಾಗೆಯೇ, ಈಶ, ಕೇನ, ಕಠ, ಪ್ರಶ್ನ, ಮುಂಡಕ, ಮಾಂಡೂಕ್ಯ, ತೈತ್ತಿರೀಯ, ಐತರೇಯ, ಛಾಂದೋಗ್ಯ, ಹಾಗೂ ಬೃಹದಾರಣ್ಯಕ, ಎಂಬ ಹತ್ತು ಉಪನಿಷತ್ತುಗಳೂ ಕೂಡ, ಉಪಾಂಗಗಳು, ಎಂದು ಗ್ರಹಿಸಲ್ಪಡಬೇಕು!

* ಎಂದರೆ, ಎಲ್ಲಾ ಪದಾರ್ಥಗಳ _ಅನು.

ಅಂದರೆ, **ಈಶ, ಕೇನ, ಕಠ, ಪ್ರಶ್ನ, ಮುಂಡಕ, ಮಾಂಡೂಕ್ಯ, ತೈತ್ತಿರೀಯ, ಐತರೇಯ, ಛಾಂದೋಗ್ಯ** ಮತ್ತು **ಬೃಹದಾರಣ್ಯಕ,** ಎಂಬ ಈ ಹತ್ತು ಉಪನಿಷತ್ತುಗಳು ; ಹಾಗೂ **ಬೌಧಾಯನವೃತ್ತಿ** ಮೊದಲಾದ ವ್ಯಾಖ್ಯೆಯಿಂದ ಕೂಡಿದ **ವ್ಯಾಸಮುನಿಕೃತ** ಸೂತ್ರಗಳು **'ವೇದಾಂತಶಾಸ್ತ್ರ'** ಆಗಿರುತ್ತವೆ.*

ಈ ಆರು, ವೇದಗಳ **'ಉಪಾಂಗ'**, ಎಂದು ಕರೆಯಲ್ಪಡುತ್ತವೆ.

ಇಪ್ಪತ್ತು ಗ್ರಂಥಗಳಲ್ಲಿ ಹದಿನಾಲ್ಕು ವಿದ್ಯೆ!

ಏವಂ ಚತ್ವಾರೋ ವೇದಾಃ ಸಶಾಖಾ ವ್ಯಾಖ್ಯಾನ-ಸಹಿತಾಃ , ಚತ್ವಾರ ಉಪವೇದಾಃ , ಷಡ್ ವೇದಾಂಗಾನಿ, ಷಟ್ ಚ ವೇದೋಪಾಂಗಾನಿ ಮಿಲಿತ್ವಾ ವಿಂಶತಿಃ ಭವಂತಿ.

ಹೀಗೆ, ಶಾಖೆಗಳಿಂದಲೂ, ವ್ಯಾಖ್ಯಾನಗಳಿಂದಲೂ ಕೂಡಿದ **ನಾಲ್ಕು ವೇದಗಳೂ, ನಾಲ್ಕು ಉಪವೇದಗಳೂ, ಆರು ವೇದಾಂಗಗಳೂ,** ಮತ್ತು **ಆರು ವೇದದ ಉಪಾಂಗಗಳೂ** ಸೇರಿ, **ಇಪ್ಪತ್ತು** ಆಗುತ್ತವೆ!

ಅಂದರೆ, ಇದರ ಅಭಿಪ್ರಾಯವೇನೆಂದರೆ_ ಶಾಖಾ-ಶಾಖಾಂತರ-ವ್ಯಾಖ್ಯಾನಸಹಿತವಾದ **ನಾಲ್ಕು ವೇದಗಳು, ನಾಲ್ಕು ಉಪವೇದಗಳು, ಆರು ಅಂಗಗಳು,** ಮತ್ತು **ಆರು ಉಪಾಂಗಗಳು**_ ಈ ಎಲ್ಲವೂ ಸೇರಿ, **ಇಪ್ಪತ್ತು** ಆಗುತ್ತವೆ.

ಏತೈರೇವ ಚತುರ್ದಶವಿದ್ಯಾ ಮನುಷ್ಯೈ-ರ್ಗ್ರಾಹ್ಯಾ ಭವಂತೀತಿ ವೇದ್ಯಮ್.+**

ಇವುಗಳ ಮೂಲಕವಾಗಿಯೇ, **'ಹದಿನಾಲ್ಕು ವಿದ್ಯೆಗಳು'**** ಎಲ್ಲಾ ಮಾನವರಿಂದ ಗ್ರಹಿಸಲ್ಪಡಬೇಕಾಗುತ್ತವೆ, ಎಂದು ತಿಳಿಯಬೇಕು!

** ಆಸು ಷಣ್ಣಾಂ ವೇದೋಪಾಂಗಾನಾಂ ಗಣನಾ ನ ಭವತಿ. ದಯಾನಂದಕೃತಯಜುರ್ವೇದಭಾಷ್ಯಂ (೯.೩೪) ದ್ರಷ್ಟವ್ಯಮ್_ಅನು.

+ ಏತೇಷಾಂ ಗ್ರಂಥಾನಾಮುಲ್ಲೇಖಃ 'ಸತ್ಯಾರ್ಥಪ್ರಕಾಶೇ' ಕನ್ನಡಸಂಸ್ಕರಣೇ ತೃತೀಯೇ ಸಮುಲ್ಲಾಸೇ ಪಠನಪಾಠನವಿಧಿಪ್ರಕರಣೇ ೧೧೯-೧೨೦ ತಮೇಷು ಪೃಷ್ಠೇಷು; ತಥಾ 'ಸಂಸ್ಕಾರವಿಧಿ'ನಾಮ್ನಿ ಗ್ರಂಥೇ ಕನ್ನಡಸಂಸ್ಕರಣೇ ವೇದಾರಂಭಸಂಸ್ಕಾರೇ ಪಠನಪಾಠನವಿಧಿ-ಪ್ರಕರಣೇ ೧೪೯-೧೫೨ ತಮೇಷು ಪೃಷ್ಠೇಷು ಚ ಕೃತಃ _ಅನು.

---

* **'ವೇದಾಂತಶಾಸ್ತ್ರ'**ದಲ್ಲಿ ಹತ್ತು ಉಪನಿಷತ್ತುಗಳ ಗಣನೆ ಏಕೆ ಮಾಡಲಾಗಿದೆಯೆಂದರೆ, ವ್ಯಾಸಸೂತ್ರಗಳಲ್ಲಿ ಉಪನಿಷತ್ತುಗಳ ವಾಕ್ಯಗಳ ಮೇಲೆ ವಿಚಾರ ಮಾಡಲಾಗಿದೆ _ಅನು.

* * ಇವುಗಳಲ್ಲಿ ಆರು ವೇದೋಪಾಂಗಗಳ ಎಣಿಕೆ ಇರುವುದಿಲ್ಲ. ದಯಾನಂದಕೃತ **ಯಜುರ್ವೇದಭಾಷ್ಯ** (೯.೩೪)ವನ್ನು ನೋಡಿ. _ಅನು.

+ ಈ ಗ್ರಂಥಗಳ ಉಲ್ಲೇಖವು **'ಸತ್ಯಾರ್ಥಪ್ರಕಾಶ'** ತೃತೀಯ ಸಮುಲ್ಲಾಸ ಪಠನಪಾಠನವಿಧಿಯಲ್ಲಿ ೧೧೯-೧೨೦ ನೆಯ ಪುಟಗಳಲ್ಲಿಯೂ ; ಮತ್ತು **'ಸಂಸ್ಕಾರವಿಧಿ'**ಯ ವೇದಾರಂಭಸಂಸ್ಕಾರದ ಪಠನಪಾಠನವಿಧಿಯಲ್ಲಿ ೧೪೯-೧೫೨ ನೆಯ ಪುಟಗಳಲ್ಲಿಯೂ ಕೂಡ, ಮಾಡಲ್ಪಟ್ಟಿದೆ. _ಅನು.

ಇವುಗಳ ಅಧ್ಯಯನದಿಂದ ಯಥಾರ್ಥಜ್ಞಾನ!

ಏತಾಸಾಂ ಪಠನಾದ್ ಯಥಾರ್ಥಂ ವಿದಿತ್ವಾನ್-ಮಾನಸ-ಬಾಹ್ಯಜ್ಞಾನ-ಕ್ರಿಯಾಕಾಂಡಸಾಕ್ಷಾತ್ಕರಣಾಚ್ಚ ಮಹಾವಿದ್ವಾನ್ ಭವತೀತಿ ನಿಶ್ಚೇತವ್ಯಮ್.

ಇವುಗಳ ಅಧ್ಯಯನದಿಂದ ಯಥಾರ್ಥವಾದ ಜ್ಞಾನವಾಗುವುದರಿಂದಲೂ, ಹಾಗೂ ಮಾನಸ-ಬಾಹ್ಯ-ಜ್ಞಾನ-ಕ್ರಿಯಾಕಾಂಡಗಳ ಸಾಕ್ಷಾತ್ಕಾರವಾಗುವುದರಿಂದಲೂ, [ಮನುಷ್ಯನು] ಮಹಾವಿದ್ವಾಂಸನಾಗುತ್ತಾನೆ, ಎಂಬುದಾಗಿ ಖಂಡಿತವಾಗಿ ತಿಳಿದುಕೊಳ್ಳಬೇಕು!

ಏತ ಈಶ್ವರೋಕ್ತಾ ವೇದಾಸ್ತದ್ವ್ಯಾಖ್ಯಾನಮಯಾ ಬ್ರಾಹ್ಮಣಾದಯೋ ಗ್ರಂಥಾ ಆರ್ಷಾ ವೇದಾನುಕೂಲಾಃ ಸತ್ಯಧರ್ಮವಿದ್ಯಾಯುಕ್ತಾ ಯುಕ್ತಿಪ್ರಮಾಣಸಿದ್ಧಾ ಏವ ಮಾನನೀಯಾಃ ಸಂತಿ.

ಈ ಈಶ್ವರೋಕ್ತವಾದ ವೇದಗಳೂ; [ಮತ್ತು] ಅವುಗಳ ವ್ಯಾಖ್ಯಾನರೂಪವಾಗಿ ಋಷಿಪ್ರೋಕ್ತವಾದ ಬ್ರಾಹ್ಮಣ ಮೊದಲಾದ ಗ್ರಂಥಗಳು ವೇದಗಳಿಗೆ ಅನೂಕೂಲವೂ, ಸತ್ಯಧರ್ಮ, ಸತ್ಯವಿದ್ಯೆಗಳಿಂದ ಕೂಡಿರುವಂತಹವೂ, [ಹಾಗೂ] ಯುಕ್ತಿಪ್ರಮಾಣಗಳಿಂದ ಸಿದ್ಧವೂ, ಆಗಿರುವಂತಹವೇನೇ ಅಂಗೀಕರಿಸಲು ಯೋಗ್ಯವಾಗಿರುತ್ತವೆ!

ಅಂದರೆ, ಈ ಗ್ರಂಥಗಳನ್ನಂತೂ ಮೊದಲು ಹೇಳಿದ ರೀತಿಯಂತೆ, **ಸ್ವತಃ[ಪ್ರಮಾಣ;] ಪರತಃ ಪ್ರಮಾಣ**, ಎಂದು ಅಂಗೀಕರಿಸುವುದೂ, ಆಲಿಸುವುದೂ, ಮತ್ತು ಓದುವುದೂ ಎಲ್ಲರಿಗೂ ಉಚಿತವಾಗಿರುತ್ತದೆ. ಇವುಗಳಿಂದ ಬೇರೆಯಾದುವನ್ನಲ್ಲ!

[ಏಕೆಂದರೆ_]

ಅನಾರ್ಷಗ್ರಂಥಗಳು ತ್ಯಾಜ್ಯ!

ನೈವೇತೇಭ್ಯೋ ಭಿನ್ನಾಃ ;

ಇವುಗಳಿಂದ ಭಿನ್ನವಾದುವೂ ;

ಪಕ್ಷಪಾತ-ಕ್ಷುದ್ರವಿಚಾರ-ಸ್ವಲ್ಪವಿದ್ಯಾಧರ್ಮಾ-ಚರಣಪ್ರತಿಪಾದನಾ ;

ಪಕ್ಷಪಾತ, ಕ್ಷುದ್ರವಿಚಾರ, ಸ್ವಲ್ಪವಿದ್ಯೆ, ಅಧರ್ಮಾ-ಚರಣೆಗಳ ಪ್ರತಿಪಾದಕವೂ ;

ಅನಾಪ್ತೋಕ್ತಾ ;

'ಆಪ್ತ'ರಲ್ಲದವರಿಂದ ಹೇಳಲ್ಪಟ್ಟವೂ ;

ವೇದಾರ್ಥವಿರುದ್ಧಾ ;

ವೇದಾರ್ಥಕ್ಕೆ ವಿರುದ್ಧವಾದುವೂ ;

ಯುಕ್ತಿಪ್ರಮಾಣವಿರಹಾ ಗ್ರಂಥಾಃ ;

[ಹಾಗೂ] ಯುಕ್ತಿಪ್ರಮಾಣಗಳಿಂದ ರಹಿತವಾದುವೂ ಆದ ಗ್ರಂಥಗಳು ;

ಕೇನಾಪಿ ಕದಾಚಿದಂಗೀಕಾರ್ಯಾ ಇತಿ.

ಯಾರಿಂದಲೂ, ಎಂದಿಗೂ ಅಂಗೀಕರಿಸಲ್ಪಡಬಾರದು! *

* ಆಯುರ್ವೇದೀಯ **ಚರಕಸಂಹಿತೆಯ ವಿಮಾನಸ್ಥಾನ** (ಅ.೩)ದಲ್ಲಿ **ಯೋಗ್ಯ-ಅಯೋಗ್ಯ** ಗ್ರಂಥಗಳ ಪ್ರತಿಪಾದನೆ ಇದೆ. _ಯು. ಮೀ.

ಅಂದರೆ, ಎಷ್ಟು ಗ್ರಂಥಗಳು ಪಕ್ಷಪಾತಿಗಳೂ, ಕ್ಷುದ್ರಬುದ್ಧಿಗಳೂ ಅಲ್ಪವಿದ್ಯಾವಂತರೂ, ಅಧರ್ಮಾತ್ಮರೂ, ಅಸತ್ಯವಾದಿಗಳೂ ಆದವರಿಂದ ಹೇಳಲ್ಪಟ್ಟು, ವೇದಾರ್ಥಕ್ಕೆ ವಿರುದ್ಧವೂ ಮತ್ತು ಯುಕ್ತಿ-ಪ್ರಮಾಣಗಳಿಂದ ರಹಿತವೂ ಆಗಿವೆಯೋ, ಅವುಗಳನ್ನು ಸ್ವೀಕರಿಸುವುದು ಯೋಗ್ಯವಲ್ಲ!

ವೇದವಿರುದ್ಧ ಅನಾರ್ಷಗ್ರಂಥಗಳ ಗಣನೆ

ತೇ ಚ ಸಂಕ್ಷೇಪತಃ ಪರಿಗಣ್ಯಂತೇ_

ಅವು ಸಂಕ್ಷೇಪವಾಗಿ ಈಗ, ಪರಿಗಣಿಸಲ್ಪಡುತ್ತವೆ_

ಅಂದರೆ, ಅವುಗಳಲ್ಲಿನ ಮುಖ್ಯ ಮುಖ್ಯ ಮಿಥ್ಯಾ ಗ್ರಂಥಗಳ ಹೆಸರನ್ನು ಈ ಮುಂದೆ ಬರೆಯುತ್ತೇವೆ_

[೧] ತಂತ್ರಗ್ರಂಥಗಳು

ರುದ್ರಯಾಮಲಾದಯಸ್ತಂತ್ರಗ್ರಂಥಾಃ ;

'ರುದ್ರಯಾಮಲ' ಮೊದಲಾದ **ತಂತ್ರಗ್ರಂಥಗಳು!**

[೨] ಪುರಾಣಗಳು

ಬ್ರಹ್ಮವೈವರ್ತಾದೀನಿ ಪುರಾಣಾನಿ ;

'ಬ್ರಹ್ಮವೈವರ್ತ' ಮೊದಲಾದ ಪುರಾಣಗಳು!

ಅಂದರೆ, **ಬ್ರಹ್ಮವೈವರ್ತ, ಶ್ರೀಮದ್‌ಭಾಗವತ** ಮೊದಲಾದ **ಪುರಾಣಗಳು,** ಮತ್ತು **ಸೂರ್ಯಗಾಥಾ** ಮೊದಲಾದ **ಉಪಪುರಾಣಗಳು!**

[೩] ಮನುಸ್ಮೃತಿಯ ಪ್ರಕ್ಷಿಪ್ತಶ್ಲೋಕಗಳು, ಹಾಗೂ ಇತರ ಸ್ಮೃತಿಗಳು

ಪ್ರಕ್ಷಿಪ್ತಶ್ಲೋಕತ್ಯಾಗಾಯಾ ಮನುಸ್ಮೃತೇರ್ವ್ಯತಿರಿಕ್ತಾಃ ಸ್ಮೃತಯಃ ;

ಪ್ರಕ್ಷಿಪ್ತ ಶ್ಲೋಕಗಳಿಂದ ರಹಿತವಾದ **ಮನುಸ್ಮೃತಿಯ*** ಹೊರತಾದ [ಇತರ ಎಲ್ಲಾ] ಸ್ಮೃತಿಗಳು!

ಅಂದರೆ, ಮನುಸ್ಮೃತಿಯ ಪ್ರಕ್ಷಿಪ್ತ ಶ್ಲೋಕಗಳು, ಹಾಗೂ ಅದರಿಂದ ಬೇರೆಯಾದ ಎಲ್ಲಾ ಸ್ಮೃತಿಗ್ರಂಥಗಳು!

---

* **ಆರ್ಷ ಸಾಹಿತ್ಯ ಪ್ರಚಾರ್ ಟ್ರಸ್ಟ್**, ೪೫೫, ಖಾರೀ ಬಾವಲೀ, ದಿಲ್ಲೀ ೧೧೦೦೦೬, ಅವರಿಂದ ಪ್ರಕಾಶಿತವಾದ ಹಾಗೂ **ಪ್ರೊ. ಸುರೇಂದ್ರಕುಮಾರ್**‌ಸಂಪಾದಿತ **'ಮನುಸ್ಮೃತಿ'** ಮತ್ತು **'ವಿಶುದ್ಧಮನುಸ್ಮೃತಿ'** ಗ್ರಂಥಗಳನ್ನು ನೋಡಿ. ಇದರಲ್ಲಿ ವರ್ತಮಾನ ಮನುಸ್ಮೃತಿಯಲ್ಲಿನ ೨೬೮೫ ಶ್ಲೋಕಗಳಲ್ಲಿ, ೧೪೭೧ ಶ್ಲೋಕಗಳು ಪ್ರಕ್ಷಿಪ್ತ, ಎಂದು ಪರಿಗಣಿಸಲಾಗಿ, ಪ್ರತಿ ಒಂದು ಪ್ರಕ್ಷಿಪ್ತಶ್ಲೋಕದ ಅಗ್ರಾಹ್ಯತೆಗೆ ಏಳು-ಏಳು ಆಧಾರಗಳ ಮೇಲೆ ವಿವೇಚನೆ ಮಾಡಲಾಗಿದೆ. _ಅನು.

[೪] ಅನಾರ್ಷವ್ಯಾಕರಣಗ್ರಂಥಗಳು

ಸಾರಸ್ವತಚಂದ್ರಿಕಾ-ಕೌಮುದ್ಯಾದಯೋ ವ್ಯಾಕರಣಾಭಾಸಗ್ರಂಥಾಃ ;

ಸಾರಸ್ವತಚಂದ್ರಿಕಾ , 'ಕೌಮುದೀ' ಮೊದಲಾದ ವ್ಯಾಕರಣದ ಹುಸಿ ಗ್ರಂಥಗಳು!

ಅಂದರೆ, ವ್ಯಾಕರಣಕ್ಕೆ ವಿರುದ್ಧವಾದ 'ಸಾರಸ್ವತ-ಚಂದ್ರಿಕಾ', 'ಕೌಮುದೀ' ಮೊದಲಾದ ಗ್ರಂಥಗಳು!

[೫] ನಿರ್ಣಯಸಿಂಧು ಮೊದಲಾದ ಹುಸಿ ಧರ್ಮ ಶಾಸ್ತ್ರಗಳು

ಮೀಮಾಂಸಾಶಾಸ್ತ್ರಾದಿವಿರುದ್ಧ-ನಿರ್ಣಯ ಸಿಂಧ್ವಾದಯೋ ಗ್ರಂಥಾಃ ;

ಮೀಮಾಂಸಾಶಾಸ್ತ್ರ ಮೊದಲಾದುವಕ್ಕೆ ವಿರುದ್ಧ ವಾದ 'ನಿರ್ಣಯಸಿಂಧು' ಮೊದಲಾದ ಗ್ರಂಥಗಳು.

ಅಂದರೆ, ಧರ್ಮಶಾಸ್ತ್ರಕ್ಕೆ ವಿರುದ್ಧವಾದ 'ನಿರ್ಣಯ ಸಿಂಧು' ಮೊದಲಾದುವು.

[೬] ಹುಸಿ ವೈಶೇಷಿಕ-ನ್ಯಾಯಶಾಸ್ತ್ರಗಳು

ವೈಶೇಷಿಕ-ನ್ಯಾಯಶಾಸ್ತ್ರವಿರುದ್ಧಾಸ್ತರ್ಕಸಂಗ್ರಹ-ಮಾರಭ್ಯ ಜಾಗದೀಶ್ಯಂತಾ ನ್ಯಾಯಾಭಾಸಗ್ರಂಥಾಃ ;

ವೈಶೇಷಿಕಶಾಸ್ತ್ರ-ನ್ಯಾಯಶಾಸ್ತ್ರಗಳಿಗೆ ವಿರುದ್ಧವಾದ 'ತರ್ಕಸಂಗ್ರಹ'ದಿಂದ ಆರಂಭಿಸಿ 'ಜಾಗದೀಶೀ' ತನಕದ ಹುಸಿ ನ್ಯಾಯಗ್ರಂಥಗಳು.

ಅಂದರೆ, ವೈಶೇಷಿಕ-ನ್ಯಾಯಶಾಸ್ತ್ರಗಳಿಗೆ ವಿರುದ್ಧ ವಾದ 'ತರ್ಕಸಂಗ್ರಹ', 'ಮುಕ್ತಾವಲೀ' ಮೊದಲಾದ ಗ್ರಂಥಗಳು!

[೭] ಹುಸಿ ಯೋಗಶಾಸ್ತ್ರಗಳು

ಯೋಗಶಾಸ್ತ್ರವಿರುದ್ಧಾ ಹಠಪ್ರದೀಪಿಕಾದಯೋ ಗ್ರಂಥಾಃ ;

ಯೋಗಶಾಸ್ತ್ರಕ್ಕೆ* ವಿರುದ್ಧವಾದ 'ಹಠಪ್ರದೀಪಿಕಾ' ಮೊದಲಾದ ಗ್ರಂಥಗಳು!

[೮] ಹುಸಿ ಸಾಂಖ್ಯಶಾಸ್ತ್ರಗಳು

ಸಾಂಖ್ಯಶಾಸ್ತ್ರವಿರುದ್ಧಾಃ ಸಾಂಖ್ಯತತ್ತ್ವ-ಕೌಮುದ್ಯಾದಯಃ ;

ಸಾಂಖ್ಯಶಾಸ್ತ್ರಕ್ಕೆ** ವಿರುದ್ಧವಾದ 'ಸಾಂಖ್ಯತತ್ತ್ವ-ಕೌಮುದೀ' ಮೊದಲಾದುವು!

[೯] ಹುಸಿ ವೇದಾಂತಶಾಸ್ತ್ರಗಳು

ವೇದಾಂತಶಾಸ್ತ್ರವಿರುದ್ಧಾ ವೇದಾಂತಸಾರ-ಪಂಚ-ದಶೀ-ಯೋಗವಾಸಿಷ್ಠಾದಯೋ ಗ್ರಂಥಾಃ ;

ವೇದಾಂತಶಾಸ್ತ್ರಕ್ಕೆ+ ವಿರುದ್ಧವಾದ 'ವೇದಾಂತಸಾರ', 'ಪಂಚದಶೀ', 'ಯೋಗವಾಸಿಷ್ಠ' ಮೊದಲಾದ ಗ್ರಂಥಗಳು!

---

* ಎಂದರೆ, ಪಾತಂಜಲಯೋಗಶಾಸ್ತ್ರ _ಅನು.

** ಎಂದರೆ ಕಪಿಲರ ಸಾಂಖ್ಯಶಾಸ್ತ್ರ _ಅನು.

+ ಎಂದರೆ, ವ್ಯಾಸರ ವೇದಾಂತಸೂತ್ರಗಳು _ಅನು.

[೧೦] ಹುಸಿ ಜ್ಯೋತಿಷಶಾಸ್ತ್ರಗಳು

ಜ್ಯೋತಿಷಶಾಸ್ತ್ರವಿರುದ್ಧಾ ಮುಹೂರ್ತ್ತಚಿಂತಾಮಣ್ಯಾದಯೋ ಮುಹೂರ್ತ್ತ-ಜನ್ಮಪತ್ರ-ಫಲಾದೇಶ-ವಿಧಾಯಕಾ ಗ್ರಂಥಾಃ ;

ಜ್ಯೋತಿಷಶಾಸ್ತ್ರಕ್ಕೆ ವಿರುದ್ಧವಾದ 'ಮಹೂರ್ತ-ಚಿಂತಾಮಣೀ' ಮೊದಲಾದ **ಮುಹೂರ್ತ-ಜನ್ಮಪತ್ರ-ಫಲಾದೇಶ**ಗಳನ್ನು ವಿಧಿಸುವಂತಹ ಗ್ರಂಥಗಳು.*

[೧೧] ಹುಸಿ ಶ್ರೌತಸೂತ್ರಗಳು

ತಥೈವ ಶ್ರೌತಸೂತ್ರವಿರುದ್ಧಾಸ್ತ್ರಿಕಂಡಿಕಾಸ್ನಾನ-ಸೂತ್ರಪರಿಶಿಷ್ಟಾದಯೋ ಗ್ರಂಥಾಃ ;

ಹಾಗೆಯೇ, **ಶ್ರೌತಸೂತ್ರ**ಗಳಿಗೆ ವಿರುದ್ಧವಾದ **ತ್ರಿಕಂಡಿಕಾಸ್ನಾನ**, [ಹಾಗೂ] ಸೂತ್ರಗಳು, ಪರಿಶಿಷ್ಟಗಳು ಮೊದಲಾದ ಗ್ರಂಥಗಳು!

ಅಂದರೆ, ಶ್ರೌತಸೂತ್ರಾದಿಗಳಿಗೆ ವಿರುದ್ಧವಾದ **ತ್ರಿಕಂಡಿಕಾಸ್ನಾನ**ವಿಧಾಯಕವೇ ಮೊದಲಾದ ಸೂತ್ರಗಳು!

[೧೨] ಸ್ಥಳ-ಜಲ-ನಾಮ-ಪೂಜಾ-ಮಾಹಾತ್ಮ್ಯ ಗ್ರಂಥಗಳು

ಮಾರ್ಗಶೀರ್ಷೈಕಾದಶೀ-ಕಾಶೀಸ್ಥಲ-ಜಲಸೇವನ-ಯಾತ್ರಾಕರಣ-ದರ್ಶನ-ನಾಮಸ್ಮರಣ-ಸ್ನಾನ-ಜಡ-ಮೂರ್ತಿಪೂಜಾಕರಣಮಾತ್ರೇಣೈವ ಮುಕ್ತಿಭಾವನ-ಪಾಪನಿವಾರಣ-ಮಾಹಾತ್ಮ್ಯ-ವಿಧಾಯಕಾಃ ಸರ್ವೇ ಗ್ರಂಥಾಃ ;

ಮಾರ್ಗಶೀರ್ಷ-ಏಕಾದಶಿ-ಕಾಶಿ-ಸ್ಥಳ-ಜಲಗಳ ಕೇವಲ ಸೇವನೆಯಿಂದ ; ಯಾತ್ರೆ ಮಾಡುವುದರಿಂದ, ದರ್ಶನ [ಮಾಡುವುದರಿಂದ] ; ನಾಮಸ್ಮರಣೆಯಿಂದ, ಸ್ನಾನ [ಮಾಡುವುದರಿಂದ] ; [ಹಾಗೂ] ಜಡಮೂರ್ತಿ ಪೂಜೆ ಮಾಡುವುದರಿಂದಲೇ ಮುಕ್ತಿ ಆಗುವುದೂ ; ಪಾಪಗಳ ನಿವಾರಣೆ [ಆಗುವುದೂ,] ಎಂಬಂತಹ ಮಾಹಾತ್ಮ್ಯ(?)ಗಳನ್ನು ವಿಧಿಸಿರುವ **ಎಲ್ಲಾ ಗ್ರಂಥಗಳು!**

ಅಂದರೆ, **ಮಾರ್ಗಶೀರ್ಷ, ಏಕಾದಶಿ** ಮೊದಲಾದ ವ್ರತಗಳ ;

ಕಾಶಿ ಮೊದಲಾದ ಸ್ಥಳಗಳ ;

ಪುಷ್ಕರ, ಗಂಗಾ ಮೊದಲಾದ ಜಲಗಳ ;

ಯಾತ್ರೆ-ಮಾಹಾತ್ಮ್ಯಗಳನ್ನು ವಿಧಾನ ಮಾಡಿರುವ ಪುಸ್ತಕಗಳು ;

ಮತ್ತು ದರ್ಶನ, ನಾಮಸ್ಮರಣೆ, ಜಡಮೂರ್ತಿ ಪೂಜೆ ಮಾಡುವುದರಿಂದ ಮುಕ್ತಿಯು ಆಗುತ್ತದೆ, ಎಂಬ ವಿಧಾನವನ್ನು ಮಾಡಿರುವ ಗ್ರಂಥಗಳು ;

ಹಾಗೆಯೇ, ಪಾಪನಿವಾರಣೆಯ ವಿಧಾನವನ್ನು ಮಾಡಿರುವ [ಗ್ರಂಥಗಳು ;]

---

* ಎಂದರೆ ಫಲಿತಜ್ಯೋತಿಷ್ಯದ ಉದ್ದೇಶ್ಯದಿಂದ ರಚಿತವಾದುವು _ಅನು.

ಮತ್ತು ಈಶ್ವರನ **ಅವತಾರದ,**[1] ಅಥವಾ **ಪುತ್ರನ,**[2] ಅಥವಾ **ದೂತನ**[3] ಪ್ರತಿಪಾದನೆ ಮಾಡುವಂತಹ [ಗ್ರಂಥಗಳು!]

[೧೩] ಪಾಖಂಡಿಸಂಪ್ರದಾಯನಿರ್ಮಿತ ಗ್ರಂಥಗಳು

ತಥೈವ ಪಾಷಂಡಿಸಂಪ್ರದಾಯನಿರ್ಮಿತಾನಿ ಸರ್ವಾಣಿ ಪುಸ್ತಕಾನಿ ಚ.

ಇದೇ ರೀತಿಯಾಗಿಯೇ, ಪಾಖಂಡಿಸಂಪ್ರದಾಯಗಳಿಂದ ನಿರ್ಮಿತವಾದ ಎಲ್ಲಾ ಪುಸ್ತಕಗಳೂ ಕೂಡ!

ಅಂದರೆ, ವೇದವಿರುದ್ಧವಾದ **ಶೈವ, ಶಾಕ್ತ, ಗಾಣಪತ, ವೈಷ್ಣವಾದಿ** ಮತಗಳ ಗ್ರಂಥಗಳು!

[೧೪] ನಾಸ್ತಿಕತೆಯ ಉಪದೇಶ ಮಾಡುವ ಗ್ರಂಥಗಳು

ನಾಸ್ತಿಕತ್ವವಿಧಾಯಕಾ ಗ್ರಂಥಶ್ಚೋಪದೇಶಾಶ್ಚ.

ಮತ್ತು ನಾಸ್ತಿಕತೆಯ ವಿಧಾನ ಮಾಡುವ ಗ್ರಂಥಗಳು, ಹಾಗೂ ಉಪದೇಶಗಳು!

ಅಂದರೆ, ನಾಸ್ತಿಕಮತದ ಪುಸ್ತಕಗಳು ಮತ್ತು ಅವುಗಳ ಉಪದೇಶಗಳು!*

ಅಯೋಗ್ಯ ಗ್ರಂಥಗಳ ತ್ಯಾಗಕ್ಕೆ ಕಾರಣಗಳು

ತೇ ಸರ್ವೇ ವೇದಾದಿಶಾಸ್ತ್ರವಿರುದ್ಧಾ ಯುಕ್ತಿ-ಪ್ರಮಾಣಪರೀಕ್ಷಾಹೀನಾಃ ಸಂತ್ಯತಃ ಶಿಷ್ಟೈರಗ್ರಾಹ್ಯಾ ಭವಂತಿ.

ಇವೆಲ್ಲವೂ ವೇದಗಳೇ ಮೊದಲಾದ ಶಾಸ್ತ್ರಗಳಿಗೆ ವಿರುದ್ಧವೂ, ಯುಕ್ತಿ-ಪ್ರಮಾಣಗಳ ಪರೀಕ್ಷೆಗಳಿಂದ ಶೂನ್ಯವೂ ಆಗಿವೆ. ಆದುದರಿಂದ, [ಇವು] ಶಿಷ್ಟರಿಂದ ಅಸ್ವೀಕರಣೀಯವಾಗಿರುತ್ತವೆ!

ಅಂದರೆ, ಇವೆಲ್ಲವೂ ವೇದ, ಯುಕ್ತಿ, ಪ್ರಮಾಣ ಮತ್ತು ಪರೀಕ್ಷೆಗಳಿಗೆ ವಿರುದ್ಧವಾದ ಗ್ರಂಥಗಳಾಗಿವೆ. ಆದುದರಿಂದ, ಮನುಷ್ಯರೆಲ್ಲರಿಂದಲೂ, [ಮೇಲೆ] ಹೇಳಿದ ಅಶುದ್ಧ ಗ್ರಂಥಗಳು ತ್ಯಾಗಮಾಡಲು ಯೋಗ್ಯವಾಗಿವೆ.

---

[1] ಪೌರಾಣಿಕಗ್ರಂಥಗಳು [2] ಬೈಬಲ್ [3] ಕುರಾನ್

* ಇವುಗಳಲ್ಲಿ, ಚಾರವಾಕ-ಜೈನ-ಬೌದ್ಧ ಮೊದಲಾದವರ ಗ್ರಂಥಗಳಲ್ಲದೇ, ಪಾಶ್ಚಿಮಾತ್ಯರಾದ **ತಥಾಕಥಿತ ದಾರ್ಶನಿಕ ವಿದ್ವಾಂಸರ ಗ್ರಂಥಗಳೂ ಸೇರಿವೆ,** ಎಂದು ಸಂಸ್ಕೃತಭಾಷಾಜ್ಞಾನ-ಶೂನ್ಯರೂ, ಆದರೆ, ವಿದೇಶೀಭಾಷಾವಿಜ್ಞರೂ ಆದ ಭಾರತೀಯರು ತಿಳಿಯಬೇಕು. _ ಅನು.

ಪ್ರಶ್ನಃ_ ತೇಷು ಬಹ್ವನೃತಭಾಷಣೇಷು ಕಿಂಚಿತ್ ಸತ್ಯಮಪ್ಯಗ್ರಾಹ್ಯಂ ಭವಿತುಮರ್ಹತಿ ವಿಷಯುಕ್ತಾನ್ನವತ್?

ಪ್ರಶ್ನೆ_ ವಿಷಮಿಶ್ರಿತ ಅನ್ನದಂತೆ, ಬಹಳ ಮಿಥ್ಯಾ ವಚನಗಳಿರುವ ಆ [ಗ್ರಂಥಗಳಲ್ಲಿ] ಏನಾದರೂ [ಸ್ವಲ್ಪ] ಸತ್ಯವಿದ್ದರೆ, ಅದೂ ಕೂಡ, ಅಗ್ರಾಹ್ಯವಾಗಿರುತ್ತದೇನು?

ಅಂದರೆ, ಯಾವನಾದರೂ, ಯಾವಾಗಲಾದರೂ, ಈ ಗ್ರಂಥಗಳ ವಿಷಯದಲ್ಲಿ_

"ಈ ಅಸತ್ಯಗ್ರಂಥಗಲ್ಲಿ ಯಾವ ಯಾವ ಸತ್ಯ ಮಾತುಗಳಿವೆಯೋ, ಅವುಗಳನ್ನಂತೂ ಸ್ವೀಕರಿಸಬಹುದಲ್ಲವೇ?", ಎಂದು ಪ್ರಶ್ನಿಸಿದಾಗ_

ಅದಕ್ಕೆ ಉತ್ತರ ಏನೆಂದರೆ_

ಉತ್ತರಮ್_ ಯಥಾ ಪರೀಕ್ಷಕಾ ವಿಷಯುಕ್ತಮಮೃತತುಲ್ಯಮಪ್ಯನ್ನಂ ಪರೀಕ್ಷ್ಯ ತ್ಯಜಂತಿ, ತದ್ವದಪ್ರಮಾಣಾ ಗ್ರಂಥಾಸ್ತ್ಯಾಜ್ಯಾ ಏವ.*

ಉತ್ತರ_ ಹೇಗೆ ಪರೀಕ್ಷಕರು ಅಮೃತತುಲ್ಯವಾದರೂ ಕೂಡ, ವಿಷಮಿಶ್ರಿತವಾದ ಅನ್ನವನ್ನು ಪರೀಕ್ಷಿಸಿ, ತ್ಯಜಿಸುತ್ತಾರೋ, ಹಾಗೆ ಅಪ್ರಮಾಣವಾದ ಗ್ರಂಥಗಳು ತ್ಯಜಿಸಲು ಯೋಗ್ಯವಾಗಿಯೇ ಇರುತ್ತವೆ!*

ಕುತಃ?

ಏಕೆಂದರೆ_

ತೇಷಾಂ ಪ್ರಚಾರೇಣ;

ಅವುಗಳ ಪ್ರಚಾರವಾಗುವುದರಿಂದ;

ವೇದಾನಾಂ ಸತ್ಯಾರ್ಥಾಪ್ರವೃತ್ತೇಃ;

ವೇದಗಳ ಸತ್ಯವಾದ ಅರ್ಥಗಳಲ್ಲಿ ಅಪ್ರವೃತ್ತಿ ಉಂಟಾಗಿ;

ತದಪ್ರವೃತ್ತ್ಯಾ ಹ್ಯಸತ್ಯಾರ್ಥಾಂಧಕಾರಾಪತ್ತೇಃ;

ಆ ಅಪ್ರವೃತ್ತಿಯಿಂದ, ಅಸತ್ಯ ಅರ್ಥದ ಅಂಧಕಾರವು ಹರಡಿ;

ಅವಿದ್ಯಾಂಧಕಾರತಯಾ;

ಅದರಿಂದ ಅವಿದ್ಯೆಯ ಅಂಧಕಾರವು ಉಂಟಾಗುವುದರಿಂದ;

ಯಥಾರ್ಥಜ್ಞಾನಾನುತ್ಪತ್ತೇಶ್ಚೇತಿ.

ಯಥಾರ್ಥಜ್ಞಾನವು ಉತ್ಪನ್ನವಾಗುವುದೇ ಇಲ್ಲ!

ಅಂದರೆ, ಹೇಗೆ ಅಮೃತಕ್ಕೆ ಸಮಾನವಾದ ಅನ್ನದಲ್ಲಿ ವಿಷವು ಬೆರೆತಿದ್ದರೆ, ಅದನ್ನು** [ಜನರು] ಬಿಟ್ಟುಬಿಡುತ್ತಾರೋ, ಹಾಗೆ, [ಮಾಡದೇ,] ಅವುಗಳಿಂದ ಸತ್ಯಗ್ರಹಣದ ಆಶೆ ಇಡುವುದರಿಂದ, ಸತ್ಯಾರ್ಥಪ್ರಕಾಶಗಳಾದ ವೇದವೇ ಮೊದಲಾದ ಗ್ರಂಥಗಳ ಲೋಪವಾಗಿ ಬಿಡುತ್ತವೆ!

* ತ್ಯಾಜ್ಯಗ್ರಂಥಾನಾಂ ಸೂಚೀ 'ಸತ್ಯಾರ್ಥಪ್ರಕಾಶೇ' ಕನ್ನಡಸಂಸ್ಕರಣೇ ತೃತೀಯೇ ಸಮುಲ್ಲಾಸೇಽಪಿ ೧೨೦-೧೨೧ ತಮಯೋಃ ಪೃಷ್ಠಯೋಃ ದ್ರಷ್ಟವ್ಯಾ _ಅನು.

* ತ್ಯಾಜ್ಯ ಗ್ರಂಥಗಳ ಸೂಚಿಯು 'ಸತ್ಯಾರ್ಥಪ್ರಕಾಶ' ತೃತೀಯ ಸಮುಲ್ಲಾಸದ ಪುಟ ೧೨೦-೧೨೧ ರಲ್ಲಿಯೂ ಕೊಡಲ್ಪಟ್ಟಿದೆ. _ಅನು.

** ಎಂದರೆ, ಅನ್ನವನ್ನು _ಅನು.

ಆದುದರಿಂದ, ಈ ಸತ್ಯ ಗ್ರಂಥಗಳ ಪ್ರಚಾರದ ಪ್ರಯೋಜನಕ್ಕಾಗಿ ಆ ಮಿಥ್ಯಾಗ್ರಂಥಗಳನ್ನು ಅವಶ್ಯವಾಗಿ ತ್ಯಜಿಸಬೇಕು!

ಏಕೆಂದರೆ, ಸತ್ಯವಿದ್ಯೆ ಇಲ್ಲದೇ ಜ್ಞಾನ ಎಲ್ಲಿ? ಜ್ಞಾನವಿಲ್ಲದೇ ಉನ್ನತಿ ಹೇಗೆ? ಮತ್ತು ಉನ್ನತಿಯಾಗದಿರುವುದರಿಂದ, ಮನುಷ್ಯನು ಯಾವಾಗಲೂ ದುಃಖಸಾಗರದಲ್ಲೇ ಮುಳುಗಿರುತ್ತಾನೆ!

ಈಗ, ಮುಂದೆ, ಮೇಲೆ ಬರೆದ ಆ ಅಪ್ರಮಾಣ ಗ್ರಂಥಗಳ ಬೇರೆ ಬೇರೆ ದೋಷಗಳನ್ನೂ ಕೂಡ, ಸಂಕ್ಷೇಪವಾಗಿ ತೋರಿಸುತ್ತೇವೆ.

ತಂತ್ರಗ್ರಂಥಗಳ ಭ್ರಷ್ಟಾಚಾರ

ಅಥ ತಂತ್ರಗ್ರಂಥಾನಾಂ ಮಿಥ್ಯಾತ್ವಂ ಪ್ರದರ್ಶ್ಯತೇ_

ಈಗ, ತಂತ್ರಗ್ರಂಥಗಳ ಮಿಥ್ಯಾತ್ವವು ತೋರಿಸಲ್ಪಡುತ್ತದೆ_

ತತ್ರ ಪಂಚಮಕಾರಸೇವನೇನೈವ ಮುಕ್ತಿರ್ಭವತಿ, ನಾನ್ಯಥೇತಿ ತೇಷಾಂ ಮತಮ್ ;

ಅದರಲ್ಲಿ_ "ಪಂಚಮಕಾರಗಳ ಸೇವನೆಯಿಂದಲೇ, ಮುಕ್ತಿ ಉಂಟಾಗುತ್ತದೆ ; ಬೇರೆ ರೀತಿಯಿಂದಲ್ಲ", ಎಂಬುದು ಅವರ ಮತವಾಗಿದೆ!

ಯತ್ರೇಮೇ ಶ್ಲೋಕಾಃ ಸಂತಿ_

ಅವುಗಳಲ್ಲಿ ಈ ಶ್ಲೋಕಗಳಿವೆ_

ಅಂದರೆ, ತಂತ್ರಗ್ರಂಥಗಳಲ್ಲಿ ಎಂತಹ ಶ್ಲೋಕಗಳು ಬರೆಯಲ್ಪಟ್ಟಿವೆ, ಎಂಬುದನ್ನು ನೋಡಿರಿ_

"ಮದ್ಯಂ ಮಾಂಸಂ ಚ ಮೀನಂ ಚ ಮುದ್ರಾ ಮೈಥುನಮೇವ ಚ ।
ಏತೇ ಪಂಚ ಮಕಾರಾಶ್ಚ ಮೋಕ್ಷದಾ ಹಿ ಯುಗೇ ಯುಗೇ ॥೧॥"*

[ಅರ್ಥ:_ "ಮದ್ಯ ಮತ್ತು ಮಾಂಸ, ಮೀನು ಮತ್ತು ಮುದ್ರಾ ಮತ್ತು ಮೈಥುನವೇ!
ಈ ಪಂಚ ಮಕಾರಗಳು ಯುಗ-ಯುಗದಲ್ಲೂ ಮೋಕ್ಷವನ್ನು ಕೊಡುವಂತಹವಾಗಿರುತ್ತವೆ!"]

ಅಂದರೆ_

"ಹೆಂಡ ಕುಡಿಯುವುದು ; ಮಾಂಸ [ತಿನ್ನುವುದು;] ಮೀನನ್ನು [ತಿನ್ನುವುದು;] 'ಮುದ್ರಾ', ಎಂದರೆ ಎಲ್ಲರೊಡನೆ ಒಟ್ಟಿಗೇ ಕುಳಿತುಕೊಂಡು, ರೊಟ್ಟಿ , ವಡೆ ಮೊದಲಾದುವನ್ನು ಕಬಳಿಸುವುದು ; ಕನ್ಯೆ, ಸೋದರಿ, ತಾಯಿ, ಮತ್ತು ಸೊಸೆ ಮೊದಲಾದವರೊಂದಿಗೂ ಕೂಡ, ಮೈಥುನವನ್ನು ಮಾಡಿಬಿಡುವುದು! ಈ ಐದು ಮಕಾರಗಳ ಸೇವನೆಯಿಂದ ಎಲ್ಲರಿಗೂ ಮುಕ್ತಿ ದೊರಕುತ್ತದೆ!" [೧]

*ಕಾಲೀತಂತ್ರಾದಿಷು _ಯು. ಮೀ.

* 'ಕಾಲೀತಂತ್ರ' ಮೊದಲಾದುವುಗಳಲ್ಲಿ _ಯು. ಮೀ.

"ಪೀತ್ವಾ ಪೀತ್ವಾ ಪುನಃ ಪೀತ್ವಾ ಯಾವತ್ಪತತಿ ಭೂತಲೇ ।
ಪುನರುತ್ಥಾಯ ವೈ ಪೀತ್ವಾ ಪುನರ್ಜನ್ಮ ನ ವಿದ್ಯತೇ ॥ ೨ ॥"*

[ಅರ್ಥ:_" ಕುಡಿಯುತ್ತಾ, ಕುಡಿಯುತ್ತಾ, ಪುನಃ ಕುಡಿಯುತ್ತಾ, ಯಾವಾಗ ನೆಲದ ಮೇಲೆ ಬೀಳುತ್ತಾನೋ, ಆಗ ಪುನಃ ಎದ್ದು ಕುಡಿಯುತ್ತಾ [ಇದ್ದರೆ, ಅವನಿಗೆ] ಪುನರ್ಜನ್ಮ ಇರುವುದಿಲ್ಲ!"]

ಅಂದರೆ_

"ಯಾವುದೋ ಮನೆಯ ನಾಲ್ಕು [ದಿಕ್ಕಿನ] ಗೂಡುಗಳಲ್ಲಿ ಹೆಂಡದ ಪಾತ್ರೆಗಳನ್ನು ಇಟ್ಟು, ಒಂದು ಕೊನೆಯಿಂದ, ನಿಂತು-ನಿಂತೇ ಹೆಂಡ ಕುಡಿಯುವುದನ್ನು ಆರಂಭಿಸಿ, ಎರಡನೆಯ ಗೂಡಿಗೆ ಹೋಗಬೇಕು! ಎರಡನೆಯದರಿಂದ ಕುಡಿಯುತ್ತಾ ಮೂರನೆಯದಕ್ಕೆ [ಹೋಗಬೇಕು!] ಮತ್ತು ಮೂರನೆಯದರಿಂದ ಕುಡಿಯುತ್ತಾ ನಾಲ್ಕನೆಯದರ ಬಳಿಗೆ ಹೋಗಿ ಕುಡಿಯಬೇಕು!

"ಎಲ್ಲಿನ ತನಕ? ಎಂದರೆ, ಎಲ್ಲಿನ ತನಕ ಕುಡಿಯುತ್ತಾ, ಕುಡಿಯುತ್ತಾ, ಪ್ರಜ್ಞೆ ತಪ್ಪಿ, ಕಟ್ಟಿಗೆಯ ಸಮಾನನಾಗಿ ನೆಲದ ಮೇಲೆ ಬೀಳುವುದಿಲ್ಲವೋ, ಅಲ್ಲಿನ ತನಕ ಒಂದೇ ಸಮನೆ ಕುಡಿಯುತ್ತಲೇ ಹೋಗಿಬಿಡಬೇಕು!

"ಈ ರೀತಿಯಾಗಿ ಮತ್ತೆ ಮತ್ತೆ ಕುಡಿದು, ಅನೇಕ ಸಲ ಎದ್ದು ಎದ್ದು, ನೆಲದ ಮೇಲೆ ಬೀಳುವುದರಿಂದ, ಮನುಷ್ಯನು ಜನ್ಮ-ಮರಣ ಮೊದಲಾದ ದುಃಖಗಳಿಂದ ಬಿಡುಗಡೆಯಾಗಿ, ಮುಕ್ತಿಯನ್ನು ಪಡೆದುಕೊಂಡುಬಿಡುತ್ತಾನೆ!" [೨]

"ಪ್ರವೃತ್ತೇ ಭೈರವೀಚಕ್ರೇ ಸರ್ವೇ ವರ್ಣಾ ದ್ವಿಜಾತಯಃ ।
ನಿವೃತ್ತೇ ಭೈರವೀಚಕ್ರೇ ಸರ್ವೇ ವರ್ಣಾಃ ಪೃಥಕ್ ಪೃಥಕ್ ॥ ೩ ॥" **

[ಅರ್ಥ:_"ಭೈರವೀಚಕ್ರವು ಆರಂಭವಾದಾಗ, ಎಲ್ಲಾ ವರ್ಣಗಳೂ ದ್ವಿಜಾತಿಗಳಾಗುತ್ತವೆ! ಭೈರವೀಚಕ್ರವು ಮುಗಿದಾಗ, ಎಲ್ಲಾ ವರ್ಣಗಳೂ ಬೇರೆ ಬೇರೆಯಾಗುತ್ತವೆ!"]

ಅಂದರೆ_

ಯಾವಾಗಲಾದರೂ ವಾಮಮಾರ್ಗೀಜನರು ರಾತ್ರಿಯ ಸಮಯದಲ್ಲಿ ಯಾವುದಾದರೂ ಸ್ಥಾನದಲ್ಲಿ ಒಟ್ಟುಗೂಡುತ್ತಾರೋ, ಆಗ ಅವರಲ್ಲಿ ಬ್ರಾಹ್ಮಣನಿಂದ ಹಿಡಿದು, ಚಾಂಡಾಲನ ತನಕ ಎಲ್ಲಾ ಸ್ತ್ರೀ-ಪುರುಷರೂ ಇರುತ್ತಾರೆ!

---

* ಕುಲಾರ್ಣವತಂತ್ರಮ್ (೭.೧೦೦) _ಅನು.

** ಕುಲಾರ್ಣವತಂತ್ರಮ್ (೮.೯೬) _ಅನು.

* ಕುಲಾರ್ಣವತಂತ್ರ (೭.೧೦೦) _ಅನು.

** ಕುಲಾರ್ಣವತಂತ್ರ (೮.೯೬) _ಅನು.

"ನಂತರ, ಅಲ್ಲಿ ಆ ಜನರು ಒಬ್ಬ ಸ್ತ್ರೀಯನ್ನು ನಗ್ನಳನ್ನಾಗಿ ಮಾಡಿ, ಅವಳ ಯೋನಿಯ ಪೂಜೆ ಮಾಡುತ್ತಾರೆ!

"ಇಷ್ಟೇ ಅಲ್ಲ! ಆದರೆ, ಒಂದೊಂದು ವೇಳೆ, ಪುರುಷನನ್ನೂ ಕೂಡ, ನಗ್ನನನ್ನಾಗಿ ಮಾಡಿ, ಸ್ತ್ರೀಜನರೂ ಕೂಡ, ಅವನ ಲಿಂಗದ ಪೂಜೆ ಮಾಡುತ್ತಾರೆ!

"ಅದರ ನಂತರ, ಮದ್ಯದ ಪಾತ್ರೆಯೊಳಗಿನಿಂದ, ಒಂದು ಪಾತ್ರೆ, ಎಂದರೆ ಬಟ್ಟಲನ್ನು ತುಂಬಿ, ಆ ಸ್ತ್ರೀ ಮತ್ತು ಪುರುಷ, ಇಬ್ಬರಿಗೂ ಕುಡಿಸುತ್ತಾರೆ!

" ಮತ್ತೆ, ಅದೇ ಬಟ್ಟಲಿನಿಂದ, ಎಲ್ಲಾ ವಾಮಮಾರ್ಗೀಜನರೂ ಕ್ರಮವಾಗಿ ಹೆಂಡವನ್ನು ಕುಡಿಯುತ್ತಾರೆ. ಮತ್ತು ಅನ್ನ, ಮಾಂಸ ಮೊದಲಾದುವನ್ನು ತಿನ್ನುತ್ತಾ ಹೋಗುತ್ತಾರೆ!

"ಎಲ್ಲಿನ ತನಕ? ಎಂದರೆ, ಎಲ್ಲಿನ ತನಕ ಉನ್ಮತ್ತರಾಗಿ ಹೋಗುವುದಿಲ್ಲವೋ, ಅಲ್ಲಿನ ತನಕ ತಿನ್ನುವುದನ್ನು-ಕುಡಿಯುವುದನ್ನು ನಿಲ್ಲಿಸುವುದಿಲ್ಲ!

"ನಂತರ, ಒಬ್ಬ ಸ್ತ್ರೀಯೊಡನೆ, ಒಬ್ಬ ಪುರುಷನು, ಅಥವಾ ಒಬ್ಬಳೊಡನೆ ಅನೇಕರೂ ಕೂಡ, ಮೈಥುನ ಮಾಡಿಕೊಂಡುಬಿಡುತ್ತಾರೆ!

"ಯಾವಾಗ ಆ ಸ್ಥಾನದಿಂದ ಹೊರಗೆ ಬರುತ್ತಾರೋ, ಆಗ_ " ಈಗ ನಾವೆಲ್ಲರೂ ಬೇರೆ ಬೇರೆ ವರ್ಣಸ್ಥರು ಆಗಿಹೋದೆವು! ", ಎಂದು ಹೇಳುತ್ತಾರೆ."

" ಮಾತೃಯೋನಿಂ ಪರಿತ್ಯಜ್ಯ ವಿಹರೇತ್ ಸರ್ವಯೋನಿಷು ।
ಲಿಂಗಂ ಯೋನ್ಯಾಂ ತು ಸಂಸ್ಥಾಪ್ಯ ಜಪೇನ್ಮಂತ್ರಮತಂದ್ರಿತಃ ॥ ೪ ॥ " *

[ಅರ್ಥ:_ " ಮಾತೃಯೋನಿಯನ್ನು ಬಿಟ್ಟು, ಎಲ್ಲಾ ಯೋನಿಗಳಲ್ಲೂ ವಿಹರಿಸಬೇಕು!
ಲಿಂಗವನ್ನು ಯೋನಿಯಲ್ಲಿ ಇಟ್ಟು ಆಲಸ್ಯರಹಿತನಾಗಿ ಮಂತ್ರವನ್ನು ಜಪಿಸಬೇಕು! "

ಅಂದರೆ_

ಅವರ ಯಾವ ಯಾವುದೋ ಶ್ಲೋಕದಲ್ಲಂತೂ ಹೇಗೆ ಬರೆಯಲಾಗಿದೆಯೆಂದರೆ_

" ತಾಯಿಯನ್ನು ಬಿಟ್ಟು , ಎಲ್ಲಾ ಸ್ತ್ರೀಯರೊಡನೆಯೂ ಮೈಥುನ ಮಾಡಿಕೊಂಡುಬಿಡಲಿ ; ಇದರಲ್ಲಿ ಏನೂ ದೋಷವಿಲ್ಲ! "

---

* ಜ್ಞಾನಸಂಕಲಿನೀತಂತ್ರಮ್_ಅನು.

* ಜ್ಞಾನಸಂಕಲಿನೀತಂತ್ರ _ಅನು.

ಮತ್ತು ಯಾರ-ಯಾರದೋ ಮತವೇನೆಂದರೆ_

"ಮಾತರಮಪಿ ನ ತ್ಯಜೇತ್ ॥ ೫ ॥"

[ಅರ್ಥ:_ " ತಾಯಿಯನ್ನೂ ಕೂಡ, ಬಿಡಕೂಡದು!"]

ಅಂದರೆ_

ಮತ್ತು ಯಾವುದರಲ್ಲೋ ಬರೆಯಲಾಗಿದೆಯೇನೆಂದರೆ_

"ಯೋನಿಯಲ್ಲಿ ಲಿಂಗದ ಪ್ರವೇಶ ಮಾಡಿ. ಆಲಸ್ಯವನ್ನು ತ್ಯಜಿಸಿ, ಮಂತ್ರವನ್ನು ಜಪಿಸಿದರೆ, ಅವನು ಶೀಘ್ರವಾಗಿಯೇ ಸಿದ್ಧನಾಗಿ ಹೋಗುತ್ತಾನೆ!" [೪, ೫]

ಇತ್ಯಾದ್ಯನೇಕವಿಧಮಲ್ಪಬುದ್ಧ್ಯಧರ್ಮಾಶ್ರೇಯಸ್ಕರ್ಮಾನಾರ್ಯಾಭಿಹಿತಂ ಯುಕ್ತಿಪ್ರಮಾಣರಹಿತಂ ವೇದಾದಿಭ್ಯೋಽತ್ಯಂತವಿರುದ್ಧಮನಾರ್ಷಮಶ್ಲೀಲಮುಕ್ತಂ ;

ಈ ಮೊದಲಾಗಿ, ಅನೇಕ ವಿಧವಾಗಿ ಅಲ್ಪ ಬುದ್ಧಿಗಳಿಂದಲೂ, ಅಧಾರ್ಮಿಕರಿಂದಲೂ, ಅಶ್ರೇಯಸ್ಕರ್ಮರೂಪವಾಗಿ ಅನಾರ್ಯರಿಂದಲೂ ಉಪದೇಶಿಸಲ್ಪಟ್ಟುದಾಗಿ, ಯುಕ್ತಿ-ಪ್ರಮಾಣಗಳಿಂದ ರಹಿತವಾದುದೂ, ವೇದವೇ ಮೊದಲಾದುವುಗಳಿಗೆ ಅತ್ಯಂತ ವಿರುದ್ಧವಾದುದೂ, ಅನಾರ್ಷವೂ, ಅಶ್ಲೀಲವೂ ಆಗಿ ಹೇಳಲಾಗಿದೆ!

ತಚ್ಛಿಷ್ಟೈರ್ನ ಕದಾಪಿ ಗ್ರಾಹ್ಯಮಿತಿ.

ಅದು ಶಿಷ್ಟರಿಂದ ಎಂದಿಗೂ ಅಂಗೀಕರಿಸಲ್ಪಡಲೇ ಬಾರದು!

ಅಂದರೆ, ಈ ಮೊದಲಾಗಿ ಅನೇಕ ಅನರ್ಥರೂಪ ಕಥನಗಳು **ತಂತ್ರಗ್ರಂಥ**ಗಳಲ್ಲಿ ಬರೆಯಲ್ಪಟ್ಟಿವೆ. ಅವೆಲ್ಲವೂ ವೇದಾದಿಶಾಸ್ತ್ರ, [ಹಾಗೂ] ಯುಕ್ತಿ-ಪ್ರಮಾಣಗಳಿಗೆ ವಿರುದ್ಧವಾಗಿರುವ ಕಾರಣದಿಂದ, ಶ್ರೇಷ್ಠ ಪುರುಷರಿಂದ ಅಂಗೀಕರಿಸಲ್ಪಡುವುದು ಯೋಗ್ಯವಲ್ಲ!

ಮದ್ಯಾದಿಸೇವನೇನ ಬುದ್ಧ್ಯಾದಿಭ್ರಂಶಾನ್ಮುಕ್ತಿಸ್ತು ನ ಜಾಯತೇ!

ಮದ್ಯ ಮೊದಲಾದುವುಗಳ ಸೇವನೆಯಿಂದ, ಬುದ್ಧಿ ಭ್ರಷ್ಟವಾಗುವುದರಿಂದ, ಮುಕ್ತಿಯಂತೂ ಉಂಟಾಗುವುದಿಲ್ಲ;

ಕಿಂತು ನರಕಪ್ರಾಪ್ತಿರೇವ ಭವತೀತ್ಯನ್ಯತ್ ಸುಗಮಂ ಪ್ರಸಿದ್ಧಂ ಚ.

ಆದರೆ, (ವಿಶೇಷವಾಗಿ) ನರಕಪ್ರಾಪ್ತಿಯೇ ಆಗುತ್ತದೆ, ಎಂಬುದು ಬೇರೆಡೆ ಸುಲಭವಾಗಿ ತಿಳಿಯುವಂತಹುದೂ, ಹಾಗೂ ಪ್ರಸಿದ್ಧವೂ ಆಗಿದೆ!

ಅಂದರೆ, ಮದ್ಯಾದಿಗಳ ಸೇವನೆಯಿಂದ ಮುಕ್ತಿಯಂತೂ ಎಂದಿಗೂ ಉಂಟಾಗುವುದಿಲ್ಲ! ಆದರೆ, ಜ್ಞಾನದ ನಾಶವೂ ಮತ್ತು ದುಃಖರೂಪ ನರಕದ ಪ್ರಾಪ್ತಿಯೂ ದೀರ್ಘಕಾಲದ ತನಕ ಆಗುತ್ತದೆ!

ಪುರಾಣಗ್ರಂಥಗಳಲ್ಲಿನ ಮಿಥ್ಯಾಕಥೆಗಳು

ಏವಮೇವ ಬ್ರಹ್ಮವೈವರ್ತಾದಿಷು ಮಿಥ್ಯಾ-ಪುರಾಣಸಂಜ್ಞೇಷು ಕಿಂ ಚ ನವೀನೇಷು ಮಿಥ್ಯಾಭೂತಾ ಬಹ್ವ್ಯಃ ಕಥಾ ಲಿಖಿತಾಃ .

ಹೀಗೆಯೇ, **ಮಿಥ್ಯಾಪುರಾಣಗಳೆಂಬ** ಹೆಸರಿನ ಬ್ರಹ್ಮವೈವರ್ತ ಮೊದಲಾದುವುಗಳಲ್ಲಿ, ಹಾಗೂ ನವೀನ [ಪುರಾಣ]ಗಳಲ್ಲಿ ಮಿಥ್ಯಾರೂಪವಾಗಿರುವ ಬಹಳ ಕಥೆಗಳು ಬರೆಯಲ್ಪಟ್ಟಿವೆ.

ಅಂದರೆ, ವ್ಯಾಸರ ಹೆಸರಿನಲ್ಲಿ ಸಂಪ್ರದಾಯೀ ಜನರು ರಚಿಸಿಕೊಂಡಿರುವ **ಬ್ರಹ್ಮವೈವರ್ತ** ಮತ್ತು **ಶ್ರೀಮದ್‌ಭಾಗವತ** ಮೊದಲಾದ ಯಾವ [ಪುರಾಣ] ಗ್ರಂಥಗಳು ಇವೆಯೋ, ಅವುಗಳ ಹೆಸರು **'ಪುರಾಣ'**, ಎಂದು ಎಂದಿಗೂ ಆಗಲಾರದು! ಬದಲಾಗಿ, ಅವುಗಳನ್ನು **'ನವೀನ'**, ಎಂದು ಕರೆಯುವುದು ಉಚಿತವಾಗಿರುತ್ತದೆ.

ತಾಸಾಂ ಸ್ಥಾಲೀಪುಲಾಕನ್ಯಾಯೇನ ಸ್ವಲ್ಪಾಃ ಪ್ರದರ್ಶ್ಯಂತೇ.

ಅವುಗಳಲ್ಲಿನ [ಕಥೆಗಳಲ್ಲಿ] 'ಸ್ಥಾಲೀಪುಲಾಕ-ನ್ಯಾಯ'*ದಂತೆ ಸ್ವಲ್ಪವು [ಇಲ್ಲಿ] ತೋರಿಸಲಾಗುತ್ತವೆ.

ಅಂದರೆ, ಅವುಗಳ ಮಿಥ್ಯಾತ್ವದ ಪರೀಕ್ಷೆಗಾಗಿ ಸ್ವಲ್ಪ ಕಥೆಗಳನ್ನು ಇಲ್ಲಿ ಬರೆಯುತ್ತೇವೆ_

ತತ್ರೈವಮೇಕಾ ಕಥಾ ಲಿಖಿತಾ_

ಅವುಗಳಲ್ಲಿ ಒಂದು ಕಥೆಯು ಹೇಗೆ ಬರೆಯಲ್ಪಟ್ಟಿದೆಯೆಂದರೆ_

[೧] ತನ್ನ ಪುತ್ರಿಯೊಡನೆ ಬ್ರಹ್ಮನ ಮೈಥುನ, ಎಂಬ ಮಿಥ್ಯಾಕಥೆ!

"ಪ್ರಜಾಪತಿರ್ಬ್ರಹ್ಮಾ ಚತುರ್ಮುಖೋ ದೇಹಧಾರೀ ಸ್ವಾಂ ಸರಸ್ವತೀಂ ದುಹಿತರಂ ಮೈಥುನಾಯ ಜಗ್ರಾಹೇತಿ!"

"ಪ್ರಜಾಪತಿಯಾದ ಚತುರ್ಮುಖ ಬ್ರಹ್ಮನು ದೇಹಧಾರಿಯಾಗಿ ತನ್ನ ಪುತ್ರಿಯಾದ ಸರಸ್ವತಿಯನ್ನು ಮೈಥುನಕ್ಕಾಗಿ ಹಿಡಿದುಕೊಂಡನು!", ಎಂಬ [ಕಥೆ ಇದೆ.]

ಸಾ ಮಿಥ್ಯೈವಾಸ್ತಿ.

ಈ [ಕಥೆಯು] ಸುಳ್ಳೇ ಆಗಿದೆ!

ಅಂದರೆ, ನವೀನಗ್ರಂಥಕಾರರು, ಮೊದಲು ರೂಪಕಾಲಂಕಾರದಲ್ಲಿದ್ದ ಈ ಕಥೆಯನ್ನು ಭ್ರಾಂತಿಯಿಂದ, ಸುಳ್ಳಾಗಿ ಮಾಡಿ ಬರೆದಿದ್ದಾರೆ!

---

* ಅನ್ನ ತಯಾರಿಸಿದ ಪಾತ್ರೆಯಲ್ಲಿನ ಒಂದು ಅಗಳನ್ನು ತೆಗೆದು ಪರೀಕ್ಷಿಸಿದರೆ, ಸಂಪೂರ್ಣ ಪಾತ್ರೆಯಲ್ಲಿನ ಅನ್ನವು ಹೇಗೆ ಪಕ್ವವಾಗಿದೆ, ಎಂಬುದು ತಿಳಿದುಬರುತ್ತದೆ _ಅನು.

ಕುತಃ?
ಏಕೆಂದರೆ_

ಅಸ್ಯಾಃ ಕಥಾಯಾ ಅಲಂಕಾರಾಭಿಪ್ರಾಯತ್ವಾತ್.
ಈ ಕಥೆಯು ಅಲಂಕಾರದ ಅಭಿಪ್ರಾಯದಲ್ಲಿದೆ.

ತದ್ಯಥಾ_
ಅದು* ಹೇಗೆಂದರೆ_

"ಪ್ರಜಾಪತಿರ್ವೈ ಸ್ವಾಂ ದುಹಿತರಮಭ್ಯಧ್ಯಾಯದ್ । ದಿವಮಿತ್ಯನ್ಯ ಆಹುರುಷಸಮಿತ್ಯನ್ಯೇ । ತಾಮೃಶ್ಯೋ ಭೂತ್ವಾ ರೋಹಿತಂ ಭೂತಾಮಭ್ಯೈತ್ ॥"

[ಐತರೇಯಬ್ರಾಹ್ಮಣೇ ಪಂ. ೩, ಕಂ. ೩೩]

[ಅರ್ಥ:_ "ಪ್ರಜಾಪತಿಯು ತನ್ನ ದುಹಿತೃವನ್ನು** ಧ್ಯಾನ ಮಾಡಿದನು! ಕೆಲವರು 'ದ್ಯುಲೋಕ'ವನ್ನು, ಎನ್ನುತ್ತಾರೆ; ಕೆಲವರು 'ಉಷೆ'ಯನ್ನು, ಎನ್ನುತ್ತಾರೆ. ಕೆಂಪಾದ ಅವಳನ್ನು [ಅವನು] ಮೃಗರೂಪನಾಗಿ ಸೇರಿದನು."

(ಐತರೇಯಬ್ರಾಹ್ಮಣ: ೩. ೩೩)]

"ತಸ್ಯ ಯದ್ ರೇತಸಃ ಪ್ರಥಮಮುದದೀಪ್ಯತ ತದಾಸಾ-ವಾದಿತ್ಯೋऽಭವತ್ ॥೧॥"

[ಐತರೇಯೋಪನಿಷದಿ ಪಂ. ೩, ಕಂ. ೩೪]

[ಅರ್ಥ:_ "ಅವನ ಯಾವ ರೇತಸ್ಸು ಮೊದಲು ಪ್ರಜ್ವಲಿತವಾಯಿತೋ, ಅದು ಈ 'ಆದಿತ್ಯ' ಆಯಿತು!"

(ಐತರೇಯೋಪನಿಷತ್: ೩. ೩೪)]

" ಪ್ರಜಾಪತಿರ್ವೈ ಸುಪರ್ಣೋ ಗರುತ್ಮಾನೇಷ ಸವಿತಾ ॥೨॥"

[ಶತಪಥಬ್ರಾಹ್ಮಣೇ ಕಾಂ. ೧೦, ಅ. ೨, ಬ್ರಾ. ೨, ಕಂ. ೪]

[ಅರ್ಥ:_ "ಪ್ರಜಾಪತಿಯೇ ಸುಪರ್ಣನೂ, ಗರುತ್ಮಂತನೂ ಆಗಿದ್ದಾನೆ. ಇವನೇ ಸವಿತಾ!"

[ಶತಪಥಬ್ರಾಹ್ಮಣ: ೧೦. ೨. ೨. ೪]

---

* ಎಂದರೆ, ರೂಪಕಾಲಂಕಾರದಲ್ಲಿದ್ದ ಕಥೆ _ಅನು.

** 'ದುಹಿತಾ', ಎಂದರೆ ದೂರದಲ್ಲಿ ಇಡಲ್ಪಟ್ಟಿರುವವಳು, ಎಂದರ್ಥ. 'ಮಗಳು', ಎಂಬುದು ರೂಢಾರ್ಥ_ಅನು.

ಅಲಂಕಾರದ ಪ್ರತೀಕಗಳು

ಭಾಷ್ಯಮ್_

ಸವಿತಾ ಸೂರ್ಯಃ ಸೂರ್ಯ್ಯಲೋಕಃ ಪ್ರಜಾಪತಿಸಂಜ್ಞಕೋಽಸ್ತಿ.

ತಸ್ಯ ದುಹಿತಾ ಕನ್ಯಾವದ್ ದ್ಯೌರುಷಾ ಚಾಸ್ತಿ.

ಯಸ್ಮಾದ್ ಯದುತ್ಪದ್ಯತೇ ತತ್ತಸ್ಯಾಪತ್ಯವತ್;

ಸ ತಸ್ಯ ಪಿತೃವದಿತಿ ರೂಪಕಾಲಂಕಾರೋಕ್ತಿಃ.

ಸ ಚ ತಾಂ ರೋಹಿತಾಂ ಕಿಂಚಿದಾರಕ್ತಗುಣಪ್ರಾಪ್ತಾಂ ಸ್ವಾಂ ದುಹಿತರಂ ಕಿರಣೈರ್ಋಷ್ಯವಚ್ಛೀಘ್ರಮಭ್ಯಧ್ಯಾಯತ್ ಪ್ರಾಪ್ನೋತಿ.

ಏವಂ ಪ್ರಾಪ್ತಃ ಪ್ರಕಾಶಾಖ್ಯಮಾದಿತ್ಯಂ ಪುತ್ರಮಜೀಜನದ್ ಉತ್ಪಾದಯತಿ.

ಅಸ್ಯ ಪುತ್ರಸ್ಯ ಮಾತೃವದುಷಾ ಪಿತೃವತ್ ಸೂರ್ಯಶ್ಚ.

ಕುತಃ?

ತಸ್ಯಾಮುಷಸಿ ದುಹಿತರಿ ಕಿರಣರೂಪೇಣ ವೀರ್ಯ್ಯೇಣ ಸೂರ್ಯ್ಯಾದ್ ದಿವಸಸ್ಯ ಪುತ್ರಸ್ಯೋತ್ಪನ್ನತ್ವಾತ್.

ಭಾಷ್ಯ_

'ಸವಿತಾ', ಎಂದರೆ ಸೂರ್ಯ! ಸೂರ್ಯಲೋಕವು 'ಪ್ರಜಾಪತಿ', ಎಂಬ ಹೆಸರನ್ನುಳ್ಳದ್ದಾಗಿದೆ.

ಅಂದರೆ, ಇಲ್ಲಿ ಸೂರ್ಯನಿಗೆ 'ಪ್ರಜಾಪತಿ', ಎಂದು ಹೇಳುತ್ತಾರೆ.

ಶತಪಥಬ್ರಾಹ್ಮಣದಲ್ಲಿ 'ಪ್ರಜಾಪತಿ' ಮತ್ತು 'ಸವಿತಾ'_ ಇವು ಸೂರ್ಯನ ಹೆಸರಾಗಿವೆ.

ಅವನಿಗೆ ಕನ್ಯೆಯರಂತೆ '**ದ್ಯೌ**' ಮತ್ತು '**ಉಷಾ**', ಎಂಬ **ದುಹಿತೃ** [ಇಬ್ಬರು] ಇರುತ್ತಾರೆ.

ಅಂದರೆ, ಅವನಿಗೆ '**ಪ್ರಕಾಶ**' ಮತ್ತು '**ಉಷಾ**', ಎಂಬ ಇಬ್ಬರು ಕನ್ಯೆಯರು ಇರುತ್ತಾರೆ!

ಯಾವನಿಂದ ಯಾವುದು ಉತ್ಪನ್ನವಾಗುತ್ತದೋ, ಅದು ಅವನ ಸಂತಾನದಂತೆ [ಇರುತ್ತದೆ.]

ಮತ್ತು ಅವನು ಅದರ ತಂದೆಯಂತೆ [ಇರುತ್ತಾನೆ,] ಎಂದು ರೂಪಕಾಲಂಕಾರದ ಕಥನವಿದೆ!

ಅವನು ಆ '**ರೋಹಿತ**'ಳನ್ನು, ಎಂದರೆ ಸ್ವಲ್ಪ ಕೆಂಪುಗುಣವನ್ನು ಹೊಂದಿದ ತನ್ನ '**ಕನ್ಯೆ**'ಯನ್ನು ಕಿರಣಗಳ ಮೂಲಕ ಮೃಗದಂತೆ ಶೀಘ್ರವಾಗಿ ಸೇರುತ್ತಾನೆ.

ಹೀಗೆ, ಸೇರಿ, '**ಪ್ರಕಾಶ**', ಎಂಬ ಸಂಜ್ಞೆಯುಳ್ಳ '**ಆದಿತ್ಯ**'ನನ್ನು ಪುತ್ರರೂಪದಲ್ಲಿ ಉತ್ಪನ್ನ ಮಾಡುತ್ತಾನೆ.

ಈ 'ಪುತ್ರ'ನ '**ತಾಯಿ**'ಯಂತೆ 'ಉಷಾ', ಹಾಗೂ '**ತಂದೆ**'ಯಂತೆ '**ಸೂರ್ಯ**' ಇರುತ್ತಾರೆ!

ಏಕೆಂದರೆ_

ಆ 'ಕನ್ಯೆ'ಯಾದ ಉಷೆಯಲ್ಲಿ ಸೂರ್ಯನಿಂದ ಕಿರಣರೂಪ ವೀರ್ಯದ ಮೂಲಕ ದಿವಸರೂಪನಾದ 'ಪುತ್ರ'ನು ಉತ್ಪನ್ನನಾಗಿದ್ದಾನೆ.

ಅಂದರೆ, ಉಷೆಯ ಸಮ್ಮುಖದಲ್ಲಿ ಮೊದಲು ಸೂರ್ಯನ ಯಾವ ಕಿರಣವು ಬೀಳುತ್ತದೋ, ಅದು ವೀರ್ಯಸ್ಥಾಪನೆಗೆ ಸಮಾನವಾಗಿರುತ್ತದೆ. ಅವರಿಬ್ಬರ ಸಮಾಗಮದಿಂದ 'ಪುತ್ರ', ಎಂದರೆ ಹಗಲು ಉತ್ಪನ್ನವಾಗುತ್ತದೆ!

ಯಸ್ಮಿನ್ ಭೂಪ್ರದೇಶೇ ಪ್ರಾತಃ ಪಂಚ-ಘಟಿಕಾಯಾಂ ರಾತ್ರೌ ಸ್ಥಿತಾಯಾಂ ಕಿಂಚಿತ್ ಸೂರ್ಯಪ್ರಕಾಶೇನ ರಕ್ತತಾ ಭವತಿ, ತಸ್ಯೋಷಾ ಇತಿ ಸಂಜ್ಞಾ.

ಯಾವ ಭೂಪ್ರದೇಶದಲ್ಲಿ ಪ್ರಾತಃಕಾಲ, ರಾತ್ರಿಯ ಐದು ಗಳಿಗ ಉಳಿದಿರುವಾಗ, ಸೂರ್ಯಪ್ರಕಾಶದಿಂದ ಸ್ವಲ್ಪ ಕೆಂಪು ವರ್ಣತ್ವವು ಉಂಟಾಗುತ್ತದೋ, ಅದಕ್ಕೆ 'ಉಷಾ', ಎಂಬ ಹೆಸರಿರುತ್ತದೆ.

ಅಂದರೆ, ರಾತ್ರಿಯ ಐದು ಗಳಿಗೆ ಉಳಿದಿರುವಾಗ, ಪೂರ್ವದಿಕ್ಕಿನಲ್ಲಿ ಯಾವ ಕೆಂಪುವರ್ಣವು ಕಾಣಬರುತ್ತದೋ, ಅದು 'ಉಷಾ', [ಎನಿಸುತ್ತದೆ]. ಅದು, ಸೂರ್ಯನ ಕಿರಣದಿಂದ ಉತ್ಪನ್ನವಾಗುವುದರ ಕಾರಣ, ಅವನ ಕನ್ಯೆ, ಎಂದು ಕರೆಯಲ್ಪಡುತ್ತದೆ.

ತಯೋಃ ಪಿತಾದುಹಿತ್ರೋಃ ಸಮಾಗಮಾದ್ ಉತ್ಕಟದೀಪ್ತಿಃ ಪ್ರಕಾಶಾಖ್ಯ ಆದಿತ್ಯಪುತ್ರೋ ಜಾತಃ.

ಆ 'ತಂದೆ-ಮಗಳ' ಸಮಾಗಮದಿಂದ, ಉತ್ಕಟ ದೀಪ್ತಿಯು ಉಂಟಾಗಿ, 'ಪ್ರಕಾಶ', ಎಂದು ಕರೆಯಲ್ಪಡುವ 'ಆದಿತ್ಯ', ಎಂಬ 'ಪುತ್ರ'ನು ಉತ್ಪನ್ನನಾಗುತ್ತಾನೆ.

ಯಥಾ ಮಾತಾಪಿತೃಭ್ಯಾಂ ಸಂತಾನೋತ್ಪತ್ತಿರ್ಭವತಿ, ತಥೈವಾತ್ರಾಪಿ ಬೋಧ್ಯಮ್ ॥೧, ೨॥

ಹೇಗೆ, ತಾಯಿ-ತಂದೆಗಳಿಂದ ಸಂತಾನೋತ್ಪತ್ತಿ ಉಂಟಾಗುತ್ತದೋ, ಹಾಗೆಯೇ ಇಲ್ಲೂ ಕೂಡ, ಎಂದು ತಿಳಿಯಬೇಕು! [೧,೨]

ಮತ್ತು ನಿರುಕ್ತದಲ್ಲೂ ಕೂಡ, ರೂಪಕಾಲಂಕಾರದ ಕಥೆಯು ಬರೆಯಲ್ಪಟ್ಟಿದೆ. ಹೇಗೆಂದರೆ_

"ತತ್ರ ಪಿತಾ ದುಹಿತುರ್ಗರ್ಭಂ ದಧಾತಿ, ಪರ್ಜನ್ಯಃ ಪೃಥಿವ್ಯಾಃ ॥೩॥"

[ನಿರುಕ್ತೇ ಅ. ೪, ಖಂ. ೧೧]

[ಅರ್ಥ:_ "ಅಲ್ಲಿ ಪಿತನು ದುಹಿತೃವಿನ ಗರ್ಭವನ್ನು ಧರಿಸುತ್ತಾನೆ; ಎಂದರೆ, ಪೃಥಿವಿಯದನ್ನು ಮೇಘವು [ಧರಿಸುತ್ತದೆ.]"

(ನಿರುಕ್ತ: ೪. ೧೧)]

ಭಾಷ್ಯಮ್_

ಏವಮೇವ ಪರ್ಜನ್ಯಪೃಥಿವ್ಯೋಃ ಪಿತಾ-ದುಹಿತೃವತ್.

ಭಾಷ್ಯ_

ಇದೇ ರೀತಿಯಾಗಿಯೇ, 'ತಂದೆ-ಮಗಳಂತೆ', ಮೇಘ-ಪೃಥಿವಿಯೂ ಇವೆ.

ಕುತಃ?

ಏಕೆಂದರೆ_

ಪರ್ಜನ್ಯಾದದ್ಭ್ಯಃ ಪೃಥಿವ್ಯಾ ಉತ್ಪತ್ತೇಃ.

ಮೇಘದಿಂದ, ಎಂದರೆ ನೀರಿನಿಂದ* ಪೃಥಿವಿಯ ಉತ್ಪತ್ತಿಯಾಗಿದೆ.

ಅತಃ ಪೃಥಿವೀ ತಸ್ಯ ದುಹಿತೃವದಸ್ತಿ.

ಆದುದರಿಂದ, ಪೃಥಿವಿಯು ಅದರ 'ಮಗಳಂತೆ' ಇರುತ್ತದೆ.

ಅಂದರೆ, 'ತಂದೆಗೆ' ಸಮಾನವಾಗಿ **ಪರ್ಜನ್ಯ**, ಎಂದರೆ ಜಲರೂಪವಾದ ಮೇಘ ಇದೆ. ಅದಕ್ಕೆ ಪೃಥಿವೀರೂಪವಾದ '**ದುಹಿತಾ**', ಎಂದರೆ '**ಕನ್ಯೆ**' ಇದ್ದಾಳೆ. ಏಕೆಂದರೆ, ಪೃಥಿವಿಯ ಉತ್ಪತ್ತಿಯು ಜಲದಿಂದಾಗಿದೆ.

ಸ ಪರ್ಜನ್ಯೋ ವೃಷ್ಟಿದ್ವಾರಾ ತಸ್ಯಾಂ ವೀರ್ಯ-ವಜ್ಜಲಪ್ರಕ್ಷೇಪಣೇನ ಗರ್ಭಂ ದಧಾತಿ.

ಆ ಮೇಘವು ಮಳೆಯ ಮೂಲಕ ಅವಳಲ್ಲಿ** ವೀರ್ಯದಂತೆ ಜಲಪ್ರಕ್ಷೇಪಣೆ ಮಾಡುವುದರಿಂದ, ಗರ್ಭವನ್ನು ಧಾರಣ ಮಾಡಿಸುತ್ತದೆ.

ತಸ್ಮಾದ್ ಗರ್ಭಾದೋಷಧ್ಯಾದಯೋಽಪತ್ಯಾನಿ ಜಾಯಂತೇ.

ಆ ಗರ್ಭದಿಂದ, ಓಷಧಿ ಮೊದಲಾದ ಸಂತಾನಗಳು ಹುಟ್ಟುತ್ತವೆ.

ಅಂದರೆ, ಯಾವಾಗ ಮೇಘವು ಆ '**ಕನ್ಯೆ**'ಯಲ್ಲಿ ವೃಷ್ಟಿಯ ಮೂಲಕ ಜಲರೂಪದ ವೀರ್ಯವನ್ನು ಧಾರಣ ಮಾಡಿಸುತ್ತದೋ, ಆಗ ಅದರಿಂದ ಗರ್ಭವು ನಿಂತು, ಓಷಧಿ ಮೊದಲಾದ ಅನೇಕ '**ಪುತ್ರರು**' ಉತ್ಪನ್ನರಾಗುತ್ತಾರೆ.

ಅಯಮಪಿ ರೂಪಕಾಲಂಕಾರಃ ॥ ೩ ॥

ಇದೂ ಕೂಡ, ರೂಪಕಾಲಂಕಾರವಾಗಿದೆ! [೩]

ಈ ರೂಪಕಾಲಂಕಾರಕ್ಕೆ ವೇದದಲ್ಲಿ ಮೂಲ

ಅತ್ರ ವೇದಪ್ರಮಾಣಮ್_

ಈ ವಿಷಯದಲ್ಲಿ ವೇದದ ಪ್ರಮಾಣವೇನೆಂದರೆ_

ಅಂದರೆ, ಈ ಕಥೆಯ ಮೂಲವು ಋಗ್ವೇದದಲ್ಲಿ ಯಾವ ರೀತಿಯಲ್ಲಿದೆಯೆಂದರೆ_

---

* 'ಆಪಃ'ದಿಂದ, ಎಂಬುದು ಸರಿಯಾದ ಅರ್ಥ _ಅನು.

** ಎಂದರೆ, ಪೃಥಿವಿಯಲ್ಲಿ _ಅನು.

[ಋಷಿಃ_ ದೀರ್ಘತಮಾಃ ; ದೇವತಾ_ ವಿಶ್ವೇದೇವಾಃ ; ಛಂದಃ_ ನಿಚೃತ್ ತ್ರಿಷ್ಟುಪ್ ; ಸ್ವರಃ_ ಧೈವತಃ]

ದ್ಯೌರ್ಮೇ ಪಿತಾ ಜನಿತಾ ನಾಭಿರತ್ರ
ಬಂಧುರ್ಮೇ ಮಾತಾ ಪೃಥಿವೀ ಮಹೀಯಮ್ ।
ಉತ್ತಾನಯೋಶ್ಚಮ್ವೋ೩ರ್ಯೋನಿರಂತ-
ರತ್ರಾ ಪಿತಾ ದುಹಿತುರ್ಗರ್ಭಮಾಧಾತ್ ॥೧॥

[ಋಗ್ವೇದೇ ಮಂ. ೧, ಸೂ. ೧೬೪, ಮಂ. ೩೩]

[ಅರ್ಥ:_ "ಇಲ್ಲಿ ನನ್ನ ಜನಕನಾದ ಪಿತನು 'ದ್ಯೌ' ಆಗಿದ್ದಾನೆ. ನಾಭಿಯು ಬಂಧು ಆಗಿದೆ. ನನ್ನ ತಾಯಿಯು ಈ ದೊಡ್ಡ ಪೃಥಿವೀ ಆಗಿದೆ. ಎತ್ತಿ ನಿಲ್ಲಿಸಲ್ಪಟ್ಟಿರುವ ಈ ಎರಡು ಸೇನೆಗಳ ಮಧ್ಯೆ ಮನೆ ಇದೆ. ಇಲ್ಲಿ ಪಿತನು ದುಹಿತೃವಿಗೆ ಗರ್ಭವನ್ನು ಧಾರಣ ಮಾಡಿಸುತ್ತಾನೆ."

(ಋಗ್ವೇದಃ ೧. ೧೬೪. ೩೩)]

ಭಾಷ್ಯಮ್_

(ದ್ಯೌರ್ಮೇ ಪಿತಾ.) ಪ್ರಕಾಶೋ ಮಮ ಪಿತಾ ಪಾಲಯಿತಾಸ್ತಿ;

(ಜನಿತಾ) ಸರ್ವವ್ಯವಹಾರಾಣಾಮುತ್ಪಾದಕಃ.

[(ಮಾತಾ.)] ತತ್ರೇಯಂ ಪೃಥಿವೀ ಮಾನಕರ್ತ್ರೀ.

[(ನಾಭಿರತ್ರ ಬಂಧುಃ.)] ಅತ್ರ ದ್ವಯೋಃ ಸಂಬಂಧತ್ವಾತ್_

ಭಾಷ್ಯ_

(ದ್ಯೌರ್ಮೇ ಪಿತಾ) ಪ್ರಕಾಶವು ನನ್ನ 'ಪಿತಾ', ಎಂದರೆ ಪಾಲನೆ ಮಾಡುವುದಾಗಿದೆ.

ಅಂದರೆ, 'ದ್ಯೌ', ಎಂದರೆ ಸೂರ್ಯನ ಪ್ರಕಾಶವು ಎಲ್ಲಾ ಸುಖಗಳ ಕಾರಣವಾದುದರಿಂದ, ನನ್ನ 'ತಂದೆ'ಗೆ ಸಮಾನವಾಗಿದೆ!

(ಜನಿತಾ) [ಮತ್ತು ಅದು] ಎಲ್ಲಾ ವ್ಯವಹಾರಗಳ ಉತ್ಪಾದಕವೂ [ಆಗಿದೆ.]

(ಮಾತಾ ಪೃಥಿವೀ) ಅಲ್ಲಿ ಪೃಥಿವಿಯು 'ಮಾತಾ', ಎಂದರೆ ಮಾನವನ್ನು ಮಾಡುವವಳಾಗಿದ್ದಾಳೆ.

ಅಂದರೆ, ಪೃಥಿವಿಯು ದೊಡ್ಡ ಸ್ಥಾನವನ್ನುಳ್ಳದ್ದೂ, ಹಾಗೂ ಗೌರವದ ಹೇತುವೂ ಆದುದರಿಂದ, ನನ್ನ 'ತಾಯಿ'ಗೆ ಸಮಾನವಾಗಿದೆ.

(ನಾಭಿರತ್ರ ಬಂಧುಃ) ಇಲ್ಲಿ ಇಬ್ಬರ ಸಂಬಂಧ ವಿರುವುದರಿಂದ_

[(ಉತ್ತಾನ.)] ದ್ವಯೋಶ್ಚಮ್ವೋಃ ಪರ್ಜನ್ಯ-ಪೃಥಿವ್ಯೋಃ ;

(ಉತ್ತಾನಯೋ.) ಮೇಘ ಮತ್ತು ಪೃಥಿವಿ, ಎಂಬ ಎರಡೂ **'ಚಮೂ'**ಗಳ ;

ಸೇನಾವದುತ್ತಾನಯೋರೂರ್ಧ್ವಂ ತಾನಯೋ-ರುತ್ಥಾನಸ್ಥಿತಯೋರಲಂಕಾರಃ .

ಎಂದರೆ, ಸೇನೆಯಂತೆ ಮೇಲೆ ಎದ್ದಿರುವುವುಗಳ ; ಎಂದರೆ ಮೇಲಿನ ಸ್ಥಾನದಲ್ಲಿ ಇರುವ ಮೇಘ ಮತ್ತು [ಕೆಳಗಿರುವ] ಪೃಥಿವಿಯ ಅಲಂಕಾರ [ಇಲ್ಲಿದೆ.]

ಅಂದರೆ, ಹೇಗೆ ಮೇಲೊಂದು-ಕೆಳಗೊಂದು ವಸ್ತ್ರದ ಎರಡು ಪರದೆಗಳನ್ನು ಎಳೆದು ಕಟ್ಟುತ್ತಾರೋ ;

ಅಥವಾ ಎದುರು-ಬದುರಾಗಿ ಎರಡು ಸೇನೆ ಇರುತ್ತವೋ ;

ಇದೇ ರೀತಿಯಲ್ಲಿ, ಸೂರ್ಯನು ಮತ್ತು ಪೃಥಿವಿಯು ; ಎಂದರೆ ಮೇಲಿನ ಪರದೆಗೆ ಸಮಾನವಾಗಿ ಸೂರ್ಯನು ಹಾಗೂ ಕೆಳಗಿನ ಹಾಸಿಗೆಗೆ ಸಮಾನವಾಗಿ ಪೃಥಿವಿಯು ಇರುತ್ತವೆ.

ಮತ್ತು ಹೇಗೆ ಎರಡು ಸೇನೆಗಳು ಎದುರು-ಬದುರಾಗಿ ನಿಂತಿರುತ್ತವೋ, ಹಾಗೆ ಎಲ್ಲಾ ಲೋಕಗಳ ಪರಸ್ಪರ ಸಂಬಂಧವು ಇರುತ್ತದೆ.

ಅತ್ರ ಪಿತಾ ಪರ್ಜನ್ಯೋ ದುಹಿತುಃ ಪೃಥಿವ್ಯಾ ಗರ್ಭಂ ಜಲಸಮೂಹಮಾಧಾತ್, ಆ ಸಮಂತಾದ್ ಧಾರಯತೀತಿ ರೂಪಕಾಲಂಕಾರೋ ಮಂತವ್ಯಃ ॥ ೧ ॥

ಇಲ್ಲಿ, **'ಪಿತ'***ನಾದ ಮೇಘವು 'ಮಗಳಾದ' ಪೃಥಿವಿಯ **'ಗರ್ಭ'**, ಎಂದರೆ ಜಲಸಮೂಹವನ್ನು ಎಲ್ಲೆಡೆಯಿಂದ ಧರಿಸಿಕೊಂಡಿದೆ, ಎಂಬ ರೂಪಕಾಲಂಕಾರವನ್ನು ತಿಳಿಯಬೇಕು!

---

* **'ಪಾ' ರಕ್ಷಣೇ** ಧಾತುವಿಗೆ **'ಡತಿ'**ಪ್ರತ್ಯಯವನ್ನು ಹೊಂದಿಸಿದಾಗ, **'ಪತಿ'** ಶಬ್ದವೂ, **'ತೃಚ್'**ಪ್ರತ್ಯಯವನ್ನು ಹೊಂದಿಸಿದಾಗ, **'ಪಿತೃ'**ಶಬ್ದವೂ ನಿಷ್ಪನ್ನವಾಗುತ್ತವೆ. ಎಂದರೆ, **ರಕ್ಷಣೆ ಮಾಡುವುದು ಪತಿಯ, ಹಾಗೂ ಪಿತನ ಕೆಲಸವಾಗಿರುತ್ತದೆ.**

ತನ್ನ ಸಂತಾನಗಳ ಗರ್ಭವನ್ನು ಪಿತನು ಮೊದಲು ತನ್ನ ವೀರ್ಯದಲ್ಲಿ ಧರಿಸಿ, ನಂತರ, **ಪತಿರೂಪದಲ್ಲಿದ್ದು**, ಅದನ್ನು ತನ್ನ ಪತ್ನಿಯ ಗರ್ಭಾಶಯದಲ್ಲಿ ಸ್ಥಾನಾಂತರಿಸುತ್ತಾನೆ. ಹೀಗ **'ಪತಿಯ'**, ಹಾಗೂ **'ಪಿತನ'** ರೂಪ-ಲಕ್ಷಣ-ಕರ್ಮಗಳು ಒಂದೇ ಆಗಿರುವುದರಿಂದ, ವೇದದಲ್ಲಿ **ಪತಿ=ಪಿತಾ**, ಎಂಬ ಅರ್ಥವು ದೊರಕುತ್ತದೆ.

ಹೀಗೆಯೇ, **'ದುಹಿತಾ'**, ಎಂದರೆ **'ದೂರೇ ಹಿತಾ'**, ಎಂದರೆ ದೂರದಲ್ಲಿ ಇಟ್ಟಿರುವುದು, ಎಂದು ಅರ್ಥ ಮಾಡಬೇಕು. ಮೇಲಿನ ಮಂತ್ರದಲ್ಲಿ ಪೃಥಿವಿಯು **ಮಾತಾ=ಮಾನಕರ್ತ್ರೀ**ಯಾಗಿಯೂ, ನಂತರ, ಸೂರ್ಯನಿಗೆ ದೂರದಲ್ಲಿರುವುದರಿಂದ, **'ದುಹಿತಾ'** ಕೂಡ, ಆಗಿದೆ. ಲೌಕಿಕವ್ಯವಹಾರದಲ್ಲಿನ ತಂದೆ-ತಾಯಿ-ಮಗಳ ಸಂಬಂಧವು ಇಲ್ಲಿ ಅಲಂಕಾರದ್ಯೋತಕವಾಗಿ ವ್ಯಕ್ತವಾಗಿದೆಯೇ ಹೊರತು, ಉಪದೇಶರೂಪವಾಗಲ್ಲ!

ಅನು.

ಅಂದರೆ, ಇದರಲ್ಲಿ 'ಯೋನಿ', ಎಂದರೆ ಗರ್ಭ-ಸ್ಥಾಪನೆಯ ಸ್ಥಾನದಂತೆ ಪೃಥಿವಿಯೂ, ಮತ್ತು ಗರ್ಭ-ಸ್ಥಾಪನೆ ಮಾಡುವ 'ಪತಿ'ಯಂತೆ ಮೇಘವೂ ಇದೆ. ಅದು* ತನ್ನ ಬಿಂದುರೂಪ ವೀರ್ಯದ ಸ್ಥಾಪನೆಯಿಂದ ಅದಕ್ಕೆ ** ಗರ್ಭಧಾರಣೆ ಮಾಡಿಸುವುದರ ಮೂಲಕ, ಓಷಧಿ ಮೊದಲಾದ ಅನೇಕ ಸಂತಾನಗಳನ್ನು ಉತ್ಪನ್ನ ಮಾಡುತ್ತದೆ. ಇದರಿಂದ, ಎಲ್ಲಾ ಜಗತ್ತಿನ ಪಾಲನೆ ಯಾಗುತ್ತದೆ. [೧]

[ಋಷಿಃ_ ವಿಶ್ವಾಮಿತ್ರಃ ಕುಶಿಕೋ ವಾ ; ದೇವತಾ_ಇಂದ್ರಃ ; ಛಂದಃ_ ವಿರಾಟ್ ಪಂಕ್ತಿಃ ; ಸ್ವರಃ_ ಪಂಚಮಃ]

ಶಾಸದ್ವಹ್ನಿರ್ದುಹಿತುರ್ನಪ್ತ್ಯಂ ಗಾದ್ವಿದ್ವಾ
ಋತಸ್ಯ ದೀಧಿತಿಂ ಸಪರ್ಯನ್ ।
ಪಿತಾ ಯತ್ರ ದುಹಿತುಃ ಸೇಕಮೃಂಜ-
ನ್ತ್ಸಂಶಗ್ಮ್ಯೇನ ಮನಸಾ ದಧನ್ವೇ ॥ ೨ ॥

[ಋಗ್ವೇದೇ ಮಂ. ೩, ಸೂ. ೩೧, ಮಂ. ೧]

[ಅರ್ಥ:_ ಎಲ್ಲಿ ವಹನಕರ್ತೃವಾದ ತಂದೆಯು ಕನ್ಯೆಯ ಸೇಚನವನ್ನು ಸಿದ್ಧಗೊಳಿಸುತ್ತಾ, [ಜವಾಬ್ದಾರಿಯನ್ನು] ಪೂರೈಸುತ್ತಾನೋ, [ಅಲ್ಲಿ] ವಿದ್ವಾಂಸನು ಸತ್ಯದ ಧಾರಕನನ್ನು ಸೇವಿಸುತ್ತಾ, ಕನ್ಯೆಯ ಮೊಮ್ಮಕ್ಕಳಿಗೆ ಶಿಕ್ಷಣವನ್ನು ಕೊಡಬೇಕು! ಇದರಿಂದ [ಪಿತನು] ಸುಖಪೂರ್ವಕವಾಗಿ ಮಾನಸಿಕ ಸಂತೋಷವನ್ನು ಹೊಂದುತ್ತಾನೆ."

(ಋಗ್ವೇದ: ೩. ೩೧. ೧)]

ಭಾಷ್ಯಮ್_

ಅಯಮಪಿ ಮಂತ್ರೋಽಸ್ಯೈವಾಲಂಕಾರಸ್ಯ ವಿಧಾಯಕೋಽಸ್ತಿ.

ಭಾಷ್ಯ_

ಈ ಮಂತ್ರವೂ ಕೂಡ, ಇದೇ ಅಲಂಕಾರದ ನಿರೂಪಣೆ ಮಾಡುವಂತಹುದೇ ಆಗಿದೆ.

ಅಂದರೆ, ಎಲ್ಲರಿಗೂ 'ವಹನ', ಎಂದರೆ ಪ್ರಾಪ್ತಿ ಗೊಳಿಸುವಂತಹ ಪರಮೇಶ್ವರನು ಮನುಷ್ಯರ ಜ್ಞಾನ ವೃದ್ಧಿಗಾಗಿ ರೂಪಕಾಲಂಕಾರದ ಕಥೆಗಳ [ಮೂಲಕ] ಉಪದೇಶ ಮಾಡಿದ್ದಾನೆ!

* ಮೇಘವು _ಅನು.

** ಪೃಥಿವಿಗೆ _ಅನು.

(ಶಾಸದ್ವಹ್ನಿ.) 'ವಹ್ನಿ'ಶಬ್ದೇನ ಸೂರ್ಯೋ ದುಹಿತಾಽಸ್ಯ ಪೂರ್ವೋಕ್ತೈವ.

(ಶಾಸದ್ವಹ್ನಿ.) 'ವಹ್ನಿ'ಶಬ್ದದಿಂದ 'ಸೂರ್ಯ', ಎಂದೂ, '**ದುಹಿತಾ**'[ಶಬ್ದದಿಂದ] ಇವನ ಮಗಳು ಎಂದರೆ, ಮೊದಲು ಹೇಳಿದ ['**ಉಷಾ**'], ಎಂದೂ [ತಿಳಿಯಬೇಕು!]

ಸ ಪಿತಾ ಸ್ವಸ್ಯಾ ಉಷಸೋ ದುಹಿತುಃ ಸೇಕಂ ಕಿರಣಾಖ್ಯವೀರ್ಯಸ್ಥಾಪನೇನ ಗರ್ಭಾಧಾನಂ ಕೃತ್ವಾ ದಿವಸಪುತ್ರಮಜನಯದಿತಿ ॥ ೨ ॥

ಆ (**ಪಿತಾ**) 'ತಂದೆ'ಯು ತನ್ನ '**ಉಷಾ**', ಎಂಬ (**ದುಹಿತುಃ**) 'ಮಗಳಿಗೆ' (**ಸೇಕಮ್**) ಕಿರಣರೂಪದ '**ವೀರ್ಯಸ್ಥಾಪನೆ**' ಮಾಡುವುದರ ಮೂಲಕ 'ಗರ್ಭಾಧಾನ' ವನ್ನು ಮಾಡಿ, ದಿವಸ[ರೂಪದ] '**ಪುತ್ರ**'ನನ್ನು ಉತ್ಪನ್ನ ಮಾಡುತ್ತಾನೆ.

ಅಂದರೆ, ಯಾವ ಸುಖರೂಪವ್ಯವಹಾರದಲ್ಲಿ ಸ್ಥಿತನಾದ 'ತಂದೆ'ಯು 'ಮಗಳ'ಲ್ಲಿ 'ವೀರ್ಯಸ್ಥಾಪನೆ' ಮಾಡುತ್ತಾನೋ, ಅದನ್ನು ಹೇಗೆ ಮೊದಲೇ ಬರೆದಿದ್ದೇವೋ, ಹಾಗೆಯೇ ಇಲ್ಲೂ ಕೂಡ, ತಿಳಿದು ಕೊಳ್ಳಬೇಕು! [೨]

ಮಿಥ್ಯಾಕಥೆಗಳನ್ನು ತಿರಸ್ಕರಿಸಬೇಕು!

ಅಸ್ಯಾಂ ಪರಮೋತ್ತಮಾಯಾಂ ರೂಪಕಾಲಂಕಾರ-ವಿಧಾಯಿನ್ಯಾಂ ;

ಈ ಪರಮ ಉತ್ಕೃಷ್ಟವೂ, ರೂಪಕಾಲಂಕಾರದ ವಿಧಾಯಕವೂ ;

ನಿರುಕ್ತಬ್ರಾಹ್ಮಣೇಷು ವ್ಯಾಖ್ಯಾತಾಯಾಂ ಕಥಾಯಾಂ ಸತ್ಯಾಮಪಿ ;

ನಿರುಕ್ತ-ಬ್ರಾಹ್ಮಣಗಳಲ್ಲಿ ವ್ಯಾಖ್ಯಾನ ಮಾಡಲ್ಪಟ್ಟದ್ದೂ ಆದ ಕಥೆಯು ಇರುವಾಗಲೂ ಕೂಡ ;

ಬ್ರಹ್ಮವೈವರ್ತಾದಿಷು ಭ್ರಾಂತ್ಯಾಯಾಃ ಕಥಾ ಅನ್ಯಥಾ ನಿರೂಪಿತಾಸ್ತಾ ನೈವ ಕದಾಚಿತ್ ಕೇನಾಪಿ ಸತ್ಯಾ ಮಂತವ್ಯಾ ಇತಿ.

ಬ್ರಹ್ಮವೈವರ್ತ[ಪುರಾಣ] ಮೊದಲಾದುವುಗಳಲ್ಲಿ ಭ್ರಾಂತಿಯಿಂದ ಯಾವ ಕಥೆಗಳು ಬೇರೆ ರೀತಿಯಲ್ಲಿ ನಿರೂಪಿತವಾಗಿವೆಯೋ, ಅವು ಎಂದಿಗೂ ಕೂಡ, ಯಾರಿಂದಲೂ, ಸತ್ಯ, ಎಂದು ಅಂಗೀಕರಿಸಲ್ಪಡಲೇ ಬಾರದು!

ಅಂದರೆ, ಯಾವ ಈ ರೂಪಕಾಲಂಕಾರದ ಕಥೆಯು ಒಳ್ಳೆಯ ರೀತಿಯಲ್ಲಿ ವೇದ, ಬ್ರಾಹ್ಮಣ, ಮತ್ತು ನಿರುಕ್ತವೇ ಮೊದಲಾದ ಸತ್ಯಗ್ರಂಥಗಳಲ್ಲಿ ಪ್ರಕಟಿತ ವಾಗಿದೆಯೋ, ಅದನ್ನು **ಬ್ರಹ್ಮವೈವರ್ತ, ಶ್ರೀಮದ್ಭಾಗವತ** ಮೊದಲಾದ ಮಿಥ್ಯಾಗ್ರಂಥಗಳಲ್ಲಿ ಭ್ರಾಂತಿಯಿಂದ* ಕೆಡಿಸಿ ಬರೆಯಲ್ಪಟ್ಟಿದೆ.

---

* ಮಿಥ್ಯಾಗ್ರಂಥಗಳಲ್ಲಿನ ಮಿಥ್ಯಾಕಥೆಗಳು ಭ್ರಾಂತಿಯಿಂದ ರಚಿತವಾದುವಲ್ಲ! ಅವು ದುರುದ್ದೇಶದಿಂದ, ದುಷ್ಟಮನೋ-ರಂಜನೆಗಾಗಿ ರಚಿತವಾಗಿವೆ, ಎಂದು ಅವನ್ನು ಓದುವ ನಿಷ್ಪಕ್ಷರಾದ ವಿವೇಕಿಗಳೆಲ್ಲರಿಗೂ ತಿಳಿಯಬರುತ್ತದೆ. _ಅನು.

ಮತ್ತು ಇಂತಿಂತಹ ಬೇರೆ ಕಥೆಗಳೂ ಕೂಡ, ಬರೆಯಲ್ಪಟ್ಟಿವೆ!

ಅವೆಲ್ಲವುಗಳನ್ನೂ ವಿದ್ವಾಂಸರು ಮನಸ್ಸಿನಿಂದ ತ್ಯಜಿಸಿ, ಸತ್ಯಕಥೆಗಳನ್ನು ಎಂದಿಗೂ ಮರೆಯಬಾರದು!

[೨] ಇಂದ್ರ-ಅಹಲ್ಯೆಯ ಮಿಥ್ಯಾಕಥೆ!

ತಥಾ ಚ_

ಮತ್ತು_

ಅಂದರೆ, ಈಗ ಎರಡನೆಯ ಕಥೆಯು ಇಂದ್ರ ಮತ್ತು ಅಹಲ್ಯೆಯದಾಗಿದೆ. ಇದನ್ನು ಮೂಢಜನರು ಅನೇಕ ರೀತಿಯಲ್ಲಿ ಕೆಡಿಸಿ, ಬರೆದಿದ್ದಾರೆ. ಅವರು ಇದನ್ನು ಹೇಗೆ ಅಂಗೀಕರಿಸಿದ್ದಾರೆಂದರೆ_

"ಕಶ್ಚಿದ್ ದೇಹಧಾರೀಂದ್ರೋ ದೇವರಾಜ ಆಸೀತ್.

" 'ಇಂದ್ರ', ಎಂಬ [ಹೆಸರಿನಲ್ಲಿ] ದೇಹಧಾರಿಯಾದ ಯಾವನೋ [ಒಬ್ಬನು] ದೇವತೆಗಳ ರಾಜನಾಗಿದ್ದನು!

"ಅಂದರೆ, ದೇವತೆಗಳ ರಾಜನಾದ ಇಂದ್ರನು ದೇವಲೋಕದಲ್ಲಿ ದೇಹಧಾರಿಯಾದ ದೇವನಾಗಿದ್ದನು.

"ಸ ಗೋತಮಸ್ತ್ರಿಯಾಂ ಜಾರಕರ್ಮ ಕೃತವಾನ್.

"ಅವನು ಗೋತಮನ ಪತ್ನಿಯಲ್ಲಿ ಜಾರ-ಕ್ರಿಯೆಯನ್ನು ಮಾಡಿದನು!

"ಅಂದರೆ, ಅವನು ಗೋತಮಋಷಿಯ ಪತ್ನಿಯಾದ ಅಹಲ್ಯೆಯೊಡನೆ ಜಾರಕರ್ಮವನ್ನು ಮಾಡುತ್ತಿದ್ದನು.

"ತಸ್ಮೈ ಗೋತಮೇನ ಶಾಪೋ ದತ್ತಸ್ತ್ವಂ ಸಹಸ್ರಭಗೋ ಭವೇತಿ.

"ಅವನಿಗೆ ಗೋತಮನಿಂದ_ 'ನೀನು ಸಹಸ್ರ-ಭಗನಾಗು', ಎಂಬ ಶಾಪವು ಕೊಡಲ್ಪಟ್ಟಿತು.

"ತಸ್ಯೈ ಅಹಲ್ಯಾಯೈ ಶಾಪೋ ದತ್ತಸ್ತ್ವಂ ಪಾಷಾಣಶಿಲಾ ಭವೇತಿ.

"[ಮತ್ತು] ಆ ಅಹಲ್ಯೆಗೆ_ 'ನೀನು ಕಲ್ಲು ಬಂಡೆಯಾಗು', ಎಂದು ಶಾಪವು ಕೊಡಲ್ಪಟ್ಟಿತು.

"ಅಂದರೆ, ಒಂದು ದಿನ, ಯಾವಾಗ ಗೋತಮನು ಅವರಿಬ್ಬರನ್ನೂ ನೋಡಿಬಿಟ್ಟನೋ, ಆಗ, ಈ ರೀತಿಯಲ್ಲಿ ಶಾಪವನ್ನು ಕೊಟ್ಟನು_

"'ಎಲೈ ಇಂದ್ರ! ನೀನು ಸಾವಿರ ಭಗವನ್ನು ಉಳ್ಳವನಾಗು!'

"ಮತ್ತು ಅಹಲ್ಯೆಗೆ_'ನೀನು ಪಾಷಾಣರೂಪ ವಾಗಿಬಿಡು!", ಎಂದು ಶಾಪವನ್ನು ಕೊಟ್ಟನು.

"ತಸ್ಯಾ ರಾಮಪಾದರಜಃಸ್ಪರ್ಶೇನ ಶಾಪಸ್ಯ ಮೋಕ್ಷಣಂ ಜಾತಮಿತಿ!"

"[ನಂತರ,] ಅವಳಿಗೆ ರಾಮನ ಪಾದದ ಧೂಳಿಯ ಸ್ಪರ್ಶದಿಂದ, ಶಾಪದ ವಿಮೋಚನೆ ಯಾಯಿತು!

"ಅಂದರೆ, ಯಾವಾಗ ಅವರಿಬ್ಬರೂ_ 'ನಮ್ಮ ಶಾಪದ ವಿಮೋಚನೆಯು ಹೇಗೆ ಅಥವಾ ಯಾವಾಗ ಆಗುವುದು?', ಎಂದು ಗೋತಮನನ್ನು ಪ್ರಾರ್ಥಿಸಿ ದರೋ, ಆಗ [ಅವನು] ಇಂದ್ರನಿಗಂತೂ_

"'ನಿನ್ನ ಸಾವಿರ ಭಗದ ಸ್ಥಾನದಲ್ಲಿ ಸಾವಿರ ಕಣ್ಣುಗಳಾಗಲಿ!', ಎಂದು ಹೇಳಿದನು.

"ಮತ್ತು ಅಹಲ್ಯೆಗೆ_'ಯಾವ ಸಮಯದಲ್ಲಿ ರಾಮಚಂದ್ರರು ಅವತಾರ ಎತ್ತಿ, ನಿನಗೆ ತಮ್ಮ ಪಾದವನ್ನು ತಗುಲಿಸುವರೋ, ಆ ಸಮಯ ನೀನು ಮತ್ತೆ ನಿನ್ನ ಸ್ವರೂಪಕ್ಕೆ ಬಂದುಬಿಡುವೆ!', ಎಂದು ವಚನವಿತ್ತನು!"

ತತ್ರೇದೃಶ್ಯೋ ಮಿಥ್ಯೈವ ಕಥಾಃ ಸಂತಿ.

ಅಲ್ಲಿ ಈ ತರಹದ ಮಿಥ್ಯೆಯೇ ಆದ ಕಥೆಗಳಿವೆ.

ಅಂದರೆ, ಈ ರೀತಿಯಾಗಿ ಪುರಾಣಗಳಲ್ಲಿ* ಈ ಕಥೆಯು ಕೆಡಿಸಲ್ಪಟ್ಟು, ಬರೆಯಲಾಗಿದೆ. ಸತ್ಯಗ್ರಂಥಗಳಲ್ಲಿ ಹಾಗಿಲ್ಲ!

ಕುತಃ?

ಏಕೆಂದರೆ_

ಅಸಾಮಪ್ಯಲಂಕಾರಾರ್ಥತ್ವಾತ್.

ಇವುಗಳಲ್ಲಿ ಕೂಡ, ಅಲಂಕಾರದ ಪ್ರಯೋಜನ ಏದೆ.

ತದ್ಯಥಾ_

ಅದು ಹೇಗೆಂದರೆ_

ಅಂದರೆ, ಇವುಗಳಲ್ಲಿ ಯಾವ ರೀತಿ ಇದೆ ಯೆಂದರೆ_

---

* ವಾಲ್ಮೀಕಿರಾಮಾಯಣದಲ್ಲಿ ಅಹಲ್ಯೆಗೆ ಕಲ್ಲಾಗುವ ಶಾಪದ ಅಥವಾ ರಾಮನ ಪಾದಸ್ಪರ್ಶದಿಂದ ಆ ಕಲ್ಲು ಪುನಃ ಅಹಲ್ಯೆಯಾಗುವ ಶಾಪವಿಮೋಚನೆಯ ಪ್ರಸಂಗದ ಉಲ್ಲೇಖವಿಲ್ಲ! ಆದರೆ, ಪದ್ಮಪುರಾಣದಲ್ಲಿ ಈ ತರಹದ ಪ್ರಸಂಗದ ಉಲ್ಲೇಖ ಇದೆ _ಅನು.

ಈ ಮಿಥ್ಯಾಕಥೆಗೆ ಬ್ರಾಹ್ಮಣ-ನಿರುಕ್ತಗ್ರಂಥಗಳಲ್ಲಿನ ಸತ್ಯದೃಷ್ಟಾಂತ-ಮೂಲ*

"ಇಂದ್ರಾಗಚ್ಛೇತಿ । ಗೌರಾವಸ್ಕಂದಿನ್ನಹಲ್ಯಾಯೈ ಜಾರೇತಿ ।
ತದ್ಯಾನ್ಯೇವಾಸ್ಯ ಚರಣಾನಿ ತೈರೇವೈನಮೇತತ್
ಪ್ರಮುಮೋದಯಿಷತಿ ॥ ೧ ॥"

[ಶತಪಥಬ್ರಾಹ್ಮಣೇ ಕಾಂ. ೩, ಅ. ೩, ಬ್ರಾ. ೪, ಕಂ. ೧೮]

[ಅರ್ಥ:_ "ಇಂದ್ರನೇ! ಬಾ! ಗೋ ಇದ್ದಿತು ; ಬಲಾತ್ಕಾರಿಯು ಅಹಲ್ಯೆಗೆ ಜಾರನಾಗಿದ್ದನು. ಇವನದೇ ಯಾವ ಪಾದಗಳಿವೆಯೋ, ಅವುಗಳಿಂದಲೇ ಇದನ್ನು, ಇದು ಪ್ರಸನ್ನಗೊಳಿಸುವುದು."

(ಶತಪಥಬ್ರಾಹ್ಮಣ: ೩. ೩. ೪. ೧೮)]

"ರೇತಃ ಸೋಮಃ ॥ ೨ ॥"

[ಶತಪಥಬ್ರಾಹ್ಮಣೇ ಕಾಂ. ೩, ಅ. ೩, ಬ್ರಾ. ೨, ಕಂ. ೧]

[ಅರ್ಥ:_ "ರೇತಸ್ಸು, ಎಂದರೆ ಸೋಮ!"

(ಶತಪಥಬ್ರಾಹ್ಮಣ: ೩. ೩. ೨. ೧)]

"ರಾತ್ರಿರಾದಿತ್ಯಸ್ಯಾದಿತ್ಯೋದಯೇಽಂತರ್ಧೀಯತೇ ॥ ೩ ॥"

[ನಿರುಕ್ತೇ ಅ. ೧೨, ಖಂ. ೧೧]

[ಅರ್ಥ:_ "ರಾತ್ರಿಯು ಆದಿತ್ಯನದಾಗಿದೆ! ಆದಿತ್ಯನ ಉದಯವಾದಾಗ [ರಾತ್ರಿಯು] ಅದೃಶ್ಯವಾಗುತ್ತದೆ."

(ನಿರುಕ್ತ: ೧೨. ೧೧)]

"'[ಸುಷುಮ್ಣಃ] ಸೂರ್ಯರಶ್ಮಿಶ್ಚಂದ್ರಮಾ ಗಂಧರ್ವಃ ।' **
ಇತ್ಯಪಿ ನಿಗಮೋ ಭವತಿ। ಸೋಽಪಿ ಗೌರುಚ್ಯತೇ ॥ ೪ ॥"

[ನಿರುಕ್ತೇ ಅ. ೨, ಖಂ. ೬]

[ಅರ್ಥ:_ "[ಸುಷುಮ್ನವು] ಸೂರ್ಯರಶ್ಮಿಯಾಗಿದೆ! (ಮತ್ತು) ಚಂದ್ರ 'ಗಂಧರ್ವ', [ಎನಿಸುತ್ತದೆ.] ಹೀಗೆ ಕೂಡ, ವೇದಮಂತ್ರ ಇದೆ. ಅದೂ ಕೂಡ, ಗೋವು, ಎಂದು ಹೇಳಲ್ಪಡುತ್ತದೆ."

(ನಿರುಕ್ತ: ೨. ೬)]

** ಯಜುರ್ವೇದೇ ೧೮. ೪೦ _ಅನು.

* ಈ ಮಿಥ್ಯಾಕಥೆಗೆ ವೇದಗಳಲ್ಲಿ ಮೂಲ ಸಿಕ್ಕಿಲ್ಲ _ಅನು.

** ಯಜುರ್ವೇದ (೧೮. ೪೦) _ಅನು.

"'ಜಾರ ಆ ಭಗಮ್ ।'*

"ಜಾರ ಇವ ಭಗಮ್ । ಆದಿತ್ಯೋಽತ್ರ ಜಾರ ಉಚ್ಯತೇ
ರಾತ್ರೇರ್ಜರಯಿತಾ ॥ ೫ ॥"

(ನಿರುಕ್ತೇ ಅ. ೩, ಖಂ. ೧೬)]

[ಅರ್ಥ:_"'ಜಾರ ಆ ಭಗಮ್!' ಎಂದರೆ, ಜಾರನಿಗೆ ಸಮಾನವಾದ ಭಗವನ್ನು, ಇಲ್ಲಿ ಆದಿತ್ಯನು 'ಜಾರ', ಎಂದು ಕರೆಯಲ್ಪಡುತ್ತಾನೆ. [ಅವನು] ರಾತ್ರಿಯನ್ನು ಜೀರ್ಣ ಮಾಡುವವನಾಗಿದ್ದಾನೆ."

(ನಿರುಕ್ತ: ೩. ೧೬)]

"ಏಷ ಏವೇಂದ್ರೋ ಯ ಏಷ ತಪತಿ ॥ ೬ ॥"

[ಶತಪಥಬ್ರಾಹ್ಮಣೇ ಕಾಂ. ೧, ಅ. ೬, ಬ್ರಾ. ೪, ಕಂ. ೧೮]

[ಅರ್ಥ:_" ಯಾವ ಇವನು ತಾಪ ಕೊಡುತ್ತಾನೋ, ಈ ಇವನೇ ಇಂದ್ರ ಆಗಿದ್ದಾನೆ! "

(ಶತಪಥಬ್ರಾಹ್ಮಣ: ೧. ೬. ೪. ೧೮)]

'ಇಂದ್ರ'-'ಗೋತಮ'-'ಅಹಲ್ಯಾ' ಶಬ್ದಗಳ ಸತ್ಯಾರ್ಥ! ಹಗಲು-ರಾತ್ರಿಗಳ ಉತ್ಪತ್ತಿ

ಭಾಷ್ಯಮ್_	ಭಾಷ್ಯ_
ಇಂದ್ರಃ ಸೂರ್ಯೋ ಯ ಏಷ ತಪತಿ, ಭೂಮಿಸ್ಥಾನ್ ಪದಾರ್ಥಾಂಶ್ಚ ಪ್ರಕಾಶಯತಿ.	ಯಾವ ಇವನು ತಾಪವನ್ನು ಕೊಡುತ್ತಾನೋ, ಹಾಗೂ ಭೂಮಿಯ ಮೇಲಿರುವ ವಸ್ತುಗಳನ್ನು ಪ್ರಕಾಶಿಸುತ್ತಾನೋ, ಆ ಸೂರ್ಯನು 'ಇಂದ್ರ'ನಾಗಿದ್ದಾನೆ! ಅಂದರೆ, ಸೂರ್ಯನ ಹೆಸರು 'ಇಂದ್ರ', ಎಂದಿದೆ!
ಅಸ್ಯೇಂದ್ರೇತಿ ನಾಮ ಪರಮೈಶ್ವರ್ಯಪ್ರಾಪ್ತಿ-ಹೇತುತ್ವಾತ್.	ಇವನಿಗೆ 'ಇಂದ್ರ', ಎಂಬ ಹೆಸರು ಉತ್ತಮ ಐಶ್ವರ್ಯದ ಪ್ರಾಪ್ತಿಯ ಹೇತುವಾದುದರಿಂದ, [ಬಂದಿದೆ.]
ಸ ಅಹಲ್ಯಾಯಾ ಜಾರೋಽಸ್ತಿ.	ಅವನು 'ಅಹಲ್ಯೆ'ಯ 'ಜಾರ'ನಾಗಿದ್ದಾನೆ!
ಸಾ ಸೋಮಸ್ಯ ಸ್ತ್ರೀ.	ಅವಳು 'ಚಂದ್ರ'ನಿಗೆ 'ಹೆಂಡತಿ'ಯಾಗಿದ್ದಾಳೆ!
ತಸ್ಯ ಗೋತಮ ಇತಿ ನಾಮ.	ಇವನ ಹೆಸರು 'ಗೋತಮ', ಎಂದಿದೆ. ಅಂದರೆ, ಚಂದ್ರನ ಹೆಸರು 'ಗೋತಮ', ಎಂದಿರುತ್ತದೆ.

* ಋಗ್ವೇದೇ ೧೦. ೧೧. ೬ _ಅನು.

* ಋಗ್ವೇದ (೧೦. ೧೧. ೬) _ಅನು.

'ಗಚ್ಛತೀತಿ ಗೌಃ'; ಅತಿಶಯೇನ ಗೌರಿತಿ 'ಗೋತಮ'ಶ್ಚಂದ್ರಃ.

'**ಹೋಗುತ್ತದೆಯಾದುದರಿಂದ, ಗೋವು!**' ಅತ್ಯಂತವಾಗಿ ಗೋವು ಆದುದರಿಂದ, '**ಗೋತಮ**', ಎಂದರೆ **ಚಂದ್ರ!**

ಅಂದರೆ, ಚಂದ್ರನಿಗೆ '**ಗೋತಮ**', ಎಂಬ ಹೆಸರು ಏಕಿದೆಯೆಂದರೆ, ಅವನು ಅತ್ಯಂತ ವೇಗದಿಂದ ಚಲಿಸುತ್ತಾನೆ!

ರಾತ್ರಿರಹಲ್ಯಾ.

ಅಹಲ್ಯಾ '**ರಾತ್ರಿ**' ಆಗಿದ್ದಾಳೆ!

ಅಂದರೆ, ರಾತ್ರಿಯ ಹೆಸರು **ಅಹಲ್ಯಾ**, ಎಂದಿದೆ.

ಕಸ್ಮಾದ್?

ಏಕೆಂದರೆ_

ಅಹರ್ದಿನಂ ಲೀಯತೇऽಸ್ಯಾಂ ತಸ್ಮಾದ್ರಾತ್ರಿರಹಲ್ಯೋಚ್ಯತೇ.

'**ಅಹಃ**', ಎಂದರೆ ಹಗಲು ಇವಳಲ್ಲಿ ಲೀನವಾಗುತ್ತದೆ. ಆದುದರಿಂದ, ರಾತ್ರಿಯು '**ಅಹಲ್ಯಾ**', ಎಂದು ಕರೆಯಲ್ಪಡುತ್ತದೆ.

ತಯೋಃ ಸ್ತ್ರೀಪುರುಷವತ್ ಸಂಬಂಧೋऽಸ್ತಿ.

ಇವರಿಬ್ಬರ ಸಂಬಂಧವು ಸ್ತ್ರೀ-ಪುರುಷರದಂತೆ ಇರುತ್ತದೆ.

ಅಂದರೆ, ಇಲ್ಲಿ ರಾತ್ರಿ ಮತ್ತು ಚಂದ್ರನದು, ಪತಿ-ಪತ್ನಿಯರದಂತೆ, ರೂಪಕಾಲಂಕಾರವಿದೆ!

ಸ ಚಂದ್ರಮಾಃ* ಸರ್ವಾಣಿ ಭೂತಾನಿ ಪ್ರಮೋದಯತಿ.*

ಸ್ವಸ್ತ್ರಿಯಾऽಹಲ್ಯಯಾ ಸುಖಯತಿ.

ಈ **ಚಂದ್ರನು*** ಎಲ್ಲಾ ಪ್ರಾಣಿಗಳಿಗೂ ಆನಂದವನ್ನುಂಟುಮಾಡುತ್ತಾನೆ.*

[ಮತ್ತು] ತನ್ನ ಪತ್ನಿಯಾದ [ಅಹಲ್ಯಾ=] ರಾತ್ರಿಯೊಡನೆ ಸುಖ ಕೊಡುತ್ತಾನೆ.

ಅಂದರೆ, ಚಂದ್ರನು ತನ್ನ ಸ್ತ್ರೀ ಆದ ರಾತ್ರಿಯ ಮೂಲಕ ಎಲ್ಲಾ ಪ್ರಾಣಿಗಳಿಗೂ ಆನಂದವನ್ನು ಕೊಡಿಸುತ್ತಾನೆ.

ಅತ್ರ ಸ ಸೂರ್ಯೋ ಇಂದ್ರೋ ರಾತ್ರೇರಹಲ್ಯಾಯಾ ಗೋತಮಸ್ಯ ಚಂದ್ರಸ್ಯ ಸ್ತ್ರಿಯಾ ಜಾರ ಉಚ್ಯತೇ.

ಇಲ್ಲಿ ಆ **ಸೂರ್ಯನು**, ಎಂದರೆ **ಇಂದ್ರನು ಗೋತಮನ**, ಎಂದರೆ **ಚಂದ್ರನ ಪತ್ನಿಯಾದ ರಾತ್ರಿಯ**, ಎಂದರೆ **ಅಹಲ್ಯೆಯ**; ಜಾರನಾಗಿದ್ದಾನೆ, ಎಂದು ಹೇಳಲಾಗುತ್ತದೆ.

---

* 'ಚದಿ ಆಹ್ಲಾದನೇ ದೀಪ್ತೌ ಚ |' (ಧಾತುಪಾಠೇ ೧. ೫೬) _ಅನು.

* 'ಚದಿ', ಎಂಬ ಧಾತುವು ಆಹ್ಲಾದ ಮತ್ತು ದೀಪ್ತಿಯನ್ನು ಉಂಟುಮಾಡುವ ಅರ್ಥದಲ್ಲಿದೆ. (ಧಾತುಪಾಠಃ ೧. ೫೬) _ಅನು.

ಇಂದ್ರ-ಅಹಲ್ಯೆಯರ 'ಜಾರ'ಕ್ರಿಯೆಯ ಸತ್ಯಾರ್ಥ

ಅಂದರೆ, ಈ ರಾತ್ರಿಯ ಜಾರನು ಸೂರ್ಯನಾಗಿದ್ದಾನೆ!

ಕುತಃ?

ಏಕೆಂದರೆ_

ಅಯಂ ರಾತ್ರೇರ್ಜರಯಿತಾ.

ಇವನು ರಾತ್ರಿಯನ್ನು ಜೀರ್ಣಮಾಡುವವನಾಗಿದ್ದಾನೆ.

ಅಂದರೆ, ಸೂರ್ಯನು ರಾತ್ರಿಯನ್ನು ನಿವಾರಿಸಿಬಿಡುತ್ತಾನೆ. ಆದುದರಿಂದ, ಅವನು ಇದರ **'ಜಾರ'**, ಎನಿಸುತ್ತಾನೆ.

ಎಂದರೆ, ಇವನ ಉದಯವಾಗುವುದರಿಂದ, ರಾತ್ರಿಯು ಅಂತರ್ಧಾನವಾಗಿಬಿಡುತ್ತದೆ.

ಮತ್ತು **'ಜಾರ'**, ಎಂದರೆ ಸೂರ್ಯನೇ ರಾತ್ರಿಯಲ್ಲಿ ವಿದ್ಯಮಾನವಾಗಿರುವಂತಹ ಶೃಂಗಾರವನ್ನು ಕೆಡಿಸುವವನಾಗಿದ್ದಾನೆ.

ಆದುದರಿಂದ, ಪತಿ-ಪತ್ನಿಯರ ಈ ರೂಪಕಾಲಂಕಾರವನ್ನು ಏಕೆ ಹೆಣೆದಿದ್ದಾರೆಂದರೆ_ ಹೇಗೆ ಪತಿ-ಪತ್ನಿ ಒಟ್ಟುಗೂಡಿ, ವಾಸಿಸುತ್ತಾರೋ, ಹಾಗೆಯೇ ಚಂದ್ರ ಮತ್ತು ರಾತ್ರಿ ಕೂಡ, ಜೊತೆ-ಜೊತೆಯಾಗಿಯೇ ಇರುತ್ತವೆ!

"'ಜ್‌ಋೂಷ್' ವಯೋಹಾನೌ ।" *

[ಅರ್ಥ:_ 'ಜ್‌ಋೂಷ್', ಧಾತುವು ಆಯಸ್ಸಿನ ಹಾನಿಯ ಅರ್ಥದಲ್ಲಿದೆ.]

ಇತಿ ಧಾತ್ವರ್ಥೋಽಭಿಪ್ರೇತೋಽಸ್ತಿ.

ಹೀಗೆ ಧಾತುವಿನ ಅರ್ಥವು ಇಷ್ಟವಾಗಿದೆ.

ರಾತ್ರೇರಾಯುಷೋ ವಿನಾಶಕ ಇಂದ್ರಃ ಸೂರ್ಯ ಏವೇತಿ ಮಂತವ್ಯಮ್ ॥ ೧-೬ ॥

ರಾತ್ರಿಯ ವಿನಾಶಕನು 'ಇಂದ್ರ', ಎಂದರೆ ಸೂರ್ಯನೇ ಆಗಿದ್ದಾನೆ, ಎಂದು ತಿಳಿಯಬೇಕು! [೧-೬]

ಮಿಥ್ಯಾಕಥೆಗಳ ತ್ಯಾಗ ಅನಿವಾರ್ಯ!

ಏವಂ ಸದ್ವಿದ್ಯೋಪದೇಶಾರ್ಥಾಲಂಕಾರಾಯಾಂ ಭೂಷಣರೂಪಾಯಾಂ ಸಚ್ಛಾಸ್ತ್ರೇಷು ಪ್ರಣೀತಾಯಾಂ ಕಥಾಯಾಂ ಸತ್ಯಾಂ ;

ಹೀಗೆ, ಸತ್ಯವಿದ್ಯೆಯ ಉಪದೇಶದ ಉದ್ದೇಶ್ಯದಿಂದ ಭೂಷಣರೂಪದಲ್ಲಿ ಅಲಂಕಾರವಾಗಿರುವುದೂ, ಸತ್ಯಶಾಸ್ತ್ರಗಳಲ್ಲಿ ಪ್ರಕಟಿಸಲ್ಪಟ್ಟಿರುವುದೂ ಆದ ಕಥೆಯು ಇರುವಾಗ ;

* ಧಾತುಪಾಠೇ ೪. ೨೧ _ಅನು.

* ಧಾತುಪಾಠ (೪. ೨೧) _ಅನು.

ಯಾ ನವೀನಗ್ರಂಥೇಷು ಪೂರ್ವೋಕ್ತಾ ಮಿಥ್ಯಾ ಕಥಾ ಲಿಖಿತಾಸ್ತಿ, ಸಾ ಕೇನಚಿತ್ ಕದಾಪಿ ನೈವ ಮಂತವ್ಯಾ ಹಿ ;

ನವೀನಗ್ರಂಥಗಳಲ್ಲಿ ಮೊದಲು ಹೇಳಿದ ಯಾವ ಮಿಥ್ಯಾಕಥೆಯು ಬರೆಯಲ್ಪಟ್ಟಿದೆಯೋ, ಅದು ಯಾರಿಂದಲೂ, ಎಂದಿಗೂ ಕೂಡ, ಅಂಗೀಕರಿಸಲ್ಪಡಲೇ ಬಾರದು ;

ಏತಾದೃಶ್ಯೋಽನ್ಯಾಶ್ಚಾಪಿ.

ಮತ್ತು ಇಂತಹ ಬೇರೆಯವೂ ಕೂಡ!

ಅಂದರೆ, ಈ ಉತ್ತಮ ರೂಪಕಾಲಂಕಾರವಿದ್ಯೆಯನ್ನು ಅಲ್ಪಬುದ್ಧಿಜನರು ಕೆಡಿಸಿ, ಮನುಷ್ಯರೆಲ್ಲರಲ್ಲೂ ಹಾನಿಕಾರಕವಾದ ಫಲವನ್ನು ಇಟ್ಟು ಬಿಟ್ಟಿದ್ದಾರೆ. ಆದುದರಿಂದ, ಸಜ್ಜನರೆಲ್ಲರೂ ಪುರಾಣಗಳಲ್ಲಿ ಹೇಳಲ್ಪಟ್ಟ ಮಿಥ್ಯಾಕಥೆಗಳನ್ನು ಮೂಲದಿಂದಲೇ ತ್ಯಜಿಸಿಬಿಡಬೇಕು!

[೩] ಇಂದ್ರ-ವೃತ್ರಾಸುರರ ಮಿಥ್ಯಾಕಥೆ!

ಮೂರನೆಯದು, ಇಂದ್ರ ಮತ್ತು ವೃತ್ರಾಸುರನ ಕಥೆ! ಇದನ್ನೂ ಕೂಡ, ಪುರಾಣದವರು ಹೇಗೆ ಹಿಡಿದು ಉರುಳಾಡಿಸಿದ್ದಾರೆಂದರೆ, ಅದು ಪ್ರಮಾಣ, ಹಾಗೂ ಯುಕ್ತಿ_ ಈ ಎರಡಕ್ಕೂ ವಿರುದ್ಧವಾಗಿ ಬಿಟ್ಟಿದೆ! ನೋಡಿರಿ_

ಏವಮೇವ_

ಹೀಗೆಯೇ_

" ಇಂದ್ರಃ ಕಶ್ಚಿದ್ ದೇಹಧಾರೀ ದೇವರಾಜ ಆಸೀತ್. ತಸ್ಯ ತ್ವಷ್ಟುರಪತ್ಯೇನ ವೃತ್ರಾಸುರೇಣ ಸಹ ಯುದ್ಧಮಭೂತ್.

" ದೇಹಧಾರಿಯಾದ ಯಾವನೋ 'ಇಂದ್ರ', [ಎಂಬುವನು] ದೇವತೆಗಳ ರಾಜನಾಗಿದ್ದನು. ತ್ವಷ್ಟೃವಿನ ಪುತ್ರನಾದ ವೃತ್ರಾಸುರನ ಜೊತೆ ಅವನ ಯುದ್ಧವಾಯಿತು.

" ವೃತ್ರಾಸುರೇಣೇಂದ್ರೋ ನಿಗಲಿತೋಽತೋ ದೇವಾನಾಂ ಮಹದ್ಭಯಮಭೂತ್. ತೇ ವಿಷ್ಣು-ಶರಣಂ ಗತಾಃ.

"ವೃತ್ರಾಸುರನಿಂದ ಇಂದ್ರನು ನುಂಗಲ್ಪಟ್ಟನು! ಅದರಿಂದ, ದೇವತೆಗಳಿಗೆ ಮಹಾಭಯವುಂಟಾಯಿತು! ಅವರು ವಿಷ್ಣುವಿನ ಶರಣಕ್ಕೆ ಹೋದರು.

" ಅಂದರೆ, ತ್ವಷ್ಟೃವಿನ ಪುತ್ರನಾದ ವೃತ್ರಾಸುರನು ದೇವತೆಗಳ ರಾಜನಾದ ಇಂದ್ರನನ್ನು ನುಂಗಿಬಿಟ್ಟನು! ಆಗ ದೇವತೆಗಳೆಲ್ಲರೂ ಬಹಳ ಭಯಯುಕ್ತರಾಗಿ ವಿಷ್ಣುವಿನ ಬಳಿಗೆ ಹೋದರು.

" ವಿಷ್ಣುರುಪಾಯಂ ವರ್ಣಿತವಾನ್ಬ 'ಮಯಾ ಪ್ರವಿಷ್ಟೇನ ಸಮುದ್ರಫೇನೇನಾಯಂ ಹತೋ ಭವಿಷ್ಯತೀತಿ!' "

"ವಿಷ್ಣುವು ಉಪಾಯವನ್ನು ಹೇಳಿದನೇನೆಂದರೆ_ 'ಸಮುದ್ರದ ನೊರೆಯಲ್ಲಿ ಪ್ರವಿಷ್ಟನಾದ ನನ್ನಿಂದ ಇವನು ಕೊಲ್ಲಲ್ಪಡುವನು!'

"ಅಂದರೆ, ವಿಷ್ಣುವು ಅವನನ್ನು ಸಾಯಿಸುವ ಉಪಾಯವನ್ನು [ಹೇಗೆ] ತೋರಿಸಿದನೆಂದರೆ_ 'ನಾನು ಸಮುದ್ರದ ನೊರೆಯಲ್ಲಿ ಪ್ರವೇಶಿಸಿ ಬಿಡುವೆನು! ನೀವೆಲ್ಲರೂ ಆ ನೊರೆಯನ್ನು ಎತ್ತಿ, ವೃತ್ರಾಸುರನನ್ನು ಹೊಡೆಯಿರಿ! ಅವನು ಸತ್ತು ಹೋಗುವನು!'"

ಈದೃಶ್ಯಃ ಪ್ರಮತ್ತಗೀತವತ್ ಪ್ರಲಪಿತಾಃ ಕಥಾಃ ಪುರಾಣಾಭಾಸಾದಿಷು ನವೀನೇಷು ಗ್ರಂಥೇಷು ಮಿಥ್ಯೈವ ಸಂತೀತಿ ಭದ್ರೈರ್ವಿದ್ವದ್ಭಿರ್ಮಂತವ್ಯಮ್.

ಪುರಾತನವೆಂದು ಭ್ರಮೆ ಹುಟ್ಟಿಸುವ ನವೀನ ಗ್ರಂಥಗಳಲ್ಲಿ ಪ್ರಮತ್ತಗೀತೆಯಂತೆ ಒದರಲ್ಪಟ್ಟಿರುವ ಈ ತರಹವಾಗಿರುವ ಕಥೆಗಳು ಮಿಥ್ಯೆಯೇ ಆಗಿವೆ, ಎಂದು ವಿದ್ವಾಂಸರಾದ ಸಜ್ಜನರೆಲ್ಲರಿಂದಲೂ ತಿಳಿಯಲ್ಪಡಬೇಕು!

ಅಂದರೆ, ಹುಚ್ಚರದಂತೆ ನಿರ್ಮಿಸಿರುವ ಪುರಾಣ ಗ್ರಂಥಗಳ ಈ ಕಥೆಗಳೆಲ್ಲವೂ ಸುಳ್ಳಾಗಿವೆ! ಇವುಗಳನ್ನು ಎಂದಿಗೂ ಅಂಗೀಕರಿಸದಿರುವುದು ಶ್ರೇಷ್ಠಜನರಿಗೆ ಉಚಿತ ವಾಗಿದೆ.

ಕುತಃ?

ಏಕೆಂದರೆ_

ಏತಾಸಾಮಪ್ಯಲಂಕಾರವತ್ತ್ವಾತ್.

ಇವುಗಳಲ್ಲಿ ಕೂಡ, ಅಲಂಕಾರದ ಭಾವವಿದೆ.

ತದ್ಯಥಾ_

ಅದು ಹೇಗೆಂದರೆ_

ಅಂದರೆ, ನೋಡಿ! ಸತ್ಯಗ್ರಂಥಗಳಲ್ಲಿ ಈ ಕಥೆಯು ಯಾವ ರೀತಿಯಲ್ಲಿ ಬರೆಯಲ್ಪಟ್ಟಿದೆಯೆಂದರೆ_

ಇಂದ್ರ-ವೃತಾಸುರರ ಯುದ್ಧಕ್ಕೆ ವೇದದಲ್ಲಿ ಸತ್ಯ-ದೃಷ್ಟಾಂತ-ಮೂಲ ಮೇಘದಿಂದ ಮಳೆ ಸುರಿಸುವುದು!

[ಋಷಿಃ_ ಹಿರಣ್ಯಸ್ತೂಪ ಆಂಗಿರಸಃ ; ದೇವತಾ_ಇಂದ್ರಃ ; ಛಂದಃ_ ತ್ರಿಷ್ಟುಪ್ ; ಸ್ವರಃ_ ಧೈವತಃ]

ಇಂದ್ರಸ್ಯ ನು ವೀರ್ಯಾಣಿ ಪ್ರ ವೋಚಂ
ಯಾನಿ ಚಕಾರ ಪ್ರಥಮಾನಿ ವಜ್ರೀ ।
ಅಹನ್ನಹಿಮನ್ವಪಸ್ತತರ್ದ ಪ್ರ
ವಕ್ಷಣಾ ಅಭಿನತ್ ಪರ್ವತಾನಾಮ್ ॥೧॥

[ಋಗ್ವೇದೇ ಮಂ. ೧, ಸೂ. ೩೨, ಮಂ. ೧]

[ಅರ್ಥ:_ "ವಜ್ರವನ್ನುಳ್ಳವನು ಮೊದಲು ಯಾವ ಪರಾಕ್ರಮಗಳನ್ನು ಮಾಡಿದನೋ, ಆ ಇಂದ್ರನ [ಪರಾಕ್ರಮವನ್ನು] ನಾನು ಹೇಳುತ್ತೇನೆ_ 'ಅಹಿ'ಯನ್ನು ಹೊಡೆದನು! ನೀರನ್ನು ಬೀಳಿಸಿದನು! ಪರ್ವತಗಳನ್ನು ಒಡೆದನು! ನಂತರ, ನದಿಗಳನ್ನು ಹರಡಿದನು!"

(ಋಗ್ವೇದ: ೧. ೩೨. ೧)]

ಭಾಷ್ಯಮ್_

(ಇಂದ್ರಸ್ಯ) ಸೂರ್ಯಸ್ಯ ಪರಮೇಶ್ವರಸ್ಯ ವಾ ತಾನಿ ವೀರ್ಯಾಣಿ ಪರಾಕ್ರಮಾನಹಂ ಪ್ರವೋಚಂ ಕಥಯಾಮಿ ;

ಯಾನಿ ಪ್ರಥಮಾನಿ ಪೂರ್ವಂ ;

ನು ಇತಿ ವಿತರ್ಕೇ ;

ವಜ್ರೀ ಚಕಾರ.

ವಜ್ರೀ ವಜ್ರಃ ಪ್ರಕಾಶಃ ಪ್ರಾಣೋ ವಾಽಸ್ಯಾಸ್ತೀತಿ.

ಭಾಷ್ಯ_

(ಇಂದ್ರಸ್ಯ) ಸೂರ್ಯನ, ಅಥವಾ ಪರಮೇಶ್ವರನ, ಆ (ವೀರ್ಯಾಣಿ) ಪರಾಕ್ರಮಗಳನ್ನು ನಾನು (ಪ್ರವೋಚಮ್) ಹೇಳುತ್ತೇನೆ!

(ಯಾನಿ) ಯಾವವುಗಳನ್ನು (ಪ್ರಥಮಾನಿ) ಮೊದಲು ;

(ನು) ಎಂದರೆ, ವಿಚಾರಪೂರ್ವಕವಾಗಿ ;

(ವಜ್ರೀ) ವಜ್ರವನ್ನುಳ್ಳವನು (ಚಕಾರ) ಮಾಡಿದನೋ ;

(ವಜ್ರೀ) ವಜ್ರ, ಎಂದರೆ ಪ್ರಕಾಶ, ಅಥವಾ ಪ್ರಾಣವು ಯಾವನದಾಗಿರುತ್ತದೋ, ಅವನು 'ವಜ್ರೀ' [= ವಜ್ರವನ್ನುಳ್ಳವನು.]

ಅಂದರೆ, ಅವನು ಪರಮೈಶ್ವರ್ಯ ಉಂಟಾಗುವುದಕ್ಕೆ ಕಾರಣನಾಗಿರುತ್ತಾನೆ, ಎಂದರೆ ಬಹಳ ತೀಕ್ಷ್ಣನಾಗಿ ಇರುತ್ತಾನೆ.

"ವೀರ್ಯಂ ವೈ ವಜ್ರಃ ॥"

[ಶತಪಥಬ್ರಾಹ್ಮಣೇ ಕಾಂ. ೭, ಅ. ೩]

[ಅರ್ಥ:_ "ವೀರ್ಯವೇ ವಜ್ರವಾಗಿರುತ್ತದೆ."

[ಶತಪಥಬ್ರಾಹ್ಮಣ: ೭. ೩. ೧. ೧೯]

ಅಂದರೆ, ಇಲ್ಲಿ (ಸಾಮಾನ್ಯವಾಗಿ) ಸೂರ್ಯನ ಹೆಸರು 'ಇಂದ್ರ', ಎಂದಿದೆ. ಅವನು ಮಾಡಿರುವ ಪರಾಕ್ರಮಗಳನ್ನು ನಾವು ಹೇಗೆ ಹೇಳುತ್ತೇವೆಂದರೆ_

ಸ ಅಹಿಂ ಮೇಘಮಹನ್, ಹತವಾನ್.

ಅವನು (ಅಹಿಮ್) ಮೇಘವನ್ನು ಹೊಡೆದನು!

ಅಂದರೆ, ಅವನು ತನ್ನ ಕಿರಣಗಳಿಂದ 'ವೃತ್ರ', ಎಂದರೆ ಮೇಘವನ್ನು ಹೊಡೆಯುತ್ತಾನೆ.

ತಂ ಹತ್ವಾ ಪೃಥಿವ್ಯಾಮನು ಪಶ್ಚಾದಪಸ್ತತರ್ದ ವಿಸ್ತಾರಿತವಾನ್.

ಅದನ್ನು ಹೊಡೆದು, **(ಅನು)** ನಂತರ, ಪೃಥಿವಿಯ ಮೇಲೆ, **(ಅಪಃ ತತರ್ದ)** ನೀರನ್ನು ಹರಡಿದನು!

ಅಂದರೆ, ಯಾವಾಗ ಅದು* ಸತ್ತು ಭೂಮಿಯ ಮೇಲೆ ಬೀಳುತ್ತದೋ, ಆಗ ತನ್ನ ಜಲರೂಪ ಶರೀರ ವನ್ನು ಭೂಮಿಯ ಮೇಲೆಲ್ಲಾ ಹರಡಿಬಿಡುತ್ತದೆ.

ತಾಭಿರದ್ಭಿಃ ಪ್ರವಕ್ಷಣಾ ನದೀಸ್ತತರ್ದ ಜಲ-ಪ್ರವಾಹೇಣ ಹಿಂಸಿತವಾನ್, ತಟಾದೀನಾಂ ಚ ಭೇದಂ ಕಾರಿತವಾನಸ್ತಿ.

ಆ ನೀರಿನಿಂದ **(ಪ್ರವಕ್ಷಣಾಃ)** ಹರಿಯುವ ನದಿ ಗಳನ್ನು **(ತತರ್ದ)** ಜಲಪ್ರವಾಹದಿಂದ ಹಿಂಸಿಸಿದನು. ಮತ್ತು ತೀರ ಮೊದಲಾದುವುಗಳನ್ನು **(ಅಭಿನತ್)** ಒಡೆದನು!

ಅಂದರೆ, ಅದರಿಂದ ಅನೇಕ ದೊಡ್ಡ ದೊಡ್ಡ ನದಿಗಳು ತುಂಬಿ ಹರಿದು, ಸಮುದ್ರಕ್ಕೆ ಹೋಗಿ ಸೇರುತ್ತವೆ.

ಕೀದೃಶ್ಯಸ್ತಾ ನದ್ಯಃ?

ಆ ನದಿಗಳು ಹೇಗಿವೆ? ಎಂದರೆ_

ಪರ್ವತಾನಾಂ ಮೇಘಾನಾಂ ಸಕಾಶಾದುತ್ಪದ್ಯ-ಮಾನಾಃ.

(ಪರ್ವತಾನಾಮ್) ಮೇಘಗಳ ಬಳಿಯಿಂದ ಉತ್ಪನ್ನವಾಗುವಂತಹವು ಆಗಿರುತ್ತವೆ.

ಅಂದರೆ, **'ಪರ್ವತ'**, ಎಂದರೆ ಮೇಘಗಳಿಂದ ಉತ್ಪನ್ನವಾಗಿ, ನೀರು ಹರಿಯುವುದಕ್ಕಾಗಿಯೇ ಇರುತ್ತದೆ.

ಯಜ್ಜಲಮಂತರಿಕ್ಷಾದ್ಧಿಂಸಿತ್ವಾ ನಿಪಾತ್ಯತೇ, ತದ್ ವೃತ್ರಸ್ಯ ಶರೀರಮೇವ ಜ್ಞೇಯಮ್ ॥೧॥

ಯಾವ ನೀರು ಅಂತರಿಕ್ಷದಿಂದ ಹಿಂಸಿಸಲ್ಪಟ್ಟು ಕೆಳಗೆ ಬೀಳಿಸಲ್ಪಡುತ್ತದೋ, ಅದು ವೃತ್ರನ ಶರೀರವೇ ಆಗಿರುತ್ತದೆ, ಎಂದು ತಿಳಿಯಬೇಕು!

ಅಂದರೆ, ಯಾವ ಸಮಯದಲ್ಲಿ ಇಂದ್ರನು**, ಮೇಘರೂಪ ವೃತಾಸುರನನ್ನು ಹೊಡೆದು, ಆಕಾಶದಿಂದ ಪೃಥಿವಿಯ ಮೇಲೆ ಬೀಳಿಸಿಬಿಡುತ್ತಾನೋ, ಆಗ ಅವನು+ ಪೃಥಿವಿಯ ಮೇಲೆ ಮಲಗಿ ಬಿಡುತ್ತಾನೆ! [೧]

---

* ಎಂದರೆ, ಮೇಘವು _ಅನು.

** ಎಂದರೆ, ಸೂರ್ಯನು _ಅನು.

+ ಎಂದರೆ, ಮೇಘರೂಪ ವೃತ್ರಾಸುರನು _ಅನು.

ಮೇಘದಿಂದ ಹೊರಟ ನೀರು ಸಮುದ್ರವನ್ನು ಸೇರಿತು !

[ಋಷಿಃ_ ಹಿರಣ್ಯಸ್ತೂಪ ಆಂಗಿರಸಃ ; ದೇವತಾ_ ಇಂದ್ರಃ ; ಛಂದಃ_ ತ್ರಿಷ್ಟುಪ್ ; ಸ್ವರಃ_ ಧೈವತಃ]

ಅಹನ್ನಹಿಂ ಪರ್ವತೇ ಶಿಶ್ರಿಯಾಣಂ
ತ್ವಷ್ಟಾಸ್ಮೈ ವಜ್ರಂ ಸ್ವರ್ಯ್ಯಂ ತತಕ್ಷ ।
ವಾಶ್ರಾ ಇವ ಧೇನವಃ ಸ್ಯಂದಮಾನಾ
ಅಂಜಃ ಸಮುದ್ರಮವ ಜಗ್ಮುರಾಪಃ ॥ ೨ ॥

[ಋಗ್ವೇದೇ ಮಂ. ೧, ಸೂ. ೩೨, ಮಂ. ೨]

[ಅರ್ಥ:_ "ತ್ವಷ್ಟ್ರುವು ಪರ್ವತದಲ್ಲಿ ಆಶ್ರಯಿಸಿರುವ ಪ್ರಕಾಶಮಯವಾದ ವಜ್ರವನ್ನು ಎಸೆದು, 'ಅಹಿ'ಯನ್ನು ಹೊಡೆದನು ! ಅದನ್ನು ಚೂರು ಚೂರು ಮಾಡಿದನು ! ಕರುವನ್ನು ಇಚ್ಛಿಸುವ ಹಸುಗಳಂತೆ ನೀರು ಪ್ರಕಟರೂಪವಾಗಿ ಹರಿಯುತ್ತಾ ಸಮುದ್ರವನ್ನು ಸೇರಲು ಹೊರಟಿತು ! "

(ಋಗ್ವೇದಃ ೧. ೩೨. ೨)]

ಭಾಷ್ಯಮ್_

ಅಗ್ರೇ ಮಂತ್ರಾಣಾಂ ಸಂಕ್ಷೇಪತೋಽರ್ಥೋ ವರ್ಣ್ಯತೇ_

(ಅಹನ್ನ್.) (ತ್ವಷ್ಟಾ) ಸೂರ್ಯಃ (ಅಹನ್ನಹಿಂ) ತಂ ಮೇಘಮಹನ್ ಹತವಾನ್.

ಕಥಂ ಹತವಾನಿತ್ಯತ್ರಾಹ_

(ಅಸ್ಮೈ) ಅಹಯೇ ವೃತ್ರಾಸುರಾಯ ಮೇಘಾಯ ;

(ಪರ್ವತೇ ಶಿಶ್ರಿಯಾಣಮ್) ಮೇಘೇ ಶ್ರಿತಮ್, (ಸ್ವರ್ಯ್ಯಮ್) ಪ್ರಕಾಶಮಯಂ (ವಜ್ರಮ್) ಸ್ವಕಿರಣ-ಜನ್ಯಂ ವಿದ್ಯುತ್ ಪ್ರಕ್ಷಿಪತಿ ;

ಭಾಷ್ಯ_

ಮುಂದೆ, ಸಂಕ್ಷೇಪವಾಗಿ ಮಂತ್ರಗಳ ಅರ್ಥವು ಹೇಳಲ್ಪಡುತ್ತದೆ_

(ತ್ವಷ್ಟಾ) ಸೂರ್ಯನು (ಅಹನ್ ಅಹಿಮ್) ಆ ಮೇಘವನ್ನು ಹೊಡೆದನು !

ಹೇಗೆ ಹೊಡೆದನು ? ಎಂಬುದಕ್ಕೆ ಉತ್ತರವನ್ನು ಇಲ್ಲಿ ಏನು ಹೇಳಲಾಗಿದೆಯೆಂದರೆ_

(ಅಸ್ಮೈ) 'ಅಹಿ', ಎಂದರೆ ವೃತ್ರಾಸುರರೂಪವಾದ ಮೇಘದ ಮೇಲೆ ;

(ಪರ್ವತೇ ಶಿಶ್ರಿಯಾಣಮ್) ಮೇಘದಲ್ಲಿ ಆಶ್ರಯಿಸಿರುವ (ಸ್ವರ್ಯಮ್) ಪ್ರಕಾಶಮಯವಾದ (ವಜ್ರಮ್) ತನ್ನ ಕಿರಣದಿಂದ ಉತ್ಪನ್ನವಾದ ವಿದ್ಯುತ್ತನ್ನು ಎಸೆಯುತ್ತಾನೆ !

ಯೇನ ವೃತ್ರಾಸುರಂ ಮೇಘಂ (ತತಕ್ಷ) ಕಣೀಕೃತ್ಯ ಭೂಮೌ ಪಾತಯತಿ.

ಇದರಿಂದ, ವೃತ್ರಾಸುರದಂತಿರುವ ಮೇಘವನ್ನು **(ತತಕ್ಷ)** ಚೂರು ಚೂರು ಮಾಡಿ, ಭೂಮಿಯ ಮೇಲೆ ಬೀಳಿಸುತ್ತಾನೆ!

ಅಂದರೆ, ಹೇಗೆ ಯಾವನಾದರೂ ಮರವನ್ನು ಸೀಳಿ, ಸೂಕ್ಷ್ಮವನ್ನಾಗಿ ಮಾಡಿಬಿಡುತ್ತಾನೋ, ಹಾಗೆಯೇ ಅವನು* ಮೇಘವನ್ನೂ ಕೂಡ, ಹನಿ-ಹನಿಯನ್ನಾಗಿ ಮಾಡಿ, ಪೃಥಿವಿಯ ಮೇಲೆ ಬೀಳಿಸಿಬಿಡುತ್ತಾನೆ!

ಪುನರ್ಭೂಮೌ ಗತಮಪಿ ಜಲಂ ಕಣೀಕೃತ್ಯಾಽಽಕಾಶಂ ಗಮಯತಿ.

ಪುನಃ ಭೂಮಿಯ ಮೇಲೆ ಬಿದ್ದ ಜಲವನ್ನು ಚೂರು ಚೂರು ಮಾಡಿ, ಆಕಾಶಕ್ಕೇ ತಲುಪಿಸುತ್ತಾನೆ!

ಅಂದರೆ, ಯಾವುದನ್ನು ಸೂರ್ಯನು ತನ್ನ ಕಿರಣಗಳಿಂದ ಮತ್ತೆ, ಹನನ ಮಾಡುತ್ತಾನೋ, ಆ ಮೇಘವೇ ಆಕಾಶದಿಂದ ಕೆಳಗೆ ಬಿದ್ದು, ನಂತರ, ಪುನಃ **'ಪರ್ವತ'**, ಎಂದರೆ ಮೇಘಮಂಡಲದ ಆಶ್ರಯವನ್ನು ತೆಗೆದುಕೊಳ್ಳುತ್ತದೆ.

ತಾ ಆಪಃ ಸಮುದ್ರಮ್ (ಅವಜಗ್ಮುಃ) ಗಚ್ಛಂತಿ.

ಆ **(ಆಪಃ)** ನೀರು** **(ಸಮುದ್ರಮ್)** ಸಮುದ್ರವನ್ನು **(ಅವಜಗ್ಮುಃ)** ಹೋಗಿ ಸೇರುತ್ತವೆ.**

ಕಥಂಭೂತಾ ಆಪಃ?

ಆ ನೀರು ಯಾವ ರೂಪದಲ್ಲಾಗಿ [ಇರುತ್ತವೆ]? ಎಂದರೆ_

(ಅಂಜಃ) ವ್ಯಕ್ತಾಃ, (ಸ್ಯಂದಮಾನಾಃ) ಚಲಂತ್ಯಃ.

(ಅಂಜಃ) ಪ್ರಕಟರೂಪವಾಗಿಯೂ; (ಹಾಗೂ) **(ಸ್ಯಂದಮಾನಾಃ)** ಹರಿಯುವ ರೂಪದಲ್ಲೂ (ಇರುತ್ತವೆ.)

ಕಾ ಇವ?

ಯಾವುದರಂತೆ? ಎಂದರೆ_

(ವಾಶ್ರಾ.) ವತ್ಸಮಿಚ್ಛವೋ ಗಾವ ಇವ.

(ವಾಶ್ರಾಃ) ಕರುವನ್ನು ಇಚ್ಛಿಸುವ **(ಧೇನವಃ ಇವ)** ಹಸುಗಳಂತೆ!

ಆಪ ಏವ ವೃತ್ರಾಸುರಸ್ಯ ಶರೀರಮ್.

ನೀರೇ ವೃತ್ರಾಸುರನ ಶರೀರವಾಗಿರುತ್ತದೆ!

ಅಂದರೆ, ಅವನ ಶರೀರರೂಪದ ಜಲವು ಒಟ್ಟುಗೂಡಿ-ಒಟ್ಟುಗೂಡಿ, ನದಿಗಳ ಮೂಲಕ, ಹೇಗೆ ತನ್ನ ಕರುಗಳನ್ನು ಹಸುಗಳು ಓಡಿಬಂದು ಸೇರುತ್ತವೋ, ಹಾಗೆ ಸಮುದ್ರವನ್ನು ಸೇರುತ್ತವೆ!

---

* ಎಂದರೆ, ಸೂರ್ಯನು _ಅನು.

** 'ಆಪಃ' (=ನೀರು), ಎಂಬುದು ಬಹುವಚನಾಂತಶಬ್ದ. ಆದುದರಿಂದ, ಬಹುವಚನಕ್ರಿಯೆಯನ್ನು ಅನುವಾದದಲ್ಲಿ ಪ್ರಯೋಗಿಸಲಾಗಿದೆ _ಅನು.

ಯದಿದಂ ವೃತ್ರಶರೀರಾಖ್ಯಜಲಸ್ಯ ಭೂಮೌ ನಿಪಾತನಂ, ತದಿದಂ ಸೂರ್ಯಸ್ಯ ಸ್ತೋತುಮರ್ಹಂ ಕರ್ಮಾಸ್ತಿ ॥ ೨ ॥

ಭೂಮಿಯ ಮೇಲೆ ವೃತ್ರನ ಶರೀರ, ಎಂಬ ನೀರಿನ ಈ ಯಾವ ಬೀಳಿಸುವಿಕೆ ಇದೆಯೋ, ಅದು ಸೂರ್ಯನ ಪ್ರಶಂಸಾಯೋಗ್ಯವಾದ ಕರ್ಮವಾಗಿದೆ! [೨]

" ಅಹಿರಿತಿ ಮೇಘನಾಮಸು ಪಠಿತಮ್ ॥ "

[ನಿಘಂಟೌ ಅ. ೧, ಖಂ. ೧೦]

[ಅರ್ಥ:_ " 'ಅಹಿ', ಎಂಬ [ಶಬ್ದ]ವನ್ನು ಮೇಘದ ಹೆಸರುಗಳಲ್ಲಿ ಹೇಳಲಾಗಿದೆ."

(ನಿಘಂಟು: ೧. ೧೦)]

ಸೂರ್ಯನಿಂದ 'ಕತ್ತರಿಸಲ್ಪಟ್ಟ' ಮೇಘವು ಭೂಮಿಯ ಮೇಲೆ 'ಮಲಗಿತು!'

[ಋಷಿಃ_ ಹಿರಣ್ಯಸ್ತೂಪ ಆಂಗಿರಸಃ ; ದೇವತಾ_ ಇಂದ್ರಃ ; ಛಂದಃ_ ತ್ರಿಷ್ಟುಪ್ ; ಸ್ವರಃ_ ಧೈವತಃ]

ಅಹನ್ ವೃತ್ರಂ ವೃತ್ರತರಂ ವ್ಯಂಸ-
ಮಿಂದ್ರೋ ವಜ್ರೇಣ ಮಹತಾ ವಧೇನ ।
ಸ್ಕಂಧಾಂಸೀವ ಕುಲಿಶೇನಾ ವಿವೃಕ್ಣಾಹಿಃ
ಶಯತ ಉಪಪೃಕ್ ಪೃಥಿವ್ಯಾಃ ॥ ೩ ॥

[ಋಗ್ವೇದೇ ಮಂ. ೧, ಸೂ. ೩೨, ಮಂ. ೫]

[ಅರ್ಥ:_ " 'ಇಂದ್ರ'ನು ಹೊಡೆಯಲು ಯೋಗ್ಯವಾದ ದೊಡ್ಡದೂ, ತೀಕ್ಷ್ಣವೂ ಆದ ವಜ್ರದಿಂದ ಅತ್ಯಂತ ಬಲಶಾಲಿಯಾದ 'ವೃತ್ರ'ವನ್ನು , ಕತ್ತರಿಸಲ್ಪಟ್ಟ ಭುಜವಾಗುವಂತೆ, ಹೊಡೆದನು! 'ಅಹಿ'ಯು ಛಿನ್ನ-ಭಿನ್ನವಾದ ಭುಜಗಳಂತೆ ಆಗಿ, ಪೃಥಿವಿಯ ಮೇಲೆ ಮಲಗಿಕೊಂಡಿತು! "

(ಋಗ್ವೇದ: ೧. ೩೨. ೫)]

ಭಾಷ್ಯಮ್_

(ಇಂದ್ರಃ) ಸೂರ್ಯಃ ;

(ವಜ್ರೇಣ) ವಿದ್ಯುತ್ಕಿರಣಾಖ್ಯೇನ (ಮಹತಾ ವಧೇನ) ತೀಕ್ಷ್ಣತರೇಣ ;

(ವೃತ್ರತರಂ) ಅತ್ಯಂತಬಲವಂತಮ್ (ವೃತ್ರಮ್) ಮೇಘಮ್ ;

ಭಾಷ್ಯ_

(ಇಂದ್ರಃ) ಸೂರ್ಯನು ;

(ವಜ್ರೇಣ) ವಿದ್ಯುತ್ಕಿರಣ, ಎಂಬ ಹೆಸರಿನ (ಮಹತಾ ವಧೇನ) ತೀಕ್ಷ್ಣಕರವಾದ ಆಯುಧದಿಂದ ;

(ವೃತ್ರತರಮ್) ಅತ್ಯಂತ ಬಲಶಾಲಿಯಾದ (ವೃತ್ರಮ್) ಮೇಘವನ್ನು ;

(ವ್ಯಂಸಮ್) ಛಿನ್ನಸ್ಕಂಧಂ ಛೇದಿತಘನಜಾಲಂ ಯಥಾ ಸ್ಯಾತ್ ತಥಾ ;

(ವ್ಯಂಸಮ್) ಕತ್ತರಿಸಲ್ಪಟ್ಟ ಭುಜವನ್ನುಳ್ಳದ್ದಾಗುವಂತೆ, ಎಂದರೆ ಮೇಘಜಾಲವು ಕತ್ತರಿಸಲ್ಪಟ್ಟರೆ ಹೇಗೆ ಆಗ ಬಹುದೋ, ಹಾಗೆ ;

(ಅಹನ್) ಹತವಾನ್.

(ಅಹನ್) ಹೊಡೆದನು!

ಸ (ಅಹಿಃ) ಮೇಘಃ ;

ಆ (ಅಹಿಃ) ಮೇಘವು ;

(ಕುಲಿಶೇನ) ವಜ್ರೇಣ (ವಿವೃಕ್ಣಾ) ಛಿನ್ನಾನಿ ಸ್ಕಂಧಾಂಸೀವ ;

(ಕುಲಿಶೇನ) ತೀಕ್ಷ್ಣವಾದ ವಜ್ರದಿಂದ (ವಿವೃಕ್ಣಾ ಸ್ಕಂಧಾಂಸಿ ಇವ) ಕತ್ತರಿಸಲ್ಪಟ್ಟ ಭುಜಗಳಂತೆ ;

(ಪೃಥಿವ್ಯಾ ಉಪಪೃಕ್) ಯಥಾ ಕಸ್ಯಚಿನ್ಮನುಷ್ಯಾದೇರಸಿನಾ ಛಿನ್ನಂ ಸದಂಗಂ ಪೃಥಿವ್ಯಾಂ ಪತತಿ ;

(ಪೃಥಿವ್ಯಾಃ ಉಪಪೃಕ್) ಹೇಗೆ ಯಾವನಾದರೂ ಮನುಷ್ಯ ಮೊದಲಾದವನ ಅಂಗವು ಕತ್ತಿಯಿಂದ ಕತ್ತರಿಸಲ್ಪಟ್ಟು , ಭೂಮಿಯ ಮೇಲೆ ಬೀಳುತ್ತದೋ ;

ತಥೈವ ಸ ಮೇಘೋಽಪಿ (ಅಶಯತ) ॥ ೩ ॥

ಹಾಗೆಯೇ ಆ ಮೇಘವೂ ಕೂಡ, (ಅಶಯತ) ಮಲಗಿಕೊಂಡಿತು!

ಅಂದರೆ, ಯಾವಾಗ ಸೂರ್ಯನು ಆ ಅತ್ಯಂತ ಗರ್ಜಿಸುತ್ತಿರುವ ಮೇಘವನ್ನು, ಹೇಗೆ ಯಾವನಾದರೂ, ಮನುಷ್ಯ ಮೊದಲಾದವನ ಶರೀರವನ್ನು ಕತ್ತರಿಸಿ ಬೀಳಿಸುತ್ತಾನೋ, ಹಾಗೆ, ಛಿನ್ನ-ಭಿನ್ನ ಮಾಡಿ, ಪೃಥಿವಿಯ ಮೇಲೆ ಬೀಳಿಸಿಬಿಡುತ್ತಾನೋ, ಆಗ ಆ **'ವೃತ್ರಾಸುರ'**ನೂ ಕೂಡ ಪೃಥಿವಿಯ ಮೇಲೆ ಬಿದ್ದ ಮೃತಕನಂತೆ, ಮಲಗುವವನಾಗಿ ಹೋಗುತ್ತಾನೆ! [೩]

" ಛಂದಸಿ ಲುಙ್ ಲಙ್ ಲಿಟಃ ॥ "

[ಅಷ್ಟಾಧ್ಯಾಯ್ಯಾಮ್ ೩. ೪. ೬]

[ಅರ್ಥ:_ " ವೇದವಿಷಯದಲ್ಲಿ ಧಾತುಸಂಬಂಧವಾದಾಗ, ಧಾತುವಿನಿಂದ ವಿಕಲ್ಪದಿಂದ ಲುಙ್, ಲಙ್ ಮತ್ತು ಲಿಟ್ ಪ್ರತ್ಯಯಗಳು ಪರದಲ್ಲಿ ಬರುತ್ತವೆ. "

(ಅಷ್ಟಾಧ್ಯಾಯೀ ೩. ೪. ೬)]

ಇತಿ ಸಾಮಾನ್ಯಕಾಲೇ ಲಙ್.

ಈ ಸೂತ್ರದಿಂದ ಸಾಮಾನ್ಯಕಾಲದಲ್ಲಿ **'ಲಙ್'** [ಪ್ರತ್ಯಯವು ಬಂದಿದೆ.]*

---

* ಸಾಮಾನ್ಯಕಾಲ, ಎಂದರೆ, ವರ್ತಮಾನ, ಭೂತ, ಭವಿಷ್ಯತ್ ಕಾಲ. 'ಅಶಯತ', ಎಂಬುದು ಲಙ್ ಪ್ರತ್ಯಯವನ್ನುಳ್ಳ ಅನದ್ಯತನ ಭೂತಕಾಲ _ಅನು.

ಸೂರ್ಯ ಮತ್ತು ಮೇಘದ 'ಯುದ್ಧ'ದಲ್ಲಿ ಮೇಘದ 'ಪರಾಜಯ!'

[ಋಷಿಃ_ ಹಿರಣ್ಯಸ್ತೂಪ ಆಂಗಿರಸಃ ; ದೇವತಾ_ ಇಂದ್ರಃ ; ಛಂದಃ_ ತ್ರಿಷ್ಟುಪ್ ; ಸ್ವರಃ_ ಧೈವತಃ]

ಅಪಾದಹಸ್ತೋ ಅಪೃತನ್ಯದಿಂದ್ರ-
ಮಾಸ್ಯ ವಜ್ರಮಧಿ ಸಾನೌ ಜಘಾನ ।
ವೃಷ್ಣೋ ವಧ್ರಿಃ ಪ್ರತಿಮಾನಂ ಬುಭೂಷನ್
ಪುರುತ್ರಾ ವೃತ್ರೋ ಅಶಯದ್ವ್ಯಸ್ತಃ ॥ ೪ ॥

[ಋಗ್ವೇದೇ ಮಂ. ೧, ಸೂ. ೩೨, ಮಂ. ೭]

[ಅರ್ಥ:_ "ವೃತ್ರನು ಪರಾಕ್ರಮಿಯ ಸಮಾನನಾಗುವ ಇಚ್ಛೆ ಮಾಡುತ್ತಾ, ಹಾಗೂ ಯುದ್ಧ ಮಾಡುವ ಇಚ್ಛೆಯನ್ನುಳ್ಳವನಾಗಿ, ಇಂದ್ರನನ್ನು [ಕರೆದನು.] [ಇಂದ್ರನು] ಅವನ ಅವಯವದ ಮೇಲೆ ವಜ್ರವನ್ನು ಪ್ರಹರಿಸಿದನು! [ಆಗ] ಬಂಧಿಸಿಲ್ಪಟ್ಟ [ವೃತ್ರನು] ಪಾಣಿಪಾದರಹಿತನಾಗಿ ವಿವಿಧವಾಗಿ ಎಸೆಯಲ್ಪಟ್ಟು, ಬಹಳ ಕಡೆ, [ಹರಡಿಕೊಂಡು] ಮಲಗಿದನು!"

(ಋಗ್ವೇದಃ ೧. ೩೨. ೭)]

ಭಾಷ್ಯಮ್_

(ಅಪಾದ.) ಪೃಥಿವ್ಯಾಂ ಶಯಾನ ಇವೇಂದ್ರೇಣ ಸೂರ್ಯೇಣಾಪಾದಹಸ್ತೋ ವ್ಯಸ್ತೋ ಭಿನ್ನಾಂಗಕೃತೋ ವೃತ್ರೋ ಮೇಘೋ ;

ಭೂಮಾವಶಯತ್ ಶಯನಂ ಕರೋತೀತಿ ॥ ೪ ॥

ನಿಘಂಟೌ ಅ. ೧, ಖಂ. ೧೦_

ಭಾಷ್ಯ_

(ಅಪಾದ.) ಪೃಥಿವಿಯ ಮೇಲೆ ಮಲಗುವಂತೆಯೂ, ಎಂದರೆ 'ಇಂದ್ರ', ಎಂದರೆ ಸೂರ್ಯನಿಂದ, ಪಾಣಿ-ಪಾದರಹಿತವಾಗಿ (ವ್ಯಸ್ತಃ) ಅಂಗಭಂಗ ಮಾಡಲ್ಪಟ್ಟುದಾಗಿಯೂ ಆದ (ವೃತ್ರಃ) ಮೇಘವು ;

ಭೂಮಿಯ ಮೇಲೆ (ಅಶಯತ್) ಶಯನ ಮಾಡುತ್ತದೆ. [೪]

ನಿಘಂಟು(೧. ೧೦)ವಿನಲ್ಲಿ_

"ವೃತ್ರ ಇತಿ ಮೇಘಸ್ಯ ನಾಮ ।"

[ಅರ್ಥ:_ - " 'ವೃತ್ರ', ಎಂಬುದು ಮೇಘದ ಹೆಸರಾಗಿದೆ."]

ಭೂಮಿಯ ಮೇಲೆ ನೀರಿನ ಹರಿಯುವಿಕೆ-ನಿಲ್ಲುವಿಕೆ

[ಋಷಿಃ_ ಹಿರಣ್ಯಸ್ತೂಪ ಆಂಗಿರಸಃ ; ದೇವತಾ_ ಇಂದ್ರಃ ; ಛಂದಃ_ ತ್ರಿಷ್ಟುಪ್ ; ಸ್ವರಃ_ ಧೈವತಃ]

ಅತಿಷ್ಠಂತೀನಾಮನಿವೇಶನಾನಾಂ
ಕಾಷ್ಠಾನಾಂ ಮಧ್ಯೇ ನಿಹಿತಂ ಶರೀರಮ್ ।
ವೃತ್ರಸ್ಯ ನಿಣ್ಯಂ ವಿ ಚರಂತ್ಯಾಪೋ
ದೀರ್ಘಂ ತಮ ಆಶಯದಿಂದ್ರಶತ್ರುಃ ॥ ೫ ॥

[ಋಗ್ವೇದೇ ಮಂ. ೧, ಸೂ. ೩೨, ಮಂ. ೧೦]

[ಅರ್ಥ:_ " ಚಲಿಸುತ್ತಿರುವುದೂ, ವಾಸಸ್ಥಾನವಿಲ್ಲದುದೂ, ದಿಕ್ಕುಗಳ ಮಧ್ಯೆ ಇರುವಂತಹುದೂ ಆದ [ನೀರಿನಲ್ಲಿ] ವೃತ್ರನ ಗುಪ್ತವಾದ ಶರೀರವು ಇಡಲ್ಪಟ್ಟದೆ! ನೀರು ಮಹಾ ಅಂಧಕಾರದಲ್ಲಿ ವಿಧ-ವಿಧವಾಗಿ ಹರಿಯುತ್ತಿದೆ. 'ಇಂದ್ರಶತ್ರು'ವು ಮಲಗಿದ್ದಾನೆ."

(ಋಗ್ವೇದಃ ೧. ೩೨. ೧೦)]

ಭಾಷ್ಯಮ್_

(ಅತಿಷ್ಠಂತೀನಾಮ್.) ವೃತ್ರಸ್ಯ ಶರೀರಮಾಪೋ ದೀರ್ಘಂ ತಮಶ್ಚರಂತಿ.

ಅತ ಏವೇಂದ್ರಶತ್ರುರ್ವೃತ್ರೋ ಮೇಘೋ ಭೂಮಾವಶಯತ್, ಆ ಸಮಂತಾಚ್ಛೇತೇ ॥ ೫ ॥

ಭಾಷ್ಯ_

(ಅತಿಷ್ಠಂತೀನಾಮ್.) ವೃತ್ರನ ಶರೀರವಾದ ನೀರು ಮಹಾ ಅಂಧಕಾರದ ಕಡೆಗೆ ಹರಿಯುತ್ತದೆ.

ಅಂದರೆ, ವೃತ್ರನ ಜಲರೂಪ ಶರೀರದಿಂದ ದೊಡ್ಡ ದೊಡ್ಡ ನದಿಗಳು ಉತ್ಪನ್ನವಾಗಿ, ಅಗಾಧ ಸಮುದ್ರಕ್ಕೆ ಹೋಗಿ ಸೇರುತ್ತವೆ.

ಆದುದರಿಂದ, ಇಂದ್ರನ ಶತ್ರುವಾದ ವೃತ್ರನು, ಎಂದರೆ ಮೇಘವು ಭೂಮಿಯ ಮೇಲೆ ಎಲ್ಲೆಡೆಯೂ ಮಲಗಿದ್ದಾನೆ.

ಅಂದರೆ, ಎಷ್ಟು ಜಲವು ಕೆರೆ ಅಥವಾ ಬಾವಿ ಮೊದಲಾದುವುಗಳಲ್ಲಿ ಉಳಿದುಹೋಗುತ್ತದೋ, ಅದು ಪೃಥಿವಿಯ ಮೇಲೆ ಮಲಗಿರುವಂತಿದೆ, ಎಂದು ತಿಳಿಯಬೇಕು! [೫]

ನಿರುಕ್ತದಲ್ಲಿ ಈ ದೃಷ್ಟಾಂತದ ಸತ್ಯಾರ್ಥವಿವರಣೆ
ವೃಷ್ಟಿವಿಜ್ಞಾನ!

"ಇಂದ್ರಶತ್ರುರಿಂದ್ರೋಽಸ್ಯ ಶಮಯಿತಾ ವಾ ಶಾತಯಿತಾ ವಾ ।
ತಸ್ಮಾದಿಂದ್ರಶತ್ರುಃ । ತತ್ಕೋ ವೃತ್ರೋ ಮೇಘ ಇತಿ ನೈರುಕ್ತಾಃ ।
ತ್ವಾಷ್ಟ್ರೋಽಸುರ ಇತ್ಯೈತಿಹಾಸಿಕಾಃ ॥"

[ನಿರುಕ್ತೇ ಅ. ೨, ಖಂ. ೧೬]

[ಅರ್ಥ:_" ಇಂದ್ರಶತ್ರು! ಇಂದ್ರನು ಇವನ ಶಮನ ಮಾಡುತ್ತಾನೆ. ಅಥವಾ ಸಾಯಿಸುತ್ತಾನೆ. ಆದುದರಿಂದ, ಇಂದ್ರಶತ್ರು! ಹಾಗಾದರೆ, 'ವೃತ್ರ' ಯಾವನು? 'ಮೇಘ', ಎಂದು ನಿರುಕ್ತಸಂಪ್ರದಾಯದವರು [ಹೇಳುತ್ತಾರೆ.] ತ್ವಷ್ಟ್ರುವಿನ ಪುತ್ರನಾದ ಅಸುರ, ಎಂದು ಇತಿಹಾಸಪಕ್ಷದವರು [ಹೇಳುತ್ತಾರೆ.]

(ನಿರುಕ್ತ: ೨. ೧೬)]

ಭಾಷ್ಯಮ್_

ಇಂದ್ರಃ ಶತ್ರುರ್ಯಸ್ಯ ಸ ಇಂದ್ರಶತ್ರು*-ರಿಂದ್ರೋಽಸ್ಯ ನಿವಾರಕಃ.

ತ್ವಷ್ಟಾ ಸೂರ್ಯಸ್ತಸ್ಯಾಪತ್ಯಮಸುರೋ ಮೇಘಃ.

ಕುತಃ?

ಸೂರ್ಯಕಿರಣದ್ವಾರೈವ ರಸಜಲಸಮುದಾಯ-ಭೇದೇನ ಯತ್ಕಣೀಭೂತಂ ಜಲಮುಪರಿ ಗಚ್ಛತಿ, ತತ್ಪುನರ್ಮಿಲಿತ್ವಾ ಮೇಘರೂಪಂ ಭವತಿ.

ತಸ್ಯೈವಾಸುರ ಇತಿ ಸಂಜ್ಞತ್ವಾತ್.

ಭಾಷ್ಯ_

ಯಾವನ ಶತ್ರುವು ಇಂದ್ರನೋ, ಅವನು **ಇಂದ್ರಶತ್ರು!** ಎಂದರೆ, ಇಂದ್ರನು ಇವನ ನಿವಾರಣೆಯನ್ನು ಮಾಡುವವನಾಗಿದ್ದಾನೆ.

ಅಂದರೆ, **ವೃತ್ರನ ಶತ್ರು**, ಎಂದರೆ ನಿವಾರಕನು ಸೂರ್ಯನಾಗಿದ್ದಾನೆ!

'ತ್ವಷ್ಟ್ರು' ಸೂರ್ಯನಾಗಿದ್ದಾನೆ. ಅವನ ಪುತ್ರನು **'ಅಸುರ'**, ಎಂದರೆ ಮೇಘವಾಗಿದ್ದಾನೆ.

ಅಂದರೆ, ಸೂರ್ಯನ ಹೆಸರು **'ತ್ವಷ್ಟಾ'**, ಎಂದಿರುತ್ತದೆ. ಅವನ ಸಂತಾನವು ಮೇಘವಾಗಿದೆ.

ಏಕೆಂದರೆ_

ಸೂರ್ಯಕಿರಣದ ಮೂಲಕವಾಗಿಯೇ, ರಸ ಸಮುದಾಯ, ಹಾಗೂ ಜಲಸಮುದಾಯವಾಗಿ ವಿಭಜಿಸಲ್ಪಟ್ಟ, ಹನಿ-ಹನಿಯಾದ ಯಾವ ನೀರು ಮೇಲಕ್ಕೆ ಹೋಗುತ್ತದೋ, ಅದು ಪುನಃ [ಅಲ್ಲಿ] ಒಟ್ಟುಗೂಡಿ, ಮೇಘರೂಪವಾಗುತ್ತದೆ!

[ಆದುದರಿಂದ,] ಅವನಿಗೇ** **'ಅಸುರ'**, ಎಂಬ ಹೆಸರೂ [ಕೂಡ,] ಇದೆ.

* ಇಂದ್ರಸ್ಯ ಶತ್ರುಃ ಇಂದ್ರಶತ್ರುರರ್ಥಾದ್ ವೃತ್ರ ಇತಿ ಋಗ್ವೇದಸ್ಯ (೧. ೩೨. ೧೦) ಮಂತ್ರಸ್ಯಾಭಿಪ್ರಾಯಃ. ಅತ್ರಾಪಿ ಬಹುವ್ರೀಹಿ-ಸಮಾಸೇನ ಸ ಏವಾಭಿಪ್ರಾಯಃ _ಅನು.

** ಅಂದರೆ, ಮೇಘಕ್ಕೆ _ಅನು.

ಪುನಶ್ಚ ತಂ ಸೂರ್ಯೋ ಹತ್ವಾ ಭೂಮೌ ನಿಪಾತಯತಿ.	ನಂತರ, ಅದನ್ನು ಸೂರ್ಯನು ಹೊಡೆದು, ಭೂಮಿಯ ಮೇಲೆ ಬೀಳಿಸುತ್ತಾನೆ.
ಸ ಚ ಭೂಮಿಂ ಪ್ರವಿಶತಿ; ನದೀರ್ಗಚ್ಛತಿ; ತದ್ದ್ವಾರಾ ಸಮುದ್ರಮಯನಂ ಕೃತ್ವಾ ತಿಷ್ಠತಿ.	ಆಗ, ಅದು ಭೂಮಿಯನ್ನು ಪ್ರವೇಶಿಸುತ್ತದೆ; ನದಿಗಳನ್ನು ಸೇರುತ್ತದೆ; ಅವುಗಳ ಮೂಲಕ ಸಮುದ್ರವನ್ನು ವಾಸಸ್ಥಾನವನ್ನಾಗಿ ಮಾಡಿಕೊಂಡು, ನಿಂತು ಬಿಡುತ್ತದೆ!
ಪುನಶ್ಚೋಪರಿ ಗಚ್ಛತಿ.	ಪುನಃ ಮೇಲೆ ಹೋಗುತ್ತದೆ!

ನಿರುಕ್ತದಲ್ಲಿ 'ವೃತ್ರ'ಶಬ್ದದ ವಿಶಿಷ್ಟಾರ್ಥಗಳು

"ವೃತ್ರಂ ಜಘ್ನಿವಾನಪವವಾರ ತದ್ । ವೃತ್ರೋ ವೃಣೋತೇ-
ರ್ವಾ ವರ್ತ್ತತೇರ್ವಾ ವರ್ಧತೇರ್ವಾ । ಯದವೃಣೋತ್ತದ್
ವೃತ್ರಸ್ಯ ವೃತ್ರತ್ವಮಿತಿ ವಿಜ್ಞಾಯತೇ । ಯದವರ್ತ್ತತ ತದ್
ವೃತ್ರಸ್ಯ ವೃತ್ರತ್ವಮಿತಿ ವಿಜ್ಞಾಯತೇ । ಯದವರ್ಧತ ತದ್
ವೃತ್ರಸ್ಯ ವೃತ್ರತ್ವಮಿತಿ ವಿಜ್ಞಾಯತೇ ॥"

[ನಿರುಕ್ತೇ ಅ. ೨, ಖಂ. ೧೭]

[ಅರ್ಥ:_ "ವೃತ್ರನನ್ನು ಹೊಡೆದನು. ಅದನ್ನು ನಿವಾರಿಸಿದನು! ಆವರಿಸುವುದರಿಂದ, ಅಥವಾ ವರ್ತಿಸುವುದರಿಂದ, ಅಥವಾ ವರ್ಧಿಸುವುದರಿಂದ 'ವೃತ್ರ', [ಎಂದು ಹೇಳಲಾಗುತ್ತದೆ.] ಯಾವುದು ಆವರಿಸುತ್ತದೋ, ಅದು ವೃತ್ರನ ವೃತ್ರತ್ವ, ಎಂದು ತಿಳಿಯಲಾಗುತ್ತದೆ. ಯಾವುದು ವರ್ತಿಸುತ್ತದೋ, ಅದು ವೃತ್ರನ ವೃತ್ರತ್ವ, ಎಂದು ತಿಳಿದುಬರುತ್ತದೆ. ಯಾವುದು ವರ್ಧಿಸುತ್ತದೋ, ಅದು ವೃತ್ರನ ವೃತ್ರತ್ವ, ಎಂದು ತಿಳಿಯಲ್ಪಡುತ್ತದೆ."

(ನಿರುಕ್ತ: ೨. ೧೭)]

ಭಾಷ್ಯಮ್_	ಭಾಷ್ಯ_
ತಂ ವೃತ್ರಮಿಂದ್ರಃ ಸೂರ್ಯೋ ಜಘ್ನಿವಾನ-ಪವವಾರ ನಿವಾರಿತವಾನ್.	ಆ ವೃತ್ರನನ್ನು ಇಂದ್ರ, ಎಂದರೆ ಸೂರ್ಯನು ಹೊಡೆದನು, ಮತ್ತು ನಿವಾರಿಸಿದನು!
ವೃತ್ರಾರ್ಥೋ ವೃಣೋತೇಃ ಸ್ವೀಕರಣೀಯಃ.	'ವೃತ್ರ' ಶಬ್ದದ ಅರ್ಥವನ್ನು ಆವರಿಸುವ [ಅರ್ಥ]ದಿಂದ ಸ್ವೀಕರಿಸಬೇಕು!

ಅಂದರೆ, ಸ್ವೀಕರಿಸಲು ಯೋಗ್ಯವಾದುದು ;* ಅಥವಾ ಪ್ರಕಾಶದ ಆವರಣ ಮಾಡುವಂತಹುದು, ಎಂದು.

ಮೇಘಸ್ಯ ಯದ್ ವೃತ್ರತ್ವಮಾವರಕತ್ವಂ ತದ್ ವರ್ತಮಾನತ್ವಾದ್ ವರ್ಧಮಾನತ್ವಾಚ್ಚ ಸಿದ್ಧಮಿತಿ ವಿಜ್ಞೇಯಮ್.

ಮೇಘದ ಯಾವ 'ವೃತ್ರತ್ವ', ಎಂದರೆ ಆವರಿಸುವ [ಸ್ವಭಾವ] ಇದೆಯೋ, ಅದು ವರ್ತಮಾನವಾಗಿರುವುದರಿಂದಲೂ, ಹಾಗೂ ವರ್ಧಮಾನವಾಗಿರುವುದರಿಂದಲೂ ಇರುವುದರಿಂದ ಸಿದ್ಧವಾಗುತ್ತದೆ, ಎಂದು ತಿಳಿಯಬೇಕು!

ಶತಪಥಬ್ರಾಹ್ಮಣದಲ್ಲಿ ಸತ್ಯಾರ್ಥದ ವಿವರಣೆ

"ವೃತ್ರೋ ಹ ವಾಽ ಇದಗ್ಂ ಸರ್ವಂ ವೃತ್ವಾ ಶಿಶ್ಯೇ ।
ಯದಿದಮಂತರೇಣ ದ್ಯಾವಾಪೃಥಿವೀ ಸ ಯದಿದಗ್ಂ ಸರ್ವಂ
ವೃತ್ವಾ ಶಿಶ್ಯೇ ತಸ್ಮಾದ್ ವೃತ್ರೋ ನಾಮ ॥"

[ಶತಪಥಬ್ರಾಹ್ಮಣೇ ಕಾಂ. ೧, ಅ. ೧, ಬ್ರಾ. ೩, ಕಂ. ೪]

[ಅರ್ಥ:_ "ವೃತ್ರನು ಈ ಜಗತ್ತೆಲ್ಲವನ್ನೂ ಆವರಿಸಿಕೊಂಡು ಮಲಗಿದ್ದಾನೆ. ದ್ಯುಲೋಕ-ಪೃಥಿವೀಲೋಕಗಳ ಮಧ್ಯೆ ಏನೇನಿದೆಯೋ, ಅದೆಲ್ಲವನ್ನೂ ಅವನು ಆವರಿಸಿಕೊಂಡು ಮಲಗಿದ್ದಾನೆ. ಆದುದರಿಂದ, [ಅವನಿಗೆ] 'ವೃತ್ರ', ಎಂಬ ಹೆಸರಿದೆ."

(ಶತಪಥಬ್ರಾಹ್ಮಣ: ೧. ೧. ೩. ೪)]

ಭಾಷ್ಯಮ್_

(ವೃತ್ರೋ ಹ ವಾ.) ಸ ವೃತ್ರ ಇದಂ ಸರ್ವಂ ವಿಶ್ವಂ ವೃತ್ವಾಽಽವೃತ್ಯ ಶಿಶ್ಯೇ ಶಯನಂ ಕರೋತಿ.

ತಸ್ಮಾದ್ ವೃತ್ರೋ ನಾಮ.

ಭಾಷ್ಯಮ್_

(ವೃತ್ರೋ ಹ ವಾ) ವೃತ್ರನು (ಇದಗ್ಂ ಸರ್ವಮ್) ಈ ಜಗತ್ತೆಲ್ಲವನ್ನೂ (ವೃತ್ವಾ) ಆವರಿಸಿಕೊಂಡು, (ಶಿಶ್ಯೇ) ಮಲಗಿದ್ದಾನೆ.

ಆದುದರಿಂದ, 'ವೃತ್ರ', ಎಂಬ ಹೆಸರು [ಅವನಿಗೆ] ಇದೆ.

---

* ಈ ಅರ್ಥವು 'ವೃತ್ರ', ಶಬ್ದಕ್ಕೆ ಇದ್ದರೂ, ಈ ಪ್ರಸಂಗದಲ್ಲಿ ಇದು ಅಪ್ರಸ್ತುತ _ಅನು.

ವರ್ಷಾಚಕ್ರದ ವರ್ಣನೆ

"ತಮಿಂದ್ರೋ ಜಘಾನ । ಸ ಹತಃ ಪೂತಿಃ ಸರ್ವತ
ಏವಾऽಪೋऽಭಿಸುಸ್ರಾವ ಸರ್ವತ ಇವ ಹ್ಯಯಗ್ಂ
ಸಮುದ್ರಸ್ತಸ್ಮಾದು ಹೈಕಾ ಆಪೋ ಬೀಭತ್ಸಾಂಚಕ್ರಿರೇ ।

[ಅರ್ಥ:_ "ಅವನನ್ನು ಇಂದ್ರನು ಹೊಡೆದನು! ಅವನು ಹೊಡೆಯಲ್ಪಟ್ಟು, ದುರ್ಗಂಧಪೂರಿತನಾಗಿ, ಎಲ್ಲ ಕಡೆಯಿಂದಲೂ ನೀರನ್ನು ಸುರಿಸಿದನು. ಎಲ್ಲ ಕಡೆಯಿಂದಲೂ ಇದ್ದಂತಿದೆ ಈ ಸಮುದ್ರ! ಆದುದರಿಂದ, [ಸಮುದ್ರದಲ್ಲಿ] ಒಟ್ಟುಗೂಡಿದ ನೀರು ಭಯವನ್ನುಂಟುಮಾಡಿತು!]

"ತಾ ಉಪರ್ಯ್ಯುಪರ್ಯ್ಯತಿಪುಪ್ರುವಿರೇತ ಇಮೇ ದರ್ಭಾಸ್ತಾ
ಹೈತಾ ಅನಾಪೂಯಿತಾ ಆಪೋऽಸ್ತಿ ವಾऽ ಇತರಾಸು
ಸಗ್ಂಸೃಷ್ಟಮಿವ, ಯದೇನಾ ವೃತ್ರಃ ಪೂತಿರಭಿಪ್ರಾಸ್ರವತ್
ತದೇವಾಸಾಮೇತಾಭ್ಯಾಂ ಪವಿತ್ರಾಭ್ಯಾಮಪಹಂತ್ಯಥ ಮೇಧ್ಯಾಭಿ-
ರೇವಾದ್ಭಿಃ ಪ್ರೋಕ್ಷತಿ, ತಸ್ಮಾದ್ವಾ ಏತಾಭ್ಯಾಮುತ್ಪುನಾತಿ ॥"

[ಶತಪಥಬ್ರಾಹ್ಮಣೇ ಕಾಂ. ೧, ಅ. ೧, ಬ್ರಾ. ೩, ಕಂ. ೫]

[ಅರ್ಥ:_ "ಆ [ನೀರು] ಮೇಲೆ ಮೇಲೆ ಎಗರಿ, ಹತ್ತಿಕೊಂಡವು! ಆದುದರಿಂದ, ಅವೇ ದರ್ಭೆಗಳಾಗಿವೆ. ಅವುಗಳೇ ಪವಿತ್ರವಾದ ನೀರಾಗಿವೆ. ಬೇರೆಯ [ನೀರು]ಗಳಲ್ಲಿ ಇವು ಬೆರೆತಾಗ ವೃತ್ರನು ದುರ್ಗಂಧಪೂರಿತನಾಗಿ ಹರಿದು ಇವನ್ನು ಸೇರಿಕೊಂಡನು. ಆಗಲೇ, ಈ ಎರಡು 'ಪವಿತ್ರ'ಗಳಿಂದ ಅದನ್ನು ಹೊಡೆಯುತ್ತಾನೆ. ನಂತರ, ಶುದ್ಧವಾದ ನೀರಿನಿಂದಲೇ ಪ್ರೋಕ್ಷಣೆ ಮಾಡುತ್ತಾನೆ. ಆದುದರಿಂದ, ಈ ಎರಡರಿಂದ ಶುದ್ಧ ಮಾಡುತ್ತಾನೆ."

(ಶತಪಥಬ್ರಾಹ್ಮಣ: ೧. ೧. ೩. ೫)]

ಭಾಷ್ಯಮ್_

ತಂ ವೃತ್ರಂ ಮೇಘಮಿಂದ್ರಃ ಸೂರ್ಯೋ ಜಘಾನ ಹತವಾನ್.

ಭಾಷ್ಯ_

ಆ 'ವೃತ್ರ', ಎಂದರೆ ಮೇಘವನ್ನು (ಇಂದ್ರಃ) ಸೂರ್ಯನು (ಜಘಾನ) ಹೊಡೆದನು.

ಅಂದರೆ, ಯಾವಾಗ ಯಾವಾಗ ಮೇಘವು ವೃದ್ಧಿಯನ್ನು ಹೊಂದಿ, ಪೃಥಿವೀ ಮತ್ತು ಆಕಾಶದಲ್ಲಿ ವಿಸ್ತಾರವಾಗಿ ಹರಡುತ್ತದೋ, ಆಗಾಗ ಸೂರ್ಯನು ಅದನ್ನು ಹೊಡೆದು ಪೃಥಿವಿಯ ಮೇಲೆ ಬೀಳಿಸಿ ಬಿಡುತ್ತಾನೆ.

ಸ ಹತಃ ಸನ್ ಪೃಥಿವೀಂ ಪ್ರಾಪ್ಯ ಸರ್ವತಃ ಕಾಷ್ಠತೃಣಾದಿಭಿಃ ಸಂಯುಕ್ತಃ ಪೂತಿರ್ದುರ್ಗಂಧೋ ಭವತಿ.

(ಸ ಹತಃ) ಅದು ಹೊಡೆಯಲ್ಪಟ್ಟು, ಪೃಥಿವಿಯನ್ನು ಸೇರಿ, ಎಲ್ಲ ಕಡೆಯಿಂದಲೂ ಕಟ್ಟಿಗೆ, ಹುಲ್ಲು ಮೊದಲಾದುವುಗಳೊಡನೆ ಬೆರೆತುಕೊಂಡು, **(ಪೂತಿಃ)** ದುರ್ಗಂಧಿತವಾಗುತ್ತದೆ.

ಅಂದರೆ, ನಂತರ, ಅದು ಅಶುದ್ಧವಾದ ಭೂಮಿ, ಕೊಳೆತಿರುವ ವನಸ್ಪತಿ, ಕಟ್ಟಿಗೆ, ಹುಲ್ಲು, ಹಾಗೂ ಮಲ-ಮೂತ್ರಾದಿಗಳೊಡನೆ ಸೇರುವುದರಿಂದ, ಅಲ್ಲಲ್ಲಿ ದುರ್ಗಂಧರೂಪವೂ ಕೂಡ, ಆಗಿ ಹೋಗುತ್ತದೆ!

ಪುರಾಕಾಶಸ್ಥೋ ಭೂತ್ವಾ ಸರ್ವತೋಽಪೋಽಭಿಸುಸ್ರಾವ, ತಾಸಾಂ ವರ್ಷಣಂ ಕರೋತಿ.

ಇದಕ್ಕೆ ಮೊದಲು ಆಕಾಶದಲ್ಲಿದ್ದು, ಎಲ್ಲಕಡೆಯಿಂದಲೂ ನೀರನ್ನು ಸುರಿಸುತ್ತದೆ, ಎಂದರೆ ಅದರ ಮಳೆಯನ್ನುಂಟು ಮಾಡುತ್ತದೆ.

ಅಯಂ ಹತೋ ವೃತ್ರಃ ಸಮುದ್ರಂ ಪ್ರಾಪ್ಯ ತತ್ರಾಪಿ ಭಯಂಕರೋ ಭವತಿ. ಅತ ಏವ ತತ್ರಸ್ಥಾ ಆಪೋ ಭಯಪ್ರದಾ ಭವಂತಿ.

[ಹೀಗೆ] ಹೊಡೆಯಲ್ಪಟ್ಟ ಈ ವೃತ್ರ[=ಮೇಘ]ವು ಸಮುದ್ರವನ್ನು ಸೇರಿ, ಅಲ್ಲೂ ಕೂಡ, ಭಯವನ್ನುಂಟು ಮಾಡುವಂತಹುದಾಗುತ್ತದೆ. ಆದುದರಿಂದ, ಅದರಲ್ಲಿನ ನೀರು ಭಯಪ್ರದವಾಗಿರುತ್ತದೆ.

ಅಂದರೆ, ಆ ಮೇಘದ ಜಲವು ಸಮುದ್ರಕ್ಕೆ ಹೋಗುತ್ತದೆ. ಆಗ ಸಮುದ್ರದ ನೀರು ನೋಡುವುದಕ್ಕೆ ಭಯಂಕರವಾಗಿರುವಂತೆ ಕಾಣಬರುತ್ತದೆ!

ಹೀಗೆ, ಮೇಘವು ಮತ್ತೆ-ಮತ್ತೆ ಮಳೆಯನ್ನು ಕರೆಯುತ್ತಿರುತ್ತದೆ. ಎಂದರೆ_

ಇತ್ಥಂ ಪುನಃ ಪುನಸ್ತಾಸ್ತಾ ನದೀಸಮುದ್ರಪೃಥಿವೀಗತಾ ಆಪಃ ಸೂರ್ಯ್ಯದ್ವಾರೇಣೋಪರ್ಯ್ಯುಪರ್ಯ್ಯಂತರಿಕ್ಷಂ ಪ್ರಪ್ರುವಿರೇ ಗಚ್ಛಂತಿ; ತತೋಽಭಿವರ್ಷಂತಿ ಚ.

ಈ ರೀತಿಯಾಗಿ, ನದಿ-ಸಮುದ್ರ-ಪೃಥಿವಿಯನ್ನು ಸೇರಿದ ಆ ಆ ನೀರು ಮತ್ತೆ-ಮತ್ತೆ ಸೂರ್ಯನ ಮೂಲಕ ಮೇಲಕ್ಕೆ ಮೇಲಕ್ಕೆ ಅಂತರಿಕ್ಷವನ್ನು ಸೇರುತ್ತವೆ; ಮತ್ತು ಅಲ್ಲಿಂದ ಎಲ್ಲೆಡೆಯೂ ಮಳೆಯನ್ನು ಕರೆಯುತ್ತವೆ.

ಅಂದರೆ, ನೀರು ಎಲ್ಲ ಸ್ಥಾನಗಳಿಂದಲೂ ಹಾರಿ-ಹಾರಿ, ಆಕಾಶವನ್ನೇರುತ್ತದೆ. ಅಲ್ಲಿ ಒಟ್ಟು ಗೂಡಿ, ಮತ್ತೆ ಮತ್ತೆ, ಮಳೆಯನ್ನುಂಟುಮಾಡುತ್ತಾ ಇರುತ್ತದೆ!

ತಾಭ್ಯ ಏವೇಮೇ ದರ್ಭಾದ್ಯೌಷಧಿಸಮೂಹಾ ಜಾಯಂತೇ.

ಆದರಿಂದಲೇ, ಈ ಹುಲ್ಲು ಮೊದಲಾದ ವನಸ್ಪತಿ ಸಮೂಹಗಳು ಉತ್ಪನ್ನವಾಗುತ್ತವೆ.

ಅಂದರೆ, ಅದೇ ಜಲ ಮತ್ತು ಪೃಥಿವಿಯ ಸಂಯೋಗದಿಂದ, ವನಸ್ಪತಿ ಮೊದಲಾದ ಅನೇಕ ಪದಾರ್ಥಗಳು ಹುಟ್ಟುತ್ತವೆ.

ಆ ಮೇಘವನ್ನೇ 'ವೃತ್ರಾಸುರ', ಎಂಬ ಹೆಸರಿನಿಂದ ಕರೆಯುತ್ತಾರೆ.

ಸೂರ್ಯ-ಮೇಘಗಳ ' ಪರಾಕ್ರಮ !'

[ಋಷಿಃ_ ಹಿರಣ್ಯಸ್ತೂಪ ಆಂಗಿರಸಃ ; ದೇವತಾ_ ಇಂದ್ರಃ ; ಛಂದಃ_ ತ್ರಿಷ್ಟುಪ್ ; ಸ್ವರಃ_ ಧೈವತಃ]

ನಾಸ್ಮೈ ವಿದ್ಯುನ್ನ ತನ್ಯತುಃ ಸಿಷೇಧ
ನ ಯಾಂ ಮಿಹಮಕಿರದ್ಧ್ರಾದುನಿಂ ಚ ।
ಇಂದ್ರಶ್ಚ ಯದ್ಯುಯುಧಾತೇ ಅಹಿಶ್ಚೋ-
ತಾಪರೀಭ್ಯೋ ಮಘವಾ ವಿ ಜಿಗ್ಯೇ ॥ ೬ ॥

[ಋಗ್ವೇದೇ ಮಂ. ೧, ಸೂ. ೩೨, ಮಂ. ೧೩]

[ಅರ್ಥ:_ "ವಿದ್ಯುತ್ತು ಇವನನ್ನು ನಿಷೇಧಿಸಲಾರದು ! ಮತ್ತು ಗರ್ಜನಸಹಿತವಾದ [ಮೇಘವೂ] ನಿಷೇಧಿಸಲಾರದು ! ಮತ್ತು ಮೇಘವು ಯಾವ ಅಸ್ಪಷ್ಟ ಶಬ್ದಯುಕ್ತ ಮಳೆಯನ್ನು ಬೀಳಿಸುತ್ತದೋ, (ಅದೂ ಕೂಡ,) ನಿಷೇಧಿಸಲಾರದು ! ಸೂರ್ಯನು, ಹಾಗೂ ಅಪೂರ್ಣಸಿದ್ಧತೆಯನ್ನುಳ್ಳ ಮೇಘವು ಪರಸ್ಪರ ಯುದ್ಧ ಮಾಡುತ್ತಾರೆ ! [ಆದರೆ,] ಪ್ರಕಾಶಯುಕ್ತನಾದ [ಸೂರ್ಯನೇ] ಗೆಲ್ಲುತ್ತಾನೆ !"

(ಋಗ್ವೇದ: ೧. ೩೨. ೧೩)]

ಭಾಷ್ಯಮ್_

(ನಾಸ್ಮೈ ವಿದ್ಯುತ್.) ವೃತ್ರೇಣ ಮಾಯಾರೂಪ-ಪ್ರಯುಕ್ತಾ ವಿದ್ಯುತ್ ತನ್ಯತುಶ್ಚಾಸ್ಮೈ ಸೂರ್ಯ್ಯಾಯೇಂ-ದ್ರಾಯ ನ ಸಿಷೇಧ ನಿಷೇದ್ಧುಂ ನ ಶಕ್ನೋತಿ.

ಭಾಷ್ಯ_

(ನಾಸ್ಮೈ ವಿದ್ಯುತ್.) ವೃತ್ರನಿಂದ ಮಾಯಾರೂಪದಲ್ಲಿ ಪ್ರಯೋಗಿಸಲ್ಪಟ್ಟ ವಿದ್ಯುತ್, ಹಾಗೂ ಗರ್ಜನೆಯು ಈ 'ಇಂದ್ರ', ಎಂದರೆ ಸೂರ್ಯನನ್ನು ಉಲ್ಲಂಘಿಸಲು ಸಮರ್ಥವಾಗಿಲ್ಲ!

ಅಂದರೆ, ಆ ವೃತ್ರನು ತನ್ನ ವಿದ್ಯುತ್ ಮತ್ತು ಗರ್ಜನರೂಪ ಭಯದಿಂದಲೂ ಕೂಡ, ಇಂದ್ರನನ್ನು ಎಂದಿಗೂ ಗೆಲ್ಲಲಾರನು!

ಅಹಿರ್ಮೇಘಃ, ಇಂದ್ರಃ ಸೂರ್ಯಶ್ಚ ದ್ವೌ ಪರಸ್ಪರಂ ಯುಯುಧಾತೇ.

(ಅಹಿಃ) ಮೇಘವು ಮತ್ತು **(ಇಂದ್ರಃ)** ಸೂರ್ಯನು ಇಬ್ಬರೂ ಪರಸ್ಪರ ಯುದ್ಧವನ್ನು ಮಾಡುತ್ತಾರೆ.

ಅಂದರೆ, ಈ ರೀತಿಯಾಗಿ ಅಲಂಕಾರರೂಪ ವರ್ಣನೆಯಿಂದ, **ಇಂದ್ರ** ಮತ್ತು **ವೃತ್ರ**_ ಈ ಇಬ್ಬರೂ ಪರಸ್ಪರ ಯುದ್ಧಮಾಡುವಂತೆ [ವ್ಯವಹಾರ] ಮಾಡುತ್ತಾರೆ. ಎಂದರೆ_

ಯದಾ ವೃತ್ರೋ ವರ್ಧತೇ, ತದಾ ಸೂರ್ಯ-ಪ್ರಕಾಶಂ ನಿವಾರಯತಿ.

ಯಾವಾಗ ವೃತ್ರನು ವರ್ಧಿಸುತ್ತಾನೋ, ಆಗ ಸೂರ್ಯನ ಪ್ರಕಾಶವನ್ನು ನಿವಾರಿಸುತ್ತಾನೆ.

ಅಂದರೆ, ಯಾವಾಗ ಮೇಘವು ವರ್ಧಿಸುತ್ತದೋ, ಆಗಂತೂ ಅದು ಸೂರ್ಯನ ಪ್ರಕಾಶವನ್ನು ದೂರ ಮಾಡುತ್ತದೆ. ಮತ್ತು_

ಯದಾ ಸೂರ್ಯಸ್ಯ ತಾಪರೂಪಸೇನಾ ವರ್ಧತೇ, ತದಾ ವೃತ್ರಂ ಮೇಘಂ ನಿವಾರಯತಿ.

ಯಾವಾಗ ಸೂರ್ಯನ ತಾಪದಂತಹ ಸೇನೆಯು ಬೆಳೆಯುತ್ತದೋ, ಆಗ '**ವೃತ್ರ**', ಎಂದರೆ ಮೇಘವನ್ನು ಅದು ನಿವಾರಿಸುತ್ತದೆ.

ಅಂದರೆ, ಯಾವಾಗ ಸೂರ್ಯನ ತಾಪ, ಎಂದರೆ **ತೇಜಸ್ಸು** ಹೆಚ್ಚುತ್ತದೋ, ಆಗ ಅದು **ವೃತ್ರ**, ಎಂದರೆ ಮೇಘವನ್ನು ದೂರಮಾಡಿಬಿಡುತ್ತದೆ!

ಪರಂತು ಮಘವಾ ಇಂದ್ರಃ ಸೂರ್ಯಸ್ತಂ ವೃತ್ರಂ ಮೇಘಂ ವಿಜಿಗ್ಯೇ ಜಿತವಾನ್ ಭವತಿ.

ಆದರೆ, **(ಮಘವಾ)** ಪ್ರಕಾಶಯುಕ್ತನಾದ **(ಇಂದ್ರಃ)** ಸೂರ್ಯನು ಆ '**ವೃತ್ರ**', ಎಂದರೆ ಮೇಘವನ್ನು **(ವಿಜಿಗ್ಯೇ)** ಗೆಲ್ಲುತ್ತಾನೆ!

ಅಂತತೋಽಸ್ಯೈವ ವಿಜಯೋ ಭವತಿ, ನ ಮೇಘಸ್ಯೇತಿ ॥ ೬ ॥

ಕೊನೆಯಲ್ಲಿ ಇವನದೇ ವಿಜಯವಾಗುತ್ತದೆ, ಮೇಘದ್ದಲ್ಲ!

ಅಂದರೆ, ಈ ಯುದ್ಧದಲ್ಲಿ ಕೊನೆಯಲ್ಲಿ '**ಇಂದ್ರ**', ಎಂದರೆ ಸೂರ್ಯನದೇ ವಿಜಯವಾಗುತ್ತದೆ! [೬]

ನಿರುಕ್ತಸಂಪ್ರದಾಯದವರ ಮೂರೇ ದೇವತಾಶಕ್ತಿಗಳು!

"ತಿಸ್ರ ಏವ ದೇವತಾ ಇತಿ ನೈರುಕ್ತಾಃ । ಅಗ್ನಿಃ ಪೃಥಿವೀ-
ಸ್ಥಾನೋ ವಾಯುರ್ವೇಂದ್ರೋ ವಾಂತರಿಕ್ಷಸ್ಥಾನಃ ಸೂರ್ಯೋ
ದ್ಯುಸ್ಥಾನ ಇತಿ ॥"

[ನಿರುಕ್ತೇ ಅ. ೭, ಖಂ. ೫]

[ಅರ್ಥ:_ " ಮೂರೇ ದೇವತೆಗಳಿದ್ದಾರೆ, ಎಂದು ನಿರುಕ್ತಸಂಪ್ರದಾಯದವರು [ಹೇಳುತ್ತಾರೆ.] ಅಗ್ನಿಯು ಪೃಥಿವಿಯಲ್ಲಿರುವವನು! ವಾಯು ಅಥವಾ ಇಂದ್ರನು* ಅಂತರಿಕ್ಷಸ್ಥಾನ ದಲ್ಲಿರುವವನು! ಮತ್ತು ಸೂರ್ಯನು 'ದ್ಯು'ಸ್ಥಾನದಲ್ಲಿರುವವನು, ಎಂದು."

(ನಿರುಕ್ತ : ೭. ೫)]

ಭಾಷ್ಯಮ್_

ಯೌ ವಾಯ್ವಿಂದ್ರೌ ಸೂರ್ಯಪವನಾವಂತ-ರಿಕ್ಷಸ್ಥಾನೌ ;

ಭಾಷ್ಯ_

'ವಾಯು' ಮತ್ತು 'ಇಂದ್ರ'ರು, ಎಂದರೆ ಸೂರ್ಯ[ನ ವಿದ್ಯುತ್] ಮತ್ತು ಪವನ **_ ಈ ಇಬ್ಬರೂ ಅಂತಿರಿಕ್ಷದಲ್ಲಿರುವವರಾಗಿರುತ್ತಾರೆ.

ಸೂರ್ಯಶ್ಚ ದ್ಯುಸ್ಥಾನ ಅರ್ಥಾತ್ ಪ್ರಕಾಶಸ್ಥಃ .

ಮತ್ತು ಸೂರ್ಯನು 'ದ್ಯುಸ್ಥಾನ', ಎಂದರೆ, ಪ್ರಕಾಶದಲ್ಲಿರುವವನಾಗಿರುತ್ತಾನೆ.

ಅಂದರೆ, ವಾಯು ಮತ್ತು ಸೂರ್ಯನ ಹೆಸರು 'ಇಂದ್ರ', ಎಂದಿರುತ್ತದೆ.+

ವಾಯುವು ಅಂತರಿಕ್ಷದಲ್ಲೂ ಮತ್ತು ಸೂರ್ಯನು ಪ್ರಕಾಶಸ್ಥಾನದಲ್ಲೂ ಸ್ಥಿತರಾಗಿರುತ್ತಾರೆ.

ಈ ವೃತ್ರಾಸುರನ, ಹಾಗೂ ಇಂದ್ರನ ಯುದ್ಧವು ಆಕಾಶದಲ್ಲಿ ಆಗುತ್ತಿರುತ್ತದೆ. ಇದರ ಅಂತದಲ್ಲಿ ಮೇಘದ ಪರಾಜಯವೂ, ಮತ್ತು ಸೂರ್ಯನ ವಿಜಯವೂ ನಿಃಸಂದೇಹವಾಗಿ ಆಗುತ್ತದೆ !

ಇತ್ಯಾದಯ ಏತದ್ವಿಷಯಾ ವೇದೇಷು ಬಹವೋ ಮಂತ್ರಾಃ ಸಂತಿ.

ಈ ಮೊದಲಾಗಿ, ವೇದಗಳಲ್ಲಿ ಈ ವಿಷಯಕ ವಾದ ಬಹಳ ಮಂತ್ರಗಳಿವೆ.

* ಎಂದರೆ ವಿದ್ಯುತ್ _ಅನು.

** ಇಲ್ಲಿ ಕ್ರಮಪರಿವರ್ತನವಾಗಿದೆ _ಅನು.

+ ಪ್ರಸ್ತುತ ಸಂದರ್ಭದಲ್ಲಿ ಈ ಅರ್ಥವು ಅನಾವಶ್ಯಕ _ಅನು.

ಏವಂ ಸತ್ಯಶಾಸ್ತ್ರೇಷು ಪರಮೋತ್ತಮಾಯಾ-ಮಲಂಕಾರಯುಕ್ತಾಯಾಂ ಕಥಾಯಾಂ ಸತ್ಯಾಂ;

ಹೀಗೆ, ಸತ್ಯಶಾಸ್ತ್ರಗಳಲ್ಲಿ ಪರಮೋತ್ತಮ ಅಲಂಕಾರದಿಂದ ಕೂಡಿರುವ ಕಥೆಯು ಇದ್ದರೂ ಕೂಡ;

ಬ್ರಹ್ಮವೈವರ್ತಾದಿನವೀನಗ್ರಂಥೇಷು ಪುರಾಣಾ-ಭಾಸೇಷ್ವೇತಾ ಅನ್ಯಥಾ ಕಥಾ ಉಕ್ತಾಸ್ತಾಃ ಶಿಷ್ಟೈಃ ಕದಾಚಿನ್ನೈವಾಂಗೀಕರ್ತ್ತವ್ಯಾ ಇತಿ.

ಪ್ರಾಚೀನತ್ವದ ಭ್ರಮೆ ಹುಟ್ಟಿಸುವಂತಹ ಈ ಬ್ರಹ್ಮವೈವರ್ತ[ಪುರಾಣ] ಮೊದಲಾದ ನವೀನಗ್ರಂಥಗಳಲ್ಲಿ ಯಾವ ಕಥೆಗಳು ವಿರುದ್ಧವಾಗಿ ಹೇಳಲ್ಪಟ್ಟಿವೆಯೋ, ಅವು ಸಜ್ಜನರಿಂದ ಎಂದಿಗೂ ಅಂಗೀಕರಿಸಲ್ಪಡಲೇ ಬಾರದು!

ಅಂದರೆ, ಸತ್ಯಗ್ರಂಥಗಳ ಈ ಅಲಂಕಾರರೂಪ ಕಥೆಯನ್ನು ಬಿಟ್ಟು, ಹುಡುಗರಂತೆ ಅಲ್ಪಬುದ್ಧಿಯುಳ್ಳ ಜನರು **ಬ್ರಹ್ಮವೈವರ್ತ** ಮತ್ತು **ಶ್ರೀಮದ್ಭಾಗವತ** ಮೊದಲಾದ ಗ್ರಂಥಗಳಲ್ಲಿ ಯಾವ ಸುಳ್ಳು ಕಥೆಗಳನ್ನು ಬರೆದಿಟ್ಟಿದ್ದಾರೋ, ಅವನ್ನು ಶ್ರೇಷ್ಠಪುರುಷರು ಎಂದಿಗೂ ಅಂಗೀಕರಿಸಬಾರದು!

[೪] ದೇವಾಸುರಸಂಗ್ರಾಮದ ಮಿಥ್ಯಾಕಥೆ!

ನಾಲ್ಕನೆಯದಾದ, ದೇವಾಸುರಸಂಗ್ರಾಮದ ಕಥೆಯು ರೂಪಕಾಲಂಕಾರದ್ದಾಗಿದೆ. ಇದನ್ನೂ ಕೂಡ, [ಸರಿಯಾಗಿ] ತಿಳಿಯದೆಯೇ, ಪ್ರಮಾದೀಜನರು ಕೆಡಿಸಿಬಿಟ್ಟಿದ್ದಾರೆ! ಹೇಗೆಂದರೆ_

"ದೈತ್ಯರ ಒಂದು ಸೇನೆ ಇತ್ತು! ಅದರ ಪುರೋಹಿತರು ಶುಕ್ರಾಚಾರ್ಯರಾಗಿದ್ದರು. ಮತ್ತು ಅವರು ದಕ್ಷಿಣದೇಶದಲ್ಲಿ ವಾಸಮಾಡುತ್ತಿದ್ದರು.*

"ಎರಡನೆಯದು ದೇವತೆಗಳ ಸೇನೆಯಾಗಿತ್ತು! ಅವರ ರಾಜಾ ಇಂದ್ರನೂ, ಸೇನಾಪತಿಯು ಅಗ್ನಿಯೂ, ಹಾಗೂ ಪುರೋಹಿತನು ಬೃಹಸ್ಪತಿಯೂ ಆಗಿದ್ದರು.

"ಆ ದೇವತೆಗಳಿಗೆ ವಿಜಯವನ್ನು ದೊರಕಿಸುವುದಕ್ಕಾಗಿ, ಆರ್ಯಾವರ್ತ್ತದ ರಾಜರೂ ಕೂಡ, ಹೋಗುತ್ತಿದ್ದರು.

"ಅಸುರರು ತಪಸ್ಸನ್ನು ಮಾಡಿ, ಬ್ರಹ್ಮಾ, ವಿಷ್ಣು, ಮತ್ತು ಮಹಾದೇವ ಮೊದಲಾದವರಿಂದ ವರಗಳನ್ನು ಕೇಳಿಕೊಂಡು ಬಿಡುತ್ತಿದ್ದರು!

*"ಮತ್ತು ಅವರನ್ನು** ಕೊಲ್ಲುವುದಕ್ಕಾಗಿ ವಿಷ್ಣುವು ಅವತಾರಗಳನ್ನು ಧಾರಣ ಮಾಡಿಕೊಂಡು, ಪೃಥಿವಿಯ ಭಾರವನ್ನು ಇಳಿಸುತ್ತಿದ್ದನು!"*

---

* ಇದು ಅನುಸಂಧಾನಕ್ಕೆ ಯೋಗ್ಯವಾಗಿದೆ. ಅಸುರರು ವರ್ತಮಾನ ಮಧ್ಯಪೂರ್ವದ ದೇಶಗಳಲ್ಲಿ ವಾಸಿಸುತ್ತಿದ್ದರೆಂದು ಇತಿಹಾಸಕಾರರ ಅಭಿಪ್ರಾಯವಿದೆ. ದೇವತೆಗಳು ಭಾರತದ ಉತ್ತರದಲ್ಲಿ ಹಿಮಾಲಯಾ ಪ್ರದೇಶದ ನಿವಾಸಿಗಳೆಂಬುದು ನಿರ್ವಿವಾದವಾಗಿಯೇ ಇದೆ _ಅನು.

** ಎಂದರೆ, ಅಸುರರನ್ನು _ಅನು.

ಏವಮೇವ ನವೀನೇಷು ಗ್ರಂಥೇಷೂಕ್ತಾ ಅನೇಕವಿಧಾ ದೇವಾಸುರಸಂಗ್ರಾಮ ಕಥಾ ಅನ್ಯಥೈವ ಸಂತಿ.

ಹೀಗೆಯೇ, ನವೀನಗ್ರಂಥಗಳಲ್ಲಿ ಹೇಳಲ್ಪಟ್ಟ ಅನೇಕ ವಿಧವಾದ **ದೇವಾಸುರಸಂಗ್ರಾಮ**ದ ಕಥೆಗಳು ಮಿಥ್ಯೆಯೇ ಆಗಿವೆ.

ತಾ ಅಪಿ ಬುದ್ಧಿಮದ್ಭಿರ್ಮನುಷ್ಯೈರಿತರೈಶ್ಚ ನೈವ ಮಂತವ್ಯಾಃ .

ಅವುಗಳೂ ಕೂಡ, ಬುದ್ಧಿವಂತರಾದ ಮನುಷ್ಯರಿಂದಲೂ, ಮತ್ತು ಇತರರಿಂದಲೂ ಕೂಡ, ಅಂಗೀಕರಿಸಲ್ಪಡಲೇ ಬಾರದು!

ಅಂದರೆ, ಈ ಎಲ್ಲ ಪುರಾಣದ ಬುರುಡೆಗಳನ್ನು ವ್ಯರ್ಥವೆಂದು ತಿಳಿದು, ಬಿಟ್ಟುಬಿಡಬೇಕು!

ಕುತಃ?

ಏಕೆಂದರೆ_

ತಾಸಾಮಪ್ಯಲಂಕಾರಯೋಗಾತ್.

ಅವುಗಳಲ್ಲಿ ಕೂಡ, ಅಲಂಕಾರದ ಯೋಜನೆ ಇದೆ.

ಆದುದರಿಂದ, ಕೆಳಗೆ ಬರೆದಿರುವಂತೆ, ಸತ್ಯ ಗ್ರಂಥಗಳ ಕಥೆಗಳು ಯಾವುವು ಇವೆಯೋ, ಅವುಗಳ ಸ್ವೀಕಾರವನ್ನು ಮಾಡುವುದು ಎಲ್ಲರಿಗೂ ಉಚಿತ ವಾಗಿರುತ್ತದೆ.

ತದ್ಯಥಾ_

ಅದು ಹೇಗೆಂದರೆ_

ಶತಪಥಬ್ರಾಹ್ಮಣದಲ್ಲಿ ಸತ್ಯದೃಷ್ಟಾಂತದ ಮೂಲ

"ದೇವಾಸುರಾ ಸಂಯತ್ತಾ ಆಸನ್ ॥೧॥"

[ಶತಪಥಬ್ರಾಹ್ಮಣೇ ಕಾಂ. ೧೩, ಅ. ೩, ಬ್ರಾ. ೪, ಕಂ. ೧]

[ಅರ್ಥ:_ "ದೇವಾಸುರರು ಸಜ್ಜಾಗಿದ್ದರು."

(ಶತಪಥಬ್ರಾಹ್ಮಣಃ ೧೩. ೩. ೪. ೧)]

ಭಾಷ್ಯಮ್_

ದೇವಾ ಅಸುರಾಶ್ಚ ಸಂಯತ್ತಾ, ಸಜ್ಜಾ ಯುದ್ಧಂ ಕರ್ತುಂ ತತ್ಪರಾ ಆಸನ್, ಭವಂತೀತಿ ಶೇಷಃ .

ಭಾಷ್ಯ_

ದೇವತೆಗಳು ಮತ್ತು ಅಸುರರು **(ಸಂಯತ್ತಾಃ)** ಸಜ್ಜಾಗಿದ್ದರು. ಎಂದರೆ, ಯುದ್ಧವನ್ನು ಮಾಡಲು ತತ್ಪರರಾಗಿದ್ದರು; ಆಗಿರುತ್ತಾರೆ, ಎಂದು [ತಿಳಿಯಬೇಕು!]

ಅಂದರೆ, ದೇವತೆಗಳು ಮತ್ತು ಅಸುರರು ತಮ್ಮ ತಮ್ಮ ಶಿಬಿರಗಳಲ್ಲಿ ಸಿದ್ಧರಾಗಿ, ಪ್ರತಿನಿತ್ಯವೂ ಯುದ್ಧವನ್ನು ಮಾಡುತ್ತಿರುತ್ತಾರೆ.

ಮತ್ತು ಇಂದ್ರ, ಹಾಗೂ ವೃತ್ರಾಸುರನ ಯಾವ ಕಥೆಯನ್ನು ಮೇಲೆ ಬರೆದಿದ್ದೇವೋ, ಅದನ್ನೂ ಕೂಡ, 'ದೇವಾಸುರ-ಸಂಗ್ರಾಮ'ರೂಪದಂತೆ, ಎಂದು ತಿಳಿಯಿರಿ! ಏಕೆಂದರೆ, ಸೂರ್ಯನ ಕಿರಣವು **'ದೇವ'**, ಎಂಬ ಸಂಜ್ಞೆಯನ್ನುಳ್ಳದ್ದೂ, ಹಾಗೂ ಮೇಘದ ಅವಯವವು, ಎಂದರೆ ಮೋಡವು **'ಅಸುರ'**, ಎಂಬ ಸಂಜ್ಞೆಯನ್ನುಳ್ಳದ್ದೂ ಆಗಿವೆ. ಅವುಗಳ ಪರಸ್ಪರ ಯುದ್ಧದ ವರ್ಣನೆಯನ್ನು ಮೊದಲೇ ಮಾಡಿದ್ದೇವೆ.

ಕೇ ತೇ ದೇವಾಸುರಾ ಇತ್ಯತ್ರೋಚ್ಯತೇ_

ಆ ದೇವಾಸುರರು ಯಾರು? ಎಂಬುದಕ್ಕೆ ಇಲ್ಲಿ ಉತ್ತರ ಹೇಳಲಾಗುತ್ತದೆ_

ಅಂದರೆ, **ನಿಘಂಟು** ಮೊದಲಾದ ಸತ್ಯಶಾಸ್ತ್ರಗಳಲ್ಲಿ ಸೂರ್ಯನು **'ದೇವ'**, ಎಂದೂ, ಮತ್ತು ಮೇಘವು **'ಅಸುರ'**, ಎಂದೂ ಪ್ರಸಿದ್ಧವಾಗಿದೆ.

ಈ ಎಲ್ಲಾ ವಚನಗಳ ಅಭಿಪ್ರಾಯವೇನೆಂದರೆ_ ಮನುಷ್ಯರು **ದೇವಾಸುರ-ಸಂಗ್ರಾಮದ** ಸ್ವರೂಪವನ್ನು ಸರಿ ಸರಿಯಾಗಿ ತಿಳಿದುಕೊಳ್ಳಲಿ, ಎಂದು.

ಹೇಗೆಂದರೆ_

'ದೇವ' ಎಂದರೆ ಯಾರು? 'ಅಸುರ' ಎಂದರೆ ಯಾರು?

"ವಿದ್ವಾಗ್ಂಸೋ ಹಿ ದೇವಾಃ ॥"

[ಶತಪಥಬ್ರಾಹ್ಮಣೇ ಕಾಂ. ೩, ಅ. ೭, ಬ್ರಾ. ೩, ಕಂ. ೧೦]

[ಅರ್ಥ:_ "ವಿದ್ವಾಂಸರೇ ದೇವತೆಗಳಾಗಿರುತ್ತಾರೆ."

(ಶತಪಥಬ್ರಾಹ್ಮಣಃ ೩. ೭. ೩. ೧೦)]

ಭಾಷ್ಯಮ್ _

ಹೀತಿ ನಿಶ್ಚಯೇನ ವಿದ್ವಾಂಸೋ ದೇವಾಸ್ತ-ದ್ವಿಪರೀತಾ ಅವಿದ್ವಾಂಸೋऽಸುರಾಃ .

ಯೇ ದೇವಾಸ್ತೇ ವಿದ್ಯಾವತ್ತ್ವಾತ್ ಪ್ರಕಾಶ-ವಂತೋ ಭವಂತಿ.

ಯೇ ಹ್ಯವಿದ್ವಾಂಸಸ್ತೇ ಖಲ್ವವಿದ್ಯಾವತ್ತ್ವಾತ್ ಜ್ಞಾನರಹಿತಾಂಧಕಾರಿಣೋ ಭವಂತಿ.

ಭಾಷ್ಯ _

'ಹಿ', ಎಂದರೆ ನಿಶ್ಚಯಪೂರ್ವಕವಾಗಿ, ವಿದ್ವಾಂಸರೇ **'ದೇವತೆ'**ಗಳು [ಮತ್ತು] ಅವರಿಗೆ ವಿರುದ್ಧವಾದ ಅವಿದ್ವಾಂಸರೇ **'ಅಸುರ'**ರು!

ಯಾರು ದೇವತೆಗಳಾಗಿರುತ್ತಾರೋ, ಅವರು ವಿದ್ಯೆಯನ್ನುಳ್ಳವರಾದುದರಿಂದ, ಪ್ರಕಾಶವಂತರಾಗಿರುತ್ತಾರೆ!

ಆದರೆ, ಯಾರಂತೂ ಅವಿದ್ವಾಂಸರಾಗಿರುತ್ತಾರೋ, ಅವರಂತೂ ಅವಿದ್ಯೆಯನ್ನುಳ್ಳವರಾದ ಕಾರಣದಿಂದ, ಜ್ಞಾನರಹಿತರಾಗಿ, ಅಂಧಕಾರವನ್ನುಳ್ಳವರಾಗಿರುತ್ತಾರೆ!

ಯೇಷಾಮುಭಯೇಷಾಂ ಪರಸ್ಪರಂ ಯುದ್ಧ-ಮಿವ ವರ್ತ್ತತೇಽಯಮೇವ ದೈವಾಸುರಸಂಗ್ರಾಮಃ .*

ಈ ಇಬ್ಬರ ನಡುವೆ ಪರಸ್ಪರ ಯಾವುದು ಯುದ್ಧದಂತೆ ನಡೆಯುತ್ತದೋ, ಅದೇ 'ದೈವಾಸುರ-ಸಂಗ್ರಾಮ'* [ಆಗಿರುತ್ತದೆ.]

ಸತ್ಯವಾದಿಗಳು ಮತ್ತು ಅಸತ್ಯವಾದಿಗಳ ನಡುವೆ ಯುದ್ಧ!

"ದ್ವಯಂ ವಾ ಇದಂ ನ ತೃತೀಯಮಸ್ತಿ । ಸತ್ಯಂ ಚಾನೃತಂ ಚ ।
ಸತ್ಯಮೇವ ದೇವಾ ಅನೃತಂ ಮನುಷ್ಯಾಃ । 'ಇದಮಹಮನೃತಾತ್
ಸತ್ಯಮುಪೈಮೀ'ತಿ ತನ್ಮನುಷ್ಯೇಭ್ಯೋ ದೇವಾನುಪೈತಿ ॥"

[ಶತಪಥಬ್ರಾಹ್ಮಣೇ ಕಾಂ. ೧, ಅ. ೧, ಬ್ರಾ. ೧, ಕಂ. ೪]

[ಅರ್ಥ:_ "ಇದು ಎರಡೇ ಆಗಿದೆ; ಮೂರನೆಯದಿಲ್ಲ! ಸತ್ಯ ಮತ್ತು ಅನೃತ! ಸತ್ಯವೇ ದೇವತೆಗಳು; ಅನೃತವೇ ಮನುಷ್ಯರು! 'ಇಗೋ! ನಾನು ಅನೃತದಿಂದ ದೂರವಾಗಿ ಸತ್ಯವನ್ನು ಸೇರುತ್ತೇನೆ.' ಎಂದರೆ ಅವನು ಮನುಷ್ಯರಿಂದ ದೂರನಾಗಿ ದೇವತೆಗಳನ್ನು ಸೇರುತ್ತಾನೆ."

(ಶತಪಥಬ್ರಾಹ್ಮಣ: ೧. ೧. ೧. ೪)]

"ಸ ವೈ ಸತ್ಯಮೇವ ವದೇತ್ । ಏತದ್ಧ ವೈ ದೇವಾ ವ್ರತಂ ಚರಂತಿ
ಯತ್ಸತ್ಯಮ್ । ತಸ್ಮಾತ್ತೇ ಯಶೋ ಯಶೋ ಹ ಭವತಿ ಯ ಏವಂ
ವಿದ್ವಾನ್ತ್ಸತ್ಯಂ ವದತಿ ॥"

[ಶತಪಥಬ್ರಾಹ್ಮಣೇ ಕಾಂ. ೧, ಅ. ೧, ಬ್ರಾ. ೧, ಕಂ. ೫]

[ಅರ್ಥ:_ "ಅವನು ಖಂಡಿತವಾಗಿ ಸತ್ಯವನ್ನೇ ಹೇಳಬೇಕು! ದೇವತೆಗಳು ಯಾವ ವ್ರತವನ್ನು ಆಚರಿಸುತ್ತಾರೋ, ಅದು ಖಂಡಿತವಾಗಿ ಸತ್ಯವೇ ಆಗಿರುತ್ತದೆ! ಯಾವನು ಇದನ್ನು ತಿಳಿದುಕೊಂಡು, ಸತ್ಯವನ್ನು ಹೇಳುತ್ತಾನೋ, ಅದರಿಂದ ಅವನಿಗೆ ನಿಶ್ಚಯವಾಗಿ ಯಶಸ್ಸೇ ಯಶಸ್ಸುಂಟಾಗುತ್ತದೆ!

(ಶತಪಥಬ್ರಾಹ್ಮಣ: ೧. ೧. ೧. ೫)]

---

* ದೇವಾನಾಮಸುರಾಣಾಂಶ್ಚ ಸಂಗ್ರಾಮೋ ದೇವಾಸುರಸಂಗ್ರಾಮಃ. ದೇವಾಶ್ಚಾಸುರಾಶ್ಚ ಯೋದ್ಧಾರೋಽಸ್ಯ ಸಂಗ್ರಾಮಸ್ಯೇತಿ 'ದೈವಾಸುರಃ ಸಂಗ್ರಾಮಃ' _ಯು. ಮೀ.

* 'ದೇವ'ರ, ಹಾಗೂ 'ಅಸುರ'ರ ಸಂಗ್ರಾಮವು 'ದೇವಾಸುರ-ಸಂಗ್ರಾಮ!' ದೇವರೂ, ಅಸುರರೂ, ಯಾವ ಸಂಗ್ರಾಮದಲ್ಲಿ ಇರುತ್ತಾರೋ, ಅದು 'ದೈವಾಸುರ-ಸಂಗ್ರಾಮ' _ಯು. ಮೀ.

ಭಾಷ್ಯಮ್_

ಯೇ ಸತ್ಯವಾದಿನಃ ಸತ್ಯಮಾನಿನಃ ಸತ್ಯಕಾರಿಣಶ್ಚ ತೇ ದೇವಾಃ ;

ಭಾಷ್ಯ_

ಯಾರು ಸತ್ಯವಾದಿಗಳೂ, ಸತ್ಯಮಾನಿಗಳೂ ಮತ್ತು ಸತ್ಯಕರ್ತರೂ ಆಗಿರುತ್ತಾರೋ, ಅವರು **'ದೇವತೆಗಳು'**, [ಎನಿಸುತ್ತಾರೆ.]

ಅಂದರೆ, ಯಾವ ಜನರು ವಿದ್ವಾಂಸರೂ, ಸತ್ಯವನ್ನು ಹೇಳುವವರೂ, ಸತ್ಯವನ್ನು ಅಂಗೀಕರಿಸುವವರೂ, ಹಾಗೂ ಸತ್ಯಕರ್ಮವನ್ನು ಮಾಡುವವರೂ ಆಗಿರುತ್ತಾರೋ, ಅವರಂತೂ **'ದೇವತೆಗಳು'**, ಎನಿಸುತ್ತಾರೆ!

ಯೇ ಚಾನೃತವಾದಿನೋಽನೃತಕಾರಿಣೋಽನೃತ-ಮಾನಿನಶ್ಚ ತೇ ಮನುಷ್ಯಾ ಅಸುರಾ ಏವ.

ಮತ್ತು ಯಾರು ಅನೃತವಾದಿಗಳೂ, ಅನೃತಕರ್ತರೂ, ಮತ್ತು ಅನೃತಮಾನಿಗಳೂ ಆಗಿರುತ್ತಾರೋ, ಆ **'ಮನುಷ್ಯರು'**, **'ಅಸುರರೇ'** ಆಗಿರುತ್ತಾರೆ!

ಅಂದರೆ, ಯಾರು ಅವಿದ್ವಾಂಸರೂ, ಸುಳ್ಳನ್ನು ಹೇಳುವವರೂ, ಸುಳ್ಳನ್ನು ಅಂಗೀಕರಿಸುವವರೂ, ಮತ್ತು ಮಿಥ್ಯಾಚರಣೆಯನ್ನು ಮಾಡುವವರೂ ಆಗಿರುತ್ತಾರೋ, ಅವರು **'ಅಸುರರು'**, ಎಂದು ಕರೆಯಲ್ಪಡುತ್ತಾರೆ!

ತಯೋರಪಿ ಪರಸ್ಪರಂ ವಿರೋಧೋ ಯುದ್ಧ-ಮಿವ ಭವತ್ಯೇವ.

ಅವರಿಬ್ಬರ [ನಡುವೆ] ಕೂಡ, ಪರಸ್ಪರ ವಿರೋಧವು, ಯುದ್ಧದಂತೆ, ಉಂಟಾಗೇ ಆಗುತ್ತದೆ!

ಅಂದರೆ, ಅವರ [ನಡುವೆ] ಪರಸ್ಪರವಾಗಿ ನಿತ್ಯವೂ [ಯಾವ] ವಿರೋಧವುಂಟಾಗುತ್ತದೋ, ಅದೇ ಅವರ ಯುದ್ಧದಂತೆ ಇರುತ್ತದೆ!

ಮನಸ್ಸು, ಇಂದ್ರಿಯ ಮತ್ತು ಪ್ರಾಣಗಳ ನಡುವೆ ಯುದ್ಧ!

"ಮನೋ ಹ ವೈ ದೇವಾ ಮನುಷ್ಯಸ್ಯ [ಜಾನಂತಿ] ॥"

[ಶತಪಥಬ್ರಾಹ್ಮಣೇ ಕಾಂ. ೧, ಅ. ೧, ಬ್ರಾ. ೧, ಕಂ. ೭]

[ಅರ್ಥ:_ "ನಿಶ್ಚಯವಾಗಿ ದೇವತೆಗಳು ಮನುಷ್ಯನ ಮನಸ್ಸನ್ನು ತಿಳಿಯುತ್ತಾರೆ."

(ಶತಪಥಬ್ರಾಹ್ಮಣಃ ೧. ೧. ೧. ೭)]

ಮನುಷ್ಯಸ್ಯ ಯನ್ಮನಃ ತದ್ದೇವಾಃ ;

ಮನುಷ್ಯನ ಯಾವ ಮನಸ್ಸು ಇದೆಯೋ, ಅದು **'ದೇವತೆಗಳು'**, ಎನಿಸುತ್ತದೆ.

ಅಂದರೆ, ಹೀಗೆಯೇ ಮನುಷ್ಯನ ಮನಸ್ಸು ಮತ್ತು ಜ್ಞಾನೇಂದ್ರಿಯಗಳೂ ಕೂಡ, **'ದೇವತೆಗಳು'**, ಎನಿಸುತ್ತವೆ. ಅವುಗಳಲ್ಲಿ ಮನಸ್ಸು ರಾಜನೂ, ಹಾಗೂ ಇಂದ್ರಿಯಗಳು ಸೇನೆಯೂ ಆಗಿರುತ್ತವೆ.

ಪ್ರಾಣಾ ಅಸುರಾಃ ;

ಪ್ರಾಣಗಳು **'ಅಸುರರು'**, [ಎನಿಸುತ್ತವೆ.]

ಅಂದರೆ, ಪ್ರಾಣಗಳೆಲ್ಲದರ ಹೆಸರು **'ಅಸುರ'**, ಎಂದಿರುತ್ತದೆ. ಅವುಗಳಲ್ಲಿ **'ಪ್ರಾಣ'**ವು ರಾಜನೂ, ಹಾಗೂ **'ಅಪಾನ'** ಮೊದಲಾದುವು ಸೇನೆಯೂ ಆಗಿರುತ್ತವೆ.

ಏತಯೋರಪಿ ವಿರೋಧೋ ಭವತಿ.

ಇವರಿಬ್ಬರ* [ನಡುವೆ] ಕೂಡ, ವಿರೋಧ ವುಂಟಾಗುತ್ತದೆ.

ಅಂದರೆ, ಇವರದೂ ಕೂಡ, ಪರಸ್ಪರ ವಾಗಿ ವಿರೋಧರೂಪದ ಯುದ್ಧವುಂಟಾಗುತ್ತಾ ಇರುತ್ತದೆ!

ಮನಸಾ ವಿಜ್ಞಾನಬಲೇನ ಪ್ರಾಣಾನಾಂ ನಿಗ್ರಹೋ ಭವತಿ ;

ಮನಸ್ಸಿನ ವಿಜ್ಞಾನದ ಬಲದಿಂದ ಪ್ರಾಣಗಳ ನಿಗ್ರಹವಾಗುತ್ತದೆ.

ಪ್ರಾಣಬಲೇನ ಮನಸಶ್ಚ ;

ಮತ್ತು ಪ್ರಾಣ[ವಿಜ್ಞಾನ]ದ ಬಲದಿಂದ ಮನಸ್ಸಿನ [ನಿಗ್ರಹವಾಗುತ್ತದೆ.]

ಇತಿ ಯುದ್ಧಮಿವ ಪ್ರವರ್ತ್ತತೇ ॥೧॥

ಹೀಗೆ, ಯುದ್ಧದಂತೆ ನಡೆಯುತ್ತಿರುತ್ತದೆ!

ಅಂದರೆ, ಮನಸ್ಸಿನ ವಿಜ್ಞಾನವನ್ನು ಹೆಚ್ಚಿಸುವುದ ರಿಂದ, ಪ್ರಾಣಗಳ ಮೇಲೆ ಜಯವೂ, ಮತ್ತು ಪ್ರಾಣಗಳ ವಿಜ್ಞಾನವು ಹೆಚ್ಚುವುದರಿಂದ, ಮನಸ್ಸಿನ ಮೇಲೆ ವಿಜಯವೂ ಆಗಿ ಹೋಗುತ್ತದೆ.** [೧]

'ದೇವ'-'ಅಸುರ'ರ ಬಗ್ಗೆ ನಿರುಕ್ತದಲ್ಲಿ ವಿಶಿಷ್ಟಾರ್ಥವಿವರಣೆ

ಜ್ಞಾನೇಂದ್ರಿಯ-ಕರ್ಮೇಂದ್ರಿಯಗಳ ನಡುವಣ ಯುದ್ಧ!

"ಅಸುರಾನಭಿಭವೇಮ ದೇವಾಃ । ಅಸುರಾ ಅಸುರತಾ ಸ್ಥಾನೇಷ್ವಸ್ತಾಃ
ಸ್ಥಾನೇಭ್ಯ ಇತಿ ವಾ । ಅಪಿ ವಾ ಸುರಿತಿ ಪ್ರಾಣನಾಮ । ಅಸ್ತಃ
ಶರೀರೇ ಭವತಿ, ತೇನ ತದ್ವಂತಃ । ಸೋರ್ದೇವಾನಸೃಜತ
ತತ್ಸುರಾಣಾಂ ಸುರತ್ವಮ್ । ಅಸೋರಸುರಾನಸೃಜತ ತದಸುರಾಣಾ-
ಮಸುರತ್ವಮ್ ಇತಿ ವಿಜ್ಞಾಯತೇ ॥೨॥"

[ನಿರುಕ್ತೇ ಅ. ೩, ಖಂ. ೮]

---

* ಎಂದರೆ, ಮನಸ್ಸು ಮತ್ತು ಪ್ರಾಣಗಳ _ಅನು.

** ಈ ವಿದ್ಯೆಯನ್ನು ಎಲ್ಲರೂ ಕಲಿಯಬೇಕು _ಅನು.

[ಅರ್ಥ:_ "ಎಲೈ ದೇವತೆಗಳೇ! ನಾವು ಅಸುರರನ್ನು ಸೋಲಿಸೋಣ! 'ಅಸುರರು', ಎಂದರೆ_ ಅಸುವಿನಲ್ಲಿ ಮಗ್ನರಾದವರು ; ಅಥವಾ ಸ್ಥಾನಗಳಲ್ಲಿ ಎಸೆಯಲ್ಪಟ್ಟವರು ; ಅಥವಾ ಸ್ಥಾನಗಳಿಂದ ದೂರ ಇಡಲ್ಪಟ್ಟವರು. ಮತ್ತು 'ಸು', ಎಂಬುದು ಪ್ರಾಣಕ್ಕೆ ಹೆಸರು. [ಇದು] ಶರೀರದಲ್ಲಿ ಎಸೆಯಲ್ಪಟ್ಟಿರುತ್ತದೆ. ಆದುದರಿಂದ, ಅದರೊಡನೆ* ಕೂಡಿರುತ್ತದೆ. 'ಸು' ಇಂದ ದೇವತೆಗಳನ್ನು ಸೃಷ್ಟಿಸಿದನು. ಅದು 'ಸುರರ' ಸುರತ್ವವಾಗಿರುತ್ತದೆ. 'ಅಸು'ವಿನಿಂದ ಅಸುರರನ್ನು ಸೃಷ್ಟಿಸಿದನು! ಅದು 'ಅಸುರರ' ಅಸುರತ್ವ ಆಗಿರುತ್ತದೆ. ಹೀಗೆ ತಿಳಿದುಬರುತ್ತದೆ."

(ನಿರುಕ್ತ: ೩. ೮)]

"ದೇವಾನಾಮಸುರತ್ವಮೇಕತ್ವಂ ಪ್ರಜ್ಞಾವತ್ತ್ವಂ ವಾಽನವತ್ತ್ವಂ ವಾಽಪಿ ವಾ । ಸುರಿತಿ ಪ್ರಜ್ಞಾನಾಮ । ಅಸ್ಯತ್ಯನರ್ಥಾನ್ । ಅಸ್ತಾಶ್ಚಾಸ್ಯಾಮರ್ಥಾಃ । ಅಸುರತ್ವಮಾದಿಲುಪ್ತಮ್ ॥ ೩ ॥"

[ನಿರುಕ್ತೇ ಅ. ೧೦, ಖಂ. ೩೪]

[ಅರ್ಥ:_ "ದೇವತೆಗಳ ಅಸುರತ್ವವು 'ಐಕ್ಯತೆ', ಎನಿಸುತ್ತದೆ. ಅಥವಾ ಪ್ರಜ್ಞೆಯಾಗಿರುತ್ತದೆ. ಅಥವಾ ಪ್ರಾಣತ್ವ ಆಗಿರುತ್ತದೆ. ಮತ್ತು 'ಸು', ಎಂಬುದು ಪ್ರಜ್ಞೆಯ ಹೆಸರಾಗಿದೆ. ಅನರ್ಥಗಳನ್ನು ಎಸೆಯುತ್ತದೆ. ಮತ್ತು ಇದರಲ್ಲಿ ಅರ್ಥಗಳು ಇಡಲ್ಪಟ್ಟಿರುತ್ತವೆ. [ಇಲ್ಲಿ] ಅಸುರತ್ವದ ಆದಿಯು [= ಅಕಾರವು] ಲುಪ್ತವಾಗಿದೆ."

(ನಿರುಕ್ತ: ೧೦. ೩೪)]

ಭಾಷ್ಯಮ್_	ಭಾಷ್ಯ_
(ಸೋರ್ದೇವಾನ್.) ಪ್ರಕಾಶಾಖ್ಯಾತ್ ಸೋರ್ದೇವಾನ್ ಮನಃಷಷ್ಠಾನೀಂದ್ರಿಯಾಣೀಶ್ವರೋಽಸೃಜತ ;	(ಸೋರ್ದೇವಾನ್.) ಪ್ರಕಾಶ, ಎಂದು ಕರೆಯಲ್ಪಡುವ 'ಸು'ಇಂದ 'ದೇವರನ್ನು', ಎಂದರೆ ಮನಸ್ಸಿನಿಂದ ಕೂಡಿದ ಆರು ಇಂದ್ರಿಯಗಳನ್ನು ಈಶ್ವರನು ಸೃಜಿಸಿದನು ;
ಅತಸ್ತೇ ಪ್ರಕಾಶಕಾರಕಾಃ .	ಆದುದರಿಂದ, ಅವು ಪ್ರಕಾಶಮಾಡುವಂತಹವಾಗಿರುತ್ತವೆ.
	ಅಂದರೆ, 'ಸು', ಎಂದಗೆ ಪ್ರಕಾಶದ ಪರಮಾಣುಗಳಿಂದ, ಮನಸ್ಸು ಮತ್ತು ಐದು ಜ್ಞಾನೇಂದ್ರಿಯಗಳನ್ನೂ, ಹಾಗೂ ಅವುಗಳ ಪರಸ್ಪರ ಸಂಯೋಗವನ್ನೂ ಮತ್ತು ಸೂರ್ಯ ಮೊದಲಾದುವನ್ನೂ ಈಶ್ವರನು ರಚಿಸುತ್ತಾನೆ.

* ಎಂದರೆ, ಶರೀರದೊಡನೆ _ಅನು.

ಅಸೋರಂಧಕಾರಾಖ್ಯಾತ್ ಪೃಥಿವ್ಯಾದೇರ-ಸುರಾನ್ ಪಂಚಕರ್ಮೇಂದ್ರಿಯಾಣಿ ಪ್ರಾಣಾಂಶ್ಚಾಸೃಜತ.

ಅಂಧಕಾರ, ಎಂದು ಕರೆಯಲ್ಪಡುವ 'ಅಸು' ವಿನಿಂದ ಪೃಥಿವೀ ಮೊದಲಾದ '**ಅಸುರರನ್ನು**', ಎಂದರೆ ಪಂಚಕರ್ಮೇಂದ್ರಿಯಗಳನ್ನೂ, ಹಾಗೂ ಪ್ರಾಣಗಳನ್ನೂ ಸೃಜಿಸಿದನು.

ಅಂದರೆ, ಅಂಧಕಾರರೂಪ ಪರಮಾಣುಗಳಿಂದ ಐದು ಕರ್ಮೇಂದ್ರಿಯಗಳನ್ನೂ ರಚಿಸುತ್ತಾನೆ. ಇವು ಪ್ರಕಾಶರಹಿತವಾದುದರಿಂದ '**ಅಸುರ**', ಎಂದು ಕರೆಯಲ್ಪಡುತ್ತವೆ.

ಏತಯೋರಪಿ ಪ್ರಕಾಶಾಪ್ರಕಾಶಸಾಧಕ-ತಮತ್ವಾನುರೋಧೇನ ಸಂಗ್ರಾಮವದನಯೋರ್ವರ್ತ-ಮಾನಮಸ್ತೀತಿ ವಿಜ್ಞೇಯಮ್ ॥ ೨ - ೩ ॥

ಮತ್ತು ಇವೆರಡರ ಮಧ್ಯೆ ಕೂಡ, ಎಂದರೆ ಪ್ರಕಾಶ ಹಾಗೂ ಅಪ್ರಕಾಶಗಳ ಅತ್ಯಂತ ಸಾಧನೆಯ ವಿರೋಧವಿರುವುದರಿಂದ, ಇವೆರಡರ ವ್ಯವಹಾರವು ಯುದ್ಧದಂತೆ ಇರುತ್ತದೆ, ಎಂದು ತಿಳಿಯಬೇಕು!

ಅಂದರೆ, ಪ್ರಕಾಶದ, ಹಾಗೂ ಅಪ್ರಕಾಶದ ಗುಣಗಳು ವಿರುದ್ಧವಾಗಿರುವುದರಿಂದ, ಇವುಗಳದೂ ಕೂಡ, ಸಂಗ್ರಾಮಸಂಜ್ಞೆಯು ಅಂಗೀಕರಿಸಲಾಗಿದೆ.

[೨ - ೩]

ಶತಪಥಬ್ರಾಹ್ಮಣದಲ್ಲಿ ದೇವಾಸುರರ ಬಗ್ಗೆ ವಿಶಿಷ್ಟಾರ್ಥವಿವರಣೆ

ಪ್ರಕಾಶಸಹಿತ-ಪ್ರಕಾಶರಹಿತ ಲೋಕಗಳ ನಡುವಣ ಯುದ್ಧ!

"ಸೋಽರ್ಚಞ್ಛ್ರಾಮ್ಯಂಶ್ಚಚಾರ ಪ್ರಜಾಕಾಮಃ । ಸ ಆತ್ಮನ್ಯೇವ ಪ್ರಜಾತಿಮಧತ್ತ । ಸ ಆಸ್ಯೇನೈವ ದೇವಾನಸೃಜತ । ತೇ ದೇವಾ ದಿವಮಭಿಪದ್ಯಾಸೃಜ್ಯಂತ ; ತದ್ದೇವಾನಾಂ ದೇವತ್ವಂ ಯದ್ದಿವಮಭಿಪದ್ಯಾಸೃಜ್ಯಂತ । ತಸ್ಮೈ ಸಸೃಜಾನಾಯ ದಿವೇವಾಸ ; ತದೇವ ದೇವಾನಾಂ ದೇವತ್ವಂ ಯದಸ್ಮೈ ಸಸೃಜಾನಾಯ ದಿವೇವಾಸ ॥ ೭ ॥"

[ಶತಪಥಬ್ರಾಹ್ಮಣೇ ಕಾಂ. ೧೧, ಅ. ೧, ಬ್ರಾ. ೬, ಕಂ. ೭]

[ಅರ್ಥ:_ ಅವನು ಪ್ರಜೆಯ ಇಚ್ಛೆಯನ್ನುಳ್ಳವನಾಗಿ, ಸತ್ಕರಿಸುತ್ತಾ, ಶ್ರಮ ಮಾಡುತ್ತಾ ವಿಚರಿಸಿದನು. ಅವನು ತನ್ನಲ್ಲಿಯೇ ಪ್ರಜಾತಿಯನ್ನು ಧರಿಸಿಕೊಂಡನು. ಅವನು ಮುಖದಿಂದಲೇ ದೇವತೆಗಳನ್ನು ಸೃಷ್ಟಿಸಿದನು. ಆ ದೇವತೆಗಳು ದ್ಯುಲೋಕದಲ್ಲಿ ಸೇರಿದಾಗ ಸೃಷ್ಟಿಸಲ್ಪಟ್ಟರು. ದ್ಯುಲೋಕದಲ್ಲಿ ಸೇರಿದಾಗ ಸೃಷ್ಟಿಸಲ್ಪಟ್ಟವರಾದುದರಿಂದ, ಅದು ದೇವತೆಗಳ 'ದೇವತ್ವ' ಆಗಿದೆ. ಆ ಸೃಷ್ಟಿ-ಉತ್ಪತ್ತಿಯಾದಾಗ ಪ್ರಕಾಶ ಉಂಟಾಯಿತು. ಈ ಸೃಷ್ಟಿ-ಉತ್ಪತ್ತಿಯಾದಾಗ ಪ್ರಕಾಶ ಉಂಟಾದುದರಿಂದ, ಅದೇ ದೇವತೆಗಳ 'ದೇವತ್ವ ಆಗಿದೆ."

(ಶತಪಥಬ್ರಾಹ್ಮಣ: ೧೧. ೧. ೬. ೭)]

"ಅಥ ಯೋಽಯಮವಾಙ್ ಪ್ರಾಣಸ್ತೇನಾಸುರಾನಸೃಜತ । ತ ಇಮಾಮೇವ ಪೃಥಿವೀಮಭಿಸಂಪದ್ಯಾಸೃಜ್ಯಂತ ; ತಸ್ಮೈ ಸಸೃಜಾನಾಯ ತಮ ಇವಾಸ ॥ ೮ ॥"

[ಶತಪಥಬ್ರಾಹ್ಮಣೇ ಕಾಂ. ೧೧, ಅ. ೧, ಬ್ರಾ. ೬, ಕಂ. ೮]

[ಅರ್ಥ:_ "ನಂತರ, ಯಾವ ಈ ಕೆಳಗಿನ ಪ್ರಾಣ ಇದೆಯೋ, ಅದರಿಂದ ಅಸುರರನ್ನು ಸೃಷ್ಟಿಸಿದನು. ಅವರು ಈ ಪೃಥಿವಿಯನ್ನು ಸೇರಿದಾಗಲೇ, ಸೃಷ್ಟಿಸಲ್ಪಟ್ಟರು, [ಆದುದರಿಂದ,] ಆ ಸೃಷ್ಟಿ-ಉತ್ಪತ್ತಿಯಾದಾಗ ಅಂಧಕಾರದಂತೆ ಉಂಟಾಯಿತು!"

(ಶತಪಥಬ್ರಾಹ್ಮಣ: ೧೧. ೧. ೬. ೮)]

ಭಾಷ್ಯಮ್_

(ಸೋಽರ್ಚಞ್ಛ್ರಾಮ್ಯಂಶ್ಚಚಾರ.) ಪ್ರಜಾಕಾಮಃ ಪರಮೇಶ್ವರ ಆಸ್ಯೇನಾಗ್ನಿಪರಮಾಣುಮಯಾತ್ ಕಾರಣಾತ್ ;

ಸೂರ್ಯಾದೀನ್ ಪ್ರಕಾಶವತೋ ಲೋಕಾನ್ ಮುಖ್ಯಗುಣಕರ್ಮಭ್ಯೋ ಯಾನಸೃಜತ ;

ತೇ ದೇವಾ ದ್ಯೋತಮಾನಾ ದಿವಂ ಪ್ರಕಾಶಂ ಪರಮೇಶ್ವರಪ್ರೇರಿತಮಭಿಪದ್ಯ ಪ್ರಕಾಶಾದಿವ್ಯವಹಾರಾನ-ಸೃಜ್ಯಂತ.

ತದೇವ ದೇವಾನಾಂ ದೇವತ್ವಂ ಯತಸ್ತೇ ದಿವಿ ಪ್ರಕಾಶೇ ರಮಂತೇ. [೭]

ಅಥೇತ್ಯನಂತರಮರ್ವಾಚೀನೋ ಯೋಽಯಂ ಪ್ರಾಣೋ ವಾಯುಃ ಪೃಥಿವ್ಯಾದಿಲೋಕಶ್ಚೇಶ್ವರೇಣ ಸೃಷ್ಟಃ .

ತೇನೈವಾಸುರಾನ್ ಪ್ರಕಾಶರಹಿತಾನಸೃಜತ ಸೃಷ್ಟವಾನಸ್ತಿ.

ತೇ ಪೃಥಿವೀಮಭಿಪದ್ಯೌಷಧ್ಯಾದೀನ್ ಪದಾರ್ಥಾನ-ಸೃಜ್ಯಂತ.

ಭಾಷ್ಯ_

(ಸಃ ಅರ್ಚನ್ ಶ್ರಾಮ್ಯನ್ ಚಚಾರ.) ಪ್ರಜೆಗಳ [ಉತ್ಪತ್ತಿಯನ್ನು] ಇಚ್ಛಿಸುತ್ತಿರುವ ಪರಮೇಶ್ವರನು ಮುಖ ದಿಂದ, ಎಂದರೆ ಅಗ್ನಿಯ ಪರಮಾಣುಗಳಿಂದ ಕೂಡಿದ ಕಾರಣದಿಂದ ;

ಸೂರ್ಯನೇ ಮೊದಲಾದ ಪ್ರಕಾಶವಂತ ಲೋಕ ಗಳನ್ನೂ, [ಹಾಗೂ] ಮುಖ್ಯವಾದ ಗುಣ-ಕರ್ಮಗಳಿಂದ ಯಾರನ್ನು ಸೃಷ್ಟಿಸಿದನೋ ;

ಆ ದೇವತೆಗಳು ಪ್ರಕಾಶಿಸುತ್ತಾ, ಪರಮೇಶ್ವರನಿಂದ ಸೃಷ್ಟಿಸಲ್ಪಟ್ಟ ಪ್ರಕಾಶವನ್ನು ಪ್ರಾಪ್ತಮಾಡಿಕೊಂಡು, ಪ್ರಕಾಶ ಮೊದಲಾದ ವ್ಯವಹಾರಗಳನ್ನು ಸೃಷ್ಟಿಸಿದರು!

ಅವರು ಪ್ರಕಾಶದಲ್ಲಿ ವ್ಯವಹರಿಸುತ್ತಾರಾದುದ-ರಿಂದ, ದೇವತೆಗಳ 'ದೇವತ್ವ'ವು ಅದೇ ಆಗಿದೆ! (೭)

ನಂತರ, ಮೊದಲಾಗಿ ಈ ಪ್ರಾಣವಾಯು, ಹಾಗೂ [ತದನಂತರ,] ಪೃಥಿವೀ ಮೊದಲಾದ ಲೋಕ ಗಳೂ ಕೂಡ, ಈಶ್ವರನಿಂದ ರಚಿಸಲ್ಪಟ್ಟವು.

ಅದರಿಂದಲೇ* ಅಸುರರನ್ನು, ಎಂದರೆ ಪ್ರಕಾಶ ರಹಿತ[ಲೋಕ]ಗಳನ್ನು ಸೃಷ್ಟಿಸಿದನು!

ಅವು ಪೃಥಿವಿಯನ್ನು ಸೇರಿ, ಓಷಧಿ[-ವನಸ್ಪತಿ] ಮೊದಲಾದ ಪದಾರ್ಥಗಳನ್ನು ಸೃಷ್ಟಿಸಿದುವು.

* ಎಂದರೆ, ಪ್ರಾಣವಾಯುವಿನಿಂದಲೇ _ಅನು.

ತೇ ಸರ್ವೇ ಸಕಾರ್ಯ್ಯಾಃ* ಪ್ರಕಾಶರಹಿತಾಃ.

ಅವೆಲ್ಲವೂ ವಿಕೃತಿಯುಕ್ತವೂ*, ಜ್ಞಾನರಹಿತವೂ ಆಗಿರುತ್ತವೆ.

ತಯೋಸ್ತಮಃಪ್ರಕಾಶವತೋರನ್ಯೋಽನ್ಯಂ ವಿರೋಧೋ ಯುದ್ಧಮಿವ ಪ್ರವರ್ತ್ತತೇ.

ಅವೆರಡರ, ಎಂದರೆ ಅಂಧಕಾರ-ಪ್ರಕಾಶವುಳ್ಳವುಗಳ ನಡುವೆ ಪರಸ್ಪರ ವಿರೋಧವು ಯುದ್ಧದಂತೆ ನಡೆಯುತ್ತಿರುತ್ತದೆ.

ತಸ್ಮಾದಿದಮಪಿ ದೈವಾಸುರಂ ಯುದ್ಧಮಿತಿ ವಿಜ್ಞೇಯಮ್. [೮]

ಆದುದರಿಂದ, ಇದೂ ಕೂಡ, ದೇವಾಸುರರ ಯುದ್ಧವಾಗಿರುತ್ತದೆ, ಎಂದು ತಿಳಿಯಬೇಕು! (೮)

ಪುಣ್ಯಾತ್ಮ-ಪಾಪಾತ್ಮರ ಯುದ್ಧ!

" ಸೋಽವೇತ್ । ಪಾಪ್ಮಾನಂ ವಾ ಅಸೃಕ್ಷಿ, ಯಸ್ಮೈ ಮೇ ಸಸೃಜಾನಾಯ ತಮ ಇವಾಭೂದಿತಿ । ತಾಂಸ್ತತ ಏವ ಪಾಪ್ಮನಾ-ವಿಧ್ಯತ್ । ತೇ ತತ ಏವ ಪರಾಭವಂಸ್ತಸ್ಮಾದಾಹು-'ನೈತದಸ್ತಿ ಯದ್ದೈವಾಸುರಮ್ । ಯದಿದಮನ್ವಾಖ್ಯಾನೇ ತ್ವದುದ್ಯತ ಇತಿಹಾಸೇ ತ್ವತ್, ತತೋ ಹ್ಯೇವ ತಾನ್ ಪ್ರಜಾಪತಿಃ ಪಾಪ್ಮನಾ-ವಿಧ್ಯತ್ । ತೇ ತತ ಏವ ಪರಾಭವನ್ನಿತಿ ॥೯॥"

[ಶತಪಥಬ್ರಾಹ್ಮಣೇ ಕಾಂ. ೧೧, ಅ. ೧, ಬ್ರಾ. ೬, ಕಂ. ೯]

[ಅರ್ಥ:_"[ಆಗ] ಅವನು ತಿಳಿದುಕೊಂಡನೇನೆಂದರೆ_ 'ನಾನು ಪಾಪವನ್ನೇ ಸೃಷ್ಟಿಸಿದೆನಲ್ಲಾ! ಏಕೆಂದರೆ, ನಾನು ಸೃಷ್ಟಿ ಮಾಡಿದಾಗ ನನಗೆ ಅಂಧಕಾರವಾದಂತೆ ಉಂಟಾಯಿತು! ತದನಂತರವೇ, ಅವನು ಅವರನ್ನು ಪಾಪದಿಂದ ಸೀಳಿಹಾಕಿದನು! ಆಗಲೇ ಅವರು ಸೋತರು! ಆದುದರಿಂದ, ಜನರು ಹೇಳುತ್ತಾರೇನೆಂದರೆ_ 'ಹೇಗೆ ಕಥೆಗಳಲ್ಲಿ ಹೇಳಲಾಗಿದೆಯೋ, ಇತಿಹಾಸದಲ್ಲಿ ಹೇಳಲಾಗಿದೆಯೋ, ಹಾಗೆ ಇದು ದೇವಾಸುರ ಸಂಗ್ರಾಮವಾಗಿಲ್ಲ! ಏಕೆಂದರೆ, ಪ್ರಜಾಪತಿಯು ಅವರನ್ನು ಪಾಪದಿಂದ ಸೀಳಿಹಾಕಿದನು. ಅವರು ಆಗಲೇ ಸೋತುಹೋದರು!'"

(ಶತಪಥಬ್ರಾಹ್ಮಣ: ೧೧. ೧. ೬. ೯)]

* ಕಾರಣಸ್ಯ ವಿಕೃತಿಃ ಕಾರ್ಯಮಿತ್ಯುಚ್ಯತೇ_ಅನು.

* 'ಕಾರಣ'ದ ವಿಕೃತಿಯು 'ಕಾರ್ಯ'ವಾದುದರಿಂದ, 'ಸಕಾರ್ಯ', ಎಂದರೆ ವಿಕೃತಿಯುಕ್ತ _ಅನು.

"ತಸ್ಮಾದೇತದೃಷಿಣಾಭ್ಯನೂಕ್ತಮ್_ 'ನ ತ್ವಂ ಯುಯುತ್ಸೇ
ಕತಮಚ್ಚನಾಹರ್ನ ತೇऽಮಿತ್ರೋ ಮಘವನ್ ಕಶ್ಚನಾಸ್ತಿ ।
ಮಾಯೇತ್ಸಾ ತೇ ಯಾನಿ ಯುದ್ಧಾನ್ಯಾಹುರ್ನಾದ್ಯ ಶತ್ರುಂ ನ ನು
ಪುರಾ ಯುಯುತ್ಸ' ಇತಿ ॥೧೦॥"

[ಶತಪಥಬ್ರಾಹ್ಮಣೇ ಕಾಂ. ೧೧, ಅ. ೧, ಬ್ರಾ. ೬, ಕಂ. ೧೦]

[ಅರ್ಥ:_"ಆದುದರಿಂದ, ನಂತರ, ಋಷಿಯಿಂದ ಹೇಳಲಾಯಿತೇನೆಂದರೆ_ 'ಮಘವನ್! ನೀನು ಒಂದು ಹಗಲೂ ಕೂಡ ಯುದ್ಧ ಮಾಡಲಿಲ್ಲ! ನಿನ್ನ ಶತ್ರುವೂ ಯಾವನೂ ಇಲ್ಲ! ಯಾವ ಯುದ್ಧಗಳ ಬಗ್ಗೆ ಹೇಳುತ್ತಾರೋ, ಅದು ನಿನ್ನ ಮಾಯೆಯೇ ಆಗಿತ್ತು! ನೀನು ಶತ್ರುವಿನೊಡನೆ ಇಂದೂ ಯುದ್ಧ ಮಾಡಲಿಲ್ಲ; ಹಿಂದೆಯೂ ಮಾಡಿರಲಿಲ್ಲ!"

(ಶತಪಥಬ್ರಾಹ್ಮಣ: ೧೧. ೧. ೬. ೧೦)]

ಭಾಷ್ಯಮ್_

(ಸೋऽವೇತ್.) ತಥೈವ ಪುಣ್ಯಾತ್ಮಾ ಮನುಷ್ಯೋ ದೇವೋऽಸ್ತಿ, ಪಾಪಾತ್ಮಾ ಹ್ಯಸುರಶ್ಚ.

ಏತಯೋರಪಿ ಪರಸ್ಪರಂ ವಿರುದ್ಧಸ್ವಭಾವಾದ್ಯುದ್ಧಮಿವ ಪ್ರತಿದಿನಂ ಭವತಿ.

ತಸ್ಮಾದೇಷೋऽಪಿ 'ದೇವಾಸುರಸಂಗ್ರಾಮೋऽ'ಸ್ತೀತಿ ವಿಜ್ಞೇಯಮ್. [೯ - ೧೦]

ಭಾಷ್ಯ_

(ಸೋऽವೇತ್.) ಹೀಗೆಯೇ, ಪುಣ್ಯಾತ್ಮನಾದ ಮನುಷ್ಯನು '**ದೇವ**'ನಾಗಿರುತ್ತಾನೆ, ಮತ್ತು ಪಾಪಾತ್ಮನು '**ಅಸುರ**', [ಎನಿಸುತ್ತಾನೆ.]

ಅಂದರೆ, ಪುಣ್ಯಾತ್ಮರಾದ ಮನುಷ್ಯರು '**ದೇವತೆಗಳು**', ಎಂದೂ ಮತ್ತು ಪಾಪಾತ್ಮರಾದ ದುಷ್ಟಜನರು '**ಅಸುರರು**', ಎಂದೂ ಕರೆಯಲ್ಪಡುತ್ತಾರೆ.

[ಪರಸ್ಪರ] ವಿರುದ್ಧ ಸ್ವಭಾವದವರಾದುದರಿಂದ, ಇವರಿಬ್ಬರದೂ ಕೂಡ, ಪ್ರತಿದಿನವೂ ಪರಸ್ಪರ ಯುದ್ಧದಂತೆ [ವ್ಯವಹಾರ] ಆಗುತ್ತಿರುತ್ತದೆ.

ಅಂದರೆ, ಅವರದೂ ಕೂಡ, ಪರಸ್ಪರವಾಗಿ ವಿರೋಧರೂಪವಾದ ಯುದ್ಧವು ನಿತ್ಯವೂ ಆಗುತ್ತಿರುತ್ತದೆ.

ಆದುದರಿಂದ, ಇದೂ ಕೂಡ, '**ದೇವಾಸುರಸಂಗ್ರಾಮ**'ವಾಗಿರುತ್ತದೆ, ಎಂದು ತಿಳಿಯಬೇಕು! (೯ - ೧೦)

ಹಗಲು-ರಾತ್ರಿಗಳ ನಡುವಣ ಯುದ್ಧ!

"ಸ ಯದಸ್ಮೈ ದೇವಾನ್ತ್ಸಸೃಜಾನಾಯ ದಿವೇವಾಸ ತದಹರ-
ಕುರುತಾಥ ಯದಸ್ಮಾ ಅಸುರಾನ್ತಸಸೃಜಾನಾಯ ತಮ ಇವಾಸ,
ತಾಗ್ಂ ರಾತ್ರಿಮಕುರುತ ತೇ ಅಹೋರಾತ್ರೇ ॥೧೧॥"

[ಶತಪಥಬ್ರಾಹ್ಮಣೇ ಕಾಂ. ೧೧, ಅ. ೧, ಬ್ರಾ. ೬, ಕಂ. ೧೧]

[ಅರ್ಥ:_ " ದೇವತೆಗಳನ್ನು ಸೃಷ್ಟಿಸಿದಾಗ ಅವನಿಗೆ ಯಾವ ಪ್ರಕಾಶ ಉಂಟಾಗಿತ್ತೋ, ಅದನ್ನು ಅವನು ಹಗಲನ್ನಾಗಿ ಮಾಡಿದನು! ನಂತರ, ಅಸುರನನ್ನು ಸೃಷ್ಟಿಸಿದಾಗ, ಅವನಿಗೆ ಅಂಧಕಾರದಂತೆ ಏನು ಉಂಟಾಗಿತ್ತೋ, ಅದನ್ನು ರಾತ್ರಿಯನ್ನಾಗಿ ಮಾಡಿದನು! ಅವೇ ಹಗಲು-ರಾತ್ರಿಗಳು!"

(ಶತಪಥಬ್ರಾಹ್ಮಣ: ೧೧. ೧. ೬. ೧೧)]

"ಸ ಐಕ್ಷತ ಪ್ರಜಾಪತಿಃ ॥೧೨॥"

[ಶತಪಥಬ್ರಾಹ್ಮಣೇ ಕಾಂ. ೧೧, ಅ. ೧, ಬ್ರಾ. ೬, ಕಂ. ೧೨]

[ಅರ್ಥ:_ " ಆ ಪ್ರಜಾಪತಿಯು ವಿಚಾರಿಸತೊಡಗಿದನು."

(ಶತಪಥಬ್ರಾಹ್ಮಣ: ೧೧. ೧. ೬. ೧೨)]

ಭಾಷ್ಯಮ್_

(ಸ ಯದಸ್ಮೈ.) ಏವಮೇವ ದಿನಂ ದೇವೋ ರಾತ್ರಿರಸುರಃ.

ಏತಯೋರಪಿ ಪರಸ್ಪರಂ ಯುದ್ಧಮಿವ ಪ್ರವರ್ತ್ತತೇ [೧೧ - ೧೨] ॥೪॥

ಭಾಷ್ಯ_

(ಸ ಯದಸ್ಮೈ.) ಹೀಗೆಯೇ, ಹಗಲು 'ದೇವ', ಎಂದೂ; ಮತ್ತು ರಾತ್ರಿಯು 'ಅಸುರ', ಎಂದೂ [ಕರೆಯಲ್ಪಡುತ್ತವೆ.]

ಇವೆರಡರದೂ ಕೂಡ, ಪರಸ್ಪರ ಯುದ್ಧವಾದಂತೆ ನಡೆಯುತ್ತಿರುತ್ತದೆ.

ಅಂದರೆ, ಇವುಗಳದೂ ಕೂಡ, ಪರಸ್ಪರವಾಗಿ ವಿರೋಧರೂಪ ಯುದ್ಧವು ನಡೆಯುತ್ತಾ ಇರುತ್ತದೆ. (೧೧ - ೧೨)

ಶುಕ್ಲಪಕ್ಷ-ಕೃಷ್ಣಪಕ್ಷ ಮೊದಲಾದುವುಗಳ ಯುದ್ಧ!

ಹೀಗೆಯೇ, ಶುಕ್ಲಪಕ್ಷದ ಹೆಸರು 'ದೇವ', ಎಂದೂ, ಹಾಗೂ ಕೃಷ್ಣಪಕ್ಷದ ಹೆಸರು '**ಅಸುರ**', ಎಂದೂ ಇರುತ್ತದೆ.

ಹಾಗೆಯೇ, ಉತ್ತರಾಯಣ(ಕಾಲ)ದ್ದು 'ದೇವ'ಸಂಜ್ಞೆಯೂ ಮತ್ತು ದಕ್ಷಿಣಾಯನ(ಕಾಲ)ದ್ದು '**ಅಸುರ**'ಸಂಜ್ಞೆಯೂ ಆಗಿರುತ್ತದೆ.

ಈ ಎಲ್ಲವುಗಳದೂ ಕೂಡ, ಪರಸ್ಪರ ವಿರೋಧರೂಪವಾದ ಯುದ್ಧವು ನಡೆಯುತ್ತಾ ಇರುತ್ತದೆ.

ಇದೇ ರೀತಿಯಲ್ಲಿಯೇ, ಬೇರೆ ಕಡೆ ಕೂಡ, ಎಲ್ಲಿ-ಎಲ್ಲಿ ಇಂತಹ ಲಕ್ಷಣಗಳು ಅನ್ವಯಿಸುತ್ತವೋ, ಅಲ್ಲಿ-ಅಲ್ಲಿ '**ದೇವಾಸುರ-ಸಂಗ್ರಾಮ**'ದ ರೂಪಕಾಲಂಕಾರವಿದೆ, ಎಂದು ತಿಳಿದುಕೊಳ್ಳಿರಿ! [೪]

'ದೇವತೆ'ಗಳ-'ಅಸುರ'ರ ಸೋದರಸಂಬಂಧ

" ದೇವಾಶ್ಚ ವಾ ಅಸುರಾಶ್ಚ । ಉಭಯೇ ಪ್ರಾಜಾಪತ್ಯಾಃ ಪ್ರಜಾಪತೇಃ ಪಿತುರ್ದಾಯಮುಪೇಯುಃ ॥ ೫ ॥ "

[ಶತಪಥಬ್ರಾಹ್ಮಣೇ ಕಾಂ. ೧, ಅ. ೭, ಬ್ರಾ. ೨, ಕಂ. ೨೨]

[ಅರ್ಥ:_ " ದೇವತೆಗಳು ಮತ್ತು ಅಸುರರು! ಪ್ರಜಾಪತಿಯ ಸಂತಾನಗಳಾದ ಇಬ್ಬರೂ ತಂದೆಯಾದ (ಪ್ರಜಾಪತಿ)ಯ ದಾಯಭಾಗವನ್ನು ಪಡೆದರು! "

(ಶತಪಥಬ್ರಾಹ್ಮಣ: ೧. ೭. ೨. ೨೨)]

ಭಾಷ್ಯಮ್_

ತ ಇಮೇ ಉಭಯೇ ಪೂರ್ವೋಕ್ತಾಃ ಪ್ರಜಾಪತೇಃ ಪರಮೇಶ್ವರಸ್ಯ ಪುತ್ರಾ ಇವ ವರ್ತಂತೇ.

ಅತ ಏವ ತೇ ಪರಮೇಶ್ವರಸ್ಯ ಪದಾರ್ಥಾನುಪೇತಾಃ ಸಂತಿ ॥ ೫ ॥

ಭಾಷ್ಯ_

ಮೊದಲು ಹೇಳಿದ ಆ ಇವರಿಬ್ಬರೂ ಪ್ರಜೆಗಳ ಸ್ವಾಮಿಯಾದ ಪರಮೇಶ್ವರನ ಪುತ್ರರಂತೆ ಇರುತ್ತಾರೆ!

ಅಂದರೆ, ಈ ಎಲ್ಲಾ ದೇವತೆಗಳೂ, ಹಾಗೂ ಅಸುರರೂ '**ಪ್ರಾಜಾಪತ್ಯ**', ಎಂದರೆ ಈಶ್ವರನ ಪುತ್ರರಿಗೆ ಸಮಾನರಾಗಿರುತ್ತಾರೆ, ಎಂದು ಹೇಳಲ್ಪಡುತ್ತಾರೆ.

ಆದುದರಿಂದಲೇ, ಅವರು ಪರಮೇಶ್ವರನ ಪದಾರ್ಥಗಳನ್ನು ಪ್ರಾಪ್ತ ಮಾಡಿಕೊಂಡಿರುವವರಾಗಿರುತ್ತಾರೆ.

ಅಂದರೆ, ಜಗತ್ತಿನ ಎಲ್ಲಾ ಪದಾರ್ಥಗಳೂ ಇವರ ಅಧಿಕಾರದಲ್ಲೇ ಇರುತ್ತವೆ. [೫]

ಸೋದರಸಂಬಂಧವಿದ್ದರೂ, ವಿರುದ್ಧವ್ಯವಹಾರದಿಂದ ಯುದ್ಧ!

"ದ್ವಯಾ ಹ ಪ್ರಾಜಾಪತ್ಯಾ ದೇವಾಶ್ಚಾಸುರಾಶ್ಚ । ತತಃ ಕನೀಯಸಾ
ಏವ ದೇವಾ ಜ್ಯಾಯಸಾ ಅಸುರಾಃ ॥೧॥"

[ಶತಪಥಬ್ರಾಹ್ಮಣೇ ಕಾಂ. ೧೪, ಅ. ೪, ಬ್ರಾ. ೧, ಕಂ. ೧]

[ಅರ್ಥ:_ "ದೇವತೆಗಳು ಮತ್ತು ಅಸುರರು, ಎಂದು ಇಬ್ಬರೇ ಪ್ರಜಾಪತಿಯ ಸಂತಾನಗಳಾಗಿದ್ದರು. ಅವರಲ್ಲಿ ಕಿರಿಯವರೇ ದೇವತೆಗಳು ಆಗಿದ್ದರು. ಮತ್ತು ಹಿರಿಯವರು ಅಸುರರು ಆಗಿದ್ದರು."

(ಶತಪಥಬ್ರಾಹ್ಮಣ: ೧೪.೪.೧.೧)]

"ಯದೇವೇದಮಪ್ರತಿರೂಪಂ ವದತಿ ಸ ಏವ ಸ ಪಾಪ್ಮಾ ॥೩॥
॥೬॥"

[ಶತಪಥಬ್ರಾಹ್ಮಣೇ ಕಾಂ. ೧೪, ಅ. ೪, ಬ್ರಾ. ೧, ಕಂ. ೩]

[ಅರ್ಥ:_ "ಯಾವ ಈ ಅಸಾದೃಶ್ಯವನ್ನೇ ಹೇಳುತ್ತಾನೋ, ಅದೇ ಆ ಪಾಪವಾಗಿದೆ."

(ಶತಪಥಬ್ರಾಹ್ಮಣ: ೧೪. ೪. ೧. ೩)]

ಭಾಷ್ಯಮ್_	ಭಾಷ್ಯ_
ತೇಷಾಂ ಮಧ್ಯೇऽಸುರಾಃ ಪ್ರಾಣಾದಯೋ ಜ್ಯೇಷ್ಠಾಃ ಸಂತಿ.	ಅವರ ನಡುವೆ ಅಸುರರು, ಎಂದರೆ ಪ್ರಾಣಗಳೇ ಮೊದಲಾದುವು ಹಿರಿಯವಾಗಿರುತ್ತವೆ. ಅಂದರೆ, ಇವುಗಳಲ್ಲಿ ಯಾವ ಯಾವ ಅಸುರ, ಎಂದರೆ ಪ್ರಾಣಗಳು ಮೊದಲಾದುವು ಇವೆಯೋ, ಅವು 'ಹಿರಿಯವು', ಎಂದು ಕರೆಯಲ್ಪಡುತ್ತವೆ.
ವಾಯೋಃ ಪೂರ್ವೋತ್ಪನ್ನತ್ವಾತ್, ಪ್ರಾಣಾನಾಂ ತನ್ಮಯತ್ವಾಚ್ಚ.	ಏಕೆಂದರೆ, ವಾಯು ಮೊದಲು ಉತ್ಪನ್ನವಾಗಿದೆ; ಮತ್ತು ಪ್ರಾಣಗಳು ಅದರಲ್ಲಿ ಲೀನವಾಗಿರುತ್ತವೆ.
ತಥೈವ ಜನ್ಮತೋ ಮನುಷ್ಯಾಃ ಸರ್ವೇऽ-ವಿದ್ವಾಂಸೋ ಭವಂತಿ ;	ಹಾಗೆಯೇ ಜನ್ಮದಿಂದ ಮನುಷ್ಯರೆಲ್ಲರೂ ಅವಿದ್ವಾಂಸರಾಗಿರುತ್ತಾರೆ ; ಅಂದರೆ, ಬಾಲ್ಯಾವಸ್ಥೆಯಲ್ಲಿ ಎಲ್ಲಾ ಮನುಷ್ಯರೂ ಕೂಡ, ಅವಿದ್ವಾಂಸರಾಗಿರುತ್ತಾರೆ ;
ಪುನರ್ವಿದ್ವಾಂಸಶ್ಚ.	ಮತ್ತು, ಪುನಃ [ಓದಿ,] ವಿದ್ವಾಂಸರಾಗುತ್ತಾರೆ.

ತಥೈವ_

ಹಾಗೆಯೇ_

ವಾಯೋಃ ಸಕಾಶಾದಗ್ನೇರುತ್ಪತ್ತಿಃ, ಪ್ರಕೃತೇ-ರಿಂದ್ರಿಯಾಣಾಂ ಚ ;

ವಾಯುವಿನ ಬಳಿಯಿಂದ ಅಗ್ನಿಯ ಉತ್ಪತ್ತಿಯಾಗಿದೆ. ಮತ್ತು ಪ್ರಕೃತಿಯಿಂದ ಇಂದ್ರಿಯಗಳ [ಉತ್ಪತ್ತಿಯಾಗಿದೆ.]

ತಸ್ಮಾದಸುರಾ ಜ್ಯೇಷ್ಠಾ ದೇವಾಶ್ಚ ಕನಿಷ್ಠಾಃ.

ಆದುದರಿಂದ, ಅಸುರರು **ಜ್ಯೇಷ್ಠರು**, ಎಂದೂ ; ಮತ್ತು ದೇವತೆಗಳು **ಕನಿಷ್ಠರು**, ಎಂದೂ [ಹೇಳಲಾಗುತ್ತದೆ.]*

ಅಂದರೆ, ಸೂರ್ಯ, ಜ್ಞಾನೇಂದ್ರಿಯಗಳು ಮತ್ತು ವಿದ್ವಾಂಸರು ಮೊದಲಾದವರು [ವಾಯುವಿನ] ನಂತರ, ಪ್ರಕಟಿಸಲ್ಪಟ್ಟವರಾದುದರಿಂದ, **ಕನಿಷ್ಠರು**, ಎಂದು ಹೇಳಲಾಗುತ್ತದೆ.

ಏಕತ್ರ ದೇವಾಃ ಸೂರ್ಯಾದಯೋ ಜ್ಯೇಷ್ಠಾಃ ಪೃಥಿವ್ಯಾದಯೋಽಸುರಾಃ ಕನಿಷ್ಠಾಶ್ಚ.

ಒಂದು ಕಡೆ, ಸೂರ್ಯ ಮೊದಲಾದ ದೇವತೆಗಳು **'ಜ್ಯೇಷ್ಠ'**, ಎಂದೂ, ಮತ್ತು ಪೃಥಿವೀ ಮೊದಲಾದ ಅಸುರರು **ಕನಿಷ್ಠರು**, ಎಂದೂ ಹೇಳಲಾಗುತ್ತದೆ.**

ತೇ ಸರ್ವೇ ಪ್ರಜಾಪತೇಃ ಸಕಾಶಾದುತ್ಪನ್ನತ್ವಾತ್ ತಸ್ಯಾಪತ್ಯಾನೀವ ಸಂತೀತಿ ವಿಜ್ಞೇಯಮ್. [೧]

ಅವರೆಲ್ಲರೂ ಪ್ರಜಾಪತಿಯ ಬಳಿಯಿಂದ ಉತ್ಪನ್ನರಾದುದರಿಂದ, ಅವನ ಸಂತಾನಗಳಾಗಿವೆ, ಎಂದು ತಿಳಿಯಬೇಕು! (೧)

ಏಷಾಮಪಿ ಪರಸ್ಪರಂ ಯುದ್ಧಮಿವ ಪ್ರವರ್ತ್ತತ ಇತಿ ಜ್ಞಾತವ್ಯಮ್ [೨] ॥ ೫ - ೬ ॥

ಇವರದೂ ಕೂಡ, ಪರಸ್ಪರ ಯುದ್ಧದಂತೆ [ವ್ಯವಹಾರ] ನಡೆಯುತ್ತಿರುತ್ತದೆ, ಎಂದು ತಿಳಿಯಬೇಕಾಗಿದೆ! (೨) [೫ - ೬]

ನಿಷ್ಕಪಟಿ-ಕಪಟಿಗಳ ನಡುವಣ ಯುದ್ಧ!

"ಊರ್ಗಿತಿ ದೇವಾ ಮಾಯೇತ್ಯಸುರಾಃ ॥ ೭ ॥"

[ಶತಪಥಬ್ರಾಹ್ಮಣೇ ಕಾಂ. ೧೦, ಅ. ೫, ಬ್ರಾ. ೨, ಕಂ. ೨೦]

[ಅರ್ಥ:_ "ಶಕ್ತಿ, ಎಂದರೆ ದೇವತೆಗಳು! ಮಾಯಾ, ಎಂದರೆ ಅಸುರರು!"

(ಶತಪಥಬ್ರಾಹ್ಮಣ: ೧೦. ೫. ೨. ೨೦)]

---

* ವಾಯು ಮೊದಲು ಉತ್ಪನ್ನವಾಯಿತು; ಅಗ್ನಿಯು ನಂತರ, ಉತ್ಪನ್ನವಾಯಿತು.
ವಾಯು = ಅಸುರ; ಅಗ್ನಿ = ಪ್ರಕಾಶ = ದೇವ _ಅನು.

** ಸೂರ್ಯ = ಅಗ್ನಿ = ಪ್ರಕಾಶ ಮೊದಲು ಉತ್ಪನ್ನವಾಯಿತು ; ನಂತರ, ಪೃಥಿವೀ = ಅಸುರ _ಅನು.

"ಪ್ರಾಣಾ ದೇವಾಃ ॥ ೮ ॥"

[ಶತಪಥಬ್ರಾಹ್ಮಣೇ ಕಾಂ. ೬, ಅ. ೩, ಬ್ರಾ. ೧ ಕಂ. ೧೫]

[ಅರ್ಥ:_ "ಪ್ರಾಣಗಳು, ಎಂದರೆ ದೇವತೆಗಳು!"

(ಶತಪಥಬ್ರಾಹ್ಮಣ: ೬. ೩. ೧. ೧೫]

"ಪ್ರಾಣೋ ವಾ ಅಸುಸ್ತಸ್ಯೈಷಾ ಮಾಯಾ ॥ ೯ ॥"

[ಶತಪಥಬ್ರಾಹ್ಮಣೇ ಕಾಂ. ೬, ಅ. ೬, ಬ್ರಾ. ೨, ಕಂ. ೬]

[ಅರ್ಥ:_ "ಪ್ರಾಣಗಳು, ಎಂದರೆ ಅಸು! ಅದರದು ಈ ಮಾಯಾ!"

(ಶತಪಥಬ್ರಾಹ್ಮಣ: ೬. ೬. ೨. ೬)]

ಭಾಷ್ಯಮ್_

ಯೇ ಪ್ರಾಣಪೋಷಕಾಃ ಸ್ವಾರ್ಥಸಾಧನತತ್ಪರಾಃ ಮಾಯಾವಿನಃ ಕಪಟಿನೋ ಮನುಷ್ಯಾಸ್ತೇ ಹ್ಯಸುರಾಃ.

ಯೇ ಚ ಪರೋಪಕಾರಕಾಃ ಪರದುಃಖ-ಭಂಜನಾ ನಿಷ್ಕಪಟಿನೋ ಧಾರ್ಮಿಕಾ ಮನುಷ್ಯಾಸ್ತೇ ದೇವಾಶ್ಚ ವಿಜ್ಞೇಯಾಃ .

ಏತಯೋರಪಿ ಪರಸ್ಪರಂ ವಿರೋಧಾತ್ ಸಂಗ್ರಾಮ ಇವ ಭವತಿ.

ಇತ್ಯಾದಿಪ್ರಕಾರಕಂ 'ದೈವಾಸುರಯುದ್ಧ'ಮಿತಿ ಬೋಧ್ಯಮ್ ॥ ೭ - ೯ ॥

ಭಾಷ್ಯ_

ಯಾರು ಪ್ರಾಣಪೋಷಕರೂ, ಸ್ವಾರ್ಥಸಾಧನೆಯಲ್ಲಿ ತತ್ಪರರೂ, ಮಾಯಾವಿಗಳೂ, [ಹಾಗೂ] ಕಪಟಿಗಳೂ ಆದ ಮನುಷ್ಯರಾಗಿರುತ್ತಾರೋ, ಅವರಂತೂ **ಅಸುರರೇ!**

ಅಂದರೆ, ಅವರಲ್ಲಿ* ಯಾವ ಯಾವ ಮನುಷ್ಯರು ಸ್ವಾರ್ಥಿಗಳೂ, ತಮ್ಮ ಪ್ರಾಣಗಳನ್ನು ಪೋಷಿಸಿಕೊಳ್ಳುವವರೂ, ಕಪಟ, ಛಲ ಮೊದಲಾದ ದೋಷಗಳಿಂದ ಯುಕ್ತರೂ ಆಗಿರುತ್ತಾರೋ, ಅವರು **'ಅಸುರರು'**, ಎಂದು ಕರೆಯಲ್ಪಡುತ್ತಾರೆ!

ಮತ್ತು ಯಾರು ಪರೋಪಕಾರಿಗಳೂ, ಇತರರ ದುಃಖವನ್ನು ನಾಶಮಾಡುವವರೂ, ನಿಷ್ಕಪಟಿಗಳೂ, ಧಾರ್ಮಿಕರೂ ಆದ ಮನುಷ್ಯರಾಗಿರುತ್ತಾರೋ, ಅವರು **'ದೇವತೆಗಳು'**, ಎಂದು ತಿಳಿಯಲ್ಪಡಬೇಕು!

ಇವರಿಬ್ಬರದೂ ಕೂಡ, ಪರಸ್ಪರ ವಿರೋಧವಿರುವುದರಿಂದ, ಯುದ್ಧದಂತೆ [ವ್ಯವಹಾರ] ಇರುತ್ತದೆ.

ಈ ಮೊದಲಾದ ಪ್ರಕಾರಗಳ **'ದೇವಾಸುರಯುದ್ಧ'**, ಎಂಬುದು ಇರುತ್ತದೆ, ಎಂದು ತಿಳಿಯಬೇಕು! [೭-೯]

* ಎಂದರೆ, ವಿದ್ವಾಂಸ-ಅವಿದ್ವಾಂಸರಲ್ಲಿ _ಅನು.

ಮಿಥ್ಯಾಕಥೆಗಳ ತ್ಯಾಗ ಆವಶ್ಯಕ!

ಏವಂ ಪರಮೋತ್ತಮಾಯಾಂ ; ವಿದ್ಯಾವಿಜ್ಞಾಪನಾರ್ಥಾಯಾಂ ; ರೂಪಕಾಲಂಕಾರೇಣಾನ್ವಿತಾಯಾಂ ; ಸತ್ಯಶಾಸ್ತ್ರೇಷೂಕ್ತಾಯಾಂ ಕಥಾಯಾಂ ಸತ್ಯಾಂ ;

ವ್ಯರ್ಥಪುರಾಣಸಂಜ್ಞಕೇಷು ನವೀನೇಷು ತಂತ್ರಾದಿಷು ಗ್ರಂಥೇಷು ಚ ;

ಯಾ ಮಿಥ್ಯೈವ ಕಥಾ ವರ್ಣಿತಾಃ ಸಂತಿ ;

ವಿದ್ವದ್ಭಿರ್ನೈವೈತಾಃ ಕಥಾಃ ಕದಾಚಿದಪಿ ಸತ್ಯಾ ಮಂತವ್ಯಾ ಇತಿ.

ಹೀಗೆ, ಪರಮ ಉತ್ಕೃಷ್ಟವೂ ; ವಿದ್ಯೆಯನ್ನು ತಿಳಿಸುವ ಪ್ರಯೋಜನವುಳ್ಳದ್ದೂ ; ರೂಪಕಾಲಂಕಾರದಿಂದ ಕೂಡಿದುದೂ ; ಸತ್ಯಶಾಸ್ತ್ರಗಳಲ್ಲಿ ಹೇಳಲ್ಪಟ್ಟುದೂ ಆದ ಕಥೆಯು ಇರುವಾಗ ;

ವ್ಯರ್ಥವಾಗಿ 'ಪುರಾಣ', ಎಂಬ ಹೆಸರಿನ ನವೀನ ಗ್ರಂಥಗಳಲ್ಲಿ, ಮತ್ತು ತಂತ್ರಗಳೇ ಮೊದಲಾದ ಗ್ರಂಥಗಳಲ್ಲಿ ;

ಯಾವ ಮಿಥ್ಯೆಯೇ ಆದ ಕಥೆಗಳು ವರ್ಣಿಸಲ್ಪಟ್ಟಿವೆಯೋ ;

ಅಂತಹ ಈ ಕಥೆಗಳು ವಿದ್ವಾಂಸರಿಂದ ಎಂದಿಗೂ ಕೂಡ, ಸತ್ಯ, ಎಂದು ಅಂಗೀಕರಿಸಲ್ಪಡಲೇ ಬಾರದು!

ಅಂದರೆ, ಈ ಸತ್ಯವಿದ್ಯೆಯ ಪ್ರಕಾಶ ಮಾಡುವ* ಕಥೆಗಳನ್ನು ಪ್ರೀತಿಪೂರ್ವಕವಾಗಿ ಗ್ರಹಣ ಮಾಡಿ, ಸರ್ವತ್ರ ಪ್ರಚಾರ ಮಾಡುವುದೂ; ಹಾಗೂ ಮಿಥ್ಯಾಕಥೆಗಳನ್ನು ಮನಸ್ಸು, ಕರ್ಮ ಮತ್ತು ವಚನದಿಂದ ಬಿಟ್ಟುಬಿಡುವುದೂ ಎಲ್ಲರಿಗೂ ಉಚಿತವಾಗಿರುತ್ತದೆ!

---

* 'ದೇವಾಸುರಾಃ', ಎಂಬ ಶಬ್ದವು ಅಥರ್ವವೇದದಲ್ಲಿದೆ. (೬. ೧೪೧. ೩)_

[ಋಷಿಃ_ ವಿಶ್ವಾಮಿತ್ರಃ ; ದೇವತಾ_ ಅಶ್ವಿನೌ ; ಛಂದಃ_ ಅನುಷ್ಟುಪ್ ; ಸ್ವರಃ_ ಗಾಂಧಾರಃ]

ಯಥಾ ಚಕ್ರುರ್ದೇವಾಸುರಾ ಯಥಾ ಮನುಷ್ಯಾ ಉತ ।
ಏವಾ ಸಹಸ್ರಪೋಷಾಯ ಕೃಣುತಂ ಲಕ್ಷ್ಮಾಶ್ವಿನಾ ॥

[ಅರ್ಥ:_ "ಹೇ ಅಶ್ವಿಗಳೇ! ಹೇಗೆ ದೇವಾಸುರರು ಮಾಡಿದರೋ, ಮತ್ತು ಹೇಗೆ ಮನುಷ್ಯರು [ಮಾಡಿದರೋ], ಹಾಗೆಯೇ ಬಹುಪುಷ್ಟಿಗಾಗಿ ಚಿಹ್ನೆಯನ್ನು ಹಾಕಿರಿ!"]

ಅಥರ್ವವೇದದಲ್ಲಿಯೇ 'ದೇವಾಸುರೇಭ್ಯಃ', ಎಂಬ ಪದವೂ ಇದೆ. (೪.೧೦.೫) ನೋಡಿ_

[ಋಷಿಃ_ ಅಥರ್ವಾ ; ದೇವತಾ_ ಶಂಖಮಣಿಃ ; ಛಂದಃ_ ಅನುಷ್ಟುಪ್ ; ಸ್ವರಃ_ ಗಾಂಧಾರಃ]

ಸಮುದ್ರಾಜ್ಜಾತೋ ಮಣಿರ್ವೃತ್ರಾಜ್ಜಾತೋ ದಿವಾಕರಃ ।
ಸೋ ಅಸ್ಮಾನ್ತ್ಸರ್ವತಃ ಪಾತು ಹೇತ್ಯಾ ದೇವಾಸುರೇಭ್ಯಃ ॥

[ಅರ್ಥ:_ "ಯಾವ ಮಣಿಯು ಸಮುದ್ರದಿಂದ ಹುಟ್ಟಿದೆಯೋ, ಮತ್ತು ಮೇಘದಿಂದ ಹುಟ್ಟಿದ ಸೂರ್ಯನಂತಿದೆಯೋ, ಅದು ದೇವಾಸುರರ ಕಡೆಯ ಆಯುಧದಿಂದ ನಮ್ಮನ್ನು ಎಲ್ಲೆಡೆಯಿಂದಲೂ ರಕ್ಷಿಸಲಿ!"]

→

[೫] ಕಶ್ಯಪಸಂಬಂಧದ ಮಿಥ್ಯಾಕಥೆ!

ಏವಮೇವ ಕಶ್ಯಪ-ಗಯಾದಿತೀರ್ಥಕಥಾ ಅಪಿ ಬ್ರಹ್ಮವೈವರ್ತ್ತಾದಿಷು ಗ್ರಂಥೇಷು ವೇದಾದಿ-ಸತ್ಯಶಾಸ್ತ್ರೇಭ್ಯೋ ವಿರುದ್ಧಾ ಉಕ್ತಾಃ ಸಂತಿ.

ಹೀಗೆಯೇ, ಕಶ್ಯಪ[ನ ಕಥೆ,] ಗಯಾ ಮೊದಲಾದ ತೀರ್ಥಗಳ ಕಥೆಗಳೂ ಕೂಡ, ಬ್ರಹ್ಮವೈವರ್ತ[ಪುರಾಣ] ಮೊದಲಾದ ಗ್ರಂಥಗಳಲ್ಲಿ ವೇದಗಳೇ ಮೊದಲಾದ ಸತ್ಯಶಾಸ್ತ್ರಗಳಿಗೆ ವಿರುದ್ಧವಾಗಿ ಹೇಳಲ್ಪಟ್ಟಿವೆ.

ಅಂದರೆ, ಐದನೆಯದಾಗಿ, ಕಶ್ಯಪ[ತೀರ್ಥ] ಮತ್ತು ಗಯಾ[ತೀರ್ಥ,] ಪುಷ್ಕರತೀರ್ಥ ಮೊದಲಾದ ಕಥೆಗಳನ್ನು ಜನರು ಕೆಡಿಸಿ, ಪ್ರಸಿದ್ಧ ಮಾಡಿದ್ದಾರೆ!

ತದ್ಯಥಾ_

ಅದು ಹೇಗೆಂದರೆ_

ಅಂದರೆ, ಉದಾಹರಣೆಗಾಗಿ ನೋಡಿರಿ_

"ಮರೀಚಿಪುತ್ರಃ ಕಶ್ಯಪ ಋಷಿರಾಸೀತ್. ತಸ್ಮೈ ತ್ರಯೋದಶ ಕನ್ಯಾ ದಕ್ಷಪ್ರಜಾಪತಿನಾ ವಿವಾಹವಿಧಾನೇನ ದತ್ತಾಃ.

"ಮರೀಚಿಯ ಪುತ್ರನಾದ ಕಶ್ಯಪ, ಎಂಬ ಋಷಿ ಇದ್ದನು. ಅವನಿಗೆ ಹದಿಮೂರು ಕನ್ಯೆಯರು ವಿವಾಹವಿಧಾನದ ಮೂಲಕ ದಕ್ಷಪ್ರಜಾಪತಿಯಿಂದ ಕೊಡಲ್ಪಟ್ಟರು.

ಅಂದರೆ, ಮರೀಚಿಯ ಪುತ್ರರಾದ ಕಶ್ಯಪ-ಋಷಿ ಎಂಬುವರೊಬ್ಬರು ಇದ್ದರು. ಅವರಿಗೆ ದಕ್ಷಪ್ರಜಾಪತಿಯು ವಿವಾಹವಿಧಾನದಿಂದ ಹದಿಮೂರು ಕನ್ಯೆಯರನ್ನು ಕೊಟ್ಟನು. ಅವರಿಂದ,* ಎಲ್ಲಾ ಜಗತ್ತಿನ ಉತ್ಪತ್ತಿಯಾಯಿತು. ಎಂದರೆ_

"ತತ್ಸಂಗಮೇ ದಿತೇರ್ದೈತ್ಯಾಃ, ಅದಿತೇ-ರಾದಿತ್ಯಾಃ, ದನೋರ್ದಾನವಾಃ, ಏವಮೇವ ಕದ್ರ್ವಾಃ ಸರ್ಪಾಃ, ವಿನತಾಯಾಃ ಪಕ್ಷಿಣಃ, ತಥಾಽನ್ಯಾಸಾಂ ಸಕಾಶಾದ್ ವಾನರರ್ಚ್ಛ[⊛]-ವೃಕ್ಷ-ಘಾಸಾದಯ ಉತ್ಪನ್ನಾಃ!"

"ಅವರೊಡನೆಯ ಸಂಗಮದಲ್ಲಿ, ದಿತಿಯಿಂದ ದೈತ್ಯರೂ, ಅದಿತಿಯಿಂದ ಆದಿತ್ಯರೂ, ದನುವಿನಿಂದ ದಾನವರೂ; ಹೀಗೆಯೇ ಕದ್ರುವಿನಿಂದ ಸರ್ಪಗಳೂ, ವಿನತೆಯಿಂದ ಪಕ್ಷಿಗಳೂ, ಮತ್ತು ಇತರರ ಬಳಿಯಿಂದ ವಾನರರೂ, ಕರಡಿಗಳೂ, ವೃಕ್ಷಗಳೂ, ಹುಲ್ಲು ಮೊದಲಾದ ಪದಾರ್ಥಗಳೂ ಕೂಡ, ಉತ್ಪನ್ನವಾದುವು!"

"[ಮತ್ತು] ಹೀಗೆಯೇ, ಚಂದ್ರನಿಗೆ ಇಪ್ಪತ್ತೇಳು ಕನ್ಯೆಯರನ್ನು ಕೊಟ್ಟನು!"

⟶ 'ದೇವಾಸುರ', ಎಂಬ ಪದವು ಬೇರಾವ ವೇದದಲ್ಲೂ ಬರದೇ, ಅನ್ಯತ್ರ ತೈತ್ತಿರೀಯ, ಕಾಠಕ, ಪೈಪ್ಪಲಾದ ಸಂಹಿತೆಗಳಲ್ಲಿ ಮತ್ತು ಬ್ರಾಹ್ಮಣಗ್ರಂಥಗಳಲ್ಲಿ ಬಂದಿರುವುದರಿಂದ, ಈ ಪದವು ಮತ್ತು ಇದಕ್ಕೆ ಸಂಬಂಧಪಟ್ಟ ಕಲ್ಪಿತ ಇತಿಹಾಸಗಳು ಋಷಿಪ್ರೋಕ್ತವೆಂದು ತಿಳಿದುಬರುತ್ತವೆ. _ಅನು.

⊛ 'ಋಕ್ಷ'(=ಭಲ್ಲೂಕಃ) ಇತಿ ಪದಂ ಸ್ಯಾತ್ _ಅನು

* ಎಂದರೆ ಹದಿಮೂರು ಕನ್ಯೆಯರಿಂದ _ಅನು.

ಇತ್ಯಾದ್ಯಾ ಅಂಧಕಾರಮಯ್ಯಃ ಪ್ರಮಾಣ-ಯುಕ್ತಿವಿದ್ಯಾವಿರುದ್ಧಾ ಅಸಂಭವಗ್ರಸ್ತಾಃ ಕಥಾ ಉಕ್ತಾಸ್ತಾ ಅಪಿ ಮಿಥ್ಯಾ ಏವ ಸಂತೀತಿ ವಿಜ್ಞೇಯಮ್.

ಈ ಮೊದಲಾಗಿ ಅಂಧಕಾರದಿಂದ ತುಂಬಿರುವಂತಹವೂ, ಪ್ರಮಾಣ-ಯುಕ್ತಿ-ವಿದ್ಯೆಗಳಿಗೆ ವಿರುದ್ಧವೂ, ಅಸಂಭವಗ್ರಸ್ತವೂ ಆದ ಕಥೆಗಳು ಹೇಳಲ್ಪಟ್ಟಿವೆ. ಅವುಗಳೂ ಕೂಡ, ಮಿಥ್ಯೆಯೇ ಆಗಿವೆ, ಎಂದು ತಿಳಿಯಬೇಕು!

ಅಂದರೆ, ಈ ಮೊದಲಾಗಿ ಪ್ರಮಾಣ ಮತ್ತು ಯುಕ್ತಿಗೆ ವಿರುದ್ಧವಾಗಿ ಅನೇಕ ಅಸಂಭವ ಕಥೆಗಳನ್ನು ಬರೆದಿಟ್ಟಿದ್ದಾರೆ! ಅವುಗಳನ್ನು ಅಂಗೀಕರಿಸುವುದು ಯಾವ ಮನುಷ್ಯನಿಗೂ ಉಚಿತವಲ್ಲ!

ನೋಡಿರಿ! ಈ ಕಥೆಗಳೇ ಸತ್ಯಶಾಸ್ತ್ರಗಳಲ್ಲಿ ಯಾವ ಉತ್ತಮ ರೀತಿಯವಾಗಿ ಬರೆಯಲ್ಪಟ್ಟಿವೆ_

ತದ್ಯಥಾ_

ಅದು ಹೇಗೆಂದರೆ_

ಶತಪಥಬ್ರಾಹ್ಮಣದಲ್ಲಿ ಈ ಕಥೆಗೆ ಸತ್ಯದೃಷ್ಟಾಂತಮೂಲ

" ಸ ಯತ್ ಕೂರ್ಮೋ ನಾಮ । ಪ್ರಜಾಪತಿಃ ಪ್ರಜಾ ಅಸೃಜತ;
ಯದಸೃಜತಾಕರೋತ್ ತದ್; ಯದಕರೋತ್ ತಸ್ಮಾತ್ ಕೂರ್ಮಃ;
ಕಶ್ಯಪೋ ವೈ ಕೂರ್ಮಸ್ತಸ್ಮಾದಾಹುಃ ಸರ್ವಾಃ ಪ್ರಜಾಃ ಕಾಶ್ಯಪ್ಯ
ಇತಿ ॥"

[ಶತಪಥಬ್ರಾಹ್ಮಣೇ ಕಾಂ. ೭, ಅ. ೫, ಬ್ರಾ. ೧, ಕಂ. ೫]

[ಅರ್ಥ:_" ಅವನು 'ಕೂರ್ಮ', ಎಂಬ ಹೆಸರಿನವನು ಹೇಗಾದನೆಂದರೆ_ ಪ್ರಜಾಪತಿಯು ಪ್ರಜೆಗಳನ್ನು ಸೃಷ್ಟಿಸಿದನು. ಯಾವುದು 'ಅಸೃಜತ' ಆಗಿದೆಯೋ ಅದು ಅಕರೋತ್! * 'ಅಕರೋತ್', ಎಂಬ [ಪ್ರಯೋಗ]ದಿಂದ 'ಕೂರ್ಮ' [ಆಗುತ್ತದೆ.] 'ಕಶ್ಯಪ'ನೇ ಕೂರ್ಮ ಆದುದರಿಂದ, ಎಲ್ಲಾ ಪ್ರಜೆಗಳೂ 'ಕಶ್ಯಪನ ಸಂತಾನ', ಎಂದು ಹೇಳುತ್ತಾರೆ."

(ಶತಪಥಬ್ರಾಹ್ಮಣ: ೭. ೫. ೧. ೫)]

ಭಾಷ್ಯಮ್_

(ಸ ಯತ್ ಕೂರ್ಮಃ.) ಪರಮೇಶ್ವರೇಣೇದಂ ಸಕಲಂ ಜಗತ್ ಕ್ರಿಯತೇ, ತಸ್ಮಾತ್ ತಸ್ಯ 'ಕೂರ್ಮ' ಇತಿ ಸಂಜ್ಞಾ.

ಭಾಷ್ಯ_

(ಸ ಯತ್ ಕೂರ್ಮಃ.) ಪರಮೇಶ್ವರನಿಂದ ಈ ಸಮಸ್ತ ಜಗತ್ತು ಕೃತವಾಗುತ್ತದೆ. ಆದುದರಿಂದ, ಅವನಿಗೆ 'ಕೂರ್ಮ', ಎಂಬ ಹೆಸರಿದೆ.

* ಅಸೃಜತ = ಸೃಷ್ಟಿಸಿದನು. ಅಕರೋತ್ = ಮಾಡಿದನು _ಅನು.

'ಕಶ್ಯಪೋ ವೈ ಕೂರ್ಮ್ಯ' ಇತ್ಯನೇನ ಪರಮೇಶ್ವರಸ್ಯೈವ 'ಕಶ್ಯಪ' ಇತಿ ನಾಮಾಸ್ತಿ.

'ಕಶ್ಯಪನೇ ಕೂರ್ಮ', ಎಂಬ [ಪ್ರಮಾಣ]ದಿಂದ, ಪರಮೇಶ್ವರನಿಗೇ 'ಕಶ್ಯಪ', ಎಂಬ ಹೆಸರಾಗುತ್ತದೆ.

ಅಂದರೆ, ಪ್ರಜೆಗಳನ್ನು ಉತ್ಪನ್ನ ಮಾಡುವುದರಿಂದ, ಪರಮೇಶ್ವರನಿಗೆ 'ಕೂರ್ಮ', ಎಂದೂ ಮತ್ತು ಅವರನ್ನು ತನ್ನ ಜ್ಞಾನದಿಂದ ನೋಡುವ ಕಾರಣದಿಂದ, ಅವನಿಗೆ 'ಕಶ್ಯಪ', ಎಂದೂ ಕೂಡ, ಹೇಳುತ್ತಾರೆ.

ತೇನೈವೇಮಾಃ ಸರ್ವಾಃ ಪ್ರಜಾ ಉತ್ಪಾದಿತಾ-ಸ್ತಸ್ಮಾತ್ ಸರ್ವಾ ಇಮಾಃ ಪ್ರಜಾಃ ಕಾಶ್ಯಪ್ಯ ಇತ್ಯುಚ್ಯಂತೇ.

ಅವನಿಂದಲೇ ಈ ಪ್ರಜೆಗಳೆಲ್ಲರೂ ಉತ್ಪನ್ನ ರಾಗಿದ್ದಾರೆ. ಆದುದರಿಂದ, ಈ ಎಲ್ಲಾ ಪ್ರಜೆಗಳೂ 'ಕಶ್ಯಪನ ಸಂತಾನ', ಎಂದು ಹೇಳಲ್ಪಡುತ್ತಾರೆ.

'ಕಶ್ಯಪ' ಶಬ್ದದ ಅರ್ಥ 'ಪಶ್ಯಕ!'

"ಕಶ್ಯಪಃ ಕಸ್ಮಾತ್ ಪಶ್ಯಕೋ ಭವತಿ"

[ಅರ್ಥ:_ "'ಕಶ್ಯಪ' ಏಕೆಂದರೆ, 'ಪಶ್ಯಕ'ನಾಗಿದ್ದಾನೆ, ಆದುದರಿಂದ."

ಇತಿ ನಿರುಕ್ತ್ಯಾ_

ಎಂಬ ನಿರುಕ್ತಿಯಂತೆ_

ಪಶ್ಯತೀತಿ ಪಶ್ಯಃ.

ಪಶ್ಯತಿ (= ನೋಡುತ್ತಾನೆ.) ಆದುದರಿಂದ, ಪಶ್ಯ!

ಸರ್ವಜ್ಞತಯಾ ಸಕಲಂ ಜಗದ್ ವಿಜಾನಾತಿ ಸ ಪಶ್ಯಃ.

ಸರ್ವಜ್ಞತೆಯಿಂದ ಸಮಸ್ತ ಜಗತ್ತನ್ನು [ಯಾವನು] ತಿಳಿದಿರುತ್ತಾನೋ, ಅವನು 'ಪಶ್ಯ!'

ಪಶ್ಯ ಏವ ನಿರ್ಭ್ರಮತಯಾಽತಿಸೂಕ್ಷ್ಮಮಪಿ ವಸ್ತು ಯಥಾರ್ಥಂ ಜಾನಾತ್ಯೇವಾತಃ ಪಶ್ಯಕ ಇತಿ.

'ಪಶ್ಯ'ನೇ ನಿರ್ಭ್ರಮತ್ವದಿಂದ ಅತ್ಯಂತ ಸೂಕ್ಷ್ಮ ವಸ್ತುವನ್ನು ಕೂಡ, ಯಥಾರ್ಥವಾಗಿ ತಿಳಿದೇ ಇರುತ್ತಾನೆ. ಆದುದರಿಂದ, ಅವನು 'ಪಶ್ಯಕ', [ಎನಿಸುತ್ತಾನೆ.]

ಆದ್ಯಂತಾಕ್ಷರವಿಪರ್ಯಯಾದ್_

ಆದಿಯ, ಹಾಗೂ ಅಂತ್ಯದ ಅಕ್ಷರಗಳನ್ನು ಅದಲು-ಬದಲು ಮಾಡುವುದರಿಂದ_

ಹಿಂಸೇಃ ಸಿಂಹಃ; ಕೃತೇಸ್ತರ್ಕುರಿತ್ಯಾದಿವತ್ ಕಶ್ಯಪಃ, ಇತಿ;

'ಹಿಂಸೆ'ಯಿಂದ 'ಸಿಂಹ'; 'ಕೃತಿ'ಯಿಂದ 'ತರ್ಕು' [ಶಬ್ದಗಳು] ಸಿದ್ಧವಾಗುವಂತೆ, 'ಕಶ್ಯಪ', ಎಂದು;

'ಹಯವರಟ್' ಇತ್ಯೇತಸ್ಯೋಪರಿ ಮಹಾಭಾಷ್ಯ-ಪ್ರಮಾಣೇನ ಪದಂ ಸಿಧ್ಯತಿ.

'ಹಯವರಟ್' [ಪ್ರತ್ಯಾಹಾರ]ದ ಮೇಲಿನ ಮಹಾ-ಭಾಷ್ಯದ ಪ್ರಮಾಣದ ಮೇರೆಗೆ ಪದವು ಸಿದ್ಧವಾಗುತ್ತದೆ.

ಅಂದರೆ, 'ಕಶ್ಯಪ', ಎಂಬ ಶಬ್ದವು 'ಪಶ್ಯಕ', ಎಂಬ ಶಬ್ದದ ಆದಿ-ಅಂತ್ಯ ಅಕ್ಷರಗಳ ಪಲ್ಲಟ ಮಾಡುವುದರಿಂದ, ನಿರ್ಮಿತವಾಗುತ್ತದೆ.

ಅತಃ ಸುಷ್ಠು ವಿಜ್ಞಾಯತೇ ಕಾಶ್ಯಪ್ಯಃ ಪ್ರಜಾ ಇತಿ.

ಆದುದರಿಂದ, ಪ್ರಜೆಗಳು 'ಕಶ್ಯಪನ ಸಂತಾನ', ಎಂದು ಚೆನ್ನಾಗಿ ತಿಳಿದು ಬರುತ್ತದೆ!

ಈ ರೀತಿಯ ಉತ್ತಮ ಕಥೆಗಳನ್ನು ತಿಳಿದುಕೊಂಡು*, ಎಲ್ಲರಿಗೂ ಕಲ್ಯಾಣವಾಗಲಿ, ಎಂದು ಆ ಮಿಥ್ಯಾಕಥೆಗಳನ್ನು ಎಲ್ಲರೂ ಬಿಟ್ಟು ಬಿಡಬೇಕು!

ಈಗ, **ಗಯಾ** ಮೊದಲಾದ ತೀರ್ಥಗಳ ಕಥೆಗಳನ್ನು ನೋಡಿರಿ_

[೬] ಗಯಾ ಮೊದಲಾದ ತೀರ್ಥಗಳ ಮಿಥ್ಯಾಕಥೆ!

'**ಗಯಾ**'ವನ್ನು ತೀರ್ಥ ಮಾಡಿಟ್ಟಿರುವ ಈ ಕಥೆಯು ಆರನೆಯದು!

"ಮಗಧದೇಶದಲ್ಲಿ ಒಂದು ಸ್ಥಾನವಿದೆ. ಅಲ್ಲಿ ಫಲ್ಗುನದಿಯ ತೀರದಲ್ಲಿ ಕಲ್ಲಿನ ಮೇಲೆ ಮನುಷ್ಯನ ಪಾದದ ಚಿಹ್ನೆಯನ್ನು ಕೆತ್ತಿ, ಅದರ ಹೆಸರನ್ನು 'ವಿಷ್ಣುಪಾದ', ಎಂದು ಜನರು ಇಟ್ಟಿದ್ದಾರೆ! ಮತ್ತು_ 'ಇಲ್ಲಿ ಶ್ರಾದ್ಧ ಮಾಡುವುದರಿಂದ, ಪಿತೃಗಳಿಗೆ ಮುಕ್ತಿಯುಂಟಾಗಿ ಬಿಡುತ್ತದೆ', ಎಂದು ಪ್ರಸಿದ್ಧಿ ಮಾಡಿದ್ದಾರೆ!"

ಯಾರು 'ಕಣ್ಣಿನಿಂದ ಕುರುಡರಾಗಿ, ಗಂಟಿನಲ್ಲಿ ಬಲವಾಗಿದ್ದುಕೊಂಡು', ಇವರ ಬಲೆಯಲ್ಲಿ ಹೋಗಿ ಸಿಕ್ಕಿಹಾಕಿಕೊಳ್ಳುತ್ತಾರೋ, ಅವರಿಗೆ ಗಯಾದವರು ಕ್ಷೌರದ ಕತ್ತಿಯ ಹಿಂಭಾಗದಿಂದ ಚೆನ್ನಾಗಿ ತಲೆ ಬೋಳಿಸುತ್ತಾರೆ! ಈ ರೀತಿಯ ಪ್ರಮಾದದಿಂದ, ಅವರ ಹಣದ ನಾಶ ಮಾಡಿಸುತ್ತಾರೆ.

ಪರಧನಹರಣದಿಂದ ಹೊಟ್ಟೆ ಹೊರೆಯುವ ಈ ಮೋಸದ ಲೀಲೆಯು ಕೇವಲ ಸುಳ್ಳಿನ ಕಂತೆಯೇ ಆಗಿರುತ್ತದೆ!

ಸತ್ಯಶಾಸ್ತ್ರಗಳಲ್ಲಿ ಬರೆದಿರುವಂತಹ ಮುಂದಿನ ಕಥೆಯನ್ನು ನೋಡಿದರೆ, ಎಲ್ಲರಿಗೂ [ಸತ್ಯವು] ಪ್ರಕಟವಾಗಿ ಬಿಡುವುದು_

ಶತಪಥಬ್ರಾಹ್ಮಣದಲ್ಲಿ ಗಯಾಶ್ರಾದ್ಧದ ಸತ್ಯಾರ್ಥ!

"ಪ್ರಾಣೋ ವೈ ಬಲಂ, ತತ್ಪ್ರಾಣೇ ಪ್ರತಿಷ್ಠಿತಂ, ತಸ್ಮಾದಾಹುರ್ಬಲಗ್ಂ ಸತ್ಯಾದೋಜೀಯಃ । ಇತ್ಯೇವಮ್ವೇಷಾ ಗಾಯತ್ರ್ಯಧ್ಯಾತ್ಮಂ ಪ್ರತಿಷ್ಠಿತಾ ॥"

[ಶತಪಥಬ್ರಾಹ್ಮಣೇ ಕಾಂ. ೧೪, ಅ. ೮, ಬ್ರಾ. ೧೫, ಕಂ. ೬]

[ಅರ್ಥ:_ "ಪ್ರಾಣವೇ ಬಲವಾಗಿರುತ್ತದೆ; ಅದು ಪ್ರಾಣದಲ್ಲಿ ಪ್ರತಿಷ್ಠಿತವಾಗಿರುತ್ತದೆ; ಆದುದರಿಂದ, ಬಲವು ಸತ್ಯಕ್ಕಿಂತ ಹೆಚ್ಚು ಓಜಸ್ವಿಯಾಗಿದೆ, ಎಂದು ಹೇಳುತ್ತಾರೆ. ಈ ರೀತಿಯಾಗಿಯೇ ಈ ಗಾಯತ್ರಿಯು ಅಧ್ಯಾತ್ಮದಲ್ಲಿ ಪ್ರತಿಷ್ಠಿತವಾಗಿದೆ."

(ಶತಪಥಬ್ರಾಹ್ಮಣ: ೧೪. ೮. ೧೫. ೬)]

---

* ವೇದಗಳಲ್ಲಿ '**ಕಶ್ಯಪ**' ಶಬ್ದವು ಬೇರೆ ಸಂದರ್ಭಗಳಲ್ಲಿ ಅನೇಕ ಸ್ಥಾನಗಳಲ್ಲಿ ಬಂದಿದ್ದರೂ, '**ಕಶ್ಯಪಸೃಷ್ಟಿ!**'ಯ ವಿಚಿತ್ರವರ್ಣನೆಗೆ ಮೂಲವಿಲ್ಲ _ಅನು.

"ಸಾ ಹೈಷಾ ಗಯಾಂಸ್ತತ್ರೇ । ಪ್ರಾಣಾ ವೈ ಗಯಾಸ್ತತ್ಪ್ರಾಣಾಂಸ್ತತ್ರೇ,
ತದ್ಯದ್ಗಯಾಂಸ್ತತ್ರೇ ತಸ್ಮಾದ್ ಗಾಯತ್ರೀ ನಾಮ ॥೧॥"

[ಶತಪಥಬ್ರಾಹ್ಮಣೇ ಕಾಂ. ೧೪, ಅ. ೮, ಬ್ರಾ. ೧೫, ಕಂ. ೭]

[ಅರ್ಥ:_ "ಆ ಇದೇ 'ಗಯ'ಗಳನ್ನು ರಕ್ಷಿಸುತ್ತದೆ. 'ಗಯಾ', ಎಂದರೆ ಪ್ರಾಣಗಳೇ! ಅದು ಪ್ರಾಣಗಳನ್ನು ರಕ್ಷಿಸುತ್ತದೆ; ಅದು ಗಯಗಳನ್ನು ರಕ್ಷಿಸುತ್ತದೆಯಾದುದರಿಂದ, ಅದಕ್ಕೆ 'ಗಾಯತ್ರೀ', ಎಂದು ಹೆಸರು.

(ಶತಪಥಬ್ರಾಹ್ಮಣ: ೧೪. ೮. ೧೫. ೭)]

ಭಾಷ್ಯಮ್_

ಏವಮೇವ ಗಯಾಯಾಂ ಶ್ರಾದ್ಧಂ ಕರ್ತವ್ಯ-ಮಿತ್ಯತ್ರೋಚ್ಯತೇ_

ತದ್ಯಥಾ_

ಭಾಷ್ಯ_

ಹಾಗಾದರೆ, 'ಗಯಾ'ದಲ್ಲಿ 'ಶ್ರಾದ್ಧ' [ಹೇಗೆ] ಮಾಡಬೇಕು? ಎಂಬ ಪ್ರಶ್ನೆಗೆ ಇಲ್ಲಿ ಉತ್ತರ ಹೇಳಲಾಗುತ್ತದೆ_

ಅಂದರೆ, [ಮೇಲಿನ] ವಚನಗಳ ಅಭಿಪ್ರಾಯವೇನೆಂದರೆ_ ಅತ್ಯಂತ ಶ್ರದ್ಧೆಯಿಂದ **'ಗಯಾ'**ಸಂಜ್ಞೆಯನ್ನುಳ್ಳ ಪ್ರಾಣ ಮೊದಲಾದುದರಲ್ಲಿ ಪರಮೇಶ್ವರನ ಉಪಾಸನೆ ಮಾಡುವುದರಿಂದ, ಜೀವಾತ್ಮನ ಮುಕ್ತಿ ಉಂಟಾಗಿಬಿಡುತ್ತದೆ!

ಅದು ಹೇಗೆಂದರೆ_

ಪ್ರಾಣಗಳಲ್ಲಿ ಪರಮೇಶ್ವರನ ಉಪಾಸನೆಯು 'ಗಯಾಶ್ರಾದ್ಧ!'

(ಪ್ರಾಣೋ.) ಪ್ರಾಣ ಏವ ಬಲಮಿತಿ ವಿಜ್ಞಾಯತೇ.

ಬಲಮೋಜೇಯಃ.

ತತ್ರೈವ ಸತ್ಯಂ ಪ್ರಾಣೇಽಧ್ಯಾತ್ಮಂ ಪ್ರತಿಷ್ಠಿತಮ್.

ತತ್ರ ಚ ಪರಮೇಶ್ವರಃ ಪ್ರತಿಷ್ಠಿತಸ್ತದ್ವಾಚಕತ್ವಾತ್.

(ಪ್ರಾಣೋ ವೈ ಬಲಮ್.) ಪ್ರಾಣವೇ ಬಲ, ಎಂದು [ಇಲ್ಲಿ] ತಿಳಿಸಲಾಗಿದೆ.

ಬಲವು ಓಜಸ್ಸಿನಿಂದ ಕೂಡಿರುತ್ತದೆ!

ಅದರಲ್ಲೇ ಸತ್ಯವೂ, [ಹಾಗೂ] ಪ್ರಾಣದಲ್ಲಿ ಅಧ್ಯಾತ್ಮವೂ ಪ್ರತಿಷ್ಠಿತವಾಗಿದೆ.

ಅಂದರೆ, ಪ್ರಾಣದಲ್ಲಿ ಬಲವೂ, ಹಾಗೂ ಸತ್ಯವೂ ಪ್ರತಿಷ್ಠಿತವಾಗಿವೆ.

ಮತ್ತು ಅದರಲ್ಲಿ ಪರಮೇಶ್ವರನು ಪ್ರತಿಷ್ಠಿತನಾಗಿದ್ದಾನೆ. ಏಕೆಂದರೆ, ಅವನ ವಾಚಕತ್ವವು ಅದಾಗಿದೆ.

ಅಂದರೆ, ಪರಮೇಶ್ವರನು ಪ್ರಾಣದ ಪ್ರಾಣ ಕೂಡ, ಆಗಿದ್ದಾನೆ!

ಗಾಯತ್ರ್ಯಪಿ ಬ್ರಹ್ಮವಿದ್ಯಾಯಾಮಧ್ಯಾತ್ಮಮ್ ಪ್ರತಿಷ್ಠಿತಾ. [೬]

ಗಾಯತ್ರಿಯೂ ಕೂಡ, ಬ್ರಹ್ಮವಿದ್ಯೆಯಲ್ಲಿ ಅಧ್ಯಾತ್ಮರೂಪವಾಗಿ ಪ್ರತಿಷ್ಠಿತವಾಗಿದೆ.

ಅಂದರೆ, ಪರಮೇಶ್ವರನ ಪ್ರತಿಪಾದನೆ ಮಾಡುವಂತಹುದು **ಗಾಯತ್ರೀಮಂತ್ರ**ವಾಗಿದೆ! (೬)

ತಾಂ ಗಾಯತ್ರೀಂ 'ಗಯಾಮ್' ಆಹ.

ಆ ಗಾಯತ್ರಿಯನ್ನು '**ಗಯಾ**', ಎಂದು ಹೇಳಲಾಗಿದೆ. ಏಕೆಂದರೆ_

ಪ್ರಾಣಾನಾಂ ಗಯೇತಿ ಸಂಜ್ಞಾ.

ಪ್ರಾಣಗಳಿಗೆ '**ಗಯಾ**', ಎಂಬ ಹೆಸರಿದೆ.

'ಪ್ರಾಣಾ ವೈ ಗಯಾಃ' ಇತ್ಯುಕ್ತತ್ವಾತ್.

ಏಕೆಂದರೆ_ '**ಪ್ರಾಣಗಳೇ ಗಯಾ**', ಎಂದು [ಮೇಲೆ] ಹೇಳಲಾಗಿದೆ.

ತತ್ರ ಗಯಾಯಾಂ ಶ್ರಾದ್ಧಂ ಕರ್ತ್ತವ್ಯಮ್ ;

ಅಲ್ಲಿ '**ಗಯಾದಲ್ಲಿ ಶ್ರಾದ್ಧವನ್ನು ಮಾಡಬೇಕು**', [ಎಂದರೇನರ್ಥ ?]

ಅರ್ಥಾದ್ ಗಯಾಖ್ಯೇಷು ಪ್ರಾಣೇಷು ಶ್ರದ್ಧಯಾ ಸಮಾಧಿವಿಧಾನೇನ ಪರಮೇಶ್ವರಪ್ರಾಪ್ತಾವತ್ಯಂತ-ಶ್ರದ್ಧಧಾನಾ ಜೀವಾ ಅನುತಿಷ್ಠೇಯುರಿತ್ಯೇಕಂ ಗಯಾ-ಶ್ರಾದ್ಧವಿಧಾನಮ್.

ಎಂದರೆ, ಪರಮೇಶ್ವರನ ಪ್ರಾಪ್ತಿಗಾಗಿ, '**ಗಯಾ**', ಎಂಬ ಸಂಜ್ಞೆಯನ್ನುಳ್ಳ ಪ್ರಾಣಗಳಲ್ಲಿ ಶ್ರದ್ಧೆಯಿಂದಲೂ, [ಹಾಗೂ] ಸಮಾಧಿಯು [ಪ್ರಾಪ್ತವಾಗುವ] ವಿಧಾನದಿಂದಲೂ, ಜೀವಾತ್ಮರು ಅತ್ಯಂತ ಶ್ರದ್ಧೆಯನ್ನುಳ್ಳವರಾಗಿ, ಅನುಷ್ಠಾನ ಮಾಡಬೇಕು, ಎಂಬುದು '**ಗಯಾಶ್ರಾದ್ಧ**'ದ ಒಂದು ವಿಧಿಯಾಗಿರುತ್ತದೆ.

ಅಂದರೆ, ಗಾಯತ್ರೀಮಂತ್ರದ ಅರ್ಥವನ್ನು ತಿಳಿದುಕೊಂಡು, ಶ್ರದ್ಧೆಯಿಂದ ಕೂಡಿ, ಪರಮೇಶ್ವರನ ಭಕ್ತಿ ಮಾಡುವುದರಿಂದ, ಜೀವನು ಎಲ್ಲಾ ದುಃಖಗಳಿಂದ ಬಿಡುಗಡೆ ಹೊಂದಿ, ಮುಕ್ತಿಯನ್ನು ಪಡೆದುಕೊಳ್ಳುತ್ತಾನೆ!

ಮತ್ತು ಪ್ರಾಣಗಳಿಗೂ ಕೂಡ, '**ಗಯಾ**', ಎಂಬ ಹೆಸರಿರುವುದರಿಂದ, ಪಿತೃಗಳು, ಎಂದರೆ ಜ್ಞಾನೀಜನರು ಪ್ರಾಣವನ್ನು ಪ್ರಾಣಾಯಾಮದ ರೀತಿಯಿಂದ ತಡೆದು, ಪರಮೇಶ್ವರನ ಭಕ್ತಿಯ ಪ್ರತಾಪದಿಂದ ಎಲ್ಲಾ ದುಃಖಗಳಿಂದ ರಹಿತರಾಗಿ, ಮುಕ್ತರಾಗಿ ಬಿಡುತ್ತಾರೆ!

ಗಯಾನ್ ಪ್ರಾಣಾನ್ ತ್ರಾಯತೇ ಸಾ 'ಗಾಯತ್ರೀ' ಇತ್ಯಭಿಧೀಯತೇ [೭] ॥೧॥

'**ಗಯಾ**', ಎಂದರೆ ಪ್ರಾಣಗಳನ್ನು [ಯಾವುದು] ರಕ್ಷಿಸುತ್ತದೋ, ಅದು '**ಗಾಯತ್ರೀ**', ಎಂದು ಕರೆಯಲ್ಪಡುತ್ತದೆ.

ಅಂದರೆ, ಪರಮೇಶ್ವರನು ಪ್ರಾಣಗಳ ರಕ್ಷಣೆ ಮಾಡುವವನಾಗಿದ್ದಾನೆ. ಆದುದರಿಂದ, ಈಶ್ವರನ ಹೆಸರು '**ಗಾಯತ್ರೀ**', ಎಂದಿರುತ್ತದೆ. (೭) [೧]

ಗೃಹಕೃತ್ಯದ-ಹಿರಿಯರ ಸೇವೆಯೂ 'ಗಯಾಶ್ರಾದ್ಧ'ವೇ!

"ಗಯ ಇತ್ಯಪತ್ಯನಾಮಸು ಪಠಿತಮ್ ॥ ೨ ॥"

[ನಿಘಂಟೌ ಅ. ೨, ಖಂ. ೨]

[ಅರ್ಥ:_ " 'ಗಯ', ಎಂಬ [ಶಬ್ದವು] ಸಂತಾನದ ಹೆಸರುಗಳಲ್ಲಿ ಹೇಳಲ್ಪಟ್ಟಿದೆ."

(ನಿಘಂಟುಃ ೨. ೨)]

ಭಾಷ್ಯಮ್_

ಭಾಷ್ಯ_

ಏವಂ ಗೃಹ*ಸ್ಯಾಪತ್ಯಸ್ಯ ಪ್ರಜಾಯಾಶ್ಚ ಗಯೇತಿ ನಾಮಾಸ್ತಿ.

ಮತ್ತು ಗೃಹದ*, ಹಾಗೂ 'ಅಪತ್ಯ', [ಎಂದರೆ ಸಂತಾನ]ದ ಮತ್ತು ಪ್ರಜೆಯ ಹೆಸರು **'ಗಯಾ'**, ಎಂದಿದೆ.

ಅಂದರೆ, ನಿಘಂಟುವಿನಲ್ಲಿ ಮನೆ, ಸಂತಾನ ಮತ್ತು ಪ್ರಜೆ_ ಈ ಮೂರರ ಹೆಸರೂ **'ಗಯಾ'**, ಎಂದಿರುತ್ತದೆ.

ಅತ್ರಾಪಿ ಸರ್ವೈರ್ಮನುಷ್ಯೈಃ ಶ್ರದ್ಧಾತವ್ಯಮ್.

ಇದರಲ್ಲೂ ಕೂಡ, ಮನುಷ್ಯರೆಲ್ಲರಿಂದ ಶ್ರದ್ಧೆ ಇಡಲ್ಪಡಬೇಕು!

ಅಂದರೆ, ಮನುಷ್ಯರು ಇವುಗಳಲ್ಲಿ** ಅತ್ಯಂತ ಶ್ರದ್ಧೆಯನ್ನಿಡಬೇಕು!

ಗೃಹಕೃತ್ಯೇಷು ಶ್ರದ್ಧಾವಶ್ಯಂ ವಿಧೇಯಾ.

ಗೃಹಕಾರ್ಯಗಳಲ್ಲಿ ಅವಶ್ಯವಾಗಿ ಶ್ರದ್ಧೆಯನ್ನು ಇಡಬೇಕು!

ಮಾತುಃ ಪಿತುರಾಚಾರ್ಯಸ್ಯಾತಿಥೇಶ್ಚಾನ್ಯೇಷಾಂ ಮಾನ್ಯಾನಾಂ ಚ ಶ್ರದ್ಧಯಾ ಸೇವಾಕರಣಂ ಗಯಾ-ಶ್ರಾದ್ಧಮಿತ್ಯುಚ್ಯತೇ.

ತಾಯಿಯ, ತಂದೆಯ, ಆಚಾರ್ಯನ, ಹಾಗೂ ಅತಿಥಿಯ ಮತ್ತು ಇತರ ಮಾನ್ಯರ ಸೇವೆಯನ್ನು ಶ್ರದ್ಧೆಯಿಂದ ಮಾಡುವುದು 'ಗಯಾಶ್ರಾದ್ಧ', ಎಂದು ಕರೆಯಲ್ಪಡುತ್ತದೆ.

ಅಂದರೆ, ಹೀಗೆಯೇ, ತಾಯಿ-ತಂದೆ, ಆಚಾರ್ಯ ಮತ್ತು ಅತಿಥಿಗಳ ಸೇವೆಯಲ್ಲಿ, ಹಾಗೂ ಎಲ್ಲರ ಉಪಕಾರದ ಮತ್ತು ಉನ್ನತಿಯ ಕಾರ್ಯಗಳ ಸಿದ್ಧಿಯಲ್ಲಿ ಯಾವ ಅತ್ಯಂತ ಶ್ರದ್ಧೆ ಇಡಲಾಗುತ್ತದೋ, ಅದರ ಹೆಸರು **'ಗಯಾಶ್ರಾದ್ಧ'**, ಎಂದಿರುತ್ತದೆ.

* ನಿಘಂಟೌ (೩. ೪) 'ಗಯಃ' ಇತಿ ಗೃಹನಾಮಸ್ವಪಿ ಪಠಿತಮ್ _ಯು. ಮೀ.

* ನಿಘಂಟು (೩. ೪) _ಅನು.

** ನಿಘಂಟು (೨. ೧೦)ವಿನಲ್ಲಿ ಧನಕ್ಕೂ **'ಗಯ'**, ಎಂಬ ಹೆಸರಿದೆ. _ಅನು.

ಮಕ್ಕಳಿಗೆ ಉತ್ತಮ ಶಿಕ್ಷಣ ಕೊಡುವುದೂ 'ಗಯಾಶ್ರಾದ್ಧ'ವೇ!

ತಥೈವ ಸ್ವಸ್ವಾಪತ್ಯೇಷು ಪ್ರಜಾಯಾಂ ಚೋತ್ತಮ-ಶಿಕ್ಷಾಕರಣೇ ಹ್ಯುಪಕಾರೇ ಚ ಶ್ರದ್ಧಾವಶ್ಯಂ ಸರ್ವೈಃ ಕಾರ್ಯೇತಿ.

ಹಾಗೆಯೇ, ತನ್ನ ಮಕ್ಕಳಿಗೂ, ಹಾಗೂ ಪ್ರಜೆಗಳಿಗೂ ಉತ್ತಮ ಶಿಕ್ಷಣವನ್ನು ಕೊಡಿಸುವುದರಲ್ಲೂ, ಮತ್ತು ಉಪಕಾರ ಮಾಡುವುದರಲ್ಲೂ ಎಲ್ಲರೂ ಅವಶ್ಯವಾಗಿ ಶ್ರದ್ಧೆಯನ್ನಿಡಬೇಕು!

ಅಂದರೆ, ತಮ್ಮ ಮಕ್ಕಳಿಗೆ ಸುಶಿಕ್ಷಣದ ಮೂಲಕ ವಿದ್ಯೆ ಕೊಡಿಸುವುದು, ಮತ್ತು ಅವರ ಪಾಲನೆಯಲ್ಲಿ ಅತ್ಯಂತ ಪ್ರೀತಿ ಇಡುವುದು_ ಇದರ ಹೆಸರೂ ಕೂಡ, **'ಗಯಾಶ್ರಾದ್ಧ'**ವಾಗಿರುತ್ತದೆ.

ಪ್ರಜೆಗಳ ಪಾಲನೆಯೂ 'ಗಯಾಶ್ರಾದ್ಧ'ವೇ!

ಮತ್ತು ಧರ್ಮದಿಂದ ಪ್ರಜೆಗಳ ಪಾಲನೆ, ಸುಖದ ಉನ್ನತಿ, ವಿದ್ಯೆಯ ಪ್ರಚಾರ, ಶ್ರೇಷ್ಠರ ರಕ್ಷಣೆ, ದುಷ್ಟರಿಗೆ ದಂಡ ಕೊಡುವುದು, ಮತ್ತು ಸತ್ಯದ ಉನ್ನತಿ ಮೊದಲಾದ ಧರ್ಮದ ಕಾರ್ಯಗಳನ್ನು ಮಾಡುವುದು_ ಈ ಎಲ್ಲವೂ ಸೇರಿ, ಅಥವಾ ಬೇರೆ ಬೇರೆಯಾಗಿಯೂ ಕೂಡ, **'ಗಯಾಶ್ರಾದ್ಧ'**, ಎನಿಸುತ್ತವೆ.

ಅತ್ರ ಶ್ರದ್ಧಾಕರಣೇನ ವಿದ್ಯಾಪ್ರಾಪ್ತ್ಯಾ ಮೋಕ್ಷಾಖ್ಯಂ ವಿಷ್ಣುಪದಂ ಲಭ್ಯತ ಇತಿ ನಿಶ್ಚಿಯತೇ.

ಇವುಗಳಲ್ಲಿ ಶ್ರದ್ಧೆಯನ್ನು ಇಡುವುದರಿಂದಲೂ, [ಹಾಗೂ] ವಿದ್ಯೆಯ ಪ್ರಾಪ್ತಿಯಿಂದಲೂ **'ಮೋಕ್ಷ'**, ಎಂಬ ಹೆಸರಿನ **ವಿಷ್ಣುಪದ**ವು ಸಿಗುತ್ತದೆ, ಎಂಬುದು ನಿಶ್ಚಯವಾಗಿದೆ!

[ಆದುದರಿಂದ,] ಈ ಅತ್ಯಂತ ಶ್ರೇಷ್ಠಕಥೆಯನ್ನು ಬಿಟ್ಟು, ವಿದ್ಯಾಹೀನ ಪುರುಷರು ಯಾವ ಸುಳ್ಳು ಕಥೆಯನ್ನು ನಿರ್ಮಿಸಿಟ್ಟಿದ್ದಾರೋ, ಅದನ್ನು ಎಂದಿಗೂ ಅಂಗೀಕರಿಸಬಾರದು!*

* ವೇದಗಳಲ್ಲಿ **'ಗಯ'** ಶಬ್ದವು ಅನೇಕ ಸ್ಥಾನಗಳಲ್ಲಿ ಬಂದಿದೆ. ಆದರೆ, ಪೌರಾಣಿಕರ ಗಯಾಶ್ರಾದ್ಧದ ವಿಧಾನಕ್ಕೆ ವೇದಗಳಲ್ಲಿ ಮೂಲ ಇಲ್ಲ_ಅನು.

'ಗಯಾತೀರ್ಥ' ಮತ್ತು 'ವಿಷ್ಣುಪಾದ'ಗಳ ಹೆಸರು ವ್ಯರ್ಥ!

ಅತ್ರೈವ ಭ್ರಾಂತ್ಯಾ ವಿಷ್ಣುಗಯೇತಿ ಚ ಪದ-ದ್ವಯೋರರ್ಥವಿಜ್ಞಾನಾಭಾವಾನ್ಮಗಧದೇಶೈಕದೇಶೇ ಚಿಹ್ನಂ ಕಾರಯಿತ್ವಾ ;

ಈ ವಿಷಯದಲ್ಲಿಯೇ ಭ್ರಾಂತಿಯಿಂದ 'ವಿಷ್ಣು-ಗಯಾ', ಎಂಬ ಎರಡು ಪದಗಳ ಅರ್ಥದ ವಿಶೇಷ ಜ್ಞಾನವಿಲ್ಲದೆಯೇ_ 'ಮಗಧದೇಶದ ಯಾವುದೋ ಸ್ಥಾನದಲ್ಲಿ ಕಲ್ಲಿನ ಮೇಲೆ ಶಿಲ್ಪಿಯಿಂದ ಮನುಷ್ಯನ ಪಾದಗಳ ಚಿಹ್ನೆಯನ್ನು ಕೆತ್ತಿಸಿ ; .

ತಸ್ಯೈವ ಕೈಶ್ಚಿತ್ ಸ್ವಾರ್ಥಸಾಧನತತ್ಪರೈರುದರಂಭರೈ-ರ್ವಿಷ್ಣುಪದಮಿತಿ ನಾಮ ರಕ್ಷಿತಂ, ತಸ್ಯ ಸ್ಥಲಸ್ಯ ಗಯೇತಿ ಚ, ತದ್ ವ್ಯರ್ಥಮೇವ.

ಅದಕ್ಕೇನೇ, 'ವಿಷ್ಣುಪಾದ', ಎಂದೂ, ಮತ್ತು ಆ ಸ್ಥಳಕ್ಕೆ 'ಗಯಾ', ಎಂದೂ' ಹೆಸರನ್ನು ಯಾರೋ ಸ್ವಾರ್ಥಸಾಧನತತ್ಪರರೂ, ಹೊಟ್ಟೆ ಹೊರೆಯುವವರೂ ಆದವರು ಕೊಟ್ಟಿದ್ದಾರೆ! ಅದು ವ್ಯರ್ಥವೇ ಆಗಿದೆ!

ಅಂದರೆ, ಅಲ್ಲಿ ಕಲ್ಲಿನ ಮೇಲೆ ಮನುಷ್ಯನ ಪಾದದ ಚಿಹ್ನೆಯನ್ನು ಕೆತ್ತಿಸಿ, ಅದರ ಹೆಸರನ್ನು 'ವಿಷ್ಣುಪದ', ಎಂದು ಏನಿಟ್ಟಿದ್ದಾರೋ, ಅದೆಲ್ಲವೂ ಮೂಲದಿಂದಲೇ ಮಿಥ್ಯೆಯಾಗಿದೆ.

ಕುತಃ?

ಏಕೆಂದರೆ_

ವಿಷ್ಣುಪದಂ ಮೋಕ್ಷಸ್ಯ ನಾಮಾಸ್ತಿ.

'ವಿಷ್ಣುಪದ', ಎಂಬುದು ಮೋಕ್ಷದ ಹೆಸರಾಗಿದೆ.

[ಗಯಪದಂ] ಪ್ರಾಣ-ಗೃಹ-ಪ್ರಜಾನಾಂ ಚ.

ಮತ್ತು 'ಗಯ', ಎಂಬ ಪದವು ಪ್ರಾಣ, ಗೃಹ, ಹಾಗೂ ಪ್ರಜೆಗಳ ಹೆಸರಾಗಿದೆ.

ಅತೋಽತ್ರೇಯಂ ತೇಷಾಂ ಭ್ರಾಂತಿರ್ಜಾತೇತಿ ಬೋಧ್ಯಮ್.

ಆದುದರಿಂದ, ಈ ವಿಷಯದಲ್ಲಿ ಅವರಿಗೆ ಈ ಭ್ರಾಂತಿಯು ಉತ್ಪನ್ನವಾಗಿದೆ, ಎಂದು ತಿಳಿಯಬೇಕು!

ಅತ್ರ ಪ್ರಮಾಣಮ್_

ಇದಕ್ಕೆ ಪ್ರಮಾಣವೇನೆಂದರೆ_

'ವಿಷ್ಣುಪಾದ'ಕ್ಕೆ ಯಜುರ್ವೇದದಲ್ಲಿ ಸತ್ಯಾರ್ಥಮೂಲ

[ಋಷಿಃ_ ಮೇಧಾತಿಥಿಃ ; ದೇವತಾ_ ವಿಷ್ಣುಃ ; ಛಂದಃ_ ಭುರಿಗಾರ್ಷೀ ಗಾಯತ್ರೀ ; ಸ್ವರಃ_ ಷಡ್ಜಃ]

ಇದಂ ವಿಷ್ಣುರ್ವಿಚಕ್ರಮೇ ತ್ರೇಧಾ ನಿದಧೇ ಪದಮ್ ।
ಸಮೂಢಮಸ್ಯ ಪಾಗ್ಂಸುರೇ ಸ್ವಾಹಾ ॥

[ಯಜುರ್ವೇದೇ ಅ. ೫, ಮಂ. ೧೫]

[ಅರ್ಥ:_ "ವಿಷ್ಣುವು ಈ ಜಗತ್ತನ್ನು ವಿವಿಧ ರೂಪದಲ್ಲಿ ರಚಿಸಿದ್ದಾನೆ. ಮತ್ತು ಇದನ್ನು ಮೂರು ವಿಧದಲ್ಲಿ ಧಾರಣ ಮಾಡಿಕೊಂಡಿದ್ದಾನೆ. ಇದರ ಅದೃಶ್ಯ ಪದವನ್ನು ಅಂತರಿಕ್ಷದಲ್ಲಿ ಇಟ್ಟಿದ್ದಾನೆ."

(ಯಜುರ್ವೇದ: ೫. ೧೫)]

ಭಾಷ್ಯಮ್_

ಅಸ್ಯಾರ್ಥಂ ಯಥಾವದವಿದಿತ್ವಾ ಭ್ರಮೇಣೇಯಂ ಕಥಾ ಪ್ರಚಾರಿತಾ.

ತದ್ಯಥಾ_

ವಿಷ್ಣುರ್ವ್ಯಾಪಕಃ ಪರಮೇಶ್ವರಃ ಸರ್ವಜಗತ್ಕರ್ತಾ ತಸ್ಯ ವಿಷ್ಣುರಿತಿ ನಾಮ.

ಅತ್ರಾಹ ನಿರುಕ್ತಕಾರಃ_

ಭಾಷ್ಯ_

ಇದರ ಅರ್ಥವನ್ನು ಸರಿ ಸರಿಯಾಗಿ ತಿಳಿಯದೇ, ಭ್ರಾಂತಿಯಿಂದ ಈ ಕಥೆಯು ಪ್ರಚಾರಿತವಾಗಿದೆ!

ಅದು ಹೇಗೆಂದರೆ*_

'ವಿಷ್ಣು', ಎಂದರೆ 'ವ್ಯಾಪಕ', [ಎಂದರ್ಥ. ಅಂದರೆ,] ಸರ್ವಜಗತ್ಕರ್ತೃವಾದ ಪರಮೇಶ್ವರ! ಅವನಿಗೆ 'ವಿಷ್ಣು', ಎಂದು ಹೆಸರು.

ಅಂದರೆ, ಎಲ್ಲಾ ಜಗತ್ತನ್ನು ನಿರ್ಮಿಸುವ ವ್ಯಾಪಕ ಪರಮೇಶ್ವರನು ಯಾವನಿದ್ದಾನೋ, ಅವನ ಹೆಸರೇ 'ವಿಷ್ಣು', ಎಂದಿರುತ್ತದೆ.

ಈ ವಿಷಯದಲ್ಲಿ ನಿರುಕ್ತಕಾರರು ಹೇಳಿದ್ದಾರೇನೆಂದರೆ, ನೋಡಿ_

'ವಿಷ್ಣು'ಶಬ್ದದ ಸತ್ಯಾರ್ಥಕ್ಕೆ ನಿರುಕ್ತದಲ್ಲಿ ಪ್ರಮಾಣ

"ಪೂಷೇತ್ಯಥ ಯದ್ವಿಷಿತೋ ಭವತಿ ತದ್ವಿಷ್ಣುರ್ಭವತಿ ।
ವಿಷ್ಣುರ್ವಿಶತೇರ್ವಾ ವ್ಯಶ್ನೋತೇರ್ವಾ ತಸ್ಯೈಷಾ ಭವತಿ ॥"

[ನಿರುಕ್ತೇ ಅ. ೧೨, ಖಂ. ೧೮]

[ಅರ್ಥ:_ "'ಪೂಷಾ', ಎಂದಿದೆ. ಈಗ ಯಾವುದು ವಿವಿಧ ಪ್ರಕಾರದಿಂದ ವ್ಯಾಪಕವಾಗುತ್ತದೋ, ಅದು 'ವಿಷ್ಣು', ಆಗುತ್ತದೆ. ಪ್ರವೇಶಿಸುವುದರಿಂದ, ಅಥವಾ ವಿಶೇಷವಾಗಿ ವ್ಯಾಪಿಸುವುದರಿಂದ 'ವಿಷ್ಣು', ಎಂದಾಗುತ್ತದೆ. ಅದರ [ಬಗ್ಗೆ] ಈ [ಋಚೆ] ಇದೆ."

(ನಿರುಕ್ತ: ೧೨. ೧೮)]

'ಇದಂ ವಿಷ್ಣು'ರಿತ್ಯೃಕ್.+

[ಎಂದರೆ,] 'ಇದಂ ವಿಷ್ಣುಃ.', ಎಂಬ ಋಚೆ ಇದೆ.+

+ ಋಗ್ವೇದೇ ೧.೨೨.೧೭ _ಅನು.

* ಅಂದರೆ, ಸರಿಯಾದ ಅರ್ಥವೇನೆಂದರೆ _ಅನು.

+ ಋಗ್ವೇದ ೧. ೨೨. ೧೭ _ಅನು.

ಭಾಷ್ಯಮ್_

ವೇವೇಷ್ಟಿ ವಿಶಿತಃ ಪ್ರವಿಷ್ಟೋಽಸ್ತಿ ಚರಾಚರಂ ಜಗತ್ ;

ಭಾಷ್ಯ_

(ವೇವೇಷ್ಟಿ) ಎಂದರೆ, [ಯಾವನು] ಚರಾಚರ ಜಗತ್ತಿನಲ್ಲಿ **(ವಿಶಿತಃ)** ಪ್ರವಿಷ್ಟನಾಗಿದ್ದಾನೋ ;

ವ್ಯಶ್ನುತೇ ವ್ಯಾಪ್ನೋತಿ ವಾ ;

ಅಥವಾ **(ವ್ಯಶ್ನುತೇ)** ವ್ಯಾಪಕನಾಗಿದ್ದಾನೋ ;

ಸ ವಿಷ್ಣುರ್ನಿರಾಕಾರತ್ವಾತ್ ಸರ್ವಗತ ಈಶ್ವರೋಽಸ್ತಿ.

ಆ ವಿಷ್ಣುವು ನಿರಾಕಾರನಾಗಿರುವುದರಿಂದ, ಸರ್ವ-ಗತನಾದ ಈಶ್ವರನಾಗಿದ್ದಾನೆ!

ಅಂದರೆ, 'ವಿಷ್‌ಲೃ' [ವ್ಯಾಪ್ತೌ]* ಧಾತುವಿನ ಅರ್ಥವು ವ್ಯಾಪಕವಾಗಿರುವುದು ; ಎಂದರೆ, ಎಲ್ಲಾ ಚರಾಚರ ಜಗತ್ತಿನಲ್ಲಿ ಪ್ರವಿಷ್ಟನಾಗಿರುವುದು; ಅಥವಾ ಜಗತ್ತನ್ನು ತನ್ನಲ್ಲಿ ಸ್ಥಾಪನ ಮಾಡಿಕೊಳ್ಳುವುದು ಆಗಿರುತ್ತದೆ. ಆದುದರಿಂದ, ನಿರಾಕಾರನಾದ ಈಶ್ವರನ ಹೆಸರು 'ವಿಷ್ಣು', ಎಂದಿದೆ.

ಏತದರ್ಥವಾಚಿಕೇಯಮೃಕ್_

ಈ ಅರ್ಥದ ವಾಚಿಕೆಯಾಗಿ ಈ ಋಚೆ ಇದೆ.**

ಭಗವಂತನು ಈ ಜಗತ್ತನ್ನು ಮೂರು ವಿಧದಲ್ಲಿ ರಚಿಸಿ ಧರಿಸಿದ್ದಾನೆ

ಇದಂ ಸಕಲಂ ಜಗತ್ ತ್ರೇಧಾ ತ್ರಿಪ್ರಕಾರಕಂ ವಿಚಕ್ರಮೇ ವಿಕ್ರಾಂತವಾನ್.

(ಇದಮ್) ಈ ಸಮಸ್ತ ಜಗತ್ತನ್ನು **(ತ್ರೇಧಾ)** ಮೂರು ಪ್ರಕಾರದ್ದನ್ನಾಗಿ **(ವಿಚಕ್ರಮೇ)** ಇಟ್ಟನು.

" ಕ್ರಮು ಪಾದವಿಕ್ಷೇಪೇ "

[ಧಾತುಪಾಠೇ ೧. ೩೧೯]

[ಅರ್ಥ:_ " ಕ್ರಮು, [ಎಂಬ ಧಾತುವು]_ ಪಾದವನ್ನು ಅಲ್ಲಿ-ಇಲ್ಲಿ ಇಡುವುದು, ಎಂಬ ಅರ್ಥದಲ್ಲಿದೆ."

(ಧಾತುಪಾಠ : ೧. ೩೯)]

ಅಂದರೆ, **'ಕ್ರಮು ಪಾದವಿಕ್ಷೇಪೇ'**, ಎಂಬೀ ಧಾತುವು ಬೇರೆಯ ವಸ್ತುವನ್ನು ಪಾದಗಳಿಂದ ಮೆಟ್ಟುವುದು ಅಥವಾ ಸ್ಥಾಪಿಸುವುದು, ಎಂಬ ಅರ್ಥವನ್ನು ಹೇಳುತ್ತದೆ. ಇದರ ಅಭಿಪ್ರಾಯವೇನೆಂದರೆ_

* ಧಾತುಪಾಠ (೩.೧೩) _ಅನು.

** ಎಂದರೆ, ಮೊದಲು ಹೇಳಿದ_ 'ಇದಂ ವಿಷ್ಣುರ್ವಿಚಕ್ರಮೇ.', ಎಂಬ ಮಂತ್ರವಿದೆ. ಈ ಮಂತ್ರದ ಭಾಷ್ಯವನ್ನು ಇಲ್ಲಿ ಕೊಡಲಾಗಿದೆ. _ಅನು.

ಪಾದೈಃ ಪ್ರಕೃತಿಪರಮಾಣ್ವಾದಿಭಿಃ ;

'**ಪಾದ**', ಎಂದರೆ ಪ್ರಕೃತಿಯ ಪರಮಾಣುಗಳು ಮೊದಲಾದುವುಗಳ ಮೂಲಕ ;

ಸ್ವಸಾಮರ್ಥ್ಯಾಂಶೈರ್ಜಗದಿದಂ ಪದಂ ಪ್ರಾಪ್ತವ್ಯಂ ಸರ್ವಂ ವಸ್ತುಜಾತಂ ತ್ರಿಷು ಸ್ಥಾನೇಷು ನಿಧಧೇ ನಿಧತ್ತೇ ಸ್ಥಾಪಿತವಾನ್.

ತನ್ನ ಸಾಮರ್ಥ್ಯದ ಅಂಶಗಳಿಂದ, '**ಪದ**', ಎಂದರೆ ಪ್ರಾಪ್ತಮಾಡಿಕೊಳ್ಳಲು ಯೋಗ್ಯವಾದುದನ್ನಾಗಿ, ಎಂದರೆ, ಎಲ್ಲಾ ವಸ್ತುಗಳಿಂದ ಉತ್ಪನ್ನವಾದುದನ್ನಾಗಿ, ಈ ಜಗತ್ತನ್ನು ಮೂರು ಸ್ಥಾನಗಳಲ್ಲಿ ಸ್ಥಾಪಿಸಿದ್ದಾನೆ.

ಅಂದರೆ, ಭಗವಂತನು ತನ್ನ '**ಪಾದ**', ಎಂದರೆ, ಪ್ರಕೃತಿ, ಪರಮಾಣು ಮೊದಲಾದ ಸಾಮರ್ಥ್ಯದ ಅಂಶ ಗಳಿಂದ ಸಮಸ್ತ ಜಗತ್ತನ್ನು ಮೂರು ಸ್ಥಾನಗಳಲ್ಲಿ ಸ್ಥಾಪನೆ ಮಾಡಿ, ಧಾರಣ ಮಾಡಿಕೊಂಡಿದ್ದಾನೆ.

ಅರ್ಥಾತ್_

ಎಂದರೆ_

ಯಾವದ್ ಗುರುತ್ವಾದಿಯುಕ್ತಂ ಪ್ರಕಾಶರಹಿತಂ ತತ್ಸರ್ವಂ ಜಗತ್ ಪೃಥಿವ್ಯಾಮ್;

(೧) ಗುರುತ್ವ ಮೊದಲಾದುದರಿಂದ ಕೂಡಿದುದೂ, ಪ್ರಕಾಶರಹಿತವಾದುದೂ ಆದ ಎಷ್ಟು ಜಗತ್ತಿದೆಯೋ, ಅದೆಲ್ಲವನ್ನೂ, **ಪೃಥಿವೀ**[ರೂಪ]ದಲ್ಲಿಯೂ ;

ಅಂದರೆ, ಭಾರಸಹಿತವಾದ, ಹಾಗೂ ಪ್ರಕಾಶ ರಹಿತವಾದ ಜಗತ್ತನ್ನು **ಪೃಥಿವಿಯ** [ರೂಪ]ದಲ್ಲಿಯೂ;

ಯಲ್ಲಘುತ್ವಾದಿಯುಕ್ತಂ ವಾಯು-ಪರಮಾಣ್ವಾದಿಕಂ ತತ್ಸರ್ವಮಂತರಿಕ್ಷೇ ;

(೨) ಯಾವುದು ಲಘುತ್ವ ಮೊದಲಾದುದರಿಂದ ಯುಕ್ತವಾದುದೂ, ವಾಯು, ಪರಮಾಣು ಮೊದಲಾದು ದರಿಂದ ಕೂಡಿದುದೂ ಆಗಿದೆಯೋ, ಅದೆಲ್ಲವನ್ನೂ **ಅಂತರಿಕ್ಷ**ದಲ್ಲಿಯೂ ;

ಅಂದರೆ, ಪರಮಾಣು[ವಾಯು] ಮೊದಲಾದ ಸೂಕ್ಷ್ಮದ್ರವ್ಯಗಳನ್ನು **ಅಂತರಿಕ್ಷ**ದಲ್ಲಿಯೂ ;

ಯಚ್ಚ ಪ್ರಕಾಶಮಯಂ ಸೂರ್ಯ್ಯಜ್ಞಾನೇಂದ್ರಿಯ-ಜೀವಾದಿಕಂ ಚ ತತ್ಸರ್ವಂ ದಿವಿ ದ್ಯೋತನಾತ್ಮಕೇ ಪ್ರಕಾಶಮಯೇಽಗ್ನೌ ವೇತಿ ವಿಜ್ಞೇಯಮ್.

(೩) ಮತ್ತು ಯಾವುದು ಪ್ರಕಾಶಮಯವೂ, ಸೂರ್ಯ, ಜ್ಞಾನೇಂದ್ರಿಯಗಳು, ಜೀವಾತ್ಮರು ಮೊದಲಾದುವುಗಳಿಂದ ಕೂಡಿದುದೂ ಆಗಿದೆಯೋ, ಅದೆಲ್ಲವನ್ನೂ **ದ್ಯು[ಲೋಕ**]ದಲ್ಲಿಯೂ, ಎಂದರೆ ಪ್ರಕಾಶ-ಮಯ[ಲೋಕ]ದಲ್ಲಿಯೂ; ಅಥವಾ **ಅಗ್ನಿ**ಯಲ್ಲಿಯೂ; [ಧಾರಣ ಮಾಡಿಕೊಂಡಿದ್ದಾನೆ.] ಎಂದು ತಿಳಿಯಬೇಕು!

ಅಂದರೆ, ಪ್ರಕಾಶಮಾನವಾದ ಸೂರ್ಯ್ಯ ಮತ್ತು ಜ್ಞಾನೇಂದ್ರಿಯ ಮೊದಲಾದುವನ್ನು ಪ್ರಕಾಶ[ಲೋಕ] ದಲ್ಲಿಯೂ ; [ಧಾರಣ ಮಾಡಿಕೊಂಡಿದ್ದಾನೆ.]

ಏವಂ ತ್ರಿವಿಧಂ ಜಗದೀಶ್ವರೇಣ ರಚಿತಮ್.

ಹೀಗೆ ಮೂರು ವಿಧದ ಜಗತ್ತು ಈಶ್ವರನಿಂದ ರಚಿಸಲ್ಪಟ್ಟಿತು!

ಅಂದರೆ, ಈ ರೀತಿಯಿಂದ, ಮೂರು ಪ್ರಕಾರದ ಜಗತ್ತನ್ನು ಈಶ್ವರನು ರಚಿಸಿದ್ದಾನೆ!

ಏಷಾಂ ಮಧ್ಯೇ ;

ಇವುಗಳ ಮಧ್ಯದಲ್ಲಿ_

ಯತ್ಸಮೂಢಂ ಮೋಹೇನ ಸಹ ವರ್ತ್ತಮಾನಂ ಜ್ಞಾನವರ್ಜಿತಂ ಜಡಂ ;

ಯಾವುದು (ಸಮೂಢಮ್) 'ಮೂಢ', ಎಂದರೆ ಮೋಹದೊಡನೆ ವಿದ್ಯಮಾನವಾಗಿರುವುದೂ, ಜ್ಞಾನರಹಿತವಾದುದೂ, ಮತ್ತು ಜಡವೂ ಆಗಿದೆಯೋ ;

ತತ್ ಪಾಂಸುರೇಽಂತರಿಕ್ಷೇ ಪರಮಾಣುಮಯಂ ರಚಿತವಾನ್.

ಅದನ್ನು (ಪಾಂಸುರೇ) ಅಂತರಿಕ್ಷದಲ್ಲಿ ಪರಮಾಣುಮಯವನ್ನಾಗಿ ರಚಿಸಿದ್ದಾನೆ!

ಅಂದರೆ, ಈ ಮೂರು ಭೇದಗಳಲ್ಲಿ ಒಂದು ಮೂಢವಾದುದು, ಎಂದರೆ ಜ್ಞಾನರಹಿತವಾದ ಜಡ ಜಗತ್ತು ಯಾವುದಿದೆಯೋ, ಅದು **ಅಂತರಿಕ್ಷ**, ಎಂದರೆ ಶೂನ್ಯದ ಮಧ್ಯೆ ಸ್ಥಿತವಾಗಿದೆ.

ಸರ್ವೇ ಲೋಕಾ ಅಂತರಿಕ್ಷಸ್ಥಾಃ ಸಂತೀತಿ ಬೋಧ್ಯಮ್.

[ಹೀಗೆ] ಎಲ್ಲಾ ಲೋಕಗಳೂ ಅಂತರಿಕ್ಷದಲ್ಲಿರುವುವು ಆಗಿವೆ, ಎಂದು ತಿಳಿಯಬೇಕು!

ತದಿದಮಸ್ಯ ಪರಮೇಶ್ವರಸ್ಯ ಧನ್ಯವಾದಾರ್ಹಂ ಸ್ತೋತವ್ಯಂ ಕರ್ಮಾಸ್ತೀತಿ ಬೋಧ್ಯಮ್.

ಆದುದರಿಂದ, ಇದು, ಈ ಪರಮೇಶ್ವರನ ಧನ್ಯವಾದಕ್ಕೆ ಅರ್ಹವಾದುದೂ, [ಹಾಗೂ] ಪ್ರಶಂಸೆಗೆ ಯೋಗ್ಯವಾದುದೂ ಆದ ಕರ್ಮವಾಗಿದೆ, ಎಂದು ತಿಳಿಯಬೇಕು!

ಅಂದರೆ, ಯಾವನು ಇಂತಿಂತಹ ಅದ್ಭುತ ಪದಾರ್ಥಗಳನ್ನು ರಚಿಸಿ, ಎಲ್ಲವನ್ನೂ ಧಾರಣ ಮಾಡಿಕೊಂಡಿದ್ದಾನೋ, ಅದು ಕೇವಲ ಪರಮೇಶ್ವರನ ಮಹಿಮೆಯೇ ಆಗಿದೆ!

ಈ ಮಂತ್ರಗತ ಪದಗಳಿಗೆ ನಿರುಕ್ತದಲ್ಲಿ ವಿವಿಧ ನಿರ್ವಚನೆ

ಅಯಮೇವಾರ್ಥಃ 'ಯದಿದಂ ಕಿಂಚ.' ಇತ್ಯನೇನ ಯಾಸ್ಕಾಚಾರ್ಯೇಣ ವರ್ಣಿತಃ_

ಇದೇ ಅರ್ಥವು 'ಯದಿದಂ ಕಿಂಚ', ಎಂಬ [ವ್ಯಾಖ್ಯೆ]ಯಿಂದ ಯಾಸ್ಕಾಚಾರ್ಯರಿಂದಲೂ ವರ್ಣಿಸಲ್ಪಟ್ಟಿದೆ.

ಅಂದರೆ, ಈ 'ವಿಷ್ಣುಪದ'ದ ವಿಷಯದಲ್ಲಿ ಯಾಸ್ಕಮುನಿಗಳೂ ಕೂಡ, ಯಾವ ರೀತಿಯಲ್ಲಿ ವ್ಯಾಖ್ಯಾನ ಮಾಡಿದ್ದಾರೆಂದರೆ_

"ಯದಿದಂ ಕಿಂಚ ತದ್ವಿಕ್ರಮತೇ ವಿಷ್ಣುಸ್ತ್ರಿಧಾ ನಿಧತ್ತೇ ಪದಮ್ ।
ತ್ರೇಧಾ ಭಾವಾಯ ಪೃಥಿವ್ಯಾಮಂತರಿಕ್ಷೇ ದಿವೀತಿ ಶಾಕಪೂಣಿಃ ।
ಸಮಾರೋಹಣೇ ವಿಷ್ಣುಪದೇ ಗಯಶಿರಸೀತ್ಯೌರ್ಣವಾಭಃ ।

"'ಸಮೂಢಮಸ್ಯ ಪಾಂಸುರೇ' ಪ್ಯಾಯನೇಽಂತರಿಕ್ಷೇ ಪದಂ ನ
ದೃಶ್ಯತೇಽಪಿ ವೋಪಮಾರ್ಥೇ ಸ್ಯಾತ್ ಸಮೂಢಮಸ್ಯ ಪಾಂಸುಲ
ಇವ ಪದಂ ನ ದೃಶ್ಯತ ಇತಿ ।"

"ಪಾಂಸವಃ ಪಾದೈಃ ಸೂಯಂತ ಇತಿ ವಾ ।
ಪನ್ನಾಃ ಶೇರತ ಇತಿ ವಾ, ಪಂಸನಿಯಾ ಭವಂತೀತಿ ವಾ ॥"

[ನಿರುಕ್ತೇ ಅ. ೧೨, ಖಂ. ೧೯]

[ಅರ್ಥ:_ "ವಿಷ್ಣುವು ಯಾವುದೇನೆಲ್ಲವನ್ನೂ ಸ್ಥಾಪಿಸುತ್ತಾನೋ, ಅದನ್ನು ಮೂರು ವಿಧದಲ್ಲಿ ಇಡುತ್ತಾನೆ. ಮೂರು ವಿಧದಲ್ಲಿ, ಆಗುವುದಕ್ಕಾಗಿ_ ಎಂದರೆ ಪೃಥಿವಿಯಲ್ಲಿ, ಅಂತರಿಕ್ಷದಲ್ಲಿ, [ಮತ್ತು] 'ದ್ಯು'[ಲೋಕ]ದಲ್ಲಿ, ಎಂದು ಶಾಕಪೂಣಿಯು [ಹೇಳುತ್ತಾನೆ.] ಸಮಾರೋಹಣದಲ್ಲಿ, ವಿಷ್ಣುಪದದಲ್ಲಿ [ಮತ್ತು] ಗಯದ ಶಿರಸ್ಸಿನಲ್ಲಿ, ಎಂದು ಔರ್ಣವಾಭನು [ಹೇಳುತ್ತಾನೆ.]

" 'ಸಮೂಢಮಸ್ಯ ಪಾಂಸುರೇ', ಎಂದರೆ ವೃದ್ಧಿಂಗತವಾದ ಅಂತರಿಕ್ಷದಲ್ಲಿ [ಇದರ] ಪದವು ಕಾಣಿಸುವುದಿಲ್ಲ. ಅಥವಾ ಇದು ಉಪಮೇಯ ಅರ್ಥದಲ್ಲಿ ಇದ್ದೀತು! ಎಂದರೆ, ಧೂಳಿನಲ್ಲಿಟ್ಟಂತೆ ಇದರ ಪದವು ಕಾಣಿಸುವುದಿಲ್ಲ.

" 'ಪಾಂಸವಃ', ಎಂದರೆ ಪಾದಗಳಿಂದ ಉತ್ಪನ್ನವಾದುವು, [ಎಂದರ್ಥ;] ಅಥವಾ ಪಾದಗಳ ಕೆಳಗೆ ಮಲಗಿರುತ್ತವೆ, ಎಂದರ್ಥ; ಅಥವಾ ನಾಶಮಾಡಲು ಯೋಗ್ಯವಾಗಿವೆ, ಎಂದರ್ಥ."

(ನಿರುಕ್ತ: ೧೨. ೧೯)]

ಭಾಷ್ಯಮ್_

(ಯದಿದಂ ಕಿಂಚ.) ಯದಿದಂ ಕಿಂಚಿಜ್ಜಗದ್ವರ್ತತೇ, ತತ್ ಸರ್ವಂ ವಿಷ್ಣುರ್ವ್ಯಾಪಕ ಈಶ್ವರೋ ವಿಕ್ರಮತೇ ರಚಿತವಾನ್.

ಭಾಷ್ಯ_

(ಯದಿದಂ ಕಿಂಚ.) ಯಾವುದೇನಲ್ಲಾ ಜಗತ್ತು ವಿದ್ಯಮಾನವಾಗಿದೆಯೋ, ಅದೆಲ್ಲವನ್ನೂ 'ವಿಷ್ಣು', ಎಂದರೆ ವ್ಯಾಪಕನಾದ ಈಶ್ವರನಾದ ರಚಿಸಿದ್ದಾನೆ.

(ತ್ರಿಧಾ ನಿಧತ್ತೇ ಪದಮ್.) ತ್ರೇಧಾ ಭಾವಾಯ ತ್ರಿಪ್ರಕಾರಕಸ್ಯ ಜಗತೋ ಭವನಾಯ ;

(ತ್ರಿಧಾ ನಿಧತ್ತೇ ಪದಮ್.) ಮೂರು ವಿಧದಲ್ಲಾಗುವುದಕ್ಕಾಗಿ, ಎಂದರೆ ಮೂರು ಪ್ರಕಾರದ ಜಗತ್ತನ್ನು ಉತ್ಪನ್ನ ಮಾಡುವುದಕ್ಕಾಗಿ ;

ತದುಕ್ತಂ ಪೂರ್ವಮೇವ.*

ಇದನ್ನು ಹಿಂದೆಯೇ ಹೇಳಲಾಗಿದೆ.*

ಅಂದರೆ, ಈ ಎಲ್ಲಾ ಜಗತ್ತನ್ನು ಪರಮೇಶ್ವರನು ನಿರ್ಮಿಸಿ, ತ್ರಿಧಾ, ಎಂದರೆ ಇದರಲ್ಲಿ ಮೂರು ಪ್ರಕಾರದ ರಚನೆಯನ್ನು ತೋರಿಸಿದ್ದಾನೆ.

ತಸ್ಮಿನ್ ವಿಷ್ಣುಪದೇ ಮೋಕ್ಷಾಖ್ಯೇ ಸಮಾರೋಹಣೇ ಸಮಾರೋಢುಮರ್ಹೇ ;

ಆ 'ಮೋಕ್ಷ', ಎಂಬ ಸಂಜ್ಞೆಯನ್ನುಳ್ಳದ್ದೂ, (ಸಮಾರೋಹಣೇ) ಆರೋಹಣಕ್ಕೆ ಅರ್ಹವಾದುದೂ, ಆದ_

ಅಂದರೆ, ಯಾವುದರಿಂದ ಮೋಕ್ಷಪದವನ್ನು ಪಡೆಯುತ್ತಾರೋ, ಅದು 'ಸಮಾರೋಹಣ', ಎನಿಸುತ್ತದೆ.

'ಗಯಶಿರಸ್ಸು', ಎಂದರೆ ಪರಮೇಶ್ವರನ ಸಾಮರ್ಥ್ಯ!

[ಗಯಶಿರಸಿ] ಗಯಶಿರಸೀತಿ ಪ್ರಾಣಾನಾಂ ಪ್ರಜಾನಾಂ ಚ ಯದುತ್ತಮಾಂಗಂ ಪ್ರಕೃತ್ಯಾತ್ಮಕಂ ಶಿರೋ ಯಥಾ ಭವತಿ ;

(ಗಯಶಿರಸಿ) 'ಗಯಶಿರಸ್ಸಿನಲ್ಲಿ', ಎಂದರೆ_ ಪ್ರಾಣಗಳ, ಹಾಗೂ ಪ್ರಜೆಗಳ ಯಾವ ಉತ್ತಮ ಅಂಗವು, ಎಂದರೆ ಪ್ರಕೃತಿರೂಪದ ಶಿರಸ್ಸು ಹೇಗೆ ಇರುತ್ತದೋ ;

ತಥೈವೇಶ್ವರಸ್ಯಾಪಿ ಸಾಮರ್ಥ್ಯಂ ಗಯಶಿರಃ ಪ್ರಜಾಪ್ರಾಣಯೋರುಪರಿಭಾಗೇ ವರ್ತ್ತತೇ.

ಹಾಗೆಯೇ ಪರಮೇಶ್ವರನ ಸಾಮರ್ಥ್ಯ, ಎಂಬ ಗಯಶಿರಸ್ಸು ಪ್ರಜೆಗಳ, ಹಾಗೂ ಪ್ರಾಣಗಳ ಮೇಲು ಭಾಗದಲ್ಲಿ ವಿದ್ಯಮಾನವಾಗಿರುತ್ತದೆ.

ಯದೀಶ್ವರಸ್ಯಾನಂತಂ ಸಾಮರ್ಥ್ಯಂ ವರ್ತ್ತತೇ, ತಸ್ಮಿನ್ ಗಯಶಿರಸಿ ವಿಷ್ಣುಪದೇ ಹೀಶ್ವರಸಾಮರ್ಥ್ಯೇ [ಸರ್ವಂ ಜಗದ್] ಅಸ್ತೀತಿ.

ಈಶ್ವರನ ಯಾವ ಅನಂತಸಾಮರ್ಥ್ಯ ಇರುತ್ತದೋ, ಆ 'ಗಯಶಿರಸ್ಸಿ'ನಲ್ಲಿ, ಎಂದರೆ 'ವಿಷ್ಣುಪದದಲ್ಲಿ', ಎಂದರೆ, ಈಶ್ವರನ ಸಾಮರ್ಥ್ಯದಲ್ಲಿ [ಈ ಜಗತ್ತೆಲ್ಲವೂ] ಇರುತ್ತದೆ.

ಕುತಃ?

ಏಕೆಂದರೆ_

ವ್ಯಾಪ್ಯಸ್ಯ ಸರ್ವಸ್ಯ ಜಗತೋ ವ್ಯಾಪಕೇ ಪರಮೇಶ್ವರೇ ವರ್ತ್ತಮಾನತ್ವಾತ್.

ವ್ಯಾಪ್ಯವಾಗಿರುವ ಸಮಸ್ತ ಜಗತ್ತು ವ್ಯಾಪಕನಾದ ಪರಮೇಶ್ವರನಲ್ಲಿ ವರ್ತಮಾನವಾಗಿರುತ್ತದೆ.

ಅಂದರೆ, ಈ ವಿಷ್ಣುಪದವು 'ಗಯಶಿರ', ಎಂದರೆ ಪ್ರಾಣಗಳಿಗಿಂತಲೂ ಮೇಲಿರುತ್ತದೆ.

---

* ಪೂರ್ವಂ ೯೧೬ ತಮಂ ಪೃಷ್ಠಂ ದ್ರಷ್ಟವ್ಯಮ್ _ಅನು.

* ಹಿಂದಿನ ೯೧೬ ನೆಯ ಪುಟವನ್ನು ನೋಡಿ _ಅನು.

ಮನುಷ್ಯರು ಪ್ರಾಣದಲ್ಲಿ ಸ್ಥಿತರಾಗಿ, ಅದನ್ನು ಎಂದರೆ, ಪ್ರಾಣಗಳಿಗಿಂತಲೂ ಪ್ರಿಯನಾದ ಅಂತ-ರ್ಯಾಮೀ ಪರಮೇಶ್ವರನನ್ನು ಹೊಂದುತ್ತಾರೆ; ಬೇರೆ ಮಾರ್ಗದಿಂದಲ್ಲ!

ಏಕೆಂದರೆ, ಪ್ರಾಣಗಳಿಗೂ ಪ್ರಾಣನಾದ, ಹಾಗೂ ಜೀವಾತ್ಮನಲ್ಲಿ ವ್ಯಾಪಕನಾದ ಯಾವ ಪರಮೇಶ್ವರ ನಿದ್ದಾನೋ, ಅವನಿಂದ ದೂರವಾಗಿ ಜೀವವೂ, ಮತ್ತು ಜೀವನಿಂದ ದೂರವಾಗಿ ಅವನೂ, ಎಂದಿಗೂ ಆಗಲಾರನು!

ಅಂತರಿಕ್ಷದಲ್ಲಿ ಪರಮಾಣುರೂಪ ಜಗತ್!

ಪಾಂಸುರೇ ಪ್ಯಾಯನೇಽಂತರಿಕ್ಷೇ ಪದಂ ಪದನೀಯಂ ಪರಮಾಣ್ವಾಖ್ಯಂ ಯಜ್ಜಗತ್ ತಚ್ಚಕ್ಷುಷಾ ನ ದೃಶ್ಯತೇ.

(ಪಾಂಸುರೇ) ವಿಶಾಲವಾದ ಅಂತರಿಕ್ಷದಲ್ಲಿ (ಪದಮ್) ಚಲಿಸುತ್ತಿರುವ ಪರಮಾಣುರೂಪದ ಯಾವ ಜಗತ್ತು ಇದೆಯೋ, ಅದು ಕಣ್ಣಿಗೆ ಕಾಣಬರುವುದಿಲ್ಲ!

ಅಂದರೆ, ಅದಕ್ಕಿಂತ ಸೂಕ್ಷ್ಮವಾದ ಜಗತ್ತಿನ ಯಾವ ಭಾಗವಿದೆಯೋ, ಅದು ಕಣ್ಣಿನಿಂದ ನೋಡ ಬರಲಾರದು!

ಯೇ ಚ ಪಾಂಸವಃ ಪರಮಾಣುಸಂಘಾತಾಃ ಪಾದೈಸ್ತದ್ದ್ರವ್ಯಾಂಶೈಃ ಸೂಯಂತ ಉತ್ಪದ್ಯಂತೇ.

ಮತ್ತು ಪರಮಾಣುಗಳ ಸಂಘಾತವಾದ ಯಾವ ಧೂಳಿನ ಕಣಗಳಿವೆಯೋ, ಅವು ಅವುಗಳ ದ್ರವ್ಯದ ಅಂಶಗಳಿಂದ ಉತ್ಪನ್ನವಾಗುತ್ತವೆ.

ಅತ ಏವಮುತ್ಪನ್ನಾಃ ಸರ್ವೇ ಪದಾರ್ಥಾ ದೃಶ್ಯಾ ಭೂತ್ವೇಶ್ವರೇ ಶೇರತ ಇತಿ ವಿಜ್ಞಾಯತೇ.

ಆದುದರಿಂದ, ಈ ರೀತಿಯಾಗಿ ಉತ್ಪನ್ನವಾದ ಪದಾರ್ಥಗಳೆಲ್ಲವೂ ಕಾಣಬರುವಂತೆ ಆಗಿ, ಈಶ್ವರನಲ್ಲಿ ಶಯನಮಾಡುತ್ತಿವೆ, ಎಂದು ತಿಳಿದುಕೊಳ್ಳಬೇಕು!

ಅಂದರೆ, ಯಾವುದಾದರೂ ಪದಾರ್ಥವು ಪರಮಾಣುಗಳ ಸಂಯೋಗದಿಂದ ಸ್ಥೂಲವಾಗಿಬಿಡು ತ್ತದೋ, ಆಗಲೇ, ಅದು ಕಣ್ಣುಗಳಿಗೆ ಕಾಣಬರುತ್ತದೆ!

ಈ ಎರಡೂ* ಪ್ರಕಾರದ ಜಗತ್ತು ಯಾವನಲ್ಲಿ ಸ್ಥಾಪಿತವಾಗಿದೆಯೋ, ಮತ್ತು ಯಾವನು ಅದರಲ್ಲಿ ಪರಿಪೂರ್ಣನಾಗಿದ್ದಾನೋ, ಅಂತಹ ಪರಮಾತ್ಮನಿಗೆ **'ವಿಷ್ಣು'**, ಎನ್ನುತ್ತಾರೆ.

* ಎಂದರೆ, ಸೂಕ್ಷ್ಮ ಮತ್ತು ಸ್ಥೂಲ _ಅನು.

ಇಮಮರ್ಥಮವಿಜ್ಞಾಯ ಮಿಥ್ಯಾಕಥಾ-ವ್ಯವಹಾರಃ ಪಂಡಿತಾಭಾಸೈಃ ಪ್ರಚಾರಿತ ಇತಿ ಬೋದ್ಧವ್ಯಮ್ ॥ ೨ ॥

ಈ ಅರ್ಥವನ್ನು ತಿಳಿಯದೇ, [ತಾವು] ಪಂಡಿತರು, ಎಂಬ ಭ್ರಮೆಯನ್ನುಳ್ಳವರಿಂದ, ಮಿಥ್ಯಾಕಥೆಯ ವ್ಯವಹಾರವು ಪ್ರಚಾರಮಾಡಲ್ಪಟ್ಟಿದೆ, ಎಂದು ತಿಳಿಯಬೇಕು!

ಅಂದರೆ, ಈ ಸತ್ಯವಾದ ಅರ್ಥವನ್ನರಿಯದೇ, ಅವಿದ್ವಾಂಸಜನರು ಕಲ್ಲಿನ ಮೇಲೆ ಮನುಷ್ಯನ ಪಾದಗಳ ಯಾವ ಚಿಹ್ನೆಯನ್ನು ನಿರ್ಮಿಸಿ, ಅದರ ಹೆಸರನ್ನು 'ವಿಷ್ಣುಪದ', ಎಂದು ಇಟ್ಟಿದ್ದಾರೋ, ಅದೆಲ್ಲವೂ ಸುಳ್ಳಿನ ಮಾತುಗಳಾಗಿವೆ. [೨]

'ತೀರ್ಥ' ಶಬ್ದದ ಸರಿಯಾದ ಅರ್ಥ!

ತಥೈವ ವೇದಾದ್ಯುಕ್ತರೀತ್ಯಾಽಽರ್ಯೈಶ್ಚಾನುಷ್ಠಿತಾನಿ ತೀರ್ಥಾನ್ಯನ್ಯಾನ್ಯೇವ ಸಂತಿ.

ಹಾಗೆಯೇ, ವೇದಗಳೇ ಮೊದಲಾದುವುಗಳಿಂದ ಹೇಳಲ್ಪಟ್ಟ ರೀತಿಯಂತೆ, ಆರ್ಯ್ಯರಿಂದ ಆಚರಿಸಲ್ಪಡುತ್ತಿರುವ '**ತೀರ್ಥ**'ಗಳು ಬೇರೆಯೇ ಆಗಿವೆ!

ಅಂದರೆ, '**ತೀರ್ಥ**'ಶಬ್ದದ ಅರ್ಥವನ್ನು ಅಜ್ಞಾನಿಗಳು ವಿರುದ್ಧವಾಗಿ ತಿಳಿದುಕೊಂಡು, ಜಗತ್ತನ್ನು ಲೂಟಿ ಮಾಡುವುದಕ್ಕಾಗಿಯೂ, ಹಾಗೂ ತಮ್ಮ ಪ್ರಯೋಜನದ ಸಿದ್ಧಿಗಾಗಿಯೂ ಮಿಥ್ಯಾಚಾರ ಮಾಡುತ್ತಿದ್ದಾರೆ. ಇದು ಸರಿಯಲ್ಲ! ಏಕೆಂದರೆ, ಯಾವ ಯಾವುವು ಸತ್ಯವಾದ **ತೀರ್ಥ**ಗಳೋ, ಅವೆಲ್ಲವೂ ಕೆಳಗೆ ಬರೆಯಲ್ಪಡುತ್ತವೆ. ನೋಡಿರಿ_

ಯಾನಿ ಸರ್ವದುಃಖೇಭ್ಯಃ ಪೃಥಕ್ ಕೃತ್ವಾ ಜೀವೇಭ್ಯಃ ಸರ್ವಸುಖಾನಿ ಪ್ರಾಪಯಂತಿ ತಾನಿ 'ತೀರ್ಥಾನಿ' ಮತಾನಿ.

ಯಾವುವು ಎಲ್ಲಾ ದುಃಖಗಳಿಂದಲೂ ಬೇರೆ ಮಾಡಿ, ಜೀವರಿಗೆ ಎಲ್ಲಾ ಸುಖಗಳನ್ನೂ ಒದಗಿಸಿ ಕೊಡುತ್ತವೋ, ಅವು '**ತೀರ್ಥಗಳು**', ಎಂದು ತಿಳಿಯಲ್ಪಡಬೇಕು!

ಅಂದರೆ, ಯಾವವುಗಳಿಂದ ಜೀವರು ದುಃಖರೂಪ ಸಮುದ್ರವನ್ನು ದಾಟಿ, ಸುಖವನ್ನು ಪಡೆಯುತ್ತಾರೋ, ಅವುಗಳ ಹೆಸರು 'ತೀರ್ಥ', ಎಂದಿರುತ್ತದೆ.

ಯಾನಿ ಚ ಭ್ರಾಂತ್ಯೈ ರಚಿತಪುಸ್ತಕೇಷು® ಜಲಸ್ಥಲ-ಮಯಾನಿ ತೀರ್ಥಸಂಜ್ಞಾನ್ಯುಕ್ತಾನಿ ತಾನಿ ವೇದಾರ್ಥಾಭಿ-ಪ್ರೇತಾನಿ ನೈವ ಸಂತೀತಿ ಮಂತವ್ಯಮ್.

ಮತ್ತು ಭ್ರಮಯುಕ್ತರಾದ [ಜನ]ರಿಂದ ರಚಿತವಾದ ಪುಸ್ತಕಗಳಲ್ಲಿ ಯಾವ ಜಲ-ಸ್ಥಳರೂಪ [ಸ್ಥಾನಗಳು] 'ತೀರ್ಥ', ಎಂಬ ಹೆಸರಿನಿಂದ ಹೇಳಲ್ಪಟ್ಟಿವೆಯೋ, ಅವು ವೇದಾರ್ಥಕ್ಕೆ ಸಮ್ಮತವಾಗಿಯೇ ಇಲ್ಲ, ಎಂದು ತಿಳಿಯಬೇಕು!

® 'ರಚಿತೇಷು ಪುಸ್ತಕೇಷು' _ಆ. ವೈ.

ಅಂದರೆ, ಯಾವ ಯಾವುವು ವೇದಾದಿ ಶಾಸ್ತ್ರಗಳಿಂದ ಪ್ರತಿಪಾದಿತವಾದ ತೀರ್ಥಗಳಾಗಿವೆಯೋ, ಮತ್ತು ಯಾವವನ್ನು ಆರ್ಯರು ಆಚರಿಸುತ್ತಿದ್ದಾರೋ, ಹಾಗೂ ಯಾವುವು ಜೀವರನ್ನು ದುಃಖಗಳಿಂದ ಬಿಡುಗಡೆ ಮಾಡಿಸಿ, ಅವರ ಸುಖಗಳಿಗೆ ಸಾಧನವಾಗಿವೆಯೋ, ಅವುಗಳಿಗೇ **'ತೀರ್ಥ'**, ಎನ್ನುತ್ತಾರೆ.

ಶತಪಥಬ್ರಾಹ್ಮಣದಲ್ಲಿ ಯಜ್ಞಾಂಗ-'ತೀರ್ಥ'ಗಳ ಉಲ್ಲೇಖ!

ತದ್ಯಥಾ_

ಅದು ಹೇಗೆಂದರೆ_

ಅಂದರೆ, ವೇದೋಕ್ತ 'ತೀರ್ಥ'ಗಳು ಯಾವುವೆಂದರೆ_

"ತೀರ್ಥಮೇವ ಪ್ರಾಯಣೀಯೋऽತಿರಾತ್ರಸ್ತೀರ್ಥೇನ ಹಿ ಪ್ರಸ್ನಾಂತಿ ॥"

[ಶತಪಥಬ್ರಾಹ್ಮಣೇ ಕಾಂ. ೧೨, ಅ. ೨, ಬ್ರಾ. ೧, ಕಂ. ೧]

[ಅರ್ಥ:_ "ಪ್ರಾಯಣೀಯ ಅತಿರಾತ್ರವು 'ತೀರ್ಥ'ವೇ ಆಗಿದೆ. ಏಕೆಂದರೆ, [ಆ] ತೀರ್ಥದಿಂದ ಮೊದಲು ಸ್ನಾನ ಮಾಡುತ್ತಾರೆ."

(ಶತಪಥಬ್ರಾಹ್ಮಣಃ ೧೨. ೨. ೧. ೧)]

"ತೀರ್ಥಮೇವೋದಯನೀಯೋऽತಿರಾತ್ರಸ್ತೀರ್ಥೇನ ಹ್ಯುತ್ಸ್ನಾಂತಿ ॥ ೩ ॥"

[ಶತಪಥಬ್ರಾಹ್ಮಣೇ ಕಾಂ. ೧೨, ಅ. ೨, ಬ್ರಾ. ೧, ಕಂ. ೫]

[ಅರ್ಥ:_ "ಉದಯನೀಯ ಅತಿರಾತ್ರವೂ [ಕೂಡ,] ತೀರ್ಥವೇ ಆಗಿದೆ. ಏಕೆಂದರೆ, [ಆ] ತೀರ್ಥದಿಂದಲೇ ಸ್ನಾನವನ್ನು ಮುಗಿಸುತ್ತಾರೆ."

(ಶತಪಥಬ್ರಾಹ್ಮಣಃ ೧೨. ೨. ೧. ೫)]

ಭಾಷ್ಯಮ್_

(ತೀರ್ಥಮೇವ ಪ್ರಾಯ.) ಯತ್ ಪ್ರಾಯಣೀಯಂ ಯಜ್ಞಸ್ಯಾಂಗಮತಿರಾತ್ರಾಖ್ಯಂ ವ್ರತಂ ಸಮಾಪ್ಯ ಸ್ನಾನಂ ಕ್ರಿಯತೇ;

ತದೇವ ತೀರ್ಥಮಿತಿ ವೇದ್ಯಂ, ಯೇನ ತೀರ್ಥೇನ ಮನುಷ್ಯಾಃ ಪ್ರಸ್ನಾಯ ಶುದ್ಧಾ ಭವಂತಿ.

ಭಾಷ್ಯ_

(ತೀರ್ಥಮೇವ ಪ್ರಾಯ.) ಯಜ್ಞದ ಅಂಗವಾದ 'ಪ್ರಾಯಣೀಯ ಅತಿರಾತ್ರ', ಎಂಬ ಹೆಸರಿನ ವ್ರತವನ್ನು ಮುಗಿಸಿ, ಯಾವ ಸ್ನಾನ ಮಾಡಲಾಗುತ್ತದೋ;

ಎಂದರೆ, ಯಾವ ತೀರ್ಥದಿಂದ ಮನುಷ್ಯರು 'ಸ್ನಾನ' ಮಾಡಿ ಶುದ್ಧರಾಗುತ್ತಾರೋ, ಅದನ್ನೇ **'ತೀರ್ಥ'**, ಎಂದು ತಿಳಿಯಬೇಕು!

ತಥೈವ ಯದುದಯನೀಯಾಖ್ಯಂ ಯಜ್ಞ-ಸಂಬಂಧಿಸರ್ವೋಪಕಾರಕಂ ಕರ್ಮ ಸಮಾಪ್ಯ ಸ್ನಾಂತಿ ;

ಹಾಗೆಯೇ 'ಉದಯನೀಯ', ಎಂಬ ಹೆಸರಿನ ಯಜ್ಞಸಂಬಧದ ಸರ್ವೋಪಕಾರಕ ಕರ್ಮವನ್ನು ಮುಗಿಸಿ, ಯಾವ ಸ್ನಾನ ಮಾಡುತ್ತಾರೋ ;

ತದೇವ ದುಃಖಸಮುದ್ರಾತ್ ತಾರಕತ್ವಾತ್ ತೀರ್ಥಮಿತಿ ಮಂತವ್ಯಮ್ ॥ ೩ ॥

[ಅದು,] ದುಃಖಸಮುದ್ರದಿಂದ ದಾಟಿಸುವುದಾದುರಿಂದ, ಅದೇ 'ತೀರ್ಥ', ಎಂದು ತಿಳಿಯಲ್ಪಡಬೇಕು!

ಅಂದರೆ, **ಅಗ್ನಿಹೋತ್ರದಿಂದ ಹಿಡಿದು, ಅಶ್ವಮೇಧಪರ್ಯಂತದ** ಯಾವುದಾದರೂ ಯಜ್ಞದ ಸಮಾಪ್ತಿಯನ್ನು ಮಾಡಿ, ಯಾವ ಸ್ನಾನ ಮಾಡಲಾಗುತ್ತದೋ, ಅದಕ್ಕೆ 'ತೀರ್ಥ', ಎಂದು ಹೇಳುತ್ತಾರೆ.

ಏಕೆಂದರೆ, ಆ ಕರ್ಮದಿಂದ, ವಾಯು, ಹಾಗೂ ವೃಷ್ಟಿಜಲದ ಶುದ್ಧಿಯಾಗುವುದರ ಮೂಲಕ ಮನುಷ್ಯರೆಲ್ಲರಿಗೂ ಸುಖವು ದೊರೆಯುತ್ತದೆ. [ಇಷ್ಟೇ ಅಲ್ಲದೇ,] ಈ ಕಾರಣದಿಂದ, ಆ ಕರ್ಮಗಳನ್ನು ಮಾಡುವ ಮನುಷ್ಯರಿಗೂ ಕೂಡ, ಸುಖವೂ ಹಾಗೂ ಶುದ್ಧಿಯೂ ಪ್ರಾಪ್ತವಾಗುತ್ತವೆ. [೩]

ಛಾಂದೋಗ್ಯೋಪನಿಷತ್ತಿನಲ್ಲಿ ಅಹಿಂಸೆಯೇ ತೀರ್ಥ!

ಏವಮೇವ_

ಈ ರೀತಿಯಾಗಿಯೇ _

"ಅಹಿಗ್ಂಸನ್ ಸರ್ವಭೂತಾನ್ಯನ್ಯತ್ರ ತೀರ್ಥೇಭ್ಯಃ . ॥ ೪ ॥"

[ಅರ್ಥ:_ "ಸಮಸ್ತ ಪ್ರಾಣಿಗಳನ್ನು ಹಿಂಸಿಸದೇ, ತೀರ್ಥಗಳಿಗೆ ಹೊರತಾದಾಗ. "

ಇತಿ ಛಾಂದೋಗ್ಯೋಪನಿಷದಿ [ಅ. ೧೫].

ಎಂದು ಛಾಂದೋಗ್ಯೋಪನಿಷತ್ತಿನಲ್ಲಿ [ಅ. ೧೫] [ಹೇಳಲಾಗಿದೆ.]

ಭಾಷ್ಯಮ್_

ಭಾಷ್ಯ_

(ಅಹಿಗ್ಂಸನ್.) ಮನುಷ್ಯಃ ಸರ್ವಾಣಿ ಭೂತಾನ್ಯ-ಹಿಂಸನ್, ಸರ್ವೈರ್ಭೂತೈರ್ವೈರಮಕುರ್ವಾಣಃ ಸನ್ ವರ್ತೇತ.

(ಅಹಿಗ್ಂಸನ್.) ಮನುಷ್ಯನು ಸಮಸ್ತ ಪ್ರಾಣಿಗಳನ್ನು ಹಿಂಸಿಸದೇ, ಎಂದರೆ ಸಮಸ್ತ ಪ್ರಾಣಿಗಳೊಡನೆ ವೈರವನ್ನು ಆಚರಿಸದೇ ಇರುತ್ತಾ, ವ್ಯವಹರಿಸಬೇಕು!

ಅಂದರೆ, ತನ್ನ ಮನಸ್ಸಿನಿಂದ ವೈರಭಾವನೆಯನ್ನು ತ್ಯಜಿಸಿ, ಎಲ್ಲರಿಗೂ ಸುಖವನ್ನುಂಟು ಮಾಡಲು ಪ್ರವೃತ್ತನಾಗಿರುವುದು ; ಮತ್ತು ಯಾವ ಪ್ರಾಪಂಚಿಕ ವ್ಯವಹಾರದಲ್ಲೂ ದುಃಖವನ್ನು ಕೊಡದಿರುವುದು! ಮನುಷ್ಯರೆಲ್ಲರಿಂದಲೂ ಈ 'ತೀರ್ಥ'ದ ಸೇವನೆಯನ್ನು ಮಾಡುವುದು ಉಚಿತವಾಗಿರುತ್ತದೆ.

ವೇದೋಕ್ತ 'ಹಿಂಸೆ'ಯು 'ಅಹಿಂಸೆ' ಆಗುವುದು ಯಾವಾಗ?

ಪರಂತು ತೀರ್ಥೇಭ್ಯೋ ವೇದಾದಿಸತ್ಯಶಾಸ್ತ್ರವಿಹಿತೇಭ್ಯೋಽನ್ಯತ್ರಾಹಿಂಸಾ ಧರ್ಮೋ ಮಂತವ್ಯಃ.*

ಆದರೆ, **ತೀರ್ಥ**, ಎಂದರೆ, ವೇದಾದಿಸತ್ಯಶಾಸ್ತ್ರಗಳಿಂದ [ಹಿಂಸೆಯ] ವಿಧಾನ ಮಾಡಲ್ಪಟ್ಟುದಕ್ಕೆ ಬೇರೆಯಾದ ಕಡೆ, **ಅಹಿಂಸೆಯು** ಧರ್ಮವಾಗಿರುತ್ತದೆ, ಎಂದು ತಿಳಿಯಬೇಕು!*

ಅಂದರೆ, ಯಾವ ಯಾವ ವ್ಯವಹಾರಗಳು ವೇದಾದಿಸತ್ಯಶಾಸ್ತ್ರಗಳಲ್ಲಿ ನಿಷಿದ್ಧವೆಂದು ಅಂಗೀಕರಿಸಲಾಗಿವೆಯೋ, ಅವುಗಳನ್ನು ಮಾಡಿದಾಗ, ಅವಶ್ಯವಾಗಿ ದಂಡ ವಿಧಿಸಲ್ಪಡಬೇಕು!

ತದ್ಯಥಾ_

ಅದು ಹೇಗೆಂದರೆ_

ಯತ್ರ ಯತ್ರಾಪರಾಧಿನಾಮುಪರಿ ಹಿಂಸನಂ ವಿಹಿತಂ ತತ್ತು ಕರ್ತ್ತವ್ಯಮೇವ.

ಎಲ್ಲಿ ಎಲ್ಲಿ ಅಪರಾಧಿಗಳ ಮೇಲೆ ಹಿಂಸೆಯು ವಿಧಿಸಲ್ಪಡುತ್ತದೋ, ಅದನ್ನಂತೂ ಮಾಡಲೇಬೇಕು!

ಯೇ ಪಾಷಂಡಿನೋ ವೇದಸತ್ಯಧರ್ಮಾನುಷ್ಠಾನಶತ್ರವಶ್ಚೋರಾದಯಶ್ಚ ತೇ ತು ಯಥಾಪರಾಧಂ ಹಿಂಸನೀಯಾ ಏವ.

ಯಾರು ಪಾಖಂಡಿಗಳೋ, ಮತ್ತು ವೇದ-ಸತ್ಯಧರ್ಮಗಳ ಆಚರಣೆಗೆ ಶತ್ರುಗಳಾಗಿರುತ್ತಾರೋ, ಮತ್ತು ಕಳ್ಳರು ಮುಂತಾದವರೋ, ಅವರಂತೂ ಅಪರಾಧಕ್ಕನುಸಾರವಾಗಿ ಹಿಂಸಿಸಲ್ಪಡಲೇಬೇಕು!

ಅಂದರೆ, ಯಾವ ಯಾವ ಮನುಷ್ಯರು ಅಪರಾಧಿಗಳೋ, ಪಾಖಂಡಿಗಳೋ, ಎಂದರೆ ವೇದಶಾಸ್ತ್ರೋಕ್ತಧರ್ಮಾನುಷ್ಠಾನದ ಶತ್ರುಗಳೋ, ತಮ್ಮ ಸುಖದಲ್ಲಿ[ಯೇ] ಪ್ರವೃತ್ತರಾಗಿರುತ್ತಾರೋ, ಹಾಗೂ ಇತರರಿಗೆ ಪೀಡೆಯನ್ನು ಕೊಡುವುದರಲ್ಲಿ ತತ್ಪರರೋ, ಅವರು ಯಾವಾಗಲೂ ದಂಡವನ್ನು ಅನುಭವಿಸಲು ಯೋಗ್ಯರಾಗಿರುತ್ತಾರೆ!

---

* ವೇದಾದಿಸತ್ಯಶಾಸ್ತ್ರೈರ್ವಿಹಿತಾ ಹಿಂಸಾ ಅರ್ಥಾದಪರಾಧಿನಾಮುಪರಿ ಹಿಂಸನಮಹಿಂಸಾ ಜ್ಞೇಯಾ _ಅನು.

* ವೇದಗಳೇ ಮೊದಲಾದ ಸತ್ಯಶಾಸ್ತ್ರಗಳಲ್ಲಿ ವಿಧಿಸಲ್ಪಟ್ಟಿರುವ ಹಿಂಸೆಯು, ಎಂದರೆ, ಅಪರಾಧಿಗಳ ಮೇಲೆ ವಿಧಿಸುವ ಹಿಂಸೆಯು ಅಹಿಂಸೆಯೇ ಆಗಿರುತ್ತದೆ, ಎಂದು ತಿಳಿಯಬೇಕು _ಅನು.

ಅತ್ರ ವೇದಾದಿಸತ್ಯಶಾಸ್ತ್ರಾಣಾಂ ತೀರ್ಥಸಂಜ್ಞಾಸ್ತಿ.

ಇಲ್ಲಿ ವೇದಾದಿ ಸತ್ಯಶಾಸ್ತ್ರಗಳ ಹೆಸರು 'ತೀರ್ಥ', ಎಂದಿರುತ್ತದೆ.

ತೇಷಾಮಧ್ಯಯನಾಧ್ಯಾಪನೇನ ತದುಕ್ತಧರ್ಮ್ಮ-ಕರ್ಮ್ಮವಿಜ್ಞಾನಾನುಷ್ಠಾನೇನ ಚ ದುಃಖಸಮುದ್ರಾತ್ ತರಂತ್ಯೇವ.

ಏಕೆಂದರೆ, ಅವುಗಳ ಅಧ್ಯಯನ-ಅಧ್ಯಾಪನೆಯಿಂದಲೂ, ಮತ್ತು ಅವು ಹೇಳಿದ ಧರ್ಮ-ಕರ್ಮ-ವಿಜ್ಞಾನಗಳ ಆಚರಣೆಯಿಂದಲೂ ದುಃಖಸಮುದ್ರವನ್ನು [ಮನುಷ್ಯರು] ದಾಟಿಯೇ ಬಿಡುತ್ತಾರೆ!

ತೇಷು ಸಮ್ಯಕ್ ಸ್ನಾತ್ವಾ ಮನುಷ್ಯಾಃ ಶುದ್ಧಾ ಭವಂತ್ಯತಃ ॥ ೪ ॥

[ಮತ್ತು] ಅವುಗಳಲ್ಲಿ ಚೆನ್ನಾಗಿ 'ಸ್ನಾನ' ಮಾಡಿ, ಮನುಷ್ಯರು ಶುದ್ಧರಾಗುತ್ತಾರೆ, ಆದುದರಿಂದ!

ಅಂದರೆ, ವೇದಾದಿಸತ್ಯ-ಶಾಸ್ತ್ರಗಳ ಹೆಸರು **'ತೀರ್ಥ'**, ಎಂದು ಏಕಿದೆಯೆಂದರೆ, ಅವುಗಳನ್ನು ಓದುವುದರಿಂದಲೂ-ಓದಿಸುವುದರಿಂದಲೂ, ಮತ್ತು ಅವುಗಳಲ್ಲಿ ಹೇಳಿರುವ ಮಾರ್ಗದಲ್ಲಿ ನಡೆಯುವುದರಿಂದಲೂ ಮನುಷ್ಯರು ದುಃಖಸಾಗರವನ್ನು ದಾಟಿ, ಸುಖಗಳನ್ನು ಹೊಂದುತ್ತಾರೆ! [೪]

ಅಷ್ಟಾಧ್ಯಾಯಿಯಲ್ಲಿ ತೀರ್ಥ, ಎಂದರೆ ಆಚಾರ್ಯ, ತಾಯಿ-ತಂದೆ ಮೊದಲಾದವರು!

ತಥೈವ_

ಹಾಗೆಯೇ_

"ಸಮಾನತೀರ್ಥೇ ವಾಸೀ ॥ ೫ ॥"

[ಅರ್ಥ:_ "ಸಪ್ತಮೀಸಮರ್ಥಿತ 'ಸಮಾನತೀರ್ಥ'ಪ್ರಾತಿಪದಿಕದಿಂದ, ವಾಸಮಾಡುವ ಅರ್ಥದಲ್ಲಿ ಯತ್ ಪ್ರತ್ಯಯವು ಪರದಲ್ಲಿ ಬರುತ್ತದೆ."

ಇತ್ಯಷ್ಟಾಧ್ಯಾಯ್ಯಾಮ್ ಅ. ೪, ಪಾ. ೪, ಸೂ. ೧೦೭ ಸತೀರ್ಥ್ಯೋ ಬ್ರಹ್ಮಚಾರೀತ್ಯುದಾಹರಣಮ್.

ಹೀಗೆ ಅಷ್ಟಾಧ್ಯಾಯಿಯಲ್ಲಿ (೪.೪.೧೦೭) ಇದೆ. [ಇದರಿಂದ] **'ಸತೀರ್ಥ್ಯ'**, ಎಂಬ ಶಬ್ದವು ಸಿದ್ಧವಾಗುತ್ತದೆ. ಬ್ರಹ್ಮಚಾರಿ ಶಬ್ದವು ಇದಕ್ಕೆ ಉದಾಹರಣೆಯಾಗಿದೆ.

ಭಾಷ್ಯಮ್_

ಭಾಷ್ಯ_

(ಸಮಾನತೀರ್ಥೇ ವಾಸೀ.) ಇತ್ಯನೇನ ಸಮಾನೋ ದ್ವಯೋರ್ವಿದ್ಯಾರ್ಥಿನೋರೇಕ ಆಚಾರ್ಯ್ಯಃ ಸಮಾನ-ಮೇಕಶಾಸ್ತ್ರಾಧ್ಯಯನಂ ಚ.

(ಸಮಾನತೀರ್ಥೇ ವಾಸೀ) ಈ ಸೂತ್ರದಂತೆ, **ಸಮಾನ**, ಎಂದರೆ ಇಬ್ಬರು ವಿದ್ಯಾರ್ಥಿಗಳಲ್ಲಿ ಒಬ್ಬನು ಆಚಾರ್ಯನಾಗಿರುತ್ತಾನೆ; ಮತ್ತು **'ಸಮಾನ'**, ಎಂದರೆ ಒಂದೇ ಶಾಸ್ತ್ರದ ಅಧ್ಯಯನವೂ ಕೂಡ, ಆಗುತ್ತದೆ!

ಅತ್ರಾಚಾರ್ಯ್ಯಶಾಸ್ತ್ರಯೋಸ್ತೀರ್ಥಸಂಜ್ಞಾಸ್ತಿ.

ಇಲ್ಲಿ **ಆಚಾರ್ಯ** ಮತ್ತು **ಶಾಸ್ತ್ರ**_ ಎರಡಕ್ಕೂ **'ತೀರ್ಥ'**, ಎಂಬ ಸಂಜ್ಞೆ ಇದೆ.

ಮಾತಾಪಿತ್ರತಿಥೀನಾಂ ಸಮ್ಯಕ್ ಸೇವನೇನ ಸುಶಿಕ್ಷಯಾ ವಿದ್ಯಾಪ್ರಾಪ್ತ್ಯಾ ದುಃಖಸಮುದ್ರಾನ್-ಮನುಷ್ಯಾಸ್ತರಂತ್ಯೇವ.

ತಾಯಿ-ತಂದೆ-ಅತಿಥಿಗಳ ಉತ್ತಮ ಸೇವೆಯಿಂದಲೂ, ಸುಶಿಕ್ಷಣದಿಂದಲೂ, [ಹಾಗೂ] ವಿದ್ಯೆಯ ಪ್ರಾಪ್ತಿಯಿಂದಲೂ ದುಃಖಸಮುದ್ರಗಳನ್ನು ಮನುಷ್ಯರು ದಾಟಿಯೇ ಬಿಡುತ್ತಾರೆ!

ಅತಸ್ತಾನಿ ತೀರ್ಥಾನಿ ದುಃಖಾತ್ ತಾರಕತ್ವಾದೇವ ಮಂತವ್ಯಾನಿ.

ಆದುದರಿಂದ, ದುಃಖವನ್ನು ದಾಟಿಸುವುದರಿಂದ ಅವರನ್ನೂ ಕೂಡ, **'ತೀರ್ಥಗಳು'**, ಎಂದು ಅಂಗೀಕರಿಸಬೇಕು!

ಏತೇಷ್ವಪಿ ಸ್ನಾತ್ವಾ ಮನುಷ್ಯೈಃ ಶುದ್ಧಿಃ ಸಂಪಾದನೀಯೇತಿ ॥ ೫ ॥

ಇವರಲ್ಲಿ ಕೂಡ, **'ಸ್ನಾನ'** ಮಾಡಿ, ಮನುಷ್ಯರು ಶುದ್ಧಿಯನ್ನು ಸಂಪಾದಿಸಬೇಕು!

ಅಂದರೆ, ಈ ಸೂತ್ರದ ಅಭಿಪ್ರಾಯವೇನೆಂದರೆ_

ವೇದಾದಿಶಾಸ್ತ್ರಗಳನ್ನು ಕಲಿಸುವ ಯಾವ ಆಚಾರ್ಯನು ಇದ್ದಾನೋ, ಅವನಿಗೂ, ಹಾಗೂ ವೇದಾದಿಶಾಸ್ತ್ರಗಳಿಗೂ, ಮತ್ತು ತಾಯಿ-ತಂದೆ, ಹಾಗೂ ಅತಿಥಿಗೂ ಕೂಡ, **'ತೀರ್ಥ'**, ಎಂಬ ಹೆಸರಿದೆ. ಏಕೆಂದರೆ, ಅವರ ಸೇವೆಯನ್ನು ಮಾಡುವುದರಿಂದ ಜೀವಾತ್ಮನು ಶುದ್ಧನಾಗಿ, ದುಃಖಗಳಿಂದ ಪಾರಾಗಿ ಬಿಡುತ್ತಾನೆ!

ಆದುದರಿಂದ, ಇವರ ಹೆಸರೂ ಕೂಡ, **'ತೀರ್ಥ'**, ಎಂದಾಗುತ್ತದೆ. [೫]

ಪಾರಸ್ಕರಗೃಹ್ಯಸೂತ್ರದಲ್ಲಿ ವಿದ್ಯಾ-ವ್ರತಗಳೇ 'ತೀರ್ಥ'ಗಳು!

"ತ್ರಯಃ ಸ್ನಾತಕಾ ಭವಂತಿ । ವಿದ್ಯಾಸ್ನಾತಕೋ ವ್ರತಸ್ನಾತಕೋ ವಿದ್ಯಾವ್ರತಸ್ನಾತಕಶ್ಚೇತಿ ॥ ೩೨ ॥"

[ಪಾರಸ್ಕರಗೃಹ್ಯಸೂತ್ರೇ ೨. ೫. ೩೨]

[ಅರ್ಥ:_ "ಮೂವರು ಸ್ನಾತಕರಾಗುತ್ತಾರೆ. ವಿದ್ಯಾಸ್ನಾತಕ, ವ್ರತಸ್ನಾತಕ ಮತ್ತು ವಿದ್ಯಾವ್ರತಸ್ನಾತಕ, ಎಂದು.

(ಪಾರಸ್ಕರಗೃಹ್ಯಸೂತ್ರ: ೨. ೫. ೩೨)]

"ಯೋ ವಿದ್ಯಾಂ ಸಮಾಪ್ಯ ವ್ರತಮಸಮಾಪ್ಯ ಸಮಾವರ್ತ್ತತೇ [ಸ ವಿದ್ಯಾಸ್ನಾತಕಃ ॥ ೩೩ ॥"

[ಪಾರಸ್ಕರಗೃಹ್ಯಸೂತ್ರೇ ೨. ೫. ೩೩]

[ಅರ್ಥ:_ "ಯಾವನು ವಿದ್ಯೆಯನ್ನು ಮುಗಿಸಿ, ವ್ರತವನ್ನು ಮುಗಿಸದೇ, ಸಮಾವರ್ತನ ಮಾಡಿಕೊಳ್ಳುತ್ತಾನೋ, [ಅವನು 'ವಿದ್ಯಾಸ್ನಾತಕ', ಎನಿಸುತ್ತಾನೆ."

(ಪಾರಸ್ಕರಗೃಹ್ಯಸೂತ್ರ: ೨. ೫. ೩೩)]

"ಯೋ ವ್ರತಂ ಸಮಾಪ್ಯ ವಿದ್ಯಾಮಸಮಾಪ್ಯ ಸಮಾವರ್ತ್ತತೇ]
ಸ ವ್ರತಸ್ನಾತಕಃ ॥ ೩೪ ॥ ॥ ೬ ॥"

[ಪಾರಸ್ಕರಗೃಹ್ಯಸೂತ್ರೇ ೨. ೫. ೩೪]

[ಅರ್ಥ:_ "ಯಾವನು ವ್ರತವನ್ನು ಮುಗಿಸಿ, ವಿದ್ಯೆಯನ್ನು ಮುಗಿಸದೇ, ಸಮಾವರ್ತನ ಮಾಡಿಕೊಳ್ಳುತ್ತಾನೋ,] ಅವನು 'ವ್ರತಸ್ನಾತಕ', ಎನಿಸುತ್ತಾನೆ."

(ಪಾರಸ್ಕರಗೃಹ್ಯಸೂತ್ರ: ೨. ೫. ೩೪)]

ಇತ್ಯಾದಿ* ಪಾರಸ್ಕರಗೃಹ್ಯಸೂತ್ರೇ.

ಈ ಮೊದಲಾಗಿ* ಪಾರಸ್ಕರಗೃಹ್ಯಸೂತ್ರದಲ್ಲಿ [ಹೇಳಲಾಗಿದೆ.]

ವಿದ್ಯೆಯಲ್ಲಿ ಸ್ನಾನ ಮಾಡುವ ಮೂವರು!

ಭಾಷ್ಯಮ್_

(ತ್ರಯಃ ಸ್ನಾತಕಾಃ.) ತ್ರಯ ಏವ ತೀರ್ಥೇಷು ಕೃತಸ್ನಾನಾಃ ಶುದ್ಧಾ ಭವಂತಿ.

ತದ್ಯಥಾ_

ಯಃ ಸುನಿಯಮೇನ ಪೂರ್ಣಾಂ ವಿದ್ಯಾಂ ಪಠತಿ, ಸ ಬ್ರಹ್ಮಚರ್ಯ್ಯಾಶ್ರಮಮಸಮಾಪ್ಯಾಪಿ ವಿದ್ಯಾತೀರ್ಥೇ ಸ್ನಾತಿ, ಸ ಶುದ್ಧೋ ಭವತಿ.

ಭಾಷ್ಯ_

(ತ್ರಯಃ ಸ್ನಾತಕಾಃ.) ತೀರ್ಥಗಳಲ್ಲಿ 'ಸ್ನಾನ' ಮಾಡಿದವರು ಮೂವರೇ ಶುದ್ಧರಾಗುತ್ತಾರೆ!

ಅಂದರೆ, ತೀರ್ಥಗಳಲ್ಲಿ ಸ್ನಾನ ಮಾಡಲು ಯೋಗ್ಯರಾದವರು ಮೂವರು ಇರುತ್ತಾರೆ!

ಅವರು ಯಾರೆಂದರೆ_

(೧) ವಿದ್ಯಾಸ್ನಾತಕ

ಯಾವನು ಉತ್ತಮನಿಯಮಪೂರ್ವಕವಾಗಿ ಸಂಪೂರ್ಣವಿದ್ಯೆಯನ್ನು ಓದುತ್ತಾನೋ, ಅವನು ಬ್ರಹ್ಮಚರ್ಯ್ಯಾಶ್ರಮವನ್ನು ಮುಗಿಸದಿದ್ದರೂ ಕೂಡ, 'ವಿದ್ಯಾತೀರ್ಥ'ದಲ್ಲಿ ಸ್ನಾನ ಮಾಡುತ್ತಾನೆ. [ಮತ್ತು] ಅವನು ಶುದ್ಧನಾಗುತ್ತಾನೆ!

---

* 'ಉಭಯಗ್ಂ ಸಮಾಪ್ಯ ಯಃ ಸಮಾವರ್ತ್ತತೇ ಸ ವಿದ್ಯಾವ್ರತಸ್ನಾತಕ ಇತಿ' (೨. ೫. ೩೫) _ಅನು.

* ಎಂದರೆ_"ಯಾವನು ಎರಡನ್ನೂ ಮುಗಿಸಿ, ಸಮಾವರ್ತನ ಮಾಡಿಕೊಳ್ಳುತ್ತಾನೋ, ಅವನು 'ವಿದ್ಯಾವ್ರತಸ್ನಾತಕ', ಎನಿಸುತ್ತಾನೆ. (೨. ೫. ೩೫)" _ಅನು.

ಅಂದರೆ, ಯಾವನು ಉತ್ತಮನಿಯಮಗಳಿಂದ ವೇದವಿದ್ಯೆಯನ್ನು ಓದಿ, ಬ್ರಹ್ಮಚರ್ಯವನ್ನು ಮುಗಿಸ ದಿದ್ದರೂ ಕೂಡ, ವಿದ್ಯೆ ಕಲಿಯುವುದನ್ನು ಪೂರೈಸಿ, ಜ್ಞಾನರೂಪ **'ತೀರ್ಥ'**ದಲ್ಲಿ **'ಸ್ನಾನ'** ಮಾಡಿ ಶುದ್ಧನಾಗಿ ಬಿಡುತ್ತಾನೋ, ಅವನು **ಮೊದಲನೆಯವನು!**

(೨) ವ್ರತಸ್ನಾತಕ

ಯಸ್ತು ಖಲು ದ್ವಿತೀಯಃ ಯತ್ಪೂರ್ವೋಕ್ತಂ ಬ್ರಹ್ಮಚರ್ಯ್ಯಂ ಸುನಿಯಮಾಚರಣೇನ ಸಮಾಪ್ಯ;

ಮತ್ತು ಎರಡನೆಯವನಾಗಿ, ಯಾವನು ಮೇಲೆ ಹೇಳಿದ ಯಾವ ಬ್ರಹ್ಮಚರ್ಯ್ಯವನ್ನು ಉತ್ತಮ ನಿಯಮಾ ಚರಣೆಯ ಮೂಲಕ ಮುಗಿಸಿ;

ವಿದ್ಯಾಮಸಮಾಪ್ಯ ಸಮಾವರ್ತ್ತತೇ ಸ ವ್ರತ-ಸ್ನಾತಕೋ ಭವತಿ.

[ಆದರೆ,] ವಿದ್ಯೆಯನ್ನು ಮುಗಿಸದೆಯೇ, ಸಮಾವರ್ತನ ಮಾಡಿಕೊಳ್ಳುತ್ತಾನೋ, ಅವನು **'ವ್ರತಸ್ನಾತಕ'**ನಾಗುತ್ತಾನೆ.

ಅಂದರೆ, ಯಾವನು ಇಪ್ಪತ್ತೈದು, ಮೂವತ್ತು, ಮೂವತ್ತಾರು, ನಲವತ್ತನಾಲ್ಕು ಅಥವಾ ನಲವತ್ತೆಂಟು ವರ್ಷಗಳ ತನಕ ನಿಯಮಪೂರ್ವಕವಾಗಿ ಮೊದಲು ಹೇಳಿದ ಬ್ರಹ್ಮಚರ್ಯವನ್ನು ಮುಗಿಸಿ, ಮತ್ತು ವಿದ್ಯೆಯನ್ನು ಮುಗಿಸಿದೆಯೇನೇ ವಿವಾಹ ಮಾಡಿಕೊಳ್ಳುತ್ತಾನೋ, ಅವನು **ಎರಡನೆಯವನು!** ಆ **'ವ್ರತಸ್ನಾತಕನು'** ಆ ಬ್ರಹ್ಮಚರ್ಯ[ರೂಪ] **'ತೀರ್ಥ'**ದಲ್ಲಿ **'ಸ್ನಾನ'**ಮಾಡಿ, ಶುದ್ಧ ನಾಗಿ ಹೋಗುತ್ತಾನೆ!

(೩) ವಿದ್ಯಾವ್ರತಸ್ನಾತಕ

ಯಶ್ಚ ಸುನಿಯಮೇನ ಬ್ರಹ್ಮಚರ್ಯ್ಯಾಶ್ರಮಮಂ ಸಮಾಪ್ಯ ವೇದಶಾಸ್ತ್ರಾದಿವಿದ್ಯಾಂ ಚ, ಸಮಾವರ್ತ್ತತೇ ;

ಮತ್ತು ಯಾವನು ಉತ್ತಮ ನಿಯಮದಿಂದ, ಬ್ರಹ್ಮಚರ್ಯಾಶ್ರಮವನ್ನು ಮುಗಿಸಿ, ಮತ್ತು ವೇದ-ಶಾಸ್ತ್ರಾದಿ ವಿದ್ಯೆಯನ್ನೂ ಕೂಡ, [ಮುಗಿಸಿ,] ಸಮಾ-ವರ್ತನ ಮಾಡಿಕೊಳ್ಳುತ್ತಾನೋ ;

ಸೋಽಪ್ಯಸ್ಮಿನ್ನುತ್ತಮತೀರ್ಥೇ ಸಮ್ಯಕ್ ಸ್ನಾತ್ವಾ ಯಥಾವಚ್ಛುದ್ಧಾತ್ಮಾ ಶುದ್ಧಾಂತಃಕರಣಃ ಸತ್ಯಧರ್ಮ-ಚಾರೀ ಪರಮವಿದ್ವಾನ್ ಸರ್ವೋಪಕಾರಕೋ ಭವತೀತಿ ವಿಜ್ಞಾತವ್ಯಮ್ ॥ ೬ ॥

ಅವನೂ ಕೂಡ, ಈ ಉತ್ತಮ**'ತೀರ್ಥ'**ದಲ್ಲಿ ಚೆನ್ನಾಗಿ **'ಸ್ನಾನ'** ಮಾಡಿ, ಯಥಾವತ್ತಾಗಿ ಶುದ್ಧಾತ್ಮನೂ, ಶುದ್ಧಾಂತಃಕರಣನೂ, ಸತ್ಯಧರ್ಮದ ಆಚರಣೆ ಮಾಡುವವನೂ, ಶ್ರೇಷ್ಠವಿದ್ವಾಂಸನೂ, ಎಲ್ಲರಿಗೂ ಉಪಕಾರ ಮಾಡುವವನೂ ಆಗುತ್ತಾನೆ, ಎಂದು ತಿಳಿಯಬೇಕು!

ಅಂದರೆ, **ಮೂರನೆಯವನು** ಯಾವನೆಂದರೆ_ ಅವನು ನಿಯಮದಿಂದ ಬ್ರಹ್ಮಚರ್ಯಾಶ್ರಮವನ್ನೂ, ಹಾಗೂ ವೇದಾದಿಶಾಸ್ತ್ರವಿದ್ಯೆಯನ್ನೂ ಮುಗಿಸಿ, **'ಸಮಾವರ್ತನ'**, ಎಂದರೆ ಅದರದೇ ಫಲರೂಪವಾದ ಉತ್ತಮ **'ತೀರ್ಥ'** ದಲ್ಲಿ ಚೆನ್ನಾಗಿ 'ಸ್ನಾನ' ಮಾಡಿ, ಯಥಾಯೋಗ್ಯವಾಗಿ ಪವಿತ್ರದೇಹ, ಶುದ್ಧವಾದ ಅಂತಃಕರಣ, ಶ್ರೇಷ್ಠವಿದ್ಯೆ ಮತ್ತು ಬಲವನ್ನು ಪಡೆದುಕೊಂಡು, ಪರೋಪಕಾರಿಯಾಗುತ್ತಾನೆ. [೬]

ಯಜುರ್ವೇದದಲ್ಲಿ ವಿದ್ಯೆಯೇ ತೀರ್ಥ!

[ಋಷಿಃ_ ಪರಮೇಷ್ಠೀ ಪ್ರಜಾಪತಿರ್ವಾ ದೇವಾಃ ; ದೇವತಾ_ ರುದ್ರಾಃ ; ಛಂದಃ_ ನಿಚೃದಾರ್ಷೀ ತ್ರಿಷ್ಟುಪ್ ; ಸ್ವರಃ_ ಧೈವತಃ]

ನಮಸ್ತೀರ್ಥ್ಯಾಯ ಚ ॥ *

[ಯಜುರ್ವೇದೇ ೧೬. ೪೨]

[ಅರ್ಥ:_ "ತೀರ್ಥದಲ್ಲಿ ವಾಸಿಸುವವನಿಗೆ ಸತ್ಕಾರವಿರಲಿ!"

(ಯಜುರ್ವೇದಃ ೧೬. ೪೨)]

[ಋಷಿಃ_ ಪರಮೇಷ್ಠೀ ಪ್ರಜಾಪತಿರ್ವಾ ದೇವಾಃ ; ದೇವತಾ_ ರುದ್ರಾಃ ; ಛಂದಃ_ ನಿಚೃದಾರ್ಷ್ಯನುಷ್ಟುಪ್ ; ಸ್ವರಃ_ ಗಾಂಧಾರಃ]

ಯೇ ತೀರ್ಥಾನಿ ಪ್ರಚರಂತಿ ಸೃಕಾಹಸ್ತಾ ನಿಷಂಗಿಣಃ ॥ *

[ಯಜುರ್ವೇದೇ ೧೬. ೬೧]

[ಅರ್ಥ:_ "ಯಾರು ಕೈಯಲ್ಲಿ ವಜ್ರವನ್ನು ಹಿಡಿದುಕೊಂಡು, ಬಾಣಕೋಶಯುಕ್ತರಾಗಿ ತೀರ್ಥಗಳಲ್ಲಿ ವಿಚರಿಸುತ್ತಾರೋ."

(ಯಜುರ್ವೇದಃ ೧೬. ೬೧)]

ಇತಿ ಶುಕ್ಲಯಜುರ್ವೇದಸಂಹಿತಾಯಾಮ್ ಅ. ೧೬ ॥ ೭ ॥

ಹೀಗೆ ಶುಕ್ಲಯಜುರ್ವೇದಸಂಹಿತೆಯ ಅಧ್ಯಾಯ ೧೬ ರಲ್ಲಿ [ಹೇಳಲಾಗಿದೆ.] [೭]

---

* ಅಯಂ ಮಂತ್ರೋಽತ್ರಾಪೂರ್ಣ ಉದ್ಧೃತಃ _ಅನು.

* ಈ ಮಂತ್ರವು ಇಲ್ಲಿ ಅಪೂರ್ಣವಾಗಿ ಉದ್ಧೃತವಾಗಿದೆ _ಅನು.

ಭಾಷ್ಯಮ್_

(ನಮಸ್ತೀರ್ಥ್ಯಾಯ ಚ) ತೇಷು ಪ್ರಾಣವೇದ-ವಿಜ್ಞಾನತೀರ್ಥೇಷು ಪೂರ್ವೇಷು ಭವಃ ಸಃ ತೀರ್ಥ್ಯಃ ;

ತಸ್ಮೈ ತೀರ್ಥ್ಯಾಯ ಪರಮೇಶ್ವರಾಯ ನಮೋಽಸ್ತು.

(ಯೇ ತೀರ್ಥಾನಿ) ಯೇ ವಿದ್ವಾಂಸಸ್ತೀರ್ಥಾನಿ ವೇದಾಧ್ಯಯನ-ಸತ್ಯ-ಭಾಷಣಾದೀನಿ ಪೂರ್ವೋಕ್ತಾನಿ (ಪ್ರಚರಂತಿ) ವ್ಯವಹರಂತಿ ;

ಯೇ ಚ ಪೂರ್ವೋಕ್ತಬ್ರಹ್ಮಚರ್ಯ್ಯಸೇವಿನೋ ರುದ್ರಾ ಮಹಾಬಲಾಃ ;

(ಸೃಕಾಹಸ್ತಾಃ) ವಿದ್ಯಾವಿಜ್ಞಾನೇ ಹಸ್ತೌ ಯೇಷಾಂ ತೇ ;

(ನಿಷಂಗಿಣಃ) ನಿಷಂಗಃ ಸಂಶಯಚ್ಛೇದಕ ಉಪದೇಶಾಖ್ಯಃ ಖಡ್ಗೋ ಯೇಷಾಂ ತೇ ಸತ್ಯೋಪ-ದೇಷ್ಟಾರಃ ;

ಭಾಷ್ಯ_

(ನಮಸ್ತೀರ್ಥ್ಯಾಯ ಚ) ಮೊದಲು ಹೇಳಿದ ಆ ಪ್ರಾಣ-ವೇದ-ವಿಜ್ಞಾನರೂಪ ತೀರ್ಥಗಳಲ್ಲಿ [ಯಾವನು] ಸತ್ತಾರೂಪನಾಗಿದ್ದಾನೋ, ಅವನು **'ತೀರ್ಥ್ಯ'**, [ಎನಿಸುತ್ತಾನೆ ;]

ಆ 'ತೀರ್ಥ್ಯ'ನಾದ ಪರಮೇಶ್ವರನಿಗೆ ನಮಸ್ಕಾರ ವಿರಲಿ!

ಅಂದರೆ, ಪ್ರಾಣ, ವೇದ, ವಿಜ್ಞಾನ ಮೊದಲಾದ ತೀರ್ಥಗಳಲ್ಲಿ ಇರುವವನು **'ತೀರ್ಥ್ಯ'**, ಎಂದು ಕರೆಯಲ್ಪಡುತ್ತಾನೆ. ಆ ತೀರ್ಥ್ಯರೂಪ ಪರಮೇಶ್ವರನಿಗೆ ನಮ್ಮ ನಮಸ್ಕಾರ!

(ಯೇ) ಯಾವ ವಿದ್ವಾಂಸರು **(ತೀರ್ಥಾನಿ)** ಮೊದಲು ಹೇಳಿದ ವೇದಾಧ್ಯಯನ, ಸತ್ಯಭಾಷಣ ಮೊದಲಾದುವುಗಳನ್ನು **(ಪ್ರಚರಂತಿ)** ವ್ಯವಹಾರಕ್ಕೆ ತರುತ್ತಾರೋ ;

ಮತ್ತು ಯಾರು ಮೊದಲು ಹೇಳಿದ ಬ್ರಹ್ಮಚರ್ಯ ಸೇವನೆ ಮಾಡುವ **'ರುದ್ರ'**, ಎಂದರೆ ಮಹಾ ಬಲಶಾಲಿಗಳೋ ;

ಅಂದರೆ, ಯಾವ ವಿದ್ವಾಂಸಜನರು ವೇದವನ್ನು ಓದುವುದು-ಓದಿಸುವುದು ಮತ್ತು ಸತ್ಯಕಥನರೂಪ ತೀರ್ಥಗಳ ಪ್ರಚಾರ ಮಾಡುತ್ತಾರೋ, ಮತ್ತು ಯಾರು ನಲವತ್ತನಾಲ್ಕು ವರ್ಷಗಳ ತನಕ ಬ್ರಹ್ಮಚರ್ಯಾಶ್ರಮದ ಸೇವನೆ ಮಾಡುತ್ತಾರೋ, ಅವರು ದೊಡ್ಡ ಬಲಶಾಲಿಗಳಾಗಿ **'ರುದ್ರ'**, ಎಂದು ಕರೆಯಲ್ಪಡುತ್ತಾರೆ!

(ಸೃಕಾಹಸ್ತಾಃ) ವಿದ್ಯೆ, ಮತ್ತು ವಿಜ್ಞಾನಗಳು ಯಾರಿಗೆ ಹಸ್ತಗಳಂತೆ ಇರುತ್ತವೋ, ಅವರೂ;

(ನಿಷಂಗಿಣಃ) **'ನಿಷಂಗ'**, ಎಂದರೆ ಸಂಶಯವನ್ನು ಭೇದಿಸುವ ಉಪದೇಶರೂಪದ ಖಡ್ಗವು ಯಾರದೋ, ಆ ಸತ್ಯದ ಉಪದೇಶಕರೂ ;

ಅಂದರೆ, ಯಾರ ಬಳಿ **'ಸೃಕಾ'**, ಎಂದರೆ ವಿಜ್ಞಾನ ರೂಪಹಸ್ತವೂ, ಹಾಗೂ **'ನಿಷಂಗ'**, ಎಂದರೆ ಸಂಶಯವನ್ನು ಕತ್ತರಿಸುವ ಉಪದೇಶರೂಪವಾದ ಕತ್ತಿಯೂ ಇದೆಯೋ, ಸತ್ಯದ ಉಪದೇಶಕರಾದ ಅವರೂ ಕೂಡ, **'ರುದ್ರರು'**, ಎಂದು ಕರೆಯಲ್ಪಡುತ್ತಾರೆ!

ಬೃಹದಾರಣ್ಯಕೋಪನಿಷತ್ತಿನಲ್ಲಿ 'ಪರಮತೀರ್ಥ'ನು ಪರಮೇಶ್ವರ!

"ತಂ ತ್ವೌಪನಿಷದಂ ಪುರುಷಂ ಪೃಚ್ಛಾಮಿ ।"

[ಬೃಹದಾರಣ್ಯಕೋಪನಿಷದಿ ೩. ೯. ೨೬]

[ಅರ್ಥ:_ ' ಆ ಉಪನಿಷತ್‌ಪ್ರತಿಪಾದ್ಯನಾದ ಪುರುಷನ ಬಗ್ಗೆ ನಾನು ಪ್ರಶ್ನಿಸುತ್ತೇನೆ."

(ಬೃಹದಾರಣ್ಯಕೋಪನಿಷತ್: ೩. ೯. ೨೬)]

ಇತಿ ಬ್ರಾಹ್ಮಣವಾಕ್ಯಾತ್_* ಉಪನಿಷತ್ಸು ಭವಂ ಪ್ರತಿಪಾದ್ಯಂ ವಿಜ್ಞಾಪನೀಯಂ ಪರಮೇಶ್ವರಮಾಹುಃ.

ಎಂಬ **ಬ್ರಾಹ್ಮಣವಾಕ್ಯದಂತೆ***_ ಉಪನಿಷತ್ತುಗಳಲ್ಲಿ ಪ್ರತಿಪಾದ್ಯನಾಗಿರುವ, ಎಂದರೆ ತಿಳಿಸಲ್ಪಡಬೇಕಾಗಿರುವ ಪರಮೇಶ್ವರನ ಬಗ್ಗೆ ಹೇಳುತ್ತಾರೆ.

ಅಂದರೆ, ಉಪನಿಷತ್ತುಗಳಿಂದ ಪ್ರತಿಪಾದಿಸಲ್ಪಟ್ಟಿರುವವನೂ, ಹಾಗೂ ಉಪದೇಶ ಮಾಡಲು ಯೋಗ್ಯನೂ ಆದವನು ಪರಮೇಶ್ವರನಾಗಿದ್ದಾನೆ!

ಅತ ಏವೋಕ್ತಸ್ತೀರ್ಥ್ಯ ಇತಿ.

ಆದುದರಿಂದಲೇ, [ಅವನು] **'ತೀರ್ಥ್ಯ'**, ಎಂದು ಹೇಳಲ್ಪಟ್ಟಿದ್ದಾನೆ .

ಸರ್ವೇಷಾಂ ತಾರಕಾಣಾಂ ತೀರ್ಥಾನಾಮಾತ್ಮಕತ್ವಾತ್ ಪರಮತೀರ್ಥಾಖ್ಯೋ ಧರ್ಮಾತ್ಮನಾಂ ಸ್ವಭಕ್ತಾನಾಂ ಸದ್ಯಸ್ತಾರಕತ್ವಾತ್ ಪರಮೇಶ್ವರ ಏವಾಸ್ತಿ ॥ ೭ ॥

ಎಲ್ಲರನ್ನೂ ದಾಟಿಸುವಂತಹ **'ತೀರ್ಥ'**, ಎಂಬ ಸಂಜ್ಞೆಯನ್ನುಳ್ಳವನಾದುದರಿಂದಲೂ, [ಮತ್ತು] ಧರ್ಮಾತ್ಮರಾದ ತನ್ನ ಭಕ್ತರನ್ನು ತತ್ಕಾಲ ದಾಟಿಸುವವನಾದುದರಿಂದಲೂ, **'ಪರಮತೀರ್ಥ'**, ಎಂಬ ಹೆಸರನ್ನುಳ್ಳವನು ಪರಮೇಶ್ವರನೇ ಆಗಿದ್ದಾನೆ.

ಅಂದರೆ, ಪರಮೇಶ್ವರನಿಗೆ 'ಪರಮತೀರ್ಥ', ಎಂದು ಹೇಳುತ್ತಾರೆ. ಏಕೆಂದರೆ, ಅವನ ಕೃಪೆ ಮತ್ತು ಪ್ರಾಪ್ತಿಯಿಂದಲೇ ಜೀವರು ಎಲ್ಲಾ ದುಃಖಗಳನ್ನೂ ದಾಟಿಬಿಡುತ್ತಾರೆ. [೭]

ಏತೇನೈತಾನಿ ತೀರ್ಥಾನಿ ವ್ಯಾಖ್ಯಾತಾನಿ.

ಈ ರೀತಿಯಾಗಿ, ಇಷ್ಟು 'ತೀರ್ಥ'ಗಳು ವ್ಯಾಖ್ಯಾನ ಮಾಡಲ್ಪಟ್ಟವು!

* ಶತಪಥಬ್ರಾಹ್ಮಣೇ ೧೪. ೬. ೯. ೨೮ _ಅನು.

* ಶತಪಥಬ್ರಾಹ್ಮಣ (೧೪. ೬. ೯. ೨೮) _ಅನು.

ಜಲ-ಸ್ಥಳಗಳು ದಾಟಿಸಲಾರದುದರಿಂದ, ತೀರ್ಥಗಳಲ್ಲ!

ಪ್ರಶ್ನಃ_ಯೈಸ್ತರಂತಿ ನರಾಸ್ತಾನಿ ಜಲಸ್ಥಲಾದೀನಿ ತೀರ್ಥಾನಿ ಕುತೋ ನ ಭವಂತಿ?

ಪ್ರಶ್ನೆ_ ಯಾವವುಗಳಿಂದ ಮನುಷ್ಯರು ದಾಟಬಲ್ಲರೋ, ಆ ಜಲ-ಸ್ಥಳ ಮೊದಲಾದುವು 'ತೀರ್ಥಗಳು' ಏಕಾಗುವುದಿಲ್ಲ?

ಅಂದರೆ, ಯಾವವುಗಳಿಂದ ಮನುಷ್ಯರು ದಾಟಿಹೋಗುತ್ತಾರೋ; ಎಂದರೆ ಜಲ, ಹಾಗೂ ಸ್ಥಾನವಿಶೇಷಗಳು; ಅವು 'ತೀರ್ಥ'ವಾಗಲಾರವೇನು?

ಅತ್ರೋಚ್ಯತೇ_

ಇದಕ್ಕೆ ಉತ್ತರ ಏನು ಹೇಳಲಾಗುತ್ತದೆಂದರೆ_

ನೈವ ಜಲಂ ಸ್ಥಲಂ ಚ ತಾರಕಂ ಕದಾಚಿದ್ ಭವಿತುಮರ್ಹತಿ ;

ಉತ್ತರ_ ಇಲ್ಲ! ಜಲ, ಹಾಗೂ ಸ್ಥಳಗಳು ದಾಟಿಸುವಂತಹವು ಆಗಲು ಎಂದಿಗೂ ಯೋಗ್ಯವೇ ಅಲ್ಲ!

ತತ್ರ ಸಾಮರ್ಥ್ಯಾಭಾವಾತ್, ಕರಣ-ಕಾರಕ* ವೃತ್ತ್ಯಭಾವಾಚ್ಚ.

ಏಕೆಂದರೆ, ಅವುಗಳಲ್ಲಿ ಆ ಸಾಮರ್ಥ್ಯವಿರುವುದಿಲ್ಲ; ಮತ್ತು ಅವು ಸಾಧನರೂಪವಾಗಿರುವಂತಹವೂ ಅಲ್ಲ!

ಅಂದರೆ, ಅವುಗಳಲ್ಲಿ ದಾಟಿಸುವಂತಹ ಸಾಮರ್ಥ್ಯವೇ ಇರುವುದಿಲ್ಲ! ಏಕೆಂದರೆ, '**ತೀರ್ಥ**', ಎಂಬ ಶಬ್ದವು ಸಾಧನರೂಪದಲ್ಲಿ ಗ್ರಹಿಸಲಾಗುತ್ತದೆ.

ಜಲಸ್ಥಲಾದೀನಿ ನೌಕಾದಿಭಿರ್ಯಾನೈಃ ಪದ್‌ಭ್ಯಾಂ ಬಾಹುಭ್ಯಾಂ ಚ ಜನಾಸ್ತರಂತಿ. ತಾನಿ ಚ ಕರ್ಮ-ಕಾರಕಾನ್ವಿತಾನಿ ಭವಂತಿ ;**

ಜನರು ಜಲ-ಸ್ಥಳ ಮೊದಲಾದುವನ್ನು ದೋಣಿ ಮೊದಲಾದ ಯಾನಗಳ ಮೂಲಕವಾಗಿಯೂ, ಅಥವಾ ಎರಡು ಕಾಲುಗಳಿಂದಲೂ-ಎರಡು ತೋಳುಗಳಿಂದಲೂ ದಾಟುತ್ತಾರೆ! ಮತ್ತು ಅವು+ ಕರ್ತೃವಿಗೆ [ದಾಟಲು] ಅತ್ಯಂತ ಇಷ್ಟವಾಗಿರುತ್ತವೆ!

ಕರಣಕಾರಕಾನ್ವಿತಾನಿ ತು ನೌಕಾದೀನಿ.

ಸಾಧನಗಳ ರೂಪದಲ್ಲಿಯಂತೂ ದೋಣಿ ಮೊದಲಾದುವುಗಳೇ ಆಗಿರುತ್ತವೆ!++

ಅಂದರೆ, ಜಲ ಅಥವಾ ಸ್ಥಾನವಿಶೇಷಗಳು '**ಅಧಿಕರಣ**', [ಎಂದರೆ, ಆಧಾರಭೂತ]ವಾಗಿಯೂ;✦

---

* 'ಸಾಧಕತಮಂ ಕರಣಮ್' (ಅಷ್ಟಾಧ್ಯಾಯ್ಯಾಮ್ ೧. ೪. ೪೨) _ಅನು.

** 'ಕರ್ತುರೀಪ್ಸಿತತಮಂ ಕರ್ಮ' (ಅಷ್ಟಾಧ್ಯಾಯ್ಯಾಮ್ ೧. ೪. ೪೯) _ಅನು.

+ ಎಂದರೆ, ಜಲ-ಸ್ಥಳಗಳು _ಅನು.

++ ಜಲ-ಸ್ಥಳಗಳಲ್ಲ; ಎಂದು ತಿಳಿಯಬೇಕು. _ಅನು.

✦ 'ಆಧಾರೋಽಧಿಕರಣಮ್' (ಅಷ್ಟಾಧ್ಯಾಯೀ: ೧. ೪. ೪೫) _ಅನು.

ಅಥವಾ **'ಕರ್ಮಕಾರಕ'**, [ಎಂದರೆ, ಕರ್ತೃವಿಗೆ ಅತ್ಯಂತ ಇಷ್ಟಪ್ರದ]ವಾಗಿಯೂ* ಇರುತ್ತವೆ. ಅವುಗಳಲ್ಲಿ ಜನರು ನೌಕೆ ಮೊದಲಾದುವುಗಳಿಂದಲೂ ಅಥವಾ ಕೈ, ಹಾಗೂ ಕಾಲುಗಳಿಂದಲೂ ಈಜುತ್ತಾರೆ. ಆದುದರಿಂದ, ಜಲ ಅಥವಾ ಸ್ಥಳಗಳು ದಾಟಿಸುವಂತಹವು ಎಂದಿಗೂ ಆಗಲಾರವು!

ಏಕೆಂದರೆ_

ಈಜದಿದ್ದರೆ, ಈ ಪೌರಾಣಿಕ'ತೀರ್ಥ'ಗಳು ಮುಳುಗಿಸಿಯೇ ಬಿಡುತ್ತವೆ!

ಯದಿ ಪದ್‌ಭ್ಯಾಂ ಗಮನಂ ಬಾಹುಬಲಂ [ಚ] ನ ಕುರ್ಯ್ಯಾನ್ನ ಚ ನೌಕಾದಿಷು ತಿಷ್ಠೇತ್ ;

ಒಂದು ವೇಳೆ, ಎರಡು ಕಾಲುಗಳಿಂದಲೂ, ಹಾಗೂ ಎರಡು ತೋಳುಗಳ ಬಲದಿಂದಲೂ ಚಲನೆ ಮಾಡದಿದ್ದರೆ, ಅಥವಾ ನೌಕೆ ಮೊದಲಾದುವಲ್ಲಿ ಕುಳಿತುಕೊಳ್ಳದಿದ್ದರೆ ;

ತರ್ಹ್ಯವಶ್ಯಂ ತತ್ರ ಮನುಷ್ಯೋ ಮಜ್ಜೇನ್ಮಹ-ದ್ದುಃಖಂ ಚ ಪ್ರಾಪ್ನುಯಾತ್.

ಮನುಷ್ಯನು ಅವಶ್ಯವಾಗಿ ಅದರಲ್ಲಿ ಮುಳುಗಿ ಹೋದಾನು! ಮತ್ತು ಅತ್ಯಂತ ದುಃಖವನ್ನೂ ಕೂಡ, ಪ್ರಾಪ್ತಮಾಡಿಕೊಂಡಾನು!**

ಅಂದರೆ, ಯಾರು ನೀರಿನಲ್ಲಿ ಕೈ ಅಥವಾ ಕಾಲುಗಳನ್ನು ಚಲಾಯಿಸುವುದಿಲ್ಲವೋ, ಅಥವಾ ನೌಕೆ ಮೊದಲಾದುವುಗಳಲ್ಲಿ ಕುಳಿತುಕೊಳ್ಳುವುದಿಲ್ಲವೋ, [ಅವರು] ಎಂದಿಗೂ ದಾಟಲಾರರು!

ತಸ್ಮಾದ್ ವೇದಾನುಯಾಯಿನಾಮಾರ್ಯ್ಯಾಣಾಂ ಮತೇ ಕಾಶೀ-ಪ್ರಯಾಗ-ಪುಷ್ಕರ-ಗಂಗಾ-ಯಮುನಾದಿ[ನಗರ-]ನದೀನಾಂ ಸಾಗರಾಣಾಂ ಚ ನೈವ ತೀರ್ಥಸಂಜ್ಞಾ ಸಿಧ್ಯತಿ ;

ಆದುದರಿಂದ, ವೇದಾನುಯಾಯಿಗಳಾದ ಆರ್ಯರ ಸಂಮ್ಮತಿಯಲ್ಲಿ **ಕಾಶೀ-ಪ್ರಯಾಗ-ಪುಷ್ಕರ-ಗಂಗಾ-ಯಮುನಾ** ಮೊದಲಾದ ನಗರ-ನದಿಗಳಿಗೂ, ಹಾಗೂ ಸಮುದ್ರಗಳಿಗೂ **'ತೀರ್ಥ'**, ಎಂಬ ಹೆಸರು ಸಲ್ಲುವುದೇ ಇಲ್ಲ!

ಅಂದರೆ, ಯುಕ್ತಿಯಿಂದಲೂ ಕೂಡ, **ಕಾಶೀ, ಪ್ರಯಾಗ ಗಂಗಾ, ಯಮುನಾ, ಕೊಳ** ಮೊದಲಾದುವು **'ತೀರ್ಥ'**,_ ಎಂದು ಸಿದ್ಧವಾಗಲಾರವು!

---

* 'ಕರ್ತುರೀಪ್ಸಿತತಮಂ ಕರ್ಮ' (ಅಷ್ಟಾಧ್ಯಾಯೀಃ ೧. ೪. ೪೯) _ಅನು.

** ಎಂದರೆ, ನೀರಿನಲ್ಲಿ _ಅನು.

ಕಿಂತು ವೇದವಿಜ್ಞಾನರಹಿತೈಃ ; ಆದರೆ, ವೇದವಿಜ್ಞಾನದಿಂದ ರಹಿತರಾದವರಿಂದಲೂ ;

ಉದರಂಭರೈಃ ; ಹೊಟ್ಟೆ ತುಂಬಿಸಿಕೊಳ್ಳುವವರಿಂದಲೂ ;

ಸಂಪ್ರದಾಯಸ್ಥೈಃ; ಸಂಪ್ರದಾಯಸ್ಥರಿಂದಲೂ ;

ಜೀವಿಕಾಧೀನೈಃ ; ವೃತ್ತಿಗಧೀನರಾದವರಿಂದಲೂ ;

ವೇದಮಾರ್ಗವಿರೋಧಿಭಿಃ ; ವೇದಮಾರ್ಗದ ವಿರೋಧಿಗಳಿಂದಲೂ ;

ಅಲ್ಪಜ್ಞೈಃ ; ಅಲ್ಪಜ್ಞರಿಂದಲೂ ;

ಜೀವಿಕಾರ್ಥಂ ಸ್ವಕೀಯರಚಿತಗ್ರಂಥೇಷು ತೀರ್ಥಸಂಜ್ಞಯಾ ಪ್ರಸಿದ್ಧೀಕೃತಾನಿ ಸಂತೀತಿ.

[ಸ್ವ]ಜೀವನೋಪಾಯಕ್ಕಾಗಿ, ತಮ್ಮಿಂದ ರಚಿತವಾದ ಗ್ರಂಥಗಳಲ್ಲಿ [ಅವು] 'ತೀರ್ಥ', ಎಂಬ ಸಂಜ್ಞೆಯಿಂದ ಪ್ರಸಿದ್ಧೀಕರಿಸಲ್ಪಟ್ಟಿವೆ!

ಅಂದರೆ, ಈ ಕಾರಣದಿಂದ, ಸತ್ಯಶಾಸ್ತ್ರೋಕ್ತವಾದ ಯಾವ 'ತೀರ್ಥ'ಗಳಿವೆಯೋ, ಅವನ್ನೇ ಅಂಗೀಕರಿಸಬೇಕು! ಜಲವಿಶೇಷ, ಹಾಗೂ ಸ್ಥಾನವಿಶೇಷಗಳನ್ನಲ್ಲ!

ಗಂಗಾ-ಯಮುನಾ ನದಿಗಳಲ್ಲಿ ಪಾಪನಾಶಕತ್ವದ ಗುಣಗಳು ಇಲ್ಲ!

ನನು_ ಪ್ರಶ್ನೆ _

ಇಮಂ ಮೇ ಗಂಗೇ ಯಮುನೇ ಸರಸ್ವತೀ.*

ಇತಿ ಗಂಗಾದಿನದೀನಾಂ ವೇದೇಷು ಪ್ರತಿಪಾದನಂ ಕೃತಮಸ್ತಿ. ತ್ವಯಾ ಕಥಂ ನ ಮನ್ಯತೇ?

ಎಂಬುದಾಗಿ **ಗಂಗಾ** ಮೊದಲಾದ ನದಿಗಳ ಪ್ರತಿಪಾದನೆಯು ವೇದಗಳಲ್ಲಿ ಮಾಡಲ್ಪಟ್ಟಿದೆಯಲ್ಲಾ! ನೀವು ಅದನ್ನು ಏಕೆ ಒಪ್ಪುವುದಿಲ್ಲ?

ಅಂದರೆ, ಈ ಮಂತ್ರವು **ಗಂಗಾ** ಮೊದಲಾದ ನದಿಗಳನ್ನು 'ತೀರ್ಥ', ಎಂದು ನಿರ್ಧಾರ ಮಾಡುತ್ತದೆ. ಮತ್ತೆ, ನೀವು ಇವುಗಳನ್ನು 'ತೀರ್ಥ', ಎಂದು ಏಕೆ ಅಂಗೀಕರಿಸುವುದಿಲ್ಲ?

[ಋಷಿಃ_ ಸಿಂಧುಕ್ಷಿತ್‌ಪ್ರೈಯಮೇಧಃ ; ದೇವತಾ_ ನದ್ಯಃ ; ಛಂದಃ_ ಆರ್ಚೀ ಸ್ವರಾಡ್‌ಜಗತೀ ; ಸ್ವರಃ_ ನಿಷಾದಃ]

* ಇಮಂ ಮೇ ಗಂಗೇ ಯಮುನೇ ಸರಸ್ವತಿ ಶುತುದ್ರಿ ಸ್ತೋಮಂ ಸಚತಾ ಪರುಷ್ಣ್ಯಾ ।
ಅಸಿಕ್ನ್ಯಾ ಮರುದ್‌ವೃಧೇ ವಿತಸ್ತಯಾರ್ಜೀಕೀಯೇ ಶೃಣುಹ್ಯಾ ಸುಷೋಮಯಾ ॥

[ಋಗ್ವೇದೇ ೧೦. ೭೫. ೫]

ಅತ್ರೋಚ್ಯತೇ_

ಇದಕ್ಕೆ ಉತ್ತರ ಏನು ಹೇಳಲಾಗುತ್ತದೆಯೆಂದರೆ_

ಮನ್ಯತೇ ತು ಮಯಾ ತಾಸಾಂ ನದೀ ಸಂಜ್ಞೇತಿ.

ಅವುಗಳಿಗೆ 'ನದೀ', ಎಂಬ ಹೆಸರು ಇದೆಯೆಂಬುದನ್ನಂತೂ ನಾನು ಒಪ್ಪುತ್ತೇನೆ!

ಅಂದರೆ, ನಾವು ಅವನ್ನು 'ನದೀ', ಎಂದು ಅಂಗೀಕರಿಸುತ್ತೇವೆ.

ತಾ ಗಂಗಾದಯೋ ನದ್ಯಃ ಸಂತಿ.

ಆ ಗಂಗಾ ಮೊದಲಾದುವು 'ನದಿ'ಗಳಾಗಿವೆ!

ತಾಭ್ಯೋ ಯಥಾಯೋಗ್ಯಂ ಜಲಶುದ್ಧ್ಯಾದಿಗುಣೈರ್ಯಾವಾನುಪಕಾರೋ ಭವತಿ, ತಾವತ್ ತಾಸಾಂ ಮಾನ್ಯಂ[⊛] ಕರೋಮಿ ;

ಅವುಗಳಿಂದ, ಜಲಶುದ್ಧಿ ಮೊದಲಾದ ಗುಣಗಳ ಮೂಲಕ ಯಥಾಯೋಗ್ಯವಾಗಿ ಎಷ್ಟು ಉಪಕಾರ ಉಂಟಾಗುತ್ತದೋ, ಅಷ್ಟರ ಮಟ್ಟಿಗೆ ಅವುಗಳ ಮಾನ್ಯತೆಯನ್ನು ಮಾಡುತ್ತೇನೆ!

ಅಂದರೆ, ಅವುಗಳ ನೀರಿನಲ್ಲಿ ಯಾವ ಯಾವ ಗುಣಗಳಿವೆಯೋ, ಅವನ್ನೂ ಕೂಡ, ಅಂಗೀಕರಿಸುತ್ತೇವೆ.

ನ ಚ ಪಾಪನಾಶಕತ್ವಂ ದುಃಖಾತ್ ತಾರಕತ್ವಂ ಚ.

ಆದರೆ, ಪಾಪನಾಶಕತ್ವ, ಹಾಗೂ ದುಃಖದಿಂದ ದಾಟಿಸುವಿಕೆಯನ್ನಲ್ಲ!

ಕುತಃ?

ಏಕೆಂದರೆ_

ಜಲಸ್ಥಲಾದೀನಾಂ ತತ್ಸಾಮರ್ಥ್ಯಾಭಾವಾತ್.

ಜಲ-ಸ್ಥಳ ಮೊದಲಾದುವುಗಳಿಗೆ ಆ ಸಾಮರ್ಥ್ಯವಿರುವುದಿಲ್ಲ!

ಅಂದರೆ, ಪಾಪಗಳನ್ನು ಬಿಡಿಸುವುದು! ಹಾಗೂ ದುಃಖಗಳಿಂದ ರಕ್ಷಿಸುವುದು_ ಇದು ಅವುಗಳ ಸಾಮರ್ಥ್ಯವಲ್ಲ!

ಇದಂ ಸಾಮರ್ಥ್ಯಂ ತು ಪೂರ್ವೋಕ್ತೇಷ್ವೇವ ತೀರ್ಥೇಷು ಗಮ್ಯತೇ, ನಾನ್ಯತ್ರೇತಿ.

ಈ ಸಾಮರ್ಥ್ಯವಂತೂ ಮೊದಲು ಹೇಳಿದ 'ತೀರ್ಥ'ಗಳಿಗೇ ಅನ್ವಯಿಸುತ್ತದೆ ; ಬೇರಾವುದಕ್ಕೂ ಅಲ್ಲ!

ಶರೀರಸ್ಥ ನಾಡಿಗಳಿಗೇ ಗಂಗಾ ಮೊದಲಾದ ಹೆಸರಿವೆ

ಅನ್ಯಚ್ಚ_

ಮತ್ತೂ ಏನೆಂದರೆ_

ಇಡಾ-ಪಿಂಗಲಾ-ಸುಷುಮ್ನಾ-ಕೂರ್ಮನಾಡ್ಯಾದೀನಾಂ ಗಂಗಾದಿಸಂಜ್ಞಾಸ್ತಿ;

ಇಡಾ, ಪಿಂಗಳಾ, ಸುಷುಮ್ನಾ, ಕೂರ್ಮ ಮೊದಲಾದ ನಾಡಿಗಳಿಗೆ ಗಂಗಾ ಮೊದಲಾದ ಹೆಸರುಗಳಿವೆ.

⊛ 'ಮಾನಮ್' _ಆ. ವೈ.

ಅಂದರೆ, ಈ ಮಂತ್ರದಲ್ಲಿ* **'ಗಂಗಾ'** ಮೊದಲಾದ ಹೆಸರುಗಳು **ಇಡಾ, ಪಿಂಗಳಾ, ಸುಷುಮ್ನಾ, ಕೂರ್ಮ** ಮತ್ತು **ಜಾಠರಾಗ್ನಿಯ** ನಾಡಿಗಳದಾಗಿವೆ.

ತಾಸಾಂ ಯೋಗಸಮಾಧೌ ಪರಮೇಶ್ವರಸ್ಯ ಗ್ರಹಣಾತ್.

ಏಕೆಂದರೆ, ಯೋಗಸಮಾಧಿಯಲ್ಲಿ ಅವುಗಳ ಮೂಲಕ ಪರಮೇಶ್ವರನ ಪ್ರಾಪ್ತಿಯಾಗುತ್ತದೆ.

ತಸ್ಯ ಧ್ಯಾನಂ ದುಃಖನಾಶಕಂ ಮುಕ್ತಿಪ್ರದಂ ಚ ಭವತ್ಯೇವ.

ಅವನ ಧ್ಯಾನವು ದುಃಖನಾಶಕವೂ, ಹಾಗೂ ಮುಕ್ತಿಪ್ರದವೂ ಆಗಿಯೇ ಇರುತ್ತದೆ!

ಅಂದರೆ, ಅವುಗಳಲ್ಲಿ ಯೋಗಾಭ್ಯಾಸದ ಮೂಲಕ ಪರಮೇಶ್ವರನ ಉಪಾಸನೆ ಮಾಡುವುದರಿಂದ, ಮನುಷ್ಯರು ಎಲ್ಲಾ ದುಃಖಗಳಿಂದಲೂ ಬಿಡುಗಡೆ ಹೊಂದುತ್ತಾರೆ!

ತಾಸಾಮಿಡಾದೀನಾಂ ಧಾರಣಾಸಿದ್ಧ್ಯರ್ಥಂ ಚಿತ್ತಸ್ಯ ಸ್ಥಿರೀಕರಣಾರ್ಥಂ ಸ್ವೀಕರಣಮಸ್ತೀತಿ ತತ್ರ ಗ್ರಹಣಾತ್.

[ಮತ್ತು] ಧಾರಣಾಸಿದ್ಧಿಗಾಗಿ, ಎಂದರೆ, ಚಿತ್ತದ ಸ್ಥಿರೀಕರಣೆಗಾಗಿ, ಆ **ಇಡಾ** ಮೊದಲಾದ [ನಾಡಿ]ಗಳ [ಆವಶ್ಯಕತೆಯನ್ನು] ಅಂಗೀಕರಿಸಲಾಗುತ್ತದೆಯಾದುದರಿಂದ, ಅವುಗಳದೇ ಇಲ್ಲಿ ಗ್ರಹಣವಾಗುತ್ತದೆ!

ಅಂದರೆ, ಉಪಾಸನೆಯಲ್ಲಿ ನಾಡಿಗಳ ಮೂಲಕ ವಾಗಿಯೇ **'ಧಾರಣೆ'** ಮಾಡಬೇಕಾಗುತ್ತದೆ. ಈ ಕಾರಣ ದಿಂದ, ಈ ಮಂತ್ರದಲ್ಲಿ* ಅವುಗಳ ವಿಚಾರ ಮಾಡ ಲಾಗಿದೆ.

ಆದುದರಿಂದ, [ಮೇಲೆ] ಹೇಳಿದ ಹೆಸರುಗಳಿಂದ ನಾಡಿಗಳ ಗ್ರಹಣಮಾಡುವುದೇ ಉಚಿತವಾಗಿರುತ್ತದೆ!

ಏತನ್ಮಂತ್ರಪ್ರಕರಣೇ ಪರಮೇಶ್ವರಸ್ಯಾನು-ವರ್ತ್ತನಾತ್.

[ಮತ್ತು] ಈ ಮಂತ್ರಪ್ರಕರಣದಲ್ಲಿ ಪರಮೇಶ್ವರನ ಅನುವೃತ್ತಿ+ [ಕೂಡ,] ಇದೆ.

---

* ಈ ಮಂತ್ರದ ವ್ಯಾಖ್ಯಾನವನ್ನು ಮುದ್ರಣಕ್ಕೆ ಸಿದ್ಧವಾಗಿರುವ **'ವೇದಶಿಕ್ಷಣ'** ತೃತೀಯ ಹಂತ, ಪಾಠ ೧೫ ರಲ್ಲಿ ನೋಡಿ _**ಅನು.**

** **'ಗಂಗಾ'** ಶಬ್ದವು **'ಗಮ್'**ಧಾತುವಿನಿಂದ ಸಿದ್ಧವಾಗುತ್ತದೆ. ಇದಕ್ಕೆ **ಜ್ಞಾನ, ಗಮನ, ಪ್ರಾಪ್ತಿ,** ಎಂಬ ಅರ್ಥಗಳಿವೆ _**ಅನು.**

+ **ಋಗ್ವೇದದ** ೧೦ನೆಯ ಮಂಡಲದ ೭೩ ಮತ್ತು ೭೪ ನೆಯ ಸೂಕ್ತಗಳ ದೇವತಾ 'ಇಂದ್ರ'ಪರಮೇಶ್ವರ ಆಗಿದ್ದಾನೆ. ೭೫ ನೆಯ ಸೂಕ್ತದ ದೇವತಾ **"ನದಿಗಳು"** ಆದರೂ ಕೂಡ, ಅವನ ಬಗ್ಗೆ ವರ್ಣನೆಯೇ ೭೫ ನೆಯ ಸೂಕ್ತದ ಮಂತ್ರಗಳಲ್ಲೂ ಇದೆ, ಎಂದರ್ಥ _**ಅನು.**

'ಸಿತ-ಅಸಿತ', ಎಂಬುವು ಕೂಡ, ನಾಡಿಗಳ ಹೆಸರು; ನದಿಗಳದಲ್ಲ!

ಏವಮೇವ_

ಹೀಗೆಯೇ_

ಸಿತಾಸಿತೇ [ಸರಿತೇ] ಯತ್ರ ಸಂಗಥೇ ।

ತತ್ರಾಪ್ಲುತಾಸೋ ದಿವಮುತ್ಪಂತಿ ॥ *

[ಋಗ್ವೇದಪರಿಶಿಷ್ಟೇ ಋಗ್ವೇದಸ್ಯ ೧೦. ೭೫. ೫ ತಮಸ್ಯ ಮಂತ್ರಸ್ಯಾನಂತರಮ್]

[ಅರ್ಥ:_ "ಬಿಳುಪು ಮತ್ತು ಕಪ್ಪು ಎಲ್ಲಿ ಸೇರುತ್ತವೋ, ಅಲ್ಲಿ ಸ್ನಾನ ಮಾಡುವವರು ದ್ಯುಲೋಕಕ್ಕೆ ಹಾರುತ್ತಾರೆ."

(ಋಗ್ವೇದಪರಿಶಿಷ್ಟ ೨೨ ; ಋಗ್ವೇದ (೧೦. ೭೫. ೫) ಮಂತ್ರದ ಅನಂತರ)]

ಏತೇನ ಪರಿಶಿಷ್ಟವಚನೇನ ಕೇಚಿದ್ ಗಂಗಾ-ಯಮುನಯೋರ್ಗ್ರಹಣಂ ಕುರ್ವಂತಿ.

ಈ [ಋಗ್ವೇದ]ಪರಿಶಿಷ್ಟವಚನದಿಂದ, ಯಾರೋ, **ಗಂಗಾ-ಯಮುನಾ**[ನದಿಗಳ] ಅಭಿಪ್ರಾಯವನ್ನು ಸ್ವೀಕರಿಸುತ್ತಾರೆ!

'ಸಂಗಥೇ' ಇತಿ ಪದೇನ ಗಂಗಾಯಮುನಯೋಃ ಸಂಯೋಗಸ್ಯ ಪ್ರಯಾಗತೀರ್ಥಮಿತಿ ಸಂಜ್ಞಾಂ ಕುರ್ವಂತಿ.

[ಮತ್ತು] **'ಸಂಗಥೇ'**, ಎಂಬ ಪದದಿಂದ, **ಗಂಗಾ-ಯಮುನಾ**[ನದಿಗಳ] ಸಂಗಮವಾದ **'ಪ್ರಯಾಗ-ತೀರ್ಥ'**, ಎಂಬ ಹೆಸರನ್ನು [ಕೂಡ,] ಇಡುತ್ತಾರೆ!

ತನ್ನ ಸಂಗಚ್ಛತೇ, ಕುತಃ?

ಅದು ಸರಿಯಲ್ಲ! ಏಕೆಂದರೆ_

ನೈವ ತತ್ರಾಪ್ಲುತ್ಯ ಸ್ನಾನಂ ಕೃತ್ವಾ ದಿವಂ ದ್ಯೋತನಾತ್ಮಕಂ ಪರಮೇಶ್ವರಂ ಸೂರ್ಯ್ಯಲೋಕಂ-ವೋತ್ಪತಂತಿ ಗಚ್ಛಂತಿ ;

[ಜನರು] ಅಲ್ಲಿ **(ಅಪ್ಲುತ್ಯ)** ಸ್ನಾನ ಮಾಡಿ, **(ದಿವಮ್)** ಪ್ರಕಾಶರೂಪನಾದ ಪರಮೇಶ್ವರನನ್ನು ಅಥವಾ ಸೂರ್ಯಲೋಕವನ್ನು **(ನೈವ ಉತ್ಪತಂತಿ)** ಸೇರುವುದೇ ಇಲ್ಲ!

ಕಿಂತು ಪುನಃ ಸ್ವಕೀಯಂ ಸ್ವಕೀಯಂ ಗೃಹಮಾ-ಗಚ್ಛಂತ್ಯತಃ .

ಅದರ ಬದಲು ಪುನಃ ತಮ್ಮ-ತಮ್ಮ ಮನೆಗೇನೇ ಬರುತ್ತಾರೆ!

---

* ಯೇ ವೈ ತನ್ವಂ೧ ವಿ ಸೃಜಂತಿ ಧೀರಾ-

ಸ್ತೇ ಜನಾಸೋ ಅಮೃತತ್ವಂ ಭಜಂತೇ ॥

ಇತ್ಯಸ್ಯ ಮಂತ್ರಸ್ಯೋತ್ತರಾರ್ಧಃ.

ಹೀಗೆ ಈ ಮಂತ್ರದ ಉತ್ತರಾರ್ಧ ಇದೆ.

[ಅರ್ಥ:_ "ಯಾವ ಧ್ಯಾನಿಗಳು ಶರೀರವನ್ನು ತ್ಯಜಿಸುತ್ತಾರೋ, ಆ ಜನರು ಮೋಕ್ಷವನ್ನು ಪಡೆಯುತ್ತಾರೆ."]

_ಅನು.

ಅತ್ರಾಪಿ 'ಸಿತ'-ಶಬ್ದೇನೇಡಾಯಾಃ, 'ಅಸಿತ'-ಶಬ್ದೇನ ಪಿಂಗಲಾಯಾಶ್ಚ ಗ್ರಹಣಮ್.

ಇಲ್ಲೂ ಕೂಡ, **'ಸಿತ'**, ಎಂಬ ಶಬ್ದದಿಂದ **'ಇಡಾ'**, ಎಂದೂ ; ಮತ್ತು **'ಅಸಿತ'**, ಎಂಬ ಶಬ್ದದಿಂದ **'ಪಿಂಗಳಾ'**, ಎಂದೂ ಅಂಗೀಕರಿಸಬೇಕು!

ಯತ್ರ ತು ಖಲ್ವೇತಯೋರ್ನಾಡ್ಯೋಃ ಸುಷುಮ್ಣಾಯಾಂ ಸಮಾಗಮೋ ಮೇಲನಂ ಭವತಿ ;

ಎಲ್ಲಿ ಈ ಎರಡು ನಾಡಿಗಳ ಸಂಧಿಯಂತೂ **'ಸುಷುಮ್ನಾ'**[ನಾಡಿ]ಯಲ್ಲಿ ಆಗುತ್ತದೋ ;

ತತ್ರ ಕೃತಸ್ನಾನಾಃ ಪರಮಯೋಗಿನೋ ದಿವಂ ಪರಮೇಶ್ವರಂ ಪ್ರಕಾಶಮಯಂ ಮೋಕ್ಷಾಖ್ಯಂ ಸತ್ಯ-ವಿಜ್ಞಾನಂ ಚೋತ್ಪತಂತಿ ಸಮ್ಯಗ್‌ಗಚ್ಛಂತಿ ಪ್ರಾಪ್ನುವಂತಿ.

ಅಲ್ಲಿ 'ಸ್ನಾನ' ಮಾಡಿದ ಶ್ರೇಷ್ಠಯೋಗಿಗಳು **(ದಿವಮ್)** ಪರಮೇಶ್ವರನನ್ನೂ, ಹಾಗೂ **'ಮೋಕ್ಷ'**, ಎಂಬ ಹೆಸರಿನ ಸತ್ಯವಿಜ್ಞಾನವನ್ನೂ ಕೂಡ, **(ಉತ್ಪತಂತಿ)** ಪ್ರಾಪ್ತ ಮಾಡಿಕೊಳ್ಳುತ್ತಾರೆ.

ಅಂದರೆ, **'ಸಿತ'**, ಎಂಬ **'ಇಡಾ'**, ಮತ್ತು **'ಅಸಿತ'**, ಎಂಬ **'ಪಿಂಗಳಾ'**_ ಈ ಎರಡು [ನಾಡಿಗಳೂ] ಎಲ್ಲಿ ಸೇರಿವೆಯೋ, ಅದಕ್ಕೆ **'ಸುಷುಮ್ನಾ'**, ಎನ್ನುತ್ತಾರೆ. ಅದರಲ್ಲಿ ಯೋಗಾಭ್ಯಾಸರೂಪ ಸ್ನಾನ ಮಾಡುವುದರಿಂದ, ಜೀವಾತ್ಮರು ಶುದ್ಧರಾಗಿ ಬಿಡುತ್ತಾರೆ. ಮತ್ತು ಶುದ್ಧರೂಪನಾದ ಪರಮೇಶ್ವರನನ್ನು ಪಡೆದುಕೊಂಡು ಯಾವಾಗಲೂ ಆನಂದದಲ್ಲಿರುತ್ತಾರೆ!

ಅತೋಽನಯೋರೇವಾತ್ರ ಗ್ರಹಣಂ ; ನ ಚ ತಯೋಃ .

ಆದುದರಿಂದ, ಇಲ್ಲಿ **ಈ ಎರಡೇ*** ಅಂಗೀಕರಿಸಲ್ಪಡಬೇಕು; **ಆ ಎರಡಲ್ಲ!** **

ಅತ್ರ ಪ್ರಮಾಣಮ್_

ಈ ವಿಷಯದಲ್ಲಿ ಪ್ರಮಾಣವೇನೆಂದರೆ_

ಅಂದರೆ, ಇಲ್ಲಿ **ನಿರುಕ್ತಕಾರರ** ಪ್ರಮಾಣವೂ ಕೂಡ, ಏನಿದೆಯೆಂದರೆ_

"ಸಿತಮಿತಿ ವರ್ಣನಾಮ ; ತತ್ಪ್ರತಿಷೇಧೋಽಸಿತಮ್ ॥"

[ನಿರುಕ್ತೇ ಅ. ೯, ಖಂ. ೨೬]

[ಅರ್ಥ:_ " 'ಸಿತ', ಎಂಬುದು ಬಣ್ಣದ ಹೆಸರು ; ಅದಕ್ಕೆ ವಿರುದ್ಧವಾದುದು **'ಅಸಿತ'**."

(ನಿರುಕ್ತ: ೯. ೨೬)]

* ಎಂದರೆ, ಇಡಾ-ಪಿಂಗಳಾ ನಾಡಿಗಳು _ಅನು.

** ಎಂದರೆ, **ಗಂಗಾ-ಯಮುನಾ** ನದಿಗಳು _ಅನು.

ಭಾಷ್ಯಮ್_

ಸಿತಂ ಶುಕ್ಲವರ್ಣಮಸಿತಂ ತಸ್ಯ ನಿಷೇಧಃ.

ತಯೋಃ ಪ್ರಕಾಶಾಂಧಕಾರಯೋಃ ಸೂರ್ಯ್ಯಾದಿ-ಪೃಥಿವ್ಯಾದಿಪದಾರ್ಥಯೋರ್ಯತ್ರೇಶ್ವರಸಾಮರ್ಥ್ಯೇ ಸಮಾಗಮೋಽಸ್ತಿ;

ತತ್ರ ಕೃತಸ್ನಾನಾಸ್ತದ್ವಿಜ್ಞಾನವಂತೋ ದಿವಂ ಪೂರ್ವೋಕ್ತಂ ಗಚ್ಛಂತ್ಯೇವ.

ಭಾಷ್ಯ_

'ಸಿತ', ಎಂದರೆ ಬಿಳಿಯ ಬಣ್ಣ! ಮತ್ತು 'ಅಸಿತ', ಎಂದರೆ, ಅದಕ್ಕೆ ವಿರುದ್ಧವಾದುದು.

ಅಂದರೆ, **'ಸಿತ'** ಮತ್ತು **'ಅಸಿತ'**, ಎಂಬ ಶಬ್ದಗಳು [ಕ್ರಮವಾಗಿ] ಬಿಳಿಯ, ಹಾಗೂ ಕಪ್ಪು, ಎಂಬ ಅರ್ಥವನ್ನು ಹೇಳುತ್ತವೆ.

ಆ ಪ್ರಕಾಶ, ಹಾಗೂ ಅಂಧಕಾರಗಳ, ಎಂದರೆ ಸೂರ್ಯ ಮೊದಲಾದುವುಗಳ, ಹಾಗೂ ಪೃಥಿವೀ ಮೊದಲಾದುವುಗಳ, ಸಮಾಗಮವು ಈಶ್ವರನ ಸಾಮರ್ಥ್ಯದಲ್ಲಿ ಎಲ್ಲಿ ಆಗಿದೆಯೋ;

ಅಲ್ಲಿ 'ಸ್ನಾನ' ಮಾಡಿದವರು, ಎಂದರೆ ವಿಜ್ಞಾನವನ್ನು ಪಡೆದವರು ಮೊದಲು ಹೇಳಿದ **'ಪ್ರಕಾಶಲೋಕ'**ವನ್ನು ಸೇರಿಯೇ ಬಿಡುತ್ತಾರೆ!

[ಆದರೆ,] ಜನರು ಈ ಅಭಿಪ್ರಾಯಕ್ಕೆ ವಿರುದ್ಧವಾದ ಮಿಥ್ಯಾ ಅರ್ಥವನ್ನು ಮಾಡಿ, ನದೀ ಮೊದಲಾದುವನ್ನು **'ತೀರ್ಥ'**, ಎಂಬ ಹೆಸರಿನಿಂದ ಅಂಗೀಕರಿಸಿದ್ದಾರೆ!

[೭] ಮೂರ್ತಿಪೂಜೆ-ನಾಮಸ್ಮರಣೆಗಳ ಮಿಥ್ಯಾತ್ವ!

ತಥೈವ ಯತ್ ತಂತ್ರಪುರಾಣಾದಿಗ್ರಂಥೇಷು ಮೂರ್ತಿಪೂಜಾನಾಮಸ್ಮರಣಾದಿವಿಧಾನಂ ಕೃತಮಸ್ತಿ, ತದಪಿ ಮಿಥ್ಯೈವಾಸ್ತೀತಿ ವೇದ್ಯಮ್.

ಹಾಗೆಯೇ, **ತಂತ್ರಗಳು**, **ಪುರಾಣಗಳು** ಮೊದಲಾದ ಗ್ರಂಥಗಳಲ್ಲಿ **ಮೂರ್ತಿಪೂಜೆ**, **ನಾಮಸ್ಮರಣೆ** ಮೊದಲಾದುವುಗಳ ಯಾವ ವಿಧಾನವು ಮಾಡಲಾಗಿದೆಯೋ, ಅದೂ, ಕೂಡ, ಮಿಥ್ಯೆಯೇ ಆಗಿದೆ, ಎಂದು ತಿಳಿಯಬೇಕು!

ಅಂದರೆ, ಇದರ ನಂತರ, ಯಾವ ನವೀನವೂ, ಕಲ್ಪಿತವೂ ಆದ ತಂತ್ರ ಮತ್ತು ಪುರಾಣಗ್ರಂಥಗಳಿವೆಯೋ, ಅವುಗಳಲ್ಲಿ ಮೂರ್ತಿಪೂಜೆ, ಹಾಗೂ ನಾನಾ ರೀತಿಯ ನಾಮಸ್ಮರಣೆ, ಎಂದರೆ_ **'ರಾಮ-ರಾಮ'**; **'ಕೃಷ್ಣ-ಕೃಷ್ಣ'**; **ಮರ** ಮೊದಲಾದುದರ **ಮಾಲೆ**; **ತಿಲಕ** ಮೊದಲಾದುವುಗಳ ವಿಧಾನ ಮಾಡಿ, ಅವುಗಳನ್ನು ಅತ್ಯಂತ

ಪ್ರೀತಿಯೊಡನೆ ಮುಕ್ತಿಯನ್ನು ಪಡೆಯುವ ಸಾಧನಗಳನ್ನಾಗಿ ಅಂಗೀಕರಿಸಿಬಿಟ್ಟಿದ್ದಾರೋ, ಈ ಎಲ್ಲಾ ಮಾತುಗಳೂ ಕೂಡ, ಸುಳ್ಳೇ ಆಗಿವೆ, ಎಂದು ತಿಳಿಯಬೇಕು!

ಕುತಃ?

ಏಕೆಂದರೆ_

ವೇದಾದಿಷು ಸತ್ಯೇಷು ಗ್ರಂಥೇಷು ತಸ್ಯ ವಿಧಾನಾಭಾವಾತ್ ;

ವೇದಗಳೇ ಮೊದಲಾದ ಸತ್ಯಗ್ರಂಥಗಳಲ್ಲಿ ಅದರ ವಿಧಾನವಿಲ್ಲ!

ತತ್ರ ತು ಪ್ರತ್ಯುತ ನಿಷೇಧೋ ವರೀವರ್ತತೇ.*

ಅಲ್ಲಂತೂ, ಬದಲಾಗಿ, ಮತ್ತೆ, ಮತ್ತೆ ನಿಷೇಧವೇ ವರ್ತಮಾನವಾಗಿದೆ!

ಅಂದರೆ, ವೇದಾದಿ ಸತ್ಯಗ್ರಂಥಗಳಲ್ಲಿ ಈ ಮಾತುಗಳ ಚಿಹ್ನೆ ಕೂಡ, ಸಿಗುವುದಿಲ್ಲ; ಬದಲಾಗಿ ನಿಷೇಧವನ್ನೇ ಮಾಡಲಾಗಿದೆ!

ತದ್ಯಥಾ_

ಅದು ಹೇಗೆಂದರೆ_

ಯಜುರ್ವೇದದಲ್ಲಿ ಪರಮಾತ್ಮನ ಪ್ರತಿಮೆಯ ಸರ್ವಥಾ ನಿಷೇಧ!

[ಋಷಿಃ_ ಸ್ವಯಂಭು ಬ್ರಹ್ಮ; ದೇವತಾ_ ಹಿರಣ್ಯಗರ್ಭಃ ಪರಮಾತ್ಮಾ; ಛಂದಃ_ ನಿಚೃತ್‌ಪಂಕ್ತಿಃ ; ಸ್ವರಃ_ ಪಂಚಮಃ]

ನ ತಸ್ಯ ಪ್ರತಿಮಾಽ ಅಸ್ತಿ ಯಸ್ಯ ನಾಮ ಮಹದ್ಯಶಃ ।
ಹಿರಣ್ಯಗರ್ಭಽ[1] ಇತ್ಯೇಷ ಮಾ ಮಾ ಹಿಗ್ಂಸೀದಿ[2]ತ್ಯೇಷಾ
ಯಸ್ಮಾನ್ನ ಜಾತಽ[3] ಇತ್ಯೇಷಃ ॥೧॥

[ಯಜುರ್ವೇದೇ ಅ. ೩೨, ಮಂ. ೩]

[ಅರ್ಥ:_ " ಯಾವನ ದೊಡ್ಡ ಯಶಸ್ಸು ಪ್ರಸಿದ್ಧವಾಗಿದೆಯೋ, ಅವನ ಪ್ರತಿಮೆ ಇಲ್ಲ ! 'ಇವನು 'ಹಿರಣ್ಯಗರ್ಭ' ಆಗಿದ್ದಾನೆ!' ; 'ನನ್ನನ್ನು [ಅವನು] ಪೀಡಿಸದಿರಲಿ!' ; ಎಂದು ಈ [ಪ್ರಾರ್ಥನೆ] ಇದೆ. 'ಇವನು ಯಾವುದರಿಂದಲೂ ಉತ್ಪನ್ನನಾಗಿಲ್ಲ!' "

(ಯಜುರ್ವೇದಃ ೩೨. ೩)]

* 'ವರೀವರ್ತಿ' ಇತಿ ಶುದ್ಧಃ ಪಾಠೋಽತ್ರ ದೃಷ್ಟವ್ಯಃ _ಯು. ಮೀ.

1, 2, 3 ಏತಾನಿ ಕ್ರಮಶೋ ಯಜುರ್ವೇದಸ್ಯ ೨೫. ೧೦, ೧೨. ೧೦೨, ೮. ೩೬ ತಮಾನಾಂ ಮಂತ್ರಾಣಾಂ ಪ್ರತೀಕಾನಿ ಸಂತಿ _ಅನು.

ಭಾಷ್ಯಮ್_

(ಯಸ್ಯ) ಪೂರ್ಣಸ್ಯ ಪುರುಷಸ್ಯಾಜಸ್ಯ ನಿರಾಕಾರಸ್ಯ ಪರಮೇಶ್ವರಸ್ಯ ;

ಭಾಷ್ಯ_

(ಯಸ್ಯ) ಪೂರ್ಣನೂ, ಪುರುಷನೂ, ಅಜನೂ, ನಿರಾಕರನೂ ಆದ ಪರಮೇಶ್ವರನ ;

ಅಂದರೆ, **'ಪೂರ್ಣ'**, ಎಂದರೆ ಯಾವನು ಯಾವ ರೀತಿಯಲ್ಲೂ ಕಡಿಮೆಯಾದವನಲ್ಲವೋ ; **'ಅಜ'**, ಎಂದರೆ ಯಾವನು ಜನ್ಮವನ್ನು ಎತ್ತುವುದಿಲ್ಲವೋ ; ಮತ್ತು **'ನಿರಾಕಾರ'**, ಎಂದರೆ ಯಾವನಿಗೆ ಯಾವ ಪ್ರಕಾರದ ಮೂರ್ತಿಯೂ ಇಲ್ಲವೋ ; ಈ ಮೊದಲಾದ ಲಕ್ಷಣಗಳನ್ನುಳ್ಳ ಯಾವ ಪರಮೇಶ್ವರನಿದ್ದಾನೋ ;

(ನಾಮ ಮಹದ್ಯಶಃ) ಯಸ್ಯಾಜ್ಞಾಪಾಲನಾಖ್ಯಂ ಮಹಾಕೀರ್ತ್ತಿಕರಂ ಧರ್ಮ್ಯಂ ಸತ್ಯಭಾಷಣಾದಿಕರ್ತ್ತುಮರ್ಹಂ ಕರ್ಮಾಚರಣಂ ನಾಮಸ್ಮರಣಮಸ್ತಿ ;

(ನಾಮ ಮಹದ್ಯಶಃ) ಯಾವನ ಆಜ್ಞೆಯ ಪಾಲನೆ, ಎಂಬ ಹೆಸರಿನ ಮಹಾಕೀರ್ತಿಕರವೂ, ಧರ್ಮಯುಕ್ತವೂ, ಸತ್ಯಭಾಷಣ ಮೊದಲಾದುವನ್ನು ಮಾಡಲು ಯೋಗ್ಯವೂ ಆದ ಕರ್ಮದ ಆಚರಣೆಯ ರೂಪದ ನಾಮಸ್ಮರಣೆ ಇದೆಯೋ ;

ಅಂದರೆ, ಯಾವನ ಆಜ್ಞೆಯನ್ನು ಸರಿ ಸರಿಯಾಗಿ ಪಾಲಿಸುವುದು, ಮತ್ತು ಉತ್ತಮ ಕೀರ್ತಿಗಳಿಗೆ ಕಾರಣವಾದ ಸತ್ಯಭಾಷಣ ಮೊದಲಾದ ಯಾವ ಕರ್ಮಗಳಿವೆಯೋ, ಅವುಗಳನ್ನು ಮಾಡುವುದೇ ಯಾವನ **'ನಾಮಸ್ಮರಣೆ'**, ಎಂದು ಹೇಳಲಾಗುತ್ತದೋ ;

(ಹಿರಣ್ಯಗರ್ಭಃ) ಯೋ ಹಿರಣ್ಯಾನಾಂ ಸೂರ್ಯ್ಯಾದೀನಾಂ ತೇಜಸ್ವಿನಾಂ ಗರ್ಭ ಉತ್ಪತ್ತಿಸ್ಥಾನಮ್ ;

(ಹಿರಣ್ಯಗರ್ಭಃ) ಯಾವನು 'ಹಿರಣ್ಯ', ಎಂದರೆ ಸೂರ್ಯ ಮೊದಲಾದ ತೇಜಸ್ವಿ[ಪದಾರ್ಥ]ಗಳಿಗೆ **'ಗರ್ಭ'**, ಎಂದರೆ ಉತ್ಪತ್ತಿಸ್ಥಾನನಾಗಿದ್ದಾನೋ;

ಅಂದರೆ, ಯಾವ ಪರಮೇಶ್ವರನು ತೇಜೋಯುಕ್ತ ಸೂರ್ಯಾದಿ ಲೋಕಗಳ ಉತ್ಪತ್ತಿಯ ಕಾರಣನಾಗಿ ಇದ್ದಾನೋ ;

(ಮಾ ಮಾ.) ಯಸ್ಯ ಸರ್ವೈರ್ಮನುಷ್ಯೈರ್ಮಾ ಮಾ ಹಿಗ್ಂಸೀದಿತ್ಯೇಷಾ ಪ್ರಾರ್ಥನಾ ಕಾರ್ಯಾ ;

(ಮಾ ಮಾ ಹಿಗ್ಂಸೀತ್) ಯಾವನ ಬಳಿ ಮನುಷ್ಯರೆಲ್ಲರಿಂದಲೂ_ 'ನನ್ನನ್ನು ಹಿಂಸಿಸದಿರಲಿ', ಎಂಬ ಈ ಪ್ರಾರ್ಥನೆಯು ಮಾಡಲ್ಪಡಬೇಕಾಗಿರುತ್ತದೋ ;

ಅಂದರೆ, ' ಹೇ ಪರಮಾತ್ಮನ್! ನಮ್ಮನ್ನು ಎಲ್ಲಾ ರೀತಿಯಿಂದಲೂ ರಕ್ಷಿಸಿ', ಎಂಬ ಪ್ರಾರ್ಥನೆಯನ್ನು ಯಾವನ ಬಳಿ ಮಾಡಬೇಕಾಗಿರುತ್ತದೋ ;

[ಈಗ] ಯಾವನಾದರೂ_ 'ಈ ನಿರಾಕಾರನೂ, ಸರ್ವವ್ಯಾಪಕನೂ ಆದ ಪರಮೇಶ್ವರನ ಉಪಾಸನೆಯನ್ನು ಏಕೆ ಮಾಡಬೇಕು?,' ಎಂದು ಕೇಳಿದರೆ, ಅದಕ್ಕೆ ಉತ್ತರವೇನೆಂದರೆ_

(ಯಸ್ಮಾನ್ನ.) ಯೋ ಯತಃ ಕಾರಣಾನ್ನೈವೈಷಃ ಕಸ್ಯಚಿತ್ ಸಕಾಶಾತ್ ಕದಾಚಿದುತ್ಪನ್ನೋ, ನೈವ ಕದಾಚಿಚ್ಛರೀರಧಾರಣಂ ಕರೋತಿ ;

(ಯಸ್ಮಾತ್) ಯಾವನು ಯಾವ ಕಾರಣ ದಿಂದಲೂ, ಎಂದರೆ, ಯಾವುದರ ಬಳಿಯಿಂದಲೂ, ಎಂದಿಗೂ **(ನ ಜಾತಃ)** ಉತ್ಪನ್ನನಾಗಲೇ ಇಲ್ಲವೋ, ಮತ್ತು ಎಂದಿಗೂ ಶರೀರಧಾರಣವನ್ನು ಮಾಡಿ ಕೊಳ್ಳುವುದೇ ಇಲ್ಲವೋ ;

ಅಂದರೆ, ಯಾವ ಪರಮೇಶ್ವರನು ಯಾವ ತಾಯಿ-ತಂದೆಯ ಸಂಯೋಗದಿಂದಲೂ ಎಂದಿಗೂ ಉತ್ಪನ್ನನಾಗಲಿಲ್ಲವೋ, ಆಗುತ್ತಲೂ ಇಲ್ಲವೋ, ಹಾಗೂ ಆಗುವುದೂ ಇಲ್ಲವೋ ; ಮತ್ತು ಅವನು ಎಂದಿಗೂ ಶರೀರವನ್ನು ಧಾರಣಮಾಡಿಕೊಂಡು, ಬಾಲಕನೂ, ಯುವಕನೂ, ಹಾಗೂ ವೃದ್ಧನೂ ಆಗುವುದಿಲ್ಲವೋ ;

(ನ ತಸ್ಯ.) ನೈವ ತಸ್ಯ ಪ್ರತಿಮಾಽರ್ಥಾತ್ ಪ್ರತಿನಿಧಿಃ, ಪ್ರತಿಕೃತಿಃ, ಪ್ರತಿಮಾನಂ, ತೋಲನಸಾಧನಂ ಪರಿಮಾಣಂ, ಮೂರ್ತ್ಯಾದಿಕಲ್ಪನಂ ಕಿಂಚಿದಪ್ಯಸ್ತಿ!

(ನ ತಸ್ಯ) ಅವನ (ಪ್ರತಿಮಾ) ಪ್ರತಿನಿಧಿ, ಪ್ರತಿಕೃತಿ, ಪ್ರತಿಮಾನ, ತುಲನೆ ಮಾಡುವ ಸಾಧನ, ಅಳತೆ, ಮೂರ್ತಿ ಮೊದಲಾದ ಕಲ್ಪನೆ [ನ ಅಸ್ತಿ] ಏನೇನೂ ಇಲ್ಲವೇ ಇಲ್ಲ!

ಅಂದರೆ, ಆ ಪರಮೇಶ್ವರನ **'ಪ್ರತಿಮೆ'**, ಎಂದರೆ ಅಳೆಯುವ ಸಾಧನ, ಮತ್ತು ಪ್ರತಿಬಿಂಬ ; ಅಥವಾ ಸದೃಶತ್ವ, ಎಂದರೆ ಯಾವುದಕ್ಕೆ **'ಚಿತ್ರ'**, ಎನ್ನುತ್ತಾರೋ, ಹಾಗೆ [ಯಾವುದೂ] ಯಾವ ರೀತಿಯದೂ ಇರುವುದಿಲ್ಲ!

ಪರಮೇಶ್ವರಸ್ಯಾನುಪಮೇಯತ್ವಾದ್, ಅಮೂರ್ತತ್ವಾದ್, ಅಪರಿಮೇಯತ್ವಾನ್ನಿರಾಕಾರತ್ವಾತ್, ಸರ್ವತ್ರಾಭಿವ್ಯಾಪ್ತತ್ವಾಚ್ಚ ॥ ೧ ॥

ಏಕೆಂದರೆ, ಪರಮೇಶ್ವರನು ಉಪಮೇಯ ರಹಿತನೂ,* ಅಮೂರ್ತನೂ, ಅಪರಿಮೇಯನೂ**, ನಿರಾಕಾರನೂ, ಹಾಗೂ ಸರ್ವತ್ರವ್ಯಾಪಕನೂ ಆಗಿದ್ದಾನೆ.

ಅಂದರೆ, ಅವನು ಮೂರ್ತಿರಹಿತನೂ, **'ಅನಂತ'**, ಎಂದರೆ ಸೀಮಾರಹಿತನೂ, ನಿರಾಕಾರನೂ, ಮತ್ತು ಎಲ್ಲದರಲ್ಲೂ ವ್ಯಾಪಕನೂ ಆಗಿದ್ದಾನೆ.

---

* 'ಪರಮೇಶ್ವರನ ಹಾಗೆ ಇಂತಹದು ಇದೆ', ಎಂಬ ವ್ಯವಹಾರವು ಸಿದ್ಧವಾಗದು, ಎಂದರ್ಥ _**ಅನು.**

** ಅಳತೆಗೆ ಮೀರಿದವನು, ಎಂದರ್ಥ _**ಅನು.**

ಆದುದರಿಂದ, ನಿರಾಕಾರ[ಪರಮೇಶ್ವರ]ನ ಉಪಾಸನೆಯನ್ನೇ ಮನುಷ್ಯರೆಲ್ಲರೂ ಮಾಡಬೇಕು! [೧]

ಯಾವನೋ ಒಂದುವೇಳೆ_ 'ಶರೀರಧಾರಿಯಾದವನ ಉಪಾಸನೆಯನ್ನು ಮಾಡುವುದರಲ್ಲಿ ದೋಷವೇನಿದೆ?', ಎಂದು ಶಂಕೆ ಮಾಡಿದಾಗ, ತಿಳಿಯಬೇಕಾದ ಮಾತೇನೆಂದರೆ_

"ಯಾವನು ಮೊದಲು ಜನ್ಮವನ್ನೆತ್ತಿ, ಶರೀರ ಧಾರಣ ಮಾಡುವನೋ, ಮತ್ತು ನಂತರ, ಅವನು ವೃದ್ಧನಾಗಿ ಸತ್ತು ಹೋಗುವನೋ, ಆಗ, ಯಾವನ ಪೂಜೆಯನ್ನು ಮಾಡುವಿರಿ?"

ಇತ್ಯನೇನ ಪ್ರಮಾಣೇನ ಮೂರ್ತಿಪೂಜನ-ನಿಷೇಧಃ .

ಹೀಗೆ, ಈ ಪ್ರಮಾಣದಿಂದ ಮೂರ್ತಿಪೂಜೆಯು ನಿಷೇಧಿಸಲ್ಪಟ್ಟಿದೆ!

ಅಂದರೆ, ಈ ಪ್ರಕಾರವಾಗಿ, ಮೂರ್ತಿಪೂಜೆಯ ನಿಷೇಧವು ವೇದದಿಂದ ಸಿದ್ಧವಾಗಿ ಹೋಯಿತು!

ಸರ್ವವ್ಯಾಪಕನಿಗೆ ಯೋಗ್ಯವಾದ ಲಕ್ಷಣಗಳು

[ಋಷಿಃ_ ದೀರ್ಘತಮಾಃ; ದೇವತಾ_ ಆತ್ಮಾ; ಛಂದಃ_ ಸ್ವರಾಡ್ ಜಗತೀ; ಸ್ವರಃ_ ನಿಷಾದಃ]

ಸ ಪರ್ಯ್ಯಗಾಚ್ಛುಕ್ರಮಕಾಯಮವ್ರಣಮಸ್ನಾವಿರಗ್ಂ
ಶುದ್ಧಮಪಾಪವಿದ್ಧಮ್ । ಕವಿರ್ಮನೀಷೀ ಪರಿಭೂಃ
ಸ್ವಯಂಭೂರ್ಯಾಥಾತಥ್ಯತೋಽರ್ಥಾನ್ ವ್ಯದಧಾಚ್ಛಾ-
ಶ್ವತೀಭ್ಯಃ ಸಮಾಭ್ಯಃ ॥ ೨ ॥ *

[ಯಜುರ್ವೇದೇ ಅ. ೪೦, ಮಂ. ೮]

[ಅರ್ಥ:_ "ಅವನು ಸರ್ವವ್ಯಾಪಕನಾಗಿದ್ದಾನೆ. ಪರಾಕ್ರಮಿಯೂ, ಶರೀರರಹಿತನೂ, ವ್ರಣರಹಿತನೂ, ನಾಡೀಬಂಧನರಹಿತನೂ, ಶುದ್ಧನೂ, ಪಾಪದಿಂದ ದೂರ ಇರುವವನೂ, ಕವಿಯೂ, ಮನೀಷಿಯೂ, ಸರ್ವೋಪರಿ ವಿರಾಜಮಾನನೂ, ಆದ [ಅವನು] ನಿತ್ಯರಾದ ಪ್ರಜೆಗಳಿಗೆ ಯಥಾರ್ಥರೂಪದಲ್ಲಿ ಎಲ್ಲಾ ಪದಾರ್ಥಗಳನ್ನೂ ವಿಧಿಸಿದ್ದಾನೆ."

(ಯಜುರ್ವೇದಃ ೪೦. ೮)]

* ಅಸ್ಯ ಮಂತ್ರಸ್ಯೋಲ್ಲೇಖಃ ಪೂರ್ವಮೇವ ೮೩, ೧೮೫, ೫೨೭ ತಮೇ ಚ ಪೃಷ್ಠೇ ಕೃತಃ _ಅನು.

* ಈ ಮಂತ್ರದ ಉಲ್ಲೇಖವು ಈ ಮೊದಲೇ ೮೩, ೧೮೫, ಮತ್ತು ೫೨೭ ನೆಯ ಪುಟಗಳಲ್ಲಿ ಮಾಡಲ್ಪಟ್ಟಿದೆ. _ಅನು.

ಭಾಷ್ಯಮ್_	ಭಾಷ್ಯ_
ಯಃ (ಕವಿಃ) ಸರ್ವಜ್ಞಃ ;	ಯಾವನು (ಕವಿಃ) ಸರ್ವಜ್ಞನೂ ;
	ಅಂದರೆ, ಎಲ್ಲವನ್ನೂ ತಿಳಿದವನೂ ;
(ಮನೀಷೀ) ಸರ್ವಸಾಕ್ಷೀ ;	(ಮನೀಷೀ) ಸರ್ವಸಾಕ್ಷಿಯೂ ;
	ಅಂದರೆ, ಎಲ್ಲರ ಮನಸ್ಸಿನ ಸಾಕ್ಷಿಯೂ ;
(ಪರಿಭೂಃ) ಸರ್ವೋಪರಿ ವಿರಾಜಮಾನಃ ;	(ಪರಿಭೂಃ) ಎಲ್ಲದರ ಮೇಲೆ ವಿರಾಜಮಾನನೂ ;
(ಸ್ವಯಂಭೂಃ) ಅನಾದಿಸ್ವರೂಪಃ ಪರಮೇಶ್ವರಃ ;	(ಸ್ವಯಂಭೂಃ) ಅನಾದಿಸ್ವರೂಪನೂ ಆದ ಪರಮೇಶ್ವರನಾಗಿದ್ದಾನೋ ; [ಮತ್ತು _]
(ಶಾಶ್ವತೀಭ್ಯಃ) ನಿತ್ಯಾಭ್ಯಃ ;	(ಶಾಶ್ವತೀಭ್ಯಃ) ನಿತ್ಯರಾದ ;
	ಅಂದರೆ, ಅನಾದಿಸ್ವರೂಪರಾದ ;
(ಸಮಾಭ್ಯಃ) ಪ್ರಜಾಭ್ಯೋ, ವೇದದ್ವಾರಾಽಂತ-ರ್ಯಾಮಿತಯಾ ಚ ;	(ಸಮಾಭ್ಯಃ) ಪ್ರಜೆಗಳಿಗೆ ವೇದಗಳ ಮೂಲಕ, ಹಾಗೂ ಅಂತರ್ಯಾಮಿರೂಪದಿಂದ ;
(ಯಾಥಾತಥ್ಯತೋಽರ್ಥಾನ್ ವ್ಯದಧಾತ್) ವಿಹಿತವಾನಸ್ತಿ ;	(ಯಾಥಾತಥ್ಯತಃ) ಯಥಾರ್ಥರೂಪದಲ್ಲಿ (ಅರ್ಥಾನ್) ಪದಾರ್ಥಗಳನ್ನು (ವ್ಯದಧಾತ್) ವಿಧಿಸಿದ್ದಾನೋ ;
	ಅಂದರೆ, ಎಲ್ಲಾ ವ್ಯವಹಾರಗಳ ಉಪದೇಶವನ್ನು ಮಾಡುತ್ತಾನೋ ;
(ಸ ಪರ್ಯ್ಯಗಾತ್) ಸರ್ವವ್ಯಾಪಕೋಽಸ್ತಿ.	(ಸ ಪರ್ಯ್ಯಗಾತ್) ಅವನು ಸರ್ವವ್ಯಾಪಕ ನಾಗಿದ್ದಾನೆ.
ಯತ್ (ಶುಕ್ರಮ್) ವೀರ್ಯವತ್ತಮಮ್;	ಯಾವನು (ಶುಕ್ರಮ್) ಅತ್ಯಂತ ಪರಾಕ್ರಮಿಯೂ ;
(ಅಕಾಯಮ್) ಮೂರ್ತಿಜನ್ಮಧಾರಣರಹಿತಮ್ ;	(ಅಕಾಯಮ್) ಮೂರ್ತಿಯಿಂದ, ಹಾಗೂ ಜನ್ಮ-ಧಾರಣದಿಂದ ರಹಿತನೂ ;
	ಅಂದರೆ, ಎಲ್ಲಾ ಪ್ರಕಾರದ ಶರೀರಗಳಿಂದ ರಹಿತನೂ ;
(ಅವ್ರಣಮ್) ಛೇದಭೇದರಹಿತಮ್ ;	(ಅವ್ರಣಮ್) ಛೇದನ-ಭೇದನಗಳಿಂದ ರಹಿತನೂ ;
	ಅಂದರೆ, ಕತ್ತರಿಸಲ್ಪಡುವಿಕೆಯಿಂದ, ಹಾಗೂ ಎಲ್ಲಾ ರೋಗಗಳಿಂದ ರಹಿತನೂ ;

(ಅಸ್ನಾವಿರಗ್ಂ) ನಾಡೀಬಂಧನಾದಿವಿರಹಮ್ ;

(ಅಸ್ನಾವಿರಗ್ಂ) ನಾಡೀಬಂಧನ ಮೊದಲಾದುವುಗಳಿಲ್ಲದವನೂ;

ಅಂದರೆ, ನಾಡೀ ಮೊದಲಾದ ಬಂಧನಗಳಿಂದ ಬೇರೆ ಇರುವವನೂ ;

(ಶುದ್ಧಮ್) ನಿರ್ದೋಷಮ್ ;

(ಶುದ್ಧಮ್) ದೋಷರಹಿತನೂ ;

ಅಂದರೆ, ಎಲ್ಲಾ ದೋಷಗಳಿಂದ ಬೇರೆ ಇರುವವನೂ ;

(ಅಪಾಪವಿದ್ಧಮ್) ಪಾಪಾತ್ ಪೃಥಗ್-ಭೂತಮ್;

(ಅಪಾಪವಿದ್ಧಮ್) ಪಾಪದಿಂದ ಬೇರೆ ಇರುವವನೂ ;

ಅಂದರೆ, ಎಲ್ಲಾ ಪಾಪಗಳಿಂದ ದೂರ ಇರುವವನೂ ;

ಯದೀದೃಶಲಕ್ಷಣಂ ಬ್ರಹ್ಮ [ತತ್] ಸರ್ವೈರುಪಾಸನೀಯಮಿತಿ ಮನ್ಯಧ್ವಮ್ ॥ ೨ ॥

ಇಂತಹ ಲಕ್ಷಣಗಳನ್ನುಳ್ಳ ಯಾವ ಬ್ರಹ್ಮನಿದ್ದಾನೋ, ಅವನು ಎಲ್ಲರಿಂದಲೂ ಉಪಾಸನೆ ಮಾಡಲು ಯೋಗ್ಯನಾಗಿದ್ದಾನೆ, ಎಂದು ತಿಳಿಯಿರಿ!

ಅಂದರೆ, ಈ ಮೊದಲಾದ ಲಕ್ಷಣಗಳಿಂದ ಕೂಡಿದ ಯಾವ ಪರಮಾತ್ಮನಿದ್ದಾನೋ, ಅವನೇ ಎಲ್ಲರಿಗೂ ಉಪಾಸನೆಗೆ ಯೋಗ್ಯನಾಗಿದ್ದಾನೆ! ಹೀಗೆಂದೇ ಎಲ್ಲರೂ ತಿಳಿಯಬೇಕು! [೨]

ಇತ್ಯನೇನಾಪಿ ಶರೀರಜನ್ಮಮರಣರಹಿತ ಈಶ್ವರಃ ಪ್ರತಿಪಾದ್ಯತೇ.

ಹೀಗೆ, ಇದರಿಂದಲೂ ಕೂಡ, ಶರೀರ-ಜನ್ಮ-ಮರಣರಹಿತನಾದ ಈಶ್ವರನು ಪ್ರತಿಪಾದಿಸಲ್ಪಡುತ್ತಾನೆ.

ಅಂದರೆ, ಈ ಮಂತ್ರದಿಂದಲೂ ಕೂಡ, ಶರೀರ-ಧಾರಣವನ್ನು ಮಾಡಿ, ಜನ್ಮ-ಮರಣ ಉಂಟಾಗುವುದು ಮೊದಲಾದ ಮಾತುಗಳ ನಿಷೇಧವು ಪರಮೇಶ್ವರನ ವಿಷಯದಲ್ಲಿ ಸಿಕ್ಕೇ ಬಿಟ್ಟಿದೆ!

ತಸ್ಮಾದಯಂ ನೈವ ಕೇನಾಪಿ ಮೂರ್ತಿಪೂಜನೇ ಯೋಜಯಿತುಂ ಶಕ್ಯ ಇತಿ.

ಆದುದರಿಂದ, ಇದು* ಯಾವನಿಂದಲೂ ಕೂಡ, ಮೂರ್ತಿಪೂಜೆಯ [ವಿಷಯದ]ಲ್ಲಿ ಜೋಡಿಸಲ್ಪಡುವುದು ಶಕ್ಯವೇ ಅಲ್ಲ!

ಅಂದರೆ, ಇದರಿಂದ, ಕಲ್ಲು ಮುಂತಾದುವುಗಳ ಇವನ ಮೂರ್ತಿಯನ್ನು ನಿರ್ಮಿಸಿ, ಪೂಜಿಸುವುದು ಯಾವ ಪ್ರಮಾಣ ಅಥವಾ ಯುಕ್ತಿಯಿಂದಲೂ ಸಿದ್ಧವಾಗಲಾರದು!

* ಎಂದರೆ, ಈ ಮಂತ್ರವು _ಅನು.

ವೇದಗಳಲ್ಲಿ 'ಪ್ರತಿಮಾ'ಶಬ್ದದ ಅರ್ಥ ಅಳತೆ, ಎಂದು!

ಪ್ರಶ್ನಃ_ ವೇದೇಷು ಪ್ರತಿಮಾಶಬ್ದೋಽಸ್ತಿ ನ ವಾ?

ಉತ್ತರಮ್_ ಅಸ್ತಿ.

ಪ್ರಶ್ನಃ_ ಪುನಃ ಕಿಮರ್ಥೋ ನಿಷೇಧಃ?

ಉತ್ತರಮ್_ ನೈವ ಪ್ರತಿಮಾರ್ಥೇನ ಮೂರ್ತ್ತಯೋ ಗೃಹ್ಯಂತೇ.

ಪ್ರಶ್ನಃ_ ಕಿಂ ತರ್ಹಿ?

ಉತ್ತರಮ್_ ಪರಿಮಾಣಾರ್ಥಾ ಗೃಹ್ಯಂತೇ.

ಅತ್ರ ಪ್ರಮಾಣಾನಿ_

ಪ್ರಶ್ನೆ_ ವೇದಗಳಲ್ಲಿ 'ಪ್ರತಿಮಾ', ಎಂಬ ಶಬ್ದವು ಇದೆಯೋ, ಅಥವಾ ಇಲ್ಲವೋ?

ಉತ್ತರ_ ಇದೆ!

ಪ್ರಶ್ನೆ_ ಮತ್ತೆ, ಏತಕ್ಕಾಗಿ ನಿಷೇಧವನ್ನು [ಮಾಡುತ್ತೀರಿ?]

ಉತ್ತರಮ್_ 'ಪ್ರತಿಮೆ', ಎಂಬ ಅರ್ಥದಿಂದ ಮೂರ್ತಿಗಳು ಅಂಗೀಕರಿಸಲ್ಪಡುವುದೇ ಇಲ್ಲ!

ಪ್ರಶ್ನೆ _ ಹಾಗಾದರೆ?

ಉತ್ತರ_ ಅಳತೆಯ ಅರ್ಥವನ್ನುಳ್ಳವುಗಳಾಗಿ ಅಂಗೀಕರಿಸಲ್ಪಡುತ್ತವೆ.

ಈ ವಿಷಯದಲ್ಲಿ ಪ್ರಮಾಣಗಳೇನೆಂದರೆ_

ಅಥರ್ವವೇದದಲ್ಲಿ ಸಂವತ್ಸರದ ಕಾಲವಿಭಾಗವು 'ಪ್ರತಿಮಾ!'

[ಋಷಿಃ_ ಅಥರ್ವಾ ; ದೇವತಾ_ಅಷ್ಟಕಾ ; ಛಂದಃ_ಅನುಷ್ಟುಪ್ ; ಸ್ವರಃ_ ಗಾಂಧಾರಃ]

ಸಂವತ್ಸರಸ್ಯ ಪ್ರತಿಮಾಂ ಯಾಂ ತ್ವಾ ರಾತ್ರ್ಯುಪಾಸ್ಮಹೇ ।
ಸಾ ನ ಆಯುಷ್ಮತೀಂ ಪ್ರಜಾಂ ರಾಯಸ್ಪೋಷೇಣ ಸಂ ಸೃಜ ॥ ೩ ॥

[ಅಥರ್ವವೇದೇ ಕಾಂ. ೩, ವ. ೧೦, ಮಂ. ೩]

[ಅರ್ಥ:_ "ಹೇ ರಾತ್ರಿ! ಸಂವತ್ಸರದ ಯಾವ ಪ್ರತಿಮಾನವನ್ನೂ, [ಹಾಗೂ] ನಿನ್ನನ್ನೂ ನಾವು ಉಪಾಸಿಸುತ್ತೇವೋ, ಅದು ಆಯುಷ್ಮಂತರಾದ ಪ್ರಜೆಗಳನ್ನು ಐಶ್ವರ್ಯ-ಪುಷ್ಟಿಯಿಂದ ಉತ್ಪನ್ನ ಮಾಡಲಿ!"

(ಅಥರ್ವವೇದ: ೩. ೧೦. ೩)]

ಭಾಷ್ಯಮ್_

(ಸಂವತ್ಸರಸ್ಯ) ವಿದ್ವಾಂಸಃ ಸಂವತ್ಸರಸ್ಯ ಯಾಂ ಪ್ರತಿಮಾಂ ಪರಿಮಾಣಮುಪಾಸತೇ, ವಯಮಪಿ ತ್ವಾ ತಾಮೇವೋಪಾಸ್ಮಹೇ.

ಭಾಷ್ಯ_

(ಸಂವತ್ಸರಸ್ಯ) ವಿದ್ವಾಂಸರು (ಸಂವತ್ಸರಸ್ಯ) ಸಂವತ್ಸರದ ಯಾವ (ಪ್ರತಿಮಾಮ್) ಪರಿಮಾಣವನ್ನು ಉಪಾಸಿಸುತ್ತಾರೋ, ನಾವೂ ಕೂಡ, (ತ್ವಾ) ಆ ನಿನ್ನನ್ನೇ ಉಪಾಸಿಸುವೆವು.

ಅಂದರೆ, ಸಂವತ್ಸರದ **'ಪ್ರತಿಮಾ'**, ಎಂದರೆ ಕ್ಷಣ ಮೊದಲಾದ ಕಾಲದ ವಿಭಾಗವನ್ನು ಮಾಡುವ ಯಾವ ರಾತ್ರಿಯ ಉಪಾಸನೆಯನ್ನು ವಿದ್ವಾಂಸರು ಮಾಡುತ್ತಾರೋ, ನಾವೂ ಕೂಡ, ಅದರ ಸೇವನೆಯನ್ನೇ ಮಾಡೋಣ!

ಅರ್ಥಾದ್ಯಾಃ ಸಂವತ್ಸರಸ್ಯ ತ್ರೀಣಿ ಶತಾನಿ ಷಷ್ಟಿಶ್ಚ ರಾತ್ರಯೋ ಭವಂತಿ ;

ಎಂದರೆ, ಸಂವತ್ಸರದ ಯಾವ ಮುನ್ನೂರ ಅರವತ್ತು* ರಾತ್ರಿಗಳಿವೆಯೋ ;

ಯತ ಏತಾಭಿರೇವ ಸಂವತ್ಸರಃ ಪರಿಮೀಯತೇ ;

ಅವುಗಳಿಂದಲೇ ಸಂವತ್ಸರದ ಅಳತೆಯು ಮಾಡಲಾಗುತ್ತದೆ ;

ತಸ್ಮಾದೇತಾಸಾಂ 'ಪ್ರತಿಮಾ' ಸಂಜ್ಞೇತಿ.

ಆದುದರಿಂದ, ಅವುಗಳಿಗೇ **'ಪ್ರತಿಮಾ'**, ಎಂಬ ಹೆಸರಿದೆ.

ಅಂದರೆ, ಒಂದು ವರ್ಷದಲ್ಲಿ ೩೬೦= ಮುನ್ನೂರ ಅರವತ್ತು ರಾತ್ರಿಗಳಿರುತ್ತವೆ. ಇಷ್ಟು ರಾತ್ರಿಗಳಿಂದ ಸಂವತ್ಸರದ [ಅವಧಿಯ] ಅಳತೆ ಮಾಡಲಾಗಿದೆ. ಆದುದರಿಂದ, ಈ ರಾತ್ರಿಗಳಿಗೂ ಕೂಡ, **'ಪ್ರತಿಮೆ'**, ಎಂಬ ಹೆಸರಿದೆ.

(ಸಾ ನ.) ಯಥಾ ಸೇಯಂ ರಾತ್ರಿರ್ನೋಽಸ್ಮಾಕಂ ರಾಯಸ್ಪೋಷೇಣ ಧನಪುಷ್ಟಿಭ್ಯಾಮಾಯುಷ್ಮತೀಂ ಪ್ರಜಾಂ (ಸಂಸೃಜ) ಸಮ್ಯಕ್ ಸೃಜೇತ್.

ಹೇಗೆ **(ಸಾ)** ಈ ರಾತ್ರಿಯು **(ನಃ)** ನಮಗಾಗಿ **(ರಾಯಸ್ಪೋಷೇಣ)** ಧನ, ಹಾಗೂ ಪುಷ್ಟಿಗಳಿಂದ **(ಆಯುಷ್ಮತೀಂ ಪ್ರಜಾಮ್)** ಆಯುಷ್ಮಂತರಾದ ಪ್ರಜೆಗಳನ್ನು **(ಸಂ ಸೃಜ)** ಉತ್ತಮವಾಗಿ ಉತ್ಪನ್ನ ಮಾಡುತ್ತದೋ ;

ತಥೈವ ಸರ್ವೈರ್ಮನುಷ್ಯೈರನುಷ್ಠೇಯಮಿತಿ ॥ ೩ ॥

ಹಾಗೆಯೇ, ಮನುಷ್ಯರೆಲ್ಲರಿಂದಲೂ ಆಚರಿಸಲ್ಪಡಬೇಕು!

ಅಂದರೆ, ಪರಮಾತ್ಮನ ಕೃಪೆಯಿಂದ, ನಾವುಗಳು ರಾತ್ರಿಗಳಲ್ಲಿ ಸತ್ಕರ್ಮಗಳ ಆಚರಣೆಯ ಮೂಲಕ ಸಂಪೂರ್ಣ ಆಯಸ್ಸಿನಿಂದ ಕೂಡಿದ ಸಂತಾನಗಳನ್ನು ಉತ್ಪನ್ನ ಮಾಡೋಣ! [೩]

* ವೇದಾದಿಶಾಸ್ತ್ರಗಳಲ್ಲಿ ವರ್ಷಕ್ಕೆ ೩೬೦ ದಿನಗಳ ಅಳತೆಯ ಉಲ್ಲೇಖವು ಸಾರ್ವಭೌಮಿಕ ನಿಯಮವಾಗಿದೆ. ಈಗ ನಮ್ಮ ಪೃಥಿವಿಗೆ ಸೂರ್ಯಪ್ರದಕ್ಷಿಣೆಗಾಗಿ ೩೬೫ ೧/೪ ದಿನಗಳು ಬೇಕಾಗುತ್ತಿವೆ _ಅನು.

ಶತಪಥಬ್ರಾಹ್ಮಣದಲ್ಲಿ ಮುಹೂರ್ತಗಳು 'ಪ್ರತಿಮಾ!'

ಇದೇ ಮಂತ್ರದ ಭಾವಾರ್ಥವು **ಶತಪಥ-ಬ್ರಾಹ್ಮಣದಲ್ಲಿ** ಸ್ವಲ್ಪ ಹೇಗಿದೆಯೆಂದರೆ_

"ಮುಹೂರ್ತ್ತಾನಾಂ ಪ್ರತಿಮಾ ತಾ ದಶ ಚ ಸಹಸ್ರಾಣ್ಯಷ್ಟೌ ಚ ಶತಾನಿ
ಭವಂತ್ಯೇತಾವಂತೋ ಹಿ ಸಂವತ್ಸರಸ್ಯ ಮುಹೂರ್ತ್ತಾಃ ॥ ೪ ॥"

[ಶತಪಥಬ್ರಾಹ್ಮಣೇ ಕಾಂ. ೧೦, ಅ. ೪, ಬ್ರಾ. ೩, ಕಂ. ೨೦]

[ಅರ್ಥ:_"ಮುಹೂರ್ತಗಳ ಪರಿಮಾಣ[ವೇನೆಂದರೆ,] ಅವು ಹತ್ತುಸಾವಿರದ ಎಂಟುನೂರು ಇರುತ್ತವೆ. ಇಷ್ಟೇನೇ ಸಂವತ್ಸರದ ಮುಹೂರ್ತಗಳೂ ಆಗಿರುತ್ತವೆ."

(ಶತಪಥಬ್ರಾಹ್ಮಣ: ೧೦. ೪. ೩. ೨೦)]

ಭಾಷ್ಯಮ್_

(ಮುಹೂರ್ತ್ತಾ.) ತಥಾ ಯೇ ಸಂವತ್ಸರಸ್ಯ ದಶಸಹಸ್ರಾಣ್ಯಷ್ಟೌ ಶತಾನಿ ಘಟಿಕಾದ್ವಯಾತ್ಮಕಾ ಮುಹೂರ್ತಾಃ ಸಂತಿ ;

ತೇಽಪಿ 'ಪ್ರತಿಮಾ'-ಶಬ್ದಾರ್ಥಾ ವಿಜ್ಞೇಯಾಃ ॥ ೪ ॥

ಭಾಷ್ಯ_

(ಮುಹೂರ್ತಾನಾಮ್.) ಮತ್ತು ಸಂವತ್ಸರದ ಯಾವ ಹತ್ತುಸಾವಿರದ ಎಂಟುನೂರು ಘಟಿಕಾ-ದ್ವಯಗಳಿಂದ* ಕೂಡಿದ ಮುಹೂರ್ತಗಳಿರುತ್ತವೋ ;

ಅವುಗಳೂ ಕೂಡ, 'ಪ್ರತಿಮಾ', ಎಂಬ ಶಬ್ದದ ಅರ್ಥವನ್ನುಳ್ಳವುಗಳಾಗಿವೆ, ಎಂದು ತಿಳಿಯಬೇಕು!

ಅಂದರೆ, ಒಂದು ವರ್ಷದಲ್ಲಿ ೧೦,೮೦೦ ಮುಹೂರ್ತಗಳಿರುತ್ತವೆ. ಇವುಗಳನ್ನೂ ಕೂಡ, 'ಪ್ರತಿಮಾ' ಶಬ್ದದ ಅರ್ಥದಲ್ಲಿ ತಿಳಿಯಬೇಕು! ಏಕೆಂದರೆ, ಇವುಗಳಿಂದಲೂ ಕೂಡ, ವರ್ಷದ ಅಳತೆ ಮಾಡಲಾಗುತ್ತದೆ. [೪]

ಕೇನೋಪನಿಷತ್ತಿನಲ್ಲಿ ನಿರಾಕಾರಬ್ರಹ್ಮನ ಜ್ಞಾನಕ್ಕಾಗಿ ಆದೇಶ!

"ಯದ್ವಾಚಾನಭ್ಯುದಿತಂ ಯೇನ ವಾಗಭ್ಯುದ್ಯತೇ ।
ತದೇವ ಬ್ರಹ್ಮ ತ್ವಂ ವಿದ್ಧಿ ನೇದಂ ಯದಿದಮುಪಾಸತೇ ॥ ೫ ॥"

[ಸಾಮವೇದೀಯ ತಲವಕಾರೋಪನಿಷದಿ ಖಂ. ೧, ಮಂ. ೪]

* ೧ ಘಟಿಕೆ = ೨೪ ನಿಮಿಷ.   ೨ ಘಟಿಕೆ = ೧ ಮುಹೂರ್ತ = ೨ X ೨೪ = ೪೮ ನಿಮಿಷ.

೧ ವರ್ಷ= ೪೮ X ೧೦, ೮೦೦ = ೫, ೧೮, ೪೦೦ ನಿಮಿಷ.

೧ ಘಂಟೆ= ೬೦ ನಿಮಿಷ;   ೨೪ ಘಂಟೆ = ೧ ದಿವಸ;   ೩೬೦ ದಿವಸ = ೧ ವರ್ಷ.

೧ ವರ್ಷ= ೬೦ X ೨೪ X ೩೬೦= ೫, ೧೮, ೪೦೦ ನಿಮಿಷ.

[ಅರ್ಥ:_ "ಯಾವುದು ವಾಣಿಯಿಂದ ಪ್ರಕಟವಾಗಲಿಲ್ಲವೋ, [ಆದರೆ,] ಯಾವುದರಿಂದ ವಾಣಿಯು ಪ್ರಕಟವಾಗಿದೆಯೋ, ಅದೇ ಬ್ರಹ್ಮ, ಎಂದು ನೀನು ತಿಳಿ! ಯಾವ ಇದನ್ನು* [ಜನರು] ಉಪಾಸಿಸುತ್ತಾರೋ, ಅದು ಇದಲ್ಲ! *"

(ಕೇನೋಪನಿಷತ್: ೧. ೪)]

ಇತ್ಯಾದಿಮಂತ್ರಪಂಚಕಂ** ಮೂರ್ತ್ಯಾದಿ-ನಿಷೇಧಕಮಿತಿ ಬೋಧ್ಯಮ್.

ಈ ಮೊದಲಾದ ಐದು ಮಂತ್ರಗಳು** ಮೂರ್ತಿ ಮೊದಲಾದುವುವನ್ನು ನಿಷೇಧಿಸುವುವು ಆಗಿವೆ, ಎಂದು ತಿಳಿಯಬೇಕು!

ಭಾಷ್ಯಮ್_

ಭಾಷ್ಯ_

(ಯದ್ವಾಚಾ.) ಯದಸಂಸ್ಕೃತವಾಣ್ಯಾ ಅವಿಷಯಂ, ಯೇನ ವಾಣೀ ವಿದಿತಾऽಸ್ತಿ,

(ಯದ್ವಾಚಾ.) ಯಾವುದು ಅಸಂಸ್ಕೃತವಾಣಿಗೆ ಅವಿಷಯವಾಗಿದೆಯೋ, [ಆದರೆ,] ಯಾವುದರಿಂದ ವಾಣಿಯು ಪ್ರಕಟಿತವಾಗಿದೆಯೋ ;

(ತದೇವ) ತದ್ ಬ್ರಹ್ಮ, ಹೇ ಮನುಷ್ಯ! ತ್ವಂ ವಿದ್ಧಿ.

(ತದೇವ) ಅದನ್ನೇ (ಬ್ರಹ್ಮ) ಬ್ರಹ್ಮ, ಎಂದು, ಎಲೈ ಮನುಷ್ಯನೇ! (ತ್ವಂ ವಿದ್ಧಿ) ನೀನು ತಿಳಿದುಕೋ!

ಅಂದರೆ, ಎಲೈ ಮನುಷ್ಯರೇ! ಯಾವುದು ಅವಿದ್ಯಾಯುಕ್ತವಾಣಿಯಿಂದ ಪ್ರಕಟಿಸಲ್ಪಡಲಾಗದೋ, [ಆದರೆ,] ಯಾವುದು ಎಲ್ಲರ ವಾಣಿಗಳನ್ನೂ ತಿಳಿದಿದೆಯೋ, ಅದನ್ನೇ **'ಪರಮೇಶ್ವರ'**, ಎಂದು ನೀವು ತಿಳಿಯಿರಿ!

ಯದ್ ಇದಂ ಪ್ರತ್ಯಕ್ಷಂ ಜಗದಸ್ತಿ, ನೈವೈತದ್ ಬ್ರಹ್ಮಾಸ್ತಿ.

ಯಾವ (ಇದಮ್) 'ಇದು', ಎಂದರೆ, ಪ್ರತ್ಯಕ್ಷವಾದ ಜಗತ್ತಿದೆಯೋ, ಇದು ಬ್ರಹ್ಮವೇ ಅಲ್ಲ!

ಅಂದರೆ, ಪರಮೇಶ್ವರನಿಂದ ರಚಿತವಾದ ಜಗತ್ತಿನ ಮೂರ್ತಿಮಂತ ಪದಾರ್ಥಗಳು [ಬ್ರಹ್ಮ] ಅಲ್ಲ!

** ಅರ್ಥಾದ್_ 'ಯದ್ವಾಚಾ.'; 'ಯನ್ಮನಸಾ.'; 'ಯಚ್ಚಕ್ಷುಷಾ.' 'ಯಚ್ಛ್ರೋತ್ರೇಣ.'; 'ಯತ್ ಪ್ರಾಣೇನ.' ಇತಿ ಪರ್ಯಂತಮ್.

ನವೋಪನಿಷದಾಂ ಪ್ರಥಮಂ ಯೌಗಿಕಂ ಭಾಷ್ಯಂ ಪಂಡಿತ-ಸುಧಾಕರಚತುರ್ವೇದಿನಿರ್ಮಿತಮ್ 'ಉಪನಿಷದ್‌ಭಾಷ್ಯ' ಇತಿ ನಾಮ್ನಾ ಕನ್ನಡಭಾಷಾಯಾಂ ಪ್ರಕಾಶಿತಮುಪಲಭ್ಯತೇ _ಅನು.

* ಇದನ್ನು, ಎಂದರೆ ಜಗತ್ತು ಮತ್ತು ಜಗತ್ತಿನಲ್ಲಿನ ಪದಾರ್ಥಗಳನ್ನು _ಅನು.

** ಎಂದರೆ_ ವಾಣಿ, ಮನಸ್ಸು, ಚಕ್ಷು, ಶ್ರೋತ್ರ, ಹಾಗೂ ಪ್ರಾಣಗಳಿಗೆ ಸಂಬಂಧಪಟ್ಟ ಕೇನೋಪನಿಷತ್ತಿನ ಐದು ಮಂತ್ರಗಳು ಖಂಡ ೧, ಮಂತ್ರ ೪ ರಿಂದ ೮ ರವರೆಗೆ!

ಈಶಾವಾಸ್ಯದಿಂದ ಐತರೇಯದ ತನಕ ಎಂಟು ಉಪನಿಷತ್ತುಗಳ ಯೌಗಿಕಭಾಷ್ಯವು ಪಂ. ಸುಧಾಕರ ಚತುರ್ವೇದೀ ಅವರಿಂದ ಮಾಡಲ್ಪಟ್ಟು, 'ಉಪನಿಷದ್‌ಭಾಷ್ಯ', ಎಂಬ ಹೆಸರಿನಿಂದ ಪ್ರಕಟಿತ ವಾಗಿದೆ _ಅನು.

ಕಿಂತು ವಿದ್ವಾಂಸೋ ಯನ್ನಿರಾಕಾರಂ ಸರ್ವ-ವ್ಯಾಪಕಮ್, ಅಜಂ ಸರ್ವನಿಯಂತೃ-ಸಚ್ಚಿದಾನಂದಾದಿ-ಲಕ್ಷಣಂ ಬ್ರಹ್ಮೋಪಾಸತೇ ;

ಆದರೆ, ವಿದ್ವಾಂಸರು ಯಾವ ನಿರಾಕಾರವೂ, ಸರ್ವವ್ಯಾಪಕವೂ, ಜನ್ಮರಹಿತವೂ, ಸರ್ವರ ನಿಯಂತ್ರಕವೂ, ಸಚ್ಚಿದಾನಂದ ಮೊದಲಾದ ಲಕ್ಷಣ ಯುಕ್ತವೂ ಆದ ಬ್ರಹ್ಮವನ್ನು ಉಪಾಸಿಸುತ್ತಾರೋ ;

ತ್ವಯಾಪಿ ತದೇವೋಪಾಸನೀಯಂ ; ನೇತರದಿತಿ ॥ ೫ ॥

ಅದೇ ನಿನ್ನಿಂದಲೂ ಕೂಡ, ಉಪಾಸನೆಗೆ ಯೋಗ್ಯವಾಗಿದೆ ; ಬೇರೆ ಯಾವುದೂ ಅಲ್ಲ!

ಅಂದರೆ, ನಿರಾಕಾರನೂ, ವ್ಯಾಪಕನೂ, ಎಲ್ಲಾ ಪದಾರ್ಥಗಳನ್ನೂ ನಿಯಮದಲ್ಲಿಡುವವನೂ, ಮತ್ತು **ಸತ್-ಚಿತ್-ಆನಂದ** ಮೊದಲಾದ ಲಕ್ಷಣಗಳಿಂದ ಕೂಡಿದವನೂ ಆದ ಯಾವ ಬ್ರಹ್ಮನಿದ್ದಾನೋ, ಅವನ ಉಪಾಸನೆಯನ್ನೇ ನೀವೆಲ್ಲಾ ಮಾಡಿರಿ!

ಇದು ಉಪನಿಷತ್ಕಾರರಾದ ಋಷಿಗಳ ಮತ ವಾಗಿದೆ! [೫]

ಮನುಸ್ಮೃತಿಯಲ್ಲಿ 'ಪ್ರತಿಮಾ', ಎಂದರೆ ಅಳತೆ-ಸಾಧನ ; 'ದೇವತಾ', ಎಂದರೆ ವಿದ್ವಾಂಸ!

ಪ್ರಶ್ನಃ_ ಕಿಂಚ ಭೋಃ! ಮನುಸ್ಮೃತೌ_

ಪ್ರಶ್ನೆ_ ಏನು ಸ್ವಾಮಿ! **ಮನುಸ್ಮೃತಿಯಲ್ಲಿ**_

'ಪ್ರತಿಮಾನಾಮ್', ಮುಂತಾದ ಯಾವ ವಚನ ಗಳಿವೆಯೋ, ಅವುಗಳಿಂದ ಯಾವ ವಿಷಯವು ತಿಳಿದು ಬರುತ್ತದೆಂದರೆ_

" ಪ್ರತಿಮಾನಾಂ ಚ ಭೇದಕಂ. " [1]

[ಅರ್ಥ:_ "ಪ್ರತಿಮೆಗಳನ್ನು ಒಡೆಯುವವನನ್ನು."]

ಅಂದರೆ, ಯಾವನಾದರೂ ಪ್ರತಿಮೆಯನ್ನು ಒಡೆದರೆ, ಅವನಿಗೆ ರಾಜನು ದಂಡವನ್ನು ವಿಧಿಸಬೇಕು!

" ದೈವತಾನ್ಯಭಿಗಚ್ಛೇತ್ತು." [2]

[ಅರ್ಥ:_ " ದೇವತೆಗಳ ಸ್ಥಾನಗಳಿಗೆ ಹೋಗಬೇಕು."]

ಅಂದರೆ, ದೇವತೆಗಳ ಬಳಿಗೆ ಹೋಗುವುದು!

---

1. ಮನು. (೯. ೨೮೫)
2. ಮನು. (೪. ೧೫೩) _ಅನು.

1 ಮನುಸ್ಮೃತಿ (೯. ೨೮೫)
2 ಮನುಸ್ಮೃತಿ (೪. ೧೫೩) _ಅನು.

"ದೇವತಾಭ್ಯರ್ಚನಂ ಚೈವ." [3]

[ಅರ್ಥ:_ " ಮತ್ತು ದೇವತೆಗಳ ಪೂಜೆಯನ್ನು."]

ಅಂದರೆ, ಅವರ ಪೂಜೆಯನ್ನು ಮಾಡುವುದು!

"ದೇವತಾನಾಂ ಚ ಕುತ್ಸನಮ್." [4]

[ಅರ್ಥ:_ " ಮತ್ತು ದೇವತೆಗಳ ನಿಂದೆಯನ್ನು."]

"ದೇವತಾಯತನಾನಿ ಚ." [5]

[ಅರ್ಥ:_ " ಮತ್ತು ದೇವತೆಗಳ ಮನೆಗಳು."]

"ದೇವತಾನಾಂ." [6]

[ಅರ್ಥ:_ " ದೇವತೆಗಳ."]

ಛಾಯೋಲ್ಲಂಘನನಿಷೇಧಃ. ನೆರಳನ್ನು ದಾಟುವುದರ ನಿಷೇಧ!

"ಪ್ರದಕ್ಷಿಣಾನಿ ಕುರ್ವೀತ." [7]

[ಅರ್ಥ:_ "ಪ್ರದಕ್ಷಿಣೆಗಳನ್ನು ಮಾಡಬೇಕು."]

ದೇವಬ್ರಾಹ್ಮಣಸನ್ನಿಧೌ. ದೇವ-ಬ್ರಾಹ್ಮಣರ ಎದುರಿಗೆ!

ಅಂದರೆ, ಅವರ ಪ್ರದಕ್ಷಿಣೆ ಮಾಡುವುದು!

"ದೇವತಾಗಾರಭೇದಕಾನ್." [8]

[ಅರ್ಥ:_ " ದೇವತೆಗಳ ಮನೆಗಳನ್ನು ಒಡೆಯುವವರನ್ನು."]

ಉಕ್ತಾನಾಮೇತೇಷಾಂ ಕಾ ಗತಿರಸ್ತಿ? ಹೀಗೆ ಹೇಳಿರುವ ಈ [ವಚನಗಳ] ಗತಿ ಏನು?

ಅಂದರೆ. ಈ ಮೊದಲಾದ ಪ್ರಮಾಣಗಳಿಂದ ಮೂರ್ತಿಪೂಜೆಯು ಸರಿಯಾಗಿ ಸಿದ್ಧವಾಗುತ್ತದೆ. ಮತ್ತೆ, ತಾವು ಹೇಗೆ ಒಪ್ಪುತ್ತಿಲ್ಲ?

---

[3] ಮನು. (೨. ೧೭೬)
[4] ಮನು. (೪. ೧೬೩)
[5] ಮನು. (೮. ೨೪೮)
[6] ಮನು. (೪. ೧೩೦)
[7] ಮನು. (೪. ೩೯)
[8] ಮನು. (೯. ೨೮೦)

[3] ಮನುಸ್ಮೃತಿ (೨. ೧೭೬)
[4] ಮನುಸ್ಮೃತಿ (೪. ೧೬೩)
[5] ಮನುಸ್ಮೃತಿ (೮. ೨೪೮)
[6] ಮನುಸ್ಮೃತಿ (೪. ೧೩೦)
[7] ಮನುಸ್ಮೃತಿ (೪. ೩೯)
[8] ಮನುಸ್ಮೃತಿ (೯. ೨೮೦)

ಉತ್ತರಮ್_

ಉತ್ತರ_

ಏಕೆ ನೀವು ಭ್ರಮೆಯಲ್ಲಿ ಬಿದ್ದಿದ್ದೀರಿ! ಎಚ್ಚರಗೊಳ್ಳಿ! ಮತ್ತು ಕಣ್ಣುಗಳನ್ನು ತೆರೆದು ನೋಡಿ! **'ಪ್ರತಿಮಾ'** ಶಬ್ದದಿಂದ, ನೀವು ಕಲ್ಲಿನ ಮೂರ್ತಿಯನ್ನು ಗ್ರಹಿಸುತ್ತೀರಲ್ಲಾ; ಅದು ಕೇವಲ ನಿಮ್ಮ ಅಜ್ಞಾನತೆ, ಎಂದರೆ ಕಡಿಮೆ ತಿಳಿವಳಿಕೆಯಾಗಿದೆ! ಏಕೆಂದರೆ_

ಅತ್ರ 'ಪ್ರತಿಮಾ'-ಶಬ್ದೇನ ರಕ್ತಿಕಾ-ಮಾಷ-ಸೇಟಕಾದೀನಿ ತೋಲನಸಾಧನಾನಿ ಗೃಹ್ಯಂತೇ.

ಇಲ್ಲಿ **'ಪ್ರತಿಮಾ'**ಶಬ್ದದಿಂದ, **ಗುಲಗಂಜಿ, ಚಟಾಕು, ಸೇರು** ಮೊದಲಾದ ತೂಕ ಮಾಡುವ ಸಾಧನಗಳು ಗ್ರಹಿಸಲ್ಪಡುತ್ತವೆ.

ಅಂದರೆ, **ಮನುಸ್ಮೃತಿಯಲ್ಲಂತೂ, 'ಪ್ರತಿಮಾ'**, ಶಬ್ದದ [ಪ್ರಯೋಗವನ್ನು] ಮಾಡಿ, **ಗುಲಗಂಜಿ, ಚಟಾಕು, ಪಾವು, ಸೇರು** ಮತ್ತು **ಪಂಚೇರು** ಮೊದಲಾದ ತೂಕ ಮಾಡುವ ಸಾಧನಗಳನ್ನು ಗ್ರಹಿಸಲಾಗಿದೆ!

ತದ್ಯಥಾ_

ಅದು ಹೇಗೆಂದರೆ_

"ತುಲಾಮಾನಂ ಪ್ರತೀಮಾನಂ ಸರ್ವಂ ಚ ಸ್ಯಾತ್ ಸುಲಕ್ಷಿತಮ್ ॥" *

[ಮನುಸ್ಮೃತೌ ಅ. ೮, ಶ್ಲೋ. ೪೦೩]

[ಅರ್ಥ:_ "ತಕ್ಕಡಿ ಮತ್ತು ಬಟ್ಟುಗಳು ಎಲ್ಲವೂ ಸರಿಯಾಗಿ ಅಂಕಿತವಾಗಿರಬೇಕು." *

(ಮನುಸ್ಮೃತಿ: ೮. ೪೦೩)]

ಇತ್ಯನಯಾ ಮನೂಕ್ತರೀತ್ಯೈವ ಪ್ರತಿಮಾ-ಪ್ರತೀಮಾನ-ಶಬ್ದಯೋರೇಕಾರ್ಥತ್ವಾತ್ ತೋಲನ-ಸಾಧನಾನಿ ಗೃಹ್ಯಂತ ಇತಿ ಬೋಧ್ಯಮ್.

ಎಂಬ ಈ **ಮನುವಿನ** ಹೇಳಿಕೆಯಂತೆಯೇ **ಪ್ರತಿಮಾ**, ಹಾಗೂ **ಪ್ರತೀಮಾನ**, ಎಂಬ ಎರಡು ಶಬ್ದಗಳು ಅರ್ಥವೂ ಒಂದೇ ಆಗಿರುವುದರಿಂದ, ತೂಕ ಮಾಡುವ ಸಾಧನಗಳು ಗ್ರಹಿಸಲ್ಪಡುತ್ತವೆ, ಎಂದು ತಿಳಿಯಬೇಕು!

ಅತ ಏವ ಪ್ರತಿಮಾನಾಮಧಿಕನ್ಯೂನಕಾರಿಣೇ ದಂಡೋ ದೇಯ ಇತ್ಯುಕ್ತಃ.

ಆದುದರಿಂದಲೇ, **ಪ್ರತಿಮೆಯನ್ನು** ಹೆಚ್ಚು-ಕಡಿಮೆ ಮಾಡುವವರಿಗೆ ದಂಡವು ಕೊಡಲ್ಪಡಬೇಕು, ಎಂದು ಹೇಳಲಾಗಿದೆ!

---

* ಅಸ್ಯ ಶ್ಲೋಕಸ್ಯೋತ್ತರಾರ್ಧ ಏವಂ ವರ್ತತೇ_

'ಷಟ್ಸು ಷಟ್ಸು ಚ ಮಾಸೇಷು ಪುನರೇವಂ ಪರೀಕ್ಷಯೇತ್ ॥' _ಅನು.

* ಈ ಶ್ಲೋಕದ ಉತ್ತರಾರ್ಧದ ಅರ್ಥವು ಹೀಗಿದೆ_

'ಆರು ಆರು ತಿಂಗಳಿಗೊಮ್ಮೆ ಹೀಗೆಯೇ ಪುನಃ ಪರೀಕ್ಷಿಸಬೇಕು.' _ಅನು.

ಅಂದರೆ, **'ತುಲಾಮಾನ'**, ಎಂದರೆ ತಕ್ಕಡಿ, ಮತ್ತು **'ಪ್ರತಿಮಾನ'**, ಅಥವಾ **'ಪ್ರತಿಮಾ'**, ಎಂದರೆ ಬಟ್ಟುಗಳು_ ಇವುಗಳ ಪರೀಕ್ಷೆಯನ್ನು ರಾಜರು ಆರನೆಯ-ಆರನೆಯ ತಿಂಗಳು, ಎಂದರೆ, ಆರು-ಆರು ತಿಂಗಳಲ್ಲಿ ಒಂದು ಸಲ ; ಯಾವ ವ್ಯಾಪಾರಿಯೂ ಅವುಗಳಲ್ಲಿ ಯಾವ ತರಹದ ಮೋಸದಿಂದಲೂ ಹೆಚ್ಚು-ಕಡಿಮೆ ಮಾಡ ಲಾಗದಿರಲಿ, ಎಂದು ; ಮಾಡಿಸುತ್ತಿರಬೇಕು!

ಮತ್ತು ಎಂದಾದರೂ ಯಾವನಾದರೂ [ಹೆಚ್ಚು-ಕಡಿಮೆ] ಮಾಡಿದರೆ, ಅವನಿಗೆ ದಂಡವನ್ನು ಕೊಡಬೇಕು!

ವಿದ್ವಾಂಸರ ಸ್ಥಾನಕ್ಕೆ 'ದೇವಸ್ಥಾನ' ಎಂದು ಹೆಸರು!

ಮತ್ತು **'ದೇವತಾಭ್ಯರ್ಚನಂ.'** ಈ ಮೊದಲಾದ ವಚನಗಳಿಂದ ಯಾವ ಮಾತನ್ನು ತಿಳಿದುಕೊಳ್ಳಬೇಕೆಂದರೆ, **ಶತಪಥಬ್ರಾಹ್ಮಣದಲ್ಲಿ**_

" ವಿದ್ವಾಗ್ಂಸೋ ದೇವಾಃ । " *

[ಅರ್ಥ:_ " ವಿದ್ವಾಂಸರೇ ದೇವರು. "]

ಅಂದರೆ, ವಿದ್ವಾಂಸಮನುಷ್ಯರ ಹೆಸರು **'ದೇವರು'**, ಎಂದು ಹೇಳಲಾಗಿದೆ.

ತೇ ಯತ್ರಾಧೀಯತೇಽಧ್ಯಾಪಯಂತಿ ನಿವಸಂತಿ ಚ ತಾನಿ ಸ್ಥಾನಾನಿ 'ದೈವತಾನಿ' ಇತ್ಯುಚ್ಯಂತೇ.

ಅವರು ಎಲ್ಲಿ ಅಧ್ಯಯನ ಮಾಡುತ್ತಾರೋ, ಅಧ್ಯಾಪನೆ ಮಾಡುತ್ತಾರೋ, ಮತ್ತು ವಾಸ ಮಾಡುತ್ತಾರೋ, ಆ ಸ್ಥಾನಗಳು **'ದೈವತ-[ಸ್ಥಾನ]ಗಳು'**, ಎಂದು ಕರೆಯಲ್ಪಡುತ್ತವೆ.

ಅಂದರೆ ಯಾವ ಸ್ಥಾನಗಳಲ್ಲಿ ವಿದ್ವಾಂಸರು ಓದುತ್ತಾರೋ-ಓದಿಸುತ್ತಾರೋ, ಹಾಗೂ ನಿವಾಸ ಮಾಡುತ್ತಾರೋ, ಆ ಸ್ಥಾನಗಳನ್ನು **'ದೇವತಾಯತನ'**, ಎನ್ನುತ್ತಾರೆ. [ಏಕೆಂದರೆ_]

ದೇವಾ ಏವ ದೇವತಾಃ .

'ದೇವಜನರೇ ದೇವತೆಗಳು', ಎಂದು ಕರೆಯ ಲ್ಪಡುತ್ತಾರೆ.

---

* ಶತಪಥಬ್ರಾಹ್ಮಣೇ ೩. ೭. ೩. ೧೦ ದ್ರಷ್ಟವ್ಯಾ _ಅನು.

* ಶತಪಥಬ್ರಾಹ್ಮಣದಲ್ಲಿ ೩. ೭. ೩. ೧೦ ನೋಡಿ _ಅನು.

ತೇಷಾಮಿಮಾನಿ ಸ್ಥಾನಾನಿ 'ದೈವತಾನಿ ದೇವತಾಯತನಾನಿ ಚ' ಸಂತೀತಿ ಬೋಧ್ಯಮ್.

(ದೇವತಾಯತ.) ಅವರ ಈ ಸ್ಥಾನಗಳು 'ದೈವತಗಳು', ಹಾಗೂ 'ದೇವತಾಯತನಗಳು' ಆಗಿರುತ್ತವೆ, ಎಂದು ತಿಳಿಯಬೇಕು!

ವಿದ್ವಾಂಸರ ಸತ್ಕಾರ ಮಾಡುವ ವಿಧಿ

ವಿದುಷಾಮೇವಾಭ್ಯರ್ಚನಂ ಸತ್ಕರಣಂ ಕರ್ತ್ತವ್ಯಮಿತಿ.

(ದೇವತಾಭ್ಯರ್ಚನಂ.) ವಿದ್ವಾಂಸರದೇ 'ಅಭ್ಯರ್ಚನ', ಎಂದರೆ ಸತ್ಕಾರ ಮಾಡಬೇಕು!

ಅಂದರೆ, ಅಲ್ಲಿಗೆ ಹೋಗುವುದು, ಕುಳಿತು ಕೊಳ್ಳುವುದು, ಮತ್ತು ಅವರುಗಳ ಸತ್ಕಾರ ಮಾಡುವುದು ಇತ್ಯಾದಿ ಕೆಲಸಗಳನ್ನು ಎಲ್ಲರೂ ಅವಶ್ಯವಾಗಿ ಮಾಡಬೇಕು!

ನೈವೈತೇಷಾಂ ಕೇನಚಿದಪಿ ನಿಂದಾ, ಛಾಯೋಲ್ಲಂಘನಂ ಸ್ಥಾನವಿನಾಶಶ್ಚ ಕರ್ತ್ತವ್ಯಃ.

(ದೇವತಾನಾಂ.) ಯಾವನಿಂದಲೂ ಕೂಡ, ಇವರುಗಳ ನಿಂದೆ, ಮಾನದ ಉಲ್ಲಂಘನೆ, ಮತ್ತು [ಇವರ] ಸ್ಥಾನದ ನಾಶ ಮಾಡಲ್ಪಡಲೇಬಾರುದು!

ಅಂದರೆ, ಆ ವಿದ್ವಾಂಸರ ನಿಂದೆ, ಅವರ ಅಪಮಾನ, ಮತ್ತು ಅವರ ಸ್ಥಾನಗಳಲ್ಲಿ ಯಾವ ರೀತಿಯ ಕೆಡುಕು ಅಥವಾ ಉಪದ್ರವ ಮೊದಲಾದ ದೋಷದ ಕೆಲಸಗಳನ್ನು ಎಂದಿಗೂ ಮಾಡಬಾರದು!

(ದೈವತಾನ್ಯಭಿ.) ಕಿಂತು ಸರ್ವೈರೇತೇಷಾಂ ಸಾಮೀಪ್ಯಗಮನಂ, ನ್ಯಾಯಪ್ರಾಪಣಮ್ ;

(ದೈವತಾನ್ಯಭಿ.) ಆದರೆ, ಎಲ್ಲರೂ ಇವರ ಬಳಿಗೆ ಹೋಗುವುದು, ನ್ಯಾಯವನ್ನು ಪಡೆಯುವುದು ;

ಅಂದರೆ, ಮನುಷ್ಯರೆಲ್ಲರಿಗೂ ಯೋಗ್ಯವಾದುದೇನೆಂದರೆ, ಅವರ ಬಳಿಗೆ ಹೋಗಿ, ಒಳ್ಳೆ ಒಳ್ಳೆಯ ಮಾತುಗಳನ್ನು ಕಲಿತುಕೊಳ್ಳುತ್ತಿರಬೇಕು!

(ಪ್ರದಕ್ಷಿಣಾನಿ.) ದಕ್ಷಿಣಪಾರ್ಶ್ವೇ ಸ್ಥಾಪನಂ, ಸ್ವೇಷಾಂ ವಾಮಪಾರ್ಶ್ವೇ ಸ್ಥಿತಿಶ್ಚ ಕಾರ್ಯ್ಯೇತಿ.

(ಪ್ರದಕ್ಷಿಣಾನಿ.) (ಅವರನ್ನು) ಬಲಗಡೆಗೆ ಇರುವಂತೆ ಮತ್ತು ನಾವು [ಅವರ] ಎಡಪಾರ್ಶ್ವದಲ್ಲಿ ಇರುವಂತೆ ಮಾಡಬೇಕು!

ಅಂದರೆ, ಅವರನ್ನು ಆದರಕ್ಕಾಗಿ [ನಮ್ಮ] ಬಲ ಭಾಗದಲ್ಲಿ ಕೂಡಿಸಬೇಕು! ಏಕೆಂದರೆ, ಈ ನಿಯಮವು ಅವರ ಪ್ರತಿಷ್ಠೆಗಾಗಿ ವಿಧಿಸಲ್ಪಟ್ಟಿದೆ!*

* ಪ್ರವಚನ-ವೇದಿಯ ಮೇಲೆ ಅನೇಕ ಜನರನ್ನು ಕೂಡಿಸಬೇಕಾದಾಗ, ವಿದ್ವಾಂಸರ ಬಲಭಾಗದಲ್ಲಿ ಯಾರೂ ಕುಳಿತುಕೊಳ್ಳದಂತೆ ನೋಡಬೇಕು, ಎಂಬುದು ಆರ್ಯಸಭ್ಯತೆ _ಅನು.

ಏವಮೇವ ಯತ್ರ ಯತ್ರಾನ್ಯತ್ರಾಪಿ ಪ್ರತಿಮಾ-ದೇವ-ದೇವತಾಯತನಾದಿಶಬ್ದಾಃ ಸಂತಿ, ತತ್ರ ತತ್ರೈವ-ಮರ್ಥಾ ವಿಜ್ಞೇಯಾಃ .

ಹೀಗೆಯೇ, ಎಲ್ಲೆಲ್ಲಿ [ಮತ್ತು] ಬೇರೆ ಕಡೆ ಕೂಡ, **ಪ್ರತಿಮೆ-ದೇವ-ದೇವತಾಯತನ** ಮೊದಲಾದ ಶಬ್ದಗಳಿರುತ್ತವೋ, ಅಲ್ಲಲ್ಲಿ ಇಂತಹ ಅರ್ಥಗಳೇ ತಿಳಿಯಲ್ಪಡಬೇಕು!

ಅಂದರೆ, ಹೀಗೆ, ಬೇರೆ ಕಡೆ ಕೂಡ, ಎಲ್ಲೆಲ್ಲಿ ಪ್ರತಿಮೆ, ಹಾಗೂ ದೇವತೆ, ಅಥವಾ ಅವರ ಸ್ಥಾನಗಳ ವರ್ಣನೆ ಇರುತ್ತದೋ, ಅಲ್ಲಲ್ಲಿ ಇದೇ ರೀತಿಯಾಗಿ ನಿರ್ಭ್ರಮತ್ವದಿಂದ ತಿಳಿದುಕೊಳ್ಳಬೇಕು!

ಗ್ರಂಥಭೂಯಸ್ತ್ವಭಿಯಾ ನಾತ್ರ ತೇ ಲೇಖಿತುಂ ಶಕ್ಯಾ ಇತಿ.

ಗ್ರಂಥವು ದೊಡ್ಡದಾದೀತೆಂಬ ಭಯದಿಂದ, ಇಲ್ಲಿ ಅವು [ಎಲ್ಲವೂ] ಬರೆಯಲ್ಪಡಲು ಶಕ್ಯವಲ್ಲ!

ಅಂದರೆ, ಇಲ್ಲಿ ಎಲ್ಲದರ ಸಂಗ್ರಹವನ್ನು ಏಕೆ ಮಾಡಲಿಲ್ಲವೆಂದರೆ, [ಅದರಿಂದ] ಗ್ರಂಥವು ಬಹಳ ದೊಡ್ಡದಾಗಿ ಬಿಡುತ್ತಿತ್ತು!

ಏತಾವತ್ಯೆವ ಮೂರ್ತಿಪೂಜನ-ಕಂಠೀ-ತಿಲಕ-ಧಾರಣಾದಿನಿಷೇಧಾ ಬೋಧ್ಯಾಃ .

ಇಷ್ಟರಿಂದಲೇ, **ಮೂರ್ತಿಪೂಜೆ-ಮಾಲೆ-ತಿಲಕ ಧಾರಣೆ** ಮೊದಲಾದುವುಗಳ ನಿಷೇಧಗಳು [ಇವೆ, ಎಂದು] ತಿಳಿಯಲ್ಪಡಬೇಕು!

ಅಂದರೆ, ಸತ್ಯಶಾಸ್ತ್ರಗಳಿಗೆ ವಿರುದ್ಧವಾದ [ಮೂರ್ತಿ ಪೂಜೆ,] ಮಾಲೆ ಮತ್ತು ತಿಲಕಧಾರಣೆ ಮೊದಲಾದುವನ್ನು ಮಿಥ್ಯೆ , ಎಂದೂ, ಕಲ್ಪಿತವಿಷಯಗಳೆಂದೂ ತಿಳಿದು ಕೊಂಡು, ಮನಸ್ಸು, ಕರ್ಮ, ಹಾಗೂ ವಚನಗಳಿಂದ [ಅವನ್ನು] ಅವಶ್ಯವಾಗಿ ತ್ಯಜಿಸುವುದು ಉಚಿತವಾಗಿ ಇರುತ್ತದೆ!

[೮] ಗ್ರಹಪೂಜೆಯ ಮಿಥ್ಯಾತ್ವ!

ಏವಮೇವ ಸೂರ್ಯಾದಿಗ್ರಹಪೀಡಾಶಾಂತಯೇ ಬಾಲಬುದ್ಧಿಭಿಃ_

ಹೀಗೆಯೇ, ಸೂರ್ಯ ಮೊದಲಾದ ಗ್ರಹಗಳ ಪೀಡೆಯ ಶಾಂತಿಗಾಗಿ ಬಾಲಬುದ್ಧಿಗಳಿಂದ_

ಆ ಕೃಷ್ಣೇನ ರಜಸಾ. ॥೧॥ *

ಇತ್ಯಾದಿ-ಮಂತ್ರಾ ಗೃಹ್ಯಂತೇ.

ಈ ಮೊದಲಾದ ಮಂತ್ರಗಳು ಗ್ರಹಿಸಲ್ಪಡುತ್ತವೆ.

* ಯಜುರ್ವೇದೇ ೩೩. ೪೩. ಅತ್ರಾಪೂರ್ಣೋ ಮಂತ್ರ ಉದ್‌ಧೃತಃ _ಅನು.

* ಯಜುರ್ವೇದ (೩೩. ೪೩) _ಅನು.

ಅಂದರೆ, ಅಲ್ಪಬುದ್ಧಿಯುಳ್ಳ ಮನುಷ್ಯರು 'ಆ ಕೃಷ್ಣೇನ ರಜಸಾ.'_ ಈ ಮೊದಲಾದ ಮಂತ್ರಗಳನ್ನು ಸೂರ್ಯಾದಿ ಗ್ರಹಪೀಡೆಯ ಶಾಂತಿಗಾಗಿ ಗ್ರಹಿಸಿದ್ದಾರೆ!

ಅಯಮೇಷಾಂ ಭ್ರಮ ಏವಾಸ್ತೀತಿ.

ಇದು ಅವರ ಭ್ರಮೆಯೇ ಆಗಿದೆ, ಎಂದು ತಿಳಿಯಬೇಕು!

ಅಂದರೆ, ಅವರಿಗೆ ಕೇವಲ ಭ್ರಮೆಮಾತ್ರ ಉಂಟಾಗಿದೆ.

ಕುತಃ?

ಏಕೆಂದರೆ_

ತತ್ರ ತೇಷಾಮರ್ಥಾನಾಮಗ್ರಹಣಾತ್.

ಅಲ್ಲಿ ಆ ಅರ್ಥಗಳ ಸ್ವೀಕಾರವಿಲ್ಲ!

ಅಂದರೆ, ಮೂಲ ಅರ್ಥದೊಡನೆ [ಅವುಗಳ] ಸಂಬಂಧವೇನೂ ಇಲ್ಲ. ಎಂದರೆ, ಆ ಮಂತ್ರಗಳಲ್ಲಿ ಗ್ರಹಪೀಡೆಯ ನಿವಾರಣೆ ಆಗುವುದು, ಎಂಬೀ ಅರ್ಥವೇ ಇಲ್ಲ! *

ತದ್ಯಥಾ_

ಅದು ಹೇಗೆಂದರೆ_

ತತ್ರ_

ಅಲ್ಲಿ_

'ಸೂರ್ಯಗ್ರಹಪೂಜೆ'ಯ ಮಂತ್ರದ ಸತ್ಯಾರ್ಥ_ ಆಕರ್ಷಣೆ!

'ಆ ಕೃಷ್ಣೇನ ರಜಸಾ.' ಇತಿ ಮಂತ್ರಸ್ಯಾರ್ಥ ಆಕರ್ಷಣಾನುಕರ್ಷಣಪ್ರಕರಣ ಉಕ್ತಃ.** ॥ ೧ ॥

'ಆ ಕೃಷ್ಣೇನ ರಜಸಾ.', ಎಂಬ ಮಂತ್ರದ ಅರ್ಥವು '(೧೦) ಆಕರ್ಷಣೆ-ಅನುಕರ್ಷಣೆ-ಧಾರಣೆ', ಎಂಬ ಪ್ರಕರಣದಲ್ಲಿ ಹೇಳಲಾಗಿದೆ.** [೧]

ಮತ್ತು_

'ಚಂದ್ರಗ್ರಹಪೂಜೆ'ಯ ಮಂತ್ರದ ಸತ್ಯಾರ್ಥ_ ರಾಜನ ಅಭಿಷೇಕ!

ಇಮಂ ದೇವಾ ಅಸಪತ್ನಮ್. ॥ ೨ ॥ +

ಇತ್ಯಸ್ಯ ರಾಜಧರ್ಮವಿಷಯೇ ಚೇತಿ.++ ॥ ೨ ॥

ಎಂಬ ಇದರ [ಅರ್ಥವು] '(೨೨) ರಾಜಧರ್ಮ'ದ ವಿಷಯದಲ್ಲಿ [ಹೇಳಲಾಗಿದೆ.] ++

** ೩೯೫-೩೯೬ ತಮಂ ಪೃಷ್ಠಂ ದ್ರಷ್ಟವ್ಯಮ್ _ಅನು.

+ ಯಜುರ್ವೇದೇ ೯. ೪೦ _ಅನು.

++ ೬೫೯ ತಮಂ ಪೃಷ್ಠಂ ದ್ರಷ್ಟವ್ಯಮ್ _ಅನು.

---

* ಎಂದರೆ, ಗ್ರಹಪೂಜಾ-ಶಾಂತಿಗಳ ವಿಧಾನಗಳು, ಫಲಗಳು ಮತ್ತು ಅವುಗಳಲ್ಲಿ ವಿನಿಯುಕ್ತನಾಗುವ ಮಂತ್ರಗಳು ವ್ಯರ್ಥ, ಎಂದು ಅರ್ಥ! 'ಸತ್ಯಾರ್ಥಪ್ರಕಾಶ', ಏಕಾದಶ ಸಮುಲ್ಲಾಸ, ಪುಟ ೭೧೯-೭೨೦ ನ್ನು ನೋಡಿ _ಅನು.

** ೩೯೫-೩೯೬ ನೆಯ ಪುಟವನ್ನು ನೋಡಿ _ಅನು.

+ ಯಜುರ್ವೇದ (೯. ೪೦) _ಅನು.

++ ೬೫೯ ನೆಯ ಪುಟವನ್ನು ನೋಡಿ. _ಅನು.

'ಮಂಗಳಗ್ರಹಪೂಜೆ'ಯ ಮಂತ್ರದ ಸತ್ಯಾರ್ಥ_ ಅಗ್ನಿಯ ಆಧಿಪತ್ಯ!

[ಋಷಿಃ_ ವಿರೂಪಃ ; ದೇವತಾ_ ಅಗ್ನಿಃ ; ಛಂದಃ_ ಗಾಯತ್ರೀ ; ಸ್ವರಃ_ ಷಡ್ಜಃ]

ಅಗ್ನಿರ್ಮೂರ್ದ್ಧಾ ದಿವಃ ಕಕುತ್ಪತಿಃ ಪೃಥಿವ್ಯಾ ಅಯಮ್ ।

ಅಪಾಗ್ಂ ರೇತಾಗ್ಂಸಿ ಜಿನ್ವತಿ ॥ ೩ ॥

[ಯಜುರ್ವೇದೇ ಅ. ೩, ಮಂ. ೧೨]

[ಅರ್ಥ:_" ಅಗ್ನಿಯು ಪ್ರಕಾಶಲೋಕಗಳ, [ಹಾಗೂ] ಪ್ರಕಾಶರಹಿತಲೋಕಗಳ ಮೇಲೆ ವಿರಾಜಮಾನನಾಗಿರುವ ಮಹಾನ್ ಸ್ವಾಮಿಯಾಗಿದ್ದಾನೆ. ಇವನು ಪ್ರಾಣಗಳ ಪರಾಕ್ರಮಗಳನ್ನು ಪ್ರಾಪ್ತ ಮಾಡಿಕೊಡುತ್ತಾನೆ."

(ಯಜುರ್ವೇದಃ ೩. ೧೨)]

ಭಾಷ್ಯಮ್_	ಭಾಷ್ಯ_
(ಅಯಮಗ್ನಿಃ) ಪರಮೇಶ್ವರೋ ಭೌತಿಕೋ ವಾ ;	(ಅಯಮಗ್ನಿಃ) ಈ ಪರಮೇಶ್ವರನು ಅಥವಾ ಭೌತಿಕ[ಅಗ್ನಿಯು ;] ಅಂದರೆ, ಯಾವನು 'ಅಗ್ನಿ'ಸಂಜ್ಞಕನಾದ ಪರಮೇಶ್ವರನಾಗಿದ್ದಾನೋ, ಅಥವಾ ಭೌತಿಕ[ಅಗ್ನಿ] ಯಾಗಿದೆಯೋ, ಅವನು ;
(ದಿವಃ) ಪ್ರಕಾಶವಲ್ಲೋಕಸ್ಯ (ಪೃಥಿವ್ಯಾಃ) ಪ್ರಕಾಶರಹಿತಸ್ಯ ಚ (ಪತಿಃ) ಪಾಲಯಿತಾಸ್ತಿ.	(ದಿವಃ) ಪ್ರಕಾಶವಂತಲೋಕದ ಮತ್ತು (ಪೃಥಿವ್ಯಾಃ) ಪ್ರಕಾಶರಹಿತ[ಲೋಕ]ದ (ಪತಿಃ) ಪಾಲನೆ ಮಾಡುವವನಾಗಿದ್ದಾನೆ.
(ಮೂರ್ಧ್ವಾ) ಸರ್ವೋಪರಿ ವಿರಾಜಮಾನಃ ;	(ಮೂರ್ದ್ಧಾ) ಎಲ್ಲದರ ಮೇಲೆ ವಿರಾಜಮಾನನಾಗಿರುವವನೂ;
(ಕಕುತ್ಪತಿಃ) ತಥಾ ಕಕುಭಾಂ ದಿಶಾಂ ಚ ಮಧ್ಯೇ ವ್ಯಾಪಕತಯಾ ಸರ್ವಪದಾರ್ಥಾನಾಂ ಪಾಲಯಿತಾಸ್ತಿ.	(ಕಕುತ್ಪತಿಃ) ಹಾಗೂ 'ಕಕುಭ್', ಎಂದರೆ ದಿಕ್ಕುಗಳ ಮಧ್ಯೆ ವ್ಯಾಪಕತ್ವದಿಂದ ಎಲ್ಲಾ ಪದಾರ್ಥಗಳ ರಾಜ*ನೂ ಆಗಿದ್ದಾನೆ.

" ವ್ಯತ್ಯಯೋ ಬಹುಲಮ್ ॥ "

[ಅಷ್ಟಾಧ್ಯಾಯ್ಯಾಮ್ ೩.೧. ೮೫]

* 'ರಾಜ', ಎಂದರೆ ಪ್ರಕಾಶಗೊಳಿಸುವವನು, ಎಂದರ್ಥ _ಅನು.

[ಅರ್ಥ:_ " ವೇದವಿಷಯದಲ್ಲಿ ವಿಕಲ್ಪದಿಂದ ಎಲ್ಲಾ ವಿಧಿಗಳ ವ್ಯತ್ಯಯವಾಗುತ್ತದೆ."
(ಅಷ್ಟಾಧ್ಯಾಯೀ: ೩. ೧. ೮೫)]

ಇತಿ ಸೂತ್ರೇಣ ಭಕಾರಸ್ಥಾನೇ ತಕಾರಃ.

ಈ ಸೂತ್ರದಿಂದ ಭಕಾರದ ಸ್ಥಾನದಲ್ಲಿ ತಕಾರ ಬಂದಿದೆ.

ಅಂದರೆ, 'ವ್ಯತ್ಯಯೋ ಬಹುಲಮ್' ಈ ಸೂತ್ರದಂತೆ, 'ಕಕುಭ್' ಶಬ್ದದ ಭಕಾರಕ್ಕೆ ತಕಾರಾದೇಶವಾಗಿದೆ.

(ಅಪಾಗ್ಂ ರೇತಾಗ್ಂಸಿ) ಅಯಮೇವ ಜಗದೀಶ್ವರೋ ಭೌತಿಕಶ್ಚಾಪಾಂ ಪ್ರಾಣಾನಾಂ ಜಲಾನಾಂ ಚ ರೇತಾಂಸಿ ವೀರ್ಯ್ಯಾಣಿ (ಜಿನ್ವತಿ) ಪುಷ್ಣಾತಿ.

(ಅಪಾಗ್ಂ ರೇತಾಗ್ಂಸಿ) ಈ ಜಗದೀಶ್ವರನೇ, ಮತ್ತು ಭೌತಿಕ[ಅಗ್ನಿಯೇ,] 'ಅಪ್', ಎಂದರೆ ಪ್ರಾಣಗಳ, ಮತ್ತು ಜಲಗಳ (ರೇತಾಂಸಿ) ಶಕ್ತಿಗಳನ್ನು (ಜಿನ್ವತಿ) ಪುಷ್ಟ ಮಾಡುತ್ತಾನೆ.

ಏವಂ ಚಾಗ್ನಿರ್ವಿದ್ಯುದ್ರೂಪೇಣ ಸೂರ್ಯ್ಯ-ರೂಪೇಣ ಚ ಪೂರ್ವೋಕ್ತಸ್ಯ ರಕ್ಷಕಃ ಪುಷ್ಟಿಕರ್ತ್ತಾ ಚಾಸ್ತಿ ॥ ೩ ॥

ಮತ್ತು ಹೀಗೆಯೇ, ಅಗ್ನಿಯು ವಿದ್ಯುತ್ತಿನ ರೂಪದಿಂದ, ಮತ್ತು ಸೂರ್ಯನ ರೂಪದಿಂದ ಮೊದಲು ಹೇಳಿದುದರ ರಕ್ಷಕವೂ, ಹಾಗೂ ಪುಷ್ಟಿಕರ್ತೃವೂ ಆಗಿದೆ.

ಅಂದರೆ, ಭೂತಾಗ್ನಿಯೂ ಕೂಡ, ವಿದ್ಯುತ್, ಹಾಗೂ ಸೂರ್ಯರೂಪದಿಂದ ಮೊದಲು ಹೇಳಿದ ಪದಾರ್ಥಗಳ ಪಾಲನೆ ಮತ್ತು ಪುಷ್ಟಿಯನ್ನು ಮಾಡುವಂತಹುದಾಗಿದೆ. [೩]

'ಬುಧಗ್ರಹಪೂಜೆ'ಯ ಮಂತ್ರದ ಸತ್ಯಾರ್ಥ_ ವಿದ್ವತ್‌ಸಂಗ!

[ಋಷಿಃ_ ಪರಮೇಷ್ಠೀ ; ದೇವತಾ_ ಅಗ್ನಿಃ ; ಛಂದಃ_ ಆರ್ಷೀ ತ್ರಿಷ್ಟುಪ್ ; ಸ್ವರಃ_ ಧೈವತಃ]

ಉದ್ಬುಧ್ಯಸ್ವಾಗ್ನೇ ಪ್ರತಿ ಜಾಗೃಹಿ
ತ್ವಮಿಷ್ಟಾಪೂರ್ತ್ತೇ ಸಗ್ಂಸೃಜೇಥಾಮಯಂ ಚ ।
ಅಸ್ಮಿನ್ತ್ಸಧಸ್ಥೇ ಅಧ್ಯುತ್ತರಸ್ಮಿನ್
ವಿಶ್ವೇ ದೇವಾ ಯಜಮಾನಶ್ಚ ಸೀದತ ॥ ೪ ॥

[ಯಜುರ್ವೇದೇ ಅ. ೧೫, ಮಂ. ೫೪]

[ಅರ್ಥ:_ "ಅಗ್ನಿಯೇ! ನೀನು ಉತ್ತಮವಾಗಿ ತಿಳಿದುಕೋ! ಎಚ್ಚೆತ್ತುಕೋ! [ಸ್ತ್ರೀ-ಪುರುಷರೇ!] ಇಷ್ಟವನ್ನೂ, ಪೂರ್ತವನ್ನೂ ಚೆನ್ನಾಗಿ ಸಾಧಿಸಿಕೊಳ್ಳಿರಿ! ಮತ್ತು ಇವನೂ ಕೂಡ, ಸಾಧಿಸಿಕೊಳ್ಳಲಿ! [ನೀವು] ಈ ಸಹಸ್ಥಾನದಲ್ಲಿ ಕುಳಿತುಕೊಳ್ಳಿರಿ! ಎಲ್ಲಾ ವಿದ್ವಾಂಸರೂ, ಹಾಗೂ ಯಜಮಾನನೂ ಮುಂದಿನ ಸ್ಥಾನದಲ್ಲಿ [ಕುಳಿತುಕೊಳ್ಳಲಿ!] "

(ಯಜುರ್ವೇದ: ೧೫. ೫೪)]

ಭಾಷ್ಯಮ್_

(ಉದ್ಬುಧ್ಯಸ್ವಾಗ್ನೇ) ಹೇ ಅಗ್ನೇ ಪರಮೇಶ್ವರ! ಅಸ್ಮಾಕಂ ಹೃದಯೇ ತ್ವಮುದ್‌ಬುಧ್ಯಸ್ವ ಪ್ರಕಾಶಿತೋ ಭವ.

(ಪ್ರತಿಜಾಗೃಹಿ) ಅವಿದ್ಯಾಂಧಕಾರನಿದ್ರಾತಸ್ಸರ್ವಾನ್ ಜೀವಾನ್ ಪೃಥಕ್‌ಕೃತ್ಯ ವಿದ್ಯಾರ್ಕಪ್ರಕಾಶೇ ಜಾಗೃತಾನ್[⊛] ಕುರು.

(ತ್ವಮಿಷ್ಟಾಪೂರ್ತೇ.) ಹೇ ಭಗವನ್! ಅಯಂ ಜೀವೋ ಮನುಷ್ಯದೇಹಧಾರೀ ಧರ್ಮಾರ್ಥಕಾಮ-ಮೋಕ್ಷಸಾಮಗ್ರ್ಯಾಃ ಪೂರ್ತಿಂ ಸೃಜೇತ್ ಸಮುತ್ಪಾದ-ಯೇತ್;

ತ್ವಮಸ್ಯೇಷ್ಟಂ ಸುಖಂ ಸೃಜೇಃ.

ಏವಂ ಪರಸ್ಪರಂ ದ್ವಯೋಃ ಸಹಾಯ-ಪುರುಷಾರ್ಥಾಭ್ಯಾಮಿಷ್ಟಾಪೂರ್ತೇ ಸಂಸೃಷ್ಟೇ ಭವೇತಾಮ್.

ಭಾಷ್ಯ_

(ಉದ್ಬುಧ್ಯಸ್ವಾಗ್ನೇ) ಹೇ ಅಗ್ನಿ, ಎಂದರೆ ಪರಮೇಶ್ವರ! ನಮ್ಮ ಹೃದಯದಲ್ಲಿ (ತ್ವಮ್) ನೀವು (ಉದ್‌ಬುಧ್ಯಸ್ವ) ಪ್ರಕಾಶಿತರಾಗಿ!

(ಪ್ರತಿಜಾಗೃಹಿ) ಅವಿದ್ಯೆ-ಅಂಧಕಾರ-ನಿದ್ರೆಯಿಂದ ಎಲ್ಲಾ ಜೀವರನ್ನೂ ಬೇರ್ಪಡಿಸಿ, ವಿದ್ಯಾಸೂರ್ಯನ ಪ್ರಕಾಶದಲ್ಲಿ ಜಾಗೃತರನ್ನಾಗಿ ಮಾಡಿ!

ಅಂದರೆ, ಅವಿದ್ಯೆಯ ಅಂಧಕಾರರೂಪನಿದ್ರೆಯಿಂದ ನಮ್ಮೆಲ್ಲ ಜೀವರನ್ನೂ ಬೇರೆ ಮಾಡಿ, ವಿದ್ಯಾರೂಪ ಸೂರ್ಯನ ಪ್ರಕಾಶದಿಂದ ಪ್ರಕಾಶಮಾನರನ್ನಾಗಿ ಮಾಡಿ!

(ತ್ವಮಿಷ್ಟಾಪೂರ್ತೇ.) ಓ ಭಗವಂತ! ಈ ಮನುಷ್ಯ ದೇಹಧಾರಿಯಾದ ಜೀವನು ಧರ್ಮ-ಅರ್ಥ-ಕಾಮ-ಮೋಕ್ಷ, ಎಂಬ ಸಾಮಗ್ರಿಯ ಪೂರ್ತಿಯನ್ನು ಚೆನ್ನಾಗಿ ಉತ್ಪಾದಿಸಲಿ;

ಮತ್ತು ನೀವು [ಕೂಡ] ಇವನಿಗೆ ಇಷ್ಟವಾದ ಸುಖವನ್ನು ಉತ್ಪನ್ನ ಮಾಡಿ!

ಅಂದರೆ, ಮನುಷ್ಯದೇಹವನ್ನು ಧಾರಣ ಮಾಡುವ ಯಾವ ಜೀವನಿದ್ದಾನೋ, ಅವನು, ಹೇಗೆ ಧರ್ಮ, ಅರ್ಥ, ಕಾಮ ಮತ್ತು ಮೋಕ್ಷದ ಸಾಮಗ್ರಿಯ ಪೂರ್ತಿಯನ್ನು ಮಾಡಲು ಶಕ್ಯನಾಗಬಲ್ಲನೋ, ಹಾಗೆ ನೀವು [ಅವನ] ಇಷ್ಟಸಿದ್ಧಿಯನ್ನು ಮಾಡಿ!

ಹೀಗೆ, ಪರಸ್ಪರ ಇಬ್ಬರ ಸಹಾಯ-ಪುರುಷಾರ್ಥಗಳ ಮೂಲಕ ಇಷ್ಟ, ಹಾಗೂ ಪೂರ್ತಗಳು ಚೆನ್ನಾಗಿ ಉತ್ಪನ್ನವಾಗಲಿ!

[⊛] 'ಜಾಗರಿತಾನ್' _ಆ. ವೈ.

(ಅಸ್ಮಿನ್ ಸಧಸ್ಥೇ) ಅಸ್ಮಿನ್ ಲೋಕೇ ಶರೀರೇ ಚ ;

(ಅಸ್ಮಿನ್ ಸಧಸ್ಥೇ) ಈ ಲೋಕದಲ್ಲಿ, ಮತ್ತು ಶರೀರದಲ್ಲಿ ಕೂಡ ;

(ಅಧ್ಯುತ್ತರಸ್ಮಿನ್) ಪರಲೋಕೇ ದ್ವಿತೀಯೇ ಜನ್ಮನಿ ಚ ;

(ಅಧ್ಯುತ್ತರಸ್ಮಿನ್) ಪರಲೋಕದಲ್ಲಿ ಮತ್ತು ಎರಡನೆಯ ಜನ್ಮದಲ್ಲಿ ಕೂಡ ;

(ವಿಶ್ವೇ ದೇವಾ ಯಜಮಾನಶ್ಚ ಸೀದತ) ಸರ್ವೇ ವಿದ್ವಾಂಸೋ ಯಜಮಾನೋ ವಿದ್ವತ್‌ಸೇವಾಕರ್ತಾ ಚ ಕೃಪಯಾ ಸದಾ ಸೀದಂತು ವರ್ತ್ತಂತಾಮ್ ;

(ವಿಶ್ವೇ ದೇವಾಃ ಯಜಮಾನಶ್ಚ ಸೀದತ) ಎಲ್ಲಾ ವಿದ್ವಾಂಸರೂ, ಯಜಮಾನನೂ ಮತ್ತು ವಿದ್ವಾಂಸರ ಸೇವೆ ಮಾಡುವವನೂ ಕೂಡ, ಕೃಪೆಯಿಂದ ಯಾವಾಗಲೂ ಅವಸ್ಥಿತರಾಗಿರಲಿ!

ಅಂದರೆ, ನಿಮ್ಮ ಕೃಪೆಯಿಂದ, ಎಲ್ಲಾ ವಿದ್ವಾಂಸರೂ; ಮತ್ತು ಯಜಮಾನನೂ; ಎಂದರೆ ವಿದ್ಯೆಯ ಉಪದೇಶದ ಗ್ರಹಣ ಮಾಡುವ, ಹಾಗೂ ಸೇವನೆ ಮಾಡುವ ಮನುಷ್ಯರೂ ಸುಖದಿಂದ ಯಾವಾಗಲೂ ವಿದ್ಯಮಾನರಾಗಿರಲಿ!

ಯತೋಽಸ್ಮಾಕಂ ಮಧ್ಯೇ ಸದೈವ ಸರ್ವಾ ವಿದ್ಯಾಃ ಪ್ರಕಾಶಿತಾ ಭವೇಯುರಿತಿ.

ಇದರಿಂದ, ನಮ್ಮಲ್ಲಿ ಯಾವಾಗಲೂ ಎಲ್ಲಾ ವಿದ್ಯೆಗಳೂ ಪ್ರಕಾಶಿಸಲ್ಪಡುತ್ತಿರಲಿ!

ಅಂದರೆ, ಇದರಿಂದ ನಾವು ವಿದ್ಯೆಯಿಂದ ಯುಕ್ತರಾಗುತ್ತಿರೋಣ!

"ವ್ಯತ್ಯಯೋ ಬಹುಲಮ್ ॥"

(ಅಷ್ಟಾಧ್ಯಾಯ್ಯಾಮ್ ೩. ೧. ೮೫)

[ಅರ್ಥ:_ "ವೇದವಿಷಯದಲ್ಲಿ ವಿಕಲ್ಪದಿಂದ ಎಲ್ಲಾ ವಿಧಿಗಳ ವ್ಯತ್ಯಯವಾಗುತ್ತದೆ."

(ಅಷ್ಟಾಧ್ಯಾಯೀಃ ೩. ೧. ೮೫)]

ಇತ್ಯನೇನ ಸೂತ್ರೇಣ ಪುರುಷವ್ಯತ್ಯಯಃ ॥ ೪ ॥

ಎಂಬ ಈ ಸೂತ್ರದಿಂದ, ಪುರುಷವ್ಯತ್ಯಯವಾಗಿದೆ.

ಅಂದರೆ, ಈ ಸೂತ್ರದಂತೆ, **'ಸಂಸೃಜೇಥಾಮ್'** ಮತ್ತು **'ಸೀದತ'**_ ಈ ಪ್ರಯೋಗಗಳಲ್ಲಿ ಪುರುಷವ್ಯತ್ಯಯ, ಎಂದರೆ ಪ್ರಥಮಪುರುಷದ ಸ್ಥಾನದಲ್ಲಿ ಮಧ್ಯಮಪುರುಷ ಉಂಟಾಗಿದೆ.

[೪]

'ಬೃಹಸ್ಪತಿಗ್ರಹಪೂಜೆ'ಯ ಮಂತ್ರದ ಸತ್ಯಾರ್ಥ_ ಅದ್ಭುತ ಧನಸಂಪಾದನೆ!

[ಋಷಿಃ_ ಗೃತ್ಸಮದಃ ; ದೇವತಾ_ ಈಶ್ವರಃ ; ಛಂದಃ_ ಭುರಿಗತ್ಯಷ್ಟಿಃ ; ಸ್ವರಃ_ ಗಾಂಧಾರಃ]

ಬೃಹಸ್ಪತೇ ಅತಿ ಯದರ್ಯೋ ಅರ್ಹಾದ್
ದ್ಯುಮದ್ ವಿಭಾತಿ ಕ್ರತುಮಜ್ಜನೇಷು ।
ಯದ್ ದೀದಯಚ್ಛವಸ ಋತಪ್ರಜಾತ
ತದಸ್ಮಾಸು ದ್ರವಿಣಂ ಧೇಹಿ ಚಿತ್ರಮ್ ॥ ೫ ॥

[ಯಜುರ್ವೇದೇ ಅ. ೨೬, ಮಂ. ೩]

[ಅರ್ಥ:_ ಹೇ ಬೃಹಸ್ಪತಿ! ಸ್ವಾಮಿಯು ಯಾವ ಯೋಗ್ಯವೂ, ಪ್ರಕಾಶಯುಕ್ತವೂ, ಪ್ರಜ್ಞಾಯುಕ್ತವೂ ಆದುದನ್ನು ಜನರಲ್ಲಿ ಅತ್ಯಂತ ವಿಶೇಷವಾಗಿ ಪ್ರಕಾಶ ಮಾಡುತ್ತಾನೋ, [ಮತ್ತು] ಹೇ ಸತ್ಯಜನಕ! ಯಾವುದು ಬಲದಿಂದ ಪ್ರಕಾಶಿಸುತ್ತಿದೆಯೋ, ಆ ಆಶ್ಚರ್ಯರೂಪ ಧನವನ್ನು ನಮ್ಮಲ್ಲಿ ಸ್ಥಾಪಿಸಿ!

(ಯಜುರ್ವೇದೇ ೨೬. ೩)]

ಭಾಷ್ಯಮ್_

(ಬೃಹಸ್ಪತೇ) ಹೇ ಬೃಹತಾಂ ವೇದಾನಾಂ ಪತೇ ಪಾಲಕ!

(ಋತಪ್ರಜಾತ) ವೇದವಿದ್ಯಾಪ್ರತಿಪಾದಿತ, ಜಗದೀಶ್ವರ!

ತ್ವಂ (ಜನೇಷು) ಯಜ್ಞಕಾರಕೇಷು ವಿದ್ವತ್ಸು ಲೋಕ-ಲೋಕಾಂತರೇಷು ವಾ ;

(ಕ್ರತುಮತ್) ಭೂಯಾಂಸಃ ಕ್ರತವೋ ಭವಂತಿ ಯಸ್ಮಿಂಸ್ತತ್ ;

ಭಾಷ್ಯ_

(ಬೃಹಸ್ಪತೇ) ಓ 'ಬೃಹತ್', ಎಂದರೆ ವೇದಗಳ 'ಪತಿ', ಎಂದರೆ ಪಾಲಕ!

ಅಂದರೆ, ಹೇ ವೇದವಿದ್ಯಾರಕ್ಷಕ!

(ಋತಪ್ರಜಾತ) ವೇದವಿದ್ಯೆಯಿಂದ ಪ್ರತಿಪಾದಿತನಾದ ಜಗದೀಶ್ವರ!

ಅಂದರೆ, ವೇದವಿದ್ಯೆಯಿಂದ ಪ್ರಸಿದ್ಧನಾದ ಜಗದೀಶ್ವರ!

ನೀವು (ಜನೇಷು) ಯಜ್ಞ ಮಾಡಿಸುವ ವಿದ್ವಾಂಸರಲ್ಲಿ, ಅಥವಾ ಲೋಕ-ಲೋಕಾಂತರಗಳಲ್ಲಿ;

(ಕ್ರತುಮತ್) ಯಾವುದರಲ್ಲಿ ಬಹಳ ಕರ್ಮಗಳಿರುತ್ತವೋ, ಅದು ;

ಅಂದರೆ, ಯಾವುದರಿಂದ ಬಹಳ ಯಜ್ಞಗಳನ್ನು ಮಾಡಲಾಗುತ್ತದೋ, ಅದು ;

(ದ್ಯುಮತ್) ಸತ್ಯವ್ಯವಹಾರಪ್ರಕಾಶೋ ವಿದ್ಯತೇ ಯಸ್ಮಿಂಸ್ತತ್;

(ದ್ಯುಮತ್) ಯಾವುದರಲ್ಲಿ ಸತ್ಯವ್ಯವಹಾರಗಳ ಪ್ರಕಾಶ ವಿದ್ಯಮಾನವಾಗಿರುತ್ತದೋ, ಅದು;

ಅಂದರೆ, ಯಾವುದರಿಂದ ಸತ್ಯವ್ಯವಹಾರಗಳ ಪ್ರಕಾಶದ ವಿಧಾನ ಇರುತ್ತದೋ ;

(ದೀದಯಚ್ಛವಸಃ) ದಾನಯೋಗ್ಯಂ ಶವಸೋ ಬಲಸ್ಯ ಪ್ರಾಪಕಂ ;

(ದೀದಯತ್ ಶವಸಃ) [ಯಾವುದು] ದಾನ ಯೋಗ್ಯವಾದ ಬಲದ ಪ್ರಾಪ್ತಿ ಮಾಡುವಂತಹುದೋ ;

ಅಂದರೆ, [ಯಾವುದು] ಧರ್ಮದ ಮತ್ತು ಎಲ್ಲರ ಸುಖದ ಪ್ರಕಾಶಮಾಡುವಂತಹುದೂ, ಹಾಗೂ ಬಲದ ರಕ್ಷಣೆ ಮಾಡುವಂತಹುದೂ; ಆಗಿದೆಯೋ ;

(ಯದರ್ಯ್ಯೋ ಅರ್ಹಾತ್) ಯೇನ ವಿದ್ಯಾದಿ-ಧನಯುಕ್ತಃ ಸನ್ ;

(ಯದರ್ಯಃ ಅರ್ಹಾತ್) ಯಾವುದರಿಂದ ವಿದ್ಯೆ ಮೊದಲಾದ ಧನದಿಂದ ಯುಕ್ತನಾಗುತ್ತಾ ಇರುವ ;

ಅರ್ಯ್ಯಃ ಸ್ವಾಮೀ ರಾಜಾ ವಣಿಗ್ಜನೋ ವಾ ;

'ಅರ್ಯ್ಯ', ಎಂದರೆ ಸ್ವಾಮಿಯು, ರಾಜನು ಅಥವಾ ವ್ಯಾಪಾರೀಜನರು ;

ಧಾರ್ಮಿಕೇಷು ಜನೇಷು [ವಿಭಾತಿ] ಪ್ರಕಾಶತೇ ;

ಧಾರ್ಮಿಕರಾದ ಮನುಷ್ಯರಲ್ಲಿ (ವಿಭಾತಿ) ಪ್ರಕಾಶಿಸುತ್ತಾರೋ ;

ಅಂದರೆ, ಯಾವುದರಿಂದ ಧರ್ಮಯುಕ್ತವೂ, ಯೋಗ್ಯವೂ ಆದ ವ್ಯವಹಾರಗಳ ಮೂಲಕ ರಾಜನು ಅಥವಾ ವೈಶ್ಯನು ಧರ್ಮವ್ಯವಹಾರಗಳಲ್ಲಿ, ಅಥವಾ ಧಾರ್ಮಿಕರಾದ ಶ್ರೇಷ್ಠಪುರುಷರಲ್ಲಿ ಪ್ರಕಾಶಮಾನ ನಾಗುತ್ತಾನೋ ; [ಮತ್ತು _]

(ಚಿತ್ರಮ್) ಯದ್ಧನಮದ್ಭುತಂ ;

(ಚಿತ್ರಮ್) ಯಾವುದು ಅದ್ಭುತವಾದ ಧನ ವಾಗಿದೆಯೋ ;

ಅಂದರೆ, ಯಾವುದು ಸತ್ಯವಿದ್ಯಾರೂಪವಾದ ಅನೇಕ ಪ್ರಕಾರದ ಅದ್ಭುತ ಧನವಾಗಿದೆಯೋ ;

(ತದಸ್ಮಾಸು ದ್ರವಿಣಂ ಧೇಹಿ) ತದಸ್ಮದಧೀನಂ ದ್ರವಿಣಂ ಧನಂ ಕೃಪಯಾ ಧೇಹಿ.

(ತದಸ್ಮಾಸು ದ್ರವಿಣಂ ಧೇಹಿ) ಆ ಧನವನ್ನು ನಮ್ಮಲ್ಲಿ ದಯವಿಟ್ಟು ಸ್ಥಾಪಿಸಿ!

ಅಂದರೆ, ಆ ಧನವು ಹೇಗಿದೆಯೆಂದರೆ, ಆ ಸಂಪೂರ್ಣವಿದ್ಯಾಯುಕ್ತವಾದ ಧನವನ್ನು ನಮ್ಮ ಮಧ್ಯೆ ನಿರಂತರವಾಗಿ ಧಾರಣ ಮಾಡಿಸಿ!

ಇತ್ಯನೇನ ಮಂತ್ರೇಣೇಶ್ವರಃ ಪ್ರಾರ್ಥ್ಯತೇ ॥ ೫ ॥

ಹೀಗೆ, ಈ ಮಂತ್ರದಿಂದ ಈಶ್ವರನು ಪ್ರಾರ್ಥಿಸಲ್ಪಡುತ್ತಾನೆ.

ಅಂದರೆ, ಈ ಮಂತ್ರದಿಂದ ಪರಮೇಶ್ವರನ ಪ್ರಾರ್ಥನೆ ಮಾಡಲಾಗುತ್ತದೆ. [೫]

'ಶುಕ್ರಗ್ರಹಪೂಜೆ'ಯ ಮಂತ್ರದ ಸತ್ಯಾರ್ಥ_ ಉತ್ತಮ ಅನ್ನ-ಪಾನ!

[ಋಷಿಃ_ ಶಂಖಃ ; ದೇವತಾ_ ಪ್ರಜಾಪತಿಃ ; ಛಂದಃ_ ಭುರಿಗತಿಜಗತೀ ; ಸ್ವರಃ_ ನಿಷಾದಃ]

ಅನ್ನಾತ್ ಪರಿಸ್ರುತೋ ರಸಂ ಬ್ರಹ್ಮಣಾ
ವ್ಯಪಿಬತ್ ಕ್ಷತ್ರಂ ಪಯಃ ಸೋಮಂ ಪ್ರಜಾಪತಿಃ ।
ಋತೇನ ಸತ್ಯಮಿಂದ್ರಿಯಂ ವಿಪಾನಗ್ಂ ಶುಕ್ರಮಂಧಸಽ
ಇಂದ್ರಸ್ಯೇಂದ್ರಿಯಮಿದಂ ಪಯೋಽಮೃತಂ ಮಧು ॥ ೬ ॥

[ಯಜುರ್ವೇದೇ ಅ. ೧೯, ಮಂ. ೭೫]

[ಅರ್ಥ:_ "ಪ್ರಜಾಪತಿಯು ಬ್ರಹ್ಮನ ಜೊತೆಗೆ ಪಕ್ವವಾದ ಅನ್ನದಿಂದ [ಉಂಟಾದ] ಸೌಮ್ಯವಾದ ರಸವನ್ನೂ, ರಕ್ಷಕವಾದ ಹಾಲನ್ನೂ ವಿಶೇಷವಾಗಿ ಕುಡಿದನು! ಅದು ನ್ಯಾಯದಿಂದ ಕೂಡಿದುದೂ, ಅನ್ಯಾಯ[ನಿವರ್ತಕವೂ], ಸತ್ಯವೂ, ವಿಶೇಷರಕ್ಷಕವೂ, ಇಂದ್ರದತ್ತವೂ, ರಕ್ಷಿಸಲು ಯೋಗ್ಯವೂ, ಮೃತ್ಯುರಹಿತವೂ, ಮಾಧುರ್ಯಯುಕ್ತವೂ ಆಗಿತ್ತು!"

(ಯಜುರ್ವೇದಃ ೧೯. ೭೫)]

ಭಾಷ್ಯಮ್_

(ಕ್ಷತ್ರಮ್) ಯತ್ರ ಯದ್ರಾಜಕರ್ಮ ಕ್ಷತ್ರಿಯೋ ವಾ ;

(ಬ್ರಹ್ಮಣಾ) ವೇದವಿದ್ಭಿಃ ಸಹ ;

ಭಾಷ್ಯ_

(ಕ್ಷತ್ರಮ್) ಎಲ್ಲಿ ಯಾವ ರಾಜಕಾರ್ಯವು ಅಥವಾ ಕ್ಷತ್ರಿಯನು ;

ಅಂದರೆ, ಯಾವುದು ರಾಜಕಾರ್ಯವಾಗಿದೆಯೋ, ಅದು ; ಅಥವಾ ಯಾವನು ಕ್ಷತ್ರಿಯನೋ, ಅವನು ಯಾವಾಗಲೂ ನ್ಯಾಯದಿಂದ ;

(ಬ್ರಹ್ಮಣಾ) ವೇದಗಳನ್ನು ತಿಳಿದವರ ಜೊತೆಗೆ ;

ಅಂದರೆ, ವೇದಗಳನ್ನು ತಿಳಿದ ಪುರುಷರ ಜೊತೆ ಸೇರಿಕೊಂಡೇ, ರಾಜ್ಯದ ಪಾಲನೆ ಮಾಡಬೇಕು!

(ಪಯಃ) ಅಮೃತಾತ್ಮಕಂ ;

(ಪಯಃ) ಅಮೃತರೂಪವೂ ;

(ಸೋಮಮ್) ಸೋಮಾದ್ಯೋಷಧಿಸಂಪಾದಿತಂ ;

(ಸೋಮಮ್) ಸೋಮಲತೆ ಮೊದಲಾದ ಓಷಧಿಗಳಿಂದ ನಿಷ್ಪನ್ನವಾದ ಸಾರರೂಪವೂ, ಹಾಗೂ_

(ರಸಮ್) ಬುದ್ಧ್ಯಾನಂದಶೌರ್ಯಧೈರ್ಯಬಲಪರಾಕ್ರಮಾದಿಸದ್‌ಗುಣಪ್ರದಂ ;

(ರಸಮ್) ಬುದ್ಧಿ, ಆನಂದ, ಶೌರ್ಯ, ಧೈರ್ಯ, ಬಲ, ಪರಾಕ್ರಮ ಮೊದಲಾದ ಸದ್ಗುಣಗಳನ್ನು ಕೊಡುವಂತಹುದೂ ಆದ ರಸವನ್ನು ;

(ವ್ಯಪಿಬತ್) ಪಾನಂ ಕರೋತಿ ;

(ವ್ಯಪಿಬತ್) ಪಾನ ಮಾಡುತ್ತಾನೋ;

ಅಂದರೆ, ಯಾವ ರಾಜಪುರುಷನು, ಅಥವಾ ಪ್ರಜೆಗಳಲ್ಲಿನ ಜನರು ವೈದ್ಯಕಶಾಸ್ತ್ರರೀತಿಯಿಂದ ಕುಡಿಯುತ್ತಾರೋ ;

ತತ್ರ ಸ ಸಭಾಧ್ಯಕ್ಷೋ ರಾಜನ್ಯಃ ;

ಅಲ್ಲಿ ಆ ಸಭಾಧ್ಯಕ್ಷನಾದ ರಾಜನು ;

ಅಂದರೆ, ಆ ಸಭಾಸದರೂ ಮತ್ತು ಪ್ರಜೆಗಳಲ್ಲಿನ ಜನರೂ ;

(ಋತೇನ) ಯಥಾರ್ಥವೇದವಿಜ್ಞಾನೇನ ;

(ಋತೇನ) ಯಥಾರ್ಥವಾದ ವೇದಗಳ ವಿಜ್ಞಾನದಿಂದ;

ಅಂದರೆ, ವೇದವಿದ್ಯೆಯನ್ನು ಸರಿ ಸರಿಯಾಗಿ ತಿಳಿದುಕೊಂಡು ;

(ಸತ್ಯಮ್) ಧರ್ಮಂ ರಾಜವ್ಯವಹಾರಂ ಚ ;

(ಸತ್ಯಮ್) ಧರ್ಮವನ್ನೂ, ಹಾಗೂ ರಾಜ್ಯವ್ಯವಹಾರವನ್ನೂ ;

ಅಂದರೆ, ಧರ್ಮ, ಅರ್ಥ, ಕಾಮ ಮತ್ತು ಮೋಕ್ಷವನ್ನೂ ;

(ಇಂದ್ರಿಯಮ್) ಶುದ್ಧವಿದ್ಯಾಯುಕ್ತಂ ಶಾಂತಂ ಮನಃ ;

(ಇಂದ್ರಿಯಮ್) ಶುದ್ಧವಿದ್ಯೆಯಿಂದ ಕೂಡಿದುದೂ, ಶಾಂತವೂ ಆದ ಮನಸ್ಸನ್ನೂ ;

(ವಿಪಾನಮ್) ವಿವಿಧರಾಜಧರ್ಮರಕ್ಷಣಂ ;

(ವಿಪಾನಮ್) ವಿವಿಧ ರಾಜಧರ್ಮದ ರಕ್ಷಣೆಯನ್ನೂ ;

ಅಂದರೆ, ಪ್ರಜೆಗಳನ್ನು ಯಥಾವತ್ತಾಗಿ ರಕ್ಷಿಸುವುದನ್ನೂ ;

(ಶುಕ್ರಮ್) ಆಶುಸುಖಕರಂ ;

(ಶುಕ್ರಮ್) ಶೀಘ್ರವಾಗಿ ಸುಖ ಕೊಡುವುದನ್ನೂ ;

[ಮತ್ತು _]

(ಅಂಧಸಃ) ಶುದ್ಧಾನ್ನಸ್ಯೇಚ್ಛಾಹೇತುಂ ;

(ಅಂಧಸಃ) ಶುದ್ಧವಾದ ಅನ್ನದ ಇಚ್ಛೆಗೆ ಕಾರಣವಾದುದೂ ;

(ಪಯಃ) ಸರ್ವಪದಾರ್ಥಸಾರವಿಜ್ಞಾನಯುಕ್ತಂ ;

(ಪಯಃ) ಎಲ್ಲಾ ಪದಾರ್ಥಗಳ ಸಾರರೂಪ ವಿಜ್ಞಾನದಿಂದ ಕೂಡಿದುದೂ ;

(ಅಮೃತಮ್) ಮೋಕ್ಷಸಾಧಕಂ ;

(ಅಮೃತಮ್) ಮೋಕ್ಷವನ್ನು ಸಾಧಿಸುವಂತಹುದೂ ;

ಅಂದರೆ, ಮೋಕ್ಷದ ಜ್ಞಾನ ಮೊದಲಾದ ಸಾಧನಗಳನ್ನು [ಕೊಡುವಂತಹುದೂ;]

(ಮಧು) ಮಧುರಂ ಸತ್ಯಶೀಲಸ್ವಭಾವಯುಕ್ತಂ ;

(ಮಧು) ಮಧುರವಾದ ಸತ್ಯದ ಆಚರಣೆಯ ಸ್ವಭಾವದಿಂದ ಕೂಡಿದುದೂ ;

ಅಂದರೆ, ಮಧುರವಾಣಿ ಮತ್ತು ಒಳ್ಳೆಯ ನಡತೆ ಮೊದಲಾದ ಯಾವ ಶ್ರೇಷ್ಠಗುಣಗಳಿವೆಯೋ, ಅವುಗಳಿಂದ ಪರಿಪೂರ್ಣವಾದುದೂ ;

(ಇಂದ್ರಸ್ಯ) ಪರಮೈಶ್ವರ್ಯಯುಕ್ತಸ್ಯ ಸರ್ವ-ವ್ಯಾಪಕಾಂತರ್ಯಾಮಿನ ಈಶ್ವರಸ್ಯ ಕೃಪಯಾ ;

(ಇಂದ್ರಸ್ಯ) ಪರಮೈಶ್ವರ್ಯಯುಕ್ತನೂ, ಸರ್ವವ್ಯಾಪಕನೂ, ಅಂತರ್ಯಾಮಿಯೂ ಆದ ಈಶ್ವರನ ಕೃಪೆಯಿಂದ ;

(ಇಂದ್ರಿಯಮ್) ವಿಜ್ಞಾನಯುಕ್ತಂ ಮನಃ ಪ್ರಾಪ್ಯ ;

(ಇಂದ್ರಿಯಮ್) ವಿಜ್ಞಾನಯುಕ್ತವೂ ಆದ ಮನಸ್ಸನ್ನು ಪ್ರಾಪ್ತಮಾಡಿಕೊಂಡು ;

(ಇದಮ್) ಸರ್ವಂ ವ್ಯಾವಹಾರಿಕ-ಪಾರಮಾರ್ಥಿಕಂ ಸುಖಂ ಪ್ರಾಪ್ನೋತಿ.

(ಇದಮ್) ಎಲ್ಲಾ ವ್ಯಾವಹಾರಿಕ, ಹಾಗೂ ಪಾರಮಾರ್ಥಿಕ ಸುಖವನ್ನು ಪಡೆಯುತ್ತಾನೆ.

(ಪ್ರಜಾಪತಿಃ) ಪರಮೇಶ್ವರ ಏವಮಾಜ್ಞಾಪಯತಿ_

(ಪ್ರಜಾಪತಿಃ) ಎಂದರೆ, ಪರಮೇಶ್ವರನು ಆಜ್ಞಾಪಿಸುತ್ತಾನೇನೆಂದರೆ_

ಅಂದರೆ, ಪರಮೇಶ್ವರನು ಎಲ್ಲಾ ಮನುಷ್ಯರಿಗೂ, ಹಾಗೂ ರಾಜಪುರುಷರಿಗೂ ಆಜ್ಞೆ ಕೊಡುತ್ತಾನೇನೆಂದರೆ_

ಯಃ ಕ್ಷತ್ರಿಯಃ ಪ್ರಜಾಪಾಲನಾಧಿಕೃತೋ ಭವೇತ್, ಸ ಏವಂ ಪ್ರಜಾಪಾಲನಂ ಕುರ್ಯ್ಯಾತ್.

'ಯಾವ ಕ್ಷತ್ರಿಯನು ಪ್ರಜೆಗಳ ಪಾಲನೆಗಾಗಿ ಅಧಿಕಾರ ಕೊಡಲ್ಪಟ್ಟವನಾಗಿರುತ್ತಾನೋ, ಅವನು ಈ ರೀತಿಯಾಗಿ, ಪ್ರಜೆಗಳ ಪಾಲನೆಯನ್ನು ಮಾಡಬೇಕು!

'ಅಂದರೆ, ನೀವೆಲ್ಲರೂ ಮೇಲೆ ಹೇಳಿದ ವ್ಯವಹಾರಗಳನ್ನೂ, ಹಾಗೂ ವಿಜ್ಞಾನ, ವಿದ್ಯೆಗಳನ್ನೂ ಪ್ರಾಪ್ತ ಮಾಡಿಕೊಂಡು, ಧರ್ಮದಿಂದ ಪ್ರಜೆಗಳ ಪಾಲನೆ ಮಾಡುತ್ತಿರಿ!

(ಅನ್ನಾತ್ ಪರಿಸ್ರುತಃ) ಸ ಚಾಮೃತಾತ್ಮಕೋ ರಸ್ತೋಽನ್ನಾದ್ ಭೋಜ್ಯಾತ್ ಪದಾರ್ಥಾತ್ ಪರಿತಃ ಸರ್ವತಃ ಸ್ರುತಶ್ಚ್ಯುತೋ ಯುಕ್ತೋ ವಾ ಕಾರ್ಯ್ಯಃ.

'(ಅನ್ನಾತ್ ಪರಿಸ್ರುತಃ) ಮತ್ತು ಅವನು ಅಮೃತ ರೂಪವಾದ ರಸವು (ಅನ್ನಾತ್) ಊಟಮಾಡುವ ಪದಾರ್ಥದಿಂದ ಎಲ್ಲ ಕಡೆಯಿಂದಲೂ ಸ್ರವಿಸುತ್ತಿರುವಂತೆ, ಅಥವಾ ಕೂಡಿರುವಂತೆ ಮಾಡಬೇಕು!

'ಅಂದರೆ, ಮೇಲೆ ಹೇಳಿದ ಅಮೃತಸ್ವರೂಪ ರಸವನ್ನು ಉತ್ತಮ ಭೋಜನ ಪದಾರ್ಥಗಳೊಂದಿಗೆ ಬೆರೆಸಿಕೊಂಡು ಸೇವನೆ ಮಾಡುತ್ತಿರಿ!

ಯಥಾ ಪ್ರಜಾಯಾಮತ್ಯಂತಂ ಸುಖಂ ಸಿಧ್ಯೇತ್, ತಥೈವ ಕ್ಷತ್ರಿಯೇಣ ಕರ್ತ್ತವ್ಯಮ್ ॥ ೬ ॥

'ಪ್ರಜೆಗಳಿಗೆ ಅತ್ಯಂತ ಸುಖವು ಹೇಗೆ ದೊರಕ ಬಹುದೋ, ಹಾಗೆಯೇ ಕ್ಷತ್ರಿಯನು ಮಾಡಬೇಕು!

'ಅಂದರೆ, ಇದರಿಂದ ಪ್ರಜೆಗಳಲ್ಲಿ ಪೂರ್ಣ ಸುಖದ ಸಿದ್ಧಿಯಾಗಬೇಕು!' [೬]

'ಶನಿಗ್ರಹಪೂಜೆ'ಯ ಮಂತ್ರದ ಸತ್ಯಾರ್ಥ_ ಸುಖ-ಕಲ್ಯಾಣಪ್ರಾಪ್ತಿ!

[ಋಷಿಃ_ ದಧ್ಯಙಾಥರ್ವಣಃ ; ದೇವತಾ_ ಆಪಃ ; ಛಂದಃ_ ಗಾಯತ್ರೀ ; ಸ್ವರಃ_ ಷಡ್ಜಃ]

ಶನ್ನೋ ದೇವೀರಭಿಷ್ಟಯಽ ಆಪೋ ಭವಂತು ಪೀತಯೇ ।
ಶಂಯೋರಭಿ ಸ್ರವಂತು ನಃ ॥ ೭ ॥

[ಯಜುರ್ವೇದೇ ಅ. ೩೬, ಮಂ. ೧೨]

[ಅರ್ಥ:_ "ದಿವ್ಯವಾದ ವ್ಯಾಪಕ[ತತ್ತ್ವಗಳು] ನಮ್ಮ ಇಷ್ಟ[ಸಿದ್ಧಿ]ಗಾಗಿಯೂ, ಹಾಗೂ ತೃಪ್ತಿಗಾಗಿಯೂ, ಕಲ್ಯಾಣಕಾರಿಗಳಾಗಲಿ! ನಮ್ಮ ಸುತ್ತಲೂ ಕಲ್ಯಾಣದ [ಮಳೆಯನ್ನು] ಸುರಿಸಲಿ!"

(ಯಜುರ್ವೇದ: ೩೬. ೧೨)]

ಭಾಷ್ಯಮ್_

(ಶನ್ನೋ ದೇವೀ.)

ಭಾಷ್ಯ_

(ಶನ್ನೋ ದೇವೀ.)

"ಆಪ್ಲೃ ವ್ಯಾಪ್ತೌ" *

[ಅರ್ಥ: "ವ್ಯಾಪ್ತಿಯ ಅರ್ಥದಲ್ಲಿ 'ಆಪ್ಲೃ', ಎಂಬ ಧಾತು ಬರುತ್ತದೆ."]

ಅಸ್ಮಾದ್ ಧಾತೋರಪ್ಶಬ್ದಃ ಸಿಧ್ಯತಿ.

ಈ ಧಾತುವಿನಿಂದ 'ಆಪ್' ಶಬ್ದವು ಸಿದ್ಧವಾಗುತ್ತದೆ.

* ಕ್ಷೀರತರಂಗಿಣ್ಯಾಮ್ ೫. ೧೭_ಅನು.

* ಧಾತುಪಾಠ ೫. ೧೫ _ಅನು.

ಸ ನಿಯತಸ್ತ್ರೀಲಿಂಗೋ ಬಹುವಚನಾಂತಶ್ಚ.

ಅದು ಯಾವಾಗಲೂ ಸ್ತ್ರೀಲಿಂಗವೂ, ಮತ್ತು ಬಹುವಚನಾಂತವೂ ಆಗಿರುತ್ತದೆ.

'ದಿವು ಕ್ರೀಡಾದ್ಯರ್ಥಃ.' *

'ದಿವು' ಧಾತುವಿಗೆ ಕ್ರೀಡೆ ಮೊದಲಾದ ಅರ್ಥಗಳಿವೆ.*

ಇದರಿಂದ, 'ದೇವೀ' ಶಬ್ದವು ಸಿದ್ಧವಾಗುತ್ತದೆ.

(ದೇವೀಃ) ದೇವ್ಯ ಆಪಃ ಸರ್ವಪ್ರಕಾಶಕಃ, ಸರ್ವಾನಂದಪ್ರದಃ, ಸರ್ವವ್ಯಾಪಕ ಈಶ್ವರಃ ;

(ದೇವೀಃ) 'ದಿವ್ಯವಾದ ಆಪಃ', ಎಂದರೆ ಸರ್ವಪ್ರಕಾಶಕನೂ, ಸರ್ವರಿಗೂ ಆನಂದವನ್ನು ಕೊಡುವವನೂ, ಸರ್ವವ್ಯಾಪಕನೂ ಆದ ಈಶ್ವರನು ;

ಅಂದರೆ, ಯಾವ ಈಶ್ವರನು ಎಲ್ಲರ ಪ್ರಕಾಶ ಮಾಡುವವನೂ, ಎಲ್ಲರಿಗೂ ಆನಂದವನ್ನು ಕೊಡುವವನೂ, ಮತ್ತು (ಆಪಃ) ಸರ್ವವ್ಯಾಪಕನೂ ಆಗಿದ್ದಾನೋ ;

(ಅಭಿಷ್ಟಯೇ) ಇಷ್ಟಾನಂದಪ್ರಾಪ್ತಯೇ ;

(ಅಭಿಷ್ಟಯೇ) ಇಷ್ಟವಾದ ಆನಂದದ ಪ್ರಾಪ್ತಿಗಾಗಿಯೂ ;

(ಪೀತಯೇ) ಪೂರ್ಣಾನಂದಭೋಗೇನ ತೃಪ್ತಯೇ ;

(ಪೀತಯೇ) ಪೂರ್ಣವಾದ ಆನಂದದ ಭೋಗದಿಂದ [ಉಂಟಾಗುವ] ತೃಪ್ತಿಗಾಗಿಯೂ ;

(ನಃ) ಅಸ್ಮಭ್ಯಂ ;

(ನಃ) ನಮಗೆ ;

ಅಂದರೆ, ನಾವು ಸುಖಿಗಳಾಗುವುದಕ್ಕಾಗಿ ;

(ಶಮ್) ಕಲ್ಯಾಣಕಾರಿಕಾ ಭವಂತು.

(ಶಮ್) ಕಲ್ಯಾಣಕಾರಿಯಾಗಿ (ಭವಂತು) ಆಗಲಿ!

ಸ ಈಶ್ವರೋ ನಃ ಕಲ್ಯಾಣಂ ಭಾವಯತು, ಪ್ರಯಚ್ಛತು.

ಆ ಈಶ್ವರನು ನಮಗೆ ಕಲ್ಯಾಣವನ್ನು ಉಂಟುಮಾಡಿಸಲಿ, ಎಂದರೆ, ಕೊಡಲಿ!

ತಾ ಆಪೋ ದೇವ್ಯಃ ಸ ಏವೇಶ್ವರೋ ನೋऽಸ್ಮಾಕಮುಪರಿ (ಶಂಯೋಃ) ಸರ್ವತಃ ಸುಖಸ್ಯ ವೃಷ್ಟಿಂ ಕರೋತು.

ಆ ವ್ಯಾಪಕವಾದ ದಿವ್ಯಗುಣಗಳು, ಎಂದರೆ ಆ ಈಶ್ವರನೇ (ನಃ) ನಮ್ಮ ಮೇಲೆ (ಶಂಯೋಃ) ಎಲ್ಲ ಕಡೆಯಿಂದ ಸುಖದ ಮಳೆಯನ್ನು (ಅಭಿಸ್ರವಂತು) ಕರೆಯಲಿ!

* 'ದಿವು'ಧಾತೋಃ (ಧಾತುಪಾಠೇ ೪.೧) ಏತ ಅರ್ಥಾಸ್ತೇಷಾಂ ವ್ಯಾಖ್ಯಾನಾನಿ ಚ ೧೭೩ – ೧೭೫ ತಮೇಷು ಪೃಷ್ಠೇಷು ದ್ರಷ್ಟವ್ಯಾನಿ _ಅನು.

* 'ದಿವು' ಧಾತುವಿನ (ಧಾತುಪಾಠ: ೪.೧) ಅರ್ಥಗಳು ಮತ್ತು ಅವುಗಳ ವ್ಯಾಖ್ಯಾನಗಳು ೧೭೩ – ೧೭೫ ನೆಯ ಪುಟಗಳಲ್ಲಿ ಕೊಡಲ್ಪಟ್ಟಿವೆ _ಅನು.

ಅತ್ರ ಪ್ರಮಾಣಮ್_

ಈ ವಿಷಯದಲ್ಲಿ ಪ್ರಮಾಣವೇನೆಂದರೆ_

'ಅಪ್' ಶಬ್ದದ ಅರ್ಥ ಪರಮಾತ್ಮಾ!

[ಋಷಿಃ_ ಅಥರ್ವಾ ; ದೇವತಾ_ ಸ್ಕಂಭಃ, ಅಧ್ಯಾತ್ಮಮ್ ; ಛಂದಃ_ ಉಪರಿಷ್ಟಾದ್ ಬೃಹತೀ ; ಸ್ವರಃ_ ಮಧ್ಯಮಃ]

ಯತ್ರ ಲೋಕಾಂಶ್ಚ ಕೋಶಾಂಶ್ಚಾಪೋ ಬ್ರಹ್ಮ ಜನಾ ವಿದುಃ ।
ಅಸಚ್ಚ ಯತ್ರ ಸಚ್ಚಾಂತಃ ಸ್ಕಂಭಂ ತಂ ಬ್ರೂಹಿ ಕತಮಃ ಸ್ವಿದೇವ ಸಃ ॥

[ಅಥರ್ವವೇದೇ ಕಾಂ. ೧೦, ಅ. ೪, ವ. ೨೨, ಮಂ. ೧೦]

[ಅರ್ಥ:_ " ಜನರು ಎಲ್ಲಿ ಲೋಕಗಳನ್ನೂ, ಮತ್ತು ಕೋಶಗಳನ್ನೂ, ಮತ್ತು ವ್ಯಾಪಕವಾದ ಬ್ರಹ್ಮವನ್ನೂ ತಿಳಿದಿರುತ್ತಾರೋ, ಮತ್ತು ಎಲ್ಲಿ ಕಾರಣವೂ, ಹಾಗೂ ಕಾರ್ಯವೂ [ಪರಮೇಶ್ವರನ] ಒಳಗೆ [ಇದೆಯೋ,] ಅವನು ಇವರಲ್ಲಿ ಯಾವನು?, ಎಂದು ಆ ಜಗದ್ಧಾರಕನ ಬಗ್ಗೆ ಉಪದೇಶ ಮಾಡಿ!"

(ಅಥರ್ವವೇದಃ ೧೦. ೭. ೧೦)]

ಅನೇನ ವೇದಮಂತ್ರಪ್ರಮಾಣೇನಾಪ್‌ಛಬ್ದೇನ ಪರಮಾತ್ಮನೋ ಗ್ರಹಣಂ ಕ್ರಿಯತೇ.

ಈ ವೇದಮಂತ್ರದ ಪ್ರಮಾಣದಂತೆ, 'ಅಪ್' ಶಬ್ದದಿಂದ ಪರಮಾತ್ಮನ ಗ್ರಹಣ ಮಾಡಲಾಗುತ್ತದೆ.

ಅಂದರೆ, ಈ ಮಂತ್ರದಲ್ಲಿ 'ಆಪಃ' ಶಬ್ದದಿಂದ ಪರಮಾತ್ಮನನ್ನು ಸ್ವೀಕರಿಸುವುದಕ್ಕೆ ಪ್ರಮಾಣವೇನೆಂದರೆ_

ಭಾಷ್ಯಮ್_

ಭಾಷ್ಯ_

(ಯತ್ರ ಲೋಕಾಂಶ್ಚ.)

(ಯತ್ರ ಲೋಕಾಂಶ್ಚ.)

(ಆಪೋ ಬ್ರಹ್ಮ ಜನಾ ವಿದುಃ) ವಿದ್ವಾಂಸ ಆಪೋ ಬ್ರಹ್ಮಣೋ ನಾಮಾಸ್ತೀತಿ ಜಾನಂತಿ.

(ಜನಾಃ) ವಿದ್ವಾಂಸರು (ಆಪಃ ಬ್ರಹ್ಮ ವಿದುಃ) 'ಆಪಃ', ಎಂಬುದು ಬ್ರಹ್ಮನ ಹೆಸರಾಗಿದೆ, ಎಂದು ತಿಳಿದಿರುತ್ತಾರೆ.

ಅಂದರೆ, 'ಆಪಃ', ಎಂಬುದು ಪರಮಾತ್ಮನ ಹೆಸರು, ಎಂದು ವಿದ್ವಾಂಸರು ತಿಳಿದಿದ್ದಾರೆ.

ಪ್ರಶ್ನೆ_ ಕೇಳಿ, ಸ್ವಾಮಿ!

(ಯತ್ರ ಲೋಕಾಂಶ್ಚ ಕೋಶಾಂಶ್ಚ) ಯಸ್ಮಿನ್ ಪರಮೇಶ್ವರೇ ಸರ್ವಾನ್ ಭೂಗೋಲಾನ್ ನಿಧೀಂಶ್ಚ;

"(ಯತ್ರ) ಲೋಕಾಂಶ್ಚ ಕೋಶಾಂಶ್ಚ) ಯಾವ ಪರಮೇಶ್ವರನಲ್ಲಿ ಎಲ್ಲಾ ಭೂಗೋಲಗಳೂ, ಮತ್ತು ನಿಧಿಗಳೂ ;

"ಅಂದರೆ, ಯಾವನಲ್ಲಿ ಪೃಥಿವೀ ಮೊದಲಾದ ಎಲ್ಲಾ ಲೋಕಗಳೂ, ಮತ್ತು ಎಲ್ಲಾ ಪದಾರ್ಥಗಳೂ ಸ್ಥಿತವಾಗಿವೆಯೋ ; ಮತ್ತು _

(ಅಸಚ್ಚ ಯತ್ರ ಸಚ್ಚ) ಯಸ್ಮಿಂಶ್ಚಾನಿತ್ಯಂ ಕಾರ್ಯ್ಯಂ ಜಗದೇತಸ್ಯ [ನಿತ್ಯಂ] ಕಾರಣಂ ಚ ಸ್ಥಿತಂ ಜಾನಂತಿ ;

"(**ಅಸತ್ ಚ ಯತ್ರ ಸತ್ ಚ**) ಯಾವನಲ್ಲಿ ಅನಿತ್ಯವಾದ ಕಾರ್ಯರೂಪ ಜಗತ್ತೂ, ಹಾಗೂ ಇದರ ನಿತ್ಯವಾದ ಕಾರಣವೂ ಸ್ಥಿತವಾಗಿವೆ, ಎಂದು ತಿಳಿದಿರುತ್ತಾರೋ ;

"ಅಂದರೆ ಯಾವನಿಂದ, **ಅನಿತ್ಯವಾದ ಕಾರ್ಯ ಜಗತ್ತು**, ಮತ್ತು ಎಲ್ಲಾ ವಸ್ತುಗಳ **ನಿತ್ಯವಾದ ಕಾರಣ** _ ಈ ಎಲ್ಲವೂ ಸ್ಥಿತವಾಗಿವೆಯೋ ;

(ಸ್ಕಂಭಂ ತಂ ಬ್ರೂಹಿ ಕತಮಃ ಸ್ವಿದೇವ ಸಃ) ಸ ಜಗದ್ಧಾತಾ ಸರ್ವೇಷಾಂ ಪದಾರ್ಥಾನಾಂ ಮಧ್ಯೇ ಕತಮೋಽಸ್ತಿ?

"(**ಸ್ಕಂಭಂ ತಂ ಬ್ರೂಹಿ ಕತಮಃ ಸ್ವಿದ್ ಏವ ಸಃ**) ಎಲ್ಲಾ ಪದಾರ್ಥಗಳ ಮಧ್ಯೆ ಆ ಜಗದ್ಧಾರಕನು ಯಾವನಾಗಿದ್ದಾನೆ?

"ಅಂದರೆ, ಎಲ್ಲಾ ಲೋಕಗಳನ್ನೂ ಧಾರಣ ಮಾಡುವ ಅವನು ಯಾವ ತತ್ತ್ವವಾಗಿದ್ದಾನೆ?

ವಿದ್ವಂಸ್ತ್ವಂ ಬ್ರೂಹೀತಿ ಪೃಚ್ಛ್ಯತೇ.

"ವಿದ್ವಾಂಸನೇ! ನೀನು ಹೇಳು", ಎಂದು ಪ್ರಶ್ನಿಸಲಾಗುತ್ತದೆ.

ಉತ್ತರಮ್ _

ಉತ್ತರ _

(ಅಂತಃ) ಸ ಜಗದೀಶ್ವರಃ ಸರ್ವೇಷಾಂ ಜೀವಾದಿಪದಾರ್ಥಾನಾಮಾಭ್ಯಂತರೇಽಂತರ್ಯ್ಯಾಮಿ-ರೂಪೇಣಾವಸ್ಥಿತೋಽಸ್ತೀತಿ ಭವಂತೋ ಜಾನಂತು ॥ ೭ ॥

(**ಅಂತಃ**) ಆ ಜಗದೀಶ್ವರನು ಜೀವರೇ ಮೊದಲಾದ ಎಲ್ಲಾ ಪದಾರ್ಥಗಳ ಒಳಗೆ ಅಂತರ್ಯಾಮಿರೂಪದಿಂದ ಅವಸ್ಥಿತನಾಗಿದ್ದಾನೆ, ಎಂದು ತಾವೆಲ್ಲರೂ ತಿಳಿಯಿರಿ!

ಅಂದರೆ, ಅವನು ಎಲ್ಲಾ ಪೃಥಿವೀ ಮೊದಲಾದ ಲೋಕಗಳ, ಹಾಗೂ ಜೀವರ ಮಧ್ಯೆ ಅಂತರ್ಯಾಮಿ ರೂಪದಿಂದ ಪರಿಪೂರ್ಣನಾಗಿ ತುಂಬಿದ್ದಾನೆ!

ಹೀಗೆಂದು ತಿಳಿದುಕೊಂಡು, ನೀವೆಲ್ಲರೂ ಆ ಪರಮೇಶ್ವರನನ್ನು ನಿಮ್ಮ ಅಂತಃಕರಣದಲ್ಲಿಯೇ ಹುಡುಕಿರಿ! [೭]

'ರಾಹುಗ್ರಹಪೂಜೆ'ಯ ಮಂತ್ರದ ಸತ್ಯಾರ್ಥ_ ಪರಮಾತ್ಮನ ಸಾಕ್ಷಾತ್ಕಾರ!

[ಋಷಿಃ_ ವಾಮದೇವಃ ; ದೇವತಾ_ ಅಗ್ನಿಃ ; ಛಂದಃ_ ಗಾಯತ್ರೀ ; ಸ್ವರಃ_ ಷಡ್ಜಃ]

ಕಯಾ ನಶ್ಚಿತ್ರಽ ಆ ಭುವದೂತೀ ಸದಾವೃಧಃ ಸಖಾ ।
ಕಯಾ ಶಚಿಷ್ಠಯಾ ವೃತಾ ॥ ೮ ॥

[ಯಜುರ್ವೇದೇ ಅ. ೨೭, ಮಂ. ೩೯]

[ಅರ್ಥ:_ "ಅದ್ಭುತನೂ, ಸದಾ ವರ್ಧಮಾನನೂ, ಮಿತ್ರನೂ, ರಕ್ಷಕನೂ ಆದ [ಪರಮಾತ್ಮನು] ನಮಗೆ ಯಾವ ರೀತಿಯಿಂದ ಪ್ರತ್ಯಕ್ಷನಾಗುತ್ತಾನೆ? ಶ್ರೇಷ್ಠಜ್ಞಾನದ ಪ್ರಕಾಶದಿಂದ ಆವೃತನಾಗಿ!"

(ಯಜುರ್ವೇದ: ೨೭. ೩೯)]

ಭಾಷ್ಯಮ್_	ಭಾಷ್ಯ_
(ಕಯಾ) ಉಪಾಸನಾರೀತ್ಯಾ ;	(ಕಯಾ) ಉಪಾಸನೆಯ ರೀತಿಯಿಂದಲೂ ;
(ಶಚಿಷ್ಠಯಾ) ಅತಿಶಯೇನ ಸತ್ಕರ್ಮಾನುಷ್ಠಾನ-ಪ್ರಕಾರಯಾ ;	(ಶಚಿಷ್ಠಯಾ) ಅತಿಶಯವಾದ ಸತ್ಕರ್ಮಗಳ ಅನುಷ್ಠಾನದ ಪ್ರಕಾರದಿಂದಲೂ ; ಅಂದರೆ, ಸತ್ಯಧರ್ಮದ ಆಚರಣೆಯಿಂದಲೂ ;
(ವೃತಾ) ಶುಭಗುಣೇಷು ವರ್ತ್ತಮಾನಯಾ ;	(ವೃತಾ) ಶುಭಗುಣಗಳಲ್ಲಿ ವಿದ್ಯಮಾನನಾಗಿರುವುದರಿಂದಲೂ ; ಅಂದರೆ, ಸತ್ಯವಿದ್ಯೆ ಮೊದಲಾದ ಗುಣಗಳಲ್ಲಿ ಪ್ರವರ್ತಮಾನನಾಗಿರುವುದರಿಂದಲೂ ;
(ಕಯಾ) ಸರ್ವೋತ್ತಮಗುಣಾಲಂಕೃತಯಾ ಸಭಯಾ ಪ್ರಕಾಶಿತಃ ;	(ಕಯಾ) ಸರ್ವೋತ್ತಮವಾದ ಗುಣಗಳಿಂದಲೂ ಅಲಂಕೃತವಾದ 'ಸಭೆ'ಯಿಂದ ಪ್ರಕಾಶಿತನಾಗಿಯೂ ; ಅಂದರೆ, ಸುಖರೂಪ ವೃತ್ತಿಸಹಿತವಾದ 'ಸಭೆ'ಯಿಂದ ಪ್ರಕಾಶಿತನಾಗಿಯೂ ; ಸಭಾಸದರ ಸಹಿತನಾಗಿಯೂ ;
(ಚಿತ್ರಃ) ಅದ್ಭುತಾನಂತಶಕ್ತಿಮಾನ್ ;	(ಚಿತ್ರಃ) ಅದ್ಭುತವಾದ ಅನಂತಶಕ್ತಿಮಂತನಾಗಿಯೂ; ಅಂದರೆ, ಅದ್ಭುತಸ್ವರೂಪನಾಗಿಯೂ ;
(ಸದಾವೃಧಃ) ಸದಾನಂದೇನ ವರ್ಧಮಾನ ಇಂದ್ರಃ ಪರಮೇಶ್ವರಃ ;	(ಸದಾವೃಧಃ) ಯಾವಾಗಲೂ ಆನಂದದಿಂದ ವರ್ಧಿಸುತ್ತಿರುವ 'ಇಂದ್ರ', ಎಂದರೆ ಪರಮೇಶ್ವರನು ;

	ಅಂದರೆ, ಆನಂದಸ್ವರೂಪನೂ ಮತ್ತು ಆನಂದವನ್ನು ಹೆಚ್ಚಿಸುವವನೂ ಆದ ಪರಮೇಶ್ವರನು ;
(ನಃ) ಅಸ್ಮಾಕಂ ;	(ನಃ) ನಮಗೆ ; ಅಂದರೆ, ನಮ್ಮ ಆತ್ಮಗಳಲ್ಲಿ;
(ಸಖಾ) ಮಿತ್ರಃ⊛ ;	(ಸಖಾ) ಮಿತ್ರನಾಗಿ ;
(ಆ ಭುವತ್) ಯಥಾಭಿಮುಖೋ ಭೂತ್ವಾ ;	(ಆ ಭುವತ್) ಹೇಗೆ ಪ್ರತ್ಯಕ್ಷನಾಗಬಲ್ಲನೋ, ಅಂದರೆ, ಪ್ರಕಾಶಿತನಾಗಬಲ್ಲನೋ ;
(ಊತೀ) ಸ ಜಗದೀಶ್ವರಃ ;	(ಊತೀ) ಆ ಜಗದೀಶ್ವರನು ;
ಕೃಪಯಾ ಸರ್ವದಾ ಸಹಾಯಕರಣೇನಾಸ್ಮಾಕಂ ರಕ್ಷಕೋ ಭವೇತ್ ;	ಕೃಪೆಯಿಂದ ಯಾವಾಗಲೂ ಸಹಾಯವನ್ನು ಮಾಡುವುದರ ಮೂಲಕ ನಮ್ಮ ರಕ್ಷಕನಾಗಬಹುದೋ ;
ತಥೈವಾಸ್ಮಾಭಿಃ ಸ ಸತ್ಯಪ್ರೇಮಭಕ್ತ್ಯಾ ಸೇವನೀಯ ಇತಿ ॥ ೮ ॥	ಹಾಗೆಯೇ, ನಮ್ಮಿಂದಲೂ ಕೂಡ, ಅವನು ಸತ್ಯ-ಪ್ರೇಮ-ಭಕ್ತಿಗಳ ಮೂಲ ಸೇವಿಸಲ್ಪಡುವವನಾಗಿದ್ದಾನೆ.
	ಅಂದರೆ, ಆ ಜಗದೀಶ್ವರನು ಯಾವಾಗಲೂ ನಮ್ಮ ಸಹಾಯಕನಾಗಿ, ಕೃಪೆಯಿಂದ ನಮ್ಮ ರಕ್ಷಣೆಯನ್ನು ನಿತ್ಯವೂ ಮಾಡುತ್ತಾನೆ! [೮]

'ಕೇತುಗ್ರಹಪೂಜೆ'ಯ ಮಂತ್ರದ ಸತ್ಯಾರ್ಥ_ ಜ್ಞಾನ-ಧನಪ್ರಾಪ್ತಿ!

[ಋಷಿಃ_ ಮಧುಚ್ಛಂದಾಃ ; ದೇವತಾ_ ವಿದ್ವಾಂಸಃ ; ಛಂದಃ_ ಗಾಯತ್ರೀ ; ಸ್ವರಃ_ ಷಡ್ಜಃ]

ಕೇತುಂ ಕೃಣ್ವನ್ನಕೇತವೇ ಪೇಶೋ ಮರ್ಯ್ಯಾಽ ಅಪೇಶಸೇ ।
ಸಮುಷದ್ಭಿರಜಾಯಥಾಃ ॥ ೯ ॥

[ಯಜುರ್ವೇದೇ ಅ. ೨೯, ಮಂ. ೩೭]

[ಅರ್ಥ:_ " ಓ ಮನುಷ್ಯರೇ! [ಆಲಿಸಿ!] ಅಜ್ಞಾನಿಗೆ ಜ್ಞಾನವನ್ನೂ ಮತ್ತು ದರಿದ್ರನಿಗೆ ಧನವನ್ನೂ ಕೊಡುತ್ತಾ, [ಹೇ ಪರಮಾತ್ಮಾ!] ನೀನು ಕಾಮನೆ ಮಾಡುವವರೊಡನೆ [ವರ್ತಿಸುತ್ತಾ,] ಸುಪ್ರಸಿದ್ಧನಾಗಿದ್ದೀಯೆ! "

(ಯಜುರ್ವೇದಃ ೨೯. ೩೭)]

⊛ 'ಮಿತ್ರಮ್' _ಆ. ವೈ.

ಭಾಷ್ಯಮ್_

(ಕೇತುಂ ಕೃಣ್ವನ್.) ಹೇ (ಮರ್ಯ್ಯಾ) ಮನುಷ್ಯಾಃ!

(ಉಷದ್ಭಿಃ) ಪರಮೇಶ್ವರಂ ಕಾಮಯಮಾನೈಸ್ತ-ದಾಜ್ಞಾಯಾಂ ವರ್ತ್ತಮಾನೈರ್ವಿದ್ವದ್ಭಿರ್ಯುಷ್ಮಾಭಿಃ ಸಹ ಸಮಾಗಮೇ ಕೃತೇ ಸತ್ಯೇವ ;

(ಅಕೇತವೇ) ಅಜ್ಞಾನವಿನಾಶಾಯ ;

(ಕೇತುಮ್) ಪ್ರಜ್ಞಾನಮ್ ;

(ಅಪೇಶಸೇ) ದಾರಿದ್ರ್ಯವಿನಾಶಾಯ ;

(ಪೇಶಃ) ಚಕ್ರವರ್ತ್ತಿರಾಜ್ಯಾದಿಸುಖಸಂಪಾದಕಂ ಧನಂ ಚ ;

(ಕೃಣ್ವನ್) ಕುರ್ವನ್ ಸನ್ ;

ಜಗದೀಶ್ವರಃ (ಅಜಾಯಥಾಃ) ಪ್ರಸಿದ್ಧೋ ಭವತೀತಿ ವೇದಿತವ್ಯಮ್ ॥ ೬ ॥

ಭಾಷ್ಯ_

(ಕೇತುಂ ಕೃಣ್ವನ್.) ಎಲೈ (ಮರ್ಯ್ಯಾಃ) ಮನುಷ್ಯರೇ!

(ಉಷದ್ಭಿಃ) ಪರಮೇಶ್ವರನ ಕಾಮನೆ ಮಾಡುವವರೂ, ಹಾಗೂ ಅವನ ಆಜ್ಞೆಯಲ್ಲಿ ವರ್ತಿಸುವವರೂ ಆದ ವಿದ್ವಾಂಸರು ನಿಮ್ಮಗಳ ಜೊತೆ ಭೇಟಿ ಮಾಡಿದ ಕೂಡಲೇ ;

(ಅಕೇತವೇ) ಅಜ್ಞಾನದ ವಿನಾಶ ಮಾಡುವುದಕ್ಕಾಗಿ ;

(ಕೇತುಮ್) ಪ್ರಕೃಷ್ಟಜಾನವನ್ನೂ ; ಮತ್ತು_

(ಅಪೇಶಸೇ) ದರಿದ್ರತೆಯ ವಿನಾಶ ಮಾಡುವುದಕ್ಕಾಗಿ ;

(ಪೇಶಃ) ಚಕ್ರವರ್ತಿರಾಜ್ಯವೇ ಮೊದಲಾದ ಸುಖವನ್ನು ಸಂಪಾದಿಸುವಂತಹ ಧನವನ್ನೂ ;

(ಕೃಣ್ವನ್) ಕೊಡುತ್ತಾ ಇದ್ದು ;

ಜಗದೀಶ್ವರನು (ಅಜಾಯಥಾಃ) ಪ್ರಸಿದ್ಧನಾಗುತ್ತಾನೆ, ಎಂದು ತಿಳಿಯಬೇಕು!

* ಅಂದರೆ_

ಹೇ ವಿಜ್ಞಾನಸ್ವರೂಪ! ಅಜ್ಞಾನವನ್ನು ದೂರ ಮಾಡುವ ಬ್ರಹ್ಮನ್!

ನೀವು (ಕೇತುಂ ಕೃಣ್ವನ್) ನಮ್ಮೆಲ್ಲ ಮನುಷ್ಯರ ಆತ್ಮಗಳಲ್ಲಿ ಜ್ಞಾನದ ಪ್ರಕಾಶವನ್ನು ಮಾಡುತ್ತಿರಿ!

ಮತ್ತು (ಅಕೇತವೇ) ಅಜ್ಞಾನವನ್ನೂ, ಹಾಗೂ (ಅಪೇಶಸೇ) ದರಿದ್ರತೆಯನ್ನೂ ದೂರ ಮಾಡುವುದಕ್ಕಾಗಿ,

(ಪೇಶಃ) ವಿಜ್ಞಾನ, ಧನ ಮತ್ತು ಚಕ್ರವರ್ತಿರಾಜ್ಯವನ್ನು ಧರ್ಮಾತ್ಮರಿಗೆ ಕೊಡುತ್ತಿರಿ!

ಏಕೆಂದರೆ, ಇದರಿಂದ (ಮರ್ಯಾಃ) ಯಾರು ನಿಮ್ಮ ಉಪಾಸಕರಾದ ಜನರಿದ್ದಾರೋ, ಅವರು ಎಂದಿಗೂ ದುಃಖವನ್ನು ಹೊಂದದಿರಲಿ!

---

* ಈ ಮಂತ್ರದ ಇನ್ನೊಂದು ರೀತಿಯ ಅರ್ಥವು ಮೇಲೆ ಕೊಡಲ್ಪಟ್ಟಿದೆ. _ಅನು.

ಹೇ ಅಗ್ನಿ ಪರಮೇಶ್ವರ! **(ಉಷದ್ಭಿಃ)** ನಿಮ್ಮ ಆಜ್ಞೆಯಲ್ಲಿ ಯಾರು ರಮಣ ಮಾಡುವವರಾಗಿರುತ್ತಾರೋ, **(ಸಮ್ ಅಜಾಯಥಾಃ)** ಆ ಮನುಷ್ಯರಿಂದಲೇ ನೀವು ತಿಳಿಯಲ್ಪಡುವವರಾಗಿದ್ದೀರಿ! ಮತ್ತು ಆ ಧಾರ್ಮಿಕ ಪುರುಷರ ಅಂತಃಕರಣದಲ್ಲೇ ನೀವು ಚೆನ್ನಾಗಿ ಪ್ರಕಾಶಿತರಾಗುತ್ತೀರಿ! [೯]

ಇತಿ ಗ್ರಂಥಪ್ರಾಮಾಣ್ಯಾಪ್ರಾಮಾಣ್ಯ-ವಿಷಯಃ ॥

ಇಲ್ಲಿಗೆ ಗ್ರಂಥಗಳ ಪ್ರಮಾಣತ್ವ ಮತ್ತು ಅಪ್ರಮಾಣತ್ವ ಎಂಬ ವಿಷಯವು ಮುಗಿಯಿತು! [೨೫]

(೨೬) ಅಧಿಕಾರ-ಅನಧಿಕಾರ

ಅಥಾಧಿಕಾರಾನಧಿಕಾರವಿಷಯಃ ಸಂಕ್ಷೇಪತಃ

ಈಗ, ಅಧಿಕಾರ-ಅನಧಿಕಾರದ ವಿಷಯವು ಸಂಕ್ಷೇಪವಾಗಿ ಹೇಳಲ್ಪಡುತ್ತದೆ.

ವೇದಾದಿಶಾಸ್ತ್ರಗಳ ಅಧ್ಯಯನ ಎಲ್ಲರಿಗಾಗಿದೆ!

[ಪ್ರಶ್ನಃ_] ವೇದಾದಿಶಾಸ್ತ್ರಪಠನೇ ಸರ್ವೇಷಾಮಧಿಕಾರೋಽಸ್ತ್ಯಾಹೋಸ್ವಿನ್ನೇತಿ?

ಪ್ರಶ್ನೆ_ ವೇದಗಳೇ ಮೊದಲಾದ ಶಾಸ್ತ್ರಗಳನ್ನು ಓದುವ [ವಿಷಯ]ದಲ್ಲಿ ಎಲ್ಲರಿಗೂ ಅಧಿಕಾರವಿದೆಯೋ, ಅಥವಾ ಇಲ್ಲವೋ?

ಅಂದರೆ, ವೇದಾದಿಶಾಸ್ತ್ರಗಳನ್ನು ಓದುವ-ಓದಿಸುವ [ಮತ್ತು] ಕೇಳುವ, ಹಾಗೂ ಹೇಳುವ [ವಿಷಯ]ದಲ್ಲಿ ಎಲ್ಲಾ ಮನುಷ್ಯರಿಗೂ ಅಧಿಕಾರವಿದೆಯೋ, ಅಥವಾ ಇಲ್ಲವೋ?

[ಉತ್ತರಮ್_] ಸರ್ವೇಷಾಮಸ್ತಿ.

ಉತ್ತರ_ ಎಲ್ಲರಿಗೂ ಇದೆ!

ನೋಡಿ! ಈಶ್ವರನ ಯಾವ ಸೃಷ್ಟಿಯಿದೆಯೋ, ಅದರಲ್ಲಿ ಯಾರಿಗೂ ಅನಧಿಕಾರವಿರಲಾರದು!

ವೇದಾನಾಮೀಶ್ವರೋಕ್ತತ್ವಾತ್ ;

ಏಕೆಂದರೆ, ವೇದಗಳು ಈಶ್ವರೋಕ್ತವೂ ;

ಸರ್ವಮನುಷ್ಯೋಪಕಾರಾರ್ಥತ್ವಾತ್ ;

ಎಲ್ಲಾ ಮನುಷ್ಯರ ಉಪಕಾರಕ್ಕಾಗಿಯೂ ;

ಸತ್ಯವಿದ್ಯಾಪ್ರಕಾಶಕತ್ವಾಚ್ಚ.

ಹಾಗೂ ಸತ್ಯವಿದ್ಯೆಗಳ ಪ್ರಕಾಶಮಾಡುವಂತಹವೂ ಆಗಿವೆ.

ಯದ್ಯದ್ಧಿ ಖಲು ಪರಮೇಶ್ವರರಚಿತಂ ವಸ್ತ್ವಸ್ತಿ ತತ್ತತ್ ಸರ್ವಂ ಸರ್ವಾರ್ಥಮಸ್ತೀತಿ ವಿಜಾನೀಮಃ.

ಯಾವ ಯಾವುದಂತೂ ಪರಮೇಶ್ವರನಿಂದ ರಚಿತವಾದ ಪದಾರ್ಥವಾಗಿದೆಯೋ, ಅದೆಲ್ಲವೂ ಎಲ್ಲರ ಉಪಯೋಗಕ್ಕಾಗಿರುತ್ತದೆ, ಎಂದು ನಾವು ತಿಳಿಯುತ್ತೇವೆ.

ಅಂದರೆ, ಯಾವ ಯಾವ ಪದಾರ್ಥಗಳು ಈಶ್ವರನಿಂದ ಪ್ರಕಾಶಿತವಾಗಿವೆಯೋ, ಅವೆಲ್ಲವೂ ಎಲ್ಲರ ಉಪಕಾರಕ್ಕಾಗಿ ಇರುತ್ತವೆ.

ಪ್ರಶ್ನೆ_ ವೇದಗಳನ್ನು ಓದುವ ಅಧಿಕಾರವು ಕೇವಲ ಮೂರು ವರ್ಣಗಳಿಗೆ ಮಾತ್ರವೇ ಇವೆ! ಏಕೆಂದರೆ, ಶೂದ್ರರೇ ಮೊದಲಾದವರಿಗೆ ವೇದಾದಿಶಾಸ್ತ್ರಗಳನ್ನು ಓದುವ ಬಗ್ಗೆ ನಿಷೇಧ ಮಾಡಲಾಗುತ್ತದೆ. ಮತ್ತು ದ್ವಿಜರಿಗೆ ಓದಿಸುವ ವಿಷಯದಲ್ಲಿ ಕೂಡ, ಕೇವಲ ಬ್ರಾಹ್ಮಣರಿಗೇ ಅಧಿಕಾರವಿದೆ.

ಉತ್ತರ_ ಈ ಎಲ್ಲಾ ಮಾತೂ ಸುಳ್ಳಾಗಿದೆ! ಇದರ ವಿವೇಚನೆಯನ್ನೂ ಮತ್ತು ಉತ್ತರವನ್ನೂ ವರ್ಣ–ವಿಭಾಗದ ವಿಷಯದಲ್ಲಿ ಹೇಳಿಯೇ ಇದ್ದೇವೆ.*

ಅಲ್ಲಿ, ಮೂರ್ಖನ ಹೆಸರು '**ಶೂದ್ರ**', ಎಂದೂ, ಮತ್ತು ಅತಿಮೂರ್ಖನ ಹೆಸರು '**ಅತಿಶೂದ್ರ**', ಎಂದೂ ನಿರ್ಣಯಿಸಲಾಗಿದೆ. ಅವರ ಓದುವ-ಓದಿಸುವ ವಿಷಯದಲ್ಲಿ ನಿಷೇಧವನ್ನು ಏಕೆ ಮಾಡಲಾಗಿದೆಯೆಂದರೆ, ಅವರಿಗೆ ವಿದ್ಯೆಯ ಗ್ರಹಣ ಮಾಡುವ ಬುದ್ಧಿ ಇರುವುದಿಲ್ಲ!

ಪ್ರಶ್ನೆ_ ಹಾಗಾದರೆ, ಎಲ್ಲಾ ಸ್ತ್ರೀ-ಪುರುಷರಿಗೂ ವೇದಾದಿಶಾಸ್ತ್ರಗಳನ್ನು ಓದುವ-ಕೇಳುವ ಅಧಿಕಾರವಿದೆಯೋ?

ಉತ್ತರ_ ಎಲ್ಲರಿಗೂ ಇದೆ! ನೋಡಿ_

ಅತ್ರ ಪ್ರಮಾಣಮ್_

ಈ ವಿಷಯದಲ್ಲಿ ಪ್ರಮಾಣವೇನೆಂದರೆ_

ಅಂದರೆ, ಈ ಬಗ್ಗೆ ಯಜುರ್ವೇದದ ಪ್ರಮಾಣವನ್ನು ಬರೆಯುತ್ತೇವೆ_

ಸರ್ವವರ್ಣಸ್ಥರಿಗೂ ವೇದದ ಉಪದೇಶವನ್ನು ಮಾಡುತ್ತೇನೆ!

[ಋಷಿಃ_ ಲೌಗಾಕ್ಷಿಃ ; ದೇವತಾ_ಈಶ್ವರಃ ; ಛಂದಃ_ ಸ್ವರಾಡತ್ಯಷ್ಟಿಃ ; ಸ್ವರಃ_ ಗಾಂಧಾರಃ]

ಯಥೇಮಾಂ ವಾಚಂ ಕಲ್ಯಾಣೀಮಾವದಾನಿ ಜನೇಭ್ಯಃ ।
ಬ್ರಹ್ಮರಾಜನ್ಯಾಭ್ಯಾಗ್ಂ ಶೂದ್ರಾಯ ಚಾರ್ಯ್ಯಾಯ ಚ
ಸ್ವಾಯ ಚಾರಣಾಯ ಚ । ಪ್ರಿಯೋ ದೇವಾನಾಂ
ದಕ್ಷಿಣಾಯೈ ದಾತುರಿಹ ಭೂಯಾಸಮಯಂ ಮೇ ಕಾಮಃ
ಸಮೃಧ್ಯತಾಮುಪ ಮಾದೋ ನಮತು ॥

[ಯಜುರ್ವೇದೇ ಅ. ೨೬, ಮಂ. ೨]

* ೨೩ ನೆಯ ಅಧ್ಯಾಯವಾದ '**ವರ್ಣಾಶ್ರಮ**'ದಲ್ಲಿ ಪುಟ ೬೯೭ - ೬೯೮ ನ್ನು ನೋಡಿ ಮತ್ತು '**ಸತ್ಯಾರ್ಥಪ್ರಕಾಶ**' ತೃತೀಯ ಸಮುಲ್ಲಾಸ ಪುಟ ೧೨೬ - ೧೩೦ ನ್ನೂ ನೋಡಿ _ಅನು.

[ಅರ್ಥ:_ "ಹೇಗೆ ನಾನು ಈ ಕಲ್ಯಾಣಮಯಿಯಾದ ವಾಣಿಯನ್ನು ಜನರಿಗೆ, ಎಂದರೆ ಬ್ರಾಹ್ಮಣ-ಕ್ಷತ್ರಿಯರಿಗೂ ಮತ್ತು ಶೂದ್ರನಿಗೂ, ಮತ್ತು ವೈಶ್ಯನಿಗೂ, ಮತ್ತು ತನ್ನವರಿಗೂ, ಹಾಗೂ ಅನ್ಯರಿಗೂ ಉಪದೇಶಿಸುವೆನೋ, [ಹಾಗೆ ನೀವೂ ಮಾಡಿರಿ!] ಈ ಲೋಕದಲ್ಲಿ ದಾನಿಯ ದಕ್ಷತೆಗಾಗಿ ವಿದ್ವಾಂಸರಿಗೆ ನಾನು ಪ್ರಿಯನಾಗಲಿ! ನನ್ನ ಈ ಕಾಮನೆಯು ಚೆನ್ನಾಗಿ ವರ್ಧಿಸಲಿ! ನನಗೆ ಸುಖವು ಪ್ರಾಪ್ತವಾಗಲಿ!"

(ಯಜುರ್ವೇದ: ೨೬. ೨)]

ಭಾಷ್ಯಮ್_

ಅಸ್ಯಾಭಿಪ್ರಾಯಃ_

ಪರಮೇಶ್ವರಃ ಸರ್ವಮನುಷ್ಯೈರ್ವೇದಾಃ ಪಠನೀಯಾಃ ಪಾಠ್ಯಾ ಇತ್ಯಾಜ್ಞಾಂ ದದಾತಿ.

ತದ್ಯಥಾ_

(ಯಥೇಮಾಂ.) (ಯಥಾ) ಯೇನ ಪ್ರಕಾರೇಣ ;

(ಇಮಾಮ್) ಪ್ರತ್ಯಕ್ಷಭೂತಾಮೃಗ್ವೇದಾದಿವೇದ-ಚತುಷ್ಟಯೀಂ ;

(ಕಲ್ಯಾಣೀಮ್) ಕಲ್ಯಾಣಸಾಧಿಕಾಂ ;

(ವಾಚಮ್) ವಾಣೀಂ ;

(ಜನೇಭ್ಯಃ) ಸರ್ವೇಭ್ಯೋ ಮನುಷ್ಯೇಭ್ಯೋಽರ್ಥಾತ್ ಸಕಲಜೀವೋಪಕಾರಾಯ ;

(ಆ ವದಾನಿ) ಆಸಮಂತಾದ್ ಉಪದಿಶಾನಿ ;

ತಥೈವ ಸರ್ವೈರ್ವಿದ್ವದ್ಭಿಃ ಸರ್ವಮನುಷ್ಯೇಭ್ಯೋ ವೇದಚತುಷ್ಟಯೀ ವಾಗುಪದೇಷ್ಟವ್ಯೇತಿ.

ಭಾಷ್ಯ_

ಈ ಮಂತ್ರದ ಅಭಿಪ್ರಾಯವೇನೆಂದರೆ_

ಮನುಷ್ಯರೆಲ್ಲರಿಂದಲೂ ವೇದಗಳು ಓದಲ್ಪಡಬೇಕು, ಹಾಗೂ ಓದಿಸಲ್ಪಡಬೇಕು, ಎಂದು ಪರಮೇಶ್ವರನು ಆಜ್ಞೆಯನ್ನು ಕೊಡುತ್ತಾನೆ.

ಅಂದರೆ, ವೇದಗಳನ್ನು ಓದುವ-ಓದಿಸುವ ಅಧಿಕಾರವು ಮನುಷ್ಯರೆಲ್ಲರಿಗೂ ಇದೆ. ಮತ್ತು ಅವುಗಳನ್ನು ಕಲಿಸುವ ಅಧಿಕಾರವು ವಿದ್ವಾಂಸರಿಗೆ ಇದೆ. ಅದಕ್ಕಾಗಿ ಈಶ್ವರನು ಆಜ್ಞೆ ಮಾಡುತ್ತಾನೆ.

ಅದು ಹೇಗೆಂದರೆ_

(ಯಥೇಮಾಂ) (ಯಥಾ) ಯಾವ ರೀತಿಯಿಂದ;

(ಇಮಾಮ್) ಪ್ರಕಟಿಸಲ್ಪಟ್ಟಿರುವ [ಈ] ಋಗ್ವೇದವೇ ಮೊದಲಾದ ನಾಲ್ಕು ವೇದಗಳ ;

(ಕಲ್ಯಾಣೀಮ್) ಕಲ್ಯಾಣವನ್ನು ಸಾಧಿಸುವಂತಹ;

(ವಾಚಮ್) ವಾಣಿಯನ್ನು ;

(ಜನೇಭ್ಯಃ) ಎಲ್ಲಾ ಮನುಷ್ಯರಿಗೂ ಎಂದರೆ, ಸಮಸ್ತ ಜೀವರ ಉಪಕಾರಕ್ಕಾಗಿ ;

(ಆ ವದಾನಿ) ನಾನು ಸಮಗ್ರವಾಗಿ ಉಪದೇಶಿಸುವೆನೋ ;

ಹಾಗೆಯೇ, ಎಲ್ಲಾ ವಿದ್ವಾಂಸರಿಂದಲೂ ಕೂಡ, ಮನುಷ್ಯರೆಲ್ಲರಿಗೆ ನಾಲ್ಕು ವೇದಗಳ ವಾಣಿಯು ಉಪದೇಶಿಸಲ್ಪಡಬೇಕು!

ಅಂದರೆ, ಎಲೈ ಮನುಷ್ಯರೇ! ಯಾವ ರೀತಿಯಿಂದ ನಾನು ನಿಮಗೆ, ನಾಲ್ಕೂ ವೇದಗಳನ್ನು ಉಪದೇಶಿಸುತ್ತೇನೋ, ಅದೇ ರೀತಿಯಿಂದ ನೀವೂ ಕೂಡ, ಅವುಗಳನ್ನು ಓದಿ, ಎಲ್ಲಾ ಮನುಷ್ಯರಿಗೂ ಓದಿಸುತ್ತಾ, ಮತ್ತು ಉಪದೇಶಿಸುತ್ತಾ ಇರಿ!

ಎಂದರೆ, ಹೇಗೆ ನಾನು ಮನುಷ್ಯರೆಲ್ಲರಿಗೆ ವೇದಗಳ ಉಪದೇಶ ಮಾಡುತ್ತೇನೋ, ಹಾಗೆಯೇ ನೀವೂ ಕೂಡ, ಯಾವಾಗಲೂ ಮಾಡುತ್ತಿರಿ!

ಏಕೆಂದರೆ, ಈ ನಾಲ್ಕೂ ವೇದರೂಪ ವಾಣಿಯು ಎಲ್ಲರ ಕಲ್ಯಾಣವನ್ನು ಉಂಟುಮಾಡುವಂತಹುದಾಗಿದೆ!

ಜನರು, ಎಂದರೆ ದ್ವಿಜಮಾತ್ರರು ಎಂದರ್ಥವಲ್ಲ!

ಅತ್ರ ಕೇಚಿದೇವಂ ಬ್ರೂಯಾತ್_

ಇಲ್ಲಿ ಯಾರೋ ಪ್ರಶ್ನಿಸುತ್ತಾರೇನೆಂದರೆ_

ಪ್ರಶ್ನೆ_

ಜನೇಭ್ಯೋ ದ್ವಿಜೇಭ್ಯ ಇತ್ಯಧ್ಯಾಹಾರ್ಯ್ಯಂ ;

'ಜನರಿಗೆ', ಎಂಬುದಕ್ಕೆ **'ದ್ವಿಜರಿಗೆ'**, ಎಂದು ಅಧ್ಯಾಹಾರವನ್ನು ತರಬೇಕು!

ಅಂದರೆ, **'ಜನೇಭ್ಯಃ'**_ ಈ ಪದದಿಂದ ದ್ವಿಜರನ್ನೇ ಗ್ರಹಿಸಬೇಕು!

ವೇದಾಧ್ಯಯನಾಧ್ಯಾಪನೇ ತೇಷಾಮೇವಾಧಿಕಾರತ್ವಾತ್.

ಏಕೆಂದರೆ, ವೇದಗಳ ಅಧ್ಯಯನ-ಅಧ್ಯಾಪನೆಗೆ ಅವರದೇ ಅಧಿಕಾರವಿರುತ್ತದೆ!

ಅಂದರೆ, ಎಲ್ಲೆಲ್ಲಿ ಸೂತ್ರಗಳಲ್ಲಿ ಮತ್ತು ಸ್ಮೃತಿಗಳಲ್ಲಿ ಓದುವ ಅಧಿಕಾರವನ್ನು ಬರೆಯಲಾಗಿದೆಯೋ, ಅಲ್ಲಲ್ಲಿ ಕೇವಲ ದ್ವಿಜರದೇ [ಅಧಿಕಾರವನ್ನು] ಅಂಗೀಕರಿಸಲಾಗಿದೆ!

[ಉತ್ತರಮ್_] ನೈವ ಶಕ್ಯಮ್ ;

ಉತ್ತರ_ ಅದು ಸಾಧ್ಯವೇ ಇಲ್ಲ!

ಅಂದರೆ, ಈ ಮಾತು ಸರಿಯಲ್ಲ! ಏಕೆಂದರೆ, ಈಶ್ವರನ ಅಭಿಪ್ರಾಯವು ದ್ವಿಜರಿಗೇ [ಅಧಿಕಾರ-] ಗ್ರಹಣದ್ದು ಆಗಿದ್ದಿದ್ದರೆ, **ಮನುಷ್ಯಮಾತ್ರರಿಗೆ** ಅವನ್ನು ಓದುವ ಅಧಿಕಾರವನ್ನು ಎಂದಿಗೂ ಕೊಡುತ್ತಿರಲಿಲ್ಲ!

ಉತ್ತರಮಂತ್ರಭಾಗಾರ್ಥವಿರೋಧಾತ್.

ಏಕೆಂದರೆ, [ಈ] ಮಂತ್ರದ ಉತ್ತರಭಾಗದಲ್ಲಿ [ಇದಕ್ಕೆ]* ವಿರೋಧವಿದೆ.

ತದ್ಯಥಾ_

ಅದು ಹೇಗೆಂದರೆ_

ಕಸ್ಯ ಕಸ್ಯ ವೇದಾಧ್ಯಯನಶ್ರವಣೇಽಧಿಕಾರೋಽಸ್ತೀತ್ಯಾಕಾಂಕ್ಷಾಯಾಮಿದಮುಚ್ಯತೇ_

ಯಾರು ಯಾರಿಗೆ ವೇದಗಳ ಅಧ್ಯಯನ-ಶ್ರವಣಗಳ ಅಧಿಕಾರವಿದೆ, ಎಂಬ ಪ್ರಶ್ನೆಗೆ ಉತ್ತರವನ್ನು ಹೇಳಲಾಗಿದೆಯೇನೆಂದರೆ_

ಅಂದರೆ, ಈ ಮಂತ್ರದ [ಉತ್ತರಭಾಗದಲ್ಲಿ] ಪ್ರತ್ಯಕ್ಷವಿಧಾನವೇನಿದೆಯೆಂದರೆ_

(ಬ್ರಹ್ಮರಾಜನ್ಯಾಭ್ಯಾಗ್ಂ) ಬ್ರಾಹ್ಮಣಕ್ಷತ್ರಿಯಾಭ್ಯಾಂ ;

(ಬ್ರಹ್ಮರಾಜನ್ಯಾಭ್ಯಾಗ್ಂ) ಬ್ರಾಹ್ಮಣನಿಗೂ-ಕ್ಷತ್ರಿಯನಿಗೂ ;

(ಅರ್ಯ್ಯಾಯ) ವೈಶ್ಯಾಯ ;

(ಅರ್ಯ್ಯಾಯ) ವೈಶ್ಯನಿಗೂ ;

(ಶೂದ್ರಾಯ) ;

(ಶೂದ್ರಾಯ) ಶೂದ್ರನಿಗೂ ;

(ಚಾರಣಾಯ) ಅತಿಶೂದ್ರಾಯಾಂತ್ಯಜಾಯ ;

(ಚ ಅರಣಾಯ) ಮತ್ತು ಅತಿಶೂದ್ರ, ಎಂದರೆ ಅಂತ್ಯಜನಿಗೂ ;

(ಸ್ವಾಯ) ಸ್ವಾತ್ಮೀಯಾಯ ಪುತ್ರಾಯ, ಭೃತ್ಯಾಯ ಚ.

(ಸ್ವಾಯ) ತನ್ನ ಆತ್ಮೀಯನಾದವನಿಗೂ, ಪುತ್ರನಿಗೂ, ಮತ್ತು ಸೇವಕನಿಗೂ ಕೂಡ, [ಅಧಿಕಾರವಿದೆ.]

ಅಂದರೆ, ವೇದಾಧಿಕಾರವು ಹೇಗೆ ಬ್ರಾಹ್ಮಣ ವರ್ಣಕ್ಕಿದೆಯೋ, ಹಾಗೆಯೇ, ಕ್ಷತ್ರಿಯ, ಅರ್ಯ್ಯ = ವೈಶ್ಯ, ಶೂದ್ರ, ಪುತ್ರ, ಭೃತ್ಯ ಮತ್ತು ಅತಿಶೂದ್ರನಿಗೂ ಕೂಡ, ಸಮಾನವಾಗಿದೆ. ಏಕೆಂದರೆ, ವೇದವು ಈಶ್ವರನಿಂದ ಪ್ರಕಾಶಿತವಾಗಿದೆ.

ಸರ್ವರ ಸುಖಕ್ಕಾಗಿ ಎಲ್ಲರೂ ವೇದಗಳ ಪ್ರಚಾರ ಮಾಡಬೇಕು!

ಯಾವುದು ವಿದ್ಯೆಯ ಪುಸ್ತಕವಾಗಿರುತ್ತದೋ, ಅದು ಎಲ್ಲರ ಹಿತಕಾರಕವಾಗಿರುತ್ತದೆ! ಮತ್ತು ಈಶ್ವರನಿಂದ ರಚಿತವಾದ ಪದಾರ್ಥಗಳ ದಾಯಭಾಗಿಗಳು ಮನುಷ್ಯರೆಲ್ಲರೂ ಆಗಿರುತ್ತಾರೆ! ಆದುದರಿಂದ_

ಸರ್ವೈಃ ಸೈವಾ ವೇದಚತುಷ್ಟಯೀ ಶ್ರಾವ್ಯೇತಿ.

ಎಲ್ಲರಿಂದಲೂ ಈ ನಾಲ್ಕು ವೇದಗಳು ಶ್ರವಣ ಮಾಡಲ್ಪಡಬೇಕು!

* ಎಂದರೆ, ನಿಮ್ಮ ಅಭಿಪ್ರಾಯಕ್ಕೆ _ಅನು.

ಅಂದರೆ, ಅವುಗಳನ್ನು ತಿಳಿಯುವುದು ಮನುಷ್ಯರೆಲ್ಲರಿಗೂ ಉಚಿತವಾಗಿದೆ. **ಏಕೆಂದರೆ, ಎಲ್ಲರ ತಂದೆಯಾದವನ ಆ ಆಸ್ತಿಯು [ಅವನ] ಎಲ್ಲಾ ಪುತ್ರರಿಗಾಗಿ ಇರುತ್ತದೆ; ಯಾವುದೋ ವರ್ಣವಿಶೇಷಕ್ಕಾಗಿ ಅಲ್ಲ!**

(ಪ್ರಿಯೋ ದೇವಾನಾಂ ದಕ್ಷಿಣಾಯೈ ದಾತು-ರಿಹ) ಯಥಾಹಮೀಶ್ವರಃ ಪಕ್ಷಪಾತಂ ವಿಹಾಯ ಸರ್ವೋಪಕಾರಕರಣೇನ ಸಹ ವರ್ತ್ತಮಾನಃ ಸನ್ ;

(ಪ್ರಿಯೋ ದೇವಾನಾಮ್) ಹೇಗೆ, ಈಶ್ವರನಾದ ನಾನು ಪಕ್ಷಪಾತವನ್ನು ಬಿಟ್ಟು, ಎಲ್ಲರಿಗೂ ಉಪಕಾರ ಮಾಡುವುದರೊಡನೆ ವರ್ತಮಾನನಾಗಿರುತ್ತಾ ಇದ್ದು ;

ದೇವಾನಾಂ ವಿದುಷಾಂ ಪ್ರಿಯಃ ;

ವಿದ್ವಾಂಸರುಗಳಿಗೆ ಪ್ರಿಯನೂ; ಮತ್ತು_

ದಾತುರ್ದಕ್ಷಿಣಾಯೈ ಸರ್ವಸ್ವದಾನಾಯ ಪ್ರಿಯಶ್ಚ ಭೂಯಾಸಂ ಸ್ಯಾಮ್;

(ದಾತುಃ ದಕ್ಷಿಣಾಯೈ) ಎಲ್ಲವನ್ನೂ ದಾನ ಮಾಡುವವನಿಗೂ ಕೂಡ, ಪ್ರಿಯನೂ ಆಗುವೆನೋ ;

ಅಂದರೆ, ಹೇಗೆ ನಾನು ಈ ವೇದರೂಪ ಸತ್ಯವಿದ್ಯೆಯ ಉಪದೇಶವನ್ನು ಮಾಡಿ, ವಿದ್ವಾಂಸರುಗಳ ಆತ್ಮಗಳಲ್ಲಿ ಪ್ರಿಯನಾಗುತ್ತಿದ್ದೇನೆಯೋ, ಮತ್ತು ಹೇಗೆ ದಾನಿಗಳಿಗೂ, ಹಾಗೂ ಶೀಲವಂತರಾದ ಜನರಿಗೂ ಪ್ರಿಯನಾಗುತ್ತೇನೋ ;

ತಥೈವ ಭವದ್ಭಿಃ ಸರ್ವೈರ್ವಿದ್ವದ್ಭಿರಪಿ ಸರ್ವೋಪ-ಕಾರಂ ಪ್ರಿಯಾಚರಣಂ ಮತ್ವಾ ಸರ್ವೇಭ್ಯೋ ವೇದ-ವಾಣೀ ಶ್ರಾವ್ಯೇತಿ.

ಹಾಗೆಯೇ, ನಿಮ್ಮಗಳಿಂದಲೂ ಮತ್ತು ವಿದ್ವಾಂಸರುಗಳೆಲ್ಲರಿಂದಲೂ ಕೂಡ, ಎಲ್ಲರ ಉಪಕಾರವನ್ನೂ, ಹಾಗೂ ಪ್ರಿಯಚರಣೆಯನ್ನೂ ಅಂಗೀಕರಿಸಿ, ಎಲ್ಲರಿಗೂ ವೇದವಾಣಿಯನ್ನು ಶ್ರವಣ ಮಾಡಿಸಬೇಕು!

ಅಂದರೆ, ನೀವೆಲ್ಲರೂ ಕೂಡ, ಪಕ್ಷಪಾತ ರಹಿತರಾಗಿ, ವೇದವಿದ್ಯೆಯನ್ನು ಶ್ರವಣ ಮಾಡಿಸಿ, ಎಲ್ಲರಿಗೂ ಪ್ರಿಯರಾಗಿರಿ!

ಯಥಾಯಂ (ಮೇ) ಮಮ ಕಾಮಃ ಸಮೃಧ್ಯತೇ ;

ಹೇಗೆ ಈ (ಮೇ) ನನ್ನ ಕಾಮನೆಯು ವರ್ಧಿಸುತ್ತದೋ ;

ತಥೈವೈವಂ ಕುರ್ವತಾಂ ಭವತಾಮ್ ;

ಹಾಗೆಯೇ, ಈ ರೀತಿಯಾಗಿ ಮಾಡುತ್ತಿರುವ ನಿಮ್ಮಗಳ ;

(ಅಯಂ ಕಾಮಃ ಸಮೃಧ್ಯತಾಮ್) ಇಯಮಿಷ್ಟ-ಸುಖೇಚ್ಛಾ ಸಮೃಧ್ಯತಾಂ ಸಮ್ಯಗ್ ವರ್ಧತಾಮ್.

(ಅಯಂ ಕಾಮಃ) ಈ ಇಷ್ಟಸುಖದ ಇಚ್ಛೆಯು (ಸಮೃಧ್ಯತಾಮ್) ಚೆನ್ನಾಗಿ ವರ್ಧಿಸಲಿ!

ಅಂದರೆ, ಹೇಗೆ ವೇದಗಳ ಪ್ರಚಾರ ರೂಪದ ಈ ನನ್ನ ಕಾರ್ಯವು ಜಗತ್ತಿನಲ್ಲಿ ಯಥಾವತ್ತಾಗಿ ಪ್ರಚಾರಿತವಾಗುತ್ತಿದೆಯೋ, ಇದೇ ಪ್ರಕಾರದ ಇಚ್ಛೆಯನ್ನು ನೀವುಗಳೂ ಕೂಡ, ಮಾಡಿರಿ!

ಇದರಿಂದ, ಈ ವಿದ್ಯೆಯು ಮುಂದೆ ಕೂಡ, ಮನುಷ್ಯರೆಲ್ಲರಲ್ಲೂ ಪ್ರಕಾಶಿತವಾಗುತ್ತಿರಲಿ!

ಯಥಾದಃ ಸರ್ವಮಿಷ್ಟಸುಖಂ ಮಾಮುಪ-ನಮತಿ ;

ಹೇಗೆ (ಅದಃ) ಎಲ್ಲಾ ಇಷ್ಟಸುಖವೂ ನನ್ನ ವಶಕ್ಕೆ ಆಧೀನವಾಗಿದೆಯೋ ;

(ಉಪ ಮಾದೋ ನಮತು) ತಥೈವ ಭವತೋಽಪಿ ಸರ್ವಮಿಷ್ಟಸುಖಮುಪನಮತು ಸಮ್ಯಕ್ ಪ್ರಾಪ್ನೋತ್ವಿತಿ.

(ಉಪ ಮಾ ಅದಃ ನಮತು) ಹಾಗೆಯೇ, ನಿಮ್ಮಗಳಿಗೆ ಕೂಡ, ಇಷ್ಟಸುಖವೆಲ್ಲವೂ (ಉಪ ನಮತು) ಚೆನ್ನಾಗಿ ಪ್ರಾಪ್ತವಾಗಲಿ!

ಅಂದರೆ, ಹೇಗೆ ನನ್ನಲ್ಲಿ ಅನಂತವಿದ್ಯೆಯಿಂದ ಎಲ್ಲಾ ಸುಖಗಳೂ ಇವೆಯೋ, ಹಾಗೆಯೇ, ಯಾವನೇ ಆಗಲೀ, ವಿದ್ಯೆಯ ಗ್ರಹಣವನ್ನೂ, ಮತ್ತು ಪ್ರಚಾರವನ್ನೂ ಮಾಡುತ್ತಾನೆಯಾದರೆ, ಅವನಿಗೂ ಕೂಡ, ಮೋಕ್ಷದ, ಹಾಗೂ ಜಗತ್ತಿನ ಸುಖವು ದೊರಕುವುದು!

ವೇದಪ್ರಚಾರಕರಿಗೆ ಈಶ್ವರನ ಆಶೀರ್ವಾದ

ಮಯಾ ಯುಷ್ಮಭ್ಯಮಯಮಾಶೀರ್ವಾದೋ ದೀಯತ ಇತಿ ನಿಶ್ಚೇತವ್ಯಮ್.

ನನ್ನಿಂದ ನಿಮ್ಮಗಳಿಗೆ ಈ ಆಶೀರ್ವಾದವು ಕೊಡಲಾಗುತ್ತಿದೆ, ಎಂದು ನಿಶ್ಚಯವಾಗಿ [ತಿಳಿಯಿರಿ_]

ಯಥಾ ಮಯಾ ವೇದವಿದ್ಯಾ ಸರ್ವಾರ್ಥಾ ಪ್ರಕಾಶಿತಾ, ತಥೈವ ಯುಷ್ಮಾಭಿರಪಿ ಸರ್ವಾರ್ಥೋಪ-ಕರ್ತ್ತವ್ಯಾ.

"ಹೇಗೆ ನನ್ನಿಂದ ವೇದವಿದ್ಯೆಯು ಎಲ್ಲರ ಪ್ರಯೋಜನಕ್ಕಾಗಿ ಪ್ರಕಾಶಿಸಲ್ಪಟ್ಟಿದೆಯೋ, ಹಾಗೆಯೇ ನಿಮ್ಮಿಂದಲೂ ಕೂಡ, ಎಲ್ಲರ ಪ್ರಯೋಜನಕ್ಕಾಗಿ ಉಪಕಾರವು ಮಾಡಲ್ಪಡಬೇಕು!

ನಾತ್ರ ವೈಷಮ್ಯಂ ಕಿಂಚಿತ್ ಕರ್ತ್ತವ್ಯಮಿತಿ.

"ಈ ವಿಷಯದಲ್ಲಿ ವಿರುದ್ಧವಾಗಿ ಸ್ವಲ್ಪವೂ ಆಚರಿಸಲ್ಪಡಬಾರದು!

ಕುತಃ?

"ಏಕೆಂದರೆ_

ಯಥಾ ಮಮ ಸರ್ವಪ್ರಿಯಾರ್ಥಾ ಪಕ್ಷಪಾತ-ರಹಿತಾ ಚ ಪ್ರವೃತ್ತಿರಸ್ತಿ;

"ಹೇಗೆ, ಎಲ್ಲರ ಪ್ರಿಯವನ್ನು ಮಾಡುವ ಪ್ರಯೋಜನ ಉಳ್ಳದ್ದೂ ಮತ್ತು ಪಕ್ಷಪಾತದಿಂದ ರಹಿತವೂ ಆದ ನನ್ನ ಪ್ರವೃತ್ತಿ ಇದೆಯೋ ;

ತಥೈವ ಯುಷ್ಮಾಭಿರಾಚರಣೇ ಕೃತೇ ಮಮ ಪ್ರಸನ್ನತಾ ಭವತಿ ; ನಾನ್ಯಥೇತಿ.

"ಹಾಗೆಯೇ ನಿಮ್ಮಿಂದಲೂ [ಕೂಡ,] ಆಚರಣೆ ಮಾಡಿದಾಗ, ನನಗೆ ಪ್ರಸನ್ನತೆ ಉಂಟಾಗುತ್ತದೆ ; ಬೇರೆ ವಿಧದಿಂದಲ್ಲ!"

ಅಸ್ಯ ಮಂತ್ರಸ್ಯಾಯಮೇವ ಅರ್ಥೋಽಸ್ತಿ.

ಈ ಮಂತ್ರದ ಅರ್ಥವು ಇದೇ ಆಗಿದೆ.

ಅಂದರೆ, ಈ ಮಂತ್ರದ ಅರ್ಥವು ಇದೇ ಸರಿಯಾಗಿದೆ.

ಕುತಃ?

ಏಕೆಂದರೆ_

ಬೃಹಸ್ಪತೇ ಅತಿ ಯದರ್ಯಃ.

[ಯಜುರ್ವೇದೇ ಅ. ೨೬, ಮಂ. ೩]

[ಅರ್ಥಃ_"ಹೇ ಬೃಹಸ್ಪತಿ! ಯಾವ ಸ್ವಾಮಿಯು ಅತ್ಯಂತವಾಗಿ."

(ಯಜುರ್ವೇದ ೨೬. ೩)]

ಇತ್ಯುತ್ತರಸ್ಮಿನ್ ಮಂತ್ರೇ* ಹೀಶ್ವರಾರ್ಥಸ್ಯೈವ ಪ್ರತಿಪಾದನಾತ್.**

ಎಂಬ ಈ ಮುಂದಿನ ಮಂತ್ರದಲ್ಲಿಯೇ* ಈಶ್ವರನ ಅರ್ಥದ ಪ್ರತಿಪಾದನೆಯನ್ನೇ ಮಾಡಲಾಗಿದೆ.**

ಅಂದರೆ, ಪರಮೇಶ್ವರನ ಸ್ವೀಕಾರವನ್ನೇ ಮಾಡಲಾಗಿದೆ. ಆದುದರಿಂದ, ಎಲ್ಲರಿಗೂ ವೇದಾಧಿಕಾರವಿದೆ!

ಗುಣ-ಕರ್ಮ-ಆಚರಣೆಯಿಂದಲೇ ವರ್ಣಾಶ್ರಮನಿರ್ಧಾರ

ವರ್ಣಾಶ್ರಮಾ ಅಪಿ ಗುಣಕರ್ಮಾಚಾರತೋ ಭವಂತಿ.

ವರ್ಣಾಶ್ರಮಗಳೂ ಕೂಡ, ಗುಣ-ಕರ್ಮಗಳ ಆಚರಣೆಯಿಂದ ಉಂಟಾಗುತ್ತವೆ.

ಅಂದರೆ, ವರ್ಣಾಶ್ರಮಗಳ ವ್ಯವಸ್ಥೆಯೂ ಕೂಡ, ಗುಣ-ಕರ್ಮಗಳ ಆಚಾರವಿಭಾಗದಿಂದ ಆಗುತ್ತದೆ.

ಅತ್ರಾಹ ಮನುಃ_

ಈ ವಿಷಯದಲ್ಲಿ ಮನು ಹೇಳಿದ್ದಾರೇನೆಂದರೆ_

ಅಂದರೆ, ಇದರಲ್ಲಿ ಮನುಸ್ಮೃತಿಯ ಪ್ರಮಾಣವೂ ಕೂಡ, ಏನಿದೆಯೆಂದರೆ_

"ಶೂದ್ರೋ ಬ್ರಾಹ್ಮಣತಾಮೇತಿ ಬ್ರಾಹ್ಮಣಶ್ಚೈತಿ ಶೂದ್ರತಾಮ್ ।
ಕ್ಷತ್ರಿಯಾಜ್ಜಾತಮೇವಂ ತು ವಿದ್ಯಾದ್ ವೈಶ್ಯಾತ್ ತಥೈವ ಚ ॥೧॥"

[ಮನುಸ್ಮೃತೌ ಅ. ೧೦, ಶ್ಲೋ. ೬೫]

---

* ಯಜುರ್ವೇದೇ (೨೬. ೩) _ಅನು.

** ೯೬೧ ತಮೇ ಪೃಷ್ಠೇಽಸ್ಯ ಮಂತ್ರಸ್ಯ ವ್ಯಾಖ್ಯಾನಂ ದ್ರಷ್ಟವ್ಯಮ್ _ಅನು.

* ಯಜುರ್ವೇದ (೨೬. ೩) _ಅನು.

** ೯೬೧ ನೆಯ ಪುಟದಲ್ಲಿ ಈ ಮಂತ್ರದ ವ್ಯಾಖ್ಯಾನವಿದೆ _ಅನು.

ಅರ್ಥ:_ "ಶೂದ್ರನು ಬ್ರಾಹ್ಮಣತ್ವವನ್ನು ಹೊಂದುತ್ತಾನೆ. ಮತ್ತು ಬ್ರಾಹ್ಮಣನು ಶೂದ್ರತ್ವ ವನ್ನು! ಕ್ಷತ್ರಿಯನಿಂದ, ಮತ್ತು ವೈಶ್ಯನಿಂದ ಉತ್ಪನ್ನನಾದವನೂ ಕೂಡ, ಹೀಗೆಯೇ [ಆಗುತ್ತಾನೆ,] ಎಂದು ತಿಳಿಯಬೇಕು!"

ಅಂದರೆ, ಶೂದ್ರನು ಬ್ರಾಹ್ಮಣನೂ ಮತ್ತು ಬ್ರಾಹ್ಮಣನು ಶೂದ್ರನೂ ಆಗಿಬಿಡುತ್ತಾನೆ! ಎಂದರೆ, ಬ್ರಾಹ್ಮಣನು [ಬ್ರಾಹ್ಮಣನ] ಗುಣ-ಕರ್ಮಗಳಿಗೆ ಅನುಕೂಲನಾಗಿದ್ದರೆ, ಬ್ರಾಹ್ಮಣನಾಗಿರುತ್ತಾನೆ.

ಮತ್ತು ಯಾವ ಬ್ರಾಹ್ಮಣನು ಕ್ಷತ್ರಿಯನ, ವೈಶ್ಯನ ಮತ್ತು ಶೂದ್ರನ ಗುಣವನ್ನುಳ್ಳವನಾಗಿರುತ್ತಾನೋ, ಅವನು ಕ್ಷತ್ರಿಯನು, ವೈಶ್ಯನು ಮತ್ತು ಶೂದ್ರನು ಆಗಿ ಹೋಗುತ್ತಾನೆ!

ಹಾಗೆಯೇ, ಶೂದ್ರನೂ ಕೂಡ, ಮೂರ್ಖನಾಗಿದ್ದರೆ, ಅವನು ಶೂದ್ರನಾಗಿರುತ್ತಾನೆ; ಮತ್ತು ಉತ್ತಮಗುಣ ಯುಕ್ತನಾಗಿದ್ದರೆ, ಯಥಾಯೋಗ್ಯವಾಗಿ ಬ್ರಾಹ್ಮಣ, ಕ್ಷತ್ರಿಯ ಮತ್ತು ವೈಶ್ಯನಾಗಿ ಹೋಗುತ್ತಾನೆ.

ಹೀಗೆಯೇ, ಕ್ಷತ್ರಿಯನ ಮತ್ತು ವೈಶ್ಯನ ವಿಷಯದಲ್ಲೂ ತಿಳಿದುಕೊಳ್ಳಿರಿ!

ಆಚರಣೆಯ ಪರಿವರ್ತನೆಯಿಂದ ವರ್ಣಪರಿವರ್ತನೆ

ಭಾಷ್ಯಮ್_

(ಶೂದ್ರೋ.) ಶೂದ್ರಃ ಪೂರ್ಣವಿದ್ಯಾ-ಸುಶೀಲತಾದಿಬ್ರಾಹ್ಮಣಗುಣಯುಕ್ತಶ್ಚೇದ್ ಬ್ರಾಹ್ಮಣತಾ-ಮೇತಿ ;

ಬ್ರಾಹ್ಮಣಭಾವಂ ಪ್ರಾಪ್ನೋತಿ.

ಯೋಽಸ್ತಿ ಬ್ರಾಹ್ಮಣಸ್ಯಾಧಿಕಾರಸ್ತಂ ಸರ್ವಂ ಪ್ರಾಪ್ನೋತ್ಯೇವ.

ಭಾಷ್ಯ_

(ಶೂದ್ರಃ) ಶೂದ್ರನು ಪೂರ್ಣವಿದ್ಯೆ, ಸುಶೀಲತ್ವ ಮೊದಲಾದ ಬ್ರಾಹ್ಮಣನ ಗುಣಗಳಿಂದ ಕೂಡಿದವ ನಾಗಿದ್ದರೆ, ಬ್ರಾಹ್ಮಣತ್ವವನ್ನು ಪಡೆಯುತ್ತಾನೆ,

[ಎಂದರೆ,] ಬ್ರಾಹ್ಮಣಭಾವವನ್ನು ಪಡೆಯುತ್ತಾನೆ!

ಬ್ರಾಹ್ಮಣನ ಅಧಿಕಾರವು ಯಾವುದಿದೆಯೋ, ಅದೆಲ್ಲವನ್ನೂ ಪಡೆದೇ ಪಡೆಯುತ್ತಾನೆ!

ಅಂದರೆ, **ಶೂದ್ರನಿಗೆ ವೇದ ಮೊದಲಾದುವನ್ನು ಓದುವ ಅಧಿಕಾರವಿಲ್ಲದಿದ್ದರೆ, ಅವನು ಬ್ರಾಹ್ಮಣನ, ಕ್ಷತ್ರಿಯನ, ಅಥವಾ ವೈಶ್ಯನ ಅಧಿಕಾರವನ್ನು ಹೇಗೆ ಪಡೆಯಬಲ್ಲವನಾಗಿರುತ್ತಿದ್ದನು?**

ಇದರಿಂದ, ನಿಶ್ಚಿತವಾಗಿ ತಿಳಿಯ ಬರುವುದೇನೆಂದರೆ_

ಇಪ್ಪತ್ತೈದನೆಯ ವರ್ಷದಲ್ಲಿ ವರ್ಣಗಳ ಅಧಿಕಾರವು ಸರಿ-ಸರಿಯಾಗಿ [ನಿರ್ಧಾರ]ವಾಗುತ್ತದೆ. ಏಕೆಂದರೆ, ಇಪ್ಪತ್ತೈದು ವರ್ಷಗಳ ತನಕ ಬುದ್ಧಿಯು ವರ್ಧಿಸುತ್ತದೆ. ಆದುದರಿಂದ, ಆ ಸಮಯದಲ್ಲೇ ಗುಣ-ಕರ್ಮಗಳ ಸರಿ-ಸರಿಯಾದ ಪರೀಕ್ಷೆಯನ್ನು ಮಾಡಿ, ವರ್ಣಾಧಿಕಾರವನ್ನು ಕೊಡುವುದು ಉಚಿತವಾಗಿರುತ್ತದೆ!

ಏವಮೇವ ಕುಚರ್ಯ್ಯಾಽಧರ್ಮಾಚರಣ-ನಿರ್ಬುದ್ಧಿ-ಮೂರ್ಖತ್ವ-ಪರಾಧೀನತಾ-ಪರಸೇವಾದಿ-ಶೂದ್ರಗುಣೈರ್ಯುಕ್ತೋ ಬ್ರಾಹ್ಮಣಶ್ಚೇತ್ ;

ಹೀಗೆಯೇ, ಒಂದು ವೇಳೆ, ಬ್ರಾಹ್ಮಣನು ಕದಾಚಾರ, ಅಧರ್ಮಾ-ಚರಣೆ, ನಿರ್ಬುದ್ಧಿತ್ವ, ಮೂರ್ಖತ್ವ, ಪರಾಧೀನತೆ, ಪರಸೇವೆ ಮೊದಲಾದ ಶೂದ್ರಗುಣಗಳಿಂದ ಯುಕ್ತನಾಗಿದ್ದರೆ ;

ಸ ಶೂದ್ರತಾಮೇತಿ ;

ಅವನು ಶೂದ್ರತ್ವವನ್ನು ಹೊಂದುತ್ತಾನೆ.

ಶೂದ್ರಾಧಿಕಾರಂ ಪ್ರಾಪ್ನೋತ್ಯೇವ.

[ಎಂದರೆ,] ಶೂದ್ರನ ಅಧಿಕಾರವನ್ನು ಪಡೆದೇ ಪಡೆಯುತ್ತಾನೆ!

ಏವಮೇವ ಕ್ಷತ್ರಿಯಾಜ್ಜಾತಂ ಕ್ಷತ್ರಿಯಾದುತ್ಪನ್ನಂ ವೈಶ್ಯಾದುತ್ಪನ್ನಂ ಪ್ರತಿ ಚ ಯೋಜನೀಯಮ್.

ಹೀಗೆಯೇ, (ಕ್ಷತ್ರಿಯಾಜ್ಜಾತಮ್) ಕ್ಷತ್ರಿಯನಿಂದ ಉತ್ಪನ್ನನಾದವನ, ಮತ್ತು (ವೈಶ್ಯಾತ್) ವೈಶ್ಯನಿಂದ ಉತ್ಪನ್ನನಾದವನ ಬಗ್ಗೆ ಅನ್ವಯಿಸಿಕೊಳ್ಳಬೇಕು!

ಅರ್ಥಾದ್ಯಸ್ಯ ವರ್ಣಸ್ಯ ಗುಣೈರ್ಯುಕ್ತೋ ಯೋ ವರ್ಣಃ ಸ ತತ್ತದಧಿಕಾರಂ ಪ್ರಾಪ್ನೋತ್ಯೇವ ॥ ೧ ॥

ಎಂದರೆ, ಯಾವ ವರ್ಣವು ಯಾವ ವರ್ಣದ ಗುಣಗಳಿಂದ ಕೂಡಿರುತ್ತದೋ, ಅದು ಅದರದರ ಅಧಿಕಾರವನ್ನು ಪಡೆದೇ ಪಡೆಯುತ್ತದೆ! [೧]

ವರ್ಣಪರಿವರ್ತನೆಗೆ ಆಪಸ್ತಂಬಧರ್ಮಸೂತ್ರದ ಪ್ರಮಾಣ

ಏವಮೇವಾಪಸ್ತಂಬಸೂತ್ರೇಽಪ್ಯಸ್ತಿ_

ಹೀಗೆಯೇ, ಆಪಸ್ತಂಬ[ಧರ್ಮ]ಸೂತ್ರದಲ್ಲಿ ಕೂಡ, ಇದೆ.

ಅಂದರೆ, ಆಪಸ್ತಂಬ[ಧರ್ಮ]ಸೂತ್ರದಲ್ಲಿ ಕೂಡ, ಬರೆಯಲಾಗಿದೆಯೇನೆಂದರೆ_

"ಧರ್ಮಚರ್ಯ್ಯಯಾ ಜಘನ್ಯೋ ವರ್ಣಃ ಪೂರ್ವಂ
ಪೂರ್ವಂ ವರ್ಣಮಾಪದ್ಯತೇ ಜಾತಿಪರಿವೃತ್ತೌ ॥ ೨ ॥"

[ಆಪಸ್ತಂಬಧರ್ಮಸೂತ್ರೇ ಪ್ರಶ್ನಃ ೨, ಪಟಲಃ ೫, ಖಂ. ೧೧, ಸೂ. ೧೦]

[ಅರ್ಥ:_ "ಧರ್ಮಾಚರಣೆಯಿಂದ ಜಾತಿಪರಿವರ್ತನೆಯಾದಾಗ, ಕೆಳಗಿನ ವರ್ಣವು ಮೇಲು-ಮೇಲಿನ ವರ್ಣವನ್ನು ಪಡೆಯುತ್ತದೆ."

(ಆಪಸ್ತಂಬಧರ್ಮಸೂತ್ರ: ೨. ೫. ೧೧. ೧೦)]

ಅಂದರೆ, ಧರ್ಮಾಚರಣೆ ಮಾಡುವುದರಿಂದ, ಕೆಳಗಿನ ವರ್ಣವು ಮೇಲು ಮೇಲಿನ ವರ್ಣದ ಅಧಿಕಾರವನ್ನು ಪಡೆಯುತ್ತದೆ.

"ಅಧರ್ಮಚರ್ಯ್ಯಯಾ ಪೂರ್ವೋ ವರ್ಣೋ ಜಘನ್ಯಂ ಜಘನ್ಯಂ
ವರ್ಣಮಾಪದ್ಯತೇ ಜಾತಿಪರಿವೃತ್ತೌ ॥ ೩ ॥"

[ಆಪಸ್ತಂಬಧರ್ಮಸೂತ್ರೇ ಪ್ರಶ್ನಃ ೨, ಪಟಲಃ ೫, ಖಂ. ೧೧, ಸೂ. ೧೧]

[ಅರ್ಥ:_ "ಅಧರ್ಮಾಚರಣೆಯಿಂದ ಜಾತಿಪರಿವರ್ತನೆಯಾದಾಗ, ಮೇಲಿನ ವರ್ಣವು ಕೆಳಗೆ-ಕೆಳಗಿನ ವರ್ಣವನ್ನು ಪಡೆಯುತ್ತದೆ."

(ಆಪಸ್ತಂಬಧರ್ಮಸೂತ್ರ: ೨. ೫. ೧೧. ೧೧)]

ಅಂದರೆ, ಅಧರ್ಮಾಚರಣೆಯನ್ನು ಮಾಡಿ, ಮೇಲು-ಮೇಲಿನ ವರ್ಣವು ಕೆಳ-ಕೆಳಗಿನ ವರ್ಣಗಳ ಅಧಿಕಾರಗಳನ್ನು ಪಡೆಯುತ್ತದೆ.

ಭಾಷ್ಯಮ್_

(ಧರ್ಮಚರ್ಯ್ಯಯಾ) ಸತ್ಯಧರ್ಮಾಚರಣೇನೈವ ಶೂದ್ರೋ ವೈಶ್ಯಂ ಕ್ಷತ್ರಿಯಂ ಬ್ರಾಹ್ಮಣಂ ಚ ವರ್ಣಮಾಪದ್ಯತೇ ;

[ಆ] ಸಮಂತಾತ್ ಪ್ರಾಪ್ನೋತಿ ಸರ್ವಾಧಿಕಾರಮಿತ್ಯರ್ಥಃ .

ಜಾತಿಪರಿವೃತ್ತಾವಿತ್ಯುಕ್ತೇ ಜಾತೇರ್ವರ್ಣಸ್ಯ ಪರಿತಃ ಸರ್ವತೋ ಯಾ ವೃತ್ತಿರಾಚರಣಂ ತತ್ಸರ್ವಂ ಪ್ರಾಪ್ನೋತೀತಿ ॥ ೨ ॥

(ಅಧರ್ಮಚರ್ಯ್ಯಯಾ.) ಏವಮೇವಾಸತ್ಯಲಕ್ಷಣೇನಾಧರ್ಮಾಚರಣೇನ ;

ಪೂರ್ವೋ ವರ್ಣೋ ಬ್ರಾಹ್ಮಣೋ ಜಘನ್ಯಂ ಸ್ವಸ್ಮಾದಧಃ ಸ್ಥಿತಂ ಕ್ಷತ್ರಿಯಂ ವೈಶ್ಯಂ ಶೂದ್ರಂ ಚ ವರ್ಣಮಾಪದ್ಯತೇ ;

ಜಾತಿಪರಿವೃತ್ತೌ ಚೇತಿ ಪೂರ್ವಮ್.

ಭಾಷ್ಯ_

(ಧರ್ಮಚರ್ಯ್ಯಯಾ.) ಸತ್ಯಧರ್ಮದ ಆಚರಣೆಯಿಂದಲೇ, ಶೂದ್ರನು ವೈಶ್ಯನ, ಕ್ಷತ್ರಿಯನ ಮತ್ತು ಬ್ರಾಹ್ಮಣನ ವರ್ಣವನ್ನು (ಆಪದ್ಯತೇ) ಎಲ್ಲಾ ಕಡೆಯಿಂದ ಪ್ರಾಪ್ತ ಮಾಡಿಕೊಳ್ಳುತ್ತಾನೆ!

ಎಂದರೆ, ಎಲ್ಲಾ ಅಧಿಕಾರವನ್ನೂ [ಪ್ರಾಪ್ತ ಮಾಡಿಕೊಳ್ಳುತ್ತಾನೆ,] ಎಂದರ್ಥ!

ಅಂದರೆ, ಇದು ಕೇವಲ ಹೇಳುವುದಕ್ಕೆ ಮಾತ್ರವೇ ಇಲ್ಲ!

ಜಾತಿಪರಿವರ್ತ್ತನೆಯಾದಾಗ, ಎಂದು ಹೇಳಿದರೆ, ಜಾತಿಯ ವರ್ಣದ ಸುತ್ತಲೂ ಯಾವ ವರ್ತನೆ, ಎಂದರೆ ಆಚರಣೆ ಇದೆಯೋ, ಅದೆಲ್ಲವನ್ನೂ ಪ್ರಾಪ್ತ ಮಾಡಿಕೊಳ್ಳುತ್ತಾನೆ, ಎಂದು [ಅರ್ಥ.]

ಅಂದರೆ, ಯಾವ ಯಾವ ವರ್ಣಕ್ಕೆ ಯಾವ ಯಾವ ಕರ್ಮಗಳ ಅಧಿಕಾರವಿರುತ್ತದೋ, ಅವುಗಳಿಗನುಸಾರವಾಗಿಯೇ, ಅವು ಯಥಾವತ್ತಾಗಿ ಸಿಗುತ್ತವೆ. [೨]

(ಅಧರ್ಮಚರ್ಯ್ಯಯಾ.) ಹೀಗೆಯೇ, ಅಸತ್ಯಲಕ್ಷಣವನ್ನುಳ್ಳ ಅಧರ್ಮದ ಆಚರಣೆಯಿಂದ ;

ಮೇಲಿನ ವರ್ಣಸ್ಥನಾದ ಬ್ರಾಹ್ಮಣನು (ಜಘನ್ಯಮ್) ತನಗಿಂತ ಕೆಳಗೆ ಇರುವ ಕ್ಷತ್ರಿಯನ, ವೈಶ್ಯನ ಅಥವಾ ಶೂದ್ರನ (ವರ್ಣಮ್) ವರ್ಣವನ್ನು (ಆಪದ್ಯತೇ) ಎಲ್ಲಾ ಕಡೆಯಿಂದ ಪ್ರಾಪ್ತಮಾಡಿಕೊಳ್ಳುತ್ತಾನೆ.

'ಜಾತಿಪರಿವರ್ತ್ತನೆಯಾದಾಗ', ಎಂದರೆ ಮೇಲೆ [ಬರೆ]ದಂತೆ [ಅರ್ಥವನ್ನು ತಿಳಿಯಬೇಕು!]

ಅರ್ಥಾದ್ ಧರ್ಮಾಚರಣಮೇವೋತ್ತಮ-ವರ್ಣಾಧಿಕಾರೇ ಕಾರಣಮಸ್ತಿ.

ಎಂದರೆ, ಉತ್ತಮ ವರ್ಣದ ಅಧಿಕಾರವನ್ನು [ಪಡೆಯು]ವಲ್ಲಿ ಧರ್ಮಾಚರಣವೇ ಕಾರಣವಾಗಿರುತ್ತದೆ!

ಏವಮೇವಾಧರ್ಮಾಚರಣಂ ಕನಿಷ್ಠವರ್ಣಾಧಿ-ಕಾರಪ್ರಾಪ್ತೇಶ್ಚೇತಿ ॥ ೩ ॥

ಹೀಗೆಯೇ, ಕನಿಷ್ಠವರ್ಣದ ಅಧಿಕಾರವನ್ನು ಪಡೆಯುವಲ್ಲಿ ಅಧರ್ಮಾಚರಣವೇ [ಕಾರಣವಾಗಿರುತ್ತದೆ, ಎಂದು ತಿಳಿಯಬೇಕು!] [೩]

ಶೂದ್ರನಿಗೆ ಓದಿಸುವುದರ ನಿಷೇಧಕ್ಕೆ ಕಾರಣ

ಯತ್ರ ಯತ್ರ ಶೂದ್ರೋ ನಾಧ್ಯಾಪನೀಯೋ ನ ಶ್ರಾವಣೀಯಶ್ಚೇತ್ಯುಕ್ತಂ ತತ್ರಾಯಮಭಿಪ್ರಾಯಃ_

ಎಲ್ಲೆಲ್ಲಿ_ 'ಶೂದ್ರನಿಗೆ ಪಾಠವನ್ನು ಕಲಿಸಬಾರದು ಮತ್ತು ಹೇಳಿಕೊಡಬಾರದು', ಎಂದು ಹೇಳಲಾಗಿದೆಯೋ, ಅದರ ಅಭಿಪ್ರಾಯವೇನೆಂದರೆ_

ಶೂದ್ರಸ್ಯ ಪ್ರಜ್ಞಾವಿರಹತ್ವಾದ್ ವಿದ್ಯಾಪಠನ-ಧಾರಣ-ವಿಚಾರಾಸಮರ್ಥತ್ವಾತ್ ತಸ್ಯಾಧ್ಯಾಪನಂ ಶ್ರಾವಣಂ ವ್ಯರ್ಥಮೇವಾಸ್ತಿ;

ಶೂದ್ರನಿಗೆ ಉತ್ತಮ ಬುದ್ಧಿ ಇಲ್ಲದಿರುವುದರಿಂದಲೂ, [ಮತ್ತು] ವಿದ್ಯೆಯನ್ನು ಓದುವ-ಗ್ರಹಿಸುವ-ವಿಚಾರ ಮಾಡುವ ಸಾಮರ್ಥ್ಯವಿಲ್ಲದಿರುವುದರಿಂದಲೂ ಅವನಿಗೆ ಕಲಿಸುವುದು ಮತ್ತು ಹೇಳಿಕೊಡುವುದು ವ್ಯರ್ಥವೇ ಆಗಿರುತ್ತದೆ!

ನಿಷ್ಫಲತ್ವಾಚ್ಚೇತಿ.

ಮತ್ತು ನಿಷ್ಫಲತ್ವದ ಕಾರಣದಿಂದಲೂ ಹಾಗಾಗುತ್ತದೆ.*

ಇದರಿಂದ, ಸಿದ್ಧವಾಯಿತೇನೆಂದರೆ, ವೇದಗಳನ್ನು ಓದುವ-ಆಲಿಸುವ ಅಧಿಕಾರವು ಮನುಷ್ಯರೆಲ್ಲರಿಗೂ ಸರಿಸಮಾನವಾಗಿದೆ!

ಇತಿ ಸಂಕ್ಷೇಪತೋಽಧಿಕಾರಾನಧಿಕಾರ-ವಿಷಯಃ ॥

ಇಲ್ಲಿಗೆ ಸಂಕ್ಷೇಪವಾಗಿ ಅಧಿಕಾರ-ಅನಧಿಕಾರದ ವಿಷಯವು ಮುಗಿಯಿತು. [೨೬]

---

* ಇಲ್ಲಿ ಶೂದ್ರನ ಸಾಮಾನ್ಯಸ್ವಭಾವದ ಉಲ್ಲೇಖವನ್ನು ಮಾಡಲಾಗಿದೆ. ವಿಶಿಷ್ಟಪರಿಶ್ರಮ ಮಾಡಿ, ವಿದ್ಯೆಯನ್ನು ಕಲಿಯುವ ಶೂದ್ರನಿಗೆ ಮಾರ್ಗ ತೆರೆದೇ ಇರುತ್ತದೆ; ಎಂಬ ಮನುಸ್ಮೃತಿಯ, ಹಾಗೂ ಆಪಸ್ತಂಬಧರ್ಮಸೂತ್ರದ ಅಭಿಪ್ರಾಯವು ಹಿಂದೆ ಹೇಳಲ್ಪಟ್ಟೇ ಇದೆ _ಅನು.

(೨೭) ಪಠನ-ಪಾಠನ

ಅಥ ಪಠನಪಾಠನವಿಷಯಃ ಸಂಕ್ಷೇಪತಃ*

ಈಗ ಓದುವ-ಓದಿಸುವ ವಿಷಯವು ಸಂಕ್ಷೇಪವಾಗಿ ಹೇಳಲ್ಪಡುತ್ತದೆ.*

ಅಕ್ಷರಗಳ ಶುದ್ಧ, ಸ್ಪಷ್ಟ ಉಚ್ಚಾರಣೆ!

ತತ್ರಾದೌ ಪಠನಸ್ಯಾರಂಭೇ ಶಿಕ್ಷಾ**ರೀತ್ಯಾ ಸ್ಥಾನ-ಪ್ರಯತ್ನ-ಸ್ವರಜ್ಞಾನಾಯಾಕ್ಷರೋಚ್ಚಾರಣೋಪದೇಶಃ ಕರ್ತ್ತವ್ಯಃ ;

ಅದರಲ್ಲಿ ಮೊದಲು, ಓದುವುದರ ಆರಂಭದಲ್ಲಿ ಶಿಕ್ಷಾ**ದ ರೀತಿಯಿಂದ, ಸ್ಥಾನ-ಪ್ರಯತ್ನ-ಸ್ವರಗಳ ಜ್ಞಾನಕ್ಕಾಗಿ ಅಕ್ಷರಗಳ ಉಚ್ಚಾರಣೆಯ ಉಪದೇಶವನ್ನು ಮಾಡಬೇಕು!

ಅಂದರೆ, ಓದುವ-ಓದಿಸುವುದರ ಆರಂಭದಲ್ಲಿ ಹುಡುಗರಿಗೆ ಮತ್ತು ಹುಡುಗಿಯರಿಗೆ ಎಂತಹ ಶಿಕ್ಷಣವನ್ನು ಕೊಡಬೇಕೆಂದರೆ, ಎಲ್ಲರಿಗೂ ಪ್ರಿಯವಾಗುವಂತೆ, ಅವರು ಸ್ಥಾನ, ಪ್ರಯತ್ನಗಳ ಯೋಗದಿಂದ ವರ್ಣಗಳನ್ನು ಉಚ್ಚಾರಿಸಬಲ್ಲವರಾಗಬೇಕು!

ಯೇನ ನೈವ ಸ್ವರವರ್ಣೋಚ್ಚಾರಣಜ್ಞಾನ-ವಿರೋಧಃ ಸ್ಯಾತ್.

ಇದರಿಂದ, ಸ್ವರ-ವರ್ಣಗಳ ಉಚ್ಚಾರಣೆಯ ಜ್ಞಾನಕ್ಕೆ ವಿರುದ್ಧವಾದುದು ಆಗಲೇ ಕೂಡದು!

ತದ್ಯಥಾ_

ಅದು ಹೇಗೆಂದರೆ_

'ಪ' ಇತ್ಯಸ್ಯೋಚ್ಚಾರಣಮೋಷ್ಠೌ ಸಂಯೋಜ್ಯೈವ ಕಾರ್ಯ್ಯಮ್.

'ಪ', ಎಂಬುದರ ಉಚ್ಚಾರಣೆಯು ಎರಡೂ ತುಟಿಗಳನ್ನು ಜೋಡಿಸಿಯೇ ಮಾಡಲ್ಪಡಬೇಕು!

---

* 'ಸತ್ಯಾರ್ಥಪ್ರಕಾಶೇ' ತೃತೀಯೇ ಸಮುಲ್ಲಾಸೇ ೧೦೯ - ೧೨೦ ತಮೇಷು ಪೃಷ್ಠೇಷು ತಥಾ ಚ 'ಸಂಸ್ಕಾರವಿಧಿ'ನಾಮ್ನಿ ಗ್ರಂಥೇ ೧೪೯ - ೧೫೨ ತಮೇಷು ಪೃಷ್ಠೇಷ್ವಪಿ ಏಷ ವಿಷಯ ಉಕ್ತಃ _ಅನು.

** ಪಾಣಿನಿರಚಿತಾ ವರ್ಣೋಚ್ಚಾರಣಶಿಕ್ಷಾ ಇತ್ಯಭಿಪ್ರಾಯಃ _ಅನು.

* 'ಸತ್ಯಾರ್ಥಪ್ರಕಾಶ' ತೃತೀಯ ಸಮುಲ್ಲಾಸ ೧೦೯ - ೧೨೦ ನೆಯ ಪುಟಗಳಲ್ಲಿಯೂ ಮತ್ತು 'ಸಂಸ್ಕಾರವಿಧಿ', ಎಂಬ ಹೆಸರಿನ ಗ್ರಂಥದ ೧೪೯ - ೧೫೨ ನೆಯ ಪುಟಗಳಲ್ಲಿಯೂ ಕೂಡ, ಈ ವಿಷಯವು ಹೇಳಲ್ಪಟ್ಟಿದೆ _ಅನು.

**ಪಾಣಿನಿರಚಿತವರ್ಣೋಚ್ಚಾರಣಶಿಕ್ಷಾ _ಅನು.

ಅಂದರೆ, ಪ_ ಇದರ ಉಚ್ಚಾರಣೆಯಲ್ಲಿ ಎರಡು ರೀತಿಯ ಜ್ಞಾನವಿರಬೇಕು_ ಒಂದು, ಸ್ಥಾನದ್ದು; ಮತ್ತು ಇನ್ನೊಂದು ಪ್ರಯತ್ನದ್ದು!

ಪಕಾರದ ಉಚ್ಚಾರಣೆಯು ತುಟಿಗಳಿಂದ ಆಗುತ್ತದೆ. ಆದರೆ, ಎರಡೂ ತುಟಿಗಳನ್ನು ಸರಿ-ಸರಿಯಾಗಿ ಜೋಡಿಸಿಯೇ, ಪಕಾರವು ಉಚ್ಚರಿಸಲ್ಪಡುತ್ತದೆ.

ಅಸ್ಯೌಷ್ಠೌ ಸ್ಥಾನಂ, ಸ್ಪೃಷ್ಟಃ ಪ್ರಯತ್ನ ಇತಿ ವೇದ್ಯಮ್.

ಇದಕ್ಕೆ ತುಟಿಗಳು '**ಸ್ಥಾನ**'ವೂ ಮತ್ತು ಸ್ಪರ್ಶ ಮಾಡುವುದು '**ಪ್ರಯತ್ನ**'ವೂ ಆಗಿರುತ್ತದೆ, ಎಂದು ತಿಳಿಯಬೇಕು!

ಏವಮೇವ ಸರ್ವತ್ರ.

ಹೀಗೆಯೇ, ಎಲ್ಲ ಕಡೆಯೂ [ತಿಳಿಯಲ್ಪಡಬೇಕು!]

ಅಂದರೆ, ಯಾವುದಾದರೂ ಅಕ್ಷರದಲ್ಲಿ ಯಾವುದಾದರೂ ಸ್ವರ ಅಥವಾ ವ್ಯಂಜನವು ಸೇರಿದ್ದರೆ, ಅದನ್ನೂ ಕೂಡ, ಆಯಾಯಾ **ಸ್ಥಾನ**ದಲ್ಲಿ [ಆಯಾಯಾ] **ಪ್ರಯತ್ನ**ದಿಂದ, ಉಚ್ಚಾರಣೆ ಮಾಡುವುದು ಉಚಿತ ವಾಗಿರುತ್ತದೆ.

ಇದೆಲ್ಲದರ ವಿಧಾನವನ್ನು **ವ್ಯಾಕರಣ** ಮತ್ತು **ಶಿಕ್ಷಾ** ಗ್ರಂಥದಲ್ಲಿ ಬರೆಯಲಾಗಿದೆ.

ಅತ್ರ ಮಹಾಭಾಷ್ಯಕಾರಃ ಪತಂಜಲಿಮಹಾಮುನಿ[*]ರಾಹ_

ಈ ವಿಷಯದಲ್ಲಿ ಮಹಾಭಾಷ್ಯಕಾರರಾದ ಪತಂಜಲಿಮಹಾಮುನಿಗಳು ಹೇಳಿದ್ದಾರೇನೆಂದರೆ_

ಅಶುದ್ಧ ಉಚ್ಚಾರಣೆಯಿಂದ ಇತರರಿಗೆ ಮಾನಸಿಕ ಹಿಂಸೆ!

"ದುಷ್ಟಃ ಶಬ್ದಃ ಸ್ವರತೋ ವರ್ಣತೋ ವಾ
ಮಿಥ್ಯಾಪ್ರಯುಕ್ತೋ ನ ತಮರ್ಥಮಾಹ ।
ಸ ವಾಗ್ವಜ್ರೋ ಯಜಮಾನಂ ಹಿನಸ್ತಿ
ಯಥೇಂದ್ರಶತ್ರುಃ ಸ್ವರತೋऽಪರಾಧಾತ್ ॥೧॥"

[ಮಹಾಭಾಷ್ಯೇ ಅ.೧, ಪಾ.೧, ಆ.೧]

[ಅರ್ಥ:_ "ಸ್ವರದಿಂದಾಗಲೀ, ಅಥವಾ ವ್ಯಂಜನದಿಂದಾಗಲೀ, ತಪ್ಪಾಗಿ ಉಚ್ಚರಿಸಲ್ಪಟ್ಟ ದೂಷಿತವಾದ ಶಬ್ದವು ತನ್ನ ಅರ್ಥವನ್ನು ಹೇಳಲಾರದು! ಹೇಗೆ ಸ್ವರದ ಅಪರಾಧದಿಂದ [ಪ್ರಯೋಗಿಸಲ್ಪಟ್ಟ] 'ಇಂದ್ರಶತ್ರು' ಶಬ್ದವು [ಮಾಡಿತೋ,] ಹಾಗೆ, ಅದು ವಾಗ್ವಜ್ರರೂಪವಾಗಿ ಯಜಮಾನನನ್ನು ಹಿಂಸಿಸುತ್ತದೆ."

(ಮಹಾಭಾಷ್ಯ: ೧.೧.೧)]

[*] 'ಮಹಾಮುನಿಪತಂಜಲಿಃ' _ಆ.ವೈ.

ಅಂದರೆ, ಸ್ವರ ಮತ್ತು ವರ್ಣಗಳ ಉಚ್ಚಾರಣೆಯಲ್ಲಿ ವಿರೋಧ ಉಂಟಾಗುವುದರಿಂದ, ಶಬ್ದವು 'ದುಷ್ಟ', ಎನಿಸಲ್ಪಡುತ್ತದೆ. ಎಂದರೆ, ಅದು ಮೂಲ ಅರ್ಥವನ್ನು ತಿಳಿಸಲಾರದು!

ಭಾಷ್ಯಮ್_

ನೈವ ಸ್ಥಾನಪ್ರಯತ್ನಯೋಗೇನ ವಿನೋಚ್ಚಾರಣೇ ಕೃತೇಽಕ್ಷರಾಣಾಂ ಯಥಾವತ್ ಪ್ರಕಾಶಃ ಪದಾನಾಂ ಲಾಲಿತ್ಯಂ ಚ ಭವತಿ.

ಭಾಷ್ಯ_

ಸ್ಥಾನ-ಪ್ರಯತ್ನಗಳ ಯೋಗವಿಲ್ಲದೇ ಉಚ್ಚಾರಣೆಯನ್ನು ಮಾಡಿದಾಗ, ಅಕ್ಷರಗಳ ಯಥಾವತ್ ಪ್ರಾಕಟ್ಯವೂ ಮತ್ತು ಪದಗಳ ಲಾಲಿತ್ಯವೂ ಉಂಟಾಗುವುದೇ ಇಲ್ಲ!

ಅಂದರೆ, ಹೇಗೆ ಸ್ಥಾನ ಮತ್ತು ಪ್ರಯತ್ನದ ಯೋಗವಿಲ್ಲದೇ [ಮಾಡಿದ] ಶಬ್ದದ ಉಚ್ಚಾರಣೆಯು ಪ್ರಸನ್ನತೆಯನ್ನು ಉಂಟುಮಾಡುವಂತಹುದು ಆಗುವುದಿಲ್ಲವೋ, ಹಾಗೆಯೇ ಸ್ವರಕ್ಕೆ ವಿರುದ್ಧವಾದ ಉಚ್ಚಾರಣೆಯೂ ಆಗಿರುತ್ತದೆ.

ಯಥಾ ಗಾನಕರ್ತಾ ಷಡ್ಜಾದಿಸ್ವರಾಲಾಪನೇಽನ್ಯಥೋಚ್ಚಾರಣಂ ಕುರ್ಯ್ಯಾಚ್ಚೇತ್, ಸ ತಸ್ಯೈವಾಪರಾಧೋ ಭವೇತ್ ;

ಹೇಗೆ, ಗಾಯನ ಮಾಡುವವನು ಷಡ್ಜ ಮೊದಲಾದ ಸ್ವರಗಳ ಆಲಾಪನೆಯಲ್ಲಿ ವಿರುದ್ಧವಾಗಿ ಉಚ್ಚಾರಣೆ ಮಾಡುವವನಾದರೆ, ಅದು ಅವನದೇ ಅಪರಾಧ, ಎಂದು ತಿಳಿಯಲಾಗುತ್ತದೋ ;

ಮತ್ತು [ಅಂತಹ] ಗಾನವಿದ್ಯೆಯೂ ಕೂಡ, ಸುಂದರವಾಗಿರುವುದಿಲ್ಲವೋ ;

ತದ್ವದ್ ವೇದೇಷ್ವಪಿ ಪ್ರಯತ್ನೇನ ಸಹ ಸ್ವಸ್ವಸ್ಥಾನೇ ಖಲು ಸ್ವರವರ್ಣೋಚ್ಚಾರಣಂ ಕರ್ತ್ತವ್ಯಮ್.

ಅದೇ ರೀತಿಯಾಗಿಯೇ, ವೇದಗಳಲ್ಲಿ ಕೂಡ, ಪ್ರಯತ್ನದೊಡನೆ, ಸ್ವರಗಳ, [ಹಾಗೂ] ವರ್ಣಗಳ ಉಚ್ಚಾರಣೆಯು ಅದರದರ ಸ್ಥಾನದಲ್ಲಿಯೇ ಮಾಡಲ್ಪಡಬೇಕು!

ಅಂದರೆ, ವೇದಾದಿಗ್ರಂಥಗಳಲ್ಲಿ ಕೂಡ, ಸ್ವರ ಮತ್ತು ವರ್ಣಗಳ ಉಚ್ಚಾರಣೆಯು ಯತ್ನದಿಂದ ಆಗಬೇಕು!

ಅಶುದ್ಧೋಚ್ಚಾರಣೆಯಿಂದ ಅನರ್ಥ!

ಅನ್ಯಥಾ ದುಷ್ಟಃ ಶಬ್ದೋ ದುಃಖದೋಽನರ್ಥಕಶ್ಚ ಭವತಿ.

ಇಲ್ಲದಿದ್ದರೆ, ದುಷ್ಟವಾದ ಶಬ್ದವು ದುಃಖ ಕೊಡುವಂತಹುದೂ ಮತ್ತು ಅನರ್ಥವನ್ನು ಉಂಟು ಮಾಡುವಂತಹುದೂ ಆಗುತ್ತದೆ.

ಅಂದರೆ, ಯಾವ [ಶಬ್ದವು] ವಿಪರೀತವಾಗಿ ಉಚ್ಚಾರಣೆ ಮಾಡಲ್ಪಡುತ್ತದೋ, ಅದು ದುಃಖ ಕೊಡುವಂತಹುದೂ ಮತ್ತು ಮಿಥ್ಯೆ, ಎಂದೂ ತಿಳಿಯಲ್ಪಡುತ್ತದೆ!

ಯಥಾವದುಚ್ಚಾರಣಮುಲ್ಲಂಘ್ಯೋಚ್ಚಾರಿತೇ ಶಬ್ದೇ ವಕ್ತುರಪರಾಧ ಏವ ವಿಜ್ಞಾಯತೇ_

ಉದಾಹರಣೆಗೆ_ ಸರಿ ಸರಿಯಾದ ಉಚ್ಚಾರಣೆಯನ್ನು ಉಲ್ಲಂಘಿಸಿ, ಶಬ್ದವು ಉಚ್ಚರಿಸಲ್ಪಟ್ಟಾಗ, [ಅದು] ಉಚ್ಚಾರಣೆಯನ್ನು ಮಾಡುವವನ ಅಪರಾಧವೇ ಆಗಿದೆ, ಎಂದು ತಿಳಿಸಲ್ಪಡುತ್ತದೆ.

ಅಂದರೆ, ಯಾವ ಶಬ್ದದ ಯಥಾವತ್ ಉಚ್ಚಾರಣೆ ಇರುವುದಿಲ್ಲವೋ, ಆದರೆ, ಬದಲಾಗಿ ಅದಕ್ಕೆ ವಿರುದ್ಧವಾಗಿ [ಉಚ್ಚಾರಣೆ] ಮಾಡಲಾಗುತ್ತದೋ, ಅದರ ದೋಷವು ಉಚ್ಚರಿಸುವವನದೇ, ಎಂದು ಎಣಿಸಲಾಗುತ್ತದೆ.

ಮತ್ತು ವಿದ್ವಾಂಸರು ಅವನಿಗೆ ಹೇಳುತ್ತಾರೇನೆಂದರೆ_

'ತ್ವಂ ಮಿಥ್ಯಾಪ್ರಯೋಗಂ ಕೃತವಾನಿತಿ.

'ನೀನು ತಪ್ಪು ಪ್ರಯೋಗವನ್ನು ಮಾಡಿಬಿಟ್ಟೆ!

'ಅಂದರೆ, ನೀನು ಈ ಶಬ್ದದ ಶುದ್ಧ ಉಚ್ಚಾರಣೆಯನ್ನು ಮಾಡಲಿಲ್ಲ!'

'ನೈವ ಸ ಮಿಥ್ಯಾಪ್ರಯುಕ್ತಃ ಶಬ್ದಸ್ತಮಭಿಪ್ರೇತ-ಮರ್ಥಮಾಹ.'

'ಮತ್ತು ತಪ್ಪಾಗಿ ಪ್ರಯುಕ್ತವಾದ ಆ ಶಬ್ದವು ಆ ಇಚ್ಛಿತವಾದ ಅರ್ಥವನ್ನು ಹೇಳಲೇ ಇಲ್ಲ!

'ಅಂದರೆ, ಇದರಿಂದ ಈ [ಶಬ್ದವು] ನಿನ್ನ ಅಭಿಪ್ರಾಯವನ್ನು ಯಥಾರ್ಥವಾಗಿ ಹೇಳಲಾರದು!'

ಅಶುದ್ಧೋಚ್ಚಾರಣೆಯ ಉದಾಹರಣೆಗಳು

ತದ್ಯಥಾ_

'ಸಕಲಮ್-ಶಕಲಮ್, ಸಕೃತ್-ಶಕೃತ್' ಇತಿ.*

ಉದಾಹರಣೆಗಾಗಿ_

'ಸಕಲ-ಶಕಲ'; ಮತ್ತು 'ಸಕೃತ್-ಶಕೃತ್', ಎಂಬ ಶಬ್ದಗಳನ್ನು ನೋಡಿ!

* ಕಶ್ಚಿತ್ ಕವಿರಾಹ_
ಯದ್ಯಪಿ ಬಹು ನಾಧೀಷೇ ತಥಾಪಿ ಪಠ ಪುತ್ರ ವ್ಯಾಕರಣಮ್ ।
ಸ್ವಜನಃ ಶ್ವಜನೋ ಮಾ ಭೂತ್ ಸಕಲಂ ಶಕಲಂ ಸಕೃಚ್ಛಕೃತ್ ॥
_ಅನು.

'ಸಕಲ'ಶಬ್ದಃ ಸಂಪೂರ್ಣಾರ್ಥವಾಚೀ, 'ಶಕಲ' ಇತಿ ಖಂಡವಾಚೀ ಚ.

'**ಸಕಲ**', ಎಂಬ ಶಬ್ದವು '**ಸಂಪೂರ್ಣ**', ಎಂಬ ಅರ್ಥವನ್ನು ಹೇಳುವಂತಹುದೂ, ಮತ್ತು '**ಶಕಲ**', ಎಂಬ [ಶಬ್ದವು] '**ತುಂಡು**', ಎಂಬ ಅರ್ಥವನ್ನು ಹೇಳುವಂತಹುದೂ ಆಗಿದೆ.

ಅಂದರೆ, '**ಸಕಲ**', ಎಂಬ ಶಬ್ದವು '**ಸಂಪೂರ್ಣ**'ದ ಬೋಧಕವಾಗಿದೆ. ಮತ್ತು ಇದನ್ನು ತಾಲವ್ಯವಾಗಿ ಉಚ್ಚರಿಸಿದರೆ, ಅದೇ ಮತ್ತೆ, '**ತುಂಡು**', ಎಂಬ [ಅರ್ಥವನ್ನುಳ್ಳ] ಶಬ್ದದ ವಾಚಕವಾಗಿ ಹೋಗುತ್ತದೆ!

ಏವಂ 'ಸಕೃದಿ'ತ್ಯೇಕವಾರಾರ್ಥವಾಚೀ, 'ಶಕೃದಿ'ತಿ ಮಲಾರ್ಥವಾಚೀ ಚ.

ಹೀಗೆಯೇ, '**ಸಕೃತ್**', ಎಂಬುದು '**ಒಂದು ಸಲ**', ಎಂಬ ಅರ್ಥವನ್ನು ಹೇಳುವಂತಹುದೂ, ಮತ್ತು '**ಶಕೃತ್**', ಎಂಬುದು '**ಮಲ**', ಎಂಬ ಅರ್ಥವನ್ನು ಹೇಳುವಂತಹುದೂ ಆಗಿದೆ.

ಅಂದರೆ, '**ಸಕೃತ್**', ಮತ್ತು '**ಶಕೃತ್**', ಎಂಬುವುಗಳಲ್ಲಿ ದಂತ್ಯಸಕಾರದ ಉಚ್ಚಾರಣೆಯಿಂದ_ '**ಒಂದು ಸಲ ಕ್ರಿಯೆ [ಮಾಡುವುದು]**', ಎಂದೂ; ಮತ್ತು ಅದನ್ನೇ ತಾಲವ್ಯವಾಗಿ ಉಚ್ಚರಿಸುವುದರಿಂದ_ '**ಮಲ**'ದ ಬೋಧವೂ ಆಗುತ್ತದೆ.

ಅತ್ರ ಸಕಾರೋಚ್ಚಾರಣೇ ಕರ್ತ್ತವ್ಯೇ ಶಕಾರೋ-ಚ್ಚಾರಣಂ ಕ್ರಿಯತೇ ಚೇದ್ ;

ಇಲ್ಲಿ **ಸಕಾರದ** ಉಚ್ಚಾರಣೆಯನ್ನು ಮಾಡಬೇಕಾದ ಸ್ಥಾನದಲ್ಲಿ **ಶಕಾರದ** ಉಚ್ಚಾರಣೆಯು ಮಾಡಲ್ಪಟ್ಟರೂ ;

ಏವಂ ಶಕಾರೋಚ್ಚಾರಣೇ ಕರ್ತ್ತವ್ಯೇ ಸಕಾರೋಚ್ಚಾರಣಂ ಚ ;

ಮತ್ತು ಹೀಗೆಯೇ, **ಶಕಾರದ** ಉಚ್ಚಾರಣೆಯನ್ನು ಮಾಡಬೇಕಾದ ಸ್ಥಾನದಲ್ಲಿ **ಸಕಾರದ** ಉಚ್ಚಾರಣೆಯು ಮಾಡಲ್ಪಟ್ಟರೂ ;

ತದಾ ಸ ಶಬ್ದಃ ಸ್ವವಿಷಯಂ ನಾಭಿಧತ್ತೇ.

ಆಗ ಆ ಶಬ್ದವು ತನ್ನ ಅಭಿಪ್ರಾಯವನ್ನು ಹೇಳುವುದಿಲ್ಲ!

ಸ ವಾಗ್ವಜ್ರೋ ಭವತಿ.

ಅದು 'ವಾಗ್ವಜ್ರ'ವಾಗುತ್ತದೆ!

ಯಮರ್ಥಮತ್ತ್ರೋಚ್ಚಾರಣಂ [ನ] ಕ್ರಿಯತೇ, ಸ ಶಬ್ದಸ್ತದಭಿಪ್ರಾಯನಾಶಕೋ ಭವತಿ.

ಯಾವ ಅರ್ಥವನ್ನು ತಿಳಿದು, ಅದರಂತೆ ಉಚ್ಚಾರಣೆಯು ಮಾಡಲ್ಪಡದಿದ್ದರೆ, ಆ ಶಬ್ದವು ಅವನ ಅಭಿಪ್ರಾಯದ ನಾಶಮಾಡುವಂತಹುದಾಗುತ್ತದೆ.

ಅಂದರೆ, ಶಬ್ದಗಳ ಉಚ್ಚಾರಣೆಯನ್ನು ಸರಿಸರಿಯಾಗಿ ಮಾಡುವುದರಿಂದಲೇ, ಸರಿ-ಸರಿಯಾದ ಅರ್ಥದ ತಿಳಿವಳಿಕೆಯು ಉಂಟಾಗುತ್ತದೆ.

ತದ್ವಕ್ತಾರಂ ಯಜಮಾನಂ ತದಧಿಷ್ಠಾತಾರಂ ಚ ಹಿನಸ್ತಿ.

ಮತ್ತು ಅದು ಅದರ ಉಚ್ಚಾರಣೆ ಮಾಡುವ ಯಜಮಾನನನ್ನೂ, ಹಾಗೂ ಅದರ ಅಧಿಕಾರಿಯನ್ನೂ ಹಿಂಸಿಸುತ್ತದೆ.

ತೇನಾರ್ಥೇನ ಹೀನಂ ಕರೋತಿ.

ಮತ್ತು ಅದರ ಪ್ರಯೋಜನದಿಂದ ರಹಿತ ನನ್ನಾಗಿಯೂ ಮಾಡುತ್ತದೆ!

ಏಕೆಂದರೆ, ವಿಪರೀತವಾದ ಉಚ್ಚಾರಣೆಯಿಂದ, ಅದು, **ವಜ್ರಕ್ಕೆ ಸಮಾನವಾಗಿ**, ವಕ್ತೃವಿನ ಅಭಿಪ್ರಾಯದ ನಾಶ ಮಾಡುವಂತಹುದಾಗುತ್ತದೆ.

'ಇಂದ್ರಶತ್ರು' ಶಬ್ದದ ಅಶುದ್ಧ ಸ್ವರೋಚ್ಚಾರಣೆಯ ಪರಿಣಾಮ!

ಯಥೇಂದ್ರಶತ್ರುರಯಂ ಶಬ್ದಃ ಸ್ವಸ್ಯಾಪರಾಧಾದ್ ವಿಪರೀತಫಲೋ ಜಾತಃ.

ಉದಾಹರಣೆಗಾಗಿ_ 'ಇಂದ್ರಶತ್ರು', ಎಂಬ ಈ ಶಬ್ದವು ತನ್ನ ಅಪರಾಧದಿಂದ, ವಿರುದ್ಧವಾದ ಫಲ ವನ್ನುಳ್ಳದ್ದಾಯಿತು!

ತದ್ಯಥಾ_

ಅದು ಹೇಗೆಂದರೆ_

ಇಂದ್ರಃ ಸೂರ್ಯ್ಯಲೋಕಸ್ತಸ್ಯ ಶತ್ರುರಿವ ಮೇಘಃ .

'ಇಂದ್ರ', ಎಂದರೆ ಸೂರ್ಯಲೋಕ ; ಅದರ ಶತ್ರುವಿನಂತೆ ಇರುತ್ತದೆ ಮೇಘ!

ಅತ್ರ 'ಇಂದ್ರಶತ್ರು'ಶಬ್ದೇ ತತ್ಪುರುಷ-ಸಮಾಸಾರ್ಥಮಂತೋದಾತ್ತೇ ಕರ್ತ್ತವ್ಯೇ ಆದ್ಯುದಾತ್ತ-ಕರಣಾದ್* ಬಹುವ್ರೀಹಿಃ ಸಮಾಸಃ ಕೃತೋ ಭವತಿ.

ಇಲ್ಲಿ 'ಇಂದ್ರಶತ್ರು', ಎಂಬ ಶಬ್ದವು ತತ್ಪುರುಷ ಸಮಾಸದ ಪ್ರಯೋಜನಕ್ಕಾಗಿ ಅಂತೋದಾತ್ತವಾಗಿ ಉಚ್ಚರಿಸಬೇಕಾಗಿರುವ ಸ್ಥಾನದಲ್ಲಿ ಆದ್ಯುದಾತ್ತವಾಗಿ ಉಚ್ಚರಿಸಲ್ಪಡುವುದರಿಂದ, ಬಹುವ್ರೀಹಿಸಮಾಸವು ಸಿದ್ಧವಾಗುತ್ತದೆ.

ಅಂದರೆ, **'ಇಂದ್ರಶತ್ರು'**, ಎಂಬ ಶಬ್ದದಲ್ಲಿ ಇಕಾರದಲ್ಲಿ ಉದಾತ್ತ ಸ್ವರವನ್ನು ಹೇಳುವುದರಿಂದ* ಬಹುವ್ರೀಹಿಸಮಾಸವೂ, ಹಾಗೂ ಅನ್ಯ ಪದಾರ್ಥದ ಬೋಧವೂ ಉಂಟಾಗುತ್ತದೆ.

ಮತ್ತು ಅಂತೋದಾತ್ತವನ್ನು** ಹೇಳುವುದರಿಂದ, ತತ್ಪುರುಷಸಮಾಸವೂ, ಹಾಗೂ ಉತ್ತರ ಪದಾರ್ಥದ ಬೋಧವೂ ಆಗುತ್ತದೆ.

ಸೂರ್ಯನಿಗೆ 'ಇಂದ್ರ', ಎಂದೂ ಮತ್ತು ಮೇಘಕ್ಕೆ 'ವೃತ್ರಾಸುರ', ಎಂದೂ ಹೆಸರಿದೆ.

ಅಸ್ಮಿನ್ ವಿಷಯೇ ತುಲ್ಯಯೋಗಿತಾಲಂಕಾರೇಣ ಮೇಘಸೂರ್ಯಯೋರ್ವರ್ಣನಂ ಕೃತಮಿತಿ.

ಈ ವಿಷಯದಲ್ಲಿ ತುಲ್ಯಯೋಗಿತಾಲಂಕಾರದಿಂದ ಮೇಘದ ಮತ್ತು ಸೂರ್ಯನ ವರ್ಣನೆಯು ಮಾಡಲ್ಪಟ್ಟಿದೆ, ಎಂದು ತಿಳಿಯಬೇಕು!

---

* ಇಂದ್ರಶತ್ರುಃ _ಅನು.

* ಇಂದ್ರಶತ್ರುಃ _ಅನು. ** ಇಂದ್ರಶತ್ರುಃ _ಅನು.

ಅಂದರೆ, ಈ ಸಂಬಂಧದಲ್ಲಿ **ವೃತ್ರಾಸುರ**, ಎಂದರೆ ಮೇಘದ ವರ್ಣನೆಯು **ತುಲ್ಯಯೋಗಿತಾಲಂಕಾರದಿಂದ** ಮಾಡಲ್ಪಟ್ಟಿದೆ.

ತತೋಽರ್ಥವೈಪರೀತ್ಯಂ ಜಾಯತೇ.

ಅದರಿಂದ, ವಿರುದ್ಧವಾದ ಅರ್ಥದ [ಸಂಭಾವನೆಯೂ] ಉಂಟಾಗುತ್ತದೆ.+

ಉತ್ತರಪದಾರ್ಥಪ್ರಧಾನಸ್ತತ್ಪುರುಷೋಽನ್ಯಪದಾರ್ಥಪ್ರಧಾನೋ ಬಹುವ್ರೀಹಿಃ ಸಮಾಸೋ ಭವತಿ.

ತತ್ಪುರುಷಸಮಾಸವು ಉತ್ತರಪದದ ಅರ್ಥದಲ್ಲಿ ಪ್ರಧಾನವಾಗಿಯೂ, ಮತ್ತು ಬಹುವ್ರೀಹಿಸಮಾಸವು ಅನ್ಯಪದದ ಅರ್ಥದಲ್ಲಿ ಪ್ರಧಾನವಾಗಿಯೂ ಇರುತ್ತದೆ.

ತತ್ರ ಯಸ್ಯೇಚ್ಛಾ ಮೇಘಸ್ಯ* ಗ್ರಹಣೇಽಸ್ತಿ, ತೇನೇಂದ್ರಶತ್ರುಶಬ್ದಃ ತತ್ಪುರುಷಸಮಾಸೇನಾಂತೋದಾತ್ತ ಉಚ್ಚಾರಣೀಯಃ .

ಅದರಲ್ಲಿ_ ಯಾವನ ಇಚ್ಛೆಯು **ಮೇಘದ** ಸ್ವೀಕಾರದಲ್ಲಿರುತ್ತದೋ, ಅವನಿಂದ, **'ಇಂದ್ರಶತ್ರು'**, ಎಂಬ ಶಬ್ದವು **ತತ್ಪುರುಷಸಮಾಸದಲ್ಲಿ ಅಂತೋದಾತ್ತ**ವಾಗಿ ಉಚ್ಚರಿಸಲ್ಪಡಬೇಕು!

ಅಂದರೆ, ಯಾವನು **'ಮೇಘ'**ದ ವೃದ್ಧಿಯನ್ನು ಇಚ್ಛಿಸುತ್ತಾನೋ, ಅವನು ಸಮಾಸದಲ್ಲಿ ಅಂತೋದಾತ್ತ [ಸ್ವರ]ದ ಉಚ್ಚಾರಣೆ ಮಾಡಬೇಕು!

ಯಸ್ಯ ಚ ಸೂರ್ಯಸ್ಯ*, ತೇನ ಬಹುವ್ರೀಹಿಸಮಾಸಮಾಶ್ರಿತ್ಯಾದ್ಯುದಾತ್ತಸ್ವರಶ್ಚೇತಿ ನಿಯಮೋಽಸ್ತಿ.

ಮತ್ತು ಯಾವನ [ಇಚ್ಛೆಯು] **'ಸೂರ್ಯ'**ನ ಸ್ವೀಕಾರದಲ್ಲಿರುತ್ತದೋ, ಅವನಿಂದ **ಬಹುವ್ರೀಹಿ ಸಮಾಸ**ವನ್ನು ಆಶ್ರಯಿಸಿಕೊಂಡು, **ಆದ್ಯುದಾತ್ತಸ್ವರ**ವು [ಉಚ್ಚರಿಸಲ್ಪಡಬೇಕು,] ಎಂಬ ನಿಯಮವಿದೆ.

ಅಂದರೆ, ಯಾವನು **ಸೂರ್ಯ**ನ ಉತ್ತಮತ್ವವನ್ನು ಇಚ್ಛಿಸುತ್ತಾನೋ, ಅವನು **ಆದ್ಯುದಾತ್ತ**[ಸ್ವರ]ದ ಉಚ್ಚಾರಣೆ ಮಾಡಬೇಕು!

ಅತ್ರಾನ್ಯಥಾತ್ವೇ ಕೃತೇ ಮನುಷ್ಯಸ್ಯ ದೋಷ ಏವ ಗಣ್ಯತೇ.

ಈ ವಿಷಯದಲ್ಲಿ ವಿರುದ್ಧವಾಗಿ ಮಾಡುವುದಾದರೆ, [ಅದು] ಮನುಷ್ಯನ ದೋಷವೇ [ಆಗಿರುತ್ತದೆ,] ಎಂದು ಎಣಿಸಲ್ಪಡುತ್ತದೆ.

ಅಂದರೆ, ಈ ದೋಷವು ಮಾತನಾಡುವವನದು, ಎಂದೇ ಎಣಿಸಲಾಗುತ್ತದೆ.

---

* ಅತ್ರ ಮೂಲಗ್ರಂಥೇ ಲೇಖಕಪ್ರಮಾದೇನ 'ಮೇಘಸ್ಯ'-'ಸೂರ್ಯಸ್ಯ' ಇತಿ ಪದಯೋಃ ಪರಸ್ಪರಂ ವ್ಯತ್ಯಾಸಃ ಸಮಜನಿ. _ಯು. ಮೀ.
ಅಸ್ಮಿನ್ ಕನ್ನಡಸಂಸ್ಕರಣೇ ವ್ಯತ್ಯಾಸೋಽಯಂ ನಿರಾಕೃತಃ _ಅನು.

+ 'ಇಂದ್ರಶತ್ರು', ಎಂಬ ಶಬ್ದದ ಸ್ವರೋಚ್ಚಾರಣೆಯ ಭೇದದ ಕಥಾನಕವು ವಿಸ್ತೃತವಿವರಣೆಯೊಡನೆ **'ವೇದಶಿಕ್ಷಣ'**, ಎಂಬ ಪುಸ್ತಕದ ಪ್ರಥಮ ಹಂತ ಪುಟ ೪೫ ರಿಂದ ೪೮ ರವರೆಗೆ ಕೊಡಲ್ಪಟ್ಟಿದೆ. _ಅನು.

ಅತಃ ಕಾರಣಾತ್ ಸ್ವರೋಚ್ಚಾರಣಂ ವರ್ಣೋಚ್ಚಾರಣಂ ಚ ಯಥಾವದೇವ ಕರ್ತ್ತವ್ಯಮಿತಿ ॥೧॥

ಈ ಕಾರಣದಿಂದ, ಸ್ವರದ ಉಚ್ಚಾರಣೆಯನ್ನೂ, ಹಾಗೂ ವರ್ಣದ ಉಚ್ಚಾರಣೆಯನ್ನೂ ಸರಿ ಸರಿಯಾಗಿಯೇ ಮಾಡಬೇಕು! [೧]

ಶಬ್ದೋಚ್ಚಾರಣದಂತೆಯೇ ಇತರ ವ್ಯವಹಾರಗಳಲ್ಲೂ ಶಿಕ್ಷಣ

ತಥಾ ಭಾಷಣ-ಶ್ರವಣಾಸನ-ಗಮನೋತ್ಥಾನ-ಭೋಜನಾಧ್ಯಯನ-ವಿಚಾರಾರ್ಥಯೋಜನಾದೀನಾಮಪಿ ಶಿಕ್ಷಾ ಕರ್ತ್ತವ್ಯೈವ.

ಹಾಗೆಯೇ, ಭಾಷಣ-ಶ್ರವಣ-ಆಸನ-ಗಮನ-ಉತ್ಥಾನ-ಭೋಜನ-ಅಧ್ಯಯನ-ವಿಚಾರ-ಅರ್ಥಯೋಜನೆ ಮೊದಲಾದುವುಗಳ ಶಿಕ್ಷಣವನ್ನು ಕೂಡ, ಕೊಡಲೇಬೇಕು!

ಅಂದರೆ, ಹುಡುಗರಿಗೆ ಮತ್ತು ಹುಡುಗಿಯರಿಗೆ_

ಮಾತನಾಡುವುದು-ಆಲಿಸುವುದು ; ಕುಳಿತುಕೊಳ್ಳುವುದು-ಹೋಗುವುದು-ಏಳುವುದು ; ತಿನ್ನುವುದು-ಕುಡಿಯುವುದು; ಓದುವುದು-ವಿಚಾರಮಾಡುವುದು ; ಹಾಗೂ ಪದಾರ್ಥಗಳನ್ನು ತಿಳಿಯುವುದು ಮತ್ತು ಜೋಡಿಸುವುದು ಮೊದಲಾದುವುಗಳ ಶಿಕ್ಷಣವನ್ನೂ ಕೂಡ, ಕೊಡಬೇಕು!

ಅರ್ಥಜ್ಞಾನೇನ ಸಹೈವ ಪಠನೇ ಕೃತೇ ಪರಮೋತ್ತಮಂ ಫಲಂ ಪ್ರಾಪ್ನೋತಿ.

ಅರ್ಥಜ್ಞಾನದೊಡನೆ ಓದುವುದರಿಂದಲೇ, ಅತ್ಯಂತ ಉತ್ತಮವಾದ ಫಲವನ್ನು ಪಡೆಯುತ್ತಾನೆ!

ಅಂದರೆ, ಅರ್ಥಜ್ಞಾನವಿಲ್ಲದೇ ಓದುವ ಯಾವನೂ ಉತ್ತಮ ಫಲವನ್ನು ಪ್ರಾಪ್ತ ಮಾಡಿಕೊಳ್ಳಲಾರನು!

ಕೇವಲ ವೇದಪಾಠಿಯು ಉತ್ತಮ!

ಪರಂತು ಯೋ ನ ಪಠತಿ, ತಸ್ಮಾತ್ ಸ್ವಯಂ ಪಾಠಮಾತ್ರಕಾರ್ಯ್ಯಪ್ಯುತ್ತಮೋ ಭವತಿ.

ಆದರೆ, ಯಾವನು ಓದುವುದಿಲ್ಲವೋ,* ಅವನಿಗಿಂತ ಕೇವಲ ಪಾಠವನ್ನು ಮಾತ್ರ ಮಾಡುವವನು ಕೂಡ, ಉತ್ತಮನಾಗಿರುತ್ತಾನೆ.**

ಅಂದರೆ, ಸ್ವಲ್ಪವನ್ನೂ ಓದದಿರುವವನಿಗಿಂತಲೂ ಪಾಠಮಾತ್ರ [ಮಾಡುವುದನ್ನು] ತಿಳಿದಿರುವವನೇ ಶ್ರೇಷ್ಠನಾಗಿರುತ್ತಾನೆ!

---

* ಎಂದರೆ, ಅಧ್ಯಯನ ಮಾಡುವುದಿಲ್ಲವೋ _ಅನು.

** ದಕ್ಷಿಣಭಾರತದ ಸಸ್ವರವೇದಪಾಠಿಗಳು ಇದಕ್ಕೆ ಉದಾಹರಣೆ. _ಅನು.

ಅರ್ಥವನ್ನು ತಿಳಿದ ವಿದ್ಯಾರ್ಥಿಯು ಉತ್ತಮತರ!!

ಯಸ್ತು ಖಲು ಶಬ್ದಾರ್ಥಸಂಬಂಧವಿಜ್ಞಾನ-ಪುರಸ್ಸರಮಧೀತೇ, ಸ ಉತ್ತಮತರಃ.

ಮತ್ತು ಯಾವನಂತೂ ಶಬ್ದ-ಅರ್ಥಗಳ ಸಂಬಂಧದ ವಿಶೇಷ ಜ್ಞಾನದೊಡನೆ ಅಧ್ಯಯನ ಮಾಡುತ್ತಾನೋ, ಅವನು ಶ್ರೇಷ್ಠತರನಾಗಿರುತ್ತಾನೆ!

ಪಾಠ, ಅರ್ಥ ಹಾಗೂ ಶುಭಾಚರಣೆಯನ್ನುಳ್ಳ ವಿದ್ಯಾರ್ಥಿಯು ಉತ್ತಮತಮ!!!

ಯಶ್ಚೈವಂ ವೇದಾನ್ ಪಠಿತ್ವಾ ವಿಜ್ಞಾಯ ಚ ಶುಭಗುಣಕರ್ಮಾಚರಣೇನ ಸರ್ವೋಪಕಾರೀ ಭವತಿ, ಸ ಉತ್ತಮತಮಃ.

ಮತ್ತು ಯಾವನು ಹೀಗೆ ವೇದಗಳನ್ನು ಓದಿ, ಹಾಗೂ ತಿಳಿದುಕೊಂಡು, ಶುಭಗುಣ-ಕರ್ಮಗಳ ಆಚರಣೆಯಿಂದ ಸರ್ವರಿಗೂ ಉಪಕಾರಿಯಾಗುತ್ತಾನೋ, ಅವನು ಶ್ರೇಷ್ಠತಮನಾಗಿರುತ್ತಾನೆ!

ಅಂದರೆ, ಯಾವನು ವೇದಗಳನ್ನು ಅರ್ಥ ಸಹಿತವಾಗಿ ಯಥಾವತ್ತಾಗಿ ಓದಿಕೊಂಡು, ಶುಭಗುಣಗಳ ಗ್ರಹಣವನ್ನೂ, ಹಾಗೂ ಉತ್ತಮ ಕರ್ಮಗಳನ್ನೂ ಮಾಡುತ್ತಾನೋ, ಅವನೇ ಎಲ್ಲರಿಗಿಂತ ಉತ್ತಮನಾಗಿರುತ್ತಾನೆ!

ಅತ್ರ ಪ್ರಮಾಣಾನಿ_

ಇದಕ್ಕೆ ಪ್ರಮಾಣಗಳೇನೆಂದರೆ_

ಅಂದರೆ, ಈ ವಿಷಯದಲ್ಲಿ ವೇದಮಂತ್ರಗಳ ಬಹಳ ಪ್ರಮಾಣಗಳಿವೆ.

ಉದಾಹರಣೆಗಾಗಿ_

ಬ್ರಹ್ಮನನ್ನು ತಿಳಿಯದವನು ವೇದದಿಂದ ಏನು ಮಾಡಬಲ್ಲನು?

[ಋಷಿಃ_ ದೀರ್ಘತಮಾಃ; ದೇವತಾ_ ವಿಶ್ವೇದೇವಾಃ; ಛಂದಃ_ ಭುರಿಕ್ ತ್ರಿಷ್ಟುಪ್; ಸ್ವರಃ_ ಧೈವತಃ]

ಋಚೋ ಅಕ್ಷರೇ ಪರಮೇ ವ್ಯೋಮನ್
ಯಸ್ಮಿನ್ ದೇವಾ ಅಧಿ ವಿಶ್ವೇ ನಿಷೇದುಃ ।
ಯಸ್ತನ್ನ ವೇದ ಕಿಮೃಚಾ ಕರಿಷ್ಯತಿ
ಯ ಇತ್ತದ್ವಿದುಸ್ತ ಇಮೇ ಸಮಾಸತೇ ॥ ೨ ॥

[ಋಗ್ವೇದೇ ಮಂ. ೧, ಸೂ. ೧೬೪, ಮಂ. ೩೯]

[ಅರ್ಥ:_ "ಯಾವ ನಾಶರಹಿತನೂ, ಸರ್ವೋತ್ಕೃಷ್ಟನೂ, ವ್ಯಾಪಕನೂ ಆದ [ಬ್ರಹ್ಮ] ನಲ್ಲಿ ಋಚೆಗಳೂ, [ಹಾಗೂ] ಸಮಸ್ತ ದೇವತೆಗಳೂ ಸ್ಥಿತರಾಗಿದ್ದಾರೋ, ಅವನನ್ನು ಯಾವನು ತಿಳಿಯಲಿಲ್ಲವೋ, [ಅವನು] ಋಚೆಯಿಂದ ಏನು [ತಾನೇ] ಮಾಡುವನು? ಯಾರು ಅವನನ್ನು ತಿಳಿದುಬಿಡುತ್ತಾರೋ, ಆ ಇವರೇ ಸರಿಯಾದವರಾಗಿರುತ್ತಾರೆ."

(ಋಗ್ವೇದ: ೧. ೧೬೪. ೩೯)]

ಭಾಷ್ಯಮ್_

ಅಭಿಪ್ರಾಯಃ_

ಅತ್ರಾರ್ಥಜ್ಞಾನೇನ ವಿನಾಽಽಧ್ಯಯನಸ್ಯ ನಿಷೇಧಃ ಕ್ರಿಯತ ಇತಿ.

(ಋಚೋ ಅಕ್ಷರೇ.) ಯಸ್ಮಿನ್ ವಿನಾಶರಹಿತೇ ಪರಮೋತ್ಕೃಷ್ಟೇ ವ್ಯೋಮವದ್ ವ್ಯಾಪಕೇ ಬ್ರಹ್ಮಣಿ ಚತ್ವಾರೋ ವೇದಾಃ ಪರ್ಯ್ಯವಸಿತಾರ್ಥಾಃ ಸಂತಿ ;

ಋಗುಪಲಕ್ಷಣಂ ಚತುರ್ಣಾಂ ವೇದಾನಾಂ ಗ್ರಹಣಾರ್ಥಮ್ ;

ತತ್ ಕಿಂ ಬ್ರಹ್ಮೇತಿ?

ಅತ್ರಾಹ_

ಭಾಷ್ಯ_

[ಇದರ] ಅಭಿಪ್ರಾಯವೇನೆಂದರೆ_

ಇಲ್ಲಿ ಈ ಮಂತ್ರದಿಂದ, ಅರ್ಥಜ್ಞಾನವಿಲ್ಲದೇ ಅಧ್ಯಯನ ಮಾಡುವುದರ ನಿಷೇಧ ಮಾಡಲಾಗಿದೆ!

(ಋಚೋ ಅಕ್ಷರೇ.) (ಯಸ್ಮಿನ್) ಯಾವ (ಅಕ್ಷರೇ) ವಿನಾಶರಹಿತನೂ (ಪರಮೇ) ಅತ್ಯಂತ ಉತ್ಕೃಷ್ಟನೂ (ವ್ಯೋಮನ್) ಆಕಾಶದಂತೆ ವ್ಯಾಪಕನೂ ಆದ ಬ್ರಹ್ಮನಲ್ಲಿ (ಋಚಃ) ನಾಲ್ಕೂ ವೇದಗಳೂ ಪರಿಪೂರ್ಣವಾಗಿ ವಿದ್ಯಮಾನವಾಗಿವೆಯೋ ;

ಅಂದರೆ_

ಪ್ರಶ್ನೆ_

ಯಾವನ ವಿನಾಶವು ಎಂದಿಗೂ ಆಗುವುದಿಲ್ಲವೋ, ಮತ್ತು ಯಾವನು ಎಲ್ಲರಿಗಿಂತ ಶ್ರೇಷ್ಠನೋ, ಆಕಾಶದಂತೆ ವ್ಯಾಪಕನೋ, ಎಲ್ಲರಲ್ಲಿಯೂ ಇರುವ ಪರಮೇಶ್ವರನೂ ಆಗಿದ್ದಾನೋ, ಮತ್ತು ಯಾವನು ಅರ್ಥಸಹಿತವಾಗಿ ನಾಲ್ಕೂ ವೇದಗಳನ್ನು ವರ್ತಮಾನವನ್ನಾಗಿಟ್ಟಿದ್ದಾನೋ, ಹಾಗೂ ಈ ಎಲ್ಲಾ ಜಗತ್ತು ಯಾವನಿಂದ ಉತ್ಪನ್ನ ವಾಗಿದೆಯೋ ;

[ಇಲ್ಲಿ] ನಾಲ್ಕೂ ವೇದಗಳ ಸ್ವೀಕಾರಕ್ಕಾಗಿ ಋಚಃ, ಎಂಬುದು ಉಪಲಕ್ಷಣವಾಗಿದೆ ;

ಆ ಬ್ರಹ್ಮನು ಯಾವನು?

ಅಂದರೆ, ಆ ಬ್ರಹ್ಮವು ಯಾವ ವಸ್ತುವಾಗಿದೆ?

ಇದಕ್ಕೆ ಉತ್ತರ ಹೇಳಲಾಗುತ್ತದೇನೆಂದರೆ_

ಉತ್ತರ_

ಯಸ್ಮಿನ್ ವಿಶ್ವೇದೇವಾಃ ಸರ್ವೇ ವಿದ್ವಾಂಸೋ ಮನುಷ್ಯಾ ಇಂದ್ರಿಯಾಣಿ ಚ ;

ಯಾವನಲ್ಲಿ (**ವಿಶ್ವೇದೇವಾಃ**) ಸಮಸ್ತ ವಿದ್ವಾಂಸರೂ, ಮನುಷ್ಯರೂ, ಇಂದ್ರಿಯಗಳೂ, ಮತ್ತು_

ಸೂರ್ಯ್ಯಾದಯಶ್ಚ ಸರ್ವೇ ಲೋಕಾ ಅಧಿನಿಷೇದುರ್ಯದಾಧಾರೇಣ ನಿಷಣ್ಣಾಃ ಸ್ಥಿತಾಸ್ತದ್ ಬ್ರಹ್ಮ ವಿಜ್ಞೇಯಮ್.

ಸೂರ್ಯ ಮೊದಲಾದ ಸಮಸ್ತ ಲೋಕಗಳೂ (**ಅಧಿನಿಷೇದುಃ**) ಯಾವುದರ ಆಧಾರದಿಂದ ಸ್ಥಿತವಾಗಿವೆಯೋ, ಅದು ಬ್ರಹ್ಮ, ಎಂದು ತಿಳಿಯಲ್ಪಡಬೇಕು!

ಅಂದರೆ, ಯಾವನಲ್ಲಿ ಸಂಪೂರ್ಣವಿದ್ವಾಂಸರೂ, ಸಮಸ್ತ ಇಂದ್ರಿಯಗಳೂ, ಎಲ್ಲೂ ಮನುಷ್ಯರೂ ಮತ್ತು ಸೂರ್ಯ್ಯಾದಿ ಲೋಕಗಳೆಲ್ಲವೂ ಸ್ಥಿತವಾಗಿವೆಯೋ, ಅವನು ಪರಮೇಶ್ವರ, ಎಂದು ಕರೆಯಲ್ಪಡುತ್ತಾನೆ.

(ಯಸ್ತಂ ನ ವೇದ.) ಯಃ ಖಲು ತಂ ನ ಜಾನಾತಿ ಸರ್ವೋಪಕಾರಕರಣಾರ್ಥಾಯಾಮೀಶ್ವರಾಜ್ಞಾಯಾಂ ಯಥಾವನ್ನ ವರ್ತ್ತತೇ ;

(**ಯಃ ತಂ ನ ವೇದ**) ಯಾವನು ಅವನನ್ನು* ತಿಳಿದಿಲ್ಲವೋ, [ಎಂದರೆ,] ಎಲ್ಲರಿಗೂ ಉಪಕಾರ ಮಾಡುವ ಸಲುವಾಗಿ ಈಶ್ವರನ ಆಜ್ಞೆಯಂತೆ ಯಥಾವತ್ತಾಗಿ ವರ್ತಿಸುವುದಿಲ್ಲವೋ ;

ಸ ಪಠಿತಯಾಽಪಿ ಋಚಾ ವೇದೇನ ಕಿಂ ಕರಿಷ್ಯತಿ?

ಅವನು ವೇದವನ್ನು ಓದಿದರೂ ಕೂಡ, ಅದರಿಂದ ಏನು ಮಾಡಬಲ್ಲನು?

ಅಂದರೆ, ಯಾವ ಮನುಷ್ಯನು ವೇದಗಳನ್ನು ಓದಿ[ಯೂ] (ಕೂಡ,) ಈಶ್ವರನನ್ನು ತಿಳಿಯಲಿಲ್ಲವೋ ;

ನೈವಾಯಂ ಕದಾಚಿದ್ ವೇದಾರ್ಥವಿಜ್ಞಾನಜಾತಂ ಕಿಮಪಿ ಫಲಂ ಪ್ರಾಪ್ನೋತೀತ್ಯರ್ಥಃ .

ಅವನು ಎಂದಿಗೂ ವೇದಗಳ ಅರ್ಥದ ವಿಶೇಷ ಜ್ಞಾನದಿಂದ ಉತ್ಪನ್ನವಾಗುವ ಯಾವ ಫಲವನ್ನೂ ಕೂಡ, ಪಡೆಯಲೇ ಲಾರನು, ಎಂದು ಅರ್ಥ.

ಅಂದರೆ, ವೇದಾರ್ಥವನ್ನು ತಿಳಿಯುವ ಫಲವು ಅವನಿಗೆ ಸಿಗಬಲ್ಲುದೇನು? ಎಂದಿಗೂ ಇಲ್ಲ!

(ಯ ಇತ್ತದ್ವಿದುಸ್ತ ಇಮೇ ಸಮಾಸತೇ) ಯೇ ಚೈವಂ ತದ್ ಬ್ರಹ್ಮ ವಿದುಸ್ತ ಏವ ಧರ್ಮಾರ್ಥಕಾಮಮೋಕ್ಷಾಖ್ಯಂ ಫಲಂ ಸಮ್ಯಕ್ ಪ್ರಾಪ್ನುವಂತಿ .

ಮತ್ತು (**ಯೇ**) ಯಾರು ಹೀಗೆ (**ಇತ್ ತದ್**) ಬ್ರಹ್ಮನನ್ನು (**ವಿದುಃ**) ತಿಳಿಯುತ್ತಾರೋ, (**ತೇ ಇಮೇ**) ಅವರೇ ಧರ್ಮ-ಅರ್ಥ-ಕಾಮ-ಮೋಕ್ಷ, ಎಂದು ಹೇಳಲ್ಪಡುವ ಫಲವನ್ನು (**ಸಮಾಸತೇ**) ಚೆನ್ನಾಗಿ ಪಡೆದು ಕೊಳ್ಳುತ್ತಾರೆ!

---

* ಎಂದರೆ, ಪರಮೇಶ್ವರನನ್ನು _ಅನು.

ಅಂದರೆ, ಹೇಗೆ '(೪) ವೇದವಿಷಯ'[ಅಧ್ಯಾಯ] ದಲ್ಲಿ* ಬರೆದಿದ್ದೇವೋ, ಹಾಗೆ ವ್ಯವಹಾರವನ್ನು ಮಾಡುವ ಮನುಷ್ಯರು ಅತ್ಯಂತ ಆನಂದವನ್ನು ಹೊಂದುತ್ತಾರೆ!

ಆದರೆ, ಯಾವನಾದರೂ, ಪಾಠಮಾತ್ರವನ್ನೇ ಓದುತ್ತಾನೋ, ಅವನು ಉತ್ತಮ ಸುಖವನ್ನು ಎಂದಿಗೂ ಪ್ರಾಪ್ತ ಮಾಡಿಕೊಳ್ಳಲಾರನು!

ತಸ್ಮಾತ್ ಸಾರ್ಥಕಮೇವ ವೇದಾದೀನಾ-ಮಧ್ಯಯನಂ ಕರ್ತ್ತವ್ಯಮ್ ॥ ೨ ॥

ಆದುದರಿಂದ, ಅರ್ಥಪೂರ್ವಕವಾಗಿಯೇ ವೇದಾದಿಗಳ ಅಧ್ಯಯನವನ್ನು ಮಾಡಬೇಕು!

ಅಂದರೆ, ಈ ಕಾರಣದಿಂದ, ಏನನ್ನು ಓದಿದರೂ, ಅರ್ಥಜ್ಞಾನಪೂರ್ವಕವಾಗಿಯೇ ಓದಬೇಕು! [೨]

ಅರ್ಥಜ್ಞಾನರಹಿತವಾದ ಅಧ್ಯಯನವು ಭಾರವಾಹಿ ಪಶುವಿನಂತೆ!

**"ಸ್ಥಾಣುರಯಂ ಭಾರಹಾರಃ ಕಿಲಾಭೂದಧೀತ್ಯ
ವೇದಂ ನ ವಿಜಾನಾತಿ ಯೋಽರ್ಥಮ್ ।
ಯೋಽರ್ಥಜ್ಞ ಇತ್ಸಕಲಂ ಭದ್ರಮಶ್ನುತೇ
ನಾಕಮೇತಿ ಜ್ಞಾನವಿಧೂತಪಾಪ್ಮಾ ॥ ೩ ॥"

[ನಿರುಕ್ತೇ ಅ. ೧, ಖಂ. ೧೮]

[ಅರ್ಥ:_ "ಯಾವನು ವೇದವನ್ನು ಓದಿ, ಅರ್ಥವನ್ನು ತಿಳಿಯುವುದಿಲ್ಲವೋ, ಅವನು ನಿಶ್ಚಯವಾಗಿ ಮರದ ಕೊರಡಿನಂತೆಯೂ, ಭಾರವನ್ನು ಹೊರುವ [ಪಶುವಿನ]ಂತೆಯೂ ಇರುತ್ತಾನೆ! ಯಾವನು ಅರ್ಥವನ್ನೂ ತಿಳಿಯುವವನಾಗಿರುತ್ತಾನೋ, ಅವನೇ ಎಲ್ಲ ಸುಖವನ್ನು ಭೋಗಿಸುತ್ತಾನೆ! [ಮತ್ತು] ಜ್ಞಾನದಿಂದ ಪಾಪವನ್ನು ತೊಳೆಯಲ್ಪಟ್ಟವನಾಗಿ, ಆನಂದವನ್ನು ಪಡೆಯುತ್ತಾನೆ!

(ನಿರುಕ್ತ: ೧. ೧೮)]

ಭಾಷ್ಯಮ್_

(ಸ್ಥಾಣುರಯಂ.) ಯಃ ಪುರುಷೋ ವೇದ-ಮಧೀತ್ಯ ಪಾಠಮಾತ್ರಂ ಪಠಿತ್ವಾಽರ್ಥಂ ನ ಜಾನಾತಿ ;

ಭಾಷ್ಯ_

(ಸ್ಥಾಣುರಯಂ.) ಯಾವ ಮನುಷ್ಯನು (ವೇದ-ಮಧೀತ್ಯ) ವೇದದ ಪಾಠಮಾತ್ರವನ್ನು ಓದಿ, (ಅರ್ಥಂ ನ ವಿಜಾನಾತಿ) ಅರ್ಥವನ್ನು ತಿಳಿಯುತ್ತಿಲ್ಲವೋ ;

** ಸ್ವರಚಿಹ್ನಯುಕ್ತೋಽಯಂ ಶ್ಲೋಕಃ ಕಾಂಚನ ವೇದಶಾಖಾಂ ಸಂಕೇತಯತಿ _ಅನು.

* ಪುಟ ೮೩- ೨೧೨ ನ್ನು ನೋಡಿ _ಅನು.

ತಂ ವಿಜ್ಞಾಯಾಽಪಿ ಧರ್ಮಂ ನಾಚರತಿ ;

ಅಥವಾ ಅದನ್ನು ತಿಳಿದರೂ ಕೂಡ, ಧರ್ಮವನ್ನು ಆಚರಿಸುತ್ತಿಲ್ಲವೋ ;

ಸ ಮನುಷ್ಯಃ ಸ್ಥಾಣುಃ ಕಾಷ್ಠಸ್ತಂಭವದ್ ಭವತಿ ;

ಆ ಮನುಷ್ಯನು (ಸ್ಥಾಣುಃ) ಮರದ ಕಂಬದಂತೆ ಇರುತ್ತಾನೆ ;

ಅರ್ಥಾಜ್ಜಡವದ್ ವಿಜ್ಞೇಯೋ ಭಾರವಾಹಶ್ಚ.

ಎಂದರೆ, ಅವನನ್ನು ಜಡದಂತೆ ಇರುವವನು, ಎಂದೂ, ಹಾಗೂ ಭಾರವನ್ನು ಹೊರುವವನು, ಎಂದೂ ತಿಳಿಯಬೇಕು!

ಅಂದರೆ, ಯಾವ ಮನುಷ್ಯನು ವೇದಗಳನ್ನು ಓದಿ(ಯೂ), ಅವುಗಳ ಅರ್ಥವನ್ನು ತಿಳಿದಿಲ್ಲವೋ, ಅವನು ಅವುಗಳ ಸುಖವನ್ನು ಪಡೆಯದೇ, ಭಾರವನ್ನು ಹೊರುವ ಪಶುವಿನಂತೆಯೂ; ಅಥವಾ ತನ್ನ ಫಲ-ಪುಷ್ಪ-ಶಾಖೆ ಮೊದಲಾದುವುಗಳನ್ನು ಅವುಗಳ ಗುಣಗಳ ತಿಳಿವಳಿಕೆ ಇಲ್ಲದೇ, ಹೊರುತ್ತಿರುವ ವೃಕ್ಷಕ್ಕೆ ಸಮಾನ ವಾಗಿಯೂ ಇರುತ್ತಾನೆ.

ಯಥಾ_

ಉದಾಹರಣೆಗಾಗಿ_

ಕಶ್ಚಿನ್ಮನುಷ್ಯಃ ಪಶುಶ್ಚ ಭಾರಮಾತ್ರಂ ವಹಂಸ್ತನ್ನ ಭುಂಕ್ತೇ ;

ಯಾವನೋ ಮನುಷ್ಯನು, ಅಥವಾ ಪಶುವು ಭಾರಮಾತ್ರವನ್ನು ಹೊರುತ್ತಿದ್ದರೂ, [ಕೂಡ,] ಅದನ್ನು ಉಪಭೋಗಿಸುವುದಿಲ್ಲ ;

ಕಿಂತು ತೇನೋಢಂ ಘೃತ-ಮಿಷ್ಟ-ಕಸ್ತೂರೀ-ಕೇಶರಾದಿಕಂ ಕಶ್ಚಿದ್ ಭಾಗ್ಯವಾನನ್ಯೋ ಭುಂಕ್ತೇ.

ಬದಲಾಗಿ, ಅದರಿಂದ ಹೊರಲ್ಪಡುತ್ತಿರುವ ತುಪ್ಪ, ಸಿಹಿ, ಕಸ್ತೂರಿ, ಕೇಸರಿ ಮೊದಲಾದುವನ್ನು ಬೇರೆ ಭಾಗ್ಯ ವಂತನಾದವನು ಯಾವನೋ ಭುಂಜಿಸುತ್ತಾನೆ!

ಅಂದರೆ, ಪಾಠ[ಮಾತ್ರ]ವನ್ನು ಓದುವವರೂ ಕೂಡ, [ಅದರ] ಪರಿಶ್ರಮರೂಪದ ಭಾರವನ್ನಂತೂ ಹೊರುತ್ತಾರೆ! ಆದರೆ, ಅದರ ಸುಖವನ್ನು ಭೋಗಿಸುವ ಬೇರಾವನೋ ಭಾಗ್ಯವಂತ ಮನುಷ್ಯನಂತೆ, ಅವುಗಳ ಅರ್ಥಜ್ಞಾನದಿಂದ [ಪ್ರಾಪ್ತವಾಗುವ] ಆನಂದಸ್ವರೂಪ ಫಲವನ್ನು ಭೋಗಿಸಲಾರರು!

ಯೋಽರ್ಥವಿಜ್ಞಾನಶೂನ್ಯಮಧ್ಯಯನಂ ಕರೋತಿ ;

ಯಾವನು ಅರ್ಥದ ವಿಶೇಷಜ್ಞಾನದಿಂದ ರಹಿತವಾದ ಅಧ್ಯಯನವನ್ನು ಮಾಡುತ್ತಾನೋ ;

ಸ ಭಾರವಾಹವತ್ (ಕಿಲಾಭೂತ್) ಭವತೀತಿ ಮಂತವ್ಯಮ್.

ಅವನು ಭಾರ ಹೊರುವವನಂತೆ (ಕಿಲಾಭೂತ್) ಇರುತ್ತಾನೆ, ಎಂದು ತಿಳಿಯಬೇಕು!

ಅರ್ಥವನ್ನು ತಿಳಿದು ಓದುವವನಿಗೆ ಸಕಲಸುಖಪ್ರಾಪ್ತಿ!

(ಯೋಽರ್ಥಜ್ಞ.) ಯೋಽರ್ಥಸ್ಯ ಜ್ಞಾತಾ, ವೇದಾನಾಂ ಶಬ್ದಾರ್ಥಸಂಬಂಧವಿದ್ ಭೂತ್ವಾ ಧರ್ಮಾಚರಣೋ ಭವತಿ ;

(ಯೋಽರ್ಥಜ್ಞ) ಯಾವನು ಅರ್ಥದ ತಿಳಿವಳಿಕೆಯನ್ನುಳ್ಳವನೋ, ಎಂದರೆ, ವೇದಗಳ ಶಬ್ದ-ಅರ್ಥ-ಸಂಬಂಧವನ್ನು ತಿಳಿಯುವವನಾಗಿ, ಧರ್ಮವನ್ನು ಆಚರಿಸುವವನಾಗಿರುತ್ತಾನೋ ;

ಸ ವೇದಾರ್ಥಜ್ಞಾನೇನ (ವಿಧೂತಪಾಪ್ಮಾ) ಪಾಪರಹಿತಃ ಸನ್, ಮರಣಾತ್ ಪ್ರಾಗೇವ ಸಕಲಂ ಸಂಪೂರ್ಣಂ ಭದ್ರಂ ಭಜನೀಯಂ ಸುಖಮ್ ಅಶ್ನುತೇ ಪ್ರಾಪ್ನೋತಿ.

ಅವನು ವೇದಗಳ ಅರ್ಥಜ್ಞಾನದಿಂದ (ವಿಧೂತ-ಪಾಪ್ಮಾ) ಪಾಪರಹಿತನಾಗಿರುತ್ತಾ, ಸಾಯುವುದಕ್ಕೆ ಮೊದಲೇ (ಸಕಲಮ್) ಸಂಪೂರ್ಣವಾದ (ಭದ್ರಮ್) ಸೇವನೀಯ ಸುಖವನ್ನು (ಅಶ್ನುತೇ) ಪಡೆಯುತ್ತಾನೆ!

ಅಂದರೆ, ಯಾವನು ಅರ್ಥವನ್ನು ತಿಳಿಯುವವನಾಗಿರುತ್ತಾನೋ, ಅವನು ಅಧರ್ಮದಿಂದ ಉಳಿದುಕೊಂಡು, ಧರ್ಮಾತ್ಮನಾಗಿ, ಜನ್ಮ-ಮರಣರೂಪ ದುಃಖವನ್ನು ತ್ಯಜಿಸಿ, ಸಂಪೂರ್ಣ ಸುಖವನ್ನು ಹೊಂದುತ್ತಾನೆ.

ಏಕೆಂದರೆ, ಯಾವನು ಜ್ಞಾನದಿಂದ ಪವಿತ್ರಾತ್ಮನಾಗುತ್ತಾನೋ, ಅವನು_

ಪುನಶ್ಚ ಶರೀರಂ ತ್ಯಕ್ತ್ವಾ ನಾಕಮೇತಿ ಸರ್ವ-ದುಃಖರಹಿತಂ ಮೋಕ್ಷಾಖ್ಯಂ ಬ್ರಹ್ಮಪದಂ ಪ್ರಾಪ್ನೋತಿ.

ನಂತರ, ಶರೀರವನ್ನು ತ್ಯಜಿಸಿ, (ನಾಕಮೇತಿ) ಎಲ್ಲಾ ದುಃಖದಿಂದಲೂ ರಹಿತವಾದ ಮೋಕ್ಷ, ಎಂದು ಕರೆಯಲ್ಪಡುವ ಬ್ರಹ್ಮಪದವನ್ನು ಪಡೆಯುತ್ತಾನೆ!

ಅಂದರೆ, ಸರ್ವದುಃಖರಹಿತನಾಗಿ, ಮೋಕ್ಷಸುಖವನ್ನು ಪಡೆಯುತ್ತಾನೆ.

ತಸ್ಮಾದ್ ವೇದಾನಾಮರ್ಥಜ್ಞಾನಧರ್ಮಾನು-ಷ್ಠಾನಪೂರ್ವಕಮೇವಾಧ್ಯಯನಂ ಕರ್ತವ್ಯಮ್ ॥ ೩ ॥

ಆದುದರಿಂದ, ಅರ್ಥ-ಜ್ಞಾನ-ಧರ್ಮಾನುಷ್ಠಾನಪೂರ್ವಕವಾಗಿಯೇ ವೇದಗಳ ಅಧ್ಯಯನವನ್ನು ಮಾಡಬೇಕು!

ಅಂದರೆ, ವೇದಾದಿಶಾಸ್ತ್ರಗಳನ್ನು ಅರ್ಥಜ್ಞಾನಸಹಿತವಾಗಿ ಓದಬೇಕು! [೩]

ಅರ್ಥವನ್ನು ತಿಳಿಯದೇ ಮಾಡುವ ಅಧ್ಯಯನವು ಒಣಕಟ್ಟಿಗೆಯಂತೆ!

"ಯದ್ ಗೃಹೀತಮವಿಜ್ಞಾತಂ ನಿಗದೇನೈವ ಶಬ್ದ್ಯತೇ ।
ಅನಗ್ನಾವಿವ ಶುಷ್ಕೈಧೋ ನ ತಜ್ಜ್ವಲತಿ ಕರ್ಹಿಚಿತ್ ॥ ೪ ॥"

[ನಿರುಕ್ತೇ ಅ. ೧, ಖಂ. ೧೮]

[ಅರ್ಥ:_ "ಯಾವುದು [ಅರ್ಥವನ್ನು] ತಿಳಿಯದೆಯೇ, ಸ್ವೀಕರಿಸಲ್ಪಡುತ್ತದೋ, [ಹಾಗೂ] ಪಾಠಮಾತ್ರದಿಂದಲೇ ಉಚ್ಚರಿಸಲ್ಪಡುತ್ತದೋ, ಅದು, ಒಣ ಕಟ್ಟಿಗೆಯು ಅಗ್ನಿರಹಿತಸ್ಥಾನ ದಲ್ಲಿರುವಂತೆ, ಎಂದಿಗೂ ಪ್ರಕಾಶಿಸುವುದಿಲ್ಲ."

(ನಿರುಕ್ತ : ೧. ೧೮)]

ಭಾಷ್ಯಮ್ _

(ಯದ್‌ಗೃಹೀತಮವಿಜ್ಞಾತಂ) ಯೇನ ಮನುಷ್ಯೇಣ ಯದರ್ಥಜ್ಞಾನಶೂನ್ಯಂ ವೇದಾಧ್ಯಯನಂ ಕ್ರಿಯತೇ;

ಕಿಂತು (ನಿಗದೇನೈವ) ಪಾಠಮಾತ್ರೇಣೈವ (ಶಬ್ದ್ಯತೇ) ಕಥ್ಯತೇ ;

ತತ್ (ಕರ್ಹಿಚಿತ್) ಕದಾಚಿದಪಿ (ನ ಜ್ವಲತಿ) ನ ಪ್ರಕಾಶತೇ.

ಕಸ್ಮಿನ್ ಕಿಮಿವ?

(ಅನಗ್ನಾವಿವ ಶುಷ್ಕೈಧಃ) ಅವಿದ್ಯಮಾನಾಗ್ನಿಕೇ ಸ್ಥಲೇ ಶುಷ್ಕಂ ಸಾಂಪ್ರತಂ ಪ್ರಜ್ವಲನಮಿಂಧನಮಿವ.

ಯಥಾಽನಗ್ನೌ ಶುಷ್ಕಾಣಾಂ ಕಾಷ್ಠಾನಾಂ ಸ್ಥಾಪನೇನಾಪಿ ದಾಹಪ್ರಕಾಶೌ ನ ಜಾಯೇತೇ*, ತಾದೃಶಮೇವ ತದಧ್ಯಯನಮಿತಿ ॥ ೪ ॥

* 'ದಾಹಪ್ರಕಾಶಾ ನ ಜಾಯಂತೇ', ಇತಿ ಮುದ್ರಿತಗ್ರಂಥಸ್ಯಾಪಪಾಠಃ _ಅನು.

ಭಾಷ್ಯ _

(ಯದ್‌ಗೃಹೀತಮವಿಜ್ಞಾತಮ್) ಯಾವ ಮನುಷ್ಯನಿಂದ ವೇದಗಳೇ ಮೊದಲಾದುದರ ಅರ್ಥ-ಜ್ಞಾನ ಶೂನ್ಯವಾದ ಯಾವ ಅಧ್ಯಯನವು ಮಾಡಲ್ಪಡುತ್ತದೋ ;

ಎಂದರೆ, (ನಿಗದೇನೈವ) ಪಾಠಮಾತ್ರದಿಂದಲೇ (ಶಬ್ದ್ಯತೇ) ಹೇಳಲಾಗುತ್ತದೋ ;

ಅದು (ಕರ್ಹಿಚಿತ್) ಎಂದಿಗೂ ಕೂಡ, (ನ ಜ್ವಲತಿ) ಪ್ರಕಾಶಿಸುವುದಿಲ್ಲ!

ಅಂದರೆ, ಯಾವ ಮನುಷ್ಯನು ಕೇವಲ ಪಾಠ ಮಾತ್ರವನ್ನೇ ಓದುತ್ತಿರುತ್ತಾನೋ, ಅವನ ಆ ಓದುವಿಕೆಯು ಅಂಧಕಾರರೂಪವಾಗಿರುತ್ತದೆ!

ಯಾವುದರಲ್ಲಿ ಯಾವುದರಂತೆ?

(ಅನಗ್ನಾವಿವ ಶುಷ್ಕೈಧಃ) ಅಗ್ನಿಯು ಇಲ್ಲದಿರುವ ಸ್ಥಾನದಲ್ಲಿ ಸದ್ಯಃ ಉರಿಯುವುದಕ್ಕಾಗಿ ಇಟ್ಟ ಒಣ ಕಟ್ಟಿಗೆಯಂತೆ!

ಹೇಗೆ ಅಗ್ನಿ ಇಲ್ಲದ [ಸ್ಥಾನ]ದಲ್ಲಿ ಒಣಗಿರುವ ಕಟ್ಟಿಗೆಗಳನ್ನು ಇಡುವುದರಿಂದಲೂ ಕೂಡ, ಉರಿಯೂ ಮತ್ತು ಪ್ರಕಾಶವೂ ಉತ್ಪನ್ನವಾಗುವುದಿಲ್ಲವೋ, ಆ ತರಹದ್ದಾಗಿ ಆ ಅಧ್ಯಯನವು ಇರುತ್ತದೆ.

ಅಂದರೆ, ಹೇಗೆ, ಅಗ್ನಿ ಇಲ್ಲದೇ, ಒಣ ಕಟ್ಟಿಗೆಯಲ್ಲಿ ಉರಿಯೂ ಮತ್ತು ಪ್ರಕಾಶವೂ ಉಂಟಾಗುವುದಿಲ್ಲವೋ, ಹಾಗೆಯೇ, ಅರ್ಥಜ್ಞಾನವಿಲ್ಲದ ಅಧ್ಯಯನವೂ ಕೂಡ, ಜ್ಞಾನಪ್ರಕಾಶರಹಿತವಾಗಿರುತ್ತದೆ!

ಅಂತಹ ಓದುವಿಕೆಯು ಅವಿದ್ಯಾರೂಪ ಅಂಧಕಾರದ ನಾಶವನ್ನು ಎಂದಿಗೂ ಮಾಡಲಾರದು! [೪]

ಅವಿದ್ವಾಂಸನ ಮತ್ತು ವಿದ್ವಾಂಸನ ಲಕ್ಷಣಗಳು

[ಋಷಿಃ_ ಬೃಹಸ್ಪತಿಃ ; ದೇವತಾ_ ಜ್ಞಾನಮ್ ; ಛಂದಃ_ ಪಾದನಿಚೃತ್ ತ್ರಿಷ್ಟುಪ್ ; ಸ್ವರಃ_ ಧೈವತಃ]

ಉತ ತ್ವಃ ಪಶ್ಯನ್ನ ದದರ್ಶ ವಾಚ-
ಮುತ ತ್ವಃ ಶೃಣ್ವನ್ನ ಶೃಣೋತ್ಯೇನಾಮ್ ।
ಉತೋ ತ್ವಸ್ಮೈ ತನ್ವಂ೧ ವಿ ಸಸ್ರೇ
ಜಾಯೇವ ಪತ್ಯ ಉಶತೀ ಸುವಾಸಾಃ ॥ ೫ ॥

[ಋಗ್ವೇದೇ ಮಂ. ೧೦, ಸೂ. ೭೧, ಮಂ. ೪]

[ಅರ್ಥಃ_ "ಒಬ್ಬನಂತೂ ವಾಣಿಯನ್ನು ನೋಡುತ್ತಿದ್ದರೂ, ನೋಡಲಿಲ್ಲ! ಮತ್ತು ಇನ್ನೊಬ್ಬನಂತೂ ಅದನ್ನು ಕೇಳುತ್ತಿದ್ದರೂ ಕೇಳಲಿಲ್ಲ! ಆದರೆ, ಇವನಿಗಂತೂ [ಅದು,] ಸುಂದರವಸ್ತ್ರವನ್ನು ಧರಿಸಿರುವ ಪತ್ನಿಯು ಕಾಮನೆ ಮಾಡುತ್ತಾ, ತನ್ನ ಪತಿಗೆ ಶರೀರವನ್ನು ವಿವಿಧ ರೀತಿಯಿಂದ ಪ್ರಕಟಿಸುವಂತೆ, [ಅರ್ಥವನ್ನು] ಪ್ರಕಟಿಸಿದೆ."

(ಋಗ್ವೇದಃ ೧೦. ೭೧. ೪)]

ವಿದ್ವಾಂಸನ ಮತ್ತು ಅವಿದ್ವಾಂಸನ ಲಕ್ಷಣವೇನೆಂದರೆ_

ಅವಿದ್ವಾಂಸನಿಗೆ ಹಾನಿ!

ಭಾಷ್ಯಮ್_

(ಉತ ತ್ವಃ ಪಶ್ಯನ್ನ ದದರ್ಶ.) ಅಪಿ ಖಲ್ವೇಕೋ ವಾಚಂ ಶಬ್ದಂ ಪಶ್ಯನ್ನರ್ಥಂ ನ ಪಶ್ಯತಿ ;

ಭಾಷ್ಯ_

(ಉತ ತ್ವಃ ಪಶ್ಯನ್ನ ದದರ್ಶ ವಾಚಮ್) [ಯಾವನೋ] ಒಬ್ಬನಂತೂ ಶಬ್ದವನ್ನು ನೋಡುತ್ತಿದ್ದರೂ ಕೂಡ, ಅರ್ಥವನ್ನು ನೋಡುತ್ತಿಲ್ಲ!

ಉ ಇತಿ ವಿತರ್ಕೇ.

ಉ, ಎಂಬುದು ಸಂದೇಹದ ಅರ್ಥದಲ್ಲಿದೆ.

(ಉತ ತ್ವಃ ಶೃಣ್ವನ್ನ ಶೃಣೋತ್ಯೇನಾಮ್) ಕಶ್ಚಿನ್ಮನುಷ್ಯೋ ವಾಚಂ ಶಬ್ದಮುಚ್ಚಾರಯನ್ನಪಿ ನ ಶೃಣೋತಿ ;

(ಉತ ತ್ವಃ ಶೃಣ್ವನ್ನ ಶೃಣೋತ್ಯೇನಾಮ್) ಯಾವನೋ ಮನುಷ್ಯನು ಶಬ್ದವನ್ನು ಉಚ್ಚರಿಸುತ್ತಿದ್ದರೂ ಕೂಡ, [ಅದನ್ನು] ಆಲಿಸುತ್ತಿಲ್ಲ;

ತದರ್ಥಂ ನ ಜಾನಾತಿ.

ಎಂದರೆ, ಅದರ ಅರ್ಥವನ್ನು ತಿಳಿಯುತ್ತಿಲ್ಲ!

ಯಥಾ ತೇನೋಚ್ಚಾರಿತಾ ಶ್ರುತಾಽಪಿ ವಾಕ್ ಅವಿದಿತಾ ಭವತಿ,

ಹೇಗೆ ವಾಣಿಯು ಅವನಿಂದ ಉಚ್ಚರಿಸಲ್ಪಟ್ಟರೂ, ಆಲಿಸಲ್ಪಟ್ಟರೂ ಕೂಡ, ತಿಳಿಯಲ್ಪಡದೇ ಇರುತ್ತದೋ ;

ತಥೈವಾರ್ಥಜ್ಞಾನವಿರಹಮಧ್ಯಯನಮಿತಿ ಮಂತ್ರಾರ್ಥೇನಾವಿದ್ವಲ್ಲಕ್ಷಣಮುಕ್ತಮ್.

ಹಾಗೆಯೇ, ಅರ್ಥಜ್ಞಾನಶೂನ್ಯವಾದ ಅಧ್ಯಯನವು ಇರುತ್ತದೆ, ಎಂದು ಮಂತ್ರಾರ್ಥದ ಮೂಲಕ ಅವಿದ್ವಾಂಸನ ಲಕ್ಷಣವು ಹೇಳಲ್ಪಟ್ಟಿದೆ!

ಯಾವನಿಗಾದರೂ, ಓದಿದರೂ-ಆಲಿಸಿದರೂ ಕೂಡ, ಶಬ್ದ, ಅರ್ಥ ಮತ್ತು ಸಂಬಂಧದ ಯಥಾರ್ಥ ಜ್ಞಾನವು ಉಂಟಾಗದಿದ್ದರೆ, ಅವನು ಮೂರ್ಖ, ಎಂದರೆ ಅವಿದ್ವಾಂಸನಾಗಿರುತ್ತಾನೆ.

ವಿದ್ವಾಂಸನಿಗೆ ಲಾಭ!

(ಉತೋ ತ್ವಸ್ಮೈ) ಯೋ ಮನುಷ್ಯೋಽರ್ಥಜ್ಞಾನಪೂರ್ವಕಂ ವೇದಾನಾಮಧ್ಯಯನಂ ಕರೋತಿ ;

(ಉತೋ ತ್ವಸ್ಮೈ) ಯಾವ ಮನುಷ್ಯನು ಅರ್ಥಜ್ಞಾನಪೂರ್ವಕವಾಗಿ ವೇದಗಳ ಅಧ್ಯಯನವನ್ನು ಮಾಡುತ್ತಾನೋ ;

ತಸ್ಮೈ ವಾಕ್ ವಿದ್ಯಾ **(ತನ್ವಮ್)** ಶರೀರಂ ಸ್ವ-ಸ್ವರೂಪಂ **(ವಿಸಸ್ರೇ)** ವಿವಿಧತಯಾ ಪ್ರಕಾಶಯತಿ.

ಅವನಿಗೆ ವಾಣೀ, ಎಂದರೆ, ವಿದ್ಯೆಯು **(ತನ್ವಮ್)** ಶರೀರವನ್ನು, ಎಂದರೆ ತನ್ನ ಸ್ವರೂಪವನ್ನು **(ವಿಸಸ್ರೇ)** ವಿವಿಧ ರೀತಿಯಿಂದ ಪ್ರಕಾಶಿಸುತ್ತದೆ.

ಅಂದರೆ, ಯಾವ ಮನುಷ್ಯನು ಶಬ್ದ-ಅರ್ಥ-ಸಂಬಂಧ, ಹಾಗೂ ವಿದ್ಯೆಯು ಪ್ರಯೋಜನವನ್ನು ಯಥಾವತ್ತಾಗಿ ತಿಳಿದುಕೊಂಡು ಬಿಡುತ್ತಾನೋ, ಅವನು ಪೂರ್ಣವಿದ್ವಾಂಸ, ಎನಿಸುತ್ತಾನೆ.

ಅಂತಹ ಶ್ರೇಷ್ಠಪುರುಷನಿಗೇ ವಿದ್ಯೆಯ ಸ್ವರೂಪದ ಜ್ಞಾನದಿಂದ ಪರಮಾನಂದರೂಪದ ಫಲವೂ ಕೂಡ, ಉಂಟಾಗುತ್ತದೆ!

ಕಸ್ಮೈ ಕಾ, ಕಿಂ ಕುರ್ವತೀವ?

ಯಾವನಿಗೆ, ಯಾವಳು ; ಏನನ್ನು ಮಾಡುತ್ತಾ ಇರುವಂತೆ? ಎಂದರೆ_

(ಜಾಯೇವ ಪತ್ಯ ಉಶತೀ ಸುವಾಸಾಃ) ಯಥಾ ಶೋಭನಾನಿ ವಾಸಾಂಸಿ ವಸ್ತ್ರಾಣಿ ಧಾರಯಂತೀ ;

(ಜಾಯೇವ ಪತ್ಯ ಉಶತೀ ಸುವಾಸಾಃ) ಹೇಗೆ ಸುಂದರವಾದ ವಸ್ತ್ರಗಳನ್ನು ಧರಿಸಿದವಳೂ ;

ಪತಿಂ ಕಾಮಯಮಾನಾ ಸ್ತ್ರೀ ಸ್ವಸ್ವಾಮಿನೇ ಸ್ವಾತ್ಮಾನಂ ಶರೀರಂ ಪ್ರಕಾಶಯತಿ ;

[ಹಾಗೂ] ಪತಿಯ ಕಾಮನೆ ಮಾಡುತ್ತಿರುವವಳೂ ಆದ ಪತ್ನಿಯು ತನ್ನ ಸ್ವಾಮಿಗೆ ತನ್ನ ಆತ್ಮವನ್ನು, ಎಂದರೆ, ಶರೀರವನ್ನು ತೋರಿಸುತ್ತಾಳೋ ;

ತಥೈವಾರ್ಥಜ್ಞಾನಪೂರ್ವಕಾಧ್ಯಯನಕರ್ತ್ರೇ ಮನುಷ್ಯಾಯ ;

ಹಾಗೆಯೇ, ಅರ್ಥಜ್ಞಾನಪೂರ್ವಕವಾಗಿ ಅಧ್ಯಯನ ಮಾಡುವ ಮನುಷ್ಯನಿಗೆ ;

ವಿದ್ಯಾ ಸ್ವಾತ್ಮಾನಂ ಸ್ವಸ್ವರೂಪಮೀಶ್ವರಮಾರಭ್ಯ ಪೃಥಿವೀಪರ್ಯಂತಾನಾಂ ಪದಾರ್ಥಾನಾಂ ಜ್ಞಾನಮಯಂ ಪ್ರಕಾಶಯತೀತ್ಯರ್ಥಃ ॥ ೫ ॥

ವಿದ್ಯೆಯು ತನ್ನ ಆತ್ಮವನ್ನು, ಎಂದರೆ, ಈಶ್ವರನಿಂದ ಆರಂಭಿಸಿ, ಪೃಥಿವೀ ತನಕ ಇರುವ ಪದಾರ್ಥಗಳ ಜ್ಞಾನರೂಪವಾದ ತನ್ನ ಸ್ವರೂಪವನ್ನು ಪ್ರಕಟಿಸುತ್ತದೆ, ಎಂದರ್ಥ!

ಅಂದರೆ, ಹೇಗೆ ಪತಿವ್ರತಾಸ್ತ್ರೀಯು ತನ್ನ ಪತಿಗೇ ತನ್ನ ಶರೀರವನ್ನು ತೋರಿಸುತ್ತಾಳೋ, ಹಾಗೆಯೇ ಅರ್ಥವನ್ನು ತಿಳಿಯುವ ವಿದ್ವಾಂಸನಿಗೇ ವಿದ್ಯೆಯೂ ಕೂಡ, ತನ್ನ ರೂಪದ ಪ್ರಕಾಶವನ್ನು ಮಾಡುತ್ತದೆ! [೫]

ವಿದ್ವಾಂಸರೊಡನೆ ಮೈತ್ರಿ ; ಅವಿದ್ವಾಂಸನ ಕಪಟ ವ್ಯವಹಾರ

[ಋಷಿಃ_ ಬೃಹಸ್ಪತಿಃ ; ದೇವತಾ_ ಜ್ಞಾನಮ್ ; ಛಂದಃ_ ವಿರಾಟ್ ತ್ರಿಷ್ಟುಪ್ ; ಸ್ವರಃ_ ಧೈವತಃ]

ಉತ ತ್ವಂ ಸಖ್ಯೇ ಸ್ಥಿರಪೀತಮಾಹು-
ರ್ನೈನಂ ಹಿನ್ವಂತ್ಯಪಿ ವಾಜಿನೇಷು ।
ಅಧೇನ್ವಾ ಚರತಿ ಮಾಯಯೈಷ
ವಾಚಂ ಶುಶ್ರುವಾ ಅಫಲಾಮಪುಷ್ಪಾಮ್ ॥ ೬ ॥

[ಋಗ್ವೇದೇ ಮಂ. ೧೦, ಸೂ. ೭೧, ಮಂ. ೫]

[ಅರ್ಥ:_ "ಮತ್ತು ನೀನು [ಇವನ] ಸಖ್ಯಭಾವದಲ್ಲಿ[ರಬಹುದು.] [ಏಕೆಂದರೆ,] ಇವನನ್ನು ಸ್ಥಿರ ಪ್ರಾಪ್ತಿಯುಳ್ಳವನು, ಎಂದು ಹೇಳುತ್ತಾರೆ. ಹಾಗೂ ವ್ಯವಹಾರಗಳಲ್ಲಿ ಇವನನ್ನು [ಯಾರೂ] ಪೀಡಿಸಲಾರರು! [ಯಾವನು] ಫಲರಹಿತವಾದುದೂ, [ಹಾಗೂ] ಪುಷ್ಪ ರಹಿತವಾದುದೂ ಆದ ವಾಣಿಯನ್ನು ಆಲಿಸುತ್ತಾನೋ, ಅವನು ಬುದ್ಧಿರಹಿತವಾದ, (ಹಾಗೂ) ಕಪಟಪೂರ್ವಕವಾದ [ವಾಣಿಯಿಂದ] ವ್ಯವಹರಿಸುತ್ತಾನೆ."

(ಋಗ್ವೇದ: ೧೦. ೭೧. ೫)]

ಭಾಷ್ಯಮ್_

(ಸಖ್ಯೇ) ಯಥಾ ಸರ್ವೇಷಾಂ ಪ್ರಾಣಿನಾಂ ಮಿತ್ರಭಾವಕರ್ಮಣಿ ;

(ಉತ ತ್ವಮ್) ಅನ್ಯಮನೂಚಾನಂ ಪೂರ್ಣ-ವಿದ್ಯಾಯುಕ್ತಂ ;

(ಸ್ಥಿರಪೀತಮ್) ಧರ್ಮಾನುಷ್ಠಾನೇಶ್ವರಪ್ರಾಪ್ತಿ-ರೂಪಂ ಮೋಕ್ಷಫಲಂ ಪೀತಂ ಪ್ರಾಪ್ತಂ ಯೇನ ;

ತಂ ವಿದ್ವಾಂಸಂ ಪರಮಸುಖಪ್ರದಂ ಮಿತ್ರಮ್ ; (ಆಹುಃ) ವದಂತಿ.

ಭಾಷ್ಯ_

(ಸಖ್ಯೇ) ಉದಾಹರಣೆಗಾಗಿ_ ಎಲ್ಲಾ ಪ್ರಾಣಿಗಳ ಮಿತ್ರಭಾವಕರ್ಮದಲ್ಲಿ [ಇರುವವನೂ ;]

(ಉತ ತ್ವಮ್) ಮತ್ತು ಅನೂಚಾನ, ಎಂದರೆ ಪೂರ್ಣವಿದ್ಯಾವಂತನೂ, [ಹಾಗೂ;]

(ಸ್ಥಿರಪೀತಮ್) ಯಾವನಿಂದ ಧರ್ಮಾನುಷ್ಠಾನದ ಮೂಲಕ ಈಶ್ವರನ ಪ್ರಾಪ್ತಿರೂಪವಾದ ಮೋಕ್ಷಫಲವು **(ಪೀತಮ್)** ಪ್ರಾಪ್ತಮಾಡಿಕೊಳ್ಳಲ್ಪಟ್ಟಿದೆಯೋ ;

ಆ ವಿದ್ವಾಂಸನನ್ನು_ 'ಶ್ರೇಷ್ಠಸುಖವನ್ನು ಕೊಡುವ ಮಿತ್ರನಾಗಿದ್ದಾನೆ', ಎಂದು **(ಆಹುಃ)** ಹೇಳುತ್ತಾರೆ!

ಅಂದರೆ, ವಿದ್ವಾಂಸರೊಡನೆ ಪ್ರೀತಿ ಇಡುವುದು ಎಲ್ಲಾ ಮನುಷ್ಯರಿಗೂ ಉಚಿತವಾಗಿರುತ್ತದೆ.

ಹೇಗೆ ಸಮಸ್ತ ಮನುಷ್ಯರೊಡನೆ ಮೈತ್ರಿಯನ್ನು ಇಡಲು ಯೋಗ್ಯನಾದ ಮನುಷ್ಯನಿಗೆ ಎಲ್ಲರೂ ಸುಖ ಕೊಡುತ್ತಾರೋ, ಹಾಗೆಯೇ ನೀನೂ ಕೂಡ, ಯಾವನು ವೇದಾದಿ ವಿದ್ಯೆಯಿಂದಲೂ, ಮತ್ತು ವಿಜ್ಞಾನದಿಂದಲೂ ಯುಕ್ತನಾದ ಪುರುಷನಾಗಿರುತ್ತಾನೋ, ಅವನಿಗೆ ಒಳ್ಳೆಯ ರೀತಿಯಿಂದ ಸುಖವನ್ನು ಕೊಡು! ಇದರಿಂದ, ನಿನಗೆ ವಿದ್ಯಾರೂಪ ಲಾಭವು ಯಾವಾಗಲೂ ಸಿಗುತ್ತಿರಲಿ!

ಯಾವನು ಅರ್ಥಸಹಿತವಾಗಿ ವಿದ್ಯೆಯನ್ನು ಓದಿ, ಅದರಿಂದ ಧರ್ಮ, ಅರ್ಥ, ಕಾಮ, ಮೋಕ್ಷ ಮತ್ತು ಪರಮೇಶ್ವರನ ಪ್ರಾಪ್ತಿಯು ಯಥಾವತ್ತಾಗಿ ಆಗಲಿ, ಎಂದು ಹಾಗೆಯೇ ಆಚರಣೆ ಮಾಡುತ್ತಾನೋ, ಅವನಿಗೆ 'ಸ್ಥಿರಪೀತ', ಎನ್ನುತ್ತಾರೆ.

ಇಂತಹ ಯಾವ ವಿದ್ವಾಂಸನಿರುತ್ತಾನೋ, ಅವನು ಜಗತ್ತಿಗೆ ಸುಖವನ್ನು ಕೊಡುವಂತಹವನಾಗಿರುತ್ತಾನೆ.

ವಿದ್ವಾಂಸನನ್ನು ಯಾರೂ ಪೀಡಿಸಲಾರರು!

(ನೈನಂ ಹಿನ್ವಂತ್ಯಪಿ ವಾಜಿನೇಷು) ಈದೃಶಂ ವಿದ್ವಾಂಸಂ ಕಸ್ಮಿಂಶ್ಚಿದ್ ವ್ಯವಹಾರೇ ಕೇಽಪಿ ನ ಹಿಂಸಂತಿ ;

(ನೈನಂ ಹಿನ್ವಂತ್ಯಪಿ ವಾಜಿನೇಷು) ಈ ತರಹದ ವಿದ್ವಾಂಸನನ್ನು ಯಾವ ವ್ಯವಹಾರದಲ್ಲಿಯೂ ಯಾರೂ ಕೂಡ, ಪೀಡಿಸುವುದಿಲ್ಲ;

ತಸ್ಯ ಸರ್ವಪ್ರಿಯಕಾರಕತ್ವಾತ್.

ಏಕೆಂದರೆ, ಅವನದು ಎಲ್ಲರಿಗೂ ಪ್ರಿಯವನ್ನುಂಟು ಮಾಡುವ [ಸ್ವಭಾವ]ವಾಗಿರುತ್ತದೆ.

ಅಂದರೆ, ಅವನಿಗೆ ಯಾವ ಮನುಷ್ಯನೂ ದುಃಖವನ್ನು ಕೊಡಲಾರನು. ಏಕೆಂದರೆ, ಯಾವನ ಹೃದಯದಲ್ಲಿ ವಿದ್ಯಾರೂಪ ಸೂರ್ಯನು ಪ್ರಕಾಶಿಸುತ್ತಿದ್ದಾನೋ, ಅವನಿಗೆ ದುಃಖರೂಪ ಚೋರರು ಎಂದಿಗೂ ದುಃಖವನ್ನು ಕೊಡಲಾರರು!

ತಥೈವ ನೈವ ಕೇಚಿತ್ ಪ್ರಶ್ನೋತ್ತರಾದಯೋ ವ್ಯವಹಾರಾ ;

ಹಾಗೆಯೇ, ಯಾವ ಪ್ರಶ್ನೋತ್ತರವೇ ಮೊದಲಾದ ವ್ಯವಹಾರಗಳು ಇವೆಯೋ ಅವು ;

ವಾಜಿನೇಷು ವಿರುದ್ಧವಾದಿಷು ಶತ್ರುಭೂತೇಷ್ವಪಿ ಮನುಷ್ಯೇಷ್ವೇನಮರ್ಥವಿಜ್ಞಾನಸಹಿತಸ್ಯಾಧ್ಯೇತಾರಂ ಮನುಷ್ಯಂ ಹಿನ್ವಂತಿ ;

(ವಾಜಿನೇಷು) ವಿರುದ್ಧವಾದಿಗಳಾದ ಶತ್ರುಗಳಂತಹ ಮನುಷ್ಯರಲ್ಲಿ ಕೂಡ, ಅರ್ಥವಿಜ್ಞಾನದಿಂದ ಕೂಡಿದ ಅಧ್ಯಯನವನ್ನು ಮಾಡುವ ಈ ಮನುಷ್ಯನನ್ನು ಪೀಡಿಸಲೇ ಲಾರವು!

ತಸ್ಯ ಸತ್ಯವಿದ್ಯಾನ್ವಿತಯಾ ಕಾಮದುಹಾ ವಾಚಾ ಸಹ ವರ್ತ್ತಮಾನತ್ವೇನ ಸತ್ಯವಿದ್ಯಾಶುಭಲಕ್ಷಣಾನ್ವಿತತ್ವಾತ್.

ಏಕೆಂದರೆ, ಅವನು ಸತ್ಯವಿದ್ಯೆಯಿಂದ ಕೂಡಿದುದೂ, ಇಚ್ಛಾಪ್ರಾಪ್ತಿ ಮಾಡಬಲ್ಲದೂ ಆದ ವಾಣಿಯ ಜೊತೆ ವರ್ತಿಸುವುದರ ಮೂಲಕ ಸತ್ಯವಿದ್ಯೆ, ಎಂಬಂತಹ ಶುಭಲಕ್ಷಣಗಳಿಂದ ಯುಕ್ತನಾಗಿರುತ್ತಾನೆ!

ಇತ್ಯನೇನ ಮಂತ್ರಪೂರ್ವಾರ್ಧೇನ ವಿದ್ವತ್ ಪ್ರಶಂಸೋಚ್ಯತೇ.

ಹೀಗೆ, ಮಂತ್ರದ ಈ ಪೂರ್ವಾರ್ಧದಿಂದ ವಿದ್ವಾಂಸನ ಪ್ರಶಂಸೆಯು ಹೇಳಲ್ಪಟ್ಟಿದೆ.

ಅವಿದ್ವಾಂಸನಿಗೆ ದುಃಖವೇ ದುಃಖ!

ಅಥೈತನ್ಮಂತ್ರೋತ್ತರಾರ್ದ್ಧೇನಾವಿದ್ವಲ್ಲಕ್ಷಣಮಾಹ_

ನಂತರ, ಈ ಮಂತ್ರದ ಉತ್ತರಾರ್ಧದಿಂದ ಅವಿದ್ವಾಂಸನ ಲಕ್ಷಣವು ಹೇಗೆ ಹೇಳಲ್ಪಟ್ಟಿದೆಯೆಂದರೆ_

(ಅಧೇನ್ವಾ ಚರತಿ.) ಯತೋ ಯೋ ಹ್ಯವಿದ್ವಾನ್ ;

(ಅಧೇನ್ವಾ ಚರತಿ.) ಯಾವ ಅವಿದ್ವಾಂಸನಂತೂ ;

(ಅಪುಷ್ಪಾಮ್) ಕರ್ಮೋಪಾಸನಾನುಷ್ಠಾನಾಚಾರವಿದ್ಯಾರಹಿತಾಮ್ ;

(ಅಪುಷ್ಪಾಮ್) ಕರ್ಮದ ಉಪಾಸನೆಯ ಅನುಷ್ಠಾನದ ಆಚರಣೆಯ ವಿದ್ಯೆಯಿಂದ ರಹಿತವಾದುದೂ ;

(ಅಫಲಾಮ್) ಧರ್ಮೇಶ್ವರವಿಜ್ಞಾನಾಚಾರವಿರಹಾಂ ವಾಚಮ್ ;

(ಅಫಲಾಮ್) ಧರ್ಮದ, ಹಾಗೂ ಈಶ್ವರನ ವಿಜ್ಞಾನದ ಆಚರಣೆಯಿಂದ ರಹಿತವಾದುದೂ ಆದ ವಾಣಿಯನ್ನು ;

(ಶುಶ್ರುವಾನ್) ಶ್ರುತವಾನ್;

(ಶುಶ್ರುವಾನ್) ಆಲಿಸಿದ್ದಾನೋ ;

ತಯಾಽರ್ಥ[ಜ್ಞಾನಸು]ಶಿಕ್ಷಾರಹಿತಯಾ ಭ್ರಮಸಹಿತಯಾ ;

[ಮತ್ತು] ಆ ಅರ್ಥಜ್ಞಾನ-ಸುಶಿಕ್ಷಣದಿಂದ ರಹಿತ ವಾದುದೂ, ಹಾಗೂ ಭ್ರಮೆಯಿಂದ ಕೂಡಿದುದೂ ;

(ಮಾಯಯಾ) ಕಪಟಯುಕ್ತಯಾ ವಾಚಾಽಸ್ಮಿಂಲ್ಲೋಕೇ ಚರತಿ ;

(ಮಾಯಯಾ) ಕಪಟದಿಂದ ಯುಕ್ತವಾದುದೂ ಆದ ವಾಣಿಯಿಂದ ಈ ಜಗತ್ತಿನಲ್ಲಿ ವ್ಯವಹರಿಸುತ್ತಾನೋ ;

ನೈವ ಸ ಮನುಷ್ಯಜನ್ಮನಿ ಸ್ವಾರ್ಥಪರೋಪಕಾರಾಖ್ಯಂ ಚ ಫಲಂ ಕಿಂಚಿದಪಿ ಪ್ರಾಪ್ನೋತಿ.

ಅವನು [ಈ] ಮನುಷ್ಯಜನ್ಮದಲ್ಲಿ ಸ್ವಾರ್ಥ ಮತ್ತು ಪರೋಪಕಾರ, ಎಂದು ಹೇಳಲ್ಪಡುವುದರ ಯಾವ ಫಲವನ್ನೂ ಪಡೆಯಲೇ ಲಾರನು!

ಅಂದರೆ, ಯಾವನೇ ಆಗಲೀ, ಅವಿದ್ಯಾರೂಪವಾದ, ಎಂದರೆ, ಅರ್ಥ, ಹಾಗೂ ಅಭಿಪ್ರಾಯದಿಂದ ರಹಿತವಾದ ವಾಣಿಯನ್ನು ಆಲಿಸುತ್ತಾನೋ, ಮತ್ತು ಹೇಳುತ್ತಾನೋ, ಅವನಿಗೆ ಎಂದಿಗೂ ಸ್ವಲ್ಪ ಸುಖವೂ ಕೂಡ, ಸಿಗಲಾರದು!

ಬದಲಾಗಿ, ಶೋಕರೂಪ ಶತ್ರುಗಳು ಅವನಿಗೆ ಯಾವಾಗಲೂ ದುಃಖವನ್ನು ಕೊಡುತ್ತಲೇ ಇರುತ್ತಾರೆ! ಏಕೆಂದರೆ, ವಿದ್ಯಾಹೀನನಾದುದರಿಂದ, ಅವನು ಆ ಶತ್ರುಗಳನ್ನು ಗೆಲ್ಲಲು ಸಮರ್ಥನಾಗಿರುವುದಿಲ್ಲ!

ತಸ್ಮಾದರ್ಥಜ್ಞಾನಪೂರ್ವಕಮೇವಾಧ್ಯಯನಮುತ್ತಮಂ ಭವತೀತಿ ॥೬॥

ಆದುದರಿಂದ, ಅರ್ಥಜ್ಞಾನಪೂರ್ವಕವಾದ ಅಧ್ಯಯನವೇ ಉತ್ತಮವಾಗಿರುತ್ತದೆ!

ಅಂದರೆ, ಅರ್ಥಜ್ಞಾನಸಹಿತವಾಗಿ ಓದುವುದರಿಂದಲೇ, ಮನಸ್ಸಿನ ಇಚ್ಛೆಯಂತೆ ಸುಖಲಾಭವಾಗುತ್ತದೆ! [೬]

ವೇದಗಳ ಅರ್ಥವನ್ನು ತಿಳಿಯುವುದಕ್ಕಾಗಿ ಓದಬೇಕಾದ ಗ್ರಂಥಗಳು

ಮನುಷ್ಯೈರ್ವೇದಾರ್ಥವಿಜ್ಞಾನಾಯ_

ಮನುಷ್ಯರು ವೇದಾರ್ಥವನ್ನು ತಿಳಿಯುವುದಕ್ಕಾಗಿ_

ಅಂದರೆ, ಯಾವವುಗಳಿಂದ ವೇದಾರ್ಥವು ಸರಿಸರಿಯಾಗಿ ತಿಳಿಯಲಾಗುತ್ತದೋ, ಅಂತಹ_

(೧) ವ್ಯಾಕರಣ

ವ್ಯಾಕರಣಾಷ್ಟಾಧ್ಯಾಯೀಮಹಾಭಾಷ್ಯಾಧ್ಯಯನಮ್ ;*

ವ್ಯಾಕರಣವಾದ **ಅಷ್ಟಾಧ್ಯಾಯೀ-ಮಹಾಭಾಷ್ಯ**ಗಳ ಅಧ್ಯಯನವನ್ನೂ ;*

ಅಂದರೆ, ಅರ್ಥಯೋಜನಾಸಹಿತವಾಗಿ ವ್ಯಾಕರಣ [ಗ್ರಂಥಗಳಾದ] **ಅಷ್ಟಾಧ್ಯಾಯೀ, ಧಾತುಪಾಠ, ಉಣಾದಿ-ಗಣ, ಗಣಪಾಠ,**** ಮತ್ತು **ಮಹಾಭಾಷ್ಯ**ವನ್ನೂ ;

(೨) ಉಳಿದ ವೇದಾಂಗಗಳು

ತತೋ ನಿಘಂಟು-ನಿರುಕ್ತ-ಛಂದೋ-ಜ್ಯೋತಿಷಾಂ ವೇದಾಂಗಾನಾಮ್ ;

ನಂತರ, **ನಿಘಂಟು, ನಿರುಕ್ತ, ಛಂದಸ್ಸು,** [ಮತ್ತು] **ಜ್ಯೋತಿಷ,** ಎಂಬ ವೇದಾಂಗಗಳ ;+

ಅಂದರೆ, **ಶಿಕ್ಷಾ, ಕಲ್ಪ, ನಿಘಂಟು, ನಿರುಕ್ತ, ಛಂದಸ್ಸು** ಮತ್ತು **ಜ್ಯೋತಿಷ** _ ಈ ಆರು ವೇದಗಳ ಅಂಗಗಳ ;

---

* 'ಸತ್ಯಾರ್ಥಪ್ರಕಾಶೇ' ತೃತೀಯೇ ಸಮುಲ್ಲಾಸೇ ೧೧೩ - ೧೧೯ ತಮೇಷು ಪೃಷ್ಠೇಷು ತಥಾ ಚ 'ಸಂಸ್ಕಾರವಿಧಿ'ನಾಮ್ನಿ ಗ್ರಂಥೇ ವೇದಾರಂಭಸಂಸ್ಕಾರಪ್ರಕರಣೇ ೧೪೯ - ೧೫೨ ತಮೇಷು ಪೃಷ್ಠೇಷು ಚ ಪ್ರತ್ಯೇಕಶಾಸ್ತ್ರಸ್ಯಾಧ್ಯಯನಾವಧಿರ್ನಿರ್ದಿಷ್ಟಾಸ್ತಿ _ಅನು.

* **'ಸತ್ಯಾರ್ಥಪ್ರಕಾಶ'** ತೃತೀಯ ಸಮುಲ್ಲಾಸ ೧೧೩ - ೧೧೯ ನೆಯ ಪುಟಗಳಲ್ಲಿಯೂ ಮತ್ತು **'ಸಂಸ್ಕಾರವಿಧಿ'**, ಎಂಬ ಹೆಸರಿನ ಗ್ರಂಥದ **ವೇದಾರಂಭಸಂಸ್ಕಾರಪ್ರಕರಣ**ದಲ್ಲಿ ೧೪೯ - ೧೫೨ ನೆಯ ಪುಟಗಳಲ್ಲಿ ಪ್ರತ್ಯೇಕಶಾಸ್ತ್ರದ ಅಧ್ಯಯನದ ಅವಧಿಯು ನಿರ್ದೇಶಿಸಲ್ಪಟ್ಟಿದೆ _ಅನು.

** ಇದರ ಜೊತೆಗೆ **ಪಾಣಿನಿಕೃತಲಿಂಗಾನುಶಾಸನ**ವನ್ನು ಸೇರಿಸಬೇಕು. _ಅನು.

+ ಆರು ವೇದಾಂಗಗಳಲ್ಲಿ _ **'ಶಿಕ್ಷಾ'**ದ ಅಧ್ಯಯನದ ಮಹತ್ತ್ವವನ್ನು ಈ ಅಧ್ಯಾಯದ ಆರಂಭದಲ್ಲೇ ವರ್ಣಿಸಲಾಗಿದೆ. **'ಕಲ್ಪ'**ದ ಉಲ್ಲೇಖವು ಇಲ್ಲಿ ಬಿಟ್ಟು ಹೋಗಿದೆ. _ಅನು.

(೩) ವೇದೋಪಾಂಗಗಳು

ತತೋ ಮೀಮಾಂಸಾ-ವೈಶೇಷಿಕ-ನ್ಯಾಯ-ಯೋಗ-ಸಾಂಖ್ಯ-ವೇದಾಂತಾನಾಂ ವೇದೋ-ಪಾಂಗಾನಾಂ ಷಣ್ಣಾಂ ಶಾಸ್ತ್ರಾಣಾಮ್ ;

ಅನಂತರ, ಆರು ಶಾಸ್ತ್ರಗಳು, [ಎನಿಸುವ] **ಮೀಮಾಂಸಾ, ವೈಶೇಷಿಕ, ನ್ಯಾಯ, ಯೋಗ, ಸಾಂಖ್ಯ** [ಮತ್ತು] **ವೇದಾಂತ,** ಎಂಬ ವೇದೋಪಾಂಗಗಳ ;

(೪) ಬ್ರಾಹ್ಮಣಗ್ರಂಥಗಳು

ತತ ಐತರೇಯ-ಶತಪಥ-ಸಾಮ-ಗೋಪಥ-ಬ್ರಾಹ್ಮಣಾನಾಮ್ ;

ಮತ್ತು ತದನಂತರ, **ಐತರೇಯ, ಶತಪಥ, ಸಾಮ, ಗೋಪಥ,** ಎಂಬ ಈ ನಾಲ್ಕು ಬ್ರಾಹ್ಮಣಗಳ ;

ಅಧ್ಯಯನಂ ಚ ಕೃತ್ವಾ ;

ಅಧ್ಯಯನವನ್ನು ಮಾಡಿ ;

ಅಂದರೆ, ಈ ಎಲ್ಲಾ ಗ್ರಂಥಗಳನ್ನು ಕ್ರಮವಾಗಿ ಓದಿ ;

ವೇದಾರ್ಥಪಠನಂ ಕರ್ತ್ತವ್ಯಮ್.

[ನಂತರ,] ವೇದಗಳ ಅರ್ಥದ ಅಧ್ಯಯನವನ್ನು ಮಾಡಬೇಕು!

ಏಕೆಂದರೆ, ಇವುಗಳಿಂದ ವೇದಾರ್ಥವು ಸರಿ-ಸರಿಯಾಗಿ ತಿಳಿಯಬರುತ್ತದೆ.

ವೇದವ್ಯಾಖ್ಯಾನಗ್ರಂಥಗಳಿಂದಲೂ ವೇದಾರ್ಥಜ್ಞಾನ

ಯದ್ವಾ_ ಏತತ್ ಸರ್ವಮಧೀತವದ್ಭಿಃ ಕೃತಂ ವೇದವ್ಯಾಖ್ಯಾನಂ ದೃಷ್ಟ್ವಾ ಚ ವೇದಾರ್ಥಜ್ಞಾನಂ ಸರ್ವೈಃ ಕರ್ತ್ತವ್ಯಮ್.

ಅಥವಾ_ ಇವೆಲ್ಲವನ್ನೂ ಅಧ್ಯಯನ ಮಾಡಿದವರಿಂದ ರಚಿತವಾದ ವೇದವ್ಯಾಖ್ಯಾನವನ್ನು ನೋಡಿ, ವೇದಾರ್ಥಜ್ಞಾನವನ್ನು ಎಲ್ಲರೂ ತಿಳಿಯಬೇಕು!

ಅಂದರೆ, ಯಾರು ಈ ಸಂಪೂರ್ಣ ಗ್ರಂಥಗಳನ್ನು ಓದಿ, ಯಾವ ಸತ್ಯ-ಸತ್ಯವಾದ ವೇದ-ವ್ಯಾಖ್ಯಾನಗಳನ್ನು ಮಾಡಿದ್ದಾರೋ, ಅವನ್ನು ನೋಡಿ, ವೇದದ ಅರ್ಥವನ್ನು ಸರಿ ಸರಿಯಾಗಿ ತಿಳಿದುಕೊಳ್ಳಬೇಕು!

ಕುತಃ?

ಏಕೆಂದರೆ_

ವೇದಜ್ಞಾನವಿಲ್ಲದೇ ಪರಮೇಶ್ವರನ ಜ್ಞಾನವಿಲ್ಲ!

"ನಾವೇದವಿನ್ಮನುತೇ ತಂ ಬೃಹಂತಮ್"

[ಶಾಟ್ಯಾಯನೋಪನಿಷದಿ (೪)]

[ಅರ್ಥ:_ "ವೇದಗಳನ್ನು ತಿಳಿಯದವನು ಆ ಮಹಾ [ಪರಮೇಶ್ವರನನ್ನು] ಅರಿಯಲಾರನು!" (ಶಾಟ್ಯಾಯನೋಪನಿಷತ್: ೪)]

ಇತಿ.

ಎಂದು [ಹೇಳಲಾಗಿದೆ.]

ಯೋ ಮನುಷ್ಯೋ ವೇದಾರ್ಥಾನ್ನ ವೇತ್ತಿ, ಸ ನೈವ ತಂ ಬೃಹಂತಂ ಪರಮೇಶ್ವರಂ ಧರ್ಮಂ ವಿದ್ಯಾಸಮೂಹಂ ವಾ ವೇತ್ತುಮರ್ಹತಿ.

ಯಾವ ಮನುಷ್ಯನು ವೇದಗಳ ಅರ್ಥವನ್ನು ತಿಳಿದಿಲ್ಲವೋ, ಅವನು ಆ ಮಹಾ ಪರಮೇಶ್ವರನನ್ನು ಅಥವಾ ವಿದ್ಯೆಗಳ ಸಮೂಹವಾದ ಧರ್ಮವನ್ನು ತಿಳಿಯಲು ಯೋಗ್ಯನೇ ಅಲ್ಲ!

ಅಂದರೆ, ವೇದಗಳನ್ನು ತಿಳಿಯದ ಮನುಷ್ಯನು ಪರಮೇಶ್ವರನೇ ಮೊದಲಾದ ಎಲ್ಲಾ ಪದಾರ್ಥವಿದ್ಯೆಗಳನ್ನೂ ಉತ್ತಮ ರೀತಿಯಿಂದ ತಿಳಿಯಲಾರನು!

ಕುತಃ?

ಏಕೆಂದರೆ_

ವೇದಗಳೇ ಸರ್ವವಿದ್ಯೆಗಳಿಗೂ ಮೂಲ!

ಸರ್ವಾಸಾಂ ವಿದ್ಯಾನಾಂ ವೇದ ಏವಾಧಿಕರಣಮಸ್ತ್ಯತಃ .

ಎಲ್ಲಾ ವಿದ್ಯೆಗಳಿಗೂ ವೇದವೇ ಆಧಾರಭೂತವಾಗಿದೆ, ಆದುದರಿಂದ!

ನಹಿ ತಮವಿಜ್ಞಾಯ ಕಸ್ಯಚಿತ್ ಸತ್ಯವಿದ್ಯಾಪ್ರಾಪ್ತಿರ್ಭವಿತುಮರ್ಹತಿ .

ಅದನ್ನು ತಿಳಿಯದೇ, ಯಾವನಿಗೂ ಸತ್ಯವಿದ್ಯೆಯ ಪ್ರಾಪ್ತಿಯಾಗುವುದು ಸಾಧ್ಯವಿಲ್ಲ!

ಅಂದರೆ, ವಿದ್ಯೆಯಿಲ್ಲದೇ ಮನುಷ್ಯನು ಕುರುಡನಿಗೆ ಸಮಾನನಾಗಿರುತ್ತಾನೆ. ಆದುದರಿಂದ, ಸಂಪೂರ್ಣ ವಿದ್ಯೆಗಳ ಮೂಲವಾದ ವೇದಗಳನ್ನು ಓದದೆಯೇ, ಯಾವ ಮನುಷ್ಯನಿಗೂ ಯಥಾವತ್ತಾಗಿ ಜ್ಞಾನವು ಉಂಟಾಗಲಾರದು!

ಯದ್ಯತ್ ಕಿಂಚಿದ್ ಭೂಗೋಲಮಧ್ಯೇ ಪುಸ್ತಕಾಂತರೇಷು ಹೃದಯಾಂತರೇಷು ವಾ ;

ಏನೇನು ಪೃಥಿವಿಯಲ್ಲಿ ಪುಸ್ತಕ-ಪುಸ್ತಕಗಳಲ್ಲಿ, ಅಥವಾ ಹೃದಯ-ಹೃದಯಗಳಲ್ಲಿ ;

ಸತ್ಯವಿದ್ಯಾವಿಜ್ಞಾನಮಭೂತ್, ಭವತಿ, ಭವಿಷ್ಯತಿ ಚ ;

ಸತ್ಯವಿದ್ಯೆಗಳ ವಿಜ್ಞಾನವು ಇತ್ತೋ, ಇದೆಯೋ ಮತ್ತು ಉಂಟಾಗುವುದೋ ;

ತತ್ ಸರ್ವಂ ವೇದಾದೇವ ಪ್ರಸೃತಮಿತಿ ವಿಜ್ಞೇಯಮ್.

ಅದೆಲ್ಲವೂ ವೇದದಿಂದಲೇ ಹರಡಿದೆ, ಎಂದು ತಿಳಿಯಬೇಕು!

ಅಂದರೆ, ಯಾವ ಯಾವುದು, ಎಲ್ಲೆಲ್ಲಿ, ಭೂಗೋಳದಲ್ಲಿ ಅಥವಾ ಪುಸ್ತಕಗಳಲ್ಲಿ, ಅಥವಾ ಮನಸ್ಸುಗಳಲ್ಲಿ, ಸತ್ಯಜ್ಞಾನವು ಪ್ರಕಾಶಿತವಾಗಿದೆಯೋ, ಮತ್ತು ಆಗುವುದೋ, ಅದೆಲ್ಲವೂ ವೇದಗಳೊಳಗಿನಿಂದಲೇ ಉಂಟಾಗಿದೆ!

ಕುತಃ?

ಏಕೆಂದರೆ_

ಯದ್ಯದ್ ಯಥಾರ್ಥವಿಜ್ಞಾನಂ ತತ್ತದೀಶ್ವರೇಣ ವೇದೇಷ್ವಧಿಕೃತಮಸ್ತಿ.

ಯಾವ ಯಾವುದು ಯಥಾರ್ಥವಿಜ್ಞಾನವಾಗಿ ರುತ್ತದೋ, ಅದದು ಈಶ್ವರನಿಂದ ವೇದಗಳಲ್ಲಿ ಇಡಲ್ಪಟ್ಟಿರುತ್ತದೆ!

ಅಂದರೆ, ಯಾವ ಯಾವುದು ಸತ್ಯವಿಜ್ಞಾನ ವಾಗಿರುತ್ತದೋ, ಅದದನ್ನು ಈಶ್ವರನು ವೇದಗಳಲ್ಲಿ ಇಟ್ಟುಬಿಟ್ಟಿದ್ದಾನೆ!

ವೇದಗಳಿಂದಲೇ ಇತರ ವಿದ್ಯೆಗಳು ಹೊರಬಂದಿವೆ!

ತದ್‌ದ್ವಾರೈವಾನ್ಯತ್ರ ಕುತ್ರಚಿತ್ ಸತ್ಯಪ್ರಕಾಶೋ ಭವಿತುಂ ಯೋಗ್ಯಃ.

ಅದರ ಮೂಲಕವಾಗಿಯೇ ಬೇರೆ ಕಡೆ, ಎಲ್ಲಿ ಯಾದರೂ ಸತ್ಯದ ಪ್ರಕಾಶ ಉಂಟಾಗುವುದು ಸಂಭವ ವಾಗುತ್ತದೆ!

ಅಂದರೆ, ಇದರ ಮೂಲಕವಾಗಿಯೇ, ಬೇರೆ ಸ್ಥಾನಗಳಲ್ಲಿ ಕೂಡ, ಪ್ರಕಾಶ ಉಂಟಾಗುತ್ತದೆ.

ಅತೋ ವೇದಾರ್ಥವಿಜ್ಞಾನಾಯ ಸರ್ವೈ-ರ್ಮನುಷ್ಯೈಃ ಪ್ರಯತ್ನೋಽನುಷ್ಠೇಯ ಇತಿ.

ಆದುದರಿಂದ, ವೇದಗಳ ಅರ್ಥವನ್ನು ವಿಶೇಷ ವಾಗಿ ತಿಳಿಯುವುದಕ್ಕಾಗಿ, ಮನುಷ್ಯರೆಲ್ಲರಿಂದಲೂ ಪ್ರಯತ್ನವು ಆರಂಭವಾಗಬೇಕು!

ಅಂದರೆ, ಮನುಷ್ಯರೆಲ್ಲರೂ ವೇದಾದಿಶಾಸ್ತ್ರಗಳನ್ನು ಅರ್ಥಜ್ಞಾನಸಹಿತವಾಗಿ ಅವಶ್ಯವಾಗಿ ಓದಬೇಕು!

ಇತಿ ಪಠನಪಾಠನವಿಷಯಃ ಸಂಕ್ಷೇಪತಃ ॥

ಇಲ್ಲಿಗೆ ಪಠನ-ಪಾಠನದ ವಿಷಯವು ಸಂಕ್ಷೇಪವಾಗಿ ಮುಗಿಯಿತು. [೨೭]

(೨೮) ಭಾಷ್ಯರಚನೆ; ಶಂಕಾ-ಸಮಾಧಾನ!

ಅಥ ಸಂಕ್ಷೇಪತೋ ಭಾಷ್ಯಕರಣಶಂಕಾಸಮಾಧಾನಾದಿವಿಷಯಃ

ಈಗ, ಸಂಕ್ಷೇಪವಾಗಿ ಭಾಷ್ಯರಚನೆ, ಶಂಕೆ-ಸಮಾಧಾನ ಮೊದಲಾದ ವಿಷಯಗಳು ಬರೆಯಲ್ಪಡುತ್ತವೆ.

ನನ್ನಿಂದ ಹೊಸ ವೇದಭಾಷ್ಯವು ರಚಿಸಲ್ಪಡುವುದಿಲ್ಲ!

ಪ್ರಶ್ನಃ_ ಕಿಂಚ ಭೋಃ! ನವೀನಂ ಭಾಷ್ಯಂ ತ್ವಯಾ ಕ್ರಿಯತೇ ; ಆಹೋಸ್ವಿತ್ ಪೂರ್ವಾಚಾರ್ಯೈಃ ಕೃತಮೇವ ಪ್ರಕಾಶ್ಯತೇ?

ಪ್ರಶ್ನೆ_ ಏನು ಸ್ವಾಮಿ! ನಿಮ್ಮಿಂದ ಹೊಸ ಭಾಷ್ಯವು ರಚಿಸಲ್ಪಡುತ್ತದೋ, ಅಥವಾ ಹಿಂದಿನ ಆಚಾರ್ಯರುಗಳಿಂದ ರಚಿತವಾದುದು ಪ್ರಕಟಿಸಲ್ಪಡುತ್ತದೋ?

ಅಂದರೆ, ಏನ್ರೀ! ನೀವು ವೇದಗಳ ಯಾವ ಈ ಭಾಷ್ಯವನ್ನು ರಚಿಸುತ್ತೀರೋ, ಅದನ್ನು ಪೂರ್ವ ಆಚಾರ್ಯರ ಭಾಷ್ಯದಂತೆ ರಚಿಸುತ್ತೀರೋ, ಅಥವಾ ಹೊಸದಾಗಿಯೋ?

ಯದಿ ಪೂರ್ವೈಃ ಕೃತಮೇವ ಪ್ರಕಾಶ್ಯತೇ, ತರ್ಹಿ ತತ್ ಪಿಷ್ಟಪೇಷಣದೋಷೇಣ ದೂಷಿತತ್ವಾನ್ನ ಕೇನಾಪಿ ಗ್ರಾಹ್ಯಂ ಭವತೀತಿ.

ಒಂದು ವೇಳೆ, ಪೂರ್ವ [ಆಚಾರ್ಯ]ರಿಂದ ರಚಿಸಿದುದೇ ಪ್ರಕಟಿಸಲ್ಪಡುತ್ತದೆಯಾದರೆ, ಅದು, 'ಹಿಟ್ಟನ್ನು ಬಿಸುವ' ದೋಷದಿಂದ ದೂಷಿತವಾಗುವುದರಿಂದ, ಯಾವನಿಂದಲೂ ಸ್ವೀಕರಿಸಲ್ಪಡುವುದಿಲ್ಲ!

ಅಂದರೆ, ಪೂರ್ವರಚಿತ ಭಾಷ್ಯಗಳಿಗೆ ಸಮಾನವಾದರಂತೂ, ಅದರ ನಿರ್ಮಾಣವು ವ್ಯರ್ಥವಾಗುತ್ತದೆ. ಏಕೆಂದರೆ, ಅವಂತೂ ಮೊದಲಿನಿಂದಲೇ ರಚಿಸಲ್ಪಟ್ಟು ಇದ್ದೇ ಇವೆ!

*[ಯದಿ ನವೀನಂ ರಚ್ಯತೇ, ತರ್ಹಿ ತಸ್ಯ ಸ್ವಕಲ್ಪನಾಪ್ರಸೂತತ್ವಾತ್ ನ ಕೇನಾಪಿ ಗ್ರಾಹ್ಯಂ ಭವಿತುಮರ್ಹತಿ.]

[ಒಂದುವೇಳೆ, ಹೊಸದಾಗಿ ರಚಿಸಲ್ಪಡುತ್ತದೆ ಯಾದರೆ, ಅದು ಸ್ವಕಲ್ಪನೆಯಿಂದ ರಚಿತವಾಗುವುದ ರಿಂದ, ಯಾವನಿಂದಲೂ ಸ್ವೀಕರಿಸಲ್ಪಡಲು ಯೋಗ್ಯ ವಾಗುವುದಿಲ್ಲ!]

ಅಂದರೆ, ಅದನ್ನು ನೀವು ಹೊಸದಾಗಿ ರಚಿಸು ತ್ತೀರಾದರೆ, ಅದನ್ನು ಯಾವನೂ ಅಂಗೀಕರಿಸುವುದಿಲ್ಲ! ಏಕೆಂದರೆ, ಯಾವುದು ಪ್ರಮಾಣವಿಲ್ಲದೇ, ಕೇವಲ ತನ್ನದೇ ಕಲ್ಪನೆಯಿಂದ ರಚಿತವಾಗುವುದೋ, ಆ ಮಾತು ಎಂದಿಗೆ ಸರಿ, ಎನಿಸಲಾಗುತ್ತದೆ?

ಪೂರ್ವ ಋಷಿಕಲ್ಪ ಆಚಾರ್ಯರ ವ್ಯಾಖ್ಯಾನವು ಪ್ರಕಟಿಸಲ್ಪಡುತ್ತದೆ

ಉತ್ತರಮ್_ ಪೂರ್ವಾಚಾರ್ಯೈಃ ಕೃತಂ ಪ್ರಕಾಶ್ಯತೇ.

ಉತ್ತರ_ ಪೂರ್ವ ಆಚಾರ್ಯರಿಂದ ರಚಿತ ವಾದುದು ಪ್ರಕಟಿಸಲ್ಪಡುತ್ತದೆ!

ಅಂದರೆ, ಈ ಭಾಷ್ಯವು ಪ್ರಾಚೀನ ಆಚಾರ್ಯರ ಭಾಷ್ಯಗಳಿಗೆ ಅನುಕೂಲವಾಗಿ ರಚಿಸಲ್ಪಡುತ್ತದೆ.

ತದ್ಯಥಾ_

ಅದು ಹೇಗೆಂದರೆ_

ಯಾನಿ ಪೂರ್ವೈರ್ದೇವೈರ್ವಿದ್ವದ್ಭಿರ್ಬ್ರಹ್ಮಾಣ-ಮಾರಭ್ಯ ಯಾಜ್ಞವಲ್ಕ್ಯ- ವಾತ್ಸ್ಯಾಯನ-ಜೈಮಿನ್ಯಂತೈ-ರ್ಋಷಿಭಿಶ್ಚೈತರೇಯಶತಪಥಾದೀನಿ ಭಾಷ್ಯಾಣಿ ರಚಿತಾನ್ಯಾಸನ್ ;

ಯಾವುವು ಪೂರ್ವ ವಿದ್ವಾಂಸರುಗಳಾದ **ಬ್ರಹ್ಮ** ನಿಂದ ಆರಂಭಿಸಿ, **ಯಾಜ್ಞವಲ್ಕ್ಯ, ವಾತ್ಸ್ಯಾಯನ, ಜೈಮಿನಿ**ಯವರ ತನಕ ಇರುವ ಋಷಿಗಳಿಂದ **ಐತರೇಯ, ಶತಪಥ** ಮೊದಲಾದ [ಬ್ರಾಹ್ಮಣರೂಪ] ಭಾಷ್ಯಗಳು ರಚಿತವಾಗಿವೆಯೋ ;

ತಥಾ ಯಾನಿ ಪಾಣಿನಿ-ಪತಂಜಲಿ-ಯಾಸ್ಕಾದಿ-ಮಹರ್ಷಿಭಿಶ್ಚ ವೇದವ್ಯಾಖ್ಯಾನಾನಿ ವೇದಾಂಗಾಖ್ಯಾನಿ ಕೃತಾನಿ ;

ಹಾಗೆಯೇ, ಯಾವುವು **ಪಾಣಿನಿ, ಪತಂಜಲಿ, ಯಾಸ್ಕ** ಮೊದಲಾದ ಮಹರ್ಷಿಗಳಿಂದ **'ವೇದಾಂಗ'**, ಎಂದು ಕರೆಯಲ್ಪಡುವ ವೇದವ್ಯಾಖ್ಯಾನಗಳು ನಿರ್ಮಿತ ವಾಗಿವೆಯೋ ;

ಏವಮೇವ ಜೈಮಿನ್ಯಾದಿಭಿರ್ವೇದೋ-ಪಾಂಗಾಖ್ಯಾನಿ ಷಟ್ ಶಾಸ್ತ್ರಾಣಿ ;

ಹೀಗೆಯೇ, **ಜೈಮಿನಿ** ಮೊದಲಾದವರಿಂದ [ರಚಿತವಾದ] ವೇದದ **'ಉಪಾಂಗ'**ಗಳು, ಎಂದು ಕರೆಯಲ್ಪಡುವ [ಯಾವ] ಆರು ಶಾಸ್ತ್ರಗಳು ಇವೆಯೋ ;

ಏವಮುಪವೇದಾಖ್ಯಾನಿ ;

ಹೀಗೆ, [ಯಾವುವು] **'ಉಪವೇದ'**, ಎಂದು ಕರೆಯಲ್ಪಡುತ್ತವೋ ;

* ಅಯಂ ಕೋಷ್ಠಕಾಂತರ್ಗತಪಾಠಃ ಪಂಡಿತಯುಧಿಷ್ಠಿರ-ಮೀಮಾಂಸಕೈರೂಹಿತಃ. _ಅನು.

ತಥೈವ ವೇದಶಾಖಾಖ್ಯಾನಿ ಚ ರಚಿತಾನಿ ಸಂತಿ ;

ಹಾಗೆಯೇ, [ಯಾವುವು] **'ವೇದಗಳ ಶಾಖೆಗಳು'**, ಎಂದು ಕರೆಯಲ್ಪಡುವ [ಗ್ರಂಥಗಳು] ಕೂಡ, ರಚಿತ ವಾಗಿವೆಯೋ ;

ಏತೇಷಾಂ ಸಂಗ್ರಹಮಾತ್ರೇಣೈವ ಸತ್ಯೋಽರ್ಥಃ ಪ್ರಕಾಶ್ಯತೇ.

ಇವುಗಳಲ್ಲಿನ ಸತ್ಯವಾದ ಅರ್ಥವು ಸಂಕ್ಷೇಪ ವಾಗಿಯೇ ಪ್ರಕಾಶಿಸಲ್ಪಡುವುದು!

ಅಂದರೆ_

ನನ್ನ ಯಾವ ಈ ಭಾಷ್ಯವು ರಚಿಸಲ್ಪಡುತ್ತದೋ, ಅದಂತೂ **ವೇದ-ವೇದಾಂಗ-ಐತರೇಯ-ಶತಪಥ-ಬ್ರಾಹ್ಮಣಾದಿ** ಗ್ರಂಥಗಳಿಗೆ ಅನುಸಾರವಾಗಿರುತ್ತದೆ. ಏಕೆಂದರೆ, ವೇದಗಳ ಯಾವ ಯಾವ ಸನಾತನ ವ್ಯಾಖ್ಯಾನಗಳಿವೆಯೋ, ಅವುಗಳ ಪ್ರಮಾಣಗಳಿಂದ ಯುಕ್ತವಾದುದಾಗಿ [ಈ ಭಾಷ್ಯವು] ರಚಿಸಲ್ಪಡುತ್ತದೆ. ಇದೇ ಇದರಲ್ಲಿನ ಅಪೂರ್ವತ್ವವಾಗಿರುತ್ತದೆ!

ಏಕೆಂದರೆ, **'ಗ್ರಂಥಗಳ ಪ್ರಮಾಣತ್ವ-ಅಪ್ರಮಾಣತ್ವ,'** ಎಂಬ ವಿಷಯ'*ದಲ್ಲಿ ವೇದಗಳಿಂದ ಬೇರೆಯಾದ ಯಾವ ಯಾವ ಶಾಸ್ತ್ರಗಳನ್ನು ಎಣಿಸಿದ್ದೇವೋ, ಅವೆಲ್ಲವೂ ವೇದಗಳದೇ ವ್ಯಾಖ್ಯಾನಗಳಾಗಿವೆ.

ಹಾಗೆಯೇ, ವೇದಗಳ (೧೧೨೭) ಒಂದು ಸಾವಿರದ ನೂರ ಇಪ್ಪತ್ತೇಳು ಶಾಖೆಗಳೂ ಕೂಡ, ಅವುಗಳ ವ್ಯಾಖ್ಯಾನಗಳೇ ಆಗಿವೆ!

ಈ ಎಲ್ಲಾ ಗ್ರಂಥಗಳ ಪ್ರಮಾಣಗಳಿಂದ ಯುಕ್ತವಾದುದಾಗಿ, ಈ ಭಾಷ್ಯವು ನಿರ್ಮಿಸಲ್ಪಡುತ್ತದೆ.

ನ ಚಾತ್ರ ಕಿಂಚಿದಪ್ರಮಾಣಂ ನವೀನಂ ಸ್ವೇಚ್ಛಯಾ ರಚ್ಯತ ಇತಿ.

ಮತ್ತು ಇದರಲ್ಲಿ ಯಾವ ಅಪ್ರಮಾಣವಾದುದೂ, ಹಾಗೂ ಸ್ವೇಚ್ಛೆಯಿಂದ ಹೊಸದಾಗಿಯೂ ರಚಿಸಲ್ಪಡುವುದಿಲ್ಲ!

ಅಂದರೆ, ಇದು **'ಅಪೂರ್ವ'**, ಎಂದೆನಿಸುವುದಕ್ಕೆ ಎರಡನೆಯ ಕಾರಣವೂ ಕೂಡ, ಏನೆಂದರೆ_ ಇದರಲ್ಲಿ ಯಾವ ಮಾತೂ ಅಪ್ರಮಾಣವಾಗಿ, ಅಥವಾ ಸ್ವಂತ [ಕಲ್ಪಿತ] ರೀತಿಯಿಂದ ಬರೆಯಲ್ಪಡುವುದಿಲ್ಲ!

ರಾವಣ, ಉವಟ, ಸಾಯಣ ಮತ್ತು **ಮಹೀಧರ** ಮೊದಲಾದವರು ಯಾವ ಭಾಷ್ಯಗಳನ್ನು ರಚಿಸಿದ್ದಾರೋ, ಅವೆಲ್ಲವೂ ಮೂಲಮಂತ್ರಗಳಿಗೂ, ಮತ್ತು ಋಷಿಕೃತವ್ಯಾಖ್ಯಾನಗಳಿಗೂ ವಿರುದ್ಧವಾಗಿವೆ!

---

* ಇಪ್ಪತ್ತೈದನೆಯ ಅಧ್ಯಾಯದಲ್ಲಿ ಪುಟ ೮೩೭ - ೮೮೮ ನ್ನು ನೋಡಿ. _ಅನು.

ನಾನು ಅಂತಹ ಭಾಷ್ಯವನ್ನು ರಚಿಸುವುದಿಲ್ಲ! ಏಕೆಂದರೆ, ಅವರುಗಳು ವೇದಗಳ ಸತ್ಯಾರ್ಥತ್ವ ಮತ್ತು ಅಪೂರ್ವತ್ವ ಗಳನ್ನು ಸ್ವಲ್ಪವೂ ತಿಳಿದಿಲ್ಲ!

ಹಾಗೆಯೇ, ಈ ನವೀನ ಭಾಷ್ಯಗಳಿಗನುಸಾರ ವಾಗಿ **ಇಂಗ್ಲಿಷ್, ಜರ್ಮನ್, ಮರಾಠೀ*** ಮತ್ತು **ಬಂಗಾಳಿ**** ಮೊದಲಾದ ಭಾಷೆಗಳಲ್ಲಿ ಯಾವ ಯಾವ ವೇದವ್ಯಾಖ್ಯಾನಗಳು ನಿರ್ಮಿಸಲ್ಪಟ್ಟಿವೆಯೋ, ಅವೂ ಕೂಡ, ಅಶುದ್ಧವಾಗಿವೆ!

ಪ್ರಶ್ನಃ_ ಕಿಮನೇನ ಫಲಂ ಭವಿಷ್ಯತೀತಿ?

ಪ್ರಶ್ನೆ _ [ಹಾಗಾದರೆ,] ಇದರಿಂದ, ಪ್ರಯೋಜನ ವೇನು ಉಂಟಾಗುವುದು?

ನವೀನ-ಆಧುನಿಕ ವೇದಭಾಷ್ಯಗಳು ಅನರ್ಥಕಾರಿಗಳಾಗಿವೆ!

ಉತ್ತರಮ್_ ಯಾನಿ ರಾವಣೋವಟಸಾಯಣ-ಮಹೀಧರಾದಿಭಿರ್ವೇದಾರ್ಥವಿರುದ್ಧಾನಿ ಭಾಷ್ಯಾಣಿ ಕೃತಾನಿ ;

ಉತ್ತರ_ (i) ಯಾವುವು **ರಾವಣ, ಉವಟ, ಸಾಯಣ, ಮಹೀಧರ** ಮೊದಲಾದವರಿಂದ ವೇದಾರ್ಥಕ್ಕೆ ವಿರುದ್ಧವಾಗಿ ಭಾಷ್ಯಗಳು ನಿರ್ಮಿಸ ಲ್ಪಟ್ಟಿವೆಯೋ ;

ಅಂದರೆ, **ಉವಟ, ಸಾಯಣ, ಮಹೀಧರ** ಮೊದಲಾದವರು ಯಾವ ಯಾವ ಭಾಷ್ಯಗಳನ್ನು ಬರೆದಿದ್ದಾರೋ, ಅವೆಲ್ಲವೂ ಮೂಲಾರ್ಥಕ್ಕೂ ಮತ್ತು ಸನಾತನ ವೇದವ್ಯಾಖ್ಯಾನಗಳಿಗೂ ವಿರುದ್ಧವಾಗಿವೆ.

ಯಾನಿ ಚೈತದನುಸಾರೇಣೇಂಗಲೇಂಡಶಾರಮಣ್ಯ-ದೇಶೋತ್ಪನ್ನೈರ್ಯೂರೋಪಖಂಡದೇಶವಾಸಿಭಿಃ ಸ್ವದೇಶಭಾಷಯಾ ಸ್ವಲ್ಪಾನಿ ವ್ಯಾಖ್ಯಾನಾನಿ ಕೃತಾನಿ ;

(ii) ಮತ್ತು ಇವುಗಳಿಗನುಸಾರವಾಗಿ **ಇಂಗ್ಲೆಂಡ್-ಜರ್ಮನಿ** ದೇಶಗಳಲ್ಲಿ ಉತ್ಪನ್ನರಾದವರೂ, ಹಾಗೂ ಯೂರೋಪ್‌ಖಂಡ ದೇಶದ ನಿವಾಸಿಗಳೂ ಆದವರಿಂದ ತಮ್ಮ ದೇಶದ ಭಾಷೆಯಲ್ಲಿ ಯಾವ ಸ್ವಲ್ಪ ವ್ಯಾಖ್ಯಾನ ಗಳು ನಿರ್ಮಿಸಲ್ಪಟ್ಟಿವೆಯೋ ;

---

* ಮಹರ್ಷಿದಯಾನಂದರ ಸಮಯದಲ್ಲಿ ಪೌರಾಣಿಕ ವಿದ್ವಾಂಸರಿಂದ '**ವೇದಾರ್ಥಯತ್ನ**,' ಎಂಬ ಹೆಸರಿನಲ್ಲಿ ಸಂಸ್ಕೃತ-ಆಂಗ್ಲ-ಮರಾಠೀ ಭಾಷೆಯಲ್ಲಿ **ಋಗ್ವೇದಭಾಷ್ಯವು** ಪ್ರಕಟಿತವಾಗುತ್ತಿತ್ತು _ **ಯು. ಮೀ.**

** ಬಂಗಾಳೀ ವೇದಭಾಷ್ಯದ ಬಗ್ಗೆ ತಿಳಿದು ಬಂದಿಲ್ಲ! ಸಂಭವತಃ **ಸತ್ಯವ್ರತಸಾಮಶ್ರಮಿಗಳ** ಕೃತಿಯೊಂದರ ಕಡೆ ಸಂಕೇತ ವಿರಬಹುದು _ **ಯು. ಮೀ.**

ತಥೈವಾರ್ಯ್ಯಾವರ್ತ್ತದೇಶಸ್ಥೈಃ ಕೈಶ್ಚಿತ್ತದನುಸಾರೇಣ ಪ್ರಾಕೃತಭಾಷಯಾ ವ್ಯಾಖ್ಯಾನಾನಿ ಕೃತಾನಿ ವಾ, ಕ್ರಿಯಂತೇ ಚ ;

(iii) ಹಾಗೆಯೇ, ಆರ್ಯಾವರ್ತದೇಶದವರಾದ ಕೆಲವರಿಂದ ಇವುಗಳಿಗನುಸಾರವಾಗಿ ಪ್ರಾದೇಶಿಕ ಭಾಷೆಯಲ್ಲಿ [ಯಾವ] ವ್ಯಾಖ್ಯಾನಗಳು ನಿರ್ಮಿತವಾಗಿವೆಯೋ, ಮತ್ತು ನಿರ್ಮಿಸಲ್ಪಡುತ್ತಿವೆಯೋ;

ತಾನಿ ಸರ್ವಾಣ್ಯನರ್ಥಗರ್ಭಾಣಿ ಸಂತೀತಿ ಸಜ್ಜನಾನಾಂ ಹೃದಯೇಷು ಯಥಾವತ್ ಪ್ರಕಾಶೋ ಭವಿಷ್ಯತಿ.

ಅವೆಲ್ಲವೂ ಅನರ್ಥಕೋಶಗಳಾಗಿರುತ್ತವೆ, ಎಂಬುದಾಗಿ ಸಜ್ಜನರ ಹೃದಯಗಳಲ್ಲಿ ಯಥಾವತ್ತಾಗಿ ಪ್ರಕಾಶ ಉಂಟಾಗುವುದು!

ಟೀಕಾನಾಮಧಿಕದೊಷಪ್ರಸಿದ್ಧ್ಯಾ ತ್ಯಾಗಶ್ಚ.

ಮತ್ತು ಟೀಕೆಗಳಲ್ಲಿನ ದೋಷಗಳು ಅಧಿಕವಾಗಿ ಪ್ರಕಟವಾಗುವುದರಿಂದ, [ಅವುಗಳ] ತ್ಯಾಗ ಮಾಡಲಾಗುವುದು!

ಪರಂತ್ವವಕಾಶಾಭಾವಾತ್ ತೇಷಾಂ ದೋಷಾಣಾಮತ್ರ ಸ್ಥಾಲೀಪುಲಾಕನ್ಯಾಯವತ್ ಪ್ರಕಾಶಃ ಕ್ರಿಯತೇ.

ಆದರೆ, ಅವಕಾಶವಿಲ್ಲದುದರ ಕಾರಣದಿಂದ, ಅವುಗಳ[ಲ್ಲಿ]ನ ದೋಷಗಳ ಪ್ರಕಟಣೆಯನ್ನು ಇಲ್ಲಿ 'ಸ್ಥಾಲೀಪುಲಾಕ'ನ್ಯಾಯದಂತೆ ಮಾಡಲಾಗುತ್ತದೆ!

ತದ್ಯಥಾ_

ಅದು ಹೇಗೆಂದರೆ_

ಸಾಯಣಭಾಷ್ಯದ ದೋಷ-ನಿದರ್ಶನ

ಯತ್ ಸಾಯಣಾಚಾರ್ಯೇಣ ವೇದಾನಾಂ ಪರಮಮರ್ಥಮವಿಜ್ಞಾಯ_

ಸಾಯಣಾಚಾರ್ಯರಿಂದ ವೇದಗಳ ಶ್ರೇಷ್ಠವಾದ ಅರ್ಥವನ್ನು ಅರಿಯದೇ_

'ಸರ್ವೇ ವೇದಾಃ ಕ್ರಿಯಾಕಾಂಡಪರಾಃ ಸಂತಿ' ಇತ್ಯುಕ್ತಂ, ತದನ್ಯಥಾಸ್ತಿ.

'ವೇದಗಳೆಲ್ಲವೂ ಕ್ರಿಯಾಕಾಂಡಪರವಾಗಿವೆ' ಎಂದು ಯಾವುದು ಹೇಳಲ್ಪಟ್ಟಿದೆಯೇ, ಅದು ಸರಿಯಲ್ಲ!

ಅಂದರೆ, ಉದಾಹರಣೆಗಾಗಿ, ನೋಡಿ! ಸಾಯಣಾಚಾರ್ಯರು ವೇದಗಳ ಶ್ರೇಷ್ಠಅರ್ಥವನ್ನು ತಿಳಿಯದೇ_

'ಎಲ್ಲಾ ವೇದಗಳೂ ಕ್ರಿಯಾಕಾಂಡದ ಪ್ರತಿಪಾದನೆಯನ್ನೇ ಮಾಡುತ್ತವೆ', ಎಂದು ಹೇಳಿದ್ದಾರೆ.

ಅವರ ಈ ಮಾತು ಮಿಥ್ಯೆಯಾಗಿದೆ!

ಕುತಃ? ತೇಷಾಂ ಸರ್ವವಿದ್ಯಾನ್ವಿತತ್ವಾತ್.

ಏಕೆಂದರೆ_ ಅವುಗಳು* ಎಲ್ಲಾ ವಿದ್ಯೆಗಳಿಂದ ಕೂಡಿವೆ!

* ಎಂದರೆ, ವೇದಗಳು _ಅನು.

ತಚ್ಚ ಪೂರ್ವಂ ಸಂಕ್ಷೇಪತೋ ಲಿಖಿತಮಸ್ತಿ.

ಮತ್ತು ಅದು ಸಂಕ್ಷೇಪವಾಗಿ ಮೊದಲೇ ಬರೆಯಲ್ಪಟ್ಟಿದೆ.

ಅಂದರೆ, ಇದಕ್ಕೆ ಉತ್ತರವಾಗಿ ಈ 'ಭೂಮಿಕಾ'ದ ಹಿಂದಿನ ಪ್ರಕರಣಗಳಲ್ಲಿ ಸಂಕ್ಷೇಪವಾಗಿ ಯಾವುದನ್ನು ಹೇಳಿದ್ದೇವೋ, ಅದನ್ನು ನೋಡಿಕೊಳ್ಳಿರಿ!

ಏತಾವತೈವಾಸ್ಯ ಕಥನಂ ವ್ಯರ್ಥಮಸ್ತೀತ್ಯವ-ಗಂತವ್ಯಮ್.

ಇಷ್ಟರಿಂದಲೇ, ಈ ಕಥನವು ವ್ಯರ್ಥವಾಗಿದೆ, ಎಂದು ತಿಳಿಯಬೇಕು!

ಇಂದ್ರಂ ಮಿತ್ರಂ.*

[ಋಗ್ವೇದೇ ೧. ೧೬೪. ೪೬]

[ಅರ್ಥ:_ "ಇಂದ್ರನನ್ನು ಮಿತ್ರನನ್ನು."]

ಅಸ್ಯ ಮಂತ್ರಸ್ಯಾರ್ಥೋಽಪ್ಯನ್ಯಥೈವ ವರ್ಣಿತಃ.

ಈ ಮಂತ್ರದ ಅರ್ಥವೂ ಕೂಡ, ತಪ್ಪಾಗಿಯೇ ವರ್ಣಿಸಲ್ಪಟ್ಟಿದೆ.

ಅಂದರೆ, ಸಾಯಣಾಚಾರ್ಯರು ಹೀಗೆಯೇ 'ಇಂದ್ರ ಮಿತ್ರಂ.'_ ಈ ಮಂತ್ರದ ಅರ್ಥವನ್ನೂ ಕೂಡ, ಭ್ರಾಂತಿಯಿಂದ ಕೆಡಿಸಿದ್ದಾರೆ.

ತದ್ಯಥಾ_

ಅದು ಹೇಗೆಂದರೆ_

ತೇನಾತ್ರೇಂದ್ರಶಬ್ದೋ ವಿಶೇಷ್ಯತಯಾ ಗೃಹೀತೋ ಮಿತ್ರಾದೀನಿ ಚ ವಿಶೇಷಣತಯಾ.

ಅವರಿಂದ, ಇಲ್ಲಿ, 'ಇಂದ್ರ', ಎಂಬ ಶಬ್ದವು ವಿಶೇಷ್ಯವಾಗಿಯೂ, ಮತ್ತು 'ಮಿತ್ರ' ಮೊದಲಾದುವು ವಿಶೇಷಣವಾಗಿಯೂ ಸ್ವೀಕರಿಸಲ್ಪಟ್ಟಿವೆ.

ಅಂದರೆ, ಅವರು ಈ ಮಂತ್ರದಲ್ಲಿ ವಿಶೇಷ್ಯ-ವಿಶೇಷಣಗಳನ್ನು ಚೆನ್ನಾಗಿ ತಿಳಿಯದೇ, 'ಇಂದ್ರ' ಶಬ್ದವನ್ನಂತೂ ವಿಶೇಷ್ಯವಾಗಿ ವರ್ಣಿಸಿದರು; ಮತ್ತು 'ಮಿತ್ರ' ಮೊದಲಾದ ಶಬ್ದಗಳನ್ನು ಅದರ ವಿಶೇಷಣಗಳು, ಎಂದು ನಿರ್ಧರಿಸಿದರು.

ಅವರಿಗೆ ಇದೊಂದು ದೊಡ್ಡ ಭ್ರಮೆಯುಂಟಾಗಿ ಬಿಟ್ಟಿತು! ಏಕೆಂದರೆ_

* [ಋಷಿಃ_ ದೀರ್ಘತಮಾ ಔಚಥ್ಯಃ; ದೇವತಾ_ ಸೂರ್ಯಃ; ಛಂದಃ_ ತ್ರಿಷ್ಟುಪ್; ಸ್ವರಃ_ ಧೈವತಃ]

ಇಂದ್ರಂ ಮಿತ್ರಂ ವರುಣಮಗ್ನಿಮಾಹುರಥೋ ದಿವ್ಯಃ ಸ ಸುಪರ್ಣೋ ಗರುತ್ಮಾನ್ ।
ಏಕಂ ಸದ್ವಿಪ್ರಾ ಬಹುಧಾ ವದಂತ್ಯಗ್ನಿಂ ಯಮಂ ಮಾತರಿಶ್ವಾನಮಾಹುಃ ॥

[ಋಗ್ವೇದೇ ೧. ೧೬೪. ೪೬]

ಅತ್ರ ಖಲು ವಿಶೇಷ್ಯೋಽಗ್ನಿಶಬ್ದ ಇಂದ್ರಾ-ದೀನಾಂ ವಿಶೇಷಣಾನಾಂ ಸಂಗೇಽನ್ವಿತೋ ಭೂತ್ವಾ ;

ಇಲ್ಲಂತೂ ವಿಶೇಷ್ಯವಾದ 'ಅಗ್ನಿ' ಶಬ್ದವು 'ಇಂದ್ರ' ಮೊದಲಾದ ವಿಶೇಷಣಗಳ ಸಂಗದಲ್ಲಿ ಕೂಡಿಕೊಂಡು ;

ಪುನಃ ಸ ಏವ ಸದ್ವಸ್ತುಬ್ರಹ್ಮವಿಶೇಷಣಂ ಭವತಿ.

ಮತ್ತೆ, ಅದೇ ಸದ್ವಸ್ತುವಾದ 'ಬ್ರಹ್ಮ'ದ ವಿಶೇಷಣ ವಾಗಿದೆ!

ಅಂದರೆ, ಈ ಮಂತ್ರದಲ್ಲಿ 'ಅಗ್ನಿ' ಶಬ್ದವು ವಿಶೇಷ್ಯವಾಗಿದೆ; ಮತ್ತು 'ಇಂದ್ರ' ಮೊದಲಾದ ಶಬ್ದಗಳು ಅದರದೇ ವಿಶೇಷಣಗಳಾಗಿವೆ.

ವಿಶೇಷ್ಯ-ವಿಶೇಷಣಗಳ ಸಂಬಂಧ-ನಿಯಮ

ಏವಮೇವ ವಿಶೇಷ್ಯಂ ಪ್ರತಿ ವಿಶೇಷಣಂ ಪುನಃ ಪುನರನ್ವಿತಂ ಭವತೀತಿ ;

ಈ ರೀತಿಯಲ್ಲಿಯೇ, ವಿಶೇಷ್ಯದ ಕಡೆಗೆ ವಿಶೇಷಣವು ಮತ್ತೆ ಮತ್ತೆ [ಅದನ್ನು] ಅನುಸರಿಸುತ್ತಾ ಹೋಗುತ್ತದೆ ;

ನ ಚೈವಂ ವಿಶೇಷಣಮ್.

ವಿಶೇಷಣದ ಕಡೆಗೆ ಈ ರೀತಿಯಾಗಿ, [ವಿಶೇಷ್ಯ]ವಲ್ಲ!

ಅಂದರೆ, ವಿಶೇಷಣಗಳಲ್ಲಿ ಒಂದರ ಅನ್ವಯವು ವಿಶೇಷ್ಯದೊಡನೆ ಉಂಟಾಗಿ, ಪುನಃ ಎರಡನೆಯ-ಮೂರನೆಯ ವಿಶೇಷಣಗಳ ಜೊತೆ ವಿಶೇಷ್ಯದ ಅನ್ವಯವು ಮಾಡಿಸಬೇಕಾಗುತ್ತದೆ. ಎಂದರೆ, ವಿಶೇಷ್ಯ ದೊಡನೆ ವಿಶೇಷಣದ ಅನ್ವಯವು ಒಂದು ಸಲ [ಮಾತ್ರ] ಆಗುತ್ತದೆ!

ಏವಮೇವ ಯತ್ರ ಶತಂ ಸಹಸ್ರಂ ವೈಕಸ್ಯ ವಿಶೇಷ್ಯಸ್ಯ ವಿಶೇಷಣಾನಿ ಭವೇಯುಃ ;

ಈ ರೀತಿಯಾಗಿಯೇ, ಎಲ್ಲಿ ಒಂದು ವಿಶೇಷ್ಯಕ್ಕೆ ನೂರು, ಅಥವಾ ಸಾವಿರ ವಿಶೇಷಣಗಳು ಆಗ ಬೇಕಾಗುತ್ತವೋ ;

ತತ್ರ ವಿಶೇಷ್ಯಸ್ಯ ಪುನಃ ಪುನರುಚ್ಚಾರಣಂ ಭವತಿ.

ಅಲ್ಲಿ ವಿಶೇಷ್ಯದ ಉಚ್ಚಾರಣೆಯು ಮತ್ತೆ ಮತ್ತೆ [ಮಾಡಬೇಕಾ]ಗುತ್ತದೆ!

ಅಂದರೆ, ಎಲ್ಲೆಲ್ಲಿ ಒಂದು [ವಿಶೇಷ್ಯ]ಕ್ಕೆ ನೂರಾರು, ಅಥವಾ ಸಾವಿರಾರು ವಿಶೇಷಣಗಳಿರು ತ್ತವೋ, ಅಲ್ಲಲ್ಲೂ ಕೂಡ, ವಿಶೇಷ್ಯದ ಉಚ್ಚಾರಣೆಯು ನೂರಾರು ಸಲ ಅಥವಾ ಸಾವಿರಾರು ಸಲ [ಮಾಡಬೇಕಾ]ಗುತ್ತದೆ!

ವಿಶೇಷಣಸ್ಯೈಕವಾರಮೇವೇತಿ.

[ಆದರೆ,] [ಒಂದು] ವಿಶೇಷಣದ [ಉಚ್ಚಾರಣೆಯು] ಒಂದು ಸಲ ಮಾತ್ರ ಆಗುತ್ತದೆ!

ತಥೈವಾತ್ರ ಮಂತ್ರೇ ಪರಮೇಶ್ವರೇಣಾಗ್ನಿಶಬ್ದೋ ದ್ವಿರುಚ್ಚಾರಿತೋ ವಿಶೇಷ್ಯವಿಶೇಷಣಾಭಿಪ್ರಾಯತ್ವಾತ್.

ಹಾಗೆಯೇ, ಇಲ್ಲಿ, ಈ ಮಂತ್ರದ ವಿಷಯದಲ್ಲಿ, ಪರಮೇಶ್ವರನಿಂದ 'ಅಗ್ನಿ'ಶಬ್ದವು ವಿಶೇಷ್ಯ-ವಿಶೇಷಣಗಳ ಅಭಿಪ್ರಾಯದಿಂದ ಎರಡು ಸಲ ಉಚ್ಚರಿಸಲ್ಪಟ್ಟಿದೆ.

ಅಂದರೆ, ಈ ಮಂತ್ರದಲ್ಲಿ ವಿಶೇಷ್ಯ [-ವಿಶೇಷಣ]ದ ಇಚ್ಛೆಯಿಂದ ಈಶ್ವರನು 'ಅಗ್ನಿ' ಶಬ್ದವನ್ನು ಎರಡು ಸಲ ಉಚ್ಚರಿಸಿದನು.

ಮತ್ತು 'ಅಗ್ನಿ' ಮೊದಲಾದ [ಶಬ್ದಗಳು] ಬ್ರಹ್ಮನ ಹೆಸರುಗಳು, ಎಂದು ಹೇಳಲಾಗಿವೆ!

ಇದಂ ಸಾಯಣಾಚಾರ್ಯೇಣ ನೈವ ಬುದ್ಧಮ್. ಅತಸ್ತಸ್ಯ ಭ್ರಾಂತಿರೇವ ಜಾತೇತಿ ವೇದ್ಯಮ್.

ಸಾಯಣಾಚಾರ್ಯರಿಂದ ಇದು ತಿಳಿಯಲ್ಪಡಲೇ ಆಗಲಿಲ್ಲ! ಆದುದರಿಂದ, ಅವರಿಗೆ ಭ್ರಾಂತಿಯೇ ಉಂಟಾಯಿತು, ಎಂದು ತಿಳಿಯಬೇಕು.

ಅಂದರೆ, ಈ ಮಾತನ್ನು ಸಾಯಣಾಚಾರ್ಯರು ತಿಳಿಯಲಿಲ್ಲ! ಇದರಿಂದ, ಇದು ಅವರ ಭ್ರಾಂತಿ, ಎಂದು ಸಿದ್ಧವಾಗುತ್ತದೆ!

'ಅಗ್ನಿ'ಶಬ್ದದ ವಿಶೇಷ್ಯ-ವಿಶೇಷಣಕ್ಕೆ ಯಾಸ್ಕರ ಪ್ರಮಾಣ

ನಿರುಕ್ತಕಾರೇಣಾಪ್ಯಗ್ನಿಶಬ್ದೋ ವಿಶೇಷ್ಯ-ವಿಶೇಷಣತ್ವೇನೈವ ವರ್ಣಿತಃ.

ನಿರುಕ್ತಕಾರರಿಂದಲೂ ಕೂಡ, 'ಅಗ್ನಿ' ಶಬ್ದವು ವಿಶೇಷ್ಯ-ವಿಶೇಷಣಗಳ [ಅಭಿಪ್ರಾಯ]ದಿಂದಲೇ ವರ್ಣಿಸಲ್ಪಟ್ಟಿದೆ.

ಅಂದರೆ, ಈ ರೀತಿಯಾಗಿಯೇ, ನಿರುಕ್ತಾರರೂ ಕೂಡ, 'ಅಗ್ನಿ' ಶಬ್ದವನ್ನು ವಿಶೇಷ್ಯ[-ವಿಶೇಷಣ,] ಎಂದೇ ವರ್ಣನೆ ಮಾಡಿದ್ದಾರೆ.

ತದ್ಯಥಾ_

ಅದು ಹೇಗೆಂದರೆ_

"ಇಮಮೇವಾಗ್ನಿಂ ಮಹಾಂತಮಾತ್ಮಾನಮೇಕಮಾತ್ಮಾನಂ ಬಹುಧಾ
ಮೇಧಾವಿನೋ ವದಂತೀ'ಂದ್ರಂ ಮಿತ್ರಂ ವರುಣಮಿ'ತ್ಯಾದಿ ॥"

[ನಿರುಕ್ತೇ ಅ. ೭, ಖಂ. ೧೮]

[ಅರ್ಥ:_"ಮಹಾನ್ ಆತ್ಮವಾದ ಈ ಅಗ್ನಿಯನ್ನೇ ಮೇಧಾವಿಗಳು ಬಹಳ ಪ್ರಕಾರದಲ್ಲಿ, ಒಂದು ಆತ್ಮರೂಪವಾಗಿ, ಇಂದ್ರ, ಮಿತ್ರ, ವರುಣ, ಎಂದು ಮೊದಲಾಗಿ ಕರೆಯುತ್ತಾರೆ."

(ನಿರುಕ್ತ: ೭. ೧೮)]

ಸ ಚೈಕಸ್ಯ ಸದ್ವಸ್ತುನೋ ಬ್ರಹ್ಮಣೋ ನಾಮಾಸ್ತಿ.

ಮತ್ತು ಅದು* ಒಂದೇ ಸದ್ವಸ್ತುವಾದ ಬ್ರಹ್ಮನ ಹೆಸರಾಗಿದೆ.

ಅಂದರೆ, ಇಲ್ಲಿ ಅಗ್ನಿ ಮತ್ತು ಇಂದ್ರ ಮೊದಲಾದ ಹೆಸರುಗಳು ಒಂದು ಸದ್ವಸ್ತುವಾದ ಬ್ರಹ್ಮನದೂ ಆಗಿವೆ.

ತಸ್ಮಾದಗ್ನ್ಯಾದೀನೀಶ್ವರಸ್ಯ ನಾಮಾನಿ ಸಂತೀತಿ ಬೋಧ್ಯಮ್,

ಆದುದರಿಂದ, ಅಗ್ನಿ ಮೊದಲಾದುವು ಈಶ್ವರನ ಹೆಸರುಗಳಾಗಿವೆ, ಎಂದು ತಿಳಿಯಬೇಕು!

ಅಂದರೆ, ಇಂದ್ರ ಮೊದಲಾದ ಶಬ್ದಗಳು 'ಅಗ್ನಿ'ಯ ವಿಶೇಷಣಗಳಾಗಿವೆ. ಮತ್ತು ಅಗ್ನಿ ಮೊದಲಾದುವು ಬ್ರಹ್ಮನ ಹೆಸರುಗಳಾಗಿವೆ.

ಸಾಯಣಾಚಾರ್ಯರ ವಿರುದ್ಧಮಂತ್ರಾರ್ಥದ ಇತರ ಉದಾಹರಣೆಗಳು

ಸಾಯಣಾಚಾರ್ಯರು ಹೀಗೆ ಇನ್ನೂ ಬಹಳ ಮಂತ್ರಗಳ ವ್ಯಾಖ್ಯೆಗಳಲ್ಲಿ ಶಬ್ದಗಳ ಅರ್ಥವನ್ನು ವಿರುದ್ಧವಾಗಿ ಮಾಡಿದ್ದಾರೆ.

ತಥಾ ಚ_

ಹೇಗೆಂದರೆ_

'ತಸ್ಮಾತ್ ಸರ್ವೈರಪಿ ಪರಮೇಶ್ವರ ಏವ ಹೂಯತೇ.'**

"ಆದುದರಿಂದ, ಎಲ್ಲರಿಂದಲೂ ಕೂಡ, ಪರಮೇಶ್ವರನೇ ಕರೆಯಲ್ಪಡುತ್ತಾನೆ.

ಅಂದರೆ, 'ಎಲ್ಲ ಮಂತ್ರಗಳಿಂದ ಪರಮೇಶ್ವರನ ಗ್ರಹಣ ಮಾಡಲಾಗಿದೆ.'

'ಯಥಾ ರಾಜ್ಞಃ ಪುರೋಹಿತಃ ತದಭೀಷ್ಟಂ ಸಂಪಾದಯತಿ.' +

'ಹೇಗೆ ರಾಜನ ಪುರೋಹಿತನು ಅವನಿಗೆ ಇಷ್ಟವಾದುದನ್ನು ಸಂಪಾದಿಸುತ್ತಾನೋ.'

ಅಂದರೆ, 'ಹೇಗೆ ರಾಜನ ಪುರೋಹಿತನು ರಾಜನಿಗೆ ಹಿತವಾದ ಕೆಲಸವನ್ನೇ ಸಾಧಿಸುತ್ತಾನೋ.'

'ಯದ್ವಾ ಯಜ್ಞಸ್ಯ ಸಂಬಂಧಿನಿ ಪೂರ್ವ-ಭಾಗೇ ಆಹವನೀಯರೂಪೇಣಾವಸ್ಥಿತಮ್.+

'ಅಥವಾ ಯಜ್ಞಕ್ಕೆ ಸಂಬಂಧಿಸಿದ ಪೂರ್ವ-ಭಾಗದಲ್ಲಿ ಆಹವನೀಯರೂಪದಿಂದ ಇಡಲ್ಪಟ್ಟಿದೆ.

ಅಂದರೆ, 'ಅಗ್ನಿಯು ಯಜ್ಞಕ್ಕೆ ಸಂಬಂಧಿಸಿದ ಪೂರ್ವಭಾಗದಲ್ಲಿ ಹವನ ಮಾಡುವುದಕ್ಕಾಗಿ ಇಡಲ್ಪಟ್ಟಿದೆ.'

ಇತ್ಯುಕ್ತಮ್.

ಎಂದು ಹೇಳಲಾಗಿದೆ.

** ಇದಂ ವಾಕ್ಯಂ ಸಾಯಣೀಯರ್ಗ್ವೇದಭಾಷ್ಯೋಪೋದ್ಘಾತಾರಂಭೇ ಪಠ್ಯತೇ. _ಯು. ಮೀ.

+ ಇಮೇ ವಾಕ್ಯೇ 'ಅಗ್ನಿಮೀಳೇ'- ಮಂತ್ರವ್ಯಾಖ್ಯಾನೇ ಪಠ್ಯೇತೇ _ಯು. ಮೀ.

* ಎಂದರೆ, ಅಗ್ನಿ _ಅನು.

ಇದಮಪಿ ಪೂರ್ವಾಪರವಿರುದ್ಧಮಸ್ತಿ.

ಇದೂ ಕೂಡ, ಪೂರ್ವ-ಅಪರಗಳಿಗೆ ವಿರುದ್ಧವಾಗಿದೆ!

ಅಂದರೆ, ಸಾಯಣಾಚಾರ್ಯರ ಈ ಕಥನಗಳು ಅಯೋಗ್ಯವೂ ಮತ್ತು ಪೂರ್ವಾಪರವಿರೋಧಿಯೂ ಆಗಿ, ಮುಂದಿನ-ಹಿಂದಿನ ಸಂಬಂಧವನ್ನು ಮುರಿಯುತ್ತವೆ.

ವಿರುದ್ಧಮಂತ್ರಾರ್ಥಗಳ ದೋಷನಿರ್ದೇಶ

ತದ್ಯಥಾ_

'ಸರ್ವೈರ್ನಾಮಭಿಃ ಪರಮೇಶ್ವರ ಏವ ಹೂಯತೇ' ಚೇತ್, ಪುನಸ್ತೇನ ಹೋಮಸಾಧಕ ಆಹವನೀಯರೂಪೇಣಾವಸ್ಥಿತೋ ಭೌತಿಕೋऽಗ್ನಿಃ ಕಿಮರ್ಥೋ ಗೃಹೀತಃ?

ಅದು ಹೇಗೆಂದರೆ_

ಒಂದುವೇಳೆ_ 'ಎಲ್ಲಾ ಹೆಸರುಗಳಿಂದಲೂ ಪರಮೇಶ್ವರನೇ ಕರೆಯಲ್ಪಡುತ್ತಾನೆ'ಯಾದರೆ_ ಅವರಿಂದ ಮತ್ತೆ ಹೋಮಕ್ಕೆ ಸಾಧಕವೂ, ಆಹವನೀಯರೂಪದಿಂದ ಇಡಲ್ಪಟ್ಟಿರುವುದೂ ಆದ ಭೌತಿಕಅಗ್ನಿಯು ಏತಕ್ಕಾಗಿ ಸ್ವೀಕರಿಸಲ್ಪಟ್ಟಿತು?

ಅಂದರೆ, ಯಾವಾಗ ಅವರು_ '**ಎಲ್ಲಾ ಹೆಸರುಗಳಿಂದ ಪರಮೇಶ್ವರನದೇ ಗ್ರಹಣ**'ವನ್ನು ಮಾಡಿದರೋ, ಆಗ ಮತ್ತೆ ಯಾವ ಭೌತಿಕಅಗ್ನಿಯಲ್ಲಿ ಹವನ ಮಾಡುತ್ತಾರೋ, ಅದನ್ನು ಏತಕ್ಕಾಗಿ ಗ್ರಹಿಸಿದರು?

ತಸ್ಯೇದಮಪಿ ವಚನಂ ಭ್ರಮಮೂಲಮೇವ.

[ಆದುದರಿಂದ,] ಅವರ ಈ ಮಾತೂ ಕೂಡ, ಭ್ರಮಮೂಲಕವಾಗಿಯೇ ಇದೆ!

ಕೋऽಪಿ ಬ್ರೂಯಾತ್_

'ಸಾಯಣಾಚಾರ್ಯೇಣ ಯದ್ಯಪೀಂದ್ರಾದಯಸ್ತತ್ರ ತತ್ರ ಹೂಯಂತೇ ;

'ತಥಾಪಿ ಪರಮೇಶ್ವರಸ್ಯೈವೇಂದ್ರಾದಿರೂಪೇಣಾವಸ್ಥಾನಾದವಿರೋಧಃ';

ಇತ್ಯುಕ್ತತ್ವಾದದೋಷ ಇತಿ.

ಯಾರೋ ಹೇಳಬಹುದೇನೆಂದರೆ_

'**ಸಾಯಣಾಚಾರ್ಯ**ರಿಂದ_ 'ಒಂದು ವೇಳೆ, ಇಂದ್ರಾದಿಗಳು ಅಲ್ಲಲ್ಲಿ ಕರೆಯಲ್ಪಡುತ್ತಾರೆ;

'ಎಂದು ಹೇಳಿದರೂ, ಕೂಡ, ಪರಮೇಶ್ವರನೇ ಇಂದ್ರಾದಿಗಳ ರೂಪದಿಂದ ಉಪಸ್ಥಿತನಾಗಿ ಇರುವುದರಿಂದ, ವಿರೋಧವಿಲ್ಲ',

'ಎಂದು ಹೇಳಲ್ಪಟ್ಟಿರುವುದರಿಂದ, ದೋಷವಾಗದು!'

'ಅಂದರೆ, ಸಾಯಣಾಚಾರ್ಯರು ಅಲ್ಲಿ ಇಂದ್ರಾದಿ ದೇವತೆಗಳ ಸ್ವೀಕಾರವನ್ನೇ ಒಂದುವೇಳೆ, ಮಾಡಿದ್ದರೆ, ಅದರಿಂದ ಸ್ವಲ್ಪವೂ ವಿರೋಧವು ಬಾರದು!'

[ಎಂದು ಹೇಳಿದರೆ_]

ಏವಂ ಪ್ರಾಪ್ತೇ ಬ್ರೂಮಃ_

ಇಂತಹ ಪ್ರಶ್ನೆಗೆ ಉತ್ತರ ಹೇಳುತ್ತೇವೇನೆಂದರೆ_

'ಯದೀಂದ್ರಾದಿಭಿರ್ನಾಮಭಿಃ ಪರಮೇಶ್ವರ ಏವೋಚ್ಯತೇ' ತರ್ಹಿ ಪರಮೇಶ್ವರಸ್ಯೇಂದ್ರಾದಿರೂಪಾವಸ್ಥಿತಿರನುಚಿತಾ.

'ಒಂದು ವೇಳೆ, ಇಂದ್ರ ಮೊದಲಾದ ಹೆಸರುಗಳಿಂದ [ಕೇವಲ] ಪರಮೇಶ್ವರನೇ ಕರೆಯಲ್ಪಡುತ್ತಾನೆಯಾದರೆ,' ಇಂದ್ರಾದಿಗಳ ರೂಪದಿಂದ ಪರಮೇಶ್ವರನ ಇರುವಿಕೆಯು ಅನುಚಿತವಾಗುತ್ತದೆ!

ಅಂದರೆ, ಇಂದ್ರಾದಿ ಹೆಸರುಗಳಿಂದ ಪರಮೇಶ್ವರನದೇ ಸ್ವೀಕಾರವಾದರೆ, ಅವನು ನಿರಾಕಾರನೂ, ಸರ್ವಶಕ್ತಿಮಂತನೂ, ವ್ಯಾಪಕನೂ ಮತ್ತು ಅಖಂಡನೂ ಆಗಿರುವುದರಿಂದ, [ಅವನು] ಜನ್ಮ ತಾಳಿ, ಭಿನ್ನ ಭಿನ್ನ ವ್ಯಕ್ತಿಯಂತಾಗುವುದು ಎಂದಿಗೂ ಸಾಧ್ಯವಿಲ್ಲ!

ತದ್ಯಥಾ_

ಅದು ಹೇಗೆಂದರೆ_

ಅಜ ಏಕಪಾತ್ ॥*

[ಋಗ್ವೇದೇ ೭. ೩೫. ೧೩]

[ಅರ್ಥ:_ "ಜನ್ಮರಹಿತನೂ, ಜಗತ್ತನ್ನು ಏಕ ಅಂಶದಲ್ಲಿ ಉಳ್ಳವನೂ [ಆಗಿದ್ದಾನೆ.]"

ಸ ಪರ್ಯ್ಯಗಾಚ್ಛುಕ್ರಮಕಾಯಮ್ ॥**

[ಯಜುರ್ವೇದೇ ೪೦. ೮]

[ಅರ್ಥ:_ "ಅವನು ವ್ಯಾಪಕನೂ, ಪರಾಕ್ರಮಿಯೂ, ಶರೀರರಹಿತನೂ, [ಆಗಿದ್ದಾನೆ.]"

ಇತ್ಯಾದಿಮಂತ್ರಾರ್ಥೇನ ಪರಮೇಶ್ವರಸ್ಯ ಜನ್ಮ-ಸ್ವರೂಪವತ್ತ್ವಶರೀರಧಾರಣಾದಿನಿಷೇಧಾತ್ ತತ್ಕಥನಮಸದಸ್ತಿ.

ಈ ಮೊದಲಾದ ಮಂತ್ರಗಳ ಅರ್ಥದಿಂದ ಪರಮೇಶ್ವರನ ಜನ್ಮ-ಸ್ವರೂಪವಂತಿಕೆ-ಶರೀರಧಾರಣೆ ಮೊದಲಾದುವುಗಳ ನಿಷೇಧ ಮಾಡಿರುವುದರಿಂದ ಅಂತಹ ಹೇಳಿಕೆಯು ಸುಳ್ಳಾಗಿರುತ್ತದೆ!

[ಋಷಿಃ_ ಮೈತ್ರಾವರುಣಿರ್ವಸಿಷ್ಠಃ ; ದೇವತಾ_ ವಿಶ್ವೇ ದೇವಾಃ ; ಛಂದಃ_ ತ್ರಿಷ್ಟುಪ್ ; ಸ್ವರಃ_ ಧೈವತಃ]

* ಶಂ ನೋ ಅಜ ಏಕಪಾದ್ ದೇವೋ ಅಸ್ತು ಶಂ ನೋಽಹಿರ್ಬುಧ್ನ್ಯಃ ಶಂ ಸಮುದ್ರಃ ।
ಶಂ ನೋ ಅಪಾಂ ನಪಾತ್ ಪೇರುರಸ್ತು ಶಂ ನಃ ಪೃಶ್ನಿರ್ಭವತು ದೇವಗೋಪಾ ॥

[ಋಗ್ವೇದೇ ೭. ೩೫. ೧೩]

** ಯಜುರ್ವೇದೇ (೪೦. ೮). ೮೩, ೧೮೫, ೫೨೭, ೯೪೩ ತಮಾನಿ ಪೃಷ್ಠಾನಿ ದ್ರಷ್ಟವ್ಯಾನಿ _ಅನು.

** ಯಜುರ್ವೇದ (೪೦. ೮). ೮೩, ೧೮೫, ೫೨೭, ೯೪೩ ನೆಯ ಪುಟಗಳನ್ನು ನೋಡಿ _ಅನು.

ಅಂದರೆ, ವೇದಗಳಲ್ಲಿ **'ಅಜ'**; ಮತ್ತು **'ಅಕಾಯ'**, ಎಂದರೆ ಶರೀರಸಂಬಂಧರಹಿತನಾದವನು ಮೊದಲಾದ ಗುಣಗಳೊಡನೆ ಪರಮೇಶ್ವರನ ವರ್ಣನೆ ಮಾಡಲಾಗಿದೆ.

ಆದುದರಿಂದ, **ಸಾಯಣಾಚಾರ್ಯ**ರ ಹೇಳಿಕೆಯು ಸತ್ಯವಾಗಲಾರದು!

ಏವಮೇವ ಸಾಯಣಾಚಾರ್ಯ್ಯಕೃತಭಾಷ್ಯ-ದೋಷಾ ಬಹವಃ ಸಂತಿ.

ಈ ರೀತಿಯಾಗಿಯೇ, ಸಾಯಣಾಚಾರ್ಯರಿಂದ ರಚಿಸಲ್ಪಟ್ಟ ಭಾಷ್ಯದ ದೋಷಗಳು ಬಹಳ ಇವೆ!

ಅಗ್ರೇ ಯತ್ರ ಯತ್ರ ಯಸ್ಯ ಯಸ್ಯ ಮಂತ್ರಸ್ಯ ವ್ಯಾಖ್ಯಾನಂ ಕರಿಷ್ಯಾಮಸ್ತತ್ರ ತತ್ರ ತದ್ಭಾಷ್ಯದೋಷಾನ್ ಪ್ರಕಾಶಯಿಷ್ಯಾಮ ಇತಿ.

ಮುಂದೆ,* ಎಲ್ಲೆಲ್ಲಿ ಯಾವ ಯಾವ ಮಂತ್ರದ ವ್ಯಾಖ್ಯಾನವನ್ನು ಮಾಡುವೆವೋ, ಅಲ್ಲಲ್ಲಿ ಅವರ ಭಾಷ್ಯದ ದೋಷಗಳನ್ನು ಪ್ರಕಟಿಸುವೆವು.

ಅಂದರೆ, ಈ ರೀತಿಯಾಗಿ, ಸಾಯಣಾಚಾರ್ಯರು ಯಾವ ಯಾವ ಮಂತ್ರದ ವಿರುದ್ಧ-ವ್ಯಾಖ್ಯಾನವನ್ನು ಮಾಡಿದ್ದಾರೋ, ಅವೆಲ್ಲವೂ ಮುಂದೆ, ಕ್ರಮಪೂರ್ವಕ ವಾಗಿ ಆ ಮಂತ್ರಗಳ ವ್ಯಾಖ್ಯಾನದಲ್ಲಿ ಬರೆಯಲ್ಪಡ ಲಾಗುವುದು.

ಮಹೀಧರರ ಭಾಷ್ಯದ ದೋಷನಿದರ್ಶನ

ಏವಮೇವ ಮಹೀಧರೇಣ ಮಹಾನನರ್ಥ-ರೂಪಂ 'ವೇದದೀಪಾ'ಖ್ಯಂ ವಿವರಣಂ ಕೃತಂ ;

ಹೀಗೆಯೇ, **ಮಹೀಧರ**ರಿಂದ ಮಹಾ ಅನರ್ಥ ರೂಪವಾದ **'ವೇದದೀಪ'**, ಎಂದು ಕರೆಯಲ್ಪಡುವ ಟೀಕೆಯು ಮಾಡಲ್ಪಟ್ಟಿದೆ ;

ತಸ್ಯಾಪೀಹ ದೋಷಾ ದಿಗ್ದರ್ಶನವತ್ ಪ್ರದರ್ಶ್ಯಂತೇ.

ಇಲ್ಲಿ ಅದರ ದೋಷಗಳೂ ಕೂಡ, 'ದಿಕ್ಕುಗಳನ್ನು ತೋರಿಸುವಂತೆ,' ತೋರಿಸಲಾಗುತ್ತವೆ.

ಅಂದರೆ, ಇದೇ ರೀತಿಯಾಗಿ ಮಹೀಧರರೂ ಕೂಡ, ಯಜುರ್ವೇದದ ಮೇಲೆ, ಮೂಲಕ್ಕೆ ವಿರುದ್ಧ ವಾಗಿ ವ್ಯಾಖ್ಯಾನವನ್ನು ಮಾಡಿದ್ದಾರೆ. ಅದರಲ್ಲಿನ ಸತ್ಯಾಸತ್ಯದ ಪರೀಕ್ಷೆಗಾಗಿ ಅದರ ಸ್ವಲ್ಪ ದೋಷಗಳನ್ನು ಇಲ್ಲಿಯೂ ತೋರಿಸುತ್ತೇವೆ_

* ಅಂದರೆ, ವೇದಭಾಷ್ಯದಲ್ಲಿ _ಅನು.

(೧) ಗಣರಾಜನು ಪ್ರಿಯನೂ, ನಿಧಿಪತಿಯೂ ಆಗಿರುತ್ತಾನೆ

[ಋಷಿಃ_ ಪ್ರಜಾಪತಿಃ ; ದೇವತಾ_ ಗಣಪತಿಃ ; ಛಂದಃ_ ಶಕ್ವರೀ ; ಸ್ವರಃ_ ಧೈವತಃ]

ಗಣಾನಾಂ ತ್ವಾ ಗಣಪತಿಗ್ಂ ಹವಾಮಹೇ ಪ್ರಿಯಾಣಾಂ
ತ್ವಾ ಪ್ರಿಯಪತಿಗ್ಂ ಹವಾಮಹೇ ನಿಧೀನಾಂ ತ್ವಾ
ನಿಧಿಪತಿಗ್ಂ ಹವಾಮಹೇ ವಸೋ ಮಮ । ಆಹಮಜಾನಿ
ಗರ್ಭಧಮಾ ತ್ವಮಜಾಸಿ ಗರ್ಭಧಮ್ ॥೧॥

[ಯಜುರ್ವೇದೇ ಅ. ೨೩, ಮಂ. ೧೯]

[ಅರ್ಥಃ_ "ಹೇ ನನ್ನ ರಾಜನೇ! ಗಣಗಳ ಪತಿಯಾದ ನಿನ್ನನ್ನು ಗಣಪತಿ, ಎಂದು ನಾವು ಆಹ್ವಾನಿಸುತ್ತೇವೆ. ಪ್ರಿಯರ ಪಾಲಕನಾದ ನಿನ್ನನ್ನು ಪ್ರಿಯಪತಿ, ಎಂದು ಕರೆಯುತ್ತೇವೆ. ನಿಧಿಗಳ ಸ್ವಾಮಿಯಾದ ನಿನ್ನನ್ನು 'ನಿಧಿಪತಿ', ಎಂದು ಕರೆಯುತ್ತೇವೆ. ಗರ್ಭಧಾರಕನನ್ನು ನಾನು ಚೆನ್ನಾಗಿ ತಿಳಿಯಲಿ! ಗರ್ಭಧಾರಕನನ್ನು ನೀನು [ಚೆನ್ನಾಗಿ] ತಿಳಿದುಕೋ!

(ಯಜುರ್ವೇದಃ ೨೩.೧೯)]

ಭಾಷ್ಯಮ್_

ಭಾಷ್ಯ _

ಅಸ್ಯ ಮಂತ್ರಸ್ಯ ವ್ಯಾಖ್ಯಾನೇ ತೇನೋಕ್ತಮ್_

ಈ ಮಂತ್ರದ ವ್ಯಾಖ್ಯಾನದಲ್ಲಿ ಅವರಿಂದ ಹೇಳಲ್ಪಟ್ಟಿದೆಯೇನೆಂದರೆ_

ಅಂದರೆ, ಈ ಮಂತ್ರ[ದ ವ್ಯಾಖ್ಯಾನ]ದಲ್ಲಿ ಮಹೀಧರರು ಹೇಳಿದ್ದಾರೇನೆಂದರೆ_

ಇದಕ್ಕೆ ಮಹೀಧರರ ಅಶ್ಲೀಲಾರ್ಥ_ 'ಕುದುರೆ-ರಾಜಮಹಿಷೀಸಂಗಮ?'

ಅಸ್ಮಿನ್ ಮಂತ್ರೇ ಗಣಪತಿಶಬ್ದಾದಶ್ವೋ ವಾಜೀ ಗೃಹೀತವ್ಯ ಇತಿ.

ಈ ಮಂತ್ರದಲ್ಲಿ 'ಗಣಪತಿ' ಶಬ್ದದಿಂದ 'ಅಶ್ವ', ಎಂದರೆ ಕುದುರೆಯನ್ನು ಗ್ರಹಿಸಬೇಕು, [ಎಂದು ಅವರು ಹೇಳುತ್ತಾರೆ.]

ತದ್ಯಥಾ_

ಅದು ಹೇಗೆಂದರೆ_

ಅಂದರೆ, ಮಹೀಧರರ ತಿರುಗು-ಮುರುಗು ಅರ್ಥವನ್ನು ನೋಡಿ_

'ಮಹಿಷೀ ಯಜಮಾನಸ್ಯ ಪತ್ನೀ ಯಜ್ಞ-ಶಾಲಾಯಾಂ ಪಶ್ಯತಾಂ ಸರ್ವೇಷಾಮೃತ್ವಿಜಾಮಶ್ವ-ಸಮೀಪೇ ಶೇತೇ ।

" 'ಮಹಿಷೀ', ಎಂದರೆ ಯಜಮಾನನ ಪತ್ನಿಯು ಯಜ್ಞಶಾಲೆಯಲ್ಲಿ ಎಲ್ಲಾ ಋತ್ವಿಕ್ಕುಗಳೂ ನೋಡುತ್ತಿರುವಂತೆಯೇ, ಕುದುರೆಯ ಬಳಿ ಮಲಗುತ್ತಾಳೆ.

ಅಂದರೆ_ ಎಲ್ಲಾ ಋತ್ವಿಜರ ಎದುರಿಗೆ ಯಜಮಾನನ ಪತ್ನಿಯು ಮಲಗಬೇಕು!

'ಶಯಾನಾ ಸತ್ಯಾಹ_

" ಮಲಗಿರುತ್ತಾ ಹೇಳಬೇಕೇನೆಂದರೆ_

ಅಂದರೆ, ಮಲಗಿರುತ್ತಾ ಕುದುರೆಗೆ ಹೇಳಬೇಕೇನೆಂದರೆ_

'ಹೇ ಅಶ್ವ! ಗರ್ಭಧಂ_ ಗರ್ಭಂ ದಧಾತಿ ಗರ್ಭಧಂ; ಗರ್ಭಧಾರಕಂ ರೇತಃ ;

" 'ಓ ಕುದುರೆ! 'ಗರ್ಭಧ'_ ಎಂದರೆ, ಗರ್ಭವನ್ನು ಧಾರಣ ಮಾಡಿಸುವುದು 'ಗರ್ಭಧ'; ಎಂದರೆ ಗರ್ಭಧಾರಕವಾದ ರೇತಸ್ಸನ್ನು;

" ಅಂದರೆ, ಯಾವುದರಿಂದ ಗರ್ಭಧಾರಣವಾಗುತ್ತದೋ, ಆ ಯಾವ ನಿನ್ನ ವೀರ್ಯವಿದೆಯೋ; ಅದನ್ನು;

'ಅಹಮ್ ಆ ಅಜಾನಿ ಆಕೃಷ್ಯ ಕ್ಷಿಪಾಮಿ ।

" '(ಅಹಮ್) ನಾನು (ಆ ಅಜಾನಿ) ಆಕರ್ಷಿಸಿ ಎಳೆಯುತ್ತೇನೆ.

" ಅಂದರೆ, ಎಳೆದು, ನನ್ನ ಯೋನಿಯಲ್ಲಿ ಹಾಕಿಕೊಳ್ಳುವೆನು.

'ತ್ವಂ ಚ ಗರ್ಭಧಂ ರೇತಃ ಆ ಅಜಾಸಿ ಆಕೃಷ್ಯ ಕ್ಷಿಪಸಿ ॥ ೧ ॥' *

" 'ನೀನೂ ಕೂಡ, ಗರ್ಭಧಾರಕವಾದ ರೇತಸ್ಸನ್ನು ಆಕರ್ಷಿಸಿ, ಎಸೆಯುತ್ತೀಯೆ.*

" ಅಂದರೆ, ನೀನು ಆ ವೀರ್ಯವನ್ನು ನನ್ನಲ್ಲಿ ಸ್ಥಾಪಿಸುವವನಾಗಿದ್ದೀಯೆ! ' " [೧]

---

* ಅಸ್ಮಿನ್ ಪ್ರಕರಣೇ ನಿರ್ದಿಷ್ಟೋ ಮಹೀಧರಸ್ಯಾರ್ಥಸ್ತದ್ ಭಾಷ್ಯಸ್ಯ ಸಂಕ್ಷೇಪರೂಪೋ ಜ್ಞೇಯಃ _ಯು. ಮೀ.

* ಈ ಪ್ರಕರಣದಲ್ಲಿ ನಿರ್ದಿಷ್ಟವಾಗಿರುವ ಮಹೀಧರರ ಅರ್ಥವು ಅವರ ಭಾಷ್ಯದ ಸಂಕ್ಷಿಪ್ತರೂಪವಾಗಿದೆ, ಎಂದು ತಿಳಿಯಬೇಕು. _ಯು. ಮೀ.

ಅತ್ರ ಮಹೀಧರ ಉವಟಾನುಸಾರಿ ಸ್ವಭಾಷ್ಯಂ ತನೋತಿ.

ಇಲ್ಲಿ ಮಹೀಧರರು ಉವಟಾಚಾರ್ಯರ ಭಾಷ್ಯಕ್ಕನುಸಾರವಾಗಿ ತಮ್ಮ ಭಾಷ್ಯವನ್ನು ವಿಸ್ತರಿಸುತ್ತಾರೆ.

ಕತಿಪಯಾನಾಂ ಮಧ್ಯಕಾಲೀನಾನಾಂ ಯಾಜ್ಞಿಕಾನಾಂ ದುರುದ್ದೇಶ್ಯಪ್ರದರ್ಶನಾಯಾಸ್ಯ ಮಂತ್ರಸ್ಯ, ಆಗಾಮಿನಾಂ ಮಂತ್ರಾಣಾಂ ಚ ಮಹೀಧರಕೃತಂ (ಕು)ಕರ್ಮಕಾಂಡಾತ್ಮಕಂ ಭಾಷ್ಯಮಗೇ ಪಾದಟಿಪ್ಪಣ್ಯಾಮುದ್ಧ್ರಿಯತೇ_ →

ಕೆಲವು ಮಧ್ಯಕಾಲೀನ ಯಾಜ್ಞಿಕರ ದುರುದ್ದೇಶ್ಯವನ್ನು ತೋರಿಸುವುದಕ್ಕಾಗಿ, ಈ ಮಂತ್ರಕ್ಕೆ ಮತ್ತು ಮುಂದೆ ಬರುವ ಮಂತ್ರಗಳಿಗೂ ಕೂಡ, ಮಹೀಧರರು ಮಾಡಿರುವ (ಕು)ಕರ್ಮಕಾಂಡಾತ್ಮಕ ಭಾಷ್ಯವು ಕೆಳಗೆ ಪಾದಟಿಪ್ಪಣಿಗಳಲ್ಲಿ ಉದ್ಧರಿಸಲ್ಪಡುತ್ತದೆ_ →

ಗಣಪತಿಯೂ, ಪ್ರಿಯಪತಿಯೂ, ನಿಧಿಪತಿಯೂ ಆದವನು ಪರಮಾತ್ಮಾ!

ಅಥ ಸತ್ಯೋऽರ್ಥಃ_

ಈಗ ಸತ್ಯವಾದ ಅರ್ಥವು ಹೇಗಿದೆಯೆಂದರೆ_

ಭಾಷ್ಯಮ್_

ಭಾಷ್ಯ_

(ಗಣಾನಾಂ ತ್ವಾ.) ವಯಂ ಗಣಾನಾಂ ಗಣನೀಯಾನಾಂ ಪದಾರ್ಥಸಮೂಹಾನಾಂ ಗಣಪತಿಂ ಪಾಲಕಂ ಸ್ವಾಮಿನಂ ;

(ಗಣಾನಾಂ ತ್ವಾ.) ನಾವು (ಗಣಾನಾಮ್) ಗಣನೀಯವಾದ ಪದಾರ್ಥಗಳ ಸಮೂಹಗಳ (ಗಣಪತಿಮ್) ಪಾಲಕನಾದ, ಎಂದರೆ ಸ್ವಾಮಿಯಾದ [ಹಾಗೂ] ;

(ತ್ವಾ) ತ್ವಾಂ ಪರಮೇಶ್ವರಂ (ಹವಾಮಹೇ) ಗೃಹ್ಣೀಮಃ .

(ತ್ವಾ) ಪರಮೇಶ್ವರನಾದ ನಿನ್ನನ್ನು (ಹವಾಮಹೇ) ಸ್ವೀಕರಿಸುತ್ತೇವೆ!

ಅಂದರೆ, ಯಾವ ಪರಮಾತ್ಮನು ಗಣನೀಯ ಪದಾರ್ಥಗಳ ಪತಿ, ಎಂದರೆ, ಪಾಲನೆ ಮಾಡುವಂತಹವನಾಗಿದ್ದಾನೋ, ಅವನನ್ನು ನಾವು ಪೂಜ್ಯಬುದ್ಧಿಯಿಂದ ಅಂಗೀಕರಿಸುತ್ತೇವೆ.

→

ಅಶ್ವಂ ತ್ರಿಸ್ತ್ರಿಃ ಪರಿಯಂತಿ ಪಿತೃವನ್ಮಧ್ಯೇ ಗಣಾನಾಂ ಪ್ರಿಯಾಣಾಂ ನಿಧೀನಾಮಿತಿ । (ಕಾತ್ಯಾಯನಶ್ರೌತಸೂತ್ರೇ ೨೦.೬.೧೩)

ಪಿತೃವಿನಂತೆ, ಮಧ್ಯದಲ್ಲಿ 'ಗಣಾನಾಂ , ಪ್ರಿಯಾಣಾಂ ನಿಧೀನಾಂ', ಎಂದು ಹೇಳುತ್ತಾ ಅಶ್ವದ ಮೂರು ಮೂರು ಪ್ರದಕ್ಷಿಣೆಗಳನ್ನು ಮಾಡುತ್ತಾರೆ. [ಕಾತ್ಯಾಯನಶ್ರೌತಸೂತ್ರ: ೨೦. ೬. ೧೩]

ಸರ್ವಾಃ ಪತ್ನ್ಯಃ ಪಾನ್ನೇಜನಹಸ್ತಾ ಏವ ಪ್ರಾಣಶೋಧನಾತ್ ಪ್ರಾಕ್ ಅಶ್ವಂ ತ್ರಿಸ್ತ್ರಿಃ ಪರಿಯಂತಿ ಮಧ್ಯೇ ಪಿತೃವತ್ ಅಪ್ರದಕ್ಷಿಣಂ ಪರಿಯಂತಿ ತ್ರಿಃ ತ್ರಿಭಿರ್ಮಂತ್ರೈಃ ।

ಎಲ್ಲಾ ಪತ್ನಿಯರೂ ಪಾದವನ್ನು ತೊಳೆಯುವ ನೀರಿನ ಪಾತ್ರೆಯನ್ನು ಕೈಯಲ್ಲಿ ಹಿಡಿದುಕೊಂಡೇ, ಪ್ರಾಣಶೋಧನೆಗೆ ಮೊದಲು ಕುದುರೆಯ ಸುತ್ತಲೂ ಮೂರೂ-ಮೂರು ಸಲ ಸುತ್ತುತ್ತಾರೆ. ಮತ್ತು ಪಿತೃ-ಪ್ರದಕ್ಷಿಣೆಯಂತೆ, ಮಧ್ಯದಲ್ಲಿ ಮೂರು ಮೂರು ಮಂತ್ರಗಳ ಮೂಲಕ ಅಪ್ರದಕ್ಷಿಣೆಯನ್ನೂ ಮಾಡುತ್ತಾರೆ.

ವಸೋ ಮಮೇತಿ ತ್ರಿಷ್ವಪ್ಯನುಷಂಗಃ।

'ವಸೋ ಮಮ'. ಎಂದು ಮೂರು ಸಲ ಜೊತೆಗೂ ಹೇಳಬೇಕು.

ತತಶ್ಚೈವಂ ಪ್ರಥಮಂ ಗಣಾನಾಮಿತಿ ತ್ರಿಃ ಪ್ರದಕ್ಷಿಣಂ ಪರಿಯಂತಿ ।

ನಂತರ, ಹೀಗೆಯೇ ಮೊದಲ ಸಲ 'ಗಣಾನಾಮ್', ಎಂದು ಮೂರು ಪ್ರದಕ್ಷಿಣೆಯನ್ನು ಹಾಕಬೇಕು!

ತತ್ರ ಸಕೃನ್ಮಂತ್ರೇಣ ದ್ವಿಸ್ತೂಷ್ಣೀಮ್ ।

ಇಲ್ಲಿ ಮಂತ್ರದಿಂದ ಒಂದು ಸಲ, ಮತ್ತು ಮೌನವಾಗಿ ಎರಡು ಸಲ [ಪ್ರದಕ್ಷಿಣೆಯನ್ನು ಹಾಕಬೇಕು.]

ತತಃ ಪ್ರಿಯಾಣಾಮಿತ್ಯಪ್ರದಕ್ಷಿಣಂ ತ್ರಿಃ; ನಿಧೀನಾಮಿತಿ ಪ್ರದಕ್ಷಿಣಂ ತ್ರಿಃ; ಏವಂ ನವಕೃತ್ವ ಇತಿ ಸೂತ್ರಾರ್ಥಃ ।

ತದನಂತರ, 'ಪ್ರಿಯಾಣಾಮ್' ಎಂದು ಮೂರು ಸಲ ಅಪ್ರದಕ್ಷಿಣೆಯನ್ನೂ; ಹಾಗೂ 'ನಿಧೀನಾಮ್', ಎಂದು ಮೂರು ಸಲ ಪ್ರದಕ್ಷಿಣೆಯನ್ನೂ; ಹೀಗೆ ಒಂಬತ್ತು ಸಲ ಹಾಕಬೇಕು, ಎಂಬುದು ಸೂತ್ರದ ಅರ್ಥವಾಗಿದೆ.

→

ತಥೈವ ಸರ್ವೇಷಾಂ ಪ್ರಿಯಾಣಾಮಿಷ್ಟಮಿತ್ರಾದೀನಾಂ ಮೋಕ್ಷಾದೀನಾಂ ಚ ಪ್ರಿಯಪತಿಂ ತ್ವೇತಿ ಪೂರ್ವವತ್.

ಹಾಗೆಯೇ ಎಲ್ಲಾ (**ಪ್ರಿಯಾಣಾಮ್**) ಇಷ್ಟರು, ಮಿತ್ರರು ಮೊದಲಾದವರ, ಹಾಗೂ ಮೋಕ್ಷ ಮೊದಲಾದುದರ (**ಪ್ರಿಯಪತಿಂ ತ್ವಾ**) ಪಾಲಕನಾದ, ಎಂದರೆ, ಸ್ವಾಮಿಯಾದ ನಿನ್ನನ್ನು, ಎಂದು ಮೊದಲಾಗಿ ಮೇಲಿನಂತೆ ತಿಳಿಯಬೇಕು!

ಅಂದರೆ, ಯಾವನು ನಮ್ಮ ಇಷ್ಟರ, ಮಿತ್ರರ, ಮತ್ತು ಮೋಕ್ಷಸುಖಾದಿಗಳ ಪ್ರಿಯಪತಿಯೂ, ಹಾಗೂ ನಮ್ಮನ್ನು ಆನಂದದಲ್ಲಿಟ್ಟು, ಯಾವಾಗಲೂ ಪಾಲನೆ ಮಾಡುವವನೂ ಆಗಿರುತ್ತಾನೋ, ಅವನನ್ನೇ ನಾವು ನಮ್ಮ '**ಉಪಾಸ್ಯದೇವ**', ಎಂದು ತಿಳಿದು, ಅಂಗೀಕರಿಸುತ್ತೇವೆ!

→ ತ್ರೀಣಿ ಯಜೂಂಷಿ ಲಿಂಗೋಕ್ತದೇವತ್ಯಾನಿ ।

→ ಲಿಂಗೋಕ್ತದೇವತೆಗಳದು ಮೂರು '**ಯಜು**'ರ್ಮಂತ್ರಗಳಿವೆ.

ಹೇ ಅಶ್ವ! ವಯಂ ತ್ವಾಂ ಹವಾಮಹೇ ಆಹ್ವಯಾಮಃ;

ಓ ಕುದುರೆ! ನಾವು ನಿನ್ನನ್ನು ಆಹ್ವಾನಿಸುತ್ತೇವೆ!

ಕೀದೃಶಂ ತ್ವಾಮ್?

ಎಂತಹ ನಿನ್ನನ್ನು?

ಗಣಪತಿಂ ಗಣಾನಾಂ ಮಧ್ಯೇ ಗಣಪತಿಂ ಗಣರೂಪೇಣ ಪಾಲಕಮ್ ।

ಗಣಪತಿಯನ್ನು; ಎಂದರೆ ಗಣಗಳ ಮಧ್ಯೆ ಇರುವ ಗಣಪತಿಯನ್ನು; ಎಂದರೆ ಗಣರೂಪದಿಂದ ಪಾಲನೆ ಮಾಡುವವನನ್ನು.

ಪ್ರಿಯಾಣಾಂ ವಲ್ಲಭಾನಾಂ ಮಧ್ಯೇ ಪ್ರಿಯಪತಿಂ ಪ್ರಿಯಸ್ಯ ಪಾಲಕಮ್ ।

ಪ್ರಿಯರ, ಎಂದರೆ ಪ್ರೇಯಸಿಯರ ಮಧ್ಯೆ ಇರುವ ಪ್ರಿಯಪತಿಯನ್ನು; ಎಂದರೆ ಪ್ರಿಯನ ಪಾಲಕನನ್ನು.

ನಿಧೀನಾಂ ಸುಖನಿಧೀನಾಂ ಮಧ್ಯೇ ನಿಧಿಪತಿಂ ಸುಖನಿಧೇಃ ಪಾಲಕಂ ತ್ವಾಂ ಹವಾಮಹೇ ।

ನಿಧಿಗಳ, ಎಂದರೆ ಸುಖನಿಧಿಗಳ ಮಧ್ಯೆ ಇರುವ ನಿಧಿಪತಿಯನ್ನು; ಎಂದರೆ, ಸುಖನಿಧಿಯ ಪಾಲಕನಾದ ನಿನ್ನನ್ನು ಆಹ್ವಾನಿಸುತ್ತೇವೆ.

ಹೇ ವಸುರೂಪ ಅಶ್ವ! ಮಮ ಪತಿಸ್ತ್ವಂ ಭೂಯಾ ಇತಿ ಶೇಷಃ ।

'ಓ ಐಶ್ವರ್ಯರೂಪ ಕುದುರೆಯೇ! ನೀನು ನನ್ನ ಪತಿಯಾಗು', ಎಂದು ಉಳಿದ ಅರ್ಥವನ್ನು ಮಾಡಿಕೊಳ್ಳಬೇಕು!

'ಪ್ರಕ್ಷಾಲಿತೇಷು ಮಹಿಷ್ಯಶ್ವಮುಪಸಂವಿಶತ್ಯಾಹಮಜಾನೀತಿ ।' (ಕಾತ್ಯಾ. ೨೦. ೬. ೧೪)

'ಶುದ್ಧ ಮಾಡಿದ ಮೇಲೆ ಮಹಿಷಿಯು ಅಶ್ವದ ಬಳಿ ಸೇರಿಕೊಂಡು _ 'ನಾನು ತಿಳಿಯಲಿ', ಎಂದು ಹೇಳುತ್ತಾಳೆ. [ಕಾತ್ಯಾ. ಶ್ರೌತಸೂತ್ರ ೨೦.೬.೧೪]

ಪ್ರಕ್ಷಾಲಿತೇಷು ಶೋಧಿತೇಷು ಪಶೂನಾಂ ಪ್ರಾಣೇಷು ಪತ್ನೀಭಿರಧ್ವರ್ಯುಣಾ ಯಜಮಾನೇನ ಪ್ರಾಣಶೋಧನೇ ಕೃತೇ ಮಹಿಷೀ ಅಶ್ವಸಮೀಪೇ ಶೇತೇ ।

ಪಶುಗಳ ಪ್ರಾಣಗಳು ತೊಳೆದು ಶುದ್ಧ ಮಾಡಿಯಾದ ಮೇಲೆ, ಎಂದರೆ, ಪತ್ನಿಯರಿಂದಲೂ, ಅಧ್ವರ್ಯುಗಳಿಂದಲೂ, ಹಾಗೂ ಯಜಮಾನನಿಂದಲೂ ಪಶುವಿನ ಪ್ರಾಣಶುದ್ಧಿ ಮಾಡಿಯಾದ ಮೇಲೆ, ಮಹಿಷಿಯು ಕುದುರೆಯ ಸಮೀಪದಲ್ಲಿ ಮಲಗುತ್ತಾಳೆ.

ಅಶ್ವದೇವತ್ಯಮ್ ।

ಈಗ, ಅಶ್ವದೇವತೆಗೆ ಸಂಬಂಧಿಸಿದ [ವಾಕ್ಯ]!

→ →

ಏವಮೇವ ನಿಧೀನಾಂ ವಿದ್ಯಾರತ್ನಾದಿ-ಕೋಶಾನಾಂ ನಿಧಿಪತಿಂ ತ್ವೇತಿ ಪೂರ್ವವತ್.

ಹೀಗೆಯೇ, (ನಿಧೀನಾಮ್) ವಿದ್ಯಾರತ್ನಾದಿ ಕೋಶಗಳ (ನಿಧಿಪತಿಂ ತ್ವಾ.) ಪಾಲಕನಾದ, ಎಂದರೆ ಸ್ವಾಮಿಯಾದ ನಿನ್ನನ್ನು, ಎಂದು ಮೇಲಿನಂತೆ ತಿಳಿದು ಕೊಳ್ಳಬೇಕು!

ಅಂದರೆ, ಯಾವನು ವಿದ್ಯೆ ಮತ್ತು ಸುಖ ಮೊದ ಲಾದುವುಗಳ ನಿಧಿ, ಎಂದರೆ ನಮ್ಮ ಕ್ಷೋಶಗಳ ಪತಿ ಯಾಗಿದ್ದಾನೋ, ಆ ಸರ್ವಶಕ್ತಿಮಂತನಾದ ಪರಮೇಶ್ವರ ನನ್ನು ನಾವು ನಮ್ಮ ರಾಜಾ ಮತ್ತು ಸ್ವಾಮಿ, ಎಂದು ಅಂಗೀಕರಿಸುತ್ತೇವೆ.

ಜಗತ್ತನ್ನು ಗರ್ಭದಲ್ಲಿಟ್ಟು ಕೊಂಡಿರುವಂತೆ ಇರುವವನು ಗರ್ಭಧ!

(ವಸೋ) ವಸತ್ಯಸ್ಮಿನ್ ಸರ್ವಂ ಜಗದ್ವಾ ಯತ್ರ ವಸತಿ ಸ ವಸುಃ ಪರಮೇಶ್ವರಃ ;

(ವಸೋ) ಯಾವನಲ್ಲಿ ಸಮಸ್ತ ಜಗತ್ತು ವಾಸ ಮಾಡುತ್ತಿದೆಯೋ ; ಅಥವಾ ಯಾವನು ಅದರಲ್ಲಿ ವಾಸ ಮಾಡುತ್ತಿದ್ದಾನೋ, ಅವನು **'ವಸು'**, ಎಂದರೆ ಪರಮೇಶ್ವರ!

ಅಂದರೆ, ಯಾವನು ವ್ಯಾಪಕನಾಗಿ ಜಗತ್ತಿನಲ್ಲೆಲ್ಲಾ ವಾಸಿಸುತ್ತಿದ್ದಾನೋ, ಮತ್ತು ಜಗತ್ತೆಲ್ಲವೂ ಅವನಲ್ಲಿ ವಾಸಿಸುತ್ತಿದೆಯೋ, ಈ ಕಾರಣದಿಂದ, ಅವನಿಗೆ **'ವಸು'**, ಎಂದು ಹೇಳುತ್ತಾರೆ.

ತತ್ಸಂಬುದ್ಧೌ ಹೇ ವಸೋ ಪರಮೇಶ್ವರ! ತ್ವಮ್_

ಅವನ ಸಂಬೋಧನೆಯಲ್ಲಿ_ 'ಹೇ ವಸು ಪರಮೇಶ್ವರ! ನೀವು_

ಸರ್ವಾನ್ ಕಾರ್ಯ್ಯಾನ್ ಭೂಗೋಲಾನ್ ಸ್ವ-ಸಾಮರ್ಥ್ಯೇ ಗರ್ಭವದ್ದಧಾತೀತಿ ಸ ಗರ್ಭಧಃ ;

ಎಲ್ಲಾ ಕಾರ್ಯರೂಪ ಭೂಗೋಳಗಳನ್ನು ಸ್ವ ಸಾಮರ್ಥ್ಯದಲ್ಲಿ ಗರ್ಭದಂತೆ ಯಾವನು ಧಾರಣ ಮಾಡಿ ಕೊಂಡಿರುತ್ತಾನೋ, ಅವನು **'ಗರ್ಭಧ'** ;

→

ಹೇ ಅಶ್ವ! ಗರ್ಭಧಂ ಗರ್ಭಂ ದಧಾತಿ ಗರ್ಭಧಂ ಗರ್ಭಧಾರಕಂ ರೇತಃ ಅಹಮ್ ಆ ಅಜಾನಿ ಆಕೃಷ್ಯ ಕ್ಷಿಪಾಮಿ।

'ಅಜಗತಿಕ್ಷೇಪಣಯೋಃ' ಲೋಟ್ ।

ತಂ ಚ ಗರ್ಭಧಂ ರೇತಃ ಆ ಅಜಾಸಿ ಅಕೃಷ್ಯ ಕ್ಷಿಪಸಿ ॥ ೧೯ ॥

_ಅನು.

→

'ಹೇ ಕುದುರೆ! ಗರ್ಭಧಾರಕವಾದ ರೇತಸ್ಸನ್ನು ನಾನು ಆಕರ್ಷಿಸಿ ಎಸೆಯುತ್ತೇನೆ.'

'ಅಜ, ಎಂಬ ಧಾತುವು ಗತಿ, ಹಾಗೂ, ಎಸೆಯುವ ಅರ್ಥದಲ್ಲಿ ವಿಧಿಯ ಪ್ರಯೋಗದಲ್ಲಿದೆ.'

ಮತ್ತು ಆ ಗರ್ಭಧಾರಕವಾದ ರೇತಸ್ಸನ್ನು ನೀನೂ ಕೂಡ, ಆಕರ್ಷಿಸಿ ಎಸೆಯುತ್ತೀಯೆ! [೧೯]

_ ಅನು.

ಅಂದರೆ, ನೀವು ನಿಮ್ಮ ಸಾಮರ್ಥ್ಯದಿಂದ [ಜಗತ್ತನ್ನು] ಜಗತ್ತಿನ ಅನಾದಿಕಾರಣದಲ್ಲಿ ಗರ್ಭ[ದಂತೆ] ಧಾರಣ ಮಾಡಿಕೊಂಡಿರುತ್ತೀರಿ! ಎಂದರೆ, ಎಲ್ಲಾ ಮೂರ್ತಿಮಂತ ಪದಾರ್ಥಗಳನ್ನೂ ನೀವೇ ರಚಿಸುತ್ತೀರಿ! ಈ ಕಾರಣದಿಂದ, ನಿಮ್ಮ ಹೆಸರು **'ಗರ್ಭಧ'**, ಎಂದಿರುತ್ತದೆ.

ತಂ ತ್ವಾಮಹಂ ಭವತ್ಕೃಪಯಾ ಆಜಾನಿ ಸರ್ವಥಾ ಜಾನೀಯಾಮ್.

ಆ ನಿಮ್ಮನ್ನು ನಾನು ನಿಮ್ಮ ಕೃಪೆಯಿಂದ **(ಆಜಾನಿ)** ಎಲ್ಲಾ ರೀತಿಯಿಂದಲೂ ತಿಳಿಯಲಿ!

ಅಂದರೆ, ಇಂತಹ ಗುಣಸಹಿತರಾದ ನಿಮ್ಮನ್ನು ನಾನು ತಿಳಿಯಲಿ!

(ಆ ತ್ವಮಜಾಸಿ) ಹೇ ಭಗವನ್! ತ್ವಂ ತು ಆ ಸಮಂತಾಜ್ಜ್ಞಾತಾಸಿ .

(ಆ ತ್ವಮಜಾಸಿ) ಓ ಭಗವಂತ! ನೀವಂತೂ ಎಲ್ಲವನ್ನೂ ತಿಳಿದವರಾಗಿದ್ದೀರಿ!

ಅಂದರೆ, ಹೇಗೆ ನೀವು ಎಲ್ಲಾ ರೀತಿಯಿಂದ ಎಲ್ಲವನ್ನೂ ತಿಳಿದಿದ್ದೀರೋ, ಹಾಗೆಯೇ, ನನ್ನನ್ನೂ ಕೂಡ, ಎಲ್ಲಾ ರೀತಿಯಿಂದ ಜ್ಞಾನಯುಕ್ತನನ್ನಾಗಿ ಮಾಡಿ!

ಪುನರ್ಗರ್ಭಧಮಿತ್ಯುಕ್ತ್ವಾ_

ಪುನಃ **'ಗರ್ಭಧಮ್'**, ಎಂದು ಹೇಳಿರುವುದರಿಂದ_

ಅಂದರೆ, ಇಲ್ಲಿ ಎರಡನೆಯ ಸಲ **'ಗರ್ಭಧಮ್'**, ಎಂಬ ಶಬ್ದದ ಪಾಠವು ಏಕಿದೆಯೆಂದರೆ_

ವಯಂ ಪ್ರಕೃತಿಪರಮಾಣ್ವಾದೀನಾಂ ಗರ್ಭಧಾನಾಮಪಿ ಗರ್ಭಧಂ ತ್ವಾಂ ಮನ್ಯಾಮಹೇ!

ನಾವು ಗರ್ಭಧಾರಕಗಳಾದ ಪ್ರಕೃತಿ-ಪರಮಾಣುಗಳಿಗೂ ಕೂಡ, ಗರ್ಭಧಾರಕರಾದ ನಿಮ್ಮನ್ನು ಮಾನ್ಯ ಮಾಡುತ್ತೇವೆ!

ನೈವಾತೋ ಭಿನ್ನಃ ಕಶ್ಚಿದ್ ಗರ್ಭಧಾರಕೋಽಸ್ತೀತಿ.

ಇವನಿಗಿಂತ ಬೇರೆಯಾದ ಯಾವನೂ ಗರ್ಭಧಾರಕನಲ್ಲವೇ ಅಲ್ಲ!

ಅಂದರೆ, ಯಾವ ಯಾವ ಪ್ರಕೃತಿ ಮತ್ತು ಪರಮಾಣು ಮೊದಲಾದುವು ಕಾರ್ಯದ್ರವ್ಯಗಳ ಗರ್ಭರೂಪವಾಗಿವೆಯೋ, ಅವುಗಳಲ್ಲೂ ಕೂಡ, ಸಮಸ್ತ ಜಗತ್ತಿನ ಗರ್ಭರೂಪ ಬೀಜವನ್ನು ಧಾರಣ ಮಾಡಿಕೊಳ್ಳುವ ಈಶ್ವರನಿಗಿಂತ ಭಿನ್ನನಾದ ಬೇರೆ ಯಾವನೂ ಕಾರ್ಯಜಗತ್ತಿನ ಉತ್ಪತ್ತಿ, ಸ್ಥಿತಿ ಮತ್ತು ಲಯ ಮಾಡುವವನಾಗಿ ಇಲ್ಲ!

ಏವಮೇವೈತರೇಯಶತಪಥಬ್ರಾಹ್ಮಣೇ ಗಣಪತಿ-ಶಬ್ದಾರ್ಥೋ ವರ್ಣಿತಃ_

ಹೀಗೆಯೇ, ಐತರೇಯ-ಶತಪಥಬ್ರಾಹ್ಮಣಗಳಲ್ಲಿಯೂ ಕೂಡ, 'ಗಣಪತಿ' ಶಬ್ದದ ಅರ್ಥವು ವರ್ಣಿಸಲ್ಪಟ್ಟಿದೆ.

ಅಂದರೆ, ಐತರೇಯಬ್ರಾಹ್ಮಣದಲ್ಲಿ 'ಗಣಪತಿ' ಶಬ್ದದ ವ್ಯಾಖ್ಯೆಯು ಹೇಗೆ ಮಾಡಲಾಗಿದೆಯೆಂದರೆ_

ಐತರೇಯಬ್ರಾಹ್ಮಣದಲ್ಲಿ 'ಗಣಪತಿ'ಶಬ್ದದ ವ್ಯಾಖ್ಯಾನ ಚಿಕಿತ್ಸೆ ಮಾಡುವ ವೈದ್ಯ!

"ಗಣಾನಾಂ ತ್ವಾ ಗಣಪತಿಂ ಹವಾಮಹ ಇತಿ ಬ್ರಾಹ್ಮಣಸ್ಪತ್ಯಂ ;

ಬ್ರಹ್ಮ ವೈ ಬೃಹಸ್ಪತಿರ್ಬ್ರಾಹ್ಮಣೈರ್ವೈನಂ ತದ್ಭಿಷಜ್ಯತಿ ॥*

[ಐತರೇಯಬ್ರಾಹ್ಮಣೇ ಪಂ. ೧, ಕಂ. ೨೧]

[ಅರ್ಥ:_ "'ಗಣಾನಾಂ ತ್ವಾ ಗಣಪತಿಂ ಹವಾಮಹೇ', ಎಂಬುದು ವೇದಗಳ ಸ್ವಾಮಿಯಾದ [ಪರಮೇಶ್ವರನ] ಭಾವವನ್ನು ಹೇಳುತ್ತದೆ. [ಏಕೆಂದರೆ,] ಬ್ರಹ್ಮನೇ ಬೃಹಸ್ಪತಿಯಾಗಿದ್ದಾನೆ. ವೇದೋಪದೇಶದಿಂದ, ಇವನಿಗೆ ಚಿಕಿತ್ಸೆ ಮಾಡುತ್ತಾನೆ."

(ಐತರೇಯಬ್ರಾಹ್ಮಣ: ೧. ೨೧)]

"ಪೃಥಶ್ಚ ಯಸ್ಯ ಸಪ್ರಥಶ್ಚ ನಾಮೇತಿ ॥"

[ಐತರೇಯಬ್ರಾಹ್ಮಣೇ ಅ. ೪, ಖಂ. ೪, ಕಂ. ೨೧]

[ಅರ್ಥ:_ "ಅವನಿಗೆ ವ್ಯಾಪಕ, ಹಾಗೂ ವ್ಯಾಪಕದ ಜೊತೆಗೆ ಇರುವವನು, ಎಂದು ಎರಡು ಹೆಸರುಗಳಿವೆ."

(ಐತರೇಯಬ್ರಾಹ್ಮಣ: ೪. ೪. ೨೧)]

ಭಾಷ್ಯಮ್_

(ಬ್ರಾಹ್ಮಣಸ್ಪತ್ಯಂ.) ಅಸ್ಮಿನ್ ಮಂತ್ರೇ ಬ್ರಹ್ಮಣೋ ವೇದಸ್ಯ ಪತೇರ್ಭಾವೋ ವರ್ಣಿತಃ.

ಭಾಷ್ಯ_

(ಬ್ರಾಹ್ಮಣಸ್ಪತ್ಯಂ.) ಈ ಮಂತ್ರದಲ್ಲಿ 'ಬ್ರಹ್ಮನ', ಎಂದರೆ ವೇದದ ಪತಿಯ ಬಗ್ಗೆ ಭಾವನೆಯು ವರ್ಣಿಸಲ್ಪಟ್ಟಿದೆ.

* ಇಯಂ ವ್ಯಾಖ್ಯಾ ಋಗ್ವೇದಸ್ಯ (೨. ೨೩. ೧) ಮಂತ್ರಂ ಪ್ರತ್ಯಸ್ತಿ _ಅನು.

* ಈ ವ್ಯಾಖ್ಯಾನವು ಋಗ್ವೇದದ (೨. ೨೩. ೧) ಮಂತ್ರದ ಬಗ್ಗೆ ಮಾಡಲಾಗಿದೆ. _ಅನು.

[ಋಷಿಃ_ ಗೃತ್ಸಮದಃ ; ದೇವತಾ_ ಬ್ರಹ್ಮಣಸ್ಪತಿಃ ; ಛಂದಃ_ ಜಗತೀ ; ಸ್ವರಃ_ ನಿಷಾದಃ]

ಗಣಾನಾಂ ತ್ವಾ ಗಣಪತಿಂ ಹವಾಮಹೇ ಕವಿಂ ಕವೀನಾಮುಪಮಶ್ರವಸ್ತಮಮ್ ।

ಜ್ಯೇಷ್ಠರಾಜಂ ಬ್ರಹ್ಮಣಾಂ ಬ್ರಹ್ಮಣಸ್ಪತ ಆ ನಃ ಶೃಣ್ವನ್ನೂತಿಭಿಃ ಸೀದ ಸಾದನಮ್ ॥

[ಋಗ್ವೇದೇ ೨. ೨೩. ೧]

ಅಂದರೆ, ಈ ಮಂತ್ರವು ಈಶ್ವರಾರ್ಥದ ಪ್ರತಿಪಾದನೆಯನ್ನು ಮಾಡುತ್ತದೆ!

ಬ್ರಹ್ಮ ವೈ ಬೃಹಸ್ಪತಿರಿತ್ಯುಕ್ತತ್ವಾತ್_

ಬ್ರಹ್ಮೇ ಬೃಹಸ್ಪತಿ, ಎಂದು ಹೇಳಿರುವುದರಿಂದ_

ತೇನ ಬ್ರಹ್ಮೋಪದೇಶೇನೈವೈನಂ ಜೀವಂ ಯಜಮಾನಂ ವಾ ;

ಅವನಿಂದ, ಎಂದರೆ ವೇದದ ಉಪದೇಶ ದಿಂದಲೇ ಈ ಜೀವವನ್ನು ಅಥವಾ ಯಜಮಾನನನ್ನು;

ಸತ್ಯೋಪದೇಷ್ಟಾ ವಿದ್ವಾನ್ ಭಿಷಜ್ಯತಿ ರೋಗ-ರಹಿತಂ ಕರೋತಿ.

ಸತ್ಯದ ಉಪದೇಶವನ್ನು ಮಾಡುವ ವಿದ್ವಾಂಸನು (ಭಿಷಜ್ಯತಿ) ರೋಗರಹಿತನನ್ನಾಗಿ ಮಾಡುತ್ತಾನೆ.

ಅಂದರೆ, ಬ್ರಹ್ಮನ ಹೆಸರು ಬೃಹಸ್ಪತಿಯಾಗಿದೆ! ಮತ್ತು ಈಶ್ವರನ, ಹಾಗೂ ವೇದದ ಹೆಸರು 'ಬ್ರಹ್ಮ', ಎಂದಿದೆ.

ಹೇಗೆ ಒಳ್ಳೆಯ ವೈದ್ಯನು ರೋಗಿಗೆ ಔಷಧವನ್ನು ಕೊಟ್ಟು, ದುಃಖಗಳಿಂದ ದೂರಮಾಡಿಬಿಡುತ್ತಾನೋ, ಹಾಗೆಯೇ, ಪರಮೇಶ್ವರನೂ ಕೂಡ, ವೇದೋಪದೇಶ ವನ್ನು ಮಾಡಿ, ಮನುಷ್ಯನಿಗೆ ವಿಜ್ಞಾನರೂಪ ಓಷಧಿ ಯನ್ನು ಕೊಟ್ಟು, ಅವಿದ್ಯಾರೂಪ ದುಃಖಗಳಿಂದ ಬಿಡುಗಡೆ ಮಾಡಿಬಿಡುತ್ತಾನೆ!

ಆತ್ಮನೋ ಭಿಷಜಂ ವೈದ್ಯಮಿಚ್ಛತೀತಿ.

[ಮತ್ತು ವಿದ್ವಾಂಸನು] ತನಗಾಗಿ ಕೂಡ, ವೈದ್ಯ ನನ್ನು ಇಚ್ಛಿಸುತ್ತಾನೆ!

ಯಸ್ಯ ಪರಮೇಶ್ವರಸ್ಯ ಪೃಥಃ ಸರ್ವತ್ರ ವ್ಯಾಪ್ತೋ ವಿಸ್ತೃತಃ ;

ಯಾವ ಪರಮೇಶ್ವರನಿಗೆ 'ಪೃಥ', ಎಂದರೆ ಸರ್ವತ್ರ ವ್ಯಾಪ್ತವಾದುದು, ಎಂದರೆ ವಿಸ್ತೃತವಾದುದು;

ಸಪೃಥಶ್ಚ; ಪ್ರಕೃತ್ಯಾಕಾಶಾದಿನಾ ಪೃಥೇನ ಸ್ವ-ಸಾಮರ್ಥ್ಯೇನ ವಾ ಸಹ ವರ್ತ್ತತೇ ಸ ಸಪೃಥಃ ;

ಮತ್ತು 'ಸಪೃಥ', ಎಂದರೆ_ ಯಾವುದು ಪ್ರಕೃತಿ, ಹಾಗೂ ಆಕಾಶ ಮೊದಲಾದುದರೊಡನೆ, ಅಥವಾ ತನ್ನ ಸಾಮರ್ಥ್ಯದೊಡನೆ ಇರುತ್ತದೋ, ಅದು 'ಸಪೃಥ';

ಅಂದರೆ, ಆಕಾಶ ಮೊದಲಾದ ವಿಸ್ತೃತ ಪದಾರ್ಥಗಳ ಜೊತೆ ವ್ಯಾಪಕವಾಗಿರುವುದು 'ಸಪೃಥ' ;

ತದಿದಂ ನಾಮದ್ವಯಂ ತಸ್ಯೈವಾಸ್ತಿ.

ಹೀಗೆ, ಈ ಎರಡು ಹೆಸರುಗಳೂ ಅವನವೇ ಆಗಿವೆ.

ಅಂದರೆ, ಈ ರೀತಿಯಿಂದ ಈ ಮಂತ್ರವು ಈಶ್ವರನ ಹೆಸರುಗಳನ್ನು ಯಥಾವತ್ತಾಗಿ ಪ್ರತಿಪಾದನೆ ಮಾಡುತ್ತಿದೆ.

ಶತಪಥಬ್ರಾಹ್ಮಣದಲ್ಲಿ 'ಗಣಪತಿ'ಶಬ್ದಾರ್ಥ_ 'ರಾಜಾ!'

ಹೀಗೆಯೇ, ಶತಪಥಬ್ರಾಹ್ಮಣದಲ್ಲಿಯೂ ಕೂಡ, [ಹೇಳಲಾಗಿದೆಯೇನೆಂದರೆ _]

"ಪ್ರಜಾಪತಿರ್ವೈ ಜಮದಗ್ನಿಃ ಸೋಽಶ್ವಮೇಧಃ ॥"

[ಶತಪಥಬ್ರಾಹ್ಮಣೇ ಕಾಂ. ೧೩, ಅ. ೨, ಬ್ರಾ. ೨, ಕಂ. ೧೪]

[ಅರ್ಥ:_ "ಪ್ರಜಾಪತಿಯೇ ಜಮದಗ್ನಿ. ಅದೇ ಅಶ್ವಮೇಧ!"

(ಶತಪಥಬ್ರಾಹ್ಮಣ: ೧೩. ೨. ೨. ೧೪)]

"ಕ್ಷತ್ರಂ ವಾಽಶ್ವೋ ವಿಡಿತರೇ ಪಶವಃ ॥"

[ಶತಪಥಬ್ರಾಹ್ಮಣೇ ಕಾಂ. ೧೩, ಅ. ೨, ಬ್ರಾ. ೨, ಕಂ. ೧೫]

[ಅರ್ಥ:_ "ಅಶ್ವವೇ ರಾಜಾ; ಇತರ ಪಶುಗಳು ಪ್ರಜೆ!"

(ಶತಪಥಬ್ರಾಹ್ಮಣ: ೧೩. ೨. ೨. ೧೫)]

"ಕ್ಷತ್ರಸ್ಯೈತದ್ರೂಪಂ ಯದ್ಧಿರಣ್ಯಮ್ ॥"

[ಶತಪಥಬ್ರಾಹ್ಮಣೇ ಕಾಂ. ೧೩, ಅ. ೨, ಬ್ರಾ. ೨, ಕಂ. ೧೭]

[ಅರ್ಥ:_ "ಯಾವುದು ಹಿರಣ್ಯವೋ, ಅದು ಕ್ಷತ್ರಿಯನ ರೂಪ!

(ಶತಪಥಬ್ರಾಹ್ಮಣ: ೧೩. ೨. ೨. ೧೭)]

"ಜ್ಯೋತಿರ್ವೈ ಹಿರಣ್ಯಮ್ ॥"

[ಶತಪಥಬ್ರಾಹ್ಮಣೇ ಕಾಂ. ೧೩, ಅ. ೨, ಬ್ರಾ. ೨, ಕಂ. ೧೬]

[ಅರ್ಥ:_ "ಜ್ಯೋತಿಯೇ ಹಿರಣ್ಯ!"

(ಶತಪಥಬ್ರಾಹ್ಮಣ: ೧೩. ೨. ೨. ೧೬)]

ಭಾಷ್ಯಮ್_

ಪ್ರಜಾಪತಿಃ ಪರಮೇಶ್ವರೋ ವೈ ಇತಿ ನಿಶ್ಚಯೇನ 'ಜಮದಗ್ನಿ'ಸಂಜ್ಞೋಽಸ್ತಿ.

ಅತ್ರ ಪ್ರಮಾಣಮ್_

ಭಾಷ್ಯ_

ಪ್ರಜಾಪತಿ, ಎಂದರೆ ಪರಮೇಶ್ವರನು, 'ವೈ', ಎಂದರೆ ನಿಶ್ಚಯಪೂರ್ವಕವಾಗಿ 'ಜಮದಗ್ನಿ', ಎಂಬ ಹೆಸರನ್ನುಳ್ಳವನಾಗಿದ್ದಾನೆ!

ಈ ವಿಷಯದಲ್ಲಿ ಪ್ರಮಾಣವೇನೆಂದರೆ_

" ಜಮದಗ್ನಯಃ ಪ್ರಜಮಿತಾಗ್ನಯೋ ವಾ ಪ್ರಜ್ವಲಿತಾಗ್ನಯೋ
ವಾ। ತೈರಭಿಹುತೋ ಭವತಿ ॥"

[ನಿರುಕ್ತೇ ಅ. ೭, ಖಂ. ೨೪]

[ಅರ್ಥ:_ " ಜಮದಗ್ನಿಗಳು, ಎಂದರೆ, ಅತ್ಯಂತ ಹೆಚ್ಚಾಗಿ ಭಕ್ಷಿಸುತ್ತಿರುವ ಅಗ್ನಿಗಳು, ಎಂದೂ ; ಅಥವಾ ಅತ್ಯಂತ ಹೆಚ್ಚಾಗಿ ಹೊತ್ತಿಸಿರುವ ಅಗ್ನಿಗಳು, ಎಂದೂ ಅರ್ಥ! ಅವುಗಳಿಂದ ಪೂಜಿತನಾಗಿರುತ್ತಾನೆ."

(ನಿರುಕ್ತ: ೭. ೨೪)]

ಇಮೇ ಸೂರ್ಯ್ಯಾದಯಃ ಪ್ರಕಾಶಕಾಃ ಪದಾರ್ಥಾಸ್ತಸ್ಯ ಸಾಮರ್ಥ್ಯಾದೇವ ಪ್ರಜ್ವಲಿತಾ ಭವಂತಿ.

ಈ ಸೂರ್ಯ ಮೊದಲಾದ ಪ್ರಕಾಶ ಮಾಡುವ ಪದಾರ್ಥಗಳು ಅವನ ಸಾಮರ್ಥ್ಯದಿಂದಲೇ ಪ್ರಜ್ವಲಿಸುತ್ತಿವೆ.

ಸೂರ್ಯ್ಯಾದಿಭಿಃ ಕಾರ್ಯ್ಯೈಸ್ತನ್ನಿಯಮೈಶ್ಚ ಕಾರಣಾಖ್ಯ ಈಶ್ವರೋಽಭಿಹುತಶ್ಚಾಭಿಮುಖ್ಯೇನ ಪೂಜಿತೋ ಭವತೀತಿ.

ಕಾರ್ಯರೂಪವಾದ ಸೂರ್ಯ ಮೊದಲಾದುವುಗಳಿಂದ, ಮತ್ತು ಅವುಗಳ ನಿಯಮಗಳಿಂದ, ಕಾರಣರೂಪನಾದ ಈಶ್ವರನು 'ಅಭಿಹುತ', ಎಂದರೆ ಮುಖ್ಯವಾಗಿ ಸತ್ಕರಿಸಲ್ಪಡುತ್ತಾನೆ.

ಪರಮೇಶ್ವರನು 'ಅಶ್ವಮೇಧ'; ರಾಜನು 'ಅಶ್ವ!'

ಯಃ ಸ ಜಮದಗ್ನಿಃ ಪರಮೇಶ್ವರಃ (ಸೋಽಶ್ವಮೇಧಃ) ಸ ಏವ ಪರಮೇಶ್ವರೋಽಶ್ವ-ಮೇಧಾಖ್ಯ ಇತಿ ಪ್ರಥಮೋಽರ್ಥಃ.

ಯಾವನು ಆ ಜಮದಗ್ನಿರೂಪ ಪರಮೇಶ್ವರನೋ, (ಸೋಽಶ್ವಮೇಧಃ) ಆ ಪರಮೇಶ್ವರನೇ 'ಅಶ್ವಮೇಧ', ಎಂಬ ಹೆಸರನ್ನುಳ್ಳವನಾಗಿದ್ದಾನೆ, ಎಂಬುದು ಮೊದಲನೆಯ ಅರ್ಥವಾಗಿದೆ.

ಅಥಾಪರಃ_

ಈಗ, ಇನ್ನೊಂದು ಅರ್ಥವೇನೆಂದರೆ_

'ಕ್ಷತ್ರಂ ವಾಽಶ್ವೋ ವಿಡಿತರೇ ಪಶವಃ' ಇತ್ಯಾದಿ.

'ರಾಜನು 'ಅಶ್ವ' ಮತ್ತು ಇತರ ಪಶುಗಳು 'ಪ್ರಜೆ', ಎಂದು ಮೊದಲಾಗಿ ಹೇಳಲಾಗಿದೆ.

ಅಂದರೆ, ರಾಜನ ಹೆಸರು 'ಅಶ್ವ'; ಮತ್ತು ಪ್ರಜೆಗಳ ಹೆಸರು ಅಶ್ವವಲ್ಲದ ಇತರ 'ಪಶು'ಗಳು, ಎಂದು ಇಡಲಾಗಿದೆ. ಎಂಬರೆ, ರಾಜ್ಯಪಾಲನೆಯ ಹೆಸರು 'ಅಶ್ವಮೇಧ', ಎಂದಿರುತ್ತದೆ.

ಯಥಾಽಶ್ವಸ್ಯಾಪೇಕ್ಷಯೇತರ ಇಮೇಽಜಾದಯಃ ಪಶವೋ ನ್ಯೂನಬಲವೇಗಾ ಭವಂತಿ ;

ಹೇಗೆ ಕುದುರೆಗಿಂತ ಇತರ ಈ ಮೇಕೆ ಮೊದಲಾದ ಪಶುಗಳು ಕಡಿಮೆ ಬಲ-ವೇಗಗಳನ್ನುಳ್ಳವಾಗಿರುತ್ತವೋ ;

ತಥಾ ರಾಜ್ಞಃ ಸಭಾಸಮೀಪೇ ವಿಟ್ ಪ್ರಜಾ ನಿರ್ಬಲೈವ ಭವತಿ.

ಹಾಗೆ ರಾಜನ ಸಭೆಯ ಸಮೀಪದಲ್ಲಿ 'ವಿಟ್', ಎಂದರೆ ಪ್ರಜೆಗಳು ನಿರ್ಬಲರಾಗಿಯೇ ಇರುತ್ತಾರೆ!

ತಸ್ಯ ರಾಜ್ಯಸ್ಯ ಯದ್ಧಿರಣ್ಯಂ ಸುವರ್ಣಾದಿವಸ್ತು ಜ್ಯೋತಿಃ ಪ್ರಕಾಶೋ ವಾ ನ್ಯಾಯಕರಣಮೇತತ್ ಸ್ವರೂಪಂ ಭವತಿ.

ಅವನ ರಾಜ್ಯದ ಯಾವ 'ಹಿರಣ್ಯ', ಎಂದರೆ ಸುವರ್ಣ ಮೊದಲಾದ ವಸ್ತುವು, ಅಥವಾ ಜ್ಯೋತಿಯು, ಎಂದರೆ ಪ್ರಕಾಶವು, ಈ ನ್ಯಾಯ ಮಾಡುವ ಸ್ವರೂಪವೇ ಆಗಿರುತ್ತದೆ!

ಅಂದರೆ, ರಾಜ್ಯದ ಶೋಭೆಯು ಧನವಾಗಿರುತ್ತದೆ. ಮತ್ತು 'ಜ್ಯೋತಿಯು' ಹೆಸರು 'ಹಿರಣ್ಯ', ಎಂದಿರುತ್ತದೆ.

ಯಥಾ ರಾಜಪ್ರಜಾಲಂಕಾರೇಣ ರಾಜಪ್ರಜಾ ಧರ್ಮೋ ವರ್ಣಿತಃ, ತಥೈವ ಜೀವೇಶ್ವರಯೋಃ ಸ್ವಸ್ವಾಮಿಸಂಬಂಧೋ ವರ್ಣ್ಯತೇ.

ಹೇಗೆ ರಾಜಾ-ಪ್ರಜಾ_ ಇವರ ಅಲಂಕಾರದಿಂದ ರಾಜನ-ಪ್ರಜೆಗಳ ಧರ್ಮವು ವರ್ಣಿಸಲ್ಪಟ್ಟಿದೆಯೋ, ಹಾಗೆಯೇ, ಜೀವ ಮತ್ತು ಈಶ್ವರನ ಸ್ವ-ಸ್ವಾಮಿ ಸಂಬಂಧವು ವರ್ಣಿಸಲ್ಪಡುತ್ತದೆ.

"ನ ವೈ ಮನುಷ್ಯಃ ಸ್ವರ್ಗಂ ಲೋಕಮಂಜಸಾ ವೇದಾಶ್ವೋ ವೈ
ಸ್ವರ್ಗಂ ಲೋಕಮಂಜಸಾ ವೇದ ॥"

[ಶತಪಥಬ್ರಾಹ್ಮಣೇ ಕಾಂ. ೧೩, ಅ. ೨, ಬ್ರಾ. ೩, ಕಂ. ೧]

[ಅರ್ಥ:_ "ಮನುಷ್ಯನು 'ಸ್ವರ್ಗ', ಎಂಬ ಲೋಕವನ್ನು ನೇರವಾಗಿ ತಿಳಿಯಲೇ ಲಾರನು! ಅಶ್ವವೇ 'ಸ್ವರ್ಗ', ಎಂಬ ಲೋಕವನ್ನು ನೇರವಾಗಿ ತಿಳಿಯುತ್ತದೆ."

(ಶತಪಥಬ್ರಾಹ್ಮಣ: ೧೩. ೨. ೩. ೧)]

ಭಾಷ್ಯಮ್_

ಭಾಷ್ಯ_

ನೈವ ಮನುಷ್ಯಃ ಕೇವಲೇನ ಸ್ವಸಾಮರ್ಥ್ಯೇನ ಸರಲತಯಾ ಸ್ವರ್ಗಂ ಪರಮೇಶ್ವರಾಖ್ಯಂ ಲೋಕಂ ವೇದ ;

ಮನುಷ್ಯನು ಕೇವಲ ತನ್ನ ಸಾಮರ್ಥ್ಯದಿಂದಲೇ ಸುಲಭವಾಗಿ 'ಸ್ವರ್ಗ', ಎಂದರೆ 'ಪರಮೇಶ್ವರ', ಎಂದು ಕರೆಯಲ್ಪಡುವ ಲೋಕವನ್ನು ತಿಳಿಯಲೇಲಾರನು!

ಕಿಂತ್ವೀಶ್ವರಾನುಗ್ರಹೇಣೈವ ಜಾನಾತಿ.

ಆದರೆ, ಈಶ್ವರನ ಅನುಗ್ರಹದಿಂದಲೇ ತಿಳಿಯುತ್ತಾನೆ!

ಅಂದರೆ, ಯಾವ ಮನುಷ್ಯನೂ 'ಸ್ವರ್ಗಲೋಕ' ವನ್ನು ತನ್ನ ಸಹಜಸಾಮರ್ಥ್ಯದಿಂದ ತಿಳಿಯಲಾರನು! ಆದರೆ, 'ಅಶ್ವ', ಎಂದರೆ ಯಾವ ಈಶ್ವರನಿದ್ದಾನೋ, ಅವನೇ ಇವನಿಗೆ ಸ್ವರ್ಗಸುಖವನ್ನು ತಿಳಿಸುತ್ತಾನೆ.

ಮತ್ತು ಯಾರು ಮನುಷ್ಯರ ಪ್ರೇಮಿಗಳಾದ ಧರ್ಮಾತ್ಮರಾಗಿರುತ್ತಾರೋ, ಅವರಿಗೆ ಎಲ್ಲಾ ಸ್ವರ್ಗಸುಖವನ್ನೂ ಕೊಡುತ್ತಾನೆ!

[ಇಲ್ಲಿ] 'ಅಶ್ವ', ಎಂಬ ಹೆಸರು ಈಶ್ವರನಿಗೂ ಕೂಡ, ಇದೆ. ಏಕೆಂದರೆ_

"ಅಶ್ವೋ ಯತ ಈಶ್ವರೋ ವಾ ಅಶ್ವಃ ॥"

[ಶತಪಥಬ್ರಾಹ್ಮಣೇ ಕಾಂ. ೧೩, ಅ. ೩, ಬ್ರಾ. ೩, ಕಂ. ೫]

[ಅರ್ಥ:_ "ಅಶ್ವ, ಎಂದರೇನು? ಈಶ್ವರನೇ ಅಶ್ವವಾಗಿದ್ದಾನೆ."

(ಶತಪಥಬ್ರಾಹ್ಮಣ: ೧೩. ೩. ೩. ೫)]

ಅಶ್ನುತೇ ವ್ಯಾಪ್ನೋತಿ ಸರ್ವಂ ಜಗತ್ ಸೋಽಶ್ವ ಈಶ್ವರ ಇತ್ಯುಕ್ತತ್ವಾದೀಶ್ವರಸ್ಯೈವಾತ್ರಾಶ್ವಸಂಜ್ಞಾಸ್ತೀತಿ.

ಯಾವನು ಎಲ್ಲಾ ಜಗತ್ತನ್ನೂ 'ಅಶ್ನುತೇ', ಎಂದರೆ ವ್ಯಾಪಿಸುತ್ತಾನೋ, ಅವನು 'ಅಶ್ವ', ಎಂದರೆ 'ಈಶ್ವರ', ಎಂದು ಹೇಳಿರುವುದರಿಂದ, ಇಲ್ಲಿ ಈಶ್ವರನಿಗೇ 'ಅಶ್ವ', ಎಂಬ ಸಂಜ್ಞೆ ಇದೆ!

ರಾಷ್ಟ್ರದ ವರ್ಧನೆಯು ಅಶ್ವಮೇಧ!

ಅನ್ಯಚ್ಚ_

ಮತ್ತೂ ಕೂಡ_

"ರಾಷ್ಟ್ರಮಶ್ವಮೇಧೋ ಜ್ಯೋತಿರೇವ ತದ್ರಾಷ್ಟ್ರೇ ದಧಾತಿ ॥"

[ಶತಪಥಬ್ರಾಹ್ಮಣೇ ಕಾಂ. ೧೩, ಅ. ೨, ಬ್ರಾ. ೨, ಕಂ. ೧೬]

[ಅರ್ಥ:_ "ರಾಷ್ಟ್ರವು ಅಶ್ವಮೇಧವಾಗಿರುತ್ತದೆ. ಜ್ಯೋತಿಯನ್ನೇ ಆ ರಾಷ್ಟ್ರದಲ್ಲಿ ಇಡುತ್ತಾನೆ."

(ಶತಪಥಬ್ರಾಹ್ಮಣ: ೧೩. ೨. ೨. ೧೬)]

"ಕ್ಷತ್ರಾಯೈವ ತದ್ವಿಶಂ ಕೃತಾನುಕರಾಮನುವರ್ತ್ಮಾನಂ ಕರೋತಿ ॥"

[ಶತಪಥಬ್ರಾಹ್ಮಣೇ ಕಾಂ. ೧೩, ಅ. ೨, ಬ್ರಾ. ೨, ಕಂ. ೧೫]

[ಅರ್ಥ:_ "ರಾಜನಿಗಾಗಿಯೇ ಆ ಪ್ರಜೆಗಳನ್ನು ಅನುಕರಿಸುವಂತೆ, ಹಾಗೂ ಅನುವರ್ತಮಾನರಾಗಿರುವಂತೆ ಮಾಡುತ್ತಾನೆ."

(ಶತಪಥಬ್ರಾಹ್ಮಣ: ೧೩. ೨. ೨. ೧೫)]

"ಅಥೋ ಕ್ಷತ್ರಂ ವಾ ಅಶ್ವಃ, ಕ್ಷತ್ರಸ್ಯೈತದ್ರೂಪಂ ಯದ್ಧಿರಣ್ಯಂ ;
ಕ್ಷತ್ರಮೇವ ತತ್ ಕ್ಷತ್ರೇಣ ಸಮರ್ಧಯತಿ ॥"

[ಶತಪಥಬ್ರಾಹ್ಮಣೇ ಕಾಂ. ೧೩, ಅ. ೨, ಬ್ರಾ. ೨, ಕಂ. ೧೭]

[ಅರ್ಥ:_ "ನಂತರ, ರಾಜನೇ ಅಶ್ವವಾಗಿರುತ್ತಾನೆ. ಯಾವುದು ಹಿರಣ್ಯವೋ, ಅದೇ ರಾಜನ ರೂಪವಾಗಿರುತ್ತದೆ. ರಾಜ್ಯದಿಂದಲೇ ಆ ರಾಜನನ್ನು ವರ್ಧಿಸುತ್ತಾನೆ."

(ಶತಪಥಬ್ರಾಹ್ಮಣ: ೧೩. ೨. ೨. ೧೭)]

"ವಿಶಮೇವ ತದ್ವಿಶಾ ಸಮರ್ಧಯತಿ ॥"

[ಶತಪಥಬ್ರಾಹ್ಮಣೇ ಕಾಂ. ೧೩, ಅ. ೨, ಬ್ರಾ. ೨, ಕಂ. ೧೯]

[ಅರ್ಥ:_ "ಪ್ರಜೆಗಳಿಂದಲೇ ಆ ಪ್ರಜೆಗಳನ್ನು ವರ್ಧಿಸುತ್ತಾನೆ."

(ಶತಪಥಬ್ರಾಹ್ಮಣ: ೧೩. ೨. ೨. ೧೯)]

ಭಾಷ್ಯಮ್_

(ರಾಷ್ಟ್ರಮಶ್ವ.) ರಾಷ್ಟ್ರಂ ರಾಜ್ಯಮಶ್ವಮೇಧಸಂಜ್ಞಂ ಭವತಿ.

ತದ್ರಾಷ್ಟ್ರೇ ರಾಜ್ಯಕರ್ಮಣಿ ಜ್ಯೋತಿರ್ದಧಾತಿ.

ತತ್ಕರ್ಮಫಲಂ ಕ್ಷತ್ರಾಯ ರಾಜಪುರುಷಾಯ ಭವತಿ.

ತಚ್ಚ ಸ್ವಸುಖಾಯೈವ ವಿಶಂ ಪ್ರಜಾಂ ಕೃತಾನುಕರಾಂ ಸ್ವವರ್ತ್ತಮಾನಾಮನುಕೂಲಾಂ ಕರೋತಿ.

ಭಾಷ್ಯ_

(ರಾಷ್ಟ್ರಮಶ್ವಮೇಧ.) 'ರಾಷ್ಟ್ರ', ಎಂದರೆ ರಾಜ್ಯವು 'ಅಶ್ವಮೇಧ', ಎಂಬ ಹೆಸರಿನದಾಗಿರುತ್ತದೆ.

ಈ ರಾಷ್ಟ್ರದಲ್ಲಿ, ಎಂದರೆ ರಾಜ್ಯಕರ್ಮದಲ್ಲಿ ಜ್ಯೋತಿಯನ್ನು ಇಡುತ್ತಾನೆ!

ಅಂದರೆ, ರಾಜ್ಯದ ಪ್ರಕಾಶವನ್ನು ಧರಿಸುವುದು ಸಭೆಯ ಕೆಲಸವೇ ಆಗಿರುತ್ತದೆ. ಮತ್ತು ಆ ಸಭೆಯ ಹೆಸರೇ 'ರಾಜಾ', ಎಂದಿರುತ್ತದೆ.

ಆ ಕರ್ಮದ ಫಲವು ಕ್ಷತ್ರನಿಗೆ, ಎಂದರೆ ರಾಜಪುರುಷನಿಗಾಗಿರುತ್ತದೆ.

ಮತ್ತು ಅದು* ತನ್ನ ಸುಖಕ್ಕಾಗಿಯೇ, ಪ್ರಜೆಗಳನ್ನು ತೆರಿಗೆ ಕೊಡುವವರನ್ನಾಗಿಯೂ, ತನ್ನ ವರ್ತನೆಗೆ ಅನುಕೂಲವಾಗಿರುವವರನ್ನಾಗಿಯೂ ಮಾಡುತ್ತದೆ.

ಅಂದರೆ, ಅದೇ* ತನ್ನ ಕಡೆಯಿಂದ ಪ್ರಜೆಗಳ ಮೇಲೆ ತೆರಿಗೆಯನ್ನು ಹಾಕುತ್ತದೆ.

---

* ಎಂದರೆ, ರಾಷ್ಟ್ರ _ ಅನು.

ಪ್ರಜಾಪ್ರಭುತ್ವವೇ ಏಕೆ ಆವಶ್ಯಕ?

ಅಥೋ ಇತ್ಯನಂತರಂ ಕ್ಷತ್ರಮೇವಾಶ್ವಮೇಧ-ಸಂಜ್ಞಕಂ ಭವತಿ.

ಇದರ ನಂತರ, ರಾಜನೇ 'ಅಶ್ವಮೇಧ', ಎಂಬ ಸಂಜ್ಞೆಯನ್ನುಳ್ಳವನಾಗುತ್ತಾನೆ.

ತಸ್ಯ ಯದ್ಧಿರಣ್ಯಮೇತದೇವ ರೂಪಂ ಭವತಿ.

ಅವನಿಗೆ ಯಾವುದು ಹಿರಣ್ಯವೋ*, ಅಂತಹುದೇ ರೂಪ ಉಂಟಾಗುತ್ತದೆ!

ತೇನ ಹಿರಣ್ಯಾದ್ಯನ್ವಿತೇನ ಕ್ಷತ್ರೇಣ ರಾಜ್ಯಮೇವ ಸಮ್ಯಗ್ ವರ್ಧತೇ ; ನ ಚ ಪ್ರಜಾ.

ಆ ಹಿರಣ್ಯ ಮೊದಲಾದುದರಿಂದ ಕೂಡಿದ ರಾಜನಿಂದ ರಾಜ್ಯವೇ ಚೆನ್ನಾಗಿ ವರ್ಧಿಸುತ್ತದೆ ; ಪ್ರಜೆಗಳಲ್ಲ!

ಅಂದರೆ, ರಾಜನಿಂದಲೇ ರಾಜ್ಯದ ವೃದ್ಧಿಯಾಗುತ್ತದೆ.

ಸಾ ತು ಸ್ವತಂತ್ರಸ್ವಭಾವಾನ್ವಿತಯಾ ವಿಶಾ ಸಮರ್ಧಯತಿ.

[ಆದರೆ,] ಅವರಂತೂ** ಸ್ವತಂತ್ರಸ್ವಭಾವದಿಂದ ಕೂಡಿರುವುದರಿಂದ, ಪ್ರಜೆಗಳನ್ನೇ ಚೆನ್ನಾಗಿ ಉನ್ನತಿಗೊಳಿಸುತ್ತಾರೆ!

ಅಂದರೆ, ಪ್ರಜೆಗಳಿಂದಲೇ ಪ್ರಜೆಗಳ ಉನ್ನತಿಯಾಗುತ್ತದೆ!

ಅತೋ ಯತ್ರೈಕೋ ರಾಜಾ ಭವತಿ, ತತ್ರ ಪ್ರಜಾ ಪೀಡಿತಾ ಜಾಯತೇ.

ಆದುದರಿಂದ, ಎಲ್ಲಿ ಒಬ್ಬನೇ ರಾಜನಾಗಿರುತ್ತಾನೋ, ಅಲ್ಲಿ ಪ್ರಜೆಗಳು ಪೀಡಿತರಾಗಿರುತ್ತಾರೆ!

ತಸ್ಮಾತ್ ಪ್ರಜಾಸತ್ತಯೈವ ರಾಜ್ಯಪ್ರಬಂಧಃ ಕಾರ್ಯ್ಯ ಇತಿ.

ಆದುದರಿಂದ, ಪ್ರಜೆಗಳ ಅಧಿಕಾರದಿಂದಲೇ, ರಾಜ್ಯದ ಪ್ರಬಂಧವು ಮಾಡಲ್ಪಡಬೇಕು!

ಸ್ತ್ರೀಯರಿಂದಲೂ ರಾಜ್ಯದ ಪಾಲನೆಯಾಗಬೇಕು!

"ಗಣಾನಾಂ ತ್ವಾ ಗಣಪತಿಗ್ಂ ಹವಾಮಹ ಇತಿ । ಪತ್ನ್ಯಃ ಪರಿಯಂತ್ಯಪಹ್ನುವತ ಏವಾಸ್ಮಾ ಏತದತೋಽನ್ಯೇವಾಸ್ಮೈ ಹ್ನುವತೇ ; ಅಥೋ ಧುವತ ಏವ್ವೈನಂ ತ್ರಿಃ ಪರಿಯಂತಿ ; ತ್ರಯೋ ವಾ ಇಮೇ ಲೋಕಾ ; ಏಭಿರೇವ್ವೈನಂ ಲೋಕೈರ್ಧುವತೇ ; ತ್ರಿಃ ಪುನಃ ಪರಿಯಂತಿ ; ಷಟ್ ಸಂಪದ್ಯಂತೇ ; ಷಡ್ ವಾ ಋತವ, ಋತುಭಿರೇವ್ವೈನಂ ಧುವತೇ ॥"

[ಶತಪಥಬ್ರಾಹ್ಮಣೇ ಕಾಂ. ೧೩, ಅ. ೨, ಬ್ರಾ. ೮, ಕಂ. ೪]

* ಎಂದರೆ, ಹಿತಕರವೋ _ ಅನು.

** ಎಂದರೆ ಪ್ರಜೆಗಳು _ ಅನು.

[ಅರ್ಥ:_ "'ಗಣಾನಾಂ ತ್ವಾ ಗಣಪತಿಗ್ಂ ಹವಾಮಹೇ', ಎಂದು ಹೇಳಲಾಗಿದೆ. ಪತ್ನಿಯರು* ಬಚ್ಚಿಟ್ಟುಕೊಂಡೇ ಇದರ ಪ್ರದಕ್ಷಿಣೆ ಮಾಡುತ್ತಾರೆ. ಆದುದರಿಂದ, ಇದಂತೂ ಇತರರಿಂದ ಬಚ್ಚಿಟ್ಟುಕೊಳ್ಳಲಾಗುತ್ತದೆ. ನಂತರ, ಬೀಸಣಿಗೆ ಬೀಸುತ್ತಲೇ ಇದರ ಮೂರು ಪ್ರದಕ್ಷಿಣೆಗಳನ್ನು ಹಾಕುತ್ತಾರೆ. ಈ ಲೋಕಗಳು ಮೂರೇ ಇವೆ. ಈ ಲೋಕಗಳಿಂದಲೇ ಇದಕ್ಕೆ ಗಾಳಿ ಹಾಕಲಾಗುತ್ತದೆ. ಮತ್ತೆ ಮೂರು ಸಲ ಪ್ರದಕ್ಷಿಣೆ ಹಾಕುತ್ತಾರೆ. ಒಟ್ಟು ಆರು ಆಗುತ್ತವೆ. ಆರೇ ಋತುಗಳಿವೆ. ಋತುಗಳಿಂದಲೇ ಇದಕ್ಕೆ ಗಾಳಿ ಹಾಕಲಾಗುತ್ತದೆ."

(ಶತಪಥಬ್ರಾಹ್ಮಣ: ೧೩. ೨. ೮. ೪)]

"ಅಪ ವಾ ಏತೇಭ್ಯಃ ಪ್ರಾಣಾಃ ಕ್ರಾಮಂತಿ, ಯೇ ಯಜ್ಞೇ

ಧುವನಂ ತನ್ವತೇ ; ನವಕೃತ್ವಃ ಪರಿಯಂತಿ ; ನವ ವೈ ಪ್ರಾಣಾಃ ;

ಪ್ರಾಣಾನೇವಾತ್ಮನ್ ದಧತೇ ; ನೈಭ್ಯಃ ಪ್ರಾಣಾ ಅಪಕ್ರಾಮಂತಿ ;

"ಆಹಮಜಾನಿ ಗರ್ಭಧಮಾ ತ್ವಮಜಾಸಿ ಗರ್ಭಧಮಿತಿ ;

"ಪ್ರಜಾ ವೈ ಪಶವೋ , ಗರ್ಭಃ ಪ್ರಜಾಮೇವ ಪಶೂನಾತ್ಮನ್

ಧತ್ತೇ ॥"

[ಶತಪಥಬ್ರಾಹ್ಮಣೇ ಕಾಂ. ೧೩, ಅ. ೨, ಬ್ರಾ. ೮, ಕಂ. ೫]

[ಅರ್ಥ:_ "ಯಾರು ಯಜ್ಞದಲ್ಲಿ ಬೀಸಣಿಗೆಯಿಂದ ಬೀಸುತ್ತಾರೋ, ಅವರಿಂದ ಪ್ರಾಣಗಳು ಪಲಾಯನ ಮಾಡುತ್ತವೆ. ಒಂಬತ್ತು ಸಲ ಪ್ರದಕ್ಷಿಣೆ ಹಾಕುತ್ತಾರೆ. ಒಂಬತ್ತೇ ಪ್ರಾಣಗಳಿವೆ, ಆತ್ಮನಲ್ಲಿ ಪ್ರಾಣಗಳನ್ನೇ ಧಾರಣ ಮಾಡುತ್ತದೆ. ಇವುಗಳಿಂದ ಪ್ರಾಣಗಳು ಪಲಾಯನ ಮಾಡುವುದಿಲ್ಲ!

"'ಆಹಮಜಾನಿ ಗರ್ಭಧಮಾತ್ವಮಜಾಸಿ ಗರ್ಭಧಮ್', ಎಂದು ಹೇಳಲಾಗಿದೆ.

"ಪ್ರಜೆಗಳೇ ಪಶುಗಳು! ಗರ್ಭವು ಪ್ರಜೆಗಳೇ ಆದ ಪಶುಗಳನ್ನು ಆತ್ಮನಲ್ಲಿ ಧರಿಸುತ್ತದೆ."

(ಶತಪಥಬ್ರಾಹ್ಮಣ: ೧೩. ೨. ೮. ೫)]

* 'ಪತ್ನೀ', ಎಂದರೆ ಪಾಲನೆ ಮಾಡುವವಳು, ಎಂದರ್ಥ! 'ನಗರಪಾಲಿಕೆ', ಎಂಬಂತೆ _ಅನು.

ಸಂತಾನಕ್ಕೆ ಸ್ತ್ರೀಯರಿಂದಲೇ ಶಿಕ್ಷಣ

ಭಾಷ್ಯಮ್_

(ಗಣಾನಾಂ ತ್ವಾ.) ಸ್ತ್ರಿಯೋಽಪ್ಯೇನಂ ರಾಜ್ಯ-ಪಾಲನಾಯ ವಿದ್ಯಾಮಯಂ ಸಂತಾನಶಿಕ್ಷಾಕರಣಾಖ್ಯಂ ಯಜ್ಞಂ ಪರಿತಃ ಸರ್ವತಃ ಪ್ರಾಪ್ನುಯುಃ .

ಭಾಷ್ಯ_

(ಗಣಾನಾಂ ತ್ವಾ.) ಸ್ತ್ರೀಯರೂ ಕೂಡ, ರಾಜ್ಯದ ಪಾಲನೆಗಾಗಿ ಸಂತಾನಗಳಿಗೆ ಶಿಕ್ಷಣ ಕೊಡುವಂತಹುದು, ಎಂದು ಹೇಳಲ್ಪಡುವ ಈ ವಿದ್ಯಾಮಯವಾದ ಯಜ್ಞವನ್ನು ಎಲ್ಲ ಕಡೆಯಿಂದ ಪ್ರಾಪ್ತ ಮಾಡಿಕೊಳ್ಳಬೇಕು!*

ಅಂದರೆ, ಸ್ತ್ರೀಯರೂ ಕೂಡ, ರಾಜ್ಯದ ಪಾಲನೆಗಾಗಿ, ಮಕ್ಕಳಿಗೆ ವಿದ್ಯೆಯ ಶಿಕ್ಷಣವನ್ನು ಕೊಡುತ್ತಿರಬೇಕು!

ಸ್ತ್ರೀಯರು ತಪ್ಪು ಮಾಡಿದರೆ, ವಿದ್ವಾಂಸರಿಂದ ಸುಧಾರಣೆ!

ಪ್ರಾಪ್ತಾಃ ಸತ್ಯೋಽಸ್ಯ ಸಿದ್ಧಯೇ ಯದಪಹ್ನವಾಖ್ಯಂ ಕರ್ಮಾಚರಂತಿ ;

ಪ್ರಾಪ್ತ ಮಾಡಿಕೊಳ್ಳುತ್ತಾ ಇರುವಾಗ, ಇದರ ಸಿದ್ಧಿಗಾಗಿ **'ಮುಚ್ಚು-ಮರೆ'**, ಎಂದು ಹೇಳಲ್ಪಡುವ ಕರ್ಮವನ್ನು ಆಚರಿಸಿದರೆ ;

ಅತಃ ಕಾರಣಾದ್ ಏತದ್ ಏತಾಸಾಮನ್ಯೇ ವಿದ್ವಾಂಸೋ ದೂರೀಕುರ್ವಂತಿ.

ಆ ಕಾರಣದಿಂದ, ಇತರ ವಿದ್ವಾಂಸರು ಅದನ್ನು ಇವರಿಂದ ದೂರಮಾಡುತ್ತಾರೆ!

ಅಂದರೆ, ಈ ಯಜ್ಞವನ್ನು ಪ್ರಾಪ್ತ ಮಾಡಿಕೊಂಡೂ ಕೂಡ, ಸಂತಾನೋತ್ಪತ್ತಿ ಮೊದಲಾದ ಕರ್ಮದಲ್ಲಿ ಮಿಥ್ಯಾಚರಣೆ ಮಾಡುತ್ತಾರೆಯಾದರೆ, ಅವರ ಈ ಕರ್ಮವನ್ನು ವಿದ್ವಾಂಸರು ಒಳಿತೆಂದು ಒಪ್ಪುವುದಿಲ್ಲ.

ಅಥೋ ಇತ್ಯನಂತರಂ ಯ ಏನಂ ವಿಚಾಲಯಂತಿ, ತಾನಪ್ಯನ್ಯೇ ಚ ದೂರೀಕುರ್ಯುಃ .

ನಂತರ, ಯಾರು ಇದನ್ನು ದಾರಿ ತಪ್ಪಿಸುತ್ತಾರೋ, ಅವರನ್ನೂ ಕೂಡ, ಇತರರು ದೂರ ಮಾಡಬೇಕು!

ಅಂದರೆ, ಯಾವ ಪುರುಷರು ಸಂತಾನ ಮೊದಲಾದವರ ಶಿಕ್ಷಣದಲ್ಲಿ ಆಲಸ್ಯ ಮಾಡುತ್ತಾರೋ, ಅವರನ್ನು ಇತರರು ಬಂಧಿಸಿ, ತಾಡನೆ ಮಾಡುತ್ತಾರೆ!

---

* ಯಾಜ್ಞಿಕ ಕರ್ಮಕಾಂಡವು ಶುಷ್ಕವೆಂದು, ಅದನ್ನು ನೋಡಿದವರಿಗೆ ಅನ್ನಿಸುತ್ತದೆ! ಏಕೆಂದರೆ, ಇದರ ವಿಧಾಯಕವಾದ ಶ್ರೌತಸೂತ್ರಗಳಲ್ಲಿ ಅದರ ರಹಸ್ಯವಿಲ್ಲ; ಮತ್ತು ಅನೇಕ ಕರ್ಮಗಳು ಅಸಂಗತವೂ, ಅಶ್ಲೀಲವೂ, ಅಪ್ರಯೋಜಕವೂ, ಎಂದು ಕಾಣಬರುತ್ತವೆ. ಬ್ರಾಹ್ಮಣಗ್ರಂಥಗಳಲ್ಲೂ ಕೂಡ, ಆ ರಹಸ್ಯದ ಬಗ್ಗೆ ಸಂಕೇತವಿರುತ್ತದೆಯೇ ಹೊರತು, ವಿಶೇಷವ್ಯಾಖ್ಯಾನವಿರುವುದಿಲ್ಲ. ಆದರೆ, ಈ ರಹಸ್ಯವನ್ನು ಮಹರ್ಷಿದಯಾನಂದರು ತಿಳಿದು, ಈ ಮಂತ್ರದ ಭಾಷ್ಯದಲ್ಲಿ ವ್ಯಕ್ತಪಡಿಸಿದ್ದಾರೆ. ಇದೇ ಅವರ ಋಷಿತ್ವಕ್ಕೆ ಸಾಕ್ಷಿ! ಆದುದರಿಂದಲೇ, ಅವರು ಕರ್ಮಕಾಂಡದ ತರ್ಕಹೀನ ವಿಧಾನಗಳ ಬಗ್ಗೆ ಅಪ್ರಸನ್ನತೆಯನ್ನು ವ್ಯಕ್ತ ಮಾಡಿದರೂ ಕೂಡ, ಪ್ರಧಾನ ಕರ್ಮಕಾಂಡಕ್ಕೆ ವಿರೋಧ ಮಾಡಲಿಲ್ಲ! _ಅನು.

ಏವಮಸ್ಯ ತ್ರಿವಾರಂ ರಕ್ಷಣಂ ಸರ್ವಥಾ ಕುರ್ಯ್ಯುಃ.

ಹೀಗೆ, ಇದರ ರಕ್ಷಣೆಯನ್ನು ಸರ್ವಥಾ ಮೂರು ಸಲ ಮಾಡಬೇಕು!

ಏವಂ ಪ್ರತಿದಿನಮೇತಸ್ಯ ಶಿಕ್ಷಯಾ ರಕ್ಷಣೇನ ಚಾತ್ಮಶರೀರಬಲಾನಿ ಸಂಪಾದಯೇಯುಃ.

ಹೀಗೆ, ಪ್ರತಿದಿನವೂ ಇದರ ಶಿಕ್ಷಣದಿಂದಲೂ, ಮತ್ತು ರಕ್ಷಣೆಯಿಂದಲೂ, ಆತ್ಮಾ, ಹಾಗೂ ಶರೀರದ ಬಲಗಳನ್ನು ಸಂಪಾದಿಸಿಕೊಡಬೇಕು!

ಅಂದರೆ, ಈ ರೀತಿಯಿಂದ, ಮೂರು, ಆರು, ಅಥವಾ ಒಂಬತ್ತು ಸಲ ಇದರ ರಕ್ಷಣೆಯಿಂದ, ಆತ್ಮಾ, ಶರೀರ ಮತ್ತು ಬಲವನ್ನು ಸಿದ್ಧಿಸಿಕೊಳ್ಳಬೇಕು!

ಪರಮೇಶ್ವರನ ಉಪಾಸಕನಿಗೆ ಹಾನಿಯಿಲ್ಲ!

ಯೇ ನರಾಃ ಪೂರ್ವೋಕ್ತಂ ಗರ್ಭಧಂ ಪರಮೇಶ್ವರಂ ಜಾನಂತಿ, ನೈವ ತೇಭ್ಯಃ ಪ್ರಾಣಾ ಬಲಪರಾಕ್ರಮಾದಯೋಽಪಕ್ರಾಮಂತಿ.

ಯಾವ ಮನುಷ್ಯರು ಮೊದಲು ಹೇಳಿದ ಗರ್ಭ ಧಾರಕನಾದ ಪರಮೇಶ್ವರನನ್ನು ತಿಳಿಯುತ್ತಾರೋ, ಅವರಿಂದ ಪ್ರಾಣಗಳು, ಬಲ-ಪರಾಕ್ರಮ ಮೊದಲಾದುವು ಪಲಾಯನ ಮಾಡುವುದೇ ಇಲ್ಲ!

ಅಂದರೆ, ಯಾವ ಮನುಷ್ಯರು ಪರಮೇಶ್ವರನ ಉಪಾಸನೆ ಮಾಡುತ್ತಾರೋ, ಅವರ ಬಲ ಮೊದಲಾದ ಗುಣಗಳು ಎಂದಿಗೂ ನಾಶವಾಗುವುದಿಲ್ಲ!

(ಆಹಮಜಾನಿ.) ತಸ್ಮಾನ್ಮನುಷ್ಯಸ್ತಂ ಗರ್ಭಧಂ ಪರಮೇಶ್ವರಮಾಹಮಜಾನಿ ಸಮಂತಾ-ಜ್ಜಾನೀಯಾಮಿತೀಚ್ಛೇತ್.

(ಆಹಮಜಾನಿ.) ಆದುದರಿಂದ, ಮನುಷ್ಯನು_ 'ಆ ಗರ್ಭಧಾರಕನಾದ ಪರಮೇಶ್ವರನನ್ನು (ಆಹಮಜಾನಿ) ಎಲ್ಲ ರೀತಿಯಿಂದಲೂ ನಾನು ತಿಳಿಯಬೇಕು!', ಎಂಬ ಇಚ್ಛೆಯನ್ನು ಮಾಡಬೇಕು!

(ಪ್ರಜಾ ವೈ ಪಶವಃ) ಈಶ್ವರಸಾಮರ್ಥ್ಯ-[ರೂಪ]ಗರ್ಭಾತ್ ಸರ್ವೇ ಪದಾರ್ಥಾ ಜಾತಾ ಇತಿ ಯೋಜನೀಯಮ್.

(ಪ್ರಜಾ ವೈ ಪಶವಃ.) ಈಶ್ವರನ ಸಾಮರ್ಥ್ಯ ರೂಪ ಗರ್ಭದಿಂದ ಎಲ್ಲಾ ಪದಾರ್ಥಗಳೂ ಉತ್ಪನ್ನ ವಾಗಿವೆ, ಎಂದು ಯೋಜಿಸಿಕೊಳ್ಳಬೇಕು!

ರಾಜನಿಗೆ ಪ್ರಜೆಗಳ ಬಗ್ಗೆ ವಿಶೇಷ ತಿಳಿವಳಿಕೆ ಇರಬೇಕು!

ಯಶ್ಚ ಪಶೂನಾಂ ಪ್ರಜಾನಾಂ ಮಧ್ಯೇ ವಿಜ್ಞಾನವಾನ್ ಭವತಿ, ಸ ಇಮಾಂ ಸರ್ವಾಂ ಪ್ರಜಾಮಾತ್ಮನಿ ;

ಮತ್ತು ಯಾವನು, ಪಶುಗಳ, [ಹಾಗೂ] ಪ್ರಜೆ ಗಳ ಸಂಬಂಧದಲ್ಲಿ ವಿಶೇಷ ತಿಳಿವಳಿಕೆಯುಳ್ಳವನಾಗಿರು ತ್ತಾನೋ, ಅವನು ಈ ಸಮಸ್ತ ಪ್ರಜೆಗಳನ್ನು ಆತ್ಮನಲ್ಲಿ;

ಆತತಿ ಸರ್ವತ್ರ ವ್ಯಾಪ್ನೋತಿ ;

ಎಂದರೆ, ಯಾವನು ಸರ್ವತ್ರ ವ್ಯಾಪಕನಾಗಿ ದ್ದಾನೋ ;

ತಸ್ಮಿನ್ ಜಗದೀಶ್ವರೇ ವರ್ತ್ತತ ಇತಿ, ಧಾರಯತಿ ॥೧॥

ಆ ಜಗದೀಶ್ವರನಲ್ಲಿ, ವರ್ತಿಸುತ್ತಿವೆ, ಎಂದು [ತಿಳಿದುಕೊಂಡು,] ಧಾರಣೆ ಮಾಡಿಕೊಂಡಿರುತ್ತಾನೆ.

ಅಂದರೆ, ಪ್ರಜೆಗಳ **'ಕಾರಣ'**ಕ್ಕೆ **'ಗರ್ಭ'**, ಎಂದು ಹೆಸರಿರುತ್ತದೆ. ಅದಕ್ಕೆ ಸರಿಸಮಾನವಾಗಿ ಆ **ಸಭೆ** ಇರುತ್ತದೆ! ಮತ್ತು ಪ್ರಜೆಗಳ ಪಶುಗಳನ್ನು ತನ್ನ ಆತ್ಮನಲ್ಲಿ ಧಾರಣೆ ಮಾಡಿಕೊಳ್ಳಬೇಕು!

ಎಂದರೆ, ಯಾವ ರೀತಿಯಲ್ಲಿ ತನ್ನ ಸುಖವನ್ನು ಇಚ್ಛಿಸುತ್ತಾನೋ, ಹಾಗೆಯೇ ಪ್ರಜೆಗಳ, ಹಾಗೂ ಅವರ ಪಶುಗಳ ಸುಖವನ್ನೂ ಇಚ್ಛಿಸಬೇಕು! [೧]

ಇತಿ ಸಂಕ್ಷೇಪತೋ 'ಗಣಾನಾಂ ತ್ವೇತಿ' ಮಂತ್ರಸ್ಯಾರ್ಥೋ ವರ್ಣಿತಃ.

ಹೀಗೆ, ಸಂಕ್ಷೇಪವಾಗಿ, **'ಗಣಾನಾಂ ತ್ವಾ'**, ಎಂಬ ಮಂತ್ರದ ಅರ್ಥವು ವರ್ಣಿಸಲಾಗಿದೆ!

ಅಂದರೆ, ಈ ಅರ್ಥವೇ **ಐತರೇಯ** ಮತ್ತು **ಶತಪಥಬ್ರಾಹ್ಮಣ**ಗಳಲ್ಲೂ ಹೇಳಲಾಗಿದೆ.

ಮಹೀಧರರಂತಹವರಿಂದ ವೇದಗಳ ಅಪಮಾನ!

ಅಸ್ಮಾನ್ಮಹೀಧರಸ್ಯಾರ್ಥೋಽತ್ಯಂತವಿರುದ್ಧ ಏವಾಸ್ತೀತಿ ಮಂತವ್ಯಮ್.

ಇದಕ್ಕೆ ಅತ್ಯಂತ ವಿರುದ್ಧವಾಗಿಯೇ ಮಹೀಧರರ ಅರ್ಥವಿದೆ, ಎಂದು ತಿಳಿಯಬೇಕು!

[ಈಗ,] ವಿಚಾರ ಮಾಡಬೇಕಾದುದೇನೆಂದರೆ, ಈ ಸತ್ಯ ಅರ್ಥವು ಗುಪ್ತವಾದುದರಿಂದ, ಮತ್ತು ಮಿಥ್ಯಾ-ನವೀನ ಅರ್ಥಗಳ ಪ್ರಚಾರವಾದುದರಿಂದ, ಮನುಷ್ಯರನ್ನು ಭ್ರಾಂತರನ್ನಾಗಿ ಮಾಡಿ, ವೇದಗಳ ಎಷ್ಟು ಅಪಮಾನ ಮಾಡಿಸಲಾಗಿದೆ?

ಹೇಗೆ ಈ ದೋಷವು ಖಂಡಿಸಲ್ಪಟ್ಟಿತೋ, ಹಾಗೆ ಈ ಭಾಷ್ಯದ* ಪ್ರವರ್ತನೆಯಾಗುವುದರಿಂದ, ಈ ಎಲ್ಲಾ ಮಿಥ್ಯಾದೋಷಗಳ ನಿವರ್ತನೆಯಾಗುವುದು!

(೨) ರಾಜಾ-ಪ್ರಜೆಗಳು ಪುರುಷಾರ್ಥಚತುಷ್ಟಯವನ್ನು ವಿಸ್ತರಿಸಬೇಕು!

[ಋಷಿಃ_ ಪ್ರಜಾಪತಿಃ ; ದೇವತಾ_ ರಾಜಪ್ರಜೇ ; ಛಂದಃ_ ಸ್ವರಾಡನುಷ್ಟುಪ್ ; ಸ್ವರಃ_ ಗಾಂಧಾರಃ]

ತಾಽ ಉಭೌ ಚತುರಃ ಪದಃ ಸಂಪ್ರಸಾರಯಾವ ಸ್ವರ್ಗೇ ಲೋಕೇ
ಪ್ರೋರ್ಣುವಾಥಾಂ ವೃಷಾ ವಾಜೀ ರೇತೋಧಾ ರೇತೋ ದಧಾತು ॥ ೨ ॥

[ಯಜುರ್ವೇದೇ ಅ. ೨೩, ಮಂ. ೨೦]

* ಎಂದರೆ ಗ್ರಂಥಕರ್ತರ ಭಾಷ್ಯದ _ಅನು.

[ಅರ್ಥ:_ "ಅವರಿಬ್ಬರೂ_ 'ನಾವಿಬ್ಬರೂ ಪದಗಳನ್ನು ವಿಸ್ತರಿಸೋಣ!', [ಎಂದು ಹೇಳಿದರು.] 'ನೀವಿಬ್ಬರೂ ಸುಖಲೋಕದಲ್ಲಿ ವಾಸಿಸಿರಿ! ಪರಾಕ್ರಮವನ್ನುಳ್ಳ ವೇಗವಂತನಾದ ವೀರನು ಪರಾಕ್ರಮವನ್ನು ಧರಿಸಲಿ!"

(ಯಜುರ್ವೇದ: ೨೩. ೨೦)]

ಮಹೀಧರನ ಅಶ್ಲೀಲಾರ್ಥ_ 'ಅಶ್ವಸಂಗಮವಿಧಿ'

ಮಹೀಧರಸ್ಯಾರ್ಥಃ_

'ಅಶ್ವಶಿಶ್ನಮುಪಸ್ಥೇ ಕುರುತೇ ವೃಷಾ ವಾಜೀತಿ.

'ಮಹಿಷೀ ಸ್ವಯಮೇವಾಶ್ವಶಿಶ್ನಮಾಕೃಷ್ಯ ಸ್ವಯೋನೌ ಸ್ಥಾಪಯತಿ' ॥ ೨ ॥*

ಮಹೀಧರರ ಅರ್ಥವೇನೆಂದರೆ_

"'ವೃಷಾ ವಾಜೀ', ಎಂದು ಹೇಳಿ, ಅಶ್ವದ ಶಿಶ್ನವನ್ನು ಉಪಸ್ಥದಲ್ಲಿಟ್ಟುಕೊಳ್ಳುತ್ತಾಳೆ.

"ಎಂದರೆ, ಮಹಿಷಿಯು ತಾನೇ ಅಶ್ವದ ಶಿಶ್ನವನ್ನು ಎಳೆದುಕೊಂಡು, ತನ್ನ ಯೋನಿಯಲ್ಲಿಟ್ಟುಕೊಳ್ಳುತ್ತಾಳೆ.

"ಅಂದರೆ, ಯಜಮಾನನ ಪತ್ನಿಯು ಕುದುರೆಯ ಲಿಂಗವನ್ನು ಹಿಡಿದುಕೊಂಡು, ತಾನೇ ತನ್ನ ಯೋನಿಯಲ್ಲಿ ಹಾಕಿಕೊಳ್ಳಬೇಕು!"*

[೨]

---

* ಅಸ್ಯ ಮಂತ್ರಸ್ಯೋಪರಿ ಮಹೀಧರಸ್ಯ ಪೂರ್ಣಾ ಟೀಕೈವಂ ವರ್ತತೇ_

ಪೂರ್ವಮಂತ್ರಶೇಷಃ ।

ತೌ ತ್ವಮಹಂ ಚ ಉಭೌ ಚತುರಃ ಪದಃ ಪಾದಾನಾವಾಂ ಸಂಪ್ರಸಾರಯಾವ; ತವ ದ್ವೌ ಮಮ ದ್ವೌ ಏವಂ ಸಂವೇಶನಪ್ರಕಾರಃ ।

'ಅಧೀವಾಸೇನ ಪ್ರಚ್ಛಾದಯತಿ ಸ್ವರ್ಗೇ ಲೋಕ ಇತಿ ।'

(ಕಾತ್ಯಾ. ೨೦. ೬. ೧೪)

ಅಧೀವಾಸೇನಾಶ್ವಮಹಿಷ್ಯೌ ಛಾದಯತಿ ।

ಅಥ ಉಪರಿಷ್ಟಾಚ್ಛಾದನಕ್ಷಮಂ ವಾಸೋಽಧೀವಾಸಃ ।

ಅಶ್ವದೇವತ್ಯಮ್_

ಅಧ್ವರ್ಯುರ್ವದತಿ_ 'ಹೇ ಅಶ್ವಮಹಿಷ್ಯೌ! ಯುವಾಂ ಸ್ವರ್ಗೇ ಲೋಕೇಽಸ್ಯಾಂ ಯಜ್ಞಭೂಮೌ ಪ್ರೋರ್ಣುವಾಥಾಂ ವಾಸ ಆಚ್ಛಾದಯತಮ್ ।'

'ಊರ್ಣುಞ್ ಆಚ್ಛಾದನೇ ।'

'ಏಷ ವೈ ಸ್ವರ್ಗೋ ಲೋಕೋ ಯತ್ರ ಪಶುಗ್ಂ ಸಂಜ್ಞಪಯಂತಿ' (೧೩. ೨. ೮. ೫) ಇತಿ ಶ್ರುತೇಃ ।

'ಅಶ್ವಶಿಶ್ನಮುಪಸ್ಥೇ ಕುರುತೇ ವೃಷಾ ವಾಜೀತಿ ।' (ಕಾತ್ಯಾ. ೨೦. ೬. ೧೬)

ಮಹಿಷೀ ಸ್ವಯಮೇವಾಶ್ವಶಿಶ್ನಮಾಕೃಷ್ಯ ಸ್ವಯೋನೌ ಸ್ಥಾಪಯತಿ ।

ಅಶ್ವದೇವತ್ಯಮ್ ।

ವಾಜೀ ಅಶ್ವೋ ರೇತೋ ದಧಾತು, ಮಯಿ ವೀರ್ಯಂ ಸ್ಥಾಪಯತು ।

ಕೀದೃಶೋಽಶ್ವಃ?

ವೃಷಾ ಸೇಕ್ತಾ ರೇತೋಧಾಃ ರೇತೋ ದಧಾತೀತಿ ರೇತೋಧಾಃ ವೀರ್ಯಸ್ಯ ಧಾರಯಿತಾ ॥ ೨೦ ॥

---

* ಈ ಮಂತ್ರದ ಮೇಲೆ ಮಹೀಧರರ ಪೂರ್ಣಟೀಕೆ ಹೀಗಿದೆ_

ಹಿಂದಿನ ಮಂತ್ರದ ಉಳಿದ ಭಾಗ ಹೀಗಿದೆ_

ಅವರಿಬ್ಬರೂ, ಎಂದರೆ, ನೀನು ಮತ್ತು ನಾನು ಇಬ್ಬರೂ_ ನಾಲ್ಕು ಕಾಲುಗಳನ್ನು ನಾವಿಬ್ಬರೂ ಒಟ್ಟಿಗೆ ಸರಿಸೋಣ! ನಿನ್ನದು ಎರಡು, ಮತ್ತು ನನ್ನದು ಎರಡು_ ಹೀಗೆ ಪ್ರವೇಶ ಮಾಡಿಸುವ ರೀತಿ ಇದೆ.

'ಸ್ವರ್ಗಲೋಕದಲ್ಲಿ', ಎಂದು ಹೇಳಿ, ದೊಡ್ಡ ಅಂಗಿಯಿಂದ ಆವರಣ ಹಾಕುತ್ತಾನೆ. [ಕಾತ್ಯಾ. ೨೦. ೬. ೧೪]

ದೊಡ್ಡ ಅಂಗಿಯಿಂದ ಕುದುರೆ ಮತ್ತು ಮಹಿಷಿಯನ್ನು ಹೊದಿಸುತ್ತಾನೆ.

ಕೆಳಗಿನಿಂದ ಮತ್ತು ಮೇಲಿನಿಂದ ಹೊದಿಸಲು ಯೋಗ್ಯವಾದ ಬಟ್ಟೆಗೆ 'ಅಧೀವಾಸ', ಎಂದು ಹೆಸರು.

ಈಗ ಅಶ್ವದೇವತೆಗೆ ಸಂಬಂಧಿಸಲ್ಪಟ್ಟುದು_

ಅಧ್ವರ್ಯು ಹೇಳುತ್ತಾನೆ_ 'ಓ ಅಶ್ವ ಮತ್ತು ಮಹಿಷಿ! ನೀವಿಬ್ಬರೂ ಸ್ವರ್ಗಲೋಕವೆಂಬ ಈ ಯಜ್ಞಭೂಮಿಯಲ್ಲಿ ಬಟ್ಟೆ ಹೊದ್ದುಕೊಂಡಿರಿ!'

'ಆಚ್ಛಾದನೆಯ ಅರ್ಥದಲ್ಲಿ 'ಊರ್ಣುಞ್', ಎಂಬ ಧಾತುವಿದೆ.

'ಎಲ್ಲಿ ಪಶುವನ್ನು ಕೊಲ್ಲುತ್ತಾರೋ, ಅದೇ ಸ್ವರ್ಗಲೋಕ,' ಎಂದು ಶ್ರುತಿಯ ([ಶತಪಥಬ್ರಾಹ್ಮಣ:] ೧೩. ೨. ೮. ೫) ಹೇಳಿಕೆ ಇದೆ.

'ಅಶ್ವಶಿಶ್ನವನ್ನು ಉಪಸ್ಥದಲ್ಲಿ ಇಟ್ಟುಕೊಳ್ಳುತ್ತಾಳೆ, 'ವೃಷಾ ವಾಜೀ', ಎಂದು ಹೇಳಿ.' [ಕಾತ್ಯಾ. ೨೦. ೬. ೧೬]

ಮಹಿಷಿಯು ತಾನೇ ಅಶ್ವದ ಶಿಶ್ನವನ್ನು ಎಳೆದುಕೊಂಡು, ತನ್ನ ಯೋನಿಯಲ್ಲಿ ಇಟ್ಟುಕೊಳ್ಳುತ್ತಾಳೆ.

ಇದು ಅಶ್ವದೇವತೆಗೆ ಸಂಬಂಧಿಸಿರುದು!

'ವಾಜೀ, ಎಂದರೆ ಅಶ್ವವು ನನ್ನಲ್ಲಿ ವೀರ್ಯವನ್ನು ಸ್ಥಾಪಿಸಲಿ!

ಅಶ್ವ, ಎಂತಹುದು? ಎಂದರೆ_

'ವೃಷಾ', ಎಂದರೆ ಸೇಚನೆ ಮಾಡುವಂತಹುದು. 'ರೇತೋಧಾಃ!', ಎಂದರೆ ರೇತಸ್ಸನ್ನು ಧರಿಸಿರುವುದು 'ರೇತೋಧಾಃ!' ಎಂದರೆ, ವೀರ್ಯದ ಧಾರಣೆ ಮಾಡಿಕೊಂಡಿರುವುದು. [೨೦]

ಈ ಮಂತ್ರಕ್ಕೆ ಶತಪಥಬ್ರಾಹ್ಮಣದಲ್ಲಿ ಸತ್ಯಾರ್ಥ

ಸತ್ಯೋऽರ್ಥಃ_

ಸತ್ಯವಾದ ಅರ್ಥವೇನೆಂದರೆ_

" ತಾ ಉಭೌ ಚತುರಃ ಪದಃ ಸಂಪ್ರಸಾರಯಾವೇತಿ।' ಮಿಥುನಸ್ಯಾ-ವರುಧ್ಯೈ ।

" 'ಸ್ವರ್ಗೇ ಲೋಕೇ ಪ್ರೋರ್ಣುವಾಥಾಮಿತಿ' । ಏಷ ವಾ ಸ್ವರ್ಗೋ ಲೋಕೋ ಯತ್ರ ಪಶುಗ್ಂ ಸಂಜ್ಞಪಯಂತಿ ।

" ತಸ್ಮಾದೇವಮಾಹ_ 'ವೃಷಾ ವಾಜೀ ರೇತೋಧಾ ರೇತೋ ದಧಾತ್ವಿತಿ ।' ಮಿಥುನಸ್ಯೈವಾವರುಧ್ಯೈ ॥"

[ಶತಪಥಬ್ರಾಹ್ಮಣೇ ಕಾಂ. ೧೩, ಅ. ೨, ಬ್ರಾ. ೮, ಕಂ. ೫]

[ಅರ್ಥ:_ " ನಾವಿಬ್ಬರೂ ನಾಲ್ಕು ಪದಗಳನ್ನು ವಿಸ್ತರಿಸೋಣ!', ಎಂದರೆ ಜೋಡಿಯನ್ನು ಕೂಡಿಸಿಡುವುದಕ್ಕಾಗಿ!

" 'ಸ್ವರ್ಗ, ಎಂಬ ಲೋಕದಲ್ಲಿ ವಾಸಿಸೋಣ!', ಎಂದರೆ ಎಲ್ಲಿ ಪಶುವನ್ನು ಕೊಲ್ಲುತ್ತಾರೋ, ಅದೇ ನಿಜವಾಗಿ ಸ್ವರ್ಗ, ಎಂಬ ಲೋಕವಿರುತ್ತದೆ.

" ಆದುದರಿಂದ, ಹೇಗೆ ಹೇಳಲಾಗಿದೆಯೆಂದರೆ_ 'ವರ್ಷಣಶೀಲನೂ, ವೇಗವಂತನೂ, ರೇತಸ್ಸನ್ನು ಧರಿಸುವವನೂ ರೇತಸ್ಸನ್ನು ಧಾರಣ ಮಾಡಲಿ!', ಎಂದರೆ, ಜೋಡಿಯನ್ನೇ ಕೂಡಿಸಿಡುವುದಕ್ಕಾಗಿ!"

(ಶತಪಥಬ್ರಾಹ್ಮಣ: ೧೩. ೨. ೮. ೫)]

ರಾಜಾ-ಪ್ರಜೆಗಳು ಕೂಡಿಯೇ, ಸುಖವನ್ನು ವಿಸ್ತರಿಸಬೇಕು!

ಭಾಷ್ಯಮ್_

(ತಾ ಉಭೌ.) ಆವಾಂ ರಾಜಪ್ರಜೇ ಧರ್ಮಾರ್ಥ-ಕಾಮಮೋಕ್ಷಾನ್ ಚತುರಃ ಪದಾನಿ ಸದೈವ ಮಿಲಿತೇ ಭೂತ್ವಾ ಸಮ್ಯಕ್ ವಿಸ್ತಾರಯೇವಹಿ.

ಭಾಷ್ಯ_

(ತಾ ಉಭೌ.) ರಾಜಾ-ಪ್ರಜೆ* ಆದ ನಾವಿಬ್ಬರೂ ಧರ್ಮ, ಅರ್ಥ, ಕಾಮ, ಮೋಕ್ಷ, ಎಂಬ ನಾಲ್ಕು ಪದಗಳನ್ನು ಯಾವಾಗಲೂ ಕೂಡಿಕೊಂಡೇ ಇದ್ದು, ಚೆನ್ನಾಗಿ ವಿಸ್ತರಿಸೋಣ!

* ಈ ಮಂತ್ರದ ದೇವತೆ = ವಿಷಯವೇ ರಾಜ-ಪ್ರಜೆ! ಮಹೀಧರರು ಇದರ ಬಗ್ಗೆ ಗಮನ ಕೊಡಲಿಲ್ಲ! _ಅನು.

ಅಂದರೆ, ರಾಜಾ ಮತ್ತು ಪ್ರಜೆ ಆದ ನಾವಿಬ್ಬರೂ ಕೂಡಿ, ಧರ್ಮ, ಅರ್ಥ, ಕಾಮ ಮತ್ತು ಮೋಕ್ಷಗಳ ಸಿದ್ಧಿಯ ಪ್ರಚಾರ ಮಾಡುವುದರಲ್ಲಿ ಪ್ರವೃತ್ತರಾಗಿ ಇರೋಣ!

ಕಸ್ಮೈ ಪ್ರಯೋಜನಾಯೇತ್ಯತ್ರಾಹ_

ಯಾವ ಪ್ರಯೋಜನಕ್ಕಾಗಿ? ಎಂಬುದಕ್ಕೆ ಇಲ್ಲಿ ಉತ್ತರವನ್ನು ಹೇಳಲಾಗಿದೆಯೇನೆಂದರೆ_

ಸ್ವರ್ಗೇ ಸುಖವಿಶೇಷೇ ಲೋಕೇ ದ್ರಷ್ಟವ್ಯೇ ಭೋಕ್ತವ್ಯೇ ;

(ಸ್ವರ್ಗೇ) ಎಂದರೆ, ಸುಖವಿಶೇಷವನ್ನು (ಲೋಕೇ) ಎಂದರೆ, ನೋಡುವುದಕ್ಕೆ ಯೋಗ್ಯವಾದುದರಲ್ಲಿ; ಎಂದರೆ, ಭೋಗಿಸಲು ಯೋಗ್ಯವಾದುದರಲ್ಲಿ;

ಪ್ರಿಯಾನಂದಸ್ಯ ಸ್ಥಿರತ್ವಾಯ ;

[ಮತ್ತು] ಪ್ರಿಯವಾದ ಆನಂದದ ಸ್ಥಿರತ್ವಕ್ಕಾಗಿ ;

ಅಂದರೆ, ಅತ್ಯಂತ ಸುಖರೂಪ ಸ್ವರ್ಗದಲ್ಲಿ ಇಬ್ಬರಿಗೂ ಪ್ರಿಯವಾದ ಆನಂದದ ಸ್ಥಿತಿಗಾಗಿ ;

ಯೇನ ಸರ್ವಾನ್ ಪ್ರಾಣಿನಃ ಸುಖೈರಾಚ್ಛಾದಯೇವಹಿ.

ಇದರಿಂದ, ಎಲ್ಲಾ ಪ್ರಾಣಿಗಳನ್ನೂ ಸುಖಗಳಿಂದ ಹೊದಿಸಿಬಿಡೋಣ!

ಅಂದರೆ, ಇದರಿಂದ ನಾವಿಬ್ಬರೂ ಪರಸ್ಪರವಾಗಿಯೂ, ಹಾಗೂ ಎಲ್ಲಾ ಪ್ರಾಣಿಗಳನ್ನೂ ಸುಖದಿಂದ ಪರಿಪೂರ್ಣರನ್ನಾಗಿಯೂ ಮಾಡಿಬಿಡೋಣ!

ಯಾವ ರಾಜ್ಯದಲ್ಲಿ ಮನುಷ್ಯರು ಈಶ್ವರನನ್ನು* ಚೆನ್ನಾಗಿ ತಿಳಿದಿರುತ್ತಾರೋ, ಆ ದೇಶವೇ ಸುಖದಿಂದ ಕೂಡಿರುತ್ತದೆ.

ದೇಶದ ಸುಖಕ್ಕಾಗಿ ದುಷ್ಟರಿಗೆ ಶಿಕ್ಷೆ-ಶಿಕ್ಷಣ ಆವಶ್ಯಕ!

ಯಸ್ಮಿನ್ ರಾಜ್ಯೇ ಪಶುಂ ಪಶುಸ್ವಭಾವಮನ್ಯಾಯೇನ ಪರಪದಾರ್ಥಾನಾಂ ದ್ರಷ್ಟಾರಂ ಜೀವಂ ;

ಯಾವ ರಾಜ್ಯದಲ್ಲಿ 'ಪಶುವನ್ನು', ಎಂದರೆ ಪಶುಸ್ವಭಾವವನ್ನುಳ್ಳವನನ್ನು, ಎಂದರೆ ಅನ್ಯಾಯದಿಂದ ಪರರ ಪದಾರ್ಥಗಳನ್ನು ನೋಡುವ ಜೀವನನ್ನು ;

ವಿದ್ಯೋಪದೇಶದಂಡದಾನೇನ ಸಮ್ಯಗವಬೋಧಯಂತಿ ;

ವಿದ್ಯೆಯ ಉಪದೇಶ, ಹಾಗೂ ದಂಡ ಕೊಡುವುದರ ಮೂಲಕ ಚೆನ್ನಾಗಿ ತಿಳಿವಳಿಕೆಯನ್ನುಳ್ಳವನನ್ನಾಗಿ ಮಾಡುತ್ತಾರೋ ;

ಸೈಷ ಏವ ಸುಖಯುಕ್ತೋ ದೇಶೋ ಹಿ ಸ್ವರ್ಗೋ ಭವತಿ.

ಆ ಸುಖದಿಂದ ಯುಕ್ತವಾಗಿರುವ ದೇಶವೇ ನಿಶ್ಚಯವಾಗಿ 'ಸ್ವರ್ಗ'ವಾಗಿರುತ್ತದೆ!

* ಇಲ್ಲಿ 'ಈಶ್ವರನನ್ನು', ಎಂದರೆ ರಾಜನನ್ನು, ಎಂಬ ಅಭಿಪ್ರಾಯವು ಸೂಕ್ತವಾಗಿದೆ _ಅನು.

ತಸ್ಮಾತ್ ಕಾರಣಾದುಭಯಸ್ಯ ಸುಖಾಯೋ-ಭಯೇ ವಿದ್ಯಾದಿಸದ್ಗುಣಾನಾಮಭಿವರ್ಷಕಂ ವಾಜಿನಂ ವಿಜ್ಞಾನವಂತಂ ಜನಂ ಪ್ರತಿ ವಿದ್ಯಾಬಲೇ ಸತತಮೇವ ದಧತ್ವಿತ್ಯಾಹಾಯಂ ಮಂತ್ರಃ ॥ ೨ ॥

ಈ ಕಾರಣದಿಂದ, ಇಬ್ಬರ ಸುಖಕ್ಕಾಗಿ ಇಬ್ಬರೂ, ವಿದ್ಯಾದಿಸದ್ಗುಣಗಳ ಅಭಿವರ್ಷಕನೂ, ವಿಜ್ಞಾನವಂತನೂ ಆದ ಮನುಷ್ಯನ ಪ್ರತಿ ವಿದ್ಯೆ ಮತ್ತು ಬಲಗಳನ್ನು ನಿರಂತರವಾಗಿ ಧಾರಣ ಮಾಡಿಕೊಂಡಿರಬೇಕು, ಎಂದು ಹೇಳುತ್ತಿದೆ ಈ ಮಂತ್ರ!

ಅಂದರೆ, ರಾಜಾ ಮತ್ತು ಪ್ರಜೆಗಳು ಪರಸ್ಪರರ ಸುಖಕ್ಕಾಗಿ ಸದ್ಗುಣಗಳ ಉಪದೇಶಕನಾದ ಪುರುಷನ ಸೇವೆಯನ್ನು ಯಾವಾಗಲೂ ಮಾಡುತ್ತಿರಬೇಕು! ಮತ್ತು ವಿದ್ಯೆ, ಹಾಗೂ ಬಲವನ್ನೂ ಯಾವಾಗಲೂ ವರ್ಧಿಸಬೇಕು!

ಈ ಅರ್ಥವನ್ನು ಹೇಳುವಂತಹುದು "ತಾ ಉಭೌ", ಎಂಬ ಈ ಮಂತ್ರವಾಗಿದೆ.

ಈ ಅರ್ಥಕ್ಕೆ ಮಹೀಧರರ ಅರ್ಥವು ಅತ್ಯಂತ ವಿರುದ್ಧವಾಗಿದೆ! [೨]

(೩) ಸ್ತ್ರೀಪೀಡಕನಿಗೆ ಶಿಕ್ಷೆ ವಿಧಿಸಬೇಕು!

[ಋಷಿಃ_ ಪ್ರಜಾಪತಿಃ ; ದೇವತಾ_ ನ್ಯಾಯಾಧೀಶಃ ; ಛಂದಃ_ ಭುರಿಗ್ ಗಾಯತ್ರೀ ; ಸ್ವರಃ_ ಷಡ್ಜಃ]

ಉತ್ಸಕ್ಥ್ಯಾ ಅವ ಗುದಂ ಧೇಹಿ ಸಮಂಜಿಂ ಚಾರಯಾ ವೃಷನ್ ।

ಯ ಸ್ತ್ರೀಣಾಂ ಜೀವಭೋಜನಃ ॥ ೩ ॥

[ಯಜುರ್ವೇದೇ ಅ. ೨೩, ಮಂ. ೨೧]*

[ಅರ್ಥ:_ "ಹೇ ಶಕ್ತಿಮಂತನೇ! ಯಾವನು ಸ್ತ್ರೀಯರ ಜೀವನವನ್ನು ಭಕ್ಷಿಸುವವನಾಗಿರುತ್ತಾನೋ, ಅವನನ್ನು, ತೊಡೆಯು ಮೇಲೆ, ಹಾಗೂ ಗುದಾ ಕೆಳಗೆ ಇರುವಂತೆ ಮಾಡಿ, ನೇತು ಹಾಕು! ಇದನ್ನು ಚೆನ್ನಾಗಿ ಪ್ರಸಿದ್ಧಪಡಿಸು!"

(ಯಜುರ್ವೇದಃ ೨೩. ೨೧)]*

---

* ಗ್ರಂಥಕರ್ತರು ೨೧ ನೆಯ ಈ ಮಂತ್ರದ ವಿವೇಚನೆಯನ್ನು ೩೧ ನೆಯ ಮಂತ್ರದ ನಂತರ, ಮಾಡಿದ್ದಾರೆ. ಏಕೆಂದರೆ, ಇಲ್ಲಿ 'ರಾಜ-ಪ್ರಜಾ' ಪ್ರಕರಣ ನಡೆಯುತ್ತಿದೆ. ೨೧ ನೆಯ ಮಂತ್ರದ ದೇವತಾ_ 'ನ್ಯಾಯಾಧೀಶ' ಆಗಿದೆ. ಆದರೆ, ನಾವು ಮಹೀಧರಭಾಷ್ಯದ ಕ್ರಮವನ್ನು ತೋರಿಸುವುದಕ್ಕಾಗಿಯೂ ಮತ್ತು ಸಂಹಿತಾಮಂತ್ರಗಳ ಕ್ರಮವನ್ನು ಅನುಸರಿಸುವುದಕ್ಕಾಗಿಯೂ, ಈ ಗ್ರಂಥದ ಕ್ರಮವನ್ನು ತಪ್ಪಿಸಿ, ಕ್ರಮಪರಿವರ್ತನೆ ಮಾಡಿದ್ದೇವೆ. _ಅನು.

ಇದಕ್ಕೆ ಮಹೀಧರರ ಅಶ್ಲೀಲಾರ್ಥ_ 'ಅಶ್ವಕ್ಕೆ ನಿರ್ದೇಶ'

ಈ ಮಂತ್ರದ ಮೇಲೆ ಮಹೀಧರರು ಟೀಕೆಯನ್ನು ಬರೆದಿದ್ದಾರೆ.

ಮಹೀಧರಸ್ಯಾರ್ಥಃ_

ಯಜಮಾನೋಽಶ್ವಮಭಿಮಂತ್ರಯತೇ _

ಹೇ ವೃಷನ್! ಸೇಕ್ತಃ ಅಶ್ವ!

ಉತ್ ಊರ್ಧ್ವೇ ಸಕ್ಥಿನೀ ಊರೂ ಯಸ್ಯಾಸ್ತಸ್ಯಾ ಮಹಿಷ್ಯಾ ಗುದಮವ ಗುದೋಪರಿ ರೇತೋ ಧೇಹಿ ವೀರ್ಯ್ಯಂ ಧಾರಯ।

ಕಥಮ್? ತದಾಹ_

ಅಂಜಿಂ ಲಿಂಗಂ ಸಂಚಾರಯ ಯೋನೌ ಪ್ರವೇಶಯ।

ಯೋಽಂಜಿಃ ಸ್ತ್ರೀಣಾಂ ಜೀವಭೋಜನಃ।

ಯಸ್ಮಿನ್ ಲಿಂಗೇ ಯೋನೌ ಪ್ರವಿಷ್ಟೇ ಸ್ತ್ರಿಯೋ ಜೀವಂತಿ, ಭೋಗಾಂಶ್ಚ ಲಭಂತೇ, ತಂ ಪ್ರವೇಶಯ ॥ ೭ ॥*

ಮಹೀಧರರ ಅರ್ಥವೇನೆಂದರೆ_

ಯಜಮಾನನು ಅಶ್ವವನ್ನು ಕರೆದು ಹೇಳುತ್ತಾನೆ_

'ಓ ವೃಷ! ವೀರ್ಯದ ಸೇಚನೆ ಮಾಡುವ ಅಶ್ವ!

ಯಾವಳ ತೊಡೆಗಳು ಮೇಲಕ್ಕೆ ಇವೆಯೋ, ಆ ಮಹಿಷಿಯ ಗುದದ ಮೇಲು ಭಾಗದಲ್ಲಿ ವೀರ್ಯವನ್ನು ಇಡು.

ಅಂದರೆ, ನೀನು ನನ್ನ ಪತ್ನಿಯ ತೊಡೆಗಳನ್ನು ಮೇಲೆತ್ತಿ, ಅವಳ ಗುದದ ಮೇಲೆ ವೀರ್ಯವನ್ನು ಹಾಕಿಬಿಡು.

ಹೇಗೆ? ಅದಕ್ಕೆ [ಉತ್ತರ] ಹೇಳಲಾಗಿದೆಯೇನೆಂದರೆ_

ಲಿಂಗವನ್ನು ಚಲಾಯಿಸು, ಎಂದರೆ ಅವಳ ಯೋನಿಯಲ್ಲಿ ಪ್ರವೇಶಮಾಡಿಸು.

ಆ ಲಿಂಗವು ಯಾವ ರೀತಿಯದಾಗಿದೆಯೆಂದರೆ_

ಆ ಲಿಂಗವು ಸ್ತ್ರೀಯರ ಜೀವನದ ಭೋಜನವಾಗಿದೆ!

ಯಾವ ಲಿಂಗವು ಯೋನಿಯಲ್ಲಿ ಪ್ರವಿಷ್ಟವಾದಾಗ, ಸ್ತ್ರೀಯರು ಜೀವಿಸುತ್ತಾರೋ, ಮತ್ತು ಭೋಗಗಳನ್ನು ಪಡೆಯುತ್ತಾರೋ, ಅದನ್ನು ಪ್ರವೇಶಮಾಡಿಸು.

ಅಂದರೆ, ಯಾವ ಸಮಯದಲ್ಲಿ [ಲಿಂಗವು] ಯೋನಿಯೊಳಗೆ ಹೋಗುತ್ತದೋ, ಆ ಸಮಯದಲ್ಲಿ ಅದೇ ಲಿಂಗದಿಂದ ಸ್ತ್ರೀಯರ ಜೀವನವಾಗುತ್ತದೆ. ಮತ್ತು ಅದರಿಂದಲೇ ಅವರು ಭೋಗಗಳನ್ನು ಹೊಂದುತ್ತಾರೆ.

ಆದುದರಿಂದ, ನೀನು ಆ ಲಿಂಗವನ್ನು ನನ್ನ ಪತ್ನಿಯ ಯೋನಿಯಲ್ಲಿ ಹಾಕಿಬಿಡು!* [೭]

---

* ಅಸ್ಯ ಮಂತ್ರಸ್ಯೋಪರಿ ಮಹೀಧರಕೃತಾ ಪೂರ್ಣಾ ಟೀಕೈವಂ ವರ್ತತೇ_

'ಉತ್‌ಸಕ್‌ಥ್ಯಾ' ಇತ್ಯಶ್ವಂ ಯಜಮಾನೋಽಭಿಮಂತ್ರಯತೇ। [ಕಾತ್ಯಾ. ೨೦. ೬. ೧೭]

ಅಶ್ವದೇವತ್ಯಾ ಗಾಯತ್ರೀ।

'ಹೇ ವೃಷನ್, ಸೇಕ್ತಃ ಅಶ್ವ! ಮಹಿಷ್ಯಾ ಗುದಮವ ಗುದೋಪರಿ ರೇತೋ ಧೇಹಿ ವೀರ್ಯಂ ಧಾರಯ।

ಕೀದೃಶ್ಯಾಃ?

ಉತ್‌ಸಕ್‌ಥ್ಯಾಃ ಉತ್ ಊರ್ಧ್ವೇ ಸಕ್ಥಿನೀ ಊರೂ ಯಸ್ಯಾಃ ಸಾ ಉತ್‌ಸಕ್ಥಿ, ತಸ್ಯಾಃ।

ಕಥಂ? ತದಾಹ_

ಅಂಜಿಂ ಲಿಂಗಂ ಸಂಚಾರಯ।

ಅನಕ್ತಿ ವ್ಯನಕ್ತಿ ಪುಂಸ್ತ್ವಮಿತ್ಯಂಜಿರ್ಲಿಂಗಮ್। →

* ಈ ಮಂತ್ರದ ಮೇಲೆ ಮಹೀಧರರ ಪೂರ್ತಿ ಟೀಕೆಯು ಹೀಗಿದೆ_

'ಉತ್‌ಸಕ್‌ಥ್ಯಾ', ಎಂದು ಹೇಳಲಾಗಿದೆ. ಯಜಮಾನನು ಅಶ್ವವನ್ನು ಕರೆದು ಹೇಳುತ್ತಾನೆ. [ಕಾತ್ಯಾ. ೨೦. ೬. ೧೭]

ಇದು ಅಶ್ವದೇವತೆಗೆ ಸಂಬಂಧಿಸಿದ ಗಾಯತ್ರೀಛಂದಸ್ಸಿನಲ್ಲಿದೆ.

'ಓ ವೃಷ! ಸೇಚನೆ ಮಾಡುವ ಅಶ್ವ! ಮಹಿಷಿಯ ಗುದದ ಮೇಲೆ ವೀರ್ಯವನ್ನು ಹಾಕು.

ಎಂತಹವಳ? ಎಂದರೆ_

ಯಾವಳ ತೊಡೆಗಳು ಮೇಲಕ್ಕಿವೆಯೋ, ಅವಳು **ಉತ್‌ಸಕ್‌ಥೀ**, ಅಂತಹವಳ!

ಹೇಗೆ? ಅದಕ್ಕೆ ಉತ್ತರವೇನೆಂದರೆ_

'ಅಂಜಿ', ಎಂದರೆ ಲಿಂಗವನ್ನು ಚಲಾಯಿಸು!

ಪುರುಷನದು ಚಲಿಸುತ್ತದೆ, ವಿಶೇಷವಾಗಿ ಚಲಿಸುತ್ತದೆ, ಎಂಬುದು **ಅಂಜಿ**, ಎಂದರೆ ಲಿಂಗ! →

ದುಷ್ಟ ಸ್ತ್ರೀ-ಪುರುಷರಿಗೆ ತಾಡನೆ-ಮರಣದಂಡನೆ

ಅಥ ಸತ್ಯೋಽರ್ಥಃ_*

(**ಉತ್‌ಸಕ್‌ಥ್ಯಾ**) ಹೇ ವೃಷನ್ ಸರ್ವ-ಕಾಮಾನಾಂ ವರ್ಷಯಿತಃ ಪ್ರಾಪಕ ಸಸಭಾಧ್ಯಕ್ಷ-ವಿದ್ವನ್!

ತ್ವಮಸ್ಯಾಂ ಪ್ರಜಾಯಾಮಂಜಿಂ ಜ್ಞಾನಸುಖ-ನ್ಯಾಯಪ್ರಕಾಶಂ ಸಂಚಾರಯ, ಸಮ್ಯಕ್ ಪ್ರಕಾಶಯ.

(**ಯಃ ಸ್ತ್ರೀಣಾಂ ಜೀವಭೋಜನಃ**) [ಯಃ] ಕಾಮುಕಃ ಸನ್ ನಾಶಮಾಚರತಿ ;

ತಂ ತ್ವಮವಗುದಮಧಃಶಿರಸಂ ಕೃತ್ವಾ ತಾಡಯಿತ್ವಾ ಕಾರಾಗೃಹೇ ಧೇಹಿ.

ಯಥಾ ಸ್ತ್ರೀಣಾಂ ಮಧ್ಯೇ ಯಾ ಕಾಚಿತ್ ಉತ್‌ಸಕ್ಥೀ ವ್ಯಭಿಚಾರಿಣೀ ಸ್ತ್ರೀ ಭವತಿ ತಸ್ಯೈ ಸಮ್ಯಗ್ ದಂಡಂ ದಧಾತಿ ;

ತಥೈವ ತ್ವಂ ತಂ ಜೀವಭೋಜನಂ ಪರಪ್ರಾಣ-ನಾಶಕಂ ದುಷ್ಟಂ ದಸ್ಯುಂ ದಂಡೇನ ಸಮುಚ್ಚಾರಯ

॥ ೩ ॥

→ ಲಿಂಗಂ ಯೋನೌ ಪ್ರವೇಶಯ ।
'ಯೋಽಂಜಿಃ ಸ್ತ್ರೀಣಾಂ ಜೀವಭೋಜನಃ ।'
ಜೀವಯತಿ ಜೀವಃ ; ಭೋಜಯತಿ ಭೋಜನಃ ।
ಜೀವಶ್ಚಾಸೌ ಭೋಜನಶ್ಚ ಜೀವಭೋಜನಃ ।
ಯಸ್ಮಿನ್ ಲಿಂಗೇ ಯೋನೌ ಪ್ರವಿಷ್ಟೇ ಸ್ತ್ರಿಯೋ ಜೀವಂತಿ ಭೋಗಾಂಶ್ಚ ಲಭಂತೇ ತಂ ಪ್ರವೇಶಯ ॥ ೨೧ ॥

* ಅಸ್ಯ ಮಂತ್ರಸ್ಯ ಶತಪಥಬ್ರಾಹ್ಮಣೋಕ್ತಂ ವ್ಯಾಖ್ಯಾನಂ ನಾಸ್ತಿ! _ಅನು.

ಈಗ ಸತ್ಯವಾದ ಅರ್ಥವೇನೆಂದರೆ_*

ಪರಮೇಶ್ವರನು ಹೇಳುತ್ತಾನೇನೆಂದರೆ_

(**ಉತ್‌ಸಕ್‌ಥ್ಯಾ**) ಹೇ ವೃಷನ್ ; ಎಂದರೆ, ಎಲ್ಲಾ ಕಾಮನೆಗಳ, ಮಳೆ ಸುರಿಸುವವನೂ, ಪ್ರಾಪ್ತಿ ಮಾಡಿಸುವವನೂ, ಹಾಗೂ ಸಭಾಧ್ಯಕ್ಷಸಹಿತನೂ ಆದ ವಿದ್ವಾಂಸನೇ!

ನೀನು ಈ ಪ್ರಜೆಗಳಲ್ಲಿ (**ಅಂಜಿಮ್**) ಜ್ಞಾನದ ಸುಖವನ್ನೂ, ಹಾಗೂ ನ್ಯಾಯದ ಪ್ರಕಾಶವನ್ನೂ (**ಸಂಚಾರಯ**) ಚೆನ್ನಾಗಿ ಪ್ರಕಟಮಾಡು!

ಅಂದರೆ, ಓ ವಿದ್ವಾಂಸರೇ! ನೀವೆಲ್ಲರೂ ಒಂದು ಸಂಮತಿಯುಕ್ತರಾಗಿ, ಈ ಪ್ರಜೆಗಳಲ್ಲಿ ಜ್ಞಾನವನ್ನು ವರ್ಧಿಸಿ, ನ್ಯಾಯಪೂರ್ವಕವಾಗಿ ಎಲ್ಲರಿಗೂ ಸುಖವನ್ನು ಕೊಡುತ್ತಿರಿ!

(**ಯಃ ಸ್ತ್ರೀಣಾಂ ಜೀವಭೋಜನಃ**) ಯಾವನು ಕಾಮುಕನಾಗಿದ್ದು, ಸ್ತ್ರೀಯರ ನಾಶ ಮಾಡುತ್ತಾನೋ ;

ಅವನನ್ನು ನೀನು (**ಅವಗುದಮ್**) ತಲೆಯನ್ನು ಕೆಳಗಿರುವಂತೆ ಮಾಡಿ, ಹೊಡೆದು, ಕಾರಾಗೃಹದಲ್ಲಿ (**ಧೇಹಿ**) ಹಾಕು!

ಹೇಗೆ ಸ್ತ್ರೀಯರ ಮಧ್ಯೆ ಯಾವಳಾದರೂ '**ಉತ್‌ಸಕ್ಥೀ**', ಎಂದರೆ ವ್ಯಭಿಚಾರಿಣಿಸ್ತ್ರೀ ಇರುತ್ತಾಳಾದರೆ, ಅವಳಿಗೆ ಚೆನ್ನಾಗಿ ದಂಡವನ್ನು ವಿಧಿಸುತ್ತಾರೋ ;

ಹಾಗೆಯೇ, ನೀನು ಆ '**ಜೀವಭೋಜನ**'ನನ್ನು ಎಂದರೆ, ಇತರರ ಪ್ರಾಣನಾಶಕನಾದ ದುಷ್ಟದಸ್ಯುವನ್ನು ದಂಡದಿಂದ ಚೆನ್ನಾಗಿ ಹೊಡೆದೋಡಿಸು!

→ ಲಿಂಗವನ್ನು ಯೋನಿಯಲ್ಲಿ ಪ್ರವೇಶ ಮಾಡಿಸು!
'ಯಾವ ಅಂಜಿಯು ಸ್ತ್ರೀಯರ ಜೀವನದ ಭೋಜನವಾಗಿದೆಯೋ!'
ಜೀವಿಸುವುದು ಜೀವ; ಭೋಗ ಮಾಡಿಸುವುದು ಭೋಜನ!
ಜೀವವೂ ಮತ್ತು ಭೋಜನವೂ ಸೇರಿ, ಜೀವಭೋಜನ!
ಯಾವ ಲಿಂಗವು ಯೋನಿಯಲ್ಲಿ ಪ್ರವೇಶಿಸಿದಾಗ, ಸ್ತ್ರೀಯರು ಜೀವಿಸುತ್ತಾರೋ ಮತ್ತು ಭೋಗಗಳನ್ನು ಪಡೆಯುತ್ತಾರೋ, ಅದನ್ನು ಪ್ರವೇಶ ಮಾಡಿಸು. [೨೧]

* ಈ ಮಂತ್ರಕ್ಕೆ ಶತಪಥಬ್ರಾಹ್ಮಣದಲ್ಲಿ ವ್ಯಾಖ್ಯಾನವಿಲ್ಲ! _ಅನು.

ಅಂದರೆ, ಯಾವನಾದರೂ ದುಷ್ಟನು, ಎಂದರೆ, ಜೀವಭೋಜನಃ = ಸ್ತ್ರೀಯರಲ್ಲಿ ವ್ಯಭಿಚಾರ ಮಾಡುವವನೂ, ಕಳ್ಳರಲ್ಲಿ ಕಳ್ಳನೂ, ಠಕ್ಕರಲ್ಲಿ ಠಕ್ಕನೂ, ದರೋಡೆಕೋರರಲ್ಲಿ ಪ್ರಸಿದ್ಧ ದರೋಡೆಕೋರನೂ, ಇತರರಿಗೆ ಕೆಟ್ಟ ಕೆಲಸಗಳನ್ನು ಕಲಿಸುವವನೂ ಮೊದಲಾದ ದೋಷಗಳಿಂದ ಯುಕ್ತನೂ ಆದ ಪುರುಷನನ್ನೂ, ಹಾಗೂ ವ್ಯಭಿಚಾರವೇ ಮೊದಲಾದ ದೋಷಗಳಿಂದ ಯುಕ್ತಳೂ ಆದ ಸ್ತ್ರೀಯನ್ನೂ, ಮೇಲೆ ಕಾಲುಗಳು ಮತ್ತು ಕೆಳಗೆ ತಲೆ ಇರುವಂತೆ ಮಾಡಿ, ನೇತಾಡಿಬಿಡಬೇಕು!

ಎಂದರೆ, ಈ ಮೊದಲಾದ ದುರ್ದಶೆಯನ್ನು ಮಾಡಿ ಕೊಂದುಬಿಡಬೇಕು! *

ಏಕೆಂದರೆ, ಇದರಿಂದ ಪ್ರಜೆಗಳಲ್ಲಿ ಅತ್ಯಂತ ಸುಖದ ಲಾಭ ಉಂಟಾಗುತ್ತದೆ! [೩]

(೪) ಪತಿದ್ರೋಹಿಣಿಗೆ ಹೊಡೆತ!

[ಋಷಿಃ_ ಪ್ರಜಾಪತಿಃ ; ದೇವತಾ_ ರಾಜಪ್ರಜೇ ; ಛಂದಃ_ ವಿರಾಡನುಷ್ಟುಪ್ ; ಸ್ವರಃ_ ಗಾಂಧಾರಃ]

ಯಕಾಸಕೌ ಶಕುಂತಿಕಾಹಲಗಿತಿ ವಂಚತಿ ।
ಆಹಂತಿ ಗಭೇ ಪಸೋ ನಿಗಲ್ಗಲೀತಿ ಧಾರಕಾ ॥ ೪ ॥

[ಯಜುರ್ವೇದೇ ಅ. ೨೩, ಮಂ. ೨೨]

[ಅರ್ಥ:_ "ಯಾವಳಾದರೂ ಸಣ್ಣ ಪಕ್ಷಿಯಂತೆ ಶಬ್ದ ಮಾಡುತ್ತಾ, ದಾರಿ ತಪ್ಪಿಸಿ, ವಂಚಿಸುತ್ತಾಳೋ, (ಅವಳನ್ನು,) ಸ್ಪರ್ಶಿಸುವ ಧಾರಕನಾದ (ಪತಿಯು) ಹಗಲಿನಲ್ಲಿಯೇ ಕಕ್ಕಿಬಿಡುವಂತೆ** ತಾಡನೆ ಮಾಡುತ್ತಾನೆ!"

(ಯಜುರ್ವೇದ: ೨೩. ೨೨)]

---

* ವ್ಯಭಿಚಾರಿಗಳಿಗೆ ಈ ತರಹದ ಕಠೋರದಂಡವು ಮನುಸ್ಮೃತಿಯಲ್ಲಿ (೮. ೩೭೧-೩೭೨) ವಿಧಿಸಲ್ಪಟ್ಟಿದೆ. ಸತ್ಯಾರ್ಥಪ್ರಕಾಶ, ಷಷ್ಠ ಸಮುಲ್ಲಾಸ ಪುಟ ೩೧೪-೩೧೫ ನ್ನು ನೋಡಿ! _ಅನು.

** ಎಂದರೆ, ನಾಶ ಮಾಡುವಂತೆ _ಅನು.

ಮಹೀಧರರ ಅಶ್ಲೀಲಾರ್ಥ_ 'ಅಧ್ವರ್ಯು ಮಾಡುವ ಹಾಸ್ಯ!'

ಮಹೀಧರೋ ವದತಿ_*

ಅಧ್ವರ್ಯ್ವಾದಯಃ ಕುಮಾರೀಪತ್ನೀಭಿಃ ಸಹ ಸೋಪಹಾಸಂ ಸಂವದಂತೇ ।

ಅಂಗುಲ್ಯಾ ಯೋನಿಂ ಪ್ರದೇಶಯನ್ನಾಹ_

ಸ್ತ್ರೀಣಾಂ ಶೀಘ್ರಗಮನೇ ಯೋನೌ ಹಲಹಲಾಶಬ್ದೋ ಭವತೀತ್ಯರ್ಥಃ।

ಮಹೀಧರರು ಹೇಳುತ್ತಾರೇನೆಂದರೆ_*

ಅಂದರೆ, ಇದಕ್ಕೆ ಮಹೀಧರರ ಅರ್ಥವೇನೆಂದರೆ_

ಅಧ್ವರ್ಯು ಮೊದಲಾದವರು ಕುಮಾರೀಪತ್ನಿಯರ ಜೊತೆ ಹಾಸ್ಯಪೂರ್ವಕವಾಗಿ ಸಂಭಾಷಿಸುತ್ತಾರೆ.

ಅಂದರೆ, ಯಜ್ಞಶಾಲೆಯಲ್ಲಿ ಅಧ್ವರ್ಯು ಮೊದಲಾದ ಋತ್ವಿಜರು ಕುಮಾರಿಯರೊಡನೆ ಮತ್ತು ಸ್ತ್ರೀಯರೊಡನೆ ಉಪಹಾಸ-ಪೂರ್ವಕವಾಗಿ ಸಂವಾದ ಮಾಡುತ್ತಾರೇನೆಂದರೆ_

ಉಂಗುಲಿಯಿಂದ ಯೋನಿಯನ್ನು ತೋರಿಸುತ್ತಾ ಹೇಳುತ್ತಾರೇನೆಂದರೆ_

ಅಂದರೆ, ಈ ರೀತಿಯಿಂದ, ಉಂಗುಲಿಯಿಂದ ಯೋನಿಯನ್ನು ತೋರಿಸಿ, ನಗುತ್ತಾರೆ!

[ಎಂದರೆ,] ಸ್ತ್ರೀಯರ ಶೀಘ್ರವಾದ ನಡಿಗೆಯಿಂದ, ಯೋನಿಯಲ್ಲಿ ಹಲ-ಹಲ, ಎಂಬ ಶಬ್ದ ಉಂಟಾಗುತ್ತದೆ, ಎಂದರ್ಥ.

ಅಂದರೆ, ಯಾವಾಗ ಸ್ತ್ರೀಯರು ಬೇಗ-ಬೇಗ ನಡೆಯುತ್ತಾರೋ, ಆಗ ಅವರ ಯೋನಿಯಲ್ಲಿ **'ಹಲ-ಹಲಾ'**, ಎಂಬ ಶಬ್ದವು ಉಂಟಾಗುತ್ತದೆ.

---

* ಅಸ್ಯ ಮಂತ್ರಸ್ಯ ಮಹೀಧರಕೃತಾ ವಿಸ್ತೃತಟೀಕೈವಂ ವರ್ತತೇ_

ಅಧ್ವರ್ಯುಬ್ರಹ್ಮೋದ್ಗಾತೃಕ್ಷತ್ತಾರಃ ಕುಮಾರೀಪತ್ನೀಭಿಃ ಸಂವದಂತೇ 'ಯಕಾಸಕಾವಿತಿ' ದಶರ್ಚಸ್ಯ ದ್ವಾಭ್ಯಾಂ ದ್ವಾಭ್ಯಾಗ್ಂ ಹಯೇ-ಹಯೇऽಸಾವಿತ್ಯಾಮಂತ್ರ್ಯಾಮಂತ್ರ್ಯ [ಕಾತ್ಯಾ. ೨೦. ೧. ೧೮] ;

ಅಧ್ವರ್ಯ್ವಾದಯಃ ಪಂಚ ಹಯೇ ಹಯೇ ಅಸಾವಿತಿ ಸಂಬುದ್ಧ್ಯಂತನಾಮೋಚ್ಚಾರಣಪೂರ್ವಕಂ ಸಂಮುಖೀಕೃತ್ಯ 'ಯಕಾಸಕಾ'ವಿತಿ ದಶರ್ಚಸಂಬಂಧಿನೀಭ್ಯಾಂ ದ್ವಾಭ್ಯಾಮೃಗ್ಭ್ಯಾಂ ಕುಮಾರೀಪತ್ನೀಭಿಃ ಸೋಪಹಾಸಂ ಸಂವದಂತೇ ।

ತತ್ರ ಪ್ರಥಮಮಧ್ವರ್ಯುಃ ಕುಮಾರೀಂ ಪೃಚ್ಛತಿ_ 'ಕುಮಾರಿ! ಹಯೇ ಹಯೇ ಕುಮಾರಿ! ಯಕಾಸಕೌ ಶಕುಂತಿಕೇತ್ಯರ್ಥಃ ।

ಕುಮಾರ್ಯಾದಿದೇವತ್ಯಾ ದಶ ತನ್ಮಧ್ಯೇ ದ್ವಿತೀಯೋಪರಿಷ್ಟಾದ್ ಬೃಹತೀ ಅನ್ಯಾನಷ್ಟನುಷ್ಟುಭಃ ।

→

* ಈ ಮಂತ್ರಕ್ಕೆ ಮಹೀಧರರು ಮಾಡಿದ ವಿಸ್ತೃತ ಟೀಕೆ ಹೀಗಿದೆ_

ಅಧ್ವರ್ಯು, ಬ್ರಹ್ಮಾ, ಉದ್ಗಾತಾ ಮತ್ತು **ಕ್ಷತ್ತಾ**_ ಇವರು ಕುಮಾರೀಪತ್ನಿಯರೊಡನೆ_ **'ಯಕಾಸಕೌ'**, ಎಂದು ಹತ್ತು ಮಂತ್ರಗಳ ಮೂಲಕ ಎರಡು-ಎರಡು ಸಲ_'ಎಲೆ, ಎಲೇ! ಅವನು', ಎಂದು ಕರೆದು ಹೇಳುತ್ತಾ, ಹೇಳುತ್ತಾ,' ಸಂಭಾಷಿಸುತ್ತಾರೆ. [**ಕಾತ್ಯಾ. ೨೦. ೧. ೧೮**]

ಅಧ್ವರ್ಯು ಮೊದಲಾದವರು ಐದು ಸಲ_ 'ಎಲೇ, ಎಲೇ! ಅವನು', ಎಂದು ಸಂಬೋಧನೆಯ ಹೆಸರಿನ ಉಚ್ಚಾರಣೆಯ ಮೂಲಕ ಎದುರಿಗೇನೇ **'ಯಕಾಸಕೌ'**, ಎಂದು ಹತ್ತು ಋಚೆಗಳಿಗೆ ಸಂಬಂಧಿಸಿದ ಎರಡು ಮಂತ್ರಗಳಿಂದ ಕುಮಾರೀಪತ್ನಿಯರೊಡನೆ ಉಪಹಾಸಪೂರ್ವಕವಾಗಿ ಸಂಭಾಷಿಸುತ್ತಾರೆ.

ಹೇಗೆಂದರೆ_ ಮೊದಲ ಅಧ್ವರ್ಯುವು ಕುಮಾರಿಯನ್ನು ಪ್ರಶ್ನಿಸುತ್ತಾನೆ_ 'ಕುಮಾರಿ! ಎಲೆ ಎಲೇ ಕುಮಾರಿ! **'ಯಕಾಸಕೌ ಶಕುಂತಿಕಾ,'** ಎಂದರ್ಥ.

ಕುಮಾರೀ ಮೊದಲಾದ ದೇವತೆಯಿಂದ ಹತ್ತು! ಅದರಲ್ಲಿ ಎರಡನೆಯದು ಉಪರಿಷ್ಟಾದ್‌ಬೃಹತೀ ಛಂದ! ಮಿಕ್ಕವು ಅನುಷ್ಟುಪ್ ಛಂದ!

→

ಗಭೇ ಭಗೇ ಯೋನೌ ಶಕುನಿಸದೃಶ್ಯಾಂ ಯದಾ ಪಸೋ ಲಿಂಗಮಾಹಂತಿ ಆಗಚ್ಛತಿ ।

ಪಸಃ ಪುಂಸ್ಪ್ರಜನನಸ್ಯ ನಾಮ ।

ಹಂತಿರ್ಗತ್ಯರ್ಥಃ ।

ಯದಾ ಭಗೇ ಶಿಶ್ನಮಾಗಚ್ಛತಿ, ತದಾ (ಧಾರಕಾ) ಧರತಿ ಲಿಂಗಮಿತಿ ಧಾರಕಾ ಯೋನಿಃ ;

(ನಿಗಲ್ಗಲೀತಿ) ನಿತರಾಂ ಗಲತಿ ವೀರ್ಯಂ ಕ್ಷರತಿ ।

ಯದ್ವಾ ಶಬ್ದಾನುಕರಣಂ; ಗಲ್ಗಲೀತಿ ಶಬ್ದಂ ಕರೋತಿ ॥ ೪ ॥

ಗಭೇ=ಭಗೇ, ಎಂದರೆ ಶಕುನಿ[ಪಕ್ಷಿಯ] ತರಹದ ಯೋನಿಯಲ್ಲಿ ಯಾವಾಗ **(ಪಸಃ)** ಲಿಂಗವು **(ಆಹಂತಿ)** ಬರುತ್ತದೋ;

'ಪಸಃ', ಎಂಬುದು ಪುರುಷನ ಪ್ರಜನನಾಂಗದ ಹೆಸರಾಗಿದೆ.

'ಹಂತಿ', ಎಂಬುದು ಗತಿಯ ಅರ್ಥದಲ್ಲಿದೆ.

ಯಾವಾಗ ಭಗದಲ್ಲಿ ಶಿಶ್ನವು ಬರುತ್ತದೋ, ಆಗ **(ಧಾರಕಾ)** ಲಿಂಗವನ್ನು ಇಟ್ಟುಕೊಳ್ಳುತ್ತದೆಯಾದುದರಿಂದ **'ಧಾರಕಾ',** ಎಂದರೆ ಯೋನಿಯು ;

(ನಿಗಲ್ಗಲೀತಿ) ಸುತರಾಂ **(ಗಲತಿ)** ವೀರ್ಯವನ್ನು ಸ್ರವಿಸುತ್ತದೆ.

ಅಂದರೆ, ಯೋನಿ ಮತ್ತು ಲಿಂಗದಿಂದ ವೀರ್ಯವು ಸೋರುತ್ತದೆ.

ಅಥವಾ ಶಬ್ದದ ಅನುಕರಣ ಮಾಡುತ್ತದೆ; ಎಂದರೆ **'ಗಲ-ಗಲಾ',** ಎಂಬ ಶಬ್ದವನ್ನು ಮಾಡುತ್ತದೆ.

ಅಂದರೆ, ಯಾವಾಗ ಭಗ-ಲಿಂಗದ ಸಂಯೋಗವಾಗುತ್ತದೋ, ಆಗಲೂ ಕೂಡ, **'ಗಲ-ಗಲಾ',** ಎಂಬ ಶಬ್ದವು ಉಂಟಾಗುತ್ತದೆ. [೪]

→

'ಅವ್ಯಯಸರ್ವನಾಮ್ನಾಮಕಚ್ ಪ್ರಾಕ್ಟೇಃ' [ಪಾಣಿನಿ. ೫. ೩. ೭೧] ಇತಿ ಅಕಚ್ ಕುತ್ಸಾಯಾಮ್ ।

ಅಲ್ಪಾ ಶಕುಂತಿಃ ಶಕಂತಿಕಾ ।

'ಅಲ್ಪೇ [ಪಾ. ೫. ೩. ೮೫]' ಇತಿ ಕನ್ ।

ಅಂಗುಲ್ಯಾ ಯೋನಿಂ ಪ್ರದರ್ಶಯನ್ನಾಹ_

'ಯಕಾ ಯಾ ಅಸಕೌ ಅಸೌ ಶಕುಂತಿಕಾ ಅಲ್ಪಪಕ್ಷಿಣೀವ ಆಹಲಕ್ ಶಬ್ದಾನುಕರಣಮ್ ।

'ಹಲೇ ಹಲೇ ಇತಿ ಶಬ್ದಯಂತೀ ಕ್ವತಿ ಗಚ್ಛತಿ ।

'ಸ್ತ್ರೀಣಾಂ ಶೀಘ್ರಗಮನೇ ಯೋನೌ ಹಲಹಲಾ ಶಬ್ದೋ ಭವತೀತ್ಯರ್ಥಃ ।

'ಗಭೇ' ವರ್ಣವಿಪರ್ಯಯ ಆರ್ಷಃ ।

'ಭಗೇ' ಯೋನೌ ಶಕುನಿಸದೃಶ್ಯಾಂ ಯದಾ ಪಸೋ ಲಿಂಗಮಾಹಂತಿ ಆಗಚ್ಛತಿ ;

'ಪಸ ಇತಿ ಪಸತೇಃ ಸ್ಪೃಶತಿಕರ್ಮಣಃ' [ನಿರುಕ್ತೇ ೫. ೧೬] ಇತಿ ಯಾಸ್ಕಃ ।

ಪುಂಸ್ಪ್ರಜನನಸ್ಯ ನಾಮ ।

→

→

" ಅವ್ಯಯ ಮತ್ತು ಸರ್ವನಾಮವಾಚೀ ಪ್ರಾತಿಪದಿಕಗಳಿಂದ ಮತ್ತು ತಿಙಂತಗಳಿಂದ, 'ಇವ', ಎಂಬ ಅರ್ಥಕ್ಕೆ ಮೊದಲು ಮೊದಲು 'ಅಕಚ್' ಪ್ರತ್ಯಯವು 'ಟಿ' ಗೆ ಮೊದಲು ಬರುತ್ತದೆ" [ಅಷ್ಟಾಧ್ಯಾಯೀ ೫. ೩. ೭೧] ಹೀಗೆ, 'ಸಣ್ಣಗಿರುವ', ಎಂಬರ್ಥದಲ್ಲಿ **'ಅಕಚ್'** ಪ್ರತ್ಯಯವು ಬರುತ್ತದೆ.

ಚಿಕ್ಕದಾಗಿರುವ ಶಕುಂತಿಯು **'ಶಕುಂತಿಕಾ',** ಎನಿಸುತ್ತದೆ.

" 'ಸ್ವಲ್ಪ', ಎಂಬ ಅರ್ಥದಲ್ಲಿ ವರ್ತಮಾನ ಪ್ರಾತಿಪದಿಕ ಮತ್ತು ತಿಙಂತದಿಂದ, ಹೇಗೆ ಹೇಳುತ್ತೇವೋ, ಹಾಗೆ ಪ್ರತ್ಯಯವು ಬರುತ್ತದೆ.' [ಅಷ್ಟಾಧ್ಯಾಯೀ ೫. ೩. ೮೫] ಇದರಿಂದ **'ಕನ್'** ಪ್ರತ್ಯಯವು ಬಂದಿತು.

ಉಂಗುಲಿಯಿಂದ ಯೋನಿಯನ್ನು ತೋರಿಸುತ್ತಾ ಹೇಳುತ್ತಾನೆ_

'ಯಾವ ಆ ಇದು ಶಕುಂತಿಕಾ, ಎಂಬ ಸಣ್ಣ ಪಕ್ಷಿಯಂತೆ ಆಹಲಕ್, ಎಂದು ಶಬ್ದದ ಅನುಕರಣೆ ಮಾಡಲಾಗುತ್ತದೋ ;

'ಹಲೇ ಹಲೇ, ಎಂದು ಶಬ್ದ ಮಾಡುತ್ತಾ ಹೋಗುತ್ತಿದೆಯೋ,_

'ಸ್ತ್ರೀಯರು ಶೀಘ್ರವಾಗಿ ನಡೆಯುತ್ತಿರುವಾಗ ಯೋನಿಯಲ್ಲಿ **'ಹಲ-ಹಲ'**, ಎಂಬ ಶಬ್ದ ಉಂಟಾಗುತ್ತದೆ, ಎಂದರ್ಥ.

'ಗಭೇ', ಎಂಬುದರ ವರ್ಣವ್ಯತ್ಯಾಸಮಾಡುವುದು ಆರ್ಷಪ್ರಯೋಗ!

'ಭಗೇ', ಎಂದರೆ ಸಣ್ಣ ಪಕ್ಷಿಗೆ ಸಮಾನವಾದ ಯೋನಿಯಲ್ಲಿ ಯಾವಾಗ **'ಪಸಃ'**, ಎಂದರೆ ಲಿಂಗವು **(ಆಹಂತಿ)** ಬರುತ್ತದೋ;

'ಪಸಃ' ಎಂದರೆ ಸ್ಪರ್ಶಿಸುವ ಕರ್ಮದ್ದು' [ನಿರುಕ್ತ: ೫. ೧೬], ಎಂದು ಯಾಸ್ಕರು ಹೇಳುತ್ತಾರೆ.

ಎಂದರೆ, [ಇದು] ಪುರುಷನ ಪ್ರಜನನಾಂಗದ ಹೆಸರು!

→

(೫) ವಂಚಕನೊಡನೆ ಸಂಭಾಷಣೆ ಮಾಡಬಾರದು!

[ಋಷಿಃ_ ಪ್ರಜಾಪತಿಃ ; ದೇವತಾ_ ರಾಜಪ್ರಜೇ ; ಛಂದಃ_ ಬೃಹತೀ ; ಸ್ವರಃ_ ಮಧ್ಯಮಃ]

ಯಕೋಽಸಕೌ* ಶಕುಂತಕಽ ಆಹಲಗಿತಿ ವಂಚತಿ ।
ವಿವಕ್ಷತಽ ಇವ ತೇ ಮುಖಮಧ್ವರ್ಯೋ ಮಾ ನಸ್ತ್ವಮಭಿಭಾಷಥಾಃ ॥ ೫ ॥

[ಯಜುರ್ವೇದೇ ಅ. ೨೩, ಮಂ. ೨೩]

[ಅರ್ಥ:_ "ಯಾವನಾದರೂ ದೊಡ್ಡ ಪಕ್ಷಿಯಂತೆ ಶಬ್ದ ಮಾಡುತ್ತಾ, ದಾರಿ ತಪ್ಪಿಸಿ ವಂಚಿಸುತ್ತಾನೋ, [ಅವನೊಡನೆ,] ಹೇ ಹಿಂಸಾರಹಿತನೇ! ಮಾತನಾಡಲು ಇಚ್ಛೆ ಇರುವಂತೆ ನಿನ್ನ ಮುಖವಿದೆ! [ಆದುದರಿಂದ,] ನಮ್ಮ ಬಳಿ, ನೀನು ಸಂಭಾಷಿಸಬೇಡ!"

(ಯಜುರ್ವೇದಃ ೨೩. ೨೩)]

ಮಹೀಧರರ ಅಶ್ಲೀಲಾರ್ಥ_ 'ಕುಮಾರಿಯ ಉತ್ತರ'

[ಮಹೀಧರಸ್ಯಾರ್ಥಃ_]

ಕುಮಾರೀ ಅಧ್ವರ್ಯುಂ ಪ್ರತ್ಯಾಹ ।

ಅಂಗುಲ್ಯಾ ಲಿಂಗಂ ಪ್ರದೇಶಯಂತ್ಯಾಹ_

'ಅಗ್ರಭಾಗೇ ಸಚ್ಛಿದ್ರಂ ಲಿಂಗಂ ತವ ಮುಖಮಿವ ಭಾಸತೇ' ॥ ೫ ॥**

→

ಹಂತಿರ್ಗತ್ಯರ್ಥಃ ।
ಯದಾ ಭಗೇ ಶಿಶ್ನಮಾಗಚ್ಛತಿ ತದಾ ಧಾರಕಾ;
ಧರತಿ ಲಿಂಗಮಿತಿ ಧಾರಕಾ ಯೋನಿಃ ।

ನಿಗಲ್ಗಲೀತಿ ನಿತರಾಂ ಗಲತಿ ವೀರ್ಯಂ ಕ್ಷರತಿ ।
ಯದ್ವಾನುಕರಣಮ್ ।
ಗಲ್ಗಲೀತಿ ಶಬ್ದಂ ಕರೋತಿ ॥ ೨೨ ॥

ಮಹೀಧರರ ಅರ್ಥವೇನೆಂದರೆ_

ಕುಮಾರಿಯ ಅಧ್ವರ್ಯುವಿಗೆ ಹೇಳುತ್ತಾಳೆ.

ಉಂಗುಲಿಯಿಂದ ಲಿಂಗವನ್ನು ತೋರಿಸುತ್ತಾ, ಹೇಳುತ್ತಾಳೇನೆಂದರೆ_

'ಮುಂದಿನ ಭಾಗದಲ್ಲಿ ಛಿದ್ರಸಹಿತವಾದ ಲಿಂಗವು ನಿನ್ನ ಮುಖದಂತೆ ತೋರುತ್ತಿದೆ.'

ಅಂದರೆ, ಕುಮಾರಿಯು ಅಧ್ವರ್ಯುವಿನ ಉಪಹಾಸ ಮಾಡುತ್ತಾ ಹೇಳುತ್ತಾಳೇನೆಂದರೆ_ 'ಛಿದ್ರಸಹಿತವಾದ ನಿನ್ನ ಲಿಂಗದ ಯಾವ ಈ ಮುಂದಿನ ಭಾಗವಿದೆಯೋ, ಅದು ನಿನ್ನ ಮುಖದಂತೆ ಕಾಣುತ್ತಿದೆ!' [೫]**

→

'ಹಂತಿ', ಎಂಬುದು ಗತಿಯ ಅರ್ಥವುಳ್ಳದ್ದಾಗಿದೆ.
ಯಾವಾಗ ಭಗದಲ್ಲಿ ಶಿಶ್ನವು ಬರುತ್ತದೋ, ಆಗ ಧಾರಕವು ;
ಲಿಂಗವನ್ನು ಇಟ್ಟುಕೊಳ್ಳುತ್ತದೆಯಾದುದರಿಂದ, **'ಧಾರಕಾ'**, ಎಂದರೆ ಯೋನಿಯು ;
'ನಿಗಲ್ಗಲೀತಿ', ಎಂದರೆ ಪೂರ್ಣವಾಗಿ ವೀರ್ಯವನ್ನು ಸ್ರವಿಸುತ್ತದೆ.
ಅಥವಾ [ಶಬ್ದದ] ಅನುಕರಣೆ ಮಾಡಲಾಗುತ್ತದೆ.
'ಗಲ-ಗಲ', ಎಂದು ಶಬ್ದ ಮಾಡುತ್ತದೆ. [೨೨]

---

* ಮೂಲಗ್ರಂಥ ಏತಾವಾನೇವ ಮಂತ್ರಸಂಕೇತೋ ದೀಯತೇ _ಅನು.

** ಅಸ್ಯ ಮಂತ್ರಸ್ಯ ಮಹೀಧರಕೃತಟೀಕಾ_
ಕುಮಾರೀ ಅಧ್ವರ್ಯುಂ ಪ್ರತ್ಯಾಹ_ ಅಂಗುಲ್ಯಾ ಶಿಶ್ನಂ ಪ್ರದರ್ಶಯಂತ್ಯಾಹ_ →

** ಈ ಮಂತ್ರಕ್ಕೆ ಮಹೀಧರರು ಮಾಡಿದ ಟೀಕೆ_
ಕುಮಾರಿಯು ಅಧ್ವರ್ಯುವಿಗೆ ಹೇಳುತ್ತಾಳೆ. ಉಂಗುಲಿಯಿಂದ ಶಿಶ್ನವನ್ನು ತೋರಿಸುತ್ತಾ, ಹೇಳುತ್ತಾಳೇನೆಂದರೆ_ →

ಅಥಸತ್ಯೋऽರ್ಥಃ_

ಈಗ ಸತ್ಯವಾದ ಅರ್ಥವೇನೆಂದರೆ_

ಶತಪಥಬ್ರಾಹ್ಮಣದ ಸತ್ಯಾರ್ಥ_ ರಾಜಾ-ಪ್ರಜೆ ಇಬ್ಬರೂ ಪೀಡಕರು

"ಯಕಾಸಕೌ ಶಕುಂತಿಕೇತಿ । ವಿಡ್ ವೈ ಶಕುಂತಿಕಾ; ಆಹಲಗಿತಿ ವಂಚತೀತಿ । ವಿಶೋ ವೈ ರಾಷ್ಟ್ರಾಯ ವಂಚಂತಿ, ಆಹಂತಿ ಗಭೇ ಪಸೋ ನಿಗಲ್ಗಲೀತಿ ಧಾರಕೇತಿ । ವಿಡ್ ವೈ ಗಭೋ ರಾಷ್ಟ್ರಂ ಪಸೋ ರಾಷ್ಟ್ರಮೇವ ವಿಶ್ಯಾಹಂತಿ ತಸ್ಮಾದ್ರಾಷ್ಟ್ರೀ ವಿಶಂ ಘಾತುಕಃ ॥"

[ಶತಪಥಬ್ರಾಹ್ಮಣೇ ಕಾಂ. ೧೩, ಅ. ೨, ಬ್ರಾ. ೯, ಕಂ. ೬]

[ಅರ್ಥ:_ "ಯಕಾಸಕೌ ಶಕುಂತಿಕಾ', ಎಂದು ಹೇಳಲಾಗಿದೆ! ಪ್ರಜೆಗಳೇ 'ಶಕುಂತಿಕಾ'; 'ಆಹಲಗಿತಿ ವಂಚತಿ', ಎಂದು ಹೇಳಲಾಗಿದೆ! ಪ್ರಜೆಗಳೇ ರಾಷ್ಟ್ರವನ್ನು ವಂಚಿಸುತ್ತಾರೆ. 'ಆಹಂತಿ ಗಭೇ ಪಸೋ ನಿಗಲ್ಗಲೀತಿ ಧಾರಕಾ', ಎಂದು ಹೇಳಲಾಗಿದೆ. ಪ್ರಜೆಗಳೇ 'ಗಭ!' ರಾಷ್ಟ್ರವೇ 'ಪಸ!' ರಾಷ್ಟ್ರವೇ ಪ್ರಜೆಗಳನ್ನು ಪೀಡಿಸುತ್ತದೆ. ಆದುದರಿಂದ, ರಾಜನೇ ಪ್ರಜೆಗಳ ಪೀಡಕನಾಗಿರುತ್ತಾನೆ."

(ಶತಪಥಬ್ರಾಹ್ಮಣ: ೧೩. ೨. ೯. ೬)]

ಒಬ್ಬನೇ ರಾಜನು ಪ್ರಜೆಗಳ ಪೀಡಕನಾಗುತ್ತಾನೆ!

ಭಾಷ್ಯಮ್_

(ವಿಡ್ ವೈ.) ಯಥಾ ಶ್ಯೇನಸ್ಯ ಸಮೀಪೇऽಲ್ಪಪಕ್ಷಿಣೀ ನಿರ್ಬಲಾ ಭವತಿ, ತಥೈವ ರಾಜ್ಞಃ ಸಮೀಪೇ (ವಿಟ್) ಪ್ರಜಾ ನಿರ್ಬಲಾ ಭವತಿ.

ಭಾಷ್ಯ_

(ವಿಡ್ ವೈ.) ಹೇಗೆ ಗಿಡುಗನ ಬಳಿ ಸಣ್ಣ ಪಕ್ಷಿಯು ನಿರ್ಬಲವಾಗಿರುತ್ತದೋ, ಹಾಗೆಯೇ ರಾಜನ ಸಮೀಪದಲ್ಲಿ (ವಿಟ್) ಪ್ರಜೆಗಳು ನಿರ್ಬಲರಾಗಿರುತ್ತಾರೆ!

→ 'ಹೇ ಅಧ್ವರ್ಯೋ! ಯಕಃ ಯಃ ಅಸಕೌ ಅಸೌ ಶಕುಂತಕಃ ಪಕ್ಷೀವ ವಿವಕ್ಷತಃ ವಕ್ತುಮಿಚ್ಛತಸ್ತೇ ತವ ಮುಖಮಿವ ಆಹಲಗಿತಿ ವಂಚತಿ ಇತಸ್ತತಶ್ಚಲತಿ;

'ಅಗ್ರಭಾಗೇ ಸಚ್ಛಿದ್ರಂ ಲಿಂಗಂ ತವ ಮುಖಮಿವ ಭಾಸತೇ।'

ಅತೋ ನೋऽಸ್ಮಾನ್ ಪ್ರತಿ ಮಾ ಅಭಿಭಾಷಥಾಃ।
ಮಾ ವದ ತುಲ್ಯತ್ವಾತ್ ॥ ೨೩ ॥

→ 'ಓ ಅಧ್ವರ್ಯು! **(ಯಕಃ)** ಯಾವ **(ಅಸಕೌ)** ಇದು **(ಶಕುಂತಕಃ)** ಶಕುಂತಕಪಕ್ಷಿಯಂತೆ **(ವಿವಕ್ಷತಃ)** ಹೇಳಲು ಇಚ್ಛಿಸುತ್ತಿರುವ **(ತೇ)** ನಿನ್ನ ಮುಖದಂತೆ, **(ಆಹಲಗಿತಿ)** ಹಲ-ಹಲ, ಎಂದು ಶಬ್ದ ಮಾಡುತ್ತಾ **(ವಂಚತಿ)** ಈ ಕಡೆ-ಆ ಕಡೆ ಚಲಿಸುತ್ತಿದೆಯೋ;

'ಅಗ್ರಭಾಗದಲ್ಲಿ ಛಿದ್ರಸಹಿತವಾದ ಲಿಂಗವು ನಿನ್ನ ಮುಖದಂತೆ ತೋರುತ್ತಿದೆ!

'ಆದುದರಿಂದ, ನಮ್ಮ ಕೂಡ, ಸಂಭಾಷಿಸಬೇಡ!

ಎಂದರೆ, ಇಬ್ಬರೂ ಸಮಾನವಾಗಿರುವುದರಿಂದ ಮಾತನಾಡಬೇಡ! [೨೩]

ಅಂದರೆ, ಪ್ರಜೆಗಳ ಹೆಸರು **'ಶಕುಂತಿಕಾ'**, ಎಂದಿರುತ್ತದೆ.

ಹೇಗೆ ಗಿಡುಗನ ಎದುರಿಗೆ ಸಣ್ಣ ಸಣ್ಣ ಪಕ್ಷಿಗಳ ದುರ್ದಶೆ ಉಂಟಾಗುತ್ತದೋ, ಹಾಗೆಯೇ ರಾಜನ ಎದುರಿಗೆ ಪ್ರಜೆಗಳ [ಅವಸ್ಥೆ] ಇರುತ್ತದೆ!

(ಆಹಲಗಿತಿ ವಂಚತೀತಿ) ರಾಜಾನೋ ವಿಶಃ ಪ್ರಜಾಃ (ವೈ) ಇತಿ ನಿಶ್ಚಯೇನ ರಾಷ್ಟ್ರಾಯ ರಾಜಸುಖಪ್ರಯೋಜನಾಯ ಸದೈವ ವಂಚಂತೀತಿ.

(ಆಹಲಗಿತಿ ವಂಚತೀತಿ) ರಾಜರು **(ವಿಶಃ)** ಪ್ರಜೆಗಳನ್ನು, **(ವೈ)** ಎಂದರೆ ನಿಶ್ಚಯವಾಗಿ, **(ರಾಷ್ಟ್ರಾಯ)** ರಾಜನ ಸುಖದ ಪ್ರಯೋಜನಕ್ಕಾಗಿ ಯಾವಾಗಲೂ ವಂಚಿಸುತ್ತಾರೆ!

ಅಂದರೆ, ಎಲ್ಲಿ ಒಬ್ಬ ಮನುಷ್ಯನು ರಾಜನಾಗಿರುತ್ತಾನೋ, ಅಲ್ಲಿ ಪ್ರಜೆಗಳು ವಂಚಿಸಲ್ಪಡುತ್ತಿರುತ್ತಾರೆ!

(ಆಹಂತಿ.) ವಿಶೋ ಗಭಸಂಜ್ಞಾ ಭವತಿ.

(ಆಹಂತಿ.) ಪ್ರಜೆಗಳಿಗೆ **'ಗಭ'**, ಎಂಬ ಹೆಸರಿದೆ.

ಪಸಾಖ್ಯಂ ರಾಷ್ಟ್ರಂ ;

'ಪಸ', ಎಂದು ರಾಜ್ಯಕ್ಕೆ ಹೆಸರಿದೆ.

ರಾಜ್ಯಂ ಪ್ರಜಯಾ ಸ್ಪರ್ಶನೀಯಂ ಭವತಿ.

[ಎಂದರೆ,] ರಾಜ್ಯವು ಪ್ರಜೆಗಳಿಂದ ಸ್ಪರ್ಶಿಸಲು ಅರ್ಹವಾಗಿರುತ್ತದೆ.

ಯಸ್ಮಾದ್ರಾಷ್ಟ್ರಂ ತಾಂ ಪ್ರಜಾಂ ಪ್ರವಿಶ್ಯಾಹಂತಿ, ಸಮಂತಾದ್ಧನನಂ ಪೀಡಾಂ ಕರೋತಿ;

ಯಾವ ಕಾರಣದಿಂದ ರಾಜ್ಯವು ಆ ಪ್ರಜೆಗಳನ್ನು ಪ್ರವೇಶಿಸಿ, **(ಆ ಹಂತಿ)** ಎಲ್ಲಾ ರೀತಿಯಿಂದ ಪೀಡೆ ಕೊಡುತ್ತದೋ ;

ಯಸ್ಮಾದ್ರಾಷ್ಟ್ರೀ ಏಕೋ ರಾಜಾ ಮತಶ್ಚೇತ್ತರ್ಹಿ ವಿಶಂ ಪ್ರಜಾಂ ಘಾತುಕೋ ಭವತಿ;

ಮತ್ತು ಯಾವ ಕಾರಣದಿಂದ, **(ರಾಷ್ಟ್ರೀ)** ಒಬ್ಬ ರಾಜನೇ ಅಂಗೀಕರಿಸಲ್ಪಟ್ಟಿದ್ದರೆ, ಅವನು **(ವಿಶಮ್)** ಪ್ರಜೆಗಳ **(ಘಾತುಕಃ)** ಘಾತುಕನಾಗಿರುತ್ತಾನೋ ;

ಅಂದರೆ, ಎಲ್ಲಿ ಒಬ್ಬ ಮನುಷ್ಯನು ರಾಜನಾಗಿರುತ್ತಾನೋ, ಅಲ್ಲಿ ಅವನು ತನ್ನ ಲೋಭದಿಂದ ಪ್ರಜೆಗಳ ಪದಾರ್ಥಗಳ ಹಾನಿಮಾಡುತ್ತಲೇ ಹೋಗುತ್ತಾನೆ! ಆದುದರಿಂದ, ರಾಜನನ್ನು ಪ್ರಜೆಗಳ **'ಘಾತುಕ'**, ಎಂದರೆ ಪೀಡಕ, ಎನ್ನುತ್ತಾರೆ.

ತಸ್ಮಾತ್ ಕಾರಣಾದೇಕೋ ಮನುಷ್ಯೋ ರಾಜಾ ಕದಾಚಿನ್ನೈವ ಮಂತವ್ಯಃ.

ಆ ಕಾರಣದಿಂದ, ಒಬ್ಬ ಮನುಷ್ಯನು ರಾಜಾ, ಎಂದು ಎಂದಿಗೂ ಅಂಗೀಕರಿಸಲ್ಪಡಲೇ ಬಾರದು!

ಕಿಂತು ಸಭಾಧ್ಯಕ್ಷಃ ಸಭಾಧೀನೋ ಯಃ ಸದಾಚಾರೀ ಶುಭಲಕ್ಷಣಾನ್ವಿತೋ ವಿದ್ವಾನ್ ಸ ಪ್ರಜಾಭೀ ರಾಜಾ ಮಂತವ್ಯಃ.

ಆದರೆ, ಯಾವನು ಸದಾಚಾರಿಯೂ, ಶುಭ ಲಕ್ಷಣಗಳಿಂದ ಕೂಡಿದ ವಿದ್ವಾಂಸನೂ ಆಗಿರುತ್ತಾನೋ, ಅವನು ಪ್ರಜೆಗಳಿಂದ 'ಸಭಾಧ್ಯಕ್ಷನಾದ ರಾಜಾ', ಎಂದು ಅಂಗೀಕರಿಸಲ್ಪಡಬೇಕು!

ಅಂದರೆ, ಧಾರ್ಮಿಕ ವಿದ್ವಾಂಸರ ಸಭೆಗೆ ಆಧೀನವಾಗಿಯೇ ರಾಜ್ಯದ ವ್ಯವಸ್ಥೆ ಇರಬೇಕು!

ಅಸ್ಮಾದಪಿ ಸತ್ಯಾದರ್ಥಾನ್ಮಹೀಧರಸ್ಯಾತೀವ-ದುಷ್ಟೋऽರ್ಥೋऽಸ್ತೀತಿ ವಿಚಾರಣೀಯಮ್ ॥ ೪ - ೫ ॥

ಈ ಸತ್ಯವಾದ ಅರ್ಥಕ್ಕಿಂತಲೂ ಕೂಡ, ಅತ್ಯಂತ ದುಷ್ಟವಾದ ಅರ್ಥವು ಮಹೀಧರರದಾಗಿದೆ, ಎಂದು ಯೋಚಿಸಬೇಕು.

ಅಂದರೆ, 'ಯಕಾಸಕೌ.' ಇತ್ಯಾದಿ ಮಂತ್ರಗಳಿಗೆ **ಶತಪಥ**[ಬ್ರಾಹ್ಮಣ]ಪ್ರತಿಪಾದಿತ ಅರ್ಥಗಳ ಪ್ರತಿ* ಮಹೀಧರ ಮೊದಲಾದ ಅಲ್ಪಜ್ಞಜನರಿಂದ ಮಾಡಲ್ಪಟ್ಟ ಅರ್ಥಗಳದು ಅತ್ಯಂತ ವಿರೋಧವಿದೆ. [೪-೫]

(೬) ತಾಯಿ-ತಂದೆ ಕೂಡಿಯೇ ಉದ್ಯೋಗ ಮಾಡುತ್ತಾರೆ!

[ಋಷಿಃ_ ಪ್ರಜಾಪತಿಃ ; ದೇವತಾ_ ಭೂಮಿಸೂರ್ಯೌ ; ಛಂದಃ_ ನಿಚೃದನುಷ್ಟುಪ್ ; ಸ್ವರಃ_ ಗಾಂಧಾರಃ]

ಮಾತಾ ಚ ತೇ ಪಿತಾ ಚ ತೇऽಗ್ರಂ ವೃಕ್ಷಸ್ಯ ರೋಹತಃ ।

ಪ್ರತಿಲಾಮೀತಿ ತೇ ಪಿತಾ ಗಭೇ ಮುಷ್ಟಿಮತಗ್ಂಸಯತ್ ॥ ೬ ॥

[ಯಜುರ್ವೇದೇ ಅ. ೨೩, ಮಂ. ೨೪]

[ಅರ್ಥಃ_ "ನಿನ್ನ ತಾಯಿ ಮತ್ತು ನಿನ್ನ ತಂದೆ ಮೊದಲು ವೃಕ್ಷದ [ಸಸಿಯನ್ನು] ನೆಡುತ್ತಾರೆ. ನಿನ್ನ ತಂದೆಯು_ 'ನಾನು ತೆಗೆದುಕೊಳ್ಳುತ್ತೇನೆ', [ಎಂದು ಹೇಳಿ,] ಹಗಲಿನಲ್ಲಿ [ಫಲದ] ಪರ್ಯಾಪ್ತ ರಾಶಿಯನ್ನು ಕೂಡಿಹಾಕುತ್ತಾನೆ."

(ಯಜುರ್ವೇದಃ ೨೩. ೨೪)]

---

* ಮಹರ್ಷಿದಯಾನಂದರು ಈ ಮಂತ್ರಕ್ಕೆ ಸುತರಾಂ ಶತಪಥ-ಬ್ರಾಹ್ಮಣದ ಅರ್ಥದಂತೆ ಭಾಷ್ಯ ಬರೆದಿಲ್ಲ; ಆದರೆ, ಅದಕ್ಕಿಂತ ವಿಶೇಷ ರೀತಿಯಲ್ಲಿ ಬರೆದಿದ್ದಾರೆ _ಅನು.

ಈ ಮಂತ್ರಕ್ಕೆ ಮಹೀಧರರ ಅಶ್ಲೀಲಾರ್ಥ_ ಬ್ರಹ್ಮನ ಹಾಸ್ಯ

ಮಹೀಧರಸ್ಯಾರ್ಥಃ_

'ಬ್ರಹ್ಮಾ ಮಹಿಷೀಮಾಹ_

'ಮಹಿಷಿ! ಹಯೇ ಹಯೇ ಮಹಿಷಿ! ತೇ ತವ ಮಾತಾ ಚ ಪುನಸ್ತೇ ತವ ಪಿತಾ ಯದಾ ವೃಕ್ಷಸ್ಯ ವೃಕ್ಷಜಸ್ಯ ಕಾಷ್ಠಮಯಸ್ಯ ಮಂಚಕಸ್ಯಾಗ್ರಮುಪರಿಭಾಗಂ ರೋಹತಃ ಆ ರೋಹತಃ, ತದಾ ತೇ ಪಿತಾ ಗಭೇ ಭಗೇ ಮುಷ್ಟಿಂ ಮುಷ್ಟಿತುಲ್ಯಂ ಲಿಂಗಮತಂಸಯತ್ ತಂಸಯತಿ ಪ್ರಕ್ಷಿಪತಿ.

'ಏವಂ ತವೋತ್ಪತ್ತಿರತ್ಯಶ್ಲೀಲಮ್.

`['ತಸಿ ಅಲಂಕೃತೌ' ಚುರಾದಿಃ.]*

'ಲಿಂಗಮುತ್ಥಾನೇನಾಲಂಕರೋತಿ ವಾ.

`[ಕಿಂ ಕುರ್ವನ್?

'ಪ್ರತಿಲಾಮೀತಿ ವದನ್ನಿತಿ ಶೇಷಃ.

'ತಿಲ ಸ್ನೇಹನೇ']*

'ತವ ಭೋಗೇನ ಸ್ನಿಹ್ಯಾಮೀತಿ ವದನ್ನೇವಂ ತವೋತ್ಪತ್ತಿಃ ॥ ೬ ॥ ॥ ೨೪ ॥'**

* ಕೋಷ್ಠಕಾಂತರ್ಗತಪಾಠೋ ಮಹೀಧರಭಾಷ್ಯಸ್ಯಾವಶಿಷ್ಟಾಂಶಃ _ಅನು.

** ಸಮಾನಾರ್ಥಕತ್ವಾದಗ್ರಿಮಮಂತ್ರೋ ಮೂಲಗ್ರಂಥೇ ನ ವ್ಯಾಖ್ಯಾತಃ. ಅತೋ ವಯಮಧೋ ಮಹೀಧರಭಾಷ್ಯೇಣ ಸಹ ತದುದ್ಧರಾಮಃ_

→

ಮಹೀಧರರ ಅರ್ಥವೇನೆಂದರೆ_

'ಬ್ರಹ್ಮನು ಮಹಿಷಿಗೆ ಹೇಳುತ್ತಾನೆ_

'ಅಂದರೆ, ಈಗ ಬ್ರಹ್ಮನು ನಗುತ್ತಾ ಯಜಮಾನನ ಪತ್ನಿಗೆ ಹೇಳುತ್ತಾನೇನೆಂದರೆ_

'ಮಹಿಷಿ! ಎಲೆ ಎಲೇ ಮಹಿಷಿ! (ತೇ) ನಿನ್ನ ತಾಯಿಯು ಮತ್ತು ಪುನಃ ನಿನ್ನ ತಂದೆಯು ಯಾವಾಗ (ವೃಕ್ಷಸ್ಯ) ವೃಕ್ಷದಿಂದ ಉತ್ಪನ್ನವಾದ ಮರದ ಮಂಚದ (ಅಗ್ರಮ್) ಮೇಲೆ (ರೋಹತಃ) ಹತ್ತುತ್ತಾರೋ, ಆಗ ನಿನ್ನ ತಂದೆಯು (ಗಭೇ) ಭಗದಲ್ಲಿ (ಮುಷ್ಟಿಮ್) ಮುಷ್ಟಿತುಲ್ಯವಾದ ಲಿಂಗವನ್ನು (ಅತಂಸಯತ್) ಹಾಕುತ್ತಾನೆ.

'ಈ ರೀತಿಯಾಗಿ, ನಿನ್ನ ಉತ್ಪತ್ತಿಯಾಯಿತು', ಎಂದು ಅಶ್ಲೀಲ ಕಥನವಿದೆ!

'ಅಂದರೆ, ಯಾವಾಗ ನಿನ್ನ ತಾಯಿ ಮತ್ತು ತಂದೆ ಮಂಚದ ಮೇಲೆ ಹತ್ತಿ, ನಿನ್ನ ತಂದೆಯು ಮುಷ್ಟಿತುಲ್ಯ ಲಿಂಗವನ್ನು ನಿನ್ನ ತಾಯಿಯ ಭಗದಲ್ಲಿ ಹಾಕಿಬಿಟ್ಟನೋ, ಆಗ ನಿನ್ನ ಉತ್ಪತ್ತಿಯಾಯಿತು!

[' 'ತಸಿ'ಧಾತುವು ಅಲಂಕರಿಸು, ಎಂಬ ಅರ್ಥದಲ್ಲಿದೆ. ಮತ್ತು ಚುರಾದಿಗಣೀಯಧಾತುವಾಗಿದೆ.]*

'ಅಥವಾ ಲಿಂಗವು ಎದ್ದಿರುವಾಗ ಅಲಂಕರಿಸುತ್ತದೆ.

`[ಏನು ಮಾಡುತ್ತಾ? ಎಂದರೆ_

'ಪ್ರತಿಲಾಮಿ', ಎಂದು ಹೇಳುತ್ತಾ, ಎಂಬುದು ಉಳಿದ ಅರ್ಥ.

'ತಿಲ' ಧಾತುವು ಪ್ರೀತಿಸು, ಎಂಬ ಅರ್ಥದಲ್ಲಿದೆ.]*

'ನಿನ್ನೊಡನೆ ಭೋಗದಿಂದ ಸಂತುಷ್ಟನಾಗಿದ್ದೇನೆ.' ಎಂದು ಹೇಳುತ್ತಾನೆ. ಹೀಗೆ ನಿನ್ನ ಉತ್ಪತ್ತಿಯಾಗಿದೆ.'

†[ಆಗ] ಅವಳು_ 'ನಿನ್ನ ಉತ್ಪತ್ತಿಯೂ ಕೂಡ, ಹೀಗೆಯೇ ಆಗಿದೆ. ಆದುದರಿಂದ, ಇಬ್ಬರ ಉತ್ಪತ್ತಿಯೂ ಸಮಾನವಾಗಿದೆ', ಎಂದು ಬ್ರಹ್ಮನಿಗೆ ಹೇಳಿದಳು. [೬] †

* [ ] ಈ ಕಂಸದಲ್ಲಿರುವುದು ಮಹೀಧರಭಾಷ್ಯದ ಅವಶಿಷ್ಟ ಅಂಶ _ಅನು.

† ಈ ವಾಕ್ಯಶೇಷವು ಯಜುರ್ವೇದ(೨೩. ೨೫) ಮಂತ್ರದ ಮಹೀಧರರ ಭಾಷ್ಯದಲ್ಲಿದೆ _ಅನು.

** ಸಮಾನವಾದ ಅರ್ಥವನ್ನುಳ್ಳದ್ದಾದುದರಿಂದ, ಮುಂದಿನ ಮಂತ್ರವು ಮೂಲಗ್ರಂಥದಲ್ಲಿ ವ್ಯಾಖ್ಯಾನ ಮಾಡಲ್ಪಟ್ಟಿಲ್ಲ. ಆದುದರಿಂದ, ನಾವು ಅದನ್ನು ಮಹೀಧರಭಾಷ್ಯದೊಡನೆ ಕೆಳಗೆ ಉದ್ಧರಿಸುತ್ತೇವೆ_

→

ಅಥ ಸತ್ಯೋಽರ್ಥಃ_

ಈಗ ಸತ್ಯವಾದ ಅರ್ಥವೇನೆಂದರೆ_

ಈ ಮಂತ್ರಗಳಿಗೆ ಶತಪಥಬ್ರಾಹ್ಮಣದ ಸತ್ಯಾರ್ಥ_ ತಾಯಿ-ತಂದೆಗಳಿಂದಲೇ ಸುಖ!

"ಮಾತಾ ಚ ತೇ ಪಿತಾ ಚ ತ ಇತಿ । ಇಯಂ ವೈ ಮಾತಾ ಅಸೌ ಪಿತಾ ಆಭ್ಯಾಮೇವೈನಂ ಸ್ವರ್ಗಂ ಲೋಕಂ ಗಮಯತಿ। ಅಗ್ರಂ ವೃಕ್ಷಸ್ಯ ರೋಹತ ಇತಿ । ಶ್ರೀರ್ವೈ ರಾಷ್ಟ್ರಸ್ಯಾಗ್ರಗ್ಂ ಶ್ರಿಯಮೇವೈನಗ್ಂ ರಾಷ್ಟ್ರಸ್ಯಾಗ್ರಂ ಗಮಯತಿ। ಪ್ರತಿಲಾಮೀತಿ ತೇ ಪಿತಾ ಗಭೇ ಮುಷ್ಟಿಮತಗ್ಂಸಯದಿತಿ । ವಿಡ್ ವೈ ಗಭೋ ರಾಷ್ಟ್ರಂ ಮುಷ್ಟೀ, ರಾಷ್ಟ್ರಮೇವಾವಿಶ್ಯಾಹಂತಿ, ತಸ್ಮಾದ್ರಾಷ್ಟ್ರೀ ವಿಶಂ ಘಾತುಕಃ ॥"

[ಶತಪಥಬ್ರಾಹ್ಮಣೇ ಕಾಂ. ೧೩, ಅ. ೨, ಬ್ರಾ. ೯, ಕಂ. ೭]

→

→

ತಾಯಿ-ತಂದೆಗಳ ಆಚರಣೆಯ ಬಗ್ಗೆ ಬಹಳ ಮಾತನಾಡಬಾರದು!

[ಋಷಿಃ_ ಪ್ರಜಾಪತಿಃ; ದೇವತಾ_ ಭೂಮಿಸೂರ್ಯೌ; ಛಂದಃ_ ನಿಚೃದನುಷ್ಟುಪ್; ಸ್ವರಃ_ ಗಾಂಧಾರಃ]

ಮಾತಾ ಚ ತೇ ಪಿತಾ ಚ ತೇಽಗ್ರೇ ವೃಕ್ಷಸ್ಯ ಕ್ರೀಡತಃ ।
ವಿವಕ್ಷತ ಇವ ತೇ ಮುಖಂ ಬ್ರಹ್ಮನ್ ಮಾ ತ್ವಂ ವದೋ ಬಹು ॥

[ಯಜುರ್ವೇದೇ ಅ. ೨೩. ಮಂ. ೨೫]

[ಅರ್ಥ:_ "ನಿನ್ನ ತಾಯಿ ಮತ್ತು ನಿನ್ನ ತಂದೆ ವೃಕ್ಷದ ಎದುರಿಗೆ ವಿಹರಿಸುತ್ತಾರೆ. [ಇದನ್ನು] ಹೇಳಲು ಇಚ್ಛೆ ಇರುವಂತೆ ನಿನ್ನ ಬಾಯಿ [ಕಾಣಿಸುತ್ತಿದೆ.] ಓ ಬ್ರಹ್ಮನೇ! ನೀನು ಬಹಳ ಮಾತನಾಡಬೇಡ!"

(ಯಜುರ್ವೇದಃ ೨೩. ೨೫)]

ಮಹೀಧರಸ್ಯಾರ್ಥಃ_

ಮಹೀಧರರ ಅರ್ಥವೇನೆಂದರೆ_

ಈ ಮಂತ್ರಕ್ಕೆ ಮಹೀಧರರ ಅಶ್ಲೀಲಾರ್ಥ_ ಬ್ರಹ್ಮನಿಗೆ ಮಹಿಷಿಯ ಉತ್ತರ

'ಸಾನುಚರೀ ಮಹೀಷೀ ಬ್ರಹ್ಮಾಣಂ ಪ್ರತ್ಯಾಹ_

'ಹೇ ಬ್ರಹ್ಮನ್! ತೇ ತವ ಮಾತಾ ತೇ ಪಿತಾ ಚ ಯದಿ ವೃಕ್ಷಸ್ಯ ವೃಕ್ಷವಿಕಾರಸ್ಯ ಮಂಚಕಸ್ಯಾಗ್ರೇ ಕ್ರೀಡತಃ ರಮೇತೇ ತದಾ ತವೋತ್ಪತ್ತಿರಿತಿ ತವಾಪಿ ತುಲ್ಯಮ್ ।

'ಯತ್ರೋಭಯೋಃ ಸಮೋ ದೋಷಃ ಪರಿಹಾರೋಽಪಿಸಮಃ। ನೈಕಃ ಪರ್ಯನುಯೋಕ್ತವ್ಯಸ್ತಾದೃಗರ್ಥವಿಚಾರಣೇ'

'ಇತಿ ನ್ಯಾಯಾತ್ತ್ವಯೇದಂ ನ ವಕ್ತವ್ಯಮಿತಿ ಭಾವಃ ।

→

'ತನ್ನ ಸೇವಕಿಯೊಡನೆ ಮಹಿಷಿಯು ಬ್ರಹ್ಮನಿಗೆ ಉತ್ತರ ಕೊಡುತ್ತಾಳೇನೆಂದರೆ_

'ಓ ಬ್ರಹ್ಮ! (ತೇ) ನಿನ್ನ ತಾಯಿ ಮತ್ತು ನಿನ್ನ ತಂದೆ, ಯಾವಾಗ (ವೃಕ್ಷಸ್ಯ) ವೃಕ್ಷದ ವಿಕಾರವಾದ ಮಂಚದ ಮೇಲೆ (ಕ್ರೀಡತಃ) ರಮಿಸುತ್ತಾರೋ, ಆಗ ನಿನ್ನ ಉತ್ಪತ್ತಿಯಾಗಿದೆ. ಹೀಗೆ, ನಿನ್ನದೂ ಕೂಡ, [ನನ್ನದಕ್ಕೆ] ಸಮಾನವಾಗಿದೆ.

'ಎಲ್ಲಿ ಇಬ್ಬರದೂ ಸಮಾನವಾದ ದೋಷವಿರುತ್ತದೋ, ಅಲ್ಲಿ ಪರಿಹಾರವೂ ಕೂಡ, ಸಮಾನವಾಗಿರುತ್ತದೆ. ಅಂತಹ ಅರ್ಥದ ವಿಚಾರ ಮಾಡುವಾಗ ಕೇವಲ ಒಬ್ಬನನ್ನೇ ಹಿಡಿದಿಟ್ಟುಕೊಳ್ಳಬಾರದು',

'ಎಂಬ ನ್ಯಾಯದಂತೆ, ನೀನು ಇದನ್ನು ಹೇಳಬಾರದು, ಎಂದು ಅಭಿಪ್ರಾಯ!

→

[ಅರ್ಥ:_ "ಮಾತಾ ಚ ತೇ ಪಿತಾ ಚ ತೇ', ಎಂದು ಹೇಳಲಾಗಿದೆ. ಇವಳೇ ಮಾತೆ; ಮತ್ತು ಅವನೇ ಪಿತಾ! ಇವರಿಬ್ಬರ ಮೂಲಕವಾಗಿಯೇ ಇವನಿಗೆ ಸುಖರೂಪವಾದ ಲೋಕವನ್ನು ತಲುಪಿಸುತ್ತದೆ. 'ಅಗ್ರಂ ವೃಕ್ಷಸ್ಯ ರೋಹತಃ', ಎಂದು ಹೇಳಲಾಗಿದೆ. ಶ್ರೀ, ಎಂಬುದೇ ರಾಷ್ಟ್ರದ ಅಗ್ರಭಾಗ! ರಾಷ್ಟ್ರದ ಅಗ್ರಭಾಗವಾದ ಶ್ರೀಯನ್ನೇ ಇವನಿಗೆ ತಲುಪಿಸುತ್ತದೆ. 'ಪ್ರತಿಲಾಮೀತಿ ತೇ ಪಿತಾ ಗಭೇ ಮುಷ್ಟಿಮತಗ್ಂಸಯತ್', ಎಂದು ಹೇಳಲಾಗಿದೆ. ಪ್ರಜೆಗಳೇ ಗಭ! ರಾಷ್ಟ್ರವು ಮುಷ್ಟಿ! ರಾಷ್ಟ್ರವೇ ಪ್ರಜೆಗಳನ್ನು ಪೀಡಿಸುತ್ತದೆ. ಆದುದರಿಂದ, ರಾಜನು ಪ್ರಜೆಗಳ ಪೀಡಕನಾಗಿರುತ್ತಾನೆ."

(ಶತಪಥಬ್ರಾಹ್ಮಣ: ೧೩. ೨. ೯. ೭)]

ಪೃಥಿವೀ-ಸೂರ್ಯರೇ ಮನುಷ್ಯರಿಗೆ ತಾಯಿ-ತಂದೆ!

ಭಾಷ್ಯಮ್_

(ಮಾತಾ ಚ ತೇ.) ಹೇ ಮನುಷ್ಯ! ಇಯಂ ಪೃಥಿವೀ ವಿದ್ಯಾ ಚ ತೇ ತವ ಮಾತೃವದಸ್ತಿ.

ಓಷಧ್ಯಾದ್ಯನೇಕಪದಾರ್ಥದಾನೇನ ವಿಜ್ಞಾನೋತ್ಪತ್ತ್ಯಾ ಚ ಮಾನ್ಯ[⊛]ಹೇತುತ್ವಾತ್.

ಅಸೌ ದ್ಯೌಃ ಪ್ರಕಾಶೋ ವಿದ್ವಾನೀಶ್ವರಶ್ಚ ತವ ಪಿತೃವದಸ್ತಿ;

⊛ 'ಮಾನಹೇತುತ್ವಾತ್' _ಆ. ವೈ.

→

'ಏವಂ ಸತ್ಯಪಿ ವಿವಕ್ಷತಃ ವಕ್ತುಮಿಚ್ಛೋರಿವ ತೇ ತವ ಮುಖಂ ಲಕ್ಷ್ಯತ ಇತಿ ಶೇಷಃ ।

'ಹೇ ಬ್ರಹ್ಮನ್ ! ತ್ವಂ ಮಾ ಬಹು ವದಃ ಮಾ ಬ್ರೂಹಿ ॥ ೨೫ ॥'

_ಅನು.

ಭಾಷ್ಯ _

(ಮಾತಾ ಚ ತೇ.) ಹೇ ಮನುಷ್ಯನೇ! ಈ ಪೃಥಿವಿಯು ಮತ್ತು ವಿದ್ಯೆಯು (ತೇ) ನಿನಗೆ ತಾಯಿಯಂತೆ ಇವೆ!

ಏಕೆಂದರೆ, [ಪೃಥಿವಿಯು] ವನಸ್ಪತಿ ಮೊದಲಾದ ಅನೇಕ ಪದಾರ್ಥಗಳನ್ನು ಕೊಡುವುದರಿಂದಲೂ, ಹಾಗೂ [ವಿದ್ಯೆಯು] ವಿಜ್ಞಾನದ ಉತ್ಪತ್ತಿಯನ್ನು ಮಾಡಿಸುವುದರಿಂದಲೂ ಆದರಕ್ಕೆ ಕಾರಣವಾಗಿವೆ!

ಅಂದರೆ, ಎಲ್ಲಾ ಪ್ರಾಣಿಗಳಿಗೂ ಪೃಥಿವೀ ಮತ್ತು ವಿದ್ಯೆಯು ತಾಯಿಗೆ ಸಮಾನವಾಗಿ ಎಲ್ಲ ರೀತಿಯಿಂದ ಗೌರವವನ್ನು ಕೊಡಿಸುತ್ತವೆ!

ಈ 'ದ್ಯೌ', ಎಂದರೆ ಪ್ರಕಾಶಲೋಕ, ವಿದ್ವಾಂಸ ಮತ್ತು ಈಶ್ವರನು ತಂದೆಯಂತೆ ಇದ್ದಾರೆ!

ಅಂದರೆ, ಸೂರ್ಯಲೋಕ, ವಿದ್ವಾಂಸ, ಹಾಗೂ ಪರಮೇಶ್ವರನು ತಂದೆಗೆ ಸಮಾನವಾಗಿದ್ದಾರೆ.

→

'ಹೀಗಿದ್ದರೂ ಕೂಡ, (ವಿವಕ್ಷತಃ) ಹೇಳಲು ಇಚ್ಛೆ ಇರುವಂತೆ ನಿನ್ನ ಮುಖವು ಕಾಣಿಸುತ್ತಿದೆ, ಎಂದು ಉಳಿದ ಅರ್ಥ!

'ಓ ಬ್ರಹ್ಮಾ! ನೀನು (ಮಾ ಬಹು ವದಃ) ಬಹಳ ಮಾತನಾಡಬೇಡ!' [೨೫]

_ಅನು.

ಸರ್ವಪುರುಷಾರ್ಥಾನುಷ್ಠಾನಸ್ಯ ಸರ್ವಸುಖ-ಪ್ರದಾನಸ್ಯ ಚ ಹೇತುತ್ವೇನ ಪಾಲಕತ್ವಾತ್.

ಏಕೆಂದರೆ, [ಅವರು] ಎಲ್ಲಾ ಪುರುಷಾರ್ಥಗಳ ಅನುಷ್ಠಾನದ, ಮತ್ತು ಎಲ್ಲಾ ಸುಖಗಳನ್ನೂ ಕೊಡುವುದರ, ಕಾರಣವಾಗಿರುವುದರಿಂದ, ಪಾಲಕ-ರಾಗಿದ್ದಾರೆ!

ಅಂದರೆ, ಸೂರ್ಯಲೋಕವು ಪೃಥಿವಿಯ ಪದಾರ್ಥಗಳನ್ನು ಪ್ರಕಾಶಪಡಿಸುವುದರಿಂದಲೂ; ವಿದ್ವಾಂಸನು ವಿಜ್ಞಾನದಾನ ಮಾಡುವುದರಿಂದಲೂ, ಹಾಗೂ ಪರಮಾತ್ಮಾ; ಎಲ್ಲರ ಪಾಲನೆ ಮಾಡುವವರು ಆಗಿದ್ದಾರೆ!

ವಿದ್ವಾನ್ ತಾಭ್ಯಾಮೇವೈನಂ ಜೀವಂ ಸ್ವರ್ಗಂ ಸುಖರೂಪಂ ಲೋಕಂ ಗಮಯತಿ.

ವಿದ್ವಾಂಸನು ಈ ಎರಡರ* ಮೂಲಕವಾಗಿಯೇ, ಈ ಜೀವನಿಗೆ 'ಸ್ವರ್ಗ', ಎಂದರೆ ಸುಖರೂಪವಾದ ಲೋಕವನ್ನು ತಲುಪಿಸುತ್ತಾನೆ.

ಅಂದರೆ, ಈ ಎರಡು* ಕಾರಣಗಳಿಂದ, ವಿದ್ವಾಂಸರು ಜೀವರಿಗೆ ನಾನಾ ಪ್ರಕಾರದ ಸುಖಗಳನ್ನು ಪ್ರಾಪ್ತ ಮಾಡಿಸಿಕೊಡುತ್ತಾರೆ!

ವಿದ್ಯೆ ಮತ್ತು ಧನದಿಂದಲೇ ರಾಷ್ಟ್ರಕ್ಕೆ ಸುಖ!

(ಅಗ್ರಂ ವೃಕ್ಷಸ್ಯ.) ಯಾ ಶ್ರೀರ್ವಿದ್ಯಾಶುಭಗುಣ-ರತ್ನಾದಿಶೋಭಾನ್ವಿತಾ ಚ ಲಕ್ಷ್ಮೀಃ, ಸಾ ರಾಷ್ಟ್ರಸ್ಯಾಗ್ರ-ಮುತ್ತಮಾಂಗಂ ಭವತಿ.

(ಅಗ್ರಂ ವೃಕ್ಷಸ್ಯ.) ಮತ್ತು ಯಾವ 'ಶ್ರೀಃ', ಎಂದರೆ ವಿದ್ಯೆ, **ಶುಭಗುಣ**, **ರತ್ನ** ಮೊದಲಾದ ಶೋಭೆಗಳಿಂದ ಕೂಡಿರುವ **ಲಕ್ಷ್ಮೀ** ಇದ್ದಾಳೋ, ಅವಳು ರಾಷ್ಟ್ರದ **ಅಗ್ರ**, ಎಂದರೆ ಮುಖವಾಗಿದ್ದಾಳೆ!

ಸೈವೈನಂ ಜೀವಂ ಶ್ರಿಯಂ ಶೋಭಾಂ ಗಮಯತಿ, ಯದ್ ರಾಷ್ಟ್ರಸ್ಯಾಗ್ರಮಗ್ರ್ಯಂ ಮುಖ್ಯಂ ಸುಖಂ ಚ.

ಅವಳೇ ಈ ಜೀವಕ್ಕೆ 'ಶ್ರೀ', ಎಂದರೆ ಶೋಭೆಯನ್ನು ತಲುಪಿಸುತ್ತಾಳೆ. ಮತ್ತು ಯಾವುದು ರಾಷ್ಟ್ರದ ಅಗ್ರವಾದ, ಎಂದರೆ ಮುಖ್ಯವಾದ ಸುಖವಾಗಿದೆಯೋ, ಅದನ್ನೂ ಕೂಡ!

ಅಂದರೆ, ವಿದ್ಯೆ ಮತ್ತು ಧನ_ ಈ ಎರಡೂ ಸೇರಿಯೇ ಜೀವಕ್ಕೆ ಶೋಭೆಯನ್ನೂ ಮತ್ತು ರಾಜ್ಯಕ್ಕೆ ಸುಖವನ್ನೂ ತಲುಪಿಸಿ ಕೊಡುತ್ತವೆ!

(ಪ್ರತಿಲಾಮೀತಿ.) ವಿಟ್ ಪ್ರಜಾ ಗಭಾರ್ಥಾದ್ಯೆ-ಶ್ವರ್ಯ್ಯಪ್ರದಾ ;

(ಪ್ರತಿಲಾಮೀತಿ.) 'ವಿಟ್', ಎಂದರೆ ಪ್ರಜೆ! '**ಗಭ**', ಎಂದರೆ ಐಶ್ವರ್ಯವನ್ನು ಕೊಡುವಂತಹುದು ;

ಅಂದರೆ, ಐಶ್ವರ್ಯವನ್ನು ಕೊಡುವ ಪ್ರಜೆಗಳ ಹೆಸರು '**ಗಭ**';

* ಪೃಥಿವಿ ಮತ್ತು ಸೂರ್ಯ _ಅನು.

ಒಬ್ಬನೇ ರಾಜನು ಸ್ವಾರ್ಥಕ್ಕಾಗಿ ಪ್ರಜೆಗಳ ಧನಾಪಹಾರ ಮಾಡುತ್ತಾನೆ!

(ರಾಷ್ಟ್ರಂ ಮುಷ್ಟೀ.) ರಾಜಕರ್ಮ ಮುಷ್ಟಿಃ;

(ರಾಷ್ಟ್ರಂ ಮುಷ್ಟೀ.) ರಾಜ್ಯದ ಕರ್ಮ 'ಮುಷ್ಟಿ', ಅಂದರೆ, ರಾಜ್ಯದ ಹೆಸರು 'ಮುಷ್ಟಿ!'

ಯಥಾ ಮುಷ್ಟಿನಾ ಮನುಷ್ಯೋ ಧನಂ ಗೃಹ್ಣಾತಿ, ತಥೈವೈಕೋ ರಾಜಾ ಚೇತ್, ತರ್ಹಿ ಪಕ್ಷಪಾತೇನ ಪ್ರಜಾಭ್ಯಃ ಸ್ವಸುಖಾಯ ಸರ್ವಾಂ ಶ್ರೇಷ್ಠಾಂ ಶ್ರಿಯಂ ಹರತ್ಯೇವ.

ಹೇಗೆ ಮುಷ್ಟಿಯಿಂದ ಮನುಷ್ಯನು ಧನವನ್ನು ತೆಗೆದುಕೊಳ್ಳುತ್ತಾನೋ, ಹಾಗೆಯೇ, ಒಬ್ಬ ರಾಜನಿದ್ದರೆ, [ಅವನು] ಪಕ್ಷಪಾತದಿಂದ ತನ್ನ ಸುಖಕ್ಕಾಗಿ ಪ್ರಜೆಗಳ ಕಡೆಯಿಂದ ಎಲ್ಲಾ ಶ್ರೇಷ್ಠವಾದ ಸಂಪತ್ತನ್ನು ಅಪಹರಿಸಿಯೇ ಬಿಡುತ್ತಾನೆ!

ಅಂದರೆ, ಹೇಗೆ ಯಾವನಾದರೂ ಬಲವಂತವಾಗಿ ಬೇರೆ ಯಾವನ ಪದಾರ್ಥವನ್ನು ತನ್ನದಾಗಿ ಮಾಡಿಕೊಂಡುಬಿಡುತ್ತಾನೋ, ಹಾಗೆ ರಾಜನು ತನ್ನ ಪ್ರಜೆಗಳ ಪದಾರ್ಥಗಳನ್ನು ಮುಷ್ಟಿಯಿಂದ ಅಪಹರಿಸಿಬಿಡುತ್ತಾನೆ.

ಹಾಗೆಯೇ, ಎಲ್ಲಿ ಒಬ್ಬನೇ ಮನುಷ್ಯನು ರಾಜನಾಗಿರುತ್ತಾನೋ, ಅಲ್ಲಿ ಅವನು ಪಕ್ಷಪಾತದಿಂದ ತನ್ನ ಸುಖಕ್ಕಾಗಿ, ಪ್ರಜೆಗಳಿಗೆ ಶ್ರೇಷ್ಠಗುಣಗಳನ್ನು ಕೊಡುವ ಯಾವ **ಲಕ್ಷ್ಮೀ** ಇದೆಯೋ, ಅದನ್ನು ತೆಗೆದುಕೊಂಡು ಬಿಡುತ್ತಾನೆ!

ಯಸ್ಮಾದ್ ರಾಷ್ಟ್ರಂ ವಿಶಿ ಪ್ರಜಾಯಾಂ ಪ್ರವಿಶ್ಯ ಆಹಂತಿ, ತಸ್ಮಾದ್ ರಾಷ್ಟ್ರೀ ವಿಶಂ ಘಾತುಕೋ ಭವತಿ.

ಯಾವ ಕಾರಣದಿಂದ, ರಾಜ್ಯವು ಪ್ರಜೆಗಳಲ್ಲಿ ಪ್ರವೇಶಿಸಿ, [ಅವರನ್ನು] ಹಿಂಸಿಸುತ್ತದೋ, ಆ ಕಾರಣದಿಂದ, ರಾಜನು ಪ್ರಜೆಗಳನ್ನು ಪೀಡಿಸುವಂತಹವನಾಗಿರುತ್ತಾನೆ.*

ಅಂದರೆ, ರಾಜನು ತನ್ನ ರಾಜಕರ್ಮದಲ್ಲಿ ಪ್ರವೃತ್ತನಾಗಿ, ಪ್ರಜೆಗಳಿಗೆ ಪೀಡೆ ಕೊಡುವವನಾಗಿ ಇರುತ್ತಾನೆ!

ಆದುದರಿಂದ, ಒಬ್ಬನನ್ನು ರಾಜಾ, ಎಂದು ಎಂದಿಗೂ ಅಂಗೀಕರಿಸಬಾರದು!

ಆದರೆ, ಎಲ್ಲರಿಗೂ ಉಚಿತವಾದುದೇನೆಂದರೆ, [ಅವರು] ಅಧ್ಯಕ್ಷಸಹಿತವಾದ ಸಭೆಯ ಆಜ್ಞೆಯಲ್ಲೇ ಇರಬೇಕು!*

* ಈ ಮಂತ್ರಕ್ಕೆ **ಶತಪಥಬ್ರಾಹ್ಮಣೋಕ್ತ** ಅರ್ಥವು ಸಂಕ್ಷಿಪ್ತವೂ, ಅಪೂರ್ಣವೂ ಆಗಿದೆ. ಆದರೆ, ಮಹರ್ಷಿ ದಯಾನಂದರ ಅರ್ಥವು ಪೂರ್ಣವಾಗಿದೆ _ಅನು.

ಅಸ್ಮಾದರ್ಥಾನ್ಮಹೀಧರಸ್ಯಾರ್ಥೋಽತ್ಯಂತ-ವಿರುದ್ಧೋಽಸ್ತಿ.

ಈ ಅರ್ಥಕ್ಕೆ ಮಹೀಧರರ ಅರ್ಥವು ಅತ್ಯಂತ ವಿರುದ್ಧವಾಗಿದೆ.

ತಸ್ಮಾತ್ ಸ ನೈವ ಕೇನಾಪಿ ಮಂತವ್ಯಃ ॥ ೬ ॥

ಆದುದರಿಂದ, ಅದು ಯಾವನಿಂದಲೂ ಕೂಡ, ಅಂಗೀಕರಿಸಲ್ಪಡಲೇ ಬಾರದು! [೬]

(೭) ಕಷ್ಟಪಟ್ಟು ಉನ್ನತಿಯನ್ನು ವರ್ಧಿಸಬೇಕು!

[ಋಷಿಃ_ ಪ್ರಜಾಪತಿಃ ; ದೇವತಾ_ ಶ್ರೀಃ ; ಛಂದಃ_ ಅನುಷ್ಟುಪ್ ; ಸ್ವರಃ_ ಗಾಂಧಾರಃ]

ಊರ್ಧ್ವಾಮೇನಾಮುಚ್ಛ್ರಾಪಯ ಗಿರೌ ಭಾರಗ್ಂ ಹರನ್ನಿವ ।
ಅಥಾಸ್ಯೈ ಮಧ್ಯಮೇಧತಾಗ್ಂ ಶೀತೇ ವಾತೇ ಪುನನ್ನಿವ ॥ ೭ ॥

[ಯಜುರ್ವೇದೇ ಅ. ೨೩, ಮಂ. ೨೬]

[ಅರ್ಥ:_ "ಪರ್ವತದ ಮೇಲೆ ಭಾರವನ್ನು ಎತ್ತಿಕೊಂಡು ಹೋಗುವಂತೆ, ಇವಳನ್ನು ಮೇಲಕ್ಕೆ ಏರಿಸು! ನಂತರ, ಶಾಂತವಾದ ವಾಯುವಿನಲ್ಲಿ ಸ್ವಚ್ಛವಾಗುವಂತೆ, ಇವಳ ಮಧ್ಯಭಾಗವು ವರ್ಧಿಸಲಿ!"

(ಯಜುರ್ವೇದ ೨೩. ೨೬)]

ಮಹೀಧರಸ್ಯಾರ್ಥಃ_

ಮಹೀಧರರ ಅರ್ಥವೇನೆಂದರೆ_

ಈ ಮಂತ್ರಕ್ಕೆ ಮಹೀಧರರ ಅಶ್ಲೀಲಾರ್ಥ_ 'ಉದ್ಗಾತೃವಿನ ಹೇಳಿಕೆ'

'ಯಥಾ ಅಸ್ಯೈ ಅಸ್ಯಾ ವಾವಾತಾಯಾ ಮಧ್ಯಮೇಧತಾಂ ಯೋನಿಪ್ರದೇಶೋ ವೃದ್ಧಿಂ ಯಾಯಾತ್, ಯಥಾ ಯೋನಿರ್ವಿಶಾಲಾ ಭವತಿ, ತಥಾ ಮಧ್ಯೇ ಗೃಹೀತ್ವೋಚ್ಛ್ರಾಪಯೇತ್ಯರ್ಥಃ ।

'ಹೇಗೆ ವಾವಾತಾ**ಳ ಮಧ್ಯಭಾಗವು ದೊಡ್ಡದಾಗುತ್ತದೋ, ಎಂದರೆ ಯೋನಿಪ್ರದೇಶವು ದೊಡ್ಡದಾಗಬಲ್ಲದೋ, ಎಂದರೆ ಯೋನಿಯು ವಿಶಾಲವಾಗುತ್ತದೋ, ಹಾಗೆ ಅದನ್ನು ಮಧ್ಯೆ ಹಿಡಿದುಕೊಂಡು, ಮೇಲಕ್ಕೆ ಎತ್ತು, ಎಂದರ್ಥ!

ಅಂದರೆ, ಪುರುಷರು ಸ್ತ್ರೀಯ ಯೋನಿಯನ್ನು ಎರಡೂ ಕೈಗಳಿಂದ, ಎಳೆದು ದೊಡ್ಡದನ್ನಾಗಿ ಮಾಡಲಿ, [ಎಂದರ್ಥ.]

'ದೃಷ್ಟಾಂತಾಂತರಮಾಹ_

ವಿಶೇಷ ದೃಷ್ಟಾಂತವನ್ನು ಹೇಳಲಾಗಿದೆಯೇನೆಂದರೆ_

'[ಶೀತೇ ವಾತೇ ಪುನನ್ನಿವ.]

['ಶೀತಲವಾದ ಗಾಳಿಯಲ್ಲಿ ಬೀಸುವಂತೆ'.]

** ಮಹಿಷಿಗಿಂತ ಕಡಿಮೆ ದರ್ಜೆಯಲ್ಲಿದ್ದರೂ, ರಾಜನಿಗೆ ಪ್ರಿಯಪತ್ನಿಯಾಗಿರುವವಳಿಗೆ 'ವಾವಾತಾ', ಎಂದು ಹೆಸರು _ಅನು.

'ಯಥಾ ಶೀತಲೇ ವಾಯೌ ವಾತಿ ಪುನನ್ ಧಾನ್ಯಪವನಂ ಕುರ್ವಾಣಃ ಕೃಷೀವಲೋ ಧಾನ್ಯಪಾತ್ರಂ ಯಥಾ ಊರ್ಧ್ವಂ ಕರೋತಿ ತಥೇತ್ಯರ್ಥಃ ॥ ೨೬ ॥ *

'ಹೇಗೆ ಶೀತಲವಾಗಿ ಬೀಸುತ್ತಿರುವ ವಾಯುವಿನಲ್ಲಿ ಭತ್ತವನ್ನು ಶುದ್ಧೀಕರಿಸುತ್ತಿರುವ ರೈತನು ಭತ್ತದ ಮೊರವನ್ನು ಹೇಗೆ ಮೇಲಕ್ಕೆ ಎತ್ತುತ್ತಾನೋ, ಹಾಗೆ, ಎಂದರ್ಥ!*

'ಅಂದರೆ, ಹೇಗೆ ಬೇಸಾಯ ಮಾಡುವ ಮನುಷ್ಯನು ಭತ್ತವನ್ನೂ ಮತ್ತು ಹೊಟ್ಟನ್ನೂ ಬೇರೆ ಬೇರೆ ಮಾಡುವುದಕ್ಕಾಗಿ, ಒಂದು ಮೊರದಲ್ಲಿ ತುಂಬಿ, ಮೇಲಕ್ಕೆ ಎತ್ತಿ, ಬೀಸುತ್ತಿರುವ ಗಾಳಿಯಲ್ಲಿ ಅಲ್ಲಾಡಿಸುತ್ತಾನೋ, ಹಾಗೆ!' [೨೬]

(೮) ಯೌವನಾವೇಶ!

[ಋಷಿಃ_ ಪ್ರಜಾಪತಿಃ ; ದೇವತಾ_ ಪ್ರಜಾಪತಿಃ ; ಛಂದಃ_ ನಿಚೃದನುಷ್ಟುಪ್ ; ಸ್ವರಃ_ ಗಾಂಧಾರಃ]

ಯದ॑ಸ್ಯಾಽ ಅಗ್ಂ॑ಹುಭೇದ್ಯಾಃ॑ ಕೃ॒ಧು ಸ್ಥೂ॒ಲಮು॒ಪಾತ॑ಸತ್ ।
ಮು॒ಷ್ಕಾವಿದಸ್ಯಾಽ ಏಜತೋ ಗೋಶ॒ಫೇ ಶ॑ಕುಲಾವಿ॑ವ ॥ ೮ ॥

[ಯಜುರ್ವೇದೇ ಅ. ೨೩, ಮಂ. ೨೮]

[ಅರ್ಥ:_ "ಯಾವಾಗ ಪಾಪಭೇದಕಳಾದ ಇವಳ ಸಣ್ಣ ಅಥವಾ ದೊಡ್ಡ (ಅಂಗವು) ಅಲಂಕರಿಸುತ್ತದೋ, ಆಗಂತೂ ಗೋಖುರದಲ್ಲಿ (ಚಲಿಸುವ) ಸಣ್ಣ ಮೀನುಗಳಂತೆ ಇವಳ ಕೋಶಗಳೆರಡೂ ಕಂಪಿಸುತ್ತವೆ."

(ಯಜುರ್ವೇದ: ೨೩. ೨೮)]

---

* ಅಸ್ಯ ಮಂತ್ರಸ್ಯ ಮಹೀಧರಕೃತಭಾಷ್ಯಸ್ಯಾರಂಭೋ ಯಥಾ_

' ಉದ್ಗಾತಾ ವಾವಾತಾಮಾಹ । ಕಂಚಿನ್ನರಂ ಪ್ರತ್ಯಾಹ_

'ಹೇ ನರ! ಏನಾಂ ವಾವಾತಾಮೂರ್ಧ್ವಾಮುಚ್ಛ್ರಾಪಯ। ಉಚ್ಛ್ರಿತಾಂ ಕುರು ।

'ಕಥಮಿವ? ಗಿರೌ ಭಾರಂ ಹರನ್ನಿವ ।

'ಯಥಾ ಕಶ್ಚಿತ್ ಗಿರೌ ಪರ್ವತೇ ಭಾರಂ ಹರನ್ ಪರ್ವತೋಪರಿ ಭಾರಮಾರೋಪಯನ್ ಯಥಾ ತಮುಚ್ಛ್ರಯತಿ, ತಥೈನಾಮೂರ್ಧ್ವಾಂ ಕುರು ।

'ಕಥಮೂರ್ಧ್ವಾ ಕಾರ್ಯಾ? ತದಾಹ_

→

* ಈ ಮಂತ್ರಕ್ಕೆ ಮಹೀಧರರು ಮಾಡಿದ ಭಾಷ್ಯದ ಆರಂಭ ಹೇಗಿದೆಯೆಂದರೆ_

'ಉದ್ಗಾತೃವು ವಾವಾತಾಳ ಬಗ್ಗೆ ಹೇಳುತ್ತಾನೆ. ಎಂದರೆ, ಯಾವನೋ ಮನುಷ್ಯನಿಗೆ ಹೇಳುತ್ತಾನೇನೆಂದರೆ_

'ಹೇ ಮನುಷ್ಯ! ಈ ವಾವಾತಾಳನ್ನು ಮೇಲಕ್ಕೆ ಎತ್ತು, ಎಂದರೆ, ಮೇಲಕ್ಕೆತ್ತಿದ್ದವಳಂತೆ ಮಾಡು!

'ಹೇಗಿರುವವಳಂತೆ? ಎಂದರೆ_ ಬೆಟ್ಟದ ಮೇಲೆ ಭಾರವನ್ನು ತೆಗೆದುಕೊಂಡು ಹೋಗುವಂತೆ!

'ಹೇಗೆ ಯಾವನೋ (ಗಿರೌ) ಪರ್ವತದ ಮೇಲೆ (ಭಾರಂ ಹರನ್) ಭಾರವನ್ನು ಹೊತ್ತುಕೊಂಡು ಹೋಗುತ್ತಾ, ಹೇಗೆ ಅದನ್ನು ಎತ್ತಿರುತ್ತಾನೋ, ಹಾಗೆ ಇವಳನ್ನು ಮೇಲಕ್ಕೆ ಎತ್ತು!

'ಹೇಗೆ ಮೇಲೆತ್ತಿರಬೇಕು? ಅದಕ್ಕೆ ಉತ್ತರವೇನೆಂದರೆ_

→

ಮಹೀಧರಸ್ಯಾರ್ಥಃ_

ಮಹೀಧರರ ಅರ್ಥವೇನೆಂದರೆ_

ಈ ಮಂತ್ರಕ್ಕೆ ಮಹೀಧರರ ಅಶ್ಲೀಲಾರ್ಥ_ ಹೋತೃವಿನ ಹೇಳಿಕೆ

'[ಹೋತಾ ಪರಿವೃಕ್ತಾಮಾಹ_]

'ಯತ್ ಯದಾ ಅಸ್ಯಾಃ ಪರಿವೃಕ್ತಾಯಾಃ ಕೃಧು ಹ್ರಸ್ವಂ ಸ್ಥೂಲಂ ಚ ಶಿಶ್ನಮುಪಾತಸತ್ ಉಪಗಚ್ಛೇತ್ ಯೋನಿಂ ಪ್ರತಿ ಗಚ್ಛೇತ್;

'ತಂಸ ಉಪಕ್ಷಯೇ'

→

'ಅಥೇತಿ ನಿಪಾತೋ ಯಥಾರ್ಥಃ । *

ಸಮಾನಾರ್ಥಕತ್ವಾದಗ್ರಿಮಮಂತ್ರೋ (ಯಜು. ೨೩. ೨೬) ಗ್ರಂಥಕರ್ತ್ರಾ ಸ್ವಭಾಷ್ಯೇ ನ ಸಮ್ಮಿಲಿತಃ. ಅಸ್ಮಾಭಿರಧೋ ದೀಯತೇ_

'[ಹೋತೃವು ಪರಿವೃಕ್ತೆಗೆ ಹೇಳುತ್ತಾನೆ_]

'(ಯತ್) ಯಾವಾಗ (ಅಸ್ಯಾಃ) ಈ ಪರಿವೃಕ್ತೆಯಲ್ಲಿ (ಕೃಧು) ಚಿಕ್ಕದಾದ ಅಥವಾ (ಸ್ಥೂಲಮ್) ದಪ್ಪದಾದ ಶಿಶ್ನವು (ಉಪಾತಸತ್) ಸಮೀಪಿಸುತ್ತದೋ, ಎಂದರೆ ಯೋನಿಯ ಕಡೆಗೆ ಹೋಗುತ್ತದೋ;

'ತಂಸ' ಧಾತುವು ಕ್ಷೀಣಿಸುವ ಅರ್ಥದಲ್ಲಿದೆ!

→

'ಅಥ', ಎಂಬ ನಿಪಾತವು ಇಲ್ಲಿ ಯಥಾ [= ಹೇಗೆ], ಎಂಬ ಅರ್ಥದಲ್ಲಿದೆ. *

ಸಮಾನವಾದ ಅರ್ಥವುಳ್ಳದ್ದಾದುದರಿಂದ, ಮುಂದಿನ ಮಂತ್ರವು (ಯಜು. ೨೩. ೨೬) ಗ್ರಂಥಕರ್ತರಿಂದ ತಮ್ಮ ಭಾಷ್ಯದಲ್ಲಿ ಸೇರಿಸಲ್ಪಡಲಿಲ್ಲ, ನಾವು ಅದನ್ನು ಕೆಳಗೆ ಕೊಟ್ಟಿದ್ದೇವೆ_

ಕಷ್ಟಪಟ್ಟು ಉನ್ನತಿಯ ಸಂಚಾಲನೆ ಮಾಡಬೇಕು!

[ಋಷಿಃ_ ಪ್ರಜಾಪತಿಃ ; ದೇವತಾ_ ಶ್ರೀಃ ; ಛಂದಃ_ ಅನುಷ್ಟುಪ್ ; ಸ್ವರಃ_ ಗಾಂಧಾರಃ]

ಊರ್ಧ್ವಮೇನಮುಚ್ಛ್ರಯತಾದ್ ಗಿರೌ ಭಾರಗ್ಂ ಹರನ್ನಿವ ।
ಅಥಾಸ್ಯ ಮಧ್ಯಮೇಜತು ಶೀತೇ ವಾತೇ ಪುನನ್ನಿವ ॥

[ಯಜುರ್ವೇದೇ ಅ. ೨೩, ಮಂ. ೨೬]

[ಅರ್ಥ:_ "ಪರ್ವತದ ಮೇಲೆ ಭಾರವನ್ನು ಎತ್ತಿಕೊಂಡು ಹೋಗುವಂತೆ, ಇವನನ್ನು ಮೇಲಕ್ಕೆ ಎತ್ತು! ನಂತರ, ಶಾಂತವಾದ ವಾಯುವಿನಲ್ಲಿ ಸ್ವಚ್ಛವಾಗುವಂತೆ, ಇವನ ಮಧ್ಯಭಾಗವು ಕಂಪಿಸಲಿ!

(ಯಜುರ್ವೇದ: ೨೩. ೨೬)]

ಮಹೀಧರಸ್ಯಾರ್ಥಃ _

ಮಹೀಧರರ ಅರ್ಥವೇನೆಂದರೆ_

ಈ ಮಂತ್ರಕ್ಕೆ ಮಹೀಧರರ ಅಶ್ಲೀಲಾರ್ಥ_ ವಾವಾತಾಳ ಉತ್ತರ

'ವಾವಾತೋದ್ಗಾತಾರಂ ಪ್ರತ್ಯಾಹ_ ಭವತೋಽಪ್ಯೇತತ್ಸಮಾನಮ್।

'ಹೇ ನರ! ಏನಮುದ್ಗಾತಾರಮೂರ್ಧ್ವಮುಚ್ಛ್ರಯತಾತ್ ಊರ್ಧ್ವಂ ಕುರು ।

→

'ವಾವಾತಾ ಉದ್ಗಾತೃವಿನ ಬಗ್ಗೆ_ 'ನಿಮ್ಮದೂ ಕೂಡ, ಇದಕ್ಕೆ ಸಮಾನವಾಗಿದೆ', ಎಂದು ಹೇಳುತ್ತಾಳೆ.

'ಹೇ ಮನುಷ್ಯನೇ ! ಈ ಉದ್ಗಾತೃವನ್ನು ಮೇಲಕ್ಕೆ ಎತ್ತು, ಎಂದರೆ ಮೇಲಿರುವಂತೆ ಮಾಡು !

→

* ಅಸ್ಮಾದಗ್ರಸಾರಿತಂ ಭಾಷ್ಯಂ ೧೦೫೫ ತಮೇ ಪೃಷ್ಠೇ ಗ್ರಂಥಕರ್ತ್ರೋದ್ಧೃತಮ್ _ಅನು.

* ಇದಕ್ಕೆ ನಂತರ ಬರೆದಿರುವ ಭಾಷ್ಯವು ಗ್ರಂಥಕರ್ತರಿಂದ ೧೦೫೫ನೆಯ ಪುಟದಲ್ಲಿ ಮೊದಲೇ ಉದ್ಧರಿಸಲ್ಪಟ್ಟಿದೆ _ಅನು.

'ತದಾ ಮುಷ್ಕೌ ವೃಷಣೌ ಇತ್ ಏವ ಅಸ್ಯಾಃ ಯೋನೇರುಪರಿ ಏಜತಃ ಕಂಪೇತೇ ।

ಆಗ, (ಮುಷ್ಕೌ) ವೃಷಣಗಳೆರಡೂ (ಅಸ್ಯಾಃ) ಇವಳ ಯೋನಿಯ ಮೇಲೆ (ಏಜತಃ) ಕಂಪಿಸುತ್ತವೆ.

ಅಂದರೆ, 'ಪರಿವೃಕ್ತಾ'*, ಎಂದರೆ ಯಾವ ಸ್ತ್ರೀಯ ವೀರ್ಯವು ಹೊರಟು ಹೋಗುತ್ತದೋ, [ಅವಳು!] ಅವಳ ಯೋನಿಯಲ್ಲಿ ಯಾವಾಗ ಚಿಕ್ಕದಾದ ಅಥವಾ ದಪ್ಪದಾದ ಲಿಂಗವನ್ನು ಹಾಕಲಾಗುತ್ತದೋ, ಆಗ ಯೋನಿಯ ಮೇಲು ಭಾಗದಲ್ಲಿ ಎರಡೂ ಅಂಡಕೋಶಗಳು ನರ್ತಿಸುತ್ತವೆ! ಏಕೆಂದರೆ, ಯೋನಿಯು ಚಿಕ್ಕದಾಗಿಯೂ, ಮತ್ತು ಲಿಂಗವು ದಪ್ಪದಾಗಿಯೂ ಇರುತ್ತದೆ.

'ಲಿಂಗಸ್ಯ ಸ್ಥೂಲತ್ವಾದ್ ಯೋನೇರಲ್ಪತ್ವಾದ್ ವೃಷಣೌ ಬಹಿಸ್ತಿಷ್ಠತ ಇತ್ಯರ್ಥಃ ।

'ಲಿಂಗವು ದಪ್ಪದಾಗಿರುವುದರಿಂದಲೂ, ಹಾಗೂ ಯೋನಿಯು ಸಣ್ಣದಾಗಿರುವುದರಿಂದಲೂ, ಎರಡೂ ವೃಷಣಗಳೂ ಹೊರಗೆ ಇದ್ದು ಬಿಡುತ್ತವೆ, ಎಂದರ್ಥ!

'ತತ್ರ ದೃಷ್ಟಾಂತಃ_

ಈ ಬಗ್ಗೆ ದೃಷ್ಟಾಂತವೇನೆಂದರೆ_

'ಗೋಶಫೇ ಜಲಪೂರ್ಣೇ ಗೋಃ ಖುರೇ ಶಕುಲೌ ಮತ್ಸ್ಯಾವಿವ ಯಥಾ ಉದಕಪೂರ್ಣೇ ಗೋಃ ಪದೇ ಮತ್ಸ್ಯೌ ಕಂಪೇತೇ.

(ಗೋಶಫೇ) ನೀರು ತುಂಬಿರುವ ಹಸುವಿನ ಖುರದಲ್ಲಿ (ಶಕುಲೌ) ಮೀನುಗಳು ಇರುವಂತೆ ; ಎಂದರೆ, ಹೇಗೆ ನೀರು ತುಂಬಿರುವ, ಹಸುವಿನ ಪಾದದಿಂದಾದ, ಗುಣಿಯಲ್ಲಿ ಮೀನುಗಳು ಕಂಪಿಸುತ್ತವೋ, ಹಾಗೆ!

'ಅಂದರೆ, ಹಸುವಿನ ಖುರದಿಂದಾದ ಗುಣಿಯಲ್ಲಿನ ನೀರಿನಲ್ಲಿ ಎರಡು ಮೀನುಗಳು ನರ್ತಿಸುತ್ತವೋ, ಹಾಗೆಯೇ, ಯೋನಿಯ ಮೇಲುಭಾಗದಲ್ಲಿ, ಅಂಡಕೋಶಗಳು ನರ್ತಿಸುತ್ತವೆ.

'[ಕೃಧ್ವಿತಿ ಹ್ರಸ್ವನಾಮ ।

'[‘ಕೃಧು’, ಎಂಬುದಕ್ಕೆ ‘ಸಣ್ಣದು’, ಎಂದರ್ಥ!

'ಕೀದೃಶ್ಯಾ ಅಸ್ಯಾಃ?

'ಇವಳದು ಯಾವ ತರಹದ್ದು? ಎಂದರೆ_

'ಅಂಹುಭೇದ್ಯಾಃ ಅಂಹು ಭಗಂ ಭೇದ್ಯಂ ವಿದಾರ್ಯಂ ಯಸ್ಯಾಃ ಸಾ ಅಂಹುಭೇದೀ, ತಸ್ಯಾಃ;

'(ಅಂಹುಭೇದ್ಯಾಃ) ಯಾವಳ ‘ಅಂಹು’, ಎಂದರೆ ಭಗವು (ಭೇದ್ಯಂ) ಎಂದರೆ ಹರಿದಿರುತ್ತದೋ, ಅವಳು (ಅಂಹುಭೇದೀ); ಅವಳ;

'ಅಂಹುರ್ಭಿದ್ಯತೇ ಯಸ್ಯಾ ವಾ ॥ ೨೮ ॥]'

'ಅಥವಾ ಯಾವಳ ಭಗವು ಹರಿಯಲ್ಪಡಲಾಗುತ್ತದೋ, ಅವಳ ;' [೨೮]

→ 'ಗಿರೌ ಭಾರಮಿತಿ ಪೂರ್ವವತ್ ।

'ಅಥ ಯಥಾಸ್ಯ ಉದ್ಗಾತುರ್ಮಧ್ಯಂ ಲಿಂಗಮೇಜತ್ ಕಂಪತಾಮ್।

'ಏಜೃ ಕಂಪನೇ' ಲೋಟ್ ।

'ಶೀತೇ ವಾತೇ ಉಕ್ತಮ್ ॥ ೨೭ ॥

→ 'ಬೆಟ್ಟದ ಮೇಲೆ ಭಾರವನ್ನು, ಎಂದು ಮೊದಲಿನಂತೆ ಅರ್ಥ!

'ಹೇಗೆ ಈ ಉದ್ಗಾತೃವಿನ ಮಧ್ಯೆ ಇರುವ ಲಿಂಗವು ಕಂಪಿಸಬಲ್ಲದೋ, ಹಾಗೆ!

'ಏಜೃ ಧಾತುವು ಕಂಪನೆಯ ಅರ್ಥದಲ್ಲಿದೆ. ಆಜ್ಞಾರ್ಥಕವಾಗಿ!

'ಶೀತಲವಾದ ಗಾಳಿಯಲ್ಲಿ, ಎಂದು ಮೊದಲೇ ಹೇಳಲಾಗಿದೆ. [೨೭]

---

* ರಾಜನ ನಾಲ್ಕು ರಾಣಿಯರಲ್ಲಿ ಪರಿತ್ಯಕ್ತಳಾದಂತೆ ಇರುವವಳಿಗೆ ‘ಪರಿವೃಕ್ತಾ’, ಎಂದು ಹೆಸರು.

ಈ ಮಂತ್ರಗಳಿಗೆ ಶತಪಥಬ್ರಾಹ್ಮಣದ ಸತ್ಯಾರ್ಥ_ ರಾಷ್ಟ್ರೋನ್ನತಿ!

ಅಥ ಸತ್ಯೋರ್ಥಃ_ ಈಗ ಸತ್ಯವಾದ ಅರ್ಥವೇನೆಂದರೆ_

"ಊರ್ಧ್ವಾಮೇನಾಮುಚ್ಛ್ರಾಪಯೇತಿ । ಶ್ರೀರ್ವೈ ರಾಷ್ಟ್ರಮ್
ಅಶ್ವಮೇಧಃ ಶ್ರಿಯಮೇವಾಸ್ಮೈ ರಾಷ್ಟ್ರಮೂರ್ಧ್ವಮುಚ್ಛ್ರಯತಿ ॥"

[ಶತಪಥಬ್ರಾಹ್ಮಣೇ ಕಾಂ. ೧೩, ಅ. ೨, ಬ್ರಾ. ೯, ಕಂ. ೨]

[ಅರ್ಥ:_ "'ಊರ್ಧ್ವಾಮೇನಾಮುಚ್ಛ್ರಾಪಯ', ಎಂದು ಹೇಳಲಾಗಿದೆ. 'ಶ್ರೀ'ಯೇ ರಾಷ್ಟ್ರ! ಮತ್ತು ರಾಷ್ಟ್ರವು ಅಶ್ವಮೇಧ! ಇವನಿಗಾಗಿ 'ಶ್ರೀ'ಯನ್ನೂ ಮತ್ತು ರಾಷ್ಟ್ರವನ್ನೂ ಮೇಲಕ್ಕೆ ಎತ್ತುತ್ತಾನೆ."

(ಶತಪಥಬ್ರಾಹ್ಮಣ: ೧೩. ೨. ೯. ೨)]

"ಗಿರೌ ಭಾರಗ್ಂ ಹರನ್ನಿವೇತಿ । ಶ್ರೀರ್ವೈ ರಾಷ್ಟ್ರಸ್ಯ ಭಾರಃ,
ಶ್ರಿಯಮೇವಾಸ್ಮೈ ರಾಷ್ಟ್ರಗ್ಂ ಸಂನ್ನಹ್ಯತಿ । ಅಥೋ ಶ್ರಿಯ-
ಮೇವಾಸ್ಮಿನ್ ರಾಷ್ಟ್ರಮಧಿನಿದಧಾತಿ ॥"

[ಶತಪಥಬ್ರಾಹ್ಮಣೇ ಕಾಂ. ೧೩, ಅ. ೨, ಬ್ರಾ. ೯, ಕಂ. ೩]

[ಅರ್ಥ:_ "'ಗಿರೌ ಭಾರಂ ಹರನ್ನಿವ', ಎಂದು ಹೇಳಲಾಗಿದೆ. 'ಶ್ರೀ'ಯೇ ನಿಶ್ಚಯವಾಗಿ ರಾಷ್ಟ್ರದ ಭಾರವಾಗಿದೆ. ಇವನಿಗಾಗಿ 'ಶ್ರೀ', ಎಂಬ ರಾಷ್ಟ್ರವನ್ನೇ ಸನ್ನದ್ಧ ಮಾಡುತ್ತಾನೆ. ಎಂದರೆ, 'ಶ್ರೀ'ಯನ್ನೇ ಈ ರಾಷ್ಟ್ರದ ಕೆಳಗೆ-ಮೇಲೆ ಸ್ಥಾಪಿಸುತ್ತಾನೆ."

(ಶತಪಥಬ್ರಾಹ್ಮಣ: ೧೩. ೨. ೯. ೩)]

"ಅಥಾಸ್ಯೈ ಮಧ್ಯಮೇಧತಾಮಿತಿ । ಶ್ರೀರ್ವೈ ರಾಷ್ಟ್ರಸ್ಯ ಮಧ್ಯಗ್ಂ
ಶ್ರಿಯಮೇವ ರಾಷ್ಟ್ರಂ ಮಧ್ಯತೋಽನ್ನಾದ್ಯಂ ದಧಾತಿ ॥"

[ಶತಪಥಬ್ರಾಹ್ಮಣೇ ಕಾಂ. ೧೩, ಅ. ೨, ಬ್ರಾ. ೯, ಕಂ. ೪]

[ಅರ್ಥ:_ "'ಅಥಾಸ್ಯೈ ಮಧ್ಯಮೇಧತಾಮ್', ಎಂದು ಹೇಳಲಾಗಿದೆ. 'ಶ್ರೀ'ಯೇ ನಿಶ್ಚಯವಾಗಿ ರಾಷ್ಟ್ರದ ಮಧ್ಯಭಾಗ! 'ಶ್ರೀ'ಯನ್ನೇ ರಾಷ್ಟ್ರದ ಮಧ್ಯದಲ್ಲಿ ಅನ್ನಾದಿ ಭೋಗಗಳನ್ನಾಗಿ ಇಡುತ್ತಾನೆ."

(ಶತಪಥಬ್ರಾಹ್ಮಣ: ೧೩. ೨. ೯. ೪)]

"ಶೀತೇ ವಾತೇ ಪುನನ್ನಿವೇತಿ । ಕ್ಷೇಮೋ ವೈ ರಾಷ್ಟ್ರಸ್ಯ ಶೀತಂ,
ಕ್ಷೇಮಮೇವಾಸ್ಮೈ ಕರೋತಿ ॥"

[ಶತಪಥಬ್ರಾಹ್ಮಣೇ ಕಾಂ. ೧೩, ಅ. ೨, ಬ್ರಾ. ೯, ಕಂ. ೫]

[ಅರ್ಥ:_ "'ಶೀತೇ ವಾತೇ ಪುನನ್ನಿವ', ಎಂದು ಹೇಳಲಾಗಿದೆ. ಕ್ಷೇಮವೇ ನಿಶ್ಚಯವಾಗಿ ರಾಷ್ಟ್ರದ ಶೀತ! ಇವನಿಗೆ ಕ್ಷೇಮವನ್ನೇ ಮಾಡುತ್ತಾನೆ."

(ಶತಪಥಬ್ರಾಹ್ಮಣ: ೧೩. ೨. ೯. ೫)]

ಭಾಷ್ಯಮ್_

ಭಾಷ್ಯ_

ವಿದ್ಯೆ ಮತ್ತು ಧನದಿಂದಲೇ ರಾಷ್ಟ್ರೋನ್ನತಿ!

(ಊರ್ಧ್ವಾಮೇನಾ.) ಹೇ ನರ! ತ್ವಂ ಶ್ರೀರ್ವೈ ರಾಷ್ಟ್ರಮಶ್ವಮೇಧೋ ಯಜ್ಞಶ್ಚಾಸ್ಮೈ ರಾಷ್ಟ್ರಾಯ ಶ್ರಿಯಮುಚ್ಛ್ರಾಪಯ, ಸೇವ್ಯಾಮುತ್ಕೃಷ್ಟಾಂ ಕುರು.

(ಊರ್ಧ್ವಾಮೇನಾ.) ಓ ಮನುಷ್ಯ! ಶ್ರೀ, ಎಂದರೆ ರಾಷ್ಟ್ರ; ಹಾಗೂ ಅಶ್ವಮೇಧಯಜ್ಞ! ನೀನು ರಾಷ್ಟ್ರಕ್ಕಾಗಿ ಶ್ರೀಯನ್ನು ಎತ್ತು, ಎಂದರೆ ಸೇವೆ ಮಾಡಲು ಯೋಗ್ಯವನ್ನಾಗಿಯೂ, ಉತ್ಕೃಷ್ಟವನ್ನಾಗಿಯೂ ಮಾಡು!

ಅಂದರೆ, ವಿದ್ಯೆ ಮತ್ತು ಧನದ ಹೆಸರು 'ಶ್ರೀ', ಎಂದಿರುತ್ತದೆ. ಹಾಗೂ ರಾಷ್ಟ್ರದ ಪಾಲನೆಯ ಹೆಸರು **'ಅಶ್ವಮೇಧ'**!

ಇವೇ ಶ್ರೀಯ, ಮತ್ತು ರಾಜ್ಯದ ಉನ್ನತಿ ಮಾಡುವುವು ಆಗಿರುತ್ತವೆ. ಎಂದರೆ, ಶ್ರೀ ರಾಜ್ಯದ ಆಧಾರವಾಗಿರುತ್ತದೆ. ಮತ್ತು ಅದೇ ರಾಜ್ಯದಲ್ಲಿ ಶೋಭೆಯನ್ನು ಧಾರಣ ಮಾಡಿಕೊಂಡು, ಉತ್ತಮ ಪದಾರ್ಥಗಳನ್ನು ಪ್ರಾಪ್ತಮಾಡಿ ಕೊಡುತ್ತದೆ.

ಏವಂ ಸಭಯಾ ರಾಜ್ಯಪಾಲನೇ ಕೃತೇ ರಾಷ್ಟ್ರಂ ರಾಜ್ಯಮೂರ್ಧ್ವಂ ಸರ್ವೋತ್ಕೃಷ್ಟಗುಣಮುಚ್ಛ್ರಯಿತುಂ ಶಕ್ಯಮ್.

ಹೀಗೆ, ಸಭೆಯಿಂದ ರಾಜ್ಯಪಾಲನೆ ಮಾಡಿದಾಗ, **(ರಾಷ್ಟ್ರಮ್)** ರಾಜ್ಯವನ್ನು **(ಊರ್ಧ್ವಮ್)** ಸರ್ವೋತ್ಕೃಷ್ಟ ಗುಣವುಳ್ಳದ್ದನ್ನಾಗಿ ಉನ್ನತಿಗೊಳಿಸಲು ಶಕ್ಯವಾಗುತ್ತದೆ.

(ಗಿರೌ ಭಾರಗ್ಂ ಹರನ್ನಿವ.) ಕಸ್ಮಿನ್ ಕಿಮಿವ?

(ಗಿರೌ ಭಾರಗ್ಂ ಹರನ್ನಿವ.) ಯಾವುದರ ಮೇಲೆ, ಏನಂತೆ? ಎಂದರೆ_

ಗಿರಿಶಿಖರೇ ಪ್ರಾಪ್ತ್ಯರ್ಥಂ ಭಾರವದ್ವಸ್ತೂಪಸ್ಥಾಪಯನ್ನಿವ.

ಬೆಟ್ಟದ ಶಿಖರವನ್ನು ಸೇರುವುದಕ್ಕಾಗಿ, ಭಾರವಾದ ಪದಾರ್ಥವನ್ನು [ತೆಗೆದುಕೊಂಡು ಹೋಗಿ] ಇಡುವಂತೆ!

ಅಂದರೆ, ಹೇಗೆ ಯಾವನಾದರೂ ಮನುಷ್ಯನು ಪರ್ವತದ ಮೇಲೆ ಭಾರವನ್ನು ಎತ್ತಿಕೊಂಡು, ಹೋಗುತ್ತಾನೋ, ಹಾಗೆಯೇ, ಸಭೆಯೂ ಕೂಡ, ರಾಜ್ಯಕ್ಕೆ ಉತ್ತಮಸುಖವನ್ನು ಪ್ರಾಪ್ತಮಾಡಿಕೊಡುತ್ತದೆ.

ಕೋಽಸ್ತಿ ರಾಷ್ಟ್ರಸ್ಯ ಭಾರ? ಇತ್ಯತ್ರಾಹ_

ಪ್ರಶ್ನೆ_ ರಾಜ್ಯದ ಭಾರ ಯಾವುದು? ಎಂಬುದಕ್ಕೆ ಉತ್ತರವೇನೆಂದರೆ_

ಶ್ರೀರ್ವೈ ರಾಷ್ಟ್ರಸ್ಯ ಭಾರ ಇತಿ.

ಉತ್ತರ_ ಶ್ರೀಯೇ ನಿಶ್ಚಯವಾಗಿ ರಾಜ್ಯದ ಭಾರವಾಗಿದೆ!

ಏಕೆಂದರೆ, ಇದರಿಂದಲೇ ರಾಜ್ಯದ ವೃದ್ಧಿ ಉಂಟಾಗುತ್ತದೆ.

ಅಂದರೆ, ರಾಜ್ಯದಲ್ಲಿ ವಿದ್ಯೆ ಮತ್ತು ಧನದ ವೃದ್ಧಿಯು ಉತ್ತಮ ರೀತಿಯಲ್ಲಿ ಆಗುವುದಕ್ಕಾಗಿ ಅದರ ಭಾರವನ್ನು, ಎಂದರೆ ವ್ಯವಸ್ಥೆಯನ್ನು ಶ್ರೇಷ್ಠಪುರುಷರ ಮೇಲಿಡಬೇಕು!

ಸಭಾವ್ಯವಸ್ಥಯಾಽಸ್ಮೈ ರಾಷ್ಟ್ರಾಯ ಶ್ರಿಯಂ ಸಂನ್ನಹ್ಯ ಸಂಬಧ್ಯ ರಾಷ್ಟ್ರಮನುತ್ತಮಂ ಕುರ್ಯ್ಯಾತ್.

ಸಭೆಯ ವ್ಯವಸ್ಥೆಯಿಂದ ಈ ರಾಷ್ಟ್ರಕ್ಕೆ ಶ್ರೀಯನ್ನು ಸಂಬದ್ಧಮಾಡಿ, ರಾಷ್ಟ್ರವನ್ನು ಶ್ರೇಷ್ಠತಮವನ್ನಾಗಿ ಮಾಡಬೇಕು!

ಅಂದರೆ, ಈ ಶ್ರೀಯೇ ರಾಜ್ಯವನ್ನು ಧನದ ಭಾರದಿಂದ ಯುಕ್ತವನ್ನಾಗಿ ಮಾಡಿ, ಉತ್ತಮತ್ವವನ್ನು ತಲುಪಿಸುತ್ತದೆ!

ಸರ್ವತ್ರ ಶ್ರೀಯುಕ್ತರಾಷ್ಟ್ರದ ಸ್ಥಾಪನೆ!

ಅಥೋ ಇತ್ಯನಂತರಮೇವಂ ಕುರ್ವನ್ ಜನೋಽಸ್ಮಿನ್ ಸಂಸಾರೇ ರಾಷ್ಟ್ರಂ ಶ್ರೀಯುಕ್ತಮಧಿನಿದಧಾತಿ ಸರ್ವೋಪರಿ ನಿತ್ಯಂ ದಧಾತೀತ್ಯರ್ಥಃ.

(ಅಥೋ) ನಂತರ, ಹೀಗೆ ಮಾಡುತ್ತಾ, ಜನರು ಈ ಜಗತ್ತಿನಲ್ಲಿ ರಾಷ್ಟ್ರವನ್ನು 'ಶ್ರೀ'ಯುಕ್ತವನ್ನಾಗಿ, (ಅಧಿನಿದಧಾತಿ) ಎಲ್ಲದಕ್ಕಿಂತ ಮೇಲೆ ನಿತ್ಯವೂ ಧಾರಣ ಮಾಡಿಕೊಂಡಿರುತ್ತಾರೆ, ಎಂದರ್ಥ!

ಅಂದರೆ, ಮೇಲೆ ಹೇಳಿದಂತೆ ರಾಜ್ಯವನ್ನಾಳುತ್ತಿರುವ ಪುರುಷರು ದೇಶದಲ್ಲಿ ಅಥವಾ ಜಗತ್ತಿನಲ್ಲಿ ಶ್ರೀಯುಕ್ತವಾದ ರಾಜ್ಯದ ವ್ಯವಸ್ಥೆಯನ್ನು ಎಲ್ಲೆಡೆಯಲ್ಲಿಯೂ ಸ್ಥಾಪನೆ ಮಾಡಿಬಿಡುತ್ತಾರೆ!

(ಅಥಾಸ್ಯೈ) ಕಿಮಸ್ಯ ರಾಷ್ಟ್ರಸ್ಯ ಮಧ್ಯಮಿತ್ಯಾಕಾಂಕ್ಷಾಯಾಮುಚ್ಯತೇ_

(ಅಥಾಸ್ಯೈ) ಈ ರಾಷ್ಟ್ರದ ಮಧ್ಯಭಾಗ ಯಾವುದು, ಎಂಬುದನ್ನು ತಿಳಿಯಲಿಚ್ಛಿಸುವ ಪ್ರಶ್ನೆಗೆ ಉತ್ತರವೇನೆಂದರೆ_

ಅಂದರೆ_

ಪ್ರಶ್ನೆ_ ಈ ರಾಜ್ಯದ 'ಮಧ್ಯ' ಯಾವುದು?

ಶ್ರೀರ್ವೈ ರಾಷ್ಟ್ರಸ್ಯ ಮಧ್ಯಮ್.

ಉತ್ತರ_ ಶ್ರೀಯೇ ರಾಷ್ಟ್ರದ ಮಧ್ಯ[ಭಾಗ]!

ಅಂದರೆ, ಪ್ರಜೆಗಳ ರಕ್ಷಣೆಯನ್ನು ಸರಿ ಸರಿಯಾಗಿ ಮಾಡುವುದು, ಎಂದರೆ ಅವರ ಪಾಲನೆಯನ್ನು ನಿಯಮಪೂರ್ವಕವಾಗಿ ಮಾಡುವುದು! ಇದೇ ಅವರ ರಕ್ಷಣೆಯಲ್ಲಿ ಮಧ್ಯಸ್ಥವಾಗಿರುತ್ತದೆ!

ತಸ್ಮಾದಿಮಾಂ ಪೂರ್ವೋಕ್ತಾಂ ಶ್ರಿಯಮನ್ನಾದ್ಯಂ ಭೋಕ್ತವ್ಯಂ ವಸ್ತು ಚ ರಾಷ್ಟ್ರೇ ರಾಜ್ಯೇ ಮಹತೋ ರಾಜ್ಯಸ್ಯಾऽಭ್ಯಂತರೇ ದಧಾತಿ, ಸುಸಭಯಾ ಸರ್ವಾಂ ಪ್ರಜಾಂ ಸುಭೋಗಯುಕ್ತಾಂ ಕರೋತಿ.

ಆದುದರಿಂದ, ಮೊದಲು ಹೇಳಿದ ಈ ಶ್ರೀಯನ್ನು ಮತ್ತು (ಅನ್ನಾದ್ಯಮ್) ಭೋಗಿಸಲು ಯೋಗ್ಯವಾದ ವಸ್ತುವನ್ನು (ರಾಷ್ಟ್ರೇ) ರಾಜ್ಯದಲ್ಲಿ, ಎಂದರೆ ವಿಶಾಲವಾದ ರಾಜ್ಯದ ಒಳಗೆ (ದಧಾತಿ) ಉತ್ತಮ ಸಭೆಯ ಮೂಲಕ ಎಲ್ಲಾ ಪ್ರಜೆಗಳನ್ನೂ ಉತ್ತಮ ಭೋಗದಿಂದ ಕೂಡಿರುವಂತೆ ಮಾಡುತ್ತದೆ.

ಕಸ್ಮಿನ್ ಕಿಂ ಕುರ್ವನ್ನಿವ?

ಯಾವುದರಲ್ಲಿ?, ಏನು ಮಾಡುತ್ತಾ?; ಎಂದರೆ_

ಅಂದರೆ, ಈ ವಿಷಯದಲ್ಲಿ ದೃಷ್ಟಾಂತವೇನೆಂದರೆ_

(ಶೀತೇ ವಾತೇ ಪುನನ್ನಿವೇತಿ.) ರಾಷ್ಟ್ರಸ್ಯ ಕ್ಷೇಮೋ ರಕ್ಷಣಂ ಶೀತಂ ಭವತಿ.

(ಶೀತೇ ವಾತೇ ಪುನನ್ನಿವ.) ರಾಷ್ಟ್ರದ ಕ್ಷೇಮವು, ಎಂದರೆ ರಕ್ಷಣೆಯು 'ಶೀತ', ಎನಿಸುತ್ತದೆ.

ಅಂದರೆ, ರಾಜ್ಯದ ರಕ್ಷಣೆ ಮಾಡುವುದರ ಹೆಸರು 'ಶೀತ', ಎಂದಿರುತ್ತದೆ.

ಅಸ್ಮೈ ರಾಷ್ಟ್ರಾಯ ಕ್ಷೇಮಂ ಸುಸಭಯಾ ರಕ್ಷಣಂ ಕುರ್ಯ್ಯಾತ್.

ಈ ರಾಷ್ಟ್ರದ ಕ್ಷೇಮವನ್ನು, ಎಂದರೆ ರಕ್ಷಣೆಯನ್ನು ಉತ್ತಮವಾದ ಸಭೆಯ ಮೂಲಕ ಮಾಡಬೇಕು!

ಏಕೆಂದರೆ, ಯಾವಾಗ ಸಭೆಯಿಂದ ರಾಜ್ಯದ ರಕ್ಷಣೆಯಾಗುತ್ತದೋ, ಆಗಲೇ ಅದರ ಉನ್ನತಿಯಾಗುತ್ತದೆ.

ಅಸ್ಮಾದಪಿ ಸತ್ಯಾದರ್ಥಾನ್ಮಹೀಧರಸ್ಯ ವ್ಯಾಖ್ಯಾನಮತ್ಯಂತಂ ವಿರುದ್ಧಮಸ್ತೀತಿ ॥ ೭- ೮ ॥

ಈ ಸತ್ಯವಾದ ಅರ್ಥಕ್ಕೂ ಕೂಡ, ಮಹೀಧರರ ವ್ಯಾಖ್ಯಾನವು ಅತ್ಯಂತ ವಿರುದ್ಧವಾಗಿದೆ! [೭-೮]

(೯) ವಿದ್ವಾಂಸರಿಂದ ನಾರಿಯಂತೆ ಮೃದು ವ್ಯವಹಾರ!

[ಋಷಿಃ_ ಪ್ರಜಾಪತಿಃ ; ದೇವತಾ_ ವಿದ್ವಾಂಸಃ ; ಛಂದಃ_ ಅನುಷ್ಟುಪ್ ; ಸ್ವರಃ_ ಗಾಂಧಾರಃ]

ಯದ್ದೇವಾಸೋ ಲಲಾಮಗುಂ ಪ್ರ ವಿಷ್ಟೀಮಿನಮಾವಿಷುಃ ।
ಸಕ್ಥ್ನಾ ದೇದಿಶ್ಯತೇ ನಾರೀ ಸತ್ಯಸ್ಯಾಕ್ಷಿಭುವೋ ಯಥಾ ॥ ೯ ॥

[ಯಜುರ್ವೇದೇ ಅ. ೨೩, ಮಂ. ೨೯]

[ಅರ್ಥ:_ "ಹೇಗೆ ನಾರಿಯು ಕಣ್ಣೆದುರಿಗಿನ ಸತ್ಯದ [ಮೂಲಕ] ಅವಳ ಸಂಗದಿಂದ ಲಕ್ಷಿಸಲ್ಪಡುತ್ತಾಳೋ, [ಹಾಗೆ] ವಿದ್ವಾಂಸರು ಮೃದುವಾದ ವ್ಯಾಪಕ ವ್ಯವಹಾರವನ್ನು ಉತ್ತಮವಾಗಿ ಪಡೆದಿರುತ್ತಾರೆ."

(ಯಜುರ್ವೇದಃ ೨೩. ೨೯)]

ಮಹೀಧರಸ್ಯಾರ್ಥಃ_ — ಮಹೀಧರರ ಅರ್ಥವೇನೆಂದರೆ_

ಈ ಮಂತ್ರಕ್ಕೆ ಮಹೀಧರರ ಅಶ್ಲೀಲಾರ್ಥ_ ಪರಿವೃಕ್ತೆಯ ಉತ್ತರ

'[ಪರಿವೃಕ್ತಾ ಹೋತಾರಮಾಹ_]

'[ಪರಿವೃಕ್ತೆಯು ಹೋತೃವಿಗೆ ಹೇಳುತ್ತಾಳೆ_]

'(ಯತ್) ಯದಾ (ದೇವಾಸಃ) ದೇವಾಃ ;

'(ಯತ್) ಯಾವಾಗ (ದೇವಾಸಃ) ವಿದ್ವಾಂಸರು ;

'ದೀವ್ಯಂತಿ ಕ್ರೀಡಂತಿ ದೇವಾಃ ಹೋತ್ರಾದಯ ಋತ್ವಿಜಃ;

'ದೀವ್ಯಂತಿ, ಎಂದರೆ ಕ್ರೀಡಿಸುವವರಾದ ದೇವರು, ಎಂದರೆ ಹೋತೃಗಳೇ ಮೊದಲಾದ ಋತ್ವಿಜರು ;

'(ಲಲಾಮಗುಂ) ಲಿಂಗಂ (ಪ್ರ ಆವಿಶುಃ) ಯೋನೌ ಪ್ರವೇಶಯಂತಿ ;*

'(ಲಲಾಮಗುಂ) ಲಿಂಗವನ್ನು (ಪ್ರ ಆವಿಶುಃ) ಯೋನಿಯಲ್ಲಿ ಪ್ರವೇಶ ಮಾಡಿಸುತ್ತಾರೋ;*

---

* ಇತೋಽಗ್ರೇ ಮಹೀಧರಭಾಷ್ಯಸ್ಯಾಗ್ರಿಮಾಂಶಃ_

* ಇದರ ಮುಂದೆ, ಮಹೀಧರರ ಭಾಷ್ಯದ ಮುಂದಿನ ಅಂಶ ಹೀಗಿದೆ_

'ಅವ ರಕ್ಷೇ ಗತೌ ಕಾಂತೌ ತೃಪ್ತೌ ಪ್ರೀತೌ ದ್ಯುತೌ ಶ್ರುತೌ ।
ಪ್ರಾಪ್ತೌ ಶ್ಲೇಷೇಽರ್ಪಣೇ ವೇಶೇ ಭಾಗೇ ವೃದ್ಧೌ ಗೃಹೇ ವಧೇ ॥'

[ಅರ್ಥ:_ 'ಅವ' ಧಾತುವು_ ರಕ್ಷಣೆ, ಗತಿ, ಕಾಂತಿ, ತೃಪ್ತಿ, ಪ್ರೀತಿ, ದ್ಯುತಿ, ಶ್ರುತಿ, ಪ್ರಾಪ್ತಿ, ಆಲಿಂಗನ, ಅರ್ಪಣೆ, ಪ್ರವೇಶ, ಭಾಗ, ವೃದ್ಧಿ, ಗೃಹ, ಮತ್ತು ವಧೆ_ ಈ ಅರ್ಥಗಳಲ್ಲಿದೆ.

'ಇತ್ಯುಕ್ತೇರತ್ರಾವಧಾತುಃ ಪ್ರವೇಶನಾರ್ಥಃ ।

'ಹೀಗೆ ಹೇಳಿರುವುದರಿಂದ, ಇಲ್ಲಿ 'ಅವ' ಧಾತುವು ಪ್ರವೇಶ ಮಾಡುವುದು, ಎಂಬ ಅರ್ಥವುಳ್ಳದ್ದಾಗಿದೆ.

'ಲುಙ್_'ಛಂದಸಿ ಲುಙ್ ಲಙ್ ಲಿಟಃ ॥' [ಪಾಣಿನಿ: ೩.೪.೬]

'ಲುಙ್_''ವೇದವಿಷಯದಲ್ಲಿ ವಿಕಲ್ಪದಿಂದ ಧಾತು ಸಂಬಂಧದಲ್ಲಿ ಲುಙ್, ಲಙ್, ಲಿಟ್ ಪ್ರತ್ಯಯಗಳು ಸಾಮಾನ್ಯಕಾಲದಲ್ಲಿ ಉಂಟಾಗುತ್ತವೆ."

[ಅಷ್ಟಾಧ್ಯಾಯೀ: ೩.೪.೬]

→ →

'ಲಲಾಮೇತಿ ಸುಖನಾಮ;

' 'ಲಲಾಮ', ಎಂಬುದು ಸುಖದ ಹೆಸರಾಗಿದೆ.

'ಲಲಾಮ ಸುಖಂ ಗಚ್ಛತಿ ಪ್ರಾಪ್ನೋತಿ ಲಲಾಮಗುಃ ಶಿಶ್ನಃ ।

'ಲಲಾಮ', ಎಂದರೆ ಸುಖವನ್ನು, 'ಗಚ್ಛತಿ', ಎಂದರೆ ಹೊಂದುವುದು, 'ಲಲಾಮಗು', ಎಂದರೆ ಶಿಶ್ನ!;

'ಯದ್ವಾ ಲಲಾಮಂ ಪುಂಡ್ರಂ ಗಚ್ಛತಿ ಲಲಾಮಗುಃ ಲಿಂಗಮ್_

'ಅಥವಾ ಲಲಾಮಗು, ಎಂದರೆ ಪುಂಡ್ರ=ತಿಲಕವನ್ನು ಗಚ್ಛತಿ=ಹೊಂದುವುದು, 'ಲಲಾಮಗು', ಎಂದರೆ ಲಿಂಗವು_

'ಯೋನಿಂ ಪ್ರವಿಶದುತ್ಥಿತಂ ಪುಂಡ್ರಾಕಾರಂ ಭವತೀತ್ಯರ್ಥಃ ।

'ಯೋನಿಯನ್ನು ಪ್ರವೇಶಿಸುತ್ತಾ ಸೆಟದಿರುವುದರಿಂದ, ತಿಲಕದ ಆಕಾರವನ್ನುಳ್ಳದ್ದಾಗಿರುತ್ತದೆ, ಎಂದರ್ಥ!

'ಕೀದೃಶಂ ಲಲಾಮಗುಂ?

'ಯಾವ ತರಹದ್ದಾಗಿರುತ್ತದೆ ಆ ಲಲಾಮಗು? ಎಂದರೆ_

'ವಿಷ್ಟೀಮಿನಂ;*

'ಕ್ಲೇದಯುಕ್ತವಾಗಿರುತ್ತದೆ.*

'ಶಿಶ್ನಸ್ಯ ಯೋನಿಪ್ರವೇಶೇ ಕ್ಲೇದನಂ ಭವತೀತ್ಯರ್ಥಃ ।

'ಎಂದರೆ, ಶಿಶ್ನವು ಯೋನಿಯನ್ನು ಪ್ರವೇಶಿಸಿದಾಗ, ಒದ್ದೆ ಉಂಟಾಗುತ್ತದೆ, ಎಂದರ್ಥ!

'ಯದಾ ದೇವಾಃ ಶಿಶ್ನಕ್ರೀಡಿನೋ ಭವಂತೋ, ಲಲಾಮಗುಂ ಯೋನೌ ಪ್ರವೇಶಯಂತಿ;

'ಯಾವಾಗ ಋತ್ವಿಜರು ಶಿಶ್ನದೊಡನೆ ಕ್ರೀಡಿಸುವಂತಹವರಾಗಿ, ಶಿಶ್ನವನ್ನು ಯೋನಿಯಲ್ಲಿ ಪ್ರವೇಶಮಾಡಿಸುತ್ತಾರೋ;

---

* ಇತೋಽಗ್ರೇ ಮಹೀಧರಭಾಷ್ಯಸ್ಯಾಗ್ರಿಮಾಂಶಃ_

* ಇದರ ಮುಂದೆ, ಮಹೀಧರರ ಭಾಷ್ಯದ ಮುಂದಿನ ಅಂಶ ಹೀಗಿದೆ_

'ಷ್ಟೀವು ಕ್ಲೇದೇ;

'ಷ್ಟೀವು', ಎಂಬ ಧಾತುವು ಒದ್ದೆ, ಎಂಬ ಅರ್ಥದಲ್ಲಿದೆ.

'ವಿಶೇಷೇಣ ಸ್ತಿಮನಂ ಕ್ಲೇದನಂ ವಿಷ್ಟೀಮಃ ।

'ವಿಶೇಷವಾಗಿ 'ಸ್ತೀಮ' = ಒದ್ದೆಯಾಗಿರುವುದು 'ವಿಷ್ಟೀಮ'.

'ಘಞ್ ಪ್ರತ್ಯಯಃ ।

'ಘಞ್[= ಅ] ಪ್ರತ್ಯಯ ಬಂದಿದೆ.

'ವಿಷ್ಟೀಮಃ ಕ್ಲೇದೋಽಸ್ಯಾಸ್ತೀತಿ ವಿಷ್ಟೀಮೀ । ತಮ್_

'ವಿಷ್ಟೀಮ, ಎಂದರೆ, ಇದಕ್ಕೆ ಒದ್ದೆ ಉಂಟಾಗಿರುವುದರಿಂದ 'ವಿಷ್ಟೀಮೀ'. ಅದನ್ನು, ಎಂದರೆ 'ವಿಷ್ಟೀಮಿನಮ್'_

'ಅತ ಇನಿಠನೌ' [ಪಾಣಿನಿ: ೫. ೨. ೧೧೫]

''ಅಕಾರಾಂತ ಪ್ರಾತಿಪದಿಕಗಳಿಂದ ಮತ್ವರ್ಥ = ಇದಕ್ಕೆ, ಇದರಲ್ಲಿ ಎಂಬ ಅರ್ಥದಲ್ಲಿ ಇನಿ, ಮತ್ತು ಠನ್ ಪ್ರತ್ಯಯಗಳು ಬರುತ್ತವೆ.

[ಅಷ್ಟಾಧ್ಯಾಯೀ: ೫. ೨. ೧೧೫]

'ಇತ್ಯಸ್ಯಾರ್ಥೇ ಇನಿ-ಪ್ರತ್ಯಯಃ ।

ಎಂಬ ಇದರ ಅರ್ಥದಲ್ಲಿ 'ಇನಿ' ಪ್ರತ್ಯಯವು ಉಂಟಾಗಿದೆ.

→

'ಇತಿ ವರ್ತಮಾನೇ ಲುಙ್ ।

'ಹೀಗೆ ಇಲ್ಲಿ ವರ್ತಮಾನಕಾಲದಲ್ಲಿ ಲುಙ್[= ಸಾಮಾನ್ಯ ಭೂತಕಾಲ]ದ ಪ್ರಯೋಗವಾಗಿದೆ. [ಮತ್ತು_]

'ವ್ಯವಹಿತಾಶ್ಚ' [ಪಾಣಿನಿ: ೧. ೪. ೮೨]

" ವೇದವಿಷಯದಲ್ಲಿ 'ಗತಿ' ಮತ್ತು ಉಪಸರ್ಗಸಂಜ್ಞಕಶಬ್ದಗಳು ವ್ಯವಧಾನಉಳ್ಳವು ಆಗಿಯೂ ಕೂಡ, ಕಾಣಬರುತ್ತವೆ."

[ಅಷ್ಟಾಧ್ಯಾಯೀ: ೧. ೪. ೮೨]

ಇತಿ ಪ್ರೋಪಸರ್ಗೇಣ ವ್ಯವಧಾನಮ್ ।

'ಎಂಬ [ಸೂತ್ರ]ದಂತೆ, 'ಪ್ರ' ಉಪಸರ್ಗದಿಂದ ವ್ಯವಧಾನ ಉಂಟಾಗಿದೆ.

'ತದಾ ನಾರೀ (ಸಕ್‌ಥ್ನಾ) ಊರುಣಾ ಊರುಭ್ಯಾಂ (ದೇದಿಶ್ಯತೇ) ನಿರ್ದಿಶ್ಯತೇ ಅತ್ಯಂತಂ ಲಕ್ಷ್ಯತೇ ।

'[ದಿಶ್ಯತೇರ್ಯಙ್ ಪ್ರತ್ಯಯಃ ।]

'ಭೋಗಸಮಯೇ ಸರ್ವಸ್ಯ ನಾರ್ಯ್ಯಂಗಸ್ಯ ನರೇಣವ್ಯಾಪ್ತತ್ವಾ-ದೂರುಮಾತ್ರಂ ಲಕ್ಷ್ಯತೇ । ಇಯಂ ನಾರೀತ್ಯರ್ಥಃ ॥' *

ಅಂದರೆ, ಎಲ್ಲಿನ ತನಕ ಯಜ್ಞಶಾಲೆಯಲ್ಲಿ ಋತ್ವಿಜರು ಹೀಗೆ ನಗುತ್ತಿರುತ್ತಾರೋ, ಮತ್ತು ಅಂಡಕೋಶಗಳು ನರ್ತಿಸುತ್ತಿರುತ್ತವೋ, ಅಲ್ಲಿನ ತನಕ ಕುದುರೆಯ ಲಿಂಗವು ಮಹಿಷಿಯ ಯೋನಿಯಲ್ಲಿ ಕೆಲಸ ಮಾಡುತ್ತಿರುತ್ತದೆ. ಮತ್ತು ಆ ಋತ್ವಿಜರ ಲಿಂಗಗಳೂ ಸ್ತ್ರೀಯರ ಯೋನಿಗಳಲ್ಲಿ ಪ್ರವೇಶ ಮಾಡುತ್ತವೆ;

'ಆಗ ನಾರಿಯು (ಸಕ್‌ಥ್ನಾ) ತೊಡೆಯಿಂದ, ಅಥವಾ ಎರಡು ತೊಡೆಗಳಿಂದ, (ದೇದಿಶ್ಯತೇ) ನಿರ್ದಿಷ್ಟವಾಗುತ್ತಾಳೆ, ಎಂದರೆ ಅತ್ಯಂತವಾಗಿ ಕಾಣಬರುತ್ತಾಳೆ!

'['ದಿಶ್ಯತೇ', ಎಂಬುದರಲ್ಲಿ 'ಯಙ್' ಪ್ರತ್ಯಯ ಉಂಟಾಗಿದೆ.]

'ಭೋಗಸಮಯದಲ್ಲಿ ನಾರಿಯ ಸಮಸ್ತ ಅಂಗಗಳೂ ನರನಿಂದ ವ್ಯಾಪಿಸಲ್ಪಟ್ಟಿರುವುದರಿಂದ, [ಅವಳ] ತೊಡೆ ಮಾತ್ರ ಕಾಣಬರುತ್ತದೆ. ಈ ನಾರಿ ಹೀಗಿರುತ್ತಾಳೆ, ಎಂದರ್ಥ!*

'ಅಂದರೆ, ಯಾವಾಗ ಸ್ತ್ರೀ-ಪುರುಷರ ಸಮಾಗಮವಾಗುತ್ತದೋ, ಆಗ ಪುರುಷನು ಮೇಲಿರುತ್ತಾನೆ. ಮತ್ತು ಸ್ತ್ರೀಯು ಕೆಳಗೆ ಇರುವುದರಿಂದ, ಆಯಾಸಪಡುತ್ತಾಳೆ!'

---

* ಇತೋಽಗ್ರೇ ಮಹೀಧರಭಾಷ್ಯಸ್ಯಾವಶಿಷ್ಟಾಂಶಃ_

'ತತ್ರ ದೃಷ್ಟಾಂತಃ_

'ಸತ್ಯಸ್ಯಾಕ್ಷಿಭುವೋ ಯಥೇ'ತಿ ।

'ಸತ್ಯಂ ದ್ವಿವಿಧಮ್_ ಅಕ್ಷಿಭ್ಯಾಂ ಭವತೀತ್ಯಕ್ಷಿಭು ಪ್ರತ್ಯಕ್ಷಮ್ ।

'ಏಕಂ ಚ ಶ್ರೋತ್ರಗ್ರಾಹ್ಯಮ್ ।

'ಷಷ್ಠ್ಯೌ ತೃತೀಯಾರ್ಥೇ ।

'ಭವತಿ ಯಥಾ ಕಶ್ಚಿದಕ್ಷಿಭುವಾ ಪ್ರತ್ಯಕ್ಷೇಣ ಸತ್ಯೇನ ನಿರ್ದಿಶ್ಯತೇ ತತ್ರ ವಿಶ್ವಾಸೋ ಭವತಿ, ತಥಾ ಊರುಣಾ ದೃಷ್ಟೇನ ನಾರೀತಿ ಲಕ್ಷ್ಯತ ಇತ್ಯರ್ಥಃ ।

'ಶ್ರೋತ್ರಗ್ರಾಹ್ಯೇ ತು ಸತ್ಯೇ ವಕ್ತುರಾಪ್ತತಮತ್ವಮಪೇಕ್ಷಿತಮ್ ॥೨೯॥'

* ಇದರ ಮುಂದೆ, ಮಹೀಧರರ ಭಾಷ್ಯದ ಉಳಿದ ಅಂಶ ಹೀಗಿದೆ_

''ಇದಕ್ಕೆ ದೃಷ್ಟಾಂತವೇನೆಂದರೆ_

'ಸತ್ಯಸ್ಯಾಕ್ಷಿಭುವೋ ಯಥಾ', ಎಂದು ಹೇಳಲಾಗಿದೆ.

'ಸತ್ಯವು ಎರಡು ವಿಧದವಾಗಿರುತ್ತದೆ_ ಎರಡು ಕಣ್ಣುಗಳಿಂದ ಉಂಟಾಗುವುದು 'ಅಕ್ಷಿಭು', ಎಂದರೆ ಪ್ರತ್ಯಕ್ಷ!

'ಮತ್ತು ಇನ್ನೊಂದು ಕಿವಿಯಿಂದ ಗ್ರಹಿಸಲ್ಪಡುವುದು!

'ತೃತೀಯಾವಿಭಕ್ತಿಯ ಅರ್ಥದಲ್ಲಿ ಷಷ್ಠೀವಿಭಕ್ತಿಯಲ್ಲಿ ಪ್ರಯೋಗವಾಗಿದೆ.

'ಯಾವುದು ಕಣ್ಣಿನಿಂದ ಉಂಟಾಗುತ್ತದೋ, ಎಂದರೆ ಪ್ರತ್ಯಕ್ಷವಾದ ಸತ್ಯದಿಂದ ನಿರ್ದೇಶಿಸಲ್ಪಡುತ್ತದೋ, ಅದರಲ್ಲಿ ಹೇಗೆ ವಿಶ್ವಾಸ ಉಂಟಾಗುತ್ತದೋ, ಹಾಗೆ ತೊಡೆಯಿಂದ ಕಾಣಿಸಲ್ಪಟ್ಟವಳಂತೆ ನಾರಿಯು ಲಕ್ಷಿತವಾಗಿದ್ದಾಳೆ, ಎಂದರ್ಥ!

'ಕಿವಿಯಿಂದ ಅಂಗೀಕರಿಸಲ್ಪಡುವ ಸತ್ಯದಲ್ಲಿಯಂತೂ ಹೇಳುವವನು ಅತ್ಯಂತ ಆಪ್ತನಾಗಿರಬೇಕು, ಎಂಬ ಅಪೇಕ್ಷೆ ಇರುತ್ತದೆ.' [೨೯]

ಸತ್ಯಾರ್ಥ_ ವಿದ್ವಾಂಸರ ವಿದ್ಯಾನಂದದಲ್ಲಿ ಪ್ರಜೆಗಳ ಸಹಭಾಗಿತ್ವ!

ಅಥ ಸತ್ಯೋऽರ್ಥಃ_

ಈಗ ಸತ್ಯವಾದ ಅರ್ಥವೇನೆಂದರೆ_

(ಯದ್ದೇವಾಸೋ.) ಯಥಾ ದೇವಾ ವಿದ್ವಾಂಸಃ ಪ್ರತ್ಯಕ್ಷೋದ್ಭವಸ್ಯ ಸತ್ಯಜ್ಞಾನಸ್ಯ ಪ್ರಾಪ್ತಿಂ ಕೃತ್ವೇಮಂ (ವಿಪ್ಷೀಮಿನಮ್) ವಿವಿಧತಯಾ ಆರ್ದ್ರೀಭಾವಗುಣವಂತಂ ;

(ಯದ್ದೇವಾಸೋ.) ಹೇಗೆ ವಿದ್ವಾಂಸರು ಪ್ರತ್ಯಕ್ಷವಾಗಿ ಉತ್ಪನ್ನವಾದ ಸತ್ಯಜ್ಞಾನದ ಪ್ರಾಪ್ತಿಯನ್ನು ಮಾಡಿಕೊಂಡು, (ವಿಪ್ಷೀಮಿನಮ್) ವಿವಿಧ ರೀತಿಯಿಂದ ಸ್ನೇಹಭಾವದ ಗುಣವುಳ್ಳದುದೂ ;

(ಲಲಾಮಗುಮ್) ಸುಖಪ್ರಾಪಕಂ ವಿದ್ಯಾನಂದಂ ;

(ಲಲಾಮಗುಮ್) ಸುಖವನ್ನು ದೊರಕಿಸಿಕೊಡುವಂತಹುದೂ ಆದ ಈ ವಿದ್ಯಾನಂದವನ್ನು ;

(ಪ್ರಾವಿಶುಃ) ಪ್ರಕೃಷ್ಟತಯಾऽಸಮಂತಾದ್ ವ್ಯಾಪ್ನುವಂತಿ ;

(ಪ್ರ+ ಆವಿಶುಃ) ಪ್ರಕೃಷ್ಟರೀತಿಯಿಂದ ಎಲ್ಲಾ ಕಡೆ ವ್ಯಾಪಿಸುತ್ತಾರೋ ;

ತಥೈವ ತೈಸ್ತೇನ ಸಹ ವರ್ತ್ತಮಾನೇಯಂ ಪ್ರಜಾ ದೇದಿಶ್ಯತೇ.

ಹಾಗೆಯೇ, ಅವರೊಡನೆ, ಅಥವಾ ಅದರೊಡನೆ ವರ್ತಿಸುತ್ತಿರುವ ಈ ಪ್ರಜೆಗಳು ಕಾಣಬರುತ್ತಾರೆ!

ಅಂದರೆ, ಹೇಗೆ ವಿದ್ವಾಂಸರು ಪ್ರತ್ಯಕ್ಷ ಜ್ಞಾನವನ್ನು ಪ್ರಾಪ್ತಮಾಡಿಕೊಂಡು, ವಿದ್ಯೆಯ ಆನಂದದಲ್ಲಿ ಪ್ರವೇಶಿಸುತ್ತಾರೋ, ಹಾಗೆಯೇ ಅದೇ ಆನಂದದೊಡನೆ ಪ್ರಜೆಗಳನ್ನೂ ಕೂಡ, ಯುಕ್ತರನ್ನಾಗಿ ಮಾಡುತ್ತಾರೆ!

ಯಥಾ ನಾರೀ ವಸ್ತ್ರೈರಾಚ್ಛಾದ್ಯಮಾನೇನ ಸಕ್ಥ್ನಾ ವರ್ತ್ತತೇ ತಥೈವ ವಿದ್ವದ್ಭಿಃ ಸುಖೈರಿಯಂ ಪ್ರಜಾ ಸಮ್ಯಗಾಚ್ಛಾದನೀಯೇತಿ ॥ ೯ ॥

ಹೇಗೆ ನಾರಿಯು ವಸ್ತ್ರಗಳಿಂದ ಮುಚ್ಚಿಟ್ಟುಕೊಂಡಿರುವ ತೊಡೆಯಿಂದ ಕೂಡಿರುತ್ತಾಳೋ, ಹಾಗೆಯೇ ವಿದ್ವಾಂಸರುಗಳಿಂದ, ಈ ಪ್ರಜೆಗಳು ಸುಖಗಳಿಂದ ಚೆನ್ನಾಗಿ ಆಚ್ಛಾದಿಸಲ್ಪಟ್ಟವರಾಗಿರಬೇಕು!

ಅಂದರೆ, ಹೇಗೆ ಸ್ತ್ರೀಯು ತನ್ನ ತೊಡೆ ಮೊದಲಾದ ಅಂಗಗಳನ್ನು ಯಾವಾಗಲೂ ವಸ್ತ್ರಗಳಿಂದ ಮುಚ್ಚಿಟ್ಟಿರುತ್ತಾಳೋ, ಹಾಗಯೇ, ವಿದ್ವಾಂಸರು ತಮ್ಮ ಸತ್ಯೋಪದೇಶದಿಂದ, ವಿದ್ಯೆ, ಧರ್ಮ ಮತ್ತು ಸುಖಗಳಿಂದ ಪ್ರಜೆಗಳನ್ನು ಯಾವಾಗಲೂ ಆಚ್ಛಾದಿತರನ್ನಾಗಿಡಬೇಕು!

[೯]

(೧೦) ಜಿಂಕೆಯು ಏನು ತಿಂದರೂ ಪುಷ್ಟಪಶುವಾಗುವುದಿಲ್ಲ!

[ಋಷಿಃ_ ಪ್ರಜಾಪತಿಃ ; ದೇವತಾ_ ರಾಜಾ ; ಛಂದಃ_ ನಿಚೃದನುಷ್ಟುಪ್ ; ಸ್ವರಃ_ ಗಾಂಧಾರಃ]

ಯದ್ಧರಿಣೋ ಯವಮತ್ತಿ ನ ಪುಷ್ಟಂ ಪಶು ಮನ್ಯತೇ ।
ಶೂದ್ರಾ ಯದರ್ಯ್ಯಜಾರಾ ನ ಪೋಷಾಯ ಧನಾಯತಿ ॥ ೧೦ ॥

[ಯಜುರ್ವೇದೇ ಅ. ೨೩, ಮಂ. ೩೦]

[ಅರ್ಥ:_ "ಜಿಂಕೆಯು ಜವೆಗೋಧಿಯನ್ನು ತಿಂದರೆ, [ಹೇಗೆ] ಪುಷ್ಟವಾದ ಪಶು, ಎಂದು ಅಂಗೀಕರಿಸಲ್ಪಡುವುದಿಲ್ಲವೋ, [ಹಾಗೆ] ಶೂದ್ರಳು ವೈಶ್ಯನಿಗೆ ಜಾರಿಣಿಯಾದರೆ, [ಅವನಿಂದ ತನಗೆ] ಪೋಷಣೆಯನ್ನೂ, ಧಾನ್ಯ*ವನ್ನೂ ಇಚ್ಛಿಸುವುದಿಲ್ಲ."

(ಯಜುರ್ವೇದ: ೨೩. ೩೦)]

ಮಹೀಧರಸ್ಯಾರ್ಥಃ_

ಮಹೀಧರರ ಅರ್ಥವೇನೆಂದರೆ_

ಈ ಮಂತ್ರಕ್ಕೆ ಮಹೀಧರರ ಅರ್ಥ_ ಕ್ಷತ್ತೃವಿನ ಹೇಳಿಕೆ

'ಕ್ಷತ್ತಾ ಪಾಲಾಗಲೀಮಾಹ_**

'ಕ್ಷತ್ತೃವು+ ಪಾಲಾಗಲಿಗೆ++ ಹೇಳುತ್ತಾನೆ_**

'ಅಂದರೆ, ಕ್ಷತ್ತಾ = ಸೇವಕನು ಶೂದ್ರದಾಸಿಗೆ ಹೇಳುತ್ತಾನೆ. ಏನೆಂದರೆ_

→

---

* 'ಧನ' ಧಾತುವಿನ ಅರ್ಥ ಧಾನ್ಯ, ಎಂದಿತ್ತು. ಕಾಲಕ್ರಮೇಣ, ಧಾನ್ಯವೇ ಧನ = ಹಣ, ಎಂಬ ಅರ್ಥದಲ್ಲಿ ರೂಢವಾಯಿತು _ಅನು.

+ ಕ್ಷತ್ತಾ, ಎಂದರೆ ಬ್ರಾಹ್ಮಣ-ಕ್ಷತ್ರಿಯವರ್ಣಸಂಕರದವನು; ಅಥವಾ ದ್ವಾರಪಾಲ, ಸೇವಕ! _ಅನು.

++ ರಾಜನ ನಾಲ್ಕನೆಯ ರಾಣಿಗೆ 'ಪಾಲಾಗಲೀ', ಎಂದು ಹೆಸರು_ಅನು.

** ಇದರ ನಂತರ, ಮಹೀಧರರ ಭಾಷ್ಯದ ಮುಂದಿನ ಅಂಶ ವೇನೆಂದರೆ_

'(ಯತ್) ಯಾವಾಗ (ಹರಿಣಃ) ಜಿಂಕೆಯು (ಯವಮ್ ಅತ್ತಿ) ಜವೆಗೋಧಿಯನ್ನು ತಿನ್ನುತ್ತದೋ; ಎಂದರೆ ಮೃಗವು ಯಾವಾಗ ಹೊಲ ದಲ್ಲಿನ ಧಾನ್ಯವನ್ನು ತಿನ್ನುತ್ತದೋ, ಆಗ ಹೊಲದವನು (ಪಶು) ಜಿಂಕೆ ಪಶುವನ್ನು ಪುಷ್ಟವಾಗುತ್ತದೆ, ಎಂದು ತಿಳಿಯುವುದಿಲ್ಲ, ಎಂದರೆ_

'ನನ್ನ ಧಾನ್ಯವನ್ನು ತಿಂದುದರಿಂದ, ಪಶುವು ಚೆನ್ನಾಗಿ ಪುಷ್ಟವಾಯಿತು, ಎಂದು ತಿಳಿಯುವುದಿಲ್ಲ. ಆದರೆ_'ನನ್ನ ಹೊಲವೇ ತಿನ್ನಲ್ಪಟ್ಟಿತಲ್ಲಾ?', ಎಂದು ದುಃಖಿತನಾಗುತ್ತಾನೆ, ಎಂದರ್ಥ!

→

'ಶೂದ್ರಾ ಶೂದ್ರಜಾತಿಃ ಸ್ತ್ರೀ ಯದಾ ಅರ್ಯಜಾರಾ ಭವತಿ';*

'ಶೂದ್ರಳು, ಎಂದರೆ ಶೂದ್ರಜಾತಿಯ ಸ್ತ್ರೀ ಯಾವಾಗ ಅರ್ಯನಿಗೆ ಜಾರಿಣಿಯಾಗುತ್ತಾಳೋ;*

'ವೈಶ್ಯೋ ಯದಾ ಶೂದ್ರಾಂ ಗಚ್ಛತಿ, ತದಾ ಶೂದ್ರಃ ಪೋಷಾಯ ನ ಧನಾಯತೇ ಪುಷ್ಟಿಂ ನ ಗಚ್ಛತಿ;

''ವೈಶ್ಯನು ಯಾವಾಗ ಶೂದ್ರಳ ಬಳಿಗೆ ಹೋಗುತ್ತಾನೋ, ಆಗ ಶೂದ್ರನು ಪೋಷಣೆಗಾಗಿ ಧಾನ್ಯವನ್ನು ಇಚ್ಛಿಸುವುದಿಲ್ಲ, ಎಂದರೆ ಪುಷ್ಟಿಯನ್ನು ಇಚ್ಛಿಸುವುದಿಲ್ಲ. ಎಂದರೆ_

'ಮದ್ಭಾರ್ಯಾ ವೈಶ್ಯೇನ ಭುಕ್ತಾ ಸತೀ, ಪುಷ್ಟಾ ಜಾತೇತಿ ನ ಮನ್ಯತೇ, ಕಿಂತು ವ್ಯಭಿಚಾರಿಣೀ ಜಾತೇತಿ ದುಃಖಿತೋ ಭವತೀತ್ಯರ್ಥಃ ॥**

'ನನ್ನ ಪತ್ನಿಯು ವೈಶ್ಯನಿಂದ ಭೋಗಿಸಲ್ಪಟ್ಟವಳಾಗಿ, ಪುಷ್ಟಳಾದಳು, ಎಂದು ತಿಳಿಯುವುದಿಲ್ಲ! ಆದರೆ_ 'ವ್ಯಭಿಚಾರಿಣಿಯಾದಳಲ್ಲಾ!', ಎಂದು ದುಃಖಿತನಾಗುತ್ತಾನೆ, ಎಂದರ್ಥ.**

---

* ಇತೋಽಗ್ರೇ ಮಹೀಧರಭಾಷ್ಯಸ್ಯಾಗ್ರಿಮೋಽಂಶಃ_

* ಇದರ ನಂತರ, ಮಹೀಧರರ ಭಾಷ್ಯದ ಮುಂದಿನ ಅಂಶ ಹೀಗಿದೆ_

'ಅರ್ಯಃ ಸ್ವಾಮಿವೈಶ್ಯಯೋಃ' [ಪಾಣಿನಿ: ೩. ೧. ೧೦೩]

'ಸ್ವಾಮಿ ಅಥವಾ ವೈಶ್ಯನ ಅಭಿಪ್ರಾಯವಿದ್ದರೆ, 'ಅರ್ಯ'ಶಬ್ದದ 'ಋ'ಧಾತುವಿನಿಂದ ಯತ್ ಪ್ರತ್ಯಯಾಂತ ನಿಪಾತನವಾಗುತ್ತದೆ.' [ಅಷ್ಟಾಧ್ಯಾಯೀ: ೩. ೧. ೧೦೩]

'ಇತಿ ನಿಪಾತನಾದರ್ಯೋ ವೈಶ್ಯೋ ಜಾರ ಉಪಪತಿರ್ಯಸ್ಯಾಃ ಸಾ ಅರ್ಯಜಾರಾ ।

ಎಂಬ ನಿಪಾತನದಂತೆ_'ಅರ್ಯ್ಯ', ಎಂದರೆ ವೈಶ್ಯನು ಯಾವಳಿಗೆ 'ಜಾರ', ಎಂದರೆ ಉಪಪತಿಯಾಗಿರುತ್ತಾನೋ, ಅವಳು 'ಅರ್ಯಜಾರಾ!'

'ಶೂದ್ರಾ ಚಾಮಹತ್ಪೂರ್ವಾ ಜಾತಿಃ' [ಪಾಣಿನಿ: ೪. ೧. ೪]

'ಮಹತ್ತ್ವವಾದ ಜಾತಿಯಲ್ಲದುದರಿಂದ 'ಶೂದ್ರಾ'.

'ಅಜಾದಿಗಣಪಠಿತ ಪ್ರಾತಿಪದಿಕಗಳಿಂದ ಮತ್ತು ಅದಂತ ಪ್ರಾತಿಪದಿಕಗಳಿಂದ ಸ್ತ್ರೀಲಿಂಗದಲ್ಲಿ ಟಾಪ್ ಪ್ರತ್ಯಯ ಉಂಟಾಗುತ್ತದೆ. [ಅಷ್ಟಾಧ್ಯಾಯೀ: ೪. ೧. ೪]

'ಇತಿ ಶೂದ್ರಾಜ್ಜಾತ್ಯರ್ಥೇ ಟಾಪ್ ।'

'ಎಂಬ ಸೂತ್ರದಂತೆ ಶೂದ್ರ ಶಬ್ದಕ್ಕೆ ಜಾತಿಯ ಅರ್ಥದಲ್ಲಿ 'ಟಾಪ್' ಪ್ರತ್ಯಯ ಉಂಟಾಗುತ್ತದೆ!'

** ಇತೋಽಗ್ರೇ ಮಹೀಧರಭಾಷ್ಯಸ್ಯಾವಶಿಷ್ಟಾಂಶಃ_

** ಇದರ ಮುಂದೆ, ಮಹೀಧರರ ಭಾಷ್ಯದ ಉಳಿದ ಅಂಶ ಹೀಗಿದೆ_

'ಅಶನಾಯೋದನ್ಯ ।' [ಪಾಣಿನಿ: ೭. ೪. ೩೪]

'ಅಶನಾಯ, ಉದನ್ಯ, ಧನಾಯ_ ಈ ಶಬ್ದಗಳು ಕ್ರಮವಾಗಿ ಬುಭುಕ್ಷಾ(=ಹಸಿವು), ಪಿಪಾಸಾ(=ಬಾಯಾರಿಕೆ) ಮತ್ತು ಗರ್ಧ(= ಲೋಭ)_ ಈ ಅರ್ಥಗಳಲ್ಲಿ ನಿಪಾತನ ಮಾಡಲ್ಪಡುತ್ತವೆ.' [ಅಷ್ಟಾಧ್ಯಾಯೀ: ೭. ೪. ೩೪]

'ಇತಿ ಕ್ಯಚಿ ಧನಾಯತೀತಿ ಇಚ್ಛಾರ್ಥೇ ನಿಪಾತಃ ॥ ೩೦ ॥'

'ಎಂಬ ಸೂತ್ರದಂತೆ, ಕ್ಯಚ್ ಪ್ರತ್ಯಯವು ಪರದಲ್ಲಿದ್ದಾಗ 'ಧನಾಯತಿ', ಎಂಬುದರಲ್ಲಿ 'ಆ' [ಪ್ರತ್ಯಯವು] ಇಚ್ಛೆಯ ಅರ್ಥದಲ್ಲಿ ನಿಪಾತನವಾಗಿದೆ. [೩೦]

→

'ಪಶು-ಶಬ್ದಾತ್_

'ಸುಪಾಂ ಸುಲುಕ್'

'ಇತ್ಯಮೋ ಲುಕ್ ।'

→

'ಪಶು', ಎಂಬ ಶಬ್ದದಲ್ಲಿ _

'ಸುಪ್'ಗಳ ಸ್ಥಾನದಲ್ಲಿ ಸು, ಲುಕ್, ಪೂರ್ವಸವರ್ಣ, ಆ, ಆತ್, ಶೇ, ಯಾ, ಡಾ, ಡ್ಯಾ, ಯಾಚ್, ಆಲ್_ ಈ ಆದೇಶಗಳು ವೇದವಿಷಯದಲ್ಲಿ ಉಂಟಾಗುತ್ತವೆ' [ಅಷ್ಟಾಧ್ಯಾಯೀ: ೭. ೧. ೩೯]

'ಎಂಬ ಸೂತ್ರದಂತೆ 'ಅಮ್' ಲೋಪವಾಗಿದೆ.'

ಅಂದರೆ, 'ಯಾವಾಗ ಶೂದ್ರನ ಪತ್ನಿಯೊಡನೆ ವೈಶ್ಯನು ವ್ಯಭಿಚಾರ ಮಾಡಿಬಿಡುತ್ತಾನೋ, ಆಗ ಅವನು*_ 'ನನ್ನ ಪತ್ನಿಯು ವೈಶ್ಯನೊಡನೆ ವ್ಯಭಿಚಾರ ಮಾಡಿಸಿಕೊಂಡದ್ದರಿಂದ ಪುಷ್ಟಳಾದಳು', ಎಂದು ತಿಳಿಯುವುದಿಲ್ಲ. ಬದಲಾಗಿ ಅವನು* _ 'ನನ್ನ ಪತ್ನಿಯು ವ್ಯಭಿಚಾರಿಣಿಯಾಗಿಬಿಟ್ಟಳಲ್ಲಾ!', ಎಂಬ ಈ ಮಾತಿನ ಮೇಲೆ ಯೋಚನೆ ಮಾಡುತ್ತಾ ದುಃಖಪಡುತ್ತಾನೆ.'

(೧೧) ಜಿಂಕೆಯನ್ನು ಪುಷ್ಟಪಶುವೆಂದು ಪರಿಗಣಿಸಲಾಗುವುದಿಲ್ಲ!

[ಋಷಿಃ_ ಪ್ರಜಾಪತಿಃ ; ದೇವತಾ_ ರಾಜಪ್ರಜೇ ; ಛಂದಃ_ ಅನುಷ್ಟುಪ್ ; ಸ್ವರಃ_ ಗಾಂಧಾರಃ]

[ಯದ್ಧರಿಣೋ ಯವಮತ್ತಿ ನ ಪುಷ್ಟಂ ಬಹು ಮನ್ಯತೇ ।

ಶೂದ್ರೋ ಯದರ್ಯ್ಯಾಯೈ ಜಾರೋ ನ ಪೋಷಮನುಮನ್ಯತೇ ॥ ೧೧ ॥

[ಯಜುರ್ವೇದೇ ಅ. ೨೩, ಮಂ. ೩೧]]**

[ಅರ್ಥ:_ "ಜಿಂಕೆಯು ಜವೆಗೋಧಿಯನ್ನು ತಿಂದರೆ, ಬಹಳ ಪುಷ್ಟವಾಯಿತೆಂದು [ಹೇಗೆ] ತಿಳಿಯಲಾಗುವುದಿಲ್ಲವೋ, [ಹಾಗೆ] ಶೂದ್ರನು ವೈಶ್ಯೆಗೆ ಜಾರನಾದರೆ, [ಅವಳಿಂದ ತನ್ನ] ಪೋಷಣೆಯಾಯಿತೆಂದು ತಿಳಿಯುವುದಿಲ್ಲ."

(ಯಜುರ್ವೇದ: ೨೩. ೩೧)]

ಮಹೀಧರಸ್ಯಾರ್ಥಃ_

ಮಹೀಧರರ ಅರ್ಥವೇನೆಂದರೆ_

ಈ ಮಂತ್ರಕ್ಕೆ ಮಹೀಧರರ ಅರ್ಥ_ ಪಾಲಾಗಲಿಯ ಉತ್ತರ

'ಪಾಲಾಗಲೀ ಕ್ಷತ್ತಾರಮಾಹ_+

'ಪಾಲಾಗಲೀ ಕ್ಷತ್ತೃವಿಗೆ ಹೇಳುತ್ತಾಳೆ_

'ಅಂದರೆ, ಆ ದಾಸಿಯು ಕ್ಷತ್ತೃವಿಗೆ ಉತ್ತರವನ್ನು ಕೊಡುತ್ತಾಳೇನೆಂದರೆ_+

** ಮೂಲಗ್ರಂಥೇ ಮಂತ್ರೋಽಯಂ ನ ವಿದ್ಯತೇ. ಪರಂತು ತತ್ರ ಭಾಷ್ಯಮುಪಲಭ್ಯತೇ. ಅತ ಏವಾಸ್ಮಾಭಿರತ್ರೋದ್ಧೃತಃ _ಅನು.

* ಎಂದರೆ ಶೂದ್ರನು _ಅನು.

** ಮೂಲಗ್ರಂಥದಲ್ಲಿ ಈ ಮಂತ್ರವಿಲ್ಲ. ಆದರೆ, ಅಲ್ಲಿ ಭಾಷ್ಯವಿರುವುದರಿಂದ ಈ ಮಂತ್ರವನ್ನು ನಾವು ಇಲ್ಲಿ ಉದ್ಧರಿಸಿದ್ದೇವೆ _ಅನು.

+ ಇತೋಽಗ್ರೇ ಮಹೀಧರಭಾಷ್ಯಸ್ಯಾಗ್ರಿಮೋಽಂಶಃ_

'ಯದಾ ಹರಿಣೋ ಯವಮತ್ತಿ, ತದಾ ಬಹು ಯಥಾ ತಥಾ ಪಶುಂ ಪುಷ್ಟಂ ನ ಮನ್ಯತೇ, ಇದಂ ಭವತೋಽಪಿ ತುಲ್ಯಮ್.

'ಇಯಾನ್ ವಿಶೇಷಃ_

+ ಇದರ ನಂತರ, ಮಹೀಧರರ ಭಾಷ್ಯದ ಮುಂದಿನ ಅಂಶವೇನೆಂದರೆ_

'ಯಾವಾಗ ಜಿಂಕೆಯು ಧಾನ್ಯವನ್ನು ತಿನ್ನುತ್ತದೋ, ಆಗ (ಬಹು) ಪಶುವು ಯಾವ ರೀತಿಯಲ್ಲಿಯೂ ಪುಷ್ಟವಾಯಿತೆಂದು ತಿಳಿಯಲಾಗದೋ, ಹಾಗೆ ಇದು ನಿನಗೂ ಕೂಡ, ಸಮಾನವಾಗಿದೆ!

'[ಆದರೆ,] ಇಷ್ಟು ವಿಶೇಷವೇನೆಂದರೆ_

'ಯತ್ ಯದಾ ಶೂದ್ರಃ ಅರ್ಯ್ಯಾಯೈ ಅರ್ಯ್ಯಾಯಾ ವೈಶ್ಯಾಯಾ ಜಾರೋ ಭವತಿ, ತದಾ ವೈಶ್ಯಃ ಪೋಷಂ ಪುಷ್ಟಿಂ ನಾನುಮನ್ಯತೇ, ಮಮ ಸ್ತ್ರೀ ಪುಷ್ಟಾ ಜಾತೇತಿ ನಾನುಮನ್ಯತೇ ।

'ಕಿಂತು ಶೂದ್ರೇಣ ನೀಚೇನ ಭುಕ್ತೇತಿ ಕ್ಲಿಶ್ಯತೀತ್ಯರ್ಥಃ ॥' *

'(ಯತ್) ಯಾವಾಗ ಶೂದ್ರನು (ಅರ್ಯಾಯೈ) ಅರ್ಯಳ, ಎಂದರೆ ವೈಶ್ಯೆಯ ಜಾರನಾಗುತ್ತಾನೋ, ಆಗ ವೈಶ್ಯನು (ಪೋಷಮ್) ಪುಷ್ಟಿಯನ್ನು ತಿಳಿಯುವುದಿಲ್ಲ, ಎಂದರೆ_ 'ನನ್ನ ಪತ್ನಿಯು ಪುಷ್ಟಳಾದಳು', ಎಂದು ತಿಳಿಯುವುದಿಲ್ಲ.

'ಆದರೆ_ 'ನೀಚನಾದ ಶೂದ್ರನಿಂದ ಭೋಗಿಸಲ್ಪಟ್ಟಳಲ್ಲಾ!', ಎಂದು ದುಃಖಿಸುತ್ತಾನೆ, ಎಂದರ್ಥ.*

'ಅಂದರೆ, 'ಯಾವಾಗ ಶೂದ್ರನು ವೈಶ್ಯನ ಪತ್ನಿಯೊಡನೆ ವ್ಯಭಿಚಾರ ಮಾಡಿಕೊಂಡು ಬಿಡುತ್ತಾನೋ, ಆಗ ವೈಶ್ಯನೂ ಕೂಡ_ 'ನನ್ನ ಪತ್ನಿಯು ಪುಷ್ಟಳಾದಳು', ಎಂಬ ಮಾತಿನ ಅನುಮಾನ ಮಾಡುವುದಿಲ್ಲ.

'ಆದರೆ_ 'ನೀಚನು ಸಮಾಗಮ ಮಾಡಿಬಿಟ್ಟನಲ್ಲಾ!', ಎಂಬ ಮಾತನ್ನು ಯೋಚಿಸುತ್ತಾ ಕ್ಲೇಶ ಪಡುತ್ತಾನೆ.'

ಅಥ ಸತ್ಯೋಽರ್ಥಃ_

ಈಗ ಸತ್ಯವಾದ ಅರ್ಥವೇನೆಂದರೆ_

ಈ ಮಂತ್ರಗಳಿಗೆ ಶತಪಥಬ್ರಾಹ್ಮಣದ ಸತ್ಯಾರ್ಥ_ ರಾಜನು ಪ್ರಜೆಗಳ ಪೋಷಕನಾಗಲಾರ!

"ಯದ್ಧರಿಣೋ ಯವಮತ್ತೀತಿ । ವಿಡ್ ವೈ ಯವೋ ರಾಷ್ಟ್ರಗ್ಂ ಹರಿಣೋ ವಿಶಮೇವ ರಾಷ್ಟ್ರಾಯಾದ್ಯಾಂ ಕರೋತಿ ತಸ್ಮಾದ್ರಾಷ್ಟ್ರೀ ವಿಶಮತ್ತಿ ।

"ನ ಪುಷ್ಟಂ ಪಶು ಮನ್ಯತ ಇತಿ । ತಸ್ಮಾದ್ರಾಜಾ ಪಶೂನ್ನ ಪುಷ್ಯತಿ ।

"ಶೂದ್ರಾ ಯದರ್ಯ್ಯಜಾರಾ ನ ಪೋಷಾಯ ಧನಾಯತೀತಿ ।

"ತಸ್ಮಾದ್ ವೈಶೀಪುತ್ರಂ ನಾಭಿಷಿಂಚತಿ ॥"

[ಶತಪಥಬ್ರಾಹ್ಮಣೇ ಕಾಂ. ೧೩, ಅ. ೨, ಬ್ರಾ. ೯, ಕಂ. ೮]

---

* ಇತೋಽಗ್ರೇ ಮಹೀಧರೋ ಲಿಖತಿ_ 'ಅಶ್ಲೀಲ-ಭಾಷಣಂ ಸಮಾಪ್ತಮ್' ಇತಿ. _ಅನು.

* ಇದರ ನಂತರ, ಮಹೀಧರರು_ 'ಅಶ್ಲೀಲಭಾಷಣವು ಮುಗಿಯಿತು', ಎಂದು ಬರೆಯುತ್ತಾರೆ _ಅನು.

[ಅರ್ಥ:_ " 'ಯದ್ಧರಿಣೋ ಯವಮತ್ತಿ', ಎಂದು ಹೇಳಲಾಗಿದೆ. 'ಪ್ರಜೆಗಳೇ ಯವ; ರಾಷ್ಟ್ರವು ಹರಿಣ! ಪ್ರಜೆಗಳನ್ನೇ ರಾಷ್ಟ್ರಕ್ಕೆ ಭೋಜನವನ್ನಾಗಿ ಮಾಡುತ್ತಾನೆ. ಆದುದರಿಂದ, ರಾಜನು ಪ್ರಜೆಗಳನ್ನು ಭಕ್ಷಿಸುತ್ತಾನೆ!

" 'ನ ಪುಷ್ಟಂ ಪಶು ಮನ್ಯತೇ', ಎಂದು ಹೇಳಲಾಗಿದೆ. ಆದುದರಿಂದ, ರಾಜನು ಪಶುಗಳನ್ನು ಪುಷ್ಟವನ್ನಾಗಿ ಮಾಡುವುದಿಲ್ಲ.

" 'ಶೂದ್ರಾ ಯದರ್ಯ್ಯಜಾರಾ ನ ಪೋಷಾಯ ಧನಾಯತಿ', ಎಂದು ಹೇಳಲಾಗಿದೆ.

" ಆದುದರಿಂದ, ವೈಶ್ಯೆಯ ಪುತ್ರನ ಅಭಿಷೇಕ ಮಾಡುವುದಿಲ್ಲ."

(ಶತಪಥಬ್ರಾಹ್ಮಣ: ೧೩. ೨. ೯. ೮)]

ನಿರಂಕುಶ ರಾಜನು ಪ್ರಜೆಗಳ ಭಕ್ಷಕ!

ಭಾಷ್ಯಮ್_

(ಯದ್ಧರಿಣೋ.) ವಿಟ್ ಪ್ರಜೇವ ಯವೋಽಸ್ತಿ.

ರಾಜ್ಯಸಂಬಂಧ್ಯೇಕೋ ರಾಜಾ ಹರಿಣ ಇವ ಉತ್ತಮಪದಾರ್ಥಹರ್ತ್ತಾ ಭವತಿ.

ಯಥಾ ಮೃಗಃ ಕ್ಷೇತ್ರಸ್ಥಂ ಸಸ್ಯಂ ಭುಕ್ತ್ವಾ ಪ್ರಸನ್ನೋ ಭವತಿ, ತಥೈವೈಕೋ ರಾಜಾಽಪಿ ನಿತ್ಯಂ ಸ್ವಕೀಯಮೇವ ಸುಖಮಿಚ್ಛತಿ.

ಭಾಷ್ಯ_

(ಯದ್ಧರಿಣೋ.) 'ವಿಟ್', ಎಂದರೆ ಪ್ರಜೆಗಳಂತೆ ಯವ[= **ಜವೆಗೋಧಿ**]ವು ಇರುತ್ತದೆ.

ಅಂದರೆ, ಇಲ್ಲಿ ಪ್ರಜೆಗಳ ಹೆಸರು **'ಯವ'**, ಎಂದಿರುತ್ತದೆ. ಮತ್ತು ರಾಜನ ಹೆಸರು **'ಹರಿಣ [=ಜಿಂಕೆ'**]ಎಂದಾಗುತ್ತದೆ.

ರಾಜ್ಯದ ಸಂಬಂಧದಲ್ಲಿ ಒಬ್ಬನೇ ರಾಜನು ಜಿಂಕೆಯಂತೆ ಉತ್ತಮ ಪದಾರ್ಥಗಳ ಅಪಹರಣ ಮಾಡುವವನಾಗಿರುತ್ತಾನೆ!

ಏಕೆಂದರೆ_

ಹೇಗೆ ಜಿಂಕೆಯು ಹೊಲದಲ್ಲಿನ ದವಸವನ್ನು ತಿಂದು ಸಂತೋಷಪಡುತ್ತದೋ, ಹಾಗೆಯೇ ಒಬ್ಬನೇ ರಾಜನೂ ಕೂಡ, ನಿತ್ಯವೂ ತನ್ನದೇ ಸುಖವನ್ನು ಇಚ್ಛಿಸುತ್ತಾನೆ.

ಅಂದರೆ, ಹೇಗೆ ಮೃಗಗಳು, ಪಶುಗಳು ಬೇರೆ ಯವರ ಹೊಲಗಳಲ್ಲಿ ಜವೆಗೋಧಿಯನ್ನು ತಿಂದು, ಆನಂದಿತವಾಗುತ್ತವೋ, ಹಾಗೆಯೇ, ಸ್ವತಂತ್ರನಾದ ಒಬ್ಬ ಪುರುಷನು ರಾಜನಾಗುವುದರಿಂದ, ಪ್ರಜೆಗಳ ಉತ್ತಮ ಪದಾರ್ಥಗಳನ್ನು ತೆಗೆದುಕೊಂಡು ಬಿಡುತ್ತಾನೆ!

ಅತಃ ಸ ರಾಷ್ಟ್ರಾಯ ಸ್ವಸುಖಪ್ರಯೋಜನಾಯ ವಿಶಂ ಪ್ರಜಾಮಾದ್ಯಾಂ ಭಕ್ಷ್ಯಮಿವ ಕರೋತಿ.

ಆದುದರಿಂದ, ಅವನು (ರಾಷ್ಟ್ರಾಯ) ತನ್ನ ಸುಖದ ಪ್ರಯೋಜನಕ್ಕಾಗಿ (ವಿಶಮ್) ಪ್ರಜೆಗಳನ್ನು (ಆದ್ಯಾಮ್) ಭಕ್ಷ್ಯ[ಪದಾರ್ಥ]ವನ್ನಾಗಿ ಮಾಡಿಕೊಳ್ಳುತ್ತಾನೆ.

ನಿರಂಕುಶ ರಾಜನು ಸ್ವಾರ್ಥರಕ್ಷಣೆ ಮಾಡಿಕೊಳ್ಳುತ್ತಾನೆ!

ಯಥಾ_

ಉದಾಹರಣೆಗಾಗಿ_

ಮಾಂಸಾಹಾರೀ ಪುಷ್ಟಂ ಪಶುಂ ದೃಷ್ಟ್ವಾ ತನ್ಮಾಂಸಭಕ್ಷಣೇಚ್ಛಾಂ ಕರೋತಿ;

ಮಾಂಸಾಹಾರಿಯು ಪುಷ್ಟವಾದ ಪಶುವನ್ನು ನೋಡಿ, ಅದರ ಮಾಂಸಭಕ್ಷಣೆಯ ಇಚ್ಛೆಯನ್ನು ಮಾಡುತ್ತಾನೆ.

ಅಂದರೆ, ಮಾಂಸಾಹಾರಿಯಾದ ಮನುಷ್ಯನು ಪುಷ್ಟವಾದ ಪಶುವನ್ನು ಕೊಂದು, ಅದರ ಮಾಂಸವನ್ನು ತಿಂದುಬಿಡುತ್ತಾನೆ.

ನೈವ ಸ ಪುಷ್ಟಂ ಪಶುಂ ವರ್ಧಯಿತುಂ ಜೀವಯಿತುಂ ವಾ ಮನ್ಯತೇ.

ಅವನು ಆ ಪುಷ್ಟವಾದ ಪಶುವನ್ನು ಬೆಳೆಸುವುದಕ್ಕಾಗಿಯೋ, ಅಥವಾ ಜೀವಿಸಿಡುವುದಕ್ಕಾಗಿಯೋ, ಇದೆಯೆಂದು ತಿಳಿಯುವುದೇ ಇಲ್ಲ!

ತಥೈವ ಸ್ವಸುಖಸಂಪಾದನಾಯ ಪ್ರಜಾಯಾಂ ಕಶ್ಚಿನ್ಮತ್ತೋಽಧಿಕೋ ನ ಭವೇದಿತೀಚ್ಛಾಂ ಸದೈವ ರಕ್ಷತಿ.

ಹಾಗೆಯೇ, ತನ್ನ ಸುಖವನ್ನು ಸಂಪಾದಿಸುವುದಕ್ಕಾಗಿ_ 'ಪ್ರಜೆಗಳಲ್ಲಿ ಯಾವನೂ ನನಗಿಂತ ಹೆಚ್ಚಾದವನಾಗದಿರಲಿ', ಎಂಬ ಇಚ್ಛೆಯನ್ನು ಯಾವಾಗಲೂ ಕಾಪಾಡಿಕೊಂಡು ಬರುತ್ತಾನೆ.

ತಸ್ಮಾದೇಕೋ ರಾಜಾ ಪ್ರಜಾಂ ನ ಪುಷ್ಯತಿ. ನೈವ ರಕ್ಷಯಿತುಂ ಸಮರ್ಥೋ ಭವತೀತಿ.

ಆದುದರಿಂದ, ಒಬ್ಬನೇ ಆದ ರಾಜನು ಪ್ರಜೆಗಳನ್ನು ಪೋಷಿಸುವುದಿಲ್ಲ! ಮತ್ತು ಅವರನ್ನು ರಕ್ಷಿಸಲೂ ಸಮರ್ಥನೇ ಆಗಿರುವುದಿಲ್ಲ!

ಅಂದರೆ, **ಒಬ್ಬ ಮನುಷ್ಯನು ರಾಜನಾಗಿ,** ಪ್ರಜೆಗಳ ನಾಶ ಮಾಡುವಂತಹವನಾಗುತ್ತಾನೆ. ಏಕೆಂದರೆ, ಅವನು ಯಾವಾಗಲೂ ತನ್ನದೇ ಉನ್ನತಿಯನ್ನು ಇಚ್ಛಿಸುತ್ತಿರುತ್ತಾನೆ!

ಯಥಾ ಚ_

ಮತ್ತೊಂದು ಉದಾಹರಣೆಯೇನೆಂದರೆ_

ಯದಾ ಶೂದ್ರಾ ಯದರ್ಯ್ಯಜಾರಾ ಭವತಿ, ತದಾ ನ ಸ ಶೂದ್ರಃ ಪೋಷಾಯ ಧನಾಯತಿ, ಪುಷ್ಟೋ ಭವತಿ.

ಯಾವಾಗ ಶೂದ್ರಿಯು ವೈಶ್ಯನನ್ನು ಜಾರನನ್ನಾಗಿ ಉಳ್ಳವಳಾಗುತ್ತಾಳೋ, ಆಗ ಆ ಶೂದ್ರನು ಪೋಷಣೆಗಾಗಿ ಧಾನ್ಯವನ್ನು ಇಚ್ಛಿಸುವುದಿಲ್ಲ, ಎಂದರೆ, ಪುಷ್ಟನಾಗುವುದಿಲ್ಲ!

ತಥೈಕೋ ರಾಜಾಽಪಿ ಪ್ರಜಾಂ ಯದಾ ನ ಪುಷ್ಯತಿ, ತದಾ ಸಾ ನೈವ ಪೋಷಾಯ ಧನಾಯತಿ, ಪುಷ್ಟಾ ನ ಭವತಿ.

ಹಾಗೆಯೇ, ಒಬ್ಬನೇ ಆದ ರಾಜನೂ ಕೂಡ, ಪ್ರಜೆಗಳನ್ನು ಯಾವಾಗ ಪೋಷಿಸುವುದಿಲ್ಲವೋ, ಆಗ, ಅವರು [ಅವನಿಂದ] ಪೋಷಣೆಗಾಗಿ ಧಾನ್ಯವನ್ನು ಇಚ್ಛಿಸುವುದಿಲ್ಲ, ಎಂದರೆ ಪುಷ್ಟರಾಗುವುದಿಲ್ಲ!

ಭೀರುವಿಗೂ, ಮೂರ್ಖನಿಗೂ ರಾಜ್ಯಾಧಿಕಾರ ಸಲ್ಲದು!

ತಸ್ಮಾತ್ ಕಾರಣಾದ್ ವೈಶೀಪುತ್ರಂ ಭೀರುಂ ಶೂದ್ರೀಪುತ್ರಂ ಮೂರ್ಖಂ ಚ ನಾಭಿಷಿಂಚತಿ, ನೈವೈತಂ ರಾಜ್ಯಾಧಿಕಾರೇ ಸ್ಥಾಪಯತೀತ್ಯರ್ಥಃ.

ಈ ಕಾರಣದಿಂದ, ವೈಶ್ಯೆಯ ಭೀರುವಾದ ಪುತ್ರನ ಮತ್ತು ಶೂದ್ರಿಯ ಮೂರ್ಖನಾದ ಪುತ್ರನ ಅಭಿಷೇಕ ಮಾಡುವುದಿಲ್ಲ; ಎಂದರೆ, ಇವರನ್ನು ರಾಜ್ಯಾಧಿಕಾರದಲ್ಲಿ ಸ್ಥಾಪಿಸುವುದಿಲ್ಲ, ಎಂದರ್ಥ!

ಅಂದರೆ, ಶೂದ್ರನ, ಅಥವಾ ವೈಶ್ಯನ ಅಭಿಷೇಕ ಮಾಡುವುದರಿಂದ, ವ್ಯಭಿಚಾರ ಹೆಚ್ಚುತ್ತದೆ ಮತ್ತು ಧನದ ಅಪಹರಣವೂ ಅಧಿಕವಾಗುತ್ತದೆ.

ಆದುದರಿಂದ, ಯಾವ ಮೂರ್ಖನಿಗೂ, ಅಥವಾ ಲೋಭಿಗೂ, ಎಂದಿಗೂ ಸಭಾಧ್ಯಕ್ಷತ್ವ ಮೊದಲಾದ ಉತ್ತಮ ಅಧಿಕಾರವನ್ನು ಕೊಡಬಾರದು!*

ಅಸ್ಮಾಚ್ಛತಪಥಬ್ರಾಹ್ಮಣೋಕ್ತಾದರ್ಥಾನ್ಮಹೀಧರ-ಕೃತೋಽರ್ಥೋಽತೀವವಿರುದ್ಧೋಽಸ್ತಿ ॥೧೦, ೧೧॥

ಶತಪಥಬ್ರಾಹ್ಮಣವು ಹೇಳಿರುವ ಈ ಅರ್ಥಕ್ಕೆ ಮಹೀಧರರು ಮಾಡಿರುವ ಅರ್ಥವು ಅತ್ಯಂತ ವಿರುದ್ಧವಾಗಿದೆ.

ಅಂದರೆ, ಈ ಸತ್ಯ ಅರ್ಥಕ್ಕೆ ವಿಪರೀತ ವಾಗಿಯೇ, ಮಹೀಧರರು ಹೊರಟಿದ್ದಾರೆ! [೧೦, ೧೧]

ದಯಾನಂದಭಾಷ್ಯದಲ್ಲಿ ಮಹೀಧರರಂತಹವರ ಇನ್ನಷ್ಟು ದೋಷಪ್ರದರ್ಶನ

ಮುಂದೆ, ಇನ್ನೆಲ್ಲಿಯ ತನಕ ಬರೆಯೋಣ!

ಏತಾವತ್ಯೈವ ಖಂಡನೇನ ಮಹೀಧರಕೃತಸ್ಯ 'ವೇದದೀಪಾ'ಖ್ಯಸ್ಯ ಖಂಡನಂ ಸರ್ವೈರ್ಜನೈ-ರ್ಬೋದ್ಧವ್ಯಮಿತಿ.

ಇಷ್ಟು ಮಟ್ಟಿನ ಖಂಡನೆಯಿಂದಲೇ, ಮಹೀಧರರು ರಚಿಸಿರುವ 'ವೇದದೀಪ', ಎಂಬ ಹೆಸರಿನ [ಭಾಷ್ಯದ] ಖಂಡನೆಯಾಯಿತು, ಎಂದು ಎಲ್ಲಾ ಜನರೂ ತಿಳಿದುಕೊಳ್ಳಬೇಕು!

ಅಂದರೆ, ಸಜ್ಜನಪುರುಷರು ಇಷ್ಟರಿಂದಲೇ ಅರ್ಥ ಮತ್ತು ಅನರ್ಥದ ಪರೀಕ್ಷೆಯನ್ನು ಮಾಡಿಕೊಳ್ಳಲಿ!

* ಭಾರತದಲ್ಲಿನ ಸಂಪ್ರತಿ ಅಸಂತೋಷಜನಕ ರಾಜ್ಯವ್ಯವಸ್ಥೆಗೆ, ಹಾಗೂ ಭ್ರಷ್ಟಾಚಾರದ ನಿರಂತರತೆಗೆ ಕಾರಣ ಇದಾಗಿದೆ _ಅನು.

ಯದಾ ಮಂತ್ರಭಾಷ್ಯಂ ಮಯಾ ವಿಧಾಸ್ಯತೇ, ತತ್ರಾಸ್ಯ ಮಹೀಧರಕೃತಸ್ಯ ಭಾಷ್ಯಸ್ಯಾನ್ಯೇಽಪಿ ದೋಷಾಃ ಪ್ರಕಾಶಯಿಷ್ಯಂತೇ.

ಯಾವಾಗ ನನ್ನಿಂದ ಮಂತ್ರಗಳ ಭಾಷ್ಯವು ರಚಿಸಲ್ಪಡುವುದೋ, [ಆಗ] ಅದರಲ್ಲಿ ಮಹೀಧರರಿಂದ ರಚಿಸಲ್ಪಟ್ಟ ಈ ಭಾಷ್ಯದ ಇತರ ದೋಷಗಳೂ ಕೂಡ, ಪ್ರಕಟಿಸಲ್ಪಡುವುವು!

ಅಂದರೆ, [ನನ್ನ] ಮಂತ್ರಭಾಷ್ಯದಲ್ಲಿ ಮಹೀಧರ ಮೊದಲಾದವರ ಇನ್ನಷ್ಟು ದೋಷಗಳೂ ಕೂಡ, ತೋರಿಸಲ್ಪಡುವುವು!

ಐರೋಪ್ಯರ, ಹಾಗೂ ಭಾರತೀಯರ ಭಾಷ್ಯಗಳೂ ಅನರ್ಥಕಾರಿಗಳೇ!

ಯದಿ ಹ್ಯಾರ್ಯ್ಯದೇಶನಿವಾಸಿನಾಂ ಸಾಯಣ-ಮಹೀಧರಪ್ರಭೃತೀನಾಂ ವ್ಯಾಖ್ಯಾಸ್ವೇತಾದೃಶೀ ಮಿಥ್ಯಾ-ಗತಿರಸ್ತಿ;

ಏಕೆಂದರೆ, ಒಂದುವೇಳೆ, ಆರ್ಯದೇಶದ ನಿವಾಸಿಗಳಾದ ಸಾಯಣ, ಮಹೀಧರರಂತಹವರ ವ್ಯಾಖ್ಯಾನಗಳಲ್ಲಿ ಈ ತರಹದ ಮಿಥ್ಯಾಗತಿ ಇರುವುದಾದರೆ;

ತರ್ಹಿ ಯೋರೋಪಖಂಡನಿವಾಸಿನಾಮೇತ-ದನುಸಾರೇಣ ಸ್ವದೇಶಭಾಷಾಯಾಂ [ಕೃತಾನಾಂ] ವೇದಾರ್ಥವ್ಯಾಖ್ಯಾನಾನಾಮನರ್ಥಗತೇಸ್ತು ಕಾ ಕಥಾ?

ಇದಕ್ಕೆ ಅನುಸಾರವಾಗಿ ಯೂರೋಪಖಂಡದ ನಿವಾಸಿಗಳಿಂದ ತಮ್ಮ ದೇಶದ ಭಾಷೆಯಲ್ಲಿ [ರಚಿತವಾದ] ವೇದಾರ್ಥವ್ಯಾಖ್ಯಾನಗಳ ಅನರ್ಥಗತಿಯ ಬಗ್ಗೆ ಹೇಳುವುದೇನಿದೆ?

ಅಂದರೆ, ಯಾವಾಗ ಈ ಜನರ ವ್ಯಾಖ್ಯಾನಗಳೇ ಅಶುದ್ಧವಾಗಿರುವಾಗ, ಯೂರೋಪಖಂಡನಿವಾಸಿಗಳಾದ ಜನರು ಇವರ ಸಹಾಯವನ್ನೇ ತೆಗೆದುಕೊಂಡು, ತಮ್ಮ ದೇಶಭಾಷೆಗಳಲ್ಲಿ ವೇದಗಳ ಯಾವ ವ್ಯಾಖ್ಯಾನಗಳನ್ನು ಮಾಡಿದ್ದಾರೋ, ಅವುಗಳಲ್ಲಿನ ಅನರ್ಥಗಳ ವಿಷಯದಲ್ಲಂತೂ ಹೇಳುವುದೇ ಏನು?

ಏವಂ ಜಾತೇ ಸತಿ ಹ್ಯೇತದಾಶ್ರಯೇಣ ದೇಶ-ಭಾಷಯಾ ಯೂರೋಪದೇಶಭಾಷಯಾ [ಚ] ಕೃತಸ್ಯ ವ್ಯಾಖ್ಯಾನಸ್ಯಾಶುದ್ಧೇಸ್ತು ಖಲು ಕಾ ಗಣನಾಸ್ತಿ?

ಹೀಗಿರುವಾಗ, ಇವರ [ಭಾಷ್ಯಗಳ] ಆಶ್ರಯದಿಂದ ದೇಶಭಾಷೆಯಲ್ಲಿಯೂ, ಮತ್ತು ಯೂರೋಪದೇಶದ ಭಾಷೆಯಲ್ಲಿಯೂ ರಚಿಸಲ್ಪಟ್ಟ ವ್ಯಾಖ್ಯಾನದಲ್ಲಿನ ಅಶುದ್ಧಿಗಳಿಗಂತೂ ಯಾವ ಎಣಿಕೆ ಇದೆ?

ಅಂದರೆ, ಯಾರು ಇವರ [ಭಾಷ್ಯಗಳಿಗೆ] ಅನುಸಾರವಾಗಿ ವ್ಯಾಖ್ಯಾನ ಮಾಡಿದ್ದಾರೋ, ಈ ವಿರುದ್ಧ ವ್ಯಾಖ್ಯಾನಗಳಿಂದ ಯಾವ ಲಾಭವೂ ಕಾಣಬರುವುದಿಲ್ಲ! ಬದಲಾಗಿ ವೇದಗಳ ಸತ್ಯವಾದ ಅರ್ಥಕ್ಕೆ ಪ್ರತ್ಯಕ್ಷವಾದ ಹಾನಿಯೇ ಆಗುತ್ತಿದೆ!

ಇತಿ ಸಜ್ಜನೈರ್ವಿಚಾರಣೀಯಮ್.

ಹೀಗೆಂದು, ಸಜ್ಜನರು ವಿಚಾರ ಮಾಡಬೇಕು!

ಇಂತಹವರ ಭಾಷ್ಯಗಳನ್ನು ಆಶ್ರಯಿಸುವುದು ನಮಗೆ ಉಚಿತವಲ್ಲ!

ನೈವೈತೇಷಾಂ ವ್ಯಾಖ್ಯಾನಾನಾಮಾಶ್ರಯಂ ಕರ್ತುಮಾರ್ಯ್ಯಾಣಾಂ ಲೇಶಮಾತ್ರಾಪಿ ಯೋಗ್ಯತಾ ದೃಶ್ಯತೇ.

ಮತ್ತು ಇಂತಹವರ ವ್ಯಾಖ್ಯಾನಗಳ ಆಶ್ರಯ ಮಾಡುವುದು ಆರ್ಯರಿಗೆ ಲೇಶಮಾತ್ರವೂ ಕೂಡ, ಉಚಿತವೆಂದು ಕಂಡುಬರುತ್ತಿಲ್ಲ!

ತದಾಶ್ರಯೇಣ ವೇದಾನಾಂ ಸತ್ಯಾರ್ಥಸ್ಯ ಹಾನಿರನರ್ಥಪ್ರಕಾಶಶ್ಚ.

[ಏಕೆಂದರೆ,] ಅವುಗಳ ಆಶ್ರಯದಿಂದ ವೇದಗಳ ಸತ್ಯ ಅರ್ಥದ ಹಾನಿಯೂ ಮತ್ತು ಅನರ್ಥದ ಪ್ರಸಿದ್ಧಿಯೂ ಆಗುತ್ತಿದೆ.

ತಸ್ಮಾತ್ ತದ್‌ವ್ಯಾಖ್ಯಾನೇಷು ಸತ್ಯಾಬುದ್ಧಿಃ ಕೇನಾಪಿ ನೈವ ಕರ್ತ್ತವ್ಯಾ.

ಆದುದರಿಂದ, ಆ ವ್ಯಾಖ್ಯಾನಗಳಲ್ಲಿ 'ಸತ್ಯ'ವಾದ ಬುದ್ಧಿಯನ್ನು ಯಾವನೂ ಇಡಲೇಬಾರದು!

ಕಿಂತು ವೇದಾಃ ಸರ್ವವಿದ್ಯಾಭಿಃ ಪೂರ್ಣಾಃ ಸಂತಿ; ನೈವ ಕಿಂಚಿತ್ ತೇಷು ಮಿಥ್ಯಾತ್ವಮಸ್ತಿ.

ಏಕೆಂದರೆ, **ವೇದಗಳು ಸಮಸ್ತವಿದ್ಯೆಗಳಿಂದ ಪೂರಿತವಾಗಿವೆ; ಅವುಗಳಲ್ಲಿ ಮಿಥ್ಯಾತ್ವವು ಸ್ವಲ್ಪವೂ ಇಲ್ಲವೇ ಇಲ್ಲ!**

ನಾಲ್ಕೂ ವೇದಗಳ ನನ್ನ ಭಾಷ್ಯವು ಮುದ್ರಿತವಾದಾಗ ಸತ್ಯವಿದ್ಯಾಪ್ರಕಾಶ!

ತದೇತಚ್ಚ ಸರ್ವೇ ಮನುಷ್ಯಾಸ್ತದಾ ಜ್ಞಾಸ್ಯಂತಿ, ಯದಾ ಚತುರ್ಣಾಂ ವೇದಾನಾಂ ನಿರ್ಮಿತಂ ಭಾಷ್ಯಂ ಯಂತ್ರಿತಂ ಚ ಭೂತ್ವಾ ಸರ್ವಬುದ್ಧಿಮತಾಂ ಜ್ಞಾನಗೋಚರಂ ಭವಿಷ್ಯತಿ .*

ಮತ್ತು, ಯಾವಾಗ ನಾಲ್ಕೂ ವೇದಗಳ ಭಾಷ್ಯವು [ನನ್ನಿಂದ] ನಿರ್ಮಿಸಲ್ಪಟ್ಟು, ಹಾಗೂ ಮುದ್ರಿತವಾಗಿ, ಸಮಸ್ತ ಬುದ್ಧಿವಂತರ ಜ್ಞಾನಕ್ಕೆ ತಿಳಿಯಬರುವುದೋ, ಆಗ, ಈ ಮಾತನ್ನು ಎಲ್ಲಾ ಮನುಷ್ಯರೂ ಅರಿಯುವರು!*

ಅಂದರೆ, ಯಾವಾಗ ನಾಲ್ಕೂ ವೇದಗಳ ಭಾಷ್ಯವು ತಯಾರಾಗಿ, ಮತ್ತು ಮುದ್ರಿತವಾಗಿ ಎಲ್ಲಾ ಬುದ್ಧಿವಂತರಿಗೆ ಜ್ಞಾನಗೋಚರವಾಗುವುದೋ, ಆಗ **ಉತ್ತಮ ವಿದ್ಯೆಯ ಪುಸ್ತಕಗಳಾದ ವೇದಗಳು ಪರಮೇಶ್ವರರಚಿತವಾಗಿವೆ,** ಎಂದು ಪ್ರಪಂಚದಲ್ಲೆಲ್ಲಾ ಯಾವನಿಗಾದರೂ ತಿಳಿಯಬರುವುದು!

*ದುರದೃಷ್ಟವಶಾದ್ ಗ್ರಂಥಕರ್ತುರಕಾಲಮರಣಾದಿಯಮಿಚ್ಛಾ ನ ಸಂಪನ್ನಾ. ಅತೋ ಗ್ರಂಥಕರ್ತ್ರಾ 'ಚತುರ್ವೇದವಿಷಯ-ಸೂಚೀ', ಋಗ್ವೇದಸ್ಯ ಖಂಡಭಾಷ್ಯಂ, ಯಜುರ್ವೇದಸ್ಯ ಪೂರ್ಣಭಾಷ್ಯಮೇವ ಚ ನಿರ್ಮಿತಾನಿ ವರ್ತಂತೇ _ಅನು.

* ದುರದೃಷ್ಟದ ಕಾರಣದಿಂದ ಗ್ರಂಥಕರ್ತರ ಈ ಇಚ್ಛೆಯು ಪೂರ್ಣವಾಗಲಿಲ್ಲ. ಆದುದರಿಂದ, ಗ್ರಂಥಕರ್ತರಿಂದ 'ಚತುರ್ವೇದವಿಷಯಸೂಚೀ', ಋಗ್ವೇದದ ಖಂಡಭಾಷ್ಯ, ಮತ್ತು ಯಜುರ್ವೇದದ ಪೂರ್ಣಭಾಷ್ಯ ಮಾತ್ರ ನಿರ್ಮಿಸಲ್ಪಟ್ಟವು _ಅನು.

ಏವಂ ಜಾತೇ ಖಲು ನೈವ ಪರಮೇಶ್ವರ-ಕೃತಯಾ ತುಲ್ಯಾ ದ್ವಿತೀಯಾ ವಿದ್ಯಾಸ್ತೀತಿ ಸರ್ವೇ ವಿಜ್ಞಾಸ್ಯಂತೀತಿ ಬೋಧ್ಯಮ್.

ಹೀಗಾದಾಗ, ಪರಮೇಶ್ವರನ ರಚನೆಗೆ ಸಮಾನವಾದ ಎರಡನೆಯ ವಿದ್ಯೆಯು ಇರುವುದೇ ಇಲ್ಲ, ಎಂದು ಎಲ್ಲರೂ ತಿಳಿಯುವರು, ಎಂದು ಅರಿಯಬೇಕು!

ಅಂದರೆ, ಈಶ್ವರಕೃತವಾದ ಸತ್ಯಪುಸ್ತಕಗಳು ವೇದಗಳೇ [ಹೌದೋ,] ಅಥವಾ ಬೇರೆಯಾವುದಾದರೂ ಆಗಬಹುದೋ, ಎಂಬ ಮಾತೂ ಕೂಡ, ಪ್ರಕಟವಾಗುವುದು!

ಇಂತಹ ನಿಶ್ಚಯವನ್ನು ತಿಳಿದಾಗ, ಮನುಷ್ಯರೆಲ್ಲರಿಗೂ ವೇದಗಳ ಬಗ್ಗೆ ಅತ್ಯಂತ ಪ್ರೀತಿ ಉಂಟಾಗುವುದು!

ಈ ಮೊದಲಾದ ಅನೇಕ ಉತ್ತಮ ಪ್ರಯೋಜನಗಳು ಈ ವೇದಭಾಷ್ಯದ ರಚನೆಯಲ್ಲಿವೆ, ಎಂದು ತಿಳಿದುಕೊಳ್ಳಿರಿ!

ಇತಿ ಭಾಷ್ಯಕರಣಶಂಕಾಸಮಾಧಾನಾದಿ-ವಿಷಯಃ ಸಂಕ್ಷೇಪತಃ ॥

ಇಲ್ಲಿಗೆ ಭಾಷ್ಯರಚನೆ, ಶಂಕಾ-ಸಮಾಧಾನ ಮೊದಲಾದ ವಿಷಯವು ಸಂಕ್ಷೇಪವಾಗಿ ಮುಗಿಯಿತು. [೨೮]

(೨೯) ಪ್ರತಿಜ್ಞೆಯ ವಿಷಯಗಳು

ಅಥ ಪ್ರತಿಜ್ಞಾವಿಷಯಃ ಸಂಕ್ಷೇಪತಃ

ಈಗ, ಪ್ರತಿಜ್ಞೆಯ ವಿಷಯವು ಸಂಕ್ಷೇಪವಾಗಿ ಬರೆಯಲ್ಪಡುತ್ತದೆ.

ಶಬ್ದಾರ್ಥದ ಮೂಲಕ ಕರ್ಮಕಾಂಡದ ವರ್ಣನೆ!

ಅತ್ರ ವೇದಭಾಷ್ಯೇ ಕರ್ಮಕಾಂಡಸ್ಯ ವರ್ಣನಂ ಶಬ್ದಾರ್ಥತಃ ಕರಿಷ್ಯತೇ.

(೧) ಈ ವೇದಭಾಷ್ಯದಲ್ಲಿ ಕರ್ಮಕಾಂಡದ ವರ್ಣನೆಯು ಶಬ್ದ ಮತ್ತು ಅರ್ಥದ ಮೂಲಕ ಮಾಡಲಾಗುವುದು!

ಅಂದರೆ, ಈ ವೇದಭಾಷ್ಯದಲ್ಲಿ ಶಬ್ದಗಳ ಮತ್ತು ಅವುಗಳ ಅರ್ಥಗಳ ಮೂಲಕ* ಕರ್ಮಕಾಂಡದ ವರ್ಣನೆಯನ್ನು ಮಾಡುತ್ತೇವೆ!

ಕರ್ಮಕಾಂಡದ ವಿಧಿಭಾಗದ ವಿಸ್ತರಶಃ ವರ್ಣನೆ ಇರುವುದಿಲ್ಲ

ಪರಂತ್ವೇತೈರ್ವೇದಮಂತ್ರೈಃ ಕರ್ಮಕಾಂಡ-ವಿನಿಯೋಜಿತೈರ್ಯತ್ರ ಯತ್ರಾಗ್ನಿಹೋತ್ರಾ-ದ್ಯಶ್ವಮೇಧಾಂತೇ ಯದ್ಯತ್ ಕರ್ತ್ತವ್ಯಂ ತತ್ತದತ್ರ ವಿಸ್ತರತೋ ನ ವರ್ಣಯಿಷ್ಯತೇ.

(೨) ಆದರೆ, ಕರ್ಮಕಾಂಡದಲ್ಲಿ ವಿನಿಯುಕ್ತವಾಗಿರುವ ಈ ವೇದಮಂತ್ರಗಳ ಮೂಲಕ ಎಲ್ಲೆಲ್ಲಿ ಅಗ್ನಿಹೋತ್ರ ಮೊದಲಾದುದರಿಂದ ಹಿಡಿದು, ಅಶ್ವ-ಮೇಧದ ತನಕ ಯಾವ ಯಾವ [ಕರ್ಮ] ಮಾಡಬೇಕಾಗುತ್ತದೋ, ಅದದು ಇಲ್ಲಿ ವಿಸ್ತಾರವಾಗಿ ವರ್ಣಿಸಲ್ಪಡುವುದಿಲ್ಲ!

---

* ಎಂದರೆ_ 'ಜ್ಯೋತಿರ್ವೈ ಹಿರಣ್ಯಮ್'; 'ರಾಷ್ಟ್ರಂ ವಾ ಅಶ್ವಮ್', ಈ ಮೊದಲಾದ ಶಬ್ದಾರ್ಥಗಳು _ಅನು.

ಅಂದರೆ, ಕರ್ಮಕಾಂಡದಲ್ಲಿ ಹಾಕಿರುವ ವೇದ ಮಂತ್ರಗಳಲ್ಲಿಂದ ಎಲ್ಲೆಲ್ಲಿ ಯಾವ ಯಾವ ಕರ್ಮಗಳು ಜನರಿಂದ ಅಗ್ನಿಹೋತ್ರದಿಂದ ಹಿಡಿದು, ಅಶ್ವಮೇಧದ ಕೊನೆಯ ತನಕ ಮಾಡಲ್ಪಡಬೇಕೋ, ಅವುಗಳ ವರ್ಣನೆಯು ಇಲ್ಲಿ ಮಾಡಲ್ಪಡುವುದಿಲ್ಲ!

ಕುತಃ?

ಏಕೆಂದರೆ_

ಕರ್ಮಕಾಂಡಾನುಷ್ಠಾನಸ್ಯೈತರೇಯ-ಶತಪಥ-ಬ್ರಾಹ್ಮಣ-ಪೂರ್ವಮೀಮಾಂಸಾ-ಶ್ರೌತಸೂತ್ರಾದಿಷು ಯಥಾರ್ಥಂ ವಿನಿಯೋಜಿತತ್ವಾತ್.

ಕರ್ಮಕಾಂಡದ ಅನುಷ್ಠಾನವು ಐತರೇಯ-[ಬ್ರಾಹ್ಮಣ], ಶತಪಥಬ್ರಾಹ್ಮಣ, ಪೂರ್ವಮೀಮಾಂಸಾ, ಶ್ರೌತಸೂತ್ರ ಮೊದಲಾದುವುಗಳಲ್ಲಿ ಯಥಾರ್ಥವಾಗಿ ವಿನಿಯುಕ್ತವಾಗಿದೆ!

ಅಂದರೆ, [ಕರ್ಮಕಾಂಡದ] ಅನುಷ್ಠಾನದ ಯಥಾರ್ಥ* ವಿನಿಯೋಗವು ಐತರೇಯ, ಶತಪಥ ಮೊದಲಾದ ಬ್ರಾಹ್ಮಣಗಳಲ್ಲೂ, ಪೂರ್ವಮೀಮಾಂಸಾ, ಶ್ರೌತ, ಹಾಗೂ ಗೃಹ್ಯಸೂತ್ರಗಳಲ್ಲೂ ಹೇಳಲಾಗಿದೆ.

ಪುನಸ್ತತ್ಕಥನೇನಾನ್ಯಷಿಕೃತಗ್ರಂಥವತ್ ಪುನರುಕ್ತ-ಪಿಷ್ಟಪೇಷಣದೋಷಾಪತ್ತೇಶ್ಚೇತಿ.

ಪುನಃ ಅದನ್ನು ಹೇಳುವುದರಿಂದ, ಅನ್ಯಷಿಯಿಂದ ರಚಿಸಲ್ಪಟ್ಟ ಗ್ರಂಥದಂತೆಯೂ, ಮತ್ತು ಪುನರುಕ್ತಿಯ, ಹಾಗೂ ಹಿಟ್ಟನ್ನು ಬೀಸುವಂತಹ ದೋಷದಿಂದ ಯುಕ್ತವಾದಂತೆಯೂ ಆಗುತ್ತದೆ.

ಅಂದರೆ, ಅದನ್ನೇ ಪುನಃ ಹೇಳುವುದರಿಂದ, ಬೀಸಿದ್ದನ್ನೇ ಬೀಸುವುದಕ್ಕೆ ಸಮಾನವಾದ, ಮತ್ತು ಅಲ್ಪಜ್ಞ ಪುರುಷರ ಲೇಖನಕ್ಕೆ ಸಮಾನವಾದ ದೋಷವು ಈ ಭಾಷ್ಯದಲ್ಲೂ ಬಂದು-ಹೋಗಬಹುದು!

ತಸ್ಮಾದ್ಯುಕ್ತಿಸಿದ್ಧೋ ವೇದಾದಿಪ್ರಮಾಣಾನುಕೂಲೋ ಮಂತ್ರಾರ್ಥಾನುಸೃತಸ್ತದುಕ್ತೋऽಪಿ ವಿನಿಯೋಗೋ ಗ್ರಹೀತುಂ ಯೋಗ್ಯೋऽಸ್ತಿ.*

ಆದುದರಿಂದ, ಯುಕ್ತಿಯಿಂದ ಸಿದ್ಧವೂ, ವೇದಾದಿ ಪ್ರಮಾಣಗಳಿಗೆ ಅನುಕೂಲವೂ, ಮತ್ತು ಮಂತ್ರಾರ್ಥಕ್ಕೆ ಅನುಸಾರವಾಗಿ ಹೇಳಲ್ಪಟ್ಟುದೂ ಆದ ವಿನಿಯೋಗವೇ ಅಂಗೀಕರಿಸಲು ಯೋಗ್ಯವಾಗಿರುತ್ತದೆ!

ಅಂದರೆ, ಯಾವ ಯಾವ ಕರ್ಮಕಾಂಡವು ವೇದಾನುಕೂಲವೂ, ಮತ್ತು ಯುಕ್ತಿ-ಪ್ರಮಾಣಗಳಿಂದ ಸಿದ್ಧವೂ ಆಗಿರುತ್ತದೋ, ಅದನ್ನೇ ಅಂಗೀಕರಿಸುವುದು ಯೋಗ್ಯವಾಗಿರುತ್ತದೆ; ಅಯುಕ್ತವನ್ನಲ್ಲ!*

* ಗ್ರಂಥಕೃತಾ ಕರ್ಮಕಾಂಡಸ್ಯ ಯುಕ್ತಿವಿರುದ್ಧ-ವಿನಿಯೋಗಾ ನ ಸ್ವೀಕ್ರಿಯಂತ ಇತಿ ಚತುರ್ಥಾಧ್ಯಾಯೇ 'ವೇದ-ವಿಷಯವಿಚಾರ'-ಸಂಜ್ಞಕೇ ಪೂರ್ವಮೇವ ವಿಸ್ಪಷ್ಟಂ ಕೃತಮ್. ೧೪೩ ತಮಂ ಪೃಷ್ಠಂ ದ್ರಷ್ಟವ್ಯಮ್ _ಅನು.

* ಕರ್ಮಕಾಂಡದ ಅಯಥಾರ್ಥ ವಿನಿಯೋಗವನ್ನು ಗ್ರಂಥಕಾರರು ಒಪ್ಪುವುದಿಲ್ಲ, ಎಂದು ನಾಲ್ಕನೆಯ ಅಧ್ಯಾಯವಾದ 'ವೇದವಿಷಯ ವಿಚಾರ'ದಲ್ಲಿ ಮೊದಲೇ ಹೇಳಲಾಗಿದೆ. ೧೪೩ ನೆಯ ಪುಟವನ್ನು ನೋಡಿ. _ಅನು.

ಉಪಾಸನಾಕಾಂಡದ ವರ್ಣನೆಯು ಪ್ರಕರಣಾನುಸಾರ ಮಾತ್ರ

ತಥೈವೋಪಾಸನಾಕಾಂಡಸ್ಯಾಪಿ ಪ್ರಕರಣಶಬ್ದಾನುಸಾರತೋ ಹಿ ಪ್ರಕಾಶಃ ಕರಿಷ್ಯತೇ.

(೩) ಹಾಗೆಯೇ, ಉಪಾಸನಾಕಾಂಡದ ಪ್ರಕಾಶವೂ ಕೂಡ, ಪ್ರಕರಣ, ಹಾಗೂ ಶಬ್ದಕ್ಕೆ ಅನುಸಾರವಾಗಿಯೇ ಮಾಡಲ್ಪಡುತ್ತದೆ.

ಕುತೋಽಸ್ಯೈಕತ್ರ ವಿಶೇಷಸ್ತು ಪಾತಂಜಲಯೋಗಶಾಸ್ತ್ರಾದಿಭಿರ್ವಿಜ್ಞೇಯೋಽಸ್ತೀತ್ಯತಃ .

ಏಕೆಂದರೆ, ಇದು ಒಂದೇ ಕಡೆ, ವಿಶೇಷವಾಗಿ, ಪಾತಂಜಲಯೋಗಶಾಸ್ತ್ರ ಮೊದಲಾದುವುಗಳಿಂದ ತಿಳಿಯ ಬಹುದಾಗಿದೆ!

ಜ್ಞಾನಕಾಂಡವನ್ನು ಶಾಸ್ತ್ರಗ್ರಂಥಗಳಿಂದ ತಿಳಿಯಬೇಕು!

ಏವಮೇವ ಜ್ಞಾನಕಾಂಡಸ್ಯಾಪಿ.

(೪) ಜ್ಞಾನಕಾಂಡದ್ದೂ ಕೂಡ, ಹೀಗೆಯೇ, [ಎಂದು ತಿಳಿಯಬೇಕು!]

ಕುತಃ?

ಏಕೆಂದರೆ_

ಅಸ್ಯ ವಿಶೇಷಸ್ತು ಸಾಂಖ್ಯವೇದಾಂತೋಪನಿಷದಾದಿಶಾಸ್ತ್ರಾನುಗತೋ ದ್ರಷ್ಟವ್ಯಃ .

ಇದರ ವಿಶೇಷವಂತೂ **ಸಾಂಖ್ಯ-ವೇದಾಂತ [ದರ್ಶನ], ಉಪನಿಷತ್** ಮೊದಲಾದ ಶಾಸ್ತ್ರಗಳನ್ನು ಅನುಸರಿಸಿಯೇ ಕಾಣಬೇಕಾಗಿರುತ್ತದೆ!

ಅಂದರೆ, **ಉಪಾಸನಾ[-ಜ್ಞಾನ]ಕಾಂಡ**ವಿಷಯಕವಾದ ಮಂತ್ರಗಳ ವಿಷಯದಲ್ಲಿಯೂ ಕೂಡ, **ಪಾತಂಜಲ[ಯೋಗ], ಸಾಂಖ್ಯ, ವೇದಾಂತಶಾಸ್ತ್ರ** ಮತ್ತು **ಉಪನಿಷತ್ತು**ಗಳ ರೀತಿಯಂತೆ ಈಶ್ವರನ ಉಪಾಸನೆಯನ್ನು ತಿಳಿದುಕೊಳ್ಳಿರಿ!

ಮೂರು ಕಾಂಡಗಳ ಉಪಕಾರವು ವಿಜ್ಞಾನಕಾಂಡದಲ್ಲಿ

ಏವಂ [ಯತ್ರ] ಕಾಂಡತ್ರಯೇಣ ಬೋಧಾನ್ನಿಷ್ಪತ್ತ್ಯುಪಕಾರೌ ಗೃಹ್ಯೇತೇ, ತಚ್ಚ ವಿಜ್ಞಾನಕಾಂಡಮ್.

(೫) ಮತ್ತು [ಎಲ್ಲಿ] ಈ ಮೂರು ಕಾಂಡಗಳ ತಿಳಿವಳಿಕೆಯಿಂದ, ಪೂರ್ಣತ್ವ, ಹಾಗೂ ಉಪಕಾರಗಳು ಗ್ರಹಿಸಲ್ಪಡುತ್ತವೋ, ಅದು 'ವಿಜ್ಞಾನಕಾಂಡ'ವಾಗಿರುತ್ತದೆ.

ವೇದಾನುಸಾರವಾದ ವ್ಯಾಖ್ಯಾನಗ್ರಂಥಗಳೇ ಗ್ರಾಹ್ಯ!

ಪರಂತ್ವೇತತ್ ಕಾಂಡಚತುಷ್ಟಯಸ್ಯ ವೇದಾನುಸಾರೇಣ ವಿಸ್ತರಸ್ತದ್ವ್ಯಾಖ್ಯಾನೇಷು ಗ್ರಂಥೇಷ್ವಸ್ತಿ.

(೬) ಆದರೆ, ಈ ನಾಲ್ಕು ಕಾಂಡಗಳ ವಿಸ್ತಾರವು ಅವುಗಳ ವೇದಾನುಸಾರವಾದ ವ್ಯಾಖ್ಯಾನಗ್ರಂಥಗಳಲ್ಲಿದೆ.

ಸ ಏವ ಸಮ್ಯಕ್ ಪರೀಕ್ಷ್ಯಾವಿರುದ್ಧೋಽರ್ಥೋ ಗ್ರಹೀತವ್ಯಃ .

ಅದೇ ಚೆನ್ನಾಗಿ ಪರೀಕ್ಷಿಸಲ್ಪಟ್ಟು, [ವೇದಕ್ಕೆ] ವಿರುದ್ಧವಲ್ಲದ ಅರ್ಥವು ಅಂಗೀಕರಿಸಲ್ಪಡಬೇಕು!

ಕುತಃ?

ಮೂಲಾಭಾವೇ ಶಾಖಾದೀನಾಮಪ್ರವೃತ್ತೇಃ.

ಏಕೆಂದರೆ_

ಮೂಲವಿಲ್ಲದಿದ್ದರೆ, ಶಾಖೆ ಮೊದಲಾದುವುಗಳ ಪ್ರವೃತ್ತಿಯು ಉಂಟಾಗುವುದಿಲ್ಲ!

ಸ್ವತಃಪ್ರಮಾಣ_ ವೇದಗಳಿಂದಲೇ ವೇದಾರ್ಥದ ಪ್ರಕಟಣೆ

(೭) ಅಂದರೆ, ಕೇವಲ ಮೂಲಮಂತ್ರಗಳ ಅರ್ಥಕ್ಕೆ ಅನುಕೂಲವಾಗಿಯೇ ಅನುಷ್ಠಾನವನ್ನು ಮಾಡಬೇಕು ಮತ್ತು ಪ್ರತಿಕೂಲವಾದುದರ ಪರಿತ್ಯಾಗವನ್ನು ಮಾಡಬೇಕು!

ಏಕೆಂದರೆ, ಯಾವ ಯಾವ ಮಂತ್ರಾರ್ಥಗಳು ವೇದೋಕ್ತವೋ,* ಅವೆಲ್ಲವೂ ಸ್ವತಃಪ್ರಮಾಣರೂಪವಾಗಿರುತ್ತವೆ ಮತ್ತು ಈಶ್ವರನಿಂದ ಹೇಳಲ್ಪಟ್ಟಿರುವಂತಹವೂ ಆಗಿರುತ್ತದೆ!

ಪರತಃಪ್ರಮಾಣ-ಗ್ರಂಥಗಳ ಗ್ರಾಹ್ಯತೆಗೆ ಷರತ್ತು

(೮) ಮತ್ತು ಯಾವ ಯಾವುವು ವೇದಗಳಿಂದ ಬೇರೆಯಾಗಿವೆಯೋ, ಅವು ಕೇವಲ ವೇದಾರ್ಥಕ್ಕೆ ಅನುಕೂಲವಾಗಿದ್ದರೇನೇ ಪ್ರಾಮಾಣಿಕವಾಗಿರುತ್ತವೆ; ಹಾಗಿಲ್ಲದಿದ್ದರೆ, ಇಲ್ಲ!

ವ್ಯಾಕರಣಾದಿ ವೇದಾಂಗಗ್ರಂಥಗಳಿಂದ ಸ್ವರಜ್ಞಾನ ಮತ್ತು ಉಚ್ಚಾರಣೆ

ಏವಮೇವ ವ್ಯಾಕರಣಾದಿಭಿರ್ವೇದಾಂಗೈರ್ವೈದಿಕ-ಶಬ್ದಾನಾಮುದಾತ್ತಾದಿಸ್ವರವಿಜ್ಞಾನಂ ಯಥಾರ್ಥಂ ಕರ್ತ್ತವ್ಯಮುಚ್ಚಾರಣಂ ಚ.

(೯) ಹೀಗೆಯೇ, ವ್ಯಾಕರಣವೇ ಮೊದಲಾದ ವೇದಾಂಗಗಳಿಂದ ವೈದಿಕಶಬ್ದಗಳ ಉದಾತ್ತಾದಿಸ್ವರಗಳ ಯಥಾರ್ಥವಾದ ವಿಜ್ಞಾನವನ್ನು ಕಲಿಯಬೇಕು; ಮತ್ತು ಉಚ್ಚಾರಣೆಯನ್ನೂ ಕೂಡ!

ಅಂದರೆ, ವ್ಯಾಕರಣಾದಿ ಶಾಸ್ತ್ರಗಳ ತಿಳಿವಳಿಕೆಯಿಂದ ಸ್ವರಗಳ ಜ್ಞಾನವನ್ನೂ, ಮತ್ತು ಉಚ್ಚಾರಣೆಯನ್ನೂ ಅವಶ್ಯವಾಗಿ ತಿಳಿಯಬೇಕು!

ಉದಾಹರಣೆಗಾಗಿ_

ಅಗ್ನಿಮೀಳೇ.**

ಇಲ್ಲಿ 'ಅ'ಕಾರದ ಕೆಳಗೆ ಅನುದಾತ್ತದ ಚಿಹ್ನೆ ಹಾಕಲಾಗಿದೆ.

'ಗ್ನಿ' ಉದಾತ್ತವಾದುದರಿಂದ, ಅದಕ್ಕೆ ಚಿಹ್ನೆ ಹಾಕಿಲ್ಲ.

'ಮೀ' ಮೇಲೆ ಸ್ವರಿತದ ಚಿಹ್ನೆ ಇದೆ.

'ಳೇ' ನಲ್ಲಿ 'ಪ್ರಚಯ', ಎಂದರೆ ಏಕಶ್ರುತಿ ಸ್ವರವಿದೆ!

ಈ ಮಾತನ್ನು ಧ್ಯಾನದಲ್ಲಿಟ್ಟುಕೊಳ್ಳಬೇಕು!

---

* ವೇದದಲ್ಲೇ ವೇದಾರ್ಥವು ಅಡಗಿರುತ್ತದೆ, ಎಂದರ್ಥ_ಅನು.

** ಋಗ್ವೇದ ೧. ೧. ೧ _ಅನು.

ತತ್ರ ಯಥಾರ್ಥಮುಕ್ತತ್ವಾದತ್ರ ನ ವರ್ಣ್ಯತೇ.

ಅಲ್ಲಿ ಯಥಾರ್ಥವಾಗಿ ಹೇಳಿರುವುದರಿಂದ, ಇಲ್ಲಿ ಅದು ವರ್ಣಿಸಲ್ಪಡುವುದಿಲ್ಲ!

ಪಿಂಗಲಸೂತ್ರಗಳಿಂದ ಛಂದಸ್ಸುಗಳ ಜ್ಞಾನ

ಏವಂ ಪಿಂಗಲಸೂತ್ರಚ್ಛಂದೋಗ್ರಂಥೇ ಯಥಾಲಿಖಿತಂ ಛಂದೋಲಕ್ಷಣಂ ವಿಜ್ಞಾತವ್ಯಮ್.

(೧೦) ಹೀಗೆ, ಪಿಂಗಲನ ಸೂತ್ರರೂಪವಾದ ಛಂದೋಗ್ರಂಥದಲ್ಲಿ ಛಂದಸ್ಸುಗಳ ಲಕ್ಷಣವು ಹೇಗೆ ಬರೆಯಲ್ಪಟ್ಟಿದೆಯೋ, ಹಾಗೆ ತಿಳಿಯಬೇಕು!

ಅಂದರೆ, ಪಿಂಗಲಸೂತ್ರಗಳಿಂದ ಛಂದಸ್ಸುಗಳ ಮತ್ತು ಷಡ್ಜಾದಿ ಸ್ವರಗಳ ಜ್ಞಾನವನ್ನು ಅವಶ್ಯವಾಗಿ ತಿಳಿಯಬೇಕು!

ಪಿಂಗಲಶಾಸ್ತ್ರದಿಂದ ವೈದಿಕಛಂದಸ್ಸುಗಳ ಸಂಗೀತಸ್ವರಜ್ಞಾನ

"ಸ್ವರಾಃ ಷಡ್ಜ-ಋಷಭ-ಗಾಂಧಾರ-ಮಧ್ಯಮ-ಪಂಚಮ-ಧೈವತ-ನಿಷಾದಾಃ ॥"

[ಪಿಂಗಲಶಾಸ್ತ್ರೇ ಅ. ೩, ಸೂತ್ರ ೬೪]

[ಅರ್ಥ:_ "ಸ್ವರಗಳು_ ಷಡ್ಜ, ಋಷಭ, ಗಾಂಧಾರ, ಮಧ್ಯಮ, ಪಂಚಮ, ಧೈವತ ಮತ್ತು ನಿಷಾದ ಆಗಿವೆ."

(ಪಿಂಗಲಸೂತ್ರ: ೩. ೬೪)]

ಇತಿ ಪಿಂಗಲಾಚಾರ್ಯ್ಯಕೃತಸೂತ್ರಾನುಸಾರೇಣ ಪ್ರತಿಚ್ಛಂದಃ ಸ್ವರಾಃ ಲೇಖಿಷ್ಯಂತೇ.

(೧೧) ಎಂಬ ಪಿಂಗಲಾಚಾರ್ಯರಚಿತ ಸೂತ್ರಕ್ಕನುಸಾರವಾಗಿ, ಪ್ರತಿ ಛಂದಸ್ಸಿಗೂ ಸ್ವರಗಳು ಬರೆಯಲ್ಪಡುವುವು.*

ಕುತಃ?

ಏಕೆಂದರೆ_

ಇದಾನೀಂ ಯಚ್ಛಂದೋನ್ವಿತೋ ಯೋ ಮಂತ್ರಸ್ತಸ್ಯ ಸ್ವಸ್ವರೇಣೈವ ವಾದಿತ್ರವಾದನ-ಪೂರ್ವಕಗಾನವ್ಯವಹಾರಾಪ್ರಸಿದ್ಧೇಃ.

ಈ ಸಮಯದಲ್ಲಿ, ಛಂದಸ್ಸಿನಿಂದ ಕೂಡಿರುವ ಯಾವ ಮಂತ್ರವಿದೆಯೋ, ಅದರ, ತನ್ನ ಸ್ವರದಿಂದಲೇ ವಾದ್ಯವಾದನಪೂರ್ವಕವಾಗಿ ಗಾಯನ ಮಾಡುವ ವ್ಯವಹಾರವು ಪ್ರಸಿದ್ಧವಾಗಿಲ್ಲ!

---

* ಈ ವಿಶೇಷತೆಯು ದಯಾನಂದಭಾಷ್ಯದಲ್ಲಿ ಮಾತ್ರ ಕಂಡುಬರುತ್ತದೆ _ಅನು.

ವ್ಯಾಕರಣದ ಕಠಿಣವಿಷಯಗಳ ಉಲ್ಲೇಖ

(೧೨) ಈ ರೀತಿಯಾಗಿ, ವ್ಯಾಕರಣ ಮೊದಲಾದುವುಗಳ ಯಾವ ಯಾವ ವಿಷಯಗಳು ಬರೆಯುವುದಕ್ಕೆ ಯೋಗ್ಯವಾಗಿರುತ್ತವೋ, ಅವೆಲ್ಲವೂ ಸಂಕ್ಷೇಪವಾಗಿ ಬರೆಯಲ್ಪಡುವುವು. ಏಕೆಂದರೆ, ಅವುಗಳನ್ನು ತಿಳಿಯುವುದರಲ್ಲಿ ಮನುಷ್ಯನಿಗೆ ಕಠಿನತೆ ಇರುತ್ತದೆ. ಆದುದರಿಂದ_

ಇತರ ಪ್ರಾಮಾಣಿಕ ಗ್ರಂಥಗಳ ವಿಷಯೋಲ್ಲೇಖ

(೧೩) ಅವುಗಳ ಜೊತೆಗೆ ಇತರ ಪ್ರಾಮಾಣಿಕ ಗ್ರಂಥಗಳ ವಿಷಯಗಳೂ ಬರೆಯಲ್ಪಡುವುವು.

ಇದರಿಂದ, ಅವುಗಳ ಸಹಾಯದಿಂದ ವೇದಗಳ ಅರ್ಥವು ಚೆನ್ನಾಗಿ ತಿಳಿಯಲು ಸಾಧ್ಯವಾಗುವುದು.

ಉಪವೇದವಾದ ಆಯುರ್ವೇದ ಮೊದಲಾದುವುಗಳ ಜ್ಞಾನ

ಏವಮೇವ ವೇದಾನಾಮುಪವೇದೈರಾಯುರ್ವೇದಾದಿಭಿರ್ವೈದ್ಯಕವಿದ್ಯಾದಯೋ ವಿಶೇಷಾ ವಿಜ್ಞೇಯಾಃ .

(೧೪) ಹೀಗೆಯೇ, ವೇದಗಳ ಉಪವೇದಗಳಾದ ಆಯುರ್ವೇದ ಮೊದಲಾದುವುಗಳಿಂದ ವೈದ್ಯಕವಿದ್ಯೆ ಮೊದಲಾದುವನ್ನು ವಿಶೇಷವಾಗಿ ತಿಳಿಯಬೇಕು!

ವಿಶೇಷಾರ್ಥಗಳ ಪ್ರಕಟಣೆ

ತತ್ಥೈತೇ ಸರ್ವೇ ವಿಶೇಷಾರ್ಥಾ ಅಪಿ ವೇದಮಂತ್ರಾರ್ಥಭಾಷ್ಯೇ ಪ್ರಕಾಶಯಿಷ್ಯಂತೇ.

(೧೫) ಮತ್ತು ಈ ವಿಶೇಷವಾದ ಅರ್ಥಗಳೆಲ್ಲವೂ ಕೂಡ, ವೇದಮಂತ್ರಗಳ ಅರ್ಥದ ಭಾಷ್ಯದಲ್ಲಿ ಪ್ರಕಟಿಸಲ್ಪಡುವುವು.

ಯುಕ್ತಿಪೂರ್ವಕ ವೇದಾರ್ಥದಿಂದ ಸಂದೇಹನಿವೃತ್ತಿ

ಏವಂ ವೇದಾರ್ಥಪ್ರಕಾಶೇನ ವಿಜ್ಞಾನೇನ ಸಯುಕ್ತಿದೃಢೇನ ಜಾತೇನೈವ ಸರ್ವಮನುಷ್ಯಾಣಾಂ ಸಕಲಸಂದೇಹನಿವೃತ್ತಿರ್ಭವಿಷ್ಯತಿ.

(೧೬) ಹೀಗೆ, ಯುಕ್ತಿಸಹಿತವಾಗಿ ವೇದಾರ್ಥ ಪ್ರಕಾಶದ ವಿಜ್ಞಾನವು ಉಂಟಾಗುವುದರಿಂದಲೇ ಮನುಷ್ಯರೆಲ್ಲರ ಸಮಸ್ತ ಸಂದೇಹಗಳ ನಿವೃತ್ತಿ ಯಾಗುವುದು!

ಸಂಸ್ಕೃತ ಮತ್ತು ಹಿಂದೀ ಭಾಷೆಗಳಲ್ಲಿ ಪದಶಃ ಅರ್ಥ

ಅತ್ರ ವೇದಮಂತ್ರಾಣಾಂ ಸಂಸ್ಕೃತಪ್ರಾಕೃತಭಾಷಾಭ್ಯಾಂ ಸಪ್ರಮಾಣಃ ಪದಶೋಽರ್ಥೋ ಲೇಖಿಷ್ಯತೇ.

(೧೭) ಇದರಲ್ಲಿ ಸಂಸ್ಕೃತ, ಹಾಗೂ ಪ್ರಾಕೃತ* ಭಾಷೆಗಳ ಮೂಲಕ, ವೇದಮಂತ್ರಗಳ ಪದಶಃ ಅರ್ಥವು ಪ್ರಮಾಣಸಹಿತವಾಗಿ ಬರೆಯಲ್ಪಡುವುದು.

ಅಂದರೆ, ಈ ಭಾಷ್ಯದಲ್ಲಿ ಪದ-ಪದದ ಅರ್ಥವು ಬೇರೆ ಬೇರೆಯಾಗಿ ಬರೆಯಲ್ಪಡುವುದು!

* ಎಂದರೆ, ಹಿಂದೀ ಭಾಷೆ _ಅನು.

ಆವಶ್ಯಕವಾದೆಡೆ ವ್ಯಾಕರಣ ಮೊದಲಾದುವುಗಳ ಪ್ರಮಾಣಗಳು

ಯತ್ರ ಯತ್ರ ವ್ಯಾಕರಣಾದಿಪ್ರಮಾಣಾವಶ್ಯಕತ್ವಮಸ್ತಿ, ತತ್ತದಪಿ ತತ್ರ ತತ್ರ ಲೇಖಿಷ್ಯತೇ.

(೧೮) ಎಲ್ಲೆಲ್ಲಿ ವ್ಯಾಕರಣವೇ ಮೊದಲಾದ ಪ್ರಮಾಣಗಳ ಆವಶ್ಯಕತೆಯಿದೆಯೋ, ಅದದೂ ಕೂಡ, ಅಲ್ಲಲ್ಲಿ ಬರೆಯಲ್ಪಡುವುದು.

ವೇದಾರ್ಥಕ್ಕೆ ವಿರುದ್ಧವಾದ ಆಧುನಿಕವ್ಯಾಖ್ಯಾನಗಳ ನಿರಾಕರಣೆ

ಯೇನೇದಾನೀಂತನಾನಾಂ ವೇದಾರ್ಥವಿರುದ್ಧಾನಾಂ ಸನಾತನವ್ಯಾಖ್ಯಾನಗ್ರಂಥಪ್ರತಿಕೂಲಾನಾಮನರ್ಥಕಾನಾಂ ವೇದವ್ಯಾಖ್ಯಾನಾನಾಂ ನಿವೃತ್ತಿಃ

(೧೯) ಇದರಿಂದ, ಆಧುನಿಕವೂ, ವೇದಾರ್ಥಕ್ಕೆ ವಿರುದ್ಧವಾದುವೂ, ಸನಾತನವ್ಯಾಖ್ಯಾನಗ್ರಂಥಗಳಿಗೆ ಪ್ರತಿಕೂಲವೂ, ಅನರ್ಥವೂ ಆದ ವೇದವ್ಯಾಖ್ಯಾನಗಳ ನಿವಾರಣೆಯಾಗುವುದರಿಂದ ;

ಅಂದರೆ, ನವೀನ ಟೀಕಾಕಾರರ ಲೇಖನಗಳಿಂದ ವೇದಗಳಲ್ಲಿ ಯಾವ ದೋಷಗಳ ಕಲ್ಪನೆಗಳು ಮಾಡಲಾಗಿವೆಯೋ, ಅವುಗಳೆಲ್ಲದರ ನಿವೃತ್ತಿಯು ಇದರಿಂದಾಗಿ, ಅವುಗಳ* ಸತ್ಯ ಅರ್ಥಗಳ ಪ್ರಕಾಶವಾಗುವುದು!

ಸತ್ಯಾರ್ಥದರ್ಶನದಿಂದ ವೇದಗಳಲ್ಲಿ ಪ್ರೀತಿ!

ಸರ್ವೇಷಾಂ ಮನುಷ್ಯಾಣಾಂ ವೇದಾನಾಂ ಸತ್ಯಾರ್ಥದರ್ಶನೇನ ತೇಷ್ವತ್ಯಂತಾ ಪ್ರೀತಿರ್ಭವಿಷ್ಯತೀತಿ ಬೋಧ್ಯಮ್.

(೨೦) ವೇದಗಳ ಸತ್ಯವಾದ ಅರ್ಥವು ಪ್ರಕಟವಾಗುವುದರಿಂದ, ಮನುಷ್ಯರೆಲ್ಲರಿಗೂ ಅವುಗಳಲ್ಲಿ** ಅತ್ಯಂತ ಪ್ರೀತಿ ಉಂಟಾಗುವುದು, ಎಂದು ತಿಳಿಯಬೇಕು!

ಸಾಯಣ ಮೊದಲಾದವರಿಂದ ವೇದಭಾಷ್ಯದಲ್ಲಿ ಅನರ್ಥ!

ಸಂಹಿತಾಮಂತ್ರಾಣಾಂ ಯಥಾಶಾಸ್ತ್ರಂ ಯಥಾಬುದ್ಧಿ ಚ ಸತ್ಯಾರ್ಥಪ್ರಕಾಶೇನ;

(೨೧) [ಇಲ್ಲಿ] ಶಾಸ್ತ್ರಗಳಿಗನುಸಾರವಾಗಿಯೂ, ಹಾಗೂ ಬುದ್ಧಿಗನುಸಾರವಾಗಿಯೂ, ವೇದಮಂತ್ರಗಳ ಸತ್ಯಾರ್ಥವು ಪ್ರಕಟವಾಗುವುದರಿಂದ ;

---

* ಎಂದರೆ, ವೇದಗಳ _ಅನು.

** ಎಂದರೆ, ವೇದಗಳಲ್ಲಿ _ಅನು.

ಯತ್ ಸಾಯಣಾಚಾರ್ಯಾದಿಭಿಃ ಸ್ವೇಚ್ಛಾನುಚಾರತೋ ಲೋಕಪ್ರವೃತ್ತ್ಯನುಕೂಲತಶ್ಚ ಲೋಕೇ ಪ್ರತಿಷ್ಠಾರ್ಥಂ ಭಾಷ್ಯಂ ಲಿಖಿತ್ವಾ ಪ್ರಸಿದ್ಧೀಕೃತಂ, ಅನೇನಾತ್ರಾನರ್ಥೋ ಮಹಾನ್ ಜಾತಃ.

ಸಾಯಣಾಚಾರ್ಯ ಮೊದಲಾದವರಿಂದ, ಸ್ವೇಚ್ಛಾಚಾರದಿಂದಲೂ, ಲೋಕಪ್ರವೃತ್ತಿಗೆ ಅನುಕೂಲವಾಗಿಯೂ ಮತ್ತು ಜಗತ್ತಿನಲ್ಲಿ ಪ್ರತಿಷ್ಠೆಯನ್ನು ಪಡೆಯುವುದಕ್ಕಾಗಿಯೂ, ಯಾವ ಭಾಷ್ಯವು ಬರೆಯಲ್ಪಟ್ಟು ಪ್ರಸಿದ್ಧಿಸಲ್ಪಟ್ಟಿದೆಯೋ, ಅದರಿಂದ, ಈ ವಿಷಯದಲ್ಲಿ ಮಹಾನ್ ಅನರ್ಥ ಉಂಟಾಯಿತು, ಎಂದು [ತಿಳಿಯಬಹುದು.]

ಸಾಯಣರಿಂದ ಐರೋಪ್ಯರಿಗೆ ವೇದಗಳ ಬಗ್ಗೆ ಭ್ರಾಂತಿ!

ತದ್ದ್ವಾರಾ ಯೂರೋಪಖಂಡವಾಸಿನಾಮಪಿ ವೇದೇಷು ಭ್ರಮೋ ಜಾತ ಇತಿ.

(೨೨) ಮತ್ತು ಅದರ ಮೂಲಕ ಯೂರೋಪ್ ಖಂಡದ ನಿವಾಸಿಗಳಿಗೂ ಕೂಡ, ವೇದಗಳ ಬಗ್ಗೆ ಭ್ರಮೆ ಉಂಟಾಯಿತು!

ಅಂದರೆ, ಯಾವುವು ಸಾಯಣ, ಮಾಧವ, ಮಹೀಧರರ [ಭಾಷ್ಯಗಳೋ]; ಮತ್ತು ಆಂಗ್ಲಭಾಷೆಯಲ್ಲಿ ಅಥವಾ ಇತರ ಭಾಷೆಗಳಲ್ಲಿ ಅನುವಾದ ಮಾಡಲ್ಪಟ್ಟು, ಅಥವಾ ಭಾಷ್ಯ ಮಾಡಲ್ಪಟ್ಟಿವೆಯೋ, ಅಥವಾ ಮಾಡಲಾಗುತ್ತಿವೆಯೋ; ಮತ್ತು ಯಾವ ಯಾವುವು ದೇಶದೊಳಗಿನ ಭಾಷೆಗಳಲ್ಲಿ ಟೀಕಾರೂಪವಾಗಿವೆಯೋ, ಆ ಅನರ್ಥ ವ್ಯಾಖ್ಯಾನಗಳ ನಿವಾರಣೆಯಾಗಿ_

ಋಷಿ-ಮುನಿರಚಿತ ಟೀಕಾನುಸಾರವಾದ ನನ್ನ ವೇದಭಾಷ್ಯದಿಂದ ಸುಖಲಾಭ

ಯದಾಽಸ್ಮಿನ್ನೀಶ್ವರಾನುಗ್ರಹೇಣರ್ಷಿಮುನಿ-ಮಹರ್ಷಿ-ಮಹಾಮುನಿಭಿರಾರ್ಯೈರ್ವೇದಾರ್ಥ-ಗರ್ಭಿತೇಷ್ವೈತರೇಯ-[ಶತಪಥ]ಬ್ರಾಹ್ಮಣಾದಿಷೂಕ್ತ-ಪ್ರಮಾಣಾನ್ವಿತೇ ಮಯಾ ಕೃತೇ ಭಾಷ್ಯೇ ಪ್ರಸಿದ್ಧೇ ಜಾತೇ ಸತಿ;

(೨೩) ಯಾವಾಗ ಈಶ್ವರನ ಅನುಗ್ರಹದಿಂದ, ಋಷಿ, ಮುನಿ, ಮಹರ್ಷಿ, ಮಹಾಮುನಿಗಳಾದ ಆರ್ಯರಿಂದ, ವೇದಾರ್ಥದಿಂದ ತುಂಬಿದ ಐತರೇಯ, [ಶತಪಥ]ಬ್ರಾಹ್ಮಣ ಮೊದಲಾದುವುಗಳಲ್ಲಿ ಹೇಳಿದ ಪ್ರಮಾಣಗಳಿಂದ ಕೂಡಿದ, ಈ ಭಾಷ್ಯವು ನನ್ನಿಂದ ರಚಿಸಲ್ಪಟ್ಟು ಪ್ರಸಿದ್ಧವಾದಲ್ಲಿ;

ಸರ್ವಮನುಷ್ಯಾಣಾಂ ಮಹಾನ್ ಸುಖಲಾಭೋ ಭವಿಷ್ಯತೀತಿ ವಿಜ್ಞಾಯತೇ.

ಮನುಷ್ಯರೆಲ್ಲರಿಗೂ ಮಹಾನ್ ಸುಖಲಾಭ ಉಂಟಾಗುವುದು, ಎಂದು ತಿಳಿಯಬೇಕು!

ಅಂದರೆ, ವೇದಗಳ ಸತ್ಯ ಅರ್ಥಗಳನ್ನು ನೋಡುವುದರಿಂದ, ಮನುಷ್ಯರಿಗೆ ಅತ್ಯಂತ ಸುಖಲಾಭವು ದೊರಕುವುದು!

ಏಕೆಂದರೆ_

ಸತ್ಯಾರ್ಥದ ಪ್ರಕಾಶದಿಂದಲೇ ಭ್ರಮನಿವೃತ್ತಿ

(೨೪) ಸತ್ಯವಾದ ಅರ್ಥದ ಪ್ರಕಾಶವನ್ನು ನೋಡದದೆಯೇ, ಮನುಷ್ಯರ ಭ್ರಮನಿವೃತ್ತಿಯು ಎಂದಿಗೂ ಆಗಲಾರದು!

ಹೇಗೆ, '(೨೫) [ಗ್ರಂಥ]-ಪ್ರಾಮಾಣ್ಯಾಪ್ರಾಮಾಣ್ಯವಿಷಯದ ಅಧ್ಯಾಯದಲ್ಲಿನ ಸತ್ಯ ಮತ್ತು ಅಸತ್ಯ ಕಥೆಗಳನ್ನು ನೋಡುವುದರಿಂದ, ಭ್ರಮೆಯ ನಿವೃತ್ತಿಯು ಸಾಧ್ಯವಾಗುವುದೋ, ಹಾಗೆಯೇ, ಇಲ್ಲೂ ಕೂಡ, ಎಂದು ತಿಳಿದುಕೊಳ್ಳಬೇಕು!

ಪಾರಮಾರ್ಥಿಕ, ಹಾಗೂ ವ್ಯಾವಹಾರಿಕ_ ಎರಡೂ ಅರ್ಥಗಳು; ಅಲಂಕಾರಗಳೊಡನೆ!

ಅಥಾತ್ರ ಯಸ್ಯ ಯಸ್ಯ ಮಂತ್ರಸ್ಯ ಪಾರಮಾರ್ಥಿಕವ್ಯಾವಹಾರಿಕಯೋರ್ದ್ವಯೋರರ್ಥಯೋಃ ಶ್ಲೇಷಾಲಂಕಾರಾದಿನಾ ಸಪ್ರಮಾಣಃ ಸಂಭವೋಽಸ್ತಿ;

(೨೫) ಮತ್ತು ಇಲ್ಲಿ ಯಾವ ಯಾವ ಮಂತ್ರಕ್ಕೆ **ಪಾರಮಾರ್ಥಿಕ,** ಹಾಗೂ **ವ್ಯಾವಹಾರಿಕ,** ಎಂಬ ಎರಡೂ ಅರ್ಥಗಳ ಸಂಭವವು ಪ್ರಮಾಣಸಹಿತವಾಗಿ **ಶ್ಲೇಷಾಲಂಕಾರ** ಮೊದಲಾದುದರಿಂದ ಆಗುತ್ತದೋ ;

ತಸ್ಯ ತಸ್ಯ ದ್ವೌ ದ್ವಾವರ್ಥೌ ವಿಧಾಸ್ಯೇತೇ.

ಅದರದರ ಎರಡೆರಡು ಅರ್ಥಗಳು ಮಾಡಲ್ಪಡುತ್ತವೆ!

ಯಾವ ಮಂತ್ರಾರ್ಥದಲ್ಲೂ ಈಶ್ವರನ ಅತ್ಯಂತತ್ಯಾಗವಿಲ್ಲ!

ಪರಂತು ನೈವೇಶ್ವರಸ್ಯೈಕಸ್ಮಿನ್ನಪಿ ಮಂತ್ರಾರ್ಥೇಽತ್ಯಂತತ್ಯಾಗೋ ಭವತಿ.

(೨೬) ಆದರೆ, ಒಂದು ಮಂತ್ರದ ಅರ್ಥದಲ್ಲಿಯೂ ಕೂಡ, ಈಶ್ವರನ ಅತ್ಯಂತತ್ಯಾಗವಿರುವುದಿಲ್ಲ! *

ಕುತಃ?

ಏಕೆಂದರೆ_

ನಿಮಿತ್ತಕಾರಣಸ್ಯೇಶ್ವರಸ್ಯಾಸ್ಮಿನ್ ಕಾರ್ಯ್ಯೇ ಜಗತಿ ಸರ್ವಾಂಗವ್ಯಾಪಿಮತ್ತ್ವಾತ್, ಕಾರ್ಯ್ಯಸ್ಯೇಶ್ವರೇಣ ಸಹಾನ್ವಯಾಚ್ಚ.

ನಿಮಿತ್ತಕಾರಣನಾದ ಈಶ್ವರನು ಈ ಕಾರ್ಯರೂಪ ಜಗತ್ತಿನಲ್ಲಿ ಸರ್ವಾಂಗರೂಪದಲ್ಲಿ ವ್ಯಾಪಕನಾಗಿದ್ದಾನೆ ಮತ್ತು ಈಶ್ವರನೊಡನೆ ಕಾರ್ಯ [ರೂಪಜಗತ್ತಿ]ನ ಸಂಬಂಧವಿದೆ!

* ಈ ಪ್ರತಿಜ್ಞೆಯನ್ನು ಪಾಠಕರು ಈ ಗ್ರಂಥದಲ್ಲೂ ಕೂಡ, **(೨೨) ರಾಜ-ಪ್ರಜಾಧರ್ಮವಿಷಯ, (೨೮) ಭಾಷ್ಯಕರಣ-ಶಂಕಾಸಮಾಧಾನಾದಿವಿಷಯ** ಮೊದಲಾದ ಅಧ್ಯಾಯಗಳಲ್ಲಿ ಸರ್ವತ್ರ ನೋಡಬಹುದು **_ಅನು.**

ಯತ್ರ ಖಲು ವ್ಯಾವಹಾರಿಕೋऽರ್ಥೋ ಭವತಿ, ತತ್ರಾಪೀಶ್ವರರಚನಾನುಕೂಲತಯೈವ ಸರ್ವೇಷಾಂ ಪೃಥಿವ್ಯಾದಿದ್ರವ್ಯಾಣಾಂ ಸದ್ಭಾವಾಚ್ಚ.

ಏವಮೇವ ಪಾರಮಾರ್ಥಿಕೇऽರ್ಥೇ ಕೃತೇ ತಸ್ಮಿನ್ ಕಾರ್ಯ್ಯಾರ್ಥಸಂಬಂಧಾತ್ ಸೋऽಪ್ಯರ್ಥ ಆಗಚ್ಛತೀತಿ.

ಇತಿ ಪ್ರತಿಜ್ಞಾವಿಷಯಃ ಸಂಕ್ಷೇಪತಃ ॥

ಮತ್ತು ಎಲ್ಲಿ **ವ್ಯಾವಹಾರಿಕ ಅರ್ಥ** ಉಂಟಾಗುತ್ತದೋ, ಅಲ್ಲೂ ಕೂಡ, ಈಶ್ವರನ ರಚನೆಗೆ ಅನುಕೂಲವಾಗಿಯೇ, ಪೃಥಿವೀ ಮೊದಲಾದ ಸಮಸ್ತ ಪದಾರ್ಥಗಳ ವಿದ್ಯಮಾನತೆ ಇರುತ್ತದೆ!

ಹೀಗೆಯೇ, **ಪಾರಮಾರ್ಥಿಕ ಅರ್ಥ**ವನ್ನು ಮಾಡಿದಾಗ, ಅದರಲ್ಲಿ ಕಾರ್ಯದ ಅರ್ಥದ ಸಂಬಂಧ ವಿರುವುದರಿಂದ, ಆ ಅರ್ಥವೂ [ಕೂಡ,] ಬಂದು ಬಿಡುತ್ತದೆ!

ಈ ಮೊದಲಾದ ಪ್ರಯೋಜನಗಳಿಗಾಗಿ, ಈ ವೇದಭಾಷ್ಯವನ್ನು ರಚಿಸುವ ಆರಂಭವನ್ನು ಮಾಡಿದ್ದೇನೆ.

ಇಲ್ಲಿಗೆ ಪ್ರತಿಜ್ಞೆಯ ವಿಷಯವು ಸಂಕ್ಷೇಪವಾಗಿ ಮುಗಿಯಿತು. [೨೯]

(೩೦) ಪ್ರಶ್ನೋತ್ತರ

ಅಥ ಪ್ರಶ್ನೋತ್ತರವಿಷಯಃ ಸಂಕ್ಷೇಪತಃ

ಈಗ, ಪ್ರಶ್ನೋತ್ತರಗಳ ವಿಷಯವು ಸಂಕ್ಷೇಪವಾಗಿ ಬರೆಯಲ್ಪಡುವುದು.

(೧) ವೇದಗಳ ನಾಲ್ಕು ವಿಭಾಗ ಏಕೆ?

ಪ್ರಶ್ನಃ_ ಅಥ ಕಿಮರ್ಥಾ ವೇದಾನಾಂ ಚತ್ವಾರೋ ವಿಭಾಗಾಃ ಸಂತಿ?

ಪ್ರಶ್ನೆ_ ಈಗ ಯಾವ ಪ್ರಯೋಜನಕ್ಕಾಗಿ ವೇದಗಳ ನಾಲ್ಕು ವಿಭಾಗಗಳಿವೆ?

ಉತ್ತರಮ್_ ಭಿನ್ನಭಿನ್ನವಿದ್ಯಾಜ್ಞಾಪನಾಯ.

ಉತ್ತರ_ ಭಿನ್ನ ಭಿನ್ನ ವಿದ್ಯೆಗಳನ್ನು ತಿಳಿಸುವುದಕ್ಕಾಗಿ!

(೨) ಭಿನ್ನ ಭಿನ್ನ ವಿದ್ಯೆಗಳಾವುವು?

ಪ್ರಶ್ನಃ_ ಕಾಸ್ತಾಃ?

ಪ್ರಶ್ನೆ_ ಅವು ಯಾವುವು?

ಗಾನವಿದ್ಯೆಯ ಉಚ್ಚಾರಣೆಯ ಮೂರು ಭೇದ

ಉತ್ತರಮ್_ [ಯಥಾ_]

ತ್ರಿಧಾ ಗಾನವಿದ್ಯಾ ಭವತಿ, ಗಾನೋಚ್ಚಾರಣ-ವಿದ್ಯಾಯಾ ದ್ರುತಮಧ್ಯಮವಿಲಂಬಿತಭೇದಯುಕ್ತತ್ವಾತ್.

ಉತ್ತರ_ ಉದಾಹರಣೆಗಾಗಿ_

ಗಾನದ ಉಚ್ಚಾರಣೆಯ ವಿದ್ಯೆಯ ಸಂಬಂಧದಲ್ಲಿ **ದ್ರುತ, ಮಧ್ಯಮ** ಮತ್ತು ವಿಲಂಬಿತ, ಎಂಬ ಭೇದದೊಡನೆ ಕೂಡಿರುವಂತೆ, ಗಾನವಿದ್ಯೆಯು ಮೂರು ವಿಧದವಾಗಿರುತ್ತದೆ.

ನಾಲ್ಕು ವೇದಗಳ ನಾಲ್ಕು ತರಹದ ಸ್ವರಪಾಠ

ಅಂದರೆ_

ಯಾವ ಮೂರು ಪ್ರಕಾರದ ಗಾನವಿದ್ಯೆ ಇದೆಯೋ, ಅದರಲ್ಲಿ ಮೊದಲನೆಯದು ಯಾವುದೆಂದರೆ_

(೧) [**ದ್ರುತ**_] ಉದಾತ್ತ ಮತ್ತು ಷಡ್ಜಾದಿ ಸ್ವರಗಳ ಉಚ್ಚಾರಣೆಯನ್ನು, ಹೇಗೆ, **ಋಗ್ವೇದದ** ಸ್ವರಗಳ ಉಚ್ಚಾರಣೆಯು **ದ್ರುತ**, ಎಂದರೆ ಶೀಘ್ರವೃತ್ತಿಯಿಂದ ಆಗುತ್ತದೋ, ಹಾಗೆ ಶೀಘ್ರತೆಯಿಂದ ಮಾಡುವುದು!

(೨) ಎರಡನೆಯದು, **ಮಧ್ಯಮವೃತ್ತಿ**_

ಉದಾಹರಣೆಗಾಗಿ_ **ಯಜುರ್ವೇದದ** ಸ್ವರಗಳ ಉಚ್ಚಾರಣೆಯು ಋಗ್ವೇದದ ಮಂತ್ರಗಳ [ಉಚ್ಚಾರಣೆ]ಗಿಂತ **ಎರಡರಷ್ಟು** ಸಮಯದಲ್ಲಾಗುತ್ತದೆ!

(೩) ಮೂರನೆಯದು, **ವಿಲಂಬಿತವೃತ್ತಿ**ಯಾಗಿರುತ್ತದೆ.

ಇದರಲ್ಲಿ ಪ್ರಥಮವೃತ್ತಿಗಿಂತ **ಮೂರರಷ್ಟು** ಸಮಯ ಹಿಡಿಯುತ್ತದೆ.

ಉದಾಹರಣೆಗಾಗಿ_ **ಸಾಮವೇದದ** ಸ್ವರಗಳ ಉಚ್ಚಾರಣೆಯಲ್ಲಿ ಅಥವಾ ಗಾನದಲ್ಲಿ [ಆಗುವಂತೆ!]

(೪) ಮತ್ತೆ, ಈ **ಮೂರೂ ವೃತ್ತಿ**ಗಳನ್ನು ಸೇರಿಸುವುದರಿಂದ, **ಅಥರ್ವವೇದದ** ಉಚ್ಚಾರಣೆಯೂ ಕೂಡ, ಆಗುತ್ತದೆ. ಆದರೆ, ಇದರ ಉಚ್ಚಾರಣೆಯು **ದ್ರುತ**ಗತಿಯಲ್ಲಿ [ಈಗ] ಹೆಚ್ಚಾಗಿ ಆಗುತ್ತಿದೆ;*

[ಅನ್ಯಚ್ಚ, ಸ್ವರೋಚ್ಚಾರಣೇ ಯಥಾ_]

[ಮತ್ತೇನೆಂದರೆ, ಸ್ವರದ ಉಚ್ಚಾರಣೆಯಲ್ಲಿ ಹೇಗೆ_]

ಯಾವತಾ ಕಾಲೇನ ಹ್ರಸ್ವಸ್ವರೋಚ್ಚಾರಣಂ ಕ್ರಿಯತೇ, ತತೋ ದೀರ್ಘೋಚ್ಚಾರಣೇ ದ್ವಿಗುಣಃ, ಪ್ಲುತೋಚ್ಚಾರಣೇ ತ್ರಿಗುಣಶ್ಚ ಕಾಲೋ ಗಚ್ಛತೀತಿ ;

ಎಷ್ಟು ಸಮಯದಲ್ಲಿ **ಹ್ರಸ್ವ**ಸ್ವರದ ಉಚ್ಚಾರಣೆಯು ಮಾಡಲಾಗುತ್ತದೋ, ಅದಕ್ಕಿಂತ ಎರಡರಷ್ಟು [ಸಮಯವು] **ದೀರ್ಘ**[ಸ್ವರ]ದ ಉಚ್ಚಾರಣೆಯಲ್ಲಿಯೂ, ಮತ್ತು **ಪ್ಲುತ**[ಸ್ವರ]ದ ಉಚ್ಚಾರಣೆಯಲ್ಲಿ ಮೂರರಷ್ಟು ಸಮಯವೂ ತಗುಲುತ್ತದೋ ;

[ತಥಾ_]

[ಹಾಗೆಯೇ_]

" ಋಗ್ಭಿಃಸ್ತುವಂತಿ ಯಜುರ್ಭಿರ್ಯಜಂತಿ ಸಾಮಭಿರ್ಗಾಯಂತಿ ॥" **

[ಅರ್ಥ:_ " **ಋಚೆಗಳಿಂದ ಸ್ತುತಿಸುತ್ತಾರೆ. ಯಜುಃಗಳಿಂದ ಯಜನ ಮಾಡುತ್ತಾರೆ ಮತ್ತು ಸಾಮಗಳಿಂದ ಗಾನ ಮಾಡುತ್ತಾರೆ.**"

(ತುಲನೆ ಮಾಡಿ, ನಿರುಕ್ತ : ೧೩. ೭)]

** ನಿರುಕ್ತೇನ (೧೩. ೭) ತುಲನೀಯಮ್ _ಅನು.

* ಸಂಪ್ರತಿ ಋಗ್ವೇದಪಾಠಿಗಳೇ ಅಥರ್ವವೇದದ ಸಸ್ವರಪಾಠ ಮಾಡುತ್ತಾರೆಯಾದುದರಿಂದ, ಈ ಸ್ಥಿತಿ ಇದೆ. ಅಥರ್ವವೇದಪಾಠಿಗಳ ಪರಂಪರೆಯು ಲುಪ್ತಪ್ರಾಯವಾದುದರಿಂದ, ಅಥರ್ವವೇದದಲ್ಲಿ ನೂರಾರು ಪಾಠಾಂತರಗಳಾಗಿ ಹೋಗಿವೆ! ಇದರ ಪರಂಪರೆಯು ಲುಪ್ತಪ್ರಾಯವಾಗುವುದಕ್ಕೆ ಕಾರಣವೇನೆಂದರೆ, ಅಥರ್ವವೇದದ ವೇದತ್ವವನ್ನು ಸ್ಪಷ್ಟವಾಗಿ ಸಮರ್ಥಿಸಲಾಗದೇ, **'ತ್ರಯೀವಿದ್ಯಾ'**, **'ತ್ರಯೋ ವೇದಾಃ'**, ಮೊದಲಾದಂತಹ ಅನೇಕ ಪ್ರಮಾಣಗಳು ಇದನ್ನು ಸಂದಿಗ್ಧವನ್ನಾಗಿ ಮಾಡಿವೆ _ಅನು.

ಮೊದಲು ಋಗ್ವೇದ!

ತದ್ಯಥಾ_

ಋಗ್ವೇದೇ ಸರ್ವೇಷಾಂ ಪದಾರ್ಥಾನಾಂ ಗುಣ-ಪ್ರಕಾಶಃ ಕೃತೋಽಸ್ತಿ.

ಅದು ಹೇಗೆಂದರೆ_

ಋಗ್ವೇದದಲ್ಲಿ ಸಮಸ್ತ ಪದಾರ್ಥಗಳ ಗುಣಗಳ ಪ್ರಕಾಶವು ಮಾಡಲ್ಪಟ್ಟಿದೆ!

ಅಂದರೆ, ಋಗ್ವೇದದಲ್ಲಿ ಎಲ್ಲಾ ಪದಾರ್ಥಗಳ ಗುಣಗಳ ಪ್ರಕಾಶವು, ಅವುಗಳಲ್ಲಿ ಪ್ರೀತಿವರ್ಧಿಸಿ, ಉಪಕಾರ ತೆಗೆದುಕೊಳ್ಳುವ ಜ್ಞಾನವು ಪ್ರಾಪ್ತವಾಗಲಿ, ಎಂದು ಮಾಡಲ್ಪಟ್ಟಿದೆ.

ಏಕೆಂದರೆ, ಪ್ರತ್ಯಕ್ಷಜ್ಞಾನವಿಲ್ಲದೇ, ಸಂಸ್ಕಾರದ ಮತ್ತು ಪ್ರವೃತ್ತಿಯ ಆರಂಭ ಉಂಟಾಗಲಾರದು! ಮತ್ತು [ಈ] ಆರಂಭವಿಲ್ಲದೇ, ಈ ಮನುಷ್ಯಜನ್ಮವು ವ್ಯರ್ಥವಾಗಿಯೇ ಹೊರಟುಹೋಗುತ್ತದೆ!

ಆದುದರಿಂದ, ಋಗ್ವೇದದ ಗಣನೆಯನ್ನು ಮೊದಲು ಮಾಡಲಾಗಿದೆ!

ನಂತರ, ಯಜುರ್ವೇದ!

ತಥಾ ಯಜುರ್ವೇದೇ ವಿದಿತಗುಣಾನಾಂ ಪದಾರ್ಥಾನಾಂ ಸಕಾಶಾತ್ ಕ್ರಿಯಯಾಽನೇಕವಿದ್ಯೋ-ಪಕಾರಗ್ರಹಣಾಯ ವಿಧಾನಂ ಕೃತಮಸ್ತಿ.

ಮತ್ತು ಯಜುರ್ವೇದದಲ್ಲಿ_ [ಪದಾರ್ಥಗಳಿಂದ] ತಿಳಿದ ಗುಣಗಳ ಬಳಿಯಿಂದ, ಕ್ರಿಯೆಯ ಮೂಲಕ ಅನೇಕ ವಿದ್ಯೆಗಳ ಉಪಕಾರಗಳನ್ನು ಗ್ರಹಿಸಲು ವಿಧಾನ ಮಾಡಲಾಗಿದೆ.

ಅಂದರೆ_

ಯಜುರ್ವೇದದಲ್ಲಿ ಕ್ರಿಯಾಕಾಂಡದ ವಿಧಾನವು ಬರೆಯಲ್ಪಟ್ಟಿದೆ. ಏಕೆಂದರೆ, ಜ್ಞಾನ[ವನ್ನು ಪಡೆ]ದ ನಂತರವೇ, ಕರ್ತೃವಿನ ಪ್ರವೃತ್ತಿಯು [ಕರ್ಮದಲ್ಲಿ] ಯಥಾವತ್ತಾಗಿ ಉಂಟಾಗಬಲ್ಲದು.

ಹೇಗೆ **ಋಗ್ವೇದದಲ್ಲಿ** ಗುಣಗಳ ಕಥನ ಮಾಡಲಾಗಿದೆಯೋ, ಹಾಗೆಯೇ **ಯಜುರ್ವೇದದಲ್ಲಿ**[ನ] ಅನೇಕ ವಿದ್ಯೆಗಳ ವಿಚಾರವನ್ನು ಸರಿ ಸರಿಯಾಗಿ ಮಾಡುವುದರಿಂದ, ಜಗತ್ತಿನಲ್ಲಿ ವ್ಯವಹಾರಯೋಗ್ಯ ಪದಾರ್ಥಗಳ [ಅನೇಕ ವಿಧ] ಉಪಯೋಗವನ್ನು ಸಾಧಿಸಿಕೊಳ್ಳಬೇಕಾಗುತ್ತದೆ. ಇದರಿಂದ, ಜನರಿಗೆ ನಾನಾ ಪ್ರಕಾರಗಳ ಸುಖವು ದೊರಕಲಿ, ಎಂಬ ಉದ್ದೇಶ್ಯವಿರುತ್ತದೆ!

ಏಕೆಂದರೆ, ಎಲ್ಲಿನ ತನಕ ಯಾವ ಕ್ರಿಯೆಯೂ ವಿಧಿಪೂರ್ವಕವಾಗಿ ಮಾಡಲ್ಪಡುವುದಿಲ್ಲವೋ, ಅಲ್ಲಿನ ತನಕ ಅದರ ರಹಸ್ಯವು ಚೆನ್ನಾಗಿ ಪ್ರಕಟವಾಗುವುದಿಲ್ಲ!

ಆದುದರಿಂದ, ಯಾವ ರೀತಿಯಲ್ಲಿ ತಿಳಿಯಬೇಕೆಂದಿರುತ್ತದೋ, ಅಥವಾ ಹೇಳಬೇಕೆಂದಿರುತ್ತದೋ, ಹಾಗೆಯೇ ಮಾಡಲೂ ಬೇಕು! ಆಗಲೇ ಜ್ಞಾನದ ಫಲವೂ, ಮತ್ತು ಜ್ಞಾನಿಗೆ ಶೋಭೆಯೂ ಉಂಟಾಗುತ್ತದೆ!

ಜಗತ್ತಿನ ಉಪಕಾರವು ಮುಖ್ಯವಾಗಿ ಎರಡು ರೀತಿಯಲ್ಲಿ!

ಮತ್ತು ಇ[ನ್ನೊಂ]ದನ್ನೂ ತಿಳಿಯಬೇಕಾಗಿರುವುದು ಅವಶ್ಯವಾಗಿದೆ. ಏನೆಂದರೆ_

ಜಗತ್ತಿನ ಉಪಕಾರವು ಮುಖ್ಯವಾಗಿ ಎರಡೇ ರೀತಿಯದಾಗಿರುತ್ತದೆ_ ಒಂದು **ಆತ್ಮನದು,** ಮತ್ತು ಇನ್ನೊಂದು **ಶರೀರದ್ದು!**

ಎಂದರೆ, ವಿದ್ಯಾದಾನದಿಂದ ಆತ್ಮನ, ಮತ್ತು ಶ್ರೇಷ್ಠನಿಯಮಗಳಿಂದ ಉತ್ತಮ ಪದಾರ್ಥಗಳ ಪ್ರಾಪ್ತಿಮಾಡಿಕೊಂಡು, ಶರೀರದ, ಉಪಕಾರವಾಗುತ್ತದೆ!

ಆದುದರಿಂದ, ಈಶ್ವರನು ಋಗ್ವೇದ ಮೊದಲಾದುವುಗಳ ಉಪದೇಶವನ್ನು, ಮನುಷ್ಯರು ಜ್ಞಾನ, ಹಾಗೂ ಕ್ರಿಯಾಕಾಂಡವನ್ನು ಪೂರ್ಣರೀತಿಯಿಂದ ತಿಳಿದುಕೊಳ್ಳಲಿ, ಎಂದು ಮಾಡಿದ್ದಾನೆ!

ತಥಾ ಸಾಮವೇದೇ ಜ್ಞಾನಕ್ರಿಯಾವಿದ್ಯಯೋರ್ದೀರ್ಘವಿಚಾರೇಣ ಫಲಾವಧಿಪರ್ಯ್ಯಂತಂ ವಿದ್ಯಾವಿಚಾರಃ.

ನಂತರ, ಸಾಮವೇದ!

ಮತ್ತು **ಸಾಮವೇದದಲ್ಲಿ**_ ಜ್ಞಾನದ, ಹಾಗೂ ಕ್ರಿಯೆಯ ವಿದ್ಯೆಗಳ ದೀರ್ಘ ವಿಚಾರದಿಂದ, ಫಲವು ದೊರಕುವ ತನಕದ ವಿದ್ಯೆಯ ವಿಚಾರ [ಮಾಡಲಾಗಿದೆ.]

ಅಂದರೆ, ಸಾಮವೇದದಿಂದ, ಜ್ಞಾನ ಮತ್ತು ಆನಂದದ ಉನ್ನತಿ ಉಂಟಾಗುತ್ತದೆ!

ಏವಮಥರ್ವವೇದೇऽಪಿ ತ್ರಯಾಣಾಂ ವೇದಾನಾಂ ಮಧ್ಯೇ ಯೋ ವಿದ್ಯಾಫಲವಿಚಾರೋ ವಿಹಿತೋऽಸ್ತಿ, ತಸ್ಯ ಪೂರ್ತ್ತಿಕರಣೇನ ರಕ್ಷಣೋನ್ನತೀ ವಿಹಿತೇ ಸ್ತಃ.

ಆನಂತರ, ಅಥರ್ವವೇದ!

ಹೀಗೆ, **ಅಥರ್ವವೇದದಲ್ಲೂ** ಕೂಡ_ ಮೂರೂ ವೇದಗಳಲ್ಲಿ ಯಾವ ವಿದ್ಯೆಯ ಫಲದ ವಿಚಾರವು ಮಾಡಲಾಗಿದೆಯೋ, ಅದರ ಪೂರ್ತಿ ಮಾಡುವುದರ ಮೂಲಕ ರಕ್ಷಣೆ, ಹಾಗೂ ಉನ್ನತಿಯು ವಿಹಿತವಾಗಿವೆ.

ಅಂದರೆ, ಅಥರ್ವವೇದದಿಂದ ಎಲ್ಲಾ ಸಂಶಯಗಳ ನಿವೃತ್ತಿಯಾಗುತ್ತದೆ!

ಏತದಾದ್ಯರ್ಥಂ ವೇದಾನಾಂ ಚತ್ವಾರೋ ವಿಭಾಗಾಃ ಸಂತಿ.

ಈ ಮೊದಲಾದ ಪ್ರಯೋಜನಕ್ಕಾಗಿ ವೇದಗಳ ನಾಲ್ಕು ವಿಭಾಗಗಳು ಇವೆ!

ಎಷ್ಟೋ ಮಂತ್ರಗಳ ಪಾಠವು ನಾಲ್ಕೂ ವೇದಗಳಲ್ಲಿ!

ಅತ ಏವೈಕಸ್ಯಾಪಿ ಮಂತ್ರಸ್ಯ ಚತಸೃಷು ಸಂಹಿತಾಸು ಪಾಠಃ ಕೃತೋಽಸ್ತಿ.

ಆದುದರಿಂದಲೇ, ಒಂದು ಮಂತ್ರದ ಪಾಠವೂ ಕೂಡ, ನಾಲ್ಕೂ ಸಂಹಿತೆಗಳಲ್ಲಿ ಮಾಡಲ್ಪಟ್ಟಿದೆ.

ಅಂದರೆ, ಅಲ್ಲಲ್ಲಿ ಒಂದು ಮಂತ್ರದ ಪಾಠವು ನಾಲ್ಕೂ ವೇದಗಳಲ್ಲಿ ಮಾಡಿರುವ ಪ್ರಯೋಜನ ವೇನೆಂದರೆ_

ಅದು ಮೊದಲು ಹೇಳಿದ ನಾಲ್ಕೂ ಪ್ರಕಾರದ ಗಾನವಿದ್ಯೆಯಲ್ಲಿ ಹಾಡಲ್ಪಡಲಿ, ಎಂದು!

ಮತ್ತು ಪ್ರಕರಣಭೇದದಿಂದ, ಸ್ವಲ್ಪ-ಸ್ವಲ್ಪ ಅರ್ಥಭೇದವೂ ಉಂಟಾಗುತ್ತದೆ!

ಆದುದರಿಂದ, ಎಷ್ಟೋ ಮಂತ್ರಗಳ [ಪುನರುಕ್ತ] ಪಾಠವು ನಾಲ್ಕೂ ವೇದಗಳಲ್ಲಿ ಮಾಡಲಾಗಿದೆ!

(೩) ವೇದಗಳ ನಾಲ್ಕು ಸಂಹಿತೆಗಳಾಗಿರುವುದರ ಪ್ರಯೋಜನವೇನು?

ಪ್ರಶ್ನಃ_ ವೇದಾನಾಂ ಚತುಃಸಂಹಿತಾಕರಣೇ ಕಿಂ ಪ್ರಯೋಜನಮಸ್ತೀತಿ?

ಪ್ರಶ್ನೆ_ ವೇದಗಳನ್ನು ನಾಲ್ಕು ಸಂಹಿತೆಗಳನ್ನಾಗಿ ಮಾಡಿರುವುದರಲ್ಲಿ ಪ್ರಯೋಜನವೇನಿದೆ?

ಉತ್ತರಮ್_ ಯತೋ ವಿದ್ಯಾವಿಧಾಯಕಾನಾಂ ಮಂತ್ರಾಣಾಂ ಪ್ರಕರಣಶಃ ಪೂರ್ವಾಪರಸಂಧಾನೇನ ಸುಗಮತಯಾ ತತ್ರಸ್ಥಾ ವಿದ್ಯಾ ವಿದಿತಾ ಭವೇಯು-ರೇತದರ್ಥಂ ಸಂಹಿತಾಕರಣಮ್.

ಉತ್ತರ_ ಏನೆಂದರೆ, ವಿದ್ಯಾವಿಧಾಯಕವಾದ ಮಂತ್ರಗಳ, ಪ್ರಕರಣಶಃ ಪೂರ್ವಾಪರ ಸಂಯೋಗ ಮಾಡುವುದರಿಂದ, ಅದರಲ್ಲಿನ ವಿದ್ಯೆಗಳು ಸುಗಮವಾಗಿ ತಿಳಿಯಲ್ಪಡಲಿ, ಎಂಬೀ ಪ್ರಯೋಜನಕ್ಕಾಗಿ ಸಂಹಿತೆಗಳು ಮಾಡಲ್ಪಟ್ಟಿವೆ.

ಅಂದರೆ, ವಿದ್ಯೆಯನ್ನು ತಿಳಿಸುವ ಮಂತ್ರಗಳ ಪ್ರಕರಣದಿಂದ, ಯಾವ ಪೂರ್ವಾಪರ ಜ್ಞಾನ ಉಂಟಾಗುತ್ತದೋ, ಆದರಿಂದ, ವೇದಗಳಲ್ಲಿ ಹೇಳಲ್ಪಟ್ಟ ಎಲ್ಲಾ ವಿದ್ಯೆಗಳೂ ಸುಗಮವಾಗಿ ತಿಳಿದುಕೊಳ್ಳಲ್ಪಡಲಿ, ಎಂಬಂತಹ ಮೊದಲಾದ ಪ್ರಯೋಜನಗಳು [ನಾಲ್ಕು] ಸಂಹಿತೆಗಳನ್ನು ಮಾಡುವುದರಲ್ಲಿವೆ.

(೪) ವೇದಗಳಲ್ಲಿ ಆಂತರಿಕ ಉಪವಿಭಾಗಗಳು ಏಕೆ?

ಪ್ರಶ್ನಃ_

ವೇದೇಷ್ವಷ್ಟಕ-ಮಂಡಲಾಧ್ಯಾಯ-ಸೂಕ್ತ-ಷಟ್ಕ-ಕಾಂಡ-ವರ್ಗ-ದಶತಿ-ತ್ರಿಕ-ಪ್ರಪಾಠಕಾನುವಾಕವಿಧಾನಂ ಕಿಮರ್ಥಂ ಕೃತಮಸ್ತಿ?

ಉತ್ತರಮ್_ ಅತ್ರ ಬ್ರೂಮಃ_

ಅತ್ರಾಷ್ಟಕಾದೀನಾಂ ವಿಧಾನಮೇತದರ್ಥಮಸ್ತಿ;

ಯಥಾ ಸುಗಮತಯಾ ಪಠನಪಾಠನಂ, ಮಂತ್ರ-ಪರಿಗಣನಂ, ಪ್ರತಿವಿದ್ಯಂ ವಿದ್ಯಾಪ್ರಕರಣಬೋಧಶ್ಚ ಭವೇತ್.

ಪ್ರಶ್ನೆ_

ಸರಿ! ಈಗ, ನೀವು ಹೇಳಿ_

ವೇದಗಳಲ್ಲಿ **ಅಷ್ಟಕ, ಮಂಡಲ, ಅಧ್ಯಾಯ, ಸೂಕ್ತ, ಷಟ್ಕ, ಕಾಂಡ, ವರ್ಗ, ದಶತಿ, ತ್ರಿಕ, ಪ್ರಪಾಠಕ, ಅನುವಾಕ**_ ಇವುಗಳ ವಿಧಾನವು ಏತಕ್ಕಾಗಿ ಮಾಡಲ್ಪಟ್ಟಿದೆ?

ಉತ್ತರ_ ಈ ವಿಷಯದಲ್ಲಿ ಹೇಳುತ್ತೇವೇನೆಂದರೆ_

ಇಲ್ಲಿ ಅಷ್ಟಕ ಮೊದಲಾದುವುಗಳ ವಿಧಾನವು ಯಾವ ಪ್ರಯೋಜನಕ್ಕಾಗಿದೆಯೆಂದರೆ_

ಉದಾಹರಣೆಗೆ_ [ಇವುಗಳಿಂದ] ಸುಗಮವಾಗಿ ಪಠನ-ಪಾಠನ, ಮಂತ್ರಗಳ ಎಣಿಕೆ, ಮತ್ತು ಪ್ರತ್ಯೇಕ ವಿದ್ಯೆಗೆ ಸಂಬಂಧಿಸಿದ ವಿದ್ಯೆಯ ಪ್ರಕರಣವು ತಿಳಿಯಲ್ಪಡಲಿ, ಎಂದು!

ಅಂದರೆ, ಇವುಗಳ ವಿಧಾನವು ಏಕಿದೆಯೆಂದರೆ_

ಇದರಿಂದ, **ಪಠನ-ಪಾಠನ,** ಮತ್ತು ಮಂತ್ರಗಳ ಎಣಿಕೆಯನ್ನು ಕಷ್ಟವಿಲ್ಲದೇ ತಿಳಿದುಕೊಳ್ಳಲಾಗಲಿ! ಹಾಗೂ_

ಎಲ್ಲಾ ವಿದ್ಯೆಗಳ ಬೇರೆ ಬೇರೆ ಪ್ರಕರಣಗಳು ಭ್ರಮರಹಿತವಾಗಿ ತಿಳಿಯಲ್ಪಟ್ಟು;

ಸಮಸ್ತ ವಿದ್ಯಾವ್ಯವಹಾರಗಳಲ್ಲಿ ಗುಣದ ಮತ್ತು ಗುಣಿಯ ಜ್ಞಾನದ ಮೂಲಕ ಮನನವು ಆಗಲಿ!

ಮತ್ತು ಪೂರ್ವಾಪರ ಸ್ಮರಣವಾಗುವುದರಿಂದ, ಅನುವೃತ್ತಿಪೂರ್ವಕವಾಗಿ_ **ಆಕಾಂಕ್ಷಾ**[1], **ಯೋಗ್ಯತೆ**[2], **ಆಸತ್ತಿ**[3] ಮತ್ತು **ತಾತ್ಪರ್ಯವು**[4] ಎಲ್ಲರಿಗೂ ತಿಳಿಯಲ್ಪಡಲಿ, ಎಂದು!

---

1. ಉದ್ದೇಶ್ಯ 2. ಸಾಮರ್ಥ್ಯ. 3. ಸಾಮೀಪ್ಯತೆ 4. ಅಭಿಪ್ರಾಯ.

'ಸತ್ಯಾರ್ಥಪ್ರಕಾಶ' ಪೂರ್ವಾರ್ಧದ ಭೂಮಿಕೆಯನ್ನು ನೋಡಿ _ಅನು.

ಏತದರ್ಥಮೇತದ್ವಿಧಾನಂ ಕೃತಮಸ್ತೀತಿ.

ಈ ಪ್ರಯೋಜನಕ್ಕಾಗಿ ಈ ವಿಧಾನವು ಮಾಡಲ್ಪಟ್ಟಿದೆ.

ಅಂದರೆ, ಈ ಮೊದಲಾದ ಪ್ರಯೋಜನಗಳಿಗಾಗಿ ಅಷ್ಟಕಾದಿ[ವಿಭಾಗ]ಗಳು ಮಾಡಲ್ಪಟ್ಟಿವೆ!

(೫) ನಾಲ್ಕೂ ವೇದಗಳ ಸಂಖ್ಯಾನುಕ್ರಮವು ಏತಕ್ಕಾಗಿ?

ಪ್ರಶ್ನಃ_ ಕಿಮರ್ಥಾ ಋಗ್ಯಜುಃಸಾಮಾಥರ್ವಾಣಃ ಪ್ರಥಮ-ದ್ವಿತೀಯ-ತೃತೀಯ-ಚತುರ್ಥಸಂಖ್ಯಾಯಾಃ ಕ್ರಮೇಣ ಪರಿಗಣಿತಾಃ ಸಂತಿ?

ಪ್ರಶ್ನೆ_ ಏತಕ್ಕಾಗಿ **ಋಗ್**, **ಯಜುಃ**, **ಸಾಮ** ಮತ್ತು **ಅಥರ್ವ**ವೇದಗಳು ಮೊದಲನೆಯ, ಎರಡನೆಯ, ಮೂರನೆಯ ಮತ್ತು ನಾಲ್ಕನೆಯ ಸಂಖ್ಯೆಯದಾಗಿ ಕ್ರಮವಾಗಿ ಪರಿಗಣಿಸಲ್ಪಟ್ಟಿವೆ?

ಅಂದರೆ, ಮೊದಲನೆಯದಾಗಿ **ಋಗ್**[ವೇದ], ಎರಡನೆಯದಾಗಿ **ಯಜು**[ರ್ವೇದ], ಮೂರನೆಯದಾಗಿ **ಸಾಮ**[ವೇದ] ಮತ್ತು ನಾಲ್ಕನೆಯದಾಗಿ **ಅಥರ್ವ**ವೇದ_ ಈ ಕ್ರಮದಿಂದ ನಾಲ್ಕು ವೇದಗಳು ಏಕೆ ಎಣಿಸಲ್ಪಟ್ಟಿವೆ?

ಋಗ್ವೇದವೇ ಮೊದಲನೆಯ ವೇದ ಹೇಗೆ?

ಉತ್ತರಮ್_ ಅತ್ರೋಚ್ಯತೇ_

ಉತ್ತರ_ ಈ ವಿಷಯದಲ್ಲಿ ಹೇಳಲಾಗುತ್ತದೇನೆಂದರೆ_

ನ ಯಾವದ್ ಗುಣಗುಣಿನೋಃ ಸಾಕ್ಷಾಜ್-ಜ್ಞಾನಂ ಭವತಿ, ನೈವ ತಾವತ್ ಸಂಸ್ಕಾರಃ ಪ್ರೀತಿಶ್ಚ.

ಎಲ್ಲಿನ ತನಕ ಗುಣಗಳ ಮತ್ತು ಗುಣಿಗಳ ಸಾಕ್ಷಾತ್ ಜ್ಞಾನ ಉಂಟಾಗುವುದಿಲ್ಲವೋ, ಅಲ್ಲಿನ ತನಕ ಸಂಸ್ಕಾರವೂ, ಮತ್ತು ಪ್ರೀತಿಯೂ ಉಂಟಾಗುವುದೇ ಇಲ್ಲ!

ನ ಚಾಭ್ಯಾಂ ವಿನಾ ಪ್ರವೃತ್ತಿರ್ಭವತಿ.

ಮತ್ತು ಇವೆರಡೂ ಇಲ್ಲದೇ, ಪ್ರವೃತ್ತಿಯೂ ಉಂಟಾಗುವುದಿಲ್ಲ!

ಅಂದರೆ, ಎಲ್ಲಿನ ತನಕ ಮನುಷ್ಯರಿಗೆ ಗುಣದ ಮತ್ತು ಗುಣಿಯ ಜ್ಞಾನವುಂಟಾಗುವುದಿಲ್ಲವೋ, ಅಲ್ಲಿನ ತನಕ ಅವುಗಳಲ್ಲಿ ಪ್ರೀತಿಯಿಂದ ಪ್ರವೃತ್ತಿ ಉಂಟಾಗಲಾರದು!

ತಯಾ ವಿನಾ ಸುಖಾಭಾವಶ್ಚೇತಿ.

ಮತ್ತು ಅದಿಲ್ಲದೇ* ಸುಖವೂ ಉಂಟಾಗಲಾರದು!

---

* ಎಂದರೆ, ಪ್ರವೃತ್ತಿಯಿಲ್ಲದೇ _ಅನು.

ಅಂದರೆ, ಇದಿಲ್ಲದಿದ್ದರೆ, ಶುದ್ಧಕ್ರಿಯೆ ಮೊದಲಾದುದರ ಅಭಾವದಿಂದ ಮನುಷ್ಯರಿಗೆ ಸುಖವೂ ಕೂಡ, ಉಂಟಾಗಲಾರದಾಗಿತ್ತು!

ಏತದ್ವಿದ್ಯಾವಿಧಾಯಕತ್ವಾದ್ ಋಗ್ವೇದಃ ಪ್ರಥಮಂ ಪರಿಗಣಿತುಂ ಯೋಗ್ಯೋಽಸ್ತಿ.

ಈ ವಿದ್ಯೆಯ ವಿಧಾನ ಮಾಡಿರುವುದರಿಂದ, **ಋಗ್ವೇದವು ಮೊದಲನೆಯದಾಗಿ** ಪರಿಗಣಿಸಲ್ಪಡಲು ಯೋಗ್ಯವಾಗಿದೆ!

ಅಂದರೆ, ಗುಣಜ್ಞಾನದ ವಿದ್ಯೆಯನ್ನು ತಿಳಿಸುವುದರಿಂದ, ಋಗ್ವೇದದ ಎಣಿಕೆಯು ಮೊದಲನೆಯದಾಗಿ ಆಗಿರುವುದು ಯೋಗ್ಯವಾಗಿದೆ!

ಯಜುರ್ವೇದವು ಎರಡನೆಯ ವೇದ ಹೇಗೆ?

ಏವಂ ಚ ಯಥಾ ಪದಾರ್ಥಗುಣಜ್ಞಾನಾನಂತರಂ ಕ್ರಿಯಯೋಪಕಾರೇಣ ಸರ್ವಜಗದ್ಧಿತಸಂಪಾದನಂ ಕಾರ್ಯ್ಯಂ ಭವತಿ ;

ಮತ್ತು ಹೇಗೆ ಪದಾರ್ಥಗಳ ಗುಣಗಳ ಜ್ಞಾನದ ನಂತರ, ಉಪಕಾರ ಮಾಡುವ ಕ್ರಿಯೆಯ ಮೂಲಕ ಎಲ್ಲಾ ಪ್ರಪಂಚದ ಹಿತಸಂಪಾದನೆ ಮಾಡುವುದು ಕರ್ತ್ತವ್ಯವಾಗಿರುತ್ತದೋ ;

ಯಜುರ್ವೇದ ಏತದ್ವಿದ್ಯಾಪ್ರತಿಪಾದಕತ್ವಾದ್ ದ್ವಿತೀಯಃ ಪರಿಗಣಿತೋಽಸ್ತೀತಿ ಬೋಧ್ಯಮ್.

[ಹಾಗೆಯೇ,] **ಯಜುರ್ವೇದ**ದಲ್ಲಿ ಈ ವಿದ್ಯೆಯ ಪ್ರತಿಪಾದನೆ ಇರುವುದರಿಂದ, [ಅದು] ಎರಡನೆಯದು, ಎಂದು ಪರಿಗಣಿಸಲಾಗಿದೆ, ಎಂದು ತಿಳಿಯಬೇಕು!

ಅಂದರೆ, ಪದಾರ್ಥಗಳ ಗುಣಜ್ಞಾನದ ಅನಂತರ, ಕ್ರಿಯಾರೂಪವಾದ ಉಪಕಾರವನ್ನು ಮಾಡಿ, ಸಮಸ್ತ ಜಗತ್ತಿನ ಹಿತವೂ ಚೆನ್ನಾಗಿ ಸಿದ್ಧವಾಗಲು ಶಕ್ಯವಾಗಲಿ, ಎಂದು ಈ ವಿದ್ಯೆಯನ್ನು ತಿಳಿಸುವುದಕ್ಕಾಗಿ, **ಯಜುರ್ವೇದದ** ಎಣಿಕೆಯನ್ನು ಎರಡನೆಯದನ್ನಾಗಿ ಮಾಡಲಾಗಿದೆ!

ಸಾಮವೇದವು ಮೂರನೆಯ ವೇದ ಹೇಗೆ?

ತಥಾ ಜ್ಞಾನಕರ್ಮಕಾಂಡಯೋರುಪಾಸನಾಯಾಶ್ಚ ಕಿಯತ್ಯುನ್ನತಿರ್ಭವಿತುಮರ್ಹತಿ ;

ಮತ್ತು **ಜ್ಞಾನ**, ಹಾಗೂ **ಕರ್ಮಕಾಂಡ**ಗಳ, ಮತ್ತು ಉಪಾಸನೆಯ, ಎಷ್ಟು ಉನ್ನತಿಯಾಗಲು ಯೋಗ್ಯವಾಗಿದೆ?

ಕಿಂಚೈತೇಷಾಂ ಫಲಂ ಭವತಿ ;

ಹಾಗೂ ಇವುಗಳ ಫಲ ಏನಾಗುತ್ತದೆ?

ಸಾಮವೇದ ಏತದ್ವಿಧಾಯಕತ್ವಾತ್ ತೃತೀಯೋ ಗಣ್ಯತ ಇತಿ.

ಇವುಗಳ ವಿಧಾನವು ಸಾಮವೇದದಲ್ಲಿ ಮಾಡಿರುವುದರಿಂದ, [ಅದು] ಮೂರನೆಯದು, ಎಂದು ಎಣಿಸಲ್ಪಟ್ಟಿದೆ!

ಅಂದರೆ, **ಜ್ಞಾನ**, **ಕರ್ಮ** ಮತ್ತು **ಉಪಾಸನಾ** ಕಾಂಡಗಳ ವೃದ್ಧಿ ಅಥವಾ ಫಲವು ಎಷ್ಟು ಮತ್ತು ಎಲ್ಲಿಯತನಕ ಆಗಬೇಕು? ಇದರ ವಿಧಾನವು ಸಾಮವೇದದಲ್ಲಿ ಬರೆಯಲ್ಪಟ್ಟಿದೆ. ಆದುದರಿಂದ, ಅದನ್ನು ಮೂರನೆಯದು, ಎಂದು ಎಣಿಸಲಾಗಿದೆ.

ಅಥರ್ವವೇದವು ನಾಲ್ಕನೆಯ ವೇದ ಹೇಗೆ?

ಏವಮೇವಾಥರ್ವವೇದಸ್ತ್ರಯ್ಯಂತರ್ಗತವಿದ್ಯಾನಾಂ ಪರಿಶೇಷರಕ್ಷಣವಿಧಾಯಕತ್ವಾಚ್ಚತುರ್ಥಃ ಪರಿಗಣ್ಯತ ಇತಿ.

ಹೀಗೆಯೇ, ಅಥರ್ವವೇದವು ಮೂರೂ [ವೇದ] ಗಳಲ್ಲಿನ ವಿದ್ಯೆಗಳ ಉಳಿದ ಭಾಗದ ರಕ್ಷಣೆಯ ವಿಧಾಯಕವಾಗಿರುವುದರಿಂದ, ನಾಲ್ಕನೆಯದಾಗಿ ಪರಿಗಣಿಸಲ್ಪಟ್ಟಿದೆ!

ಅಂದರೆ, ಮೂರೂ ವೇದಗಳಲ್ಲಿ ಯಾವ ಯಾವ ವಿದ್ಯೆಗಳಿವೆಯೋ, ಅವೆಲ್ಲದರ ಉಳಿದ ಭಾಗದ ಪೂರ್ತಿಯ ವಿಧಾನವೂ, ಎಲ್ಲಾ ವಿದ್ಯೆಗಳ ರಕ್ಷಣೆಯೂ, ಮತ್ತು ಸಂಶಯನಿವೃತ್ತಿಯೂ ಮಾಡಲ್ಪಟ್ಟಿರುವುದರಿಂದ, **ಅಥರ್ವವೇದ**ವನ್ನು ನಾಲ್ಕನೆಯದು, ಎಂದು ಎಣಿಸಲಾಗಿದೆ!

ಹೀಗೆ, [ವೇದಗಳಲ್ಲಿ] ಪ್ರವೃತ್ತಿ ಉಂಟಾಗಲಿ, ಎಂದು ವೇದಗಳ ನಾಲ್ಕು ವಿಭಾಗಗಳನ್ನು ಮಾಡಲಾಗಿದೆ!

ನಾಲ್ಕೂ ವೇದಗಳ ಈ ಹೆಸರುಗಳ ಕಾರಣ!

ಅತೋ ಗುಣಜ್ಞಾನ-ಕ್ರಿಯಾ-ವಿಜ್ಞಾನೋನ್ನತಿ-ಶೇಷವಿದ್ಯಾರಕ್ಷಣಾನಾಂ ಪೂರ್ವಪರಸಹಭಾವೇ ಸಂಯುಕ್ತತ್ವಾತ್ ;

ಆದುದರಿಂದ, **ಗುಣಜ್ಞಾನ**, **ಕ್ರಿಯೆ**, **ವಿಜ್ಞಾನ**ದ ಉನ್ನತಿ ಮತ್ತು ಉಳಿದ ವಿದ್ಯೆಗಳ ರಕ್ಷಣೆ_ ಇವುಗಳು ಪೂರ್ವಪರ ಸಹಭಾವದಲ್ಲಿ ಸಂಯುಕ್ತವಾಗಿರುವುದರಿಂದ ;

ಕ್ರಮೇಣರ್ಗ್ಯಜುಸ್ಸಾಮಾಥರ್ವಾಣ ಇತಿ ಚತಸ್ರಃ ಸಂಹಿತಾಃ ಪರಿಗಣಿತಾಃ ಸಂಜ್ಞಾಶ್ಚ ಕೃತಾಃ ಸಂತಿ.

ಕ್ರಮವಾಗಿ **ಋಗ್**, **ಯಜುಃ** **ಸಾಮ**, ಮತ್ತು **ಅಥರ್ವ**, ಎಂಬ ನಾಲ್ಕು ಸಂಹಿತೆಗಳು ಪರಿಗಣಿಸಲ್ಪಟ್ಟಿವೆ, ಹಾಗೂ [ಇವಕ್ಕೆ ಈ] ಹೆಸರುಗಳು ಕೊಡಲ್ಪಟ್ಟಿವೆ!

ಅಂದರೆ, ಗುಣಜ್ಞಾನ, ಕ್ರಿಯಾವಿಜ್ಞಾನ, ಇವುಗಳ ಉನ್ನತಿ, ಹಾಗೂ ರಕ್ಷಣೆಯನ್ನು ಪೂರ್ವಾಪರ ಕ್ರಮ ದಿಂದ ತಿಳಿದುಕೊಳ್ಳಬೇಕು!

ಎಂದರೆ, ಜ್ಞಾನಕಾಂಡಕ್ಕಾಗಿ **ಋಗ್ವೇದ;** ಕ್ರಿಯಾಕಾಂಡಕ್ಕಾಗಿ **ಯಜುರ್ವೇದ ;** ಇವುಗಳ ಉನ್ನತಿಗಾಗಿ **ಸಾಮವೇದ,** ಮತ್ತು ಉಳಿದ ವಿದ್ಯೆಗಳ ಪ್ರಕಾಶಕ್ಕಾಗಿ ಅಥವಾ ರಕ್ಷಣೆಗಾಗಿ **ಅಥರ್ವವೇದ**_ ಇವುಗಳಿಗೆ [ಕ್ರಮವಾಗಿ] ಮೊದಲನೆಯದು, ಎರಡನೆಯದು, ಮೂರನೆಯದು ಮತ್ತು ನಾಲ್ಕನೆಯದು, ಎಂಬ ಎಣಿಕೆ ಕೊಡಲಾಗಿದೆ.

ಏಕೆಂದರೆ_

ಋಗ್ವೇದ_

" ಋಚ ಸ್ತುತೌ "

[ಧಾತುಪಾಠೇ ೬. ೧೯]

[ಅರ್ಥ:_ " 'ಋಚ' ಧಾತುವು ಸ್ತುತಿಯ ಅರ್ಥದಲ್ಲಿದೆ."

(ಧಾತುಪಾಠ: ೬. ೧೯)]

ಯಜುರ್ವೇದ_

" ಯಜ ದೇವಪೂಜಾಸಂಗತಿಕರಣದಾನೇಷು"

[ಧಾತುಪಾಠೇ ೧. ೭೨೮]

[ಅರ್ಥ:_ " 'ಯಜ' ಧಾತುವು ದೇವಪೂಜೆ, ಸಂಗತಿಕರಣ ಮತ್ತು ದಾನದ ಅರ್ಥಗಳಲ್ಲಿದೆ."

(ಧಾತುಪಾಠ: ೧. ೭೨೮)]

ಸಾಮವೇದ_

" ಸಾಮ ಸಾಂತ್ವನೇ"

[ಕ್ಷೀರತರಂಗಿಣ್ಯಾಮ್ ೧೦. ೨೬೫]

[ಅರ್ಥ:_" 'ಸಾಮ' ಧಾತುವು ಸಮಾಧಾನದ ಅರ್ಥದಲ್ಲಿದೆ."

(ಕ್ಷೀರತರಂಗಿಣೀ : ೧೦. ೨೬೫)]

ಅಂದರೆ_

" ಸಾಮ ಸಾಂತ್ವಪ್ರಯೋಗೇ "

[ಧಾತುಪಾಠೇ ೧೦. ೩೦೪]

[ಅರ್ಥ:_ " 'ಸಾಮ' ಧಾತುವು ಸಾಂತ್ವನೆಯ ಪ್ರಯೋಗದ ಅರ್ಥದಲ್ಲಿದೆ."

(ಧಾತುಪಾಠ : ೧೦. ೩೦೪)]

" ಷೋ ಅಂತಕರ್ಮಣಿ "

[ಧಾತುಪಾಠೇ ೪. ೩೮]

[ಅರ್ಥ:_ " 'ಷೋ' ಧಾತುವು ನಾಶಮಾಡುವುದು, ಎಂಬ ಅರ್ಥದಲ್ಲಿದೆ."

(ಧಾತುಪಾಠ: ೪. ೩೮)]

ಅಥರ್ವವೇದ_

" ಥರ್ವತಿಶ್ಚರತಿಕರ್ಮಾ ತತ್ಪ್ರತಿಷೇಧಃ ॥ "

[ನಿರುಕ್ತೇ ಅ. ೧೧. ಖಂ. ೧೮]

[ಅರ್ಥ:_" 'ಥರ್ವತಿ', ಎಂಬುದು ಚಲಿಸುವ ಕ್ರಿಯೆಯನ್ನುಳ್ಳದ್ದಾಗಿದೆ. ಅದರ ನಿಷೇಧ ಮಾಡುವುದು [ಅಥರ್ವ.] "

(ನಿರುಕ್ತ: ೧೧. ೧೮)]

" ಚರ ಸಂಶಯೇ "

[ಧಾತುಪಾಠೇ ೧೦. ೨೧೪]

[ಅರ್ಥ:_ " 'ಚರ' ಧಾತುವು ಸಂಶಯದ ಅರ್ಥದಲ್ಲಿದೆ."

(ಧಾತುಪಾಠ: ೧೦. ೨೧೪)]

ಅನೇನಾಥರ್ವಶಬ್ದಃ ಸಂಶಯನಿವಾರಣಾರ್ಥೋ ಗೃಹ್ಯತೇ.

ಏವಂ ಧಾತ್ವರ್ಥೋಕ್ತಪ್ರಮಾಣೇಭ್ಯಃ ಕ್ರಮೇಣ ವೇದಾಃ ಪರಿಗಣ್ಯಂತೇ ಚೇತಿ ವೇದಿತವ್ಯಮ್.

ಇದರಿಂದ **ಅಥರ್ವ** ಶಬ್ದವು ಸಂಶಯ ನಿವಾರಣೆಯ ಅರ್ಥವನ್ನುಳ್ಳದ್ದಾಗಿ ಗ್ರಹಿಸಲ್ಪಡುತ್ತದೆ.

ಹೀಗೆ, ಧಾತುಗಳಿಂದ ಹೇಳಲ್ಪಡುವ ಅರ್ಥಗಳ ಪ್ರಮಾಣಗಳಿಂದಲೂ ಕೂಡ, ಕ್ರಮವಾಗಿ ವೇದಗಳು ಪರಿಗಣಿಸಲ್ಪಡುತ್ತವೆ, ಎಂದು ತಿಳಿಯಬೇಕು!

ಅಂದರೆ, ಈ ಅರ್ಥಗಳು ವಿದ್ಯಮಾನವಾಗಿರುವುದರಿಂದ, ನಾಲ್ಕು ವೇದಗಳಿಗೆ_ ಎಂದರೆ **ಋಗ್, ಯಜು, ಸಾಮ** ಮತ್ತು **ಅಥರ್ವ**ಗಳಿಗೆ ಈ ನಾಲ್ಕು ಹೆಸರುಗಳನ್ನು ಇಡಲಾಗಿದೆ.

ಮತ್ತು ಅಥರ್ವವೇದದ ಪ್ರಕಾಶವನ್ನು ಈಶ್ವರನು ಏಕೆ ಮಾಡಿದ್ದಾನೆಂದರೆ, ಇದರಿಂದ, ಮೂರೂ ವೇದಗಳ ಅನೇಕ ವಿದ್ಯೆಗಳ [ಮೂಲಕ] ಎಲ್ಲಾ ವಿಘ್ನಗಳ* ನಿವಾರಣೆಯಾಗಲಿ, ಮತ್ತು ಅವುಗಳ ಎಣಿಕೆಯೂ ಕೂಡ, ಸರಿಯಾಗಿ ಆಗಲಿ, ಎಂದು!

* ಎಂದರೆ, ಸಂದೇಹಗಳ _ಅನು.

(೬) ಋಷಿ-ದೇವತಾ-ಛಂದಃ_ ಸ್ವರ ನಿರ್ದೇಶದ ಪ್ರಯೋಜನಗಳು ಯಾವುವು?

ಪ್ರಶ್ನಃ_ ಪ್ರತ್ಯೇಕಮಂತ್ರಸ್ಯೋಪರಿ ಋಷಿ-ದೇವತಾ-ಛಂದಃ-ಸ್ವರಾಃ ಕಿಮರ್ಥಾ ಲಿಖ್ಯಂತೇ?

ಉತ್ತರಮ್_ ಯತೋ ವೇದಾನಾಮೀಶ್ವರೋಕ್ತ್ಯ-ನಂತರಂ ಯೇನ ಯೇನರ್ಷಿಣಾ ಯಸ್ಯ ಯಸ್ಯ ಮಂತ್ರಸ್ಯಾರ್ಥೋ ಯಥಾವದ್ ವಿದಿತಸ್ತಸ್ಮಾತ್ ತಸ್ಯ ತಸ್ಯೋಪರಿ ತತ್ತದೃಷೇರ್ನಾಮೋಲ್ಲೇಖನಂ ಕೃತಮಸ್ತಿ.

ಕುತಃ?

ಯೈರೀಶ್ವರಧ್ಯಾನಾನುಗ್ರಹಾಭ್ಯಾಂ ಮಹತಾ ಪ್ರಯತ್ನೇನ ಮಂತ್ರಾರ್ಥಸ್ಯ ಪ್ರಕಾಶಿತತ್ವಾತ್, ತತ್ಕೃತ-ಮಹೋಪಕಾರಸ್ಮರಣಾರ್ಥಂ ತನ್ನಾಮಲೇಖನಂ ಪ್ರತಿಮಂತ್ರಸ್ಯೋಪರಿ ಕರ್ತುಂ ಯೋಗ್ಯಮಸ್ತ್ಯತಃ.

ಪ್ರಶ್ನೆ_ ಪ್ರತ್ಯೇಕ ಮಂತ್ರದ ಮೇಲೆ **ಋಷಿ, ದೇವತಾ, ಛಂದ,** ಮತ್ತು **ಸ್ವರ** ಏತಕ್ಕಾಗಿ ಬರೆಯಲ್ಪಡುತ್ತವೆ?

'ಋಷಿ'ಯ ಉಲ್ಲೇಖಕ್ಕೆ ಕಾರಣ!

ಉತ್ತರ_ ಏಕೆಂದರೆ, ಈಶ್ವರನಿಂದ ವೇದಗಳು ಹೇಳಲ್ಪಟ್ಟ ನಂತರ, ಯಾವ ಯಾವ ಋಷಿಯಿಂದ ಯಾವ ಯಾವ ಮಂತ್ರದ ಅರ್ಥವು ಸರಿ ಸರಿಯಾಗಿ ತಿಳಿಯಲಾಯಿತೋ, ಅದರದರ ಮೇಲೆ ಆಯಾ ಋಷಿಯ ಹೆಸರಿನ ಉಲ್ಲೇಖವು ಮಾಡಲಾಗಿದೆ!

ಅಂದರೆ, ಈಶ್ವರನು ಆದಿಸೃಷ್ಟಿಯಲ್ಲಿ ಯಾವಾಗ ವೇದಗಳ ಪ್ರಕಾಶ ಮಾಡಿಬಿಟ್ಟನೋ, ಆಗಿನಿಂದಲೇ ಪ್ರಾಚೀನ ಋಷಿಗಳು ವೇದಮಂತ್ರಗಳ ಅರ್ಥಗಳ ವಿಚಾರ ಮಾಡತೊಡಗಿದರು!

ನಂತರ, ಅವರುಗಳಲ್ಲಿ ಯಾವ ಯಾವ ಮಂತ್ರದ ಅರ್ಥವನ್ನು ಯಾವ ಯಾವ ಋಷಿಯು ಪ್ರಕಾಶಗೊಳಿಸಿದನೋ, ಅವನವನ ಹೆಸರು ಅದೇ ಮಂತ್ರದೊಡನೆ ಸ್ಮರಣೆಗಾಗಿ ಬರೆಯಲಾಗಿರುತ್ತದೆ!

ಈ ಕಾರಣದಿಂದಲೇ, ಅವರಿಗೆ **'ಋಷಿ'**, ಎಂಬ ಹೆಸರೂ ಕೂಡ, ಬಂದಿದೆ.

ಏಕೆಂದರೆ_

ಯಾರಿಂದ **ಈಶ್ವರನ ಧ್ಯಾನ, ಹಾಗೂ ಅನುಗ್ರಹದ ಮೂಲಕ*** ದೊಡ್ಡ ಪ್ರಯತ್ನದಿಂದ ಮಂತ್ರಗಳ ಅರ್ಥದ ಪ್ರಕಾಶ ಮಾಡಲಾಯಿತೋ, ಅದರಿಂದ, ಅವರು ಮಾಡಿದ ಮಹೋಪಕಾರದ ಸ್ಮರಣೆಗಾಗಿ, ಪ್ರತಿಯೊಂದು ಮಂತ್ರದ ಮೇಲೆ ಅವರ ಹೆಸರನ್ನು ಬರೆಯುವುದು ಉಚಿತವಾಗಿದೆ!

---

* ವೇದಾರ್ಥಕ್ಕೆ ಈಶ್ವರನ ಧ್ಯಾನ ಮತ್ತು ಅನುಗ್ರಹ ಆವಶ್ಯಕ, ಎಂದು ಮಹರ್ಷಿ ದಯಾನಂದರ ಅನುಭವ. ಇದರಿಂದ, ವೇದಗಳ ಅಪೌರುಷೇಯತ್ವದ ಸಿದ್ಧಿಯೂ, ಹಾಗೂ ವೇದವ್ಯಾಖ್ಯಾಕಾರನು **ವೇದೋಕ್ತಈಶ್ವರನ ಉಪಾಸಕನೂ** ಆಗಿರಬೇಕು, ಎಂದೂ ಪ್ರತಿಪಾದಿತವಾಗುತ್ತದೆ. ಈ ಯೋಗ್ಯತೆಯು ಇಲ್ಲದವರ ವೇದಭಾಷ್ಯವು ಅವರಂತೆಯೇ ಇರುತ್ತದೆ _ಅನು.

ಅಂದರೆ, ಅವರು **ಈಶ್ವರನ ಧ್ಯಾನ, ಮತ್ತು ಅನುಗ್ರಹದಿಂದ,** ದೊಡ್ಡ ದೊಡ್ಡ ಪ್ರಯತ್ನದೊಡನೆ ವೇದಮಂತ್ರಗಳ ಅರ್ಥಗಳನ್ನು ಸರಿ ಸರಿಯಾಗಿ ತಿಳಿದು ಕೊಂಡು, ಸಮಸ್ತ ಮನುಷ್ಯರಿಗೂ ಪೂರ್ಣ ಉಪಕಾರ ವನ್ನು ಮಾಡಿದ್ದಾರೆ.

ಆದುದರಿಂದ, ವಿದ್ವಾಂಸರು ವೇದಮಂತ್ರ ಗಳೊಡನೆ ಅವರ ಸ್ಮರಣೆ ಮಾಡುತ್ತಾರೆ!

ಅತ್ರ ಪ್ರಮಾಣಮ್_

ಇಲ್ಲಿ ಪ್ರಮಾಣವೇನೆಂದರೆ_

ಅಂದರೆ, ಈ ವಿಷಯದಲ್ಲಿ ಅರ್ಥಸಹಿತವಾಗಿ ಪ್ರಮಾಣವನ್ನು ಬರೆಯುತ್ತೇವೆ. ಏನೆಂದರೆ_

ನಿರುಕ್ತದ ಆವಶ್ಯಕತೆ!

"ಯೋ ವಾಚಂ ಶ್ರುತವಾನ್ ಭವತ್ಯಫಲಾಮಪುಷ್ಪಾಮಿತಿ । ಅಫಲಾಸ್ಮಾ ಅಪುಷ್ಪಾ ವಾಗ್ಭವತೀತಿ ವಾ । ಕಿಂಚಿತ್ ಪುಷ್ಪಫಲೇತಿ ವಾ ।

[ಅರ್ಥ:_ "ಯಾವನು ವಾಣಿಯನ್ನು ಫಲರಹಿತವನ್ನಾಗಿಯೂ, ಹಾಗೂ ಪುಷ್ಪರಹಿತ ವನ್ನಾಗಿಯೂ ಆಲಿಸಿರುತ್ತಾನೋ, ಅವನಿಗೆ ವಾಣಿಯು ಫಲರಹಿತವಾಗಿಯೂ, ಹಾಗೂ ಪುಷ್ಪರಹಿತವಾಗಿಯೂ ಇರುತ್ತದೆ. ಅಥವಾ ಸ್ವಲ್ಪ ಪುಷ್ಪ-ಫಲಗಳಿಂದ ಕೂಡಿರುತ್ತದೆ.

"ಅರ್ಥಂ ವಾಚಃ ಪುಷ್ಪಫಲಮಾಹ । ಯಾಜ್ಞದೈವತೇ ಪುಷ್ಪಫಲೇ । ದೇವತಾಧ್ಯಾತ್ಮೇ ವಾ ।

[ಅರ್ಥ:_ "ಅರ್ಥವನ್ನು ವಾಣಿಯ ಪುಷ್ಪ ಮತ್ತು ಫಲ, ಎಂದು ಹೇಳಲಾಗಿದೆ. ಯಜ್ಞವಿಷಯಕವಾದುದು ಪುಷ್ಪವಾಗಿಯೂ ಮತ್ತು ದೇವತಾವಿಷಯಕವಾದುದು ಫಲವಾಗಿಯೂ ಇರುತ್ತದೆ. ಅಥವಾ ದೇವತಾ-ಅಧ್ಯಾತ್ಮಗಳು [ಪುಷ್ಪ-ಫಲವಾಗಿರುತ್ತವೆ.]

"ಸಾಕ್ಷಾತ್ಕೃತಧರ್ಮಾಣ ಋಷಯೋ ಬಭೂವುಃ । ತೇಽವರೇಭ್ಯೋಽ-ಸಾಕ್ಷಾತ್ಕೃತಧರ್ಮಭ್ಯ ಉಪದೇಶೇನ ಮಂತ್ರಾನ್ ಸಂಪ್ರಾದುಃ ।

[ಅರ್ಥ:_ "ಧರ್ಮವನ್ನು * ಸಾಕ್ಷಾತ್ಕರಿಸಿಕೊಂಡ ಋಷಿಗಳಿದ್ದರು. ಅವರು ಕಿರಿಯರಿಗೆ, ಎಂದರೆ ಧರ್ಮವನ್ನು ಸಾಕ್ಷಾತ್ಕರಿಸಿಕೊಳ್ಳದವರಿಗೆ ಉಪದೇಶದ ಮೂಲಕ ಮಂತ್ರಗಳನ್ನು ಕೊಟ್ಟರು.**

* ಎಂದರೆ, ಈಶ್ವರನನ್ನು, ಅಥವಾ ವೇದವನ್ನು _ಅನು.

** ಅರ್ಥದೊಡನೆ ಉಪದೇಶಿಸಿದರು, ಎಂದರ್ಥ _ಅನು.

"ಉಪದೇಶಾಯ ಗ್ಲಾಯಂತೋಽವರೇ ಬಿಲ್ಮಗ್ರಹಣಾಯೇಮಂ ಗ್ರಂಥಂ ಸಮಾಮ್ನಾಸಿಷುಃ । ವೇದಂ ಚ ವೇದಾಂಗಾನಿ ಚ ।

[ಅರ್ಥ:_ ಉಪದೇಶ[ಗ್ರಹಣ]ಕ್ಕೆ ಅಸಮರ್ಥರಾದ [ಇತರ] ಕಿರಿಯರು ಸ್ಫುಟಗ್ರಹಣೆಗಾಗಿ ಈ ಗ್ರಂಥವನ್ನು* ಅಭ್ಯಸಿಸಿದರು. ವೇದವನ್ನೂ ಮತ್ತು ವೇದಾಂಗಗಳನ್ನೂ, ಕೂಡ!

"ಬಿಲ್ಮಂ ಭಿಲ್ಮಂ ಭಾಸನಮಿತಿ ವಾ ।

[ಅರ್ಥ:_ 'ಬಿಲ್ಮ', ಎಂದರೆ 'ಭಿಲ್ಮ'; ಅಥವಾ ಪ್ರಕಾಶಿಸುವುದು, [ಎಂದರ್ಥ.]

ನಿಘಂಟುವಿನ ಆವಶ್ಯಕತೆ!

"ಏತಾವಂತಃ ಸಮಾನಕರ್ಮಾಣೋ ಧಾತವಃ ।

[ಅರ್ಥ:_ "ಇಷ್ಟು, ಸಮಾನವಾದ ಅರ್ಥವುಳ್ಳ ಧಾತುಗಳಿವೆ.

"ಧಾತುರ್ದಧಾತೇಃ ।

[ಅರ್ಥ:_ "ಧಾರಣ ಮಾಡುತ್ತದೆಯಾದುದರಿಂದ ಧಾತು.

"ಏತಾವಂತ್ಯಸ್ಯ ಸತ್ತ್ವಸ್ಯ ನಾಮಧೇಯಾನಿ ।

[ಅರ್ಥ:_ "ಇಷ್ಟು, ಈ ಪದಾರ್ಥಗಳ ಹೆಸರುಗಳಾಗಿವೆ.

"ಏತಾವತಾಮರ್ಥಾನಾಮಭಿಧಾನಮ್ ।

[ಅರ್ಥ:_ "ಇಷ್ಟು ಅರ್ಥಗಳ ವಾಚಕವಾಗಿದೆ.

"ನೈಘಂಟುಕಮಿದಂ ದೇವತಾನಾಮ ।

[ಅರ್ಥ:_ "ದೇವತಾ, ಎಂಬ ಸಂಜ್ಞೆಯು ಈ ನಿಘಂಟುವಿಗೆ ಸಂಬಂಧವಾದುದಾಗಿದೆ.

"ಪ್ರಾಧಾನ್ಯೇದಮಿತಿ ।

[ಅರ್ಥ:_ "ಇದು ಪ್ರಧಾನದಿಂದ ಕೂಡಿದೆ.

"ತದ್ಯದನ್ಯದೈವತೇ ಮಂತ್ರೇ ನಿಪತತಿ ನೈಘಂಟುಕಂ ತತ್ ॥"

[ನಿರುಕ್ತೇ ಅ. ೧, ಖಂ. ೨೦]

[ಅರ್ಥ:_ "ಆದುದರಿಂದ, ಯಾವುದು ಇತರ ದೇವತೆಯ ಸಂಬಂಧದ ಮಂತ್ರದಲ್ಲಿ ಅನ್ವಯಿಸುತ್ತದೋ, ಅದು ನಿಘಂಟುವಿಗೆ ಸಂಬಂಧಿಸಿದುದು ಆಗಿರುತ್ತದೆ."

(ನಿರುಕ್ತ: ೧. ೨೦)]

* ಎಂದರೆ, ನಿರುಕ್ತವನ್ನು _ಅನು.

ಅರ್ಥವನ್ನು ತಿಳಿಯುವ ಆವಶ್ಯಕತೆ!

ಭಾಷ್ಯಮ್_

(ಯೋ ವಾಚಂ.) ಯೋ ಮನುಷ್ಯೋಽರ್ಥ-ವಿಜ್ಞಾನೇನ ವಿನಾ ಶ್ರವಣಾಧ್ಯಯನೇ ಕರೋತಿ, ತದಫಲಂ ಭವತಿ.

ಭಾಷ್ಯ_

(ಯೋ ವಾಚಂ.) ಯಾವ ಮನುಷ್ಯನು ಅರ್ಥದ ತಿಳಿವಳಿಕೆಯಲ್ಲದೇ, ಶ್ರವಣವನ್ನೂ, ಹಾಗೂ ಅಧ್ಯಯನ ವನ್ನೂ ಮಾಡುತ್ತಾನೋ, ಅದು ನಿಷ್ಫಲವಾಗುತ್ತದೆ!

ಅಂದರೆ, ಯಾವ ಮನುಷ್ಯರು ಅರ್ಥವನ್ನು ತಿಳಿಯದೆಯೇ, ಅಧ್ಯಯನವನ್ನೋ ಅಥವಾ ಶ್ರವಣ ವನ್ನೋ ಮಾಡುತ್ತಾರೋ, ಅವರ ಪರಿಶ್ರಮವೆಲ್ಲಾ ವ್ಯರ್ಥವಾಗುತ್ತದೆ!

(೭) ವಾಣಿಯ ಫಲ ಯಾವುದು?

ಪ್ರಶ್ನಃ_ ವಾಚೋ ವಾಣ್ಯಾಃ ಕಿಂ ಫಲಂ ಭವತೀತಿ?

ಉತ್ತರಮ್_ ಅತ್ರಾಹ_

ವಿಜ್ಞಾನಂ ತಥಾ ತಜ್‌ಜ್ಞಾನಾನುಸಾರೇಣ ಕರ್ಮಾನುಷ್ಠಾನಮ್.

ಯ ಏವಂ ಜ್ಞಾತ್ವಾ ಕುರ್ವಂತಿ, ತ ಋಷಯೋ ಭವಂತಿ.

ಪ್ರಶ್ನೆ_ ವಾಣಿಯ ಫಲವು ಯಾವುದಾಗಿ ಇರುತ್ತದೆ?

ಉತ್ತರ_ ಈ ವಿಷಯದಲ್ಲಿ ಹೇಳಲಾಗಿದೆಯೇ ನೆಂದರೆ_

ವಿಶೇಷವಾದ ಜ್ಞಾನ; ಮತ್ತು ಆ **ಜ್ಞಾನಕ್ಕೆ** ಅನುಸಾರವಾಗಿ ಕರ್ಮದ ಆಚರಣೆ!

ಅಂದರೆ, ಅರ್ಥವನ್ನು ಸರಿ ಸರಿಯಾಗಿ ತಿಳಿದು ಕೊಂಡು, ಅದಕ್ಕೆ ಅನುಸಾರವಾಗಿಯೇ ವ್ಯವಹಾರಗಳಲ್ಲಿ ಪ್ರವೃತ್ತರಾಗುವುದು ವಾಣಿಯ ಫಲವಾಗಿರುತ್ತದೆ.

ಯಾರು ಹೀಗೆ ತಿಳಿದುಕೊಂಡು, ಆಚರಿಸು ತ್ತಾರೋ, ಅವರು '**ಋಷಿ**'ಗಳಾಗುತ್ತಾರೆ!

(೮) 'ಋಷಿ'ಗಳು ಎಂತಹವರಾಗಿದ್ದರು?

ಪ್ರಶ್ನಃ_ ಕೀದೃಶಾಸ್ತೇ?

ಉತ್ತರಮ್_ ಸಾಕ್ಷಾತ್‌ಕೃತಧರ್ಮಾಣಃ!

ಪ್ರಶ್ನೆ_ ಅವರು ಯಾವ ತರಹದವರಾಗಿದ್ದರು?

ಉತ್ತರ_ ಧರ್ಮವನ್ನು ಸಾಕ್ಷಾತ್ಕರಿಸಿಕೊಂಡಂತಹವ ರಾಗಿದ್ದರು!

ಅಂದರೆ, ಯಾರು ಈ ನಿಯಮಕ್ಕನುಸಾರವಾಗಿ ನಡೆಯುತ್ತಾರೋ, ಅವರು **ಸಾಕ್ಷಾತ್ ಧರ್ಮಾತ್ಮರು,** ಎಂದರೆ '**ಋಷಿ**', ಎಂದು ಕರೆಯಲ್ಪಡುತ್ತಾರೆ!

ಯೈಃ ಸರ್ವಾ ವಿದ್ಯಾ ವಿದಿತಾಸ್ತ ಋಷಯೋ ಬಭೂವುಃ.

ಯಾರಿಂದ ಸಮಸ್ತ ವಿದ್ಯೆಗಳೂ ತಿಳಿಯಲ್ಪಟ್ಟವೋ, ಅವರು '**ಋಷಿ**'ಗಳಾಗಿ ಹೋದರು!

ಅಂದರೆ, ಯಾರು ಎಲ್ಲಾ ವಿದ್ಯೆಗಳನ್ನೂ ಯಥಾವತ್ತಾಗಿ ತಿಳಿದುಕೊಂಡಿದ್ದರೋ, ಅವರೇ '**ಋಷಿ**'ಗಳಾಗಿದ್ದರು.

ಋಷಿಗಳಿಂದ ಮಂತ್ರಾರ್ಥದ ಉಪದೇಶ!

ತೇಽಅವರೇಭ್ಯೋಽಸಾಕ್ಷಾತ್ಕೃತವೇದೇಭ್ಯೋ ಮನುಷ್ಯೇಭ್ಯಃ ಉಪದೇಶೇನ ಮಂತ್ರಾನ್ ಸಂಪ್ರಾದುಃ ಮಂತ್ರಾರ್ಥಾಂಶ್ಚ ಪ್ರಕಾಶಿತವಂತಃ.

ಅವರು (**ಅವರೇಭ್ಯಃ**) ಕಿರಿಯರಾದ, ಎಂದರೆ ವೇದಗಳನ್ನು ಸಾಕ್ಷಾತ್ಕರಿಸಿಕೊಳ್ಳದ ಮನುಷ್ಯರಿಗೆ ಉಪದೇಶದ ಮೂಲಕ (**ಮಂತ್ರಾನ್ ಸಂಪ್ರಾದುಃ**) ಮಂತ್ರಗಳನ್ನು ಕೊಟ್ಟರು ಮತ್ತು ಮಂತ್ರಗಳ ಅರ್ಥಗಳನ್ನೂ ಪ್ರಕಾಶಿಸಿದರು!

ಅಂದರೆ, ಅವರು ತಮ್ಮ ಉಪದೇಶದಿಂದ '**ಅವರ**', ಎಂದರೆ ಅಲ್ಪಬುದ್ಧಿಯುಳ್ಳ ಮನುಷ್ಯರಿಗೆ ವೇದಮಂತ್ರಗಳ ಅರ್ಥಗಳ ಪ್ರಕಾಶವನ್ನು ಮಾಡಿದ್ದಾರೆ!

(೯) ಯಾವ ಪ್ರಯೋಜನಕ್ಕಾಗಿ ಮಂತ್ರೋಪದೇಶ?

ಪ್ರಶ್ನಃ_ ಕಸ್ಮೈ ಪ್ರಯೋಜನಾಯ?

ಉತ್ತರಮ್_ ಉತ್ತರೋತ್ತರಂ ವೇದಾರ್ಥ-ಪ್ರಚಾರಾಯ.

ಪ್ರಶ್ನೆ_ ಯಾವ ಪ್ರಯೋಜನಕ್ಕಾಗಿ?

ಉತ್ತರ_ ಉತ್ತರೋತ್ತರ ವೇದಾರ್ಥದ ಪ್ರಚಾರಕ್ಕಾಗಿ!

ಅಂದರೆ, ವೇದಪ್ರಚಾರದ ಪರಂಪರೆಯನ್ನು ಸ್ಥಿರವಾಗಿಡುವುದಕ್ಕಾಗಿ!

ಏವಂ ಯೇನ ಯೇನರ್ಷಿಣಾ ಯಸ್ಯ ಯಸ್ಯ ಮಂತ್ರಸ್ಯಾರ್ಥಃ ಕೃತೋಽಸ್ತಿ, ತಸ್ಯ ತಸ್ಯ ಋಷೇರೇಕೈಕ-ಮಂತ್ರಸ್ಯ ಸಂಬಂಧೇ ನಾಮೋಲ್ಲೇಖಃ ಕೃತೋಽಸ್ತಿ.

ಹೀಗೆ, ಯಾವ ಯಾವ ಋಷಿಯಿಂದ ಯಾವ ಯಾವ ಮಂತ್ರದ ಅರ್ಥವು ಮಾಡಲ್ಪಟ್ಟಿದೆಯೋ, ಆ ಒಂದೊಂದು ಮಂತ್ರದ ಸಂಬಂಧದಲ್ಲಿ ಆಯಾ ಋಷಿಯ ಹೆಸರಿನ ಉಲ್ಲೇಖವು ಮಾಡಲಾಗಿರುತ್ತದೆ.

ಅತೋ ನೈವ ಕಶ್ಚಿನ್ಮನುಷ್ಯೋ ಮಂತ್ರ-ನಿರ್ಮಾತೇತಿ ವಿಜ್ಞೇಯಮ್.

ಆದುದರಿಂದ, ಯಾವ ಮನುಷ್ಯನೂ ಮಂತ್ರಗಳ ರಚನಾಕಾರನಲ್ಲವೇ ಅಲ್ಲ, ಎಂದು ತಿಳಿಯಬೇಕು!

ಯೇ ಚಾವರೇಽಧ್ಯಯನಾಯೋಪದೇಶಾಯ ಚ ಗ್ಲಾಯಂತಿ ;

ಮತ್ತು ಯಾವ (**ಅವರೇ**) ಕಿರಿಯರು ಅಧ್ಯಯನಕ್ಕಾಗಿ, ಹಾಗೂ ಉಪದೇಶ[ಗ್ರಹಣ]ಕ್ಕಾಗಿ ಆಯಾಸ ಪಡುತ್ತಾರೋ ;

ತಾನ್ ವೇದಾರ್ಥವಿಜ್ಞಾಪನಾಯೇಮಂ ನೈಘಂಟುಕಂ ನಿರುಕ್ತಾಖ್ಯಂ ಗ್ರಂಥಂ ತ ಋಷಯಃ ಸಮಾಮ್ನಾಸಿಷುಃ ಸಮ್ಯಗಭ್ಯಾಸಂ ಕಾರಿತವಂತಃ, ಯೇನ ವೇದಂ ವೇದಾಂಗಾನಿ [ಚ] ಯಥಾರ್ಥವಿಜ್ಞಾನತಯಾ ಸರ್ವೇ ಮನುಷ್ಯಾ ಜಾನೀಯುಃ.

ಅವರಿಗೆ ವೇದಾರ್ಥವನ್ನು ತಿಳಿಸುವುದಕ್ಕಾಗಿ ಈ **ನೈಘಂಟುಕ**, ಎಂದರೆ **ನಿಘಂಟು**ವಿನಿಂದ ಕೂಡಿದ **ನಿರುಕ್ತ***, ಎಂಬ ಹೆಸರಿನ ಗ್ರಂಥವನ್ನು ಆ ಋಷಿಗಳು ; ಇದರಿಂದ ಮನುಷ್ಯರೆಲ್ಲರೂ ವೇದವನ್ನೂ, ಮತ್ತು ವೇದಾಂಗಗಳನ್ನೂ ಯಥಾರ್ಥವಿಜ್ಞಾನಪೂರ್ವಕವಾಗಿ ತಿಳಿಯಲಿ, ಎಂದು; **(ಸಮಾಮ್ನಾಸಿಷುಃ)** ಚೆನ್ನಾಗಿ ಅಭ್ಯಾಸ ಮಾಡಿಸಿದರು!

ಅಂದರೆ, ಯಾರು ವೇದಶಾಸ್ತ್ರಾದಿಗಳನ್ನು ಓದುವುದರಲ್ಲಿ ಅಲ್ಪಸಮರ್ಥರಾಗಿದ್ದರೋ, ಅವರು ಸುಗಮವಾಗಿ ವೇದಾರ್ಥಗಳನ್ನು ತಿಳಿದುಕೊಳ್ಳಲಿ, ಮತ್ತು ಮನುಷ್ಯರೆಲ್ಲರೂ ಕೂಡ, ವೇದ ಮತ್ತು ವೇದಾಂಗ ಗಳನ್ನು ಇವುಗಳ ಸಹಾಯದಿಂದ, ಜ್ಞಾನಪೂರ್ವಕವಾಗಿ ಓದಿ, ಅವುಗಳ ಸತ್ಯ ಅರ್ಥಗಳ ಪ್ರಕಾಶ ಮಾಡಲಿ, ಎಂದು; [ಅವರು**] **ನಿಘಂಟು** ಮತ್ತು **ನಿರುಕ್ತ** ಮೊದಲಾದ ಗ್ರಂಥಗಳನ್ನು ರಚಿಸಿದರು!

ನಿಘಂಟು-ನಿರುಕ್ತದ ಲಕ್ಷಣ; ಪರಿಭಾಷೆ!

[ಯಾವುದರಲ್ಲಿ _]

ಯೇ ಸಮಾನಾರ್ಥಾಃ ಸಮಾನಕರ್ಮಾಣೋ ಧಾತವೋ ಭವಂತಿ ;

ಯಾವುವು ಸಮಾನವಾದ ಅರ್ಥಗಳನ್ನುಳ್ಳವೂ, ಹಾಗೂ ಸಮಾನ ಕ್ರಿಯೆಗಳನ್ನುಳ್ಳವೂ ಆದ ಧಾತು ಗಳಾಗಿರುತ್ತವೋ ;

ತದರ್ಥಪ್ರಕಾಶೋ ಯತ್ರ ಕ್ರಿಯತೇ ;

ಅವುಗಳ ಅರ್ಥಗಳ ಪ್ರಕಾಶವು ಎಲ್ಲಿ ಮಾಡಲ್ಪಡುತ್ತದೋ ;

ಅಸ್ಯಾರ್ಥಸ್ಯೈತಾವಂತಿ ನಾಮಧೇಯಾನಿ ;

ಈ ಅರ್ಥಕ್ಕೆ ಇಷ್ಟು ಹೆಸರು+ಗಳಿರುತ್ತವೋ ;

ಏತಾವತಾಮರ್ಥಾನಾಮಿದಮಭಿಧಾನಾರ್ಥಮೇಕಂ ನಾಮ ;

ಇಷ್ಟು ಅರ್ಥಗಳ ನಿರೂಪಣೆಗಾಗಿ ಕೇವಲ ಈ ಒಂದು ಹೆಸರು++ ಇರುತ್ತದೋ ;

ಅರ್ಥಾದೇಕಸ್ಯಾರ್ಥಸ್ಯಾನೇಕಾನಿ ನಾಮಾನಿ ; ಅನೇಕೇಷಾಮೇಕಂ ನಾಮೇತಿ ;

ಎಂದರೆ, ಒಂದು ಅರ್ಥಕ್ಕೆ ಅನೇಕ ಹೆಸರು ಗಳೂ; ಮತ್ತು ಅನೇಕ [ಅರ್ಥ]ಗಳಿಗೆ ಒಂದು ಹೆಸರೂ ಇರುತ್ತದೋ ;

---

* ನಿಘಂಟುವಿನ ವ್ಯಾಖ್ಯಾಗ್ರಂಥ _ಅನು.

** ಎಂದರೆ, ಋಷಿಗಳು _ಅನು.

\+ ಎಂದರೆ, ಪರ್ಯಾಯ ಶಬ್ದಗಳು _ಅನು.

++ ಎಂದರೆ, ಸಂಜ್ಞಾಪದ _ಅನು.

ತನ್ನೈಘಂಟುಕಂ ವ್ಯಾಖ್ಯಾನಂ ವಿಜ್ಞೇಯಮ್.

ಅದನ್ನು ನಿಘಂಟುವಿನ ವ್ಯಾಖ್ಯಾನ,* ಎಂದು ತಿಳಿಯಬೇಕು!

ಅಂದರೆ, ಯಾವುದರಲ್ಲಿ ಸಮಾನವಾದ ಅರ್ಥ ಮತ್ತು ಸಮಾನ ಕ್ರಿಯೆಯನ್ನುಳ್ಳ ಧಾತುಗಳ ಉಲ್ಲೇಖ ಇರುತ್ತದೋ;

ಒಂದು ಪದಾರ್ಥಕ್ಕೆ ಅನೇಕ ಹೆಸರುಗಳೂ;

ಮತ್ತು ಅನೇಕ ಅರ್ಥಗಳನ್ನು ಒಂದು ಹೆಸರಿನಿಂದಲೂ ಪ್ರಕಾಶಮಾಡಲಾಗುತ್ತದೋ ;

ಅದಕ್ಕೆ 'ನಿಘಂಟು', ಎಂದು ಹೆಸರು.

ಯಚ್ಚ ಮಂತ್ರಾದ್ ಭಿನ್ನಾರ್ಥಸ್ಯೈವ ಸಂಕೇತಃ ಪ್ರಕಾಶ್ಯತೇ, ತದಪಿ ನೈಘಂಟುಕಂ ವ್ಯಾಖ್ಯಾನಮಿತಿ.

ಮತ್ತು ಯಾವ ಮಂತ್ರಕ್ಕೆ ಭಿನ್ನವಾದ ಅರ್ಥದ ಸಂಕೇತವು ಪ್ರಕಾಶಿಸಲಾಗುತ್ತದೋ, ಅದನ್ನೂ ಕೂಡ, ನಿಘಂಟುವಿನ ವ್ಯಾಖ್ಯಾನ, ಎಂದು [ತಿಳಿಯಬೇಕು!]

ಅಂದರೆ, ಯಾವುದರಲ್ಲಿ ಸಮಾನಕ್ರಿಯೆಯನ್ನುಳ್ಳ ಧಾತುಗಳ ವ್ಯಾಖ್ಯಾನವಿರುತ್ತದೋ ;

ಮಂತ್ರಗಳಿಂದ ಭಿನ್ನ [ಭಿನ್ನ] ಅರ್ಥಗಳ ಸಂಕೇತವಿರುತ್ತದೋ, ಮತ್ತು ವೇದಮಂತ್ರಗಳ ವ್ಯಾಖ್ಯಾನವಿರುತ್ತದೋ, ಅದಕ್ಕೆ 'ನಿರುಕ್ತ', ಎಂದು ಹೆಸರು.

'ದೇವತಾ'ಶಬ್ದದ ಅರ್ಥ_ ವಿಷಯ!

ಯತ್ರಾರ್ಥಾನಾಂ ದ್ಯೋತ್ಯಾನಾಂ ಪದಾರ್ಥಾನಾಂ ಪ್ರಾಧಾನ್ಯೇನ ಸ್ತುತಿಃ ಕ್ರಿಯತೇ, ತತ್ರ ಸೈವೇಯಂ ಮಂತ್ರಮಯೀ ದೇವತಾ ವಿಜ್ಞೇಯಾ.

ಎಲ್ಲಿ ಅರ್ಥಗಳ ಪ್ರಕಾಶಕವಾದ ಪದಾರ್ಥಗಳ ವರ್ಣನೆಯು ಮುಖ್ಯತೆಯಿಂದ ಮಾಡಲ್ಪಡುತ್ತದೋ, ಅಲ್ಲಿ ಅದೇ, **ಮಂತ್ರಮಯವಾದ ದೇವತೆ**ಯಾಗಿ ಇರುತ್ತದೆ, ಎಂದು ತಿಳಿಯಬೇಕು!

ಅಂದರೆ, ಯಾವ ಯಾವ ಮಂತ್ರಗಳಲ್ಲಿ ಯಾವ ಯಾವ ಪದಾರ್ಥಗಳ ವರ್ಣನೆಯು ಪ್ರಧಾನವಾಗಿ ಮಾಡಲ್ಪಟ್ಟಿರುತ್ತದೋ, [ಅವುಗಳನ್ನು] ಅವುಗಳ **ಮಂತ್ರಮಯದೇವತೆ**, ಎಂದು ತಿಳಿಯಬೇಕು!

---

* ಎಂದರೆ, **ನಿರುಕ್ತಗ್ರಂಥ! ನಿಘಂಟುಭಾಗ** ಮತ್ತು **ನಿರುಕ್ತಭಾಗ** ಎರಡೂ ಕೂಡಿರುವ ಗ್ರಂಥವು **'ನಿರುಕ್ತ'**, ಎಂದು ಗ್ರಂಥಕರ್ತರ ಅಭಿಪ್ರಾಯ. ಸಂಪ್ರತಿ ಈ ಎರಡು ಭಾಗಗಳೂ ಬೇರೆ-ಬೇರೆಯಾಗಿಯೂ ಸಿಗುತ್ತವೆ _ಅನು.

ತಥಾ ಯಸ್ಯ ಯಸ್ಯ ಮಂತ್ರಸ್ಯ ಯೋ ಯೋಽರ್ಥೋಽಸ್ತಿ, ಸ ಸೋಽರ್ಥಸ್ತಸ್ಯ ತಸ್ಯ ದೇವತಾ-ಶಬ್ದೇನಾಭಿಪ್ರಾಯಾರ್ಥವಿಜ್ಞಾಪನಾರ್ಥಂ ಪ್ರಕಾಶ್ಯತೇ.

ಹಾಗೆಯೇ, ಯಾವ ಯಾವ ಮಂತ್ರದ ಯಾವ ಯಾವ ಅರ್ಥವಿದೆಯೋ, ಆ ಆ ಅರ್ಥವು ಆಯಾ ದೇವತಾಶಬ್ದದಿಂದ, ಅಭಿಪ್ರಾಯದ ಅರ್ಥವನ್ನು ತಿಳಿಸುವ ಪ್ರಯೋಜನಕ್ಕಾಗಿ ತೋರಿಸಲಾಗಿರುತ್ತದೆ!

ಅಂದರೆ, ಯಾವ ಯಾವ ಮಂತ್ರದ ಯಾವ ಯಾವ ಅರ್ಥವಿರುತ್ತದೋ, ಅದೇ ಅದರ **'ದೇವತಾ'**, ಎಂದು ಕರೆಯಲ್ಪಡುತ್ತದೆ. ಇದು ಏಕೆಂದರೆ, ಇದರಿಂದ, ಮಂತ್ರಗಳನ್ನು ನೋಡಿ, ಅವುಗಳ ಅಭಿಪ್ರಾಯಾರ್ಥದ ಯಥಾರ್ಥ ಜ್ಞಾನ ಉಂಟಾಗಲಿ, ಎಂಬುದಾಗಿರುತ್ತದೆ.

ಏತದರ್ಥಂ ದೇವತಾಶಬ್ದಲೇಖನಂ ಕೃತಮ್.

ಈ ಪ್ರಯೋಜನಕ್ಕಾಗಿ ದೇವತಾಶಬ್ದದ ಲೇಖನವು ಮಾಡಲ್ಪಟ್ಟಿದೆ.

ಅಂದರೆ, ಈ ಮೊದಲಾದ ಪ್ರಯೋಜನಕ್ಕಾಗಿ **'ದೇವತಾ'*** ಶಬ್ದವನ್ನು ಮಂತ್ರದ ಜೊತೆಗೆ ಬರೆಯಲಾಗುತ್ತದೆ.

ಛಂದಸ್ಸಿನ ಉಲ್ಲೇಖದ ಆವಶ್ಯಕತೆ!

ಏವಂ ಚ ಯಸ್ಯ ಯಸ್ಯ ಮಂತ್ರಸ್ಯ ಗಾಯತ್ರ್ಯಾದಿ-ಛಂದೋಽಸ್ತಿ, ತತ್ತದ್ವಿಜ್ಞಾನಾರ್ಥಂ ಛಂದೋ ಲೇಖನಮ್.

ಮತ್ತು ಹೀಗೆಯೇ, ಯಾವ ಯಾವ ಮಂತ್ರದ **ಛಂದಸ್ಸು**, **ಗಾಯತ್ರೀ** ಮೊದಲಾದುದು ಆಗಿರುತ್ತದೋ, ಅದದನ್ನು ತಿಳಿಯುವುದಕ್ಕಾಗಿ ಛಂದಸ್ಸನ್ನು ಬರೆಯಲಾಗುತ್ತದೆ.

ಅಂದರೆ, ಯಾವ ಯಾವ ಮಂತ್ರಕ್ಕೆ ಯಾವ ಯಾವ ಛಂದಸ್ಸಿರುತ್ತದೋ, ಅದನ್ನೂ ಕೂಡ, ಅದರೊಡನೆ ಏಕೆ ಬರೆಯಲಾಗುತ್ತದೆಯೆಂದರೆ, ಅವುಗಳಿಂದ ಮನುಷ್ಯರಿಗೆ ಛಂದಸ್ಸುಗಳ ಜ್ಞಾನವೂ ಕೂಡ, ಯಥಾವತ್ತಾಗಿ ಆಗುತ್ತಿರಲಿ, ಎಂದು.

ಸ್ವರಗಳ ಉಲ್ಲೇಖದ ಪ್ರಯೋಜನ!

ತಥಾ ಯಸ್ಯ ಯಸ್ಯ ಮಂತ್ರಸ್ಯ ಯೇನ ಯೇನ ಸ್ವರೇಣ ವಾದಿತ್ರವಾದನಪೂರ್ವಕಂ ಗಾನಂ ಕರ್ತುಂ ಯೋಗ್ಯಮಸ್ತಿ, ತತ್ತದರ್ಥಂ ಷಡ್ಜಾದಿಸ್ವರೋಲ್ಲೇಖನಂ ಕೃತಮಸ್ತೀತಿ ಸರ್ವಮೇತದ್ವಿಜ್ಞೇಯಮ್.

ಹಾಗೆಯೇ, ಯಾವ ಯಾವ ಸ್ವರದಿಂದ ವಾದ್ಯ-ವಾದನಪೂರ್ವಕವಾಗಿ, ಯಾವ ಯಾವ ಮಂತ್ರದ ಗಾನ ಮಾಡಲು ಯೋಗ್ಯವಾಗಿರುತ್ತದೋ, ಆಯಾ ಪ್ರಯೋಜನಕ್ಕಾಗಿ ಷಡ್ಜವೇ ಮೊದಲಾದ ಸ್ವರಗಳ ಉಲ್ಲೇಖವು ಮಾಡಲಾಗಿರುತ್ತದೆ, ಎಂಬುದಾಗಿ, ಇದೆಲ್ಲವನ್ನೂ ತಿಳಿದುಕೊಂಡಿರಬೇಕು.+

* ಎಂದರೆ, ದೇವತೆಯ ಹೆಸರನ್ನು _ಅನು.

+ 'ವೇದಶಿಕ್ಷಣ' ಪ್ರಥಮ ಹಂತ ಪಾಠ-೩ ಪುಟ ೨೮-೫೦ನ್ನು ನೋಡಿ _ಅನು.

ಅಂದರೆ, ಯಾವ ಯಾವ ಛಂದಸ್ಸನ್ನು ಯಾವ ಯಾವ ಸ್ವರದಲ್ಲಿ ಹಾಡಬೇಕು; ಈ ಮಾತನ್ನು ತಿಳಿಸುವುದಕ್ಕಾಗಿ, ಅವುಗಳ ಜೊತೆಯಲ್ಲಿ **ಷಡ್ಜವೇ** ಮೊದಲಾದ ಸ್ವರಗಳು ಬರೆಯಲ್ಪಟ್ಟಿರುತ್ತವೆ.

ಉದಾಹರಣೆಗಾಗಿ_ ಗಾಯತ್ರೀಛಂದಸ್ಸಿನ ಮಂತ್ರಗಳನ್ನು ಷಡ್ಜಸ್ವರದಲ್ಲಿ ಹಾಡಬೇಕು!

ಹೀಗೆಯೇ, ಇನ್ನೂ ಎಲ್ಲವನ್ನೂ ಕೂಡ, ಮನುಷ್ಯರು ಗಾನವಿದ್ಯೆಯಲ್ಲಿ ಪ್ರವೀಣರಾಗಲಿ, ಎಂದು ತೋರಿಸಲಾಗಿದೆ.

ಆದುದರಿಂದ, ವೇದದಲ್ಲಿ ಪ್ರತ್ಯೇಕ ಮಂತ್ರದೊಡನೆ ಅದರ ಷಡ್ಜಾದಿ ಸ್ವರವು ಬರೆಯಲ್ಪಡುತ್ತದೆ.*

(೧೦) ಕ್ರಮವಾಗಿ ಅಗ್ನಿ, ವಾಯು ಮೊದಲಾದುದರ ವರ್ಣನೆಯ ಪ್ರಯೋಜನವೇನು?

ಪ್ರಶ್ನಃ_ ವೇದೇಷ್ವಗ್ನಿವಾಯ್ವಿಂದ್ರಾಶ್ವಿಸರಸ್ವತ್ಯಾದಿ-ಶಬ್ದಾನಾಂ ಕ್ರಮೇಣ ಪಾಠಃ ಕಿಮರ್ಥಃ ಕೃತೋಽಸ್ತಿ?

ಉತ್ತರಮ್_ಪೂರ್ವಾಪರವಿದ್ಯಾವಿಜ್ಞಾಪನಾರ್ಥಂ ವಿದ್ಯಾಸಂಗ್ಯನುಷಂಗಿಪ್ರತಿವಿದ್ಯಾನುಷಂಗಿಬೋಧಾರ್ಥಂ ಚೇತಿ.

ಪ್ರಶ್ನೆ_ ವೇದಗಳಲ್ಲಿ ಕ್ರಮವಾಗಿ **ಅಗ್ನಿ**, **ವಾಯು**, ಇಂದ್ರ, ಅಶ್ವಿ, ಸರಸ್ವತೀ** ಮೊದಲಾದ ಶಬ್ದಗಳ ಪಾಠವು ಏತಕ್ಕಾಗಿ ಮಾಡಲ್ಪಟ್ಟಿದೆ?

ಉತ್ತರ_ ಪೂರ್ವಾಪರ ವಿದ್ಯೆಗಳನ್ನು ತಿಳಿಸುವುದಕ್ಕಾಗಿ; ಮತ್ತು ವಿದ್ಯೆಯ ಸಂಗದ, ಸಂಬಂಧದ, ಹಾಗೂ ಪ್ರತಿಯೊಂದು ವಿದ್ಯೆಯ ಸಂಬಂಧಗಳನ್ನು ತಿಳಿಯುವುದಕ್ಕಾಗಿ!

ಅಂದರೆ, ಯಾವ ಯಾವ ವಿದ್ಯೆಯಲ್ಲಿ ಯಾವ ಯಾವ ಮುಖ್ಯವಾದ ಮತ್ತು ಗೌಣವಾದ ಹೇತುಗಳಿರುತ್ತವೋ, ಅವುಗಳನ್ನು ಪ್ರಕಾಶ ಪಡಿಸುವುದಕ್ಕಾಗಿ ಈಶ್ವರನು **ಅಗ್ನಿ** ಮೊದಲಾದ ಶಬ್ದಗಳ ಪ್ರಯೋಗವನ್ನು ಪೂರ್ವಾಪರ ಸಂಬಂಧದೊಡನೆ ಮಾಡಿದ್ದಾನೆ.

---

* ಸಂಪ್ರತಿ, ಮಹರ್ಷಿದಯಾನಂದರಿಂದ ಸ್ಥಾಪಿತವಾದ **'ವೈದಿಕಯಂತ್ರಾಲಯ'**, **ಅಜಮೇರ್**(ರಾಜಸ್ಥಾನ)ದಲ್ಲಿ ಮುದ್ರಿತವಾದ ವೇದಸಂಹಿತೆಗಳಲ್ಲಿ ಮಾತ್ರ ಷಡ್ಜಾದಿಸ್ವರಗಳ ಉಲ್ಲೇಖವೂ ಕೂಡ, ಉಪಲಬ್ಧವಾಗಿರುತ್ತದೆ _**ಅನು.**

** ಋಗ್ವೇದದ ಪ್ರಥಮ ಮಂಡಲದ ಆರಂಭದ ಸೂಕ್ತಗಳಲ್ಲಿ ಇದೇ ಕ್ರಮವಿದೆ _**ಅನು.**

'ಅಗ್ನಿ'ಯು ಜ್ಞಾನರೂಪವಾದುದರಿಂದ ಪ್ರಥಮ ಗುಣ!

ತದ್ಯಥಾ_

ಅದು ಹೇಗೆಂದರೆ_

'ಅಗ್ನಿ'ಶಬ್ದೇನೇಶ್ವರಭೌತಿಕಾರ್ಥಯೋರ್ಗ್ರಹಣಂ ಭವತಿ.

'ಅಗ್ನಿ', ಎಂಬ ಶಬ್ದದಿಂದ, ಈಶ್ವರನ, ಮತ್ತು ಭೌತಿಕ [ಅಗ್ನಿ]ಯ ಅರ್ಥಗಳ ಸ್ವೀಕಾರವಾಗುತ್ತದೆ.

ಅಂದರೆ, 'ಅಗ್ನಿ' ಶಬ್ದದಿಂದ ಈಶ್ವರ, ಹಾಗೂ ಭೌತಿಕ [ಅಗ್ನಿ] ಮೊದಲಾದ ಎಷ್ಟೋ ಅರ್ಥಗಳ ಗ್ರಹಣವಾಗುತ್ತದೆ.

[ಉದಾಹರಣೆಗಾಗಿ_]

ಯಥಾಽನೇನೇಶ್ವರಸ್ಯ ಜ್ಞಾನವ್ಯಾಪಕತ್ವಾದಯೋ ಗುಣಾ ವಿಜ್ಞಾತವ್ಯಾ ಭವಂತಿ ;

ಹೇಗೆ ಇದರಿಂದ ಈಶ್ವರನ ಜ್ಞಾನ, ವ್ಯಾಪಕತ್ವ ಮೊದಲಾದ ಗುಣಗಳು ವಿಶೇಷವಾಗಿ ತಿಳಿಯಲ್ಪಡಲು ಯೋಗ್ಯವಾಗುತ್ತವೋ ;

ಅಂದರೆ, ಅವನ ಅನಂತ ಜ್ಞಾನ, ಅವನ ವ್ಯಾಪಕತ್ವ ಮೊದಲಾದ ಗುಣಗಳು ಮನುಷ್ಯರಿಗೆ ಯಥಾವತ್ತಾಗಿ ತಿಳಿಯಲಿ, ಎಂಬ ಪ್ರಯೋಜನವು ಹೇಗಿದೆಯೋ;

ಯಥೇಶ್ವರರಚಿತಸ್ಯ ಭೌತಿಕಸ್ಯಾಗ್ನೇಃ ಶಿಲ್ಪ-ವಿದ್ಯಾಯಾ ಮುಖ್ಯಹೇತುತ್ವಾತ್ ಪ್ರಥಮಂ ಗೃಹ್ಯತೇ ;

ಮತ್ತು ಹೇಗೆ ಈಶ್ವರನಿಂದ ರಚಿತವಾದ ಭೌತಿಕ ಅಗ್ನಿಯು ಶಿಲ್ಪವಿದ್ಯೆಯ ಮುಖ್ಯ ಹೇತುವಾದುದರಿಂದ, ಮೊದಲು ಗ್ರಹಿಸಲ್ಪಡುತ್ತದೋ ;

ಅಂದರೆ, ಮತ್ತೆ ಇದೇ 'ಅಗ್ನಿ' ಶಬ್ದದಿಂದ ಪೃಥಿವೀ ಮೊದಲಾದ ಭೂತಗಳ ಮಧ್ಯೆ ಯಾವ ಪ್ರತ್ಯಕ್ಷ ಅಗ್ನಿತತ್ತ್ವವಿದೆಯೋ, ಅದು ಶಿಲ್ಪವಿದ್ಯೆಯ ಮುಖ್ಯಹೇತುವಾದುದರಿಂದ, ಅದರ ಗ್ರಹಣವನ್ನು ಮೊದಲು ಮಾಡಲಾಗಿದೆಯೋ ;

'ವಾಯು'ವು ಬಲರೂಪವಾದುದರಿಂದ ಅಗ್ನಿಯ ಸಹಾಯಕಾರಿಯಾಗಿ ದ್ವಿತೀಯಗುಣ!

ತಥೇಶ್ವರಸ್ಯ ಸರ್ವಾಧಾರಕತ್ವಾನಂತಬಲವತ್ವಾದಿ-ಗುಣಾ ವಾಯುಶಬ್ದೇನ ಪ್ರಕಾಶ್ಯಂತೇ.

ಹಾಗೆ, ಈಶ್ವರನ ಸರ್ವಾಧಾರಕತ್ವ, ಅನಂತ ಬಲವತ್ವ ಮೊದಲಾದ ಗುಣಗಳು 'ವಾಯು' ಶಬ್ದದಿಂದ ಪ್ರಕಾಶಿಸಲ್ಪಡುತ್ತವೆ.

ಅಂದರೆ, ಈಶ್ವರನು ಎಲ್ಲವನ್ನೂ ಧಾರಣ ಮಾಡಿಕೊಂಡಿರುವ, ಹಾಗೂ ಅವನ ಅನಂತ ಬಲ ಮೊದಲಾದ ಗುಣಗಳ, ಪ್ರಕಾಶವನ್ನು ತಿಳಿಸುವುದಕ್ಕಾಗಿ 'ವಾಯು' ಶಬ್ದದ ಗ್ರಹಣ ಮಾಡಲಾಗಿದೆ.

ಯಥಾ ಶಿಲ್ಪವಿದ್ಯಾಯಾಂ ಭೌತಿಕಾಗ್ನೇಃ ಸಹಾಯಕಾರಿತ್ವಾನ್ಮೂರ್ತ್ತದ್ರವ್ಯಾಧಾರಕತ್ವಾತ್ ತದನುಷಂಗಿತ್ವಾಚ್ಚ ಭೌತಿಕಸ್ಯ ವಾಯೋರ್ಗ್ರಹಣಂ ಕೃತಮಸ್ತಿ;

ಹೇಗೆ ಶಿಲ್ಪವಿದ್ಯೆಯಲ್ಲಿ ಭೌತಿಕ ಅಗ್ನಿಯ ಸಹಾಯ ಕಾರಿಯಾಗಿಯೂ, ಅದರ ಮೂರ್ತ್ತದ್ರವ್ಯವನ್ನು ಧರಿಸಿ ಕೊಳ್ಳುವಂತಹುದಾಗಿಯೂ, ಹಾಗೂ ಅದಕ್ಕೆ ಸಂಬಂಧಿ ಯಾಗಿಯೂ, ಇರುವ ಭೌತಿಕ ವಾಯುವಿನ ಗ್ರಹಣ ಮಾಡಲಾಗಿದೆಯೋ ;

ಅಂದರೆ, ಹೇಗೆ ಶಿಲ್ಪವಿದ್ಯೆಯಲ್ಲಿ ವಾಯುವು ಮುಖ್ಯವಾಗಿ ಅಗ್ನಿಯ ಸಹಾಯಕಾರಿಯಾಗಿಯೂ ಮತ್ತು ಮೂರ್ತ್ತದ್ರವ್ಯದ ಧಾರಣ ಮಾಡುವಂತಹುದೂ ಆಗಿದೆಯೋ ;

ತಥೈವ ವಾಯ್ವಾದೀನಾಮಾಧಾರಕತ್ವಾದೀಶ್ವರಸ್ಯಾಪೀತಿ.

ಹಾಗೆಯೇ, ವಾಯು ಮೊದಲಾದುದರ ಆಧಾರಕತ್ವ[ಗುಣ]ದಿಂದ ಈಶ್ವರನ ಗ್ರಹಣವೂ ಕೂಡ, ಆಗುತ್ತದೆ!

'ಇಂದ್ರ'ವು ಐಶ್ವರ್ಯರೂಪವಾದುದರಿಂದ ತೃತೀಯಗುಣ!

ಯಥೇಶ್ವರಸ್ಯೇಂದ್ರಶಬ್ದೇನ ಪರಮೈಶ್ವರ್ಯ್ಯತ್ವಾದಿಗುಣಾ ವಿದಿತಾ ಭವಂತಿ, ತಥಾ ಭೌತಿಕೇನ ವಾಯುನಾಪ್ಯುತ್ತಮೈಶ್ವರ್ಯ್ಯಪ್ರಾಪ್ತಿರ್ಮನುಷ್ಯೈಃ ಕ್ರಿಯತೇ.

ಹೇಗೆ, **'ಇಂದ್ರ'** ಶಬ್ದದಿಂದ, ಈಶ್ವರನ ಪರಮೈಶ್ವರ್ಯತ್ವ ಮೊದಲಾದ ಗುಣಗಳು ತಿಳಿಯ ಲ್ಪಡುತ್ತವೋ, ಹಾಗೆ ಭೌತಿಕ **ವಾಯು**ವಿನಿಂದ, ಉತ್ತಮ ಐಶ್ವರ್ಯದ ಪ್ರಾಪ್ತಿಯು ಮನುಷ್ಯರಿಂದ ಮಾಡಿ ಕೊಳ್ಳಲಾಗುತ್ತದೆ.

ಅಂದರೆ, ಈಶ್ವರನ ಅನಂತ ಗುಣಗಳು ವಿದಿತ ವಾಗುವುದರಿಂದ_ ಭೌತಿಕವಾಯುವಿನ ಮೂಲಕ ಯೋಗಾಭ್ಯಾಸವನ್ನು ಮಾಡುವುದರಿಂದ, ಮತ್ತು ವಿಜ್ಞಾನ, ಹಾಗೂ ಶಿಲ್ಪವಿದ್ಯೆಯಿಂದ, ಉತ್ತಮ ಐಶ್ವರ್ಯದ ಪ್ರಾಪ್ತಿಯಾಗುತ್ತದೆ.

ಏತದರ್ಥಮಿಂದ್ರಶಬ್ದಸ್ಯ ಗ್ರಹಣಂ ಕೃತಮಸ್ತಿ.

ಈ ಪ್ರಯೋಜನಕ್ಕಾಗಿ **'ಇಂದ್ರ'** ಶಬ್ದದ ಗ್ರಹಣ ಮಾಡಲಾಗಿದೆ.

ಅಂದರೆ, ಹೇಗೆ [ಋಗ್ವೇದದ] ಪ್ರಥಮಸೂಕ್ತದಲ್ಲಿ ಅಗ್ನಿಯ, ಮತ್ತು ಎರಡನೆಯ ಸೂಕ್ತದಲ್ಲಿ ವಾಯುವಿನ ಗ್ರಹಣ ಮಾಡಲಾಗಿದೆಯೋ ; ಹಾಗೆ, 'ಇಂದ್ರ' ಶಬ್ದದ ಗ್ರಹಣವನ್ನು ಮೂರನೆಯ ಸ್ಥಾನದಲ್ಲಿ ಮಾಡಲಾಗಿದೆ.

ಏಕೆಂದರೆ, ಅಗ್ನಿ ಮತ್ತು ವಾಯುವಿನ ವಿದ್ಯೆಗಳಿಂದ ಅದ್ಭುತ-ಅದ್ಭುತವಾದ ಕಲಾ-ಕೌಶಲಾದಿಗಳನ್ನು ನಿರ್ಮಿಸುವ ಯುಕ್ತಿಯು ಮನುಷ್ಯರಿಗೆ ಸರಿ ಸರಿಯಾಗಿ ತಿಳಿದುಬರುತ್ತದೆ.*

'ಅಶ್ವಿ'ಯು ಯಾನರೂಪವಾದುದರಿಂದ ಚತುರ್ಥಗುಣ!

'ಅಶ್ವಿ'ಶಬ್ದೇನ ಶಿಲ್ಪವಿದ್ಯಾಯಾಂ ಯಾನ-ಚಾಲನಾದಿವಿದ್ಯಾವ್ಯವಹಾರೇ ಜಲಾಗ್ನಿಪೃಥಿವೀ-ಪ್ರಕಾಶಾದಯೋ ಹೇತವಃ ಪ್ರತಿಹೇತವಶ್ಚ ಸಂತಿ.

'ಅಶ್ವಿ' ಶಬ್ದದಿಂದ ಯಾನಗಳನ್ನು ನಡೆಸುವುದು ಮೊದಲಾದ ವಿದ್ಯೆಯ ವ್ಯವಹಾರಗಳಲ್ಲಿ ಜಲ, ಅಗ್ನಿ, ಪೃಥಿವೀ, ಪ್ರಕಾಶ ಮೊದಲಾದ ಹೇತುಗಳೂ ಮತ್ತು ಪ್ರತಿಹೇತುಗಳೂ ಶಿಲ್ಪವಿದ್ಯೆಯಲ್ಲಿ ಇರುತ್ತವೆ.

ಅಂದರೆ, 'ಅಶ್ವಿ' ಶಬ್ದದ ಗ್ರಹಣವನ್ನು ಮೂರನೆಯ ಸೂಕ್ತದಲ್ಲಿ ನಾಲ್ಕನೆಯ ಸ್ಥಾನದಲ್ಲಿ ಏತಕ್ಕೆ ಮಾಡಲಾಗಿದೆಯೆಂದರೆ_

ಅದರಿಂದ, ಈಶ್ವರನ ಅನಂತ ಕ್ರಿಯಾಶಕ್ತಿಯು ವಿದಿತವಾಗಲಿ, ಎಂದು. ಏಕೆಂದರೆ_

ವಿಮಾನ ಮೊದಲಾದ ಯಾನಗಳನ್ನು ನಡೆಸುವುದಕ್ಕಾಗಿ ಜಲ, ಅಗ್ನಿ, ಪೃಥಿವೀ ಮತ್ತು ಪ್ರಕಾಶ ಮೊದಲಾದ ಪದಾರ್ಥಗಳೇ ಶಿಲ್ಪವಿದ್ಯೆಯಲ್ಲಿ, ಮುಖ್ಯವಾಗಿರುತ್ತವೆ.

ಎಂದರೆ, ಕಲಾಯಂತ್ರ, ವಿಮಾನ, ನೌಕೆ, ಮತ್ತು ರಥ ಮೊದಲಾದ ಎಷ್ಟು ಯಾನಗಳಿರುತ್ತವೋ, ಅವೆಲ್ಲವೂ ಮೊದಲು ಹೇಳಿದಂತೆ, ಪೃಥಿವೀ ಮೊದಲಾದ ಪದಾರ್ಥಗಳಿಂದಲೇ ನಿರ್ಮಿತವಾಗುತ್ತವೆ.

ಏತದರ್ಥಮಗ್ನಿ-ವಾಯು-[ಇಂದ್ರ]ಗ್ರಹಣಾ-ನಂತರಮಶ್ವಿಶಬ್ದಪ್ರಯೋಗೋ ವೇದೇಷು ಕೃತೋಽಸ್ತಿ.

ಈ ಪ್ರಯೋಜನಕ್ಕಾಗಿ ಅಗ್ನಿ, ವಾಯು, [ಇಂದ್ರ] _ ಇವುಗಳ ಗ್ರಹಣದ ನಂತರ, 'ಅಶ್ವಿ'ಶಬ್ದದ ಪ್ರಯೋಗವು ವೇದಗಳಲ್ಲಿ ಮಾಡಲಾಗಿದೆ.

---

* ಮತ್ತು ಇದರಿಂದ, ಇಂದ್ರ = ಐಶ್ವರ್ಯದ ಪ್ರಾಪ್ತಿಯಾಗುತ್ತದೆ, ಎಂದು ಉಳಿದ ಅರ್ಥ ಮಾಡಿಕೊಳ್ಳಬೇಕು _ಅನು.

ಅಂದರೆ, **'ಅಶ್ವಿ'** ಶಬ್ದದ ಪಾಠವು **[ಋಗ್ವೇದದ]** ಮೂರನೆಯ ಸೂಕ್ತದಲ್ಲಿ, ನಾಲ್ಕನೆಯ ಸ್ಥಾನದಲ್ಲಿ ಮಾಡಲಾಗಿದೆ.

'ಸರಸ್ವತಿ'ಯು ಉಪದೇಶರೂಪವಾದುದರಿಂದ ಪಂಚಮಗುಣ!

ಏವಂ ಚ 'ಸರಸ್ವತೀ'ಶಬ್ದೇನೇಶ್ವರಸ್ಯಾನಂತ-ವಿದ್ಯಾವತ್ತ್ವಶಬ್ದಾರ್ಥಸಂಬಂಧರೂಪವೇದೋಪ-ದೇಷ್ಟೃತ್ವಾದಿಗುಣಾ ವೇದೇಷು ಪ್ರಕಾಶಿತಾ ಭವಂತಿ, ವಾಗ್ವ್ಯವಹಾರಾಶ್ಚ.

ಮತ್ತು ಹೀಗೆಯೇ, **'ಸರಸ್ವತೀ'** ಶಬ್ದದಿಂದ, ಈಶ್ವರನ ಅನಂತ ವಿದ್ಯಾವತ್ತ್ವ, ಮತ್ತು ಶಬ್ದಾರ್ಥ ಸಂಬಂಧರೂಪದಲ್ಲಿ ವೇದಗಳ ಉಪದೇಶ ಮಾಡುವುದು ಮೊದಲಾದ ಗುಣಗಳೂ, ಹಾಗೂ ವಾಣಿಯ ವ್ಯವಹಾರಗಳೂ ಕೂಡ, ವೇದಗಳಲ್ಲಿ ಪ್ರಕಾಶಿತವಾಗಿವೆ, ಎಂದು [ತಿಳಿದುಬರುತ್ತದೆ.]

ಅಂದರೆ, **'ಸರಸ್ವತೀ'**, ಎಂಬ ಹೆಸರು ಪರಮೇಶ್ವರನ ಅನಂತವಾಣಿಯದಾಗಿರುತ್ತದೆ! ಇದರಿಂದ, ಅವನ ಅನಂತ ವಿದ್ಯೆಯು ತಿಳಿದುಬರುತ್ತದೆ. ಮತ್ತು ಮನುಷ್ಯರೆಲ್ಲರ ಹಿತಕ್ಕಾಗಿ ಅವನು ತನ್ನ ಅನಂತವಿದ್ಯಾಯುಕ್ತವಾದ ವೇದಗಳ ಉಪದೇಶವನ್ನೂ ಕೂಡ, ಮಾಡಿದ್ದಾನೆ.

ಇತ್ಯಾದಿಪ್ರಯೋಜನಾಯಾಗ್ನಿವಾಯ್ವಿಂದ್ರಾಶ್ವಿ-ಸರಸ್ವತ್ಯಾದಿಶಬ್ದಾನಾಂ ಗ್ರಹಣಂ [ಕ್ರಮೇಣ] ಕೃತಮಸ್ತಿ.

ಈ ಮೊದಲಾದ ಪ್ರಯೋಜನಕ್ಕಾಗಿ, **ಅಗ್ನಿ, ವಾಯು, ಇಂದ್ರ, ಅಶ್ವಿ, ಸರಸ್ವತೀ** ಮೊದಲಾದ ಶಬ್ದಗಳ ಗ್ರಹಣವು [ಕ್ರಮವಾಗಿ] ಮಾಡಲ್ಪಟ್ಟಿದೆ.

ಅಂದರೆ, ಮೂರನೆಯ ಸೂಕ್ತದಲ್ಲಿ ಮತ್ತು ಐದನೆಯ ಸ್ಥಾನದಲ್ಲಿ **'ಸರಸ್ವತೀ'** ಶಬ್ದದ ಪಾಠವನ್ನು [ಈಶ್ವರನು] ವೇದಗಳಲ್ಲಿ* ಮಾಡಿದ್ದಾನೆ.

ಏವಮೇವ ಸರ್ವತ್ರೈವ ವೈದಿಕಶಬ್ದಾರ್ಥ-ವ್ಯವಹಾರಜ್ಞಾನಂ ಸರ್ವೈರ್ಮನುಷ್ಯೈರ್ಬೋಧ್ಯಮಸ್ತೀತಿ ವಿಜ್ಞಾಪ್ಯತೇ.

ಹೀಗೆಯೇ, ಎಲ್ಲೆಡೆಯೂ ಕೂಡ, ವೈದಿಕ ಶಬ್ದಗಳ ಅರ್ಥವನ್ನೂ, ಹಾಗೂ ವ್ಯವಹಾರದ ಜ್ಞಾನವನ್ನೂ ಮನುಷ್ಯರೆಲ್ಲರೂ ತಿಳಿದುಕೊಳ್ಳ ಬೇಕಾಗಿರುತ್ತದೆ, ಎಂದು ಸೂಚಿಸಲಾಗುತ್ತದೆ!

---

* ಎಂದರೆ **ಋಗ್ವೇದದಲ್ಲಿ_ಅನು.**

(೧೧) ಅಗ್ನಿ, ವಾಯು ಮೊದಲಾದ ಶಬ್ದಗಳು ಭೌತಿಕ ಅರ್ಥವನ್ನೇ ಹೇಳುವುದಿಲ್ಲವೇನು?

ಪ್ರಶ್ನಃ_ ವೇದಾನಾಮಾರಂಭೇಽಗ್ನಿವಾಯ್ವಾದಿ-ಪ್ರಯೋಗೈಃ ಪ್ರಸಿದ್ಧಿರ್ಜಾಯತೇ, [ಯದ್] ವೇದೇಷು ಭೌತಿಕಪದಾರ್ಥಾನಾಮೇವ ತತ್ತಚ್ಛಬ್ದೈರ್ಗ್ರಹಣಂ ಭವತಿ.

ಪ್ರಶ್ನೆ_ ವೇದಗಳ ಆರಂಭದಲ್ಲಿ ಅಗ್ನಿ, ವಾಯು ಮೊದಲಾದ ಪ್ರಯೋಗಗಳಿಂದ, ವೇದಗಳಲ್ಲಿ ಭೌತಿಕ ಪದಾರ್ಥಗಳ ಗ್ರಹಣವನ್ನೇ ಆಯಾ ಶಬ್ದಗಳಿಂದ ಮಾಡಬೇಕು, ಎಂಬ ಪ್ರತೀತಿ ಉಂಟಾಗುತ್ತದೆ.

ಅಂದರೆ, ವೇದದ ಆರಂಭದಲ್ಲಿ ಅಗ್ನಿ, ವಾಯು ಮೊದಲಾದ ಶಬ್ದಗಳ ಪ್ರಯೋಗದಿಂದ ಸಿದ್ಧವಾಗುತ್ತದೇನೆಂದರೆ_

ಜಗತ್ತಿನಲ್ಲಿ ಯಾವ ಪದಾರ್ಥಗಳ ಹೆಸರುಗಳು ಅಗ್ನಿ ಮೊದಲಾಗಿ ಪ್ರಸಿದ್ಧವಾಗಿವೆಯೋ, ಅವುಗಳ ಗ್ರಹಣವನ್ನೇ ಮಾಡಬೇಕು. ಆದುದರಿಂದಲೇ, ಜನರು ಆ ಶಬ್ದಗಳಿಂದ ಜಗತ್ತಿನ ಅಗ್ನಿ ಮೊದಲಾದ ಪದಾರ್ಥಗಳನ್ನೇ ಅಂಗೀಕರಿಸಿಯೂ ಬಿಟ್ಟಿದ್ದಾರೆ!

ಯತ ಆರಂಭೇ ಖಲ್ವೀಶ್ವರಶಬ್ದಪ್ರಯೋಗೋ ನೈವ ಕೃತೋಽಸ್ತಿ?

ಏಕೆಂದರೆ, ಆರಂಭದಲ್ಲಿ **ಈಶ್ವರ** ಶಬ್ದದ ಪ್ರಯೋಗವಂತೂ ಮಾಡಿಯೇ ಇಲ್ಲವಲ್ಲಾ?

ಅಂದರೆ, ಆರಂಭದಲ್ಲಿ ಆ ಶಬ್ದಗಳ ಸ್ಥಾನದಲ್ಲಿ ಈಶ್ವರ, ಪರಮೇಶ್ವರ ಮೊದಲಾದ ಶಬ್ದಗಳನ್ನೇ ಗ್ರಹಿಸಬೇಕಾಗಿತ್ತು!

ಇಲ್ಲದಿದ್ದರೆ, ಯಾವಾಗಲೂ ಯಾರಿಗೂ ಭ್ರಮೆ ಉಂಟಾಗದಿರಲಿ, ಎಂದು ಯಾವ ಯಾವ ಶಬ್ದವು ಎಲ್ಲೆಲ್ಲಿರಬೇಕಾಗಿತ್ತೋ, ಅಲ್ಲಲ್ಲಿಯೇ ಅದರ ಗ್ರಹಣ ಮಾಡುವುದು ಉಚಿತವಾಗಿರುತ್ತಿತ್ತು!

ವ್ಯಾಖ್ಯಾನದಿಂದಲೇ ವಿಶೇಷ ತಿಳಿವಳಿಕೆ! ಸಂದೇಹನಿವೃತ್ತಿ!

ಉತ್ತರಮ್_

ಉತ್ತರ_

ಹಾಗೆ ಮಾಡಿದ್ದರೂ ಭ್ರಮೆ ಉಂಟಾಗುವ ಸಂಭವವಿತ್ತು. ಆದರೆ_

"ವ್ಯಾಖ್ಯಾನತೋ ವಿಶೇಷಪ್ರತಿಪತ್ತಿರ್ನ ಹಿ ಸಂದೇಹಾದಲಕ್ಷಣಮ್"

[ಮಹಾಭಾಷ್ಯೇ ಪಸ್ಪಶಾಹ್ನಿಕೇ]

[ಅರ್ಥ:_ "ವ್ಯಾಖ್ಯಾನದಿಂದ ವಿಶೇಷ ತಿಳಿವಳಿಕೆ ಉಂಟಾಗುತ್ತದೆ. ಸಂದೇಹವಾಗುವುದರಿಂದ, ಶಾಸ್ತ್ರವು ನಿರರ್ಥಕವೆಂದು ತಿಳಿಯಬಾರದು." *

(ಮಹಾಭಾಷ್ಯ ಪಸ್ಪಶಾಹ್ನಿಕ)]

ಇತಿ ಮಹಾಭಾಷ್ಯಕಾರೇಣ ಪತಂಜಲಿಮಹಾಮುನಿನಾ 'ಲಣ್' ಇತಿ ಸೂತ್ರವ್ಯಾಖ್ಯಾನೋಕ್ತನ್ಯಾಯೇನ ಸರ್ವಸಂದೇಹನಿವೃತ್ತಿರ್ಭವತೀತಿ.

ಎಂದು, ಮಹಾಭಾಷ್ಯಕಾರರಾದ ಪತಂಜಲಿ ಮಹಾಮುನಿಗಳಿಂದ 'ಲಣ್', ಎಂಬ [ಪ್ರತ್ಯಾಹಾರ] ಸೂತ್ರದ ವ್ಯಾಖ್ಯಾನದಲ್ಲಿ ಹೇಳಿರುವ ನ್ಯಾಯದಂತೆ, ಎಲ್ಲಾ ಸಂದೇಹಗಳ ನಿವಾರಣೆಯುಂಟಾಗುತ್ತದೆ!

ಅಂದರೆ, ಯಾವಾಗ ವ್ಯಾಖ್ಯಾನಗಳ ಮೂಲಕ ಮಂತ್ರಗಳ ಪದ-ಪದದ ಅರ್ಥವನ್ನು ಉದ್ಘಾಟಿಸಲಾಗಿ ಬಿಟ್ಟಿದೆಯೋ, ಆಗ ಅವುಗಳನ್ನು ನೋಡುವುದರಿಂದ, ಸಂದೇಹಗಳು ತಾವೇ ತಾವಾಗಿ ನಿವೃತ್ತವಾಗಿಬಿಡುತ್ತವೆ.

ಮತ್ತು 'ಶಿಕ್ಷಾ' ಮೊದಲಾದ ಅಂಗಗಳು ವೇದಮಂತ್ರಗಳ ಪದ-ಪದದ ಅರ್ಥವನ್ನು ಯಾವ ರೀತಿಯಲ್ಲಿ ಉದ್ಘಾಟಿಸುತ್ತವೆಯೆಂದರೆ, ವೈದಿಕ ಶಬ್ದಾರ್ಥಗಳಲ್ಲಿ ಯಾವ ಪ್ರಕಾರದ ಸಂದೇಹವೂ ಉಳಿಯಲಾರದು!

ಕುತಃ?

ಏಕೆಂದರೆ_

ವೇದವೇದಾಂಗೋಪಾಂಗಬ್ರಾಹ್ಮಣಗ್ರಂಥೇಷ್ವಗ್ನಿಶಬ್ದೇನೇಶ್ವರಭೌತಿಕಾರ್ಥಯೋರ್ವ್ಯಾಖ್ಯಾನಸ್ಯ ವಿದ್ಯಮಾನತ್ವಾತ್.

ವೇದ, ವೇದಾಂಗ, ಉಪಾಂಗ, ಹಾಗೂ ಬ್ರಾಹ್ಮಣಗ್ರಂಥಗಳಲ್ಲಿ 'ಅಗ್ನಿ' ಶಬ್ದದಿಂದ ಈಶ್ವರನ, ಹಾಗೂ ಭೌತಿಕ ಅರ್ಥಗಳ ವ್ಯಾಖ್ಯಾನವು ವಿದ್ಯಮಾನವಾಗಿದೆ!

ತಥೇಶ್ವರಶಬ್ದಪ್ರಯೋಗೇಣಾಪಿ ವ್ಯಾಖ್ಯಾನೇನ ವಿನಾ ಸರ್ವಥಾ ಸಂದೇಹನಿವೃತ್ತಿರ್ನ ಭವತಿ.

ಮತ್ತು 'ಈಶ್ವರ' ಶಬ್ದದ ಪ್ರಯೋಗದಿಂದಲೂ ಕೂಡ, ವ್ಯಾಖ್ಯಾನವಿಲ್ಲದೇ, ಸರ್ವಥಾ ಸಂದೇಹನಿವೃತ್ತಿಯುಂಟಾಗದು.

ಅಂದರೆ, ಒಂದುವೇಳೆ, 'ಈಶ್ವರ' ಶಬ್ದದ ಪ್ರಯೋಗವನ್ನು ಮಾಡಿದ್ದರೂ ಕೂಡ, ವ್ಯಾಖ್ಯಾನವಿಲ್ಲದಿದ್ದರೆ, ಸಂದೇಹದ ನಿವೃತ್ತಿಯಾಗಲಾರದಾಗಿತ್ತು! ಏಕೆಂದರೆ_

* ಸಂದೇಹವು ಶಾಸ್ತ್ರಾಭಿಪ್ರಾಯವನ್ನು ಸಮರ್ಥಿಸಲು ವ್ಯಾಖ್ಯಾನಕ್ಕೆ ಎಡೆಕೊಡುತ್ತದೆ. ಇದರಿಂದ, ವಿಶೇಷ ತಿಳಿವಳಿಕೆಯೂ ಉಂಟಾಗುತ್ತದೆ. ಆದುದರಿಂದ, ಜಿಜ್ಞಾಸುಗಳ ಸಂದೇಹಕ್ಕೆ ಪ್ರೋತ್ಸಾಹವನ್ನು ಕೊಡಬೇಕು! _ಅನು.

ಈಶ್ವರಶಬ್ದೇನ ಪರಮಾತ್ಮಾ ಗೃಹ್ಯತೇ ;

'ಈಶ್ವರ', ಶಬ್ದದಿಂದ ಪರಮಾತ್ಮನು ಗ್ರಹಿಸಲ್ಪಡುತ್ತಾನೆ!

ತಥಾ ಸಾಮರ್ಥ್ಯವತೋ ರಾಜ್ಞಃ ; ಕಸ್ಯಚಿನ್ಮನುಷ್ಯಸ್ಯಾಪೀಶ್ವರ ನಾಮಾಸ್ತಿ.

ಹಾಗೂ ಸಾಮರ್ಥ್ಯವಂತನಾದ ರಾಜನದೂ [ಹೆಸರಾಗುತ್ತದೆ; ಅಥವಾ] ಯಾವನೋ ಮನುಷ್ಯನ ಹೆಸರೂ ಕೂಡ, ಈಶ್ವರ, ಎಂದಾಗುತ್ತದೆ!

ಅಂದರೆ, 'ಈಶ್ವರ', ಎಂಬ ಹೆಸರು ಉತ್ತಮ ಸಾಮರ್ಥ್ಯವನ್ನುಳ್ಳ ರಾಜಾ ಮೊದಲಾದ ಮನುಷ್ಯರದೂ ಆಗಬಹುದು! ಮತ್ತು ಯಾವ ಯಾವನದೋ ಹೆಸರೂ ಕೂಡ, 'ಈಶ್ವರ', ಎಂದಾಗಬಹುದು!

ತಯೋರ್ಮಧ್ಯಾತ್ ಕಸ್ಯ ಗ್ರಹಣಂ ಕರ್ತ್ತವ್ಯಮಿತಿ ಶಂಕಾಯಾಂ ;

ಇವೆರಡರ ಮಧ್ಯೆ ಯಾವುದರ ಗ್ರಹಣ ಮಾಡಬೇಕು, ಎಂಬ ಶಂಕೆ ಬಂದಾಗ_

ವ್ಯಾಖ್ಯಾನತ ಏವ ಸಂದೇಹನಿವೃತ್ತಿರ್ಭವತ್ಯತ್ರ ಪರಮಾತ್ಮನೋ ಗ್ರಹಣಮತ್ರ ರಾಜಾದಿಮನುಷ್ಯಸ್ಯೇತಿ.

ವ್ಯಾಖ್ಯಾನದಿಂದಲೇ, ಎಂದರೆ_'ಇಲ್ಲಿ ಪರಮಾತ್ಮನ ಗ್ರಹಣ ಮಾಡಬೇಕು ; ಮತ್ತು ಇಲ್ಲಿ ರಾಜನೇ ಮೊದಲಾದ ಮನುಷ್ಯನ ಗ್ರಹಣ ಮಾಡಬೇಕು', ಎಂದು [ಹೇಳಿದಾಗ,] ಸಂದೇಹನಿವೃತ್ತಿಯಾಗುತ್ತದೆ.

ಏವಮತ್ರಾಪ್ಯಗ್ನಿನಾಮ್ನೋಭಯಾರ್ಥಗ್ರಹಣೇ ನೈವ ಕಶ್ಚಿದ್ದೋಷೋ ಭವತೀತಿ.

ಹೀಗೆ, ಇಲ್ಲೂ ಕೂಡ, 'ಅಗ್ನಿ', ಎಂಬ ಹೆಸರಿನಿಂದ ಎರಡೂ ಅರ್ಥಗಳ ಗ್ರಹಣವಾಗುವುದರಲ್ಲಿ ಯಾವ ದೋಷವೂ ಉಂಟಾಗುವುದೇ ಇಲ್ಲ!

ಸಾವಿರಾರು ಬೃಹದ್ ಗ್ರಂಥಗಳಿಂದಲೂ ವಿದ್ಯೆಯನ್ನು ಪೂರ್ಣವಾಗಿ ತಿಳಿಯಲಾಗದು!

ಅನ್ಯಥಾ ಕೋಟಿಶಃ ಶ್ಲೋಕೈಸ್ಸಹಸ್ರೈರ್ಗ್ರಂಥೈರಪಿ ವಿದ್ಯಾಲೇಖಪೂರ್ತ್ತಿರತ್ಯಂತಾಸಂಭವಾಸ್ತಿ.

ಇಲ್ಲದಿದ್ದರೆ, ಕೋಟ್ಯಂತರ ಶ್ಲೋಕಗಳಿಂದ ಕೂಡಿದ ಸಾವಿರಾರು ಗ್ರಂಥಗಳಿಂದಲೂ ಕೂಡ, ವಿದ್ಯೆಯ ಲೇಖನದ ಪೂರ್ತಿಯು ಅತ್ಯಂತ ಅಸಂಭವವಾಗಿರುತ್ತಿತ್ತು!

ಅಂದರೆ, ಒಂದುವೇಳೆ, ಎಲ್ಲಾ ಸ್ಥಳಗಳಲ್ಲೂ ಒಂದೇ ಅರ್ಥ ಕೊಡುವ ಶಬ್ದಗಳ ಪ್ರಯೋಗವನ್ನೇ ಮಾಡಿದ್ದಿದ್ದರೂ ಕೂಡ, ಅನೇಕ ಕೋಟಿ ಶ್ಲೋಕಗಳೂ, ಹಾಗೂ ಸಾವಿರಾರು ವೇದಗಳ ಗ್ರಂಥಗಳೂ ಆಗಿ ಬಿಡುವ ಸಂಭವಿರುತ್ತಿತ್ತು!

ಆದರೂ ಕೂಡ, ವಿದ್ಯೆಯ ಇತಿ-ಮತಿಗಳನ್ನು [ತಿಳಿಯಲು] ಆಗಲೂ ಆಗುತ್ತಿರಲಿಲ್ಲ; ಮತ್ತು ಮನುಷ್ಯರು ಅವನ್ನು ಎಂದಿಗೂ ಓದಲೂ-ಓದಿಸಲೂ ಸಮರ್ಥರಾಗುತ್ತಿರಲಿಲ್ಲ!

ವೇದಗಳಲ್ಲಿ ಸಮಸ್ತವಿದ್ಯೆಗಳ ಮೂಲವನ್ನು ತೋರಿಸುವ ಪದ್ಧತಿ

ಅತಃ ಕಾರಣಾದಗ್ನ್ಯಾದಿಶಬ್ದೈರ್ವ್ಯಾವಹಾರಿಕ-ಪಾರಮಾರ್ಥಿಕವಿದ್ಯಯೋರ್ಗ್ರಹಣಂ ಸ್ವಲ್ಪಾಕ್ಷರೈಃ ಸ್ವಲ್ಪಗ್ರಂಥೈಶ್ಚ ಭವತೀತಿ ಮತ್ವೇಶ್ವರೇಣಾಗ್ನ್ಯಾದಿ-ಶಬ್ದಪ್ರಯೋಗಾಃ ಕೃತಾಃ.

ಈ ಕಾರಣದಿಂದ, ಅಗ್ನಿ ಮೊದಲಾದ ಶಬ್ದಗಳ ಮೂಲಕ ವ್ಯಾವಹಾರಿಕ, ಹಾಗೂ ಪಾರಮಾರ್ಥಿಕ ವಿದ್ಯೆಗಳ ಗ್ರಹಣವು ಸ್ವಲ್ಪ ಅಕ್ಷರಗಳಿಂದಲೂ ಮತ್ತು ಸ್ವಲ್ಪ ಗ್ರಂಥಗಳಿಂದಲೂ ಆಗುತ್ತದೆ, ಎಂಬುದನ್ನು ಅಂಗೀಕರಿಸಿ, ಈಶ್ವರನು ಅಗ್ನಿ ಮೊದಲಾದ ಶಬ್ದಗಳ ಪ್ರಯೋಗಗಳನ್ನು ಮಾಡಿದ್ದಾನೆ!

ಅಂದರೆ, ಈ ಪ್ರಯೋಜನಕ್ಕಾಗಿ, ಎಂದರೆ ಸುಗಮತ್ವಕ್ಕಾಗಿ ಈಶ್ವರನು ಅಗ್ನಿ ಮೊದಲಾದ ಶಬ್ದಗಳ ಪ್ರಯೋಗವನ್ನು ಮಾಡಿ, ವ್ಯವಹಾರ ಮತ್ತು ಪರಮಾರ್ಥ_ ಈ ಎರಡೂ ವಿಷಯಗಳನ್ನು ಸಾಧಿಸುವಂತಹ ವಿದ್ಯೆಗಳ ಪ್ರಕಾಶ ಮಾಡಿದ್ದಾನೆ!

ಯತೋಽಲ್ಪಕಾಲೇನ ಪಠನಪಾಠನ-ವ್ಯವಹಾರೇಣಾಲ್ಪಪರಿಶ್ರಮೇಣೈವ ಮನುಷ್ಯಾಣಾಂ ಸರ್ವಾ ವಿದ್ಯಾ ವಿದಿತಾ ಭವೇಯುರಿತಿ.

ಏಕೆಂದರೆ, [ಇದರಿಂದ] ಅಲ್ಪಕಾಲದಲ್ಲಿ ಪಠನ-ಪಾಠನ, ಹಾಗೂ ವ್ಯವಹಾರಗಳ ಅಲ್ಪ ಪರಿಶ್ರಮದಿಂದಲೇ, ಮನುಷ್ಯರಿಗೆ ಎಲ್ಲಾ ವಿದ್ಯೆಗಳೂ ತಿಳಿದು ಬರುತ್ತವೆ.

ಅಂದರೆ, ಇದರಿಂದ ಮನುಷ್ಯರು ಸ್ವಲ್ಪ ಸಮಯದಲ್ಲಿಯೇ, ಮೂಲವಿದ್ಯೆಗಳನ್ನು ತಿಳಿದು ಕೊಳ್ಳಬಲ್ಲರು!

ಪರಮಕಾರುಣಿಕಃ ಪರಮೇಶ್ವರಃ ಸುಗಮ-ಶಬ್ದೈಸ್ಸರ್ವವಿದ್ಯೋದ್ದೇಶಾನುಪದಿಷ್ಟವಾನಿತಿ ವಿಜ್ಞೇಯಮ್.

ಪರಮಕಾರುಣಿಕನಾದ ಪರಮೇಶ್ವರನು ಸುಗಮವಾದ ಶಬ್ದಗಳ ಮೂಲಕ ಎಲ್ಲಾ ವಿದ್ಯೆಗಳ ಸಂಕ್ಷಿಪ್ತ ವರ್ಣನೆಗಳನ್ನು ಉಪದೇಶ ಮಾಡಿದ್ದಾನೆ, ಎಂದು ತಿಳಿಯಬೇಕು!

ಅಂದರೆ, ಈ ಮುಖ್ಯವಾದ ಹೇತುವಿನಿಂದ, ಎಲ್ಲರ ಸುಖಕ್ಕಾಗಿ ಪರಮಕರುಣಾಮಯನಾದ ಪರಮೇಶ್ವರನು ಅಗ್ನಿ ಮೊದಲಾದ ಸುಗಮಶಬ್ದಗಳ ಮೂಲಕ ವೇದಗಳ ಉಪದೇಶ ಮಾಡಿದ್ದಾನೆ!

ಭೌತಿಕ ಪದಾರ್ಥಗಳಿಂದಲೂ ಈಶ್ವರನ ಬೋಧ!

ತಥಾ ಚ ಯೇಽಗ್ನ್ಯಾದಯಃ ಶಬ್ದಾರ್ಥಾಃ ಸಂಸಾರೇ ಪ್ರಸಿದ್ಧಾಃ ಸಂತ್ಯೇತೈಃ ಸರ್ವೈರೀಶ್ವರಪ್ರಕಾಶಃ ಕ್ರಿಯತೇ.

ಮತ್ತು **ಅಗ್ನಿ** ಮೊದಲಾದ ಶಬ್ದಗಳ ಯಾವ ಅರ್ಥಗಳು ಪ್ರಪಂಚದಲ್ಲಿ ಪ್ರಸಿದ್ಧವಾಗಿವೆಯೋ, ಅವೆಲ್ಲವುಗಳಿಂದ **ಈಶ್ವರನ** ಪ್ರತೀತಿ ಮಾಡಲಾಗುತ್ತಿದೆ!

ಅಂದರೆ, **ಅಗ್ನಿ** ಮೊದಲಾದ ಶಬ್ದಗಳ ಯಾವ ಅರ್ಥಗಳು ಜಗತ್ತಿನಲ್ಲಿ ಪ್ರಸಿದ್ಧವಾಗಿವೆಯೋ, ಅವುಗಳಿಂದಲೂ ಕೂಡ, **ಈಶ್ವರನ** ಗ್ರಹಣವಾಗುತ್ತದೆ!

ಕುತಃ?

ಏಕೆಂದರೆ_

ಈಶ್ವರೋಽಸ್ತೀತಿ ಸರ್ವೇ ದೃಷ್ಟಾಂತಾ ಜ್ಞಾಪಯಂತೀತಿ ಬೋಧ್ಯಮ್.

'ಈಶ್ವರನು ಇದ್ದಾನೆ', ಎಂದು ಎಲ್ಲಾ ದೃಷ್ಟಾಂತಗಳೂ ತಿಳಿಸುತ್ತಿವೆ, ಎಂದು ಅರಿಯಬೇಕು!

ಅಂದರೆ, ಈ ಎಲ್ಲಾ ದೃಷ್ಟಾಂತಗಳೂ ಪರಮೇಶ್ವರನನ್ನೇ ತಿಳಿಯುವುದಕ್ಕಾಗಿಯೂ ಮತ್ತು ತಿಳಿಸುವುದಕ್ಕಾಗಿಯೂ ಇವೆ!

ವೇದಭಾಷ್ಯದಲ್ಲಿ ಸಮಸ್ತವಿದ್ಯೆಗಳ ಉಲ್ಲೇಖ ಮಾಡಲಾಗುವುದು!

ಏವಂ ಚತುರ್ವೇದಸ್ಥವಿದ್ಯಾನಾಂ ಮಧ್ಯಾತ್ ಕಾಶ್ಚಿದ್ವಿದ್ಯಾ ಅತ್ರ ಭೂಮಿಕಾಯಾಂ ಸಂಕ್ಷೇಪತೋ ಲಿಖಿತಾಃ .

ಹೀಗೆ, ನಾಲ್ಕೂ ವೇದಗಳಲ್ಲಿನ ವಿದ್ಯೆಗಳಲ್ಲಿ ಯಾವುವೋ ಒಂದೊಂದು ವಿದ್ಯೆಗಳು **ಈ ಭೂಮಿಕೆ**ಯಲ್ಲಿ ಸಂಕ್ಷೇಪವಾಗಿ ಬರೆಯಲ್ಪಟ್ಟಿವೆ!

ಅಂದರೆ, ನಾಲ್ಕೂ ವೇದಗಳಲ್ಲಿ ಯಾವ ಯಾವ ವಿದ್ಯೆಗಳಿವೆಯೋ, ಅವುಗಳಲ್ಲಿ ಒಂದೊಂದು ವಿದ್ಯೆಯನ್ನಂತೂ ಈ **'ವೇದಭಾಷ್ಯದ ಭೂಮಿಕೆ'**ಯಲ್ಲಿ ಸಂಕ್ಷೇಪವಾಗಿ ಬರೆದುಬಿಟ್ಟಿದ್ದೇವೆ!

ಇತೋಽಗ್ರೇ ಮಂತ್ರಭಾಷ್ಯಂ ವಿಧಾಸ್ಯತೇ.*

ಇದರ ನಂತರ, ಮುಂದೆ ಮಂತ್ರಭಾಷ್ಯವು ರಚಿಸಲಾಗುವುದು!*

* ಇತೋಽಗ್ರಿಮಾಧ್ಯಾಯಾ ಗ್ರಂಥಕೃತಾ ಪರಿಶಿಷ್ಟರೂಪೇಣ ಲಿಖಿತಾ ಇತ್ಯಸ್ಮಾಭಿರನುಮೀಯಂತೇ _ಅನು.

* ಇದರ ಮುಂದಿನ ಅಧ್ಯಾಯಗಳು ಗ್ರಂಥಕರ್ತರಿಂದ ಪರಿಶಿಷ್ಟ ರೂಪದಲ್ಲಿ ರಚಿಸಿರಬೇಕು, ಎಂದು ನಾವು ಊಹಿಸುತ್ತೇವೆ _ಅನು.

ತತ್ರ ಯಸ್ಮಿನ್ ಮಂತ್ರೇ ಯಾ ಯಾ ವಿದ್ಯೋಪದಿಷ್ಟಾಽಸ್ತಿ, ಸಾ ಸಾ ತಸ್ಯ ಮಂತ್ರಸ್ಯ ವ್ಯಾಖ್ಯಾನಾವಸರೇ ಯಥಾವತ್ ಪ್ರಕಾಶಯಿಷ್ಯತೇ.

ಅದರಲ್ಲಿ ಯಾವ ಮಂತ್ರದಲ್ಲಿ ಯಾವ ಯಾವ ವಿದ್ಯೆಯು ಉಪದೇಶಿಸಲ್ಪಟ್ಟಿದೆಯೋ, ಅದದು ಆ ಮಂತ್ರದ ವ್ಯಾಖ್ಯಾನ ಮಾಡುವ ಸಮಯದಲ್ಲಿ ಯಥಾವತ್ತಾಗಿ ಪ್ರಕಾಶಿಸಲ್ಪಡುವುದು!

ಅಂದರೆ, ಉಳಿದ ಎಲ್ಲವನ್ನೂ, ಎಂದರೆ, ಇದರ ಮುಂದೆ, ಮಂತ್ರಭಾಷ್ಯದಲ್ಲಿ ಯಾವ ಯಾವ ಮಂತ್ರದಲ್ಲಿ ಯಾವ ಯಾವ ವಿದ್ಯೆಯ ಉಪದೇಶವಿದೆಯೋ, ಅದದನ್ನು ಆಯಾ ಮಂತ್ರದ ವ್ಯಾಖ್ಯಾನದಲ್ಲಿ ಯಥಾವತ್ತಾಗಿ ಪ್ರಕಾಶಿಸುವೆವು!

ಇತಿ ಪ್ರಶ್ನೋತ್ತರವಿಷಯಃ ಸಂಕ್ಷೇಪತಃ ॥

ಇಲ್ಲಿಗೆ ಪ್ರಶ್ನೋತ್ತರಗಳ ವಿಷಯವು ಸಂಕ್ಷೇಪವಾಗಿ ಮುಗಿಯಿತು. [೩೦]

(೩೧) ವೈದಿಕಪ್ರಯೋಗ

ಅಥ ವೈದಿಕಪ್ರಯೋಗವಿಷಯಃ ಸಂಕ್ಷೇಪತಃ

ಈಗ ಸಂಕ್ಷೇಪವಾಗಿ ವೈದಿಕಪ್ರಯೋಗದ ವಿಷಯವನ್ನು ಹೇಳುತ್ತೇವೆ.

ಅಂದರೆ, ಇದರ ಮುಂದೆ, ವೇದದಲ್ಲಿನ ಪ್ರಯೋಗಗಳ ವಿಶೇಷ ನಿಯಮಗಳನ್ನು ಸಂಕ್ಷೇಪವಾಗಿ ಹೇಳುತ್ತೇವೆ.

ಅಥ ನಿರುಕ್ತಾರಃ ಸಂಕ್ಷೇಪತೋ ವೈದಿಕಶಬ್ದಾನಾಂ ವಿಶೇಷನಿಯಮಾನಾಹ_

ಈಗ, ನಿರುಕ್ತಕಾರರು ಸಂಕ್ಷೇಪವಾಗಿ ವೈದಿಕ ಶಬ್ದಗಳ ವಿಶೇಷ ನಿಯಮಗಳನ್ನು ಹೇಳಿದ್ದಾರೇನೆಂದರೆ_

ವೇದದಲ್ಲಿ ಮೂರು ವಿಧದ ಪ್ರಯೋಗಗಳು

"ತಾಸ್ತ್ರಿವಿಧಾ ಋಚಃ ಪರೋಕ್ಷಕೃತಾಃ ಪ್ರತ್ಯಕ್ಷಕೃತಾ ಆಧ್ಯಾತ್ಮಿಕ್ಯಶ್ಚ।

[ಅರ್ಥ:_ "ಆ ಋಜ್ಮಂತ್ರಗಳು ಮೂರು ವಿಧದವಾಗಿರುತ್ತವೆ_ ಪರೋಕ್ಷಕೃತ, ಪ್ರತ್ಯಕ್ಷಕೃತ ಮತ್ತು ಆಧ್ಯಾತ್ಮಿಕ, ಎಂದು.

"ತತ್ರ ಪರೋಕ್ಷಕೃತಾಃ ಸರ್ವಾಭಿರ್ನಾಮವಿಭಕ್ತಿಭಿರ್ಯುಜ್ಯಂತೇ, ಪ್ರಥಮಪುರುಷೈಶ್ಚಾಖ್ಯಾತಶ್ಚ ॥"

[ನಿರುಕ್ತೇ ಅ. ೭, ಖಂ. ೧]

[ಅರ್ಥ:_ "ಅದರಲ್ಲಿ ಪರೋಕ್ಷಕೃತವಾದುವು ಎಲ್ಲಾ ನಾಮ ಮತ್ತು ವಿಭಕ್ತಿಗಳಿಂದ ಯುಕ್ತ ಮಾಡಲ್ಪಡುತ್ತವೆ. ಮತ್ತು ಪ್ರಥಮಪುರುಷದ ಕ್ರಿಯೆಗಳಿಂದಲೂ ಕೂಡಿರುತ್ತವೆ."

(ನಿರುಕ್ತ: ೭. ೧)]

"ಅಥ ಪ್ರತ್ಯಕ್ಷಕೃತಾ ಮಧ್ಯಮಪುರುಷಯೋಗಾಸ್ತ್ವಮಿತಿ ಚೈತೇನ ಸರ್ವನಾಮ್ನಾ ।

[ಅರ್ಥ:_ "ನಂತರ, ಪ್ರತ್ಯಕ್ಷಕೃತವಾದುವು ಮಧ್ಯಮಪುರುಷದಿಂದ ಕೂಡಿರುವುವಾಗಿರುತ್ತವೆ. ಮತ್ತು 'ತ್ವಮ್', ಎಂಬ ಈ ಸರ್ವನಾಮದಿಂದ [ಯುಕ್ತವಾಗಿರುತ್ತವೆ.]

"ಅಥಾಪಿ ಪ್ರತ್ಯಕ್ಷಕೃತಾಃ ಸ್ತೋತಾರೋ ಭವಂತಿ । ಪರೋಕ್ಷಕೃತಾನಿ ಸ್ತೋತವ್ಯಾನಿ ।

[ಅರ್ಥ:_ "ಮತ್ತು ಪ್ರತ್ಯಕ್ಷಕೃತವಾದುವು ಸ್ತುತಿಮಾಡುವಂತಹವಾಗಿರುತ್ತವೆ. [ಆದರೆ,] ಪರೋಕ್ಷಕೃತವಾದುವು ಸ್ತುತಿಸಲ್ಪಡಲು ಯೋಗ್ಯವಾಗಿರುತ್ತವೆ.

"ಅಥಾಧ್ಯಾತ್ಮಿಕ್ಯ ಉತ್ತಮಪುರುಷಯೋಗಾ ಅಹಮಿತಿ ಚೈತೇನ ಸರ್ವನಾಮ್ನಾ ॥"

[ನಿರುಕ್ತೇ ಅ. ೭, ಖಂ. ೨]

[ಅರ್ಥ:_ "ನಂತರ, ಆಧ್ಯಾತ್ಮಿಕವಾದುವು ಉತ್ತಮಪುರುಷ ಪ್ರಯೋಗವನ್ನುಳ್ಳವಾಗಿರುತ್ತವೆ. ಮತ್ತು 'ಅಹಮ್', ಎಂಬ ಈ ಸರ್ವನಾಮದಿಂದ ಯುಕ್ತವಾಗಿರುತ್ತವೆ."

(ನಿರುಕ್ತ : ೭.೧)]

ಅಯಂ ನಿಯಮಃ ವೇದೇಷು ಸರ್ವತ್ರ ಸಂಗಚ್ಛತೇ.

ಈ ನಿಯಮವು ವೇದಗಳಲ್ಲಿ ಎಲ್ಲ ಕಡೆಯೂ ಅನ್ವಯಿಸುತ್ತದೆ.

ಅಂದರೆ, ಯಾವ ಯಾವ ನಿಯಮಗಳನ್ನು ನಿರುಕ್ತ ರಚನಾಕಾರರೇ ಮೊದಲಾದವರು ಹೇಳಿದ್ದಾರೋ, ಅವು ಸರಿಯಾಗಿ ವೇದಗಳ ಎಲ್ಲಾ ಪ್ರಯೋಗಗಳಿಗೂ ಅನ್ವಯಿಸುತ್ತವೆ.

ತದ್ಯಥಾ_

ಅದು ಹೇಗೆಂದರೆ_

ಸರ್ವೇ ಮಂತ್ರಾಸ್ತ್ರಿವಿಧಾನಾಮರ್ಥಾನಾಂ ವಾಚಕಾ ಭವಂತಿ_

ಎಲ್ಲಾ ಮಂತ್ರಗಳೂ ಮೂರು ವಿಧದ ಅರ್ಥಗಳ ವಾಚಕಗಳಾಗಿರುತ್ತವೆ.

ಅಂದರೆ, ವೇದಗಳ ಎಲ್ಲಾ ಮಂತ್ರಗಳೂ ಮೂರು ಪ್ರಕಾರದ ಅರ್ಥಗಳನ್ನು ಹೇಳುತ್ತವೆ_

ಕೇಚಿತ್ ಪರೋಕ್ಷಾಣಾಂ ;

ಕೆಲವು **ಪರೋಕ್ಷ**ವಾದವುಗಳ ;

ಅಂದರೆ, ಅದೃಶ್ಯ ಅರ್ಥಗಳನ್ನು ;

ಕೇಚಿತ್ ಪ್ರತ್ಯಕ್ಷಾಣಾಂ ;

ಕೆಲವು **ಪ್ರತ್ಯಕ್ಷ**ವಾದವುಗಳ ;

ಅಂದರೆ, ದೃಶ್ಯ ಅರ್ಥಗಳನ್ನು ;

ಕೇಚಿದಧ್ಯಾತ್ಮಂ ವಕ್ತುಮರ್ಹಾಃ .

ಕೆಲವು **ಅಧ್ಯಾತ್ಮ**ವನ್ನು ಹೇಳಲು ಯೋಗ್ಯವಾಗಿರುತ್ತವೆ.

ಅಂದರೆ, ಜ್ಞಾನಗೋಚರವಾದ **ಆತ್ಮಾ** ಮತ್ತು **ಪರಮಾತ್ಮ**ನನ್ನು [ಹೇಳುತ್ತವೆ.]*

ಪರೋಕ್ಷದಲ್ಲಿ ಪ್ರಥಮಪುರುಷ!

ತತ್ರಾದ್ಯೇಷು ಪ್ರಥಮಪುರುಷಸ್ಯ ಪ್ರಯೋಗಾ ಭವಂತಿ ;

ಅವುಗಳಲ್ಲಿ_ ಮೊದಲಿನವುಗಳಲ್ಲಿ **ಪ್ರಥಮ ಪುರುಷ**ದ ಪ್ರಯೋಗಗಳಿರುತ್ತವೆ.

ಅಂದರೆ, ಪರೋಕ್ಷ ಅರ್ಥವನ್ನು ಹೇಳುವ ಮಂತ್ರಗಳಲ್ಲಿ ಪ್ರಥಮಪುರುಷದ, ಎಂದರೆ ತನ್ನವರ, ಹಾಗೂ ಇತರರ ಬಗ್ಗೆ ಮಾತನಾಡುವವನ ;

ಉದಾಹರಣೆಗಾಗಿ_

'ಸಃ', ಎಂದರೆ ಅವನು ಮುಂತಾದ ಶಬ್ದಗಳಿರುತ್ತವೆ. ಮತ್ತು ಅವುಗಳ ಕ್ರಿಯೆಗಳಾದ_ **'ಅಸ್ತಿ'** [= ಇರುತ್ತದೆ] ; **'ಭವತಿ'** [= ಇರುತ್ತಾನೆ]; **'ಕರೋತಿ'** [= ಮಾಡುತ್ತಾನೆ]; **'ಪಚತಿ'** [= ಅಡಿಗೆ ಮಾಡುತ್ತಾನೆ].

ಈ ಮೊದಲಾದ ಪ್ರಯೋಗಗಳಿರುತ್ತವೆ.

---

* ವೇದದಲ್ಲಿ **ಅಹಮ್** = ನಾನು, ಎಂಬ ಸರ್ವನಾಮ ಪ್ರಯೋಗವು ಆತ್ಮನ ಕಡೆಯಿಂದ ಅಥವಾ ಪರಮಾತ್ಮನ ಕಡೆಯಿಂದ ಆಗಿರುತ್ತದೆ, ಎಂದರ್ಥ _ಅನು.

ಪ್ರತ್ಯಕ್ಷದಲ್ಲಿ ಮಧ್ಯಮಪುರುಷ!

ಅಪರೇಷು ಮಧ್ಯಮಸ್ಯ ;

ಎರಡನೆಯವುಗಳಲ್ಲಿ **ಮಧ್ಯಮ[ಪುರುಷ]**ದ ;

ಅಂದರೆ, ಪ್ರತ್ಯಕ್ಷ ಅರ್ಥವನ್ನು ಹೇಳುವವರಲ್ಲಿ ಮಧ್ಯಮಪುರುಷದ ;

[ಉದಾಹರಣೆಗಾಗಿ_]

'ತ್ವಮ್', ಎಂದರೆ ನೀನು ಅಥವಾ ನೀವು* ಮೊದಲಾದ ಶಬ್ದಗಳೂ ಮತ್ತು ಅವುಗಳ ಕ್ರಿಯೆಗಳಾದ_

'ಅಸಿ' [= ಇರುತ್ತೀಯೆ]; **'ಭವಸಿ'** [= ಆಗಿರುತ್ತೀಯೆ]; **'ಕರೋತಿ'**[= ಮಾಡುತ್ತೀಯೆ]; **'ಪಚಸಿ'**[= ಅಡಿಗೆ ಮಾಡುತ್ತೀಯೆ].

ಈ ಮೊದಲಾದ ಪ್ರಯೋಗಗಳಿರುತ್ತವೆ.

ಅಧ್ಯಾತ್ಮದಲ್ಲಿ ಉತ್ತಮಪುರುಷ!

ತೃತೀಯೇಷೂತ್ತಮಪುರುಷಸ್ಯ ಚ.

ಮತ್ತು ಮೂರನೆಯವುಗಳಲ್ಲಿ **ಉತ್ತಮಪುರುಷ**ದ ;

ಅಂದರೆ, ಅಧ್ಯಾತ್ಮದ ಅರ್ಥವನ್ನು ಹೇಳುವ ಮಂತ್ರಗಳಲ್ಲಿ **ಉತ್ತಮಪುರುಷ**ದ ;

[ಉದಾಹರಣೆಗಾಗಿ_]

'ಅಹಮ್', ಎಂದರೆ ನಾನು ; **ವಯಮ್****, ಎಂದರೆ ನಾವು ಮೊದಲಾದ ಶಬ್ದಗಳೂ; ಮತ್ತು ಅವುಗಳ [ಕ್ರಿಯೆಗಳಾದ] _

'ಅಸ್ಮಿ' [= ಇರುತ್ತೇನೆ]; **'ಭವಾಮಿ'** [= ಆಗುತ್ತೇನೆ]; **'ಕರೋಮಿ'** [= ಮಾಡುತ್ತೇನೆ]; **'ಪಚಾಮಿ'** [= ಅಡಿಗೆ ಮಾಡುತ್ತೇನೆ].

ಈ ಮೊದಲಾದ ಕ್ರಿಯೆಗಳ [ಪ್ರಯೋಗಗಳೂ] ಬರುತ್ತವೆ.

---

* 'ಯೂಯಮ್', ಎಂಬ ಬಹುವಚನ ಸರ್ವನಾಮದ ಕ್ರಿಯೆಗಳನ್ನು ಇಲ್ಲಿ ಹೇಳಿಲ್ಲ _ಅನು.

** 'ವಯಮ್', ಎಂಬ ಬಹುವಚನ ಸರ್ವನಾಮದ ಕ್ರಿಯೆಗಳನ್ನು ಇಲ್ಲಿ ಹೇಳಿಲ್ಲ _ಅನು.

ಮಧ್ಯಮಪುರುಷ ಪ್ರಯೋಗದ ಎರಡು ವಿಧ!

ತತ್ರ ಮಧ್ಯಮಪುರುಷಪ್ರಯೋಗಾರ್ಥೌ ದ್ವೌ ಭೇದೌ ಸ್ತಃ .

ಇಲ್ಲಿ ಮಧ್ಯಮಪುರುಷ ಪ್ರಯೋಗದ ಅರ್ಥಗಳನ್ನು ಕೊಡುವಂತಹ ಎರಡು ಭೇದಗಳಿರುತ್ತವೆ_

ಯತ್ರಾರ್ಥಾಃ ಪ್ರತ್ಯಕ್ಷಾಃ ಸಂತಿ, ತತ್ರ ಮಧ್ಯಮ-ಪುರುಷಪ್ರಯೋಗಾ ಭವಂತಿ.

(i) ಎಲ್ಲಿ ಅರ್ಥಗಳು ಪ್ರತ್ಯಕ್ಷವಾಗಿರುವಂತಹವು ಆಗಿರುತ್ತವೋ, ಅಲ್ಲಿ ಮಧ್ಯಮಪುರುಷದ ಪ್ರಯೋಗಗಳಿರುತ್ತವೆ.

ಯತ್ರ ಚ ಸ್ತೋತವ್ಯಾ ಅರ್ಥಾಃ ಪರೋಕ್ಷಾಃ ಸ್ತೋತಾರಶ್ಚ ಖಲು ಪ್ರತ್ಯಕ್ಷಾಸ್ತತ್ರಾಪಿ ಮಧ್ಯಮಪುರುಷ-ಪ್ರಯೋಗೋ ಭವತೀತಿ.

(ii) ಮತ್ತು ಎಲ್ಲಿ ಸ್ತುತಿಸಲು ಯೋಗ್ಯವಾದ ಅರ್ಥಗಳು ಪರೋಕ್ಷವಾಗಿರುತ್ತವೋ, ಹಾಗೂ ಸ್ತುತಿ ಮಾಡುವವರಂತೂ ಪ್ರತ್ಯಕ್ಷವಾಗಿಯೇ ಇರುತ್ತಾರೋ, ಅಲ್ಲೂ ಕೂಡ, ಮಧ್ಯಮಪುರುಷದ ಪ್ರಯೋಗವೇ ಉಂಟಾಗುತ್ತದೆ.

ಅಂದರೆ, ಎಲ್ಲಿ ಸ್ತುತಿ ಮಾಡಲ್ಪಡಲು ಯೋಗ್ಯರಾದವರು ಪರೋಕ್ಷವಾಗಿಯೂ, ಮತ್ತು ಸ್ತುತಿ ಮಾಡುವವರು ಪ್ರತ್ಯಕ್ಷವಾಗಿಯೂ ಇರುತ್ತಾರೋ, ಅಲ್ಲೂ ಕೂಡ, ಮಧ್ಯಮಪುರುಷದ ಪ್ರಯೋಗವಾಗುತ್ತದೆ!

ಈ ಬಗ್ಗೆ ವ್ಯಾಕರಣದ ನಿಯಮ

ಅಸ್ಯಾಯಮಭಿಪ್ರಾಯಃ_

ಈ ವಿಷಯದಲ್ಲಿ ಇದರ ಅಭಿಪ್ರಾಯವೇನೆಂದರೆ_

ಅಂದರೆ, ಇಲ್ಲಿ ತಿಳಿಯಬೇಕಾದ ಅಭಿಪ್ರಾಯವೇನೆಂದರೆ_

ವ್ಯಾಕರಣರೀತ್ಯಾ ಪ್ರಥಮಮಧ್ಯಮೋತ್ತಮ-ಪುರುಷಾಃ ಕ್ರಮೇಣ ಭವಂತಿ.

ವ್ಯಾಕರಣದ ರೀತಿಯಿಂದ, ಪ್ರಥಮ, ಮಧ್ಯಮ ಮತ್ತು **ಉತ್ತಮಪುರುಷ**ಗಳು ತಮ್ಮ ತಮ್ಮ ಜಾಗದಲ್ಲಿ ಉಂಟಾಗುತ್ತವೆ. ಎಂದರೆ_

ತತ್ರ ಜಡಪದಾರ್ಥೇಷು ಪ್ರಥಮಪುರುಷ ಏವ, ಚೇತನೇಷು ಮಧ್ಯಮೋತ್ತಮೌ ಚ.

ಅಲ್ಲಿ ಜಡಪದಾರ್ಥಗಳಲ್ಲಿ **ಪ್ರಥಮಪುರುಷ** [ಪ್ರಯೋಗ]ವೇ [ಇರುತ್ತದೆ.] ಮತ್ತು ಚೇತನಗಳಲ್ಲಿ **ಮಧ್ಯಮ**, ಹಾಗೂ **ಉತ್ತಮಪುರುಷ** [ಪ್ರಯೋಗ]ಗಳು ಇರುತ್ತವೆ.

ಅಯಂ ಲೌಕಿಕವೈದಿಕಶಬ್ದಯೋಃ ಸಾರ್ವತ್ರಿಕ-ನಿಯಮಃ .

ಇದು ಲೌಕಿಕ, ಹಾಗೂ **ವೈದಿಕಶಬ್ದ** [ಪ್ರಯೋಗ]ಗಳಲ್ಲಿ ಸಾರ್ವತ್ರಿಕ ನಿಯಮವಾಗಿರುತ್ತದೆ!

ಅಂದರೆ, ಇದಂತೂ ಲೋಕದ ಮತ್ತು ವೇದದ ಶಬ್ದಗಳಲ್ಲಿ ಸಾಧಾರಣ ನಿಯಮವಾಗಿರುತ್ತದೆ.

ವೇದದಲ್ಲಿ ಜಡಪದಾರ್ಥಗಳ ಪ್ರತ್ಯಕ್ಷೀಕರಣಕ್ಕೆ ಆದೇಶ

ಪರಂತು ವೈದಿಕವ್ಯವಹಾರೇ ಜಡೇಽಪಿ ಪ್ರತ್ಯಕ್ಷೇ ಮಧ್ಯಮಪುರುಷಪ್ರಯೋಗಾಃ ಸಂತಿ.

ಆದರೆ, ವೈದಿಕವ್ಯವಹಾರದಲ್ಲಿ ಜಡವೂ ಕೂಡ, ಪ್ರತ್ಯಕ್ಷವಾಗಿರುವಾಗ, ಮಧ್ಯಮಪುರುಷದ ಪ್ರಯೋಗಗಳು ಆಗುತ್ತವೆ!

ಅಂದರೆ, ವೇದದ ಪ್ರಯೋಗಗಳಲ್ಲಿ ವಿಶೇಷತೆ ಏನಿರುತ್ತದೆಂದರೆ, ಜಡಪದಾರ್ಥಗಳೂ ಕೂಡ, ಪ್ರತ್ಯಕ್ಷವಾಗಿದ್ದರೆ, ಅಲ್ಲಿ ಮೇಲೆ ಹೇಳಿದ **ನಿರುಕ್ತಕಾರರ** ನಿಯಮದಂತೆ, ಮಧ್ಯಮಪುರುಷದ ಪ್ರಯೋಗವಾಗುತ್ತದೆ.

ತತ್ರೇದಂ ಬೋಧ್ಯಮ್_

ಅಲ್ಲಿ ತಿಳಿಯಬೇಕಾದುದು ಯಾವುದೆಂದರೆ_

ಅಂದರೆ, ಇದರಿಂದ ಅವಶ್ಯವಾಗಿ ತಿಳಿಯಬೇಕಾದುದೇನೆಂದರೆ_

ಜಡಾನಾಂ ಪದಾರ್ಥಾನಾಮುಪಕಾರಾರ್ಥಂ ಪ್ರತ್ಯಕ್ಷಕರಣಮಾತ್ರಮೇವ [ತಸ್ಯ] ಪ್ರಯೋಜನಮಿತಿ.

ಜಡಪದಾರ್ಥಗಳ ಉಪಕಾರವನ್ನು ಪಡೆಯುವದಕ್ಕಾಗಿ [ಅವುಗಳ] ಪ್ರತ್ಯಕ್ಷೀಕರಣ ಮಾತ್ರ ಮಾಡುವುದು ಅದರ ಪ್ರಯೋಜನವಾಗಿರುತ್ತದೆ!

ಅಂದರೆ, ಈಶ್ವರನು ಪ್ರಪಂಚದ ಜಡಪದಾರ್ಥಗಳನ್ನು ಪ್ರತ್ಯಕ್ಷ ಮಾಡಿಸಿ, ಅವುಗಳಿಂದ ಕೇವಲ ಅನೇಕ ಉಪಕಾರಗಳನ್ನು ಮಾತ್ರ ತೆಗೆದುಕೊಳ್ಳಬೇಕೆಂದು ತಿಳಿಸಿದ್ದಾನೆ ; ಬೇರಾವ ಪ್ರಯೋಜನವೂ ಇಲ್ಲ!

ಸಾಯಣ ಮೊದಲಾದ ಭಾಷ್ಯಕಾರರಿಗೆ ವೇದಗಳಲ್ಲಿ ಜಡಪದಾರ್ಥಪೂಜೆಯ ಭ್ರಾಂತಿ!

ಇಮಂ ನಿಯಮಮಬುದ್ಧ್ವಾ ವೇದಭಾಷ್ಯ-ಕಾರೈಃ ಸಾಯಣಾಚಾರ್ಯಾದಿಭಿಸ್ತದನುಸಾರತಯಾ ಸ್ವದೇಶಭಾಷಯಾಽನುವಾದಕಾರಕೈರ್ಯೂರೋಪಾಖ್ಯ-ದೇಶನಿವಾಸ್ಯಾದಿಭಿರ್ಮನುಷ್ಯೈರ್ವೇದೇಷು ಜಡ-ಪದಾರ್ಥಾನಾಂ ಪೂಜಾಽಸ್ತೀತಿ ವೇದಾರ್ಥೋಽನ್ಯಥೈವ ವರ್ಣಿತಃ .

ಈ ನಿಯಮವನ್ನು ತಿಳಿಯದೇ, **ಸಾಯಣಾಚಾರ್ಯರೇ** ಮೊದಲಾದ ವೇದಭಾಷ್ಯ ಕಾರರಿಂದಲೂ, ಮತ್ತು ಅವರಿಗನುಸಾರವಾಗಿ ಸ್ವದೇಶ ಭಾಷೆಯಲ್ಲಿ ಅನುವಾದ ಮಾಡುವವರಿಂದಲೂ, ಹಾಗೂ ಯೂರೋಪ್, ಎಂಬ ಹೆಸರಿನ ದೇಶದ ನಿವಾಸಿಗಳಾದ ಮನುಷ್ಯರಿಂದಲೂ_ 'ವೇದಗಳಲ್ಲಿ ಜಡಪದಾರ್ಥಗಳ ಪೂಜೆ ಇದೆ', ಎಂದು ವೇದದ ಅರ್ಥವು ವಿಪರೀತವಾಗಿಯೇ ವರ್ಣಿಸಲ್ಪಟ್ಟಿದೆ!

ಅಂದರೆ, ಈ ನಿಯಮವನ್ನು ತಿಳಿಯದೇ, ಸಾಯಣಾಚಾರ್ಯರು ಮೊದಲಾದ ವೇದಭಾಷ್ಯಕಾರರೂ, ಹಾಗೂ ಅವರು ರಚಿಸಿದ ಭಾಷ್ಯಗಳ ಅವಲಂಬನೆಯಿಂದ ಯೂರೋಪ್‌ದೇಶ ನಿವಾಸಿಗಳಾದ ವಿದ್ವಾಂಸರೂ ಕೂಡ, ವೇದಗಳ ಯಾವ ಅರ್ಥಗಳನ್ನು ವಿಪರೀತವಾಗಿಯೇ ಮಾಡಿಬಿಟ್ಟಿದ್ದಾರೋ, ಅದು ಅವರ ತಪ್ಪಾಗಿದೆ.

ಮತ್ತು ಇದರಿಂದಲೇ, ಅವರು_ 'ವೇದಗಳಲ್ಲಿ ಜಡಪದಾರ್ಥಗಳ ಪೂಜೆ ಸಿಗುತ್ತದೆ', ಎಂದು ಬರೆಯುತ್ತಾರೆ.

[ಆದರೆ,] ಇದರ ಚಿಹ್ನೆಯು ಎಲ್ಲೂ ಇಲ್ಲ!

ಇತಿ ವೈದಿಕಪ್ರಯೋಗವಿಷಯಃ ಸಂಕ್ಷೇಪತಃ ॥

ಇಲ್ಲಿಗೆ ವೈದಿಕಪ್ರಯೋಗದ ವಿಷಯವು ಸಂಕ್ಷೇಪವಾಗಿ ಮುಗಿಯಿತು. [೩೧]

(೩೨) ಸ್ವರವ್ಯವಸ್ಥೆ

ಅಥ ಸಂಕ್ಷೇಪತಃ ಸ್ವರವ್ಯವಸ್ಥಾವಿಷಯಃ

ಈಗ ಸಂಕ್ಷೇಪವಾಗಿ ಸ್ವರ-ವ್ಯವಸ್ಥೆಯ ವಿಷಯವನ್ನು ಬರೆಯುತ್ತೇವೆ.

ಅಥ ವೇದಾರ್ಥೋಪಯೋಗಿತಯಾ ಸಂಕ್ಷೇಪೇಣ ಸ್ವರಾಣಾಂ ವ್ಯವಸ್ಥಾ ಲಿಖ್ಯತೇ.

ಈಗ, ವೇದಾರ್ಥಕ್ಕೆ ಉಪಯೋಗವಾಗುವ ಹೇತುವಿನಿಂದ, ಸಂಕ್ಷೇಪವಾಗಿ ಸ್ವರಗಳ ವ್ಯವಸ್ಥೆಯು ಬರೆಯಲ್ಪಡುವುದು.

ಎರಡು ವಿಧದ ಸ್ವರಗಳು

ತೇ ಸ್ವರಾ ದ್ವಿವಿಧಾಃ_

ಉದಾತ್ತಷಡ್ಜಾದಿಭೇದಾತ್ ಸಪ್ತ ಸಪ್ತೈವ ಸಂತಿ.

ಆ ಸ್ವರಗಳು ಎರಡು ವಿಧದವಾಗಿರುತ್ತವೆ_

ಉದಾತ್ತ ಮತ್ತು ಷಡ್ಜ ಮೊದಲಾದ [ಸ್ವರ-] ಭೇದದಿಂದ ಏಳು-ಏಳೇ ಇವೆ.

ಅಂದರೆ, ಇವು ಉದಾತ್ತ ಮತ್ತು ಷಡ್ಜ ಮೊದಲಾದ ಭೇದದಿಂದ ಹದಿನಾಲ್ಕು ಪ್ರಕಾರಗಳದ್ದಾಗಿವೆ. ಎಂದರೆ, ಉದಾತ್ತ ಮೊದಲಾದುವು ಏಳು, ಮತ್ತು ಷಡ್ಜ ಮೊದಲಾದುವು ಏಳು!

ಉದಾತ್ತಸ್ವರದ ಲಕ್ಷಣಗಳು

ತತ್ರೋದಾತ್ತಾದೀನಾಂ ಲಕ್ಷಣಾನಿ ವ್ಯಾಕರಣ-ಮಹಾಭಾಷ್ಯಕಾರಪತಂಜಲಿಪ್ರದರ್ಶಿತಾನಿ ಲಿಖ್ಯಂತೇ_

ಅವುಗಳಲ್ಲಿ_ ವ್ಯಾಕರಣಮಹಾಭಾಷ್ಯಕಾರರಾದ ಪತಂಜಲಿಯವರಿಂದ ತೋರಿಸಲ್ಪಟ್ಟ ಉದಾತ್ತ ಮೊದಲಾದುವುಗಳ ಲಕ್ಷಣಗಳು ಬರೆಯಲ್ಪಡುತ್ತವೆ_

"ಸ್ವಯಂ ರಾಜಂತ ಇತಿ ಸ್ವರಾಃ ।" [ಮಹಾಭಾಷ್ಯೇ ೧. ೨. ೩೧]

[ಅರ್ಥ:_ "ತಾವೇ ಪ್ರಕಾಶಿಸುತ್ತಿವೆಯಾದುದರಿಂದ, 'ಸ್ವರಗಳು', ಎನಿಸುತ್ತವೆ."

(ಮಹಾಭಾಷ್ಯ: ೧. ೨. ೩೧)]

ಅಂದರೆ, ಯಾವುವು 'ತಾವೇ', ಎಂದರೆ ಯಾವ ಸಹಾಯವೂ ಇಲ್ಲದೇ, ಇತರವನ್ನು ಪ್ರಕಾಶಿಸುವಂತಹವಾಗಿರುತ್ತವೋ, ಅವು 'ಸ್ವರ', ಎನಿಸುತ್ತವೆ.

"ಆಯಾಮೋ ದಾರುಣ್ಯಮಣುತಾ ಖಸ್ಯೇತ್ಯುಚ್ಚೈಃಕರಾಣಿ ಶಬ್ದಸ್ಯ ।"

[ಅರ್ಥ:_ "ಕಂಠದ ಆಯಾಮ, ದಾರುಣ್ಯ, ಮತ್ತು ಅಣುತ್ವ, ಎಂಬುವು ಶಬ್ದದ ಉಚ್ಚಸ್ಥಿತಿಗಳಾಗಿರುತ್ತವೆ.

"ಆಯಾಮೋ ಗಾತ್ರಾಣಾಂ ನಿಗ್ರಹಃ ;

[ಅರ್ಥ:_ "'ಆಯಾಮ', ಎಂದರೆ ಅಂಗಗಳನ್ನು ತಡೆಯುವುದು ;

"ದಾರುಣ್ಯಂ ಸ್ವರಸ್ಯ ದಾರುಣತಾ ರೂಕ್ಷತಾ ;

[ಅರ್ಥ:_ "'ದಾರುಣ್ಯ', ಎಂದರೆ ಸ್ವರದ ಕಠೋರತ್ವ, ರೂಕ್ಷತ್ವ.

ಅಂದರೆ, ವಾಣಿಯನ್ನು ಒರಟು ಮಾಡುವುದು; ಎಂದರೆ, ಉಚ್ಚಸ್ವರದಲ್ಲಿ ಹೇಳುವುದು.

"ಅಣುತಾ ಖಸ್ಯ ;"

[ಅರ್ಥ:_ "ಕಂಠವನ್ನು ಸಣ್ಣದಾಗಿ ಮಾಡಿಕೊಳ್ಳುವುದು;

ಅಂದರೆ, ಕಂಠವನ್ನು ಕೂಡ, ತಡೆದುಕೊಳ್ಳುವುದು.

"ಕಂಠಸ್ಯ ಸಂವೃತತಾ ;"

[ಅರ್ಥ:_ "ಕಂಠವನ್ನು ಸಂಕೋಚಿಸುವುದು;

"ಉಚ್ಚೈಃಕರಾಣಿ ಶಬ್ದಸ್ಯ ॥"

[ಮಹಾಭಾಷ್ಯೇ ೧. ೨. ೨೯]

[ಅರ್ಥ:_ "ಇವು ಶಬ್ದವನ್ನು ಏರಿಸುವಂತಹವಾಗಿರುತ್ತವೆ."

(ಮಹಾಭಾಷ್ಯ: ೧. ೨. ೨೯)]

ಅಂದರೆ, ಈ ಎಲ್ಲಾ ಯತ್ನಗಳೂ ಶಬ್ದದ ಉದಾತ್ತವಿಧಾನವನ್ನು ಮಾಡಿಸುವಂತಹವಾಗಿರುತ್ತವೆ. ಎಂದರೆ, ಈ ನಿಯಮಗಳಿಗೆ ಅನುಕೂಲವಾಗಿಯೇ ಉದಾತ್ತಸ್ವರವು ಉಚ್ಚರಿಸಲಾಗುತ್ತದೆ.

ಅನುದಾತ್ತಸ್ವರದ ಲಕ್ಷಣಗಳು

" ಅನ್ವವಸರ್ಗೋ ಮಾರ್ದವಮುರುತಾ ಖಸ್ಯೇತಿ
ನೀಚೈಃಕರಾಣಿ ಶಬ್ದಸ್ಯ ।

[ಅರ್ಥ:_ " ಕಂಠದ ಅನ್ವವಸರ್ಗ, ಮಾರ್ದವ ಮತ್ತು ಉರುತ್ವ, ಎಂಬುವು ಶಬ್ದದ ನೀಚಸ್ಥಿತಿಗಳಾಗಿರುತ್ತವೆ."

" ಅನ್ವವಸರ್ಗೋ ಗಾತ್ರಾಣಾಂ ಶಿಥಿಲತಾ ;

[ಅರ್ಥ:_ " 'ಅನ್ವವಸರ್ಗ', ಎಂದರೆ ಅಂಗಗಳ ಶಿಥಿಲತೆ ;

" ಮಾರ್ದವಂ ಸ್ವರಸ್ಯ ಮೃದುತಾ, ಸ್ನಿಗ್ಧತಾ ;

[ಅರ್ಥ:_ " 'ಮಾರ್ದವ', ಎಂದರೆ ಸ್ವರದ ಕೋಮಲತೆ, ಸ್ನಿಗ್ಧತ್ವ ;

" ಉರುತಾ ಖಸ್ಯ ಮಹತ್ತಾ ;

[ಅರ್ಥ:_ " 'ಉರುತ್ವ', ಎಂದರೆ ಕಂಠವನ್ನು ದೊಡ್ಡದಾಗಿ ಮಾಡಿಕೊಳ್ಳುವುದು ;

ಅಂದರೆ, ಕಂಠವನ್ನು ಅಗಲಿಸುವುದು.

" ಕಂಠಸ್ಯೇತಿ ನೀಚೈಃಕರಾಣಿ ಶಬ್ದಸ್ಯ ॥ "

[ಮಹಾಭಾಷ್ಯೇ ೧. ೨. ೩೦]

[ಅರ್ಥ:_ " ಕಂಠದ ಈ [ಯತ್ನಗಳು] ಶಬ್ದವನ್ನು ನೀಚಸ್ಥಿತಿಗೆ ತರುವಂತಹವಾಗಿರುತ್ತವೆ.

(ಮಹಾಭಾಷ್ಯ : ೧. ೨. ೩೦)]

ಅಂದರೆ, ಈ ಎಲ್ಲಾ ಯತ್ನಗಳೂ ಶಬ್ದವನ್ನು ಅನುದಾತ್ತವನ್ನಾಗಿ ಮಾಡುತ್ತವೆ.

ಸ್ವರಿತಸ್ವರದ ಲಕ್ಷಣ

" ತ್ರೈಸ್ವರ್ಯೇಣಾಧೀಮಹೇ ತ್ರಿಪ್ರಕಾರೈರಜ್ಭಿರಧೀಮಹೇ ।"

[ಅರ್ಥ:_ " ನಾವು ಮೂರು ಸ್ವರಗಳಿಂದ ಓದುತ್ತೇವೆ. ಎಂದರೆ, ಮೂರು ಪ್ರಕಾರದ 'ಅಚ್'ಗಳಿಂದ* ಓದುತ್ತೇವೆ.

* ಅಚ್ = ಅ, ಇ, ಉ, ಋ, ಲೃ, ಏ, ಓ, ಐ, ಔ _ಅನು.

" ಕೈಶ್ಚಿದುದಾತ್ತಗುಣೈಃ ಕೈಶ್ಚಿದನುದಾತ್ತಗುಣೈಃ ;"

[ಅರ್ಥ:_ " ಯಾವುದೋ ಉದಾತ್ತಗುಣಗಳಿಂದ; ಯಾವುದೋ ಅನುದಾತ್ತ-ಗುಣಗಳಿಂದ;

" ಕೈಶ್ಚಿದುಭಯಗುಣೈಃ ।"

[ಅರ್ಥ:_ " [ಮತ್ತು] ಯಾವುದೋ ಉಭಯಗುಣಗಳಿಂದ."

ಅಂದರೆ, ಉದಾತ್ತಾನುದಾತ್ತದಿಂದ, ಎಂದರೆ, ಸ್ವರಿತಗುಣವುಳ್ಳ ಸ್ವರಗಳಿಂದ ;

ನಾವು ಯಥಾಯೋಗ್ಯವಾಗಿ ನಿಯಮಾನುಸಾರ ಅಕ್ಷರಗಳ ಉಚ್ಚಾರಣೆ ಮಾಡುತ್ತೇವೆ.

ಸ್ವರಗಳ ವರ್ಣಕಲ್ಪನೆಯ ದೃಷ್ಟಾಂತ

"ತದ್ಯಥಾ_

[ಅರ್ಥ:_ " ಉದಾಹರಣೆಗಾಗಿ_

" ಶುಕ್ಲಗುಣಃ ಶುಕ್ಲಃ , ಕೃಷ್ಣಗುಣಃ ಕೃಷ್ಣಃ ;

[ಅರ್ಥ:_ " ಬಿಳಿಯ ಗುಣವನ್ನುಳ್ಳದ್ದು ಬಿಳಿಯದು; ಕಪ್ಪು ಗುಣವನ್ನುಳ್ಳದ್ದು ಕಪ್ಪು;

" ಯ ಇದಾನೀಮುಭಯಗುಣಃ ಸ ತೃತೀಯಾಮಾಖ್ಯಾಂ ಲಭತೇ_ "

[ಅರ್ಥ:_ " ಯಾವುದು ಈಗ, ಎರಡೂ ಗುಣಗಳನ್ನುಳ್ಳದ್ದಾಗಿರುತ್ತದೋ, ಅದು ಮೂರನೆಯ ಗುಣವನ್ನುಳ್ಳದ್ದು, ಎಂದು ಕರೆಯಲ್ಪಡುತ್ತದೆ_

" ಕಲ್ಮಾಷ ಇತಿ ವಾ, ಸಾರಂಗ ಇತಿ ವಾ ।"

[ಅರ್ಥ:_ " ಎಂದರೆ, ಶ್ಯಾಮವರ್ಣವೆಂದೂ, ಅಥವಾ ಮೇಘವರ್ಣವೆಂದೂ."

ಅಂದರೆ, ಬಿಳಿಯ ಮತ್ತು ಕಪ್ಪು ಬಣ್ಣಗಳು ಬೇರೆ ಬೇರೆಯಾಗಿಯೇನೋ ಇರುತ್ತವೆ ; ಆದರೆ, ಇವೆರಡನ್ನು ಸೇರಿಸಿದರೆ, ಯಾವ ಬಣ್ಣ ಉತ್ಪನ್ನವಾಗುತ್ತದೋ, ಅದಕ್ಕೆ ಮೂರನೆಯ ಹೆಸರಿಡಬೇಕಾಗುತ್ತದೆ_ ಎಂದರೆ ಖಾಕೀ ಬಣ್ಣ, ಅಥವಾ ಆಕಾಶದ ಬಣ್ಣ!

" ಏವಮಿಹಾಪಿ ಉದಾತ್ತ ಉದಾತ್ತಗುಣಃ ; ಅನುದಾತ್ತೋಽನುದಾತ್ತಗುಣಃ ;

[ಅರ್ಥ:_ " ಹೀಗೆಯೇ, ಇಲ್ಲೂ ಕೂಡ, ಉದಾತ್ತಗುಣವನ್ನುಳ್ಳದ್ದು ಉದಾತ್ತ; ಅನುದಾತ್ತಗುಣವನ್ನುಳ್ಳದ್ದು ಅನುದಾತ್ತ;

---

* ಮಹಾಭಾಷ್ಯೇ ೧. ೨. ೨೯, ೩೦

"ಯ ಇದಾನೀಮುಭಯಗುಣಃ ಸ ತೃತೀಯಾಮಾಖ್ಯಾಂ ಲಭತೇ
ಸ್ವರಿತ ಇತಿ ॥"

[ಮಹಾಭಾಷ್ಯೇ ೧. ೨. ೩೧]

[ಅರ್ಥ:_ "ಮತ್ತು ಯಾವುದು ಈಗ ಎರಡೂ ಗುಣವನ್ನುಳ್ಳದ್ದಾಗಿರುತ್ತದೋ, ಅದು ಮೂರನೆಯ ಹೆಸರನ್ನು ಪಡೆಯುತ್ತದೆ. ಎಂದರೆ, 'ಸ್ವರಿತ', ಎಂದು."

(ಮಹಾಭಾಷ್ಯ : ೧. ೨. ೩೧)]

ಅಂದರೆ, ಇಲ್ಲೂ ಕೂಡ, **ಉದಾತ್ತ** ಮತ್ತು **ಅನುದಾತ್ತ** ಗುಣಗಳು ಬೇರೆ ಬೇರೆಯಾಗಿವೆ. ಆದರೆ, ಇವೆರಡೂ ಸೇರುವುದರಿಂದ, ಯಾವುದು ಉತ್ಪನ್ನವಾಗುತ್ತದೋ, ಅದಕ್ಕೆ **'ಸ್ವರಿತ'**, ಎನ್ನುತ್ತಾರೆ.

ಈ ಸ್ವರಗಳ ಏಳು ಭೇದ

"ತ ಏತೇ ತಂತ್ರೇ ತರನಿರ್ದೇಶೇ ಸಪ್ತಸ್ವರಾಃ ಭವಂತಿ ।

[ಅರ್ಥ:_ "ಅವೆಲ್ಲವೂ 'ತಂತ್ರ', ಎಂದರೆ 'ತರ' ನಿರ್ದೇಶ ಮಾಡಿದಾಗ, ಏಳು ಸ್ವರಗಳಾಗುತ್ತವೆ!'

ಅಂದರೆ, ಅವು ವಿಶೇಷ ಅರ್ಥವನ್ನು ತಿಳಿಸುವಂತಹ **'ತರಪ್'** ಪ್ರತ್ಯಯದ ಸಂಯೋಗದಿಂದ, ಉದಾತ್ತಾದಿ ಏಳು ಸ್ವರಗಳಾಗುತ್ತವೆ. ಎಂದರೆ_

"ಉದಾತ್ತಃ , ಉದಾತ್ತತರಃ , ಅನುದಾತ್ತಃ , ಅನುದಾತ್ತತರಃ , ಸ್ವರಿತಃ;

[ಅರ್ಥ:_ "ಉದಾತ್ತ, ಉದಾತ್ತತರ , ಅನುದಾತ್ತ, ಅನುದಾತ್ತತರ, ಸ್ವರಿತ;

"ಸ್ವರಿತೇ ಯಃ ಉದಾತ್ತಃ ಸೋಽನ್ಯೇನ ವಿಶಿಷ್ಟಃ ;

[ಅರ್ಥ:_ [ಮತ್ತು] ಸ್ವರಿತದಲ್ಲಿ ಯಾವುದು ಉದಾತ್ತವಾಗಿ ಬೇರೆಯದಕ್ಕಿಂತ ವಿಶಿಷ್ಟವಾಗಿರುತ್ತದೋ, ಅದು.

"ಏಕಶ್ರುತಿಃ ಸಪ್ತಮಃ ॥"

[ಮಹಾಭಾಷ್ಯೇ ೧. ೨. ೩೩]

[ಅರ್ಥ:_ "ಏಳನೆಯದಾದ ಏಕಶ್ರುತಿ."

(ಮಹಾಭಾಷ್ಯ : ೧. ೨. ೩೩)]

ಅಂದರೆ, (೧) ಉದಾತ್ತ (೨) ಉದಾತ್ತತರ (೩) ಅನುದಾತ್ತ (೪) ಅನುದಾತ್ತತರ (೫) ಸ್ವರಿತ (೬) ಸ್ವರಿತೋದಾತ್ತ ಮತ್ತು (೭) ಏಕಶ್ರುತಿ, ಎಂದು ಮೇಲೆ ಹೇಳಿದ ರೀತಿಯಂತೆ, ಈ ಏಳೂ ಸ್ವರಗಳನ್ನು ಸರಿ ಸರಿಯಾಗಿ ತಿಳಿದುಕೊಳ್ಳಬೇಕು!

[ಮಹಾಭಾಷ್ಯೇ (ಅ. ೧, ಪಾ. ೨)_]

ಹೀಗೆ, **ಮಹಾಭಾಷ್ಯದಲ್ಲಿ** (ಅಧ್ಯಾಯ ೧, ಪಾದ ೨_)

" ಉಚ್ಚೈರುದಾತ್ತಃ ॥ "

[ಅಷ್ಟಾಧ್ಯಾಯ್ಯಾಮ್ ೧. ೨. ೨೯]

[ಅರ್ಥ:_ " ಉಚ್ಚಸ್ವರದಲ್ಲಿ ಹೇಳುವುದು ಉದಾತ್ತ, ಎನಿಸುತ್ತದೆ."

(ಅಷ್ಟಾಧ್ಯಾಯೀ : ೧. ೨. ೨೯)]

ಇತ್ಯಾದ್ಯುಪರಿ.

ಈ ಮೊದಲಾದ [ಸೂತ್ರಗಳ] ಮೇಲಿನ ವ್ಯಾಖ್ಯಾನದಲ್ಲಿ ಹೇಳಲಾಗಿದೆ.

ಸಂಗೀತದ ಸ್ವರಗಳ ಏಳು ಭೇದ

ತಥಾ ಷಡ್ಜಾದಯಃ ಸಪ್ತ _

ಹೀಗೆಯೇ, **ಷಡ್ಜ**, ಮೊದಲಾದ ಏಳು ಸ್ವರಗಳಿವೆ.

ಅಂದರೆ, ಈಗ, ಗಾನವಿದ್ಯೆಯ ಭೇದಗಳಾದ **ಷಡ್ಜ** ಮೊದಲಾದ ಸ್ವರಗಳನ್ನು ಬರೆಯುತ್ತೇವೆ_

" ಸ್ವರಾಃ ಷಡ್ಜ-ಋಷಭ-ಗಾಂಧಾರ-ಮಧ್ಯಮ-ಪಂಚಮ-ಧೈವತ-ನಿಷಾದಾಃ ॥ "

[ಪಿಂಗಲಸೂತ್ರೇ ಅ. ೩, ಸೂ. ೬೪]

[ಅರ್ಥ:_ " ಸ್ವರಗಳು_ ಷಡ್ಜ, ಋಷಭ, ಗಾಂಧಾರ, ಮಧ್ಯಮ, ಪಂಚಮ, ಧೈವತ ಮತ್ತು ನಿಷಾದ, ಎಂದಿವೆ."

(ಪಿಂಗಲಸೂತ್ರ : ೩. ೬೪)]

ಏಷಾಂ ಲಕ್ಷಣವ್ಯವಸ್ಥಾ ಗಾಂಧರ್ವವೇದಪ್ರಸಿದ್ಧಾ ಗ್ರಾಹ್ಯಾ.

ಇವುಗಳ ಲಕ್ಷಣಗಳ ವ್ಯವಸ್ಥೆಯು **ಗಾಂಧರ್ವ ವೇದದಲ್ಲಿ** ಪ್ರಕಟಿಸಲ್ಪಟ್ಟಿರುವಂತೆ ಗ್ರಹಿಸಲ್ಪಡಬೇಕು!

ಅಂದರೆ, **ಗಾಂಧರ್ವವೇದ,** ಎಂದರೆ ಗಾನ ವಿದ್ಯೆಯ ಗ್ರಂಥಗಳಲ್ಲಿ ಪ್ರಸಿದ್ದವಾಗಿರುವಂತೆ, ಇವುಗಳ ಲಕ್ಷಣಗಳನ್ನು ವ್ಯವಸ್ಥೆಯೊಡನೆ, ನೋಡಿಕೊಳ್ಳಬೇಕು!

ಅತ್ರ ತು ಗ್ರಂಥಭೂಯಸ್ತ್ವಭಿಯಾ ಲೇಖಿತುಮಶಕ್ಯಾ.

ಇಲ್ಲಂತೂ, ಗ್ರಂಥವು ದೊಡ್ಡದಾದೀತೆಂಬ ಭಯದಿಂದ, ಬರೆಯಲು ಅಶಕ್ಯವಾಗಿದೆ!

ಅಂದರೆ, ಇಲ್ಲಿ ಗ್ರಂಥವು ದೊಡ್ಡದಾದೀತೆಂಬ ಕಾರಣದಿಂದ ಬರೆಯುವುದಿಲ್ಲ!

ಇತಿ ಸ್ವರವ್ಯವಸ್ಥಾವಿಷಯಃ ಸಂಕ್ಷೇಪತಃ ॥

ಇಲ್ಲಿಗೆ ಸ್ವರವ್ಯವಸ್ಥೆಯ ವಿಷಯವು ಸಂಕ್ಷೇಪವಾಗಿ ಮುಗಿಯಿತು. [೩೨]

(೩೩) ವೈದಿಕ ವ್ಯಾಕರಣ

ಅಥ ವ್ಯಾಕರಣನಿಯಮವಿಷಯಃ

ಈಗ, ವ್ಯಾಕರಣನಿಯಮಗಳ ವಿಷಯವನ್ನು ಹೇಳುತ್ತೇವೆ.

ಅಥಾತ್ರ ಚತುರ್ಷು ವೇದೇಷು ವ್ಯಾಕರಣಸ್ಯ ಯೇ ಸಾಮಾನ್ಯತೋ ನಿಯಮಾಃ ಸಂತಿ, ತ ಇದಾನೀಂ ಪ್ರದರ್ಶ್ಯಂತೇ.

ಈಗ, ಇಲ್ಲಿ ನಾಲ್ಕೂ ವೇದಗಳಲ್ಲಿ ವ್ಯಾಕರಣದ ಯಾವ ಸಾಮಾನ್ಯವಾದ ನಿಯಮಗಳಿವೆಯೋ, ಅವು ಈಗ ಪ್ರದರ್ಶಿಸಲ್ಪಡುತ್ತವೆ.

(೧) ಒಂದು ಶಬ್ದಕ್ಕೆ ಎರಡು 'ಸಂಜ್ಞೆ'*ಗಳಿರುತ್ತವೆ

ತದ್ಯಥಾ_

ಅದು ಹೇಗೆಂದರೆ_

"ವೃದ್ಧಿರಾದೈಚ್ ॥೧॥"

[ಅಷ್ಟಾಧ್ಯಾಯ್ಯಾಮ್ ೧. ೧. ೧]

[ಅರ್ಥ:_ "ಆ, ಐ, ಮತ್ತು ಔ ಗೆ 'ವೃದ್ಧಿ', ಎಂಬ ಸಂಜ್ಞೆ ಇದೆ."

(ಅಷ್ಟಾಧ್ಯಾಯೀ: ೧. ೧. ೧)]

"ಉಭಯಸಂಜ್ಞಾನ್ಯಪಿ ಛಂದಾಂಸಿ ದೃಶ್ಯಂತೇ ।

[ಅರ್ಥ:_ "ವೇದಗಳಲ್ಲಿ ಎರಡೂ ಸಂಜ್ಞೆಗಳು ಕಾಣಬರುತ್ತವೆ.

ಅಂದರೆ, ವೇದಗಳಲ್ಲಿ ಒಂದು ಶಬ್ದದ ಮಧ್ಯೆ 'ಭ' ಮತ್ತು 'ಪದ'_ ಈ ಎರಡೂ ಸಂಜ್ಞೆಗಳು ಬರುತ್ತವೆ.

"ತದ್ಯಥಾ_

[ಅರ್ಥ:_ "ಉದಾಹರಣೆಗಾಗಿ_

* 'ಸಂಜ್ಞೆ', ಎಂದರೆ ಅಷ್ಟಾಧ್ಯಾಯಿಯಲ್ಲಿ ನಿರ್ದಿಷ್ಟವಾದ ಸಂಜ್ಞಾಪ್ರಕರಣದವು _ಅನು.

"ಸ ಸುಷ್ಟುಭಾ ಸ ಋಕ್ವತಾ ಗಣೇನ ।"

[ಋಗ್ವೇದೇ ೪. ೫೦. ೫]

"ಪದತ್ವಾತ್ ಕುತ್ವಂ ; ಭತ್ವಾಜ್ಜಶ್ತ್ವಂ ನ ಭವತಿ ॥"

[ಅರ್ಥ:_ "[ಈ ಮಂತ್ರದಲ್ಲಿ] ಪದವಾದುದರಿಂದ ಕು = ಕವರ್ಗ ಬಂದಿತು ; 'ಭ' ಸಂಜ್ಞೆಯನ್ನುಳ್ಳದ್ದರಿಂದ, 'ಜಶ್'* ಉಂಟಾಗಲಿಲ್ಲ."

ಅಂದರೆ, 'ಋಕ್ವತಾ', ಎಂಬ ಶಬ್ದದಲ್ಲಿ, ಇದು ಪದವಾದುದರಿಂದ, [ಋಚ್ವತಾ', ಎಂಬುದಕ್ಕೆ ಬದಲು] ಚಕಾರದ ಸ್ಥಾನದಲ್ಲಿ ಕಕಾರವಾಯಿತು.**

ಮತ್ತು 'ಭ', ಎಂಬುದು ಸಂಜ್ಞೆಯನ್ನುಳ್ಳದ್ದಾದುದರಿಂದ, (ಕಕಾರದ ಸ್ಥಾನದಲ್ಲಿ) ಗಕಾರ ಉಂಟಾಗಲಿಲ್ಲ*.

ಇತಿ ಭಾಷ್ಯವಚನಮ್.

ಹೀಗೆ, [ಮಹಾ]ಭಾಷ್ಯದ ವಚನವಿದೆ!

ಅನೇನೈಕಸ್ಮಿನ್ ಶಬ್ದೇ 'ಭ'-'ಪದ'ಸಂಜ್ಞಾಕಾರ್ಯ-ದ್ವಯಂ ವೇದೇಷ್ವೇವ ಭವತಿ, ನಾನ್ಯತ್ರ ॥ ೧ ॥

ಇದರಿಂದ, ಒಂದು ಶಬ್ದದಲ್ಲಿ 'ಭ' ಮತ್ತು 'ಪದ' ಸಂಜ್ಞೆ ಮಾಡುವಂತಹ ಎರಡು ನಿಯಮಗಳು ವೇದಗಳಲ್ಲಿ ಮಾತ್ರ ಇರುತ್ತವೆ ; ಬೇರೆ ಕಡೆಯಲ್ಲಲ್ಲ. [೧]

(೨) ಅರ್ಥಕ್ಕೆ ಪ್ರಾಧಾನ್ಯತೆ; ವಿಭಕ್ತಿ-ವಚನಕ್ಕಲ್ಲ!

"ಸ್ಥಾನಿವದಾದೇಶೋऽನಲ್ವಿಧೌ ॥ ೨ ॥"

[ಅಷ್ಟಾಧ್ಯಾಯ್ಯಾಮ್ ೧. ೧. ೫೬]

[ಅರ್ಥ:_ "'ಅಲ್'ವಿಧಿಯನ್ನು ಬಿಟ್ಟು, 'ಆದೇಶ'ವು 'ಸ್ಥಾನ'ದಲ್ಲಿರುವುದರ ಸಮಾನವಾಗಿ ತಿಳಿಯಲ್ಪಡುತ್ತದೆ."

(ಅಷ್ಟಾಧ್ಯಾಯೀ: ೧. ೧. ೫೬)]

"ಪ್ರಾತಿಪದಿಕನಿರ್ದೇಶಾಶ್ಚಾರ್ಥತಂತ್ರಾ ಭವಂತಿ ; ನ ಕಾಂಚಿತ್ ಪ್ರಾಧಾನ್ಯೇನ ವಿಭಕ್ತಿಮಾಶ್ರಯಂತಿ ।

[ಅರ್ಥ:_ "ಪ್ರಾತಿಪದಿಕಗಳ ನಿರ್ದೇಶಗಳು ಶಾಸ್ತ್ರಕ್ಕಧೀನವಾಗಿರುತ್ತವೆ ; ಪ್ರಾಧಾನ್ಯತೆಯಿಂದ ಯಾವುದೋ ವಿಭಕ್ತಿಯನ್ನು ಅನುಸರಿಸುವುದಿಲ್ಲ.

ಅಂದರೆ, ವೇದಾದಿಶಾಸ್ತ್ರಗಳಲ್ಲಿ ಯಾವ ಯಾವ ಶಬ್ದಗಳು ಹೇಳಲ್ಪಟ್ಟಿರುತ್ತವೋ, [ಅವಕ್ಕೆ_] ಅವು ಯಾವ ವಿಭಕ್ತಿಯೊಡನೆ ಹೇಳಲ್ಪಟ್ಟಿವೆಯೋ, ಅದೇ ವಿಭಕ್ತಿಯಿಂದ ಅರ್ಥ ಮಾಡಬೇಕು', ಎಂಬ ನಿಯಮವು ಅನ್ವಯಿಸುವುದಿಲ್ಲ.

---

* ಅಷ್ಟಾಧ್ಯಾಯೀ (೮. ೨. ೩೯) _ಅನು.

** ಅಷ್ಟಾಧ್ಯಾಯೀ (೮. ೨. ೩೦) _ಅನು.

"[ತತ್ರ ಪ್ರಾತಿಪದಿಕಾರ್ಥೇ ನಿರ್ದಿಷ್ಟೇ] ಯಾಂ ಯಾಂ ವಿಭಕ್ತಿಮಾ-
ಶ್ರಯಿತುಂ ಬುದ್ಧಿರುಪಜಾಯತೇ, ಸಾ ಸಾ ಆಶ್ರಯಿತವ್ಯಾ ॥"

[ಅರ್ಥ:_ "[ಅಲ್ಲಿ ಪ್ರಾತಿಪದಿಕದ ಅರ್ಥವು ನಿರ್ದೇಶಿತವಾಗಿರುವಾಗ,] ಯಾವ ಯಾವ ವಿಭಕ್ತಿಯನ್ನು ಆಶ್ರಯಿಸಲು ಬುದ್ಧಿಯು ಬರುತ್ತದೋ, ಅದದು ಆಶ್ರಯಿಸಲ್ಪಡಬೇಕು!"]

ಅಂದರೆ, ಯಾವ ವಿಭಕ್ತಿಯಿಂದ, ಶಾಸ್ತ್ರಮೂಲವಾದ ಯುಕ್ತಿ ಮತ್ತು ಪ್ರಮಾಣಕ್ಕೆ ಅನುಕೂಲವಾಗಿ ಅರ್ಥವು ಬರುತ್ತದೋ, ಆ ವಿಭಕ್ತಿಯ ಆಶ್ರಯ ಮಾಡಿಕೊಂಡು, ಅರ್ಥ ಮಾಡಬೇಕು!

ಇತಿ ಭಾಷ್ಯಮ್.

ಹೀಗೆ ಮಹಾಭಾಷ್ಯದ [ವಚನ]ವಿದೆ.

ಅನೇನಾರ್ಥಪ್ರಾಧಾನ್ಯಂ ಭವತಿ ; ನ ವಿಭಕ್ತೇರಿತಿ ಬೋಧ್ಯಮ್ ॥ ೨ ॥

ಇದರಿಂದ, ಅರ್ಥದ ಪ್ರಾಧಾನ್ಯತೆ ಇರುತ್ತದೆ ; ವಿಭಕ್ತಿಯದಲ್ಲ, ಎಂದು ತಿಳಿಯಬೇಕು! [೨]

(೩) ಅರ್ಥವನ್ನು ತಿಳಿಯುವುದಕ್ಕಾಗಿಯೇ ಶಬ್ದಪ್ರಯೋಗ

"ನ ವೇತಿ ವಿಭಾಷಾ ॥ ೩ ॥"

[ಅಷ್ಟಾಧ್ಯಾಯ್ಯಾಮ್ ೧. ೧. ೪೪]

[ಅರ್ಥ:_ "'ನ' ಮತ್ತು 'ವಾ' ಇವುಗಳ ಅರ್ಥಕ್ಕೆ 'ವಿಭಾಷಾ', ಎಂಬ ಸಂಜ್ಞೆ ಇರುತ್ತದೆ."

(ಅಷ್ಟಾಧ್ಯಾಯೀ: ೧. ೧. ೪೪)]

"ಅರ್ಥಗತ್ಯರ್ಥಃ ಶಬ್ದಪ್ರಯೋಗಃ ॥"

[ಅರ್ಥ:_ "ಅರ್ಥವನ್ನು ತಿಳಿಯುವ ಪ್ರಯೋಜನಕ್ಕಾಗಿ ಶಬ್ದದ ಪ್ರಯೋಗ ಮಾಡಲಾಗುತ್ತದೆ."]

ಅಂದರೆ, ವೇದಾದಿಶಾಸ್ತ್ರಗಳಲ್ಲಿ ಶಬ್ದಗಳ ಪ್ರಯೋಗಗಳು ಏಕೆ ಮಾಡಲಾಗಿವೆಯೆಂದರೆ, ಅವುಗಳ ಅರ್ಥಗಳನ್ನು ಸರಿ ಸರಿಯಾಗಿ ತಿಳಿದುಕೊಂಡು, ಅವುಗಳಿಂದ ಲಾಭವನ್ನು ತೆಗೆದುಕೊಳ್ಳಬೇಕು, ಎಂದು.

ಇತಿ ಭಾಷ್ಯಸೂತ್ರಮ್.

ಹೀಗೆ, ಮಹಾಭಾಷ್ಯದ ಸೂತ್ರವಿದೆ.

ಅವುಗಳಿಂದ ಅನರ್ಥಗಳೂ ಪ್ರಸಿದ್ಧವಾದರೆ, ಆ ಶಾಸ್ತ್ರಗಳು ಏತಕ್ಕಾಗಿ ಅಂಗೀಕರಿಸಲ್ಪಡಬೇಕು?

ಏಕೆಂದರೆ_

ಲೌಕಿಕವೈದಿಕೇಷು ಶಬ್ದೇಷು ಸಾರ್ವತ್ರಿಕಃ ಸಮಾನೋಽಯಂ ನಿಯಮಃ ॥ ೩ ॥

ಲೌಕಿಕ, ಹಾಗೂ ವೈದಿಕಶಬ್ದಗಳಲ್ಲಿ ಈ ನಿಯಮವು ಸಾರ್ವತ್ರಿಕವೂ, ಸಮಾನವೂ ಆಗಿರುತ್ತದೆ.

ಅಂದರೆ, ಈ ನಿಯಮವು ಲೋಕದಲ್ಲೂ, ಹಾಗೂ ವೇದದಲ್ಲೂ ಸರ್ವತ್ರ ಅನ್ವಯಿಸುತ್ತದೆ. [೩]

(೪) ಒಂದು ಶಬ್ದಕ್ಕೆ ಅನೇಕ ಅರ್ಥ; ಅನೇಕ ಶಬ್ದಗಳಿಗೆ ಒಂದು ಅರ್ಥ!

"ಅರ್ಥವದಧಾತುರಪ್ರತ್ಯಯಃ ಪ್ರಾತಿಪದಿಕಮ್ ॥ ೪ ॥"

[ಅಷ್ಟಾಧ್ಯಾಯ್ಯಾಮ್ ೧. ೨. ೪೫]

[ಅರ್ಥ:_ "ಅರ್ಥವನ್ನುಳ್ಳದ್ದಾಗಿಯೂ, ಆದರೆ, ಧಾತು ಮತ್ತು ಪ್ರತ್ಯಯವಲ್ಲದ ಶಬ್ದಗಳಿಗೆ 'ಪ್ರಾತಿಪದಿಕ', ಎಂದು ಹೆಸರು."

(ಅಷ್ಟಾಧ್ಯಾಯೀ : ೧. ೨. ೪೫)]

"ಬಹವೋ ಹಿ ಶಬ್ದಾ ಏಕಾರ್ಥಾ ಭವಂತಿ ।

[ಅರ್ಥ:_ "ಬಹಳ ಶಬ್ದಗಳು ಒಂದೇ ಅರ್ಥವನ್ನುಳ್ಳವು ಆಗಿರುತ್ತವೆ.

"ತದ್ಯಥಾ_ ಇಂದ್ರಃ, ಶಕ್ರಃ, ಪುರುಹೂತಃ, ಪುರಂದರಃ ; ಕಂದುಃ, ಕೋಷ್ಠಃ ; ಕುಸೂಲ ಇತಿ ।

[ಅರ್ಥ:_ "ಉದಾಹರಣೆಗಾಗಿ_ ಇಂದ್ರ, ಶಕ್ರ, ಪುರುಹೂತ, ಪುರಂದರ ;* ಮತ್ತು ಕಂದು, ಕೋಷ್ಠ, ಕುಸೂಲ**.

"ಏಕಶ್ಚ ಶಬ್ದೋ ಬಹ್ವರ್ಥಃ ।

[ಅರ್ಥ:_ "ಮತ್ತು ಒಂದು ಶಬ್ದವು ಬಹಳ ಅರ್ಥಗಳನ್ನುಳ್ಳದ್ದಾಗಿರುತ್ತದೆ.

"ತದ್ಯಥಾ_ ಅಕ್ಷಾಃ, ಪಾದಾಃ, ಮಾಷಾಃ ॥"

[ಅರ್ಥ:_ ಉದಾಹರಣೆಗಾಗಿ_ ಅಕ್ಷ, ಪಾದ, ಮಾಷ."]

ಅಂದರೆ, ವೇದ ಮತ್ತು ಲೋಕದಲ್ಲಿ ಬಹಳ ಶಬ್ದಗಳು, ಒಂದು ಅರ್ಥವನ್ನು ಹೇಳುವಂತಹವಾಗಿರುತ್ತವೆ. ಮತ್ತು ಒಂದು ಶಬ್ದವೂ ಕೂಡ, ಬಹಳ ಅರ್ಥಗಳನ್ನು ಹೇಳುವಂತಹುದಾಗಿರುತ್ತದೆ.

[ಇತಿ ಮಹಾಭಾಷ್ಯವಚನಮ್.]

ಸಾರ್ವತ್ರಿಕೋಽಯಮಪಿ ನಿಯಮಃ.

ಯಥಾಽಗ್ನ್ಯಾದಯಃ ಶಬ್ದಾ ವೇದೇಷು ಬಹ್ವರ್ಥ-ವಾಚಕಾಸ್ತ ಇವ ಬಹವ ಏಕಾರ್ಥಾಶ್ಚ ॥ ೪ ॥

ಹೀಗೆ, ಮಹಾಭಾಷ್ಯದ ವಚನವಿದೆ.

ಈ ನಿಯಮವೂ ಕೂಡ, ಸಾರ್ವತ್ರಿಕವಾಗಿದೆ!

ಉದಾಹರಣೆಗಾಗಿ_ ವೇದಗಳಲ್ಲಿ ಅಗ್ನಿ ಮೊದಲಾದ ಶಬ್ದಗಳು ಬಹಳ ಅರ್ಥಗಳ ವಾಚಕಗಳಾಗಿವೆ. [ಹಾಗೆಯೇ], ಅವುಗಳಂತೆ, ಒಂದು ಅರ್ಥವನ್ನುಳ್ಳ ಬಹಳ ಶಬ್ದಗಳೂ ಇವೆ.

* ಇವು ಇಂದ್ರನ ಪರ್ಯಾಯಗಳು _ಅನು

** ಇವು ಅನ್ನಭಂಡಾರದ ಪರ್ಯಾಯಗಳು _ಅನು

ಅಂದರೆ, **ಅಗ್ನಿ**, **ವಾಯು**, **ಇಂದ್ರ** ಮೊದಲಾದ ಬಹಳ ಶಬ್ದಗಳು ಒಬ್ಬ ಪರಮೇಶ್ವರನ ಅರ್ಥದ ವಾಚಕವಾಗಿಯೂ ಇವೆ; ಮತ್ತು ಹಾಗೆಯೇ, ಅವೇ ಶಬ್ದಗಳು ಜಗತ್ತಿನ ಪದಾರ್ಥಗಳ ಹೆಸರುಗಳೂ ಆದುದರಿಂದ, ಅನೇಕ ಅರ್ಥಗಳನ್ನುಳ್ಳವೂ ಆಗಿವೆ! ಎಂದರೆ, ಈ ರೀತಿಯ ಒಂದೊಂದು ಶಬ್ದವೂ ಹಲವು-ಕೆಲವು ಅರ್ಥಗಳ ವಾಚಕಗಳಾಗಿರುತ್ತವೆ. [೪]

(೫) ವೇದದಲ್ಲಿ ಗತಿ ಮತ್ತು ಉಪಸರ್ಗಗಳ ಸ್ವಚ್ಛಂದ ಸ್ಥಿತಿ

“ತೇ ಪ್ರಾಗ್‌ಧಾತೋಃ ॥ ೫ ॥”

[ಅಷ್ಟಾಧ್ಯಾಯ್ಯಾಮ್ ೧. ೪. ೮೦]

[ಅರ್ಥ:_ “ಆ ‘ಗತಿ’ ಮತ್ತು ‘ಉಪಸರ್ಗ’ಸಂಜ್ಞಕ ಶಬ್ದಗಳು ಧಾತುವಿಗೆ ಮೊದಲು ಬರುತ್ತವೆ.”

(ಅಷ್ಟಾಧ್ಯಾಯೀ : ೧. ೪. ೮೦)]

“ಛಂದಸಿ ಪರವ್ಯವಹಿತವಚನಂ ಚ ।”

[ಅರ್ಥ:_ “ವೇದದಲ್ಲಿ ಅವು ಪರದಲ್ಲಿಯೂ ಮತ್ತು ವ್ಯವಧಾನದೊಡನೆಯೂ ಬರುತ್ತವೆ.”] *

ಅನೇನ ವಾರ್ತಿಕೇನ ಗತ್ಯುಪಸರ್ಗಸಂಜ್ಞಕಾಃ ಶಬ್ದಾಃ ಕ್ರಿಯಾಯಾಃ ಪರೇ, ಪೂರ್ವೇ, ದೂರೇ ವ್ಯವಹಿತಾಶ್ಚ ಭವಂತಿ.

ಈ ವಾರ್ತಿಕದಂತೆ+, **ಗತಿ**** ಮತ್ತು **ಉಪಸರ್ಗ** ಸಂಜ್ಞೆಯನ್ನುಳ್ಳ ಶಬ್ದಗಳು ಕ್ರಿಯೆಯ_ **ನಂತರ**, **ಮೊದಲು**, ಅಥವಾ **ದೂರದಲ್ಲಿ** ವ್ಯವಸ್ಥಿತವಾಗಿರುತ್ತವೆ.

ಅಂದರೆ, ವ್ಯಾಕರಣದಲ್ಲಿ ಯಾವ ಯಾವ ಗತಿ ಸಂಜ್ಞಕ ಮತ್ತು ಉಪಸರ್ಗಸಂಜ್ಞಕ ಶಬ್ದಗಳಿವೆಯೋ, ಅವು ವೇದದಲ್ಲಿ ಕ್ರಿಯೆಯ, **ಮುಂದೆ**, **ಹಿಂದೆ**, ಅಥವಾ **ದೂರದಲ್ಲಿ**, ಎಂದರೆ ವ್ಯವಧಾನಯುಕ್ತವಾಗಿಯೂ ಇರುತ್ತವೆ.

---

* ಅಷ್ಟಾಧ್ಯಾಯೀ ೧. ೪. ೮೦; ೧. ೪. ೮೧ ನೋಡಿ _ಅನು.

+ ಪಾಣಿನಿಕೃತ ಅಷ್ಟಾಧ್ಯಾಯಿಯ ಸೂತ್ರಕ್ಕೆ ‘ವೃತ್ತಿ’, ಎಂದೂ; ಮತ್ತು ಅದರ ವ್ಯಾಖ್ಯಾನವಾದ ಪತಂಜಲಿಕೃತ ಮಹಾಭಾಷ್ಯದ ಸೂತ್ರಕ್ಕೆ ‘ವಾರ್ತಿಕ’, ಎಂದೂ ಹೆಸರು _ಅನು.

** ‘ಗತಿ’, ಎಂದರೆ ಕ್ರಿಯಾಪದ _ಅನು.

ಯಥಾ_

ಉದಾಹರಣೆಗಾಗಿ_

"ಆಯಾತಮುಪನಿಷ್ಕೃತಮ್ ॥"

[ಋಗ್ವೇದೇ ೧. ೨. ೬]

"ಉಪ ಪ್ರಯೋಭಿರಾಗತಮ್ ॥" ॥ ೫ ॥

[ಋಗ್ವೇದೇ ೧. ೨. ೪]

ಅಂದರೆ, ಇಲ್ಲಿ_

'ಆಯಾತಮುಪನಿಷ್ಕೃತಮ್' ನಲ್ಲಿ, 'ಉಪ', ಎಂಬುದು 'ಆಯಾತಮ್' ಕ್ರಿಯೆಗೆ ಮೊದಲು ಸೇರುತ್ತದೆ. ಮತ್ತು_

'ಉಪ ಪ್ರಯೋಭಿರಾಗತಮ್' ನಲ್ಲಿ, 'ಆಗತಮ್' ಕ್ರಿಯೆಗೆ ಮೊದಲು 'ಉಪ' ಸೇರುತ್ತದೆ.

ಈ ಮೊದಲಾದ [ಉದಾಹರಣೆಗಳಿವೆ.]

[ಆದರೆ,] ಇದರಲ್ಲಿ ವಿಶೇಷವೇನೆಂದರೆ, ಲೋಕದಲ್ಲಿ ಮೇಲೆ ಹೇಳಿದ ಶಬ್ದಗಳು, ಸರ್ವತ್ರ ಕ್ರಿಯೆಗೆ ಮೊದಲೇ ಹಚ್ಚಲ್ಪಡುತ್ತವೆ. [೫]

(೬) ಚತುರ್ಥೀವಿಭಕ್ತಿಯ ಸ್ಥಾನದಲ್ಲಿ ಷಷ್ಠೀವಿಭಕ್ತಿ!

"ಚತುರ್ಥ್ಯರ್ಥೇ ಬಹುಲಂ ಛಂದಸಿ ॥ ೬ ॥"

[ಅಷ್ಟಾಧ್ಯಾಯ್ಯಾಮ್ ೨. ೩. ೬೨]

[ಅರ್ಥ:_ "ವೇದವಿಷಯದಲ್ಲಿ ಚತುರ್ಥೀವಿಭಕ್ತಿಯ ಅರ್ಥದಲ್ಲಿ ವಿಕಲ್ಪವಾಗಿ ಷಷ್ಠೀವಿಭಕ್ತಿಯು ಬರುತ್ತದೆ."

(ಅಷ್ಟಾಧ್ಯಾಯೀ : ೨. ೩. ೬೨)]

"ಷಷ್ಠ್ಯರ್ಥೇ ಚತುರ್ಥೀ ವಕ್ತವ್ಯಾ ।

[ಅರ್ಥ:_ "ಷಷ್ಠೀವಿಭಕ್ತಿಯ ಅರ್ಥದಲ್ಲಿ ಚತುರ್ಥೀವಿಭಕ್ತಿಯನ್ನೂ ಹೇಳಬೇಕು.

[ಉದಾಹರಣೆಗಾಗಿ_]

"'ಯಾ ಖರ್ವೇಣ ಪಿಬತಿ ತಸ್ಯೈ ಖರ್ವೋ ಜಾಯತೇ ತಿಸ್ರೋ ರಾತ್ರೀಃ' * ಇತಿ ।

[ಅರ್ಥ:_ "ಯಾವಳು ಮೂರು ರಾತ್ರಿಗಳಲ್ಲಿ ಬಗ್ಗಿಕೊಂಡು ಕುಡಿಯುತ್ತಾಳೋ, ಅವಳಿಗೆ ಕುಳ್ಳನು ಹುಟ್ಟುತ್ತಾನೆ."]**

* ತೈತ್ತಿರೀಯಸಂಹಿತಾಯಾಮ್ ೨. ೫. ೧. ೭ _ಅನು.

* ತೈತ್ತಿರೀಯಸಂಹಿತಾ: ೨. ೫. ೧. ೭ _ಅನು.

** ಇದು ರಜಸ್ವಲಾಸ್ತ್ರೀಗೆ ಸಂಬಂಧಿಸಿದ ತೈತ್ತಿರೀಯಸಂಹಿತೆಯ ವಚನಗಳಲ್ಲೊಂದು _ಅನು.

"ತಸ್ಯಾ ಇತಿ ಪ್ರಾಪ್ತೇ ॥"

[ಅರ್ಥ:_ "ಇಲ್ಲಿ 'ತಸ್ಯಾಃ', [ಎಂಬ ಷಷ್ಠೀವಿಭಕ್ತಿಯು] ಬರಬೇಕಾಗಿದ್ದಾಗ, ['ತಸ್ಯೈ', ಎಂಬ ಚತುರ್ಥೀವಿಭಕ್ತಿಯ ಪ್ರಯೋಗವಾಗಿದೆ.]

ಅಂದರೆ, ಈ ಮೊದಲಾದ ಪಾಠಗಳಿಂದ, ವೇದಗಳಲ್ಲಿ ಷಷ್ಠೀವಿಭಕ್ತಿಯ ಸ್ಥಾನದಲ್ಲಿ ಚತುರ್ಥೀ ವಿಭಕ್ತಿಯಾಗುತ್ತದೆ; [ಆದರೆ,] ಲೌಕಿಕಗ್ರಂಥಗಳಲ್ಲಿ ಹೀಗಲ್ಲ!

[ಇತಿ ಮಹಾಭಾಷ್ಯೇ.]

ಹೀಗೆ, ಮಹಾಭಾಷ್ಯದಲ್ಲಿದೆ.

ಏವಮನ್ಯತ್ರಾಪಿ.

ಹೀಗೆಯೇ, ಬೇರೆ ಕಡೆ ಕೂಡ!

ಅನೇನ ಚತುರ್ಥ್ಯರ್ಥೇ ಷಷ್ಠೀ, ಷಷ್ಠ್ಯರ್ಥೇ ಚತುರ್ಥೀ ದ್ವೇ ಏವ ಭವತಃ.

ಇದರಿಂದ, ಚತುರ್ಥೀವಿಭಕ್ತಿಯ ಅರ್ಥದಲ್ಲಿ ಷಷ್ಠೀವಿಭಕ್ತಿಯೂ, ಮತ್ತು ಷಷ್ಠೀವಿಭಕ್ತಿಯ ಅರ್ಥದಲ್ಲಿ ಚತುರ್ಥೀವಿಭಕ್ತಿಯೂ, ಎರಡೇ ಉಂಟಾಗುತ್ತವೆ.

ಮಹಾಭಾಷ್ಯಕಾರೇಣ ಛಂದೋವನ್ಮತ್ವಾ ಬ್ರಾಹ್ಮಣಾನಾಮುದಾಹರಣಾನಿ ಪ್ರಯುಕ್ತಾನಿ.

[ಇಲ್ಲಿ] ಮಹಾಭಾಷ್ಯಕಾರರಿಂದ, ವೇದದಂತೆ ಅಂಗೀಕರಿಸಿ, ಬ್ರಾಹ್ಮಣ[ಗ್ರಂಥ]ಗಳ ಉದಾಹರಣೆಗಳು ಪ್ರಯೋಗಿಸಲ್ಪಟ್ಟಿವೆ.

ಅಂದರೆ, ಇಲ್ಲಿ ಮಹಾಭಾಷ್ಯಕಾರರು ಬ್ರಾಹ್ಮಣಗಳನ್ನು ವೇದಗಳಿಗೆ ಸಮಾನವಾಗಿ ಅಂಗೀಕರಿಸಿ, ಬ್ರಾಹ್ಮಣಗಳ ಉದಾಹರಣೆಗಳನ್ನು ಏಕೆ ಕೊಟ್ಟಿದ್ದಾರೆಂದರೆ, ವ್ಯಾಕರಣದ ಯಾವ ಕಾರ್ಯಗಳು ವೇದಗಳಲ್ಲಿ ಆಗುತ್ತವೋ, ಅವು ಬ್ರಾಹ್ಮಣಗಳಲ್ಲೂ ಆಗುತ್ತವೆ!

ಬ್ರಾಹ್ಮಣಗ್ರಂಥಗಳು ವೇದ ಅಲ್ಲ, ಎಂಬುದಕ್ಕೆ ಕಾರಣ!

ಅನ್ಯಥಾ ಬ್ರಾಹ್ಮಣಗ್ರಂಥಸ್ಯ ಪ್ರಕೃತತ್ವಾಚ್ಛಂದೋ-ಗ್ರಹಣಮನರ್ಥಕಂ ಸ್ಯಾತ್ ॥೬॥

ಇಲ್ಲದಿದ್ದರೆ, ಬ್ರಾಹ್ಮಣಗ್ರಂಥವು ಮೂಲ, ಎಂದೆನಿಸಿದ್ದರೆ, ಛಂದಸ್ಸಿನ ಗ್ರಹಣವು ಅರ್ಥಹೀನವಾಗುತ್ತಿತ್ತು!

ಅಂದರೆ, ಹೀಗೆ ಒಪ್ಪದಿದ್ದರೆ_

"ದ್ವಿತೀಯಾ ಬ್ರಾಹ್ಮಣೇ ॥"

[ಅಷ್ಟಾಧ್ಯಾಯ್ಯಾಮ್ ೨.೩.೬೦]

[ಅರ್ಥ:_ "ಬ್ರಾಹ್ಮಣವಿಷಯಕ ಪ್ರಯೋಗದಲ್ಲಿ ವ್ಯವಹಾರಾರ್ಥಕ 'ದಿವು' ಧಾತುವಿನ ಕರ್ಮದಲ್ಲಿ ದ್ವಿತೀಯಾವಿಭಕ್ತ ಉಂಟಾಗುತ್ತದೆ.]

ಈ ಸೂತ್ರದಿಂದ, 'ಬ್ರಾಹ್ಮಣೇ' ಶಬ್ದದ ಅನುವೃತ್ತಿಯು [ಸೂತ್ರ (೨.೩.೬೩)ದ ತನಕ] ಉಂಟಾಗಿಬಿಡುತ್ತಿತ್ತು!

ಆಗ_

"ಚತುರ್ಥ್ಯರ್ಥೇ ಬಹುಲಂ ಛಂದಸಿ ॥"*

[ಅಷ್ಟಾಧ್ಯಾಯ್ಯಾಮ್ ೨. ೩. ೬೨]

ಈ ಸೂತ್ರದಲ್ಲಿನ 'ಛಂದಸಿ' [= ವೇದದಲ್ಲಿ] ಶಬ್ದದ ಗ್ರಹಣವು ವ್ಯರ್ಥವಾಗಿಬಿಡುತ್ತಿತ್ತು! [೬]

(೭) 'ಅದ' ಧಾತುವಿಗೆ 'ಘಸ್‌ಲೃ' ಆದೇಶ!

"ಬಹುಲಂ ಛಂದಸಿ ॥ ೭ ॥"

[ಅಷ್ಟಾಧ್ಯಾಯ್ಯಾಮ್ ೨. ೪. ೩೯]

[ಅರ್ಥ:_ "ವೇದವಿಷಯದಲ್ಲಿ 'ಘಞ್' ಮತ್ತು 'ಅಪ್' ಪರದಲ್ಲಿದ್ದಾಗ, 'ಅದ' ಧಾತುವಿನ ಸ್ಥಾನದಲ್ಲಿ 'ಘಸ್‌ಲೃ' ಬಹುಲ**ದಿಂದ ಉಂಟಾಗುತ್ತದೆ."

(ಅಷ್ಟಾಧ್ಯಾಯೀ : ೨. ೪. ೩೯)]

ಅನೇನ 'ಅದ್'ಧಾತೋಃ ಸ್ಥಾನೇ 'ಘಸ್‌ಲೃ' ಆದೇಶೋ ಬಹುಲಂ ಭವತಿ.

ಇದರಿಂದ, 'ಅದ್' ಧಾತುವಿನ ಸ್ಥಾನದಲ್ಲಿ 'ಘಸ್‌ಲೃ' ಆದೇಶವು ಬಹುಲ, ಎಂದರೆ ಬಹುಧಾ ಉಂಟಾಗುತ್ತದೆ.

[ಉದಾಹರಣೆಗಾಗಿ_]

"ಘಸ್ತಾನ್ನೂನಮ್."

[ಯಜುರ್ವೇದೇ ೨೧. ೪೩]

"ಸಗ್ಧಿಶ್ಚ ಮೇ."

[ಯಜುರ್ವೇದೇ ೧೮. ೯]

"ಆತ್ತಾಮದ್ಯ ಮಧ್ಯತೋ ಮೇದ ಉದ್‌ಭೃತಮ್ ॥"+

[ಯಜುರ್ವೇದೇ ೨೧. ೪೩]

[ಇತಿ ಮಹಾಭಾಷ್ಯೇ.]

ಹೀಗೆ, ಮಹಾಭಾಷ್ಯದಲ್ಲಿದೆ.

ಇತ್ಯಾದ್ಯುದಾಹರಣಂ ಜ್ಞೇಯಮ್ ॥ ೭ ॥

ಈ ಮೊದಲಾದ ಉದಾಹರಣೆಯನ್ನು ತಿಳಿಯಬೇಕು! [೭]

* ಪುಟ ೧೧೪೦ ನ್ನು ನೋಡಿ _ಅನು.

** 'ಬಹುಲ', ಎಂದರೆ, ಎಲ್ಲಿ ಉಂಟಾಗಬೇಕೋ, ಅಲ್ಲಾಗುವುದಿಲ್ಲ; ಮತ್ತು ಎಲ್ಲಿ ಆಗಕೂಡದೋ, ಅಲ್ಲಿ ಉಂಟಾಗುತ್ತದೆ _ಅನು.

+ ಇಲ್ಲಿ 'ಆತ್ತಾಮ್', ಎಂಬ ಸ್ಥಾನದಲ್ಲಿ 'ಘಸ್‌ಲೃ' ಆದೇಶವಾಗಿಲ್ಲ. _ಅನು.

(೮) 'ಶಪ್'ನ ಸ್ಥಾನದಲ್ಲಿ 'ಲುಕ್'

" ಬಹುಲಂ ಛಂದಸಿ ॥ ೮ ॥ "

[ಅಷ್ಟಾಧ್ಯಾಯ್ಯಾಮ್ ೨. ೪. ೭೩]

[ಅರ್ಥ:_ " ವೇದವಿಷಯದಲ್ಲಿ 'ಅದಾದಿ'ಧಾತುಗಳಿಂದ ಪರದಲ್ಲಿ 'ಶಪ್'ನ ಸ್ಥಾನದಲ್ಲಿ ಬಹುಲದಿಂದ 'ಲುಕ್' ಆಗುತ್ತದೆ."

(ಅಷ್ಟಾಧ್ಯಾಯೀ : ೨. ೪. ೭೩)]

ವೇದವಿಷಯೇ ಶಪೋ ಬಹುಲಂ ಲುಗ್ಭವತಿ.

ವೇದವಿಷಯದಲ್ಲಿ 'ಶಪ್'ನ ಸ್ಥಾನದಲ್ಲಿ ಬಹುಲ ದಿಂದ **'ಲುಕ್'*** ಉಂಟಾಗುತ್ತದೆ.

ಅಂದರೆ, ವೇದಗಳಲ್ಲಿ **'ಶಪ್'** ಪ್ರತ್ಯಯವು ಬಹುಲದಿಂದ **'ಲುಕ್'** ಆಗುತ್ತದೆ; ಮತ್ತು ಕೆಲವೆಡೆ ಆಗುವುದೂ ಇಲ್ಲ.

ಉದಾಹರಣೆಗಾಗಿ_

" ವೃತ್ರಂ ಹನತಿ "

[ಋಗ್ವೇದೇ ೮. ೮೯. ೩]

" ಅಹಿಃ ಶಯತೇ "

ಇಲ್ಲಿ **'ಶಪ್'** ಸ್ಥಾನದಲ್ಲಿ **'ಲುಕ್'** ಆಗ ಬೇಕಾಗಿತ್ತು. ಆದರೆ, ಆಗಲಿಲ್ಲ!

ಅನ್ಯೇಭ್ಯಶ್ಚ ಭವತಿ.

ಮತ್ತು ಬೇರೆ ಕಡೆ ಆಗುತ್ತದೆ!

[ಉದಾಹರಣೆಗಾಗಿ_]

" ತ್ರಾಧ್ವಂ ನೋ ದೇವಾಃ."

[ಋಗ್ವೇದೇ ೨. ೨೯. ೬]

ಇಲ್ಲಿ_ 'ತ್ರೈಙ್' ಧಾತುವಿಗೆ ['ಶಪ್' ಸ್ಥಾನದಲ್ಲಿ 'ಲುಕ್'] ಆಗಬಾರದಾಗಿತ್ತು. ಆದರೆ, ಆಗಿಹೋಯಿತು!

* 'ಲುಕ್', ಎಂದರೆ ಲೋಪ. _ಅನು.

[ಮಹಾಭಾಷ್ಯಕಾರಸ್ಯ ನಿಯಮೇನ ಶಪೋ ಲುಕಿ ಶ್ಯನಾದೀನಾಮಪಿ ಲುಗ್ ಭವತಿ.

ಮಹಾಭಾಷ್ಯಕಾರರ ನಿಯಮದಂತೆ_ 'ಶಪ್' ನ ಸ್ಥಾನದಲ್ಲಿ 'ಲುಕ್' ಮಾಡಿದಾಗ, 'ಶ್ಯನ್' ಮೊದಲಾದುದರ ಸ್ಥಾನದಲ್ಲಿ 'ಲುಕ್' ಆಗುತ್ತದೆ.

ಯತಃ ಶಪಃ-ಸ್ಥಾನೇ ಶ್ಯನಾದಯ ಆದೇಶಾ ವಿಧೀಯಂತೇ.

ಏಕೆಂದರೆ, 'ಶಪ್'ನ ಸ್ಥಾನದಲ್ಲಿ 'ಶ್ಯನ್' ಮೊದಲಾದುದರ ಆದೇಶವಾಗಿರುತ್ತದೆ.

ಶಪ್-ಸಾಮಾನ್ಯತ್ವಾತ್ ಸರ್ವೇಭ್ಯೋ ಧಾತುಭ್ಯೋ ಭವತಿ.

'ಶಪ್' ಸಾಮಾನ್ಯವಾದುದರಿಂದ, ಎಲ್ಲಾ ಧಾತುಗಳಿಂದಲೂ ಉಂಟಾಗುತ್ತದೆ.

ತಸ್ಯ ಶಪೋ ಲುಕಿ ಶ್ಯನಾದಯೋ ನ ಪ್ರಾಪ್ನುವಂತಿ ಸ್ಥಾನಿನೋಽಭಾವಾತ್.

ಯಾವಾಗ 'ಶಪ್'ನ ಸ್ಥಾನದಲ್ಲಿ 'ಲುಕ್' ಆಯಿತೋ, ಆಗ ಸ್ಥಾನಿ ಇಲ್ಲದಿರುವುದರಿಂದ, 'ಶ್ಯನ್' ಮೊದಲಾದುವು ಉಂಟಾಗುವುದೇ ಇಲ್ಲ!

ಏವಮೇವ ಶ್ಲು-ವಿಷಯೇಽಪಿ ಜ್ಞೇಯಮ್.]*

॥ ೮ ॥

ಹೀಗೆಯೇ, 'ಶ್ಲು'ನ ವಿಷಯದಲ್ಲೂ ತಿಳಿದುಕೊಳ್ಳಬೇಕು! [೮]

(೯) 'ಶಪ್' ನ ಸ್ಥಾನದಲ್ಲಿ 'ಶ್ಲು'

"ಬಹುಲಂ ಛಂದಸಿ ॥ ೯ ॥"

[ಅಷ್ಟಾಧ್ಯಾಯ್ಯಾಮ್ ೨. ೪. ೭೬]

[ಅರ್ಥ:_ "ವೇದವಿಷಯದಲ್ಲಿ ಜುಹೋತ್ಯಾದಿ ಧಾತುಗಳಿಂದ ಪರದಲ್ಲಿನ 'ಶಪ್'ನ ಸ್ಥಾನದಲ್ಲಿ ಬಹುಲದಿಂದ 'ಶ್ಲು' ಆದೇಶವಾಗುತ್ತದೆ."

(ಅಷ್ಟಾಧ್ಯಾಯೀ : ೨. ೪. ೭೬)]

ವೇದೇಷು ಶಪಃ-ಸ್ಥಾನೇ ಶ್ಲುರ್ಬಹುಲಂ ಭವತಿ.

ವೇದಗಳಲ್ಲಿ 'ಶಪ್' ಪ್ರತ್ಯಯದ ಸ್ಥಾನದಲ್ಲಿ 'ಶ್ಲು' ಆದೇಶವು 'ಬಹುಲ'ದಿಂದ ಉಂಟಾಗುತ್ತದೆ.

ಅಂದರೆ, [ಈ ಸೂತ್ರದಲ್ಲಿ] ಹೇಳಿದಂತೆ ಉಂಟಾಗುವುದೂ ಇಲ್ಲ; ಮತ್ತು ಹೇಳದಿದ್ದರೂ ಉಂಟಾಗುತ್ತದೆ!

ಉದಾಹರಣೆಗಾಗಿ_

* ಕೋಷ್ಠಕಾಂತರ್ಗತಪಾಠಃ ಕದಾಚಿನ್ ಮೂಲಗ್ರಂಥೇ ನಷ್ಟಃ ಸ್ಯಾತ್. ಅತೋ ಪಂ. ಯುಧಿಷ್ಠಿರಮೀಮಾಂಸಕೈರುಪಲಬ್ಧ-ಹಿಂದೀಪಾಠಾನುಸಾರೇಣಾಯಮತ್ರೋಹಿತಃ _ಅನು.

"ದಾತಿ ಪ್ರಿಯಾಣಿ"

[ಋಗ್ವೇದೇ ೪. ೮. ೩]

"ಧಾತಿ ಪ್ರಿಯಾಣಿ"

[ಋಗ್ವೇದೇ ೭. ೧೬. ೧೧]

ಇಲ್ಲಿ_ 'ಶಪ್'ನ ಸ್ಥಾನದಲ್ಲಿ 'ಶ್ಲು' ಆಗಬೇಕಾಗಿತ್ತು; ಆದರೆ, ಆಗಲಿಲ್ಲ!*

ಅನ್ಯೇಭ್ಯಶ್ಚ ಭವತಿ_

ಮತ್ತು ಬೇರೆಯವುಗಳಿಂದ ಉಂಟಾಗುತ್ತದೆ_ [ಉದಾಹರಣೆಗೆ_]

"ಪೂರ್ಣಾಂ ವಿವಷ್ಟಿ" **

[ಋಗ್ವೇದೇ ೧. ೨೫. ೧೮]

"ಜನಿಮಾ ವಿವಕ್ತಿ" **

ಇಲ್ಲಿ_ 'ವಿವಷ್ಟಿ'; ['ವಿವಕ್ತಿ'] ಗಳಲ್ಲಿ 'ಶ್ಲು' ಉಂಟಾಗಬಾರದಿತ್ತು.** ಆದರೂ, ಕೂಡ, ಆಗಿ ಹೋಯಿತು!

ಇತ್ಯಾದೀನ್ಯುದಾಹರಣಾನಿ ಸಂತೀತಿ ಬೋಧ್ಯಮ್ ॥ ೯ ॥

ಈ ಮೊದಲಾದ ಉದಾಹರಣೆಗಳಿವೆ, ಎಂದು ತಿಳಿಯಬೇಕು! [೯]

(೧೦) 'ಲೇಟ್' ಲಕಾರಕ್ಕೆ 'ಸಿಪ್'

"ಸಿಬ್ಬಹುಲಂ ಲೇಟಿ ॥ ೧೦ ॥"

[ಅಷ್ಟಾಧ್ಯಾಯ್ಯಾಮ್ ೩. ೧. ೩೪]

[ಅರ್ಥ:_ "'ಲೇಟ್' ಲಕಾರವು ಪರದಲ್ಲಿದ್ದಾಗ, ಧಾತುವಿನಿಂದ 'ಸಿಪ್' ಪ್ರತ್ಯಯವು ಬಹುಲವಾಗಿ ಪರದಲ್ಲಿ ಉಂಟಾಗುತ್ತದೆ."

(ಅಷ್ಟಾಧ್ಯಾಯೀ : ೩. ೧. ೩೪)]

* 'ಶ್ಲು' ಆಗಿದ್ದರೆ, 'ದದಾತಿ', 'ದಧಾತಿ', ಎಂಬ ಪ್ರಯೋಗಗಳಿರಬೇಕಿತ್ತು. 'ಶ್ಲು', ಎಂದರೆ ಲೋಪ _ಅನು.

** 'ವಶ', ಮತ್ತು 'ವಚ'ಧಾತುಗಳು ಅದಾದಿಗಣೀಯವಾದುದರಿಂದ, 'ಶ್ಲು' ಆಗದೇ, ಕೇವಲ 'ವಷ್ಟಿ' ಮತ್ತು 'ವಕ್ತಿ', ಎಂಬ ಪ್ರಯೋಗಗಳಿರಬೇಕಿತ್ತು! _ಅನು.

"ಸಿಬ್ಬಹುಲಂ ಛಂದಸಿ ಣಿದ್ವಕ್ತವ್ಯಃ ।"

[ಅರ್ಥ:_ "ವೇದದಲ್ಲಿ 'ಸಿಪ್' ಎಂಬುದು ಬಹುಲದಿಂದ 'ಣಿತ್', ಎಂದು ಹೇಳಲ್ಪಡಬೇಕು."

ಅಂದರೆ, ವೇದಗಳಲ್ಲಿ 'ಲೇಟ್' ಲಕಾರದಲ್ಲಿ ಯಾವ 'ಸಿಪ್' ಪ್ರತ್ಯಯವು ಉಂಟಾಗುತ್ತದೋ, ಅದು ಬಹುಲದಿಂದ 'ಣಿತ್' ಸಂಜ್ಞಕವಾಗುತ್ತದೆ. ಏಕೆಂದರೆ, ಇದರಿಂದ, 'ವೃದ್ಧಿ' ಮೊದಲಾದ ಕಾರ್ಯಗಳಾಗಬೇಕಾಗಿರುತ್ತವೆ.

ಉದಾಹರಣೆಗಾಗಿ_

"ಸವಿತಾ ಧರ್ಮಂ ಸಾವಿಷತ್" *

"ಪ್ರಣ ಆಯೂಂಷಿ ತಾರಿಷತ್"

[ಋಗ್ವೇದೇ ೧. ೨೫. ೧೨]

'ಸಾವಿಷತ್', ['ತಾರಿಷತ್'] _ಇಲ್ಲಿ 'ಸಿಪ್'-ಪ್ರತ್ಯಯವನ್ನು 'ಣಿತ್' ಆಗಿ ಅಂಗೀಕರಸಿ, ವೃದ್ಧಿಯಾಗಿದೆ.

[ಇತಿ ಮಹಾಭಾಷ್ಯೇ.]

ಹೀಗೆ, ಮಹಾಭಾಷ್ಯದಲ್ಲಿದೆ.

ಅಯಂ ಲೇಟಿ ವಿಶಿಷ್ಟೋ ನಿಯಮಃ ॥ ೧೦ ॥

ಇದು 'ಲೇಟ್'ನಲ್ಲಿ ವೇದವಿಷಯಕವಾದ ವಿಶಿಷ್ಟ ನಿಯಮವಾಗಿದೆ. [೧೦]

(೧೧) 'ಶ್ನಾ' ಪ್ರತ್ಯಯದ ಸ್ಥಾನದಲ್ಲಿ 'ಶಾಯಚ್'

"ಛಂದಸಿ ಶಾಯಜಪಿ ॥ ೧೧ ॥"

[ಅಷ್ಟಾಧ್ಯಾಯ್ಯಾಮ್: ೩. ೧. ೮೪]

[ಅರ್ಥ:_ "ವೇದವಿಷಯದಲ್ಲಿ 'ಶ್ನಾ'ದ ಸ್ಥಾನದಲ್ಲಿ 'ಶಾಯಚ್' ಕೂಡ, ಆದೇಶವಾಗುತ್ತದೆ; ಮತ್ತು 'ಶಾನಚ್' ಕೂಡ."

(ಅಷ್ಟಾಧ್ಯಾಯೀ : ೩. ೧. ೮೪)]

"ಶಾಯಚ್ಛಂದಸಿ ಸರ್ವತ್ರೇತಿ ವಕ್ತವ್ಯಮ್ ।

[ಅರ್ಥ:_ "ವೇದದಲ್ಲಿ 'ಶಾಯಚ್' ಪ್ರತ್ಯಯವು ಸರ್ವತ್ರ ಉಂಟಾಗುತ್ತದೆ, ಎಂದು ಹೇಳಬೇಕು.

"ಕ್ವ ಸರ್ವತ್ರ?

[ಅರ್ಥ:_ "ಸರ್ವತ್ರ, ಎಂದರೆ ಎಲ್ಲಿ?

* ತುಲನಾ ಕಾರ್ಯಾ_ಋಗ್ವೇದೇ ೧. ೧೬೪. ೨೬ _ಅನು.

"ಹೌ ಚಾಹೌ ಚ ।"

[ಅರ್ಥ:_" 'ಹಿ' ಪ್ರತ್ಯಯವು ಪರದಲ್ಲಿದ್ದಾಗ ; ಮತ್ತು, 'ಹಿ' ಪ್ರತ್ಯಯವು ಪರದಲ್ಲಿಲ್ಲದಿದ್ದಾಗಲೂ ಕೂಡ!

ಅಂದರೆ, ವೇದದಲ್ಲಿ 'ಹಿ' ಪ್ರತ್ಯಯವು ಪರದಲ್ಲಿದ್ದಾಗ, **'ಶ್ನಾ'** ಪ್ರತ್ಯಯದ ಸ್ಥಾನದಲ್ಲಿ ಯಾವ **'ಶಾಯಚ್'** ಆದೇಶದ ವಿಧಾನ ಮಾಡಲಾಗುತ್ತದೋ, ಅದು 'ಹಿ' ಪ್ರತ್ಯಯವು ಇಲ್ಲದಿದ್ದಾಗಲೂ ಕೂಡ, ಆಗುತ್ತದೆ.

"ಕಿಂ ಪ್ರಯೋಜನಮ್?"

[ಅರ್ಥ:_ "ಪ್ರಯೋಜನವೇನು?

"ಮಹೀ ಅಸ್ಕಭಾಯತ್, ಯೋ ಅಸ್ಕಭಾಯತ್,

ಉದ್‌ಗೃಭಾಯತ್, ಉನ್ಮಥಾಯತ ।"

"ಇತ್ಯೇವಮರ್ಥಮ್ ॥"

[ಅರ್ಥ:_ ಈ ರೀತಿಯಾಗಿ ಪ್ರಯೋಜನವಿದೆ."]

[ಇತಿ ಮಹಾಭಾಷ್ಯೇ.]

ಹೀಗೆ, ಮಹಾಭಾಷ್ಯದಲ್ಲಿದೆ.

ಅಯಂ ಲೋಟಿ ಮಧ್ಯಮಪುರುಷಸ್ಯೈಕವಚನೇ ಪರಸ್ಮೈಪದೇ ವಿಶಿಷ್ಟೋ ನಿಯಮಃ ॥೧೧॥

ಇದು ಮಧ್ಯಮಪುರುಷ, ಏಕವಚನ, ಪರಸ್ಮೈ-ಪದದ ಲೋಟ್ [= ಆಜ್ಞಾರ್ಥಕ] ಪ್ರಯೋಗದಲ್ಲಿ ವಿಶಿಷ್ಟ ನಿಯಮವಾಗಿದೆ. [೧೧]

(೧೨) ವ್ಯತ್ಯಯ ಸಿದ್ಧಾಂತ

"ವ್ಯತ್ಯಯೋ ಬಹುಲಮ್ ॥೧೨॥"

[ಅಷ್ಟಾಧ್ಯಾಯ್ಯಾಮ್ ೩. ೧. ೮೫]

[ಅರ್ಥ:_ " ವೇದವಿಷಯದಲ್ಲಿ ಬಹುಲವಾಗಿ ಎಲ್ಲಾ ವಿಧಿಗಳ ವ್ಯತ್ಯಯವಾಗುತ್ತದೆ."

(ಅಷ್ಟಾಧ್ಯಾಯೀ : ೩. ೧. ೮೫)]

ಅಂದರೆ, ವೇದಗಳಲ್ಲಿ ವ್ಯತ್ಯಯವು, ಎಂದರೆ, ವಿಪರೀತಭಾವವು ಬಹುಧಾ ಉಂಟಾಗುತ್ತದೆ.

ಇದನ್ನು ಭಾಷ್ಯಕಾರರಾದ ಪತಂಜಲಿಯವರು ಒಂಬತ್ತು * ಪ್ರಕಾರಗಳದ್ದನ್ನಾಗಿ ಅಂಗೀಕರಿಸಿದ್ದಾರೆ_

* ಎಣಿಕೆಯಲ್ಲಿ ಹನ್ನೊಂದಾಗುತ್ತವೆ_ಅನು.

[ಕಾರಿಕಾ_]

" ಸುಪ್ತಿಙುಪಗ್ರಹಲಿಂಗನರಾಣಾಂ ಕಾಲಹಲಚ್‌ಸ್ವರಕರ್ತೃಯಙಾಂ ಚ ।
ವ್ಯತ್ಯಯಮಿಚ್ಛತಿ ಶಾಸ್ತ್ರಕೃದೇಷಾಂ ಸೋಽಪಿ ಚ ಸಿಧ್ಯತಿ ಬಾಹುಲಕೇನ ॥"

[ಮಹಾಭಾಷ್ಯೇ ೩.೧.೮೫]

[ಅರ್ಥ:_ "ಶಾಸ್ತ್ರಕಾರರಾದ [ಪಾಣಿನಿಯವರು] ಸುಪ್, ತಿಙ್, ಉಪಗ್ರಹ,* ಲಿಂಗ, ಪುರುಷ, ಮತ್ತು ಕಾಲ, ಹಲ್, ಅಚ್, ಸ್ವರ, ಕರ್ತೃ[-ಕರ್ಮ], ಹಾಗೂ ಯಙ್_ ಇವುಗಳ ವ್ಯತ್ಯಯವನ್ನು ಅಪೇಕ್ಷಿಸುತ್ತಾರೆ. ಅದೂ ಕೂಡ, ಬಾಹುಲಕ**ದಿಂದ ಸಿದ್ಧ ವಾಗುತ್ತದೆ."

(ಮಹಾಭಾಷ್ಯ: ೩.೧.೮೫)]

"ವ್ಯತ್ಯಯೋ ಭವತಿ ಸ್ಯಾದೀನಾ+ಮಿತಿ ।"

[ಅರ್ಥ:_" 'ಸ್ಯ', ಮೊದಲಾದುವುಗಳ ವ್ಯತ್ಯಯವೂ ಉಂಟಾಗುತ್ತದೆ."]

[ಇತಿ ಮಹಾಭಾಷ್ಯೇ.]

ಹೀಗೆ, ಮಹಾಭಾಷ್ಯದಲ್ಲಿದೆ.

ಅನೇನ ವಿಕರಣವ್ಯತ್ಯಯಃ_

ಇದರಿಂದ, ವಿಕರಣಗಳ ವ್ಯತ್ಯಯಗಳೂ ಉಂಟಾಗುತ್ತವೆ.

ಅವು ಯಾವುವೆಂದರೆ_

(೧) ಸುಪಾಂ ವ್ಯತ್ಯಯಃ

(೨) ತಿಙಾಂ ವ್ಯತ್ಯಯಃ

(೩) ವರ್ಣವ್ಯತ್ಯಯಃ

(೧) 'ಸುಪ್'ಗಳ ವ್ಯತ್ಯಯ++

(೨) 'ತಿಙ್'ಗಳ ವ್ಯತ್ಯಯ$

(೩) ವರ್ಣದ ವ್ಯತ್ಯಯ

ಎಂದರೆ, ಹಲ್ ಮತ್ತು ಅಚ್‌ಗಳ ವ್ಯತ್ಯಯ.

ಅಂದರೆ, ವೇದಗಳಲ್ಲಿ 'ಅಚ್'ಗಳ ಸ್ಥಾನದಲ್ಲಿ 'ಹಲ್'; ಮತ್ತು 'ಹಲ್'ಗಳ ಸ್ಥಾನದಲ್ಲಿ 'ಅಚ್' ಆದೇಶ ವಾಗುತ್ತವೆ.

+ ಸ್ಯತಾಸೀ ಲೃಲುಟೋಃ (ಅಷ್ಟಾ. ೩.೧.೩೩)_ಅನು.

* ಉಪಗ್ರಹ ಎಂದರೆ, ಆತ್ಮನೇಪದ-ಪರಸ್ಮೈಪದ _ಅನು.

** 'ಬಾಹುಲಕ' ಎಂದರೆ, ಎಲ್ಲೋ ಪ್ರವೃತ್ತಿ, ಎಲ್ಲೋ ಅಪ್ರವೃತ್ತಿ; ಎಲ್ಲೋ ವಿಕಲ್ಪ, ಮತ್ತು ಎಲ್ಲೋ ವಿಪರೀತ. _ಅನು.

++ ಸು, ಔ, ಜಸ್, ಅಮ್, ಔಟ್, ಶಸ್, ಟಾ, ಭ್ಯಾಮ್, ಭಿಸ್, ಙೇ, ಭ್ಯಾಮ್, ಭ್ಯಸ್, ಙಸಿ, ಭ್ಯಾಮ್, ಭ್ಯಸ್, ಙಸ್, ಓಸ್, ಆಮ್, ಙಿ, ಓಸ್, ಸುಪ್ _ಅನು.

$ ತಿಪ್, ತಸ್, ಝಿ, ಸಿಪ್, ಥಸ್, ಥ, ಮಿಪ್, ವಸ್, ಮಸ್; ತ, ಆತಾಮ್, ಝ, ಥಾಸ್, ಆಥಾಮ್, ಧ್ವಮ್, ಇಟ್, ವಹಿ, ಮಹಿಙ್ _ಅನು.

(೪) ಲಿಂಗವ್ಯತ್ಯಯಃ

(೪) ಲಿಂಗದ ವ್ಯತ್ಯಯ

ಅಂದರೆ, ಪುಲ್ಲಿಂಗ, ಸ್ತ್ರೀಲಿಂಗ ಮತ್ತು ನಪುಂಸಕ ಲಿಂಗ!

(೫) ಪುರುಷವ್ಯತ್ಯಯಃ

(೫) ಪುರುಷವ್ಯತ್ಯಯ

ಅಂದರೆ, ಪ್ರಥಮಪುರುಷ, ಮಧ್ಯಮಪುರುಷ ಮತ್ತು ಉತ್ತಮಪುರುಷ!

(೬) ಕಾಲವ್ಯತ್ಯಯಃ

(೬) ಕಾಲವ್ಯತ್ಯಯ

ಅಂದರೆ, ಭೂತ, ಭವಿಷ್ಯತ್ ಮತ್ತು ವರ್ತಮಾನ.

(೭) ಆತ್ಮನೇಪದವ್ಯತ್ಯಯಃ

(೭) ಆತ್ಮನೇಪದದ ವ್ಯತ್ಯಯ

(೮) ಪರಸ್ಮೈಪದವ್ಯತ್ಯಯಃ

(೮) ಪರಸ್ಮೈಪದದ ವ್ಯತ್ಯಯ

(೯) ಸ್ವರವ್ಯತ್ಯಯಃ

(೯) ಸ್ವರದ ವ್ಯತ್ಯಯ

ಅಂದರೆ, ಉದಾತ್ತ, [ಅನುದಾತ್ತ, ಸ್ವರಿತ] ಮೊದಲಾದುದರ ವ್ಯತ್ಯಯ!

(೧೦) ಕರ್ತೃವ್ಯತ್ಯಯಃ

(೧೦) ಕರ್ತೃವ್ಯತ್ಯಯ

ಅಂದರೆ, ಕರ್ತೃವಿನ ವ್ಯತ್ಯಯ!

ಮತ್ತು_

(೧೧) ಯಜ್‌ವ್ಯತ್ಯಯಶ್ಚ.

(೧೧) ಯಜ್‌ವ್ಯತ್ಯಯ

_ಇವುಗಳ ವ್ಯತ್ಯಯಗಳಾಗುತ್ತವೆ.

ವ್ಯತ್ಯಯಗಳ ಉದಾಹರಣೆಗಳು

ಏಷಾಂ ಕ್ರಮೇಣೋದಾಹರಣಾನಿ*_

ಕ್ರಮವಾಗಿ ಇವುಗಳ ಉದಾಹರಣೆಗಳು_

ಅಂದರೆ, ಸಂಸ್ಕೃತದಲ್ಲಿ ಇವೆಲ್ಲದರ ಉದಾಹರಣೆಗಳನ್ನು ಬರೆದಿದ್ದೇವೆ.* ನೋಡಿ_

* ಏತಾನ್ಯುದಹರಣಾನಿ ಮಹಾಭಾಷ್ಯಸ್ಥಾನಿ ಸಂತಿ _ಅನು.

* ಈ ಎಲ್ಲಾ ಉದಾಹರಣೆಗಳು 'ಮಹಾಭಾಷ್ಯ'ದವಾಗಿವೆ _ಅನು.

(೧) ಸುಪ್‌ವ್ಯತ್ಯಯ

"ಯುಕ್ತಾ ಮಾತಾಸೀದ್ಧುರಿ ದಕ್ಷಿಣಾಯಾಃ"

[ಋಗ್ವೇದೇ ೧. ೧೬೪. ೯]

"ದಕ್ಷಿಣಾಯಾಮಿತಿ ಪ್ರಾಪ್ತೇ ।

[ಅರ್ಥ:_ "ಇಲ್ಲಿ_'ದಕ್ಷಿಣಾಯಾಮ್', ಎಂದು ಪ್ರಯೋಗವಿರಬೇಕಿತ್ತು!

(೨) ತಿಙ್‌ವ್ಯತ್ಯಯ

"ಚಷಾಲಂ ಯೇ ಅಶ್ವಯೂಪಾಯ ತಕ್ಷತಿ"

[ಋಗ್ವೇದೇ ೧. ೧೬೨. ೬]

"ತಕ್ಷಂತೀತಿ ಪ್ರಾಪ್ತೇ ।

[ಅರ್ಥ:_ "ಇಲ್ಲಿ_ 'ತಕ್ಷಂತಿ', ಎಂಬ ಪ್ರಯೋಗವಿರಬೇಕಿತ್ತು!

(೩) ವರ್ಣವ್ಯತ್ಯಯ

"ತ್ರಿಷ್ಟುಭೌಜಃ ಶುಭಿತಮುಗ್ರವೀರಮ್"

[ತೈತ್ತಿರೀಯಸಂಹಿತಾಯಾಮ್ ೪. ೪. ೧೨. ೩]

"ಶುಧಿತಮಿತಿ ಪ್ರಾಪ್ತೇ ।

[ಅರ್ಥ:_ "ಇಲ್ಲಿ_ 'ಶುಧಿತಮ್', ಎಂಬ ಪ್ರಯೋಗವಿರಬೇಕಿತ್ತು!

(೪) ಲಿಂಗವ್ಯತ್ಯಯ

"ಮಧೋ*ಸ್ತೃಪ್ತಾ ಇವಾಸತೇ"

"ಮಧುನ ಇತಿ ಪ್ರಾಪ್ತೇ ।

[ಅರ್ಥ:_ "ಇಲ್ಲಿ_'ಮಧುನಃ',* ಎಂಬ ಪ್ರಯೋಗವಿರಬೇಕಿತ್ತು!

---

* 'ಮಧು' ಶಬ್ದವು ನಪುಂಸಕಲಿಂಗ. ಷಷ್ಠೀ-ಪಂಚಮೀವಿಭಕ್ತಿಗಳಲ್ಲಿ 'ಮಧುನಃ', ಎಂದಾಗುತ್ತದೆ. ಪುಲ್ಲಿಂಗವಾದರೆ_ ಮಧುಃ. ಷಷ್ಠೀ-ಪಂಚಮೀವಿಭಕ್ತಿಗಳಲ್ಲಿ ಮಧೋಃ, ಎಂದಾಗುತ್ತದೆ _ಅನು.

(೫) ಪುರುಷವ್ಯತ್ಯಯ

"ಅಧಾ ಸ ವೀರೈರ್ದಶಭಿರ್ವಿಯೂಯಾಃ"

[ಋಗ್ವೇದೇ ೭. ೧೦೪. ೧೫]

"ವಿಯೂಯಾದ್ದಿತಿ ಪ್ರಾಪ್ತೇ ।

[ಅರ್ಥ:_ "ಇಲ್ಲಿ 'ವಿಯೂಯಾತ್'. ಎಂಬ ಪ್ರಯೋಗವಿರಬೇಕಿತ್ತು! *

(೬) ಕಾಲವ್ಯತ್ಯಯ

"ಶ್ವೋಽಗ್ನೀನಾಧಾಸ್ಯಮಾನೇನ"

[ಕಾಠಕಸಂಹಿತಾಯಾಮ್ ೧೮. ೧೨]

"ಆಧಾತಾ [ಇತಿ ಪ್ರಾಪ್ತೇ] ।

[ಅರ್ಥ:_ "ಇಲ್ಲಿ 'ಆಧಾತಾ', ಎಂಬ ಪ್ರಯೋಗವಿರಬೇಕಿತ್ತು!

"ಶ್ವಃ ಸೋಮೇನ ಯಕ್ಷ್ಯಮಾಣೇನ"

"ಯಷ್ಟೇತಿ ಪ್ರಾಪ್ತೇ ।"

[ಅರ್ಥ:_ "ಇಲ್ಲಿ 'ಯಷ್ಟಾ', ಎಂಬ ಪ್ರಯೋಗವಿರಬೇಕಿತ್ತು!

ಆಧಾತಾ ಯಷ್ಟೇತಿ ಲುಟ್ ಪ್ರಥಮ-ಪುರುಷಸ್ಯೈಕವಚನೇ ಪ್ರಯೋಗೌ_

'ಆಧಾತಾ' ಮತ್ತು 'ಯಷ್ಟಾ' ಎಂಬ ಲುಟ್= ಅನದ್ಯತನ ಭವಿಷ್ಯತ್ಕಾಲ, ಪ್ರಥಮಪುರುಷ, ಏಕವಚನದಲ್ಲಿನ ಈ ಪ್ರಯೋಗಗಳೆರಡೂ_

ವ್ಯತ್ಯಯೋ ಭವತಿ ಸ್ಯಾದೀನಾಮಿತ್ಯಸ್ಯೋದಾ-ಹರಣಂ ; ತಾಸಿ ಪ್ರಾಪ್ತೇ ಸ್ಯೋ ವಿಹಿತಃ.**

'ಸ್ಯ ಮೊದಲಾದುವುಗಳ ವ್ಯತ್ಯಯವಾಗುತ್ತದೆ, ಎಂಬುದರ ಉದಾಹರಣೆಯ ರೂಪದಲ್ಲಿ_ 'ತಾಸಿ' ಎಂದಿರಬೇಕಾಗಿದ್ದಾಗ, [ಲೃಟ್= ಸಾಮಾನ್ಯ ಭವಿಷ್ಯತ್ಕಾಲದಲ್ಲಿ] 'ಸ್ಯ', ಎಂದಾಗಿದೆ.

(೭) ಆತ್ಮನೇಪದವ್ಯತ್ಯಯ

"ಬ್ರಹ್ಮಚಾರಿಣಮಿಚ್ಛತೇ"

[ಅಥರ್ವವೇದೇ ೧೧. ೫. ೧೭]

"ಇಚ್ಛತೀತಿ ಪ್ರಾಪ್ತೇ ।

[ಅರ್ಥ:_ "ಇಲ್ಲಿ 'ಇಚ್ಛತಿ', ಎಂಬ ಪ್ರಯೋಗವಿರಬೇಕಿತ್ತು!

** ಸ್ಯತಾಸೀ ಲೃಲುಟೋಃ (ಅಷ್ಟಾ. ೩. ೧. ೩೩) _ಅನು.

* 'ವಿಯೂಯಾಃ', ಎಂಬುದು ಮಧ್ಯಮಪುರುಷ. 'ವಿಯೂಯಾತ್', ಎಂಬುದು ಪ್ರಥಮಪುರುಷ _ಅನು.

(೮) ಪರಸ್ಮೈಪದವ್ಯತ್ಯಯ

" ಪ್ರತೀಪಮನ್ಯ ಊರ್ಮಿರ್ಯುಧ್ಯತಿ "

" ಯುಧ್ಯತ ಇತಿ ಪ್ರಾಪ್ತೇ ॥ ೧೨ ॥ "

[ಅರ್ಥ:_ " ಇಲ್ಲಿ_ 'ಯುಧ್ಯತೇ', ಎಂಬ ಪ್ರಯೋಗವಿರಬೇಕಿತ್ತು."] * [೧೨]

---

* ಮಹಾಭಾಷ್ಯದಲ್ಲಿ ಇಷ್ಟೇ ಉದಾಹರಣೆಗಳು ಕೊಡಲ್ಪಟ್ಟಿವೆ. ಉಳಿದ ಉದಾಹರಣೆಗಳನ್ನು ಸ್ವಾಮೀ ವಿದ್ಯಾನಂದ ಸರಸ್ವತಿಯವರಿಂದ ರಚಿತವಾದ 'ಭೂಮಿಕಾಭಾಸ್ಕರ' ಭಾಗ - ೨, ಪುಟ ೯೧೮ ರಿಂದ ಆರಿಸಿ ಕೆಳಗೆ ಕೊಡುತ್ತಿದ್ದೇವೆ_

(೯) ಅಚ್‌ವ್ಯತ್ಯಯ

" ಉಪ ಗಾಯಂತು ಮಾಂ ಪತ್ನಯೋ ಗರ್ಭಿಣಯಃ "

ಇಲ್ಲಿ 'ಪತ್ನೀ', 'ಗರ್ಭಿಣೀ', ಎಂಬ ಈಕಾರಂತ ಪದಗಳು 'ಪತ್ನಿ', ಗರ್ಭಿಣಿ',** ಎಂಬಂತೆ ಇಕಾರಾಂತವಾಗಿ* 'ಪತ್ನಯಃ', 'ಗರ್ಭಿಣಯಃ', ಎಂದಾಗಿವೆ.

ಸ್ವರವ್ಯತ್ಯಯ

" ಅಶ್ವವತೀ ; ಸೋಮವತೀ ; ಪ್ರಜಾವತೀ "

ಇಲ್ಲಿ_

'ಅಂತೋವತ್ಯಾಃ' (ಅಷ್ಟಾ. ೬. ೧. ೨೨೦) ಸೂತ್ರದಂತೆ ಅಂತೋದಾತ್ತವಾಗುವ ಬದಲು ಆದ್ಯುದಾತ್ತವಾಗಿದೆ.

(೧೦) ಕರ್ತೃವ್ಯತ್ಯಯ (ಕಾರಕವ್ಯತ್ಯಯ)

" ಆಸಾದಯದ್ಭಿರುಭಯೋರ್ವೇದಾಃ "

ಇಲ್ಲಿ_ 'ಆಸಾದಯದ್ಭ್ಯಃ', ಎಂಬ **ಸಂಪ್ರದಾನಕಾರಕ** (= ಚತುರ್ಥೀವಿಭಕ್ತಿ)ದ ಸ್ಥಾನದಲ್ಲಿ **ಕರಣಕಾರಕ**(ತೃತೀಯಾವಿಭಕ್ತಿ)ದ ಪ್ರಯೋಗವಾಗಿದೆ.

(೧೧) ಯಜ್‌ವ್ಯತ್ಯಯ

'ಸಾರ್ವಧಾತುಕೇ ಯಕ್' (ಅಷ್ಟಾ. ೩. ೧. ೬)ನಿಂದ ಹಿಡಿದು 'ಲಿಙ್ಯಾಶಿಷ್ಯಙ್' (ಅಷ್ಟಾ. ೩. ೧. ೮೬) ತನಕ ವ್ಯತ್ಯಯವಿಧಾನವಿದೆ.

" ಆಂಡಾ ಶುಷ್ಣಸ್ಯ ಭೇದತಿ "

[ಋಗ್ವೇದಃ ೮. ೪೦. ೧೧]

ಇಲ್ಲಿ ರುಧಾದಿಗಣೀಯ 'ಭಿದಿರ್' ಧಾತುವಿಗೆ 'ಶ್ನಮ್' ವಿಕರಣವಾಗಿ 'ಭಿನ್ನತ್ತಿ', ಎಂಬ ಪ್ರಯೋಗವಾಗುವ ಬದಲು 'ಶಪ್' ಪ್ರಯೋಗವಾಗಿ, 'ಭೇದತಿ', ಎಂದಾಗಿದೆ.

" ಸ ಚ ನ ಮರತಿ "

ಇಲ್ಲಿ 'ಯಕ್' ವಿಕರಣವಾಗಿ 'ಮ್ರಿಯತೇ', ಎಂಬ ಪ್ರಯೋಗದ ಬದಲು 'ಶ' ವಿಕರಣವಾಗಿ, 'ಮರತಿ', ಎಂದಾಗಿದೆ.

** ದಕ್ಷಿಣಭಾರತದಲ್ಲಿ, ಆಕಾರಾಂತ-ಈಕಾರಾಂತ ಸ್ತ್ರೀಲಿಂಗವಾಚಕಶಬ್ದಗಳನ್ನು ಹ್ರಸ್ವವಾಗಿ ಬಳಸುವ ವಾಡಿಕೆ ಇದೆ. ಇದಕ್ಕೆ ಮೇಲಿನ ವೈದಿಕ ಉದಾಹರಣೆಗಳು ಸಮರ್ಥಕವಾಗಿವೆ. ಈ ಉದಾಹರಣೆಗಳನ್ನರಿಯದ ಉತ್ತರದೇಶೀಯರು ವ್ಯರ್ಥವಾಗಿ ದಕ್ಷಿಣಭಾರತೀಯರನ್ನು ಟೀಕಿಸುತ್ತಾರೆ.

_ಅನು.

(೧೩) 'ಹನ' ಧಾತುವಿಗೆ 'ಕ್ವಿಪ್' ಪ್ರತ್ಯಯ

"ಬಹುಲಂ ಛಂದಸಿ ॥ ೧೩ ॥"

[ಅಷ್ಟಾಧ್ಯಾಯ್ಯಾಮ್ ೩. ೨. ೮೮]

[ಅರ್ಥ:_ "ವೇದವಿಷಯದಲ್ಲಿ ಕರ್ಮ ಉಪಪದವು ಪರದಲ್ಲಿದ್ದಾಗ, ಭೂತಕಾಲದಲ್ಲಿ 'ಹನ' ಧಾತುವಿನಿಂದ ಬಹುಲವಾಗಿ 'ಕ್ವಿಪ್' ಪ್ರತ್ಯಯವು ಪರದಲ್ಲಿ ಉಂಟಾಗುತ್ತದೆ."

(ಅಷ್ಟಾಧ್ಯಾಯೀ : ೩. ೨. ೮೫)]

ಅನೇನ 'ಕ್ವಿಪ್'- ಪ್ರತ್ಯಯೋ ವೇದೇಷು ಬಹುಲಂ ವಿಧೀಯತೇ.

ಇದರಿಂದ, ವೇದಗಳಲ್ಲಿ 'ಕ್ವಿಪ್' ಪ್ರತ್ಯಯವು ಬಹುಲವಾಗಿ ವಿಧಿಸಲ್ಪಡುತ್ತದೆ.

[ಉದಾಹರಣೆಗಾಗಿ_]

"ಮಾತೃಹಾ , ಮಾತೃಘಾತಃ"

ಇತ್ಯಾದೀನಿ ॥ ೧೩ ॥

ಈ ಮೊದಲಾದುವು.* [೧೩]

(೧೪) ಭೂತಕಾಲದಲ್ಲಿ 'ಲಿಟ್'

"ಛಂದಸಿ ಲಿಟ್ ॥ ೧೪ ॥"

[ಅಷ್ಟಾಧ್ಯಾಯ್ಯಾಮ್ ೩. ೨. ೧೦೫]

[ಅರ್ಥ:_ " ವೇದವಿಷಯದಲ್ಲಿ ಧಾತುವಿನಿಂದ ಭೂತಕಾಲದಲ್ಲಿ 'ಲಿಟ್' ಪ್ರತ್ಯಯವು ಪರದಲ್ಲಿ ಬರುತ್ತದೆ."

(ಅಷ್ಟಾಧ್ಯಾಯೀ : ೩. ೨. ೧೦೫)]

ವೇದೇಷು ಸಾಮಾನ್ಯಭೂತೇ ಲಿಡ್ ವಿಧೀಯತೇ.

ಈ ಸೂತ್ರದಿಂದ, ವೇದಗಳಲ್ಲಿ ಸಾಮಾನ್ಯಭೂತ ಕಾಲದಲ್ಲಿ 'ಲಿಟ್'** ಲಕಾರವೂ ಕೂಡ, ಉಂಟಾಗುತ್ತದೆ.

[ಉದಾಹರಣೆಗಾಗಿ_]

"ಅಹಂ ದ್ಯಾವಾಪೃಥಿವೀ ಆತತಾನ"

॥ ೧೪ ॥

[೧೪]

* ಮಾತೃ ಹನ್ ಕ್ವಿಪ್ → ಮಾತೃ ಹನ್ ಸು → ಮಾತೃಹಾ; ಮಾತೃ ಹನ್ ಅಣ್→ ಮಾತೃ ಘ ತ್ ಅ → ಮಾತೃಘಾತಃ _ಅನು.

** 'ಲಿಟ್', ಎಂದರೆ ಪರೋಕ್ಷಭೂತಕಾಲ _ಅನು.

(೧೫) 'ಲಿಟ್'ನ ಸ್ಥಾನದಲ್ಲಿ 'ಕಾನಚ್'

"ಲಿಟಃ ಕಾನಜ್ವಾ ॥ ೧೫ ॥"

[ಅಷ್ಟಾಧ್ಯಾಯ್ಯಾಮ್ ೩. ೨. ೧೦೬]

[ಅರ್ಥ:_ "ವೇದವಿಷಯದಲ್ಲಿ 'ಲಿಟ್'ನ ಸ್ಥಾನದಲ್ಲಿ 'ಕಾನಚ್' ಪ್ರತ್ಯಯವು ವಿಕಲ್ಪದಿಂದ ಆದೇಶವಾಗುತ್ತದೆ."

(ಅಷ್ಟಾಧ್ಯಾಯೀ : ೩. ೨. ೧೦೬)]

ವೇದವಿಷಯೇ ಲಿಟಃ ಸ್ಥಾನೇ ಕಾನಜಾದೇಶೋ ವಾ ಭವತಿ.

ಈ ಸೂತ್ರದಿಂದ, ವೇದವಿಷಯದಲ್ಲಿ 'ಲಿಟ್' ಲಕಾರದ ಸ್ಥಾನದಲ್ಲಿ 'ಕಾನಚ್' ಆದೇಶವು ವಿಕಲ್ಪದಿಂದ ಉಂಟಾಗುತ್ತದೆ.

ಉದಾಹರಣೆಗಾಗಿ_

"ಅಗ್ನಿಂ ಚಿಕ್ಯಾನಃ"

[ತೈತ್ತಿರೀಯಸಂಹಿತಾಯಾಮ್ ೫. ೨. ೩. ೬]

'**ಛಂದಸಿ ಲಿಟ್**' (ಅಷ್ಟಾ. ೩. ೨. ೧೦೫)_ ಈ ಸೂತ್ರದಿಂದ '**ಲಿಟ್**'ನ ಅನುವೃತ್ತಿ ಬಂದಿದೆ. '**ಲಿಟ್**', ಎಂದು ಮತ್ತೆ ಏಕೆ ಹೇಳಲಾಗಿದೆಯೆಂದರೆ, '**ಪರೋಕ್ಷೇ ಲಿಟ್**' (ಅಷ್ಟಾ. ೩. ೨. ೧೧೫) ಈ ಸೂತ್ರದಿಂದ '**ಲಿಟ್**'ನ ಸ್ಥಾನದಲ್ಲಿ ಕೂಡ, '**ಕಾನಚ್**' ಆದೇಶವಾಗಲಿ, ಎಂದು.

ಇದಕ್ಕೆ_ '**ಆತತಾನ**' ಮೊದಲಾದ ಉದಾಹರಣೆಗಳಿವೆ.

ಪ್ರಕೃತೇಽಪಿ ಲಿಟಿ ಪುನರ್ಗ್ರಹಣಾತ್ ಪರೋಕ್ಷಾರ್ಥಸ್ಯಾಪಿ ಗ್ರಹಣಂ ಭವತಿ.

ಪಕ್ಷದಲ್ಲಿ ಕೂಡ, 'ಲಿಟ್', ಎಂದು ಮತ್ತೆ ಗ್ರಹಿಸಿರುವುದರಿಂದ, ಪರೋಕ್ಷದ ಅರ್ಥದ ಗ್ರಹಣವೂ ಕೂಡ, ಆಗುತ್ತದೆ!

[ಉದಾಹರಣೆಗಾಗಿ_]

"ಅಹಂ ಸೂರ್ಯಮುಭಯತೋ ದದರ್ಶ"

॥ ೧೫ ॥ [೧೫]

(೧೬) 'ಲಿಟ್' ನ ಸ್ಥಾನದಲ್ಲಿ 'ಕ್ವಸು'

"ಕ್ವಸುಶ್ಚ ॥ ೧೬ ॥"

[ಅಷ್ಟಾಧ್ಯಾಯ್ಯಾಮ್ ೩. ೨. ೧೦೭]

[ಅರ್ಥ:_ "ವೇದವಿಷಯದಲ್ಲಿ ಧಾತುವಿನಿಂದ 'ಲಿಟ್' ನ ಸ್ಥಾನದಲ್ಲಿ 'ಕ್ವಸು' ಪ್ರತ್ಯಯವು ವಿಕಲ್ಪದಿಂದ ಆದೇಶವಾಗುತ್ತದೆ."

(ಅಷ್ಟಾಧ್ಯಾಯೀ : ೩. ೨. ೧೦೭)]

ವೇದೇ ಲಿಟಃ ಸ್ಥಾನೇ ಕ್ವಸುರಾದೇಶೋ ವಾ ಭವತಿ.

ವೇದದಲ್ಲಿ 'ಲಿಟ್' ನ ಸ್ಥಾನದಲ್ಲಿ 'ಕ್ವಸು' ಆದೇಶವು ವಿಕಲ್ಪದಿಂದ ಉಂಟಾಗುತ್ತದೆ.

[ಉದಾಹರಣೆಗಾಗಿ_]

"ಪಪಿವಾನ್ ; ಜಗ್ಮಿವಾನ್"

ನ ಚ ಭವತಿ.

ಮತ್ತು [ಹಾಗೆ] ಉಂಟಾಗುವುದೂ ಇಲ್ಲ.

[ಉದಾಹರಣೆಗಾಗಿ_]

"ಅಹಂ ಸೂರ್ಯಮುಭಯತೋ ದದರ್ಶ"

॥ ೧೬ ॥ [೧೬]

(೧೭) ಕ್ಯ-ಧಾತುಗಳಿಂದ 'ಉ' ಪ್ರತ್ಯಯ

"ಕ್ಯಾಚ್ಛಂದಸಿ ॥ ೧೭ ॥"

[ಅಷ್ಟಾಧ್ಯಾಯ್ಯಾಮ್ ೩. ೨. ೧೭೦]

[ಅರ್ಥ:_ "ವೇದವಿಷಯದಲ್ಲಿ ಕ್ಯ-ಪ್ರತ್ಯಯಾಂತ ಧಾತುಗಳಿಂದ, 'ತಚ್ಛೀಲ' ಮೊದಲಾದ ಕರ್ತೃಗಳಿದ್ದಾಗ, ವರ್ತಮಾನಕಾಲದಲ್ಲಿ 'ಉ' ಪ್ರತ್ಯಯವು ಉಂಟಾಗುತ್ತದೆ."

(ಅಷ್ಟಾಧ್ಯಾಯೀ : ೩. ೨. ೧೭೦)]

ಕ್ಯ-ಪ್ರತ್ಯಯಾಂತಾದ್ ಧಾತೋಶ್ಛಂದಸಿ ವಿಷಯೇ ತಚ್ಛೀಲಾದಿಷು ಕರ್ತೃಷು ಉಕಾರಪ್ರತ್ಯಯೋ ಭವತಿ.

ಕ್ಯ-ಪ್ರತ್ಯಯಾಂತ ಧಾತುವಿನಿಂದ ವೇದದ ವಿಷಯದಲ್ಲಿ 'ತಚ್ಛೀಲ' ಮೊದಲಾದ ಕರ್ತೃಗಳಿದ್ದಾಗ, ಉಕಾರ ಪ್ರತ್ಯಯವುಂಟಾಗುತ್ತದೆ.

[ಉದಾಹರಣೆಗಾಗಿ_]

"ಮಿತ್ರಯುಃ ; ಸಂಸ್ವೇದಯುಃ ; ಸುಮ್ನಯುಃ"

"ನಿರನುಬಂಧಕಗ್ರಹಣೇ ಸಾನುಬಂಧಕಸ್ಯಾಪಿ ಗ್ರಹಣಂ ಭವತಿ"

[ಸೀರದೇವಕೃತಪರಿಭಾಷಾವೃತ್ತ್ಯಾಮ್ ೫೩]

[ಅರ್ಥ:_ "ಅನುಬಂಧವಲ್ಲದುದನ್ನು ಸ್ವೀಕರಿಸುವುದಾದರೆ, ಅನುಬಂಧಸಹಿತವಾದುದರ ಸ್ವೀಕಾರವೂ ಉಂಟಾಗುತ್ತದೆ."

(ಸೀರದೇವಕೃತಾ ಪರಿಭಾಷಾವೃತ್ತಿ: ೫೩)]

ಇತ್ಯನಯಾ ಪರಿಭಾಷಯಾ ಕ್ಯಚ್-ಕ್ಯಙ್-ಕ್ಯಷಾಂ ಸಾಮಾನ್ಯೇನ ಗ್ರಹಣಂ ಭವತಿ ॥೧೭॥

ಎಂಬ ಪರಿಭಾಷೆಯಿಂದ, [ಕ್ಯ, ಎಂದರೆ_]

ಕ್ಯಚ್ [ಅಷ್ಟಾ. ೩. ೧. ೮],

ಕ್ಯಙ್ [ಅಷ್ಟಾ. ೩. ೧. ೧೧] ಮತ್ತು_

ಕ್ಯಷ್ [ಅಷ್ಟಾ. ೩. ೧. ೧೩]

ಇವುಗಳ ಗ್ರಹಣವು ಸಾಮಾನ್ಯವಾಗಿ ಆಗುತ್ತದೆ. [೧೭]

(೧೮) ಕೃತ್ಯ-ಲ್ಯುಟ್ ಪ್ರತ್ಯಯಗಳು

"ಕೃತ್ಯಲ್ಯುಟೋ ಬಹುಲಮ್ ॥೧೮॥"

[ಅಷ್ಟಾಧ್ಯಾಯ್ಯಾಮ್ ೩. ೩. ೧೧೩]

[ಅರ್ಥ:_ "ಧಾತುವಿನಿಂದ ಕೃತ್ಯ ಸಂಜ್ಞಕ ಪ್ರತ್ಯಯಗಳೂ, ಹಾಗೂ ಲ್ಯುಟ್ ಪ್ರತ್ಯಯವೂ ಪರದಲ್ಲಿ ಬಹುಲವಾಗಿ ಉಂಟಾಗುತ್ತವೆ."

(ಅಷ್ಟಾಧ್ಯಾಯೀ : ೩. ೩. ೧೧೩)]

ಈ ಸೂತ್ರದ ಮೇಲೆ ವಾರ್ತಿಕಾಕಾರನು ಹೇಳಿದ್ದಾನೇನೆಂದರೆ_

"ಕೃಲ್ಲ್ಯುಟ ಇತಿ ವಕ್ತವ್ಯಮ್, ಕೃತೋ ಬಹುಲಮಿತಿ ವಾ; ಪಾದಹಾರಕಾದ್ಯರ್ಥಮ್ ।

[ಅರ್ಥ:_ "ಕೃತ್, ಲ್ಯುಟ್, ಎಂದು ಹೇಳಬೇಕು; ಅಥವಾ ಕೃತ್ ಬಹುಲವಾಗಿ, ಎಂದು! 'ಪಾದಹಾರಕ' ಮೊದಲಾದ ಪ್ರಯೋಜನವಿದೆ.

"ಪಾದಾಭ್ಯಾಂ ಹ್ರಿಯತೇ ಪಾದಹಾರಕಃ ।"

[ಅರ್ಥ:_ "ಪಾದಗಳಿಂದ ನಡೆಯುವವನು 'ಪಾದಹಾರಕ'."]

ಇದರಿಂದ, 'ಣ್ವುಲ್' ಮೊದಲಾದ ಪ್ರತ್ಯಯಗಳು ಕರ್ಮ ಮೊದಲಾದುವುಗಳಲ್ಲೂ ಕೂಡ, ಆಗಬೇಕು!

ಅನೇನ ಧಾತೋರ್ವಿಹಿತಾಃ ಕೃತ್‌ಸಂಜ್ಞಕಾಃ ಪ್ರತ್ಯಯಾಃ ಕಾರಕಮಾತ್ರೇ ವೇದಾದಿಷು ದ್ರಷ್ಟವ್ಯಾಃ .

ಈ ವಚನದಿಂದ, ಧಾತುವಿನಿಂದ ವಿಧಿಸಲ್ಪಟ್ಟ 'ಕೃತ್'ಸಂಜ್ಞೆಯುಳ್ಳ ಪ್ರತ್ಯಯಗಳು ಕಾರಕರೂಪದಲ್ಲಿ ಮಾತ್ರ ವೇದಾದಿಗಳಲ್ಲಿ ನೋಡಲ್ಪಡಬೇಕು!

ಅಯಂ ಲೌಕಿಕವೈದಿಕಶಬ್ದಾನಾಂ ಸಾರ್ವತ್ರಿಕೋ ನಿಯಮೋऽಸ್ತೀತಿ ವೇದಿತವ್ಯಮ್ ॥ ೧೮ ॥

ಇದು ಲೌಕಿಕ, ಹಾಗೂ ವೈದಿಕಶಬ್ದಗಳ ಸಾರ್ವತ್ರಿಕ ನಿಯವಾಗಿದೆ, ಎಂದು ತಿಳಿಯಬೇಕು! [೧೮]

(೧೯) ಯುಚ್-ಪ್ರತ್ಯಯವಿಧಾನ

" ಛಂದಸಿ ಗತ್ಯರ್ಥೇಭ್ಯಃ ॥ ೧೯ ॥ "

[ಅಷ್ಟಾಧ್ಯಾಯ್ಯಾಮ್ ೩. ೩. ೧೨೯]

[ಅರ್ಥಃ_ " ವೇದವಿಷಯದಲ್ಲಿ ಗತ್ಯರ್ಥಕ ಧಾತುಗಳಿಂದ ಕೃಚ್ಛ್ರ - ಅಕೃಚ್ಛ್ರ ಅರ್ಥಗಳಲ್ಲಿ ಈಷತ್ ಮೊದಲಾದ ಉಪಪದಗಳಿದ್ದರೆ, ಯುಚ್ ಪ್ರತ್ಯಯ ಉಂಟಾಗುತ್ತದೆ."

(ಅಷ್ಟಾಧ್ಯಾಯೀ : ೩. ೩. ೧೨೯)]

ಈಷದಾದಿಷು ಕೃಚ್ಛ್ರಾಕೃಚ್ಛ್ರಾರ್ಥೇಷೂಪಪದೇಷು ಸತ್ಸು ಗತ್ಯರ್ಥೇಭ್ಯೋ ಧಾತುಭ್ಯಶ್ಛಂದಸಿ ವಿಷಯೇ ಯುಚ್-ಪ್ರತ್ಯಯೋ ಭವತಿ.

ಈಷತ್ ಮೊದಲಾದ **ಕೃಚ್ಛ್ರ - ಅಕೃಚ್ಛ್ರ** ಅರ್ಥಗಳ ಉಪಪದಗಳಿದ್ದಾಗ, **ಗತ್ಯರ್ಥಕ** ಧಾತುಗಳಿಂದ, ವೇದದ ವಿಷಯದಲ್ಲಿ **'ಯುಚ್'** ಪ್ರತ್ಯಯವು ಉಂಟಾಗುತ್ತದೆ.

ಅಂದರೆ, ಈ ಸೂತ್ರದಿಂದ **ಈಷತ್, ದುರ್, ಸು**_ ಈ ಪೂರ್ವಪದಗಳು ತಗುಲಿದ್ದರೆ, ಗತ್ಯರ್ಥಕ ಧಾತುಗಳಿಂದ, ವೇದಗಳಲ್ಲಿ **'ಯುಚ್'** ಪ್ರತ್ಯಯ ಉಂಟಾಗುತ್ತದೆ.

ಉದಾಹರಣಾರ್ಥಮ್_

ಉದಾಹರಣೆಗಾಗಿ_

" ಸೂಪಸದನೋऽಗ್ನಿಃ " *

॥ ೧೯ ॥

[೧೯]

* ಸು ಉಪ ಷದಲೃ ಯುಚ್ → ಸು ಉಪ ಸದ್ ಅನ → ಸೂಪಸದನ _ಅನು.

(೨೦) ಇತರ ಧಾತುಗಳಿಂದಲೂ ಕೂಡ, 'ಯುಚ್' ಪ್ರತ್ಯಯ

"ಅನ್ಯೇಭ್ಯೋಽಪಿ ದೃಶ್ಯತೇ ॥ ೨೦ ॥"

[ಅಷ್ಟಾಧ್ಯಾಯ್ಯಾಮ್ ೩. ೩. ೧೩೦]

[ಅರ್ಥ:_ "ವೇದವಿಷಯದಲ್ಲಿ ಬೇರೆಯ ಧಾತುಗಳಿಂದಲೂ ಕೂಡ, 'ಕೃಚ್ಛ್ರ - ಅಕೃಚ್ಛ್ರ' ಅರ್ಥಗಳಲ್ಲಿ 'ಈಷತ್' ಮೊದಲಾದ ಉಪಪದಗಳಿದ್ದಾಗ, 'ಯುಚ್' ಪ್ರತ್ಯಯವು ಕಾಣಬರುತ್ತದೆ."

(ಅಷ್ಟಾಧ್ಯಾಯೀ : ೩. ೩. ೧೩೦)]

ಅನ್ಯೇಭ್ಯಶ್ಚ ಧಾತುಭ್ಯೋ ಯುಚ್ ಪ್ರತ್ಯಯೋ ದೃಶ್ಯತೇ.

ಮತ್ತು ಬೇರೆ ಧಾತುಗಳಿಂದಲೂ ಕೂಡ, 'ಯುಚ್' ಪ್ರತ್ಯಯವು (ವೇದಗಳಲ್ಲಿ) ಕಾಣಬರುತ್ತದೆ.

ಉದಾಹರಣೆಗಾಗಿ_

"ಸುದೋಹನಾಮಕೃಣೋದ್ ಬ್ರಹ್ಮಣೇ ಗಾಮ್"

ಇಲ್ಲಿ_ 'ಸು'ಪೂರ್ವಕ 'ದುಹ' ಧಾತುವಿನಿಂದ 'ಯುಚ್' ಪ್ರತ್ಯಯ ಉಂಟಾಗಿದೆ.* [೨೦]

॥ ೨೦ ॥

(೨೧) ಎಲ್ಲಾ ಕಾಲದಲ್ಲೂ ಭೂತಕಾಲದ ಪ್ರತ್ಯಯಗಳು

"ಛಂದಸಿ ಲುಙ್ ಲಙ್ ಲಿಟಃ ॥ ೨೧ ॥"

[ಅಷ್ಟಾಧ್ಯಾಯ್ಯಾಮ್ ೩. ೪. ೬]

[ಅರ್ಥ:_ "ವೇದವಿಷಯದಲ್ಲಿ ಧಾತ್ವರ್ಥಸಂಬಂಧವಾದಾಗ, ಸಾಮಾನ್ಯಕಾಲದಲ್ಲಿ ವಿಕಲ್ಪದಿಂದ ಧಾತುವಿನಿಂದ ಲುಙ್, ಲಙ್, ಲಿಟ್ ಪ್ರತ್ಯಯಗಳು ಉಂಟಾಗುತ್ತವೆ."

(ಅಷ್ಟಾಧ್ಯಾಯೀ : ೩. ೪. ೬)]

ವೇದವಿಷಯೇ ಧಾತುಸಂಬಂಧೇ ಸರ್ವೇಷು ಕಾಲೇಷು ಲುಙ್-ಲಙ್-ಲಿಟಃ ಪ್ರತ್ಯಯಾಃ ವಿಕಲ್ಪೇನ ಭವಂತಿ.

ವೇದವಿಷಯದಲ್ಲಿ ಧಾತುವಿನ [ಅರ್ಥದ] ಸಂಬಂಧವಾದಾಗ, ಎಲ್ಲಾ ಕಾಲಗಳಲ್ಲೂ ಲುಙ್, ಲಙ್, ಮತ್ತು ಲಿಟ್ ಪ್ರತ್ಯಯಗಳು ವಿಕಲ್ಪದಿಂದ ಉಂಟಾಗುತ್ತವೆ!

---

* ಸು ದುಹ ಯುಚ್ ಟಾಪ್ → ಸು ದುಹ್ ಅನ ಆ → ಸು ದೋಹ್ ಅನ್ ಆ → ಸುದೋಹನಾ _ಅನು.

ಅಂದರೆ, ಯಾವ ಲುಙ್, ಲಙ್, ಲಿಟ್_ ಈ ಮೂರೂ ಲಕಾರಗಳು ಲೋಕದಲ್ಲಿ ಭಿನ್ನ-ಭಿನ್ನ [ಭೂತ]ಕಾಲಗಳಲ್ಲಿ ಉಂಟಾಗುತ್ತವೋ, ಅವು ವೇದಗಳಲ್ಲಿ ಎಲ್ಲಾ ಕಾಲಗಳಲ್ಲೂ ವಿಕಲ್ಪದಿಂದ ಆಗುತ್ತವೆ.

ಉದಾಹರಣಾರ್ಥಮ್_ ಉದಾಹರಣೆಗಾಗಿ_

ಲುಙ್[1]_

"ಅಹಂ ತೇಭ್ಯೋಽಕರಂ[1] ನಮಃ ॥"

[ಯಜುರ್ವೇದೇ : ೧೬. ೮]

ಲಙ್[2]_

"ಅಗ್ನಿಮದ್ಯ ಹೋತಾರಮವೃಣೀತಾ[2]ಯಂ ಯಜಮಾನಃ"

[ಆಶ್ವಲಾಯನಶ್ರೌತ್ರಸೂತ್ರೇ ೩. ೬. ೧೬]

ಲಿಟ್[3]_

"ಅದ್ಯಾ ಮಮಾರ"[3]

[ಋಗ್ವೇದೇ ೧೦. ೫೫. ೫]

(೨೨) 'ಲಿಙ್' ಅರ್ಥದಲ್ಲಿ 'ಲೇಟ್' ಪ್ರಯೋಗ

ಈಗ, 'ಲೇಟ್' ಲಕಾರದ ವಿಷಯದಲ್ಲಿ ಯಾವ ಸಾಮಾನ್ಯಸೂತ್ರಗಳಿವೆಯೋ, ಅವನ್ನು ಇಲ್ಲಿ ಬರೆಯುತ್ತೇವೆ. ಈ 'ಲೇಟ್' ಲಕಾರವು ವೇದಗಳಲ್ಲಿ ಮಾತ್ರ ಉಂಟಾಗುತ್ತದೆ!

"ಲಿಙರ್ಥೇ ಲೇಟ್ ॥ ೨೨ ॥"

[ಅಷ್ಟಾಧ್ಯಾಯ್ಯಾಮ್ ೩. ೪. ೭]

[ಅರ್ಥ:_ "ವೇದವಿಷಯದಲ್ಲಿ 'ಲಿಙ್' ನ ಅರ್ಥದಲ್ಲಿ ಧಾತುವಿನಿಂದ ಲೇಟ್ ಪ್ರತ್ಯಯವು ಉಂಟಾಗುತ್ತದೆ."

(ಅಷ್ಟಾಧ್ಯಾಯೀ : ೩. ೪. ೭)]

1. ಸಾಮಾನ್ಯಭೂತ_ ಮಾಡಿದೆನು!
2. ಅನದ್ಯನಭೂತ_ ಹಿಂದೆ ವರಿಸಿದ್ದನು!
3. ಪರೋಕ್ಷಭೂತ_ ಎಂದೋ ಸತ್ತಿದ್ದನು! _ಅನು.

ಯತ್ರ ವಿಧ್ಯಾದಿಷು ಹೇತುಹೇತುಮತೋಃ ಶಕೀಚ್ಛಾರ್ಥೇಷೂರ್ಧ್ವಮೌಹೂರ್ತಿಕೇಷ್ವರ್ಥೇಷು ಲಿಙ್ ವಿಧೀಯತೇ ;

ಎಲ್ಲಿ ವಿಧಿ ಮೊದಲಾದ ಅರ್ಥಗಳಲ್ಲಿ*, ಹೇತು-ಹೇತುಮದ್ಭಾವ, ಸಾಮರ್ಥ್ಯ, ಇಚ್ಛೆಗಳ ಅರ್ಥಗಳಲ್ಲಿ, ಮತ್ತು ಸ್ವಲ್ಪ ಸಮಯದ ನಂತರ ಆಗುವ ಅರ್ಥಗಳಲ್ಲಿ 'ಲಿಙ್' ಪ್ರತ್ಯಯದ ವಿಧಾನ ಮಾಡಲ್ಪಡುತ್ತದೋ ;

ತತ್ರ ವೇದೇಷ್ವೇವ ಲೇಟ್ ಲಕಾರೋ ವಾ ಭವತಿ.

ಅಲ್ಲಿ ಕೇವಲ ವೇದಗಳಲ್ಲಿ ಮಾತ್ರ 'ಲೇಟ್' ಲಕಾರವು ವಿಕಲ್ಪದಿಂದ ಉಂಟಾಗುತ್ತದೆ.

ಉದಾಹರಣಾರ್ಥಮ್_

ಉದಾಹರಣೆಗಾಗಿ_

"ಜೀವಾತಿ ಶರದಃ ಶತಮ್"

[ಋಗ್ವೇದೇ ೧೦. ೮೫. ೩೯]

ಇತ್ಯಾದೀನಿ ॥ ೨೨ ॥

ಈ ಮೊದಲಾದುವು ಇವೆ. [೨೨]

(೨೩) ಉಪಸಂವಾದ-ಆಶಂಕೆಗಳಲ್ಲೂ 'ಲೇಟ್'

"ಉಪಸಂವಾದಾಶಂಕಯೋಶ್ಚ ॥ ೨೩ ॥"

[ಅಷ್ಟಾಧ್ಯಾಯ್ಯಾಮ್ ೩. ೪. ೮]

[ಅರ್ಥ:_ "ಉಪಸಂವಾದ ಮತ್ತು ಆಶಂಕೆಯ ಅರ್ಥಗಳಲ್ಲೂ ಕೂಡ, ವೇದವಿಷಯದಲ್ಲಿ ಧಾತುವಿನಿಂದ ಲೇಟ್ ಪ್ರತ್ಯಯವು ಉಂಟಾಗುತ್ತದೆ."

(ಅಷ್ಟಾಧ್ಯಾಯೀ : ೩. ೪. ೮]

ಉಪಸಂವಾದೇ ಆಶಂಕಾಯಾಂ ಚ ಗಮ್ಯ-ಮಾನಾಯಾಂ ವೇದೇಷು ಲೇಟ್ ಪ್ರತ್ಯಯೋ ಭವತಿ.

ಉಪಸಂವಾದ, ಹಾಗೂ ಆಶಂಕೆ ವರ್ತಮಾನ ವಾಗಿರುವಾಗ, ವೇದಗಳಲ್ಲಿ 'ಲೇಟ್' ಪ್ರತ್ಯಯವು ಉಂಟಾಗುತ್ತದೆ.

ಉದಾಹರಣಾರ್ಥಮ್_

ಉದಾಹರಣೆಗಾಗಿ_

ಉಪಸಂವಾದೇ_

ಉಪಸಂವಾದದಲ್ಲಿ.

"ಅಹಮೇವ ಪಶೂನಾಮೀಶೈ"

* ವಿಧಿ, ನಿಮಂತ್ರಣ, ಆಮಂತ್ರಣ, ಅಧೀಷ್ಟ, ಸಂಪ್ರಶ್ನ, ಪ್ರಾರ್ಥನೆ _ಅನು.

ಆಶಂಕಾಯಾಮ್_ | ಆಶಂಕೆಯಲ್ಲಿ _

" ನೇಜ್ಜಿಹ್ಮಾಯಂತ್ರ್ಯೋ ನರಕಂ ಪತಾಮ "

[ಋಗ್ವೇದೇ ಖಿಲೇ ೧೦. ೧೦೬. ೧]

ಮಿಥ್ಯಾಚರಣೇನ ನರಕಪಾತ ಆಶಂಕ್ಯತೇ ॥ ೨೩ ॥

ಇಲ್ಲಿ_ ಮಿಥ್ಯಾಚರಣೆಯ ಫಲವಾಗಿ ನರಕ ಪಾತದ ಆಶಂಕೆ ಮಾಡಲಾಗಿದೆ. [೨೩]

(೨೪) ಲೇಟ್ ಲಕಾರಕ್ಕೆ 'ಅಟ್' ಮತ್ತು 'ಆಟ್' ಆಗಮ

" ಲೇಟೋಽಡಾಟೌ ॥ ೨೪ ॥ "

[ಅಷ್ಟಾಧ್ಯಾಯ್ಯಾಮ್ ೩. ೪. ೯೪]

[ಅರ್ಥ:_" ಲೇಟ್ ಲಕಾರಕ್ಕೆ 'ಅಟ್' ಮತ್ತು 'ಆಟ್' ನ ಆಗಮವು ಪರ್ಯಾಯವಾಗಿ ಉಂಟಾಗುತ್ತದೆ."

(ಅಷ್ಟಾಧ್ಯಾಯೀ : ೩. ೪. ೯೪)]

ಲೇಟಃ ಪರ್ಯಾಯೇಣ ಅಟ್-ಆಟ್-ಆಗಮೌ ಭವತಃ* ॥ ೨೪ ॥

'ಲೇಟ್' ನ ಸ್ಥಾನದಲ್ಲಿ ಪರ್ಯಾಯವಾಗಿ 'ಅಟ್' ಮತ್ತು 'ಆಟ್' ಆಗಮವಾಗುತ್ತವೆ.

ಅಂದರೆ, 'ಲೇಟ್' ಲಕಾರಕ್ಕೆ ಕ್ರಮವಾಗಿ 'ಅಟ್', ಮತ್ತು 'ಆಟ್'ಆಗಮವಾಗುತ್ತವೆ.

ಎಂದರೆ, ಎಲ್ಲಿ 'ಅಟ್' ಉಂಟಾಗುತ್ತದೋ, ಅಲ್ಲಿ 'ಆಟ್' ಉಂಟಾಗುವುದಿಲ್ಲ; ಮತ್ತು ಎಲ್ಲಿ 'ಆಟ್' ಉಂಟಾಗುತ್ತದೋ, ಅಲ್ಲಿ 'ಅಟ್' ಉಂಟಾಗುವುದಿಲ್ಲ.* [೨೪]

(೨೫) 'ಲೇಟ್' ಲಕಾರದ 'ಆ'ಕಾರಕ್ಕೆ 'ಐ'ಕಾರ

" ಆತ ಐ ॥ ೨೫ ॥ "

[ಅಷ್ಟಾಧ್ಯಾಯ್ಯಾಮ್ ೩. ೪. ೯೫]

[ಅರ್ಥ:_" ಲೇಟ್ ಸಂಬಂಧವಾದ 'ಆ'ಕಾರದ ಸ್ಥಾನದಲ್ಲಿ 'ಐ'ಕಾರ ಆದೇಶವಾಗುತ್ತದೆ."

(ಅಷ್ಟಾಧ್ಯಾಯೀ : ೩. ೪. ೯೫)]

* ಉದಾಹರಣಾನಿ_ ಭವತಿ, ಭವಾತಿ; ಭವಿಷತಿ, ಭವಿಷಾತಿ _ಅನು

* ಉದಾಹರಣೆಗಾಗಿ _ಭವತಿ, ಭವಾತಿ; ಭವಿಷತಿ, ಭವಿಷಾತಿ _ಅನು.

ಛಂದಸ್ಯನೇನಾತ್ಮಪದೇ ವಿಹಿತಸ್ಯ ಲೇಡಾದೇಶಸ್ಯ ದ್ವಿವಚನಸ್ಥಸ್ಯಾಕಾರಸ್ಯ ಸ್ಥಾನೇ ಐಕಾರಾದೇಶೋ ಭವತಿ.

ಈ ಸೂತ್ರದಿಂದ, ವೇದವಿಷಯದಲ್ಲಿ ಆತ್ಮನೇ ಪದದಲ್ಲಿ ವಿಧಿಸಲ್ಪಟ್ಟ **'ಲೇಟ್'** ಆದೇಶದ ದ್ವಿವಚನ ದಲ್ಲಿನ 'ಆ'ಕಾರದ ಸ್ಥಾನದಲ್ಲಿ 'ಐ'ಕಾರಾದೇಶ ವಾಗುತ್ತದೆ.

ಅಂದರೆ, **ಲೇಟ್** ಲಕಾರದಲ್ಲಿ ಪ್ರಥಮ ಮತ್ತು ಮಧ್ಯಮಪುರುಷಗಳ **'ಆತಾಮ್'**, [ಹಾಗೂ **'ಆಥಾಮ್'**]_ ಇವುಗಳ 'ಆ'ಕಾರಕ್ಕೆ 'ಐ'ಕಾರ ಆದೇಶವಾಗುತ್ತದೆ.

ಉದಾಹರಣಾರ್ಥಮ್_

ಉದಾಹರಣೆಗಾಗಿ_

" ಮಂತ್ರಯೈತೇ ; ಮಂತ್ರಯೈಥೇ "

॥ ೨೫ ॥

ಇಲ್ಲಿ 'ಆ' ನ ಸ್ಥಾನದಲ್ಲಿ 'ಐ' ಆಗಿಬಿಟ್ಟಿದೆ. [೨೫]

(೨೬) ಲೇಟ್ ಲಕಾರದ 'ಏ'ಕಾರಕ್ಕೆ 'ಐ'ಕಾರ

" ವೈತೋಽನ್ಯತ್ರ ॥ ೨೬ ॥ "

[ಅಷ್ಟಾಧ್ಯಾಯ್ಯಾಮ್ ೩. ೪. ೯೬]

[ಅರ್ಥ:_ " ಬೇರೆ ಕಡೆ, ಲೇಟ್ ಸಂಬಂಧದ 'ಏ'ಕಾರದ ಸ್ಥಾನದಲ್ಲಿ ವಿಕಲ್ಪದಿಂದ 'ಐ'ಕಾರ ಆದೇಶವಾಗುತ್ತದೆ."

(ಅಷ್ಟಾಧ್ಯಾಯೀ : ೩. ೪. ೯೬)]

'ಆತ ಐ' ಇತ್ಯೇತಸ್ಯ ವಿಷಯಂ ವರ್ಜಯಿತ್ವಾ ಲೇಟ್-ಏಕಾರಸ್ಯ ಸ್ಥಾನೇ ಐಕಾರಾದೇಶೋ ವಾ ಭವತಿ.

'ಆತ ಐ' (ಅಷ್ಟಾ. ೩. ೪. ೯೫) ಈ ಸೂತ್ರದ ವಿಷಯವನ್ನು ಬಿಟ್ಟು, **ಲೇಟ್** ಲಕಾರದ 'ಏ'ಕಾರದ ಸ್ಥಾನದಲ್ಲಿ ವಿಕಲ್ಪದಿದ 'ಐ'ಕಾರಾದೇಶವಾಗುತ್ತದೆ.

ಅಂದರೆ, ಇಲ್ಲಿ **ಲೇಟ್** ಲಕಾರದ ಸ್ಥಾನದಲ್ಲಿ ಯಾವ 'ಏ'ಕಾರವಾಗುತ್ತದೋ, ಅದರ ಸ್ಥಾನದಲ್ಲಿ ವಿಕಲ್ಪದಿಂದ 'ಐ'ಕಾರ ಆದೇಶವಾಗುತ್ತದೆ.

ಉದಾಹರಣಾರ್ಥಮ್_

ಉದಾಹರಣೆಗಾಗಿ_

" ಅಹಮೇವ ಪಶೂನಾಮೀಶೈ " ; " ಈಶೇ " ವಾ ।

॥ ೨೬ ॥

[೨೬]

(೨೭) 'ಲೇಟ್' ಲಕಾರದಲ್ಲಿ 'ಇ'ಕಾರದ ಲೋಪ

" ಇತಶ್ಚ ಲೋಪಃ ಪರಸ್ಮೈಪದೇಷು ॥ ೨೭ ॥ "

[ಅಷ್ಟಾಧ್ಯಾಯ್ಯಾಮ್ ೩. ೪. ೯೭]

[ಅರ್ಥ:_ " ಪರಸ್ಮೈಪದದ ಸಂಬಂಧದಲ್ಲಿ 'ಲೇಟ್' ಗೆ ಸಂಬಂಧಿಸಿದ ಇಕಾರದ ಸ್ಥಾನದಲ್ಲಿ ವಿಕಲ್ಪದಿಂದ ಲೋಪವಾಗುತ್ತದೆ."

(ಅಷ್ಟಾಧ್ಯಾಯೀ : ೩. ೪. ೯೭)]

ಲೇಟಃ ಸ್ಥಾನ ಆದಿಷ್ಟಸ್ಯ ತಿಬಾದಿಸ್ಥಸ್ಯ ಪರಸ್ಮೈ-ಪದವಿಷಯಸ್ಯೇಕಾರಸ್ಯ ವಿಕಲ್ಪೇನ ಲೋಪೋ ಭವತಿ.

ಲೇಟ್ ಲಕಾರದ ಸ್ಥಾನದಲ್ಲಿ ಆದೇಶಿಸಲ್ಪಟ್ಟ 'ತಿಪ್' ಮೊದಲಾದ ಪರಸ್ಮೈಪದ ಪ್ರತ್ಯಯಗಳ ವಿಷಯಕ 'ಇ'ಕಾರದ ಲೋಪವು ವಿಕಲ್ಪದಿಂದಾಗುತ್ತದೆ.

ಅಂದರೆ, ಇಲ್ಲಿ **ಲೇಟ್** ಲಕಾರದ **ತಿಪ್**, ಸಿಪ್, ಮಿಪ್ ನಲ್ಲಿನ 'ಇ'ಕಾರದ ಲೋಪವು ವಿಕಲ್ಪ ದಿಂದಾಗುತ್ತದೆ.

ಉದಾಹರಣಾರ್ಥಮ್_

ಉದಾಹರಣೆಗೆ_

ಪ್ರಥಮಪುರುಷ_

ತರತಿ,	ತರಾತಿ;	ತರತ್	ತರಾತ್;
ತರಿಷತಿ,	ತರಿಷಾತಿ ;	ತರಿಷತ್	ತರಿಷಾತ್;
ತಾರಿಷತಿ,	ತಾರಿಷಾತಿ ;	ತಾರಿಷತ್	ತಾರಿಷಾತ್;

ಮಧ್ಯಮಪುರುಷ_

ತರಸಿ,	ತರಾಸಿ ;	ತರಃ,	ತರಾಃ ;
ತರಿಷಸಿ,	ತರಿಷಾಸಿ ;	ತರಿಷಃ,	ತರಿಷಾಃ ;
ತಾರಿಷಸಿ,	ತಾರಿಷಾಸಿ;	ತಾರಿಷಃ,	ತಾರಿಷಾಃ ;

ಉತ್ತಮಪುರುಷ_

ತರಮಿ,	ತರಾಮಿ;	ತರಮ್,	ತರಾಮ್ ;
ತರಿಷಮಿ,	ತರಿಷಾಮಿ ;	ತರಿಷಮ್,	ತರಿಷಾಮ್;
ತಾರಿಷಮಿ,	ತಾರಿಷಾಮಿ;	ತಾರಿಷಮ್,	ತಾರಿಷಾಮ್.

ಏವಮೇವ ಸರ್ವೇಷಾಂ ಧಾತೂನಾಂ ಪ್ರಯೋಗೇಷು ಲೇಡ್ವಿಷಯೇ ಬೋಧ್ಯಮ್ ॥ ೨೭ ॥

ಹೀಗೆಯೇ, ಲೇಟ್ ಲಕಾರದ ವಿಷಯದ ಎಲ್ಲಾ ಧಾತುಗಳ ಪ್ರಯೋಗಗಳಲ್ಲೂ ತಿಳಿದು ಕೊಳ್ಳಬೇಕು! [೨೭]

(೨೮) 'ಲೇಟ್' ಲಕಾರದಲ್ಲಿ 'ಸ'ಕಾರದ ಲೋಪ

"ಸ ಉತ್ತಮಸ್ಯ ॥ ೨೮ ॥"

[ಅಷ್ಟಾಧ್ಯಾಯ್ಯಾಮ್ ೩. ೪. ೯೮]

[ಅರ್ಥ:_ "ಲೇಟ್ ಸಂಬಂಧದ ಉತ್ತಮಪುರುಷದ ಸಕಾರದ ಲೋಪವು ವಿಕಲ್ಪದಿಂದಾಗುತ್ತದೆ."

(ಅಷ್ಟಾಧ್ಯಾಯೀ : ೩. ೪. ೯೮)]

ಲೇಟ ಉತ್ತಮಪುರುಷಸ್ಯ ಸಕಾರಸ್ಯ ಲೋಪೋ ವಾ ಭವತಿ.

ಲೇಟ್ ಲಕಾರದ ಉತ್ತಮಪುರುಷ[ಪ್ರತ್ಯಯಗಳ] ಸಕಾರದ ಲೋಪವು ವಿಕಲ್ಪದಿಂದಾಗುತ್ತದೆ.

ಅಂದರೆ, ಈ ಸೂತ್ರದಿಂದ, ಲೇಟ್ ಲಕಾರದ ಉತ್ತಮಪುರುಷದ 'ವಸ್', 'ಮಸ್' [ಪ್ರತ್ಯಯಗಳಲ್ಲಿನ] ಸಕಾರದ ಲೋಪವು ವಿಕಲ್ಪದಿಂದಾಗುತ್ತದೆ.

[ಉದಾಹರಣೆಗೆ_]

"[ಕರವವ, ಕರವವಃ]; ಕರವಾವ, ಕರವಾವಃ;
[ಕರವಮ, ಕರವಮಃ]; ಕರವಾಮ, ಕರವಾಮಃ."

॥ ೨೮ ॥

ಹೀಗೆ, 'ಲೇಟ್' ಲಕಾರದ ವಿಷಯವಾಗಿ ಸ್ವಲ್ಪ ಬರೆದಿದ್ದೇವೆ. ಮುಂದೆ, ಯಾರಾದರೂ ಎಲ್ಲವನ್ನೂ ತಿಳಿಯಬೇಕೆಂದಿದ್ದರೆ, ಅವರು ಅಷ್ಟಾಧ್ಯಾಯಿಯನ್ನು ಓದಿ ತಿಳಿಯಬಲ್ಲರು ; ಬೇರೆ ರೀತಿಯಿಂದಲ್ಲ!* [೨೮]

(೨೯) 'ತುಮ್' ಅರ್ಥದಲ್ಲಿ ೧೫ ಪ್ರತ್ಯಯಗಳು

"ತುಮರ್ಥೇ ಸೇ-ಸೇನಸೇಽಸೇನ್-ಕ್ಸೇ-ಕಸೇನಧ್ಯೈ-ಅಧ್ಯೈನ್- ಕಧ್ಯೈ- ಕಧ್ಯೈನ್- ಶಧ್ಯೈ- ಶಧ್ಯೈನ್- ತವೈ - ತವೇಙ್- ತವೇನಃ ॥ ೨೯ ॥"

[ಅಷ್ಟಾಧ್ಯಾಯ್ಯಾಮ್ ೧. ೨. ೪೫]

* ಆಧುನಿಕ ವೈಯಾಕರಣಿಗಳಿಂದ ರಚಿತವಾದ ವ್ಯಾಕರಣ ಗ್ರಂಥಗಳಿಂದ 'ಲೇಟ್'ಲಕಾರದ ಸಂಪೂರ್ಣ ವಿಷಯವನ್ನು ತಿಳಿಯುವುದು ಸಾಧ್ಯವಿಲ್ಲ, ಎಂದರ್ಥ_ಅನು.

[ಅರ್ಥ:_ "ವೇದವಿಷಯದಲ್ಲಿ 'ತುಮ್' ಅರ್ಥದಲ್ಲಿ ಧಾತುವಿನಿಂದ_ ಸೇ, ಸೇನ್, ಅಸೇ, ಅಸೇನ್, ಕ್ಸೇ, ಕಸೇನ್, ಅಧ್ಯೈ, ಅಧ್ಯೈನ್, ಕಧ್ಯೈ, ಕಧ್ಯೈನ್, ಶಧ್ಯೈ, ಶಧ್ಯೈನ್, ತವೈ, ತವೇಙ್, ಹಾಗೂ ತವೇನ್, ಎಂಬ ಪ್ರತ್ಯಯಗಳು ಪರದಲ್ಲಿ ಬರುತ್ತವೆ."

(ಅಷ್ಟಾಧ್ಯಾಯೀ : ೩. ೪. ೯)]

ಈ ಸೂತ್ರದಿಂದ ವೇದಗಳಲ್ಲಿ 'ಸೇ' ಮೊದಲಾದ ಹದಿನೈದು ಪ್ರತ್ಯಯಗಳು ಎಲ್ಲಾ ಧಾತುಗಳಿಂದಲೂ ಉಂಟಾಗಿಬಿಡುತ್ತವೆ.

ಧಾತುಮಾತ್ರಾತ್ ತುಮುನ್-ಪ್ರತ್ಯಯಸ್ಯಾರ್ಥೇ_ ಸೇ, ಸೇನ್, ಅಸೇ, ಅಸೇನ್, ಕ್ಸೇ, ಕಸೇನ್, ಅಧ್ಯೈ, ಅಧ್ಯೈನ್, ಕಧ್ಯೈ, ಕಧ್ಯೈನ್, ಶಧ್ಯೈ, ಶಧ್ಯೈನ್, ತವೈ, ತವೇಙ್, ತವೇನ್_ ಇತ್ಯೇತೇ ಪಂಚದಶ ಪ್ರತ್ಯಯಾ ವೇದೇಷ್ವೇವ ಭವಂತಿ.

ಧಾತುಮಾತ್ರದಿಂದ, 'ತುಮುನ್'ಪ್ರತ್ಯಯದ ಅರ್ಥದಲ್ಲಿ_

೧. ಸೇ ೨. ಸೇನ್ ೩. ಅಸೇ ೪. ಅಸೇನ್ ೫. ಕ್ಸೇ ೬. ಕಸೇನ್ ೭. ಅಧ್ಯೈ ೮. ಅಧ್ಯೈನ್ ೯. ಕಧ್ಯೈ ೧೦. ಕಧ್ಯೈನ್ ೧೧. ಶಧ್ಯೈ ೧೨. ಶಧ್ಯೈನ್ ೧೩. ತವೈ ೧೪. ತವೇಙ್ ಮತ್ತು ೧೫. ತವೇನ್

ಈ ಹದಿನೈದು ಪ್ರತ್ಯಯಗಳು ವೇದಗಳಲ್ಲಿ ಮಾತ್ರವೇ ಬರುತ್ತವೆ.

"ಕೃನ್ಮೇಜಂತಃ ॥"

[ಅಷ್ಟಾಧ್ಯಾಯ್ಯಾಮ್ ೧. ೧. ೩೮]

[ಅರ್ಥ:_ "ಮಕಾರಾಂತ ಮತ್ತು ಏಚ್-ಅಂತವಿರುವ ಕೃತ್ ಪ್ರತ್ಯಯಗಳು ಯಾವ ಶಬ್ದದ ಅಂತದಲ್ಲಿರುತ್ತವೋ, ಆ ಶಬ್ದರೂಪಗಳು 'ಅವ್ಯಯ' ಸಂಜ್ಞೆಯನ್ನುಳ್ಳವಾಗುತ್ತವೆ."

(ಅಷ್ಟಾಧ್ಯಾಯೀ : ೧. ೧. ೩೮)]

ಇತಿ ಸರ್ವೇಷಾಮವ್ಯಯತ್ವಮ್.

ಈ ಸೂತ್ರದಿಂದ, ಈ ಎಲ್ಲಾ (ಪ್ರತ್ಯಯಗಳೂ) ಅವ್ಯಯಗಳಾಗಿವೆ.

ಸರ್ವೇಷು ನಕಾರೋಽನುಬಂಧಃ ಸ್ವರಾರ್ಥಃ.

ಇವೆಲ್ಲವುಗಳಲ್ಲಿ_ ನಕಾರದ ಅನುಬಂಧವು ಸ್ವರದ ಪ್ರಯೋಜನಕ್ಕಾಗಿದೆ.

ಕಕಾರೋ ಗುಣವೃದ್ಧಿನಿಷೇಧಾರ್ಥಃ, ಙಕಾರೋಽಪಿ.

ಕಕಾರವು ಗುಣ, ಹಾಗೂ ವೃದ್ಧಿಯನ್ನು ನಿಷೇಧಿಸುವುದಕ್ಕಾಗಿದೆ ; ಹಾಗೆಯೇ ಙಕಾರವೂ ಕೂಡ!

ಶಕಾರಃ ಶಿದರ್ಥಃ.

ಶಕಾರವು 'ಶ' ಇತ್ ಆಗುವ ಪ್ರಯೋಜನಕ್ಕಾಗಿದೆ.

[ಉದಾಹರಣೆಗೆ_]

ಸೇ_

" ವಕ್ಷೇ* ರಾಯಃ "

ಸೇನ್_

" ತಾವಾಮೇಷೇ ರಥಾನಾಮ್ " **

ಅಸೇ, ಅಸೇನ್_

" ಕ್ರತ್ವೇ ದಕ್ಷಾಯ ಜೀವಸೇ "+

[ಅಥರ್ವವೇದೇ ೬. ೧೯. ೨]

ಕ್ಸೇ_

" ಪ್ರೇಷೇ ಭಗಾಯ "

[ಯಜುರ್ವೇದೇ ೫. ೭]

ಕಸೇನ್_

" ಶ್ರಿಯಸೇ "

[ಋಗ್ವೇದೇ ೫. ೫೯. ೩]

ಅಧ್ಯೈ, ಅಧ್ಯೈನ್_

" ಕರ್ಮಣ್ಯುಪಾಚರಧ್ಯೈ "

ಕಧ್ಯೈ _

" ಇಂದ್ರಾಗ್ನೀ ಆಹುವಧ್ಯೈ"

[ಯಜುರ್ವೇದೇ ३. ೧೩]

ಕಧ್ಯೈನ್_

" ಶ್ರಿಯಧ್ಯೈ "

** " ಅವ್ಯನೀತಮೇಷೇ " [ಋಗ್ವೇದ : ೧. ೧೮೦. ೪] _ಅನು.

* 'ವಕ್ತುಮ್', ಎಂಬ ಪಾಠಕ್ಕೆ ಬದಲಾಗಿ _ಅನು.

+ 'ಜೀವಿತುಮ್', ಎಂಬ ಪಾಠಕ್ಕೆ ಬದಲಾಗಿ _ಅನು.

ಶಧ್ಯೈ, ಶಧ್ಯೈನ್_

"ಪಿಬಧ್ಯೈ"

[ಋಗ್ವೇದೇ ೭. ೯೨. ೨]

ಅತ್ರ ಶಿತ್ವಾತ್ ಪಿಬಾದೇಶಃ.

ಇಲ್ಲಿ 'ಶ' ಇತ್ ಆದುದರಿಂದ, 'ಪಾ' ಧಾತುವಿಗೆ 'ಪಿಬ' ಆದೇಶವಾಗಿದೆ.

"ಸಹ ಮಾದಯಧ್ಯೈ"

[ಯಜುರ್ವೇದೇ ೩. ೧೩]

ತವೈ _

"ಸೋಮಮಿಂದ್ರಾಯ ಪಾತವೈ"

ತವೇಙ್_

"ದಶಮೇ ಮಾಸಿ ಸೂತವೇ"

[ಋಗ್ವೇದೇ ೧೦. ೧೮೪. ೩]

ತವೇನ್_

"ಸ್ವರ್ದೇವೇಷು ಗಂತವೇ"

[ಯಜುರ್ವೇದೇ ೧೫. ೫೫]

॥ ೨೯ ॥ [೨೯]

(೩೦) 'ತುಮ್' ಅರ್ಥದಲ್ಲಿ 'ಶಕ್ನೋತಿ'ಗೆ ಣಮುಲ್-ಕಮುಲ್ ಪ್ರತ್ಯಯಗಳು

"ಶಕಿ ಣಮುಲ್ಕಮುಲೌ ॥ ೩೦ ॥"

[ಅಷ್ಟಾಧ್ಯಾಯ್ಯಾಮ್ ೩. ೪. ೧೨]

[ಅರ್ಥ:_ "ತುಮ್, ಅರ್ಥದಲ್ಲಿ 'ಶಕ್ನೋತಿ' ಧಾತು ಉಪಪದವಿದ್ದಾಗ, ವೇದದಲ್ಲಿ ಧಾತುವಿನಿಂದ 'ಣಮುಲ್' ಮತ್ತು 'ಕಮುಲ್' ಪ್ರತ್ಯಯಗಳು ಬರುತ್ತವೆ."

(ಅಷ್ಟಾಧ್ಯಾಯೀ : ೩. ೪. ೧೨)]

ಶಕ್ನೋತೌ ಧಾತಾವುಪಪದೇ ಧಾತುಮಾತ್ರಾತ್ ತುಮರ್ಥೇ ವೇದೇಷು ಣಮುಲ್-ಕಮುಲೌ ಪ್ರತ್ಯಯೌ ಭವತಃ.

ವೇದಗಳಲ್ಲಿ_ **'ಶಕ್ನೋತಿ'**, ಎಂಬ ಧಾತುವು ಉಪಪದವಾದಾಗ, ಧಾತುಮಾತ್ರದಿಂದ, **'ತುಮ್'** ಅರ್ಥದಲ್ಲಿ **'ಣಮುಲ್'**, **'ಕಮುಲ್'**, ಎಂಬ ಪ್ರತ್ಯಯಗಳು ಬರುತ್ತವೆ.

ಣಕಾರೋ ವೃದ್ಧ್ಯರ್ಥಃ;

ಣಕಾರವು ವೃದ್ಧಿ ಮಾಡುವುದರ ಪ್ರಯೋಜನಕ್ಕಾಗಿದೆ.

ಕಕಾರೋ ಗುಣ-ವೃದ್ಧಿಪ್ರತಿಷೇಧಾರ್ಥಃ.

ಕಕಾರವು ಗುಣ, ಹಾಗೂ ವೃದ್ಧಿಯನ್ನು ನಿಷೇಧಿಸುವುದಕ್ಕಾಗಿದೆ.

ಲಕಾರಃ ಸ್ವರಾರ್ಥಃ.

ಲಕಾರವು ಸ್ವರದ ಪ್ರಯೋಜನಕ್ಕಾಗಿದೆ.

ಇದರಿಂದ, **'ವಿಭಾಜಮ್'**_ ಈ ಮೊದಲಾದ ಉದಾಹರಣೆಗಳು ಸಿದ್ಧವಾಗುತ್ತವೆ.

[ಉದಾಹರಣೆಗೆ_]

ಣಮುಲ್_

"ಅಗ್ನಿಂ ವೈ ದೇವಾ ವಿಭಾಜಂ ನಾಶಕ್ನುವನ್"

ವಿಭಕ್ತುಮಿತ್ಯರ್ಥಃ

'ವಿಭಕ್ತುಮ್' [= ವಿಭಜಿಸಲು,] ಎಂದರ್ಥ!

[ಕಮುಲ್_

"ಅಪಲುಪಂ ನಾಶಕ್ನುವನ್"

ಅಪಲೋಪ್ತುಮಿತ್ಯರ್ಥಃ.] ॥೩೦॥

'ಅಪಲೋಪ್ತುಮ್'= ಲೋಪ ಮಾಡಲು, ಎಂದರ್ಥ!] [೩೦]

(೩೧) 'ಈಶ್ವರ' ಶಬ್ದವಿರುವಾಗ 'ತುಮ್'ಅರ್ಥದಲ್ಲಿ ತೋಸುನ್, ಕಸುನ್

"ಈಶ್ವರೇ ತೋಸುನ್ಕಸುನೌ ॥೩೧॥"

[ಅಷ್ಟಾಧ್ಯಾಯ್ಯಾಮ್ ೩.೪.೧೩]

[ಅರ್ಥ:_ "ವೇದದಲ್ಲಿ 'ಈಶ್ವರ' ಶಬ್ದವು ಉಪಪದವಾಗಿರುವಾಗ, **'ತುಮ್'** ಅರ್ಥದಲ್ಲಿ, ಧಾತುವಿನಿಂದ 'ತೋಸುನ್' ಮತ್ತು 'ಕಸುನ್' ಪ್ರತ್ಯಯಗಳು ಪರದಲ್ಲಿ ಬರುತ್ತವೆ."

(ಅಷ್ಟಾಧ್ಯಾಯೀ : ೩.೪.೧೩)]

'ಈಶ್ವರ'ಶಬ್ದ ಉಪಪದೇ ವೇದೇ ತುಮರ್ಥೇ ವರ್ತ್ತಮಾನಾದ್ಧಾತೋಸ್ತೋಸುನ್-ಕಸುನೌ ಪ್ರತ್ಯಯೌ ಭವತಃ .

ವೇದದಲ್ಲಿ 'ಈಶ್ವರ'-ಶಬ್ದವು ಉಪಪದವಾದಾಗ, 'ತುಮ್' ಅರ್ಥದಲ್ಲಿ ಧಾತುವಿನಿಂದ 'ತೋಸುನ್', ಮತ್ತು 'ಕಸುನ್' ಪ್ರತ್ಯಯಗಳು ಬರುತ್ತವೆ.

[ಉದಾಹರಣೆಗೆ_]

ತೋಸುನ್_

" ಈಶ್ವರೋಽಭಿಚರಿತೋಃ "*

ಕಸುನ್_

" ಈಶ್ವರೋ ವಿಲಿಖಃ"

॥ ೩೧ ॥ [೩೧]

(೩೨) ಕೃತ್ಯಾರ್ಥದಲ್ಲಿ 'ತವೈ', 'ಕೇನ್', 'ಕೇನ್ಯ', 'ತ್ವನ್'

" ಕೃತ್ಯಾರ್ಥೇ ತವೈಕೇನ್‌ಕೇನ್ಯತ್ವನಃ ॥ ೩೨ ॥ "

[ಅಷ್ಟಾಧ್ಯಾಯ್ಯಾಮ್ ೩. ೪. ೧೪]

[ಅರ್ಥ_ " ವೇದವಿಷಯದಲ್ಲಿ ಕೃತ್ಯಾರ್ಥದಲ್ಲಿ [ಭಾವ-ಕರ್ಮದಲ್ಲಿ] ಧಾತುವಿನಿಂದ ತವೈ, ಕೇನ್, ಕೇನ್ಯ, ಮತ್ತು ತ್ವನ್ ಪ್ರತ್ಯಯಗಳು ಬರುತ್ತವೆ."

(ಅಷ್ಟಾಧ್ಯಾಯೀ : ೩. ೪. ೧೪)]

ಕೃತ್ಯಾನಾಂ ಮುಖ್ಯತಯಾ ಭಾವಕರ್ಮಣೀ ದ್ವಾವರ್ಥೌ ಸ್ತೋಽರ್ಹಾದಯಶ್ಚ.

ಕೃತ್ಯ[ಪ್ರತ್ಯಯ]ಗಳಿಗೆ ಮುಖ್ಯವಾಗಿ ಭಾವ** ಮತ್ತು ಕರ್ಮ, ಎಂಬ ಎರಡು ಅರ್ಥಗಳಿರುತ್ತವೆ. ಮತ್ತು 'ಅರ್ಹ',+ ಮೊದಲಾದುವು ಕೂಡ!

ತತ್ರ ವೇದವಿಷಯೇ ತವೈ, ಕೇನ್, ಕೇನ್ಯ, ತ್ವನ್ ಇತ್ಯೇತೇ ಪ್ರತ್ಯಯಾಃ ಭವಂತಿ.

ಆಗ, ವೇದವಿಷಯದಲ್ಲಿ ತವೈ, ಕೇನ್, ಕೇನ್ಯ ಮತ್ತು ತ್ವನ್, ಎಂಬೀ ಪ್ರತ್ಯಯಗಳು ಬರುತ್ತವೆ.

ಇದರಿಂದ, 'ಪರಿಧಾತವೈ' ಮೊದಲಾದ ಉದಾಹರಣೆಗಳು ಸಿದ್ಧವಾಗುತ್ತವೆ.

---

* 'ಅಭಿಚರಿತುಮ್', ಎಂಬ ಸ್ಥಾನದಲ್ಲಿ _ಅನು.

** ಅಷ್ಟಾ. (೩. ೪. ೭೦) ; (೩. ೩. ೧೬೧) _ಅನು.

+ ಅಷ್ಟಾ. (೩. ೩. ೧೬೯) _ಅನು.

[ಉದಾಹರಣೆಗೆ_]

ತವೈ _

" ಪರಿಧಾತವೈ "

[ಪರಿಧಾತವ್ಯಮಿತ್ಯರ್ಥಃ .]

[ಪರಿಧಾತವ್ಯಮ್[= ಧರಿಸಿಕೊಳ್ಳಬೇಕು, ಎಂದರ್ಥ.]

ಕೇನ್_

" ನಾವಗಾಹೇ "

[ನಾವಗಾಹಿತವ್ಯಮಿತ್ಯರ್ಥಃ .]

[ನಾವಗಾಹಿತವ್ಯಮ್, ಎಂದರ್ಥ.]

ಕೇನ್ಯ _

" ದಿದೃಕ್ಷೇಣ್ಯಃ "

[ತೈತ್ತಿರೀಯಬ್ರಾಹ್ಮಣೇ ೨. ೭. ೯. ೪]

[ದಿದೃಕ್ಷಿತವ್ಯಮಿತ್ಯರ್ಥಃ .]

[ದಿದೃಕ್ಷಿತವ್ಯಮ್ = ನೋಡಲು ಇಚ್ಛಿಸಬೇಕು, ಎಂದರ್ಥ.]

" ಶುಶ್ರೂಷೇಣ್ಯಃ "

[ಶುಶ್ರೂಷಿತವ್ಯಮಿತ್ಯರ್ಥಃ .]

[ಶುಶ್ರೂಷಿತವ್ಯಮ್, ಎಂದರ್ಥ]

ತ್ವನ್_

" ಕರ್ತ್ವಂ ಹವಿಃ "

[ಅಥರ್ವವೇದೇ ೧. ೪. ೩]

[ಕರ್ತ್ತವ್ಯಮಿತ್ಯರ್ಥಃ.]

[ಕರ್ತ್ತವ್ಯಮ್ = ಮಾಡಬೇಕು, ಎಂದರ್ಥ.]

ಸ್ತ್ರೀಪ್ರತ್ಯಯಗಳ ವಿಧಾನ

(೩೩) ನಿತ್ಯವೂ 'ಙೀಪ್'ಪ್ರತ್ಯಯ

" ನಿತ್ಯಂ ಸಂಜ್ಞಾಛಂದಸೋಃ ॥ ೩೩ ॥ "

[ಅಷ್ಟಾಧ್ಯಾಯ್ಯಾಮ್ ೪. ೧. ೨೯]

[ಅರ್ಥ_ " ಸಂಜ್ಞಾ, ಹಾಗೂ ವೇದವಿಷಯದಲ್ಲಿ 'ಅನ್' ಅಂತ್ಯದಲ್ಲಿದ್ದು, ಉಪಧಾ-ಲೋಪವಾಗಿರುವ ಬಹುವ್ರೀಹಿಸಮಾಸದಲ್ಲಿ ನಿತ್ಯವೂ ಸ್ತ್ರೀಲಿಂಗದಲ್ಲಿ 'ಙೀಪ್'ಪ್ರತ್ಯಯವು ಬರುತ್ತದೆ. "

(ಅಷ್ಟಾಧ್ಯಾಯೀ : ೪. ೧. ೨೯)]

ಅನ್ನಂತಾದ್ ಬಹುವ್ರೀಹೇರುಪಧಾಲೋಪಿನಃ ಪ್ರಾತಿಪದಿಕಾತ್ ಸಂಜ್ಞಾಯಾಂ ವಿಷಯೇ ಛಂದಸಿ ಚ ನಿತ್ಯಂ ಸ್ತ್ರಿಯಾಂ ಙೀಪ್-ಪ್ರತ್ಯಯೋ ಭವತಿ.

ಸಂಜ್ಞಾ ಮತ್ತು ವೇದದ ವಿಷಯದಲ್ಲಿ 'ಅನ್' ಅಂತ್ಯದಲ್ಲಿರುವ, ಹಾಗೂ ಉಪಧಾಲೋಪವಾಗಿರುವ ಬಹುವ್ರೀಹಿಸಮಾಸವುಳ್ಳ ಪ್ರಾತಿಪದಿಕದಿಂದ, ಸ್ತ್ರೀಲಿಂಗ ದಲ್ಲಿ ನಿತ್ಯವೂ 'ಙೀಪ್' ಪ್ರತ್ಯಯವು ಬರುತ್ತದೆ.

[ಉದಾಹರಣೆಗೆ_]

" ಗೌಃ ಪಂಚದಾಮ್ನೀ " ;* " ಏಕದಾಮ್ನೀ "

॥ ೩೩ ॥ [೩೩]

(೩೪) ನಿತ್ಯವೂ 'ಙೀಪ್' ಪ್ರತ್ಯಯ

" ನಿತ್ಯಂ ಛಂದಸಿ ॥ ೩೪ ॥ "

[ಅಷ್ಟಾಧ್ಯಾಯ್ಯಾಮ್ ೪. ೧. ೪೬]

[ಅರ್ಥ_ " ವೇದದಲ್ಲಿ 'ಬಹು' ಮೊದಲಾದ ಅನುಪಸರ್ಜನ ಪ್ರಾತಿಪದಿಕಗಳಿಂದ ನಿತ್ಯವೂ ಸ್ತ್ರೀಲಿಂಗದಲ್ಲಿ ಙೀಪ್ ಪ್ರತ್ಯಯವುಂಟಾಗುತ್ತದೆ. "

(ಅಷ್ಟಾಧ್ಯಾಯೀ : ೪. ೧. ೪೬)]

ಬಹ್ವಾದಿಭ್ಯೋ ವೇದೇಷು ಸ್ತ್ರಿಯಾಂ ಙೀಪ್ ಪ್ರತ್ಯಯೋ ಭವತಿ.

ವೇದಗಳಲ್ಲಿ ಬಹು ಮೊದಲಾದ [ಪ್ರಾತಿಪದಿಕ] ಗಳಿಂದ ಸ್ತ್ರೀಲಿಂಗದಲ್ಲಿ 'ಙೀಪ್' ಪ್ರತ್ಯಯವು ಬರುತ್ತದೆ.

[ಉದಾಹರಣೆಗೆ_]

" ಬಹ್ವೀಷು** ಹಿತ್ವಾ ಪ್ರಪಿಬನ್ "

॥ ೩೪ ॥ [೩೪]

---

* ಪಂಚದಾಮನ್ + ಙೀಪ್ = ಪಂಚದಾಮ್ನೀ _ಅನು.

** ಬಹು + ಙೀಪ್ + ಸುಪ್ = ಬಹ್ವೀಷು _ಅನು.

(೩೫) 'ಭವ' ಅರ್ಥದಲ್ಲಿ 'ಯತ್' ಪ್ರತ್ಯಯ

"ಭವೇ ಛಂದಸಿ ॥ ೩೫ ॥"

[ಅಷ್ಟಾಧ್ಯಾಯ್ಯಾಮ್ ೪. ೪. ೧೧೦]

[ಅರ್ಥ_ "ವೇದವಿಷಯದಲ್ಲಿ ಸಪ್ತಮೀಸಮರ್ಥ ಪ್ರಾತಿಪದಿಕದಿಂದ 'ಭವ' ಅರ್ಥದಲ್ಲಿ ಯತ್ ಪ್ರತ್ಯಯವುಂಟಾಗುತ್ತದೆ."

(ಅಷ್ಟಾಧ್ಯಾಯೀ : ೪. ೪. ೧೦)]

ಸಪ್ತಮೀಸಮರ್ಥಾತ್ ಪ್ರಾತಿಪದಿಕಾದ್ ಭವ ಇತ್ಯೇತಸ್ಮಿನ್ನರ್ಥೇ ಛಂದಸಿ ವಿಷಯೇ ಯತ್ ಪ್ರತ್ಯಯೋ ಭವತಿ.

ಸಪ್ತಮೀಸಮರ್ಥಪ್ರಾತಿಪದಿಕದಿಂದ, ವೇದ ವಿಷಯದಲ್ಲಿ_ 'ಭವ', ಎಂಬ ಈ ಅರ್ಥದಲ್ಲಿ 'ಯತ್' ಪ್ರತ್ಯಯವು ಬರುತ್ತದೆ.

ಅಯಮಣಾದೀನಾಂ ಘಾದೀನಾಂ ಚಾಪವಾದಃ.

ಈ ನಿಯಮವು 'ಅಣ್' ಮೊದಲಾದುದರ, ಹಾಗೂ 'ಘ' ಮೊದಲಾದುದರ ಅಪವಾದವಾಗಿದೆ.

ಸತಿ ದರ್ಶನೇ ತೇಽಪಿ ಭವಂತಿ.

[ಅವು ವೇದದಲ್ಲಿ] ಕಂಡು ಬಂದಾಗ, ಅವುಗಳೂ ಕೂಡ, ಉಚಿತವಾಗಿವೆ, [ಎಂದು ತಿಳಿಯಬೇಕು.]

[ಉದಾಹರಣೆಗೆ_]

"ಮೇಧ್ಯಾಯ ಚ ವಿದ್ಯುತ್ಯಾಯ ಚ ನಮಃ"

[ಯಜುರ್ವೇದೇ ೧೬. ೩೮]

॥ ೩೫ ॥

ಇತಃ ಸೂತ್ರಾದಾರಭ್ಯ ಯಾನಿ ಪ್ರಕೃತಿ-ಪ್ರತ್ಯಯಾರ್ಥವಿಶೇಷವಿಧಾಯಕಾನಿ ಪಾದ-ಪರ್ಯ್ಯಂತಾನಿ ವೇದವಿಷಯಕಾಣಿ ಸೂತ್ರಾಣಿ ಸಂತಿ, ತಾನ್ಯತ್ರ ನ ಲಿಖ್ಯಂತೇ.

[೩೫]

ಈ ಸೂತ್ರದಿಂದಾರಂಭಿಸಿ, ಪಾದದ ಅಂತ್ಯದ ತನಕ* ಪ್ರಕೃತಿ-ಪ್ರತ್ಯಯಗಳ ಬಗ್ಗೆ ವಿಶೇಷ ವಿಧಾನ ಮಾಡುವಂತಹ ವೇದವಿಷಯಕವಾದ ಯಾವ ಸೂತ್ರಗಳಿವೆಯೋ, ಅವು ಇಲ್ಲಿ ಬರೆಯಲ್ಪಡುವುದಿಲ್ಲ!

ಅಂದರೆ, ಈ ಸೂತ್ರದಿಂದ ಮುಂದೆ ಪಾದ ಪರ್ಯಂತ ಇರುವ ಸೂತ್ರಗಳೆಲ್ಲವೂ ವೇದಗಳಿಗೇ ಅನ್ವಯಿಸುತ್ತವೆ. ಅವನ್ನು ಇಲ್ಲಿ ಏಕೆ ಬರೆಯುತ್ತಿಲ್ಲವೆಂದರೆ, ಅವು ಒಂದೊಂದು ಮಾತಿನ ವಿಶೇಷತೆಯನ್ನುಳ್ಳದ್ದಾಗಿವೆ.

* ಎಂದರೆ, ಅಷ್ಟಾ. ೪. ೪. ೧೪೪ ನೆಯ ಸೂತ್ರದ ತನಕ! _ಅನು.

ಕುತಸ್ತೇಷಾಮುದಾಹರಣಾನಿ ಯತ್ರ ಯತ್ರ ಮಂತ್ರೇಷ್ವಾಗಮಿಷ್ಯಂತಿ, ತತ್ರ ತತ್ರ ತಾನಿ ಲೇಖಿಷ್ಯಾಮಃ.

ಮತ್ತು ಏಕೆಂದರೆ, ಅವುಗಳ ಉದಾಹರಣೆಗಳು ಮಂತ್ರಗಳಲ್ಲಿ ಎಲ್ಲೆಲ್ಲಿ ಬರುವುವೋ, ಅಲ್ಲಲ್ಲಿ ಅವುಗಳನ್ನು ಬರೆಯುವೆವು!

(೩೬) 'ಮತುಪ್' ಅರ್ಥದಲ್ಲಿ 'ವಿನಿ'ಪ್ರತ್ಯಯ

"ಬಹುಲಂ ಛಂದಸಿ ॥ ೩೬ ॥"

[ಅಷ್ಟಾಧ್ಯಾಯ್ಯಾಮ್ ೫. ೨. ೧೨೨]

[ಅರ್ಥ_ "ವೇದವಿಷಯದಲ್ಲಿ ಪ್ರಾತಿಪದಿಕಗಳಿಂದ ಮತುಪ್ ಅರ್ಥದಲ್ಲಿ ಬಹುಲವಾಗಿ 'ವಿನಿ' ಪ್ರತ್ಯಯವು ಬರುತ್ತದೆ."

(ಅಷ್ಟಾಧ್ಯಾಯೀ : ೫. ೨. ೧೨೨)]

ವೇದೇಷು ಸಮರ್ಥಾನಾಂ ಪ್ರಥಮಾತ್ ಪ್ರಾತಿಪದಿಕಮಾತ್ರಾದ್ ಭೂಮಾದಿಷ್ವರ್ಥೇಷು ವಿನಿಃ ಪ್ರತ್ಯಯೋ ಬಹುಲಂ ವಿಧೀಯತೇ.

ವೇದಗಳಲ್ಲಿ ಪ್ರಥಮಾ'ಸಮರ್ಥ'* ಪ್ರಾತಿಪದಿಕ ಮಾತ್ರದಿಂದ 'ಭೂಮ' ಮೊದಲಾದ ಅರ್ಥಗಳಲ್ಲಿ 'ವಿನಿ' ಪ್ರತ್ಯಯವು ಬಹುಲವಾಗಿ ವಿಧಿಸಲ್ಪಡುತ್ತದೆ.

ತದ್ಯಥಾ_

ಉದಾಹರಣೆಗಾಗಿ_**

ಭೂಮಾದಯಃ.

'ಭೂಮ' ಮೊದಲಾದುವು.

"ಭೂಮನಿಂದಾಪ್ರಶಂಸಾಸು ನಿತ್ಯಯೋಗೇऽತಿಶಾಯಿನೇ ।
ಸಂಬಂಧೇऽಸ್ತಿ ವಿವಕ್ಷಾಯಾಂ ಭವಂತಿ ಮತುಬಾದಯಃ ॥"

[ಅರ್ಥ_ "ಭೂಮ [=ಬಹಳ], ನಿಂದೆ, ಪ್ರಶಂಸೆಗಳ ಅರ್ಥದಲ್ಲಿಯೂ, ಮತ್ತು ನಿತ್ಯಯೋಗ, ಅತಿಶಯ, ಸಂಬಂಧಗಳಲ್ಲೂ, ಹಾಗೂ 'ಅಸ್ತಿ', ಎಂದು ಹೇಳುವ ಇಚ್ಛೆ ಇರುವಾಗಲೂ 'ಮತುಪ್' ಮೊದಲಾದ ಪ್ರತ್ಯಯಗಳು ಬರುತ್ತವೆ."]

[ಇತಿ ಮಹಾಭಾಷ್ಯೇ.]

ಹೀಗೆ, ಮಹಾಭಾಷ್ಯದಲ್ಲಿದೆ.

['ಮತುಪ್'ವಿಧಾಯಕವಾದ ಸೂತ್ರ ಯಾವುದೆಂದರೆ_]

---

* ಎಂದರೆ, ಪ್ರಥಮಾವಿಭಕ್ತಿಯ ಸಮಾಸವನ್ನುಳ್ಳ _ಅನು.

** 'ತೇಜಸ್ವಿನ್'_ ಇಲ್ಲಿ 'ವಿನಿ' ಪ್ರತ್ಯಯ ಉಂಟಾಗಿದೆ. ಮತ್ತು 'ವರ್ಚಸ್ವಾನ್' _ಇಲ್ಲಿ ಆಗಿಲ್ಲ! _ಅನು.

" ತದಸ್ಯಾಽಸ್ತ್ಯಸ್ಮಿನ್ನಿತಿ ಮತುಪ್ ॥ "

[ಅಷ್ಟಾಧ್ಯಾಯ್ಯಾಮ್ ೫. ೨. ೯೪]

[ಅರ್ಥ_ " 'ತತ್', ಎಂದರೆ ಪ್ರಥಮಾಸಮರ್ಥಪ್ರಾತಿಪದಿಕದಿಂದ, 'ಅಸ್ಯ ಅಸ್ತಿ', 'ಅಸ್ಮಿನ್ ಅಸ್ತಿ', ಈ ಅರ್ಥಗಳಲ್ಲಿ 'ಮತುಪ್' ಪ್ರತ್ಯಯವು ಉಂಟಾಗುತ್ತದೆ." *

(ಅಷ್ಟಾಧ್ಯಾಯೀ : ೫. ೨. ೯೪)]

ಅಸ್ಯ ಸೂತ್ರಸ್ಯೋಪರಿ ಮಹಾಭಾಷ್ಯವಚನಾ-ದೇತೇಷು ಸಪ್ತಸ್ವರ್ಥೇಷು ಪ್ರತ್ಯಯಾ ವೇದೇ ಲೋಕೇ ಚೈತೇ ಮತುಬಾದಯೋ ಭವಂತೀತಿ ಬೋಧ್ಯಮ್.

ಈ ಸೂತ್ರದ ಮೇಲೆ ಮಹಾಭಾಷ್ಯದ ವಚನದಂತೆ, [ಮೇಲೆ ಹೇಳಿದ] ಈ ಏಳು ಅರ್ಥಗಳಲ್ಲಿ ವೇದ, ಹಾಗೂ ಲೋಕದಲ್ಲಿ 'ಮತುಪ್' ಮೊದಲಾದ ಈ ಪ್ರತ್ಯಯಗಳು ಬರುತ್ತವೆ, ಎಂದು ತಿಳಿಯಬೇಕು!

(ಬಹುಲಂ.) ಅಸ್ಮಿನ್ ಸೂತ್ರೇ ಪ್ರಕೃತಿಪ್ರತ್ಯಯ-ರೂಪವಿಶೇಷವಿಧಾಯಕಾನಿ ಬಹೂನಿ ವಾರ್ತ್ತಿಕಾನಿ ಸಂತಿ.

'ಬಹುಲಂ ಛಂದಸಿ' (ಅಷ್ಟಾ. ೫. ೨. ೧೨೨) ಈ ಸೂತ್ರದ ಮೇಲೆ ಪ್ರಕೃತಿ-ಪ್ರತ್ಯಯರೂಪದಲ್ಲಿ ವಿಶೇಷವಾಗಿ ವಿಧಿಸಲ್ಪಟ್ಟಿರುವಂತಹ, ಬಹಳ ವಾರ್ತಿಕಗಳಿವೆ.

ಅಂದರೆ, ಈ ಸೂತ್ರದ ಮೇಲೆ ವೈದಿಕ ಶಬ್ದಗಳಿಗಾಗಿ ಬಹಳ ವಾರ್ತಿಕಗಳಿವೆ. ಅವು ವಿಶಿಷ್ಟವಾದುದರಿಂದ, ಇಲ್ಲಿ ಬರೆಯಲಾಗುವುದಿಲ್ಲ.

ತಾನಿ ತತ್ತದ್ವಿಷಯೇಷು ಪ್ರಕಾಶಯಿಷ್ಯಾಮಃ . ॥ ೩೬ ॥

ಅವುಗಳನ್ನು [ವೇದಭಾಷ್ಯದಲ್ಲಿ] ಆಯಾ ವಿಷಯಗಳಲ್ಲಿ ಪ್ರಕಾಶ ಮಾಡುವೆವು. [೩೬]

(೩೭) 'ಅನ್-ಅಸ್' ಅಂತ್ಯವುಳ್ಳ ಶಬ್ದಕ್ಕೆ 'ಟಚ್' ಪ್ರತ್ಯಯ

" ಅನಸಂತಾನ್ನಪುಂಸಕಾಚ್ಛಂದಸಿ ॥ ೩೭ ॥ "

[ಅಷ್ಟಾಧ್ಯಾಯ್ಯಾಮ್ ೫. ೪. ೧೦೩]

[ಅರ್ಥ_ " ವೇದವಿಷಯದಲ್ಲಿ, ನಪುಂಸಕಲಿಂಗದಲ್ಲಿರುವ 'ಅನ್' ಮತ್ತು 'ಅಸ್' ಅಂತ್ಯದಲ್ಲಿನ ತತ್ಪುರುಷ ಸಮಾಸದಿಂದ ಸಮಾಸಾಂತ 'ಟಚ್' ಪ್ರತ್ಯಯವು ಉಂಟಾಗುತ್ತದೆ. "

(ಅಷ್ಟಾಧ್ಯಾಯೀ : ೫. ೪. ೧೦೩)]

---

* ಉದಾಹರಣೆಗಾಗಿ_
'ಗಾವೋಽಸ್ಯ ಸಂತೀತಿ ಗೋಮಾನ್', ದೇವದತ್ತಃ!
'ವೃಕ್ಷಾ ಅಸ್ಮಿನ್ ಸಂತೀತಿ ವೃಕ್ಷವಾನ್', ಪರ್ವತಃ!
_ಅನು.

" ಅನಸಂತಾನ್ನಪುಂಸಕಾಚ್ಛಂದಸಿ [ಟಚ್ ಪ್ರತ್ಯಯೋ]
ವೇತಿ ವಕ್ತವ್ಯಮ್ ।"

[ಅರ್ಥ:_ " ವೇದವಿಷಯದಲ್ಲಿ ಅನ್, ಅಸ್ ಅಂತ್ಯದಲ್ಲಿರುವ ನಪುಂಸಕ (ಪ್ರಾತಿಪದಿಕ)ದಿಂದ 'ಟಚ್'ಪ್ರತ್ಯಯವು ವಿಕಲ್ಪದಿಂದ ಉಂಟಾಗುತ್ತದೆ, ಎಂದು ಹೇಳಬೇಕು."]

[ಇತಿ ಮಹಾಭಾಷ್ಯೇ.] ಹೀಗೆ, ಮಹಾಭಾಷ್ಯದಲ್ಲಿದೆ.

[ಉದಾಹರಣೆಗೆ_]

" ಬ್ರಹ್ಮಸಾಮಮ್', ಬ್ರಹ್ಮಸಾಮ "

" ದೇವಚ್ಛಂದಸಮ್, ದೇವಚ್ಛಂದಃ" *

॥ ೩೭ ॥ [೩೭]

(೩೮) ಸನ್-ಯಜ್ ಅಂತ್ಯವುಳ್ಳ ಧಾತುವಿಗೆ ದ್ವಿತ್ವ

" ಸನ್ಯಜೋಃ ॥ ೩೮ ॥ "

[ಅಷ್ಟಾಧ್ಯಾಯ್ಯಾಮ್ ೬. ೧. ೯]

[ಅರ್ಥ_ " 'ಸನ್', ಹಾಗೂ 'ಯಙ್' ಅಂತ್ಯದಲ್ಲಿರುವ ಧಾತುವಿನ ಅಭ್ಯಾಸವಲ್ಲದ ಅವಯವದ ಪ್ರಥಮ ಒಂದು 'ಅಚ್'ಗೂ ಮತ್ತು 'ಅಚ್' ಆದಿಯಲ್ಲಿನ ದ್ವಿತೀಯ ಒಂದು 'ಅಚ್'ಗೂ ದ್ವಿತ್ವ ಉಂಟಾಗುತ್ತದೆ." **

(ಅಷ್ಟಾಧ್ಯಾಯೀ : ೬. ೧. ೯)]

ಧಾತುವಿಗೆ ಅನೇಕ ಅರ್ಥಗಳಿರುತ್ತವೆ

" ಬಹ್ವರ್ಥಾ ಅಪಿ ಧಾತವೋ ಭವಂತಿ ।

[ಅರ್ಥ:_ " ಧಾತುಗಳು ಬಹಳ ಅರ್ಥವುಳ್ಳವೂ ಕೂಡ, ಆಗಿರುತ್ತವೆ.

" ತದ್ಯಥಾ_

[ಅರ್ಥ:_ " ಉದಾಹರಣೆಗಾಗಿ_

* ಇಲ್ಲಿ ಬ್ರಹ್ಮ'ಸಾಮನ್'ಶಬ್ದವು 'ಟಚ್' ಪ್ರತ್ಯಯವನ್ನು ಹೊಂದಿ, ಅಕಾರಾಂತವಾಗಿ, ದ್ವಿತೀಯಾವಿಭಕ್ತಿಯಲ್ಲಿ 'ಬ್ರಹ್ಮಸಾಮಮ್' ಆಗಿದೆ. ಹಾಗೆಯೇ, 'ದೇವಚ್ಛಂದಸ್' ಶಬ್ದವು 'ದೇವಚ್ಛಂದಸಮ್' ಆಗಿದೆ.

** ಉದಾಹರಣೆಗೆ _
ಸನ್_ ಪಿಪಕ್ಷತಿ, ಅರಿರಿಷತಿ.
ಯಙ್_ ಪಾಪಚ್ಯತೇ, ಯಾಯಜ್ಯತೇ _ಅನು.

"'ವಪಿಃ'_ ಪ್ರಕಿರಣೇ ದೃಷ್ಟಶ್ಛೇದನೇ ಚಾಪಿ ವರ್ತತೇ ।

ಕೇಶಾನ್ ವಪತಿ ।

[ಅರ್ಥ:_ "'ವಪಿ' ಧಾತುವು ಬೀಜವನ್ನು ಬಿತ್ತುವುದು, ಎಂಬ ಅರ್ಥದಲ್ಲಿ ಕಂಡು ಬಂದಿದೆ. ಆದರೆ, ಕತ್ತರಿಸುವ ಅರ್ಥದಲ್ಲಿ ಕೂಡ, ಬರುತ್ತದೆ. ಉದಾಹರಣೆಗೆ_ ಕೇಶಾನ್ ವಪತಿ = ಕೂದಲುಗಳನ್ನು ಕತ್ತರಿಸುತ್ತಾನೆ.

"'ಈಡಿಃ'_ ಸ್ತುತಿ-ಚೋದನಾ-ಯಾಚ್ಞಾಸು ದೃಷ್ಟಃ ।

ಈರಣೇ ಚಾಪಿ ವರ್ತತೇ ।

[ಅರ್ಥ:_ "'ಈಡಿ', ಧಾತುವು ಸ್ತುತಿ, ಪ್ರೇರಣೆ, ಯಾಚನೆಯ ಅರ್ಥಗಳಲ್ಲಿ ಕಂಡುಬಂದಿದೆ. ಆದರೆ, ಗತಿಯ ಅರ್ಥದಲ್ಲಿ ಕೂಡ, ಬರುತ್ತದೆ. [ಉದಾಹರಣೆಗೆ_]

"ಅಗ್ನಿರ್ವಾ ಇತೋ ವೃಷ್ಟಿಮೀಟ್ಟೇ";

[ಅರ್ಥ:_ "ಅಗ್ನಿಯು ಈ ಕಡೆಯಿಂದ ಮಳೆಯನ್ನು ಸುರಿಸಿತು."

"ಮರುತೋಽಮುತಶ್ಚ್ಯಾವಯಂತಿ"*

[ಅರ್ಥ:_ "ಗಾಳಿಯು ಆ ಕಡೆಯಿಂದ ಸುರಿಸಿತು."

"'ಕರೋತಿಃ'_ಅಯಮಭೂತಪ್ರಾದುರ್ಭಾವೇ ದೃಷ್ಟಃ । ನಿರ್ಮಲೀ-
ಕರಣೇ ಚಾಪಿ ವರ್ತ್ತತೇ ।

[ಅರ್ಥ:_'ಕರೋತಿ'_ [= ಮಾಡುತ್ತಾನೆ]. ಇದು, ಹಿಂದೆ ಆಗದುದನ್ನು ಪ್ರಕಟಿಸುವ ಅರ್ಥದಲ್ಲಿ ಕಂಡುಬಂದಿದೆ. ಆದರೆ, 'ಶುದ್ಧ ಮಾಡುವುದು', ಎಂಬ ಅರ್ಥದಲ್ಲೂ ಬರುತ್ತದೆ.

[ಉದಾಹರಣೆಗೆ_]

"ಪೃಷ್ಠಂ ಕುರು"; "ಪಾದೌ ಕುರು";

ಉನ್ಮೃದಾನೇತಿ ಗಮ್ಯತೇ ।

[ಅರ್ಥ:_ "'ಪೃಷ್ಠಂ ಕುರು' [=ಬೆನ್ನನ್ನು ತೊಳೆದುಕೋ]; 'ಪಾದೌ ಕುರು' [=ಕಾಲುಗಳನ್ನು ತೊಳೆದುಕೋ.]

ನೀರಿನಿಂದ, ಮತ್ತು ಮಣ್ಣಿನಿಂದ, ಎಂದರ್ಥ!

* 'ಚ್ಯು' ಧಾತುವು ಸಾಮಾನ್ಯವಾಗಿ ನಗುವ ಅಥವಾ ಸಹಿಸುವ ಅರ್ಥದಲ್ಲಿದೆ. _ಅನು

" ನಿಕ್ಷೇಪಣೇऽಪಿ ವರ್ತ್ತತೇ_

[ಅರ್ಥ:_ 'ಇಡುವುದು', ಎಂಬ ಅರ್ಥದಲ್ಲಿ ಕೂಡ, ಪ್ರಯುಕ್ತವಾಗುತ್ತದೆ.

[ಉದಾಹರಣೆಗೆ_]

" ಕಟೇ ಕುರು "; " ಘಟೇ ಕುರು "; " ಅಶ್ಮಾನಮಿತಃ ಕುರು ";

[ಅರ್ಥ:_ " 'ಕಟೇ ಕುರು' [= ಚಾಪೆಯ ಮೇಲೆ ಇಡು]; 'ಘಟೇ ಕುರು' [= ಗಡಿಗೆಯಲ್ಲಿ ಇಡು]; 'ಅಶ್ಮಾಮನಮಿತಃ ಕುರು' [= ಕಲ್ಲನ್ನು ಈ ಕಡೆಗೆ ಇಡು.]

" ಸ್ಥಾಪಯೇತಿ ಗಮ್ಯತೇ ॥ "

[ಅರ್ಥ:_ " ಸ್ಥಾಪಿಸು, ಎಂದರ್ಥ. "]

ಏತನ್ಮಹಾಭಾಷ್ಯವಚನೇನೈತದ್ವಿಜ್ಞಾತವ್ಯಮ್_

ಈ ಮಹಾಭಾಷ್ಯದ ವಚನದಿಂದ, ತಿಳಿದುಕೊಳ್ಳಬೇಕಾದುದೇನೆಂದರೆ_

ಧಾತುಪಾಠೇ ಯೇऽರ್ಥಾ ನಿರ್ದಿಷ್ಟಾಸ್ತೇಭ್ಯೋऽನ್ಯೇऽಪಿ ಬಹವೋऽರ್ಥಾ ಭವಂತಿ.

ಧಾತುಪಾಠದಲ್ಲಿ ಯಾವ ಅರ್ಥಗಳು ನಿರ್ದೇಶಿಸಲ್ಪಟ್ಟಿವೆಯೋ, ಅವುಗಳಿಗಿಂತ ಬೇರೆಯಾದ ಇತರ ಅರ್ಥಗಳೂ ಕೂಡ, ಇರುತ್ತವೆ.

ಅಂದರೆ, **ಧಾತುಪಾಠದಲ್ಲಿ** ಧಾತುಗಳ ಎಷ್ಟು ಅರ್ಥಗಳು ಬರೆಯಲ್ಪಟ್ಟಿವೆಯೋ, ಅವುಗಳಿಗಿಂತ ಹೆಚ್ಚಾಗಿ, ಇನ್ನೂ ಬಹಳ ಅರ್ಥಗಳಿರುತ್ತವೆ.

ತ್ರಯಾಣಾಮುಪಲಕ್ಷಣಮಾತ್ರಸ್ಯ ದರ್ಶಿತತ್ವಾತ್ ॥ ೩೮ ॥

ಏಕೆಂದರೆ, [ಇಲ್ಲಿ] ಉಪಲಕ್ಷಣಮಾತ್ರದಿಂದ ಮೂರು ಉದಾಹರಣೆಗಳು ಮಾತ್ರ ತೋರಿಸಲ್ಪಟ್ಟಿವೆ.

ಅಂದರೆ, **'ಈಡ'** ಧಾತುವಿನ ಅರ್ಥವು ಸ್ತುತಿ ಮಾಡುವುದು, ಎಂದು **ಧಾತುಪಾಠದಲ್ಲಿ** ಹೇಳಲಾಗಿದೆ. ಆದರೆ, **ಪ್ರೇರಣೆ**, [ಯಾಚನೆ] ಮೊದಲಾದ ಅರ್ಥಗಳೂ ಕೂಡ, ತಿಳಿಯಲ್ಪಡುತ್ತವೆ.

ಈ ರೀತಿಯಾಗಿಯೇ, ಎಲ್ಲ ಕಡೆಯೂ ತಿಳಿಯಬೇಕು! [೩೮]

(೩೯) 'ಜಸ್', 'ಶಸ್' ಪ್ರತ್ಯಯಗಳ ಲೋಪ

"ಶೇಶ್ಛಂದಸಿ ಬಹುಲಮ್ ॥ ೩೯ ॥"

[ಅಷ್ಟಾಧ್ಯಾಯ್ಯಾಮ್ ೬. ೧. ೭೦]

[ಅರ್ಥಃ_ "ವೇದವಿಷಯದಲ್ಲಿ 'ಶಿ'* ಯ ಲೋಪವು ಬಹುಲವಾಗಿ ಆಗುತ್ತದೆ."

(ಅಷ್ಟಾಧ್ಯಾಯೀ : ೬. ೧. ೭೦)]

ವೇದೇಷು ನಪುಂಸಕೇ ವರ್ತ್ತಮಾನಸ್ಯ ಶೇರ್ಲೋಪೋ ಬಹುಲಂ ಭವತಿ.

ವೇದಗಳಲ್ಲಿ ನಪುಂಸಕಲಿಂಗದಲ್ಲಿ ಇರುವ 'ಶಿ' ಸಂಜ್ಞೆಯ ಲೋಪವು ಬಹುಲದಿಂದ ಆಗುತ್ತದೆ.

ಅಂದರೆ, ಈ ಸೂತ್ರದಿಂದ, ನಪುಂಸಕ ಲಿಂಗದಲ್ಲಿ 'ಶಿ', ಎಂದು ಆದೇಶಿಸಲ್ಪಟ್ಟ, ಪ್ರಥಮಾ ವಿಭಕ್ತಿಯ 'ಜಸ್' [ಮತ್ತು ದ್ವಿತೀಯಾ ವಿಭಕ್ತಿಯ ಶಸ್'] ಪ್ರತ್ಯಯಗಳು ವೇದಗಳಲ್ಲಿ ಬಹುಲವಾಗಿ ಲೋಪ ವಾಗುತ್ತವೆ.

ಯಥಾ_

ಉದಾಹರಣೆಗೆ_

"ವಿಶ್ವಾನಿ ಭುವನಾನಿ"

ಇತಿ ಪ್ರಾಪ್ತೇ_

ಎಂದು ಹೇಳಬೇಕಾಗಿರುವಾಗ_

"ವಿಶ್ವಾ ಭುವನಾನಿ"

ಇತಿ ಭವತಿ ॥ ೩೯ ॥

ಎಂದಾಗುತ್ತದೆ. [೩೯]

(೪೦) 'ಹ್ವೇಞ್' ಧಾತುವಿಗೆ 'ಸಂಪ್ರಸಾರಣ'

"ಬಹುಲಂ ಛಂದಸಿ ॥ ೪೧ ॥"

[ಅಷ್ಟಾಧ್ಯಾಯ್ಯಾಮ್ ೬. ೧. ೩೪]

[ಅರ್ಥಃ_ "ವೇದವಿಷಯದಲ್ಲಿ 'ಹ್ವೇಞ್' ಧಾತುವಿಗೆ ಬಹುಲದಿಂದ ಸಂಪ್ರಸಾರಣ** ವಾಗುತ್ತದೆ."

(ಅಷ್ಟಾಧ್ಯಾಯೀ : ೬. ೧. ೩೪)]

---

* 'ಶಿ', ಎಂದರೆ, ಜಸ್ ಮತ್ತು ಶಸ್ ವಿಭಕ್ತಿಪ್ರತ್ಯಯಗಳು _ಅನು.

** ಸಂಪ್ರಸಾರಣ, ಎಂದರೆ, 'ಯಣ್' ಪ್ರತ್ಯಾಹಾರದ ಸ್ಥಾನದಲ್ಲಿ 'ಇಕ್' ಪ್ರತ್ಯಾಹಾರವಾಗುವುದು _ಅನು.

ಅಸ್ಮಿನ್ ಸೂತ್ರೇ ವೇದೇಷು ಏಷಾಂ ಧಾತೂನಾಮಪ್ರಾಪ್ತಮಪಿ ಸಂಪ್ರಸಾರಣಂ ಬಹುಲಂ ವಿಧೀಯತೇ.

ಈ ಸೂತ್ರದಲ್ಲಿ, ವೇದಗಳಲ್ಲಿ, ಈ ಧಾತುಗಳಿಗೆ ಸಂಪ್ರಸಾರಣದ [ವಿಧಾನ]ವಿಲ್ಲದಿದ್ದರೂ ಕೂಡ, ಬಹುಲ ದಿಂದ, ಅದು ವಿಧಿಸಲ್ಪಟ್ಟಿದೆ.

ಯಥಾ_

ಉದಾಹರಣೆಗೆ_

“ ಹೂಮಹೇ ” [ಯಜುರ್ವೇದೇ ೨೫. ೧೮]

ಇತ್ಯಾದಿಷು ॥ ೪೦ ॥

ಈ ಮೊದಲಾದುವುಗಳಲ್ಲಿದೆ. [೪೦]

(೪೧) 'ಇಕ್'ನ ಸ್ಥಾನದಲ್ಲಿ ಸಂಧಿ ಇಲ್ಲ!

“ ಇಕೋऽಸವರ್ಣೇ ಶಾಕಲ್ಯಸ್ಯ ಹ್ರಸ್ವಶ್ಚ ॥ ೪೧ ॥ ”

[ಅಷ್ಟಾಧ್ಯಾಯ್ಯಾಮ್ ೬. ೧. ೧೨೭]

[ಅರ್ಥ:_ “ ಅಸವರ್ಣ 'ಅಚ್' ಪರದಲ್ಲಿದ್ದಾಗ, ಶಾಕಲ್ಯನ ಮತದಂತೆ, 'ಇಕ್'ನ ಸ್ಥಾನದಲ್ಲಿ ಪ್ರಕೃತಿಭಾವ*ವು ಉಂಟಾಗುತ್ತದೆ. ಮತ್ತು ಹ್ರಸ್ವವೂ ಕೂಡ.” +

(ಅಷ್ಟಾಧ್ಯಾಯೀ : ೬. ೧. ೧೨೭)]

[ಉದಾಹರಣೆಗೆ_

“ ಈಷಾ ಅಕ್ಷಾದಿಷು ಚ ಛಂದಸಿ ಪ್ರಕೃತಿಭಾವಮಾತ್ರಂ ದ್ರಷ್ಟವ್ಯಮ್ ॥ ”

[ಅರ್ಥ:_ “ ವೇದವಿಷಯದಲ್ಲಿ 'ಈಷಾ' 'ಅಕ್ಷ' ಮೊದಲಾದುವುಗಳಲ್ಲಿ ಪ್ರಕೃತಿಭಾವಮಾತ್ರವನ್ನು ತಿಳಿಯಬೇಕು.”]

[ಇತಿ ಮಹಾಭಾಷ್ಯೇ.]

ಹೀಗೆ, ಮಹಾಭಾಷ್ಯದಲ್ಲಿದೆ.

[ಉದಾಹರಣೆಗೆ_

“ ಈಷಾ ಅಕ್ಷಃ ”

[ಋಗ್ವೇದೇ ೮. ೫. ೨೯]

“ ಕಾ ಈಮರೇ ”

[ಯಜುರ್ವೇದೇ ೨೩. ೫೫]

* ಎಂದರೆ, ಸಂಧಿಯಾಗದಿರುವುದು _ಅನು.

+ ದಧಿ + ಅತ್ರ = ದಧಿ ಅತ್ರ; ಸಂಧಿಯಾದರೆ_ ದಧ್ಯತ್ರ

ಕುಮಾರೀ + ಅತ್ರ = ಕುಮಾರೀ ಅತ್ರ; ಸಂಧಿಯಾದರೆ_ ಕುಮಾರ್ಯತ್ರ _ಅನು.

'ಈಷಾ ಅಕ್ಷಾ', 'ಈಮರೇ' ಇತ್ಯಾದ್ಯಪ್ರಾಪ್ತಃ ಪ್ರಕೃತಿಭಾವೋ ವಿಹಿತಃ ॥೪೧॥

'ಈಷಾ ಅಕ್ಷಾ', 'ಈಮರೇ' ಈ ಮೊದಲಾದುದರಲ್ಲಿ ಪ್ರಕೃತಿಭಾವವು, ಪ್ರಾಪ್ತವಾಗದಿದ್ದರೂ, ವಿಧಿಸಲ್ಪಟ್ಟಿದೆ. [೪೧]

(೪೨) ದೇವತಾದ್ವಂದ್ವದಲ್ಲಿ 'ಆನಙ್' ಆದೇಶ

"ದೇವತಾದ್ವಂದ್ವೇ ಚ ॥೪೨॥"

[ಅಷ್ಟಾಧ್ಯಾಯ್ಯಾಮ್ ೬. ೩. ೨೬]

[ಅರ್ಥ:_ "ದೇವತಾವಾಚೀ ಶಬ್ದಗಳ ದ್ವಂದ್ವಸಮಾಸದಲ್ಲಿ ಕೂಡ, ಉತ್ತರಪದವು ಪರದಲ್ಲಿದ್ದಾಗ, ಪೂರ್ವಪದಕ್ಕೆ 'ಆನಙ್' ಆದೇಶವಾಗುತ್ತದೆ."

(ಅಷ್ಟಾಧ್ಯಾಯೀ : ೬. ೩. ೨೬)]

ದೇವತಯೋರ್ದ್ವಂದ್ವಸಮಾಸೇ ಪೂರ್ವಪದಸ್ಯ 'ಆನಙ್' ಇತ್ಯಾದೇಶೋ ವಿಧೀಯತೇ.

ಇಬ್ಬರು ದೇವತೆಗಳ ದ್ವಂದ್ವಸಮಾಸದಲ್ಲಿ ಪೂರ್ವ-ಪದಕ್ಕೆ 'ಆನಙ್', ಎಂಬ ಆದೇಶವು ವಿಧಿಸಲ್ಪಡುತ್ತದೆ.

ಅಂದರೆ, ಈ ಸೂತ್ರದಿಂದ, ಇಬ್ಬರು ದೇವತೆಗಳ ದ್ವಂದ್ವಸಮಾಸದಲ್ಲಿ ಪೂರ್ವಪದವು ದೀರ್ಘವಾಗುತ್ತದೆ.

ಙಿತ್ತ್ವಾದಂತಸ್ಯ ಸ್ಥಾನೇ ಭವತಿ.

['ಆನಙ್'ನ] 'ಙ' ಇತ್ ಆದುದರಿಂದ, ಅಂತ್ಯದ ಸ್ಥಾನದಲ್ಲಿ ಆದೇಶವಾಗುತ್ತದೆ.

ಉದಾಹರಣಾರ್ಥಮ್_

I {Ö Ÿ

"ಸೂರ್ಯಾಚಂದ್ರಮಸೌ ಧಾತಾ ಯಥಾಪೂರ್ವಮಕಲ್ಪಯತ್ ।"

[ಋಗ್ವೇದೇ ೧೦.೧೯೦.೩]

"ಇಂದ್ರಾಬೃಹಸ್ಪತೀ"

ಇತ್ಯಾದೀನಿ.

ಈ ಮೊದಲಾದುವು ಇವೆ.

ಇಲ್ಲಿ ಸೂರ್ಯಾ, [ಮತ್ತು ಇಂದ್ರಾ]ಶಬ್ದಗಳು ದೀರ್ಘವಾಗಿವೆ.

ಅಸ್ಯ ಸೂತ್ರಸ್ಯೋಪರಿ ದ್ವೇ ವಾರ್ತಿಕೇ ಸ್ತಃ.

ಈ ಸೂತ್ರದ ಮೇಲೆ ಎರಡು ವಾರ್ತಿಕಗಳಿವೆ.

ಅಂದರೆ, ಈ ಸೂತ್ರದಿಂದ, ಯಾವ ಕಾರ್ಯದ ವಿಧಾನ ಮಾಡಲಾಗಿದೆಯೋ, ಅದರ ಪ್ರತಿಷೇಧವನ್ನು ವಿಶೇಷ ಶಬ್ದಗಳಲ್ಲಿ **ಮಹಾಭಾಷ್ಯಕಾರರು** ಎರಡು ವಾರ್ತಿಕಗಳ ಮೂಲಕ ತೋರಿಸಿದ್ದಾರೆ.

ತದ್ಯಥಾ_

ಅದು ಹೇಗೆಂದರೆ_

" ದೇವತಾದ್ವಂದ್ವೇ ಉಭಯತ್ರ ವಾಯೋಃ ಪ್ರತಿಷೇಧಃ ॥ "

[ಅರ್ಥ:_ " 'ದೇವತಾದ್ವಂದ್ವೇ'_ಸೂತ್ರವು 'ವಾಯು' ಶಬ್ದಕ್ಕೆ ಎರಡು ಕಡೆಯೂ* ಪ್ರತಿಷೇಧಿಸಲ್ಪಟ್ಟಿದೆ."]

ಉದಾಹರಣೆಗೆ_

" ಅಗ್ನಿವಾಯೂ "; " ವಾಯ್ವಗ್ನೀ "

ಇಲ್ಲಿ _[ಅಗ್ನಿ, ವಾಯು,] 'ಇಂದ್ರ' ಶಬ್ದಗಳಿಗೆ ದೀರ್ಘವಾಗಲಿಲ್ಲ!

" ಬ್ರಹ್ಮಪ್ರಜಾಪತ್ಯಾದೀನಾಂ ಚ ॥ "

[ಅರ್ಥ:_ " ಬ್ರಹ್ಮ, ಪ್ರಜಾಪತಿ ಮೊದಲಾದುವುಗಳಿಗೂ ಕೂಡ,. [ಪ್ರತಿಷೇಧವಿದೆ.] "]

ಉದಾಹರಣೆಗೆ_

" ಬ್ರಹ್ಮಪ್ರಜಾಪತೀ "; " ಶಿವವೈಶ್ರವಣೌ "; " ಸ್ಕಂದವಿಶಾಖೌ "

ಸೂತ್ರೇಣ ವಿಹಿತ ಆನಙಾದೇಶೋ ವಾರ್ತ್ತಿಕ-ದ್ವಯೇನ ಪ್ರತಿಷಿಧ್ಯತೇ.

[ಇಲ್ಲಿ ಮೇಲಿನ] ಸೂತ್ರದಿಂದ, ವಿಧಿಸಲ್ಪಟ್ಟ **'ಆನಙ್'** ಆದೇಶವು ಈ ಎರಡು ವಾರ್ತಿಕಗಳಿಂದ ಪ್ರತಿಷೇಧಿಸಲ್ಪಟ್ಟಿದೆ.

ಸಾರ್ವತ್ರಿಕೋ ನಿಯಮಃ ॥೪೨॥

ಇದು ಸಾರ್ವತ್ರಿಕ ನಿಯಮವಾಗಿದೆ.

ಅಂದರೆ, ಈ ನಿಯಮವು **ಲೋಕ** ಮತ್ತು **ವೇದ**ದಲ್ಲಿ ಸರ್ವತ್ರ ಅನ್ವಯಿಸುತ್ತದೆ. [೪೨]

* ಎಂದರೆ, 'ವಾಯು' ಶಬ್ದವು ಪೂರ್ವಪದವಾಗಿರಲೀ ; ಅಥವಾ ಉತ್ತರಪದವಾಗಿರಲೀ _ಅನು.

(೪೩) 'ಝ' ಆದೇಶಕ್ಕೆ 'ರುಟ್' ಆಗಮ

"ಬಹುಲಂ ಛಂದಸಿ ॥ ೪೩ ॥"

[ಅಷ್ಟಾಧ್ಯಾಯ್ಯಾಮ್ ೭. ೧. ೮]

[ಅರ್ಥ:_ "ವೇದವಿಷಯದಲ್ಲಿ 'ಝ' ಆದೇಶದ 'ಅತ್' ಗೆ ಬಹುಲದಿಂದ 'ರುಟ್' ಆಗಮವಾಗುತ್ತದೆ."

(ಅಷ್ಟಾಧ್ಯಾಯೀ : ೭. ೧. ೮)]

ಅನೇನಾತ್ಮನೇಪದಸಂಜ್ಞಸ್ಯ ಝಕಾರಪ್ರತ್ಯಯಸ್ಯ ರುಡಾಗಮೋ ವಿಧೀಯತೇ.

ಇದರಿಂದ, ಆತ್ಮನೇಪದಸಂಜ್ಞೆಯುಳ್ಳ 'ಝ'ಕಾರದ ಪ್ರತ್ಯಯದ ಸ್ಥಾನದಲ್ಲಿ 'ರುಟ್' ಆಗಮವು ವಿಧಿಸಲ್ಪಟ್ಟಿದೆ.

ಅಂದರೆ, ಈ ಸೂತ್ರದಿಂದ, ಆತ್ಮನೇಪದ, ಪ್ರಥಮಪುರುಷ, ಬಹುವಚನದಲ್ಲಿ 'ಝ' ಪ್ರತ್ಯಯಕ್ಕೆ 'ರುಟ್' ಆಗಮವಾಗುತ್ತದೆ.

ಉದಾಹರಣಾರ್ಥಮ್_

ಉದಾಹರಣೆಗೆ_

"ದೇವಾ ಅದುಹ್ರ"*

॥ ೪೩ ॥ [೪೩]

(೪೪) 'ಭಿಸ್'ನ ಸ್ಥಾನದಲ್ಲಿ ಬಹುಲದಿಂದ 'ಐಸ್'

"ಬಹುಲಂ ಛಂದಸಿ ॥ ೪೪ ॥"

[ಅಷ್ಟಾಧ್ಯಾಯ್ಯಾಮ್ ೭. ೧. ೧೦]

[ಅರ್ಥ:_ "ವೇದವಿಷಯದಲ್ಲಿ ಅಕಾರಾಂತ ಅಂಗದಿಂದ ನಂತರ ಇರುವ 'ಭಿಸ್'ನ ಸ್ಥಾನದಲ್ಲಿ ಬಹುಲದಿಂದ 'ಐಸ್' ಆದೇಶವಾಗುತ್ತದೆ."

(ಅಷ್ಟಾಧ್ಯಾಯೀ : ೭. ೧. ೧೦)]

ಅನೇನ ವೇದೇಷು ಭಿಸಃ ಸ್ಥಾನೇ ಐಸ್ ಬಹುಲಂ ವಿಧೀಯತೇ.

ಇದರಿಂದ, ವೇದಗಳಲ್ಲಿ 'ಭಿಸ್'ನ ಸ್ಥಾನದಲ್ಲಿ 'ಐಸ್' ಬಹುಲದಿಂದ ವಿಧಿಸಲ್ಪಡುತ್ತದೆ.

---

* ಅಟ್ ದುಹ್ ಶಪ್ ಝ → ಅ ದುಹ್ ಅತ್ ಅ [ಅದುಹತ] ; ಅ ದುಹ್ ರುಟ್ ಅ → ಅ ದುಹ್ ರ್ ಅ → ಅದುಹ್ರ! _ಅನು.

ಯಥಾ_

ಉದಾಹರಣೆಗೆ_

"ದೇವೇಭಿ*ರ್ಮಾನುಷೇ ಜನೇ"

[ಋಗ್ವೇದೇ ೬.೧೬.೧]

॥ ೪೪॥ [೪೪]

(೪೫) 'ಸುಪ್' ವಿಭಕ್ತಿಪ್ರತ್ಯಯಗಳಿಗೆ ಅನೇಕ ಆದೇಶಗಳು

"ಸುಪಾಂ ಸುಲುಕ್‌ಪೂರ್ವಸವರ್ಣಾಚ್ಛೇಯಾಡಾಡ್ಯಾಯಾಜಾಲಃ ॥ ೪೫ ॥"

[ಅಷ್ಟಾಧ್ಯಾಯ್ಯಾಮ್ ೭.೧.೩೯]

[ಅರ್ಥ:_ "ವೇದವಿಷಯದಲ್ಲಿ 'ಸುಪ್' ಗಳ ಸ್ಥಾನದಲ್ಲಿ ಸು, ಲುಕ್, ಪೂರ್ವಸವರ್ಣ, ಆ, ಆತ್, ಶೇ, ಯಾ, ಡಾ, ಡ್ಯಾ, ಯಾಚ್, ಆಲ್_ ಇವು ಆದೇಶವಾಗುತ್ತವೆ."

(ಅಷ್ಟಾಧ್ಯಾಯೀ : ೭.೧.೩೯)]

"ಸುಪಾಂ ಚ ಸುಪೋ ಭವಂತೀತಿ ವಕ್ತವ್ಯಮ್ ।"

[ಅರ್ಥ:_ " 'ಸುಪ್' ಪ್ರತ್ಯಯಗಳ ಸ್ಥಾನದಲ್ಲಿ 'ಸುಪ್' ಪ್ರತ್ಯಯಗಳಾಗುತ್ತವೆ, ಎಂದು ಹೇಳಬೇಕು."

"ತಿಙಾಂ ಚ ತಿಙೋ ಭವಂತೀತಿ ವಕ್ತವ್ಯಮ್ ।"

[ಅರ್ಥ:_ " 'ತಿಙ್' ಪ್ರತ್ಯಯಗಳ ಸ್ಥಾನದಲ್ಲಿ 'ತಿಙ್' ಪ್ರತ್ಯಯಗಳಾಗುತ್ತವೆ, ಎಂದು ಹೇಳಬೇಕು."

"ಇಯಾಡಿಯಾಜೀಕಾರಾಣಾಮುಪಸಂಖ್ಯಾನಮ್ ॥"

[ಅರ್ಥ:_ " ಇಯಾ, ಡಿಯಾಚ್, 'ಈ'ಕಾರಗಳನ್ನೂ ಜೊತೆಗೆ ಸೇರಿಸಿಕೊಳ್ಳಬೇಕು."

"ಆಜಯಾಜಯಾರಾಂ ಚೋಪಸಂಖ್ಯಾನಮ್ ॥"

[ಅರ್ಥ:_ 'ಆಜ್, ಅಯಾಚ್, ಅಯಾರ್_ ಇವನ್ನೂ ಜೊತೆಗೆ ಸೇರಿಸಿ ಕೊಳ್ಳಬೇಕು."

[ಇತಿ ಮಹಾಭಾಷ್ಯೇ.]

ಹೀಗೆ, ಮಹಾಭಾಷ್ಯದಲ್ಲಿದೆ.

* 'ಐಸ್' ಆದೇಶವನ್ನು ಅಂಗೀಕರಿಸಿ, 'ದೇವೈಃ', ಎಂಬ ಪ್ರಯೋಗವೂ ವೇದದಲ್ಲಿ ಇದೆ. _ಅನು

ಸುಪ್-ಲುಕ್-ಪೂರ್ವಸವರ್ಣ-ಆತ್-ಶೇ-ಯಾ-ಡಾ-ಡ್ಯಾ-ಯಾಚ್-ಆಲ್-ಇಯಾ-ಡಿಯಾಚ್-ಈ-ಆಜ್-ಆಯಾಚ್-ಆಯಾರ್_ ವೈದಿಕೇಷು ಶಬ್ದೇಷು ಹ್ಯೇವ ಸುಪಾಂ ಸ್ಥಾನೇ ಸುಬಾದ್ಯಯಾರಂತಾ ಷೋಡಾಶಾದೇಶಾ ವಿಧೀಯಂತೇ.

ಸುಪ್, ಲುಕ್, ಪೂರ್ವಸವರ್ಣ, ಆತ್, ಶೇ, ಯಾ. ಡಾ, ಡ್ಯಾ, ಯಾಚ್, ಆಲ್, ಮತ್ತು ಇಯಾ, ಡಿಯಾಚ್, ಈ, ಹಾಗೂ ಆಜ್, ಆಯಾಚ್, ಆಯಾರ್, ಎಂಬ ಹದಿನಾರು ಆದೇಶಗಳು ವೈದಿಕಶಬ್ದಗಳ ವಿಷಯದಲ್ಲಿ ಮಾತ್ರವೇ 'ಸುಪ್' ಪ್ರತ್ಯಯಗಳ ಸ್ಥಾನದಲ್ಲಿ 'ಸುಪ್' ಇಂದ ಹಿಡಿದು 'ಆಯಾರ್' ತನಕ ವಿಧಿಸಲ್ಪಡುತ್ತವೆ.

ಅಂದರೆ, ಇದರಿಂದ ಎಲ್ಲಾ ವಿಭಕ್ತಿಗಳ, ಹಾಗೂ ಎಲ್ಲಾ ವಚನಗಳ ಸ್ಥಾನದಲ್ಲಿ 'ಸುಪ್' ಮೊದಲಾದ ಹದಿನಾರು ಆದೇಶಗಳಾಗುತ್ತವೆ.

ತಿಙಾಂ ಚ ತಿಙೆತಿ ಪೃಥಙ್ ನಿಯಮಃ.

ಮತ್ತು 'ತಿಙ್' ಪ್ರತ್ಯಯಗಳ ಸ್ಥಾನದಲ್ಲಿ 'ತಿಙ್' [ಪ್ರತ್ಯಯಗಳ ಆದೇಶವಾಗಬೇಕೆಂದು] ಬೇರೆ ನಿಯಮವಿದೆ.

[ಉದಾಹರಣೆಗಳು_]

ಸುಪ್_

"ಋಜವಃ ಸಂತು ಪಂಥಾಃ" *

[ಋಗ್ವೇದೇ ೧೦. ೮೫. ೨೩]

ಪಂಥಾನ ಇತಿ ಪ್ರಾಪ್ತೇ.

ಇಲ್ಲಿ _'ಪಂಥಾನಃ', ಎಂದಿರಬೇಕಿತ್ತು!

ಲುಕ್_

"ಪರಮೇ ವ್ಯೋಮನ್"** [ಋಗ್ವೇದೇ ೧. ೧೬೪. ೩೯]

ವ್ಯೋಮ್ನೀತಿ ಪ್ರಾಪ್ತೇ.

ಇಲ್ಲಿ_ 'ವ್ಯೋಮ್ನಿ', ಎಂದಿರಬೇಕಿತ್ತು!

ಪೂರ್ವಸವರ್ಣ_

"ಧೀತೀ"; "ಮತೀ" +

'ಧೀತ್ಯಾ'; 'ಮತ್ಯಾ' ಇತಿ ಪ್ರಾಪ್ತೇ.

ಇಲ್ಲಿ_ 'ಧೀತ್ಯಾ'; 'ಮತ್ಯಾ', ಎಂದಿರಬೇಕಿತ್ತು!

---

* 'ಜಸ್' ಬಹುವಚನದ ಪ್ರತ್ಯಯದ ಸ್ಥಾನದಲ್ಲಿ 'ಸು' ಏಕವಚನದ ಪ್ರತ್ಯಯ ಬಂದಿದೆ. _ಅನು.

** ಙೆ ಪ್ರತ್ಯಯವು ಲುಕ್ = ಲೋಪವಾಗಿದೆ. _ಅನು.

+ ಇಲ್ಲಿ 'ಟಾ' ಪ್ರತ್ಯಯದ ಬದಲು ಪೂರ್ವಸವರ್ಣವಾಗಿದೆ. _ಅನು.

ಆತ್_

"ಉಭಾ ಯಂತಾರಾ" *

'ಉಭೌ ಯಂತಾರೌ' ಇತಿ ಪ್ರಾಪ್ತೇ. ಇಲ್ಲಿ _ 'ಉಭೌ ಯಂತಾರೌ', ಎಂದಿರಬೇಕಿತ್ತು!

ಶೇ_

"ನ ಯುಷ್ಮೇ** ವಾಜಬಂಧವಃ"

[ಋಗ್ವೇದೇ ೮. ೬೮. ೧೯]

ಯೂಯಮಿತಿ ಪ್ರಾಪ್ತೇ. ಇಲ್ಲಿ _ 'ಯೂಯಮ್', ಎಂದಿರಬೇಕಿತ್ತು!

ಯಾ_

"ಉರುಯಾ" +

'ಉರುಣಾ' ಇತಿ ಪ್ರಾಪ್ತೇ. ಇಲ್ಲಿ _'ಉರುಣಾ', ಎಂದಿರಬೇಕಿತ್ತು!

ಡಾ_

"ನಾಭಾ++ ಪೃಥಿವ್ಯಾಃ"

[ಯಜುರ್ವೇದೇ ೧೧. ೭೬]

ನಾಭೌ ಇತಿ ಪ್ರಾಪ್ತೇ. ಇಲ್ಲಿ_ 'ನಾಭೌ', ಎಂದಿರಬೇಕಿತ್ತು!

ಡ್ಯಾ_

"ಅನುಷ್ಟ್ಯಾ" $

'ಅನುಷ್ಟುಭಾ' ಇತಿ ಪ್ರಾಪ್ತೇ. ಇಲ್ಲಿ_ 'ಅನುಷ್ಟುಭಾ', ಎಂದಿರಬೇಕಿತ್ತು!

---

* ಇಲ್ಲಿ 'ಔ' ಪ್ರತ್ಯಯದ ಸ್ಥಾನದಲ್ಲಿ 'ಆ' ಬಂದಿದೆ.

** ಇಲ್ಲಿ 'ಯುಷ್ಮದ್' ನ 'ಜಸ್' ಪ್ರತ್ಯಯದ ಸ್ಥಾನದಲ್ಲಿ 'ಶೇ' ಆದೇಶವಾಗಿದೆ.

+ ಇಲ್ಲಿ 'ಟಾ' ಪ್ರತ್ಯಯಕ್ಕೆ 'ಯಾ' ಆದೇಶವಾಗಿದೆ.

++ ಇಲ್ಲಿ 'ಜಿ' ಪ್ರತ್ಯಯದ ಬದಲು 'ಡಾ' ಬಂದಿದೆ.

$ ಇಲ್ಲಿ 'ಅನುಷ್ಟುಭ್' ನ 'ಟಾ' ಪ್ರತ್ಯಯಕ್ಕೆ 'ಡ್ಯಾ' ಆದೇಶವಾಗಿದೆ. _ಅನು

ಯಾಚ್_

" ಸಾಧುಯಾ "[1]

[ಯಜುರ್ವೇದೇ ೧೭. ೭೩]

ಸಾಧು ಇತಿ ಪ್ರಾಪ್ತೇ. ಇಲ್ಲಿ _ 'ಸಾಧು', ಎಂದಿರಬೇಕಿತ್ತು.

ಆಲ್_

" ವಸಂತಾ[2] ಯಜೇತ "

ವಸಂತೇ ಇತಿ ಪ್ರಾಪ್ತೇ. ಇಲ್ಲಿ _ 'ವಸಂತೇ', ಎಂದಿರಬೇಕಿತ್ತು.

ಇಯಾ_

" ದಾರ್ವಿಯಾ[3] ಪರಿಜ್ಮನ್ "

ಡಿಯಾಚ್_

" ಸುಮಿತ್ರಿಯಾ[4] ನ ಆಪಃ "

[ಯಜುರ್ವೇದೇ ೬. ೨೨]

" ಸುಕ್ಷೇತ್ರಿಯಾ "[5]

[ಋಗ್ವೇದೇ ೧. ೯೭. ೨]

" ಸುಗಾತುಯಾ "[5]

[ಋಗ್ವೇದೇ ೧. ೯೭. ೨]

---

[1] ಇಲ್ಲಿ ಪ್ರಥಮಾವಿಭಕ್ತಿಯ 'ಸು' ಪ್ರತ್ಯಯಕ್ಕೆ 'ಯಾಚ್' ಆದೇಶವಾಗಿದೆ.

[2] ಇಲ್ಲಿ 'ಜೆ' ಪ್ರತ್ಯಯದ ಸ್ಥಾನದಲ್ಲಿ 'ಇಯಾ' ಆಗಿದೆ.

[3] ಇಲ್ಲಿ 'ದಾರು' ಶಬ್ದಕ್ಕೆ 'ಸು' ಪ್ರತ್ಯಯದ ಸ್ಥಾನದಲ್ಲಿ 'ಇಯಾ' ಆಗಿದೆ.

[4] ಇಲ್ಲಿ 'ಜಸ್' ಪ್ರತ್ಯಯದ ಸ್ಥಾನದಲ್ಲಿ 'ಡಿಯಾಚ್' ಆಗಿದೆ.

[5] ಇಲ್ಲಿ 'ಟಾ' ಪ್ರತ್ಯಯದ ಸ್ಥಾನದಲ್ಲಿ 'ಡಿಯಾಚ್' ಆಗಿದೆ.

ಈ_

"ದೃತಿಂ ನ ಶುಷ್ಕಂ ಸರಸೀ[1] ಶಯಾನಮ್"

[ಋಗ್ವೇದೇ ೭. ೧೦೩. ೨]

ಆಜ್_

"ಪ್ರಬಾಹವಾ"[2]

ಅಯಾಚ್_

"ಸ್ವಪ್ನಯಾ[3] ವಾವ ಸೇಚನಮ್"

ಅಯಾರ್_

"ಸ ನಃ ಸಿಂಧುಮಿವ ನಾವಯಾ"[4]

॥ ೪೫॥ [೪೫]

(೪೬) 'ಜಸ್'ಗೆ 'ಅಸುಕ್' ಆಗಮ

"ಆಜ್ಜಸೇರಸುಕ್ ॥ ೪೬ ॥"

[ಅಷ್ಟಾಧ್ಯಾಯ್ಯಾಮ್ ೭. ೧. ೫೦]

[ಅರ್ಥ:_ "ವೇದವಿಷಯದಲ್ಲಿ ಅವರ್ಣಾಂತ ಅಂಗದಿಂದ, ನಂತರ, 'ಜಸ್'ಗೆ 'ಅಸುಕ್' ಆಗಮವಾಗುತ್ತದೆ."

(ಅಷ್ಟಾಧ್ಯಾಯೀ : ೭. ೧. ೫೦)]

ಅನೇನ ಪ್ರಥಮಾಯಾ ಬಹುವಚನೇ 'ಜಸಃ' ಪೂರ್ವಮ್ 'ಅಸುಕ್' ಇತ್ಯಯಮಾಗಮೋ ವಿಹಿತಃ.

ಈ ಸೂತ್ರದಿಂದ, (ವೇದಗಳಲ್ಲಿ) ಪ್ರಥಮಾ ವಿಭಕ್ತಿಯ ಬಹುವಚನದಲ್ಲಿ 'ಜಸ್' ಪ್ರತ್ಯಯಕ್ಕೆ ಮೊದಲು **'ಅಸುಕ್'**, ಎಂಬೀ ಆಗಮವಾಗುತ್ತದೆ.

---

[1] ಇಲ್ಲಿ 'ಜೆ' ಪ್ರತ್ಯಯಕ್ಕೆ 'ಈ' ಬಂದಿದೆ. _ಅನು.

[2] ಇಲ್ಲಿ 'ಬಾಹು' ಶಬ್ದಕ್ಕೆ 'ಟಾ' ಪ್ರತ್ಯಯದ ಸ್ಥಾನದಲ್ಲಿ 'ಆಜ್' ಆಗಿದೆ. _ಅನು.

[3] ಇಲ್ಲಿ 'ಟಾ' ಪ್ರತ್ಯಯದ ಸ್ಥಾನದಲ್ಲಿ 'ಅಯಾಚ್' ಬಂದಿದೆ. _ಅನು.

[4] ಇಲ್ಲಿ 'ನೌ' ಶಬ್ದಕ್ಕೆ 'ಟಾ', ಪ್ರತ್ಯಯದ ಸ್ಥಾನದಲ್ಲಿ 'ಅಯಾರ್' ಬಂದಿದೆ. _ಅನು.

ಉದಾಹರಣಾರ್ಥಮ್_

ಉದಾಹರಣೆಗಾಗಿ_

"ವಿಶ್ವೇ ದೇವಾಸ* ಆ ಗತ"

[ಋಗ್ವೇದೇ ೧. ೩. ೭]

ವಿಶ್ವೇ ದೇವಾ ಇತಿ ಪ್ರಾಪ್ತೇ.

ಇಲ್ಲಿ _ 'ವಿಶ್ವೇ ದೇವಾಃ', ಎಂದಿರಬೇಕಿತ್ತು!

ಏವಂ_

ಹೀಗೆಯೇ_

"ದೈವ್ಯಾಸಃ"

ಇಲ್ಲಿ 'ದೈವ್ಯಾಃ', ಎಂದಿರಬೇಕಿತ್ತು!

ತಥೈವಾನ್ಯಾನ್ಯಪಿ ಜ್ಞಾತವ್ಯಾನಿ ॥ ೪೬ ॥

ಹಾಗೆಯೇ, ಬೇರೆಯವುಗಳನ್ನೂ ಕೂಡ, ತಿಳಿದು ಕೊಳ್ಳಬೇಕು! [೪೬]

(೪೭) 'ಈಟ್' ಆಗಮ ಬಹುಲದಿಂದ

"ಬಹುಲಂ ಛಂದಸಿ ॥ ೪೭ ॥"

[ಅಷ್ಟಾಧ್ಯಾಯ್ಯಾಮ್ ೭. ೩. ೯೭]

[ಅರ್ಥ:_ " ವೇದವಿಷಯದಲ್ಲಿ 'ಅಸ್' ಮತ್ತು 'ಸಿಚ್' ನಂತರ, ಇರುವ 'ಹಲ್' ಮೊದಲಾದ ಅಪೃಕ್ತ ಸಾರ್ವಧಾತುಕ ಅಂಗಕ್ಕೆ ಬಹುಲದಿಂದ 'ಈಟ್' ಆಗಮವಾಗುತ್ತದೆ."

(ಅಷ್ಟಾಧ್ಯಾಯೀ : ೭. ೩. ೯೭)]

ವೇದೇಷು ಯತ್ರ ಕ್ವಚಿದೀಡಾಗಮೋ ದೃಶ್ಯತೇ, ತತ್ರಾನೇನೈವ ಭವತೀತಿ ವೇದ್ಯಮ್ ॥ ೪೭ ॥

ವೇದಗಳಲ್ಲಿ ಎಲ್ಲಾದರೂ 'ಈಟ್' ಪ್ರತ್ಯಯದ ಆಗಮವು ಕಂಡುಬರುತ್ತದೋ, ಅಲ್ಲಿ [ಅದು] ಈ ಸೂತ್ರ ದಿಂದಲೇ ಉಂಟಾಗಿದೆ, ಎಂದು ತಿಳಿಯಬೇಕು!**

[೪೭]

---

* ದೇವ ಜಸ್→ ದೇವ ಅಸುಕ್ ಜಸ್→ ದೇವ ಅಸ್ ಅಸ್ →ದೇವಾಸಸ್ →ದೇವಾಸಃ! _ಅನು.

** ಉದಾಹರಣೆಗೆ_

ಅಸ್_

"ಆಪ ಏವೇದಂ ಸಲಿಲಂ ಸರ್ವಮಾಃ"

"ಅಹರವಾ ಸೀನ್ನ ರಾತ್ರಿಃ"[1]

ಸಿಚ್_

"ಗೋಭಿರಕ್ಷಾಃ"

"ಅಭೈಷೀರ್ಮಾ ಪುತ್ರಕ"[1]

---

[1] ಈ ಸೂತ್ರಕ್ಕೆ ಇವೆರಡೂ ಉದಾಹರಣೆಗಳು._ಅನು.

(೪೮) 'ಶ್ಲು' ಪರದಲ್ಲಿದ್ದಾಗ 'ಅಭ್ಯಾಸ'ಕ್ಕೆ ಇಕಾರ

"ಬಹುಲಂ ಛಂದಸಿ ॥ ೪೮ ॥"

[ಅಷ್ಟಾಧ್ಯಾಯ್ಯಾಮ್ ೭. ೪. ೭೮]

[ಅರ್ಥ:_ "ವೇದವಿಷಯದಲ್ಲಿ 'ಶ್ಲು' ಪರದಲ್ಲಿದ್ದಾಗ, ಅಭ್ಯಾಸದ ಸ್ಥಾನದಲ್ಲಿ ಬಹುಲದಿಂದ 'ಇ'ಕಾರ ಆದೇಶವಾಗುತ್ತದೆ."

(ಅಷ್ಟಾಧ್ಯಾಯೀ : ೭. ೪. ೭೮)]

ಅನೇನಾಭ್ಯಾಸಸ್ಯ [ಭೃಞಾದೀನಾಮ್] ಇತ್ ಇತ್ಯಯಮಾದೇಶಃ ಶ್ಲೌ ವೇದೇಷು ಬಹುಲಂ ವಿಧೀಯತೇ ॥ ೪೮ ॥

ಈ ಸೂತ್ರದಿಂದ, ವೇದಗಳಲ್ಲಿ 'ಶ್ಲು' ಪ್ರತ್ಯಯವು ಪರದಲ್ಲಿದ್ದಾಗ, ಭೃಞ್ ಮೊದಲಾದ ಧಾತುಗಳ ಅಭ್ಯಾಸದ ಸ್ಥಾನದಲ್ಲಿ 'ಇತ್', ಎಂಬ ಆದೇಶವು ಬಹುಲ ವಾಗಿ ವಿಧಿಸಲ್ಪಡುತ್ತದೆ.

[ಉದಾಹರಣೆಗೆ_]

"ಪೂರ್ಣಾಂ ವಿವಷ್ಟಿ"*

[ಋಗ್ವೇದೇ ೭. ೧೬. ೧೧]

॥ ೪೮॥ [೪೮]

(೪೯) 'ಮತುಪ್'ಗೆ ವಕಾರ

"ಛಂದಸೀರಃ ॥ ೪೯ ॥"

[ಅಷ್ಟಾಧ್ಯಾಯ್ಯಾಮ್ ೮. ೨. ೧೫]

[ಅರ್ಥ:_ "ವೇದವಿಷಯದಲ್ಲಿ ಇವರ್ಣಾಂತ, ಹಾಗೂ ರೇಫಾಂತ ಶಬ್ದಗಳ ನಂತರ ಇರುವ 'ಮತುಪ್'ಗೆ ವಕಾರಾದೇಶವಾಗುತ್ತದೆ."

(ಅಷ್ಟಾಧ್ಯಾಯೀ : ೮. ೨. ೧೫)]

ಅನೇನ ಮತುಪೋ ಮಕಾರಸ್ಯಾಪ್ರಾಪ್ತಂ ವತ್ವಂ ವಿಧೀಯತೇ.

ಈ ಸೂತ್ರದಿಂದ ವೇದಗಳಲ್ಲಿ 'ಮತುಪ್' ಪ್ರತ್ಯಯದ ಮಕಾರಕ್ಕೆ ಅಪ್ರಾಪ್ತವಾದ ವಕಾರವು ವಿಧಿಸಲ್ಪಟ್ಟಿದೆ.

---

* ವಶ ಶ್ಲೌ ತಿಪ್ → ವಶ ವಶ ತಿಪ್ → ವಿ ವಶ್ ತಿ → ವಿವಷ್ಟಿ _ಆನು.

ಉದಾಹರಣಾರ್ಥಮ್_ | ಉದಾಹರಣೆಗೆ_

"ರೇವಾನ್" *

ಇತ್ಯಾದಿ ॥ ೪೯ ॥ | ಈ ಮೊದಲಾದುದು ಇದೆ. [೪೯]

(೫೦) 'ಕೃಪ' ಕ್ಕೆ ಲಕಾರ

"ಕೃಪೋ ರೋ ಲಃ ॥ ೫೦ ॥"

[ಅಷ್ಟಾಧ್ಯಾಯ್ಯಾಮ್ ೮. ೨. ೧೮]

[ಅರ್ಥ:_ "'ಕೃಪ' ಧಾತುವಿನ ರೇಫಕ್ಕೆ ಲಕಾರಾದೇಶವಾಗುತ್ತದೆ." **

(ಅಷ್ಟಾಧ್ಯಾಯೀ : ೮. ೨. ೧೮)]

ಅಂದರೆ, ಇದರಿಂದ ವೇದಗಳಲ್ಲಿ ರೇಫಕ್ಕೆ ಲಕಾರವು ವಿಕಲ್ಪದಿಂದಾಗುತ್ತದೆ.

"ಸಂಜ್ಞಾಛಂದಸೋರ್ವಾ ಕಪಿಲಕಾದೀನಾಮಿತಿ ವಕ್ತವ್ಯಮ್ ॥"

[ಅರ್ಥ:_ "ಸಂಜ್ಞೆ, ಅಥವಾ ವೇದದ ವಿಷಯದಲ್ಲಿ, ಕಪಿಲಕಾ ಮೊದಲಾದುವುಗಳಿಗೆ, ಎಂದು ಹೇಳಬೇಕು."]

[ಇತಿ ಮಹಾಭಾಷ್ಯೇ.] | ಹೀಗೆ, ಮಹಾಭಾಷ್ಯದಲ್ಲಿದೆ.

[ಉದಾಹರಣೆಗೆ_]

"ಕಪಿಲಕಾ"; "ಕಪಿರಕಾ"

ಇತ್ಯಾದೀನಿ ॥ ೫೦ ॥ | ಈ ಮೊದಲಾದುವು ಇವೆ. [೫೦]

---

* ಉದಾಹರಣೆಗೆ_

"ಆ ರೇವಾನೇ[1] ತು ಮಾ ವಿಶತ್"

"ಆಶೀರ್ವಾನ್" [2]

[1] ರಯಿ ಮತುಪ್→ ರ ಇ ವಂತ್→ ರೇವಾನ್!

[2] ಆಶಾಸ್ ಕ್ವಿಪ್ → ಆಶಿಸ್ ಮತುಪ್→ ಆಶಿಸ್ ವಂತ್→ ಆಶೀರ್ವಂತ್ → ಆಶೀರ್ವಾನ್!

ಈ ನಿಯಮದಂತೆಯೇ, ಕನ್ನಡದಲ್ಲಿ_ 'ಬುದ್ಧಿಮಾನ್', ಎಂಬ ಸಂಸ್ಕೃತಪದಕ್ಕೆ ಬುದ್ಧಿವಂತ, ಎಂಬ ಪರ್ಯಾಯವಿದೆ. ಹೀಗೆಯೇ, ಸರ್ವಶಕ್ತಿಮಾನ್ → ಸರ್ವಶಕ್ತಿವಂತ ಈ ಮೊದಲಾಗಿದೆ _ಅನು.

** ಉದಾಹರಣೆಗೆ_ ಕೃಪ್ ತಾ → ಕರ್ ಪ್ ತಾ → ಕಲ್ಪ್ತಾ! _ಅನು.

(೫೧) 'ಧ'ಕಾರವು ಪರದಲ್ಲಿದ್ದಾಗ 'ಸ'ಕಾರ ಲೋಪ

"ಧಿ ಚ ॥ ೫೧ ॥"

[ಅಷ್ಟಾಧ್ಯಾಯ್ಯಾಮ್ ೮. ೨. ೨೫]

[ಅರ್ಥ:_ "ಧಕಾರವುಳ್ಳ ಪ್ರತ್ಯಯವು ಪರದಲ್ಲಿದ್ದಾಗ, ಸಕಾರದ ಲೋಪವಾಗುತ್ತದೆ." *

(ಅಷ್ಟಾಧ್ಯಾಯೀ : ೮. ೨. ೨೫)]

" ಘಸಿಭಸೋರ್ನ ಸಿಧ್ಯೇತ್ತು ತಸ್ಮಾತ್ ಸಿಜ್ ಗ್ರಹಣಂ ನ ತತ್ ।
ಛಾಂದಸೋ ವರ್ಣಲೋಪೋ ವಾ ಯಥೇಷ್ಕರ್ತಾರಮಧ್ವರೇ ॥"

[ಅರ್ಥ:_ "'ಘಸಿ', ಹಾಗೂ 'ಭಸ್' ಧಾತುಗಳ ವಿಷಯದಲ್ಲಿ ಸಿದ್ಧವಾಗದಿದ್ದರೆ, 'ಸಿಚ್'ನ ಗ್ರಹಣವನ್ನು ಮಾಡಬಾರದು. ವೇದವಿಷಯದಲ್ಲಿ ವಿಕಲ್ಪದಿಂದ ವರ್ಣದ ಲೋಪ ಮಾಡಬೇಕು! ಉದಾಹರಣೆಗಾಗಿ_ 'ಇಷ್ಕರ್ತಾರಮಧ್ವರಸ್ಯ', ಎಂಬುದರಲ್ಲಿನಂತೆ!"]

[ಇತಿ ಮಹಾಭಾಷ್ಯೇ.] ಹೀಗೆ, ಮಹಾಭಾಷ್ಯದಲ್ಲಿದೆ.

ಉದಾಹರಣಾರ್ಥಮ್_ ಉದಾಹರಣೆಗೆ_

"ಇಷ್ಕರ್ತಾರಮಧ್ವರಸ್ಯ"

[ಯಜುರ್ವೇದೇ ೧೨. ೧೧೦]

'ನಿಷ್ಕರ್ತಾರಮಧ್ವರಸ್ಯೇ'ತಿ ಪ್ರಾಪ್ತೇ. ಇಲ್ಲಿ _'ನಿಷ್ಕರ್ತಾರಮಧ್ವರಸ್ಯ', ಎಂದಿರಬೇಕಿತ್ತು!

ಅನೇನ ವೇದೇಷು ವರ್ಣಲೋಪೋ ವಿಕಲ್ಪ್ಯತೇ. ಈ ಸೂತ್ರದಿಂದ ವೇದಗಳಲ್ಲಿ ವರ್ಣಲೋಪವು ವಿಕಲ್ಪದಿಂದ ವಿಧಿಸಲಾಗಿದೆ.

ಅಂದರೆ, ಇದರಿಂದ, ವೇದದಲ್ಲಿ ಎಲ್ಲೆಲ್ಲೋ, ಯಾವ ಯಾವುದೋ, ಅಕ್ಷರದ ಲೋಪವಾಗುತ್ತದೆ.

ಅಪ್ರಾಪ್ತವಿಭಾಷೇಯಮ್ ॥ ೫೧ ॥ ಇದು ಪ್ರಾಪ್ತವಾಗದ ವಿಕಲ್ಪವಾಗಿದೆ. [೫೧]

---

* ಉದಾಹರಣೆಗೆ_ 'ಅಲವಿಢ್ವಮ್.' ಇಲ್ಲಿ _
ಅಟ್ ಲೂ ಇಟ್ ಸಿಚ್ ಧ್ವಮ್→ ಅ ಲೋ ಇ ಸ್ ಧ್ವಮ್ → ಅ ಲವ್ ಇ ಸ್ ಧ್ವಮ್ → ಅಲವಿಢ್ವಮ್!
_ಅನು.

(೫೨) ಹಕಾರದ ಸ್ಥಾನದಲ್ಲಿ ಘಕಾರ-ಭಕಾರ

"ದಾದೇರ್ಧಾತೋರ್ಘಃ ॥ ೫೨ ॥"

[ಅಷ್ಟಾಧ್ಯಾಯ್ಯಾಮ್ ೮. ೨. ೩೨]

[ಅರ್ಥ:_ "ದಕಾರವು ಆದಿಯಲ್ಲಿರುವ ಧಾತುಗಳ ಹಕಾರದ ಸ್ಥಾನದಲ್ಲಿ, ಝಲ್ ಪರದಲ್ಲಿರುವಾಗ, ಅಥವಾ ಪದಾಂತದಲ್ಲಿ, ಘಕಾರದ ಆದೇಶವಾಗುತ್ತದೆ.*

(ಅಷ್ಟಾಧ್ಯಾಯೀ : ೮. ೨. ೩೨)]

"ಹೃಗ್ರಹೋರ್ಭಶ್ಛಂದಸಿ ಹಸ್ಯ ಭತ್ವಂ ವಕ್ತವ್ಯಮ್ ॥"

[ಅರ್ಥ:_ "ವೇದದಲ್ಲಿ 'ಹೃ' ಮತ್ತು 'ಗ್ರಹ' ಧಾತುಗಳ ವಿಷಯದಲ್ಲಿ ಹಕಾರದ ಸ್ಥಾನದಲ್ಲಿ ಭಕಾರವನ್ನು ಹೇಳಬೇಕು."

ಅಂದರೆ, ಇದರಿಂದ ವೇದಗಳಲ್ಲಿ 'ಹೃ' ಮತ್ತು 'ಗ್ರಹ' ಧಾತುಗಳ ಹಕಾರಕ್ಕೆ ಭಕಾರ ಉಂಟಾಗುತ್ತದೆ.

[ಇತಿ ಮಹಾಭಾಷ್ಯೇ.] ಹೀಗೆ, ಮಹಾಭಾಷ್ಯದಲ್ಲಿದೆ.

ಉದಾಹರಣಾರ್ಥಮ್_ ಉದಾಹರಣೆಗೆ_

ಹೃ _

"ಗರ್ದಭೇನ ಸಂಭರತಿ"[1]

ಗ್ರಹ_

"ಮರುದಸ್ಯ ಗೃಭ್ಣಾತಿ"[2]

॥ ೫೨ ॥ [೫೨]

---

* ಉದಾಹರಣೆಗೆ_

ದಹ → ದಗ್ಧಾ ; ಕಾಷ್ಠದಹ → ಕಾಷ್ಠಧಕ್! _ಅನು.

[1] 'ಸಂಹರತಿ' ಎನ್ನುವ ಸ್ಥಾನದಲ್ಲಿ _ಅನು.

[2] 'ಗೃಹ್ಣಾತಿ', ಎನ್ನುವ ಸ್ಥಾನದಲ್ಲಿ _ಅನು.

(೫೩) 'ಮತು' ಮತ್ತು 'ವಸ್' ಗೆ 'ರು' ಆದೇಶ

" ಮತುವಸೋ ರುಃ ಸಂಬುದ್ಧೌ ಛಂದಸಿ ॥ ೫೩ ॥ "

[ಅಷ್ಟಾಧ್ಯಾಯ್ಯಾಮ್ ೮. ೩. ೧]

[ಅರ್ಥ:_ " ವೇದವಿಷಯದಲ್ಲಿ ಸಂಧಿವಿಷಯದಲ್ಲಿ ಸಂಬೋಧನೆಯು ಪರದಲ್ಲಿದ್ದಾಗ, ಮತ್ವಂತ, ಹಾಗೂ ವಸ್ವಂತ ಪದಕ್ಕೆ 'ರು' ಆದೇಶವಾಗುತ್ತದೆ."

(ಅಷ್ಟಾಧ್ಯಾಯೀ : ೮. ೩. ೧)]

ವೇದವಿಷಯೇ ಮತ್ವಂತಸ್ಯ ವಸ್ವಂತಸ್ಯ ಚ ಸಂಬುದ್ಧೌ ಗಮ್ಯಮಾನಾಯಾಂ ರುರ್ಭವತಿ.

ವೇದವಿಷಯದಲ್ಲಿ ಸಂಬೋಧನೆಯು ಪರದಲ್ಲಿದ್ದಾಗ, 'ಮತು' ಅಂತ್ಯದಲ್ಲಿರುವ ಪದದ, ಹಾಗೂ 'ವಸು' ಅಂತ್ಯದಲ್ಲಿರುವ ಪದದ, ಸ್ಥಾನಕ್ಕೆ 'ರು' ಆದೇಶವಾಗುತ್ತದೆ.

ಅಂದರೆ, ಇದರಿಂದ, ವೇದಗಳಲ್ಲಿ 'ಮತುಪ್' ಮತ್ತು 'ವಸು' [ಪ್ರತ್ಯಯಗಳ] ನಕಾರದ ಸ್ಥಾನದಲ್ಲಿ 'ರು' ಆಗುತ್ತದೆ.

[ಉದಾಹರಣೆಗೆ_]

" ಗೋಮಃ "[1]; " ಹರಿವಃ "[2]; " ಮೀಢ್ವಃ"[3]

॥ ೫೩ ॥ [೫೩]

(೫೪) ವಿಸರ್ಜನೀಯಕ್ಕೆ ಲೋಪ

" ವಾ ಶರಿ ॥ ೫೪॥ "

[ಅಷ್ಟಾಧ್ಯಾಯ್ಯಾಮ್ ೮. ೩. ೩೬]

[ಅರ್ಥ:_ " ಸಂಧಿವಿಷಯದಲ್ಲಿ 'ಶರ್' ಪರದಲ್ಲಿದ್ದಾಗ, ವಿಸರ್ಜನೀಯಕ್ಕೆ ವಿಕಲ್ಪದಿಂದ ವಿಸರ್ಜನೀಯವು ಆದೇಶವಾಗುತ್ತದೆ. " *

(ಅಷ್ಟಾಧ್ಯಾಯೀ : ೮. ೩. ೩೬)]

---

[1] ಗೋ ಮತುಪ್→ ಗೋ ಮ ನ್ ತ್→ ಗೋ ಮ ರು → ಗೋಮಃ! _ಅನು.

[2] ಹರಿ ಮತುಪ್→ ಹರಿ ಮ ನ್ ತ್ → ಹರಿ ವ ನ್→ ಹರಿವ ರು→ ಹರಿವಃ! _ಅನು.

[3] ಮಿಹ ಕ್ವಸು→ಮೀಢ್ ವ ನ್ ಸ್→ ಮೀಢ್ ವ ರು→ ಮೀಢ್ವಃ! _ಅನು.

* ಉದಾಹರಣೆಗೆ_ ವೃಕ್ಷಃ ಶೇತೇ, ವೃಕ್ಷಶ್ಶೇತೇ ; ಧಾರ್ಮಿಕಾಃ ಸಂತು, ಧಾರ್ಮಿಕಾಸ್ಸಂತು _ಅನು.

" ವಾ ಶರ್-ಪ್ರಕರಣೇ ಖರ್-ಪರೇ ಲೋಪೋ ವಕ್ತವ್ಯಃ । "

[ಅರ್ಥ:_ " 'ಶರ್' ಪ್ರಕರಣದ 'ಖರ್' ಪರದಲ್ಲಿದ್ದಾಗ , ವಿಕಲ್ಪದಿಂದ ಲೋಪವಾಗುತ್ತದೆ, ಎಂದು ಹೇಳಬೇಕು."

ಅಂದರೆ, 'ಖರ್' ನ 'ಶರ್' ಪರದಲ್ಲಿದ್ದಾಗ, ವಿಸರ್ಜನೀಯವು ವಿಕಲ್ಪದಿಂದ ಲೋಪವಾಗುತ್ತದೆ.

[ಉದಾಹರಣಾರ್ಥಮ್_] | [ಉದಾಹರಣೆಗೆ_]

" ವೃಕ್ಷಾ ಸ್ಥಾತಾರಃ "; " ವೃಕ್ಷಾಃ ಸ್ಥಾತಾರಃ ॥ "

[ಇತಿ ಮಹಾಭಾಷ್ಯೇ.] | ಹೀಗೆ, ಮಹಾಭಾಷ್ಯದಲ್ಲಿದೆ.

ಅನೇನ_ | ಇದರಿಂದ_

" ವಾಯವ ಸ್ಥ" *

[ಯಜುರ್ವೇದೇ ೧.೧]

ಇತ್ಯಾದೀನಿ ವೇದೇಷ್ವಪಿ ದೃಶ್ಯಂತೇ. | ಈ ಮೊದಲಾದ (ಪ್ರಯೋಗಗಳು) ವೇದಗಳಲ್ಲಿ ಕೂಡ, ಕಂಡುಬರುತ್ತವೆ.

ಅತಃ ಸಾಮಾನ್ಯೇನಾಯಂ ಸಾರ್ವತ್ರಿಕೋ ನಿಯಮಃ ॥ ೫೪ ॥ | ಆದುದರಿಂದ, ಇದು ಸಾಮಾನ್ಯವಾಗಿ ಸಾರ್ವತ್ರಿಕ ನಿಯಮವಾಗಿದೆ. [೫೪]

(೫೫) ಉಣಾದಿ ಪ್ರತ್ಯಯವಿಧಾನ **

" ಉಣಾದಯೋ ಬಹುಲಮ್ ॥ ೫೫ ॥ "

[ಅಷ್ಟಾಧ್ಯಾಯ್ಯಾಮ್ ೩. ೩. ೧]

[ಅರ್ಥ:_ " ಧಾತುಗಳಿಂದ, ವರ್ತಮಾನಕಾಲದಲ್ಲಿ ಉಣ್ ಮೊದಲಾದ ಪ್ರತ್ಯಯಗಳು ಬಹುಲದಿಂದ ಬರುತ್ತವೆ."

(ಅಷ್ಟಾಧ್ಯಾಯೀ : ೩. ೩. ೧)]

---

* 'ವಾಯವಃ ಸ್ಥ', ಎಂಬುದು ಸಂಧಿರಹಿತಪ್ರಯೋಗ_ಅನು.

** ಇದಕ್ಕಾಗಿ ೭೫೩ ಸೂತ್ರಗಳನ್ನೊಳಗೊಂಡ ಗ್ರಂಥವಾದ 'ಉಣಾದಿಕೋಶ' ವನ್ನು ನೋಡಿ! ಇದಕ್ಕೆ ಮಹರ್ಷಿದಯಾನಂದರ ಭಾಷ್ಯವೂ ಉಪಲಬ್ಧವಿದೆ. _ಅನು.

ಈ ಸೂತ್ರದ ಮೇಲೆ ಮಹಾಭಾಷ್ಯಕಾರರಾದ ಪತಂಜಲಿಮುನಿಯವರು 'ಉಣಾದಿಪಾಠ'ದ ವ್ಯವಸ್ಥೆಯನ್ನು ಹೇಗೆ ಮಾಡಿದ್ದಾರೆಂದರೆ_

ಧಾತುಗಳ ಅಲ್ಪತ್ವದಿಂದ ಉಣಾದಿಪ್ರತ್ಯಯಗಳ ಆವಶ್ಯಕತೆ

" ಬಹುಲವಚನಂ ಕಿಮರ್ಥಮ್? "

[ಅರ್ಥ:_ " 'ಬಹುಲ', ಎಂದು ಹೇಳಿರುವುದು ಏತಕ್ಕಾಗಿ?

" ಬಾಹುಲಕಂ ಪ್ರಕೃತೇಸ್ತನುದೃಷ್ಟೇಃ ॥ "

[ಅರ್ಥ:_ " ಧಾತುಗಳ ಅಲ್ಪತ್ವವು ಕಂಡುಬಂದಿರುವುದರಿಂದ, 'ಬಹುಲ', ಎಂದು ಹೇಳಲಾಗಿದೆ."

" ತನ್ವೀಭ್ಯಃ ಪ್ರಕೃತಿಭ್ಯ ಉಣಾದಯೋ ದೃಶ್ಯಂತೇ ; ನ ಸರ್ವಾಭ್ಯೋ ದೃಶ್ಯಂತೇ ॥ "

[ಅರ್ಥ:_ " ಅಲ್ಪಸಂಖ್ಯೆಯ ಧಾತುಗಳಿಂದ ಉಣಾದಿಪ್ರತ್ಯಯಗಳು ಕಂಡುಬರುತ್ತವೆ ; ಎಲ್ಲಾ ಧಾತುಗಳಿಂದ ಕಂಡುಬರುವುದಿಲ್ಲ."]

[ಇತಿ ಮಹಾಭಾಷ್ಯೇ.]

ಹೀಗೆ, ಮಹಾಭಾಷ್ಯದಲ್ಲಿದೆ.

ಭಾಷ್ಯಮ್_

ಭಾಷ್ಯ_

(ಬಾಹುಲಕಂ.) ಉಣಾದಿಪಾಠೇ ಅಲ್ಪಾಭ್ಯಃ ಪ್ರಕೃತಿಭ್ಯ ಉಣಾದಯಃ ಪ್ರತ್ಯಯಾ ವಿಹಿತಾಃ .

(ಬಾಹುಲಕಂ.) 'ಉಣಾದಿಪಾಠ'ದಲ್ಲಿ ಸ್ವಲ್ಪ ಧಾತುಗಳಿಂದ ಉಣಾದಿಪ್ರತ್ಯಯಗಳು . ವಿಧಿಸಲ್ಪಟ್ಟಿವೆ.

ತತ್ರ ಬಹುಲವಚನಾದವಿಹಿತಾಭ್ಯೋಽಪಿ ಭವಂತಿ.

ಅಲ್ಲಿ 'ಬಹುಲ', ಎಂದು ಹೇಳಿರುವುದರಿಂದ, ವಿಧಿಸಲ್ಪಡದ [ಧಾತು]ಗಳಿಂದಲೂ ಕೂಡ, [ಅವು] ಉಂಟಾಗುತ್ತವೆ, [ಎಂದರ್ಥ.]

ಅಂದರೆ, 'ಬಹುಲ'ವಾಗಿರುವುದರಿಂದ, ಆ ಪ್ರತ್ಯಯಗಳು ಇತರ ಧಾತುಗಳಿಂದಲೂ ಕೂಡ, ಉಂಟಾಗುತ್ತವೆ.

ಉಣಾದಿಕೋಶದಲ್ಲಿ ಸಮಸ್ತ ಪ್ರತ್ಯಯಗಳಿಲ್ಲ

" ಪ್ರಾಯಸಮುಚ್ಚಯನಾದಪಿ ತೇಷಾಮ್ ॥ "

[ಅರ್ಥ:_ " ಅವುಗಳು ಸಾಮಾನ್ಯವಾಗಿ ಒಟ್ಟುಗೂಡಿಸಲ್ಪಟ್ಟಿವೆ. "

" ಪ್ರಾಯೇಣ ಖಲ್ವಪಿ ತೇ ಸಮುಚ್ಚಿತಾಃ , ನ ಸರ್ವೇ ಸಮುಚ್ಚಿತಾಃ । "

[ಅರ್ಥ:_ " ಅವು ಬಹುತರವಾಗಿಯಂತೂ ಒಟ್ಟುಗೂಡಿಸಲ್ಪಟ್ಟಿವೆ. [ಆದರೆ,] ಎಲ್ಲವೂ ಒಟ್ಟುಗೂಡಿಸಲ್ಪಟ್ಟಿಲ್ಲ."]

[ಇತಿ ಮಹಾಭಾಷ್ಯೇ.]

ಹೀಗೆ, ಮಹಾಭಾಷ್ಯದಲ್ಲಿದೆ.

ಭಾಷ್ಯಮ್_

ಏವಂ ಪ್ರತ್ಯಯಾ ಅಪಿ ನ ಸರ್ವ ಏಕೀಕೃತಾಃ ; ಕಿಂತು, ಪ್ರಾಯೇಣ ಸೂಕ್ಷ್ಮತಯಾ ಪ್ರತ್ಯಯವಿಧಾನಂ ಕೃತಮ್.

ತತ್ರಾಪಿ ಬಹುಲವಚನಾದೇವಾವಿಹಿತಾ ಅಪಿ ಪ್ರತ್ಯಯಾ ಭವಂತಿ.

ಯಥಾ_

'ಫಿಡಫಿಡ್ಡೌ' ಭವತಃ .

ಭಾಷ್ಯ _

ಮತ್ತು [ಆ] ಪ್ರತ್ಯಯಗಳೆಲ್ಲವೂ ಒಟ್ಟುಗೂಡಿಸಲ್ಪಟ್ಟಿಲ್ಲ; ಆದರೆ, ಸಾಮಾನ್ಯವಾಗಿ ಸೂಕ್ಷ್ಮತೆಯಿಂದ ಪ್ರತ್ಯಯವಿಧಾನ ಮಾಡಲಾಗಿದೆ.

ಅಂದರೆ, ಆ ಗ್ರಂಥದಲ್ಲಿ ಸ್ವಲ್ಪ ಪ್ರತ್ಯಯಗಳೇ ಮಾದರಿಗಾಗಿ ಹೇಳಲ್ಪಟ್ಟಿವೆ!

ಆದರಲ್ಲೂ ಕೂಡ, 'ಬಹುಲ', ಎಂದು ಹೇಳಿರುವುದರಿಂದ, ವಿಧಿಸಲ್ಪಡದ ಪ್ರತ್ಯಯಗಳೂ ಕೂಡ, ಉಂಟಾಗುತ್ತವೆ.

ಅಂದರೆ, ಇವುಗಳಿಂದ ಬೇರೆಯ ಹೊಸ ಪ್ರತ್ಯಯಗಳನ್ನೂ ಕೂಡ, ಶಬ್ದಗಳನ್ನು ನೋಡಿ, ತಿಳಿದುಕೊಳ್ಳಬೇಕು!

ಉದಾಹರಣೆಗಾಗಿ_

'ಫಿಡ', 'ಫಿಡ್ಡ' ಪ್ರತ್ಯಯಗಳು ಇರುತ್ತವೆ.

ಅಂದರೆ_

'ಋಫಿಡಃ'

ಈ ಶಬ್ದದಲ್ಲಿ 'ಋ' ಧಾತುವಿನಿಂದ 'ಫಿಡ' ಪ್ರತ್ಯಯವು [ಉಂಟಾಗುತ್ತ,,] ಎಂದು ತಿಳಿಯಲಾಗುತ್ತದೆ. [ಮತ್ತು 'ಫಿಡ್ಡ' ಪ್ರತ್ಯಯವು ವಿಧಿಸಲ್ಪಡದಿದ್ದರೂ ಕೂಡ, ತಿಳಿಯಲ್ಪಡಬೇಕು.]

ಈ ರೀತಿಯಾಗಿಯೇ, ಬೇರೆ ಕಡೆ ಕೂಡ, ತಿಳಿಯಬೇಕು!

ಸೂತ್ರದ ಹೊರಗಿನ 'ಕಾರ್ಯ'ಗಳು ಆಗುತ್ತವೆ

ತಥಾ ಸೂತ್ರೈರ್ವಿಹಿತಾನಿ ಕಾರ್ಯ್ಯಾಣಿ ನ ಭವಂತಿ; ಅವಿಹಿತಾನಿ ಚ ಭವಂತಿ.

ಮತ್ತು ಸೂತ್ರಗಳಿಂದ ವಿಧಿಸಲ್ಪಟ್ಟ ಕಾರ್ಯಗಳು ಆಗುವುದಿಲ್ಲ; ಆದರೆ, ವಿಧಿಸಲ್ಪಡದವು ಆಗುತ್ತವೆ.

ಅಂದರೆ, ಎಷ್ಟು ಶಬ್ದಗಳು **ಉಣಾದಿಗಣ**ದಿಂದ ಸಿದ್ಧವಾಗುತ್ತವೋ, ಅವುಗಳಲ್ಲಿ ಎಷ್ಟು ಕಾರ್ಯಗಳು ಸೂತ್ರಗಳಿಂದ ಆಗಬೇಕೋ, ಅವೆಲ್ಲವೂ ಆಗುವುದಿಲ್ಲ!

ಯಥಾ_

ಉದಾಹರಣೆಗಾಗಿ_

'ದಂಡ' ಇತ್ಯತ್ರ 'ಡ'ಪ್ರತ್ಯಯಸ್ಯ ಡಕಾರಸ್ಯ ಇತ್ ಸಂಜ್ಞಾ ನ ಭವತಿ.

'ದಂಡ'_ ಎಂಬ ಶಬ್ದದಲ್ಲಿ **ಡ**-ಪ್ರತ್ಯಯದ ಡಕಾರದ ಸ್ಥಾನದಲ್ಲಿ **'ಇತ್'** ಸಂಜ್ಞೆ ಉಂಟಾಗುವುದಿಲ್ಲ.*

ಏತದಪಿ ಬಾಹುಲಕಾದೇವ.

ಇದೂ ಕೂಡ, **'ಬಾಹುಲಕ'**ವಾಗಿರುವ ಕಾರಣ ದಿಂದಲೇ ಆಗಿದೆ.

ಅಂದರೆ, ಇದೂ ಕೂಡ, **'ಬಹುಲ'**ದ ಪ್ರತಾಪವೇ ಆಗಿದೆ!

ಸಮಸ್ತ ಧಾತು-ಪ್ರತ್ಯಯಗಳಿಂದ 'ಕಾರ್ಯ' ಏಕಿಲ್ಲ?

" ಕಾರ್ಯ್ಯಸಶೇಷವಿಧೇಶ್ಚ ತದುಕ್ತಮ್ ॥ "

[ಅರ್ಥ:_ "ಮತ್ತು ಅವು ಕಾರ್ಯವು ಉಳಿಯುವ ವಿಧಿಯ ಬಗ್ಗೆ ಹೇಳಲ್ಪಟ್ಟವೆ."

"ಕಾರ್ಯ್ಯಾಣಿ ಖಲ್ವಪಿ ಸಶೇಷಾಣಿ ಕೃತಾನಿ । ನ ಸರ್ವಾಣಿ
ಲಕ್ಷಣೇನ ಪರಿಸಮಾಪ್ತಾನಿ ।"

[ಅರ್ಥ:_ "ಕಾರ್ಯಗಳಂತೂ ಉಳಿದಿರುವಂತೆ ಮಾಡಲ್ಪಟ್ಟವೆ; ಲಕ್ಷಣದಿಂದ ಎಲ್ಲವೂ ಮುಗಿಸಲ್ಪಟ್ಟಿಲ್ಲ."

" ಕಿಂ ಪುನಃ ಕಾರಣಂ ತನ್ವೀಭ್ಯಃ ಪ್ರಕೃತಿಭ್ಯ ಉಣಾದಯೋ
ದೃಶ್ಯಂತೇ, ನ ಸರ್ವಾಭ್ಯಃ? "

[ಅರ್ಥ:_ "ಮತ್ತೆ, ಅಲ್ಪಧಾತುಗಳಿಂದಲೇ ಉಣಾದಿಪ್ರತ್ಯಯಗಳು ಯಾವ ಕಾರಣದಿಂದ ಕಂಡುಬರುತ್ತಿವೆ? ಎಲ್ಲಾ ಧಾತುಗಳಿಂದಲೂ ಏಕಿಲ್ಲ? "

* 'ಚುಟೂ' (ಅಷ್ಟಾ. ೧. ೩. ೭) ಸೂತ್ರದಂತೆ 'ಇತ್' ಸಂಜ್ಞೆ ಆಗಬೇಕಿತ್ತು _ಅನು.

"ಕಿಂ ಚ ಕಾರಣಂ ಪ್ರಾಯೇಣ ಸಮುಚ್ಚಿತಾ, ನ ಸರ್ವೇ ಸಮುಚ್ಚಿತಾಃ?"

[ಅರ್ಥ:_ "ಮತ್ತು ಯಾವ ಕಾರಣದಿಂದ ಅವು ಬಹುತರವಾಗಿ ಒಟ್ಟು ಗೂಡಿಸಲ್ಪಟ್ಟವೆ? ಎಲ್ಲವೂ ಏಕೆ ಒಟ್ಟುಗೂಡಿಸಲ್ಪಟ್ಟಿಲ್ಲ?"

"ಕಿಂ ಚ ಕಾರಣಂ ಕಾರ್ಯಾಣಿ ಸಶೇಷಾಣಿ ಕೃತಾನಿ; ನ ಪುನಃ ಸರ್ವಾಣಿ ಲಕ್ಷಣೇನ ಪರಿಸಮಾಪ್ತಾನಿ?"

[ಅರ್ಥ:_ "ಮತ್ತು ಯಾವ ಕಾರಣದಿಂದ ಕಾರ್ಯಗಳು ಸಶೇಷವಾಗಿರುವಂತೆ ಮಾಡಲ್ಪಟ್ಟವೆ? ಪುನಃ ಲಕ್ಷಣದಿಂದ ಎಲ್ಲವೂ ಏಕೆ ಮುಗಿಸಲ್ಪಡಲಿಲ್ಲ?"]

[ಇತಿ ಮಹಾಭಾಷ್ಯೇ.]

ಹೀಗೆ, ಮಹಾಭಾಷ್ಯದಲ್ಲಿದೆ.

ಭಾಷ್ಯಮ್_

ಭಾಷ್ಯ_

(ಕಿಂ ಪುನಃ.) ಅನೇನೈತಚ್ಛಂಕ್ಯತೇ_

(ಕಿಂ ಪುನಃ.) ಇದರಿಂದ ಶಂಕೆ ಮಾಡಲ್ಪಡುತ್ತದೇನೆಂದರೆ_

ಉಣಾದೌ ಯಾವತ್ಯಃ ಪ್ರಕೃತಯೋ ಯಾವಂತಃ ಪ್ರತ್ಯಯಾ, ಯಾವಂತಿ ಚ ಸೂತ್ರೈಃ ಕಾರ್ಯಾಣಿ ವಿಹಿತಾನಿ, ತಾವಂತ್ಯೇವ ಕಥಂ ನ ಸ್ಯುಃ?

ಉಣಾದಿಪಾಠದಲ್ಲಿ ಎಷ್ಟು ಧಾತುಗಳಿವೆಯೋ, ಎಷ್ಟು ಪ್ರತ್ಯಯಗಳಿವೆಯೋ, ಮತ್ತು ಎಷ್ಟು ಸೂತ್ರಗಳಿಂದ ಕಾರ್ಯಗಳು ವಿಧಿಸಲ್ಪಟ್ಟಿವೆಯೋ, ಅಷ್ಟೇ ಏತಕ್ಕಾಗಬಾರದು?

ಅಂದರೆ, ಯಾವನಾದರೂ ಈ ವಿಷಯದಲ್ಲಿ_

"ಉಣಾದಿಪಾಠದಲ್ಲಿ ಎಷ್ಟು ಧಾತುಗಳಿಂದ, ಎಷ್ಟು ಪ್ರತ್ಯಯಗಳ ವಿಧಾನ ಮಾಡಲಾಗಿದೆಯೋ, ಮತ್ತು ಶಬ್ದಗಳ ಸಿದ್ಧಿಯಲ್ಲಿ, ಸೂತ್ರಗಳಿಂದ ಎಷ್ಟು ಕಾರ್ಯಗಳು ಆಗಬಲ್ಲವೋ, ಅವುಗಳಿಗಿಂತ ಹೆಚ್ಚಾಗಿ ಏತಕ್ಕಾಗಿ ಆಗಬಾರದು?" ಎಂದು ಶಂಕೆ ಮಾಡಿದರೆ_

ಅತ್ರೋಚ್ಯತೇ_

ಇದಕ್ಕೆ ಉತ್ತರವೇನೆಂದರೆ_

ಉಣಾದಿಯಿಂದ ವೈದಿಕ-ಲೌಕಿಕ ಶಬ್ದಗಳ ಸಿದ್ಧಿ

"ನೈಗಮರೂಢಿಭವಂ ಹಿ ಸುಸಾಧು ॥"

[ಅರ್ಥ:_ "ಏಕೆಂದರೆ, ವೈದಿಕ, ಹಾಗೂ ರೂಢಿಯಿಂದ ಉತ್ಪನ್ನವಾದ ಲೌಕಿಕ ಶಬ್ದಗಳು ಚೆನ್ನಾಗಿ ಸಿದ್ಧವಾಗಲಿ,— ಎಂದು."

"ನೈಗಮಾಶ್ಚ ರೂಢಿಶಬ್ದಾಶ್ಚೌಣಾದಿಕಾಃ ಸುಸಾಧವಃ ಕಥಂ ಸ್ಯುಃ ?"

[ಅರ್ಥ:_ "[ಇಲ್ಲದಿದ್ದರೆ,] ವೈದಿಕಶಬ್ದಗಳೂ ಮತ್ತು ಉಣಾದಿಪಠಿತ ರೂಢಿಶಬ್ದಗಳೂ ಚೆನ್ನಾಗಿ ಹೇಗೆ ಸಿದ್ಧವಾಗಬಲ್ಲವು?"]

[ಇತಿ ಮಹಾಭಾಷ್ಯೇ.]

ಹೀಗೆ, ಮಹಾಭಾಷ್ಯದಲ್ಲಿದೆ.

ಭಾಷ್ಯಮ್_

ಭಾಷ್ಯ_

(ನೈಗಮ.) ನೈಗಮಾ ವೈದಿಕಾಃ ಶಬ್ದಾ ರೂಢಯೋ ಲೌಕಿಕಾಶ್ಚ ಸುಷ್ಠು ಸಾಧವೋ ಯಥಾ ಸ್ಯುಃ.

(ನೈಗಮ.) 'ನೈಗಮ', ಎಂದರೆ ವೈದಿಕಶಬ್ದಗಳು ಮತ್ತು 'ರೂಢ', ಎಂದರೆ ಲೌಕಿಕಶಬ್ದಗಳು ಹೇಗೆ ಚೆನ್ನಾಗಿ ಸಿದ್ಧಿಸಲ್ಪಡುವಂತಹವಾಗಬಲ್ಲವೋ, [ಹಾಗೆ ಆಗಬೇಕು!]

ಏವಂ ಕೃತೇನ ವಿನಾ ನೈವ ತೇ ಸುಷ್ಠು ಸೇತ್ಸ್ಯಂತಿ.

ಹೀಗೆ ಮಾಡದಿದ್ದರೆ, ಅವು ಸರಿಯಾಗಿ ಸಿದ್ಧಿಸಲ್ಪಡುವುದೇ ಇಲ್ಲ!

ಅಂದರೆ, ವೇದಗಳಲ್ಲಿ ಎಷ್ಟು ಶಬ್ದಗಳಿವೆಯೋ, ಮತ್ತು ಜಗತ್ತಿನಲ್ಲಿ ಎಷ್ಟು ಅಸಂಖ್ಯ ಸಂಜ್ಞಾಶಬ್ದಗಳಿವೆಯೋ, ಇವೆಲ್ಲವೂ ಚೆನ್ನಾಗಿ ಸಿದ್ಧಿಸಲ್ಪಡಲಾರವು.

ಆದುದರಿಂದ, ಮೇಲೆ ಹೇಳಿದ ಮೂರು ಪ್ರಕಾರದ ಕಾರ್ಯಗಳು ಬಹುಲವಚನದಿಂದ 'ಉಣಾದಿ'ಯಲ್ಲಿ ಆಗುತ್ತವೆ. ಇದಾಗುವುದರಿಂದ, ಅನೇಕ ಪ್ರಕಾರಗಳ ಸಾವಿರಾರು ಶಬ್ದಗಳು ಸಿದ್ಧವಾಗುತ್ತವೆ.

ಸಂಜ್ಞಾಶಬ್ದಗಳು ಧಾತುವಿನಿಂದ ಹುಟ್ಟಿವೆ!

"ನಾಮ ಚ ಧಾತುಜಮಾಹ ನಿರುಕ್ತೇ ॥"

[ಅರ್ಥ:_ "ಮತ್ತು ನಿರುಕ್ತದಲ್ಲಿ_ 'ನಾಮ ಶಬ್ದಗಳು ಧಾತುವಿನಿಂದ ಉತ್ಪನ್ನವಾಗುವಂತಹವು ಆಗಿವೆ', ಎಂದು ಹೇಳಲಾಗಿದೆ."

"ನಾಮ ಖಲ್ವಪಿ ಧಾತುಜಮಾಹುರ್ನೈರುಕ್ತಾಃ ।"

[ಅರ್ಥ:_ "ಎಂದರೆ, 'ನಾಮ' ಶಬ್ದವೂ ಕೂಡ, ಧಾತುವಿನಿಂದ ಉತ್ಪನ್ನವಾಗುವಂತಹುದು', ಎಂದು ನಿರುಕ್ತಸಂಪ್ರದಾಯದವರು ಹೇಳುತ್ತಾರೆ."]

[ಇತಿ ಮಹಾಭಾಷ್ಯೇ.]

ಹೀಗೆ, ಮಹಾಭಾಷ್ಯದಲ್ಲಿದೆ.

ಭಾಷ್ಯಮ್_

(ನಾಮ.) ಸಂಜ್ಞಾಶಬ್ದಾನ್ ನಿರುಕ್ತಕಾರಾ ಧಾತುಜಾನಾಹುಃ .

ಭಾಷ್ಯ_

(ನಾಮ.) ಸಂಜ್ಞಾಶಬ್ದಗಳನ್ನು ನಿರುಕ್ತಕಾರರು ಧಾತುವಿನಿಂದ ಉತ್ಪನ್ನವಾದುವುಗಳನ್ನಾಗಿ ಹೇಳುತ್ತಾರೆ.

ಅಂದರೆ, ಈಗ ಈ ವಿಷಯದಲ್ಲಿ ನಿರುಕ್ತಕಾರರುಗಳ ಮತವೇನೆಂದರೆ_

ಎಷ್ಟು ಸಂಜ್ಞಾಶಬ್ದಗಳಿವೆಯೋ, ಅವೆಲ್ಲವೂ ಧಾತು ಮತ್ತು ಪ್ರತ್ಯಯಗಳ [ಯೋಗದಿಂದ] ಸರಿಯಾಗಿ ಸಿದ್ಧವಾಗಬೇಕು!

"ವ್ಯಾಕರಣೇ ಶಕಟಸ್ಯ ಚ ತೋಕಮ್ ॥"

[ಅರ್ಥ:_ "ಮತ್ತು ವ್ಯಾಕರಣದಲ್ಲಿ ಶಕಟನ ಪುತ್ರ."

"ವೈಯಾಕರಣಾನಾಂ ಚ ಶಾಕಟಾಯನ ಆಹ ಧಾತುಜಂ ನಾಮೇತಿ ।"

[ಅರ್ಥ:_ "ಎಂದರೆ, ವೈಯಾಕರಣಿಗಳಲ್ಲಿ ಶಾಕಟಾಯನರು ಕೂಡ_'ನಾಮ ಶಬ್ದಗಳು ಧಾತುವಿನಿಂದ ಉತ್ಪನ್ನವಾಗುವಂತಹವು ಆಗಿವೆ', ಎಂದು ಹೇಳುತ್ತಾರೆ."]

[ಇತಿ ಮಹಾಭಾಷ್ಯೇ.]

ಹೀಗೆ, ಮಹಾಭಾಷ್ಯದಲ್ಲಿದೆ.

ಭಾಷ್ಯಮ್_

(ವ್ಯಾಕರಣೇ.) ಶಕಟಸ್ಯ ತೋಕಮಪತ್ಯಂ ಶಾಕಟಾಯನಃ .

ತೋಕಮಿತ್ಯಸ್ಯಾಪತ್ಯನಾಮಸು ಪಠಿತತ್ವಾತ್.*

ಭಾಷ್ಯ_

(ವ್ಯಾಕರಣೇ.) ಶಕಟನ, 'ತೋಕ', ಎಂದರೆ ಪುತ್ರನು ಶಾಕಟಾಯನ!

ಏಕೆಂದರೆ_ 'ತೋಕ', ಎಂದು ಈ ಅಪತ್ಯ [= ಪುತ್ರ] ನಾಮಗಳಲ್ಲಿ ಹೇಳಲಾಗಿದೆ.*

ಅಂದರೆ, ವೈಯಾಕರಣರಾದ ಎಷ್ಟು ಋಷಿಗಳಿದ್ದಾರೋ, ಅವರಲ್ಲಿ ಶಾಕಟಾಯನಋಷಿಯ ಮತವು ನಿರುಕ್ತಾರರ ಮತಕ್ಕೆ ಸಮಾನವಾಗಿದೆ.

ಮತ್ತು ಇವರಿಂದ ಬೇರೆಯಾದ ಋಷಿಗಳ ಮತವೇನೆಂದರೆ_ 'ಎಷ್ಟು ಸಂಜ್ಞಾಶಬ್ದಗಳಿವೆಯೋ, ಅವು ರೂಢಿ',** ಎಂದು!

ಧಾತುವಿನಿಂದ ಪ್ರತ್ಯಯದ; ಪ್ರತ್ಯಯದಿಂದ ಧಾತುವಿನ ಊಹೆ

"ಅಥ ಯಸ್ಯ ವಿಶೇಷಪದಾರ್ಥೋ ನ ಸಮುತ್ಥಿತಃ, ಕಥಂ ತತ್ರ ಭವಿತವ್ಯಮ್?"

[ಅರ್ಥ:_ "ಈಗ ಯಾವುದರ ವಿಶೇಷಪದಾರ್ಥವು ಚೆನ್ನಾಗಿ ನಿಷ್ಪನ್ನವಾಗುವುದಿಲ್ಲವೋ, ಅಲ್ಲಿ ಹೇಗೆ ಆಗಬೇಕು?"

ಅಂದರೆ, ಈಗ, ಯಾವ ಮಾತಿನ ಮೇಲೆ ವಿಚಾರ ಮಾಡಬೇಕೆಂದರೆ, ಯಾವ ಶಬ್ದಗಳಿಂದ ಧಾತು, ಅಥವಾ ಪ್ರತ್ಯಯ ಯಾವುದೂ ತಿಳಿದುಬರುವುದಿಲ್ಲವೋ, ಅಲ್ಲಿ ಏನು ಮಾಡಬೇಕು?

"ಯನ್ನ ವಿಶೇಷಪದಾರ್ಥಸಮುತ್ಥಂ, ಪ್ರತ್ಯಯತಃ ಪ್ರಕೃತೇಶ್ಚ ತದೂಹ್ಯಮ್ ॥"

[ಅರ್ಥ:_ "ಯಾವುದು ವಿಶೇಷಪದಾರ್ಥದಿಂದ ಚೆನ್ನಾಗಿ ನಿಷ್ಪನ್ನವಾಗುವಂತಹುದು ಅಲ್ಲವೋ, ಅದು ಪ್ರತ್ಯಯದಿಂದಲೂ, ಹಾಗೂ ಧಾತುವಿನಿಂದಲೂ ಊಹಿಸಲ್ಪಡಬೇಕು!"

* ನಿಘಂಟೌ ೨. ೨ _ಅನು.

* ನಿಘಂಟು ೨. ೨ _ಅನು.

+ 'ರೂಢಿ', ಎಂದರೆ, ಧಾತುವಿನ ಅರ್ಥಕ್ಕನುಸಾರವಾಗಿ ತಿಳಿಯಲ್ಪಡದ ಶಬ್ದ _ಅನು.

"ಪ್ರಕೃತಿಂ ದೃಷ್ಟ್ವಾ ಪ್ರತ್ಯಯ ಊಹಿತವ್ಯಃ ; ಪ್ರತ್ಯಯಂ ದೃಷ್ಟ್ವಾ ಪ್ರಕೃತಿರೂಹಿತವ್ಯಾ ॥"

[ಅರ್ಥ:_ "ಧಾತುವನ್ನು ನೋಡಿ, ಪ್ರತ್ಯಯವು ಊಹಿಸಲ್ಪಡಬೇಕು ; ಪ್ರತ್ಯಯವನ್ನು ನೋಡಿ, ಧಾತುವು ಊಹಿಸಲ್ಪಡಬೇಕು."]

[ಇತಿ ಮಹಾಭಾಷ್ಯೇ.]

ಹೀಗೆ, ಮಹಾಭಾಷ್ಯದಲ್ಲಿದೆ.

ಭಾಷ್ಯಮ್_

ಭಾಷ್ಯ_

(ಯನ್ನ.) ಯದ್ ವಿಶೇಷಾತ್ ಪದಾರ್ಥಾನ್ನ ಸಮ್ಯಗುತ್ಥಿತಮರ್ಥಾತ್ ಪ್ರಕೃತಿಪ್ರತ್ಯಯವಿಧಾನೇನ ನ ವ್ಯುತ್ಪನ್ನಂ ;

(ಯನ್ನ.) ಯಾವುದು ವಿಶೇಷವಾದ ಪದಾರ್ಥದಿಂದ ಚೆನ್ನಾಗಿ ನಿಷ್ಪನ್ನವಾದುದಲ್ಲವೋ, ಎಂದರೆ, ಧಾತು-ಪ್ರತ್ಯಯ[ಯೋಗ]ವಿಧಾನದಿಂದ ವ್ಯುತ್ಪನ್ನವಾದುದಲ್ಲವೋ ;

ತತ್ರ ಪ್ರಕೃತಿಂ ದೃಷ್ಟ್ವಾ ಪ್ರತ್ಯಯ ಊಹ್ಯಃ ; ಪ್ರತ್ಯಯಂ ಚ ದೃಷ್ಟ್ವಾ ಪ್ರಕೃತಿಃ .

ಅಲ್ಲಿ_ ಧಾತುವನ್ನು ನೋಡಿ, ಪ್ರತ್ಯಯವು ಊಹಿಸಲ್ಪಡಬೇಕು ; ಮತ್ತು ಪ್ರತ್ಯಯವನ್ನು ನೋಡಿ, ಧಾತುವು [ಊಹಿಸಲ್ಪಡಬೇಕು!]

ಅಂದರೆ, ಆ ಶಬ್ದಗಳ ಬಗ್ಗೆ ಯಾವ ರೀತಿ ವಿಚಾರ ಮಾಡಬೇಕೆಂದರೆ_

ವ್ಯಾಕರಣಶಾಸ್ತ್ರದಲ್ಲಿ ಎಷ್ಟು ಧಾತುಗಳು ಮತ್ತು ಪ್ರತ್ಯಯಗಳು ಇವೆಯೋ, ಅವುಗಳಲ್ಲಿ ಯಾವುದಾದರೂ ಧಾತುವು ತಿಳಿಯಬರುವುದಾದರೆ, ನವೀನ ಪ್ರತ್ಯಯದ ಕಲ್ಪನೆ ಮಾಡಿಕೊಳ್ಳಬೇಕು ;

ಮತ್ತು ಯಾವುದಾದರೂ ಪ್ರತ್ಯಯವು ತಿಳಿಯಬರುವುದಾದರೆ, ನವೀನ ಧಾತುವಿನ ಕಲ್ಪನೆ ಮಾಡಿಕೊಳ್ಳಬೇಕು!

ಏತದೂಹನಂ ಕ್ವ ಕಥಂ ಚ ಕರ್ತ್ತವ್ಯಮಿತ್ಯ-ತ್ರಾಹ_

ಈ ಊಹೆಯು ಎಲ್ಲಿ ಮತ್ತು ಯಾವ ರೀತಿಯಲ್ಲಿ ಮಾಡಲ್ಪಡಬೇಕು? ಎಂಬುದಕ್ಕೆ ಇಲ್ಲಿ ಉತ್ತರವೇನೆಂದರೆ_

"ಸಂಜ್ಞಾಸು ಧಾತುರೂಪಾಣಿ ಪ್ರತ್ಯಯಾಶ್ಚ ತತಃ ಪರೇ ।
ಕಾರ್ಯ್ಯಾದ್ ವಿದ್ಯಾದನುಬಂಧಮೇತಚ್ಛಾಸ್ತ್ರಮುಣಾದಿಷು ॥"

[ಅರ್ಥ:_ "ಸಂಜ್ಞಾಶಬ್ದಗಳಲ್ಲಿ [ಮೊದಲು] ಧಾತುರೂಪಗಳೂ ಮತ್ತು [ಅವುಗಳ] ಪರದಲ್ಲಿ ಪ್ರತ್ಯಯಗಳೂ [ಊಹಿಸಲ್ಪಡಬೇಕು!] ಕಾರ್ಯದಿಂದ ಅನುಬಂಧವನ್ನು ತಿಳಿಯಬೇಕು! ಉಣಾದಿ[ಪ್ರತ್ಯಯ]ಗಳ ವಿಷಯದಲ್ಲಿ ಇದು ವಿಧಾಯಕವಾಗಿದೆ!"]

[ಇತಿ ಮಹಾಭಾಷ್ಯೇ (೩. ೩. ೧).]

ಹೀಗೆ, ಮಹಾಭಾಷ್ಯ(೩. ೩. ೧)ದಲ್ಲಿದೆ.

ಭಾಷ್ಯಮ್_

(ಸಂಜ್ಞಾಸು.) ಸಂಜ್ಞಾಶಬ್ದೇಷು ಧಾತುರೂಪಾಣಿ ಪೂರ್ವಮೂಹ್ಯಾನಿ ಪರೇ ಚ ಪ್ರತ್ಯಯಾಃ.

(ಕಾರ್ಯ್ಯಾದ್.) ಕಾರ್ಯ್ಯಮಾಶ್ರಿತ್ಯ ಧಾತು-ಪ್ರತ್ಯಯಾನುಬಂಧಾನ್ ಜಾನೀಯಾತ್.

ಭಾಷ್ಯ_

(ಸಂಜ್ಞಾಸು.) ಸಂಜ್ಞಾಶಬ್ದಗಳಲ್ಲಿ ಮೊದಲು ಧಾತು ರೂಪಗಳು ಊಹಿಸಲ್ಪಡಬೇಕು! ಮತ್ತು ನಂತರ, ಪ್ರತ್ಯಯಗಳು!

(ಕಾರ್ಯ್ಯಾದ್.) ಕಾರ್ಯವನ್ನು ಆಶ್ರಯಿಸಿಕೊಂಡು, ಧಾತು, ಪ್ರತ್ಯಯ, [ಹಾಗೂ ಅವುಗಳ] ಅನುಬಂಧ ಗಳನ್ನು* ತಿಳಿದುಕೊಳ್ಳಬೇಕು!

ಅನುಬಂಧದ ಕಲ್ಪನೆ

ಅಂದರೆ, **ಎರಡನೆಯ ಕಲ್ಪನೆ** ಕೂಡ, ಏನೆಂದರೆ_

ಆ ಶಬ್ದಗಳಲ್ಲಿ ಯಾವ ಅನುಬಂಧದ ಕಾರ್ಯವು ಕಾಣಬರುತ್ತದೋ, ಅಂತಹುದೇ **ಧಾತು** ಅಥವಾ **ಪ್ರತ್ಯಯವನ್ನು** ಅನುಬಂಧಸಹಿತವಾಗಿ ಕಲ್ಪಿಸಿಕೊಳ್ಳಬೇಕು!

ಉದಾಹರಣೆಗಾಗಿ_

ಯಾವುದಾದರೂ ಆದ್ಯುದಾತ್ತ ಶಬ್ದವಿದ್ದರೆ, ಅದರಲ್ಲಿ **'ಞ್'** ಅಥವಾ **'ನ್'** ಅನುಬಂಧಸಹಿತವಾದ ಪ್ರತ್ಯಯವಿರುತ್ತದೆ, ಎಂದು ತಿಳಿಯಬೇಕು!

ಈ ಕಲ್ಪನೆಯನ್ನು ಸರ್ವತ್ರ ಮಾಡಲಾರಂಭಿಸಬಾರದು! ಆದರೆ, ಯಾವ ಸಂಜ್ಞಾಶಬ್ದಗಳು ಲೋಕ[ದಲ್ಲಿ ಮತ್ತು ವೈದಿಕಶಬ್ದಗಳು] ವೇದದಲ್ಲಿ ಪ್ರಸಿದ್ಧವಾಗಿವೆಯೋ, ಅವುಗಳ ಅರ್ಥಗಳನ್ನು ತಿಳಿಯುವುದಕ್ಕಾಗಿ, ಶಬ್ದಗಳ ಆದಿಯ ಅಕ್ಷರಗಳಲ್ಲಿ ಧಾತುವಿನ [ಅರ್ಥದ], ಮತ್ತು ಅಂತದಲ್ಲಿ ಪ್ರತ್ಯಯದ [ಅರ್ಥದ] ಕಲ್ಪನೆ ಮಾಡಿಕೊಳ್ಳ ಬೇಕು!

ಈ ಪ್ರಕಾರವಾಗಿ ಆ ಶಬ್ದಗಳ ಅರ್ಥಗಳನ್ನು ವಿಚಾರ ಮಾಡಬೇಕು!

---

* **ಅನುಬಂಧ,** ಎಂದರೆ ಸಮೂಹದಲ್ಲಿನ (ಪ್ರತ್ಯಾಹಾರ)ವರ್ಣ ಗಳ, ಅಥವಾ ಧಾತುವಿನ, ಅಥವಾ ಪ್ರತ್ಯಯದ ಸೀಮೆಯನ್ನು ಸೂಚಿಸುವ ವರ್ಣ.

ಉದಾಹರಣೆಗೆ_

'ಅಚ್' ನಲ್ಲಿ **ಚ್**; **'ಡುಕೃಞ್'** ನಲ್ಲಿ **ಞ್**; **'ಕ್ವಚ್'** ನಲ್ಲಿ **ಚ್**; ಇತ್ಯಾದಿ _ಅನು.

ಶಬ್ದಸಾಗರವನ್ನು ದಾಟುವುದಕ್ಕಾಗಿ ಧಾತು-ಪ್ರತ್ಯಯವಿಧಾನ

ಏತತ್ ಸರ್ವಂ ಕಾರ್ಯ್ಯಮುಣಾದಿಷು ಬೋಧ್ಯಮ್ ॥ ೫೫ ॥

ಈ ಎಲ್ಲ ಕಾರ್ಯವನ್ನೂ ಉಣಾದಿ[ಪ್ರತ್ಯಯ]ಗಳ ವಿಷಯದಲ್ಲಿ ತಿಳಿಯಬೇಕು!

ಅಂದರೆ, ಋಷಿಗಳ ಈ ಎಲ್ಲಾ ವ್ಯವಸ್ಥೆಯೂ ಏಕಿದೆಯೆಂದರೆ_

ಶಬ್ದಸಾಗರವು ಅಗಾಧವಾಗಿದೆ! ಇದರ ಆಳವು ವ್ಯಾಕರಣದಿಂದ ಸಿಗಲಾರದು!

ಶಬ್ದಸಾಗರವನ್ನು ದಾಟಿಹೋಗುವಂತಹ, ವ್ಯಾಕರಣವನ್ನು ಏಕೆ ರಚಿಸಲಿಲ್ಲ, ಎಂದು ಯಾರಾದರೂ ಕೇಳಿದರೆ_ [ಅಂತಹ] ಎಷ್ಟೇ ಗ್ರಂಥಗಳನ್ನು ರಚಿಸಿದರೂ, ಮತ್ತು ಜನ್ಮ-ಜನ್ಮಾಂತರಗಳ ಪೂರ್ತಿ ಓದಿದರೂ ಕೂಡ, ದಾಟಿಹೋಗುವುದು ದುರ್ಲಭವಾಗುತ್ತಿತ್ತು, ಎಂದು ತಿಳಿಯಬೇಕು!

ಆದುದರಿಂದ, ಶಬ್ದಗಳ ವ್ಯವಸ್ಥೆಯು ತಿಳಿದುಬಿಡಲಿ, ಎಂದು ಮೇಲೆ ಹೇಳಿದ ಎಲ್ಲ ಪ್ರಬಂಧವನ್ನೂ ಋಷಿಗಳು ಮಾಡಿದ್ದಾರೆ! [೫೫]

ಇತಿ ವ್ಯಾಕರಣನಿಯಮವಿಷಯಃ ॥

ಇಲ್ಲಿಗೆ ವ್ಯಾಕರಣ-ನಿಯಮಗಳ ವಿಷಯವು ಮುಗಿಯಿತು. [೩೩]

(೩೪) ಅಲಂಕಾರ

ಅಥಾಲಂಕಾರವಿಷಯಃ ಸಂಕ್ಷೇಪತಃ

ಈಗ, ಸಂಕ್ಷೇಪವಾಗಿ ಅಲಂಕಾರದ ವಿಷಯ!

ಅಥಾಲಂಕಾರಭೇದಾಃ ಸಂಕ್ಷೇಪತೋ ಲಿಖ್ಯಂತೇ.

ಈಗ, ಅಲಂಕಾರದ ಭೇದಗಳು ಸಂಕ್ಷೇಪವಾಗಿ ಬರೆಯಲ್ಪಡುತ್ತವೆ.

ಉಪಮಾಲಂಕಾರ!

ತತ್ರ ತಾವದುಪಮಾಲಂಕಾರೋ ವ್ಯಾಖ್ಯಾಯತೇ.

ಅವುಗಳಲ್ಲಿ ಉಪಮಾಲಂಕಾರವು ವ್ಯಾಖ್ಯಾನ ಮಾಡಲ್ಪಡುತ್ತದೆ_

ಅಸ್ಯೋದಾಹರಣಮ್_

ಇದರ ಉದಾಹರಣೆ_

ಅಂದರೆ, **ಪೂರ್ಣೋಪಮಾ**[ಲಂಕಾರ]ದ ಉದಾಹರಣೆ ಏನೆಂದರೆ_

ಸ ನಃ ಪಿತೇವ ಸೂನವೇಽಗ್ನೇ ಸೂಪಾಯನೋ ಭವ

[ಋಗ್ವೇದೇ ೧. ೧. ೯]

[ಅರ್ಥ:_ "ಹೇಗೆ, ತಂದೆಯು ತನ್ನ ಮಗನಿಗೆ ಅತ್ಯಂತ ಸಮೀಪವಾಗಿ ದೊರಕುತ್ತಾನೋ, ಹಾಗೆಯೇ, ಹೇ ಅಗ್ನಿಯೇ! ಆ ನೀನೂ ಕೂಡ, ನಮಗೆ ಅತ್ಯಂತ ಸಮೀಪವಾಗಿ ದೊರಕುವಂತಹವನಾಗು!"

(ಋಗ್ವೇದಃ ೧. ೧. ೯)]

ಪೂರ್ಣೋಪಮಾ ಚತುರ್ಭಿರುಪಮೇಯೋಪಮಾನವಾಚಕಸಾಧಾರಣಧರ್ಮೈರ್ಭವತಿ.

ಪೂರ್ಣೋಪಮಾ[ಲಂಕಾರವು] ನಾಲ್ಕು ಬಗೆಯ **ಉಪಮೇಯ-ಉಪಮಾನವಾಚಕ-ಸಾಧಾರಣಧರ್ಮ**ಗಳಿಂದ ಕೂಡಿರುತ್ತದೆ.

ಅಂದರೆ, ಅದರ ಲಕ್ಷಣವೇನೆಂದರೆ, ಅದು ನಾಲ್ಕು ಪದಾರ್ಥಗಳಿಂದ ಆಗುತ್ತದೆ_

ಒಂದು, **ಉಪಮಾನ**; ಎರಡನೆಯದು **ಉಪಮೇಯ**; ಮೂರನೆಯದು **ಉಪಮಾವಾಚಕ**; ಮತ್ತು ನಾಲ್ಕನೆಯದು, **ಸಾಧಾರಣಧರ್ಮ**!

ಇವುಗಳಲ್ಲಿ _

(೧) **ಉಪಮಾನ**

ಯಾವ ಪದಾರ್ಥದ ಉಪಮೆ ಕೊಡಲಾಗುತ್ತದೋ, ಅದಕ್ಕೆ **'ಉಪಮಾನ,'**[1] ಎಂದು ಹೇಳುತ್ತಾರೆ.

(೨) **ಉಪಮೇಯ**

ಯಾವುದನ್ನು ಉಪಮಾನಕ್ಕೆ ಸಮಾನವಾಗಿ ವರ್ಣನೆ ಮಾಡುತ್ತಾರೋ, ಅದಕ್ಕೆ **'ಉಪಮೇಯ'**,[2] ಎಂದು ಹೇಳುತ್ತಾರೆ.

(೩) **ಉಪಮಾವಾಚಕ**

ಯಾವುದರಲ್ಲಿ _ **ತುಲ್ಯ**, **ಸಮಾನ**, **ಸದೃಶ**, **ಇವ** [=ಅಂತೆ], **ವತ್** _ ಈ ಮೊದಲಾದುವು ಶಬ್ದಗಳ ಮಧ್ಯೆ ಬರುವುದರಿಂದ, ಯಾವುದೋ ಬೇರೆ ಪದಾರ್ಥದ ತಿಳಿವಳಿಕೆಯನ್ನುಂಟು ಮಾಡುತ್ತದೋ, ಅದಕ್ಕೆ **'ಉಪಮಾವಾಚಕ'**,[3] ಎಂದು ಹೇಳುತ್ತಾರೆ.

(೪) **ಸಾಧಾರಣಧರ್ಮ**

ಯಾವ ಧರ್ಮವು ಉಪಮಾನ ಮತ್ತು ಉಪಮೇಯ _ ಈ ಎರಡರಲ್ಲೂ ಸಮಾನವಾಗಿ ವಿದ್ಯಮಾನವಾಗಿರುತ್ತದೋ, ಅದು **'ಸಾಧಾರಣಧರ್ಮ'**,[4] ಆಗಿರುತ್ತದೆ.

[ಇದರಲ್ಲಿ] ಈ ನಾಲ್ಕೂ ವಿದ್ಯಮಾನವಾಗಿರುವುದರಿಂದ, ಇದು **'ಪೂರ್ಣೋಪಮಾ'**, ಎನಿಸುತ್ತದೆ.

ಅಂದರೆ, ಅದರಲ್ಲಿ ಇವೆಲ್ಲವೂ ವಿದ್ಯಮಾನವಾಗಿರುತ್ತವೆ.

ಉಪಮಾಲಂಕಾರದ ಎಂಟು ಭೇದಗಳು

ಉಕ್ತಾನಾಮ್ಯೈಕಕಶೋಽನುಪಾದಾನೇಽಷ್ಟಧಾ ಲುಪ್ತೋಪಮಾ.

[ಮೇಲೆ] ಹೇಳಿದವುಗಳಲ್ಲಿ ಒಂದೊಂದರ ತ್ಯಾಗವಾದಾಗ, **'ಲುಪ್ತೋಪಮಾ'**, ಎಂದು ಎಂಟು ವಿಧವಾಗುತ್ತದೆ.

ಅಂದರೆ, ಇವುಗಳಲ್ಲಿ ಒಂದೊಂದು ಲೋಪವಾಗುವುದರಿಂದ, ಮೊದಲು ಹೇಳಿದ ಎಂಟು ಭೇದಗಳಾಗಿಬಿಡುತ್ತವೆ.

[1] **'ಸ ನಃ ಪಿತೇವ.'** ಈ ಉದಾಹರಣೆಯಲ್ಲಿ _**'ಪಿತಾ'**, (ಎಂದರೆ ತಂದೆಯು) ಉಪಮಾನ _**ಆನು.**

[2] **'ಸಃ'**, (ಎಂದರೆ, ಅವನು) ಉಪಮೇಯ _**ಆನು.**

[3] ಈ ಉದಾಹರಣೆಯಲ್ಲಿ _ **'ಇವ'**, ಉಪಮಾನವಾಚಕ _**ಆನು.**

[4] ತಂದೆಯ ಮತ್ತು ಪುತ್ರನ ಮಧ್ಯದ ಆತ್ಮೀಯತ್ವ ಸಾಧಾರಣಧರ್ಮ _**ಆನು.**

ಅಂದರೆ_

೧. ವಾಚಕಲುಪ್ತಾ ೨. ಧರ್ಮಲುಪ್ತಾ ೩. ಧರ್ಮವಾಚಕಲುಪ್ತಾ ೪. ವಾಚಕೋಪಮೇಯಲುಪ್ತಾ ೫. ಉಪಮಾನಲುಪ್ತಾ ೬. ವಾಚಕೋಪಮಾನಲುಪ್ತಾ ೭. ಧರ್ಮೋಪಮಾನಲುಪ್ತಾ ಮತ್ತು ೮. ಧರ್ಮೋಪಮಾನವಾಚಕಲುಪ್ತಾ.

ಈ ಎಂಟಕ್ಕಿಂತ ಪೂರ್ಣೋಪಮಾಲಂಕಾರವು ಬೇರೆಯೇ ಆಗಿರುತ್ತದೆ.

ಲುಪ್ತೋಪಮಾಲಂಕಾರಗಳ ಉದಾಹರಣೆಗಳು

ತತ್ರ_ | ಅವುಗಳಲ್ಲಿ_

ವಾಚಕಲುಪ್ತೋದಾಹರಣಮ್_ | (೧) ವಾಚಕಲುಪ್ತಾ-[ಉಪಮಾ]ಲಂಕಾರದ ಉದಾಹರಣೆ_

ಭೀಮ ಇವ ಬಲೀ ಭೀಮಬಲೀ[1]

॥೧॥ [೧]

ಧರ್ಮಲುಪ್ತೋದಾಹರಣಮ್_ | (೨) ಧರ್ಮಲುಪ್ತಾ-[ಉಪಮಾ]ಲಂಕಾರದ ಉದಾಹರಣೆ_

ಕಮಲನೇತ್ರಃ[2]

॥೨॥ [೨]

ಧರ್ಮವಾಚಕಲುಪ್ತೋದಾಹರಣಮ್_ | (೩) ಧರ್ಮವಾಚಕಲುಪ್ತಾ-[ಉಪಮಾ]ಲಂಕಾರದ ಉದಾಹರಣೆ_

ವ್ಯಾಘ್ರ ಇವ ಪುರುಷಃ ಪುರುಷವ್ಯಾಘ್ರಃ[3]

॥೩॥ [೩]

---

[1] **'ಭೀಮಬಲೀ'** ; ಎಂದರೆ, ಭೀಮನಂತೆ ಬಲಶಾಲಿ!

ಇಲ್ಲಿ **'ಇವ'** [=ಅಂತೆ], ಎಂಬ ಉಪಮಾನವಾಚಕವು ಲುಪ್ತವಾಗಿದೆ _ಅನು.

[2] **'ಕಮಲನೇತ್ರ'**, ಎಂದರೆ, ಕಮಲಕ್ಕೆ ಸಮಾನವಾದ ಕಣ್ಣುಗಳನ್ನುಳ್ಳವನು!

ಇಲ್ಲಿ ಕಮಲವೂ [ಉಪಮಾ] ಇದೆ. ನೇತ್ರವೂ [ಉಪಮೇಯ] ಇದೆ. ಆದರೆ, ಸಾಧಾರಣಧರ್ಮವಾದ ಕಮಲದಂತಹ **'ಸೌಂದರ್ಯ'** ಶಬ್ದವು ಲುಪ್ತವಾಗಿದೆ _ಅನು.

[3] **'ಪುರುಷವ್ಯಾಘ್ರ'**, ಎಂದರೆ ವ್ಯಾಘ್ರದಂತಿರುವ ಪುರುಷ!

ಇಲ್ಲಿ ಉಪಮಾವಾಚಕವಾದ **'ಇವ'** ಮತ್ತು ಸಾಧಾರಣ[=ಸಮಾನ] ಧರ್ಮವಾದ **'ಪರಾಕ್ರಮ'**ಶಬ್ದ _ ಎರಡೂ ಲುಪ್ತವಾಗಿವೆ _ಅನು.

ವಾಚಕೋಪಮೇಯಲುಪ್ತೋದಾಹರಣಮ್_ (೪) ವಾಚಕೋಪಮೇಯಲುಪ್ತಾ-[ಉಪಮಾ]ಲಂಕಾರದ ಉದಾಹರಣೆ_

ವಿದ್ಯಯಾ ಪಂಡಿತಾಯಂತೇ [4]

॥ ೪ ॥ [೪]

ಉಪಮಾನಲುಪ್ತಾ ॥ ೫ ॥ (೫) ಉಪಮಾನಲುಪ್ತಾ-[ಉಪಮಾ]ಲಂಕಾರ [೫]

ವಾಚಕೋಪಮಾನಲುಪ್ತಾ ॥ ೬ ॥ (೬) ವಾಚಕೋಪಮಾನಲುಪ್ತಾ-[ಉಪಮಾ]ಲಂಕಾರ [೬]

ಧರ್ಮೋಪಮಾನಲುಪ್ತಾ ॥ ೭ ॥ (೭) ಧರ್ಮೋಪಮಾನಲುಪ್ತಾ-[ಉಪಮಾ]ಲಂಕಾರ [೭]

ಧರ್ಮೋಪಮಾನವಾಚಕಲುಪ್ತಾ ॥ ೮ ॥ (೮) ಧರ್ಮೋಪಮಾನವಾಚಕಲುಪ್ತಾ-[ಉಪಮಾ]ಲಂಕಾರ [೮]

ಆಸಾಮುದಾಹರಣಮ್_ ಈ [ನಾಲ್ಕರ ಒಟ್ಟಿಗೆ] ಉದಾಹರಣೆಯೇನೆಂದರೆ_

ಕಾಕತಾಲೀಯೋ ಗುರುಶಿಷ್ಯಸಮಾಗಮಃ [5-8]

ಏವಮಷ್ಟವಿಧಾ ॥ ೧ ॥ ಹೀಗೆ, ಎಂಟು ವಿಧವಾಗಿದೆ.

ಅಂದರೆ, ಮೊದಲನೆಯದಾದ **ಉಪಮಾ-ಲಂಕಾರದ** ಈ ಎಂಟು ಭೇದಗಳಿವೆ. [೧]

---

[4] 'ವಿದ್ಯಯಾ ಪಂಡಿತಾಯಂತೇ', ಎಂದರೆ 'ವಿದ್ಯಯಾ ಸ್ವಯಂ ಪಂಡಿತಾ ಇವ ದರ್ಶಯಂತಿ' [=ವಿದ್ಯೆಯಿಂದ ತಮ್ಮನ್ನು ಪಂಡಿತರಂತೆ ತೋರಿಸಿಕೊಳ್ಳುತ್ತಾರೆ!

ಇಲ್ಲಿ ಉಪಮೇಯವಾದ **'ಸ್ವಯಂ'** ಮತ್ತು ಉಪಮಾವಾಚಕವಾದ **'ಇವ'**_ ಎರಡೂ ಲೋಪವಾಗಿವೆ _ಅನು.

[5-8] **'ಕಾಕತಾಲೀಯ ಇವ ಗುರುಶಿಷ್ಯಸಮಾಗಮಃ.'** ಎಂದರೆ, **'ಕಾಕತಾಲೀಯ'** ನ್ಯಾಯದಂತೆ ಗುರುಶಿಷ್ಯರ ಭೇಟಿಯಾಗಿದೆ!'

'ಕಾಕಗಮನಮಿವ ತಾಲಪತನಮಿವ ಕಾಕತಾಲಮ್.'

ಅಂದರೆ_ ಕಾಗೆಯು ತಾಳೆಯ ಮರದ ಕೆಳಗೆ ಹೋಗಿ ಕುಳಿತಿತು. ಆಗ, ಮರದಿಂದ ಹಣ್ಣು ಅದರ ಮುಂದೆ ಬಿದ್ದಿತು. ಇವೆರಡೂ ಕ್ರಿಯೆಗಳು ನಡೆದಂತೆ ಇರುವುದು **'ಕಾಕತಾಲ!'**

ಇಲ್ಲಿ ಸಂಯೋಗದಿಂದ, ತಿನ್ನುವುದಕ್ಕಾಗಿ ಕಾಗೆಯ ಮುಂದೆಯೇ ಹಣ್ಣು ಬಿದ್ದಿತು! ಆಗ, ಕಾಗೆಯು ಹಣ್ಣನ್ನು ತಿಂದಿತು, ಎಂದರ್ಥ. ಎಂದರೆ, ಗುರು-ಶಿಷ್ಯರ ಆಕಸ್ಮಾತ್ ಭೇಟಿಯಿಂದ, ಶಿಷ್ಯನು ಗುರುವಿನಿಂದ ವಿದ್ಯೆ ಕಲಿತನು, ಎಂದು ಅಭಿಪ್ರಾಯ.

ಇಲ್ಲಿ ಐದನೆಯ, ಉಪಮಾನವಾದ ಉಪಭೋಗ, ಎಂದರೆ **'ಹಣ್ಣು ತಿನ್ನುವುದು'** ಲುಪ್ತವಾಗಿದೆ.

ನಂತರ, 'ಕಾಕತಾಲೀಯ' ಮತ್ತು 'ಗುರುಶಿಷ್ಯಸಮಾಗಮ'ದ ನಡುವಿನ 'ಇವ', ಎಂಬುದು ಉಪಮಾವಾಚಕವಾಗಿದೆ. ಕಾಗೆ ಮತ್ತು ಹಣ್ಣಿನ ಸಂಗವು 'ಉಪಮಾನ'ವಾಗಿದೆ. ಇವೆರಡೂ ಲುಪ್ತವಾಗಿರುವುದಿಂದ, ಆರನೆಯದಾದ, **ವಾಚಕೋಪಮಾನ ಲುಪ್ತವಾಗಿದೆ.** →

ರೂಪಕಾಲಂಕಾರ!

ಅತೋಽಗ್ರೇ ರೂಪಕಾಲಂಕಾರಃ .

ಇದರ ಮುಂದೆ, (ಎರಡನೆಯದಾದ) **ರೂಪಕಾಲಂಕಾರ!**

ಸ ಚೋಪಮಾನಸ್ಯಾಭೇದತಾದ್ರೂಪ್ಯಾಭ್ಯಾಮ್ ಅಧಿಕನ್ಯೂನೋಭಯಗುಣೈರುಪಮೇಯಸ್ಯ ಪ್ರಕಾಶನಂ ರೂಪಲಂಕಾರಃ .

ಮತ್ತು ಅದು ಉಪಮಾನದ **ಅಭೇದ,** ಹಾಗೂ **ತಾದ್ರೂಪ್ಯ**ಗಳ ಮೂಲಕ **ಅಧಿಕ, ನ್ಯೂನ,** ಹಾಗೂ **ಉಭಯ**ಗುಣಗಳಿಂದ, ಉಪಮೇಯದ ಪ್ರಕಾಶನ ಮಾಡುವುದು '**ರೂಪಕಾಲಂಕಾರ**'ವಾಗಿರುತ್ತದೆ.

ಅಂದರೆ, ಇದರ ಲಕ್ಷಣವೇನೆಂದರೆ_ ಉಪಮೇಯವನ್ನು ಉಪಮಾನವನ್ನಾಗಿ ಮಾಡಿಬಿಡುವುದು, ಮತ್ತು ಅದರಲ್ಲಿ ಭೇದ ಇಡದಿರುವುದು!

ರೂಪಕಾಲಂಕಾರದ ಆರು ಭೇದಗಳು

ಸ ಚ ಷಡ್ವಿಧಾ_

ಮತ್ತು ಅದು ಆರು ವಿಧದವಾಗಿರುತ್ತದೆ.

ಅಂದರೆ, '**ರೂಪಕಾಲಂಕಾರ**'ದ ಆರು ಭೇದಗಳು ಯಾವುವೆಂದರೆ_

೧. **ಅಧಿಕಾಭೇದರೂಪಕ**

೨. **ನ್ಯೂನಾಭೇದರೂಪಕ**

೩. **ಅನುಭಯಾಭೇದರೂಪಕ**

೪. **ಅಧಿಕತಾದ್ರೂಪ್ಯರೂಪಕ**

೫. **ನ್ಯೂನತಾದ್ರೂಪ್ಯರೂಪಕ** ಮತ್ತು

೬. **ಅನುಭಯತಾದ್ರೂಪ್ಯರೂಪಕ!**

→ '**ಗುರು-ಶಿಷ್ಯರ ಸಮಾಗಮ**'ವು ಉಪಮೇಯವಾಗಿದೆ.

ನಂತರ, ಏಳನೆಯ, **ಸಾಧಾರಣಧರ್ಮೋಪಮಾನ**ವಾದ '**ಕಾಕಗಮನ**'ವೂ ಲುಪ್ತವಾಗಿದೆ.

ನಂತರ, ಎಂಟನೆಯ, **ಸಾಧಾರಣಧರ್ಮೋಪಮಾನವಾಚಕ**ವಾದ 'ವಿದ್ಯೆ ಕಲಿಯುವುದು' ಲುಪ್ತವಾಗಿದೆ _ಅನು.

ರೂಪಕಾಲಂಕಾರದ ಉದಾಹರಣೆಗಳು

ತತ್ರ_

ಅವುಗಳಲ್ಲಿ_

ಅಧಿಕಾಭೇದರೂಪಕೋದಾಹರಣಮ್_

(೧) ಅಧಿಕಾಭೇದರೂಪಕದ ಉದಾಹರಣೆ_

ಅಯಂ ಹಿ ಸವಿತಾ ಸಾಕ್ಷಾದ್ ಯೇನ ಧ್ವಾಂತಂ ವಿನಾಶ್ಯತೇ

ಅಂದರೆ, ಈ ಮನುಷ್ಯನು ಸಾಕ್ಷಾತ್ ಸೂರ್ಯನಾಗಿದ್ದಾನೆ.[1] ಏಕೆಂದರೆ, ತನ್ನ ವಿದ್ಯಾರೂಪಪ್ರಕಾಶದಿಂದ ಅವಿದ್ಯಾರೂಪ ಅಂಧಕಾರದ ನಾಶವನ್ನು ನಿತ್ಯವೂ ಮಾಡುತ್ತಾನೆ!

ಪೂರ್ಣವಿದ್ಯ ಇತಿ ಶೇಷಃ ॥೧॥

(ಎಂದರೆ,) ಅವನು ಪೂರ್ಣವಿದ್ವಾಂಸನಾಗಿದ್ದಾನೆ, ಎಂದು ಉಳಿದ ಅರ್ಥ! [೧]

ನ್ಯೂನಾಭೇದರೂಪಕೋದಾಹರಣಮ್_

(೨) ನ್ಯೂನಾಭೇದರೂಪಕದ ಉದಾಹರಣೆ_

ಅಯಂ ಪತಂಜಲಿಃ ಸಾಕ್ಷಾದ್ ಭಾಷ್ಯಸ್ಯ ಕೃತಿನಾ ವಿನಾ[2]

॥ ೨ ॥ [೨]

ಅನುಭಯಾಭೇದರೂಪಕೋದಾಹರಣಮ್_

(೩) ಅನುಭಯಾಭೇದರೂಪಕದ ಉದಾಹರಣೆ_

ಈಶಃ ಪ್ರಜಾಮವತ್ಯದ್ಯ ಸ್ವೀಕೃತ್ಯ ಸಮನೀತಿತಾಮ್[3]

॥ ೩ ॥ [೩]

ಅಧಿಕತಾದ್ರೂಪ್ಯರೂಪಕೋದಾಹರಣಮ್_

(೪) ಅಧಿಕತಾದ್ರೂಪ್ಯರೂಪಕದ ಉದಾಹರಣೆ_

ವಿದ್ಯಾನಂದೇ ಹಿ ಸಂಪ್ರಾಪ್ತೇ ರಾಜ್ಯಾನಂದೇನ ಕಿಂ ತದಾ?[4]

॥ ೪॥ [೪]

---

[1] ಈ ರೂಪಕದಲ್ಲಿ ಗುಣ ಹೆಚ್ಚಾಗಿದೆ. ಏಕೆಂದರೆ, ಇದು 'ಪೂರ್ಣವಿದ್ವಾಂಸನಾಗಿದ್ದಾನೆ', ಎಂಬ ಅರ್ಥದಲ್ಲಿದೆ. _ಅನು.

[2] ಈ ರೂಪಕದಲ್ಲಿ ಗುಣ ಕಡಿಮೆ ಇದೆ. ಏಕೆಂದರೆ_ 'ಮಹಾಭಾಷ್ಯಕಾರನನ್ನು ಬಿಟ್ಟರೆ, ಇವನೇ ಸಾಕ್ಷಾತ್ ಪತಂಜಲಿ!' _ಅನು.

[3] ಇಲ್ಲಿ ಗುಣ ಹೆಚ್ಚೂ ಇಲ್ಲ; ಕಡಿಮೆಯೂ ಇಲ್ಲ. ಏಕೆಂದರೆ, ಇಲ್ಲಿ_ 'ಸಮಾನನೀತಿಯನ್ನು ಅಂಗೀಕರಿಸಿ, ಸ್ವಾಮಿಯು ಇಂದು ಪ್ರಜೆಗಳನ್ನು ಪಾಲಿಸುತ್ತಾನೆ', ಎಂಬ ಅರ್ಥ ಇದೆ. _ಅನು.

[4] ಇಲ್ಲಿ ಹೆಚ್ಚು ಗುಣದ ವರ್ಣನೆ ಇದೆ. ಏಕೆಂದರೆ_ 'ವಿದ್ಯೆಯಿಂದ ಆನಂದವು ಸಿಕ್ಕಿದ ಮೇಲೆ, ಆಗ ರಾಜ್ಯದಿಂದ ಸಿಗುವ ಆನಂದದಿಂದ ಏನಾಗಬೇಕು?' ಎಂಬ ಅರ್ಥವು ಇಲ್ಲಿದೆ. _ಅನು.

ನ್ಯೂನತಾದ್ರೂಪ್ಯರೂಪಕೋದಾಹರಣಮ್_ (೫) ನ್ಯೂನತಾದ್ರೂಪ್ಯರೂಪಕದ ಉದಾಹರಣೆ_

ಸಾಧ್ವೀಯಂ ಸುಖದಾ ನೀತಿರಸೂರ್ಯ್ಯಪ್ರಭವಾ ಮತಾ [5]

॥ ೫ ॥ [೫]

ಅನುಭಯತಾದ್ರೂಪ್ಯರೂಪಕೋದಾಹರಣಮ್_ (೬) ಅನುಭಯತಾದ್ರೂಪ್ಯರೂಪಕದ ಉದಾಹರಣೆ_

ಅಯಂ ಘನಾವೃತಾತ್ ಸೂರ್ಯ್ಯಾದ್ ವಿದ್ಯಾಸೂರ್ಯ್ಯೋ ವಿಭಜ್ಯತೇ [6]

॥ ೬ ॥ [೬]

ಶ್ಲೇಷಾಲಂಕಾರ !

ಮೂರನೆಯದು **'ಶ್ಲೇಷಾಲಂಕಾರ'**, ಎಂದು ಕರೆಯಲ್ಪಡುತ್ತದೆ.

ಅನೇಕಾರ್ಥಶಬ್ದವಿನ್ಯಾಸಃ ಶ್ಲೇಷಃ .

ಅನೇಕ ಅರ್ಥಗಳನ್ನು ಕೊಡುವ ಶಬ್ದವಿನ್ಯಾಸವು **'ಶ್ಲೇಷ'**[**ಅಲಂಕಾರ,**] ಎನಿಸುತ್ತದೆ.

ಅಂದರೆ, ಇದರ ಲಕ್ಷಣವೇನೆಂದರೆ_ ಯಾವುದಾದರೂ ವಾಕ್ಯದಿಂದ ಅಥವಾ ಶಬ್ದದಿಂದ ಅನೇಕ ಅರ್ಥಗಳು ಹೊರಟರೆ, ಅದು **'ಶ್ಲೇಷ'**, ಎಂದು ಕರೆಯಲ್ಪಡುತ್ತದೆ.

ಶ್ಲೇಷಾಲಂಕಾರದ ಮೂರು ಭೇದಗಳು

ಸ ಚ ತ್ರಿವಿಧಃ_

ಮತ್ತು ಅದು ಮೂರು ವಿಧದವಾಗಿರುತ್ತದೆ_ ಅಂದರೆ, ಅದಕ್ಕೆ ಮೂರು ಭೇದಗಳಿವೆ_

ಪ್ರಕೃತಾನೇಕವಿಷಯಃ , ಅಪ್ರಕೃತಾನೇಕವಿಷಯಃ , ಪ್ರಕೃತಾಪ್ರಕೃತಾನೇಕವಿಷಯಶ್ಚ .

೧. **ಪ್ರಕೃತಾನೇಕವಿಷಯ**

೨. **ಅಪ್ರಕೃತಾನೇಕವಿಷಯ** ಮತ್ತು_

೩. **ಪ್ರಕೃತಾಪ್ರಕೃತಾನೇಕವಿಷಯ**

ಅಂದರೆ, ಅದು **ಪ್ರಕೃತ**, **ಅಪ್ರಕೃತ** ಮತ್ತು **ಪ್ರಕೃತಾಪ್ರಕೃತ** ವಿಷಯಕವಾದುದು ಆಗಿರುತ್ತದೆ.

---

[5] ಇಲ್ಲಿ ಕಡಿಮೆ ಗುಣದ ವರ್ಣನೆ ಇದೆ. ಏಕೆಂದರೆ, ಇಲ್ಲಿ_ 'ಸೂರ್ಯನಿಂದ ಉತ್ಪನ್ನವಾಗದ ಈ ಸುಖದಾಯಕ ನೀತಿಯೇ ಸಾಧುವಾಗಿದೆ, ಎಂದು ಅಂಗೀಕರಿಸಲ್ಪಟ್ಟಿದೆ', ಎಂಬ ಅರ್ಥವಿದೆ. _ಅನು.

[6] ಇಲ್ಲಿ ಗುಣವು ಹೆಚ್ಚೂ ಇಲ್ಲ; ಕಡಿಮೆಯೂ ಇಲ್ಲ. ಏಕೆಂದರೆ, ಇಲ್ಲಿ _ 'ಮೋಡದಿಂದ ಕವಿದಿರುವ ಸೂರ್ಯನಿಗಿಂತ ಈ ವಿದ್ಯಾಸೂರ್ಯನೇ ಬೇರೆಯಾಗಿ ಕಂಗೊಳಿಸುತ್ತಿದ್ದಾನೆ!', ಎಂಬ ಅರ್ಥವಿದೆ. _ಅನು.

ಶ್ಲೇಷಾಲಂಕಾರದ ಉದಾಹರಣೆಗಳು

ತತ್ರ_	ಅವುಗಳಲ್ಲಿ_
ಪ್ರಕೃತವಿಷಯಸ್ಯೋದಾಹರಣಮ್_	(೧) ಪ್ರಕೃತವಿಷಯದ* ಉದಾಹರಣೆ_
ಯಥಾ_	ಹೇಗೆಂದರೆ_

ನವಕಂಬಲೋಽಯಂ ಮನುಷ್ಯಃ

	[ಇಲ್ಲಿ] **'ನವಕಂಬಲ'**_ ಈ ಶಬ್ದದಿಂದ ಎರಡು ಅರ್ಥಗಳು ಹೊರಟಿವೆ_
ಯತ್ರ ನವ ಕಂಬಲಾ ಯಸ್ಯ;	'ಯಾವನ ಬಳಿ ಒಂಬತ್ತು ಕಂಬಳಿಗಳಿವೆಯೋ', ಅವನು'; ಅಥವಾ_
ನವೋ ನೂತನೋ ವಾ ಕಂಬಲೋ ಯಸ್ಯ;	'ನವ, ಎಂದರೆ ಹೊಸದಾದ ಕಂಬಳಿ ಯಾವನದಾಗಿದೆಯೋ, ಅವನು';
ಇತಿ ದ್ವಾವರ್ಥೌ ಭವತಃ.	ಎಂದು ಎರಡು ಅರ್ಥಗಳಾಗುತ್ತವೆ!
ಯಥಾ ಚ_	ಮತ್ತೂ ಹೇಗೆಂದರೆ_

ಶ್ವೇತೋ ಧಾವತಿ [1]

ಅಲಂಬುಸಾನಾಂ ಯಾತಾ [2]

ತಥೈವ_	ಹಾಗೆಯೇ_

" ಅಗ್ನಿಮೀಳೇ " [3]

ಇತ್ಯಾದಿ.	ಈ ಮೊದಲಾದುವು ಇವೆ.

---

* ಪ್ರಸ್ತುತವಿಷಯ, ಎಂದರ್ಥ _ಅನು.

[1] ಎಂದರೆ_ 'ಶ್ವೇತ, ಎಂಬ ಹೆಸರಿನವನು ಓಡುತ್ತಿದ್ದಾನೆ.' ಅಥವಾ_ 'ಬಿಳಿಯ ಬಣ್ಣದ ಕುದುರೆ ಓಡುತ್ತಿದೆ'; ಅಥವಾ_ ಶ್ವಾ = ನಾಯಿಯು ಇತಃ = ಇಲ್ಲಿಂದ ಓಡುತ್ತಿದೆ, ಎಂದು ಮೂರು ಅಥವಾ ಅನೇಕ ಅರ್ಥಗಳಾಗುತ್ತವೆ _ಅನು.

[2] ಇಲ್ಲಿ ಅಲಂಬುಸ, ಎಂದರೆ ಹುಲ್ಲಿನ ಹೊರೆ, ಅಥವಾ ಕುಂಬಳಕಾಯಿಯ ಹೊರೆ, ಎಂದು ಎರಡರ್ಥ! _ಅನು.

[3] (ಋಗ್ವೇದ ೧.೧.೧). ಇಲ್ಲಿ 'ಅಗ್ನಿ', ಎಂದರೆ ಅಗ್ನಿಯ ಲಕ್ಷಣವನ್ನುಳ್ಳ ಮನುಷ್ಯ ಅಥವಾ ಪರಮಾತ್ಮಾ ಅಥವಾ ಬೆಂಕಿ, ಎಂದು ಅನೇಕ ಅರ್ಥ. 'ಪರಮಾತ್ಮನನ್ನು ಸ್ತುತಿಸುತ್ತೇನೆ' ಅಥವಾ 'ಬೆಂಕಿಯನ್ನು ವರ್ಣಿಸುತ್ತೇನೆ', ಎಂಬಂತಹ ಅರ್ಥಗಳಾಗುತ್ತವೆ. _ಅನು.

ಅಪ್ರಕೃತವಿಷಯಸ್ಯೋದಾಹರಣಮ್_ (೨) ಅಪ್ರಕೃತವಿಷಯದ* ಉದಾಹರಣೆ_

ಹರಿಣಾ ತ್ವದ್‌ಬಲಂ ತುಲ್ಯಂ ಕೃತಿನಾ ಹಿತಶಕ್ತಿನಾ [1]

ಅಥ ಪ್ರಕೃತಾಪ್ರಕೃತವಿಷಯೋದಾಹರಣಮ್_ (೩) ಈಗ, ಪ್ರಕೃತಾಪ್ರಕೃತವಿಷಯದ ಉದಾಹರಣೆ_

ಉಚ್ಚರನ್ ಭೂರಿಯಾನಾಢ್ಯಃ ಶುಶುಭೇ ವಾಹಿನೀಪತಿಃ [2]

'ಅದಿತಿ' ಶಬ್ದದ ಅನೇಕಾರ್ಥಗಳ ವೈದಿಕ ಉದಾಹರಣೆ

ವೇದಗಳಲ್ಲಿ 'ಅಗ್ನಿ', ['ಅದಿತಿ'] ಮೊದಲಾದ ಶಬ್ದಗಳಿಗೆ ಅನೇಕ-ಅನೇಕ ಅರ್ಥಗಳಿರುತ್ತವೆ. ಇದು ಶ್ಲೇಷಾಲಂಕಾರದ ವಿಷಯವೇ ಆಗಿರುತ್ತದೆ! ಉದಾಹರಣೆಗೆ_

[ಋಷಿಃ_ ಗೋತಮೋ ರಾಹೂಗಣಪುತ್ರಃ ; ದೇವತಾ_ ವಿಶ್ವೇದೇವಾಃ ; ಛಂದಃ_ ತ್ರಿಷ್ಟುಪ್; ಸ್ವರಃ_ ಧೈವತಃ]

ಅದಿತಿರ್ದ್ಯೌರದಿತಿರಂತರಿಕ್ಷಮ-
ದಿತಿರ್ಮಾತಾ ಸ ಪಿತಾ ಸ ಪುತ್ರಃ ।
ವಿಶ್ವೇ ದೇವಾ ಅದಿತಿಃ ಪಂಚ ಜನಾ
ಅದಿತಿರ್ಜಾತಮದಿತಿರ್ಜನಿತ್ವಮ್ ॥

[ಋಗ್ವೇದೇ ಮಂ. ೧, ಸೂ. ೮೯, ಮಂ. ೧೦]

---

* ಅಪ್ರಸ್ತುತವಿಷಯ, ಎಂದರ್ಥ _ಅನು.

[1] ಇಲ್ಲಿ 'ಹರಿಣಾ' ಅಪ್ರಕೃತವಿಷಯವಾಗಿದೆ. ಏಕೆಂದರೆ_ 'ಕ್ರಿಯಾಶಕ್ತಿಯುತವಾದ ನಿನ್ನ ಬಲವು ಸಿಂಹದ ಬಲಕ್ಕೆ ಸಮಾನವಾಗಿದೆ', ಎಂದು ಒಂದು ಅರ್ಥವಾಗುತ್ತದೆ. ಆದರೆ, ಹರಿ, ಎಂದರೆ ಸಿಂಹ, ಕುದುರೆ, ಸೂರ್ಯ, ಕಿರಣ, ಕೋತಿ_ ಈ ಮೊದಲಾದ ವಿವಿಧಾರ್ಥಗಳಿಂದ ಅನೇಕ ಅಭಿಪ್ರಾಯಗಳಾಗುತ್ತವೆ.

[2] ಇದು ಪ್ರಸ್ತುತ-ಅಪ್ರಸ್ತುತ ವಿಷಯದ ಉದಾಹರಣೆಯಾಗಿದೆ. 'ಯಾನಾಢ್ಯಃ', ಎಂಬುದು ಪ್ರಕೃತವಿಷಯ ; 'ಉಚ್ಚರನ್', ಎಂಬುದು ಅಪ್ರಕೃತವಿಷಯ.

'ಬಹಳ ರಥಗಳಿಂದ ಕೂಡಿದ ಸೇನಾಪತಿಯು ಮೇಲೆ ಹೋಗುತ್ತಾ [=ಗೆಲ್ಲುತ್ತಾ] ಶೋಭೆಯಿಂದ ಕಂಗೊಳಿಸಿದನು', ಎಂದು ಒಂದು ಅರ್ಥ. ಅಥವಾ_ 'ಕಿರಣಗಳ ಪತಿಯಾದ ಸೂರ್ಯನು ಮೇಲೇರುತ್ತಾ ಶೋಭಿಸುತ್ತಾನೆ,' ಎಂದು ಇನ್ನೊಂದು ಅರ್ಥ. ಅಥವಾ_ 'ಬಹಳ ನದಿಗಳಿಂದ ಕೂಡಿದ ಸಮುದ್ರವು ಅಲೆಗಳಿಂದ ಮೇಲೇರುತ್ತಾ ಶೋಭಿಸುತ್ತಿದೆ', ಎಂದು ಮೂರನೆಯ ಅರ್ಥ. ಹೀಗೆ, ವಿವಿಧಾರ್ಥಗಳಾಗುತ್ತವೆ. _ಅನು.

[ಅರ್ಥ:_ "ಅದಿತಿಯು 'ದ್ಯಾ' ಆಗಿದೆ. ಅದಿತಿಯು 'ಅಂತರಿಕ್ಷ'ವಾಗಿದೆ. ಅದಿತಿಯು 'ತಾಯಿ' ಆಗಿದೆ. ಅದು 'ತಂದೆ' ಆಗಿದೆ. ಅದು 'ಮಗ' ಆಗಿದೆ. 'ವಿದ್ವಾಂಸರು' ಅದಿತಿ ಆಗಿದ್ದಾರೆ. 'ಪಂಚಜನರು' ಅದಿತಿ ಆಗಿದ್ದಾರೆ. 'ಉತ್ಪನ್ನವಾದದ್ದು, ಹಾಗೂ ಉತ್ಪನ್ನ ವಾಗುವಂತಹುದು' ಅದಿತಿ ಆಗಿದೆ." *

(ಋಗ್ವೇದ: ೧. ೮೯. ೧೦)]

ಭಾಷ್ಯಮ್_

ಅಸ್ಮಿನ್ ಮಂತ್ರೇ 'ಅದಿತಿ'ಶಬ್ದಾರ್ಥಾ ದ್ಯೌರಿತ್ಯಾದಯಃ ಸಂತಿ.

ತೇಽಪಿ ವೇದಭಾಷ್ಯೇಽದಿತಿಶಬ್ದೇನ ಗ್ರಾಹಿಷ್ಯಂತೇ.

ನೈವಾಸ್ಯ ಮಂತ್ರಸ್ಯ ಲೇಖನಂ ಸರ್ವತ್ರ ಭವಿಷ್ಯತೀತಿ ಮತ್ವಾತ್ರ ಲಿಖಿತಮ್.

ಭಾಷ್ಯ_

ಈ ಮಂತ್ರದಲ್ಲಿ 'ಅದಿತಿ' ಶಬ್ದದ ಅರ್ಥಗಳಾಗಿ 'ದ್ಯೌಃ'_ ಈ ಮೊದಲಾದುವು ಇವೆ.

ಅಂದರೆ, ಈ ಮಂತ್ರದಲ್ಲಿ 'ಅದಿತಿ' ಶಬ್ದಕ್ಕೆ ಬಹಳ ಅರ್ಥಗಳೂ, ಮತ್ತು ಬಹಳ ಅರ್ಥಗಳು ಈ ಶಬ್ದಕ್ಕೂ ಕೂಡ, ಇವೆ.

ಅವೆಲ್ಲವೂ ಕೂಡ, ವೇದಭಾಷ್ಯದಲ್ಲಿ 'ಅದಿತಿ' ಶಬ್ದದಿಂದ ಗ್ರಹಿಸಲ್ಪಡುವುವು.

ಅಂದರೆ, ಈ ಮಂತ್ರದಲ್ಲಿ ಎಷ್ಟು [ಅರ್ಥಗಳು] ಇವೆಯೋ, ಅವೆಲ್ಲವೂ ವೇದಭಾಷ್ಯದಲ್ಲಿ ಅವಶ್ಯವಾಗಿ ಸ್ವೀಕರಿಸಲ್ಪಡುವುವು. ಆ ಅರ್ಥಗಳಾವುವೆಂದರೆ_

(೧) ದ್ಯೌಃ (೨) ಅಂತರಿಕ್ಷ (೩) ತಾಯಿ (೪) ತಂದೆ (೫) ಪುತ್ರ (೬) ವಿಶ್ವದೇವ (೭) ಪಂಚಜನ (೮) ಹುಟ್ಟಿದ್ದು ಮತ್ತು (೯) ಹುಟ್ಟುವಂತಹುದು!

ಈ ಮಂತ್ರದ ಲೇಖನವು ಸರ್ವತ್ರ ಆಗುವುದೇ ಇಲ್ಲ, ಎಂದು ತಿಳಿದು, ಇಲ್ಲಿ ಬರೆಯಲ್ಪಟ್ಟಿದೆ.

ಅಂದರೆ, ಈ ಮಂತ್ರವನ್ನು ಮತ್ತೆ ಮತ್ತೆ ಬರೆಯುವುದಿಲ್ಲ! ಆದರೆ, ಆ ಅರ್ಥಗಳೆಲ್ಲವಂತೂ ಬರೆಯಲ್ಪಡುವುವು!

---

* ಇದು ಶ್ಲೇಷಾಲಂಕಾರದ ಉದಾಹರಣೆ. 'ಅದಿತಿ', ಎಂದರೆ ಅಖಂಡನೀಯ; ವಿನಾಶರಹಿತ, ಎಂದು ತಾತ್ಪರ್ಯ.

ದ್ಯೌಃ = ಪ್ರಕಾಶ, ಸೂರ್ಯ, ಪರಮೇಶ್ವರ; ಅಂತರಿಕ್ಷ = ಆಕಾಶ; **ಮಾತಾ** = ಮಾನ್ಯಹೇತು, ಜನನಿ, ವಿದ್ಯೆ; ಪಿತಾ = ಜನಕ, ಪಾಲಕ; **ಪುತ್ರ** = ಔರಸ, ಕ್ಷೇತ್ರಜ, ವಿದ್ಯಾಜ; **ವಿಶ್ವೇದೇವಾಃ** = ವಿದ್ವಾಂಸರು, ದಿವ್ಯಗುಣಗಳು, ದಿವ್ಯ ಪದಾರ್ಥಗಳು; **ಪಂಚಜನಾಃ** = ಪಂಚೇಂದ್ರಿಯ, ಜೀವಾತ್ಮರು, ನಾಲ್ಕು ವರ್ಣಸ್ಥರೊಡನೆ ನಿಷಾದ! **ಜಾತಮ್**= ಹುಟ್ಟಿದುದು; **ಜನಿತ್ರಮ್** = ಹುಟ್ಟುವಂತಹುದು _ಅನು.

ಏವಂ ವಿಧಾ ಅನ್ಯೇಽಪಿ ಬಹವೋಽಲಂಕಾರಾಃ ಸಂತಿ.

ಈ ವಿಧವಾದ ಇತರ ಅಲಂಕಾರಗಳೂ ಕೂಡ, ಬಹಳ ಇವೆ.

ತೇ ಸರ್ವೇ ನಾತ್ರ ಲಿಖ್ಯಂತೇ.

ಅವೆಲ್ಲವೂ ಇಲ್ಲಿ ಬರೆಯಲ್ಪಡುವುದಿಲ್ಲ!

ಯತ್ರ ಯತ್ರ ತ ಆಗಮಿಷ್ಯಂತಿ, ತತ್ರ ತತ್ರ ವಾಖ್ಯಾಯಿಷ್ಯಂತೇ.

ಎಲ್ಲೆಲ್ಲಿ ಅವು ಬರುವುವೋ, ಅಲ್ಲಲ್ಲಿ ವ್ಯಾಖ್ಯಾನಿಸಲ್ಪಡುವುವು.

ಅಂದರೆ, ಎಲ್ಲೆಲ್ಲಿ ಅವು ವೇದಭಾಷ್ಯದಲ್ಲಿ ಬರುವುವೋ, ಅಲ್ಲಲ್ಲಿ ಬರೆಯಲ್ಪಡುವುವು.

ಇತ್ಯಲಂಕಾರಭೇದವಿಷಯಃ ಸಂಕ್ಷೇಪತಃ ॥ ೩೪ ॥

ಇಲ್ಲಿಗೆ ಅಲಂಕಾರದ ಭೇದಗಳ ವಿಷಯವು ಸಂಕ್ಷೇಪವಾಗಿ ಮುಗಿಯಿತು. * [೩೪]

---

* ಈ ಅಧ್ಯಾಯದಲ್ಲಿ ಬರೆದಿರುವ ಹಲವು ಪಾದಟಿಪ್ಪಣಿಗಳಿಗೆ ಸ್ವಾಮೀ ವಿದ್ಯಾನಂದ ಸರಸ್ವತೀ ಅವರಿಂದ ರಚಿತವಾದ 'ಭೂಮಿಕಾಭಾಸ್ಕರ' ಭಾಗ - ೨ ರಿಂದ ಸಹಾಯ ಪಡೆಯಲಾಗಿದೆ. _ಅನು.

(೩೫) ಗ್ರಂಥಸಂಕೇತ

ಅಥ ಗ್ರಂಥಸಂಕೇತವಿಷಯಃ

ನಂತರ, ಗ್ರಂಥಗಳ ಸಂಕೇತದ ವಿಷಯ!

ಅಥ ವೇದಭಾಷ್ಯೇ ಯೇ ಸಂಕೇತಾಃ ಕರಿಷ್ಯಂತೇ, ತ ಇದಾನೀಂ ಪ್ರದರ್ಶ್ಯಂತೇ.

ಋಗ್ವೇದಾದೀನಾಂ ವೇದಚತುಷ್ಟಯಾನಾಂ ;

ಷಟ್‌ಶಾಸ್ತ್ರಾಣಾಂ ;

ಷಡಂಗಾನಾಂ ;

ಚತುರ್ಣಾಂ ಬ್ರಾಹ್ಮಣಾನಾಂ ;

ತೈತ್ತಿರೀಯಾರಣ್ಯಕಸ್ಯ ಚ ;

ಯತ್ರ ಯತ್ರ ಪ್ರಮಾಣಾನಿ ಲೇಖಿಷ್ಯಂತೇ, ತತ್ರ ತತ್ರೈ ತೇ ಸಂಕೇತಾ ವಿಜ್ಞೇಯಾಃ_*

ವೇದಭಾಷ್ಯದಲ್ಲಿ ಯಾವ [ಗ್ರಂಥ]ಸಂಕೇತಗಳು ಇಡಲ್ಪಡುವುವೋ, ಅವು ಈಗ ತೋರಿಸಲ್ಪಡುವುವು.

ಋಗ್ವೇದವೇ ಮೊದಲಾದ ನಾಲ್ಕು ವೇದಗಳ ;

ಆರು ಶಾಸ್ತ್ರಗಳ ;

ಆರು ಅಂಗಗಳ ;

ನಾಲ್ಕು ಬ್ರಾಹ್ಮಣಗಳ ; ಮತ್ತು

ತೈತ್ತಿರೀಯಾರಣ್ಯಕದ ;

ಪ್ರಮಾಣಗಳು ಎಲ್ಲೆಲ್ಲಿ ಬರೆಯಲ್ಪಡುವುವೋ, ಅಲ್ಲಲ್ಲಿ ಈ [ಕೆಳಗಿನ] ಸಂಕೇತಗಳು ತಿಳಿಯಲ್ಪಡಬೇಕು!

ಅಂದರೆ, ಈಗ, ವೇದಭಾಷ್ಯದಲ್ಲಿ ನಾಲ್ಕೂ ವೇದಗಳೇ (ಮೊದಲಾದುವುಗಳ) ಪ್ರಮಾಣಗಳು ಎಲ್ಲೆಲ್ಲಿ ಬರೆಯಲ್ಪಡುವುವೋ, ಅವುಗಳ ಸಂಕೇತಗಳನ್ನು ತೋರಿಸುತ್ತೇವೆ. ನೋಡಿ_

---

* ಏತೇ ಸಂಕೇತಾ ಗ್ರಂಥಕರ್ತ್ರಾ ನಿರ್ಮಿತೇನ ವೇದಭಾಷ್ಯೇಣ ಸಹ ಸಂಬದ್ಧಾಃ ಸಂತಿ. ಅತ್ರ ತು ತೈಃ ಸಹ 'ಋಗ್ವೇದಾದಿ-ಭಾಷ್ಯಭೂಮಿಕಾ'ಗ್ರಂಥೇ ಯಥಾ ಪ್ರಮಾಣಗ್ರಂಥಾನಾಂ ಸಂಕೇತಾ ಅಸ್ಮಾಭಿರ್ದತ್ತಾಸ್ತಥಾ ತತ್ರ ತತ್ರ ಜ್ಞೇಯಾಃ. _ಅನು.

* ಈ ಸಂಕೇತಗಳು ಗ್ರಂಥಕರ್ತರಿಂದ ನಿರ್ಮಿತವಾದ ವೇದಭಾಷ್ಯಕ್ಕೆ ಸಂಬಂಧಿಸಲ್ಪಟ್ಟಿವೆ. ಆದರೆ, ಇಲ್ಲಿ '**ಋಗ್ವೇದಾದಿಭಾಷ್ಯಭೂಮಿಕಾ**' ಗ್ರಂಥದ ವಿಷಯದಲ್ಲಿ ಅವುಗಳೊಡನೆ ನಾವು ಈ ಅನುವಾದದಲ್ಲಿ ತೋರಿಸಿರುವ ಸಂಕೇತಗಳನ್ನೂ ತಿಳಿಯಬೇಕು. _ಅನು.

ಋಗ್ವೇದದ ಸಂಕೇತ

ಋಗ್ವೇದಸ್ಯ ಋ.; ಮಂಡಲಸ್ಯ ಪ್ರಥಮಾಂಕೋ; ದ್ವಿತೀಯಃ ಸೂಕ್ತಸ್ಯ; ತೃತೀಯೋ ಮಂತ್ರಸ್ಯ ವಿಜ್ಞೇಯಃ.*

(೧) ಋಗ್ವೇದದ [ಸಂಕೇತ] ಋ., ಎಂದೂ; ಮೊದಲನೆಯ ಅಂಕವು ಮಂಡಲದ್ದೂ; ಎರಡನೆಯದು ಸೂಕ್ತದ್ದೂ; ಮೂರನೆಯದು ಮಂತ್ರದ್ದೂ; ಎಂದು ತಿಳಿಯಬೇಕು!

ಅಂದರೆ, ಋಗ್ವೇದದ ಪ್ರಮಾಣಗಳನ್ನು ಎಲ್ಲೆಲ್ಲಿ ಬರೆಯುವುವೋ, ಅಲ್ಲಲ್ಲಿ ಋಗ್ವೇದಕ್ಕೆ ಋ.; ಮತ್ತು ಮಂಡಲ, ಸೂಕ್ತ, ಮಂತ್ರ_ ಇವುಗಳಿಗೆ ಮೊದಲನೆಯ, ಎರಡನೆಯ, ಮೂರನೆಯ ಸಂಕೇತ[ಅಂಕ]ಗಳನ್ನು ಕ್ರಮವಾಗಿ ತಿಳಿಯಬೇಕು!*

ಉದಾಹರಣೆಗಾಗಿ_

'ಋ. ೧. ೧. ೧'

ಯಜುರ್ವೇದದ ಸಂಕೇತ

ಈ ರೀತಿಯಾಗಿಯೇ_

ಯಜುರ್ವೇದಸ್ಯ ಯ.; ಪ್ರಥಮಾಂಕೋऽಧ್ಯಾಯಸ್ಯ; ದ್ವಿತೀಯೋ ಮಂತ್ರಸ್ಯ.

(೨) ಯಜುರ್ವೇದಕ್ಕೆ ಯ.; ಮೊದಲ ಅಂಕವು ಅಧ್ಯಾಯದ್ದು; ಮತ್ತು ಎರಡನೆಯದು ಮಂತ್ರದ್ದು, ಎಂದು ತಿಳಿಯಬೇಕು.

ತದ್ಯಥಾ_

ಉದಾಹರಣೆಗೆ_

'ಯ. ೧. ೧.'

ಸಾಮವೇದದ ಸಂಕೇತ

(೩) ಸಾಮವೇದದ ನಿಯಮವೇನೆಂದರೆ_

ಸಾಮವೇದಸ್ಯ ಸಾಮ.; ಪೂರ್ವಾರ್ಚಿಕಸ್ಯ ಪೂ; ಪ್ರಥಮಾಂಕಃ ಪ್ರಪಾಠಕಸ್ಯ; ದ್ವಿತೀಯೋ ದಶತೇಃ; ತೃತೀಯೋ ಮಂತ್ರಸ್ಯ.

ಸಾಮವೇದಕ್ಕೆ ಸಾಮ; ಪೂರ್ವಾರ್ಚಿಕಕ್ಕೆ ಪೂ.; ಮೊದಲಿನ ಅಂಕವು ಪ್ರಪಾಠಕದ್ದು; ಎರಡನೆಯದು ದಶತಿಯದ್ದು; ಮತ್ತು ಮೂರನೆಯದು ಮಂತ್ರದ್ದು; ಎಂದು ತಿಳಿಯಬೇಕು!

---

* ಕಿಂತು ಋಗ್ವೇದೇ ಅಷ್ಟಕಸ್ಯ 'ಅ'.; ಅಧ್ಯಾಯಸ್ಯ 'ಅ'.; ವರ್ಗಸ್ಯ 'ವ'; ಮಂತ್ರಸ್ಯ 'ಮಂ.' ಇತಿ ಸಂಕೇತೇನ; ತಥಾ ಚ ಮಂಡಲಸ್ಯ 'ಮಂ.'; (ಅನುವಾಕಸ್ಯ 'ಅ.';) ಸೂಕ್ತಸ್ಯ 'ಸೂ.'; ಮಂತ್ರಸ್ಯ 'ಮಂ.' ಇತಿ ಸಂಕೇತನ ಸಹ ಅಂಕಾ ಅಪಿ ದತ್ತಾಃ. _ಅನು.

* ಆದರೆ, ಋಗ್ವೇದಭಾಷ್ಯದಲ್ಲಿ ಕ್ರಮವಾಗಿ_ ಅಷ್ಟಕ, ಅಧ್ಯಾಯ, ವರ್ಗ, ಮತ್ತು ಮಂತ್ರದ ಸಂಕೇತಾಂಕಗಳೂ; ಹಾಗೂ ಮಂಡಲ, (ಅನುವಾಕ) ಸೂಕ್ತ, ಮಂತ್ರದ ಅಕ್ಷರಸಂಕೇತಗಳೂ ಮತ್ತು ತತ್ಸಂಬಂಧಿತ ಅಂಕಗಳೂ ಕೂಡ, ದೊರೆಯುತ್ತವೆ._ಅನು.

ತದ್ಯಥಾ_

ಉದಾಹರಣೆಗಾಗಿ_

'ಸಾಮ. ಪೂ. ೧.೧.೧'

ಪೂರ್ವಾರ್ಚಿಕಸ್ಯಾಯಂ ನಿಯಮಃ.

ಇದು **ಪೂರ್ವಾರ್ಚಿಕಕ್ಕೆ** ಸಂಬಂಧಿಸಿದ ನಿಯಮವಾಗಿದೆ!

ಉತ್ತರಾರ್ಚಿಕಸ್ಯ ಖಲು_ ಸಾಮ. ಉ.; ಪ್ರಥಮಾಂಕಃ ಪ್ರಪಾಠಕಸ್ಯ; ದ್ವಿತೀಯೋ ಮಂತ್ರಸ್ಯ.

ಉತ್ತರಾರ್ಚಿಕದ್ದಂತೂ_ ಸಾಮ. ಉ.; ಮೊದಲ ಅಂಕವು **ಪ್ರಪಾಠಕದ್ದೂ**; ಮತ್ತು ಎರಡನೆಯದು **ಮಂತ್ರದ್ದೂ**, ಎಂದು ತಿಳಿಯಬೇಕು!

ಅತ್ರಾಯಂ ವಿಶೋಷೋಽಸ್ತಿ_

ಆದರೆ, ಇಲ್ಲಿ ವಿಶೇಷವೇನಿದೆಯೆಂದರೆ_

ಉತ್ತರಾರ್ಚಿಕೇ ದಶತಯೋ ನ ಸಂತಿ; ಪರಂತ್ವರ್ದ್ಧಪ್ರಪಾಠಕೇ [ತ್ರಿಕಸ್ಥ]ಮಂತ್ರಸಂಖ್ಯಾ ಪೂರ್ಣಾ ಭವತಿ.

ಉತ್ತರಾರ್ಚಿಕದಲ್ಲಿ **ದಶತಿಗಳಿರುವುದಿಲ್ಲ**; ಆದರೆ, **ಅರ್ಧಪ್ರಪಾಠಕದಲ್ಲಿ** [ತ್ರಿಕಸ್ಥ]ದಲ್ಲಿನ ಮಂತ್ರಸಂಖ್ಯೆಯು ಪೂರ್ಣವಾಗಿರುತ್ತದೆ.

ಅಂದರೆ, ಉತ್ತರಾರ್ಚಿಕದಲ್ಲಿ ಪ್ರಪಾಠಕಗಳಿಗೂ ಕೂಡ, **ಪೂರ್ವಾರ್ದ್ಧ** ಮತ್ತು **ಉತ್ತರಾರ್ದ್ಧ**, [ಎಂಬ ವಿಭಾಗ] ಇರುತ್ತದೆ. ಅರ್ದ್ಧಪ್ರಪಾಠಕದ ತನಕ ಮಂತ್ರ ಸಂಖ್ಯೆ ನಡೆಯುತ್ತದೆ.

ತೇನ ಪ್ರಥಮಃ ಪೂರ್ವಾರ್ದ್ಧಪ್ರಪಾಠಕೋ; ದ್ವಿತೀಯ ಉತ್ತರಾರ್ದ್ಧಪ್ರಪಾಠಕಶ್ಚೇತ್ಯಯಮಪಿ ಸಂಕೇತ ಉತ್ತರಾರ್ಚಿಕೇ ಜ್ಞೇಯಃ.

ಆದುದರಿಂದ, **ಉತ್ತರಾರ್ಚಿಕದಲ್ಲಿ** ಮೊದಲನೆಯದು **ಪೂರ್ವಾರ್ಧಪ್ರಪಾಠಕದ್ದೆಂದೂ**; ಮತ್ತು ಎರಡನೆಯದು **ಉತ್ತರಾರ್ದ್ಧಪ್ರಪಾಠಕದ್ದೆಂದೂ**, ಈ ಸಂಕೇತವನ್ನೂ ಕೂಡ, ತಿಳಿಯಬೇಕು!

ಆದುದರಿಂದ, ಪ್ರಪಾಠಕದ ಅಂಕದ ಮೊದಲು, **'ಪೂ.'** ಅಥವಾ 'ಉ.', ಎಂದು ಬರೆಯಲಾಗುವುದು.

ಆಗ **'ಪೂ'**., ಎಂದರೆ, ಪೂರ್ವಾರ್ಧಪ್ರಪಾಠಕ, ಎಂದೂ; ಮತ್ತು **'ಉ'**., ಎಂದರೆ ಉತ್ತರಾರ್ಧಪ್ರಪಾಠಕ, ಎಂದೂ ತಿಳಿದುಕೊಳ್ಳಬೇಕಾಗುವುದು!

ಉದಾಹರಣೆಗಾಗಿ_

'ಸಾಮ. ಉ. ೧, ಪೂ. ೧'

'ಸಾಮ. ಉ. ೧, ಉ. ೧.'

ತದ್ಯಥಾ_

ಹೀಗೆ, ಇಲ್ಲಿ (ಉತ್ತರಾರ್ಚಿಕ)ದಲ್ಲಿ ಎರಡು ಸಂಕೇತಗಳಾಗುವುವು!

[ಹೇಗೆಂದರೆ_]

ಅತ್ರ ದ್ವೌ ಸಂಕೇತೌ ಭವಿಷ್ಯತಃ.

ಉಕಾರೇಣೋತ್ತರಾರ್ಚಿಕಂ ಜ್ಞೇಯಂ ;

ಪ್ರಥಮಾಂಕೇನ ಪ್ರಥಮಃ ಪ್ರಪಾಠಕಃ ;

'ಪೂ.' ಇತ್ಯನೇನ ಪೂರ್ವಾರ್ದ್ಧಃ ಪ್ರಥಮಃ ಪ್ರಪಾಠಕಃ ;

ದ್ವಿತೀಯಾಂಕೇನ ಮಂತ್ರಸಂಖ್ಯಾ ಜ್ಞೇಯಾ.

ಪುನರ್ದ್ವಿತೀಯೇ ಸಂಕೇತೇ_

ದ್ವಿತೀಯೋಕಾರೇಣ ಉತ್ತರಾರ್ದ್ಧಃ ಪ್ರಥಮಃ ಪ್ರಪಾಠಕಃ ;

ದ್ವಿತೀಯಾಂಕೇನ ತದೇವ.**

'ಉ'.ಕಾರದಿಂದ, '**ಉತ್ತರಾರ್ಚಿಕ**', ಎಂದು ತಿಳಿಯಬೇಕು!

ಮೊದಲನೆಯ ಅಂಕದಿಂದ, **ಪ್ರಥಮಪ್ರಪಾಠಕ**, ಎಂದೂ ;

'ಪೂ.', ಎಂಬ ಈ ಸಂಕೇತದಿಂದ, **ಪ್ರಥಮ ಪ್ರಪಾಠಕದ ಪೂರ್ವಾರ್ಧ**, ಎಂದೂ;

ಎರಡನೆಯ ಅಂಕದಿಂದ, **ಮಂತ್ರಸಂಖ್ಯೆ**, ಎಂದೂ ತಿಳಿಯಬೇಕು!

ಪುನಃ ಎರಡನೆಯ ಸಂಕೇತದಲ್ಲಿ_

ಎರಡನೆಯ 'ಉ'ಕಾರದಿಂದ, **ಪ್ರಥಮ-ಪ್ರಪಾಠಕದ ಉತ್ತರಾರ್ಧ**, ಎಂದೂ; ಮತ್ತು_

ಎರಡನೆಯ ಅಂಕದಿಂದ, ಮೊದಲಿನಂತೆಯೇ* ತಿಳಿಯಬೇಕು!**

ಅಥರ್ವವೇದದ ಸಂಕೇತ

ಅಥರ್ವವೇದೇ ಅಥರ್ವ.; ಪ್ರಥಮಾಂಕಃ ಕಾಂಡಸ್ಯ; ದ್ವಿತೀಯೋ ವರ್ಗಸ್ಯ; ತೃತೀಯೋ ಮಂತ್ರಸ್ಯ. +

ಇದೇ ರೀತಿಯಲ್ಲೇ_

(೪) ಅಥರ್ವವೇದದಲ್ಲಿ_ **ಅಥರ್ವ.**; ಮೊದಲನೆಯ ಅಂಕವು **ಕಾಂಡ**ದ್ದು; ಎರಡನೆಯದು **ವರ್ಗ**ದ್ದು; ಮತ್ತು ಮೂರನೆಯದು **ಮಂತ್ರ**ದ್ದು, ಎಂದು ತಿಳಿಯಬೇಕು! +

** ಸಾಮವೇದೇ ನಿಮ್ನವಿಭಾಗಾನುಸಾರೇಣ ಸಂಕೇತಾ ಅಪಿ ಸಂತಿ. ಯಥಾ_

ಪೂರ್ವಾಚಿಕೇಽಪಿ ಪ್ರಪಾಠಕಸ್ಯ ದ್ವಾವರ್ಧೌ ಷಷ್ಠಪ್ರಪಾಠಕಸ್ಯ ತ್ರಯೋಽರ್ದ್ಧಾಶ್ಚ ಸಂತಿ. ತಥೋತ್ತರಾರ್ಚಿಕೇ ಷಷ್ಠಪ್ರಪಾಠಕತೋ ನವಮಪ್ರಪಾಠಕಪರ್ಯಂತಮಪಿ ತ್ರಯಸ್ತ್ರಯೋಽರ್ದ್ಧಾ ಉಪಲಭ್ಯಂತೇ.

ಅನ್ಯತ್ರ ಸಾಮವೇದಸ್ಯ ಸರ್ವೇಷಾಂ ಮಂತ್ರಾಣಾಮನು-ಕ್ರಮಾಂಕೋಽಪಿ ಪ್ರಸಿದ್ಧಃ. ತದನುಸಾರೇಣ ಸಾಮವೇದೇ ೧೮೭೫ ಮಂತ್ರಾಃ ಸುಲಭತಯಾ ಗಣನಾಯೋಗ್ಯಾ ವರ್ತ್ತಂತೇ

_ಅನು.

+ ಅಥರ್ವವೇದೇಽನ್ಯವಿಭಾಗಾನುಸಾರೇಣ_

ಕಾಂಡಸ್ಯ 'ಕಾಂ'.; ಅನುವಾಕಸ್ಯ 'ಅ.'; ವರ್ಗಸ್ಯ 'ವ.'; ಮಂತ್ರಸ್ಯ 'ಮಂ.' ಇತ್ಯಕ್ಷರಸಂಕೇತೇನಾಂಕಾ ಅಪ್ಯುಪಲಭ್ಯಂತೇ. ಅಥವಾ_

ಕಾಂಡಸ್ಯ 'ಕಾಂ'.; ಸೂಕ್ತಸ್ಯ 'ಸೂ.'; ಮಂತ್ರಸ್ಯ 'ಮಂ.' ಇತ್ಯಕ್ಷರಸಂಕೇತೇನಾಂಕಾ ಅಪ್ಯುಪಲಭ್ಯಂತೇ. _ಅನು.

---

* ಎಂದರೆ, **ಮಂತ್ರಸಂಖ್ಯೆ**, ಎಂದು _ಅನು.

** ಸಾಮವೇದದಲ್ಲಿ ಕೆಳಗಿನ ವಿಭಾಗದಂತೆ ಕೂಡ, ಸಂಕೇತಗಳು ಇವೆ. ಹೇಗೆಂದರೆ_

ಪೂರ್ವಾರ್ಚಿಕದಲ್ಲಿ ಕೂಡ, ಪ್ರಪಾಠಕಾರ್ಧಗಳೂ, ಹಾಗೂ ಆರನೆಯ ಪ್ರಪಾಠಕದಲ್ಲಿ ಮೂರು ಅರ್ಧಗಳೂ ಇವೆ. ಹಾಗೆಯೇ, ಉತ್ತರಾರ್ಚಿಕದಲ್ಲಿ ಆರನೆಯ ಪ್ರಪಾಠಕದಿಂದ ಒಂಭತ್ತನೆಯ ಪ್ರಪಾಠಕದ ವರೆಗೆ ಪ್ರತಿಯೊಂದು ಪ್ರಪಾಠಕದಲ್ಲೂ ಮೂರು ಮೂರು ಅರ್ಧಗಳಿವೆ.

ಸಾಮವೇದದ ಇನ್ನೊಂದು ವಿಭಾಗವೇನೆಂದರೆ, ಪ್ರತಿಯೊಂದು ಮಂತ್ರಕ್ಕೂ ಅನುಕ್ರಮವಾಗಿ ಅಂಕವನ್ನು ಕೊಟ್ಟಿರುವುದು. ಇದರಿಂದ ಸುಲಭವಾಗಿ ಸಾಮವೇದದ ಒಟ್ಟು ೧೮೭೫ ಮಂತ್ರಗಳ ಸಂದರ್ಭವನ್ನು ತಿಳಿಯಬಹುದು _ಅನು.

+ ಅಥರ್ವವೇದದಲ್ಲಿ_ ಕಾಂಡ, ಅನುವಾಕ, ಮಂತ್ರ; ಕಾಂಡ, ಪ್ರಪಾಠಕ, ಅನುವಾಕ, ಮಂತ್ರ; ಕಾಂಡ, ಅನುವಾಕ, ವರ್ಗ, ಮಂತ್ರ; ಮತ್ತು ಕಾಂಡ, ಸೂಕ್ತ, ಮಂತ್ರ_ ಈ ವಿಭಾಗಗಳೂ ಇವೆ. _ಅನು.

ತದ್ಯಥಾ_

ಉದಾಹರಣೆಗಾಗಿ_

'ಅಥರ್ವ. ೧.೧.೧' *

ಬ್ರಾಹ್ಮಣಗ್ರಂಥಗಳ ಸಂಕೇತ

ಏವಂ ಬ್ರಾಹ್ಮಣಸ್ಯಾದ್ಯಸ್ಯ_

ಈ ರೀತಿಯಾಗಿಯೇ, ಬ್ರಾಹ್ಮಣಗ್ರಂಥದಲ್ಲಿ ಮೊದಲನೆಯದಾದ_

ಐತರೇಯಸ್ಯ ಐ.; ಪ್ರಥಮಾಂಕಃ ಪಂಚಿಕಾಯಾಃ; ದ್ವಿತೀಯಃ ಕಂಡಿಕಾಯಾಃ.

(೫) **ಐತರೇಯಬ್ರಾಹ್ಮಣಕ್ಕೆ ಐ**; ಮೊದಲನೆಯ ಅಂಕವು **ಪಂಚಿಕೆಯದು**; ಮತ್ತು ಎರಡನೆಯದು **ಕಂಡಿಕೆಯದು**!

ತದ್ಯಥಾ_

ಉದಾಹರಣೆಗಾಗಿ_

'ಐ.೧.೧'

ಶತಪಥಬ್ರಾಹ್ಮಣೇ ಶ.; ಪ್ರಥಮಾಂಕಃ ಕಾಂಡಸ್ಯ; ದ್ವಿತೀಯಃ ಪ್ರಪಾಠಕಸ್ಯ; ** **ತೃತೀಯೋ ಬ್ರಾಹ್ಮಣಸ್ಯ; ಚತುರ್ಥಃ ಕಂಡಿಕಾಯಾಃ.**

(೬) **ಶತಪಥಬ್ರಾಹ್ಮಣಕ್ಕೆ ಶ.**; ಮೊದಲನೆಯ ಅಂಕವು **ಕಾಂಡದ್ದು**; ಎರಡನೆಯದು **ಪ್ರಪಾಠಕದ್ದು**;** ಮೂರನೆಯದು **ಬ್ರಾಹ್ಮಣದ್ದು**; ಮತ್ತು ನಾಲ್ಕನೆಯದು **ಕಂಡಿಕೆಯದು**!

ತದ್ಯಥಾ_

ಉದಾಹರಣೆಗಾಗಿ_

'ಶ. ೧.೧.೧.೧'

ಏವಮೇವ ಸಾಮಬ್ರಾಹ್ಮಣಾನಿ ಬಹೂನಿ ಸಂತಿ.

ಹೀಗೆಯೇ_ **ಸಾಮಬ್ರಾಹ್ಮಣಗಳು** ಬಹಳ ಇವೆ!

ತೇಷಾಂ ಮಧ್ಯಾದ್ ಯಸ್ಯ ಯಸ್ಯ ಪ್ರಮಾಣಮತ್ರ ಲೇಖಿಷ್ಯತೇ, ತಸ್ಯ ತಸ್ಯ ಸಂಕೇತಸ್ತತ್ರೈವ ಕರಿಷ್ಯತೇ. ತೇಷ್ವೇವೈಕಂ_

ಅವುಗಳಲ್ಲಿ ಯಾವ ಯಾವುದರ ಪ್ರಮಾಣವು ಇಲ್ಲಿ ಬರೆಯಲ್ಪಡುವುದೋ, ಅದರದರ ಸಂಕೇತವು ಅಲ್ಲಲ್ಲಿ ಮಾಡಲಾಗುವುದು. ಅವುಗಳಲ್ಲಿಯೇ ಒಂದು_

ಛಾಂದೋಗ್ಯಾಖ್ಯಂ _ ತಸ್ಯ ಛಾಂ.; ಪ್ರಥಮಾಂಕಃ ಪ್ರಪಾಠಕಸ್ಯ; ** **ದ್ವಿತೀಯಃ ಖಂಡಸ್ಯ; ತೃತೀಯೋ ಮಂತ್ರಸ್ಯ. ತದ್ಯಥಾ_**

(೭) **'ಛಾಂದೋಗ್ಯ'**, ಎನಿಸುತ್ತದೆ. ಅದಕ್ಕೆ_ **ಛಾಂ.**; ಮೊದಲನೆಯ ಅಂಕವು **ಪ್ರಪಾಠಕದ್ದು**;** ಎರಡನೆಯದು **ಖಂಡದ್ದು**; ಮತ್ತು ಮೂರನೆಯದು **ಮಂತ್ರದ್ದು**! ಉದಾಹರಣೆಗಾಗಿ_

'ಛಾಂ. ೧.೧.೧'

** ಅಸ್ಯ 'ಅಧ್ಯಾಯ' ಇತ್ಯಪಿ ಸಂಜ್ಞಾಸ್ತಿ. _ಅನು.

* ಮಹರ್ಷಿದಯಾನಂದರು, ತಮ್ಮ ಅಕಾಲಮೃತ್ಯುವಿನ ಕಾರಣದಿಂದ, ಸಾಮವೇದ ಮತ್ತು ಅಥರ್ವವೇದಕ್ಕೆ ಭಾಷ್ಯ ಬರೆಯಲಿಲ್ಲ. ಋಗ್ವೇದಭಾಷ್ಯವೂ ಕೂಡ, ಏಳನೆಯಮಂಡಲದ ೬೧ ನೆಯ ಸೂಕ್ತದ ಎರಡು ಮಂತ್ರಗಳ ತನಕ ಆಯಿತಷ್ಟೇ! ಯಜುರ್ವೇದಭಾಷ್ಯವು ಮಾತ್ರ ಪೂರ್ಣವಾಯಿತು. _ಅನು.

** ಇದಕ್ಕೆ **ಅಧ್ಯಾಯ**, ಎಂದೂ ಕೂಡ, ಹೆಸರಿದೆ. _**ಅನು.**

ಏವಂ_

ಹೀಗೆಯೇ_

(೮) ನಾಲ್ಕನೆಯದು **ಗೋಪಥಬ್ರಾಹ್ಮಣ**, ಎನಿಸುತ್ತದೆ.

ಗೋಪಥಬ್ರಾಹ್ಮಣಸ್ಯ ಗೋ.; ಪ್ರಥಮಾಂಕಃ ಪ್ರಪಾಠಕಸ್ಯ; ದ್ವಿತೀಯೋ ಬ್ರಾಹ್ಮಣಸ್ಯ.*

ಗೋಪಥಬ್ರಾಹ್ಮಣಕ್ಕೆ ಗೋ.; ಮೊದಲನೆಯ ಅಂಕವು **ಪ್ರಪಾಠಕದ್ದು**; ಎರಡನೆಯದು **ಬ್ರಾಹ್ಮಣದ್ದು**;*

ತದ್ಯಥಾ_

ಉದಾಹರಣೆಗಾಗಿ_

'ಗೋ. ೧.೧'

ಈ ಪ್ರಕಾರದ ಸಂಕೇತಗಳನ್ನು ನಾಲ್ಕೂ ಬ್ರಾಹ್ಮಣಗಳ ಬಗ್ಗೆ ತಿಳಿದುಕೊಳ್ಳಬೇಕಾಗುವುದು!

ಆರು ಶಾಸ್ತ್ರಗಳ ಸಂಕೇತ

ಏವಂ ಷಟ್‌ಶಾಸ್ತ್ರೇಷು_

ಹೀಗೆಯೇ ಆರು ಶಾಸ್ತ್ರಗಳಲ್ಲಿ_

ಪ್ರಥಮಂ ಮೀಮಾಂಸಾಶಾಸ್ತ್ರಮ್.

(೮) ಮೊದಲನೆಯದು **ಮೀಮಾಂಸಾಶಾಸ್ತ್ರ!**

ತಸ್ಯ ಮೀ.; ಪ್ರಥಮೋಽಂಕೋಽಧ್ಯಾಯಸ್ಯ; ದ್ವಿತೀಯಃ ಪಾದಸ್ಯ; ತೃತೀಯಃ ಸೂತ್ರಸ್ಯ.

ಅದಕ್ಕೆ **ಮೀ.**; ಮೊದಲನೆಯ ಅಂಕವು **ಅಧ್ಯಾಯದ್ದು**; ಎರಡನೆಯದು **ಪಾದದ್ದು**; ಮತ್ತು ಮೂರನೆಯದು **ಸೂತ್ರದ್ದು**, (ಎಂದು ಕ್ರಮವಾಗಿ ತಿಳಿಯಿರಿ!)

ತದ್ಯಥಾ_

ಉದಾಹರಣೆಗಾಗಿ_

'ಮೀ. ೧.೧.೧'

ದ್ವಿತೀಯಂ ವೈಶೇಷಿಕಶಾಸ್ತ್ರಮ್.

(೧೦) ಎರಡನೆಯದು **ವೈಶೇಷಿಕಶಾಸ್ತ್ರ!**

ತಸ್ಯ ವೈ.; ಪ್ರಥಮೋಽಂಕೋಽಧ್ಯಾಯಸ್ಯ; ದ್ವಿತೀಯ ಆಹ್ನಿಕಸ್ಯ; ತೃತೀಯಃ ಸೂತ್ರಸ್ಯ.

ಅದಕ್ಕೆ **ವೈ.**; ಮೊದಲನೆಯ ಅಂಕವು **ಅಧ್ಯಾಯದ್ದು**; ಎರಡನೆಯದು **ಆಹ್ನಿಕದ್ದು**; ಮತ್ತು ಮೂರನೆಯದು **ಸೂತ್ರದ್ದು!**

ತದ್ಯಥಾ_

ಉದಾಹರಣೆಗೆ_

'ವೈ. ೧.೧.೧'

---

* **ಗೋಪಥಬ್ರಾಹ್ಮಣೇ ಪೂರ್ವಭಾಗ ಉತ್ತರಭಾಗಶ್ಚೇತಿ ದ್ವೌ ಮುಖ್ಯಭಾಗಾವಪಿ ಸ್ತಃ _ಅನು.**

* **ಗೋಪಥಬ್ರಾಹ್ಮಣದಲ್ಲಿ ಪೂರ್ವ** ಮತ್ತು **ಉತ್ತರ**, ಎಂಬ ಎರಡು ಮುಖ್ಯ ಭಾಗಗಳೂ ಇವೆ _ಅನು.

ತೃತೀಯಂ ನ್ಯಾಯಶಾಸ್ತ್ರಮ್.

ತಸ್ಯ ನ್ಯಾ. ; ಅನ್ಯದ್ವೈಶೇಷಿಕವತ್.

(೧೧) ಮೂರನೆಯದು **ನ್ಯಾಯಶಾಸ್ತ್ರ!**

ಇದಕ್ಕೆ ನ್ಯಾ. ; ಉಳಿದವು **ವೈಶೇಷಿಕದಂತೆ!**

ಅಂದರೆ, ಉಳಿದ ಮೂರು ಅಂಕಗಳನ್ನು **ವೈಶೇಷಿಕದಂತೆ** ತಿಳಿಯಿರಿ!

[ತದ್ಯಥಾ_

[ಉದಾಹರಣೆಗೆ _

'ನ್ಯಾ. ೧. ೧. ೧']

ಚತುರ್ಥಂ ಯೋಗಶಾಸ್ತ್ರಮ್.

ತಸ್ಯ ಯೋ. ; ಪ್ರಥಮಾಂಕಃ ಪಾದಸ್ಯ, ದ್ವಿತೀಯಃ ಸೂತ್ರಸ್ಯ.

(೧೨) ನಾಲ್ಕನೆಯದು **ಯೋಗಶಾಸ್ತ್ರ!**

ಅದಕ್ಕೆ ಯೋ.; ಮೊದಲನೆಯ ಅಂಕವು **ಪಾದದ್ದು**; ಮತ್ತು ಎರಡನೆಯದು **ಸೂತ್ರದ್ದು!**

[ತದ್ಯಥಾ_]

ಉದಾಹರಣೆಗೆ_

'ಯೋ. ೧. ೧'

ಪಂಚಮಂ ಸಾಂಖ್ಯಶಾಸ್ತ್ರಮ್.

ತಸ್ಯ ಸಾಂ. ; ಪ್ರಥಮೋಽಂಕೋಽಧ್ಯಾಯಸ್ಯ; ದ್ವಿತೀಯಃ ಸೂತ್ರಸ್ಯ.

(೧೩) ಐದನೆಯದು **ಸಾಂಖ್ಯಶಾಸ್ತ್ರ!**

ಅದಕ್ಕೆ ಸಾಂ. ; ಮೊದಲನೆಯ ಅಂಕವು **ಅಧ್ಯಾಯದ್ದು**; ಮತ್ತು ಎರಡನೆಯದು **ಸೂತ್ರದ್ದು**', (ಎಂದು ಕ್ರಮವಾಗಿ ತಿಳಿಯಿರಿ!)

[ತದ್ಯಥಾ_]

ಉದಾಹರಣೆಗೆ_

'ಸಾಂ. ೧. ೧'

ಷಷ್ಠಂ ವೇದಾಂತಶಾಸ್ತ್ರಮ್ ಉತ್ತರ-ಮೀಮಾಂಸಾಖ್ಯಮ್.

ತಸ್ಯ ವೇ. ; ಪ್ರಥಮೋಽಂಕೋಽಧ್ಯಾಯಸ್ಯ; ದ್ವಿತೀಯಃ ಪಾದಸ್ಯ; ತೃತೀಯಃ ಸೂತ್ರಸ್ಯ.

(೧೪) ಆರನೆಯದು **'ಉತ್ತರಮೀಮಾಂಸಾ'**, ಎಂದು ಕರೆಯಲ್ಪಡುವ **ವೇದಾಂತಶಾಸ್ತ್ರ!**

ಅದಕ್ಕೆ ವೇ. ; ಮೊದಲ ಅಂಕವು **ಅಧ್ಯಾಯದ್ದು**; ಎರಡನೆಯದು **ಪಾದದ್ದು**; ಮತ್ತು ಮೂರನೆಯದು **ಸೂತ್ರದ್ದು!**

[ಈ ರೀತಿಯಾಗಿ] ಮೂರು ಅಂಕಗಳನ್ನು ಕ್ರಮದಿಂದ ತಿಳಿಯಿರಿ!

[ತದ್ಯಥಾ_]

ಉದಾಹರಣೆಗೆ_

'ವೇ. ೧. ೧. ೧'

ವೇದಾಂಗಗಳ ಸಂಕೇತ

ತಥಾಂಗೇಷು_

ಮತ್ತು ಅಂಗಗಳಲ್ಲಿ_

ಪ್ರಥಮಂ ವ್ಯಾಕರಣಮ್.

(೧೫) ಮೊದಲನೆಯದು **ವ್ಯಾಕರಣ!**

ತತ್ರಾಷ್ಟಾಧ್ಯಾಯೀ.

ಅದರಲ್ಲಿ **ಅಷ್ಟಾಧ್ಯಾಯೀ!**

ತಸ್ಯ ಅ.; ಪ್ರಥಮಾಂಕೋಽಧ್ಯಾಯಸ್ಯ; ದ್ವಿತೀಯಃ ಪಾದಸ್ಯ, ತೃತೀಯಃ ಸೂತ್ರಸ್ಯ.

ಅದಕ್ಕೆ ಅ.; ಮೊದಲನೆಯ ಅಂಕವು **ಅಧ್ಯಾಯದ್ದು**; ಎರಡನೆಯದು **ಪಾದದ್ದು**; ಮತ್ತು ಮೂರನೆಯದು **ಸೂತ್ರದ್ದು**.

ಅಂದರೆ, **ಅಂಗಗಳಲ್ಲಿ ಅಷ್ಟಾಧ್ಯಾಯೀ ವ್ಯಾಕರಣದ_ ಅಧ್ಯಾಯ, ಪಾದ, ಸೂತ್ರದ** ಮೂರು ಅಂಕಗಳನ್ನು ಕ್ರಮದಿಂದ ತಿಳಿಯಿರಿ !

ತದ್ಯಥಾ_

ಉದಾಹರಣೆಗೆ_

'ಅ. ೧.೧.೧'

ಏತೇನೈವ ಕೃತೇನ ಸೂತ್ರಸಂಕೇತೇನ ವ್ಯಾಕರಣಮಹಾಭಾಷ್ಯಸ್ಯ ಸಂಕೇತೋ ವಿಜ್ಞೇಯಃ.

(೧೬) ಈ ರೀತಿಯಾಗಿಯೇ ಮಾಡಿರುವ ಸೂತ್ರದ ಸಂಕೇತದಿಂದಲೇ **ವ್ಯಾಕರಣಮಹಾಭಾಷ್ಯದ** ಸಂಕೇತವೂ ಆಗುತ್ತದೆ, ಎಂದು ತಿಳಿಯಬೇಕು! [ಎಂದರೆ_]

ಯಸ್ಯ ಸೂತ್ರಸ್ಯೋಪರಿ ತದ್ಭಾಷ್ಯಮಸ್ತಿ, ತದ್ವ್ಯಾಖ್ಯಾನಂ ಲಿಖಿತ್ವಾ ತತ್‌ಸೂತ್ರಸಂಕೇತೋ ಧರಿಷ್ಯತೇ.

ಯಾವ ಸೂತ್ರದ ಮೇಲೆ ಅದರ **ಭಾಷ್ಯ**ವಿರುವುದೋ, ಅದರ ವ್ಯಾಖ್ಯಾನವನ್ನು ಬರೆದು, ಆ ಸೂತ್ರದ ಸಂಕೇತವು ಇಡಲಾಗುವುದು.

ಅಂದರೆ, ಯಾವ ಸೂತ್ರದ ಮೇಲೆ **ಮಹಾಭಾಷ್ಯ** ಇರುವುದೋ, ಆ ಸೂತ್ರದ ಸಂಕೇತವನ್ನು ಬರೆದು, ಮಹಾಭಾಷ್ಯದ ವಚನವನ್ನು ಬರೆಯುವೆವು. ಅದರಿಂದಲೇ, ಅದರ ಸುಳಿವನ್ನು ತಿಳಿದುಕೊಳ್ಳಬೇಕು!

ತಥಾ_

ಹೀಗೆಯೇ_

ನಿಘಂಟುನಿರುಕ್ತಯೋಃ ಪ್ರಥಮಾಂಕೋಽಧ್ಯಾಯಸ್ಯ; ದ್ವಿತೀಯಃ ಖಂಡಸ್ಯ.

(೧೭),(೧೮) ನಿಘಂಟು_ನಿರುಕ್ತಗಳ ಮೊದಲ ಅಂಕವು **ಅಧ್ಯಾಯದ್ದು**; ಮತ್ತು ಎರಡನೆಯದು **ಖಂಡದ್ದು**, [ಎಂದು ತಿಳಿಯಬೇಕು!]

[ತದ್ಯಥಾ_]

ಉದಾಹರಣೆಗಾಗಿ_

'ನಿಘಂಟೌ ೧.೧'

'ನಿರುಕ್ತೇ ೧.೧'

ಅಂದರೆ_

ವೇದಗಳ [ಅಧ್ಯಯನದ] ಪ್ರಯೋಜನವಾದ, ಎಂದರೆ_

ವೇದಗಳನ್ನು ಯಾವನು, ಏತಕ್ಕಾಗಿ ರಚಿಸಿದನು?

ಅವುಗಳಲ್ಲಿ ಯಾವ ಯಾವ ವಿಷಯಗಳಿವೆ?

ಈ ಮೊದಲಾದ ಮಾತುಗಳನ್ನು ಒಳ್ಳೆಯ ರೀತಿಯಿಂದ ಈ **ಭೂಮಿಕೆಯು** ತಿಳಿಸಿಕೊಡುವಂತಹುದಾಗಿದೆ!

ಇದನ್ನು ಯಾರು ಪರಿಶ್ರಮದಿಂದ ಸರಿ ಸರಿಯಾಗಿ ಓದುವರೋ, ಮತ್ತು ವಿಚಾರ ಮಾಡುವರೋ, ಅವರ ವ್ಯವಹಾರಗಳ, ಹಾಗೂ ಪರಮಾರ್ಥದ ಪ್ರಕಾಶವೂ, ಜಗತ್ತಿನಲ್ಲಿ ಮಾನ್ಯತೆಯೂ ಮತ್ತು ಕಾಮನಾಸಿದ್ಧಿಯೂ ಅವಶ್ಯವಾಗಿ ಆಗುವುದು!

ಈ ರೀತಿಯಾಗಿ, ಯಾವುದು ನಿರ್ಮಲ ವಿಷಯಗಳ **ವಿಧಾನದ ಕೋಶ,** ಎಂದರೆ ಖಜಾನೆಯಾಗಿದೆಯೋ, ಮತ್ತು ಸತ್ಯಶಾಸ್ತ್ರಗಳ ಪ್ರಮಾಣಗಳಿಂದ ಕೂಡಿದ ಯಾವ [ಈ] **'ಭೂಮಿಕೆ'** ಇದೆಯೋ, ಇದನ್ನು ನಾನು ಸಂಕ್ಷೇಪವಾಗಿ ಪೂರ್ಣಗೊಳಿಸಿದ್ದೇನೆ.

ಈಗ, ಇದರ ನಂತರ, ಯಾವುದು ಉತ್ತಮ ಬುದ್ಧಿಯನ್ನು ಕೊಡುವಂತಹ ಪರಮಾತ್ಮನ ಭಕ್ತಿ ಇದೆಯೋ, ಅದರಲ್ಲಿ ನನ್ನ ಬುದ್ಧಿಯನ್ನು ದೃಢೀಕರಿಸಿ, ಪ್ರೀತಿಯನ್ನು ವರ್ಧಿಸುವಂತಹ ಮಂತ್ರಭಾಷ್ಯದ ವಿಸ್ತಾರವನ್ನು ಪ್ರಮಾಣಪೂರ್ವಕವಾಗಿ ಮಾಡುತ್ತೇನೆ! ಹೇಗೆಂದರೆ_ [೧]

ಮಂತ್ರಭಾಷ್ಯದ ಅಂಗಗಳ ಕ್ರಮ

ಮಂತ್ರಾರ್ಥಭೂಮಿಕಾ ಹ್ಯತ್ರ ಮಂತ್ರಸ್ತಸ್ಯ ಪದಾನಿ ಚ ।
ಪದಾರ್ಥಾನ್ವಯಭಾವಾರ್ಥಾಃ ಕ್ರಮಾದ್ ಬೋಧ್ಯಾ ವಿಚಕ್ಷಣೈಃ ॥ ೨ ॥

[ಅರ್ಥ:_ ಇದರಲ್ಲಿ_ ಮಂತ್ರದ ಅರ್ಥವನ್ನು ಹೇಳುವ ಭೂಮಿಕೆ, ಮಂತ್ರ, ಮತ್ತು ಅದರ ಪದ[ಪಾಠ]ಗಳು, ಪದಗಳ ಅರ್ಥ, ಅನ್ವಯ, ಭಾವಾರ್ಥ_ ಇವುಗಳು ಕ್ರಮವಾಗಿ ಪಾರದರ್ಶೀ ವಿದ್ವಾಂಸರುಗಳಿಂದ ತಿಳಿದುಕೊಳ್ಳಲ್ಪಡಬೇಕು!

ಅಂದರೆ, ಈ **ಮಂತ್ರಭಾಷ್ಯದಲ್ಲಿ** ಯಾವ ಪ್ರಕಾರದ ಕ್ರಮವಿರುತ್ತದೆಂದರೆ_

ಮೊದಲನೆಯದಾಗಿ, ಮಂತ್ರದಲ್ಲಿ ಪರಮೇಶ್ವರನು ಯಾವ **ವಿಷಯದ ಪ್ರಕಾಶ** ಮಾಡಿದ್ದಾನೋ, ಅದು ;

ನಂತರ, **ಮೂಲ** ಮಂತ್ರ ;

ಅದರ **ಪದಚ್ಛೇದ ;**

ಕ್ರಮವಾಗಿ, ಪ್ರಮಾಣಸಹಿತವಾಗಿ ಮಂತ್ರದ **ಪದಗಳ ಅರ್ಥ ;**

ಅನ್ವಯ, ಎಂದರೆ, ಪದಗಳ ಸಂಬಂಧಪೂರ್ವಕವಾದ ಯೋಜನೆ ;

ಮತ್ತು ಆರನೆಯದಾಗಿ, **ಭಾವಾರ್ಥ,** ಎಂದರೆ ಮಂತ್ರದ ಯಾವ ಮುಖ್ಯ ಪ್ರಯೋಜನವಿರುತ್ತದೋ, ಅದು!

ಈ ಕ್ರಮದಿಂದ ಮಂತ್ರಭಾಷ್ಯವು ರಚಿಸಲ್ಪಡುತ್ತದೆ! [೨]

ಈಶ್ವರಪ್ರಾರ್ಥನೆ

[ಋಷಿಃ_ ನಾರಾಯಣಃ ; ದೇವತಾ_ ಸವಿತಾ ; ಛಂದಃ_ ಗಾಯತ್ರೀ ; ಸ್ವರಃ_ ಷಡ್ಜಃ]

ವಿಶ್ವಾನಿ ದೇವ ಸವಿತರ್ದುರಿತಾನಿ ಪರಾ ಸುವ ।

ಯದ್ ಭದ್ರಂ ತನ್ನಽ ಆ ಸುವ ॥

[ಯಜುರ್ವೇದೇ ೩೦. ೩]

[ಅರ್ಥ:_“ ಹೇ ಸರ್ವಪ್ರಕಾಶಕನೇ! ಜಗದುತ್ಪಾದಕನೇ! ಸಮಸ್ತ ದುಶ್ಚೇಷ್ಟೆಗಳನ್ನು ನಮ್ಮಿಂದ ದೂರ ಮಾಡು! ಮತ್ತು ಯಾವುದು ಕಲ್ಯಾಣವೋ, ಆದನ್ನು ನಮಗೆ ದಯಪಾಲಿಸು!”

(ಯಜುರ್ವೇದ: ೩೦. ೩)]

ಇತಿ ಶ್ರೀಮತ್ಪರಮಹಂಸಪರಿವ್ರಾಜಕಾಚಾರ್ಯ್ಯಾಣಾಂ [ಪರಮವಿದುಷಾಂ ಶ್ರೀವಿರಜಾನಂದಸರಸ್ವತೀಸ್ವಾಮಿನಾಂ ಶಿಷ್ಯೇಣ] ಶ್ರೀಯುತದಯಾನಂದಸರಸ್ವತೀಸ್ವಾಮಿನಾ ವಿರಚಿತಾ ಸಂಸ್ಕೃತಭಾಷಾಽಽರ್ಯ್ಯಭಾಷಾಭ್ಯಾಂ ಸುಭೂಷಿತಾ ಸುಪ್ರಮಾಣಯುಕ್ತರ್ಗ್ವೇದಾದಿಚತುರ್ವೇದಭಾಷ್ಯಭೂಮಿಕಾ ಸಮಾಪ್ತಿಮಗಮತ್ ॥

ಹೀಗೆ, ಶ್ರೀಮತ್ಪರಮಹಂಸಪರಿವ್ರಾಜಕಾಚಾರ್ಯರೂ ಪರಮವಿದ್ವಾಂಸರೂ ಆದ ಶ್ರೀ ವಿರಜಾನಂದ ಸರಸ್ವತೀ ಸ್ವಾಮಿಗಳ ಶಿಷ್ಯರಾದ ಶ್ರೀಯುತ ದಯಾನಂದಸರಸ್ವತೀ ಸ್ವಾಮಿಗಳಿಂದ ವಿರಚಿತವಾದುದೂ, ಸಂಸ್ಕೃತಭಾಷೆ, ಹಾಗೂ ಆರ್ಯಭಾಷೆಯಿಂದ ಉತ್ತಮವಾಗಿ ಅಲಂಕೃತವಾದುದೂ, ಉತ್ತಮಪ್ರಮಾಣಗಳಿಂದ ಕೂಡಿದುದೂ ಆದ ಋಗ್ವೇದವೇ ಮೊದಲಾದ ಚತುರ್ವೇದಗಳ ಭಾಷ್ಯಭೂಮಿಕೆಯು ಸಮಾಪ್ತವಾಯಿತು.*

---

* ಈ ಗ್ರಂಥದ ಸಂಪಾದನೆ, ಹಾಗೂ ಕನ್ನಡಾನುವಾದವನ್ನು ಪಂ. ಉಪೇಂದ್ರ ಭೂಪಾಲರು ದಿನಾಂಕ ೧೨.೩.೧೯೯೦ ರಿಂದ ಆರಂಭಿಸಿ, ದಿನಾಂಕ ೫.೧೦.೧೯೯೨ ರಂದು ಪೂರೈಸಿದರು! ಮತ್ತು ದಿನಾಂಕ ೨೩.೭.೧೯೯೩ ರ ವರೆಗೆ ಇದರ ಸಂಶೋಧನೆಯನ್ನು ಪೂರ್ಣಗೊಳಿಸಿದರು! _ಅನು.

ಪರಿಶಿಷ್ಟಮ್ ೩

ಪ್ರಮಾಣಸಂಕ್ಷೇಪಸೂಚೀ

ಋಗ್ವೇದಃ

ಋಗ್ವೇದಃ_

ಸಾಯಣಾಚಾರ್ಯಃ

ಋಗ್ವೇದಪರಿಶಿಷ್ಟಮ್

ಯಜುರ್ವೇದಃ

ಯಜುರ್ವೇದಃ_

ಯಜುರ್ವೇದಃ_

ಯಜುರ್ವೇದಃ_

ಮಹೀಧರಃ

ತೈತ್ತಿರೀಯಸಂಹಿತಾ

ಅಗ್ನಿಂ ಚಿಕ್ಯಾನಃ	(೫. ೨. ೩. ೬)	1154
ತ್ರಿಷ್ಟುಭೌಜಃ ಶುಭಿತಮುಗ್ರ.	(೪. ೪. ೧೨. ೩)	1150
ಯಾ ಖರ್ವೇಣ ಪಿಬತಿ	(೨. ೫. ೧. ೭)	1140

ಕಾಠಕಸಂಹಿತಾ

ಶ್ವೋಽಗ್ನೀನಾಧಾಸ್ಯಮಾನೇನ	(೧೮. ೧೨)	1151

ಐತರೇಯಬ್ರಾಹ್ಮಣಮ್

ಓಜೋ ವಾ ಇಂದ್ರಿಯಂ	(೮. ೧. ೩)	675
ಗಣಾನಾಂ ತ್ವಾ	(೧. ೨೧)	1029
ಜನಿಷ್ಠಾ ಉಗ್ರಃ ಸಹಸೇ	(೮. ೧. ೨)	671
ತಸ್ಯ ಯದ್ರೇತಸಃ	(೩. ೩೪)	856
ತಾನಹಮನು ರಾಜ್ಯಾಯ	(೮. ೨. ೬)	676
ನಮೋ ಬ್ರಹ್ಮಣೇ	(೮. ೨. ೯)	678
ಪ್ರಥಶ್ಚ ಯಸ್ಯ	(೪. ೪. ೨೧)	1029
ಪ್ರಜಾಪತಿರ್ವೈ ಸ್ವಾಂ	(೩. ೩೩)	856
ಬೃಹತ ಪೃಷ್ಠಂ ಭವತಿ	(೮. ೧. ೨)	673
ಬ್ರಹ್ಮ ವೈ ರಥಂತರಂ	(೮. ೧. ೩)	674
ಭೂರ್ಭುವಃ ಸ್ವರೋಮ್	(೫. ೩೧)	759
ಸ ಏತೇನೈಂದ್ರೇಣ	(೮. ೪. ೧೯)	684
ಸಪ್ರಜಾಪತಿಕಾ ಅಯಂ	(೮. ೩. ೧೨)	679
ಸಮ್ರಾಜಂ ಸಾಮ್ರಾಜ್ಯಂ	(೮. ೩. ೧೪)	681

ಶತಪಥಬ್ರಾಹ್ಮಣಮ್

ಅಥ ಯದೇವಾನುಬ್ರವೀತ	(೧. ೭. ೨. ೩)	768
ಅಥ ಯೋಽಯಮವಾಙ್	(೧೧. ೧. ೬. ೮)	896
ಅಥಾರ್ಷೇಯಂ ಪ್ರವೃಣೀತೇ	(೧. ೪. ೨. ೨)	769
ಅಥಾಸ್ಯೈ ಮಧ್ಯಮೇಧತಾಮಿತಿ	(೧೩. ೨. ೯. ೪)	1063
ಅಥೋ ಕ್ಷತ್ರಂ ವಾ	(೧೩. ೨. ೨. ೧೭)	1035
ಅಪ ವಾ ಏತೇಭ್ಯಃ	(೧೩. ೨. ೮. ೫)	1037
ಅಶ್ವೋ ಯತ ಈಶ್ವರೋ	(೧೩. ೩. ೩. ೫)	1034

ಶತಪಥಬ್ರಾಹ್ಮಣಮ್_

ಶತಪಥಬ್ರಾಹ್ಮಣಮ್_

ತೈತ್ತಿರೀಯಬ್ರಾಹ್ಮಣಮ್

ತೈತ್ತಿರೀಯಾರಣ್ಯಕಮ್

ಆಶ್ವಲಾಯನಶ್ರೌತಸೂತ್ರಮ್

ಪಾರಸ್ಕರಗೃಹ್ಯಸೂತ್ರಮ್

ಆಪಸ್ತಂಬಧರ್ಮಸೂತ್ರಮ್

ಶಾಟ್ಯಾಯನೋಪನಿಷತ್

ಬೃಹದಾರಣ್ಯಕೋಪನಿಷತ್

ಕೇನೋಪನಿಷತ್

ಛಾಂದೋಗ್ಯೋಪನಿಷತ್

ಅಹಿಗ್ಂಸನ್ ಸರ್ವಭೂತಾನಾಂ	(೮. ೧೫)	923
ತ್ರಯೋ ಧರ್ಮಸ್ಕಂಧಾ	(೨. ೨೩. ೧)	726
ಪುರುಷೋ ವಾವ ಯಜ್ಞಃ	(೩. ೧೬)	811
ಬ್ರಹ್ಮಸಗ್ಂಸ್ಥೋಽಮೃತತ್ವಮೇತಿ	(೨. ೨೩. ೧)	731

ಜಾಬಾಲೋಪನಿಷತ್

ಬ್ರಹ್ಮಚರ್ಯಾದೇವ ಪ್ರವ್ರಜೇತ್	(೪) (ತುಲನಾ)	730
ಬ್ರಹ್ಮಚರ್ಯಾಶ್ರಮಂ ಸಮಾಪ್ಯ	(೪) (ತುಲನಾ)	729
ಯದಹರೇವ ವಿರಜೇತ್	(೪) (ತುಲನಾ)	729

ಮುಂಡಕೋಪನಿಷತ್

ಯಂ ಯಂ ಲೋಕಂ	(೩. ೧. ೧೦)	738

ಧಾತುಪಾಠಃ

ಆಪ್ಲೃ ವ್ಯಾಪ್ತೌ	(೫. ೧೫)	457, 966
ಋಚ ಸ್ತುತೌ	(೬. ೧೯)	1100
ಕ್ರಮು ಪಾದವಿಕ್ಷೇಪೇ	(೧. ೩೧೯)	915
ಚರ ಸಂಶಯೇ	(೧೦. ೨೧೪)	1101
ಜ್ಋಷ್ ವಯೋಹಾನೌ	(೪. ೨೧)	869
ದಿವು ಕ್ರೀಡಾದ್ಯರ್ಥಃ	(೪. ೧)	173, 967
ಯಜ ದೇವಪೂಜಾ.	(೧. ೭೨೮)	1100
ವಿಷ್ಲೃ ವ್ಯಾಪ್ತೌ	(೩. ೧೩)	915
ಷೋ ಅಂತಕರ್ಮಣಿ	(೪. ೩೮)	1101
ಸಾಮ ಸಾಂತ್ವಪ್ರಯೋಗೇ	(೧೦. ೩೦೪)	1100

ಕ್ಷೀರತರಂಗಿಣೀ

ಸಾಮ ಸಾಂತ್ವನೇ	(೧೦. ೨೬೫)	1100
ಣಮ ಪ್ರಹ್ವತ್ವೇ	(೧. ೭೨೯)	823

ಅಷ್ಟಾಧ್ಯಾಯೀ

ಅಷ್ಟಾಧ್ಯಾಯೀ_

ಮಹಾಭಾಷ್ಯಮ್

ಸೀರದೇವಪರಿಶಿಷ್ಟಮ್

ನಿಘಂಟುಃ

ನಿರುಕ್ತಮ್

ಮನುಸ್ಮೃತಿಃ_

ಕುಲಾರ್ಣವತಂತ್ರಮ್

ಕಾಲೀತಂತ್ರಮ್

ಜ್ಞಾನಸಂಕಲಿನೀತಂತ್ರಮ್


ಅನಿರ್ದಿಷ್ಟಮೂಲಮ್

ಅನಿರ್ದಿಷ್ಟಮೂಲಮ್_

ಅನಿರ್ದಿಷ್ಟಮೂಲಮ್_

ಅನಿರ್ದಿಷ್ಟಮೂಲಮ್_

ವೇದಸಂರಕ್ಷಕರು



ರಾಜರ್ಷಿ ಡಾ॥ ಡಿ.ವೀರೇಂದ್ರ ಹೆಗ್ಗಡೆಯವರು

ಧರ್ಮಾಧಿಕಾರಿಗಳು,

ಶ್ರೀ ಕ್ಷೇತ್ರ ಧರ್ಮಸ್ಥಳ

"ಇವರ ನೆನಪು ನಮಗೆ ಸದಾ ದಾರಿದೀಪ"


ವೇದಭಾಷ್ಯದ ಹಿಂದಿರುವ ಪ್ರೇರಣಾಸ್ರೋತ



ಸ್ವರ್ಗೀಯ ಶ್ರೀ ವೈ.ವಿ. ತಿಮ್ಮಯ್ಯ (ಅಪ್ಪಾಜಿ)ನವರು

(ವೇದಭಾಷ್ಯ ಪ್ರಕಾಶನ ಸಮಿತಿಯ ಸ್ಥಾಪಕ ಅಧ್ಯಕ್ಷರು)


ವೇದಭಾಷ್ಯದ ಚೊಚ್ಚಲ ಕಾಣಿಕೆಯ ಜ್ಯೋತಿಯನ್ನು ಬೆಳಗಿಸಿದವರು



ಸ್ವರ್ಗೀಯ ಶ್ರೀಮತಿ ಹನುಮಕ್ಕನವರು

[ಶ್ರೀ ವೈ.ವಿ. ತಿಮ್ಮಯ್ಯ (ಅಪ್ಪಾಜಿ) ಇವರ ಧರ್ಮಪತ್ನಿ]

ವೇದಪೋಷಕರು




ಸ್ವ|| ಶ್ರೀ ಎಂ.ಎಸ್.ರಾಮಯ್ಯ,

ಗೋಕುಲ ಎಜುಕೇಶನ್ ಫೌಂಡೇಶನ್, ಬೆಂಗಳೂರು




ಲಕ್ಷ್ಮೀಕಾಂತಮ್ಮ ಮತ್ತು ಸಹೋದರಿಯರು


ವೇದಾಭಿಮಾನಿಗಳು



ಶ್ರೀ ವೈ.ಎನ್. ಮುನಿವೆಂಕಟಪ್ಪ,
ಬೆಂಗಳೂರು



ಶ್ರೀ ರವಿನಾಥ ರಾವ್
ಬೆಂಗಳೂರು -



ಶ್ರೀ ಜಯಣ್ಣ
ಅರಸೀಕೆರೆ

ಬೆಂಗಳೂರಿನ
ಶ್ರೀ ಎಸ್. ಆರ್. ಶ್ರೀರಾಮ್ ರವರು
ತಮ್ಮ ಮಾತಾಪಿತರಾದ
ಸ್ವ. ಶ್ರೀಮತಿ ಜಯಲಕ್ಷ್ಮಿ
ಮತ್ತು
ಸ್ವ. ಡಾ.ಎಸ್.ವಿ. ರಾಜರಾವ್
ಇವರ ಸ್ಮರಣೆಯಲ್ಲಿ

ವೇದಚಿಂತಕರು

ಶ್ರೀಗಳಾದ

೧. ಪಿ. ಎಂ.ನಾಗರಾಜು, ಪಣತ್ತೂರು, ವರ್ತೂರು ಹೋಬಳಿ, (ಬ್ಲಾಕ್ ಕಾಂಗ್ರೆ ಕೋಶಾಧ್ಯಕ್ಷರು) ಬೆಂಗಳೂರು ದ. ತಾ.

೨. ಸಿ. ಸೋಮಶೇಕರ್, ೩ನೇ ಬ್ಲಾಕ್, ಬಸವೇಶ್ವರ ನಗರ, ಬೆಂಗಳೂರು.

೩. ಶಂಕರನ್, ದೊಮ್ಮಲೂರು ಲೇ ಔಟ್, ಬೆಂಗಳೂರು.

೪. ಸಿ. ಜಯರಾಂ, ಎಕ್ಸಿಕ್ಯೂಟಿವ್ ಇಂಜಿನಿಯರ್, ಕರಿಯಮ್ಮನ ಅಗ್ರಹಾರ, ಬೆಂಗಳೂರು ದಕ್ಷಿಣ ತಾ.

೫. ಕೊಡತಿ ತೂರುಪುವಾಕಲ ರಾಮಯ್ಯ ಮುನಿತಾಯಮ್ಮ ಅಡುಗೋಡಿ, ಬೆಂಗಳೂರು.

೬. ಎ.ಎಸ್.ಚೇತನ, ಸರಸ್ವತಿ ನಗರ, ಬೆಂಗಳೂರು.

೭. ಉದಯ ಹೊಳ್ಳ, ಅಡ್ವೋಕೇಟ್, ಎಂಬೆಸಿ ಸ್ಕ್ವೇರ್, ಇನ್‌ಫೆಂಟ್ರಿ ರಸ್ತೆ, ಬೆಂಗಳೂರು.

೮. ಎಸ್. ಸೂರ್ಯನಾರಾಯಣ, ಸರ್ಜಾಪುರ ರಸ್ತೆ, ದೊಮ್ಮಸಂದ್ರ, ಆನೇಕಲ್ ತಾ. ಬೆಂಗಳೂರು ಜಿಲ್ಲೆ.

೯. ಜಿ. ಎಚ್. ಉಮಾಶಂಕರ್, ೧೩ನೇ ಅಡ್ಡರಸ್ತೆ, ಕಬ್ಬನ್ ಪೇಟೆ, ಬೆಂಗಳೂರು.

೧೦. ಬಿ.ಎನ್. ನರಸಿಂಹ ಮೂರ್ತಿ, ಸತ್ಯಸಾಯಿ ಇನ್ಸಿಸ್ಟಿಟ್ಯೂಟ್ ಆಫ್ ಹೈಯರ್ ಲರ್ನಿಂಗ್ ಹಾಸ್ಟೆಲ್, ಕಾಡುಗೋಡಿ, ಬೆಂಗಳೂರು.

೧೧. ಪ್ರಿನ್ಸಿಪಾಲ್, ಸೈಂಟ್ ಆನ್ಸ್ ಹೈಸ್ಕೂಲ್, ೭ನೇ ಬ್ಲಾಕ್, ರಾಜಾಜಿನಗರ, ಬೆಂಗಳೂರು.

೧೨. ಶ್ರೀ ಬಿ. ಸಿ ಕೃಷ್ಣಮಯ್ಯ, ಶ್ರೀ ದೇವೀಕೃಪ, ಹಳ್ಳಿಹೊಸೂರು, ಕುಂದಾಪುರ ತಾಲೂಕು. ಉಡುಪಿ ಜಿಲ್ಲೆ

೧೩. ಡಾ. ಎಸ್.ಕೆ. ಭವಾನಿ, ಪ್ರಿನ್ಸಿಪಾಲ್, ಸೋಮಯ್ಯ ಕಾಲೇಜು, ವಿದ್ಯಾನಗರ, ಮುಂಬಯಿ.

ವೇದ ಸಹಕಾರಿಗಳು

ಶ್ರೀಗಳಾದ

೧. ಡಾ. ಎಂ. ಶಾಂಭಟ್, ಶ್ರೀ ಮಹದೇವ ಕ್ಲಿನಿಕ್, ಕುಂಬಳೆ, ಕಾಸರಗೋಡು

೨. ಪ್ರಿನ್ಸಿಪಾಲ್, ಸರದಾರ್ ವಲ್ಲಭಭಾಯಿ ಪಟೇಲ್ ಪ್ರೀ ಯೂನಿವರ್ಸಿಟಿ ಕಾಲೇಜು, ಸರ್ಜಾಪುರ, ಬೆಂಗಳೂರು ದಕ್ಷಿಣ ತಾ.

೩. ಡಾ. ಕಾಂತರಾಜ್, ದೊಮ್ಮಸಂದ್ರ, ಆನೇಕಲ್ ತಾ. ಬೆಂಗಳೂರು ಜಿಲ್ಲೆ

೪. ಎನ್.ಕೆ. ಜಗನ್ಮೋಹಿನಿ, ಕೇಶವ ನಿವಾಸ, ಜಗದೀಶನಗರ, ಬೆಂಗಳೂರು.

೫. ಶ್ರೀನಾಥ್ ಟಿ. ಗುತ್ತುಮನೆ ಬಳಿ. ಆಶೋಕ ನಗರ, ಮಂಗಳೂರು.

೬. ಸಿ. ಆರ್. ಸತೀಶ್, 'ಯಾದವಸ್ಮೃತಿ', ಮೊದಲ ಮುಖ್ಯರಸ್ತೆ, ಶೇಷಾದ್ರಿಪುರಂ, ಬೆಂಗಳೂರು

೭. ಎಚ್. ನಾರಾಯಣ ರಾವ್, ಅಡ್ವೋಕೇಟ್, ಕೆ.ಆರ್. ಎಕ್ಸ್‌ಟೆನ್‌ಷನ್, ಮಧುಗಿರಿ.

೮. ಕೆ. ರಾಮದಾಸ್ 'ಸಮರ್ಥ' ಡಾನ್‌ಬೋಸ್ಕೋ ಹಾಲ್ ಹಿಂದೆ, ಮಂಗಳೂರು.

೯. ಕಾರ್ಯದರ್ಶಿ , ರೆಡ್ಡಿ ಜನಸಂಘ, ೧೦೦ ಅಡಿ ರಸ್ತೆ, ೩ನೇ ಬ್ಲಾಕ್, ಕೋರಮಂಗಲ, ಬೆಂಗಳೂರು.

೧೦. ಡಾ. ವೇಣುಗೋಪಾಲ್, 'ಶ್ರೀ ವೆಂಕಟಾದ್ರಿ', ೨ನೇ ಹಂತ, ಇಂದಿರಾನಗರ, ಬೆಂಗಳೂರು

೧೧. ಆರ್. ಮೀನಾಕ್ಷಿ, ಹನುಮಪ್ಪ ಲೈನ್, ನ್ಯೂ ತಿಪ್ಪಸಂದ್ರ, ಬೆಂಗಳೂರು.

೧೨.ಯು.ಪಿ. ಶ್ರೀನಿವಾಸ ಗೌಡ, ೩ನೇ ಸೆಕ್ಟರ್, ಎಚ್.ಎಸ್.ಆರ್. ಲೇಔಟ್, ಬೆಂಗಳೂರು.

೧೩. ಕೆ.ವಿ. ಮಹಾಬಲ ರಾವ್, 'ವಸುಂಧರಾ', ನೆಹರೂ ನಗರ, ಬೆಂಗಳೂರು.

೧೪. ಎಸ್. ಆರ್. ಬಾಲಾಜಿ, ಎನ್.ಆರ್. ಕಾಲೋನಿ, ಬೆಂಗಳೂರು.

೧೫. ಪ್ರಿನ್ಸಿಪಾಲ್, ಶ್ರೀ ಶಂಕರ ಭಾರತಿ ಪಾಠಶಾಲಾ ಗುರುಕುಲ, ಬೈರುಂಬೆ, ಅಜ್ಜಾವರ, ಸುಳ್ಯ ತಾಲೂಕು, ದ.ಕ.

೧೬. ಕೆ. ಪದ್ಮನಾಭ ಐತಾಳ್, ಸದ್ಯೋಜಾತ ಪ್ರತಿಷ್ಠಾನ ಮತ್ತು ಮಾನಸ ಮಂದಿರ, ಕೋಟತಟ್ಟು, ಪಡುಕೆರೆ, ಕೋಟ, ಉಡುಪಿ ಜಿಲ್ಲೆ.

೧೭. ಟಿ. ಶ್ರೀನಿವಾಸನ್, ಜಯನಗರ, ಬೆಂಗಳೂರು.

೧೮. ಕೆ. ನಾರಾಯಣ, ಕೇಶವ ನಗರ, ಸೈಂಟ್ ಥಾಮಸ್ ಟೌನ್, ಬೆಂಗಳೂರು

೧೯. ಪಿ. ನರಸಿಂಹ ಅಡಿಗ, ರಾಜಾಜಿನಗರ, ಬೆಂಗಳೂರು.

೨೦. ನೆಟ್ಟಾರ್ ಗೋವಿಂದ ಭಟ್, ಅಡ್ವೋಕೇಟ್, ಎಂಬೆಸಿ ಸ್ಕ್ವೇರ್, ಇನ್‌ಫೆಂಟ್ರಿ ರೋಡ್, ಬೆಂಗಳೂರು.

೨೧. ಪಿ.ಜಿ. ಶ್ರೀನಿವಾಸ, ಡಿ. ಸುಬ್ಬಯ್ಯ ರಸ್ತೆ, ಮೈಸೂರು.

೨೨. ಶ್ರೀನಿವಾಸ ಮೂರ್ತಿ, ಎಚ್.ಎ. ಎಲ್ ೨ನೇ ಹಂತ, ಬೆಂಗಳೂರು.

೨೩. ನಿಂಗಮ್ಮ ೨ನೇ ಬ್ಲಾಕ್, ಬಸವೇಶ್ವರ ನಗರ, ಬೆಂಗಳೂರು.

೨೪. ಎಲ್. ಆನಂದ ರಾಮಯ್ಯ, ಜಯನಗರ, ಮೈಸೂರು .

೨೫. ಎಲ್. ಎನ್ ಸತ್ಯದೇವ ರಾವ್, ವಲ್ಲಭಭಾಯಿ ರೋಡ್, ಶ್ರೀನಿವಾಸಪುರ, ಕೋಲಾರ ಜಿಲ್ಲೆ .

೨೬. ಎಂ.ಎಸ್. ಕೃಷ್ಣಮೂರ್ತಿ, ಸಿ.ಪಿ.ಡಬ್ಲ್ಯೂಡಿ ಕ್ವಾರ್ಟರ್ಸ್ , ವಿಜಯನಗರ, ಬೆಂಗಳೂರು.

೨೭. ಎಸ್. ಎನ್. ಸತ್ಯನಾರಾಯಣ, ಹನುಮಂತನಗರ, ಬೆಂಗಳೂರು.

೨೮. ಕೆ. ಈಶ್ವರ ಭಟ್, 'ಶ್ರೀಶ' ಮಂಗಳಗಂಗೋತ್ರಿ, ಕೋಣಾಜೆ, ಮಂಗಳೂರು.

೨೯. ಮುನಿನಾಗಪ್ಪ, ಕೋರಮಂಗಲ ಎಕ್ಸಟೆನ್ಷನ್ ಬೆಂಗಳೂರು.

೩೦. ಎಸ್ ಸದಾನಂದ, ಪ್ಯಾಲೇಸ್ ಕ್ರಾಸ್ ರೋಡ್, ಬೆಂಗಳೂರು.

೩೧. ಸತ್ಯಸಾಯಿ ಕುಮಾರ ಅಯ್ಯಂಗಾರ್, 'ವೈಭವ', ಮಾರತ್ ಹಳ್ಳಿ, ಬೆಂಗಳೂರು.

೩೨. ಕುಂದಾ ಚೆನ್ನಗಿರಿ 'ಕಮಲಾನಿವಾಸ' , ವೇಣುಗೋಪಾಲ ಲೇಔಟ್, ವಿದ್ಯಾರಣ್ಯಪುರ, ಬೆಂಗಳೂರು

೩೩. ಸುಬ್ರಾಯ ಗಣಪತಿ ಭಟ್, ಮೊರ್ಸೆ, ಸಂತೆಗುಳಿ ಪೋಸ್ಟ್, ಕುಮಟಾ ತಾ. ಉತ್ತರ ಕನ್ನಡ ಜಿಲ್ಲೆ.

೩೪. ಟಿ.ವಿ. ಸತ್ಯನಾರಾಯಣ, ಕಾಮಾಕ್ಷಿ ಆಸ್ಪತ್ರೆ ಎದುರು, ಮೈಸೂರು.

೩೫. ಆರ್. ಬಿ. ರಾಯಕರ್, ಮಾತೃಛಾಯಾ, ಜಯನಗರ, ಬೆಂಗಳೂರು.

೩೬. ಆರ್. ನಾಗೇಶ್, ಕೆಂಪಾಪುರ , ಎಲ್ಲೂರು ಪೋಸ್ಟ್, ಬೆಂಗಳೂರು

೩೭. ಜಿ.ಆರ್. ಪ್ರಭಾಕರ್ ರಾವ್, ಗುಮ್ಮರೆಡ್ಡಿ ಪುರ, ದಳಸನೂರು.

೩೮. ಡಾ. ಜಯಪ್ರಕಾಶ ನಾರಾಯಣ, ಡಾಲರ್ಸ್ ಸ್ಕೀಮ್, ಬಿಟಿಎಂ ಲೇಔಟ್, ಬೆಂಗಳೂರು

೩೯. ಗುಜ್ಜಾಡಿ ನರಸಿಂಹ ನಾಯಕ್, ಸ್ವರ್ಣ ಜುವೆಲ್ಲರ್ಸ್, ಉಡುಪಿ.

೪೦. ಶ್ರೀ ಗುರುದೇವಾನಂದ ಸ್ವಾಮೀಜಿ, ಶ್ರೀ ಗುರುದೇವ ಆಶ್ರಮ, ವಡಿಯೂರು ಶ್ರೀ ಕ್ಷೇತ್ರ, ಬಂಟ್ವಾಳ ತಾ. ದ.ಕ.

ಮುದ್ರಣಶಾಯಿಯನ್ನು ಒದಗಿಸಿದವರು : ಡಿ. ಎಂ.ಎಂ. ಪ್ರಿಂಟಿಂಗ್ ಇಂಕ್ಸ್ ಲಿ. 142 / ಎ., ಸಾರಕ್ಕಿ , ಬೆಂಗಳೂರು - 78 ದೂರವಾಣಿ: 634 30 95 / 634 22 80